॥ ಶ್ರೀಃ ॥

ಶ್ರೀ ವಾಸಿಷ್ಠರಾಮಾಯಣಂ

ಉತ್ಪತ್ತಿಪ್ರಕರಣಂ

(ದ್ವಿತೀಯ ಸಂಪುಟಂ)

ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್

ಜಿ. ಸಿ. ಎಸ್. ಐ. ಯವರ

ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ ಗುಂಡಶಾಸ್ತ್ರಿ

ವಿರಚಿತ

ಶ್ರೀ ಕೃಷ್ಣರಾಜವಿಜಯ [illegible]

ನಾಮಕಟೀಕಾಸಹಿತಂ.

ವಿರೋಧಿಕೃತ್ ಸಂ॥ ಕಾರ್ತಿಕ ಶುಕ್ಲ ಪೂರ್ಣಿಮ.

ಮೈಸೂರು.

ಜಿ. ಟಿ. ಎ. ಪ್ರಿಂಟಿಂಗ್ ವರ್ಕ್ಸ್

೧೯೧೧

ಕ್ರಯ ೩-೦-೦

ಶ್ರೀಃ

ಶ್ರೀ ವಾಸಿಷ್ಠರಾಮಾಯಣಂ

ಉತ್ಪತ್ತಿಪ್ರಕರಣಂ.

(ದ್ವಿತೀಯಸಂಪುಟಂ)

ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್
ಜಿ. ಸಿ. ಎಸ್. ಐ.

ಯವರ ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ

ಗುಂಡಶಾಸ್ತ್ರಿಕೃತ

ಶ್ರೀಕೃಷ್ಣರಾಜವಿಜ್ಞಾನಪ್ರದೀಪ

ನಾಮಕಟೀಕಾಸಹಿತಂ.

ವಿರೋಧಿಕೃತ್ ಸಂ|| ಕಾರ್ತಿಕ ಶುಕ್ಲ ಪೂರ್ಣಿಮೆ.

ಮೈಸೂರು
ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್.

೧೯೧೧.



ಶ್ರೀಃ

ಶ್ರೀ ವಾಸಿಷ್ಠರಾಮಾಯಣಂ

ಉತ್ಪತ್ತಿಪ್ರಕರಣ (ದ್ವಿತೀಯಸಂಪುಟ)ದ ವಿಷಯಸೂಚಿಕೆ

ಓಂ

ಶ್ರೀರಾಮಚಂದ್ರಾಯ ಪರಬ್ರಹ್ಮಣೇ

ನಮೋನಮಃ.

ಶ್ರೀ ವಾಸಿಷ್ಠರಾಮಾಯಣೇ

ಉತ್ಪತ್ತಿಪ್ರಕರಣೇ ಏಕಷಷ್ಟಿತಮಃ ಸರ್ಗಃ.

ಶ್ರೀರಾಮಉವಾಚ.

ಅಹಂ ಜಗದಿತಿ ಭ್ರಾಂತಿಃ ಪರಸ್ಮಾತ್ ಕಾರಣಂ ವಿನಾ |
ಯಥೋದೇತಿ ತಥಾ ಬ್ರಹ್ಮನ್ ಭೂಯಃ ಕಥಯ ಸಾಧು ಮೇ ||೧||

ಉತ್ಪತ್ತಿಪ್ರಕರಣದಲ್ಲಿ ಅರವತ್ತೊಂದನೆಯ ಸರ್ಗವು.

ಪ್ರಯೋಜನಪ್ರಸಿದ್ಧ್ಯರ್ಥಂ ವೈರಾಗ್ಯಾರ್ಥಂ ಚ ಸಂಸೃತೇಃ |
ಅಸಾರತ್ವಮಸತ್ತ್ವಂ ಚ ಯುಕ್ತಿಭೇದೇನ ವರ್ಣ್ಯತೇ |

ಪ್ರಯೋಜನಸಿದ್ಧಿಗೋಸ್ಕರವೂ, ವೈರಾಗ್ಯದೃಢವಾಗುವುದಕ್ಕೋಸ್ಕರವೂ ಕೂಡ, ಈಸಂಸಾರವು ಅಸಾರವೆಂಬ ವಿಷಯವೂ ಇದು ವಸ್ತುತಃ ಅಸತ್ಯವೆಂಬ ವಿಷಯವೂ ಇಲ್ಲಿವರ್ಣಿಸಲ್ಪಡುವುವು.

ಇದುವರೆಗೆ ಶ್ರೀವಸಿಷ್ಠಮಹರ್ಷಿಗಳು ವಿಸ್ತರವಾಗಿ ಹೇಳಿದ ಲೀಲೋಪಾಖ್ಯಾನವನ್ನೂ ಅದರಿಂದ ತಿಳಿಯಬೇಕಾದ ವಿಷಯವನ್ನೂ ಕೇಳಿ ತಿಳಿದುಕೊಂಡ ಶ್ರೀ ರಾಮಚಂದ್ರನು, ಶ್ರೀವಸಿಷ್ಠಮುನೀಶ್ವರರನ್ನು ಕುರಿತು ಹೇಳುವನು:—

ಬ್ರಹ್ಮರ್ಷಿವರ್ಯರೆ! ತಾವು ಅಪ್ಪಣೆಕೊಡಿಸಿದ ಲೀಲೋಪಾಖ್ಯಾನವನ್ನು ನಾನು ಕೇಳಿದೆನು; ಇದು ಅತಿಮನೋಹರವಾಗಿರುವುದು. ಕೊನೆಯಲ್ಲಿ ತಾವು ಅಪ್ಪಣೆಕೊಟ್ಟ ಪ್ರಯೋಜನಕಥನವೂ ಗೊತ್ತಾಯಿತು. ಪ್ರಪಂಚವೇ ವಸ್ತುತಃ ಅಸತ್ಯವೆಂದೂ, ಆದರೆ ಕಲ್ಪನೆಯಿಂದ ನಾನಾವಿಧವಾಗಿ ಕಾಣಿಸುತಿರುವುದೆಂದೂ, ಅವರವರ ಕಲ್ಪನಾನುಗುಣವಾಗಿ ದೇಶಕಾಲಾದಿಭೇದಗಳೂ ಅದಕ್ಕನುಗುಣವಾದ ಅನೇಕ ಬ್ರಹ್ಮಾಣ್ಡಗಳೂ ಕಾಣುತಿರುವುವೆಂದೂ, ಇದಕ್ಕೋಸ್ಕರವೇ ಈ ಲೀಲೋಪಾಖ್ಯಾನವು ತಮ್ಮಿಂದ ಉಕ್ತವಾಯಿತೆಂದೂ, ನಾನು ತಿಳಿದುಕೊಂಡೆನು. ಆದರೂ, ಮಂದಮತಿಯಾದ ನನಗೆ ಇನ್ನೂ ಚೆನ್ನಾಗಿ ಧಾರಣೆಯಾಗಲಿಲ್ಲ. ಆದುಕಾರಣ, ಸಂಶಯವುಂಟಾಗುತಿರುವುದು. ದೇಹಾದಿಗಳು, ವಸ್ತುತಃ ಅಹಂ (ನಾನು) ಪದಾರ್ಥವಲ್ಲವಷ್ಟೆ! ಹೀಗಿದ್ದರೂ, ಸ್ವಲ್ಪವೂ ಕಾರಣವೇ ಇಲ್ಲದೆ, ದೇಹಾದಿಗಳಲ್ಲಿ ಅಹಂಬುದ್ಧಿ ಹುಟ್ಟುವುದು ಹೇಗೆ? ಇದರಂತೆಯೇ, ಒಂದುಪರಮಾಣುವಿನೊಳಗೆ ವಿಶಾಲವಾದ ಬ್ರಹ್ಮಾಂಡವಿರುವುದೆಂಬುದಾಗಿಯೂ, ಒಂದುಕ್ಷಣಕಾಲದೊಳಗೆ ಒಂದುಕಲ್ಪ ಕಳೆಯಿತೆಂಬದಾಗಿಯೂ ಭ್ರಾಂತಿ ಹುಟ್ಟುವುದು ಹೇಗೆ? ಇದಕ್ಕೆ ತಕ್ಕ ಸಮಾಧಾನವನ್ನು ತಾವು ಹಿಂದೆ ಅಪ್ಪಣೆಕೊಟ್ಟಿರುವಿರಿ. ಆದರೂ, ನಾನು ಮಂದ

ಶ್ರೀವಸಿಷ್ಠ ಉವಾಚ.

ಸಮುಸ್ತಾಃ ಸಮತೈವಾನ್ತಾಃ ಸಂವಿದೋ ಬುಧ್ಯತೇ ಯತಃ ।
ಸರ್ವಥಾ ಸರ್ವದಾ ಸರ್ವಂ ಸರ್ವಾತ್ಮಕಮಜಸ್ತತಃ ॥೧॥
ಸರ್ವಾಹಿ ಶಬ್ದಾರ್ಥದೃಶೋ ಬ್ರಹ್ಮೈವೈತಾಃ ಪೃಥಙ್ನ ತತ್ ।
ಸರ್ವಾರ್ಥಶಬ್ದಾರ್ಥಕಲಾರೂಪಮಾಸಾಂ ನ ವಿದ್ಯತೇ ॥೨॥

ಮತಿಯಾದಕಾರಣ, ತಾವು ಮತ್ತೊಂದು ಸಲ ಸರಿಯಾದ ಕಾರಣಗಳನ್ನು ಕೊಟ್ಟು ಸ್ಪಷ್ಟವಾಗಿ ಅಪ್ಪಣೆಕೊಡಿಸಬೇಕು ॥೧॥

ಶ್ರೀವಸಿಷ್ಠರು ಉತ್ತರಕೊಡುವರು:--

ಅಯ್ಯಾ! ರಾಮ! ನೀನು ಪ್ರಶ್ನೆಮಾಡುವುದಕ್ಕೆ ಹಿಂದೆಗೆಯಬಾರದು. ನಾನು ಹಿಂದೆ ಹೇಳಿದ್ದರೂ, ಈಗ ನಿನಗೆ ಮತ್ತೆ ಆ ವಿಷಯವನ್ನು ಸ್ಪಷ್ಟಪಡಿಸಿ ಹೇಳುವೆನು. ಪ್ರಪಂಚದಲ್ಲಿ, ಯಾವನು ಯಾವಾಗ ಭ್ರಾಂತಿಗಳನ್ನು ಕಂಡರೂ, ಅವನು ಆ ಭ್ರಾಂತಿಗಳನ್ನೆಲ್ಲ ಸರ್ವಥಾ ಸರ್ವದಾ ಜ್ಞಾನದೊಳಗೆ ಅಂತರ್ಗತವಾಗಿರುವಂತೆ ಕಾಣುವನಲ್ಲದೆ, ಇದಕ್ಕಿಂತ ಪೃಥಕ್ಕಾಗಿ ನೋಡಲಾರನಲ್ಲವೆ! ಅಂತು, ಭ್ರಾಂತಿಯೆಂಬುದೆಲ್ಲವೂ ಜ್ಞಾನದೊಳಗೇ ಅಂತರ್ಗತವೆಂದು ಗೊತ್ತಾಯ್ತು. ಆದುಕಾರಣ, ಸರ್ವವೂ ಸರ್ವಾತ್ಮಕವೆಂದೇ ಹೇಳಬೇಕಾಗುವುದು. ಹೀಗಿರುವುದರಿಂದ, ಸರ್ವತ್ರ ಸಾಮಾನ್ಯವೇ ಇರುವುದಲ್ಲದೆ ವೈಷಮ್ಯಪ್ರಸಕ್ತಿಯೇ ಇಲ್ಲ. ಆದುದರಿಂದ, ಜನನ ಮರಣ ಮುಂತಾದ ವಿಕಾರಗಳೂ ಅಸತ್ಯಗಳೆಂದು ಸಿದ್ಧವಾಯ್ತು. ಕೊನೆಗೆ ಪರಬ್ರಹ್ಮ ಒಂದೇ ಸತ್ಯವೆಂದು ನಿಷ್ಪನ್ನವಾಯ್ತು. ಹೀಗೆಲ್ಲ ಇರುವಕಾರಣ, ಪ್ರಪಂಚಭ್ರಾಂತಿಯೆಂಬುದು ನಿಷ್ಕಾರಣವಾಗಿಯೇ ಹುಟ್ಟುವುದೆಂದು ನಾನು ನಿನಗೆ ಹಿಂದೆ ಹೇಳಿರುವ ಮಾತು, ಯಥಾವಸ್ಥಿತವಾಗಿ ಸತ್ಯವೆಂದು ತಿಳಿಯಬೇಕು ॥೨॥

ವತ್ಸ! ಈಗ ಮತ್ತೊಂದು ವಿಧವಾಗಿ ಶಂಕೆಮಾಡಬಹುದಲ್ಲವೆ! ಏನೆಂದರೆ:—ಚೈತನ್ಯದ ಅಂತರ್ಗತವಾಗಿ ತಿಳಿಯಲ್ಪಟ್ಟಮಾತ್ರವೇ, ಸರ್ವವೂ ಸರ್ವಾತ್ಮಕವೆಂದು ಒಪ್ಪಲಾಗಲಾರದು. ಜ್ಞಾನವೆಂಬುದು ಒಂದೇ ಆಗಿರುವುದರಿಂದ, ಸರ್ವವೂ ಜ್ಞಾನರೂಪವಾಗಿಯೇ ಸ್ಫುರಿಸುವುದರಿಂದ, ಸರ್ವವೂ ಸರ್ವಾತ್ಮಕವೆಂದು ಒಪ್ಪಬೇಕೆಂಬುದಾಗಿ ಹೇಳುವ ಪಕ್ಷದಲ್ಲಿ, ಅದೂ ಯುಕ್ತವಾಗುವುದಿಲ್ಲ. ಪ್ರಪಂಚದಲ್ಲಿ, ವಿಷಯಭೇದದಿಂದ ಜ್ಞಾನದಲ್ಲಿಯೂ ಭೇದವಿರುವುದೆಂದು ನಮ್ಮ ಅನುಭವ ವಿಷಯವಾಗಿರುವುದು. ಇದು ಘಟವೆಂದೂ—ಇದು ಪಟವೆಂದೂ ನಾವು ತಿಳಿಯುವಾಗ, ಘಟಜ್ಞಾನವೂ ಪಟಜ್ಞಾನವೂ ಪರಸ್ಪರ ಭಿನ್ನಗಳಲ್ಲವೆ! ಹೀಗಿರುವುದರಿಂದ, ಚಿತ್ತಿನಲ್ಲಿಯೂ ಭೇದವಿರುವುದೆಂದು ಸಿದ್ಧವಾಗುವಕಾರಣ, ಚಿತ್ತು (ಜ್ಞಾನ) ಒಂದೇ ಎಂದೂ—ಅದರಲ್ಲಿ ಅಂತರ್ಗತವಾಗಿ ಪ್ರಪಂಚಭ್ರಾಂತಿಯುದಯಿಸುವುದರಿಂದ ಸರ್ವವೂ ಸರ್ವಾತ್ಮಕವೆಂದೂ—ಹೇಳುವುದನ್ನು ಒಪ್ಪಲಾಗುವುದಿಲ್ಲ. ವತ್ಸ! ಹೀಗಲ್ಲವೆ ನೀನು ಶಂಕೆಪಡಬಹುದು! ಆದರೆ, ಹಾಗೆ ಶಂಕೆಪಡಬೇಡ. ಚಿತ್ತಿಗೆ ಭೇದವೆಂಬುದೇ ಇಲ್ಲ. ಏಕೆಂದರೆ,—ಪ್ರಾಪಂಚಿಕವಾದ ಸಮಸ್ತ ಶಬ್ದಾರ್ಥಜ್ಞಾನಗಳೂ ಪರಬ್ರಹ್ಮವೇ ಹೊರತು ಬೇರೆಯಲ್ಲ. ಬ್ರಹ್ಮನಿಗಿಂತ ಪ್ರತ್ಯೇಕವಾದ ಒಂದು ಚಿತ್ತು ಎಲ್ಲಿಯೂ ಇಲ್ಲ. ಚಿತ್ತಿನಲ್ಲಿ ಕಾಣುವ ಭೇದವೆಲ್ಲವೂ ವಿಷಯಭೇದಜ್ಞಾನದಿಂದ ಕಾಣುವುವು; ವಿಷಯಗಳನ್ನು ನಿಷ್ಕರ್ಷೆಮಾಡಿಕೊಂಡಬಳಿಕ, ಆ ಭೇದಜ್ಞಾನವೆಲ್ಲವೂ ನಷ್ಟವಾಗಿ ಕೇವಲ ಚೈತನ್ಯಮಾತ್ರವೇ ಸ್ಫುರಿಸುವುದು. ಇಷ್ಟೇ ಹೊರತು, ನಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಂಡಿರುವ ಸಮಸ್ತ ಪದಾರ್ಥಗಳ ರೂಪವು ಆ ಜ್ಞಾನಭೇದಗಳಲ್ಲಿ ವಾಸ್ತವ್ಯವಾಗಿ ಇರುವುದಿಲ್ಲ ॥೩॥

ಕಟಕತ್ವಂ ಪೃಥಗ್ಘೇಮ್ನಃ ತರಙ್ಗತ್ವಂ ಪೃಥಗ್ಜಲಾತ್ ।
ಯಥಾ ನ ಸಮ್ಭವತ್ಯೇನಂ ನ ಜಗತ್ ಪೃಥಗೀಶ್ವರಾತ್ ॥೪॥
ಏಷಏವ ಜಗದ್ರೂಪಂ ಜಗದ್ರೂಪಂ ತು ನೇಶ್ವರೇ ।
ಹೇಮ್ನ್ಯೇವ ಕಟಕಾದಿತ್ವಂ ಕಟಕತ್ವಂ ನ ಹೇಮನಿ ॥೫॥
ಯಥಾವಯವಿನೋ ರೂಪಂ ಅನೇಕಾವಯವಾತ್ಮಕಮ್ ।
ತಥಾನವಯವಾಯಾಸ್ತು ಚಿತಃ ಸರ್ವಾತ್ಮಕಂ ಚ ಯತ್ ॥೬॥
ಯತ್ ತುಲ್ಯಕಾಲಮಖಿಲಂ ತನ್ಮಾತ್ರಾವೇದನಂ ಪರೇ ।
ಅನ್ತಸ್ಸ್ಥಂ ತದಿದಂ ಭಾತಿ ಜಗದಿತ್ಯಹಮಿತ್ಯಪಿ ॥೭॥

ವತ್ಸ! ರಾಮ! ಹೀಗೆ ಚಿತ್ತಿನಲ್ಲಿ ಭೇದವು ನಿರಸ್ತವಾಯ್ತಷ್ಟೆ! ಈಗ ಜಡವಾದಪ್ರಪಂಚಕ್ಕೂ ಭೇದವಿಲ್ಲವೆಂಬುದನ್ನು ಕೇಳು. ಸುವರ್ಣಕ್ಕಿಂತ ಪೃಥಕ್ಕಾಗಿ ಕಟಕಜ್ಞಾನಹೇಗೆ ಅಸಿದ್ಧವೋ, ಜಲಕ್ಕಿಂತ ಪೃಥಕ್ಕಾಗಿ ತರಂಗಜ್ಞಾನ ಹೇಗೆ ಅಸಿದ್ಧವೋ, ಈಶ್ವರನಿಗಿಂತ ಪೃಥಕ್ಕಾಗಿ ಜಗತ್ತೂ ಹಾಗೆ ಅಸಿದ್ಧವೆಂದು ತಿಳಿಯಬೇಕು ॥೪॥

'ಆದರೂ, ಸುವರ್ಣವು ಕಟಕಜ್ಞಾನಕ್ಕೆ ಕಾರಣವಾದಂತೆ, ಚೈತನ್ಯವೇ ಪ್ರಪಂಚಭ್ರಾಂತಿಗೆ ಕಾರಣವಾಗುವುದರಿಂದ, ಕಾರಣವಿಲ್ಲದೆಯೇ ಈ ಪ್ರಪಂಚ ಭ್ರಾಂತಿಯುದಯಿಸುವುದೆಂಬುದನ್ನು ಹೇಗೆ ದೃಢಪಡಿಸಿದಹಾಗಾಯ್ತು?'—ಎಂದು ಕೇಳಿದರೆ,–ಜಗತ್ತಿಗೂ ಬ್ರಹ್ಮಕ್ಕೂ ಭೇದವಿದರಲ್ಲವೆ—ಚೈತನ್ಯವು ಜಗತ್ಕಾರಣವಾಗುವುದೆಂದೂ—ಕಾರಣವಿಲ್ಲದೆಯೇ ಪ್ರಪಂಚಭ್ರಾಂತಿಯುದಯಿಸುವುದೆಂಬುದು ಅನುಪಪನ್ನವೆಂದೂ ಹೇಳಬಹುದು! ಆದರೆ, ಹಾಗೆ ಇಲ್ಲ; ಈಶ್ವರನೇ ಜಗದ್ರೂಪವಾಗಿರುವುದು; ಈಶ್ವರನಿಗೂ ಜಗತ್ತಿಗೂ ಭೇದವೇ ಇಲ್ಲ. ತಾವನ್ಮಾತ್ರೇಣ ಈ ಜಗದ್ರೂಪವೇ ಬ್ರಹ್ಮನೆಂದು ತಿಳಿಯಬಾರದು. ಈ ಜಗತ್ತಿನ ಆಕಾರವು ಈಶ್ವರನಲ್ಲಿ ಸತ್ಯವಾಗಿಲ್ಲ. ಇದಕ್ಕೊಂದುದಾಹರಣೆಯನ್ನು ಕೇಳು. ಸುವರ್ಣವೇ ಕಟಕಾದಿರೂಪವನ್ನು ಧರಿಸಿಕೊಂಡಿರುವುದರಿಂದ, ಅವೆರಡಕ್ಕೂ ಸುತರಾಂ ಭೇದವಿಲ್ಲವೆಂದು ಗೊತ್ತಾಗುವುದು. ಅಷ್ಟೇಹೊರತು, ಕಟಕವೇ ಸುವರ್ಣವೆಂದು ನಿಶ್ಚಯವಲ್ಲವಷ್ಟೆ! ಈ ಜಗದೀಶ್ವರರ ವಿಷಯದಲ್ಲಿಯೂ ಹೀಗೆಯೇ ಯೋಚಿಸಬೇಕು ॥೫॥

ಆದರೆ, ಒಂದೇ ಪದಾರ್ಥವು ಅನೇಕವಾಗಿರುವುದು ಅನುಪಪನ್ನವೆಂದೂ ತಿಳಿಯಬಾರದು. ಪ್ರಪಂಚದಲ್ಲಿ ಅವಯವಯುಕ್ತವಾಗಿರುವ ಒಂದೇ ಪದಾರ್ಥದ ಆಕಾರವು, ಅನೇಕವಾದ ಅವಯವರೂಪವಾಗಿರುವುದಲ್ಲವೆ! ಒಂದು ದೇಹದ ಒಟ್ಟು ಆಕಾರವೇ ಕರಚರಣಾದ್ಯವಯವರೂಪವಾಗಿರುವುದಷ್ಟೆ! ಹೀಗೆ ಅವಯವಸಹಿತವಾಗಿರುವ ಪದಾರ್ಥರೂಪವೇ ಅನೇಕಾಕಾರವಾಗುವುದು ಪ್ರಸಿದ್ಧವಾಗಿರುವಾಗ, ಅವಯವಶೂನ್ಯವಾಗಿರುವಪರಬ್ರಹ್ಮವು ಕಲ್ಪಿತವಾದ ಅನೇಕಾಕಾರವಾಗುವವಿಷಯದಲ್ಲಿ ಸಂದೇಹವೇಕೆ? ಇದೂಅಲ್ಲದೆ, ಸರ್ವವೂ ಸರ್ವಾತ್ಮಕವಾಗಿರುವುದರಿಂದ, ಅನೇಕ ಪದಾರ್ಥಗಳು ಸತ್ಯವಾಗಿರುವುವೆಂಬ ಅಭಿಪ್ರಾಯವೂ ಪರಾಸ್ತವಾಗುವುದು ॥೬॥

'ಹಾಗಾದರೆ, ಜಗತ್ತೆಂದೂ ನಾನೆಂದೂ ಸರ್ವರಿಗೂ ಅನುಭವಸಿದ್ಧವಾಗಿರುವುದು ಹೇಗೆ?' ಎಂದರೆ,—ಪರಬ್ರಹ್ಮನಿಷ್ಠವಾಗಿರುವ ಕೇವಲ ಬ್ರಹ್ಮಮಾತ್ರತ್ವವನ್ನು ತಿಳಿಯದೆ ಸರ್ವರೂ ಏಕಕಾಲದಲ್ಲಿ ತಮ್ಮ ಹೃದಯದೊಳಗೆ ಬೇರೆಬೇರೆಯಾಗಿ ತಿಳಿದುಕೊಳ್ಳುವುದು ಯಾವುದುಂಟೋ, ಅದೇ—(ಈ ಅಜ್ಞಾನವೇ) ನಾನೆಂದೂ ಜಗತ್ತೆಂದೂ ಭಾಸಮಾನವಾಗುವುದು ॥೭॥

ಲೇಖೌಘಾನಾಂ ಯಥಾಽಭೇದಸನ್ನಿವೇಶಃ ಶಿಲೋದರೇ ।
ತಥಾನನ್ಯಜ್ಜಗದಹಂ ಚೇತ್ಯಸ್ಯ ಶ್ಚಿದ್ಘನೇ ಘನಮ್ ॥೮॥
ಸ್ಥಿತಾಸ್ತರಜ್ಗಾಃ ಸಲಿಲೇ ಯಥಾನ್ತರತರಙ್ಗಿತೇ ।
ಸೃಷ್ಟಿಶಬ್ದಾರ್ಥರಹಿತಾಃ ತಥಾನ್ತಃ ಸೃಷ್ಟಯಃ ಪರೇ ॥೯॥
ನ ಸರ್ಗೋ ತಿಷ್ಠತಿ ಪರಂ ಸರ್ಗಸ್ತಿಷ್ಠತಿ ನೋ ಪರೇ ।
ಅವಯವಾವಯವಿವತ್ ಸತ್ತಾನವಯವೈಸ್ತಯೋಃ ॥೧೦॥
ಚಿದ್ರೂಪೇಣ ಸ್ವಸಂವಿತ್ತ್ಯಾ ಸ್ವಚಿನ್ಮಾತ್ರಂ ವಿಭಾವ್ಯತೇ ।
ಸ್ವಮೇವ ರೂಪಹೃದಯಂ ವಾತೇನ ಸ್ಪನ್ದನಂ ಯಥಾ ॥೧೧॥
ತತ್ಕಾಲಮೇಷ ಶಬ್ದಾಣುಃ ಚಿಚ್ಚಮತ್ಕಾರರೂಪಧೃಕ್ ।
ಚೇತ್ಯತೇ ಖಮಿವೈವಾನ್ತಃ ಸಙ್ಕಲ್ಪಇವ ಚೇತಸಾ ॥೧೨॥
ತದೇವಾನಿಲತಾಂ ವೇತ್ತಿ ನಿಜಸತ್ತಾತ್ಮಿಕಾಂ ಸ್ವಯಮ್ ।

ದೊಡ್ಡದೊಂದು ಸ್ಫಟಿಕಮಣಿಯನ್ನು ಇಟ್ಟು ನೋಡಿದರೆ, ವಸ್ತುತಃ ಭೇದವಿಲ್ಲದಿದ್ದರೂ ಅದರೊಳಗೆ ಅನೇಕವಾಗಿ ಗೆರೆಗಳು ಇರುವಂತೆ ಹೇಗೆ ಕಾಣುವುವೋ, ಹಾಗೆ ಚೈತನ್ಯದಲ್ಲಿ—ಅನನ್ಯಭೂತವಾಗಿ—ನಾನು ಜಗತ್ತು ಇತ್ಯಾದಿ ಜ್ಞಾನವು ಸ್ಫುರಿಸುವುದು ॥೮॥

ಜಲವು ಅಲೆಯಾಡದೆ ಸ್ತಬ್ಧವಾಗಿರುವಾಗ, ಅದರೊಳಗೆ ತರಂಗಗಳು ಹೇಗೆ ಲೀನವಾಗಿರುವುವೋ, ಹಾಗೆ ಪರಮಾತ್ಮನಲ್ಲಿ ಸೃಷ್ಟಿ (ಪ್ರಪಂಚ) ಗಳೂ—ಸೃಷ್ಟಿಯೆಂಬ ಶಬ್ದವೂ ಅರ್ಥವೂ ಇಲ್ಲದುವುಗಳಾಗಿರುವುವು ॥೯॥

ಆದರೆ, ತೆರೆಗಳು ಅವಯವರೂಪವಾಗಿ ಜಲದೊಳಗಿರುವಂತೆ—ಪರಮಾತ್ಮನಲ್ಲಿ ಜಗತ್ತು ಅವಯವರೂಪವಾಗಿ ಇರುವುದೆಂದೂ, ಅಥವಾ ಅವಯವಗಳನ್ನು ಆಶ್ರಯಿಸಿ ಅವಯವಿ (ಅವಯವವುಳ್ಳ ಪದಾರ್ಥ)ಇರುವಂತೆ—ಪ್ರಪಂಚವನ್ನು ಆಶ್ರಯಿಸಿಕೊಂಡು ಪರಬ್ರಹ್ಮವಿರುವುದೆಂದೂ ತಿಳಿಯಬಾರದು. ಮತ್ತೇನೆಂದರೆ,—ಅವಯಾವಯವಿಸಂಬಂಧವಿಲ್ಲದೆಯೇ—ಬ್ರಹ್ಮವೂ ಜಗತ್ತೂ ಅಭಿನ್ನವಾಗಿರುವುವೆಂದು ತಿಳಿಯಬೇಕು ॥೧೦॥

ಅಯ್ಯಾ! ರಾಮ! ಪ್ರಪಂಚ ಸೃಷ್ಟಿಕ್ರಮವನ್ನು ಪರ್ಯಾಲೋಚಿಸಿದರೂ, ಇದು ಚೈತನ್ಯಕ್ಕಿಂತ ಪೃಥಕ್ಕಾದುದಲ್ಲವೆಂಬ ವಿಷಯವು ಅನುಭವಗೋಚರವಾಗುವುದು. ಹೇಗೆಂದರೆ :—ಪರಮಾರ್ಥ ಚಿದ್ರೂಪನಾಗಿರುವ ಪರಬ್ರಹ್ಮನಿಗೆ, ಪ್ರಥಮತಃ ಅವಿದ್ಯೆಯಲ್ಲಿ ಪ್ರತಿಫಲನ (ಪ್ರತಿಬಿಂಬಿಸುವಿಕೆ) ವುಂಟಾಗುವುದು ; ಹೀಗೆ ಪ್ರತಿಫಲಿಸಿದ ತನ್ನ ಜ್ಞಾನಶಕ್ತಿಯಿಂದ, ತನ್ನ ಪಾರಮಾರ್ಥಿಕ ಸ್ವರೂಪವನ್ನು ಮರೆತು, ವಾಯುವು ಚಲನೆಯನ್ನು ಹೊಂದುವಂತೆ, ಪ್ರಪಂಚರೂಪಕ್ಕೆ ಮುಖ್ಯ ರಹಸ್ಯಭೂತವಾದ ಅಜ್ಞಾನಾವೃತವಾದ ತನ್ನರೂಪವನ್ನೇ ತಾನು ಕಲ್ಪಿಸಿಕೊಳ್ಳುವನು ॥

ಹೀಗೆ ಪ್ರಪಂಚ ಸೃಷ್ಟಿಯಲ್ಲಿ ಅಭಿಮುಖನಾದೊಡನೆಯೇ, ಆ ಬ್ರಹ್ಮನಲ್ಲಿ ಲೀನವಾಗಿದ್ದ ಶಬ್ದತನ್ಮಾತ್ರ (ಶಬ್ದಗುಣ) ವು ಪ್ರಕಟವಾಗುವುದು ; ಆಗ, ಸರ್ವಶಕ್ತಿಯುಕ್ತವಾದ ಮಾಯಾಸಂವರಣದಿಂದ ಯುಕ್ತವಾಗಿರುವ ಆ ಬ್ರಹ್ಮವು, ಮನಸ್ಸು ಸಂಕಲ್ಪವನ್ನು ಕಾಣುವಂತೆ, ತನ್ನೊಳಗೇ ಆಕಾಶರೂಪವನ್ನು ಕಾಣುವಂತಾಗುವುದು. ಇದೇ ಆಕಾಶೋತ್ಪತ್ತಿಪ್ರಕಾರವು ॥೧೨॥

ಬಳಿಕ, ಆ ಬ್ರಹ್ಮಪದಾರ್ಥವೇ, ಸ್ವಸತ್ತಾರೂಪ (ತನ್ನ ಇರುವಿಕೆ) ವಾಗಿಯೂ—ಸ್ಪರ್ಶ

ಅನ್ತರ್ಗತಸ್ಪರ್ಶರಸಾಂ ಪವನಃ ಸ್ಪನ್ದತಾಮಿವ ॥೧೩॥
ತದೇವಾಭಾಸತಾಮೇತಿ ನಿಜಸತ್ತಾತ್ಮಿಕಾಂ ಸ್ವಯಮ್ ।
ಕೋಶಸ್ಥಿತಾಲೋಕಲವಾಂ ತೇಜಃ ಪ್ರಕಟತಾಮಿವ ॥೧೪॥
ತದೇವ ಜಲತಾಂ ಯಾತಿ ನಿಜಸತ್ತಾತ್ಮಿಕಾಂ ಸ್ವಯಮ್ ।
ಅನ್ತಸ್ಸ್ಥಿತಾಸ್ವಾದಲವಾಂ ಸಲಿಲಂ ದ್ರವತಾಮಿವ ॥೧೫॥
ತದೇವಾವನಿತಾಂ ವೇತ್ತಿ ಸ್ವಚಿತ್ತೈಕಾತ್ಮತಾಮಯೀಮ್ ।
ಅನ್ತಸ್ಸ್ಥಗನ್ಧತನ್ಮಾತ್ರಾಂ ಉರ್ವೀ ಸ್ಥೈರ್ಯಕಲಾಮಿವ ॥೧೬॥
ತುಲ್ಯಕಾಲನಿಮೇಷಾಂಶಲಕ್ಷಭಾಗಪ್ರತೀತಿ ಯತ್ ।
ನಿಜಂ ವಿದಃ ಪ್ರಕಚನಂ ತತ್ ಸರ್ಗೌಘಪರಮ್ಪರಾ ॥೧೭॥
ಶುದ್ಧಂ ಸಕೃತ್ಪ್ರಭಾತಾನ್ತರ್ದೃಶ್ಯಮಧ್ಯಮನಾಮಯಮ್ ।
ಉದಯಾಸ್ತಮಯೋನ್ಮುಕ್ತಂ ಬ್ರಹ್ಮ ತಿಷ್ಠತ್ಯನಿಷ್ಠಿತಮ್ ॥೧೮॥

ತನ್ಮಾತ್ರೆಯನ್ನೊಳಗೊಂಡಿರುವುದಾಗಿಯೂ ಇರುವ ವಾಯುಸ್ವರೂಪವನ್ನು ತಿಳಿಯುವುದು. (ತನ್ನನ್ನು ತಾನೇ ವಾಯುವೆಂದು ತಿಳಿದುಕೊಳ್ಳುವುದು; ಅದರಲ್ಲಿ ಸ್ಪರ್ಶಗುಣವಿರುವುದು.) ವಾಯುವು ಸ್ತಬ್ಧವಾಗಿದ್ದು ತಟ್ಟನೆ ಒಂದುಕಾಲದಲ್ಲಿ ಚಲನೆಯನ್ನನುಭವಿಸುವುದೇ ಇದಕ್ಕು ಪಮಾನವೆಂದು ತಿಳಿಯಬೇಕು. ಇದೇ ವಾಯುವಿನ ಉತ್ಪತ್ತಿಯು ॥೧೩॥

ಹೀಗೆ ವಾಯುರೂಪವಾದ ಆ ಬ್ರಹ್ಮಪದಾರ್ಥವೇ, ತೇಜಸ್ಸು ಪ್ರಕಾಶ (ಬೆಳಕು) ವನ್ನು ಹೊಂದುವಂತೆ, ಸ್ವಸತ್ತಾರೂಪವಾಗಿಯೂ ರೂಪತನ್ಮಾತ್ರೆಯನ್ನೊಳಗೊಂಡುದುದಾಗಿಯೂ ಇರುವ ತೇಜೋರೂಪವನ್ನನುಭವಿಸುವುದು. ಇದು ತೇಜಸ್ಸಿನ ಸೃಷ್ಟಿಯು ॥೧೪॥

ಈರೀತಿಯಾಗಿ ತೇಜೋರೂಪವಾದ ಆ ಬ್ರಹ್ಮವೇ, ಜಲವು ದ್ರವತ್ವವನ್ನನುಭವಿಸುವಂತೆ, ಸ್ವಸತ್ತಾರೂಪವಾಗಿಯೂ ರಸತನ್ಮಾತ್ರವನ್ನೊಳಗೊಂಡುದುದಾಗಿಯೂ ಇರುವ ಜಲರೂಪವನ್ನನುಭವಿಸುವುದು. ಇದು ಜಲಸೃಷ್ಟಿಯು ॥೧೫॥

ಬಳಿಕ, ಆ ಬ್ರಹ್ಮವೇ, ಭೂಮಿಯು ಸ್ಥಿರತ್ವವನ್ನನುಭವಿಸುವಂತೆ, ಸ್ವಚಿತ್ತೈಕರೂಪವಾಗಿ ಗಂಧತನ್ಮಾತ್ರೆಯನ್ನೊಳಗೊಂಡಿರುವ ಪೃಥಿವೀರೂಪವನ್ನನುಭವಿಸುವುದು. ಇದು ಪೃಥಿವೀ ಸೃಷ್ಟಿಯು ॥೧೬॥

ಅಯ್ಯಾ! ರಾಮ! ಹೀಗೆ ಪಂಚಭೂತಸೃಷ್ಟಿಪ್ರಕ್ರಮವು ಗೊತ್ತಾಯ್ತಷ್ಟೆ! ಆ ಚೈತನ್ಯವು, ಒಂದೇಕಾಲದಲ್ಲಿ—ನಿಮಿಷದ ಒಂದಂಶದ ಲಕ್ಷಭಾಗದಷ್ಟು ಅಲ್ಪಕಾಲದಲ್ಲಿ—ಸ್ಫುರಣೆ ಹೊಂದುವುದಾವುದುಂಟೋ, ಅದೇ ಅನೇಕವಾದ ಪ್ರಪಂಚಸೃಷ್ಟಿ ಪರಂಪರೆಯೆನ್ನಿಸುವುದು. ಹೀಗಿರುವುದರಿಂದ, ಈ ವಿಧವಾಗಿಯೂ ಬ್ರಹ್ಮವೇ ಪ್ರಪಂಚವಾಗಿ ಕಾಣುವುದೆಂದು ಗೊತ್ತಾಗುವುದು ॥೧೭॥

ಈ ಬ್ರಹ್ಮವು,—ಕೇವಲ ಶುದ್ಧವಾದುದು; ಇದು ನಿತ್ಯಪ್ರಕಾಶವಾದುದು; ಇದರೊಳಗೆ, ಅನೇಕನಾದ ಸೃಷ್ಟಿ ಲಯಗಳು ಅಂತರ್ಗತವಾಗಿರುವುವು; ಇದು ನಿರಾಬಾಧವಾದುದು; ಉತ್ಪತ್ತಿನಾಶರಹಿತವಾದುದು; ಇದಕ್ಕೆ ಆಧಾರಭೂತವಾದ ಮತ್ತೊಂದು ಪದಾರ್ಥವಾವುದೂ ಇಲ್ಲ ॥೧೮॥

ಬುದ್ಧಂ ಸದಪವರ್ಗಂ ತತ್ ಸಸರ್ಗಮಪಿ ಸತ್ ಸಮಮ್ |
ಅಬುದ್ಧಂ ಸರ್ಗರೂಪಾತ್ಮ ವಿಸರ್ಗಮಪಿ ತತ್ ಸದಾ ||೧೯||
ಚಿದ್ಬ್ರಹ್ಮ ಯದ್ಯಥಾ ಯೇನ ಬುಧ್ಯತೇ ಸ್ವಾತ್ಮನಾತ್ಮನಿ |
ತತ್ತತ್ ತಥಾ ನು ಭವತಿ ಸರ್ವಂ ಸರ್ವಾಙ್ಗಶಕ್ತಿಮತ್ ||೨೦||
ತತ್ ಸತ್ಯಂ ಚಿದ್ವಿಲಾಸತ್ವಾತ್ ನಿತ್ಯಾನುಭವರೂಪತಃ |
ತದಸತ್ಯಂ ಮನಷ್ಷಷ್ಠಾತ್ ಸರ್ವಾಖ್ಯಾನಿಗತಂ ಯತಃ ||೨೧||
ಯಥೈತತ್ ಸರಣಂ ವಾಯೌ ತಥಾ ಸರ್ಗಃ ಸ್ಥಿತಃ ಪರೇ |
ಅಸತ್ಕಲ್ಪೋಪಿ ಸತ್ಕಲ್ಪಃ ಸತ್ಯೋಽಸತ್ಯಇವಾಪಿ ಚ ||೨೨||
ಅನ್ಯರೂಪಾ ಯಥಾನನ್ಯಾ ತೇಜಸ್ಯಾಲೋಕತೋದರೇ |
ತಥಾ ಬ್ರಹ್ಮಣಿ ವಿಶ್ವಶ್ರೀಃ ಸತ್ಯಾಽಸತ್ಯಾತ್ಮಿಕಾ ಚಿತಿ ||೨೩||
ಅನುತ್ಕೀರ್ಣಾ ಯಥಾ ಪಙ್ಕೇ ಪುತ್ರಿಕಾ ಚಾಥ ದಾರುಣಿ |

ಮತ್ತು, ಪರಮಾರ್ಥಸತ್ಯವಾಗಿಯೂ ವೈಷಮ್ಯಶೂನ್ಯವಾಗಿಯೂ ಇರುವ ಆ ಪರಬ್ರಹ್ಮವಸ್ತುವೇ, ಸೃಷ್ಟಿಯುಕ್ತವಾಗಿದ್ದರೂ—ಜ್ಞಾನಾನಂತರ ಸೃಷ್ಟಿವಿಯುಕ್ತವೇ (ಕೇವಲ) ಆಗುವುದು. ಆದಲ್ಲದೆ, ಸ್ವಸ್ವರೂಪಜ್ಞಾನರಹಿತವಾಗಿದ್ದಾಗ, ಅದು ಸರ್ವದಾ ಶೂನ್ಯವಾದುದಾಗಿದ್ದರೂ ಸೃಷ್ಟಿ (ಪ್ರಪಂಚ)ರೂಪವಾಗಿಯೇ ಇರುವುದು ||೧೯||

ಕೇವಲ ಚಿದ್ರೂಪವಾಗಿರುವ ಆ ಬ್ರಹ್ಮಪದಾರ್ಥವು, ಸರ್ವಕಾರ್ಯಾನುಕೂಲವಾದ ಮಾಯಾಶಕ್ತಿಯೊಡಗೂಡಿರುವುದು. ಹೀಗಿರುವುದರಿಂದ, ಯಾವನು ಯಾವ ಪದಾರ್ಥವನ್ನು ಯಾವರೀತಿಯಾಗಿ ತಿಳಿದುಕೊಳ್ಳುವನೋ, ಅದೆಲ್ಲವೂ ಅವನಿಗೆ ಆರೀತಿಯಾಗಿಯೇಆಗುವುದು ||೨೦||

ಜಗತ್ತನ್ನು, ಕೇವಲ ಚಿದಾಕಾರವೆಂಬುದಾಗಿ ನಾವು ನಿತ್ಯವಾಗಿ ಅನುಭವಿಸಿದರೆ, ಆಗ ಅದು ಸತ್ಯವೇ ಆಗುವುದು. ಅದಲ್ಲದೆ, ಆ ಪರಬ್ರಹ್ಮವನ್ನೇ—ಚಕ್ಷುಸ್ಸು ಮೊದಲಾಗಿರುವ ಪಂಚಜ್ಞಾನೇಂದ್ರಿಯಗಳಿಂದಲೂ ಮನಸ್ಸಿನಿಂದಲೂ—ಸಕಲವಾದ ನಾಮರೂಪಗಳನ್ನು ಹೊಂದಿರುವುದೆಂದು ತಿಳಿದುಕೊಂಡರೆ, ಆಗ ಅದೇ ಅಸತ್ಯವಾಗುವುದು ||೨೧||

ಈಗ ಮತ್ತೊಂದು ವಿಷಯವನ್ನು ಹೇಳುವೆನು. ವಾಯುವಿನಲ್ಲಿ ಚಲನೆಯಿರುವುದಷ್ಟೆ! ಆದರೆ, ವಾಯುವು ನಿಶ್ಚಲವಾಗಿರುವಾಗ, ಅದರಲ್ಲಿ ಚಲನೆಯಿರುವುದೆಂದು ನಾವು ತಿಳಿಯುವುದಿಲ್ಲ. ಹೀಗೆ ವಾಯುವಿನಲ್ಲಿ ಚಲನೆಯು ಅಸತ್ತಾಗಿದ್ದರೂ, ಆಮೇಲೆ--ಇರುವುದೆಂದು ಗೊತ್ತಾಗುವುದು. ಮತ್ತು, ಅದೇ ವಾಯುವು ನಿಶ್ಚಲವಾಗಿಬಿಟ್ಟಕಾಲದಲ್ಲಿ, ಆ ಚಲನೆಯು ಅದರಲ್ಲಿ ಇದ್ದೇ ಇದ್ದರೂ, ಅದು ಇಲ್ಲವೆಂದು ತಿಳಿವಳಿಕೆಯುಂಟಾಗುವುದು. ಹೀಗೆಯೇ, ಆತ್ಮನಲ್ಲಿ ಪ್ರಪಂಚವು ಇರುವುದೆಂದೂ ಇಲ್ಲವೆಂದೂ ಆಯಾಜ್ಞಾನಾನುಗುಣವಾಗಿ ತಿಳಿಯಲ್ಪಡುವುದು ||೨೨||

ಮತ್ತು, ತೇಜಸ್ಸಿನೊಳಗೆ ಪ್ರಕಾಶವು ವಸ್ತುತಃ ಪೃಥಕ್ಪದಾರ್ಥವಲ್ಲದಿದ್ದರೂ ಪೃಥಕ್ಕಾಗಿರುವಂತೆ ಹೇಗೆ ಭಾಸಮಾನವಾಗುವುದೋ,--ಹಾಗೆ, ಜ್ಞಾನರೂಪವಾಗಿರುವ ಪರಬ್ರಹ್ಮನಲ್ಲಿ, ಈ ಪ್ರಪಂಚವು ಅಸತ್ಯವಾದುದಾದರೂ ಸತ್ಯವಾಗಿ ಭಾಸಮಾನವಾಗುವುದು ||೨೩||

ಕಲೆಸಿದ ಮಣ್ಣಿನೊಳಗೂ ಮರದೊಳಗೂ ಬೊಂಬೆಯು ಸ್ವರೂಪತಃ ಇದ್ದೇಇರುವುದು; ಆರೀತಿಯಾಗಿ ಆಕಾರವನ್ನು ಕೊರೆದಾಗ, ಇದ್ದ ರೂಪವೇ ಅಭಿವ್ಯಕ್ತವಾಗುವುದು. ಹೀಗೆ

ಯಥಾ ವರ್ಣಾ ಮಷೀಕಲ್ಕೇ ತಥಾ ಸರ್ಗಾಃ ಸ್ಥಿತಾಃ ಪರೇ ॥೨೪॥
ಅನನ್ಯಾಽನ್ಯೇವ ಕಚತಿ ಬ್ರಹ್ಮತತ್ತ್ವಮರುಸ್ಥಲೇ ।
ಅಸತ್ಯಾತ್ಮನಿ ಸತ್ಯೇವ ತ್ರಿಜಗನ್ಮೃಗತೃಷ್ಣಿಕಾ ॥೨೫॥
ಬ್ರಹ್ಮಣಾ ಚಿನ್ಮಯೇನಾತ್ಮಾ ಸರ್ಗಾತ್ಮೈವ ವಿಭಾವ್ಯತೇ ।
ನ ಭಾವ್ಯತೇ ಚಾನನ್ಯತ್ವಾತ್ ಬೀಜೇನಾನ್ತರಿವ ದ್ರುಮಃ ॥೨೬॥
ಯಥಾ ಕ್ಷೀರಸ್ಯ ಮಾಧುರ್ಯಂ ತೀಕ್ಷ್ಣತ್ವಂ ಮರಿಚಸ್ಯ ಚ ।
ದ್ರವತ್ವಂ ಪಯಸಶ್ಚೈವ ಸ್ಪನ್ದನಂ ಪವನಸ್ಯ ಚ ॥೨೭॥
ಸ್ಥಿತೋಽನನ್ಯೋ ಯಥಾನ್ಯಃ ಸನ್ ನಾಸ್ತಿ ತತ್ರ ತಥಾತ್ಮನಿ ।
ಸರ್ಗೋ ನಿರ್ಗಳಚಿದ್ರೂಪಃ ಪರಮಾತ್ಮಾತ್ಮರೂಪಭೃತ್ ॥೨೮॥
ಕಚನಂ ಬ್ರಹ್ಮರತ್ನಸ್ಯ ಜಗದಿತ್ಯೇವ ಯತ್ ಸ್ಥಿತಮ್ ।
ತದಕಾರಣಕಂ ಯಸ್ಮಾತ್ ತೇನ ನ ವ್ಯತಿರಿಚ್ಯತೇ ॥೨೯॥
ವಾಸನಾಚಿತ್ತಜೀವಾದಿವೇದನಂ ವೇದನೋದಿತಮ್ ।

ಆಕಾರವನ್ನು ಬಿಡಿಸದಿದ್ದಾಗ ಅವುಗಳಲ್ಲಿ ಅಭಿವ್ಯಕ್ತವಾಗದೆ ಬೊಂಬೆಯಿರುವಂತೆ, ಪರಮಾತ್ಮನಲ್ಲಿ ಸೃಷ್ಟಿಯು ಅಭಿವ್ಯಕ್ತವಾಗದೆ ಇರುವುದು; ಮತ್ತು, ಉಂಡೆಯಾಗಿಮಾಡಿದ ಕಾಡಿಗೆಯಲ್ಲಿ ಕಪ್ಪುಬಣ್ಣವಿರುವಂತೆ, ಬ್ರಹ್ಮನಲ್ಲಿ ಈ ಜಗತ್ತು ಅನನ್ಯಭೂತವಾಗಿರುವುದು ॥೨೪॥

ಪರಬ್ರಹ್ಮ ಪದಾರ್ಥವೆಂಬುದೇ ಒಂದು ಮರುಭೂಮಿಯು; ಅದರಲ್ಲಿ, ವಸ್ತುತಃಸ್ವಯಂ ಅಸತ್ಯವಾಗಿರುವ ಈ ಜಗತ್ತ್ರಯವೆಂಬ ಮೃಗತೃಷ್ಣಿಕೆಯು, ಪೃಥಕ್ಕಲ್ಲದಿದ್ದರೂ ಪೃಥಕ್ಕಾಗಿರುವಂತೆ ಭಾಸಮಾನವಾಗುವುದು ॥೨೫॥

ಒಂದು ಸಣ್ಣ ಬೀಜದೊಳಗೆ ದೊಡ್ಡದಾದ ಮರದ ಆಕಾರವೆಲ್ಲವೂ ಅಸ್ಫುಟವಾಗಿ ಅಡಗಿರುವಂತೆ, ಪರಮಾತ್ಮನಲ್ಲಿ ಈ ಜಗದ್ರೂಪವು ಅನನ್ಯವಾಗಿ ಅಡಗಿರುವುದು. ಆದರೆ, ಭ್ರಾಂತಿಯಿಂದ, ಆ ಬ್ರಹ್ಮನೇ ತಾನು ಚಿದಾಭಾಸರೂಪನಾದ ಜೀವರೂಪನಾಗಿ, ತನ್ನನ್ನೇ ಪ್ರಪಂಚವೆಂದು ತಿಳಿದುಕೊಳ್ಳುವನು. ತತ್ವದೃಷ್ಟಿಯಿಂದ ವಿಚಾರ ಮಾಡುವಾಗ, ಪ್ರಪಂಚವು ತನಗಿಂತ ಪೃಥಕ್ಕಾದುದಲ್ಲವೆಂದು ತಿಳಿಯುವನು ॥೨೬॥

ನೀರಿನಲ್ಲಿ ಮಾಧುರ್ಯವೂ, ಮೆಣಸಿನಲ್ಲಿ ತೀಕ್ಷ್ಣತ್ವವೂ, ಜಲದಲ್ಲಿ ದ್ರವತ್ವವೂ, ವಾಯುವಿನಲ್ಲಿ ಚಲನೆಯೂ, ಅನನ್ಯವಾಗಿಯೇ ಇರುವುವಲ್ಲವೆ! ಅನ್ಯವಾದುವಾಗಿಲ್ಲವಷ್ಟೆ! ಹೀಗೆ, ಪರಮಾತ್ಮನಲ್ಲಿ ಈ ಪ್ರಪಂಚವು, ಅಂತರ್ಗತವಾಗಿ ಅನನ್ಯಭೂತವಾಗಿರುವುದು. ವಸ್ತುತಃ ಇದು ಚೈತನ್ಯರೂಪವಾದುದು ॥೨೭—೨೮॥

ಬ್ರಹ್ಮವೆಂಬುದೇ ಒಂದು ದಿವ್ಯರತ್ನವು; ಇದರ ಸ್ವಾಭಾವಿಕವಾದ ಪ್ರಕಾಶಕ್ಕೆ ಜಗತ್ತೆಂದು ಹೆಸರು. ಹೀಗೆ—ರತ್ನದ ಪ್ರಕಾಶವು ಅದಕ್ಕಿಂತ ಬೇರೆಯಲ್ಲದಿರುವಂತೆ—ಈಜಗತ್ತು ಬ್ರಹ್ಮನಿಗಿಂತ ಬೇರೆಯಲ್ಲದಿರುವುದರಿಂದ, ಇದು ಅಕಾರಣಕ (ಕಾರಣವಿಲ್ಲದುದು)ವೆಂದು ಸ್ಪಷ್ಟವಾಗುವುದು ॥೨೯॥

'ಕಾರಣವೇ ಇಲ್ಲದುದಾದಮೇಲೆ, ಅದು ಹುಟ್ಟಿದುದೇ ಅಲ್ಲವೆಂದು ನಿಶ್ಚಯವು. ಹೀಗಾದಮೇಲೆ, ಅದು (ಪ್ರಪಂಚ)ಸರ್ವರಿಗೂ ಅನುಭವಗೋಚರವಾಗುತಿರುವುದು ಹೇಗೆ?' ಎಂದು ಕೇಳಿ

ನೋದೇತ್ಯವೇದನಾದೇವ ಯತನಾದೇವ ಪೌರುಷಾತ್ ॥೨೦॥
ನಾಸ್ತಮೇತಿ ನ ಚೋದೇತಿ ಕ್ವಚಿತ್ ಕಿಂಚಿತ್ ಕದಾಚನ ।
ಸರ್ವಂ ಶಾನ್ತಮಜಂ ಬ್ರಹ್ಮ ಚಿದ್ಘನಂ ಸುಶಿಲಾಘನವತ್ ॥೨೧॥
ಪರಾಣುಂಪ್ರತಿ ಸರ್ಗೌಘಾಃ ಚಿತ್ತಾದ್ಭಾನ್ತಿ ಸಹಸ್ರಶಃ ।
ತೇಷ್ವಪ್ಯಣಾವಣಾವನ್ತಃ ಕೈವಾತ್ರ ವಾಸನಾ ಕಥಮ್ ॥೨೨॥
ಯಥಾ ಜಲಾನ್ತರೂರ್ಮ್ಯಾದ್ಯಾಃ ಗುಪ್ತಾ ಗುಪ್ತಾಶ್ಚ ಶಕ್ತಯಃ ।
ಜಾಗ್ರತ್ಸ್ವಪ್ನಸುಷುಪ್ತ್ಯಾದ್ಯಾಃ ತಥಾ ಜೀವೇನ್ತರಾಸ್ಥಿತಾಃ ॥೨೩॥
ಜಾತಾ ಚೇದರತಿರ್ಜನ್ತೋಃ ಭೋಗಾನ್ ಪ್ರತಿ ಮನಾಗಪಿ ।
ತದಸೌ ತಾವತೈವೋಚ್ಚೈಃ ಪದಂ ಪ್ರಾಪ್ತ ಇತಿ ಶ್ರುತಿಃ ॥೨೪॥
ಯತೋಯತೋ ವಿರಜ್ಯತೇ ತತಸ್ತತೋ ವಿಮುಚ್ಯತೇ ।
ಅತೋಽಹಮಿತ್ಯಸಂವಿದ್ಧ ಕಪಿತಿ ಜನ್ಮಸಂವಿದಮ್ ॥೨೫॥
ಚಿತಿಂ ಪರಾಪರಾಮಜಾಂ ಅರೂಪಿಕಾಮನಾಮಿಕಾಮ್ ।

ದರೆ,—ವಾಸನೆ ಚಿತ್ತ ಜೀವ ಇತ್ಯಾದ್ಯನುಭವವೆಲ್ಲವೂ ಮನಸ್ಸಿನಿಂದ ಉತ್ಪನ್ನವಾಗುವುದು; ಮನಸ್ಸನ್ನು ನಾಶಪಡಿಸಿದರೆ, ಇವುಗಳು ನಮ್ಮ ಅನುಭವಗೋಚರವಾಗುವುದಿಲ್ಲ. ಈ ಮನೋನಾಶವು, ಜ್ಞಾನಯೋಗದೃಢತರಾಭ್ಯಾಸರೂಪವಾದ ಪುರುಷಪ್ರಯತ್ನದಿಂದಲೇ ಉಂಟಾಗಬೇಕಾದುದಾಗಿರುವುದು ॥೨೦॥

ಆ ಜ್ಞಾನಯೋಗವೆಂಬುದು, ಎಲ್ಲಿಯೂ ಯಾವಾಗಲೂ ಸ್ವಲ್ಪವೂ ಅಸ್ತ ಕೊಂದುವುದೂ ಯಿಲ್ಲ; ಆ ಜ್ಞಾನವೇ, ಸಕಲಸ್ವರೂಪವಾಗಿ ಶಾಂತವಾಗಿ ಪರಿಪೂರ್ಣವಾಗಿ ನಿಶ್ಚಲವಾಗಿರುವುದು॥

ಆದರೆ, ಮನಸ್ಸು ನಷ್ಟವಾಗದಿದ್ದ ಪಕ್ಷದಲ್ಲಿ, ಪ್ರತಿಯೊಂದು ಪರಮಾಣುವಿನೊಳಗೂ ಅನೇಕ ಸೃಷ್ಟಿಪರಂಪರೆಗಳು ಕಾಣಿಸುತಿರುವುವು; ಅವುಗಳೊಳಗೂ ಪ್ರತಿಪರಮಾಣುವಿನಲ್ಲಿಯೂ ಅನೇಕವಾಗಿ ಸೃಷ್ಟಿಪರಂಪರೆಗಳು ಕಾಣಿಸುವುವು. ನಿಶ್ಚಯವನ್ನು ಕುರಿತು ಯೋಚಿಸಿದರೋ, ಈ ಪರಮಾಣುವಿನಲ್ಲಿ ದೊಡ್ಡ ಪ್ರಪಂಚವಿರುವುದೆಲ್ಲಿ?—ಅದಾವುದು ?—ಎಂದು ಗೊತ್ತಾಗುವುದು ॥

ನೀರಿನೊಳಗೆ ತರಂಗವೊದಲಾದುವು ಹೇಗೆ ಅಪ್ರಕಟವಾಗಿಯೂ ಪ್ರಕಟವಾಗಿಯೂ ಇರುವುವೋ, ಹಾಗೆ ಜೀವನೊಳಗೆ ಜಾಗ್ರತ್ ಸ್ವಪ್ನ ಮುಂತಾದುವುಗಳು ಇರುವುವು ॥೨೩॥

ಹಿಂದೆ ಹೇಳಿದ ಪುರುಷಪ್ರಯತ್ನವೆಂಬುದು ಹೇಗೆಂದರೆ:—ಪುರುಷನಿಗೆ ವಿಷಯಗಳಲ್ಲಿ ಸ್ವಲ್ಪವಾದರೂ ಅನಾಸಕ್ತಿಯುಂಟಾಗಿಬಿಟ್ಟರೆ, ಅಷ್ಟರಿಂದಲೇ ಅವನು ಪರಮಪದವನ್ನು ಹೊಂದಿದಂತೆಯೇ ಆಗುವುದೆಂದು ಶ್ರುತಿಯು ಉದ್ಘೋಷಿಸುತಿರುವುದು ॥೨೪॥

ಮನುಷ್ಯನು ಯಾವಯಾವ ವಿಷಯದಲ್ಲಿ ವಿರಕ್ತನಾಗುವನೋ, ಅದರದರ ದೆಸೆಯಿಂದ ಇವನಿಗೆ ಬಿಡುಗಡೆಯುಂಟಾಗುವುದು. ಅದುಕಾರಣ, ದೇಹಾದಿಗಳಲ್ಲಿ ಅಹಂಭಾವಶೂನ್ಯನಾದ ಯಾವ ಪುರುಷತಾನೆ ಪುನರ್ಜನ್ಮದುಃಖಕ್ಕೆ ಗುರಿಯಾಗುವನು! ॥೨೫॥

ಚಿತ್ಪದಾರ್ಥವು, ಈಶ್ವರಾತ್ಮಕವಾಗಿಯೂ ಜೀವಾತ್ಮಕವಾಗಿಯೂ ಇರುವುದು ; ಇದು ಜನ್ಮರಹಿತವಾದುದು; ಇದಕ್ಕೆ ನಾಮರೂಪಗಳಿಲ್ಲ; ಚರಾಚರಭಾವವೂ ದೇಹಾದಿಭಾವವೂ ಇದ

ಚರಾಚರಾಧರಾಮಯೀಂ ವಿದನ್ತಿ ಯೇ ಜಯನ್ತಿ ತೇ ॥೨೬॥

ಪರೇ ಚಿತಿಃ ಸ್ವಪ್ರಕಟಾದ್ವಿತೀಯಾ ಸ್ವಾವರ್ತ್ತಲೇಖೇವ ಜಲೇ ದ್ರವಾನ್ತಃ ।
ಸಾಹನ್ತಯೇಮಾನಿ ಜಗನ್ತಿ ಧತ್ತೇ ನಸನ್ತಿ ನಾಸನ್ತಿ ಪರಾತ್ಮಕಾನಿ ॥೨೭॥

ಅಹಂಮಯೀ ಪದ್ಮಜಭಾವನಾ ಚಿತ್ ಸಙ್ಕಲ್ಪಭೇದಾದ್ವಿತನೋತಿ ವಿಶ್ವಮ್ ।
ಅನ್ತರ್ಮುಖೈವಾನುಭವತ್ಯನನ್ತನಿಮೇಷಕೋಟ್ಯಂಶವಿಧೌ ಯುಗಾನ್ತಮ್ ॥೨೮॥

ಇತಿ ಉತ್ಪತ್ತಿಪ್ರಕರಣೇ ಜಗತ್ಸ್ವರೂಪವರ್ಣನಂ ನಾಮ
ಏಕಷಷ್ಟಿತಮಃ ಸರ್ಗಃ.

ರಲ್ಲಿಲ್ಲ. ಇಂತಹ ಇದರ ಸ್ವರೂಪವನ್ನು ಯಾರು ಸರಿಯಾಗಿ ತಿಳಿಯುವರೋ, ಅವರು ಮುಕ್ತಿಪಾತ್ರರಾಗುವರು ॥೨೬॥

ಜಲದಲ್ಲಿರುವ ದ್ರವತ್ವದ ಪ್ರಕಟಾವಸ್ಥೆಯೇ ಆವರ್ತ(ಸುಳಿ)ವೆನ್ನಿಸಿಕೊಳ್ಳುವಂತೆ, ಪರಮಾತ್ಮನಲ್ಲಿ ಸ್ವತಃ ಪ್ರಕಟವಾಗುವಿಕೆಯೇ ಮಾಯಾಚೈತನ್ಯವೆನ್ನಿಸುವುದು; ಇದು, (ಮಾಯೆ) ಅಹಂಭಾವದಿಂದ ಜಗತ್ತುಗಳನ್ನು ಧರಿಸಿರುವುದು; (ಮಾಯೆಯಿಂದ ನಾನು ನೀನು ಮುಂತಾದ ವ್ಯವಹಾರವುಂಟಾಗಿ, ಅದೇ ಜಗತ್ತೆನಿಸುವುದು) ವಸ್ತುತಃ, ಈ ಜಗತ್ತು ಸತ್ಯವಾದುದಲ್ಲ. ಇದನ್ನೇ ಪರಮಾತ್ಮನೆಂದು ತಿಳಿದುಕೊಂಡಪಕ್ಷದಲ್ಲಿ, ಆಗ ಸತ್ಯವೇ ಆಗುವುದು ॥೨೭॥

ಹೀಗೆ ವ್ಯಷ್ಟಿಸೃಷ್ಟಿಯಲ್ಲಿರುವಂತೆಯೇ, ಸಮಷ್ಟಿಸೃಷ್ಟಿಯಲ್ಲಿಯೂ ಇರುವುದು. ಚತುರ್ಮುಖಬ್ರಹ್ಮರೂಪವಾಗಿ ಅಹಂಭಾವವನ್ನು ಪಡೆದಿರುವ ಆ ಚಿತ್ತು, ತನ್ನ ನಾನಾವಿಧ ಸಂಕಲ್ಪಭೇದದಿಂದ ಪ್ರಪಂಚವನ್ನು ಸೃಷ್ಟಿಮಾಡುವುದು. ಆದರೆ, ಅದು ಅಸ್ಮದಾದಿಗಳಂತೆ ಬಹಿರ್ಮುಖವಾಗಿರುವುದಿಲ್ಲ; ಅಂತರ್ಮುಖವಾಗಿಯೇ ಇದ್ದುಗೊಂಡು, ಶ್ರೀಮನ್ನಾರಾಯಣನ ಒಂದು ನಿಮಿಷದ ಕೋಟ್ಯಂಶರೂಪವಾಗಿರುವ ತನ್ನ ಆಯುಸ್ಸನ್ನನುಭವಿಸುವುದು ॥೨೮॥

ಇದು ಉತ್ಪತ್ತಿಪ್ರಕರಣದಲ್ಲಿ ಜಗತ್ಸ್ವರೂಪವರ್ಣನವೆಂಬ
ಅರವತ್ತೊಂದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವಿಷಷ್ಟಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಪರಮಾಣುನಿಮೇಷಾಣಾಂ ಲಕ್ಷಾಂಶಕಲನಾಸ್ವಪಿ ।
ಜಗತ್ಕಲ್ಪಸಹಸ್ರಾಣಿ ಸತ್ಯಾನೀವ ವಿಭಾನ್ತ್ಯಲಮ್ ॥೧॥
ತೇಷ್ವಪ್ಯನ್ತಸ್ತಥೈವಾನ್ಯಃ ಪರಮಾಣುಕಣಂ ಪ್ರತಿ ।
ಭ್ರಾನ್ತಿರೇವಮನನ್ತಾ ಹೋ ಇಯಮಿತ್ಯವಭಾಸತೇ ॥೨॥
ವಹನ್ತೀಮಾಃ ಪರಾಃ ಸತ್ತಾಃ ಶಾನ್ತಾಃ ಸರ್ಗಪರಮ್ಪರಾಃ ।
ಸಲಿಲದ್ರವತೇವಾನ್ತಃ ಸ್ಫುಟಾವರ್ತವಿವರ್ತಿಕಾ ॥೩॥
ಮಿಥ್ಯಾತ್ಮಿಕೈವ ಸರ್ಗಶ್ರೀಃ ಭವತೀಹ ಮಹಾಮರೌ ।

ಉತ್ಪತ್ತಿಪ್ರಕರಣದಲ್ಲಿ ಅರವತ್ತೆರಡನೆಯ ಸರ್ಗವು.

ಭ್ರಾನ್ತಿಮಾತ್ರತ್ವಮುದಿತಂ ವಿಶ್ವಸ್ಯಾದೌ ಪ್ರಸಜ್ಯತೇ ।
ಮಹಾನಿಯತಿಶಕ್ತಿಶ್ಚ ಜೀವಮುಕ್ತ್ಯಾದಿಸಿದ್ಧಯೇ ॥

ಜೀವನಿಗೆ ಮುಕ್ತಿ ಮುಂತಾದುದು ಸಿದ್ಧಿಸುವುದಕ್ಕೋಸ್ಕರ, ಪ್ರಥಮತಃ ಪ್ರಪಂಚಕ್ಕುಕ್ತವಾದ ಭ್ರಾಂತಿಮಾತ್ರಸ್ವರೂಪತ್ವವೂ, ಮಹತ್ತಾದ ನಿಯತಿಯ ಶಕ್ತಿಯೂ, ಈ ಸರ್ಗದಲ್ಲಿ ನಿರೂಪಿಸಲ್ಪಡುವುವು.

ಶ್ರೀ ವಸಿಷ್ಠರು ಮತ್ತೆ ರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಇನ್ನೂ ಕೇಳುವವನಾಗು. ಒಂದು ಪರಮಾಣುವಿನಲ್ಲಿ ಲಕ್ಷತಮಾಂಶವನ್ನು ಕಲ್ಪಿಸಿದರೂ, ಅದರೊಳಗೇ ಅನೇಕ ಸಹಸ್ರ ಬ್ರಹ್ಮಾಂಡಗಳು ಭಾಸಿಸುವುವು; ಒಂದು ನಿಮಿಷದೊಳಗೆ ಲಕ್ಷದೊಂದು ಭಾಗವನ್ನು ಕಲ್ಪಿಸಿದರೂ, ಅದರಲ್ಲಿಯೇ ಅನೇಕ ಸಹಸ್ರ ಕಲ್ಪಗಳಿರುವಂತೆ ಭಾಸಿಸುವುವು. ಇವು, ವಸ್ತುತಃ ಅಸತ್ಯವಾಗಿದ್ದರೂ ಸತ್ಯವಾಗಿರುವಂತೆ ಸ್ಫುರಿಸುವುವು॥

ಇವುಗಳೊಳಗೂ, ಹಾಗೆಯೇ ಪ್ರತಿ ಪರಮಾಣುವಿನ ಅಂತರ್ಭಾಗದಲ್ಲಿಯೂ ಅನೇಕ ಪ್ರಪಂಚಗಳು ಸ್ಫುರಿಸುವುವು. ಇದು ಅಜ್ಞಾನಿಗಳಿಗೆ ಆಶ್ಚರ್ಯವಾಗಿ ತೋರುವುದು ॥೨॥

ನೀರಿನೊಳಗೆ ಸುಳಿಗಳು ಸುತ್ತುವುವಷ್ಟೆ! ಈ ಸುಳಿಗಳು, ಹಿಂದೆ ಕಳೆದುಹೋದುವಾಗಲಿ-ಈಗಿರುವುವಾಗಲಿ—ಮುಂದೆ ಬರುವುವಾಗಲಿ – ಇವೆಲ್ಲವೂ ನೀರಿನ ದ್ರವತ್ವರೂಪವಾದುವುಗಳೇ ಅಲ್ಲವೆ! ಆದರೂ, ಆ ದ್ರವತ್ವವು (ನೀರಾಗಿರುವಿಕೆ) ಆವರ್ತಗಳನ್ನು ವಹಿಸಿರುವುದೆಂಬ ಪ್ರತೀತಿಯುಂಟಾಗುವುದು. ಇದರಂತೆಯೇ, ಭೂತಭವಿಷ್ಯದ್ವರ್ತಮಾನಗಳಾದ ಸೃಷ್ಟಿಪರಂಪರೆಗಳು, ಪ್ರಾತೀತಿಕ (ತೋರುವಂತಹ) ವಾದ ಸದ್ಭಾವವನ್ನು ವಹಿಸಿರುವುವು ॥೩॥

ಒಂದು ದೊಡ್ಡ ಮರುಭೂಮಿಯಲ್ಲಿ, ಬಿಸಿಲುಗುದುರೆಯನ್ನು ನೋಡಿ, ಭ್ರಾಂತಿಯಿಂದ—ಅಲ್ಲಿ ನದಿ ಹರಿಯುತಿರುವುದೆಂದೂ – ಅದರ ತೀರದಲ್ಲಿರುವ ಮರಗಳೂ ಲತೆಗಳೂ ಹೂವುಸುರಿ

ತೀರದುಮಲ್ಲತೋನ್ಮುಕ್ತಪುಷ್ಪಾಳೀವ ತರಙ್ಗಿಣೀ ||೪||
ಸ್ವಪ್ನೇನ್ದ್ರಜಾಲಪುರವತ್ ಸಙ್ಕಥೇಹಾಪುರಾದ್ರಿವತ್ |
ಸಙ್ಕಲ್ಪವದಸತ್ಯೈವ ಭಾತಿ ಸರ್ಗಾನುಭೂತಿಭೂಃ ||೫||

ಶ್ರೀರಾಮಉವಾಚ.

ಏಕಾತ್ಮೈಕತಯೈವಂ ಹಿ ಜಾತೇ ಸಮ್ಯಗ್ವಿಚಾರಣಾತ್ |
ನಿರ್ವಿಕಲ್ಪಾತ್ಮವಿಜ್ಞಾನೇ ಪರೇ ಜ್ಞಾನವಿದಾಂ ವರ ||೬||
ಕಿಮರ್ಥಮಿಹ ತಿಷ್ಠನ್ತಿ ದೇಹಾಸ್ತತ್ತ್ವವಿದಾಮಪಿ |
ದೈವೇನೇವ ಸಮಾಕ್ರಾನ್ತಾಃ ದೈವಮತ್ರ ಚ ಕಿಂ ಭವೇತ್ ||೭||

ಶ್ರೀವಸಿಷ್ಠಉವಾಚ.

ಅಸ್ತೀಹ ನಿಯತಿರ್ಬ್ರಾಹ್ಮೀ ಚಿಚ್ಛಕ್ತಿಃ ಸ್ಪನ್ದರೂಪಿಣೀ|
ಅವಶ್ಯಭವಿತವ್ಯೈಕಸತ್ತಾ ಸಕಲಕಲ್ಪಗಾ ||೮||
ಆದಿಸರ್ಗೇ ಹಿ ನಿಯತಿಃ ಭಾವವೈಚಿತ್ರ್ಯಮಕ್ಷಯಮ್ |
ಅನೇನೇತ್ಥಂ ಸದಾ ಭಾವ್ಯಂ ಇತಿ ಸಮ್ಪದ್ಯತೇ ಪರಮ್ ||೯||

ಯಿಸುತಿರುವುವೆಂದೂ ನಾವು ಕಲ್ಪಿಸಿಕೊಳ್ಳುವೆವಲ್ಲವೆ! ಇದೆಲ್ಲವೂ ಕೇವಲ ಮಿಥ್ಯಾತ್ಮಕವಾಗಿರುವಂತೆಯೇ, ಈ ಪ್ರಪಂಚ ಸೃಷ್ಟಿಯೆಂಬುದೂ ಕೇವಲ ಮಿಥ್ಯಾತ್ಮಕವೆಂದು ತಿಳಿಯಬೇಕು ||೪||

ಹೀಗೆ, ಸ್ವಪ್ನ ಇಂದ್ರಜಾಲ ಕಥೆ ಮನೋರಥ ಸಂಕಲ್ಪ—ಇವುಗಳಲ್ಲಿ ಕಾಣುವ ಕುಲಪರ್ವತಗಳಂತೆ, ಪ್ರಪಂಚಸೃಷ್ಟಿಯೆಂಬ ಅನುಭವಗಳು ಕೇವಲ ಅಸತ್ಯಗಳಾಗಿರುವುವು ||೫||

ಶ್ರೀರಾಮನು ಪ್ರಶ್ನೆಮಾಡುವನು :—

ಜ್ಞಾನಿಗಳಲ್ಲಗ್ರಗಣ್ಯರಾದ ಗುರುಗಳೆ! ತಾವು ಅಪ್ಪಣೆಕೊಟ್ಟಂತೆ ಚೆನ್ನಾಗಿ ವಿಚಾರಮಾಡಿ, ಆದರಿಂದ ಸರ್ವವೂ ಅದ್ವಿತೀಯವಾದ ಪರಬ್ರಹ್ಮವೇಯೆಂಬ ನಿರ್ವಿಕಲ್ಪಜ್ಞಾನವುಂಟಾದಬಳಿಕ, ತತ್ವಜ್ಞರಾದವರಿಗೂ ಏನುಕಾರಣ ಈ ಪಾಂಚಭೌತಿಕ ದೇಹವಿರುವುದು? ಇದು ದೈವದಿಂದ ಆಕ್ರಮಿಸಲ್ಪಟ್ಟ ಕಾರಣವೇ ಇರುವುದೆಂದು ಹೇಳಬೇಕಲ್ಲವೆ! ಹಾಗಾದಮೇಲೆ, ಈ ತತ್ವಜ್ಞಾನಿಗಳ ವಿಷಯದಲ್ಲಿ ದೈವವೆಂಬುದಾವುದು? ||೬—೭||

ಶ್ರೀ ವಸಿಷ್ಠರು ಉತ್ತರ ಹೇಳುವರು :—

ಅಯ್ಯಾ! ರಾಮ! ಪರಬ್ರಹ್ಮನ ಚಿಚ್ಛಕ್ತಿಯೊಂದಿರುವುದು; ಇದೇ ನಿಯತಿಯೆಂಬುದು; ಇದು ಸಮಸ್ತವಾದ ಪ್ರಪಂಚವ್ಯವಹಾರರೂಪವಾದುದು; ಇದು ಹೀಗೆ ಅವಶ್ಯವಾಗಿ ಆಗಿಯೇ ತೀರಬೇಕೆಂಬ ನಿಯಮವೇ ಇದರ ಲಕ್ಷಣವು; ಇದು ಸಕಲ ಕಲ್ಪಗಳಲ್ಲಿಯೂ ಇರುವುದು ||೮||

ಈ ನಿಯತಿ ಯಾವಾಗಿನಿಂದ ಬಂದಿರುವುದೆಂದರೆ,—ಆದಿಸೃಷ್ಟಿಯಲ್ಲಿ, ಅಕ್ಷಯವಾದ ಪರಬ್ರಹ್ಮವೆಯೇ— ಇದು ಹೀಗೆ ಸರ್ವದಾ ಇರಬೇಕೆಂದು ಮುಂಚೆ ಆಗುವ ಸೃಷ್ಟಿವೈಚಿತ್ರ್ಯವನ್ನೆಲ್ಲ ಸಂಕಲ್ಪಿಸುವುದು; ಇದೇ ನಿಯತಿಯು ||೯||

ಮಹಾಸತ್ತೇತಿ ಕಥಿತಾ ಮಹಾಚಿತಿರಿತಿ ಸ್ಮೃತಾ |
ಮಹಾಶಕ್ತಿರಿತಿ ಖ್ಯಾತಾ ಮಹಾದೃಷ್ಟಿರಿತಿ ಸ್ಥಿತಾ ||೧೦||
ಮಹಾಕ್ರಿಯೇತಿ ಗದಿತಾ ಮಹೋದ್ಭವ ಇತಿ ಸ್ಮೃತಾ |
ಮಹಾಸ್ಪಂದ ಇತಿ ಪ್ರೋಕ್ತಾ ಮಹಾತ್ಮೈಕತಯೋದಿತಾ ||೧೧||
ತೃಣಾನೀವ ಜಗನ್ತ್ಯೇವಂ ಇತಿ ದೈತ್ಯಾಃ ಸುರಾ ಇತಿ |
ಇತಿ ನಾಗಾ ಇತಿ ನಗಾಃ ಇತ್ಯಾಕಲ್ಪಂ ಕೃತಾಸ್ಥಿತಿಃ ||೧೨||
ಕದಾಚಿದ್ಬ್ರಹ್ಮಸತ್ತಾಯಾಂ ವ್ಯಭಿಚಾರೋನುಮೀಯತೇ |
ಚಿತ್ರಮಾಕಾಶಕೋಶೇ ಚ ನಾನ್ಯಥಾ ನಿಯತೇಃ ಸ್ಥಿತಿಃ ||೧೩||
ವಿರಿಞ್ಚ್ಯಾದ್ಯಾತ್ಮಭಿರ್ಬುದ್ಧೈಃ ಬೋಧಾಯಾವಿದಿತಾತ್ಮನಾಮ್ |
ಬ್ರಹ್ಮಾತ್ಮೈವ ಸಾ ನಿಯತಿಃ ಸರ್ಗೋಯಮಿತಿ ಕಥ್ಯತೇ ||೧೪||
ಅಚಲಂ ಚಲವದ್ದೃಷ್ಟಂ ಬ್ರಹ್ಮಾಪೂರ್ಯ ವ್ಯವಸ್ಥಿತಃ |
ಅನಾದಿಮಧ್ಯಪರ್ಯನ್ತಂ ಸರ್ಗೋ ವೃಕ್ಷ ಇವಾಮ್ಬರೇ ||೧೫||

ಹೀಗೆ ಪರಬ್ರಹ್ಮನಿಗಿಂತ ಪೃಥಕ್ಕಲ್ಲದೆ ತದೇಕರೂಪವಾಗಿ ಉದಯಿಸಿರುವ ಈ ನಿಯತಿಯನ್ನೇ, ಆಯಾಗುಣಕರ್ಮಾನುಸಾರವಾಗಿ, ಪ್ರಪಂಚದ ಸ್ಥಿತಿಕಾಲದಲ್ಲಿ ಮಹಾಸತ್ತೆಯೆಂದೂ, ಸ್ಫುರಣಕಾಲದಲ್ಲಿ ಮಹಾಚಿತ್ತೆಂದೂ, ಸಾಮರ್ಥ್ಯಕಾಲದಲ್ಲಿ ಮಹಾಶಕ್ತಿಯೆಂದೂ, ವಿವೇಕವುಂಟಾಗುವಾಗ ಮಹಾದೃಷ್ಟಿಯೆಂದೂ, ನಿರ್ಮಾಣಕಾಲದಲ್ಲಿ ಮಹಾಕ್ರಿಯೆಯೆಂದೂ, ಜನನಕಾಲದಲ್ಲಿ ಮಹೋದ್ಭವವೆಂದೂ, ಕಾರ್ಯವ್ಯಾಪಾರಕಾಲದಲ್ಲಿ ಮಹಾಸ್ಪಂದವೆಂದೂ, ಹೀಗೆಯೇ ಇನ್ನೂ ನಾನಾವಿಧವಾದ ನಾಮಗಳಿಂದಲೂ ಕರೆಯುವರು ||೧೦--೧೧||

ಈ ನಿಯತಿಯು, ಈರೀತಿಯಾಗಿ ಜಗತ್ತುಗಳನ್ನು ಹುಲ್ಲನ್ನು ಸುತ್ತಿಸುವಂತೆ ಸುತ್ತಿಸುತ್ತಿರುವುದು. ಇದು, ಕ್ರೂರಕರ್ಮರನ್ನು ದೈತ್ಯರೆಂದೂ, ಮೃದುಕರ್ಮರನ್ನು ಸುರರೆಂದೂ, ಹೀಗೆಯೇ ಅವರವರ ಸ್ವರೂಪಾನುಗುಣವಾಗಿ—ನಾಗ(ಸರ್ಪ)ಗಳೆಂದೂ, ನಗ (ಪರ್ವತ)ಗಳೆಂದೂ, ಪ್ರಳಯಾಂತವಾಗಿ ವ್ಯವಸ್ಥೆಯನ್ನು ಕಲ್ಪಿಸುವುದು ||೧೨||

ಪರಬ್ರಹ್ಮನ ಸದ್ಭಾವದಲ್ಲಿಯಾದರೂ ಒಂದುವೇಳೆ ನಿಯಮಾತಿಕ್ರಮವನ್ನು ಊಹಿಸಬಹುದಾದೀತು ; ಆಕಾಶಮಧ್ಯದಲ್ಲಿಯಾದರೂ ಚಿತ್ರವಿರುವುದೆಂದು ಊಹಿಸಲಾದೀತು; ಈ ನಿಯತಿಯ ಸ್ಥಿತಿಯನ್ನು ಮಾತ್ರ, ಎಂದಿಗೂ ಸ್ವಲ್ಪವೂ ಬದಲಾಗುವುದೆಂದೂಹಿಸುವುದೂ ಸಾಧ್ಯವಲ್ಲ ||

ಆದರೆ, ಇದೆಲ್ಲವೂ ವ್ಯಾವಹಾರಿಕರೀತಿಯಾಗಿ ಹೇಳಲ್ಪಟ್ಟಿರುವುದು. ತತ್ವದೃಷ್ಟಿಯಿಂದ ಹೇಳುವಪಕ್ಷದಲ್ಲಿ,—ಬ್ರಹ್ಮ ನಿಯತಿ ಸರ್ಗ—ಇತ್ಯಾದಿ ಪದಾರ್ಥಗಳೆಲ್ಲವೂ ಪರಸ್ಪರ ಭಿನ್ನಗಳಲ್ಲವೆಂದೇ ಹೇಳಬೇಕಾಗುವುದು. ಚತುರ್ಮುಖಬ್ರಹ್ಮನೇ ಮೊದಲಾದ ಜ್ಞಾನಿಗಳು, ಅಜ್ಞಾನಿಗಳಿಗೆ ಬೋಧವುಂಟಾಗುವುದಕ್ಕೋಸ್ಕರ, ಕೇವಲ ಬ್ರಹ್ಮರೂಪವಾದ ಆ ನಿಯತಿಯನ್ನೇ ಸೃಷ್ಟಿಯೆಂದು ಹೇಳಿರುವರು ||೧೪||

ನಿಶ್ಚಲನಾದ ಬ್ರಹ್ಮನಿಗೂ, ಚಲವಾದ ಜಗತ್ತಿಗೂ ಐಕ್ಯ ಹೇಗೆ ಸಂಗತವಾಗುವುದೆಂದರೆ,—ಒಂದು ಮರವು ತಾನು ಬೆಳೆದು ಅಂತರಿಕ್ಷಾವಕಾಶವನ್ನು ತುಂಬಿಕೊಂಡಿರುವಂತೆ, ವಸ್ತುತಃ ನಿಶ್ಚಲವಾಗಿಯೂ ಭ್ರಾಂತಿಯಿಂದ ಚಲದಂತೆ ದೃಶ್ಯವಾಗಿಯೂ ಇರುವ ಆದಿಮಧ್ಯಾಂತರಹಿತವಾದ ಪರಮಾತ್ಮ ಪದಾರ್ಥವನ್ನು, ಈ ಸೃಷ್ಟಿಯೆಂಬುದು ತುಂಬಿಕೊಂಡು ಇರುವುದು ||೧೫||

ಪಾಷಾಣೋನರಲೇಖೌಘನ್ಯಾಯೇನಾತ್ಮನಿ ತಿಷ್ಠತಾ ।
ಬ್ರಹ್ಮಣಾ ನಿಯತಿಃ ಸರ್ಗೇ ಬುದ್ಧ್ಯಾಽಬೋಧವತೇವ ಖಮ್ ॥೧೬॥
ದೇಹೇ ಯಥಾಙ್ಗಿನೋಙ್ಗಾದಿ ದೃಶ್ಯತೇ ಚಿತ್ಸ್ವಭಾವತಃ ।
ಬ್ರಹ್ಮಣಾ ಪದ್ಮಜತ್ವೇನ ನಿಯತ್ಯಾದ್ಯಙ್ಗಕಂ ತಥಾ ॥೧೭॥
ಏಷಾ ದೈವಮಿತಿ ಪ್ರೋಕ್ತಾ ಸರ್ವಂ ಸಕಲಕಾಲಗಮ್ ।
ಪದಾರ್ಥಮಲಮಾಕ್ರಮ್ಯ ಶುದ್ಧಾ ಚಿದಿತಿ ಸಂಸ್ಥಿತಾ ॥೧೮॥
ಸ್ಪನ್ದಿತವ್ಯಂ ಪದಾರ್ಥೇನ ಭಾವ್ಯಂ ವಾ ಭೋಕ್ತೃತಾಪದಮ್ ।
ಅನೇನೇತ್ಥಮನೇನೇತ್ಥಂ ಅವಶ್ಯಮಿತಿ ದೈವಧೀಃ ॥೧೯॥
ಏಷೈವ ಪುರುಷಸ್ಪನ್ದಃ ತೃಣಗುಲ್ಮಲತಾದಿ ಚ ।
ಏಷೈವ ಸರ್ವಭೂತಾದಿ ಜಗತ್ಕಾಲಕ್ರಿಯಾದಿ ವಾ ॥೨೦॥
ಅನಯಾ ಪೌರುಷೀ ಸತ್ತಾ ಸತ್ತಾಸ್ಯಾಃ ಪೌರುಷೇಣ ಚ ।
ಲಕ್ಷ್ಯತೇ ಭುವನಂ ಯಾವತ್ ದ್ವೇ ಏಕಾತ್ಮತಯೈವ ಹಿ ॥೨೧॥

ಪ್ರಥಮಸೃಷ್ಟಿಯಲ್ಲಿ ಹಿರಣ್ಯಗರ್ಭನು ಈ ನಿಯತಿಯನ್ನು ಹೇಗೆ ತಿಳಿದುಕೊಂಡನೆಂದರೆ,—ಒಂದು ಸ್ಫಟಿಕಮಣಿಯೊಳಗೆ ಪ್ರತಿಫಲಿಸಿರುವ ವೃಕ್ಷಸಮೂಹಗಳು ರೇಖಾರೂಪವಾಗಿ ಕಾಣುವಂತೆ—ಮಾಯಾಶಬಳವಾದ ಬ್ರಹ್ಮದಲ್ಲಿ ಅವಸ್ಥಿತನಾಗಿರುವ—ಹಿರಣ್ಯಗರ್ಭಬ್ರಹ್ಮನು, ಸ್ವಪ್ನಕಾಲದಲ್ಲಿ ಜ್ಞಾನಶೂನ್ಯನಾಗಿರುವ ಪುರುಷನು ಆಕಾಶವನ್ನೇ ನಾನಾರೂಪವಾಗಿ ತಿಳಿಯುವಂತೆ, ಬ್ರಹ್ಮಪದಾರ್ಥವನ್ನೇ ನಿಯತಿರೂಪವಾಗಿಯೂ ಸೃಷ್ಟಿರೂಪವಾಗಿಯೂ ತಿಳಿದುಕೊಂಡನು ॥೧೬॥

ಶರೀರಿಯಾದವನ ದೇಹದಲ್ಲಿ ಅವಯವಗಳು ಹೇಗೆ ಚೈತನ್ಯಸ್ವಭಾವದಿಂದ ಕಾಣಲ್ಪಡುವುವೋ, ಹಾಗೆ—ಶ್ರೀಮನ್ನಾರಾಯಣ ನಾಭಿಕಮಲೋದ್ಭವನಾದ ಚತುರ್ಮುಖಬ್ರಹ್ಮನಿಂದ—ನಿಯತಿ ಮೊದಲಾದುವು ತನ್ನ ಅವಯವರೂಪವಾದುವಾಗಿ ಕಾಣಲ್ಪಡುವುವು ॥೧೭॥

ಈ ನಿಯತಿಯೇ ದೈವವೆಂದು ಹೇಳಲ್ಪಡುವುದು. ಈ ರೀತಿಯಾಗಿ ಈಶ್ವರಸಂಕಲ್ಪರೂಪವಾದ ಶುದ್ಧ ಚೈತನ್ಯವು, ಸಕಲಕಾಲನಿಷ್ಠವಾದ ಸಮಸ್ತ ಪದಾರ್ಥವನ್ನೂ ಸಂಪೂರ್ಣವಾಗಿ ವ್ಯಾಪಿಸಿಕೊಂಡು ಇರುವುದು ॥೧೮॥

ಈ ಪದಾರ್ಥವೀರೀತಿಯಾಗಿ ಅವಶ್ಯವಾಗಿ ಚಲಿಸಬೇಕು (ಕೆಲಸಮಾಡಬೇಕು), ಇವನೀರೀತಿಯಾಗಿ ಕರ್ಮಫಲೋಪಭೋಗಮಾಡುವ ಸ್ಥಿತಿಯನ್ನನುಭವಿಸತಕ್ಕವನಾಗಬೇಕು,—ಇತ್ಯಾದಿ ರೀತಿಯಾಗಿ ಇರುವ ಜ್ಞಾನವೇ ದೈವಬುದ್ಧಿಯು ॥೧೯॥

ಪುರುಷನ ವ್ಯಾಪಾರವೆಂಬುದೂ ಇದೆಯೇ; ತೃಣ ಗುಲ್ಮ (ಪೊದರು) ಮುಂತಾದ ಅಖಿಲ ಪದಾರ್ಥವೂ ಇದೆಯೇ; ಸಮಸ್ತವಾದ ಭೂತ ಮುಂತಾದುವುಗಳೂ, ಜಗತ್ತು ಕಾಲ ಕ್ರಿಯೆ—ಇತ್ಯಾದಿ ಪದಾರ್ಥಗಳೂ ಇದೆಯೇ ॥೨೦॥

ಈ ನಿಯತಿಯಿಂದಲೇ ಪುರುಷಕಾರಸ್ಥಿತಿಯಿರುವುದು; ಆ ಪುರುಷಕಾರದಿಂದಲೇ ಈ ನಿಯತಿ ಜೀವಿಸಿರುವುದು. ಹೀಗೆ ಇವೆರಡೂ ಪರಸ್ಪರ ಸಹಕಾರಿಗಳಾಗಿರುವುವು. ಈ ಪರಸ್ಪರ ಸಹಕಾರಿತ್ವವು, ಜಗತ್ಪ್ರಳಯವಾಗುವವರೆಗೂ ಇರುವುದು; ಅನಂತರ, ಇವೆರಡೂ ಸೇರಿ ಒಂದೇ ಆಗಿಬಿಡುವುದು ॥೨೧॥

ನರೇಣ ಪೌರುಷೇಣೈವ ಕಾರ್ಯೇ ಸತ್ತಾತ್ಮಕೇ ಉಭೇ ।
ಈದೃಶ್ಯೇತೇನ ನಿಯತಿಃ ಏವಂ ನಿಯತಿಪೌರುಷೇ ॥೨೨॥
ಪೃಷ್ಟವ್ಯೋಽಹಂ ತ್ವಯಾ ರಾಮ ದೈವಪೌರುಷನಿರ್ಣಯಃ।
ಮದುಕ್ತಂ ಪೌರುಷಂ ಪಾಲ್ಯಂ ತ್ವಯೇತಿ ನಿಯತಿಃ ಸ್ಥಿತಾ ॥೨೩॥
ಭೋಜಯಿಷ್ಯತಿ ಮಾಂ ದೈವಂ ಇತಿ ದೈವಪರಾಯಣಃ ।
ಯತ್ ತಿಷ್ಠತ್ಯಕ್ರಿಯೋ ಮೌನಂ ನಿಯತೇರೇಷ ನಿಶ್ಚಯಃ ॥೨೪॥
ನ ಸ್ಯಾದ್ಬುದ್ಧಿರ್ನ ಕರ್ಮಾಣಿ ನ ವಿಕಾರಾದಿ ನಾಕೃತಿಃ ।
ಕೇವಲಂ ತ್ವಿತ್ಥಮಾಕಲ್ಪಂ ಸ್ಥಿತ್ಯಾ ಭಾವ್ಯಮಿತಿ ಸ್ಥಿತಾಃ ॥೨೫॥
ಅವಶ್ಯಂ ಭವಿತವ್ಯೈಷಾ ತ್ವಿದಮಿತ್ಥಮಿತಿ ಸ್ಥಿತಿಃ ।
ನ ಶಕ್ಯತೇ ಲಙ್ಘಯಿತುಂ ಅಪಿ ರುದ್ರಾದಿಬುದ್ಧಿಭಿಃ ॥೨೬॥
ಪೌರುಷಂ ನ ಪರಿತ್ಯಾಜ್ಯಂ ಏತಾಮಾಶ್ರಿತ್ಯ ಧೀಮತಾ ।

ಪುರುಷನು, ಈ ನಿಯತಿ ಪೌರುಷಗಳೆರಡನ್ನೂ ತನ್ನ ಪ್ರಯತ್ನದಿಂದಲೇ ನಿರ್ವಹಿಸಬೇಕು. ಅಯ್ಯಾ! ರಾಮ! ಈ ಪೂರ್ವೋಕ್ತಕ್ರಮದಿಂದ, ನಿಯತಿಯಿಂತಹುದೆಂದೂ, ನಿಯತಿಪೌರುಷಗಳೀರೀತಿಯಾಗಿ ಪರಸ್ಪರ ಸಹಕಾರಿಗಳೆಂದೂ, ಇವು ಪುರುಷಪ್ರಯತ್ನಾಧೀನಗಳೆಂದೂ ಸಿದ್ಧವಾಯ್ತು ॥ ೨೨ ॥

ವತ್ಸ! ರಾಮ! ನೀನು ನನ್ನನ್ನು ಪ್ರಶ್ನೆಮಾಡಬೇಕೆಂಬುದೂ ದೈವದ ಪುರುಷಾಕಾರವೇ (ಶಕ್ತಿ) ಯೆಂದು ನಿಶ್ಚಯಿಸು; ಮತ್ತು, ನನ್ನುಪದೇಶವನ್ನು ಲಾಲಿಸಿ ನೀನು ಪ್ರಯತ್ನಶೀಲನಾಗಬೇಕೆಂಬುದೂ ನಿಯತಿಶಕ್ತಿಯೇ ॥೨೩॥

ದೈವಾವಲಂಬಿಯಾದವನು,—ದೈವವೇ ನನಗೆ ಫಲಾನುಭವಮಾಡಿಸುತದೆಯೆಂದು ನಂಬಿ, ನಿಷ್ಕ್ರಿಯನಾಗಿ, ಮೌನದಿಂದ ಕುಳಿತಿರುವುದಾವುದುಂಟೋ,—ಇದೂ ನಿಯತಿನಿಶ್ಚಯವೇ ॥

ಆದರೆ, ಪುರುಷನು ಹಿಂದಣ ಜನ್ಮದಲ್ಲಿ ಸಮಸ್ತವಾದ ಕೆಲಸವನ್ನೂ ಮಾಡಿರುವನೆಂಬುದೂ, ಆದರ ಸಂಸ್ಕಾರವು ಈಗ ನೆಲೆಸಿರುವುದೆಂಬುದೂ ನಿಶ್ಚಯವು. ಹಾಗಲ್ಲದೆ, ಹಿಂದೆಯೂ ಪುರುಷನು ನಿಷ್ಕ್ರಿಯನಾಗಿಯೇ ಇದ್ದರೆ, ಆಗ—ಈ ಜನ್ಮದಲ್ಲಿ ಪುರುಷನಿಗೆ ಬುದ್ಧಿಯೂ ಇರುತಿರಲಿಲ್ಲ; ಈ ಬುದ್ಧಿಯಿಂದಾಗಬೇಕಾದ ಕರ್ಮಗಳೂ ಇರುತಿರಲಿಲ್ಲ; ಭೂತ ಭೌತಿಕ ಮುಂತಾದ ವಿಕಾರಗಳೂ ನಡೆಯುತಿರಲಿಲ್ಲ; ಪಶು ಪಕ್ಷಿ ಮನುಷ್ಯ ಮುಂತಾದ ರೂಪಗಳೂ ಇರುತಿರಲಿಲ್ಲ. ಅದುಕಾರಣ, ಇವೆಲ್ಲವೂ ಕೇವಲ ಪುರುಷವ್ಯಾಪಾರ ಮೂಲವಾಗಿಯೇ ಇರುವುದರಿಂದ, ಪ್ರಾಪಂಚಿಕಪದಾರ್ಥಗಳೆಲ್ಲವೂ ಪ್ರಳಯಕಾಲದವರೆಗೂ ಈ ವಿಧವಾದ ಸ್ಥಿತಿಯಲ್ಲಿರಬೇಕೆಂಬ ನಿಯಮದಿಂದ ನೆಲೆಸಿರುವುವು ॥೨೫॥

ಈ ಪದಾರ್ಥವೀರೀತಿಯಾಗಿರಬೇಕೆಂಬ ಈ ನಿಯತಿಯು, ಅವಶ್ಯವಾಗಿ ಆಗಿಯೇ ತೀರಬೇಕಾದುದು. ಇದನ್ನು, ರುದ್ರ ಮುಂತಾದವರ ಬುದ್ಧಿಯೂ ಅನುಸರಿಸಿರುವುದೇ ಹೊರತು, ಮೀರಿ ನಡೆಯಲಾಗುವುದಿಲ್ಲ ॥೨೬॥

ಆದರೆ, ಬುದ್ಧಿವಂತನಾದವನು, ಈ ನಿಯತಿಯನ್ನವಲಂಬಿಸಿ ತನ್ನ ಪ್ರಯತ್ನವನ್ನು ಮಾತ್ರ

ಪೌರುಷೇಣೈವ ರೂಪೇಣ ನಿಯತಿರ್ನಿಯಾಮಿಕಾ ॥೨೭॥
ಅಪೌರುಷಂ ಹಿ ನಿಯತಿಃ ಪೌರುಷಂ ಸ್ಯೈವ ಸರ್ಗಗಾ ।
ನಿಷ್ಫಲಾಽಪೌರುಷಾಕಾರಾ ಸಫಲಾ ಪೌರುಷಾತ್ಮಿಕಾ ॥೨೮॥
ನಿಯತ್ಯಾ ಮೂಕತಾಮೇತ್ಯ ನಿಷ್ಪೌರುಷತಯಾಕ್ರಿಯಮ್ ।
ಯಸ್ತಿಷ್ಠತಿಪ್ರಾಣಮರುತ್ಸ್ಪಂದಸ್ತಸ್ಯ ಕ್ವ ಗಚ್ಛತಿ ॥೨೯॥
ಅಥ ಪ್ರಾಣಕ್ರಿಯಾರೋಧಂ ಅಪಿ ಕೃತ್ವಾ ವಿರಾಮದಮ್ ।
ಯದಿ ತಿಷ್ಠತಿ ತತ್ ಸಾಧುಃ ಮುಕ್ತಏವ ಕಿಮುಚ್ಯತೇ ॥೩೦॥
ಪೌರುಷೈಕಾತ್ಮತಾ ಶ್ರೇಯೋ ಮೋಕ್ಷೋತ್ಯಸ್ತಮಕರ್ತೃತಾ ।
ಆಭ್ಯಾಂ ತು ಸಬಲಃ ಪಕ್ಷೋ ನಿರ್ದುಃಖೈವ ಮಹಾತ್ಮನಾಮ್ ॥೩೧॥

ಬಿಟ್ಟುಬಿಡಬಾರದು. ಈ ನಿಯತಿಯು ತಾನು ನಿಯಮನ ಶಕ್ತಿಯನ್ನು ತೋರ್ಪಡಿಸುವುದೂ ಕೂಡ, ಪುರುಷ ಪ್ರಯತ್ನರೂಪದಿಂದಲೇ ಆಗಿರುವುದಲ್ಲವೆ! ॥೨೭॥

ನಿಯತಿಯೆಂಬುದೂ ಪೌರುಷವೆಂಬುದೂ ಪರಸ್ಪರ ಭಿನ್ನಗಳೆಂದು ತಿಳಿಯಬಾರದು. ಒಂದೇ ಶಕ್ತಿಯು, ಪುರುಷಪ್ರಯತ್ನರೂಪವಾಗಿ ತಿಳಿಯಲ್ಪಡದಿದ್ದಾಗ (ನಿಷ್ಕ್ರಿಯವಾಗಿದ್ದಾಗ) ನಿಯತಿಯೆಂದು ಹೇಳಲ್ಪಡುವುದು; ಅದೆಯೇ, ಸೃಷ್ಟಿಫಲೋನ್ಮುಖವಾದಾಗ ಪೌರುಷವೆನ್ನಲ್ಪಡುವುದು. ಇದು, ಪುರುಷಪ್ರಯತ್ನರೂಪವಾಗಿ ಪರಿಣಮಿಸದಿದ್ದಾಗ ನಿಷ್ಫಲವಾಗುವುದು; ಪೌರುಷರೂಪವಾಗಿದ್ದಾಗ ಸಫಲವಾಗುವುದು ॥೨೮॥

'ಪ್ರಯತ್ನಶೂನ್ಯನಾಗಿ ಅಜಗರದಂತೆ ಬಿದ್ದಿರುವವನಿಗೂ ಕೂಡ ಫಲಲಾಭವಾಗುವುದು ಅನುಭವಸಿದ್ಧವಾಗಿರುವುದಲ್ಲವೆ! ಇದು ಹೇಗಾಗುವುದು?' ಎಂದು ಕೇಳಿದರೆ,—ಇದಕ್ಕೆ ಸಮಾಧಾನವನ್ನು ಹೇಳುವೆನು. ಯಾವ ಪುರುಷನು, ನಿಯತಿಪರನಾಗಿ, ತಾನು ಪುರುಷಪ್ರಯತ್ನಶೂನ್ಯನಾಗಿ, ಮೂಗನಂತೆ ಬಾಯಿಬಿಡದೆಯೇ ಸುಮ್ಮನೆ ಕುಳಿತಿರುವನೋ, ಅವನೆಂದಿಗೂ ಭೋಜನ ಮಾಡಿ ತೃಪ್ತಿಹೊಂದುವುದೇ ಇಲ್ಲ; ಅವನು, ಹಸಿವೆಯಿಂದ ಬಳಲುತ ಸ್ವಲ್ಪಕಾಲ ಬದುಕಿರುವನಲ್ಲವೆ! ಅದೂಕೂಡ, ಅವನು ಮಾಡುವ ಪ್ರಾಣವಾಯುಚಾಲನರೂಪವಾದ ಪ್ರಯತ್ನದಿಂದಲೆಯೇ. ಹಾಗಲ್ಲದಿದ್ದರೆ, ಅವನಿಗೆ ಪ್ರಾಣವಾಯುಚಲನೆ ಯೆಲ್ಲಿ ನಡೆಯುವುದು? ಅವನು ಒಂದು ನಿಮಿಷವಾದರೂ ಬದುಕಿರುವುದು ಹೇಗೆ? ॥೨೯॥

ಅಥವಾ, ಪ್ರಾಣವಾಯುಚಲನೆಯ ನಿರೋಧವನ್ನು ಮಾಡಿ ಇರುವ ಪಕ್ಷದಲ್ಲಿ, ಅದು (ಪ್ರಾಣನಿರೋಧ) ಇವನಿಗೆ ಸಮಾಧಿನಿಶ್ರಾಂತಿಯನ್ನು ಕೊಡತಕ್ಕದಾಗುವುದು; ಆಗ ಇವನು ಮುಕ್ತನೇ ಆಗುವನು. ಆ ಪ್ರಾಣನಿರೋಧವೂ ಕೂಡ, ಇವನ ಪ್ರಯತ್ನರೂಪವೆಂದು ನಾವು ಹೇಳುವುದೇನಿದೆ? ॥೩೦॥

ಆದುಕಾರಣ, ಪುರುಷಪ್ರಯತ್ನೈಕಪರನಾಗಿರುವುದೇ ಸಾಧನಗಳಲ್ಲೆಲ್ಲ ಅತಿಪ್ರಶಸ್ತವಾದುದು; ಕೇವಲ ನಿಷ್ಕ್ರಿಯತ್ವರೂಪವಾದ ಮೋಕ್ಷವೇ ಫಲಗಳಲ್ಲೆಲ್ಲ ಅತಿಪ್ರಶಸ್ತವಾದುದು. ಹೀಗೆ ಸಾಧನವಾದ ಪ್ರಯತ್ನದಿಂದಲೂ, ಸಾಧ್ಯವಾದ ಮೋಕ್ಷದಿಂದಲೂ, ಮಹಾತ್ಮರಾದವರು ಅವಿದ್ಯಾನಾಶಸಮರ್ಥರಾಗುವರು. ಆದುಕಾರಣ, ಅವರಿಗೆ ನಿಯತಿಯೆಂಬುದು ಎಂದಿಗೂ ದುಃಖಹೇತುವಾಗುವುದೇ ಇಲ್ಲ ॥೩೧॥

ನಿಯತಿರ್ಬ್ರಹ್ಮಸತ್ತಾಭಾ ತಸ್ಯಾಂ ಚೇತ್ ಪರಿಣಮ್ಯತೇ |
ನೂನಂ ಪರಮಶುದ್ಧಾಖ್ಯಂ ತತ್ ಪ್ರಾಪ್ತೈವ ಪರಾ ಗತಿಃ ||೨೧||
ಏತೈರ್ನಿಯತ್ಯಾದಿಮಹಾವಿಲಾಸೈಃ ಬ್ರಹ್ಮೈವ ವಿಸ್ಫೂರ್ಜತಿ ಸರ್ವಗಾತ್ಮ |
ತೃಣಾದಿವಲ್ಲೀತರುಗುಲ್ಮಜಾಲೈಃ ಸತ್ತೇವ ತೋಯಸ್ಯ ಧರಾನ್ತರಸ್ಥಾ ||೨೨||

ಇತಿ ಉತ್ಪತ್ತಿಪ್ರಕರಣೇ ದೈವಶಬ್ದಾರ್ಥನಿರೂಪಣಂ ನಾಮ
ದ್ವಿಷಷ್ಟಿತಮಃ ಸರ್ಗಃ.

ಅಂತು, ನಿಯತಿಯೆಂಬುದು ಪರಬ್ರಹ್ಮನ ಸತ್ತಾಪ್ರಕಾಶರೂಪವಾದುದು; ಇದರಲ್ಲಿ (ಈವಿಧವಾದ ನಿಯತಿಯಲ್ಲಿ) ಸ್ಥಿರೀಭಾವವನ್ನು ಹೊಂದಿಬಿಟ್ಟಪಕ್ಷದಲ್ಲಿ, ಆಗ ಪರಮಪವಿತ್ರವಾದ ಸ್ಥಾನವನ್ನೇ ಹೊಂದಿದಂತಾಯ್ತು. ಇದೇ ಮೋಕ್ಷವೆನ್ನಲ್ಪಡುವುದೆಂದು ನಿಶ್ಚಯವು ||೨೧||

ಅಯ್ಯಾ! ರಾಮ! ಈಗ ಮುಖ್ಯಾಂಶವನ್ನು ಕೇಳುವನಾಗು, ಭೂಮಿಯೊಳಭಾಗದಲ್ಲಡಗಿರುವ ಜಲಸ್ಥಿತಿಯು, ತೃಣ ಲತೆ ವೃಕ್ಷ ಗುಲ್ಮ (ಪೊದರು)—ಇತ್ಯಾದಿ ಸಮೂಹರೂಪವಾಗಿ ಹೇಗೆ ಸ್ಫುರಿಸುವುದೋ, (ಭೂಮಿಯೊಳಗೆ ನೀರಿರುವುದರಿಂದಲೇ ವೃಕ್ಷಾದಿಗಳು ಸ್ಫುರಿಸುವುವು) ಹಾಗೆ—ಸರ್ವವ್ಯಾಪಿಯಾದ ಪರಬ್ರಹ್ಮವೇ ಈ ನಿಯತಿ ಮುಂತಾದ ರೂಪಗಳಿಂದ ಸ್ಫುರಿಸುತಿರುವುದು ||೨೨||

ಇದು ಉತ್ಪತ್ತಿಪ್ರಕರಣದಲ್ಲಿ ದೈವಶಬ್ದಾರ್ಥನಿರೂಪಣವೆಂಬ
ಅರವತ್ತೆರಡನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ತ್ರಿಷಷ್ಟಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಯದೇತದ್ಬ್ರಹ್ಮತತ್ತ್ವಂ ಸರ್ವಥಾ ಸರ್ವದೈವ ಸರ್ವತಏವ ಸರ್ವಶಕ್ತಿ ಸರ್ವಾಕಾರಂ ಸರ್ವೇಶ್ವರಂ ಸರ್ವಗಂ ಸರ್ವಮೇವೇತಿ ‖೧‖

ಏಷ ತ್ವಾತ್ಮಾ ಸರ್ವಶಕ್ತಿತ್ವಾಚ್ಚ ಕ್ವಚಿಚ್ಚಿಚ್ಛಕ್ತಿಂ ಪ್ರಕಟಯತಿ, ಕ್ವಚಿಚ್ಛಾನ್ತಿಂ, ಕ್ವಚಿಜ್ಜಡಶಕ್ತಿಂ, ಕ್ವಚಿದುಲ್ಲಾಸಂ, ಕ್ವಚಿತ್ ಕಿಞ್ಚಿನ್ನ ಕಿಞ್ಚಿತ್ ಪ್ರಕಟಯತಿ ‖೨‖

ಯತ್ರ ಯದಾ ಯದೇವಾಸೌ ಯಥಾ ಭಾವಯತಿ, ತತ್ರ ತದಾ ತದೇವಾಸೌ ಪ್ರಪಶ್ಯತಿ ‖೩‖

ಉತ್ಪತ್ತಿಪ್ರಕರಣದಲ್ಲಿ ಅರವತ್ತಮೂರನೆಯ ಸರ್ಗವು.

ವಿಸ್ಫೂರ್ಜತಿ ಯಥಾ ಬ್ರಹ್ಮ ಸರ್ವತಃ ಸರ್ವರೂಪತಃ ।
ಮಾಯಾಶಕ್ತಿವಿಲಾಸೇನ ತಥಾತ್ರ ಪ್ರತಿಪಾದ್ಯತೇ ‖

ಪರಮಾತ್ಮನು ಮಾಯಾಶಕ್ತಿಯ ವಿಲಾಸದಿಂದ ಸರ್ವತ್ರ ಸರ್ವರೂಪನಾಗಿ ಸ್ಫುರಿಸುವ ಪ್ರಕಾರವು ಈ ಸರ್ಗದಲ್ಲಿ ಹೇಳಲ್ಪಡುವುದು.

ಮತ್ತೆ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ವತ್ಸ! ರಾಮಚಂದ್ರ! ಈ ಬ್ರಹ್ಮಪದಾರ್ಥವಾವುದುಂಟೋ, ಅದು—ಸರ್ವವಿಧವಾಗಿಯೂ ಸರ್ವಕಾಲದಲ್ಲಿಯೂ ಸಕಲ ಕಾರಣದಿಂದಲೂ, ಸರ್ವಶಕ್ತಿಯಾದುದು; ಸರ್ವೇಶ್ವರವಾದುದು; ಸರ್ವವ್ಯಾಪಿಯಾದುದು; ಅದೇ ಸರ್ವಸ್ವರೂಪವಾಗಿಯೂ ಇರುವುದು ‖೧‖

ಇಂತಹ ಈ ಪರಮಾತ್ಮನಾದರೋ.—ಸ್ವಯಂ ಸರ್ವಶಕ್ತನಾಗಿರುವುದರಿಂದ ಒಂದು ಕಡೆಯಲ್ಲಿ (ಅಂತಕರಣದಲ್ಲಿ) ಜೀವರೂಪನಾಗಿ ಪ್ರವೇಶಮಾಡಿ ತನ್ನ ಜ್ಞಾನಶಕ್ತಿಯನ್ನು ಪ್ರಕಟಪಡಿಸುವನು; ಮತ್ತೊಂದು ಕಡೆಯಲ್ಲಿ (ಸಾತ್ವಿಕಸ್ಥಿತಿಯಲ್ಲಿ) ಶಾಂತಿಯನ್ನು ಪ್ರಕಟಪಡಿಸುವನು; ಒಂದು ಕಡೆಯಲ್ಲಿ (ತಾಮಸನಲ್ಲಿ) ಜಡಶಕ್ತಿಯನ್ನು ಪ್ರಕಟಪಡಿಸುವನು; ಒಂದುಕಡೆಯಲ್ಲಿ (ರಾಜಸನಲ್ಲಿ) ರಾಗ ಲೋಭ ಮುಂತಾದ ಉಲ್ಲಾಸವನ್ನು ಪ್ರಕಟಪಡಿಸುವನು; ಕೆಲವೆಡೆಯಲ್ಲಿ, ಗುಣಕಾರ್ಯಗಳು ಮಿಶ್ರಿತವಾಗಿರುವುದರಿಂದ ಇಂತಹುದೆಂದು ಸ್ಪಷ್ಟಪಡಿಸಲಸಾಧ್ಯವಾದ ಶಕ್ತಿಯನ್ನು ಪ್ರಕಟಪಡಿಸುವನು; ಸುಷುಪ್ತಿಯಲ್ಲಿಯೂ ಪ್ರಳಯಕಾಲದಲ್ಲಿಯೂ ಯಾವುದೂ ಇಲ್ಲದೆ, ನಿಷ್ಕ್ರಿಯನಾಗಿರುವನು ‖೨‖

ಹೀಗೆ ಆಗುವುದಕ್ಕೆ ಕಾರಣವೇನೆಂದರೆ:—ಈ ಆತ್ಮನು, ಯಾವಕಡೆಯಲ್ಲಿ-ಯಾವಾಗ-ಯಾವುದನ್ನು-ಯಾವರೀತಿಯಾಗಿ ಭಾವಿಸುವನೋ, ಅಲ್ಲಿ-ಅದನ್ನು—ಆರೀತಿಯಾಗಿಯೇ ಕಾಣುವನು. (ಅದು ಆರೀತಿಯಾಗಿ ಸ್ಫುರಿಸುವುದು) ಇದೇ ಕಾರಣವು ‖೩‖

ಸರ್ವಶಕ್ತೇರ್ಹಿ ಯಾಯೈವ ಯಥೋದೇತಿ ತಥೈವ ಸಾ ||೪||

ತದಸ್ತಿ ಶಕ್ತಿರ್ನಾನಾರೂಪಿಣೀ, ಸಾ ಸ್ವಭಾವತ ಇಮಾಃ ಶಕ್ತಯೋಽಯಮಾತ್ಮೇತಿ ||೫||

ಏವಂ ವಿಕಲ್ಪಜಾಲಂ ವ್ಯವಹಾರಾರ್ಥಂ ಧೀಮದ್ಭಿಃ ಪರಿಕಲ್ಪಿತಂ ಲೋಕೇ, ನ ತ್ವಾತ್ಮನಿ ವಿದ್ಯತೇ ಭೇದಃ, ಯಥೋರ್ಮಿತರಙ್ಗಪಯಸಾಂ ಸಾಗರೇ, ಕಟಕಾಙ್ಗದಕೇಯೂರೈರ್ವಾ ಹೇಮ್ನಃ, ಅವಯವಾವಯವಿನೋಃ ಸಂವಿತ್ಕಾಲ್ಪನಿಕೀ ದ್ವಿತಾ, ನ ವಾಸ್ತವೀ ||೬||

ಯಥಾ ಯಚ್ಚೇತ್ಯತೇಹಿ, ತಥೈವ ತತ್. ನ ಬಾಹ್ಯತೋ ನಾನ್ತರತಶ್ಚೈತತ್ ಸಮುದೇತಿ ಹಿ ||೭||

ಸರ್ವಾತ್ಮತ್ವಾತ್ ಸಮಾಭಾಸಂ ಕ್ವಚಿತ್ ಕಿಞ್ಚಿತ್ ಪ್ರಪಶ್ಯತಿ ||೮||

ಸರ್ವವಿಧವಾದ ಶಕ್ತಿಯುಳ್ಳವನಿಗೆ, ಯಾವ ಶಕ್ತಿ ಹೇಗೆ ಉದಯಿಸುವುದೋ, ಅದು ಹಾಗೆಯೇ ಆಗುವುದಲ್ಲವೆ! ||೪||

ಆದರೆ, ಶಕ್ತಿಯೇ ಒಂದು ಪದಾರ್ಥವೆಂದೂ ಶಕ್ತಿಯುಳ್ಳವನು ಮತ್ತೊಂದು ಪದಾರ್ಥವೆಂದೂ ಭೇದಕಲ್ಪನೆಗೆಂದಿಗೂ ಅವಕಾಶವಿಲ್ಲ. ಒಂದೇ ಶಕ್ತಿಯೇ ನಾನಾರೂಪವಾದುದಾಗಿರುವುದು. ಆದೆಯೇ, ಅನೇಕವಿಧವಾದ ಶಕ್ತಿಗಳೆಂದೂ ಆತ್ಮನೆಂದೂ ವ್ಯವಹರಿಸಲ್ಪಡುವುದು ವಸ್ತುತಃ ಇರುವುದು ಒಂದುಮಾತ್ರವೇ ||೫||

ಈ ವಿಧವಾದ ವಿಕಲ್ಪಜಾಲವನ್ನೆಲ್ಲ, ಪಂಡಿತರಾದವರು ಪ್ರಪಂಚದಲ್ಲಿ ವ್ಯವಹಾರಾರ್ಥವಾಗಿ ಕಲ್ಪಿಸಿರುವರು. ಆತ್ಮನಲ್ಲಿಯಾದರೋ, ಸಮುದ್ರದಲ್ಲಿ ಜಲತರಂಗಗಳಿಗೆ ಭೇದವಿಲ್ಲದಿರುವಂತೆಯೂ, ಸುವರ್ಣಕ್ಕೂ ಕಟಕ ಅಂಗದ ಕೇಯೂರ ಮುಂತಾದುವುಗಳಿಗೂ ಭೇದವಿಲ್ಲದಿರುವಂತೆಯೂ, ಸುತರಾಂ ಯಾವವಿಧವಾದ ಭೇದಜ್ಞಾನವೂ ಇಲ್ಲ. ಮತ್ತು, ಅವಯವಾವಯವಿಗಳಿಗೆ ಭೇದವೆಂಬುದು, ಅವರವರ ಜ್ಞಾನಕಲ್ಪಿತವಲ್ಲದೆ—ಸತ್ಯವಲ್ಲವಲ್ಲವೆ! ಇದರಂತೆಯೇ, ಆತ್ಮನಲ್ಲಿಯೂ ಭೇದವು ಕಲ್ಪಿತವೆಂದು ತಿಳಿಯಬೇಕು ||೬||

ಪ್ರಪಂಚದಲ್ಲಿ, ರಜ್ಜು ಮುಂತಾದ ಯಾವ ಪದಾರ್ಥಗಳನ್ನು ನೋಡಿ—ಸರ್ಪ ಮುಂತಾದ ಯಾವ ಪದಾರ್ಥವೆಂದು ತಿಳಿಯುವೆವೋ, ಅದು (ರಜ್ಜು ಮೊದಲಾದುದು) ಹಾಗೆಯೇ (ಸರ್ಪ ಮುಂತಾದ ರೂಪವಾಗಿಯೇ) ನಮ್ಮ ಬುದ್ಧಿಯಲ್ಲಿ ನೆಲೆಸಿಬಿಡುವುದು. ಇಷ್ಟೇಹೊರತು, ಆ ರಜ್ಜುವಿನಲ್ಲಿ ಎಷ್ಟು ಹುಡುಕಿ ನೋಡಿದರೂ, ಅದರ ಒಳಗೂ ಹೊರಗೂ ಎಲ್ಲಿಯೂ ಈ ಸರ್ಪವಿರುವುದಿಲ್ಲವಲ್ಲವೆ! ಹೀಗೆಯೇ ಆತ್ಮನಲ್ಲಿಯೂ ತಿಳಿಯಬೇಕು ||೭||

ಸರ್ವಸಾಧಾರಣವಾದ ಪ್ರಕಾಶವುಳ್ಳ ಈ ಬ್ರಹ್ಮವಸ್ತುವು, ಸ್ವಯಂ ಸರ್ವಾತ್ಮಕವಾಗಿರುವುದರಿಂದ, ಯಾವುದೋವೊಂದೆಡೆಯಲ್ಲಿ-ಭ್ರಾಂತಿಯುಂಟಾದಾಗ-ಆ ಭ್ರಾಂತಿಗನುಗುಣವಾಗಿ-ಯಾವುದಾದರೊಂದು ಪದಾರ್ಥರೂಪವನ್ನು ನೋಡುವುದಲ್ಲದೆ, ಸರ್ವತ್ರ ಈ ವಿಧವಾದ ಪ್ರಸಕ್ತಿಯಿರುವುದಿಲ್ಲ ||೮||

ಸರ್ವಾಕಾರಮಯಂ ಬ್ರಹ್ಮೈವೇದಂ ತತಮ್. ಮಿಥ್ಯಾಜ್ಞಾನವದ್ಭಿಃ ಶಕ್ತಿಶಕ್ತಿಮತ್ತ್ವೇ ಅವಯವಾವಯವಿರೂಪೇ ಕಲ್ಪಿತೇ ನ ಪಾರಮಾರ್ಥಿಕೇ ‖೯‖

ಸದ್ವಾ ಭವತ್ವಸದ್ವಾ, ಚಿದ್ಯತ್ ಸಙ್ಕಲ್ಪಯತ್ಯಭಿನಿವಿಶತಿ ತತ್ತತ್ ಪಶ್ಯತಿ ಸಕಲಾ. ತತ್ ಸದ್ಬ್ರಹ್ಮೈವ ಚಿದ್ಭಾತಿ ‖೧೦‖

ಇತಿ ಉತ್ಪತ್ತಿಪ್ರಕರಣೇ ಚಿತ್ತಾವಿಕಾರೋನಾಮ
ತ್ರಿಷಷ್ಟಿತಮಃ ಸರ್ಗಃ.

ಹೀಗೆ, ಈ ಬ್ರಹ್ಮವೇ ಸರ್ವರೂಪವಾಗಿಯೂ ವ್ಯಾಪಿಸಿರುವುದು. ತತ್ವಜ್ಞಾನಶೂನ್ಯರಾದವರು, ಶಕ್ತಿ ಶಕ್ತಿಮಂತ(ಶಕ್ತಿಯುಳ್ಳ)ರೆಂದೂ—ಅವಯವಾವಯವಿಗಳೆಂದೂ ಭೇದಗಳನ್ನು ಕಲ್ಪಿಸಿಕೊಂಡಿರುವರು; ಇದು ಪರಮಾರ್ಥವಲ್ಲ ‖೯‖

ಸತ್ಪದಾರ್ಥವಾಗಲಿ, ಅಥವಾ ಅಸತ್ಪದಾರ್ಥವಾಗಲಿ,—ಈ ಚಿತ್ತು, (ಜ್ಞಾನ) ಯಾವುದರಲ್ಲಿ ಸಂಕಲ್ಪಪೂರ್ವಕವಾಗಿ ಅಭಿನಿವೇಶವುಳ್ಳುದಾಗುವುದೋ, ಅದನ್ನು ಸರ್ವತ್ರ ನೋಡುತ್ತಿರುವುದು. ಅಂತು, ಅಖಂಡವಾದ ಈ ಜ್ಞಾನವೇ ಬ್ರಹ್ಮರೂಪವಾಗಿ ಭಾಸಿಸುತ್ತಿರುವುದು ‖೧೦‖

ಇದು ಉತ್ಪತ್ತಿಪ್ರಕರಣದಲ್ಲಿ ಚಿದ್ಭಾವದ ಅವಿಕಾರನಿರೂಪಣವೆಂಬ
ಅರವತ್ತು ಮೂರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಚತುಷ್ಷಷ್ಟಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಯೋಽಯಂ ಸರ್ವಗತೋ ದೇವಃ ಪರಮಾತ್ಮಾ ಮಹೇಶ್ವರಃ ।
ಸ್ವಚ್ಛಃ ಸ್ವಾನುಭವಾನನ್ದಸ್ವರೂಪೋಽನಾದಿವರ್ಜಿತಃ ॥೧॥
ಏತಸ್ಮಾತ್ ಪರಮಾನನ್ದಾತ್ ಶುದ್ಧಚಿನ್ಮಾತ್ರರೂಪಿಣಃ ।
ಜೀವಃ ಸಞ್ಜಾಯತೇ ಪೂರ್ವಂ ಸ ಚಿತ್ತಂ ಚಿತ್ತತೋ ಜಗತ್ ॥೨॥

ಶ್ರೀರಾಮ ಉವಾಚ.

ಸ್ವಾನುಭೂತಿಪ್ರಮಾಣೇಽಸ್ಮಿನ್ ಬ್ರಹ್ಮಣಿ ಬ್ರಹ್ಮಬೃಂಹಿತೇ ।
ಕಥಂ ಸತ್ತಾಮವಾಪ್ನೋತಿ ಜೀವಕೋ ದ್ವೈತವರ್ಜಿತೇ ॥೩॥

ಉತ್ಪತ್ತಿಪ್ರಕರಣದಲ್ಲಿ ಅರವತ್ತುನಾಲ್ಕನೆಯ ಸರ್ಗವು.

ಭೋಗ್ಯಸ್ಯ ಶಕ್ತಿವೈಚಿತ್ರ್ಯಾದ್ಯಾವಿರ್ಭಾವೋ ನಿರೂಪಿತಃ ।
ಭೋಕ್ತೃಜೀವತ್ವಸಮ್ಪ್ರಾಪ್ತಿಕ್ರಮೋಽತ್ರ ಪ್ರತಿಪಾದ್ಯತೇ ॥

ಭೋಗ್ಯವಾದ ಪ್ರಪಂಚಕ್ಕೆ, ಶಕ್ತಿವೈಚಿತ್ರ್ಯ ಮುಂತಾದುದಾವಿರ್ಭವಿಸುವ ರೀತಿಯು ಹೇಳಲ್ಪಟ್ಟಂತಾಯ್ತು. ಈಗ ಭೋಕ್ತೃವಾದ ಜೀವಸ್ವರೂಪವುಂಟಾಗುವ ಕ್ರಮವು ನಿರೂಪಿಸಲ್ಪಡುವುದು ॥

ಪುನಃ ಶ್ರೀ ವಸಿಷ್ಠರು ರಾಮಚಂದ್ರನಿಗುಪದೇಶಿಸಲುಪಕ್ರಮಿಸಿದರು :—

ಅಯ್ಯಾ! ರಾಮ! ಸರ್ವಗತನಾಗಿಯೂ-ಪರಮಾತ್ಮನಾಗಿಯೂ-ಪರಮೇಶ್ವರನಾಗಿಯೂ—ನಿರ್ಮಲನಾಗಿಯೂ-ಸ್ವಾನುಭವೈಕ ವೇದ್ಯವಾದ ಆನಂದರೂಪವುಳ್ಳವನಾಗಿಯೂ-ಜರಾಮರಣ ವರ್ಜಿತನಾಗಿಯೂ ಇರುವ ಯಾವ ಸ್ವಾಮಿಯಿರುವನೋ, ಇಂತಹ–ಶುದ್ಧಚಿನ್ಮಾತ್ರ ಸ್ವರೂಪನಾಗಿ ಪರಮಾನಂದಾಕಾರನಾಗಿರುವ—ಆ ಸ್ವಾಮಿಯ ದೆಸೆಯಿಂದ, ಪ್ರಥಮತಃ ಜೀವನುದಯಿಸುವನು. ಇವನಿಗೇ, ಉಪಾಧಿಭೇದದಿಂದ ಚಿತ್ತವೆಂಬ ವ್ಯವಹಾರವುಂಟಾಗುವುದು. ಈ ಚಿತ್ತದ ದೆಸೆಯಿಂದ ಜಗದುತ್ಪತ್ತಿಯಾಗುವುದು ॥೧—೨॥

ಈಗ ರಾಮನು ಶಂಕೆಪಟ್ಟು ಪ್ರಶ್ನೆಮಾಡುವನು :—

ಸ್ವಾಮಿ! ಗುರುಗಳೆ! ಈಗ ನನಗೊಂದುವಿಧವಾದ ಸಂಶಯವುಂಟಾಗಿರುವುದು. ತಾವು ಅಪ್ಪಣೆಕೊಡಿಸಿದಂತೆ, ಆ ಪರಬ್ರಹ್ಮನು-ಸ್ವಾನುಭವೈಕವೇದ್ಯನೆಂದೂ-ಅಪರಿಚ್ಛಿನ್ನನಾಗಿ ವ್ಯಾಪ್ತನಾಗಿರುವನೆಂದೂ-ಅಖಂಡನಾಗಿ ಅದ್ವಿತೀಯನಾಗಿ ಸ್ವಯಂಪ್ರಕಾಶನಾಗಿ ಇರುವನೆಂದೂ ಸಿದ್ಧವಾಯಿತಲ್ಲವೆ! ಇಂತಹ ಈ ಬ್ರಹ್ಮನಲ್ಲಿ, ಸಖಂಡನಾಗಿ ಸದ್ವಿತೀಯನಾಗಿರುವ ಜೀವನು ಸದ್ಭಾವ (ಸ್ಥಿತಿ)ವನ್ನು ಪಡೆದಿರುವುದು ಹೇಗೆ? ಇವರಿಬ್ಬರ ಗುಣಗಳೂ ಪರಸ್ಪರ ವಿರುದ್ಧಗಳಾಗಿರುವುದರಿಂದ, ಬ್ರಹ್ಮನೊಳಗೆ ಜೀವನು ಐಕ್ಯಗತನಾಗಿರುವನೆಂಬುದೂ ವಿರುದ್ಧವಾಗಿ ತೋರುವುದಲ್ಲವೆ! ॥೩॥

ಶ್ರೀವಸಿಷ್ಠ ಉವಾಚ.

ಅಸದಾಭಾಸಮಚ್ಛಾತ್ಮ ಬ್ರಹ್ಮಾಸ್ತೀಹ ಪ್ರಬೃಂಹಿತಮ್ ।
ಬೃಹಚ್ಚಿದ್ಭೈರವವಪುಃ ಆನನ್ದಾಭಿಧಮವ್ಯಯಮ್ ॥೪॥
ತಸ್ಯ ಯತ್ ಸಮಮಾಪೂರ್ಣಂ ಶುದ್ಧಂ ಸತ್ವಮಚಿಹ್ನಿತಮ್ ।
ತದ್ವಿದಾಮಪ್ಯನಿರ್ದೇಶ್ಯಂ ತಚ್ಛಾನ್ತಂ ಪರಮಂ ಪದಮ್ ॥೫॥
ತಸ್ಯೈವೋದ್ಯದಿವಾಶಾನ್ತಿ ಯತ್ ಸತ್ವಂ ಸಂವಿದಾತ್ಮಕಮ್ ।
ಸ್ವಭಾವಾತ್ ಸ್ಪನ್ದನಂ ತತ್ತು ಜೀವಶಬ್ದೇನ ಕಥ್ಯತೇ ॥೬॥
ತತ್ರೇಮಾಃ ಪರಮಾದರ್ಶೇ ಚಿದ್ವ್ಯೋಮ್ನ್ಯನುಭವಾತ್ಮಿಕಾಃ ।
ಅಸಙ್ಖ್ಯಾಃ ಪ್ರತಿಬಿಮ್ಬನ್ತಿ ಜಗಜ್ಜಾಲಪರಮ್ಪರಾಃ ॥೭॥
ಬ್ರಹ್ಮಣಃ ಸ್ಫುರಣಂ ಕಿಞ್ಚಿತ್ ಯದವಾತಾಮ್ಬುಧೇರಿವ ।

ಶ್ರೀ ವಸಿಷ್ಠರು ಸಮಾಧಾನ ಹೇಳುವರು: —

ಅಯ್ಯಾ! ರಾಮ! ನಿನ್ನ ಶಂಕೆ ಗೊತ್ತಾಯ್ತು. ಸತ್ಯಸ್ವರೂಪನಾಗಿಯೂ ನಿರ್ದೋಷನಾಗಿಯೂ ಇರುವ ಪರಬ್ರಹ್ಮನಲ್ಲಿ, ಪರಮಾರ್ಥವಿಚಾರಮಾಡಿದಾಗ-ಜೀವವೆಂಬ ಪದಾರ್ಥವಿರುವುದೇ ಅಸಂಭವವಾಗಿ ಗೊತ್ತಾಗುವುದು. ಅದಲ್ಲದೆ, ಆ ಬ್ರಹ್ಮನು ಮಾಯೋಪಾಧಿಯುಕ್ತನಾಗಿರುವಾಗ, ಅವನೊಳಗೆ ಜೀವಸದ್ಭಾವವು ವಿರುದ್ಧವೇ ಅಲ್ಲ. ಹೀಗೆ ವಿಭಾಗ ಮಾಡಿಕೊಂಡು ವಿಚಾರ ಮಾಡುವನಾಗು. ಈಗ ಮೊದಲು ಸಾಮಾನ್ಯವಾಗಿ ಆ ಬ್ರಹ್ಮಸ್ವರೂಪವನ್ನು ತಿಳಿಯುವನಾಗು. ಈ ಬ್ರಹ್ಮದೊಳಗೆ, ಭೇದಜ್ಞಾನವೊಂದೂ ವಾಸ್ತವ್ಯವಲ್ಲ; ಇದು ನಿರ್ಗುಣವಾದುದು; ಇದು ಜ್ಞಾನರೂಪವಾಗಿ ಸರ್ವವ್ಯಾಪಿಯಾಗಿರುವುದು; ಆತ್ಮನಿಷ್ಠರಲ್ಲದವರಿಗೆ, ಇದರ ಸ್ವರೂಪವು ಭಯಜನಕವಾಗುವುದು; ಇದನ್ನು ಆನಂದವೆಂಬ ಶಬ್ದದಿಂದದೂ ಕರೆಯುವರು; ಇದು ಜರಾಮರಣವರ್ಜಿತವಾಗಿರುವುದು ॥೪॥

ಇಂತಹ ಈ ಬ್ರಹ್ಮಪದಾರ್ಥವು, ನಿರುಪಾಧಿಕವಾಗಿ-ಅಖಂಡವಾಗಿ-ಶುದ್ಧವಾಗಿ-ನಿಷ್ಕಳಂಕವಾಗಿ—ಇರುವ ಸ್ಥಿತಿಯಾವುದುಂಟೋ, ಇದು ಪಂಡಿತರಿಗೂ ಕೂಡ ಇಂತಹುದೆಂದು ನಿಷ್ಕರ್ಷಿಸಿ ಹೇಳಲಸಾಧ್ಯವಾದುದು; ಇದೇ ಶಾಂತವಾದ ಪರಮಪದವು. ಈ ಸ್ಥಿತಿಯಲ್ಲಿ ಜೀವಾದಿ ಭೇದಸಂಭವವೇ ಇಲ್ಲ ॥೫॥

ಆ ಪರಬ್ರಹ್ಮವೇ, ಮತ್ತೊಂದು ಸಂದರ್ಭದಲ್ಲಿ ಉಪಾಧಿಯುಕ್ತವಾಗಿಬಿಡುವುದು; ಆಗ ಇದರ ಜ್ಞಾನರೂಪವಾದ ಸ್ಥಿತಿಯೇ, ಪದೇಪದೇ ಉದಯಿಸುತಿರುವಂತೆಯೂ-ಮೋಕ್ಷಸಿದ್ಧಿಪರ್ಯಂತವಾಗಿ ಈ ಉತ್ಪತ್ತಿಭ್ರಾಂತಿ ನಷ್ಟವಾಗದಿರುವಂತೆಯೂ ಕಾಣುವುದು. ಆಗ ಇದು ಮಾಯೋಪಾಧಿಸ್ವಭಾವದಿಂದ ಚಲನೆಹೊಂದುವುದು. ಇದೇ (ಚಲನೆ) ಜೀವನೆಂಬ ಶಬ್ದದಿಂದ ಕರೆಯಲ್ಪಡುವುದು. ಅಂತು, ಮೇಲೆ ಹೇಳಿದಂತೆ, ಶುದ್ಧನಾದ ಬ್ರಹ್ಮನಲ್ಲಿ ಜೀವಭೇದ ಸಂಭವವೇ ಇಲ್ಲವೆಂದೂ, ಮಾಯೋಪಾಧಿಯುಕ್ತನಾದ ಕಾಲದಲ್ಲಿ-ಆ ಬ್ರಹ್ಮನಿಗೆ ಶುದ್ಧತ್ವಾದಿ ಗುಣಗಳೇ ಇಲ್ಲದಿರುವುದರಿಂದ—ಜೀವತ್ವಸಂಭವವು ವಿರುದ್ಧವಲ್ಲವೆಂದೂ-ಗೊತ್ತಾಗುವುದು ॥೬॥

ಈರೀತಿಯಾಗಿರುವ ಚಿದಾಕಾಶರೂಪನಾದ ಪರಬ್ರಹ್ಮನೆಂಬ ದೊಡ್ಡ ಕನ್ನಡಿಯೊಳಗೆ, ಅನುಭವಾತ್ಮಕವಾದ ಈ ಜಗತ್ಸಮೂಹಪರಂಪರೆಗಳು ಅಸಂಖ್ಯಾಕವಾಗಿ ಪ್ರತಿಬಿಂಬಿಸುವುವು ॥೭॥

ಅಯ್ಯಾ! ರಾಘವ! ವಾಯುವಿಲ್ಲದ ಸಮುದ್ರದಂತೆಯೂ ನಿರ್ವಾತಸ್ಥಳದಲ್ಲಿರುವ ದೀಪ

ದೀಪಸ್ಯೇವಾಪ್ಯವಾತಸ್ಯ ತಂ ಜೀವಂ ವಿದ್ಧಿ ರಾಘವ ॥೮॥
ಶಾನ್ತತ್ವಾಪಗಮೇಽಚ್ಛಸ್ಯ ಮನಾಕ್ ಸಂವೇದನಾತ್ಮಕಮ್ ।
ಸ್ವಾಭಾವಿಕಂ ಯತ್ ಸ್ಫುರಣಂ ಚಿದ್ವ್ಯೋಮ್ನಃ ಸೋಽಙ್ಗ ಜೀವಕಃ ॥೯॥
ಯಥಾ ವಾತಸ್ಯ ಚಲನಂ ಕೃಶಾನೋರುಷ್ಣತಾ ಯಥಾ ।
ಶೀತತಾ ವಾ ತುಷಾರಸ್ಯ ತಥಾ ಜೀವತ್ವಮಾತ್ಮನಃ ॥೧೦॥
ಚಿದ್ರೂಪಸ್ಯಾತ್ಮತತ್ತ್ವಸ್ಯ ಸ್ವಾಭಾವವಶತಃ ಸ್ವಯಮ್ ।
ಮನಾಕ್ ಸಂವೇದನಮಿವ ಯತ್ ತಜ್ಜೀವಇತಿ ಸ್ಮೃತಮ್ ॥೧೧॥
ತದೇವ ಘನಸಂವಿತ್ತ್ಯಾ ಯಾತ್ಯಹನ್ತಾಮನುಕ್ರಮಾತ್ ।
ವಹ್ನ್ಯಣುಃ ಸ್ವೇನ್ಧನಾಧಿಕ್ಯಾತ್ ಸ್ವಾಂ ಪ್ರಕಾಶಕತಾಮಿವ ॥೧೨॥
ಯಥಾ ಸ್ವತಾರಕಾಽಮಾರ್ಗೇ ವ್ಯೋಮ್ನಃ ಸ್ಫುರತಿ ನೀಲಿಮಾ ।
ಶೂನ್ಯಸ್ಯಾಪ್ಯಸ್ಯ ಜೀವಸ್ಯ ತಥಾಹಮ್ಭಾವಭಾವನಾ ॥೧೩॥
ಜೀವೋಽಹಙ್ಕೃತಿಮಾದತ್ತೇ ಸಙ್ಕಲ್ಪಕಲಯೋದ್ಧಯಾ ।

ದಂತೆಯೂ ನಿಶ್ಚಲನಾಗಿರುವ ಆ ಪರಬ್ರಹ್ಮನಿಗೆ, ಸ್ವಲ್ಪಮಾತ್ರ ಸ್ಫುರಣೆಯುಂಟಾಗುವುದಾವುದುಂಟೋ, ಅದನ್ನೇ ಜೀವನೆಂದು ತಿಳಿಯುವನಾಗು ॥೮॥

ವತ್ಸ ! ನಿರ್ಮಲವಾದ ಆ ಚಿದಾಕಾಶಕ್ಕೆ, ನಿಷ್ಕ್ರಿಯವಾಗಿರುವ ಸ್ಥಿತಿ ಕಳೆದುಹೋಗಲಾಗಿ, ಸ್ವಾಭಾವಿಕವಾದ ಅನುಭವಾತ್ಮಕವಾದ ಯಾವ ಸ್ವಲ್ಪ ಚಲನೆಯುಂಟೋ, ಅದೇ ಜೀವನೆನ್ನಿಸುವುದು ॥೯॥

ವಾಯುವಿಗೆ ಚಲನೆ ಹೇಗೋ, ಅಗ್ನಿಗೆ ಉಷ್ಣತ್ವವು ಹೇಗೋ, ಮಂಜಿಗೆ ಶೀತತ್ವವು ಹೇಗೋ, ಹಾಗೆ ಆತ್ಮನಿಗೆ ಜೀವತ್ವವೆಂಬುದು ಸ್ವಭಾವಸಿದ್ಧವಾದುದು ॥೧೦॥

ಚಿದ್ರೂಪವಾಗಿರುವ ಆತ್ಮಪದಾರ್ಥಕ್ಕೆ, ತನ್ನ ಅಜ್ಞಾನವಶದಿಂದ, ಸ್ವಲ್ಪ ಜ್ಞಾನಪರಿಚೇದವಾದಂತೆ ತೋರುವಿಕೆಯಾವುದುಂಟೋ, ಅದೇ ಜೀವನೆಂದು ಹೇಳಲ್ಪಡುವುದು ॥೧೧॥

ಅದೆಯೇ (ಜೀವನೆಂದು ತಿಳಿಯುವಿಕೆ), ವಾಸನಾದಾರ್ಢ್ಯದಿಂದ ಕ್ರಮವಾಗಿ ಅಹಂಕಾರ (ನಾನು ಎಂಬ ಜ್ಞಾನ)ರೂಪವನ್ನು ಧರಿಸುವುದು. ಸಣ್ಣದೊಂದು ಬೆಂಕಿಯ ಕಿಡಿಯು, ತನಗೆ ಸೌದೆ ಹೆಚ್ಚಾದಹಾಗೆಲ್ಲ ತನ್ನ ಪ್ರಕಾಶವನ್ನು ಧರಿಸುವುದಲ್ಲವೆ! ಇದರಂತೆ, ವಾಸನಾಧಿಕ್ಯವಾದಹಾಗೆಲ್ಲ ಅಹಂತಾಜ್ಞಾನವೂ ದೃಢಪಡುವುದು ॥೧೨॥

ಒಬ್ಬ ಮನುಷ್ಯನು ಅಂತರಿಕ್ಷದಲ್ಲಿ ನೋಡುತ ಹೋದರೆ, ಅವನ ನೇತ್ರಶಕ್ತಿಯೆಲ್ಲಿಯವರೆಗಿರುವುದೋ—ಅಲ್ಲಿಯವರೆಗೂ ಸರಿಯಾಗಿ ಕಾಣುವುದು ; ನೇತ್ರಶಕ್ತಿ ಕುಂಠಿತವಾಗಿಬಿಟ್ಟರೆ, ಆಗ ಅಲ್ಲಿಂದ ಮುಂದಕ್ಕೆ ಯಾವುದೂ ಕಾಣದೆ ಕೇವಲ ನೈಲ್ಯಮಾತ್ರವೇ ಕಾಣಿಸುವುದು. ಇದು ಸರ್ವಾನುಭವಸಿದ್ಧವಷ್ಟೆ ! ಈ ಸಂದರ್ಭದಲ್ಲಿ, ವಸ್ತುತಃ ಆಕಾಶದೊಳಗೆ ನೈಲ್ಯ (ನೀಲಿಬಣ್ಣ)ವಿಲ್ಲದಿದ್ದರೂ ಇರುವಂತೆ ಸ್ಫುರಣೆಯುಂಟಾಗುವುದು. ಇದರಂತೆ, ಈ ಜೀವನು ವಸ್ತುತಃ ಅಹಂಭಾವಶೂನ್ಯನಾಗಿದ್ದರೂ, ಅವನಿಗೆ ಅಹಂಭಾವಭಾವನೆಯುಂಟಾಗುವುದು ॥೧೩॥

ಈ ಅಹಂಭಾವ ಸಂಕಲ್ಪವು ಪ್ರಬಲವಾಗುವುದರಿಂದ, ಪೂರ್ವೋಕ್ತರೀತಿಯಾಗಿ ಆಕಾಶವು

ಸ್ಥೈರ್ಯೈತಯಾ ಘನತಯಾ ನೀಲಿಮಾನಮಿವಾಮ್ಬರಮ್ ॥೧೪॥
ಅಹಮ್ಭಾವೋ ಹಿ ದಿಕ್ಕಾಲವ್ಯವಚ್ಛೇದೀ ಕೃತಾಕೃತಿಃ ।
ಸ್ವಯಂ ಸಙ್ಕಲ್ಪವಶತೋ ವಾತಸ್ಪನ್ದ ಇವ ಸ್ಫುರನ್ ॥೧೫॥
ಸಙ್ಕಲ್ಪೋನ್ಮುಖತಾಂ ಯಾತಸ್ತ್ವಹಙ್ಕಾರಾಭಿಧಃ ಸ್ಥಿತಃ ।
ಚಿತ್ತಂ ಜೀವೋ ಮನೋ ಮಾಯಾ ಪ್ರಕೃತಿಶ್ಚೇತಿ ನಾಮಭಿಃ ॥೧೬॥
ತತ್ ಸಙ್ಕಲ್ಪಾತ್ಮಕಂ ಚೇತೋ ಭೂತತನ್ಮಾತ್ರಕಲ್ಪನಮ್ ।
ಕುರ್ವಂಸ್ತತೋ ವ್ರಜತ್ಯೇವ ಸಙ್ಕಲ್ಪಾದ್ಯಾತಿ ಪಞ್ಚತಾಮ್ ॥೧೭॥
ತನ್ಮಾತ್ರಪಞ್ಚಕಾಕಾರಂ ಚಿತ್ತಂ ತೇಜಃಕಣೋ ಭವೇತ್ ।
ಅಜಾತಜಗತಿ ವ್ಯೋಮ್ನಿ ತಾರಕಾ ಪೇಲವಾ ಯಥಾ ॥೧೮॥
ತೇಜಃಕಣತ್ವಮಾದತ್ತೇ ಚಿತ್ತಂ ತನ್ಮಾತ್ರಕಲ್ಪನಾತ್ ।
ಶನೈಃ ಸ್ವಸ್ಮಾತ್ ಪರಿಸ್ಪನ್ದಾತ್ ಬೀಜಮಙ್ಕುರತಾಮಿವ ॥೧೯॥
ಅಸೌ ತೇಜಃಕಣೋಣ್ಡಾಖ್ಯಃ ಕಲ್ಪನಾತ್ ಕಶ್ಚಿದಣ್ಡತಾಮ್ ।
ಪ್ರಯಾತಸ್ತ್ಯೈಃ ಸ್ಫುರದ್ಬ್ರಹ್ಮಾ ಜಲಮಾಪಿಣ್ಡತಾಮಿವ ॥೨೦॥

ಸಾಂದ್ರತೆ(ದಟ್ಟವಾಗಿರುವಿಕೆ)ಯಿಂದ ನೈಲ್ಯವನ್ನು ಹೊಂದುವಂತೆ, ಜೀವನು ಅಹಂಕಾರರೂಪವನ್ನು ಹೊಂದಿಬಿಡುವನು ॥೧೪॥

ಈ ಅಹಂಕಾರವು, ತನ್ನ ಸಂಕಲ್ಪವಶದಿಂದ ವಾಯುವಿನ ಚಲನೆಯಂತೆ ಸ್ಫುರಿಸತಕ್ಕುದಾಗಿ, ದಿಕ್ಕು ಕಾಲ ಮುಂತಾದ ಭೇದಗಳನ್ನು ಕಲ್ಪಿಸುತ, ದೇಹಾದಿರೂಪಗಳನ್ನುಂಟುಮಾಡುವುದು ॥೧೫

ಈ ಅಹಂಕಾರನಾಮಕನಾದವನೇ ರುದ್ರನು; ಇವನೇ, ಚಿತ್ತನಾಮಕನಾದಾಗ ವಿಷ್ಣುವಾಗಿಯೂ, ಜೀವನಾಮಕನಾದಾಗ ಬ್ರಹ್ಮನಾಗಿಯೂ ಆಗುವನು. (ಅಹಂಕಾರ ಚಿತ್ತ ಜೀವ- ಈ ಮೂರೂ ಒಂದೆಯೇ. ಆದರೆ, ಅವಸ್ಥಾಭೇದದಿಂದ ನಾಮಭೇದವುಂಟಾಗಿರುವುದು. ಅಹಂಕಾರಾಭಿಮಾನಿ ರುದ್ರನೆಂದೂ, ಚಿತ್ತಾಭಿಮಾನಿ ವಿಷ್ಣುವೆಂದೂ, ಜೀವಾಭಿಮಾನಿ ಬ್ರಹ್ಮನೆಂದೂ ವ್ಯವಹಾರವು). ಹೀಗೆಯೇ, ಈ ಅಹಂಕಾರವೇ, ಮನಸ್ಸು ಮಾಯೆ ಪ್ರಕೃತಿ ಇತ್ಯಾದಿ ನಾಮಗಳಿಂದ ವ್ಯವಹರಿಸಲ್ಪಡುವುದು ॥೧೬॥

ಈ ಚಿತ್ತಾದಿಗಳ ಮಧ್ಯದಲ್ಲಿ, ಸಂಕಲ್ಪಾತ್ಮಕವಾದ ಚಿತ್ತವು, ಪಂಚಮಹಾಭೂತಗಳನ್ನೂ ಪಂಚತನ್ಮಾತ್ರಗಳನ್ನೂ ಕಲ್ಪಿಸಿಕೊಳ್ಳುವುದು; ಬಳಿಕ, ಆ ಪೂರ್ವಾವಸ್ಥೆಯನ್ನು ಬಿಟ್ಟುಬಿಡುವುದು; ಮತ್ತು ತಾನು ತನ್ನ ಸಂಕಲ್ಪದಿಂದ, ಆ ಪಂಚತನ್ಮಾತ್ರಾವಸ್ಥೆಯನ್ನೂ ಹೊಂದುವುದು ॥

ಆಗ, ಜಗತ್ಸೃಷ್ಟಿಯಿನ್ನೂ ಆಗದಿರುವ ಮಹಾಕಾಶದೊಳಗೆ, ಈ ಪಂಚತನ್ಮಾತ್ರರೂಪವಾಗಿರುವ ಚಿತ್ತವು, ಆಕಾಶದಲ್ಲಿ ಅಸ್ಫುಟವಾದ ನಕ್ಷತ್ರ ಸ್ಫುರಿಸುವಂತೆ, ತೇಜಃಕಣರೂಪವಾಗುವುದು॥

ಹೀಗೆ, ಬೀಜವು ತಾನು ಚಲನೆಹೊಂದುವುದರಿಂದ ಅಂಕುರಾವಸ್ಥೆಯನ್ನು ಪಡೆಯುವಂತೆ, ಈ ಚಿತ್ತವು ಪಂಚತನ್ಮಾತ್ರಗಳನ್ನು ಸಂಕಲ್ಪಿಸುವುದರಿಂದ ತಾನು ತೇಜಃಕಣಸ್ವರೂಪವನ್ನು ಹೊಂದುವುದು ॥೧೯॥

ಈ ತೇಜಃಕಣವೇ ಬ್ರಹ್ಮಾಂಡವೆನ್ನಿಸುವುದು. ಇದು ಅನೇಕವಾಗುವುದು. ಅದರೊಳಗೆ ಒಂದು ತೇಜಃಕಣವು, ಜಲವು ಘನವಾಗಿ ಆನೆಕಲ್ಲಾಗುವಂತೆ, ಪ್ರಾಕ್ತನಭಾವನಾವಿಶೇಷದಿಂದ-ಚತುರ್ಮುಖಬ್ರಹ್ಮನನ್ನೊಳಗೊಂಡಿರುವ ಅಂಡವೆನಿಸುವುದು ॥೨೦॥

ಕಶ್ಚಿದ್ದ್ರಾಗಿತಿ ದೇಹಾದಿಕಲನಾದ್ಯಾತಿ ದೇಹತಾಮ್ |
ಭ್ರಾನ್ತಿತ್ವಂ ತದತದ್ರೂಪಂ ಗನ್ಧರ್ವೈಶ್ಚ ವಸತ್ ಪುರಮ್ ||೨೧||
ಕಶ್ಚಿತ್ ಸ್ಥಾವರತಾಮೇತಿ ಕಶ್ಚಿಜ್ಜಙ್ಗಮತಾಮಪಿ |
ಕಶ್ಚಿದ್ಯಾತಿ ಖಚಾರ್ಯಾದಿರೂಪಂ ಸಙ್ಕಲ್ಪತಃ ಸ್ವತಃ ||೨೨||
ಸರ್ಗಾದಾವಾದಿಜೋ ದೇಹೋ ಜೀವಃ ಸಙ್ಕಲ್ಪಸಮ್ಭವಃ |
ಕ್ರಮೇಣ ಪದಮಾಸಾದ್ಯ ವೈರಿಞ್ಚಂ ಕುರುತೇ ಜಗತ್ ||೨೩||
ಆತ್ಮಭೂಕಲನಾತ್ಮಾಸೌ ಯತ್ ಸಙ್ಕಲ್ಪಯತಿ ಕ್ಷಣಾತ್ |
ತತ್ ಸ್ವಭಾವವಶಾದೇವ ಜಾತಮೇವ ಪ್ರಪಶ್ಯತಿ ||೨೪||
ಚಿತ್ಸ್ವಭಾವಾತ್ ಸಮಾಯಾತಂ ಬ್ರಹ್ಮತ್ವಂ ಸರ್ವಕಾರಣಮ್ |
ಸಂಸೃತೌ ಕಾರಣಂ ಪಶ್ಚಾತ್ ಕರ್ಮ ನಿರ್ಮಾಯ ಸಂಸ್ಥಿತಮ್ ||೨೫||
ಚಿತ್ತಂ ಸ್ವಭಾವಾತ್ ಸ್ಫುರತಿ ಚಿತಃ ಫೇನಇವಾಮ್ಭಸಃ |
ಕರ್ಮಭಿರ್ಬಧ್ಯತೇ ಪಶ್ಚಾತ್ ಡಿಣ್ಡೀರಮಿವ ರಜ್ಜುಭಿಃ ||೨೬||

ಒಂದು ತೇಜಃಕಣವು, ದೇಹಾದಿಕಲ್ಪನಾಬಲದಿಂದ ತಟ್ಟನೆ ದೇಹಾವಸ್ಥೆಯನ್ನು ಹೊಂದಿಬಿಡುವುದು. ವಸ್ತುತಃ ತಾನಲ್ಲದ ಪದಾರ್ಥವನ್ನು ತಾನೆಂದು ತಿಳಿದು ಭ್ರಾಂತಿಪಡುವುದು. ಆಗ, ಗಂಧರ್ವಾದಿಗಳಿಂದ ತುಂಬಿರುವ ಸ್ವರ್ಗಾದಿ ಲೋಕಗಳನ್ನೂ ಹೊಂದುವುದು ॥೨೧॥

ಹೀಗೆಯೇ, ಸ್ವಸ್ವಕಲ್ಪನಾನುಸಾರವಾಗಿ. ಒಂದು ಕಣವು ಸ್ಥಾವರತ್ವವನ್ನೂ, ಇನ್ನೊಂದು ಜಂಗಮತ್ವವನ್ನೂ, ಮತ್ತೊಂದು ಪಶುಪಕ್ಷ್ಯಾದಿರೂಪವನ್ನೂ ಹೊಂದುವುದು ॥೨೨॥

ಸೃಷ್ಟ್ಯಾದಿಯಲ್ಲಿ, ಪ್ರಥಮತಃ ಉತ್ಪನ್ನವಾದ ಸೂಕ್ಷ್ಮದೇಹಸಮಷ್ಟಿರೂಪನಾದವನೇ ವಿರಿಂಚಿ (ಚತುರ್ಮುಖ) ಜೀವನು. ಇವನು ಸಂಕಲ್ಪಜನ್ಯನು. ಇವನು, ಕ್ರಮೇಣ ಭಾವನಾಬಲದಿಂದ ವಿರಿಂಚಿಪದವನ್ನು ಹೊಂದಿ, ತನ್ನ ಸಂಸ್ಕಾರಾನುಗುಣವಾಗಿ ಬ್ರಹ್ಮಾಂಡಕಲ್ಪನೆಯನ್ನು ಮಾಡುವನು ॥೨೩॥

ಹೀಗೆ ಈ ಚತುರ್ಮುಖನು ತನ್ನ ಸಂಕಲ್ಪಾನುಸಾರವಾಗಿ ಸೃಷ್ಟಿಮಾಡಲು ಸಮರ್ಥನಾಗಿರುವುದಕ್ಕೆ ಕಾರಣವೇನೆಂದರೆ:—ಇವನು, ತನಗೆ ಹಿಂದಿದ್ದ ಚತುರ್ಮುಖನು ಸತ್ಯಸಂಕಲ್ಪನಾಗಿದ್ದನೆಂದೂ ಅವನೇ ಈಗ ನಾನಾಗಿರುವೆನೆಂದೂ ಭಾವನೆಮಾಡುವನು. ಹೀಗಿರುವುದರಿಂದ, ಇವನು ಯಾವುದನ್ನು ಹೇಗೆ ಸಂಕಲ್ಪಿಸುವನೋ, ಅದು ಆಗಲೇ ಸ್ವಭಾವತಃ ಜನಿಸುವಂತೆಯೇ ಕಾಣುವನು॥

ಅಯ್ಯಾ ! ರಾಮ ! ಈ ಜಗತ್ತಿನಲ್ಲಿ, ಪ್ರಕಾಶಾವಸ್ಥೆಯೊಂದು—ಚಲನೆಯೊಂದು—ಈ ಯೆರಡು ಧರ್ಮಗಳಿರುವುವಷ್ಟೆ ! ಇವೆರಡೂ ಇರುವುದಕ್ಕೆ ಕಾರಣವನ್ನು ಕೇಳುವನಾಗು. ಪ್ರಥಮತಃ ಬ್ರಹ್ಮನು ಚಿತ್ಸ್ವರೂಪ (ಜ್ಞಾನಸ್ವರೂಪ) ನಾಗಿರುವುದರಿಂದ, ಸಮಸ್ತವಿಧವಾದ ಪ್ರಥ (ಪ್ರಕಾಶಾವಸ್ಥೆ)ಯೂ ಉಂಟಾಗುವುದು. ಬಳಿಕ, ಪ್ರಾಕ್ತನ ಕರ್ಮವಾಸನೆಯೇ ಸಂಸಾರರೂಪವಾದ ಚಲನೆಗೆ ಕಾರಣವಾಗುವುದು ॥೨೫॥

ಒಂದು ನದಿಯಲ್ಲಿ ನೀರಿನದೆಸೆಯಿಂದ ಮೊದಲು ನೊರೆ ಹುಟ್ಟುವುದು; ಬಳಿಕ, ಅದೇ ಒಣಗಿ ಗಟ್ಟಿಯಾಗಿ ಹಗ್ಗಗಳಿಂದ ಕಟ್ಟಲ್ಪಡುವುದು. ಇದು ಅನುಭವಸಿದ್ಧವಷ್ಟೆ! ಹೀಗೆಯೇ, ಆ ಚೈತನ್ಯದ ದೆಸೆಯಿಂದ ಚಿತ್ತವು ಸ್ವಭಾವವಾಗಿ ಸ್ಫುರಿಸು(ಜನಿಸು) ವುದು; ಬಳಿಕ ಭಾವನಾಬಲದಿಂದ ಕರ್ಮಗಳಿಂದ ಕಟ್ಟಲ್ಪಡುವುದು ॥೨೬॥

ಸಙ್ಕಲ್ಪಃ ಕಲನಾಬೀಜಂ ತದಾತ್ಮೈವ ಹಿ ಜೀವಕಃ ।
ಕರ್ಮ ಪಶ್ಚಾತ್ ತನೋತ್ಯುಚ್ಚೈಃ ಉತ್ಥಾಯಾಕರ್ಮತಃ ಕ್ರಮಾತ್ ॥
ಕ್ರೋಡೀಕೃತಾಙ್ಕುರಂ ಪೂರ್ವಂ ಜೀವೋ ಧತ್ತೇ ಸ್ವಜೀವಿತಮ್ ।
ಪಶ್ಚಾನ್ನಾನಾತ್ವಮಾಯಾತಿ ಪತ್ರಾಙ್ಕುರಫಲಕ್ರಮೈಃ ॥೧೮॥
ಅನ್ಯೇ ಸ್ವಪಿವ ಯೇ ಜೀವಾಃ ಏವಮೇವಾಕೃತಿಂ ಗತಾಃ ।
ಪೂರ್ವೋತ್ಪನ್ನೇ ಜಗತಿ ತೇ ಯಾನ್ತಿ ಭೂತಾಶ್ರಯಾಂ ಸ್ಥಿತಿಮ್ ॥೧೯॥
ಸ್ವಕರ್ಮಭಿಸ್ತತೋ ಜನ್ಮಮೃತಿಕಾರಣತಾಂ ಗತೈಃ ।
ಪ್ರಯಾನ್ತ್ಯೂರ್ಧ್ವಮಧಸ್ತಾದ್ವಾ ಕರ್ಮ ಚಿತ್ಸ್ಪನ್ದ ಉಚ್ಯತೇ ॥೨೦॥
ಚಿತ್ಸ್ಪನ್ದನಂ ಭವತಿ ಕರ್ಮ ತದೇವ ದೈವಂ
ಚಿತ್ತಂ ತದೇವ ಭವತೀಹ ಶುಭಾಶುಭಾದಿ ।
ತಸ್ಮಾಜ್ಜಗನ್ತಿ ಭುವನಾನಿ ಭವನ್ತಿ ಪೂರ್ವಂ
ಭೂತ್ವಾ ನಿಜಾಙ್ಗಕುಸುಮಾನಿ ತರೋರಿವಾದ್ಯಾತ್ ॥೨೧॥

ಇತಿ ಉತ್ಪತ್ತಿಪ್ರಕರಣೇ ಬೀಜಾಙ್ಕುರಯೋಗನಿರ್ಣಯೋ ನಾಮ
ಚತುಷ್ಷಷ್ಟಿತಮಃ ಸರ್ಗಃ.

ಸಾಮಾನ್ಯವಾಗಿ, ಪ್ರಪಂಚದಲ್ಲಿಯೂ ಸಂಕಲ್ಪವೇ ಕಾರ್ಯಸಿದ್ಧಿಗೆ ಬೀಜವಾಗಿರುವುದು. ಒಂದು ಘಟವನ್ನು ಮಾಡತಕ್ಕವನು, ಪ್ರಥಮತಃ ಆ ಗಡಿಗೆಯನ್ನು ತಾನು ಮಾಡಬೇಕೆಂದು ಅದರ ಕ್ರಮವನ್ನೆಲ್ಲ ಸಂಕಲ್ಪಿಸಿಕೊಂಡು, ತನ್ಮೂಲಕವಾಗಿ ಅದನ್ನು ನೆರವೇರಿಸುವನು. ಹೀಗಿರುವುದರಿಂದ, ಸಂಕಲ್ಪವೇ ಸರ್ವಪದಾರ್ಥನಿಷ್ಪತ್ತಿಗೂ ಕಾರಣವಾದುದು. ಈ ಸಂಕಲ್ಪಾತ್ಮಕನಾದವನೇ ಜೀವನು, ಇವನು, ನಿಷ್ಕರ್ಮನಾದ ಆತ್ಮನ ಸಾನ್ನಿಧ್ಯದಿಂದ ಉತ್ಪನ್ನನಾಗಿದ್ದರೂ, ತಾನು ತನ್ನ ವಾಸನಾನುಗುಣವಾಗಿ ಕರ್ಮಗಳನ್ನು ಮಾಡುವನು ॥೧೭॥

ಒಂದು ವೃಕ್ಷವು, ಮೊದಲು ಸಣ್ಣದಾದ ಬೀಜದೊಳಗೆ ಸೂಕ್ಷ್ಮರೂಪದಿಂದಿದ್ದು, ಬಳಿಕ ಅಂಕುರ ಪತ್ರ ಫಲ—ಇತ್ಯಾದಿ ಕ್ರಮದಿಂದ ಬೆಳೆಯುವಂತೆ, ಈ ಸಮಷ್ಟಿಜೀವನು, ಪ್ರಥಮತಃ ಸ್ಥೂಲರೂಪನಾಗಿದ್ದು, ಬಳಿಕ ನಾನಾವಿಧರೂಪವನ್ನು ಹೊಂದುವನು ॥೧೮॥

ಹೀಗೆಯೇ, ಇತರರಾದ ವ್ಯಷ್ಟಿಜೀವರುಗಳೂ ಕೂಡ, ಪ್ರಥಮತಃ ಸೂಕ್ಷ್ಮರೂಪದಲ್ಲಿದ್ದು ಬಳಿಕ ವೃದ್ಧಿಗತರಾಗುವರು. ಆದರೆ, ಸ್ವಲ್ಪಮಾತ್ರ ವಿಶೇಷವಿರುವುದು:—ಈ ವ್ಯಷ್ಟಿಜೀವರು, ಹಿರಣ್ಯಗರ್ಭನ ಸಂಕಲ್ಪಕ್ಕಿಂತ ಮೊದಲೇ ಉತ್ಪನ್ನವಾಗಿದ್ದ ಬ್ರಹ್ಮಾಂಡದೊಳಗೆ, ಮಾತಾಪಿತೃ ಮೊದಲಾದ ಭೂತಗಳನ್ನು ನಿಮಿತ್ತಮಾಡಿಕೊಂಡಿರುವ ದೇಹಲಾಭವನ್ನು ಪಡೆಯುವರು ॥೧೯॥

ಬಳಿಕ, ಈ ಜೀವರು, ಜನನಮರಣಪ್ರವಾಹಕ್ಕೆ ಕಾರಣಭೂತಗಳಾದ ತಮ್ಮ ಕರ್ಮಗಳಿಂದ, ಊರ್ಧ್ವಗತಿಯನ್ನೋ—ಅಥವಾ ಅಧೋಗತಿಯನ್ನೋ ಹೊಂದುವರು. ಕರ್ಮವೆಂದರೆ, ಜ್ಞಾನದ ಚಲನೆ(ವ್ಯಾಪಾರ)ಯೆಂಬುದಾಗಿ ಪ್ರಾಜ್ಞರು ಹೇಳುವರು ॥೨೦॥

ಅಯ್ಯಾ! ರಾಮ! ಹೀಗೆ, ಚಿತ್ತಿನ ಸ್ಪಂದವೇ ಕರ್ಮವೆನಿಸುವುದು; ಇದಕ್ಕೆ ದೈವವೆಂದೂ ಹೆಸರು; ಇದಕ್ಕೆ ಚಿತ್ತವೆಂದೂ ಹೆಸರು. ಇದರಿಂದಲೇ ಶುಭಾಶುಭಾದಿಗಳುಂಟಾಗುವುವು. ಪ್ರಥಮವಾದ ಒಂದು ವೃಕ್ಷದ ದೆಸೆಯಿಂದ ಶಾಖೆಗಳೂ ಕುಸುಮಗಳೂ ಫಲಗಳೂ ಆಮೇಲೆ ಪುನಃ ವೃಕ್ಷವೂ ಹುಟ್ಟುತಿರುವಂತೆ, ಈ ಕರ್ಮವೂ ಪ್ರಪಂಚವೂ ಒಂದರಿಂದೊಂದು ಪುನಃಪುನಃ ಹುಟ್ಟುತಿರುವುದು ॥೨೧॥

ಇದು ಉತ್ಪತ್ತಿಪ್ರಕರಣದಲ್ಲಿ ಬೀಜಾಂಕುರಯೋಗನಿರ್ಣಯವೆಂಬ
ಅರವತ್ತುನಾಲ್ಕನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚಷಷ್ಟಿತಮಃ ಸರ್ಗಃ

ಶ್ರೀವಸಿಷ್ಠ ಉವಾಚ.

ಪರಸ್ಮಾತ್ ಕಾರಣಾದೇವ ಮನಃಪ್ರಥಮಮುತ್ಥಿತಮ್ ।
ಮನನಾತ್ಮಕಮಾಭೋಗಿ ತತ್ರಸ್ಥಮೇವ ಸ್ಥಿತಿಂ ಗತಮ್ ॥೧॥
ಭಾವಾಭಾವಲಸದ್ದೋಲಂ ತೇನಾಯಮವಲೋಕ್ಯತೇ ।
ಸರ್ಗಃ ಸದಸದಾಭಾಸಃ ಪೂರ್ವಗನ್ಧ ಇವೇಚ್ಛಯಾ ॥೨॥
ನ ಕಶ್ಚಿದ್ವಿದ್ಯತೇ ಭೇದೋ ದ್ವೈತೈಕ್ಯಕಲನಾತ್ಮಕಃ ।
ಬ್ರಹ್ಮಜೀವಮನೋಮಾಯಾಕರ್ತೃಕರ್ಮಜಗದ್ದೃಶಾಮ್ ॥೩॥
ಅಪಾರಾವಾರವಿಸ್ತಾರಸಂವಿತ್ಸಲಿಲವಲ್ಗನೈಃ ।
ಚಿದೇಕಾರ್ಣವಮೇವಾಯಂ ಸ್ವಯಮಾತ್ಮಾ ವಿಜೃಮ್ಭತೇ ॥೪॥

ಉತ್ಪತ್ತಿಪ್ರಕರಣದಲ್ಲಿ ಅರವತ್ತಯ್ದನೆಯ ಸರ್ಗವು.

ಮನಸೋ ಭೋಗ್ಯವರ್ಗಸ್ಯ ಭೋಕ್ತುರ್ಮೂಲಸ್ಯ ಚಾಧುನಾ।
ವಿಮೃಶ್ಯ ತತ್ತ್ವಂ ಚಿನ್ಮಾತ್ರಪರಿಶೇಷಃ ಪ್ರದರ್ಶ್ಯತೇ॥

ಮನಸ್ಸು ಭೋಗ್ಯಪದಾರ್ಥಸಮೂಹ ಭೋಕ್ತೃ ಇವಿಷ್ಟಕ್ಕೂ ಮೂಲಕಾರಣವಾದ ವಸ್ತು-ಇವುಗಳ ತತ್ವವನ್ನು ವಿಚಾರಮಾಡಿ, ಕೊನೆಗೆ ಕೇವಲ ಚಿತ್ಪದಾರ್ಥವೊಂದೇ ಪರಿಶಿಷ್ಟವಾಗುವುದೆಂದು ಈಗ ಹೇಳಲ್ಪಡುವುದು ॥

ಪುನಃ ಶ್ರೀವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಈಗ ನಿನಗೆ ಇನ್ನೂ ಈ ಜೀವನ ತತ್ವವನ್ನು ವಿವರಿಸುವೆನು; ಕೇಳು. ಇದೆಲ್ಲಕ್ಕೂ ಮೊದಲು ಮನಸ್ಸಿನ ಸ್ವರೂಪವನ್ನು ತಿಳಿಯುವನಾಗು. ಇದರ ಸ್ವರೂಪವೊಂದು ಮಾತ್ರ ತಿಳಿಯಲ್ಪಟ್ಟರೆ, ಆಗ—ಸಮಸ್ತ ಪದಾರ್ಥಗಳೂ ಚೈತನ್ಯಕ್ಕಿಂತ ಪೃಥಕ್ಕಾದುವುಗಳಲ್ಲವೆಂಬುದು ಸ್ಪಷ್ಟವಾಗಿ ಗೊತ್ತಾಗುವುದು. ಈ ಮನಸ್ಸೆಂಬುದು, ಪ್ರಥಮತಃ ಆ ಪರಮಕಾರಣವಾದ ಬ್ರಹ್ಮದಿಂದಲೇ ಉದ್ಭವಿಸಿತು; ವಿಚಾರಮಾಡುವುದೇ ಇದರ ಸ್ವರೂಪವು; ಇದು ಸರ್ವತ ವ್ಯಾಪಿಸಿರತಕ್ಕದು; ಇದು ಆ ಬ್ರಹ್ಮದಲ್ಲಿದ್ದುಕೊಂಡೇ ಸ್ಥಿತಿಯನ್ನು ಹೊಂದತಕ್ಕದು॥೧॥

ಮತ್ತು, ಇದು (ಮನಸ್ಸು), ಸ್ಥಿರವಾಗಿ ನೆಲೆಸಿರತಕ್ಕದೋ—ಅಥವಾ ನೆಲೆಸಲಾರದೋ-ಎಂಬ ಸಂಶಯಕ್ಕೆ ವಿಷಯವಾದುದು. ಇಂತಹ ಈ ಮನಸ್ಸು, ಹಿಂದೆ ಬಂದಾವೃತ್ತಿಯನುಭವಿಸಿದ್ದ ಗಂಧವನ್ನು ಈಗ ಇಚ್ಛೈಸಿದರೆ ಪುನಃ ಅನುಭವಿಸುವಂತೆ, ಅಸತ್ತಾಗಿಯೂ ಸತ್ತಾಗಿಯೂ ಭಾಸಮಾನವಾಗುವ ಈ ಸೃಷ್ಟಿಯನ್ನು ಅನುಭವಿಸುವುದು ॥೨॥

ಹೀಗಿರುವುದರಿಂದ, ಬ್ರಹ್ಮ ಜೀವ ಮನಸ್ಸು ಮಾಯೆ ಕರ್ತೃ ಕರ್ಮ ಜಗತ್ತು ಇತ್ಯಾದಿಜ್ಞಾನಭೇದವೆಲ್ಲವೂ ಚಿತ್ತದಿಂದ ಕಲ್ಪಿತವಾದುದೇ ಹೊರತು, ಇವುಗಳಿಗೆ ಭೇದಕಲ್ಪನೆ ಅಭೇದಕಲ್ಪನೆ ಮುಂತಾದುದೊಂದೂ ಇಲ್ಲವೇಇಲ್ಲ ॥೩॥

ಈ ವಿಧವಾದ ಭೇದವೊಂದೂ ಇಲ್ಲವಾದಬಳಿಕ, ಕೇವಲಜ್ಞಾನಸಮುದ್ರನಾದ ಪರಮಾತ್ಮನು, ನಿರವಧಿಯಾಗಿ ಹರಡಿಕೊಂಡಿರುವ ಜ್ಞಾನವೆಂಬ ಜಲದ ವಿಲಾಸದಿಂದ ವಿಜೃಂಭಿಸುತ್ತಿರುವನು ॥೪॥

ಅಸತ್ಯಮಸ್ಥೈರ್ಯವಶಾತ್ ಸತ್ಯಂ ಸಮ್ಪ್ರತಿಭಾಸತಃ |
ಯಥಾ ಸ್ವಪ್ನಸ್ತಥಾ ಚಿತ್ತಂ ಜಗತ್ ಸದಸದಾತ್ಮಕಮ್ ||೫||
ನ ಸನ್ನಾಸನ್ನ ಸಞ್ಜಾತಃ ಚೇತಸೋ ಜಗತೋ ಭ್ರಮಃ |
ಅಥ ಧೀಸಮವಾಯಾನಾಂ ಇನ್ದ್ರಜಾಲಮಿವೋತ್ಥಿತಃ ||೬||
ದೀರ್ಘಃ ಸ್ವಪ್ನಃ ಸ್ಥಿತಿಂ ಯಾತಃ ಸಂಸಾರಾಖ್ಯೋ ಮನೋಬಲಾತ್ |
ಅಸಮ್ಯಗ್ದರ್ಶನಾತ್ ಸ್ಥಾಣಾವಿವ ಪುಂಸ್ಪ್ರತ್ಯಯೋ ಮುಧಾ ||೭||
ಅನಾತ್ಮಾಲೋಕನಾಚ್ಚಿತ್ತಂ ಚಿತ್ತತ್ವಂ ನಾನುಶೋಚತಿ |
ವೇತಾಲಕಲನಾದ್ಬಾಲಃ ಇವ ಸಙ್ಕಲ್ಪಿತೇ ಭಯೇ ||೮||
ಅನಾಖ್ಯಸ್ಯ ಸ್ವರೂಪಸ್ಯ ಸರ್ವಾಶಾತಿಗತಾತ್ಮನಃ |
ಚೇತ್ಯೋನ್ಮುಖತಯಾ ಚಿತ್ತಂ ಚಿತ್ತಾಜ್ಜೀವತ್ವಕಲ್ಪನಮ್ ||೯||

ಈ ಚಿತ್ತವೆಂಬುದು, ಸ್ವಪ್ನದಂತೆ, ಅಸ್ಥಿರವಾಗಿರುವುದರಿಂದ ಅಸತ್ಯವಾದುದೆಂದೂ ಚೆನ್ನಾಗಿ ಭಾಸಮಾನವಾಗುವುದರಿಂದ ಸತ್ಯವಾದುದೆಂದೂ ತೋರುವುದು. ಅದುಕಾರಣ, ಚಿತ್ತಕಲ್ಪಿತವಾದ ಜಗತ್ತೂ ಸದಸದಾತ್ಮಕವಾಗಿ ತೋರುವುದು ||೫||

ವಸ್ತುತಃ ಈ ಜಗತ್ತೆಂಬ ಭ್ರಮೆಯು—ಸತ್ಯವೂ ಅಲ್ಲ; ಅಸತ್ಯವೂ ಅಲ್ಲ; ಇದು ಮನಸ್ಸಿನಿಂದ ಹುಟ್ಟಿದುದೂ ಅಲ್ಲ. ಇಂದ್ರಜಾಲವನ್ನು ನೋಡಿ—ಅನೇಕರು ಇದು ಸತ್ಯವೆಂದು ನಂಬುವುದರಿಂದ-ಅದು ಸತ್ಯವೇ ಆಗುವಂತೆ, ಅನೇಕರ ಬುದ್ಧಿಸಮುದಾಯವು ಇದನ್ನು ಇರುವುದೆಂದು ತಿಳಿಯುವುದರಿಂದ ಇದು ಉತ್ಪನ್ನವಾದುದು ||೬||

ಕತ್ತಲೆಯಲ್ಲಿ ದೂರವಾಗಿ ನೋಡಿದಾಗ, ಒಂದು ಮೋಟುಮರವನ್ನು ಕಂಡು ಮನುಷ್ಯನು ನಿಂತಿರುವನೆಂದು ಭ್ರಮೆಪಡುವೆವಲ್ಲವೆ! ಹಾಗೆಯೇ, ನಮ್ಮ ಮನಶ್ಶಕ್ತಿಸಾಮರ್ಥ್ಯದಿಂದ, ಈ ಸಂಸಾರವೆಂಬ ಸ್ವಪ್ನವು ಚಿರತರವಾಗಿ ಸ್ಥಿತಿಹೊಂದಿರುವುದು ||೭||

ಅಯ್ಯಾ! ರಾಮ! ಈಗ ಇಲ್ಲಿ ಮತ್ತೊಂದುವಿಧವಾಗಿ ಶಂಕೆಮಾಡಬಹುದಲ್ಲವೆ! ಏನೆಂದರೆ:—ಆತ್ಮನು ಪೂರ್ಣಾನಂದಸ್ವರೂಪನಾಗಿರುವನು. ಇವನೇ ಮನೋರೂಪನೂ ಆಗುವನೆಂದು ಈಗ ಹೇಳಲ್ಪಟ್ಟಿರುವುದು. ಈ ಮನಸ್ಸೇ, ಇವನಿಗೆ ತನ್ನ ಪೂರ್ಣಾನಂದಭಾವವನ್ನು ಮರೆಯಿಸಿಬಿಟ್ಟು ಸಕಲದುಃಖಹೇತುವಾಗುವುದು. ಹೀಗಿರುವುದರಿಂದ, ಈ ಆತ್ಮನು, ತನಗೆ ಪೂರ್ಣಾನಂದಭಾವಚ್ಯುತಿಗೆ ಹೇತುವಾಗಿಯೂ ಸಕಲ ದುಃಖಕಾರಣವಾಗಿಯೂ ತನಗುಂಟಾಗುವ ಮನೋರೂಪತ್ವವನ್ನು ಕುರಿತು, ಏತಕ್ಕಾಗಿ ಶೋಚಿಸದಿರುವನು?—ಹೀಗಲ್ಲವೆ ಶಂಕೆಮಾಡಬಹುದಾಗಿದೆ! ಇದಕ್ಕೆ ಸಮಾಧಾನವನ್ನು ತಿಳಿಯುವನಾಗು:—ಬಾಲಕನು ಬೇತಾಳವನ್ನು ಕಲ್ಪಿಸಿಕೊಂಡು ಭಯಪಡುವನಲ್ಲವೆ! ಈ ಭಯವು ಚೆನ್ನಾಗಿ ನಿರೂಢವಾಗಿಬಿಟ್ಟಮೇಲೆ, ಅವನು ತನಗೆ ಭಯಹೇತುವಾಗಿ ತನ್ನ ಅಜ್ಞಾನದಿಂದ ತಾನು ಮಾಡಿಕೊಂಡ ಬೇತಾಳಕಲ್ಪನೆಯನ್ನು ಕುರಿತು ಶೋಕಿಸುವನೆ? ಹಾಗೆಯೇ, ಈ ಆತ್ಮನೂ, ತಾನು ಚಿತ್ತರೂಪಾವಸ್ಥೆಯನ್ನು ಹೊಂದಿದಾಗ, ತನ್ನ ಸ್ವರೂಪವೇ ತನಗೆ ಗೊತ್ತಾಗದಿರುವುದರಿಂದ, ತಾನನುಭವಿಸುವ ಚಿತ್ತರೂಪಾವಸ್ಥೆಯನು ಕುರಿತು ಸ್ವಲ್ಪವೂ ಶೋಕಿಸುವುದಿಲ್ಲ ||೮||

ಅಂತು, ಅನಿರ್ದೇಶ್ಯವಾಗಿಯೂ ಸರ್ವಕಾಮನಾವಿರಹಿತವಾಗಿಯೂ ಇರುವ ಆತ್ಮಸ್ವರೂಪವು, ಸ್ವಲ್ಪ ಚೇತ್ಯೋನ್ಮುಖವಾದಾಗ ಚಿತ್ತವೆನ್ನಲ್ಪಡುವುದು; ಈ ಚಿತ್ತದಿಂದ ಜೀವತ್ವಕಲ್ಪನೆಯಾಗು

ಜೀವತ್ವಾದಪ್ಯಹಮ್ಭಾವಸ್ತ್ವಹಮ್ಭಾವಾಚ್ಚ ಚಿತ್ತತಾ ।
ಚಿತ್ತತ್ವಾದಿನ್ದ್ರಿಯಾದಿತ್ವಂ ತತೋ ದೇಹಾದಿವಿಭ್ರಮಾಃ ॥೧೦॥
ದೇಹಾದಿಮೋಹತಃ ಸ್ವರ್ಗನರಕೌ ಮೋಕ್ಷಬನ್ಧನೇ ।
ಬೀಜಾಙ್ಕುರವದಾರಮ್ಭಸಂರೂಢೇ ದೇಹಕರ್ಮಣೋಃ ॥೧೧॥
ದ್ವೈತಂ ಯಥಾನಾಸ್ತಿ ಚಿದಾತ್ಮಜೀವಯೋಃ ತಥೈವಭೇದೋಽಸ್ತಿ ನ ಜೀವಚಿತ್ತಯೋಃ ।
ಯಥೈವ ಭೇದೋಽಸ್ತಿ ನ ಜೀವಚಿತ್ತಯೋಃ ತಥೈವ ಭೇದೋಽಸ್ತಿ ನ ದೇಹಕರ್ಮಣೋಃ॥
ಕರ್ಮೈವ ದೇಹೋ ನನು ದೇಹಏವ ಚಿತ್ತಂ ತದೇವಾಹಮಿತೀಹ ಜೀವಃ ।
ಸ ಜೀವಏವೇಶ್ವರಚಿತ್ ಸ ಆತ್ಮಾ ಸರ್ವಃ ಶಿವಸ್ತ್ವೇಕಪದೋಕ್ತಮೇತತ್ ॥೧೨॥

ಇತಿ ಉತ್ಪತ್ತಿಪ್ರಕರಣೇ ಜೀವವಿಚಾರೋನಾಮ
ಪಞ್ಚಷಷ್ಟಿತಮಃ ಸರ್ಗಃ.

ವುದು; ಜೀವತ್ವವುಂಟಾದಬಳಿಕ ಅಹಂಭಾವ(ನಾನು ಎಂಬ ಅಭಿಮಾನ)ವುಂಟಾಗುವುದು; ಅಹಂಭಾವದಿಂದ ಪುನಃ ಚಿತ್ತರೂಪವುಂಟಾಗುವುದು; ಚಿತ್ತರೂಪಜ್ಞಾನದಿಂದ ಇಂದ್ರಿಯಾದಿರೂಪವೂ, ಅದರಿಂದ ದೇಹಾದಿ ಭ್ರಮೆಗಳೂ ಉಂಟಾಗುವುವು. ಅಂತು, ಬೀಜಾಂಕುರನ್ಯಾಯದಂತೆ, ಈ ಬಂಧಮೋಕ್ಷಗಳು ಸೃಷ್ಟ್ಯಾದಿಯಿಂದಲೂ ದೇಹಕರ್ಮಗಳಿಗೆ ರೂಢವಾಗಿ ಬಂದಿರುವುವು ॥೯—೧೧॥

ವತ್ಸ! ಈ ಸಮಸ್ತವಾದ ಅನರ್ಥಪರಂಪರೆಯೂ ಜೀವಬ್ರಹ್ಮರಿಗೆ ಭೇದವುಂಟೆಂಬ ಭ್ರಮೆಯಿಂದ ಜನಿಸುವುದು. ಇವರಿಬ್ಬರಿಗೂ ಭೇದವಿಲ್ಲವೆಂಬ ಜ್ಞಾನವು ದೃಢವಾದರೆ, ಇದೆಲ್ಲವೂ ತೊಲಗಿಬಿಡುವುದು. ಅದುಕಾರಣ, ಈಶ್ವರನಿಗೂ ಜೀವನಿಗೂ ಭೇದವಿಲ್ಲವೆಂದು ದೃಢವಾಗಿ ನಿಶ್ಚಯಿಸುವನಾಗು. ಇವರಿಬ್ಬರಿಗೂ ಹೇಗೆ ಭೇದವಿಲ್ಲವೋ, ಜೀವನಿಗೂ ಚಿತ್ತಕ್ಕೂ ಹಾಗೆಯೇ ಭೇದವಿಲ್ಲ. ಜೀವಚಿತ್ತಗಳಿಗೆ ಭೇದವಿಲ್ಲದಿರುವಂತೆಯೇ, ದೇಹಕರ್ಮಗಳಿಗೂ ಭೇದವಿಲ್ಲ ॥೧೨॥

ರಾಮ! ಕರ್ಮವೇ ದೇಹವು; ದೇಹವೇ ಚಿತ್ತವು; ಚಿತ್ತವೇ ಅಹಂಕಾರವು; ಅಹಂಕಾರವೇ ಜೀವನು; ಆ ಜೀವನೇ ಈಶ್ವರ ಚೈತನ್ಯವು; ಅವನೇ ಆತ್ಮನು. ಹೆಚ್ಚೇನು? ನಾವು ಯಾವಯಾವುದನ್ನು ಹೇಳುವೆವೋ, ಅದೆಲ್ಲವೂ ಆ ಪರಾತ್ಪರವಸ್ತುವೆಯೇ! ಹೀಗೆ ಹೇಳಿಬಿಟ್ಟರೆ, ಒಂದೇಒಂದು ಮಾತಿನಿಂದ ಎಲ್ಲವನ್ನೂ ಹೇಳಿದಹಾಗಾಗುವುದು ॥೧೩॥

ಇದು ಉತ್ಪತ್ತಿಪ್ರಕರಣದಲ್ಲಿ ಜೀವವಿಚಾರವೆಂಬ ಅರವತ್ತಯ್ದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಷಟ್ಷಷ್ಟಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಏವಮೇಕಂ ಪರಂ ವಸ್ತು ರಾಮ ನಾನಾತ್ವಮೇತ್ಯಲಮ್ ।
ನಾನಾತ್ವಮಿವ ಸಞ್ಜಾತಂ ದೀಪಾದ್ದೀಪಶತಂ ಯಥಾ ॥೧॥
ಯಥಾಭೂತಮಸದ್ರೂಪಂ ಆತ್ಮಾನಂ ಯದಿ ಪಶ್ಯತಿ ।
ವಿಚಾರ್ಯತೇನ್ತ್ತದನು ಭಾವಹೀನಂ ನ ಶೋಚತಿ ॥೨॥
ಚಿತ್ತಮಾತ್ರಂ ನರಸ್ತಸ್ಮಿನ್ ಗತೇ ಶಾನ್ತಮಿದಂ ಜಗತ್ ।
ಉಪಾನದ್ಗೂಢಪಾದಸ್ಯ ನನು ಚರ್ಮಾಸ್ತೃತೈವ ಭೂಃ ॥೩॥
ಪತ್ರಮಾತ್ರಾದೃತೇ ನಾನ್ಯತ್ ಕದಲ್ಯಾ ವಿದ್ಯತೇ ಯಥಾ ।

ಉತ್ಪತ್ತಿಪ್ರಕರಣದಲ್ಲಿ ಅರವತ್ತಾರನೆಯ ಸರ್ಗವು.

ಮನೋಮಾತ್ರವಿಲಾಸತ್ವಂ ದ್ವೈತಸ್ಯಾತ್ರ ಪ್ರಪಞ್ಚ್ಯತೇ ।
ಇಷ್ಟತ್ಯಾಗಾತ್ ಪ್ರಬೋಧಾಚ್ಚ ಸಾಜ್ಞಾನಮನಸಃ ಕ್ಷಯಃ ॥

ಜೀವೇಶ್ವರಾದಿಭೇದವು ಕೇವಲ ಮನೋವಿಲಾಸಮಾತ್ರವೆಂದೂ, ಇಚ್ಛೆಯುಂಟಾದುದನ್ನು ಪರಿತ್ಯಜಿಸುವಿಕೆಯಿಂದಲೂ—ಮತ್ತು ಜ್ಞಾನದಿಂದಲೂ- ಅಜ್ಞಾನದೊಡನೆ ಮನಸ್ಸಿಗೂ ಕ್ಷಯ ವುಂಟಾಗುವುದೆಂದೂ, ಈ ಸರ್ಗದಲ್ಲಿ ನಿರೂಪಿಸಲ್ಪಡುವುದು.

ವತ್ಸ! ರಾಮ! ನಿನಗೆ ನಾನು ಹೇಳಿದುದು ತಿಳಿಯಿತೆ? ಈಗ ಇನ್ನೂ ವಿಶದವಾಗಿ ಆ ವಿಷಯವನ್ನು ಹೇಳುವೆನು. ಒಂದು ದೀಪದಿಂದ ಹಚ್ಚಿದ ನೂರಾರು ದೀಪಗಳು ಅನೇಕವಾಗಿ ಕಾಣುವುವಲ್ಲವೆ! ವಸ್ತುತಃ ಅವೆಲ್ಲವೂ ಬೇರೆಯಾಗುವುವೆ? ಹೀಗೆಯೇ, ಅದ್ವಿತೀಯವಾದ ಪರ ಮಾತ್ಮವಸ್ತುವೊಂದೇ ಅಜ್ಞದೃಷ್ಟಿಯ ನಾನಾರೂಪವನ್ನು ಹೊಂದಿರುವಂತೆ ತೋರುವುದು ॥೧॥

ಚಿತ್ತದಲ್ಲಿ ಜೀವತ್ವವನ್ನು ಕಲ್ಪಿಸಿಕೊಳ್ಳುವುದರಿಂದಲ್ಲವೆ ಪರಬ್ರಹ್ಮನಿಗೆ ಬಂಧವುಂಟಾಗು ವುದು! ಹಾಗೆಯೇ, ಚಿತ್ತದಲ್ಲಿ ವಿಚಾರಮಾಡಿ ತತ್ವಜ್ಞಾನಪಡೆದರೆ, ಇದಕ್ಕೆ ಮೋಕ್ಷವುಂಟಾಗು ವುದು. ಯಥಾವಸ್ಥಿತವಾಗಿ ಈ ಆತ್ಮನಿಗೆ ಯಾವ ರೂಪವೂ ಇಲ್ಲವೆಂದು ತಿಳಿದು, ಆರೀತಿಯಾ ಗಿಯೇ ಮನಸ್ಸಿನೊಳಗೆ ವಿಚಾರಮಾಡುತ ಬಂದರೆ, ಆಗ ಸಕಲವಿಧವಾದ ಭೇದಜ್ಞಾನವೂ ಕಳೆದು ಮೋಹಶೋಕಗಳು ನಷ್ಟವಾಗುವುವು ॥೨॥

ಈ ಜೀವನೆಂಬುದು ಕೇವಲ ಚಿತ್ತಮಾತ್ರವಾಗಿರುವುದು. ಆ ಚಿತ್ತವು ಲಯಹೊಂದಿದರೆ, ಈ ಜಗತ್ತೆಲ್ಲವೂ ಶಾಂತವೇ ಆಗುವುದು. ಇದಕ್ಕೊಂದುದಾಹರಣೆಯನ್ನು ಕೇಳು:—ಪಾದರಕ್ಷೆ ಯೊಳಗೆ ಕಾಲಿಟ್ಟುಕೊಂಡಿರುವವನಿಗೆ ಸಮಸ್ತ ಭೂಮಿಯಮೇಲೂ ಚರ್ಮವನ್ನು ಹಾಸಿರುವಂ ತೆಯೇ ಆಗುವುದಲ್ಲವೆ! ಅವನೆಲ್ಲೆಲ್ಲಿ ಹೋದರೂ, ಅವನ ಕಾಲಿನ ಕೆಳಗೆ ಚರ್ಮವಿದ್ದೇ ಇರುವು ದರಿಂದ, ಸರ್ವತ್ರ ಚರ್ಮವನ್ನು ಹಾಸಿರುವಂತೆಯೇ ಆಯ್ತು. ಹೀಗೆ, ಮನಸ್ಸು ಲಯಹೊಂದಿ ಬಿಟ್ಟರೆ, ಆಗ ಜಗತ್ತೆಲ್ಲವೂ ಇಲ್ಲದಂತೆಯೇ ಆಯ್ತು ॥೩॥

ಒಂದು ಬಾಳೆಯಕಂಬವನ್ನು ತೆಗೆದುಕೊಂಡು—ಅದನ್ನು ಸುಲಿಯುತಹೋದರೆ, ಎಷ್ಟೆಷ್ಟು

ಭ್ರಮಮಾತ್ರಾದೃತೇ ನಾನ್ಯತ್ ಜಗತೋ ವಿದ್ಯತೇ ತಥಾ ॥೪॥
ಜಾಯತೇ ಬಾಲತಾಮೇತಿ ಯೌವನಂ ವಾರ್ಧಕಂ ತತಃ ।
ಮೃತಿಂ ಸ್ವರ್ಗಂ ಚ ನರಕಂ ಭ್ರಮಾಚ್ಚೇತೋ ಹಿ ನೃತ್ಯತಿ ॥೫॥
ವಿಚಿತ್ರಬುದ್ಬುದೋಲ್ಲಾಸೇ ಸ್ವಾತ್ಮನೋ ವ್ಯತಿರೇಕಿಣಿ ।
ಯಥಾ ಸುರಾಯಾಃ ಸಾಮರ್ಥ್ಯಂ ತಥಾ ಚಿತ್ತಸ್ಯ ಸಂಸೃತೌ ॥೬॥
ಯಥಾ ದ್ವಿತ್ವಂ ಶಶಾಙ್ಕಾದೌ ಪಶ್ಯತ್ಯಕ್ಷಿ ಮಲಾವಿಲಮ್ ।
ಚಿಚ್ಚೇತನಕಲಾಕ್ರಾನ್ತಾ ತಥೈವ ಪರಮಾತ್ಮನಿ ॥೭॥
ಯಥಾ ಮದವಶಾದ್ಭ್ರಾನ್ತಾನ್ ಕ್ಷೀಬಃ ಪಶ್ಯತಿ ಪಾದಪಾನ್ ।
ತಥಾ ಚೇತನವಿಕ್ಷುಬ್ಧಾನ್ ಸಂಸಾರಾಂಶ್ಚಿತ್ ಪ್ರಪಶ್ಯತಿ ॥೮॥
ಯಥಾ ಲೀಲಾಭ್ರಮಾದ್ಬಾಲಾಃ ಕುಮ್ಭಕೃಚ್ಚಕ್ರವಜ್ಜಗತ್ ।
ಭ್ರಾನ್ತಂ ಪಶ್ಯನ್ತಿ ಚಿತ್ತಾತ್ ತು ವಿದ್ಧಿ ದೃಶ್ಯಂ ತಥೈವ ಹಿ ॥೯॥

ಸುಲಿದರೂ ಒಳಗೊಳಗೆ ಬರಿಯಪಟ್ಟೆಗಳೇ ಸಿಕ್ಕುತ ಬರುವುವಲ್ಲವೆ! ಹೀಗೆ ಪತ್ರಮಾತ್ರವೇ ಹೊರತು, ಬೇರೆಯಾದ ರೂಪವೇ ಆ ಕದಳೀಸ್ತಂಭಕ್ಕೆ ಇಲ್ಲ. ಅದರಂತೆಯೇ, ಎಷ್ಟೆಷ್ಟು ದೂರ ವಿಚಾರಮಾಡುತಹೋದರೂ, ಭ್ರಮಮಾತ್ರವೇ ಹೊರತು- ಅದನ್ನು ಬಿಟ್ಟು ಬೇರೆಯಾಗಿ ಜಗತ್ತಿನ ರೂಪವೆಂಬುದಿಲ್ಲ ॥೪॥

ಹುಟ್ಟುವನೆಂದೂ, ಬಾಲ್ಯವನ್ನೂ ಯೌವನವನ್ನೂ ವಾರ್ಧಕವನ್ನೂ ಅನುಭವಿಸುವನೆಂದೂ, ಬಳಿಕ ಮರಣಹೊಂದುವನೆಂದೂ, ತನ್ನ ಕರ್ಮಾನುಗುಣವಾಗಿ ಸ್ವರ್ಗಕ್ಕೋ ಅಥವಾ ನರಕಕ್ಕೋ ಹೋಗುವನೆಂದೂ, ಈವಿಧವಾಗೆಲ್ಲ ಭ್ರಮೆಪಡುತ, ಮನಸ್ಸು ನರ್ತನಮಾಡುವುದು ॥೫॥

ಮದ್ಯಪಾನಮಾಡಿದವನಿಗೆ, ಅಂತರಿಕ್ಷದಲ್ಲಿ ಸಾವಿರಾರು ಗುಳ್ಳೆಗಳಿರುವಂತೆ ಕಾಣುವುದಲ್ಲವೆ! ಆಗ ಆಕಾಶಭಿನ್ನವಾದ ಮತ್ತೊಂದು ಪದಾರ್ಥವೇ ಇಲ್ಲದಿದ್ದರೂ, ಪೃಥಕ್ಕಾಗಿ ಗುಳ್ಳೆಗಳಿರುವುವೆಂಬ ಭ್ರಾಂತಿಯನ್ನು ಹುಟ್ಟಿಸುವುದರಲ್ಲಿ ಮದ್ಯಕ್ಕೆ ಹೇಗೆ ಸಾಮರ್ಥ್ಯವಿರುವುದೋ, ಹಾಗೆ ಆತ್ಮಭಿನ್ನವಾದ ಸಂಸಾರವಿರುವುದೆಂಬ ಭ್ರಾಂತಿಯನ್ನು ಹುಟ್ಟಿಸುವುದರಲ್ಲಿ ಚಿತ್ತಕ್ಕೆ ಸಾಮರ್ಥ್ಯವಿರುವುದು ॥೬॥

ಮಲದಿಂದ ಕಲುಷಿತವಾದ ನೇತ್ರವು, ಚಂದ್ರನಕ್ಷತ್ರಾದಿಗಳಲ್ಲಿ ದ್ವಿತ್ವ(ಎರಡಿರುವಿಕೆ)ವನ್ನು ಹೇಗೆ ನೋಡುವುದೋ, ಹಾಗೆ–ಚಿತ್ತದ ಭ್ರಮಣಶಕ್ತಿಯಿಂದ ಆಕ್ರಮಿಸಲ್ಪಟ್ಟ ಜೀವಚೈತನ್ಯವು ಪರಮಾತ್ಮನಲ್ಲಿ ದ್ವಿತ್ವವನ್ನು ನೋಡುವುದು ॥೭॥

ಮದ್ಯಪಾನಮಾಡಿ ಮದವೇರಿದವನು, ತಾನು ಮದಪರವಶನಾಗಿ, ತನ್ನೆದುರಿಗಿರುವ ಮರಗಳು ಸುತ್ತುತಿರುವುದೆಂದು ಹೇಗೆ ತಿಳಿಯುವನೋ, ಹಾಗೆ- ಜೀವನು ಚಿತ್ತಭ್ರಮದಿಂದುಂಟಾದ ಬ್ರಹ್ಮಾಂಡಗಳನ್ನು ನೋಡುವನು ॥೮॥

ಮತ್ತು, ಬಾಲಕರು ಆಟಕ್ಕಾಗಿ ಗರಗರನೆ ಸುತ್ತುತಿರುವಾಗ, ಅವರು ತಮ್ಮ ಸುತ್ತಲೂ ಇರುವ ಭೂಮಿಯು ಕುಂಬಾರನ ಚಕ್ರದಂತೆ ಸುತ್ತುತಿರುವುದೆಂದು ತಿಳಿಯುವರಲ್ಲವೆ! ಹಾಗೆಯೇ, ಅಜ್ಞಾನಿಗಳು ತಮ್ಮ ಚಿತ್ತಭ್ರಮದಿಂದ ದೃಶ್ಯವುಂಟೆಂದು ತಿಳಿಯುವರೆಂಬುದಾಗಿ ನಿಶ್ಚಯಿಸು ॥೯॥

ಯದಾ ಚಿಚ್ಚೇತತಿ ದ್ವಿತ್ವಂ ತದಾ ದ್ವೈತೈಕ್ಯವಿಭ್ರಮಃ ।
ಯದಾ ನ ಚೇತತಿ ದ್ವೈತಂ ತದಾ ದ್ವೈತೈಕ್ಯಯೋಃ ಕ್ಷಯಃ ॥೧೦॥
ಯಚ್ಚೇತ್ಯತೇ ತದಿತರತ್ ವ್ಯತಿರಿಕ್ತಂ ಚಿತೋಽಸ್ತಿ ನ ।
ಕಿಞ್ಚಿನ್ನಾಸ್ತೀತಿ ಸಂಶಾನ್ತ್ಯಾ ಚಿತಃ ಶಾಮ್ಯತಿ ಚೇತನಮ್ ॥೧೧॥
ಚಿದ್ಘನೇನೈಕತಾಮೇತ್ಯ ಯದಾ ತಿಷ್ಠತಿ ನಿಶ್ಚಲಃ ।
ಶಾಮ್ಯನ್ ವ್ಯವಹರನ್ ವಾಪಿ ತದಾ ಸಂಶಾನ್ತ ಉಚ್ಯತೇ ॥೧೨॥
ತನ್ವೀ ಚೇತಯತೇ ಚೇತ್ಯಂ ಘನಾ ಚಿನ್ನಾಙ್ಗ ಚೇತತಿ ।
ಅಲ್ಪಕ್ಷೀಬಃ ಕ್ಷೋಭಮೇತಿ ಘನಕ್ಷೀಬೋ ಹಿ ಶಾಮ್ಯತಿ ॥೧೩॥
ಚಿದ್ಘನೈಕಪ್ರಪಾತಸ್ಯ ರೂಢಸ್ಯ ಪರಮೇ ಪದೇ ।
ನೈರಾತ್ಮ್ಯಶೂನ್ಯವೇದ್ಯಾದ್ಯೈಃ ಪರ್ಯಾಯೈಃ ಕಥನಂ ಭವೇತ್ ॥೧೪॥
ಚಿಚ್ಚೇತನೇನ ಚೇತ್ಯತ್ವಂ ಏತ್ಯೈವಂ ಪಶ್ಯತಿ ಭ್ರಮಮ್ ।
ಜಾತೋ ಜೀವಾಮಿ ಪಶ್ಯಾಮಿ ಸಂಸರಾಮೀತ್ಯಸನ್ಮಯಮ್ ॥೧೫॥
ಸ್ವಭಾವಾದ್ವ್ಯತಿರಿಕ್ತಂ ತು ನ ಚಿತ್ತಸ್ಯಾಸ್ತಿ ಚೇತನಮ್ ।

ಹೀಗೆ, ಚಿತ್ತವು ಯಾವಾಗ ದ್ವಿತ್ವವುಂಟೆಂದು ತಿಳಿಯುವುದೋ, ಆಗ ದ್ವಿತ್ವವೆಂದೂ, ಏಕತ್ವವೆಂದೂ ವಿಚಾರವುಂಟಾಗುವುದು; ಯಾವಾಗ ಇದು ದ್ವಿತ್ವವನ್ನು ಎಣಿಸದಿರುವುದೋ, ಆಗ ದ್ವಿತ್ವ ಏಕತ್ವಗಳೆಲ್ಲವೂ ಕ್ಷಯಹೊಂದುವುವು ॥೧೦॥

ಈ ಚಿತ್ತವು, ಚಿತ್ತಿಗಿಂತ ಪೃಥಕ್ಕಾದ ಯಾವಯಾವುದನ್ನು ನೋಡುವುದೋ, ಅದೊಂದೂ ವಾಸ್ತವ್ಯವಾಗಿಲ್ಲ. ಚಿತ್ತಿಗಿಂತ ಪೃಥಕ್ಕಾದುದೊಂದೂ ಇಲ್ಲವೆಂದು ಜ್ಞಾನವುಂಟಾಗಿಬಿಟ್ಟರೆ, ಆಗ ಚಿತ್ತವು ತನಗೆತಾನೇ ಶಾಂತವಾಗುವುದು ॥೧೧॥

ಪುರುಷನು ಯಾವಾಗ ಬ್ರಹ್ಮನೊಡನೆ ಐಕ್ಯಹೊಂದಿ ನಿಶ್ಚಲನಾಗಿರುವನೋ, ಆಗ ಅವನು-ಶಾಂತನಾಗಿದ್ದರೂ ಅಥವಾ ಪ್ರಪಂಚವ್ಯವಹಾರವನ್ನು ನಡೆಯಿಸುತಿದ್ದರೂ- ಜೀವನ್ಮುಕ್ತನೆನಿಸಲ್ಪಡುವನು ॥೧೨॥

ವತ್ಸ ! ಸ್ವಲ್ಪ ಮದವೇರಿದವನು ನಾನಾವಿಧವಾಗಿ ವಿಕಾರಮಾಡುವನು; ಚೆನ್ನಾಗಿ ಮದವೇರಿದವನು, ಯಾವ ಚೇಷ್ಟೆಯೂ ಇಲ್ಲದೆ ಸ್ತಬ್ಧನಾಗಿ ಬಿದ್ದಿರುವನು, ಹೀಗೆ, ಅಲ್ಪವಾದ ಚಿತ್ತು (ಜ್ಞಾನ) ಚೇತ್ಯಜ್ಞಾನವುಳ್ಳದಾಗುವುದು; ಸಾಂದ್ರವಾದ ಚಿತ್ತು, ಯಾವುದೂ ಇಲ್ಲದೆ ಸ್ತಬ್ಧವಾಗಿರುವುದು ॥೧೩॥

ಅಯ್ಯಾ ! ರಾಮ ! ಕೇವಲ ಚಿನ್ಮಾತ್ರವನ್ನೇ ಕಾಣುತ-ಪರಮಪದದಲ್ಲಿ ನೆಲೆಯನ್ನು ಪಡೆದಿರುವ ಚಿತ್ತಕ್ಕೆ, ನೈರಾತ್ಮ್ಯ (ತಾನೇ-ಅಂದರೆ ಚಿತ್ತವೇ-ಇಲ್ಲದಿರುವಿಕೆ) ಶೂನ್ಯವೇದ್ಯ (ಪ್ರಪಂಚರಹಿತ) ಇತ್ಯಾದಿ ಪರ್ಯಾಯನಾಮಗಳಿರುವುವು ॥೧೪॥

ಚಿತ್ತು (ಬ್ರಹ್ಮ), ಚಿತ್ತಬಲದಿಂದ ತಾನು ಜೀವದಶೆಯನ್ನು ಹೊಂದಿ,- ನಾನು ಹುಟ್ಟಿರುವೆನು, ಬದುಕಿರುವೆನು, ನೋಡುವೆನು, ಸಂಸಾರಿಯಾಗಿರುವೆನು,-ಇತ್ಯಾದಿರೀತಿಯಾಗಿ ಭ್ರಮಿಸುವುದು ॥೧೫॥

‘ ಸಮಾಧಿಯಿಂದಲೂ ಜ್ಞಾನಾಭ್ಯಾಸದಿಂದಲೂ ಚಿತ್ತದ ವ್ಯಾಪಾರವು ಶಾಂತವಾಗಬ

ಸ್ಪನ್ದಾದೃತೇ ಯಥಾ ವಾಯೋಃ ಅನ್ತಃ ಕಿಂ ನಾಮ ಚೇತ್ಯತೇ ॥೧೬॥
ಚೇತ್ಯತ್ವಂ ಸಮ್ಭವತ್ಯೇವಂ ಕಿಞ್ಚಿದ್ಯಚ್ಚೇತ್ಯತೇ ಚಿತಾ ।
ರಜ್ಜುಸರ್ಪಭ್ರಮಾಭಾಸಂ ತಮವಿದ್ಯಾಭ್ರಮಂ ವಿದುಃ ॥೧೭॥
ಸಂವಿನ್ಮಾತ್ರಚಿಕಿತ್ಸ್ಯೇಸ್ಮಿನ್ ವ್ಯಾಧೌ ಸಂಸಾರನಾಮನಿ ।
ಚಿತ್ತಮಾತ್ರಪರಿಸ್ಪನ್ದೇ ಸಂರಮ್ಭೋ ನ ಚ ಕಿಞ್ಚನ ॥೧೮॥
ಯದಿ ಸರ್ವಂ ಪರಿತ್ಯಜ್ಯ ತಿಷ್ಠಸ್ಯುತ್ಕ್ರಾನ್ತವಾಸನಃ ।
ಅಮುನೈವ ನಿಮೇಷೇಣ ತನ್ಮುಕ್ತೋಸಿ ನ ಸಂಶಯಃ ॥೧೯॥
ಯಥಾ ರಜ್ಜ್ವಾಂ ಭುಜಙ್ಗಭೀರ್ವಿನಶ್ಯತ್ಯೇವ ವೀಕ್ಷಣಾತ್ ।
ಸಂವಿನ್ಮಾತ್ರವಿವರ್ತೇನ ನಶ್ಯತ್ಯೇವ ಹಿ ಸಂಸೃತಿಃ ॥೨೦॥
ಯತ್ರಾಭಿಲಾಷಸ್ತನ್ನೂನಂ ಸನ್ತ್ಯಜ್ಯ ಸ್ಥೀಯತೇ ಯದಿ ।

ಹುದು ; ತಾವನ್ಮಾತ್ರೇಣ ಚಿತ್ತವೇ ಲಯಹೊಂದುವುದೆಂದು ಹೇಗೆ ಹೇಳುವುದು?' ಎಂದರೆ:— ಸ್ಪಂದವನ್ನು ಬಿಟ್ಟರೆ ವಾಯುವಿಗೆ ಬೇರೆಯಾದ ರೂಪವೇ ಇಲ್ಲದಿರುವಂತೆ, ಚಿತ್ತಕ್ಕೆ ಅದರ ಸ್ಥಿತಿಯನ್ನು ಬಿಟ್ಟು ಬೇರೆಯಾದ ಚೇತನ(ವ್ಯಾಪಾರ)ವೇ ಇಲ್ಲ. ಹೀಗಿರುವುದರಿಂದ, ಚಿತ್ತದ ವ್ಯಾಪಾರವು ಶಾಂತವಾಯ್ತೆಂದರೆ, ಚಿತ್ತವೇ ಶಾಂತವಾಯ್ತೆಂದು ಸಿದ್ಧವಾಗುವುದು. ಬೆಂಕಿಯ ಶಾಕವು ಆರಿದಮೇಲೂ ಬೆಂಕಿಯಿರುವಂತೆ- ಚಿತ್ತದ ವ್ಯಾಪಾರವು ಶಾಂತವಾದಮೇಲೆ ಚಿತ್ತವಿರುವುದೆಂದು ಹೇಳಲಾಗದು. ವ್ಯಾಪಾರ ಶಾಂತವಾದಮೇಲೆ ಚಿತ್ತವಿರುವುದೆಂದು ಯಾವರೀತಿಯಾಗಿ ನಿಶ್ಚಯಿಸಲಾದೀತು? ॥೧೬॥

ಅಯ್ಯಾ! ರಾಮ! ಈ ಚೇತನೀಯದ ಸಂಭವವೀರೀತಿಯಾಗಿರುವುದು; ಇದನ್ನು ನಿನಗೆ ತಿಳುಹಿಸಿರುವೆನು. ಚಿತ್ತು ಯಾವುದಾದರೊಂದು ಪದಾರ್ಥವನ್ನು ತಿಳಿಯುವಿಕೆಯಾವುದುಂಟೋ, ಆದು- ರಜ್ಜುಸರ್ಪಭ್ರಮನ್ಯಾಯದಿಂದ- ಅಜ್ಞಾನದ ಭ್ರಾಂತಿಮಾತ್ರವೆಂದು ಜ್ಞಾನಿಗಳು ನಿಶ್ಚಯಿಸಿರುವರು ॥೧೭॥

ವತ್ಸ! ಈ ಸಂಸಾರವೆಂಬುದೇ ಒಂದು ದೊಡ್ಡ ವ್ಯಾಧಿಯೆಂದು ತಿಳಿ. ಇದು, ಕೇವಲ ಜ್ಞಾನವೆಂಬ ಔಷಧದಿಂದ ಮಾತ್ರವೇ ಚಿಕಿತ್ಸೆ ಮಾಡಲು ಸಾಧ್ಯವಾದುದು. ಹೀಗಿರುವುದರಿಂದ ನಮ್ಮ ಚಿತ್ತವನ್ನು ಈ ಜ್ಞಾನಕ್ಕಾಗಿ ಸ್ವಲ್ಪ ಪ್ರಯತ್ನಪಡುವಂತೆ ಮಾಡಿಬಿಟ್ಟರೆ ಸಾಕಾಗಿರುವುದು. ಇಷ್ಟುಮಾತ್ರದಲ್ಲಿ ಸ್ವಲ್ಪವೂ ಆಯಾಸವಾಗುವುದಿಲ್ಲ॥೧೮॥

ರಾಮ! ನೀನು- ಈ ದೃಶ್ಯಜ್ಞಾನವೆಲ್ಲವನ್ನೂ ಬಿಟ್ಟುಬಿಟ್ಟು- ವಾಸನಾಪರವಶನಾಗದೆ ಒಂದು ನಿಮಿಷಮಾತ್ರ ಇದ್ದುಬಿಡುವೆಯಾದರೆ, ಈ ನಿಮಿಷದಲ್ಲಿಯೇ ನೀನು ಮುಕ್ತನಾಗುವೆ; ಇದರಲ್ಲಿ ಸಂಶಯವಿಲ್ಲ ॥೧೯॥

ರಜ್ಜುವಿನಲ್ಲುಂಟಾಗುವ ಸರ್ಪಭ್ರಾಂತಿಯು, ಚೆನ್ನಾಗಿ ನೋಡಿದ ಬಳಿಕ ಹೇಗೆ ನಷ್ಟವಾಗುವುದೋ, ಹಾಗೆ-ಜ್ಞಾನವನ್ನು ಪ್ರಪಂಚಾಭಿಮುಖವಾಗಿ ಬಿಡದೆ ಹಿಂದಿರುಗಿಸಿ ನಿಲ್ಲಿಸಿಕೊಂಡರೆ- ಈ ಸಂಸಾರವು ನಾಶಹೊಂದುವುದರಲ್ಲಿ ಸಂಶಯವಿಲ್ಲ ॥೨೦॥

ಅಯ್ಯಾ! ರಾಮ! ಈ ಮನೋನಿಗ್ರಹಕ್ಕೆ ನಿನಗೊಂದುಪಾಯವನ್ನು ಹೇಳುವೆನು:—

ಪ್ರಾಪ್ತಏವಾಜ್ಞ ತನ್ಮೋಕ್ಷಃ ಕಿಮೇತಾವತಿ ದುಷ್ಕರಮ್ ‖೨೧‖
ಅಪಿ ಪ್ರಾಣಾಂಸ್ತೃಣಮಿವ ತ್ಯಜನ್ತೀಹ ಮಹಾಶಯಾಃ |
ಯತ್ರಾಭಿಲಾಷಸ್ತನ್ಮಾತ್ರತ್ಯಾಗೇ ಕೃಪಣತಾ ಕಥಮ್ ‖೨೨‖
ಯತ್ರಾಭಿಲಾಷಸ್ತತ್ ತ್ಯಕ್ತ್ವಾ ಚೇತಸಾ ನಿರವಗ್ರಹಮ್ |
ಪ್ರಾಪ್ತಂ ಕರ್ಮೇನ್ದ್ರಿಯೈರ್ಗೃಹ್ಣನ್ ತ್ಯಜನ್ ನಷ್ಟಂ ಚ ತಿಷ್ಠ ಭೋಃ ‖
ಯಥಾ ಕರತಲೇ ಬಿಲ್ವಂ ಯಥಾ ವಾ ಪರ್ವತಃ ಪುರಃ |
ಪ್ರತ್ಯಕ್ಷಮೇವ ತಸ್ಯಾಲಂ ಅಜತ್ವಂ ಪರಮಾತ್ಮನಃ ‖೨೪‖
ಆತ್ಮೈವ ಭಾತಿ ಜಗದಿತ್ಯುದಿತಸ್ತರಙ್ಗೈಃ
ಕಲ್ಪಾನ್ತಏಕಇವ ವಾರಿಧಿರಪ್ರಮೇಯಃ |
ಜ್ಞಾತಃ ಸಏವ ಹಿ ದದಾತಿ ವಿಮೋಕ್ಷಸಿದ್ಧಿಂ
ತ್ವಜ್ಞಾತಏವ ಮನಸೇ ಚಿರಬನ್ಧನಾಯ ‖೨೫‖

ಇತಿ ಉತ್ಪತ್ತಿಪ್ರಕರಣೇ ಸಂಸೃತಿಪರಮಯೋಗೋ ನಾಮ
ಷಟ್ಷಷ್ಟಿತಮಃ ಸರ್ಗಃ.

ಅಯ್ಯಾ! ರಾಮ! ಈ ಮನೋನಿಗ್ರಹಕ್ಕೆ ನಿನಗೊಂದುಪಾಯವನ್ನು ಹೇಳುವೆನು:—ಯಾವಯಾವುದರಲ್ಲಿ ಅಭಿಲಾಷೆ ಹುಟ್ಟುವುದೋ—ಅದದನ್ನು ಬಿಟ್ಟುಬಿಟ್ಟು ಇರುತಬಂದರೆ, ಆಗ ಮೋಕ್ಷವು ಸಿಕ್ಕದಂತೆಯೇ ಆಯ್ತು. ಇಷ್ಟು ಅಲ್ಪ ಕೆಲಸವೂ ದುಷ್ಕರವೆ? ‖೨೧‖

ಈ ಪ್ರಪಂಚದಲ್ಲಿ ಮಹಾನುಭಾವರಾದವರು ತಮ್ಮ ಪ್ರಾಣಗಳನ್ನೂ ಕೂಡ ಕಸಕ್ಕೆ ಕಡೆಯಾಗಿ ಬಿಟ್ಟುಬಿಡುವರು. ಹೀಗಿರುವಾಗ, ತಮಗೆ ಯಾವುದರಲ್ಲಿ ಆಶೆ ಹುಟ್ಟುವುದೋ—ಅದೊಂದನ್ನು ಮಾತ್ರ ಬಿಡುವುದರಲ್ಲಿ ಇಷ್ಟು ದೈನ್ಯವೇಕೆ? ‖೨೨‖

ಅಯ್ಯಾ! ರಾಮ! ನೀನು, ಯಾವುದರಲ್ಲಭಿಲಾಷೆ ಹುಟ್ಟುವುದೋ ಅದನ್ನು ಬುದ್ಧಿಪೂರ್ವಕವಾಗಿ ಆಸಕ್ತಿಯಿಲ್ಲದೆ ಬಿಡುತಲೂ, ತಾನಾಗಿ ಬಂದುದನ್ನು ಅನುಭವಿಸುತಲೂ, ಹೋದುದನ್ನು ಆಶಿಸದೆ ಪರಿತ್ಯಜಿಸುತಲೂ ಇರುವನಾಗು ‖೨೩‖

ಹೀಗಿರುವೆಯಾದರೆ, ಕೈಯೊಳಗಿರುವ ಬಿಲ್ವಫಲದಂತೆಯೂ—ಮುಂದುಗಡೆ ಇರುವ ಪರ್ವತದಂತೆಯೂ—ನಿನಗೆ ಆ ಪರಮಾತ್ಮನು ಜರಾಮರಣರಹಿತನೆಂಬುದು ಪ್ರತ್ಯಕ್ಷವಾಗುವುದು ‖೨೪‖

ವತ್ಸ! ಮುಖ್ಯಾಂಶವನ್ನು ಕೇಳು:—ಪ್ರಳಯಕಾಲದಲ್ಲಿ ಅಪಾರವಾದ ಸಮುದ್ರವೇ ಅನೇಕತರಂಗರೂಪವಾಗಿ ಕಾಣುವಂತೆ, ಪರಮಾತ್ಮನೇ ಜಗತ್ತೆಂಬ ರೂಪದಿಂದ ವಿರಾಜಿಸುವನು. ಅವನ ಈ ವಿಧವಾದ ತತ್ವವನ್ನು ತಿಳಿದರೆ, ಅವನೇ ಮನಸ್ಸಿಗೆ ಮೋಕ್ಷಪ್ರದನಾಗುವನು. ತಿಳಿಯದೆ ಹೋದಪಕ್ಷದಲ್ಲಿ, ಅವನೇ ಬಂಧಕಾರಣನಾಗುವನು ‖೨೫‖

ಇದು ಉತ್ಪತ್ತಿಪ್ರಕರಣದಲ್ಲಿ ಸಂಸೃತಿಪರಮಯೋಗವೆಂಬ
ಅರವತ್ತಾರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಸಪ್ತಷಷ್ಟಿತಮಃ ಸರ್ಗಃ.

ಶ್ರೀರಾಮಉವಾಚ.

ಮನಸ್ತ್ವಯೋಗ್ಯೋ ಜೀವೋಽಯಂ ಕೋ ಭವೇತ್ ಪರಮಾತ್ಮನಃ ।
ಕಥಂ ವಾಸ್ಮಿನ್ ಸಮುತ್ಪನ್ನಃ ಕೋ ವಾಯಂ ವದ ಮೇ ಪುನಃ ॥೧॥

ಉತ್ಪತ್ತಿಪ್ರಕರಣದಲ್ಲಿ ಅರವತ್ತೇಳನೆಯ ಸರ್ಗವು.

ಭೋಕ್ತಾ ಯಃ ಕಥಿತೋ ಜೀವಃ ತತ್ಸ್ವರೂಪಮಿಹೋಚ್ಯತೇ ।
ವ್ಯಷ್ಟಿಪ್ರಾಧಾನ್ಯತಸ್ತಸ್ಯ ಕಾರಣಾದೇಶ್ಚ ಸಮ್ಭವಃ ॥

ಹಿಂದೆ ಭೋಕ್ತನೆಂದು ಹೇಳಲ್ಪಟ್ಟ ಜೀವನ ಸ್ವರೂಪವೂ, ಅವನು ವ್ಯಷ್ಟಿಪ್ರಧಾನನಾದಾಗ ಇಂದ್ರಿಯಾದಿಗಳ ಸೃಷ್ಟಿಯಾಗುವಿಕೆಯೂ ಕೂಡ, ಈ ಸರ್ಗದಲ್ಲಿ ಹೇಳಲ್ಪಡುವುವು.

ಪೂರ್ವದಲ್ಲಿ ಶ್ರೀವಸಿಷ್ಠರು ಸಮಷ್ಟಿರೂಪನಾದ ಜೀವನ ಸ್ವರೂಪವನ್ನು ವಿವರಿಸಿದುದನ್ನು ಕೇಳಿದ ಶ್ರೀರಾಮನು, ಈಗ ಆ ಜೀವಾತ್ಮನ ವ್ಯಷ್ಟಿ(ಬೇರೆಬೇರೆಯಾದ)ಸ್ವರೂಪವನ್ನು ತಿಳಿಯಲಪೇಕ್ಷಿಸಿದವನಾಗಿ, ಶ್ರೀವಸಿಷ್ಠರನ್ನು ಕುರಿತು ಪ್ರಶ್ನೆಮಾಡುವನು:—

ಪೂಜ್ಯರೇ! ಜೀವನು, ಮನಸ್ಸನ್ನು ಸೃಷ್ಟಿಮಾಡಿ, ತನ್ನಲ್ಲಿ ಆ ಮನೋಭಾವವನ್ನು (ತಾನೇ ಮನಸ್ಸೆಂಬುದನ್ನು) ಆರೋಪಿಸಿಕೊಳ್ಳುವ ಸ್ಥಿತಿಯನ್ನು ಹೊಂದುವನೆಂದು ತಾವು ಅಪ್ಪಣೆಕೊಟ್ಟರಲ್ಲವೆ! ಇಂತಹ ಸ್ಥಿತಿಯನ್ನು ಪಡೆಯಲು ಯೋಗ್ಯನಾದ ಆ ಜೀವನಾರು? ಅವನು ಪರಮಾತ್ಮನ ಒಂದಂಶವೇ? ಅಥವಾ ಅವನಿಂದ ಮಾಡಲ್ಪಟ್ಟ ಬೇರೆಯಾದ ಪದಾರ್ಥವೇ? ಅಥವಾ ಆ ಪರಮಾತ್ಮನೇ ಜೀವನಾಗಿರುವನೇ? ಪರಮಾತ್ಮನೇ ಜೀವನೆಂದು ಹೇಳುವಪಕ್ಷದಲ್ಲಿ, ಅವನಿಲ್ಲಿ ಹುಟ್ಟಿದುದು ಹೇಗೆ? (೧) ಪರಿಣಾಮದಿಂದಲೇ?—ಅಥವಾ ವಿವರ್ತದಿಂದಲೇ? ಪರಿಣಾಮದಿಂದಲೆಂದು ಹೇಳಿದರೆ, ಪರಿಣಾಮವು ಅನಿತ್ಯವಾದುದರಿಂದ ಜೀವನೂ ಅನಿತ್ಯನಾಗಬೇಕಾಗುವುದು. ಒಂದು ಪದಾರ್ಥವು ಪರಿಣಾಮಹೊಂದಲುಪಕ್ರಮವಾದರೆ, ಒಂದೇವಿಧವಾದ ಪರಿಣಾಮವು ಸ್ಥಿರವಾಗಿರಲಾರದಲ್ಲವೆ! ಅದಲ್ಲದೆ—ವಿವರ್ತನೆಂದು ಹೇಳುವ ಪಕ್ಷದಲ್ಲಿ, ವಿವರ್ತವು ಬಾಧ(ನಾಶ)ವಿಷಯವಾಗುವುದರಿಂದ, ಇವನೂ ನಾಶಕ್ಕೊಳಗಾಗಬೇಕಾಗುವುದಲ್ಲವೆ! ಜೀವನೆಂಬವನೇ ಹುಟ್ಟಲ್ಲವೆಂದರೆ, ಆಗ ಭೋಕ್ತೃವೇ ಅಸಿದ್ಧನಾದಂತಾಯ್ತು. ಪರಬ್ರಹ್ಮನೇ ಭೋಕ್ತೃವೆಂದು ಹೇಳಿದರೆ, ಅದು ಸಂಗತವಾಗುವುದಿಲ್ಲ. ಪರಬ್ರಹ್ಮನಿಗೆ ಕ್ಷುತ್ತೃಷ್ಣಾದಿಗಳಿಲ್ಲವೆಂದು ಸಕಲ ಶ್ರುತಿಸಿದ್ಧಾಂತವಿರುವುದು. ಬ್ರಹ್ಮನಲ್ಲದ ಮತ್ತೊಬ್ಬನು ಭೋಕ್ತೃವಾಗಿರುವನೆನ್ನುವಪಕ್ಷದಲ್ಲಿ, ಅವನಾವು? ಅವನೇನು ಬ್ರಹ್ಮನಿಗೆ ಸದೃಶನಾದವನೇ? ಅಥವಾ ಬೇರೆಯಾಗಿರುವನೆ? ಸ್ವಾಮಿ! ಈವಿಧವಾದ ಸಂಶಯವು ನನಗೆ ಪ್ರಬಲವಾಗಿರುವುದರಿಂದ, ತಾವು ಅನುಗ್ರಹವಿಟ್ಟು ಮತ್ತೊಂದುಸಲ ಈ ವಿಷಯವನ್ನೆಲ್ಲ ನನಗೆ ವಿಸ್ತರಿಸಿ ಅಪ್ಪಣೆಕೊಡಿಸಬೇಕು॥೧॥

1. ಪರಿಣಾಮವೆಂದರೆ—ಪದಾರ್ಥವು ತನ್ನ ಆಕಾರವನ್ನು ಬಿಡದೆಯೇ ಸ್ವಲ್ಪ ವ್ಯತ್ಯಾಸಹೊಂದುವಿಕೆ; ವಿವರ್ತವೆಂದರೆ—ಪದಾರ್ಥವು ರೂಪಾಂತರ ಪಡೆಯುವಿಕೆ. ಪ್ರಕೃತದಲ್ಲಿ, 'ಬ್ರಹ್ಮನು ತನ್ನ ರೂಪವನ್ನು ಬಿಡದೆಯೆ ವ್ಯತ್ಯಾಸಮಾತ್ರದಿಂದ ಜೀವದಶೆಯನ್ನನುಭವಿಸುವನೆ?' ಅಥವಾ ರೂಪಾಂತರವನ್ನು ಹೊಂದಿ ಜೀವದೆಶೆಗೆ ಬರುವನೇ?' ಎಂದು ಪ್ರಶ್ನೆಯು.

ಶ್ರೀವಸಿಷ್ಠಉವಾಚ.

ಸಮಸ್ತಶಕ್ತಿಖಚಿತಂ ಬ್ರಹ್ಮ ಸರ್ವೇಶ್ವರಂ ಸದಾ ।
ಯಯೈವ ಶಕ್ತ್ಯಾ ಸ್ಫುರತಿ ಪ್ರಾಪ್ತಾಂ ತಾಮೇವ ಪಶ್ಯತಿ ॥೧॥
ಸ್ವಯಂ ಯಾಂ ವೇತ್ತಿ ಸರ್ವಾತ್ಮಾ ಚಿರಂ ಚೇತನರೂಪಿಣೀಮ್ ।
ಸಾ ಪ್ರೋಕ್ತಾ ಜೀವಶಬ್ದೇನ ಸೈವ ಸಙ್ಕಲ್ಪಕಾರಿಣೀ ॥೨॥
ಸ್ವಭಾವಾತ್ ಕಾರಣಂ ದ್ವಿತ್ವಂ ಪೂರ್ವಸಙ್ಕಲ್ಪಚಿತ್ ಸ್ವಯಮ್ ।
ನಾನಾಕಾರಣತಾಂ ಪಶ್ಚಾತ್ ಯಾತಿ ಜನ್ಮಮೃತಿಸ್ಥಿತೇಃ ॥೪॥

ಶ್ರೀರಾಮಉವಾಚ.

ಏವಂ ಸ್ಥಿತೇ ಮುನಿಶ್ರೇಷ್ಠ ದೈವಂ ನಾಮ ಕಿಮುಚ್ಯತೇ ।
ಕಿಮುಚ್ಯತೇ ತಥಾ ಕರ್ಮ ಕಾರಣಂ ಚ ಕಿಮುಚ್ಯತೇ ॥೫॥

ಇದನ್ನು ಕೇಳಿ ಶ್ರೀವಸಿಷ್ಠರು ಉತ್ತರಹೇಳುವರು:—

ಅಯ್ಯಾ! ರಾಮ! ನಿನ್ನ ಜಿಜ್ಞಾಸೆ ಗೊತ್ತಾಯ್ತು. ಆದರೆ, ಈವಿಧವಾದ ಸಂಶಯ ಹುಟ್ಟಲು ಕಾರಣವೇ ಇಲ್ಲ. ಆ ಪರಬ್ರಹ್ಮವಸ್ತುವು, ಸಮಸ್ತವಿಧವಾದ ಶಕ್ತಿಯೂ ಉಳ್ಳದಾದಕಾರಣ, ಸರ್ವದಾ ಸಮಸ್ತವಾದ ಕೆಲಸವನ್ನೂ ಮಾಡಬಲ್ಲುದು. ಹೀಗಿರುವುದರಿಂದ, ಅದು ಯಾವಾಗ ಯಾವ ಶಕ್ತಿಯಿಂದ ಸ್ಫುರಣಮಾಡುವುದೋ, ಆಗ ಆ ಶಕ್ತಿಯನ್ನು ತಾನು ಹೊಂದಿಯೇ ಬಿಡುವುದು ॥೧॥

ಇಂತಹ ಸರ್ವಾತ್ಮಕವಾದ ಈ ಬ್ರಹ್ಮವಸ್ತುವು, ತನ್ನ ಯಾವುದೊಂದು ಶಕ್ತಿಯನ್ನು— ಜೀವಚೈತನ್ಯರೂಪವನ್ನಾಗಿ ತಿಳಿಯುವುದೋ, ಅದೇ ಜೀವವೆನ್ನಲ್ಪಡುವುದು; ಇದೇ ನಾನಾವಿಧ ಸಂಕಲ್ಪಗಳನ್ನು ಮಾಡತಕ್ಕುದು ॥೨॥

ಆತ್ಮನಲ್ಲಿ ಸ್ವಾಭಾವಿಕವಾಗಿ ದ್ವೈತಭ್ರಾಂತಿಯೇ, ಮೊದಲು ಸಂಸಾರ ಪ್ರವೃತ್ತಿಗೆ ಕಾರಣ ವಾಗುವುದು; ಬಳಿಕ, ಪೂರ್ವಸಂಕಲ್ಪವಾಸನಾಯುಕ್ತವಾಗಿರುವ ಜೀವಚೈತನ್ಯವೇ, ಜನನಮರಣ ಸ್ಥಿತಿಗಳಿಗೆ ಮಾತ್ರ ಕಾರಣವೆನ್ನಿಸುವುದು. ಅಯ್ಯಾ! ರಾಮ! ಹೀಗೆ, ಅಚಿಂತ್ಯವಾದ ಅಪರಿಮಿತ ಶಕ್ತಿಯುಳ್ಳದಾಗಿರುವ ಮಾಯೆಯಿಂದ ಸಂಕಲಿತವಾದ ಪರಬ್ರಹ್ಮವು, ಪರಮಾರ್ಥದಲ್ಲಿ ಭೇದ ಶೂನ್ಯವಾಗಿದ್ದರೂ, ಮಾಯಾಶಕ್ತಿಯಿಂದ ತಾನೇ ಒಂದು ಸಮಯದಲ್ಲಿ ದ್ವಿತೀಯ(ತನಗಿಂತ ಬೇರೆ ಯಾದ ಮತ್ತೊಂದು ಪದಾರ್ಥ)ತ್ವವನ್ನು ಹೊಂದಿತಂತೆ ಆದಾಗ, ಈ ಮಾಯೋಪಾಧಿಜನ್ಯವಾದ ವಿಕಾರಗಳನ್ನು ಆರೋಪಿಸಿಕೊಂಡು, ಅನಂತಜೀವರೂಪವಾಗಿಯೂ ಈಶ್ವರರೂಪವಾಗಿಯೂ ವಿಹರಿಸುವ ಸಾಮರ್ಥ್ಯವುಳ್ಳದಾಗಿರುವುದು. ಹೀಗಿರುವುದರಿಂದ, ನೀನು ಹೇಳಿದ ದೋಷವಾ ವುದೂ ಇಲ್ಲಿ ಸಂಗತವಾಗುವುದಿಲ್ಲವೆಂದು ತಿಳಿಯುವನಾಗು ॥೪॥

ಶ್ರೀರಾಮನು ಇದನ್ನು ಕೇಳಿ, ಬೇರೆಯಾದ ಪ್ರಶ್ನೆಯನ್ನು ಮಾಡುವನು:—

ಪೂಜ್ಯರೇ! ತಮ್ಮ ಅಭಿಪ್ರಾಯವು ತಿಳಿಯಿತು; ಇಷ್ಟರಿಂದಲೇ ನನ್ನ ಪ್ರಶ್ನೆಗಳಿಗೆಲ್ಲ ಸಮಾ ಧಾನವೂ ಬಂದಹಾಗಾಯ್ತು. ಈಗ ನಾನು ಮತ್ತೊಂದು ವಿಷಯವನ್ನು ಪ್ರಶ್ನೆಮಾಡುವೆನು ಇದಕ್ಕೂ ಉತ್ತರವಪ್ಪಣೆಯಾಗಬೇಕು. ಎಲೈ ಮುನಿಶ್ರೇಷ್ಠರೆ! ತಾವು ಅಪ್ಪಣೆಕೊಟ್ಟಂತೆ ಜೀವ ಸ್ವರೂಪವು ನನ್ನ ಮನಸ್ಸಿನಲ್ಲಿ ನಿರ್ಧರವಾಗಿ ನಿಂತಿರುವುದು. ಈಗ ಕೇಳುವ ಪ್ರಶ್ನೆಯಾವುದೆಂದರೆ:— ಈ ಜೀವನಿಗೆ ಜನ್ಮಮರಣಾದಿನಿಮಿತ್ತಭೂತವಾದ ದೈವವೆಂಬುದಾವುದು? ಕರ್ಮವೆಂಬುದಾವುದು? ಕಾರಣವೆಂಬುದಾವುದು? —ಇದೇ ನನ್ನ ಸಂಶಯವು. ಇದನ್ನು ಬಗೆಹರಿಸಬೇಕು ॥೫॥

ಶ್ರೀವಸಿಷ್ಠ ಉವಾಚ.

ಸ್ಪನ್ದಾಸ್ಪನ್ದಸ್ವಭಾವಂ ಹಿ ಚಿನ್ಮಾತ್ರಮಿಹ ವಿದ್ಯತೇ ।
ಖೇ ವಾತಇವ ತತ್ ಸ್ಪನ್ದಾತ್ ಸೋಲ್ಲಾಸಂ ಶಾನ್ತಮನ್ಯಥಾ ॥೬॥
ಚಿತ್ತ್ವಂ ಚಿತ್ತಂ ಭಾವಿತಂ ಸತ್ ಸ್ಪನ್ದ ಇತ್ಯುಚ್ಯತೇ ಬುಧೈಃ ।
ದೃಶ್ಯತ್ವಾಭಾವಿತಂ ಚೈತತ್ ಅಸ್ಪನ್ದನಮಿತಿ ಸ್ಮೃತಮ್ ॥೭॥
ಸ್ಪನ್ದಾತ್ ಸ್ಫುರತಿ ಚಿತ್ಸರ್ಗೋ ನಿಸ್ಪನ್ದಾದ್ಬ್ರಹ್ಮ ಶಾಶ್ವತಮ್ ।
ಜೀವಕಾರಣಕರ್ಮಾದ್ಯಾ ಚಿತ್ಸ್ಪನ್ದಸ್ಯಾಭಿಧಾ ಸ್ಮೃತಾ ॥೮॥
ಯಏವಾನುಭವಾತ್ಮಾಯಂ ಚಿತ್ಸ್ಪನ್ದೋಸ್ತಿ ಸಏವ ಹಿ ।
ಜೀವಕಾರಣಕರ್ಮಾಖ್ಯೋ ಬೀಜಮೇತದ್ಧಿ ಸಂಸೃತೇಃ ॥೯॥
ಕೃತದ್ವಿತ್ವಚಿದಾಭಾಸವಶಾದ್ದೇಹಮುಪಸ್ಥಿತಮ್ ।
ಸಙ್ಕಲ್ಪಾದ್ವಿವಿಧಾರ್ಥತ್ವಂ ಚಿತ್ಸ್ಪನ್ದೋ ಯಾತಿ ಸೃಷ್ಟಿಷು ॥೧೦॥

ಶ್ರೀವಸಿಷ್ಠರು ಸಮಾಧಾನ ಹೇಳುವರು:—

ಅಯ್ಯಾ ! ರಾಮ ! ನಿನ್ನ ಪ್ರಶ್ನೆಗೆ ಸಮಾಧಾನವನ್ನು ತಿಳಿಯುವವನಾಗು. ಆಕಾಶದಲ್ಲಿ ವಾಯುವಿರುವಂತೆ, ಚಿನ್ಮಾತ್ರರೂಪವಾದ ಬ್ರಹ್ಮವು, ಸ್ಪಂದ(ಚಲನೆ)ಸ್ವಭಾವವುಳ್ಳದಾಗಿಯೂ ಅಸ್ಪಂದ(ಚಲನೆಯಿಲ್ಲದಿರುವಿಕೆ)ಸ್ವಭಾವವುಳ್ಳದಾಗಿಯೂ ಇರುವುದು. ಈರೀತಿಯಾಗಿ ಈ ಯೆರಡು ಸ್ವಭಾವವುಳ್ಳ ಬ್ರಹ್ಮವಸ್ತುವು, ಸ್ಪಂದಸ್ವಭಾವವನ್ನು ತೋರ್ಪಡಿಸಿದಾಗ, ಪ್ರಪಂಚಸೃಷ್ಟಿಯಲ್ಲಿ ಅಭಿಮುಖವಾದಂತೆ ಕಾಣುವುದು; ಅದಿಲ್ಲದಿದ್ದಾಗ, ಕೇವಲ ಶಾಂತವಾಗಿರುವುದು ॥೬॥

ಅದರಲ್ಲಿ ಮೊದಲನೆಯ ಪ್ರಕಾರವೇನೆಂದರೆ:— ಈ ಬ್ರಹ್ಮನಲ್ಲಿರುವ ಚಿದ್ಭಾವವೇ, ಚಿತ್ತ(ಮನಸ್ಸು)ವೆಂದು ಭಾವಿಸಲ್ಪಟ್ಟರೆ, ಅದನ್ನೇ ಸ್ಪಂದವೆಂದು ಪ್ರಾಜ್ಞರು ಹೇಳುವರು. ದ್ವಿತೀಯ ಪ್ರಕಾರವೇನೆಂದರೆ:— ಆ ಚಿದ್ಭಾವವೇ ದೃಶ್ಯರೂಪವಾಗಿ ಭಾವಿಸಲ್ಪಡದಿದ್ದಾಗ ಅಸ್ಪಂದವೆನ್ನಿಸಲ್ಪಡುವುದು ॥೭॥

ಅಂತು, ಆ ಚಿತ್ಪದಾರ್ಥವೇ, ಸ್ಪಂದಕಾಲದಲ್ಲಿ ಪ್ರಪಂಚರೂಪವಾಗಿ ಸ್ಫುರಿಸುವುದು; ಸ್ಪಂದವಿಲ್ಲದಿದ್ದಾಗ ಶಾಶ್ವತಬ್ರಹ್ಮರೂಪವಾಗಿಯೇ ಇರುವುದು. ಹೀಗಿರುವುದರಿಂದ, ಜೀವನಿಗೆ ಜನ್ಮ ಮರಣಾದಿಕಾರಣಭೂತವಾದ ದೈವ ಕರ್ಮ ಮುಂತಾದುದೆಲ್ಲವೂ ಚಿತ್ತಿನ ಸ್ಪಂದಕ್ಕೇ ನಾಮಾಂತರಗಳೆಂದು ಪ್ರಾಜ್ಞರು ಹೇಳಿರುವರು. ಅದರಲ್ಲಿ, ಪ್ರಾಣಸ್ಪಂದವೆಂದು ಹೇಳುವಾಗ ಜೀವನೆಂದೂ, ಬ್ರಹ್ಮನಲ್ಲಂತರ್ಗತವಾಗಿರುವ ಕಾರ್ಯಗಳಾವಿರ್ಭವಿಸುವಾಗ ಕಾರಣವೆಂದೂ, ಶರೀರಾದಿರೂಪ ಸ್ಪಂದಕಾಲದಲ್ಲಿ ಕರ್ಮವೆಂದೂ, ಫಲಾರಂಭೋನ್ಮುಖವಾದಾಗ ದೈವವೆಂದೂ ಹೇಳಲ್ಪಡುವುದು॥

ಅಯ್ಯಾ ! ರಾಮ ! ಸ್ವಾನುಭವಸ್ವರೂಪವಾಗಿರುವ ಚಿತ್ತಿನ ಸ್ಪಂದವಾವುದುಂಟೋ, ಅದಕ್ಕೆ ಜೀವ ಕಾರಣ ಕರ್ಮ ಎಂಬ ನಾಮಧೇಯಗಳಿರುವುವು. ಇದೇ ಸಂಸಾರಕ್ಕೆ ಬೀಜವು ॥೯॥

ನೀನು ಹಿಂದೆ 'ಕಥಂ ವಾಸ್ಮಿನ್ ಸಮುತ್ಪನ್ನಃ' ಇತ್ಯಾದಿರೀತಿಯಾಗಿ, ಈ ಪ್ರಪಂಚದಲ್ಲಿ ಪುನಃಪುನಃ ಜೀವಸೃಷ್ಟಿಯಾಗುವ ಬಗೆಯನ್ನು ಪ್ರಶ್ನೆಮಾಡಿದೆಯಲ್ಲವೆ ! ಈಗ ಅದಕ್ಕೆ ಉತ್ತರವನ್ನು ಕೇಳುವವನಾಗು:— ಆಯಾ ಕರ್ಮಾನುಸಾರವಾಗಿ ಹಿಂದಣ ಜನ್ಮದಲ್ಲಿ ಮರಣಕಾಲದಲ್ಲಿ ಅವರವರ ಬುದ್ಧಿಯೊಳಗೆ ದೇವತಿರ್ಯಙ್ಮನುಷ್ಯಾದಿ ದೇಹಗಳುಪಸ್ಥಿತವಾಗುವುವು. ಬಳಿಕ, ಆ ಚಿತ್ತೇ ಸಂಕಲ್ಪಾನುಸಾರವಾಗಿ ನಾನಾವಿಧವಾದ ಭೋಗ್ಯವಸ್ತುದಶೆಯನ್ನು ಅನುಭವಿಸುವುದು ॥೧೦॥

ನಾನಾಕಾರಣತಾಂ ಯಾತಃ ಚಿತ್ಸ್ಪಂದೋ ಮುಚ್ಯತೇ ಚಿರಾತ್ |
ಕಶ್ಚಿಜ್ಜನ್ಮಸಹಸ್ರೇಣ ಕಶ್ಚಿದೇಕೇನ ಜನ್ಮನಾ ||೧೧||
ಸ್ವಭಾವಾತ್ ಕಾರಣಾದ್ವಿತ್ವಂ ಚಿತ್ಸಮೇತ್ಯಧಿಗಚ್ಛತಿ |
ಸ್ವರ್ಗಾಪವರ್ಗನರಕಬನ್ಧಕಾರಣತಾಂ ಶನೈಃ ||೧೨||
ಹೇಮ್ನೀವ ಕಟತಾದಿತ್ವಂ ಕಾಷ್ಠಲೋಷ್ಟಸಮಸ್ಥಿತೌ |
ದೇಹೇ ತಿಷ್ಠತಿ ನಾನಾತ್ವಂ ಜಡೇ ಭಾವವಿಕಾರಜಮ್ ||೧೩||
ಅಜಾತಮಪ್ಯಸದ್ರೂಪಂ ಪಶ್ಯತೀದಂ ಮನೋಭ್ರಮಃ |
ಜಾತಃ ಸ್ಥಿತೋ ಮೃತೋಽಸ್ಮೀತಿ ಭ್ರಮಾರ್ತಃ ಪತನಂ ಯಥಾ ||೧೪||

ಹೀಗೆಯೇ ಈ ಚಿತ್ಸ್ಪಂದರೂಪನಾದ ಜೀವನು, ನಾನಾವಿಧವಾದ ಯೋನಿಗಳನ್ನು ತನ್ನ ಜನ್ಮಕ್ಕೆ ಕಾರಣವನ್ನಾಗಿ ಹೊಂದಿ, ಅನೇಕ ಕಾಲ ಕಳೆದಬಳಿಕ ಮುಕ್ತನಾಗುವನು. ಆದರಲ್ಲಿ, ಒಬ್ಬ ಜೀವನು ಸಾವಿರಾರು ಜನ್ಮಗಳನ್ನನುಭವಿಸಿ ಮುಕ್ತನಾಗುವನು; ಇನ್ನೊಬ್ಬ ಜೀವನು ಒಂದೇ ಜನ್ಮದಲ್ಲಿಯೇ ಮುಕ್ತನಾಗುವನು ||೧೧||

ಜೀವನು ತನ್ನುತ್ಪತ್ತಿಗೆ ನಾನಾಯೋನಿಗಳನ್ನು ಕಾರಣವನ್ನಾಗಿಮಾಡಿಕೊಳ್ಳುವ ಬಗೆಯನ್ನು ಕೇಳು:—ಬೆಳಕು ಇರುವುದಲ್ಲವೆ! ಅದು, ಕಪ್ಪುಬಟ್ಟೆಯಲ್ಲಿ ಪ್ರಸರಿಸಿದಾಗ ಕಪ್ಪಾಗಿಯೂ, ಕೆಂಪುಬಟ್ಟೆಯಮೇಲೆ ಬಿದ್ದಾಗ ಕೆಂಪಾಗಿಯೂ, ಹೀಗೆಯೇ ಆಯಾ ಪದಾರ್ಥಸಂಬಂಧಾನುಗುಣವಾದ ವರ್ಣವುಳ್ಳದಾಗುವುದಿಲ್ಲವೆ! ಇದು ಬೆಳಕಿನ ಸ್ವಭಾವವು. ಹೀಗೆಯೇ, ಚಿತ್ಪದಾರ್ಥವೂ ಕೂಡ, ಯಾವ ಉಪಾಧಿಯೊಡನೆ ಸಂಬಂಧವುಳ್ಳದಾಗುವುದೋ- ಆರೀತಿಯಾಗಿಯೇ ಸ್ಫುರಿಸುವುದು. ಇದು ಚಿತ್ತಿನ ಸ್ವಭಾವವು. ಇಂತಹ ಸ್ವಭಾವವಿರುವುದರಿಂದ, ಆ ಚಿತ್ಪದಾರ್ಥವು, ದೇಹೋತ್ಪತ್ತಿಗೆ ಕಾರಣವಾದ ಅನ್ನರಸಾದಿಗಳೊಡನೆಯೂ ಮಾತಾಪಿತ್ರಾದಿ ಶರೀರಗಳೊಡನೆಯೂ ಸಂಬಂಧಹೊಂದಿ, ಕೊನೆಗೆ ಆಯಾ ಉಪಾಧಿಗನುಗುಣವಾಗಿ ಅವುಗಳೊಡನೆ ಏಕೀಭವಿಸಿಬಿಟ್ಟು, ಕ್ರಮೇಣ—ಸ್ವರ್ಗ ನರಕ ಬಂಧ ಮೋಕ್ಷ ಮುಂತಾದುವುಗಳಿಗೆ ತಾನೇ ಕಾರಣವಾಗುವುದು||೧೨||

ಸುವರ್ಣದಲ್ಲಿ ಕಟಕಾದಿ ರೂಪವಿರುವಂತೆ, ಕಾಷ್ಠಲೋಷ್ಟ(ಮಣ್ಣುಹೆಂಟೆ)ಸಮವಾಗಿರುವ ಈ ಜಡವಾದ ದೇಹದಲ್ಲಿ ನಾನಾತ್ವ(ಅನೇಕವಾಗಿರುವಿಕೆ)ವಿರುವುದು; ಈ ನಾನಾತ್ವವು (ಭೇದ) ಷಡ್ಭಾವವಿಕಾರ(೧)ಜನ್ಯವಾದುದು. ಹೀಗಿರುವುದರಿಂದ, ಉಪಾಧಿಗಳು ಏಕೀಭವಿಸಿರುವಾಗ ಜೀವಗಳಲ್ಲಿ ಭೇದವು ಕಾಣುವುದಿಲ್ಲವೆಂದೂ, ಅವು ಪೃಥಕ್ಕಾಗಿರುವಾಗ ಭೇದಜ್ಞಾನವುಂಟಾಗುವುದೆಂದೂ ಗೊತ್ತಾಗುವುದು. ಅದುಕಾರಣ, ಈ ಜೀವಬೇಧವು ಉಪಾಧಿಯ ಧರ್ಮವೇ ಹೊರತು, ಚೈತನ್ಯದ ಧರ್ಮವಲ್ಲವೆಂದು ತಿಳಿಯಬೇಕು ||೧೩||

ಹೀಗೆ ಈ ಭೇದರೂಪವು ವಸ್ತುತಃ ಅಸತ್ಯವಾಗಿದ್ದರೂ, ಮನಸ್ಸಿನ ಭ್ರಾಂತಿಯು ಅದನ್ನು ಸತ್ಯವಾಗಿರುವಂತೆ ತಿಳಿದುಕೊಳ್ಳುವುದು. ಪಿತ್ತವೇರಿ ತಲೆಸುತ್ತಿದವನು ತಾನು ಬೀಳುತಿರುವೆನೆಂದು ತಿಳಿದುಕೊಳ್ಳುವಂತೆ, ಈ ಭ್ರಾಂತಿಯಿಂದಲೇ, ಹುಟ್ಟಿದೆನೆಂದೂ ಇರುವೆನೆಂದೂ ನಾನಾವಿಧವಾದ ಜ್ಞಾನವುಂಟಾಗುವುದು ||೧೪||

---

1. ಷಡ್ಭಾವವಿಕಾರ:—ಅಸ್ತಿ, ಜಾಯತೇ,ವಿಪರಿಣಮತೇ, ವರ್ಧತೇ, ಅಪಕ್ಷೀಯತೇ, ನಶ್ಯತಿ, ಅಂದರೆ,—ಇರುವುದು, ಹುಟ್ಟುವುದು, ರೂಪಾಂತರಹೊಂದುವುದು, ಬೆಳೆಯುವುದು, ಕ್ಷಯಿಸುವುದು, ನಶಿಸುವುದು.

ಅಹಂ ಮಮೇತ್ಯಸದ್ರೂಪಮೇವ ಚೇತಃ ಪ್ರಪಶ್ಯತಿ ।
ಅದೃಷ್ಟಪರಮಾರ್ಥತ್ವಾತ್ ಆಶಾವಿವಶಸಂಸ್ಥಿತಿ ॥೧೫॥
ಮಥುರಾಧಿಪತೇರಾಜ್ಞೋ ಯಥಾ ಶ್ವಪಚಸಂಭ್ರಮಃ ।
ಆಸೀದೇವಂ ಹಿ ಚಿತ್ತಸ್ಯ ಸ್ಫುರತೀಯಂ ಜಗತ್ಸ್ಥಿತಿಃ ॥೧೬॥
ಸರ್ವಮೇವ ಮನೋಮಾತ್ರಭ್ರಾಂತ್ಯುಲ್ಲಾಸವಿಜೃಂಭಣಮ್ ।
ಇದಂ ಜಗತ್ತಯಾ ರಾಮ ಪ್ರಸ್ಫುರತ್ಯಂಬುಭಙ್ಗವತ್ ॥೧೭॥
ಶಿವಾತ್ ಪ್ರಾಕ್ಕಾರಣಾತ್ ಪೂರ್ವಂ ಚಿಚ್ಚೇತ್ಯಕಲನೋನ್ಮುಖೀ ।
ಉದೇತಿ ಸೌಮ್ಯಾಜ್ಜಲಧೇಃ ಪಯಸ್ಸ್ಪನ್ದೋ ಮನಾಗಿವ ॥೧೮॥
ಸ್ಫುರಣಾಜ್ಜೀವಚಕ್ರತ್ವಂ ಏತಿ ಚಿತ್ತೋರ್ಮಿತಾಂ ದಧತ್ ।
ಚಿದ್ವಾರಿ ಬ್ರಹ್ಮಜಲಧೌ ಕುರುತೇ ಸರ್ಗಬುದ್ಬುದಾನ್ ॥೧೯॥
ಸ್ವಸ್ಥಃ ಸೌಮ್ಯ ಸಮಸ್ಯೈತತ್ ಯತ್ ಸಿಂಹಸ್ಯ ವಿಜೃಂಭಣಮ್ ।
ಬ್ರಹ್ಮಣಃ ಸಂವಿದಾಭಾಸಃ ತತ್ ಸಞ್ಚೇತ್ಯಮಿವ ಸ್ವಯಮ್ ॥೨೦॥
ಚಿತ್ಸಂವಿತ್ತ್ಯೋಚ್ಯತೇ ಜೀವಃ ಸಙ್ಕಲ್ಪಾತ್ ಸ ಮನೋ ಭವೇತ್ ।

ಮುಖ್ಯವಾಗಿ, ಸಮಸ್ತವಾದ ಭೇದಜ್ಞಾನಕ್ಕೂ ಅಹಂಕಾರಮಮಕಾರಗಳು ಕಾರಣವಾಗುವುವು; ಇವು ವಸ್ತುತಃ ಇಲ್ಲದಿದ್ದರೂ, ಮನಸ್ಸು ಇವುಗಳನ್ನು ಕಲ್ಪಿಸಿಕೊಳ್ಳುವುದು; ಪೂರ್ಣಾತ್ಮಸ್ವರೂಪಜ್ಞಾನವಿಲ್ಲದಿರುವಿಕೆಯೇ ಈ ಕಲ್ಪನೆಗೆ ಕಾರಣವು; ವಿಷಯಭೋಗದಲ್ಲಿಚ್ಛೆಯುಂಟಾಗುವುದರಿಂದ, ಈ ಬ್ರಹ್ಮವಿಚಾರಕ್ಕವಕಾಶವೇ ಇಲ್ಲದಂತಾಗುವುದು ॥೧೫॥

ವತ್ಸ! ಮಥುರಾಪತಿಯಾದ ಲವಣನೆಂಬ ದೊರೆಗೆ ಶ್ವಪಚನೆಂಬ ಭ್ರಾಂತಿಯುಂಟಾದಂತೆ, ಚಿತ್ತಕ್ಕೆ ಈ ಜಗತ್ತಿನ ಸ್ಥಿತಿ ಸ್ಫುರಿಸುವುದು. (ಈವುಪಾಖ್ಯಾನವು ಮುಂದಿರುವುದು) ॥೧೬॥

ರಾಮ! ಜಲವು ತರಂಗರೂಪವಾಗಿ ಸ್ಫುರಿಸುವಂತೆ, ಕೇವಲ ಮನೋಭ್ರಾಂತಿಮಾತ್ರವಿಲಾಸದಿಂದುಂಟಾದ ಈ ಸಂಭ್ರಮವು ಜಗದ್ರೂಪವಾಗಿ ಸ್ಫುರಿಸುವುದು ॥೧೭॥

ಇದೇ ವಿಷಯವನ್ನು ಇನ್ನೂ ವಿಶದವಾಗಿ ಕೇಳುವವನಾಗು:—ಸ್ತಬ್ಧವಾಗಿರುವ ಸಮುದ್ರದದೆಸೆಯಿಂದ ಸ್ವಲ್ಪವಾಗಿ ಜಲಸ್ಪಂದ ಹುಟ್ಟುವಂತೆ, ಜಗತ್ಕಾರಣವಾಗಿರುವ ಮಂಗಳಸ್ವರೂಪವಾದ ಪರಬ್ರಹ್ಮನದೆಸೆಯಿಂದ ಚೇತ್ಯಕಲ್ಪನೆಯಲ್ಲಭಿಮುಖವಾಗಿ ಜೀವಚೈತನ್ಯವುದಯಿಸುವುದು॥

ಹೀಗೆ, ಆ ಚೈತನ್ಯವೇ, ಸ್ವಯಂ ಸ್ಫುರಣೆಹೊಂದುವುದರದ್ವಾರಾ ಜೀವರೂಪೇಣ ಭಾಸಿಸುವುದು, ಆಗ, ಪರಬ್ರಹ್ಮನೆಂಬ ಸಮುದ್ರದೊಳಗೆ ಜ್ಞಾನವೆಂಬ ಜಲವು, ಜೀವಗಳೆಂಬ ಸುಳಿಯಾಗಿಯೂ, ಚಿತ್ತವೆಂಬ ಆಲೆಯಾಗಿಯೂ ತೋರುತ, ಸೃಷ್ಟಿಗಳೆಂಬ ಗುಳ್ಳೆಗಳನ್ನು ಹುಟ್ಟಿಸುವುದು ॥೧೯॥

ಎಲೈ ಸೌಮ್ಯನಾದ ರಾಮನೆ! ಅಜ್ಞಾನನಾಶಕನಾಗಿಯೂ ಸರ್ವತ್ರ ಸಮನಾಗಿಯೂ ಇರುವ ಪರಬ್ರಹ್ಮನು—ತನ್ನಲ್ಲಿ ತಾನೇ ಮಾಯೋಪಾಧಿಯಿಂದ ಸ್ವಲ್ಪವಾಗಿ ಮಾಡುವ ವಿಜೃಂಭಣೆ ಯಾವುದುಂಟೋ, ಅದೇ-ಅಜ್ಞಾನಾಭಾಸವೇ-ಚೇತನೀಯ(ಪ್ರಪಂಚ)ರೂಪವಾಗಿ ಕಾಣುವುದು ॥

ಅಯ್ಯಾ! ರಾಮ! ಈಗ ಬ್ರಹ್ಮನು ಉಪಾಧಿಭೇದದಿಂದ ರೂಪಭೇದಪಡೆಯುವ ಬಗೆಯನ್ನು ಕೇಳು:—ಬ್ರಹ್ಮನು-ಚಿದಾಭಾಸರೂಪನೆಂದು ತಿಳಿದಾಗ ಜೀವನೆಂದೂ, ಸಂಕಲ್ಪಕಾಲ

ಬುದ್ಧಿಶ್ಚಿತ್ತಮಹಙ್ಕಾರೋ ಮಾಯೇತ್ಯಾದ್ಯಭಿಧಂ ತತಃ ||೨೧||
ತನ್ಮಾತ್ರಕಲ್ಪನಾಪೂರ್ವಂ ತನೋತೀದಂ ಜಗನ್ಮನಃ |
ಅಸತ್ಯಂ ಸತ್ಯಸಙ್ಕಾಶಂ ಗನ್ಧರ್ವನಗರಂ ಯಥಾ ||೨೨||
ಯಥಾ ಶೂನ್ಯೇ ದೃಶಃ ಸ್ಫಾರಾತ್ ಮುಕ್ತಾವಲ್ಯಾದಿದರ್ಶನಮ್ |
ಯಥಾ ಸ್ವಪ್ನೇ ಭ್ರಮಶ್ಚೈವ ತಥಾ ಚಿತ್ತಸ್ಯ ಸಂಸೃತಿಃ ||೨೩||
ಶುದ್ಧ ಆತ್ಮಾ ನಿತ್ಯತೃಪ್ತ ಇವ ಶಾನ್ತಃ ಸಮಃ ಸ್ಥಿತಃ |
ಅಪಶ್ಯನ್ ಪಶ್ಯತೀವೇಮಂ ಚಿತ್ತಾಖ್ಯಂ ಸ್ವಪ್ನವಿಭ್ರಮಮ್ ||೨೪||
ಸಂಸೃತಿರ್ಜಾಗ್ರದಿತ್ಯುಕ್ತಂ ಸ್ವಪ್ನಂ ವಿದುರಹಙ್ಕೃತಿಮ್ |
ಚಿತ್ತಂ ಸುಷುಪ್ತಭಾವಃ ಸ್ಯಾತ್ ಚಿನ್ಮಾತ್ರಂ ತುರ್ಯಮುಚ್ಯತೇ ||೨೫||
ಅತ್ಯನ್ತಶುದ್ಧೇ ಸನ್ಮಾತ್ರೇ ಪರಿಣಾಮನಿರಾಮಯಮ್ |
ತುರ್ಯಾತೀತಂ ಪದಂ ತತ್ ಸ್ಯಾತ್ತತ್ಸ್ಥೋ ಭೂಯೋ ನ ಶೋಚತಿ||೨೬||

ದಲ್ಲಿ ಮನಸ್ಸೆಂದೂ, ವ್ಯವಸಾಯಕಾಲದಲ್ಲಿ ಬುದ್ಧಿಯೆಂದೂ, ಸ್ಮರಣಕಾಲದಲ್ಲಿ ಚಿತ್ತವೆಂದೂ, ಅಭಿಮಾನಕಾಲದಲ್ಲಿ ಅಹಂಕಾರವೆಂದೂ, ಇನ್ನೂ ಹೀಗೆಯೇ ಆಯಾ ಉಪಾಧಿಗಳಿಗನುಗುಣವಾಗಿ ನಾನಾವಿಧ ನಾಮಧೇಯಗಳನ್ನು ಪಡೆಯುವನು ||೨೧||

ಇವುಗಳೊಳಗೆ, ಸಂಕಲ್ಪಪ್ರಧಾನವಾಗಿ ಮನಸ್ಸೆಂದು ಹೆಸರು ಪಡೆದಿರುವ ಚೈತನ್ಯವು, ಪಂಚತನ್ಮಾತ್ರ ಕಲ್ಪನಾಪೂರ್ವಕವಾಗಿ, ಗಂಧರ್ವನಗರದಂತೆ ಅಸತ್ಯವಾಗಿದ್ದರೂ ಸತ್ಯದಂತೆ ಕಾಣುತಿರುವ ಈ ಜಗತ್ತನ್ನು ಸೃಜಿಸುವುದು ||೨೨||

ಶೂನ್ಯವಾಗಿರತಕ್ಕ ಆಕಾಶದೊಳಗೆ ನೇತ್ರಪ್ರಸರಣ ಮಾಡಿದರೆ, ಮುಕ್ತಾಸರ ಮುಂತಾದುವು ಹೇಗೆ ಕಾಣಿಸುವುವೋ, ಸ್ವಪ್ನಕಾಲಿಕವಾದ ಭ್ರಮೆ ಹೇಗೆ ಸ್ಫುರಿಸುವುದೋ, ಹಾಗೆ ಚಿತ್ತಕಲ್ಪನೆಯಿಂದ ಈ ಜಗತ್ತು ಸ್ಫುರಿಸುವುದು ||೨೩||

ಹೀಗಿದ್ದರೂ, ಆ ಪರಮಾತ್ಮನು ಕೇವಲ ಶುದ್ಧನಾಗಿಯೇ ಇರುವನು ; ಇವನು—ನಿತ್ಯತೃಪ್ತನಾಗಿಯೂ ಶಾಂತನಾಗಿಯೂ ಸರ್ವತ್ರ ಸಮನಾಗಿಯೂ ಇರುವನು ; ಇವನು, ಈ ಚಿತ್ತವೆಂಬ ಸ್ವಪ್ನವಿಭ್ರಮನ್ನು, ವಸ್ತುತಃ ಅನುಭವಿಸದಿರತಕ್ಕವನಾಗಿದ್ದರೂ, ಅನುಭವಿಸತಕ್ಕವನಂತೆ ತೋರುವನು ||೨೪||

ಈ ಪರಬ್ರಹ್ಮನಿಗೂ ಜಾಗ್ರದಾದಿ ನಾಲ್ಕು ಅವಸ್ಥೆಗಳುಂಟು. ಇಂದ್ರಿಯದ್ವಾರದಿಂದ ಹೊರಗೆ ಪ್ರಸರಿಸುವಿಕೆಯೇ ಜಾಗ್ರದವಸ್ಥೆಯು ; ಅಂತರ್ಭಾಗದಲ್ಲಿ ಅಹಂಕಾರವಾಸನೆಯನ್ನೇ ಸ್ವಪ್ನವೆಂದು ಹೇಳುವರು ; ಸ್ಮೃತಿಬೀಜವಾದ ವಾಸನಾಮಾತ್ರ ಶೇಷವಾಗಿ ಚಿತ್ತರೂಪದಿಂದಿರುವಿಕೆಯೇ ಸುಷುಪ್ತಿಯೆನ್ನಿಸುವುದು ; ಇದೆಲ್ಲವನ್ನೂ ಅತಿಕ್ರಮಿಸಿ ಕೇವಲ ಚಿನ್ಮಾತ್ರಾವಸ್ಥೆಯಲ್ಲಿರುವಿಕೆಯೇ ತುರ್ಯವೆಂದು ಹೇಳಲ್ಪಡುವುದು ||೨೫||

ಈರೀತಿಯಾಗಿ ನಿರೂಪಿಸಲ್ಪಟ್ಟಿರುವ ಬ್ರಹ್ಮಪದಾರ್ಥವನ್ನು ಪರಿಶೋಧನೆ ಮಾಡಿ, ಅತ್ಯಂತ ಶುದ್ಧವಾಗಿ ಕೇವಲ ಸತ್ತಾಮಾತ್ರ ಗೋಚರವಾಗಿರುವ ಆ ಬ್ರಹ್ಮವಸ್ತುಗಳಲ್ಲಿ ತದಾಕಾರೇಣ ಪರಿಣಮಿಸಿ ನಿರ್ಬಾಧವಾಗಿ ಸ್ಥಿತಿಯನ್ನು ಪಡೆಯುವಿಕೆ ಯಾವುದುಂಟೋ, ಅದು ತುರ್ಯಾತೀತವೆನ್ನಿಸುವುದು. ಈ ಸ್ಥಿತಿಯನ್ನು ಹೊಂದಿದ ಬಳಿಕ, ಮತ್ತೆ ದುಃಖಮಯವಾದ ಈ ಸಂಸಾರಮಾರ್ಗವನ್ನು ಹೊಂದುವುದಿಲ್ಲ ||೨೬||

ತಸ್ಮಿನ್ ಸರ್ವಮುದೇತೀದಂ ತಸ್ಮಿನ್ನೇವ ಪ್ರಲೀಯತೇ |
ನ ಚೇದಂ ನ ಚ ತತ್ರೇದಂ ದೃಷ್ಟೌ ಮುಕ್ತಾವಳೀ ಯಥಾ ||೧೭||
ಅರೋಧಕತ್ವಾತ್ ಖಂ ಹೇತುಃ ಯಥಾ ವೃಕ್ಷಸಮುನ್ನತೇಃ |
ಅಕರ್ತಾಪಿ ತಥಾ ಕರ್ತಾ ಚೇತನಾಬ್ಧಿರ್ಜಗತ್ಸ್ಥಿತೇಃ ||೧೮||
ಸನ್ನಿಧಾನಾದ್ಯಥಾ ಲೌಹಃ ಪ್ರತಿಬಿಮ್ಬಸ್ಯ ಹೇತುತಾಮ್ |
ಯಾತ್ಯಾದರ್ಶಸ್ತಥೈವಾಯಂ ಚಿನ್ಮಯೋಽಪ್ಯರ್ಥವೇದನೇ ||೧೯||
ಬೀಜಮಙ್ಕುರಪತ್ರಾದಿಯುಕ್ತ್ಯಾ ಯದ್ವತ್ ಫಲಂ ಭವೇತ್ |
ಚಿನ್ಮಾತ್ರಂ ಚಿತ್ತಜೀವಾದಿಯುಕ್ತ್ಯಾ ತದ್ವನ್ಮನೋ ಭವೇತ್ ||೨೦||
ಸ್ವತೋ ಬೀಜಫಲಾ ವಿಪ್ರುಟ್ ಯಥಾ ಬೀಜಂ ಪುನರ್ಭವೇತ್ |
ತಥಾ ಚಿಚ್ಛೇತ್ಯಚಿತ್ತಾದಿ ತ್ಯಕ್ತ್ವಾ ಸ್ವಸ್ಥಾ ನ ತಿಷ್ಠತಿ ||೨೧||

ಆ ಬ್ರಹ್ಮನೊಳಗೆ ಇದೆಲ್ಲವೂ ಉದಯಹೊಂದುವುದು; ಅದರಲ್ಲಿಯೇ ಲಯಹೊಂದುವುದು; ನಮ್ಮ ದೃಷ್ಟಿದೋಷದಿಂದ ಅಂತರಿಕ್ಷದಲ್ಲಿ ಕಾಣಿಸುವ ಮುಕ್ತಾಸರವು ವಸ್ತುತಃ ಶೂನ್ಯವಾಗಿರುವಂತೆ, ಈ ಜಗತ್ತೂ ಸುಳ್ಳು; ಇದು ಬ್ರಹ್ಮನೊಳಗಿರುವುದೂ ಸುಳ್ಳು ||೧೭||

'ಹೀಗೆ ಬ್ರಹ್ಮನು ಸುತರಾಂ ಜಗತ್ಸಂಬಂಧಶೂನ್ಯನಾಗಿದ್ದಪಕ್ಷದಲ್ಲಿ, ಬ್ರಹ್ಮನು ಜಗತ್ಕರ್ತನೆಂದು ಸರ್ವಶಾಸ್ತ್ರಗಳೂ ಹೇಳುತಿರುವುದು ಹೇಗೆ?' ಎಂದು ಕೇಳಿದರೆ,—ಒಂದು ವೃಕ್ಷ ಬೆಳೆಯುವುದಕ್ಕೆ ಆಕಾಶವವಶ್ಯವಾಗಿ ಬೇಕಷ್ಟೆ! ಆದರೆ, ವಿಚಾರಮಾಡಿ ನೋಡಿದರೆ, ಆಕಾಶವು ಯಾವವಿಧವಾಗಿಯೂ ವೃಕ್ಷ ಬೆಳೆಯುವುದಕ್ಕೆ ಕಾರಣವೇ ಅಲ್ಲ. ಆದರೂ, ಅದು ವೃಕ್ಷ ಬೆಳೆಯುವಾಗ ತಡೆಯುಂಟಾಗದಂತೆ ಸಹಾಯಮಾಡುವುದು; ಇಷ್ಟರಿಂದಲೇ, ಆಕಾಶವು ವೃಕ್ಷೋನ್ನತಿಗೆ ಹೇತುವೆನ್ನಲ್ಪಡುವುದು. ಹೀಗೆಯೇ, ಜ್ಞಾನನಿಧಿಯಾದ ಪರಬ್ರಹ್ಮನು, ಈ ಪ್ರಪಂಚಸ್ಥಿತಿಗೆ ತಾನು ಕರ್ತೃವಲ್ಲದಿದ್ದರೂ, ಮಾಯೆಯಿಂದ ಮಾಡಲ್ಪಡುವ ಸೃಷ್ಟಿಗೆ ಪ್ರತಿರೋಧಕನಾಗದಿರುವುದರಿಂದ ಮಾತ್ರವೇ ಕರ್ತೃವೆನ್ನಲ್ಪಡುವನು ||೧೮||

ಲೋಹಮಯವಾದ ದರ್ಪಣವು ಎಲ್ಲಿಯೋ ಒಂದುಕಡೆಯಿದ್ದಾಗ, ಅದು ಯಾವಶಕ್ತಿಯೂ ಇಲ್ಲದಿರುವುದು; ಅದೇ ದರ್ಪಣವು, ಹತ್ತಿರದಲ್ಲಿಡಲ್ಪಟ್ಟಾಗ, ಪ್ರತಿಬಿಂಬಿಸುವುದಕ್ಕೆ ಕಾರಣವಾಗುವುದು. ಹೀಗೆಯೇ, ಚಿನ್ಮಯನಾದ ಪರಮಾತ್ಮನು, ಸ್ವಯಂ ಯಾವ ಗುಣವೂ ಇಲ್ಲದಿರುವನು; ಮಾಯಾಸಾಮೀಪ್ಯವುಂಟಾದಾಗ, ವಿಷಯಜ್ಞಾನಹೇತುವಾಗುವನು ||೧೯||

ಆದರೆ, ಎಲ್ಲವೂ ಏಕಕಾಲದಲ್ಲಿ ಸಂಭವಿಸಲಾರದು. ಒಂದು ಬೀಜವು, ಪ್ರಥಮತಃ ಅಂಕುರವಾಗಿ, ಬಳಿಕ ಪತ್ರ ಪುಷ್ಪ ಮುಂತಾದ ಕ್ರಮದಿಂದ, ಕೊನೆಗೆ ಫಲವೆನ್ನಿಸಿಕೊಳ್ಳುವುದಲ್ಲವೆ! ಹೀಗೆ ಚಿನ್ಮಾತ್ರವಾದ ಆ ಪರಬ್ರಹ್ಮವಸ್ತುವು, ಚಿತ್ತ ಜೀವ ಇತ್ಯಾದಿ ಕ್ರಮದಿಂದ ಕೊನೆಗೆ ಮನಸ್ಸೆನ್ನಿಸಿಕೊಳ್ಳುವುದು ||೨೦||

'ಪ್ರಳಯಕಾಲದಲ್ಲಿ ಸಮಸ್ತವೂ ಲಯಹೊಂದಿದಮೇಲೆ, ಚೈತನ್ಯವೂ ಹಾಗೆಯೇ ಕೇವಲವಾಗಿ ಏಕಿರಕೂಡದು?' ಎಂದರೆ,—ಮಳೆಯನೀರಿನ ಹನಿಯು, ಸ್ವಯಂ ಬೀಜ ಫಲಾದ್ಯಂಶಯುಕ್ತವಾಗಿ ವೃಕ್ಷಲತೆಗಳಲ್ಲಿ ಪ್ರವೇಶಿಸಿ, ಅಲ್ಲಿ ಪುಷ್ಪಫಲಾದಿ ರೂಪಗಳನ್ನನುಭವಿಸಿ, ಮತ್ತೆ ಬೀಜವಾಗುವುದಲ್ಲವೆ? ಅಂತು, ಆಬೀಜವು ಒಂದು ಸ್ವಲ್ಪಕಾಲವಾದರೂ ಸುಮ್ಮನಿರುವುದಿಲ್ಲವಷ್ಟೆ!

ಯದ್ಯಪ್ಯಬೋಧೇ ಬೋಧೇ ವಾ ಬೀಜಾನ್ತಸ್ತರುಬೀಜಯೋಃ ।
ಇಯಾನ್ ಭೇದೋಽಸ್ತಿ ನ ಜಗದ್ಬ್ರಹ್ಮಣೋರಪಿ ಚಿತ್ತಯೋಃ ॥೨೧॥
ತಥಾಪಿ ವ್ಯಜ್ಯತೇ ಬೋಧೇ ಸತ್ಯಾತ್ಮಕಮಖಣ್ಡಿತಮ್ ।
ರೂಪಶ್ರೀರಿವ ದೀಪೇನ ಚಿನ್ಮಾತ್ರಾಲೋಕರೂಪಿ ಯತ್ ॥೨೨॥
ಯದ್ಯನ್ನಿಖನ್ಯತೇ ಭೂಮೇಃ ಯಥಾ ತತ್ತನ್ನಭೋ ಭವೇತ್ ।
ಯಾಯಾ ವಿಚಾರ್ಯತೇಽವಿದ್ಯಾ ತಥಾ ಸಾಸಾ ಪರಂ ಭವೇತ್ ॥೨೪॥
ಸ್ಫಟಿಕಾನ್ತಃ ಸನ್ನಿವೇಶಃ ಸ್ಥಾಣುತಾಽವೇದನಾದ್ಯಥಾ ।
ಶುದ್ಧೇಽನಾನಾಪಿ ನಾನೇವ ತಥಾ ಬ್ರಹ್ಮೋದರೇ ಜಗತ್ ॥೨೫॥

ಇದರಂತೆಯೇ, ಚಿತ್ಪದಾರ್ಥವು, ಜೀವವಾಸನಾವಾಸಿತವಾಗಿರುವಾಗ, ಚೇತ್ಯ(ಪ್ರಪಂಚ) ಚಿತ್ತಮುಂತಾದುವುಗಳನ್ನು ಬಿಟ್ಟು ಸ್ವಸ್ಥವಾಗಿರುವುದಿಲ್ಲ ॥೨೧॥

ಅಯ್ಯಾ! ರಾಮ! ಈಗ ಇನ್ನೊಂದುವಿಧವಾದ ಆಶಂಕೆಯುಂಟಾಗಬಹುದಲ್ಲವೆ! ಏನೆಂದರೆ:—ಮೇಲೆ ಹೇಳಿದ ಬೀಜವೃಕ್ಷಸಾದೃಶ್ಯದಿಂದ ಇಲ್ಲಿ ವಿರೋಧವೇ ತೋರುತ್ತದೆ. ಬೀಜದಲ್ಲಿ ಸೂಕ್ಷ್ಮಾವಸ್ಥೆಯಿಂದಿರುವ ವೃಕ್ಷವನ್ನೂ ಅದರೊಳಗಿರುವ ಬೀಜವನ್ನೂ ಇತರರು ತಿಳಿದಿದ್ದರೂ— ಅಥವಾ ತಿಳಿಯದಿದ್ದರೂ, ಬೀಜಕ್ಕೆ ತನ್ನಲ್ಲಿರುವ ವೃಕ್ಷಜನನಶಕ್ತಿ(ಮರಹುಟ್ಟುವಶಕ್ತಿ)ಯೆಂದಿಗೂ ಹೋಗಲಾರದಲ್ಲವೆ! ಹಾಗೆ ಚಿತ್ತಾತ್ಮತೆಯನ್ನು ಹೊಂದಿರುವ ಜಗತ್ತು ಬ್ರಹ್ಮರುಗಳ ವಿಷಯದಲ್ಲಿಯೂ, ತತ್ವಜ್ಞಾನವಾದರೂ ಅಥವಾ ಆಗದಿದ್ದರೂ ವಿಶೇಷವಿಲ್ಲದಿರಬೇಕಾಗುವುದು. ಹೀಗಾಗಿಬಿಟ್ಟರೆ, ಜ್ಞಾನಕ್ಕೆ ಫಲವೇ ಇಲ್ಲವೆಂದು ಹೇಳಬೇಕಾಗುವುದು.—ಹೀಗಲ್ಲವೆ ಶಂಕೆಯುಂಟಾಗುವುದು! ಯದ್ಯಪಿ, ವೃಕ್ಷಬೀಜಗಳ ವಿಷಯದಲ್ಲಿ, ತಿಳಿವಳಿಕೆಯಿದ್ದರೂ ಅಥವಾ ಇಲ್ಲದಿದ್ದರೂ— ವೃಕ್ಷಜನನರೂಪವಾದ ಶಕ್ತಿಯೊಂದಿದ್ದೇ ಇರುವುದು; ಆದರೂ, ಚಿತ್ತಭೂತರಾಗಿರುವ ಜಗದ್ಬ್ರಹ್ಮರ ವಿಷಯದಲ್ಲಿ ಅದಿಲ್ಲವೇ ಇಲ್ಲ. ಏಕೆಂದರೆ:—ಬೀಜವೃಕ್ಷವಿಷಯದಲ್ಲಿ ಜ್ಞಾನವಿದ್ದರೂ ಇಲ್ಲದಿದ್ದರೂ ಯಾವ ವ್ಯತ್ಯಾಸವೂ ಇಲ್ಲ. ಆತ್ಮತತ್ವವಿಷಯದಲ್ಲಿ ಮಾತ್ರ ಹಾಗಲ್ಲ; ಇದರಲ್ಲಿ ಸ್ವಲ್ಪ ವ್ಯತ್ಯಾಸವಿರುವುದು. ತತ್ವಜ್ಞಾನವುಂಟಾದಾಗ, ದೀಪಪ್ರಕಾಶದಿಂದ ಪದಾರ್ಥಗಳ ಆಕಾರ ಗೊತ್ತಾಗುವಂತೆ, ಸತ್ಯಸ್ವರೂಪವಾಗಿಯೂ ಸರ್ವತ್ರ ಪರಿಪೂರ್ಣವಾಗಿಯೂ ಕೇವಲ ಚಿನ್ಮಾತ್ರರೂಪವಾಗಿಯೂ ಇರುವ ಬ್ರಹ್ಮವಸ್ತುವು ಸ್ಫುರಿಸುವುದು. ಇದೇ ವ್ಯತ್ಯಾಸವು. ಬೀಜವೃಕ್ಷವಿಷಯದಲ್ಲಿ, ಜ್ಞಾನವಿದ್ದರೂ ಇಲ್ಲದಿದ್ದರೂ ವೃಕ್ಷಜನನವಾಗಿಯೇ ಬಿಡುವುದು; ಇಲ್ಲಿಯಾದರೋ, ಜ್ಞಾನವುಂಟಾದರೆಮಾತ್ರವೇ ಬ್ರಹ್ಮಸಾಕ್ಷಾತ್ಕಾರವಾಗುವುದು. ಅನ್ಯಥಾ ಆಗುವುದಿಲ್ಲ. ಹೀಗಿರುವುದರಿಂದ, ಜ್ಞಾನವೇ ನಿಷ್ಫಲವೆಂದು ಶಂಕಿಸಲವಕಾಶವಿಲ್ಲ ॥೨೨—೨೩॥

ಜ್ಞಾನಕ್ಕಿಂಥ ಶಕ್ತಿಯೆಲ್ಲಿಯದೆಂದರೆ,—ಅದು ವಿಚಾರಮೂಲಕವಾದುದು. ಭೂಮಿಯಲ್ಲೆಷ್ಟೆಷ್ಟುಭಾಗವನ್ನಗೆದರೂ, ಅದೆಲ್ಲವೂ ಆಕಾಶವೇ ಆಗಿರುವುದಲ್ಲವೆ! ಹೀಗೆಯೇ, ಅವಿದ್ಯಾಜನ್ಯವಾದ ಯಾವಯಾವ ಪದಾರ್ಥವನ್ನು ವಿಚಾರಮಾಡಿದರೂ, ಅದೆಲ್ಲವೂ ಪರಮಾತ್ಮನಾಗಿಯೇ ಇರುವುದು ॥೨೪॥

ಸ್ಫಟಿಕಮಣಿಯೊಳಗಿನ ಸನ್ನಿವೇಶವು, ನಮ್ಮ ಅಜ್ಞಾನದಿಂದ ಸಣ್ಣಮರವಾಗಿ ಹೇಗೆ ಸ್ಫುರಿಸುವುದೋ, ಹಾಗೆ—ಕೇವಲ ಪರಿಶುದ್ಧವಾಗಿರುವ ಬ್ರಹ್ಮದೊಳಗೆ—ವಸ್ತುತಃ ನಾನಾವಿಧವಾಗಿಲ್ಲದಿದ್ದರೂ ಈ ಜಗತ್ತು ನಾನಾವಿಧವಾಗಿರುವಂತೆ ಭಾಸಮಾನವಾಗುವುದು ॥೨೫॥

ಬ್ರಹ್ಮ ಸರ್ವಂ ಜಗದ್ವಸ್ತು ಪಿಣ್ಡಮೇಕಮಖಣ್ಡಿತಮ್ ।
ಫಲಪತ್ರಲತಾಗುಲ್ಮಪೀಠಬೀಜಮಿವ ಸ್ಥಿತಮ್ ॥೩೬॥

ಶ್ರೀರಾಮಉವಾಚ.

ಅಹೋ ಚಿತ್ರಂ ಜಗದಿದಂ ಅಸತ್ ಸದಿವ ಭಾಸತೇ ।
ಅಹೋ ಬೃಹದಹೋ ಸ್ವಸ್ಥಂ ಅಹೋ ಸ್ಫುಟಮಹೋ ತನು ॥೩೭॥
ಬ್ರಹ್ಮಣಿ ಪ್ರತಿಭಾಸಾತ್ಮಾ ತನ್ಮಾತ್ರಗುಣಗೋಳಕಃ ।
ಅವಶ್ಯಾಯಕಣಾಭಾಸೋ ಯಥಾ ಸ್ಫುರತಿ ತಚ್ಛ್ರುತಮ್ ॥೩೮॥
ಯಥಾಸೌ ಯಾತಿ ವೈಪುಲ್ಯಂ ಯಥಾ ಭವತಿ ಚಾತ್ಮಭೂಃ ।
ಯಥಾ ಸ್ವಭಾವಸಿದ್ಧಾರ್ಥಾತ್ ತಥಾ ಕಥಯ ಮೇ ಪ್ರಭೋ ॥೩೯॥

ಶ್ರೀವಸಿಷ್ಠಉವಾಚ.

ಅತ್ಯನ್ತಾಸಮ್ಭವದ್ರೂಪಂ ಅನನ್ಯತ್ ಸ್ವಸ್ವಭಾವತಃ ।
ಅತ್ಯನ್ತಾನನುಭೂತಂ ಸತ್ ಸ್ವಾನುಭೂತಮಿವಾಗ್ರತಃ ॥೪೦॥

ಅಯ್ಯಾ! ರಾಮ! ಸ್ಫಟಿಕದೊಳಗೆ ವೃಕ್ಷಗಳಿರುವಂತೆ ಭ್ರಮೆಯುಂಟಾದಾಗ, ಒಂದೇ ಒಂದು ಸ್ಫಟಿಕಗುಳಿಕೆಯು, ಫಲ—ಪತ್ರ—ಲತೆ—ಗುಲ್ಮ(ಪೊದರು)—ಇದೆಲ್ಲಕ್ಕೂ ಆಧಾರಭೂತವಾದ ಭೂಮಿ—ಇದರೊಳಗಿರುವ ಬೀಜ,—ಇಷ್ಟುವಿಧವಾಗಿಯೂ ತೋರುವಂತೆ, ಅಪರಿಚ್ಛಿನ್ನವಾದ ಬ್ರಹ್ಮವೊಂದೇ ಸಮಸ್ತ ಪ್ರಾಪಂಚಿಕಪದಾರ್ಥರೂಪವಾಗಿಯೂ ಇರುವುದು ॥೩೬॥

ಇದನ್ನು ಕೇಳಿ ಶ್ರೀರಾಮನು ಮತ್ತೆ ಪ್ರಶ್ನೆಮಾಡುತ್ತಾನೆ:—

ಹೇ ಗುರೋ! ತಾವು ಅಪ್ಪಣೆಕೊಟ್ಟುದು ಆತ್ಯಾಶ್ಚರ್ಯಕರವಾಗಿರುವುದು. ಅಹಹ! ಅಸತ್ಯವಾಗಿರುವ ಈ ಜಗತ್ತು, ಸತ್ಯವಾಗಿರುವಂತೆ ಭಾಸಿಸುವುದು!! ಅಹಹ! ಇದೆಷ್ಟು ದೊಡ್ಡದಾಗಿ ಕಾಣುವುದು! ಎಷ್ಟು ಸ್ವಸ್ಥವಾಗಿರುವಂತೆ ತೋರುವುದು! ಇದೆಷ್ಟು ಸ್ಪಷ್ಟವಾಗಿ ಕಾಣಿಸುವುದು! ಹಾಗೆಯೇ ಎಷ್ಟು ಸೂಕ್ಷ್ಮವಾಗಿ ಬಿಡುವುದು! ಇದು ಬಲು ಆಶ್ಚರ್ಯವಾಗುವುದು ॥೩೭॥

ಸ್ವಾಮಿ! ಈ ಬ್ರಹ್ಮನಲ್ಲಿ, ಪ್ರಾತಿಭಾಸಿಕಸ್ವರೂಪವಾದ ಪಂಚತನ್ಮಾತ್ರಾದಿ ಸಮೂಹವು ಮಂಜಿನಹನಿಯಂತೆ ಕಾಣಿಸುವ ಪ್ರಕ್ರಮವನ್ನೂ, ತಮ್ಮ ಮುಖದಿಂದ ನಾನು ಕೇಳಿ ತಿಳಿದುಕೊಂಡೆನು ॥೩೮॥

ಪೂಜ್ಯರೇ! ಈತನ್ಮಾತ್ರಸಮುದಾಯವು, ಸಮಷ್ಟಿರೂಪವಾಗಿಯೂ ವ್ಯಷ್ಟಿರೂಪವಾಗಿಯೂ ಇರುವ ಸ್ಥೂಲದೇಹಸ್ಥಿತಿಯನ್ನು ಹೊಂದುವುದು ಹೇಗೆ? ಸರ್ವದಾ ಸತ್ತಾಮಾತ್ರಗೋಚರವಾಗಿರುವಿಕೆಯೇ ಸ್ವಭಾವವಾಗುಳ್ಳ ಆ ಪರಬ್ರಹ್ಮನದೆಸೆಯಿಂದ, ವೈಶ್ವಾನರರೂಪನಾದ ಚತುರ್ಮುಖನುದಯಿಸುವುದು ಹೇಗೆ?—ಈ ವಿಷಯವನ್ನು, ತಾವು ದಯವಿಟ್ಟು ನನಗಪ್ಪಣೆಕೊಡಿಸಬೇಕು॥

ಶ್ರೀವಸಿಷ್ಠರು ಉತ್ತರಕೊಡುವರು:—

ವತ್ಸ! ರಾಮ! ಜೀವಸ್ವರೂಪವನ್ನೀಗ ಕೇಳುವವನಾಗು:—ಈ ಜೀವತ್ವವೆಂಬುದು, ಅತ್ಯಂತ ಅಸಂಭವವಾದುದು; ಇದು ಆತ್ಮನ ಸ್ಥಿತಿಗಿಂತ ಪೃಥಕ್ಕಲ್ಲದುದು; (ಆತ್ಮನಸ್ಥಿತಿಯೇ ಇದರಸ್ಥಿತಿ) ಇದು ಸುತರಾಂ ಅನುಭೂತವಲ್ಲದಿದ್ದರೂ, ಹಿಂದೆ ಅನೇಕವೇಳೆ ಅನುಭವಿಸಲ್ಪಟ್ಟಂತೆ ತೋರುವುದು. ಇದಕ್ಕೊಂದುಪಮಾನವನ್ನು ಕೇಳುವವನಾಗು,—ಬಾಲಕರು ಬೇತಾಳವನ್ನು ನೋಡಿದಂ

ಉಲ್ಲಾಸಫುಲ್ಲೋಫುಲ್ಲಾಙ್ಗಃ ಇತಿ ಬಾಲಹೃದಿ ಸ್ಫುಟಮ್ ।
ಯಥೋದೇತಿ ತಥೋದೇತಿ ಪರೇ ಬ್ರಹ್ಮಣಿ ಜೀವತಾ ॥೪೧॥
ಮಾನಮೇಯಾತ್ಮಿಕಾ ಶುದ್ಧಾ ಸತ್ಯೈವಾಸತ್ಯವತ್ ಸ್ಥಿತಾ ।
ಭಿನ್ನೇವ ಚ ನಭಿನ್ನಾ ಸ್ಯಾತ್ ಬ್ರಹ್ಮಣೋ ಬೃಂಹಣಾತ್ಮಿಕಾ ॥೪೨॥
ಯಥಾ ಬ್ರಹ್ಮ ಭವತ್ಯಾಶು ಜೀವಃ ಕಲನಜೀವಿತಃ ।
ತಥಾ ಜೀವೋ ಭವತ್ಯಾಶು ಮನೋ ಮನನವೇದನಾತ್ ॥೪೩॥
ಚಿತ್ತಂ ತನ್ಮಾತ್ರಮನನಂ ಪಶ್ಯತ್ಯಾಶು ಸ್ವರೂಪವತ್ ।
ಏಷ ಸದ್ಯೋನಿಲಲವಪ್ರಖ್ಯಃ ಸ್ಫುರತಿ ಖಾನ್ತರೇ ॥೪೪॥
ಅಸ್ತಿ ನಿಮೇಷೋನುಭವತ್ಯವಶ್ಯಾಯಕಣೋಪಮಮ್ ।
ಸಂವೇದನಾತ್ಮಕಂ ಕಾಲಕಲಿತಂ ಕಾನ್ತಮಾತ್ಮನಿ ॥೪೫॥
ಅಹಂ ಕಿಮಿತಿ ಶಬ್ದಾರ್ಥವೇದನಾಭೋಗಸಂವಿದಮ್ ।
ಸಂವಿದಂ ತತ್ತ್ವಶಬ್ದಾರ್ಥಂ ಜೀವಃ ಪಶ್ಯತಿ ಸಾರ್ಥಕಮ್ ॥೪೬॥

ತವರಾಗಿ ಹೆದರುವರಷ್ಟೆ! ಆ ಸಂದರ್ಭದಲ್ಲಿ, ವಸ್ತುತಃ ಬೇತಾಳನ ಆಕಾರವು ಸ್ಫುರಿಸದಿದ್ದರೂ, ಅದು ವಿಕಾಸಹೊಂದುವಂತೆ ಬಾಲಕರ ಹೃದಯದಲ್ಲಿ ಉದಯಿಸುವುದಲ್ಲವೆ! ಇದರಂತೆ ಪರಬ್ರಹ್ಮನಲ್ಲಿ ಜೀವತ್ವವೆಂಬುದುದಯಿಸುವುದು ॥೪೦—೪೧॥

ರಾಮ! ನಾನು ಹಿಂದೆ ಹೇಳಿದಂತೆ, ಮನನಮಾಡತಕ್ಕುದಕ್ಕೆ ಮನಸ್ಸೆಂದು ಹೆಸರಿರುವುದು ಗೊತ್ತಿದೆಯಷ್ಟೆ! ಮನನಮಾಡಬೇಕಾದರೆ, ಆ ವಿಷಯವನ್ನು ಮೊದಲು ಅನುಭವಿಸಿರಬೇಕಾಗುವುದು. ಒಂದಾವೃತ್ತಿಯೂ ಅನುಭವಿಸಲ್ಪಡದಿರುವ ವಿಷಯವನ್ನು ಮನನಮಾಡಲಾಗಲಾರದು. ಅನುಭವವುಂಟಾಗಬೇಕಾದರೆ, ಪ್ರಮಾಣವೂ(ತಿಳಿಯುವುದಕ್ಕೆ ಸಾಧನ)ಪ್ರಮೇಯವೂ(ತಿಳಿಯಲ್ಪಡತಕ್ಕ ವಿಷಯ) ಬೇಕಾಗುವುವು. ಹೀಗಿರುವುದರಿಂದ, ಮಾನಮೇಯಗಳು ಮನೋಭಾವಕ್ಕೆ ನಿಮಿತ್ತಭೂತಗಳೆಂದು ನಿರ್ಧರವಾಗುವುದು. ಅದುಕಾರಣ, ಮಾನಮೇಯವಾಸನೆಯು ಚಿರಕಾಲದಿಂದ ನೆಲೆಸಿರುವ ಪ್ರಕ್ರಮವನ್ನು ತಿಳಿಯುವನಾಗು. ಈ ಮಾನಮೇಯವಾಸನೆಯು, ಆ ಪರಬ್ರಹ್ಮನ ವಿಕಾಸರೂಪವಾದುದು; ಇದು ಪೃಥಕ್ಕಲ್ಲದಿದ್ದರೂ ಪೃಥಕ್ಕಾಗಿರುವಂತೆ ಕಾಣುವುದು; ಇದು ಚಿರಕಾಲದಿಂದ ನೆಲೆಸಿರುವುದು. (ಅಂದರೆ, ಚಿಚ್ಛಕ್ತಿಯೇ, ಮಾನವೆಂದೂ ಮೇಯವೆಂದೂ ಹೇಳಲ್ಪಡುವುದೆಂಬ ಭಾವವು) ॥೪೨॥

ಈವಿಧವಾಗಿ, ತಾನು ಮನೋರೂಪನೆಂಬ ವಾಸನಾಬಲದಿಂದ, ಬ್ರಹ್ಮಪದಾರ್ಥವು ಭ್ರಮಕಲ್ಪಿತನಾದ ಜೀವನಾಗುವಂತೆ, ಜೀವನೂ ಮನೋರೂಪನಾಗಿಬಿಡುವನು ॥೪೩॥

ಆ ಮನಸ್ಸು, ಆಕ್ಷಣವೇ, ತನ್ನ ರೂಪಾಂತರದಂತಿರುವ ಪಂಚತನ್ಮಾತ್ರಗಳ ಮನನವನ್ನನುಭವಿಸುವುದು; ಬಳಿಕ, ಆ ತನ್ಮಾತ್ರಾತ್ಮಕವಾಗಿ, ಆಕ್ಷಣವೇ ವಾಯುಪರಮಾಣುವಿನಂತೆ ಅತಿಸೂಕ್ಷ್ಮವಾಗುವುದು. ಅದು ಆಗ, ಚಿದಾಕಾಶವು ಪ್ರಕಾಶಿಸುತ್ತಿರುವಾಗ, ಸೃಷ್ಟಿಕಾಲವಶದಿಂದ ತನ್ನಲ್ಲುಂಟಾಗುವ ಹಿರಣ್ಯಗರ್ಭರೂಪವನ್ನೂ ಬ್ರಹ್ಮಾಂಡರೂಪವನ್ನೂ ಅನುಭವಿಸುವುದು ॥೪೪-೪೫॥

ಆಗ ಈ ಜೀವನು, ಪ್ರಥಮತಃ ತಾನು ಯಾರೆಂಬುದಾಗಿ ಶಬ್ದಾರ್ಥವಿವೇಚನೆಯೇ ಇಲ್ಲದೆ ಮುಗ್ಧವಾಗಿರುವ ಜ್ಞಾನವನ್ನನುಭವಿಸುವನು; ಬಳಿಕ, ಪುರುಷಾರ್ಥವಿಚಾರಪೂರ್ವಕವಾಗಿ, ತನ್ನ ಪೂರ್ವಜನ್ಮವಾಸನಾನುಗುಣವಾದ ಜ್ಞಾನವನ್ನು ಅನುಭವಿಸುವನು ॥೪೬॥

ತಾದೃಕ್ಷವೇದನಾತ್ ಸೋಽಥ ರಸಶಬ್ದಾರ್ಥವೇದನಮ್ |
ಭಾವಿಜಿಹ್ವಾರ್ಥನಾಮ್ನ್ಯೈಕದೇಶೇಽನುಭವತಿ ಕ್ಷಣಾತ್ ||೪೭||
ತಾದೃಕ್ಷವೇದನಾತ್ ತೇಜಶ್ಶಬ್ದಾರ್ಥೇಽನ್ಮುಖತಾಂ ಗತಃ |
ಭವಿಷ್ಯನ್ನೇತ್ರನಾಮ್ನ್ಯೈಕದೇಶೇ ಭವತಿ ಭಾಸನಮ್ ||೪೮||
ತಾದೃಕ್ಷವೇದನಾತ್ ಸೋಽಥ ಘ್ರಾಣತದ್ದೃಷ್ಟಿವೇದನಾತ್ |
ಸ್ಥಿತೋಽ ಯಸ್ಮಿನ್ ಭವತೀತಿ ತಾವದ್ದೃಶ್ಯಾದಿತಾ ಸ್ಥಿತಾ ||೪೯||
ಏವಂಪ್ರಾಯಃ ಸ ಜೀವಾತ್ಮಾ ಕಾಕತಾಳೀಯವತ್ ಶನೈಃ |
ವಿಶಿಷ್ಟಸನ್ನಿವೇಶತ್ವಂ ಭಾವಿತಂ ಪಶ್ಯತಿ ಸ್ವತಃ ||೫೦||
ಸ ತಸ್ಯ ಸನ್ನಿವೇಶಸ್ಯ ತ್ವಸತೋಽಪಿ ಸತಃ ಸತಃ |
ಶಬ್ದಭಾವೈಕದೇಶತ್ವಂ ಶ್ರವಣಾರ್ಥೇನ ವಿನ್ದತಿ ||೫೧||
ಸ್ಪರ್ಶಭಾವೈಕದೇಶತ್ವಂ ತ್ವಕ್ಛಬ್ದಾರ್ಥೇನ ವಿನ್ದತಿ |
ರಸಭಾವೈಕದೇಶತ್ವಂ ರಸನಾತ್ವೇನ ವಿನ್ದತಿ ||೫೨||
ರೂಪಭಾವೈಕದೇಶತ್ವಂ ನೇತ್ರಾರ್ಥಾಕೃತಿ ಪಶ್ಯತಿ |
ಗನ್ಧಭಾವೈಕದೇಶತ್ವಂ ನಾಸಿಕಾತ್ವೇನ ಪಶ್ಯತಿ ||೫೩||

ಈವಿಧವಾಗಿ ದೇಹದಲ್ಲಿ ಅಹಂಭಾವವುಂಟಾದಬಳಿಕ, ಆ ಜೀವನು, ದೇಹದ ಒಂದುಭಾಗದಲ್ಲಿ ರಸವೆಂಬ ಶಬ್ದದ ಅರ್ಥಜ್ಞಾನಸಾಮರ್ಥ್ಯ(ರಸನೇಂದ್ರಿಯಶಕ್ತಿ)ವನ್ನನುಭವಿಸುವನು. ಇದಕ್ಕೆ ಮುಂದೆ ಜಿಹ್ವೆಯೆಂಬ ಹೆಸರಾಗುವುದು ||೪೭||

ಬಳಿಕ, ತೇಜಶ್ಶಬ್ದಾರ್ಥದಲ್ಲಿ ಅಭಿಮುಖನಾಗಿ, ದೇಹದ ಒಂದುಭಾಗದಲ್ಲಿ ಪ್ರಕಾಶಶಕ್ತಿಯನ್ನನುಭವಿಸುವನು. ಇದಕ್ಕೆ ಮುಂದೆ ನೇತ್ರವೆಂದು ಹೆಸರಾಗುವುದು ||೪೮||

ಇದಾದಬಳಿಕ, ಆ ಜೀವನು, ಘ್ರಾಣೇಂದ್ರಿಯವನ್ನೂ ಅದರ ವಿಷಯವನ್ನೂ ಅನುಭವಿಸುವನು. ಈರೀತಿಯಾಗಿ, ಈ ಜೀವನು ಶ್ರೋತ್ರವೊದಲಾದ ಯಾವಸ್ಥಿತಿಯಲ್ಲಿ ಎಲ್ಲಿಯವರೆಗಿರುವನೋ, ಅದುವರೆಗೂ—ಅವನಿಗೆ ಶಬ್ದ ವೊದಲಾದ ವಿಷಯಗಳನ್ನನುಭವಿಸುವ ಸ್ವಭಾವವಿರುವುದು ||೪೯||

ಈರೀತಿಯಾಗಿರುವ ಜೀವಾತ್ಮನು, ಕಾಕತಾಳೀಯನ್ಯಾಯದಂತೆ, ತನ್ನ ಪೂರ್ವವಾಸನೆಯಿಂದ ಕಲ್ಪಿತವಾಗಿರುವ ಈ ಬ್ರಹ್ಮಾಂಡಸನ್ನಿವೇಶಸ್ಥಿತಿಯನ್ನನುಭವಿಸುವನು ||೫೦||

ಆಗ, ಅವನಿಗೆ ಶ್ರೋತ್ರಾದೀಂದ್ರಿಯಗಳದ್ವಾರಾ ಶಬ್ದಾದಿ ವಿಷಯಭೋಗವಾಗುವಕಾಲದಲ್ಲಿ, ಆಯಾಯ ಇಂದ್ರಿಯಗಳೊಡನೆ ತಾದಾತ್ಮ್ಯಜ್ಞಾನ(ಅದೇತಾನೆಂಬ ತಿಳಿವಳಿಕೆ)ವುಂಟಾಗುವುದು. ಹೇಗೆಂದರೆ:—ಈ ಬ್ರಹ್ಮಾಂಡಸನ್ನಿವೇಶವು ವಸ್ತುತಃ ಅಸತ್ಯವಾಗಿದ್ದರೂ ಸತ್ಯವಾಗಿರುವಂತೆ ಕಾಣುವುದು; ಇಂತಹ ಈ ಸನ್ನಿವೇಶದಲ್ಲಿ, ತಾನು 'ಶ್ರವಣ' ಎಂಬ ಶಬ್ದದ ಅರ್ಥದ ದ್ವಾರಾ, ಜೀವನು ಶ್ರೋತ್ರದ ಏಕದೇಶದಶೆಯನ್ನನುಭವಿಸುವನು. (ಶ್ರೋತ್ರೇಂದ್ರಿಯತಾದಾತ್ಮ್ಯವನ್ನು ಹೊಂದಿ ಶಬ್ದಗ್ರಹಣಮಾಡುವನು) ||೫೧||

ಹೀಗೆಯೇ, ತ್ವಗಿಂದ್ರಿಯ ತಾದಾತ್ಮ್ಯಜ್ಞಾನದಿಂದ ಸ್ಪರ್ಶವನ್ನೂ, ರಸನೇಂದ್ರಿಯ ತಾದಾತ್ಮ್ಯಜ್ಞಾನದಿಂದ ರಸವನ್ನೂ, ಚಕ್ಷುರಿಂದ್ರಿಯತಾದಾತ್ಮ್ಯಜ್ಞಾನದಿಂದ ರೂಪವನ್ನೂ, ಘ್ರಾಣೇಂದ್ರಿಯತಾದಾತ್ಮ್ಯಜ್ಞಾನದಿಂದ ಗಂಧವನ್ನೂ ಗ್ರಹಿಸುವನು ||೫೨—೫೩||

ಏವಂ ಭಾವನಮಯ್ಯಃ ಸತ್ತಾಪ್ರಕಟೀಕರಣಕ್ಷಮಮ್ ।
ಭವಿಷ್ಯದಿನ್ದ್ರಿಯಾಖ್ಯಂ ಸಃ ರನ್ಧ್ರಂ ಪಶ್ಯತಿ ದೇಹಕೇ ॥೫೪॥
ಇತ್ಯೇವಮಾದಿಜೀವಸ್ಯ ರಾಘವಾದ್ಯತನಸ್ಯ ಚ ।
ಉದೇತಿ ಪ್ರತಿಭಾಸಾತ್ಮಾ ದೇಹಏವಾತಿವಾಹಿಕಃ ॥೫೫॥
ಅನಾಖ್ಯೇಯಂ ಪರಾ ಸತ್ತಾ ಸ್ವಾತಿವಾಹಿಕತಾಮಿವ ।
ಸಾ ಗಚ್ಛತ್ಯಪ್ಯಗಚ್ಛನ್ತೀ ತಾದೃಕ್ಸತ್ಯಾತ್ಮಭಾವನಾತ್ ॥೫೬॥
ಮಾತೃಮೇಯಪ್ರಮಾಣಾದಿ ಯದಾ ಬ್ರಹ್ಮೈವ ವೇದನಾತ್ ।
ತದಾತಿವಾಹಿಕೋಕ್ತೀನಾಂ ಕಃ ಪ್ರಸಙ್ಗಸ್ತದೇವ ತತ್ ॥೫೭॥
ಅನ್ಯತ್ವವೇದನಾದನ್ಯಃ ಪರಸ್ಮಾದಾತಿವಾಹಿಕಃ ।
ಬ್ರಹ್ಮತ್ವವೇದನಾದ್ಬ್ರಹ್ಮ ಸಾ ಸಂವಿತ್ತಿರ್ಹಿ ನಾನ್ಯಜಾ ॥೫೮॥

ಶ್ರೀರಾಮಉವಾಚ.

ಅಸಮ್ಭವಾದಸಂವಿತ್ತೇಃ ಬ್ರಹ್ಮಾತ್ಮೈಕತಯಾಥವಾ ।

ಈರೀತಿಯಾಗಿ, ಹೊರಗಿರುವ ವಿಷಯಗಳ ಜ್ಞಾನವನ್ನುಂಟುಮಾಡುವುದರಲ್ಲಿ ಸಮರ್ಥವಾಗಿ ಮುಂದೆ ಇಂದ್ರಿಯಗಳೆಂಬ ಹೆಸರುಪಡೆಯತಕ್ಕುದಾಗಿರುವ ರಂಧ್ರವನ್ನು, ಈ ಜೀವನು ದೇಹದಲ್ಲಿ ನೋಡುವನು ॥೫೪॥

ಅಯ್ಯಾ! ರಾಘವ! ಈರೀತಿಯಾಗಿ ಇದೆಲ್ಲವನ್ನೂ ಚೆನ್ನಾಗಿ ವಿಚಾರಮಾಡಿನೋಡು. ಸಮಷ್ಟಿಸೃಷ್ಟಿರೂಪನಾದ ಆದ್ಯಜೀವನಿಗೂ, ವ್ಯಷ್ಟಿರೂಪನಾದ ಈಗಣ ಜೀವನಿಗೂ ಕೂಡ, ಪ್ರಾತಿಭಾಸಿಕವಾದ ಆತಿವಾಹಿಕದೇಹವೇ ವಸ್ತುತಃ ಇರುವುದೆಂದು ತಿಳಿವಳಿಕೆಯುಂಟಾಗುವುದು ॥

ಆದರೆ, ಈ ಆತಿವಾಹಿಕದೇಹಭಾವವೂ ಕೂಡ ವಸ್ತುತಃ ಬ್ರಹ್ಮನಿಗೇ ಇರುವುದು. ಈ ಪರಬ್ರಹ್ಮನ ಸತ್ತೆಯೆಂಬುದು, ಅನಿರ್ದೇಶ್ಯವಾದುದು ; ಇದು ವಸ್ತುತಃ ಆತಿವಾಹಿಕತ್ವವನ್ನು ಹೊಂದತಕ್ಕುದಲ್ಲವಾಗಿದ್ದರೂ, ಆ ವಿಧವಾದ ಭಾವನಾಬಲದಿಂದ—ನಿಜವಾಗಿ ಹೊಂದುವಂತೆ ತೋರುವುದು ॥೫೬॥

ನಾನು ಹಿಂದೆ ಹೇಳಿದಂತೆ, ಮಾತೃ ಮೇಯ ಮಾನ ಮುಂತಾದುವೂ ಕೂಡ, ಸರಿಯಾದ ತತ್ವಜ್ಞಾನವಾದ ಬಳಿಕ ಬ್ರಹ್ಮವೇ ಎಂದು ನಿಶ್ಚಯವುಂಟಾಗುವಾಗ, ಆತಿವಾಹಿಕವಿಷಯಕವಾದ ವಿಚಾರವೆಲ್ಲಿರುವುದು? ಇದೂ ಬ್ರಹ್ಮವೇಯೆಂದು ಹೇಳಬೇಕಾದುದೇನು? ಸರ್ವಥಾ, ಆದು ಆ ಪರಬ್ರಹ್ಮವೆಯೇ ॥೫೭॥

ಅಯ್ಯಾ! ರಾಮ! ಸಾರಾಂಶವನ್ನು ಕೇಳು:—ಈ ಆತಿವಾಹಿಕದೇಹವು, ಪರಮಾತ್ಮನಿಗಿಂತ ಬೇರೆಯೆಂದು ತಿಳಿಯಲ್ಪಟ್ಟರೆ, ಬೇರೆಯಾದುದೇ ಆಗುವುದು ; ಬ್ರಹ್ಮವೆಂದು ತಿಳಿಯಲ್ಪಟ್ಟರೆ, ಬ್ರಹ್ಮವೇ ಆಗುವುದು. ಹೀಗೆ ಇದು ಬ್ರಹ್ಮನೆಂದು ಉಂಟಾಗುವ ಜ್ಞಾನ ಮಾತ್ರ ಭ್ರಾಂತಿಜನ್ಯವಲ್ಲವೆಂದು ತಿಳಿಯುವನಾಗು ॥೫೮॥

ಇದನ್ನು ಕೇಳಿ, ಶ್ರೀರಾಮನು ಈಗ ಮತ್ತೊಂದುವಿಧವಾಗಿ ಆಶಂಕೆಪಟ್ಟು ಪ್ರಶ್ನೆಮಾಡುತ್ತಾನೆ:—

ಪೂಜ್ಯರೆ! ತಾವು ಅಪ್ಪಣೆಕೊಡಿಸಿದಂತೆ, ಮಾತೃಮೇಯಮಾನಾದಿಗಳೂ- ಆತಿವಾಹಿಕಾದಿ

ಕೋ ಮೋಕ್ಷಃ ಕೋ ವಿಚಾರಶ್ಚೇತ್ಯಲಂ ಭೇದವಿಕಲ್ಪನೈಃ ||೫೯||

ಶ್ರೀ ವಸಿಷ್ಠ ಉವಾಚ.

ಸಿದ್ಧಾನ್ತಕಾಲವಿಷಯಃ ಪ್ರಶ್ನಸ್ತೇ ರಾಮ ರಾಜತೇ |
ಅಕಾಲಪುಷ್ಪಮಾಲಾ ಹಿ ಶೋಭನಾಪಿ ನ ಶೋಭತೇ ||೬೦||
ಸಾರ್ಥೈರ್ವಾನರ್ಥಿಕಾಽಕಾಲಮಾಲಾ ವಿಲಸಿತಾ ಯಥಾ |
ತಥೈವಾಕಾಲವಿಜ್ಞಪ್ತಿಃ ಸರ್ವಂ ಕಾಲೇ ಹಿ ಶೋಭತೇ ||೬೧||
ಪ್ರತಿಬನ್ಧಾಭ್ಯನುಜ್ಞಾನಾಂ ಕಾಲೋ ದಾತೇತಿ ದೃಶ್ಯತೇ |
ನನು ಸರ್ವಪದಾರ್ಥಾನಾಂ ಕಾಲೇನ ಫಲಯೋಗತಃ ||೬೨||
ಏವಮೇವ ಸ ಜೀವಾತ್ಮಾ ಸ್ವಪ್ನಾತ್ಮಾ ಸಮುಪಸ್ಥಿತಃ |

ಗಳೂ- ಎಲ್ಲವೂ ಪರಬ್ರಹ್ಮನೇ ಆಗಿಬಿಟ್ಟಪಕ್ಷದಲ್ಲಿ, ಕೇವಲ ಚಿದೇಕರಸನಾದ ಬ್ರಹ್ಮನಲ್ಲಿ ಅಜ್ಞಾನವೇ ಸಂಭವಿಸುವುದಿಲ್ಲವಷ್ಟೆ! ಮತ್ತು, ಅಜ್ಞಾನದಿಂದಲ್ಲವೆ ಜೀವಭೇದಕಲ್ಪನೆಯಾಗುತ್ತದೆಂದು ತಾವು ಹೇಳಿರುವಿರಿ! ಅಜ್ಞಾನವೇ ಇಲ್ಲದಮೇಲೆ, ಜೀವಭೇದವನ್ನು ಕಲ್ಪಿಸತಕ್ಕ ಪದಾರ್ಥವೇ ಇಲ್ಲದಂತಾಗುವುದು. ಯಾವಾಗ ಭೇದಕಲ್ಪನೆಯೇ ಇಲ್ಲವಾಯ್ತೋ, ಆಗ ಸ್ವತಸ್ಸಿದ್ಧವಾಗಿದ್ದ ಬ್ರಹ್ಮಾತ್ಮೈಕ್ಯವು ಯಥಾವಸ್ಥಿತವಾಗಿ ಇದ್ದೇ ಇರುವುದಷ್ಟೆ! ಹೀಗಿರುವುದರಿಂದ, ಇನ್ನು ಮೋಕ್ಷವಾವುದು? ಇದಕ್ಕಾಗಿ ವಿಚಾರವೇನು? ಇವುಗಳನ್ನೆಲ್ಲ ಇಲ್ಲಿಗೇ ನಿಲ್ಲಿಸಬಹುದಲ್ಲವೆ! ॥

ಇದನ್ನು ಕೇಳಿ, ವಸಿಷ್ಠರು ಸಮಾಧಾನ ಹೇಳುವರು :—

ವತ್ಸ! ನೀನು ಚೆನ್ನಾಗಿ ಪ್ರಶ್ನೆಮಾಡಿದೆ. ಆದರೆ, ನೀನು ತತ್ವವನ್ನು ತಿಳಿದುಕೊಂಡು ಪ್ರಶ್ನೆ ಮಾಡಿದೆಯೋ? ಅಥವಾ ತಿಳಿದುಕೊಳ್ಳುವುದಕ್ಕೆ ಪೂರ್ವಭಾವಿಯಾಗಿ ಈ ಪ್ರಶ್ನೆಯನ್ನು ಮಾಡಿದೆಯೋ? ತತ್ವಜ್ಞಾನ ಪಡೆದು ಈ ಪ್ರಶ್ನೆಯನ್ನು ಮಾಡಿದ್ದಪಕ್ಷದಲ್ಲಿ, ಅದು ನನಗೆ ಇಷ್ಟಾಪತ್ತಿಯೇ ಸರಿ. ತತ್ವಜ್ಞಾನವುಂಟಾದ ಬಳಿಕ, ಮೋಕ್ಷವೂ ಇಲ್ಲ; ವಿಚಾರವೂ ಇಲ್ಲ. ಅದಲ್ಲದೆ ನೀನು ತತ್ವಜ್ಞಾನವುಂಟಾಗುವುದಕ್ಕೆ ಮೊದಲೇ ಈ ಪ್ರಶ್ನೆಮಾಡುತ್ತೇನೆನ್ನುವಪಕ್ಷದಲ್ಲಿ, ಅದು ಸುತರಾಂ ಅಸಂಗತವು. ಆದರೆ, ಈಗ ನಿನಗಿನ್ನೂ ಜಿಜ್ಞಾಸಾಕಾಲವಾಗಿರುವುದರಿಂದ, ನೀನು ಮಾಡಿದ ಈ ಪ್ರಶ್ನೆಯು ಸಿದ್ಧಾಂತಕಾಲದಲ್ಲಿ ಮಾತ್ರ ಶೋಭಿಸುತ್ತದೆಯಲ್ಲದೆ, ಈಗ ಶೋಭಿಸಲಾರದು. ಅಕಾಲದಲ್ಲಿ ಬಿಡುವ ಹೂವುಗಳು, ಎಷ್ಟು ರಮ್ಯವಾಗಿದ್ದರೂ, ಅಕಾಲಪುಷ್ಪವೆಂದು ಆದರಿಂದ ಎಲ್ಲರೂ ಶಂಕೆಪಡುವರಲ್ಲದೆ, ಅದೆಂದಿಗೂ ಶೋಭಾವಹವಾಗಲಾರದಲ್ಲವೆ! ॥೬೦॥

ಅಕಾಲದಲ್ಲಿ ಅರಳಿದ ಪುಷ್ಪಪಂಕ್ತಿಯು, ಹೇಗಾದರೂ ಜನರಿಗುಪಯುಕ್ತವಾದುದರಿಂದ ಸಫಲವೇ ಅಹುದಾಗಿದ್ದರೂ, ಅದು ಅಕಾಲಜನ್ಯವೆಂಬ ಕಾರಣದಿಂದ ಹೇಗೆ ವ್ಯರ್ಥವಾಗುವುದೋ,—ಹಾಗೆ- ಅಕಾಲಿಕವಾದಂತಹ ವಿಚಾರವೂ ಕೂಡ ಎಷ್ಟು ಯುಕ್ತವಾಗಿದ್ದರೂ-ಪುರುಷರಿಗೆ ವಿಫಲವೆನ್ನಿಸುವುದು. ಯಾವ ಪದಾರ್ಥವಾದರೂ, ತಕ್ಕ ಸಮಯದಲ್ಲಿ ಶೋಭಾವಹವಾಗುವುದಲ್ಲದೆ—ಅಸಮಯದಲ್ಲಾಗಲಾರದಲ್ಲವೆ! ॥೬೧॥

ಸಮಸ್ತ ವೃಕ್ಷಾದಿಗಳಿಗೂ ಕಾಲದಿಂದಲೇ ಫಲಪ್ರಾಪ್ತಿಯಾಗುವುದೆಂಬುದರಲ್ಲಿ ಸಂಶಯವಿಲ್ಲ. ಹೀಗಿರುವುದರಿಂದ, ಈ ಕಾಲವು ತತ್ತತ್ಸ್ವಭಾವಾನುಗುಣವಾಗಿ ಕೆಲವಕ್ಕೆ ಫಲಪ್ರಾಪ್ತಿಪ್ರತಿಬಂಧ ಮಾಡತಕ್ಕುದಾಗಿಯೂ—ಮತ್ತೆ ಕೆಲವಕ್ಕೆ ಫಲಪ್ರಾಪ್ತಿಗಾನುಕೂಲ್ಯವುಂಟುಮಾಡತಕ್ಕುದಾಗಿಯೂ ಇರುವುದೆಂಬ ವಿಷಯವು ಸರ್ವಾನುಭವಗೋಚರವಾಗಿರುವುದು ॥೬೨॥

ವತ್ಸ! ನಿನ್ನ ಪ್ರಶ್ನೆಗೆ ಸಮಾಧಾನವಾಯ್ತಷ್ಟೆ! ಮುಂದೆ, ನಾನುಪಕ್ರಮಿಸಿದ್ದ ವಿಷಯ

ಪಿತಾಮಹತ್ವಮುಚ್ಛೂನಂ ಪಶ್ಯನ್ನಾತ್ಮನಿ ಕಾಲತಃ ॥೬೩॥
ಓಮುಚ್ಚಾರಣಸಂವಿತ್ತಿವೇದನಾಚ್ಚ ಪ್ರಪಶ್ಯತಿ ।
ಯತ್ ಕರೋತಿ ಮನೋರಾಜ್ಯಂ ಭವತ್ಯಾಶು ಸ ತನ್ಮಯಃ ॥೬೪॥
ಇದಮೇವಮಸತ್ ಸರ್ವಂ ಇವವ್ಯೋಮ್ನಿ ತತಾತ್ಮನಿ ।
ಪರ್ವತೋಚ್ಚಾಕೃತಿರ್ವ್ಯೋಮ ಜಗದ್ವ್ಯೋಮ್ನಿ ವಿಜೃಮ್ಭತೇ ॥೬೫॥
ನೇಹ ಪ್ರಜಾಯತೇ ಕಿಂಚಿತ್ ನೇಹ ಕಿಂಚಿದ್ವಿನಶ್ಯತಿ ।
ಜಗದ್ಗನ್ಧರ್ವನಗರರೂಪೇಣ ಬ್ರಹ್ಮ ಜೃಮ್ಭತೇ ॥೬೬॥
ಯಥೈವ ಪದ್ಮಜಾದೀನಾಂ ಜೀವಾನಾಂ ಸದಸನ್ಮಯೀ ।
ಸತ್ತಾ ತಥೈವ ಸರ್ವೇಷಾಂ ಆಸರೀಸೃಪಮಾಸುರಮ್ ॥೬೭॥
ಸಂವಿತ್ಸಮ್ಭ್ರಮಪಿಮಾಯಂ ಏವಮಭ್ಯುತ್ಥಿತೋಪ್ಯಸತ್ ।
ಆಬ್ರಹ್ಮಕೀಟಸಂವಿತ್ತೇಃ ಸಮ್ಯಕ್ ಸಂವೇದನಾತ್ ಕ್ಷಯಃ ॥೬೮॥

ವನ್ನು ಕೇಳುವನಾಗು. ಪೂರ್ವೋಕ್ತರೀತಿಯಾಗಿ ಆ ಜೀವಾತ್ಮನು, ಅನೇಕ ಸ್ವಪ್ನಸಮುದಾಯ ಸದೃಶರೂಪನಾಗಿ, ಕಾಲಪರಿಣಾಮದಿಂದ ಉಪಾಸನಾ(ಧ್ಯಾನ) ಬಲದಿಂದ ಅಭಿವೃದ್ಧಿಹೊಂದಿದ-ಪಿತಾಮಹತ್ವಜ್ಞಾನವನ್ನು ಪಡೆಯುವನು ॥೬೩॥

ಈ ವಿಧವಾಗಿ ಪಿತಾಮಹಾಭಿಮಾನಪಡೆದವನಾದ ಜೀವನು, ಪ್ರಣವೋಚ್ಚಾರಣೆಯಿಂದಲೂ ಅದರ ಅರ್ಥಾನುಸಂಧಾನದಿಂದಲೂ ಸಮಸ್ತ ಜಗತ್ಸೃಷ್ಟಿ ಮಾಡುವನು. ಹೇಗೆಂದರೆ:— ಅವನ ಮನೋರಾಜ್ಯವು ಯಾವುದನ್ನು ಕಲ್ಪಿಸುತದೆಯೋ, ಅವನು ಆಕ್ಷಣವೇ ಆ ಪದಾರ್ಥವೇ ಆಗಿಬಿಡುವನು ॥೬೪॥

ವಿಶಾಲವಾಗಿರತಕ್ಕ ಅಂತರಿಕ್ಷದಲ್ಲಿ, ಒಂದು ನೆಲವಿರುವಹಾಗೂ—ಅದು ಮಲಿನವಾಗಿರುವಹಾಗೂ ತೋರುವುದಲ್ಲವೆ! ಇದು ಕೇವಲ ಅಸತ್ಯವಾಗಿರುವಂತೆ, ಸಮಷ್ಟಿಪ್ರಪಂಚವೂಕೂಡ ಅತ್ಯಂತಾಸತ್ಯವು. ಹೆಚ್ಚೇಕೆ? ಮಹಾಮೇರುಪರ್ವತದ ದೊಡ್ಡ ಆಕಾರವೂ ಕೇವಲ ಅಭಾವವೆಯೇ; ಇದು ಜಗತ್ತೆಂಬ ಆಕಾಶದಲ್ಲಿ ವಿಜೃಂಭಿಸುತ್ತಿರುವುದು. ಅಂದಮೇಲೆ ಇದೂ ಅಭಾವವೆಂದು ಹೇಳಬೇಕಾದುದೇ ಇಲ್ಲ ॥೬೫॥

ಯಾವುದೊಂದೂ ಜನಿಸುವುದೂ ಇಲ್ಲ; ಯಾವುದೂ ಲಯಹೊಂದುವುದೂ ಇಲ್ಲ. ಆ ಪರಬ್ರಹ್ಮವಸ್ತುವೇ, ಜಗತ್ತೆಂಬ ಗಂಧರ್ವನಗರದ ರೂಪದಿಂದ ಕಾಣಿಸಿಕೊಳ್ಳುತಿರುವುದು ॥೬೬॥

ಚತುರ್ಮುಖ ಬ್ರಹ್ಮ ಮೊದಲಾದ ಜೀವರ ಸತ್ತೆಯೆಂಬುದು, ಪೂರ್ವೋಕ್ತರೀತಿಯಾಗಿ ಯುಕ್ತಿಯಿಂದ ವಿಚಾರಮಾಡಿದಾಗ, ಸದಸದ್ರೂಪವಾಗಿ ಹೇಗೆ ಕಾಣುವುದೋ,—ಹಾಗೆಯೇ, ಒಂದು ಅಲ್ಪ ಕ್ರಿಮಿಯನ್ನು ಮೊದಲುಮಾಡಿಕೊಂಡು ದೇವತೆಗಳವರೆಗೂ ವಿಚಾರಮಾಡಿದರೂ, ಇದು ಸದಸದ್ರೂಪವಾಗಿಯೇ ಇರುವುದು ॥೬೭॥

ಪರಮಾರ್ಥ ದೃಷ್ಟಿಯಿಂದ ವಿಚಾರಮಾಡಿದರೊ, ಬ್ರಹ್ಮನಿಂದ ಮೊದಲುಮಾಡಿಕೊಂಡು ಒಂದು ಕೀಟದವರೆಗೂ ಸತ್ಯವೆಂಬ ಜ್ಞಾನವುದಯಿಸುವುದೆಲ್ಲವೂ ಸುತರಾಂ ಅಸತ್ಯವೇಯೆ. ಇದನ್ನು ಚೆನ್ನಾಗಿ ವಿಚಾರಮಾಡಿ ನೋಡಿದರೆ, ಇದು ಕ್ಷಯಿಸತಕ್ಕುದೆಂದು ಸ್ಪಷ್ಟವಾಗಿ ಗೊತ್ತಾಗುವುದು ॥

ಯಥಾ ಸಮ್ಪದ್ಯತೇ ಬ್ರಹ್ಮ ಕೀಟಃ ಸಮ್ಪದ್ಯತೇ ತಥಾ ।
ಕೀಟಸ್ತು ರೂಢಭೂತೌಘಮಲನಾತ್ ತುಚ್ಛಕರ್ಮಕಃ ॥೧೯॥
ಯದೇವ ಜೀವನಂ ಜೀವೇ ಚೇತ್ಯೋನ್ಮುಖಚಿದಾತ್ಮಕಮ್ ।
ತದೇವ ಪೌರುಷಂ ತಸ್ಮಿನ್ ಸಾರಂ ಕರ್ಮ ತದೇವ ಚ ॥೨೦॥
ಬ್ರಹ್ಮಣಃ ಸುಕೃತಾತ್ ಪಾಪಾತ್ ಕೀಟಕಸ್ಯ ಸಮುತ್ಥಿತೇಃ ।
ಚಿತ್ತನ್ಮಾತ್ರಾತ್ಮಿಕಾ ಭ್ರಾನ್ತಿಃ ಪ್ರೇಕ್ಷಾಮಾತ್ರಂ ಭವೇತ್ ಕ್ಷಯಃ ॥೨೧॥
ಮಾತೃಮಾನಪ್ರಮೇಯಾಣಿ ನ ಚಿನ್ಮಾತ್ರೇತರದ್ಯತಃ ।
ತತೋ ದ್ವೈತೈಕ್ಯವಾದಾರ್ಥಃ ಶಶಶೃಙ್ಗಾಬ್ಜಿನೀಸಮಃ ॥೨೨॥
ಭಾವದಾರ್ಢ್ಯಾತ್ಮಕಂ ಮಿಥ್ಯಾ ಬ್ರಹ್ಮಾನನ್ದೋ ವಿಭಾವ್ಯತೇ ।
ಆತ್ಮೈವ ಕೋಶಕಾರೇಣ ಲಾಲಾದಾರ್ಢ್ಯಾತ್ಮಕಂ ಯಥಾ ॥೨೩॥
ಮನಸಾ ಬ್ರಹ್ಮಣಾ ಯದ್ಯತ್ ಯಥಾ ದೃಷ್ಟಂ ವಿಭಾವಿತಮ್ ।

ಬ್ರಹ್ಮನು ಹೇಗೆ ಸಂಭವಿಸುವನೋ, ಕೀಟವೂ ಹಾಗೆಯೇ ಸಂಭವಿಸುವುದು; ಈ ವಿಷಯದಲ್ಲಿ ಏನೂ ವ್ಯತ್ಯಾಸವೇ ಇಲ್ಲ. 'ಹಾಗಾದಮೇಲೆ ಕೀಟದಲ್ಲಿ ತುಚ್ಛಬುದ್ಧಿಯೇತಕ್ಕೆ?' ಎಂದರೆ,—ಅದರ ಚಿತ್ತದಲ್ಲಿ ಭೌತಿಕಮಾಲಿನ್ಯವಧಿಕವಾಗಿರುವುದರಿಂದ, ಅದು ತುಚ್ಛಕರ್ಮವುಳ್ಳದಾಗುವುದು ॥೧೯॥

ಚೇತ್ಯಾಭಿಮುಖವಾದ ಚಿತ್ತೇ ಜೀವಾತ್ಮನ ಜೀವವೆನ್ನಿಸುವುದಲ್ಲವೆ! ಅಂತಹ ಜೀವಾತ್ಮಜೀವನವೇ, ಪೌರುಷವೆನ್ನುವುದಾಗಿಯೂ, ಫಲಪರ್ಯವಸಾಯಿಯಾದಾಗ ದೈವವೆನ್ನುವುದಾಗಿಯೂ ಹೇಳಲ್ಪಡುವುದು ॥೨೦॥

ಮೇಲೆ ಹೇಳಿದ ಬ್ರಹ್ಮಕೀಟಗಳಲ್ಲಿ, ಪುಣ್ಯಫಲದ ಪರಮಾವಧಿರೂಪವಾದುದು ಬ್ರಹ್ಮಜನ್ಮವು; ಕೀಟಜನ್ಮವು ಪಾಪಫಲಪರಮಾವಧಿರೂಪವಾದುದು. ಹೀಗೆ ಪರಸ್ಪರ ತಾರತಮ್ಯಕ್ಕೆ ನಿಮಿತ್ತಭೇದವಿರುವುದು. ಹೀಗಿದ್ದರೂ, ಚಿನ್ಮಾತ್ರರೂಪಪರಿಜ್ಞಾನವಿಲ್ಲದುದರಿಂದ ದ್ವೈತಭ್ರಾಂತಿಯುಂಟಾಗುವುದೂ, ಆ ಸ್ವರೂಪ ಪರಿಜ್ಞಾನವಾದರೆ ದ್ವೈತಭ್ರಾಂತಿ ನಷ್ಟವಾಗುವುದೂ, ಇವೆರಡೂ ಉಭಯತ್ರಾಪಿ ಸಮಾನವಾಗಿಯೇ ಇರುವುವು ॥೨೧॥

ಪ್ರಮಾತೃ ಪ್ರಮಾಣ ಪ್ರಮೇಯಗಳೂ ಚಿತ್ಪದಾರ್ಥಕ್ಕಿಂತ ಪ್ರತ್ಯೇಕವಾದುವಲ್ಲ; ಅದು ಕಾರಣ, ದ್ವೈತ ಐಕ್ಯ ಎಂಬ ವಿಚಾರವು, ಶಶಶೃಂಗಕ್ಕೂ ಆಕಾಶಸರಸ್ಸಿಗೂ ಸಮಾನವಾದುದೆಂದು ತಿಳಿಯಬೇಕು ॥೨೨॥

'ಹೀಗೆ ಇದೆಲ್ಲವೂ ಅಸತ್ಯವಾಗಿಬಿಟ್ಟರೆ, ಅನೇಕಕೋಟಿ ಗುದ್ದಲಿಗಳಿಂದಲೂ ಭೇದಿಸುವುದಕ್ಕಾಗಲಾರದಿರುವಂತೆ ಈ ಪ್ರಪಂಚವು ದಾರ್ಢ್ಯಹೊಂದಿರುವುದಕ್ಕೆ ಕಾರಣವೇನು?' ಎಂದು ಕೇಳಿದರೆ:—ಪಟ್ಟೆಯ (ರೇಷ್ಮೆ) ಹುಳುವು—ತನ್ನ ಮುಖದ ಜೊಲ್ಲನ್ನೇ ಸುತ್ತಿಸಿ ಸುತ್ತಿಸಿ-ಕೊನೆಗೆ ಅದನ್ನು ಗಟ್ಟಿಮಾಡಿ—ತನ್ನ ಸುತ್ತಲೂ ದೃಢವಾದ ಬಂಧನವನ್ನು ಮಾಡಿಕೊಂಡು—ಬಳಿಕ ಅದಾವುದೋ ಒಂದು ಹೊಸದಾದ ಬಂಧನವೆಂದು ಭಾವಿಸುವಂತೆ, ಬ್ರಹ್ಮಾನಂದಾತ್ಮಕನಾದ ಆತ್ಮನು, ತನ್ನನ್ನು ತಾನೇ ಪ್ರಾಪಂಚಿಕಪದಾರ್ಥರೂಪವಾಗಿ ಭಾವಿಸುತ ಅದನ್ನೇ ದೃಢಪಡಿಸಿಕೊಂಡಿರುವನು ॥೨೩॥

'ಹೀಗೆ ಬಂಧವು ತನ್ನಿಂದಲೇ ಕಲ್ಪಿಸಲ್ಪಟ್ಟುದಾದಪಕ್ಷದಲ್ಲಿ, ಪ್ರತಿಮನುಷ್ಯನೂ ತನ್ನಿಷ್ಟ

ತತ್ತಥಾ ದೃಶ್ಯತೇ ತಜ್ಜ್ಞೈಃ ಸ್ವಭಾವಸ್ಯೈಷ ನಿಶ್ಚಯಃ ॥೨೪॥
ಯಥಾ ಯದುದಿತಂ ವಸ್ತು ತತ್ತತ್ ತನ್ನ ವಿನಾ ಭವೇತ್ ।
ನಿಮೇಷಮಪಿ ಕಲ್ಪಂ ವಾ ಸ್ವಭಾವಸ್ಯೈಷ ನಿಶ್ಚಯಃ ॥೨೫॥
ಅಳೀಕಮಿದಮುತ್ಪನ್ನಮಳೀಕಂ ಚ ವಿವರ್ಧತೇ ।
ಅಳೀಕಮೇವ ಸ್ವದತೇ ತಥಾಳೀಕಂ ವಿಲೀಯತೇ ॥೨೬॥

ಗದ್ಯಂ ॥ ಶುದ್ಧಂ ಸರ್ವಗತಂ ಬ್ರಹ್ಮಾನನ್ತಮದ್ವಿತೀಯಂ ದುಃಖಬೋಧವಶಾದಶುದ್ಧಮಿವಾಸದಿವಾನೇಕಮಿವಾಸರ್ವಗಮಿವಾವಬುಧ್ಯತೇ ॥೨೭॥

ಕೇವಲಮತತ್ತ್ವವಿದ್ಭಿಃ ಪರಿಕಲ್ಪಿತೋ ರಜ್ಜ್ವಾಂ ಸರ್ಪ ಇವ. ಏವಂ ಭೇದಾಭೇದಶಕ್ತ್ಯೋರರಿಮಿತ್ರಯೋರೇವ ಬ್ರಹ್ಮಣ್ಯೇವ ಸಮ್ಭವೇತ್ ॥೨೮॥

ನುಸಾರವಾಗಿ ತನಗನುಕೂಲವಾದುದನ್ನೇ ಕಲ್ಪಿಸಿಕೊಳ್ಳಬಹುದಾಗಿದೆಯಲ್ಲವೆ! ಅನಿಷ್ಟವನ್ನೇಕೆ ಕಲ್ಪಿಸಿಕೊಳ್ಳುವನು? ಹಾಗಾದಮೇಲೆ, ಪ್ರಪಂಚದಲ್ಲಿ ಯಾರಿಗೂ ಅನಿಷ್ಟಪ್ರಾಪ್ತಿಯೇ ಆಗದಿರಬೇಕಾದೀತು!' ಎಂದು ಶಂಕೆಪಟ್ಟರೆ,—ಅದು ಸರಿಯಲ್ಲ. ಸರ್ವಮನಸ್ಸಮಷ್ಟಿರೂಪನಾದ ಚತುರ್ಮುಖಬ್ರಹ್ಮನು, ಯಾವಯಾವುದನ್ನು ಹೇಗೆಹೇಗೆ ಸೃಜಿಸಬೇಕೆಂದು ಯೋಚಿಸುವನೋ, ಮತ್ತು ಹೇಗೆಹೇಗೆ ಆಗಬೇಕೆಂದು ಸಂಸ್ಕಾರವುಳ್ಳವನಾಗುವನೋ,—ಅದದನ್ನು ಆಯಾರೀತಿಯಾಗಿಯೇ ಇತರರಾದ ಜೀವರೂ ತಿಳಿದುಕೊಳ್ಳುವರು. ಇದು ನಿಯತಿಯ ನಿಶ್ಚಯವು ॥೨೪॥

ಹೇಗೆಯೇ, ಯಾವ ವಸ್ತುವು ಯಾವರೀತಿಯಾಗಿ ಉದಯಿಸುವುದೋ, ಅದು ಆ ರೀತಿಯನ್ನು ಬಿಟ್ಟು ಸ್ವಲ್ಪವೂ ಇರುವುದಿಲ್ಲ; ಮತ್ತು, ಒಂದು ನಿಮಿಷವಿರತಕ್ಕುದಾದ ವಸ್ತುವು, ಒಂದು ಕಲ್ಪವೂ ಇರುವುದಿಲ್ಲ. ಆಲದ ಬೀಜದಿಂದಲೇ ಆಲದಮರ ಹುಟ್ಟುವುದಲ್ಲದೆ, ಬೇವಿನಬೀಜದಿಂದ ಆಲದಮರ ಹುಟ್ಟುವುದಿಲ್ಲ; ಒಂದು ನಿಮಿಷಮಾತ್ರವಿದ್ದು ಒಡೆದುಹೋಗಬೇಕಾದ ಸ್ವಭಾವವುಳ್ಳ ನೀರಿನ ಗುಳ್ಳೆಯು, ಒಂದು ಕಲ್ಪಕಾಲ ಇರುವುದಿಲ್ಲ. ಇದು ನಿಯತಿಯ ನಿಶ್ಚಯವು. ಅದು ಕಾರಣ, ಯಥೇಚ್ಛವಾಗಿ ಕಲ್ಪನೆಯಾಗಬಹುದೆಂಬ ಮಾತಿಗೆ ಇಲ್ಲಿ ಪ್ರಸಕ್ತಿಯೇ ಇಲ್ಲವೆಂದು ತಿಳಿಯಬೇಕು ॥೨೫॥

ಆದರೆ,—'ಸಿದ್ಧಸಂಕಲ್ಪರಾದವರು ಯಥೇಚ್ಛ ಫಲಾನುಭವಮಾಡುವುದು ಪ್ರತ್ಯಕ್ಷವಾಗಿರುವುದರಿಂದಲೂ, ನಿಯತಿಯ ಶಕ್ತಿ ಕಾಲ ಮುಂತಾದುವುಗಳನ್ನು ವ್ಯವಸ್ಥೆಪಡಿಸಿರುವುದರಿಂದಲೂ, ಈ ಜಗತ್ತು ಸತ್ಯವಾದುದೇ ಆಗಿರಬಹುದು' ಎಂದು ಭ್ರಮಿಸಬಾರದು. ಈ ಜಗತ್ತು, ಉತ್ಪತ್ತಿಹೊಂದಿರುವುದೂ ಅಸತ್ಯವೆಯೇ; ವೃದ್ಧಿಹೊಂದುವುದೂ ಅಸತ್ಯವೆಯೇ; ಜನರಿಗೆ ಉಪಭೋಗಕಾಲದಲ್ಲಿ ಇದು ಆಸ್ವಾದನೀಯವಾಗುವುದೂ ಅಸತ್ಯವೆಯೇ; ಇದು ಪ್ರಳಯಹೊಂದುವುದೂ ಅಸತ್ಯವೆಯೇ ॥೨೬॥

ಅಯ್ಯಾ! ರಾಮ! ಇದುವರೆಗೆ (ಈ ಮೂರು ಸರ್ಗಗಳಲ್ಲಿ) ಹೇಳಲ್ಪಟ್ಟಿರುವ ವಿಷಯವನ್ನು, ಈಗ ನಿನಗೆ ಸಂಕ್ಷೇಪಿಸಿ ಹೇಳುವೆನು-ಕೇಳು.—ಈ ಬ್ರಹ್ಮ ಪದಾರ್ಥವು-ಕೇವಲ ಶುದ್ಧವಾದುದು; ಸರ್ವವ್ಯಾಪಿಯಾದುದು; ಇದಕ್ಕೆ ಅಂತವಿಲ್ಲ; ಇದು ಅದ್ವಿತೀಯವಾದುದು. ಆದರೆ, ಭ್ರಾಂತಿಮೂಲಕವಾಗಿ, ಇದು—ಅಪರಿಶುದ್ಧವಾಗಿರುವಂತೆಯೂ, ಅಸತ್ಯಪದಾರ್ಥದಂತೆಯೂ, ಅನೇಕವಾಗಿರುವಂತೆಯೂ, ಸರ್ವವ್ಯಾಪಿಯಲ್ಲದಂತೆಯೂ, ಪ್ರಾಕೃತರಿಂದ ತಿಳಿಯಲ್ಪಡುವುದು ॥

ಪ್ರಪಂಚದಲ್ಲಿ, ಜಲವೇ ಬೇರೆಯೆಂದೂ ತರಂಗವೇ ಬೇರೆಯೆಂದೂ ಬಾಲರ ಕಲ್ಪನೆಯಿಂದ ಭೇದವೇರ್ಪಡುವುದಲ್ಲದೆ, ಆ ಭೇದವೆಂದಿಗೂ ಸತ್ಯವಲ್ಲ. ಅದುಕಾರಣ, ಯಾವಯಾವ ಭೇದ ತೋರುತಿರುವುದೋ, ಅದು—ರಜ್ಜುವಿನಲ್ಲಿ ಸರ್ಪಜ್ಞಾನದಂತೆ-ಕೇವಲ ಅಜ್ಞರಿಂದ ಕಲ್ಪಿತವಾದುದು. ಹೀಗೆ, ಭೇದಾಭೇದಸ್ವಭಾವಗಳೆರಡೂ ಪರಸ್ಪರ ವಿರುದ್ಧಗಳಾಗಿದ್ದರೂ, ಪರಮಾತ್ಮನಲ್ಲಿ ಸಂಗತವಾಗಿರುವುವು ॥೨೮॥

ತೇನಾತ್ಮನಾಽದ್ವಿತೀಯೇನೈವ ದ್ವಿತ್ವಮಿವಾತತಂ ಯಥಾ ಸಲಿಲೇನ ತರಙ್ಗಕಲ್ಪನಯಾ ಸುವರ್ಣೇನ ಕಟಕಕಲ್ಪನಯೈವಮಿತಿ. ಅತಸ್ತೇನ ಸ್ವಯಮೇವಾತ್ಮನಾತ್ಮಾನ್ಯ ಇವ ಚೇತ್ಯತೇ ||೨೯||

ಅತಃ ಕಲನಾ ಜಾತಾ, ಸೈವ ಸ್ಫಾರತಾಂ ಪ್ರಾಪ್ಯ ಮನಃ ಸಮ್ಪನ್ನಂ, ತೇನಾಹಂಭಾವಃ ಕಲ್ಪಿತೋ, ನಿರ್ವಿಕಲ್ಪಪ್ರತ್ಯಕ್ಷರೂಪಮೇತತ್ ಪ್ರಥಮಂ ತನ್ಮನಸ್ತದಹಂ ಭವತಿ ಕ್ಷಿಪ್ರಮಹಂಶಬ್ದಾರ್ಥಭಾವನಾತ್ ||೩೦||

ತತೋ ಮನೋಽಹಙ್ಕಾರಾಭ್ಯಾಂ ಸ್ಮೃತಿರನುಸಂಹಿತಾ ತೈಸ್ತ್ರಿಭಿಸ್ತದನು ಭೂತತನ್ಮಾತ್ರಾಣಿ ಕಲ್ಪಿತಾನಿ, ತನ್ಮಾತ್ರೇಷು ಜೀವೇನ ಚಿತಾತ್ಮನಾ ಜಲಮನ್ಯತ್ ತರಙ್ಗೋಽನ್ಯ ಇತಿ ಬಾಲಕುಕಲ್ಪನಯಾ ಭೇದಃ ಕಲ್ಪ್ಯತ ಏವಮವಾಸ್ತವಸ್ತಸ್ಮಾದ್ಯೋಯೋಽಯಮಾಭಾತಿ ಭೇದಃ ಸ ಸ್ವಯಂ ಕಾಕತಾಲೀಯವದ್ಬ್ರಹ್ಮೋಪಾದಾನಾದಿರ್ಯಾ ಸನ್ನಿವೇಶಃ ಕಲ್ಪಿತೋ ದೃಶ್ಯತೇ ||೩೧||

ಏವಂ ಯದೇವ ಮನಃ ಕಲ್ಪಯತಿ ತದೇವ ಪಶ್ಯತಿ ||೩೨||

ಪದ್ಯಂ|| ಸದ್ವಾಭವತ್ವಸದ್ವಾ ಚಿತ್ತಂ ಯತ್ ಕಲ್ಪಯತ್ಯಭಿನಿವಿಷ್ಟಮ್ |
ತತ್ತತ್ ಪಶ್ಯತಿ ಯಾಸ್ಯತಿ ಸದಿವ ಪ್ರತಿಭಾಸಮುಪಗತಂ ಸದ್ಯಃ ||೩೩||

ಇತಿ ಉತ್ಪತ್ತಿಪ್ರಕರಣೇ ಸತ್ಯೋಪದೇಶೋ ನಾಮ

ಸಪ್ತಷಷ್ಟಿತಮಃ ಸರ್ಗಃ.

ಅದುಕಾರಣ, ಜಲವು ತರಂಗಕಲ್ಪನೆಮಾಡುವಂತೆಯೂ, ಸುವರ್ಣವು ಕಟಕಕಲ್ಪನೆಮಾಡುವಂತೆಯೂ, ಅದ್ವಿತೀಯನಾದ ಆ ಪರಮಾತ್ಮನೇ ಭೇದಕಲ್ಪನೆ ಮಾಡಿಕೊಳ್ಳುವನು. ಈರೀತಿಯಾಗಿ, ಆ ಆತ್ಮನು ತನ್ನನ್ನು ತಾನೇ ಬೇರೆಯವನೆಂದು ತಿಳಿದುಕೊಳ್ಳುವನು ||೨೯||

ಇದರಿಂದ, ನಿರ್ವಿಕಲ್ಪಕವಾಗಿರುವ ಜಗತ್ಸ್ಫೂರ್ತಿಯುಂಟಾಗುವುದು ; ಜಗತ್ಸ್ಫೂರ್ತಿಯೇ ವಿಸ್ತರಿಸಿ ಸವಿಕಲ್ಪಕವಾಗಿ ಮನಸ್ಸಾಗುವುದು ; ಆದರಿಂದ ಅಹಂಕಾರಕಲ್ಪನೆಯುಂಟಾಗುವುದು. ಅಂತು, ಮೊದಲು ನಿರ್ವಿಕಲ್ಪವಾಗಿ ಪ್ರತ್ಯಕ್ಷವಾಗುತಿದ್ದ ಈ ಬ್ರಹ್ಮವು, ಆಮೇಲೆ ಮನಸ್ಸಾಗಿಯೂ— ಬಳಿಕ ಅಹಂಭಾವವಾಸನೆಯುಂಟಾಗುವುದರಿಂದ ಅಹಂಕಾರವಾಗಿಯೂ ಆಗುವುದು||

ಬಳಿಕ, ಈ ಮನಸ್ಸು ಅಹಂಕಾರ ಇವುಗಳು, ಸ್ಮರಣೆಯೆಂಬುದನ್ನು ಗೋಚರಪಡಿಸುವುವು. ಆಮೇಲೆ, ಇವು ಮೂರೂ ಸೇರಿ, ಆಗ ಸ್ಮೃತವಾದ ತನ್ಮಾತ್ರೆಗಳನ್ನು ಸೃಜಿಸುವುವು. ಈ ತನ್ಮಾತ್ರೆಗಳಲ್ಲಿ, ಚಿತ್ತರೂಪನಾದ ಜೀವನು ಕಾಕತಾಳೀಯ ನ್ಯಾಯದಿಂದ ಬ್ರಹ್ಮಮೂಲಕವಾಗಿ ಈ ದೊಡ್ಡ ಪ್ರಪಂಚಸನ್ನಿವೇಶವನ್ನು ಕಲ್ಪಿಸಿಕೊಂಡಿರುವನು. ಅಂತು, ಹೀಗೆ ಮನಸ್ಸು ಯಾವುದನ್ನು ಕಲ್ಪಿಸಿಕೊಳ್ಳುವುದೋ, ಅದನ್ನೇ ಕಾಣುವುದು ||೩೧-೩೨||

ಅಯ್ಯಾ! ರಾಮ! ಅಂತು, ಮನಸ್ಸು ಯಾವುದರಲ್ಲಭಿನಿವೇಶವುಳ್ಳದಾಗುವುದೋ, ಅದು ಸತ್ಯವಾಗಿರಲಿ-ಅಥವಾ ಅಸತ್ಯವಾಗಿರಲಿ-ಅದನ್ನು ಕಲ್ಪಿಸಿಕೊಳ್ಳುವುದು. ಹೀಗೆ ತಾನು ಕಲ್ಪಿಸಿಕೊಂಡುದನ್ನೆಲ್ಲ ನೋಡುವುದು ; ಕೊನೆಗೆ ಆ ಪದಾರ್ಥವು ಸತ್ಯವಾದುದರಂತೆ ಸ್ಫೂರ್ತಿಹೊಂದಿಬಿಡುವುದು ||೩೩||

ಇದು ಉತ್ಪತ್ತಿಪ್ರಕರಣದಲ್ಲಿ ಸತ್ಯೋಪದೇಶವೆಂಬ

ಅರವತ್ತೇಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟಷಷ್ಟಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಅತ್ರೈವೋದಾಹರನ್ತೀಮಂ ಇತಿಹಾಸಂ ಪುರಾತನಮ್ ।
ರಾಕ್ಷಸ್ಯೋಕ್ತಂ ಮಹಾಪ್ರಶ್ನಜಾಲನೂನಲಿತಾಖಿಲಮ್ ॥೧॥
ಅಸ್ತಿ ಕಜ್ಜಲಪಙ್ಕಾದ್ರೇರಿವೋಗ್ರಾ ಸಾಲಭಞ್ಜಿಕಾ ।
ಹಿಮಾದ್ರೇರುತ್ತರೇ ಪಾರ್ಶ್ವೇ ಕರ್ಕಟೀ ನಾಮ ರಾಕ್ಷಸೀ ॥೨॥
ವಿಷೂಚಿಕಾಭಿಧಾನಾ ಚ ನಾಮ್ನಾಪ್ಯನ್ಯಾಯಬಾಧಿಕಾ ।
ವಿನ್ಧ್ಯಾಟವೀವ ದೇಹೇನ ಶುಷ್ಕಾ ಕಾರ್ಶ್ಯಮುಪಾಗತಾ ॥೩॥
ಮಹಾಬಲಾಗ್ನಿನಯನಾ ರೋದೋರನ್ಧ್ರಾರ್ಧಪೂರಣೀ ।
ನೀಲಾಮ್ಬರಧರಾ ಕೃಷ್ಣಾ ದೇಹಬದ್ಧೇವ ಯಾಮಿನೀ ॥೪॥

ಉತ್ಪತ್ತಿಪ್ರಕರಣದಲ್ಲಿ ಅರವತ್ತೆಂಟನೆಯ ಸರ್ಗವು.

ವರ್ಣ್ಯತೇ ವಿಸ್ತರೇಣಾತ್ರ ಕರ್ಕಟೀನಾಮ ರಾಕ್ಷಸೀ ।
ತಸ್ಯಾಶ್ಚೋಗ್ರಂ ತಪಃ ಸರ್ವಂ ಜನ್ತುಜಾಲಜಿಘಾಂಸಯಾ ॥

ಕರ್ಕಟಿಯೆಂಬ ರಾಕ್ಷಸಿಯೂ, ಆವಳು ಪ್ರಾಣಿಸಂಘವನ್ನು ಕೊಲ್ಲಲಿಚ್ಛೆಯಿಂದ ಮಾಡಿದ ಉಗ್ರವಾದ ತಪಸ್ಸೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀ ವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಇದುವರೆಗೆ ನಾನು ಹೇಳಿರುವ ವಿಷಯದಲ್ಲಿಯೇ, ಇದೊಂದು ಪುರಾತನವಾದ ಇತಿಹಾಸವನ್ನು ಪ್ರಾಜ್ಞರು ಹೇಳುವರು. ಇದರಲ್ಲಿ, ರಾಕ್ಷಸಸ್ತ್ರೀಯೊಬ್ಬಳು ಅನೇಕ ಪ್ರಶ್ನೆಗಳನ್ನು ಹೇಳಿರುವಳು; ಈ ಪ್ರಶ್ನೆಗಳಲ್ಲಿ, ಸಮಸ್ತವಾದ ಜಗತ್ಸ್ವರೂಪವೂ ಅಂತರ್ಗತವಾಗಿರುವುದು ॥೧॥

ಹಿಮವತ್ಪರ್ವತದ ಉತ್ತರಪಾರ್ಶ್ವದಲ್ಲಿ ಕರ್ಕಟಿಯೆಂಬೊಬ್ಬ ರಾಕ್ಷಸಿ ಯಿರುವಳು; ಇವಳು, ಕಾಡಿಗೆಯ ಕೆಸರಿನಿಂದಲೋ—ಅಥವಾ ಕಾಡಿಗೆಯ ಬೆಟ್ಟದಿಂದಲೋ ಮಾಡಲ್ಪಟ್ಟಿರುವ ಉಗ್ರವಾದ ಬೊಂಬೆಯೋ ಎಂಬಂತೆ ಕಾಣಿಸುತಿರುವಳು ॥೨॥

ಇವಳಿಗೆ, ವಿಷೂಚಿಕೆಯೆಂದೂ ಅನ್ಯಾಯಬಾಧಿಕೆಯೆಂದೂ ನಾಮಾಂತರಗಳುಂಟು. ಇವಳ ದೇಹವನ್ನು ನೋಡಿದರೆ, ಸಾಕ್ಷಾತ್ ವಿಂಧ್ಯಾಟವಿಯೇ ಕೃಶವಾಗಿ ಒಣಗಿ ಈ ರೂಪದಿಂದ ಬಂದಿರುವುದೋ ಎಂಬಂತೆ ತೋರುತಿದ್ದಿತು ॥೩॥

ಅವಳ ಕಣ್ಣುಗಳು, ಅತ್ಯಧಿಕವಾದ ಅಗ್ನಿಯಂತೆ ಪ್ರಜ್ವಲಿಸುತಿದ್ದುವು; ಅವಳು ನಿಂತುಕೊಂಡರೆ, ಭೂಮ್ಯಾಕಾಶಗಳ ಮಧ್ಯಭಾಗದಲ್ಲಿ ಅರ್ಧವು ತುಂಬಿಹೋಗುತಿದ್ದಿತು. ಅವಳು ಕೃಷ್ಣವರ್ಣಳಾಗಿಯೂ ಕಪ್ಪುಬಟ್ಟೆಯನ್ನು ಧರಿಸಿದವಳಾಗಿಯೂ ಇರುವುದರಿಂದ, ರಾತ್ರಿಯು ಶರೀರಗ್ರಹಣಮಾಡಿ ಬಂದಿರುವಂತೆ ಭ್ರಾಂತಿಯುಂಟಾಗುತಿತ್ತು ॥೪॥

ನೀಹಾರವಸನಚ್ಛನ್ನಾ ಮೇದುರಾಭ್ರಶಿರಃಪಟಾ |
ಲಮ್ಬಾಭ್ರಬಿಮ್ಬೋಲ್ಲಸಿತಾ ನಿತ್ಯೋರ್ಧ್ವತಿಮಿರೋರ್ಧ್ವಜಾ ||೫||
ಸ್ಥಿರವಿದ್ಯುಲ್ಲತಾನೇತ್ರಾ ತಮಾಲತರುಜಾನುಕಾ |
ವೈದೂರ್ಯಶೂರ್ಪಾಗ್ರನಖೀ ಭಸ್ಮನೀಹಾರಹಾಸಿನೀ ||೬||
ನಿರ್ಮಾಂಸನರದೇಹೌಘಪುಷ್ಪಸ್ರಗ್ದಾಮಭೂಷಿತಾ |
ಸರ್ವಾಙ್ಗೋದಾತ್ತಸಂಪ್ರೋತಶವಮಾಲಾವಿರಾಜಿತಾ ||೭||
ವೇತಾಳಾವೇಶವಿಚಲತ್ಕ್ಕಲಕಙ್ಕಾಳಕುಣ್ಡಲಾ |
ಅರ್ಕಾದಾನೋತ್ಕದೀರ್ಘಾಗ್ರಭೀಮೋಗ್ರಭುಜಮಣ್ಡಲಾ ||೮||
ತಸ್ಯಾವಿಪುಲಕಾಯತ್ವಾತ್ ದುರ್ಲಭತ್ವಾನ್ನಿಜಾನ್ಧಸಃ |
ಅತೃಪ್ತೋರ್ಣವಲೇಖಾಯಾಃ ಇವಾಭೂಜ್ಜಾಠರೋನಲಃ ||೯||
ನ ಕದಾಚನ ಸಾ ತೃಪ್ತಿಂ ಉಪಯಾತಾ ಮಹೋದರೀ |
ಬಡಬಾನಲಜಿಹ್ವೇವ ಚಿನ್ತಯಾಮಾಸ ಚೈಕದಾ ||೧೦||
ಜಮ್ಬೂದ್ವೀಪಗತಾನ್ ಸರ್ವಾನ್ ನಿಗಿರಾಮಿ ಜನಾನ್ ಯದಿ |

ಅವಳು, ದಟ್ಟವಾದ ಮಂಜಿನಂತೆ ಕಾಣುವ ವಸ್ತ್ರದಿಂದ ಆಚ್ಛಾದಿತಳಾಗಿದ್ದಳು ; ಸಾಂದ್ರವಾದ ಆಕಾಶದಂತೆ-ಅವಳ ತಲೆಯಮೇಲಿನ ಮುಸುಕು ಕಾಣಿಸುತಿದ್ದಿತು ; ದೊಡ್ಡ ಮೇಘಮಂಡಲವು ಪ್ರಸರಿಸಿರುವಂತೆ ಅವಳು ಪ್ರಕಾಶಿಸುತಿದ್ದಳು; ಅಂಧಕಾರದಂತಿದ್ದ ಅವಳ ಕೇಶಪಾಶಗಳು, ನಿತ್ಯವೂ ಮೇಲ್ಮುಖವಾಗಿ ಹರಡಿರುವುವು ||೫||

ಮಿಂಚು ಸ್ಥಿರವಾಗಿ ಒಂದುಕಡೆ ನಿಂತಿರುವಂತೆ, ಅವಳ ನೇತ್ರಗಳಿದ್ದುವು; ಅವಳ ಜಾನುಗಳು, ದೊಡ್ಡ ಹೊಂಗೆಯಮರಗಳ ಹಾಗಿದ್ದುವು ; ಅವಳ ಉಗುರುತುದಿಗಳು, ವೈಡೂರ್ಯಮಣಿಗಳಂತೆ ಹೊಳೆಯುತ ಮೊರದಷ್ಟು ಅಗಲವಾಗಿದ್ದುವು ; ಅವಳು ಒಂದುವೇಳೆ ಮಂದಹಾಸಮಾಡಿದರೆ, ಬೂದಿಯನ್ನೆರಚಿದಂತೆಯೂ —ಮಂಜುಹರಡಿದಂತೆಯೂ ಆಗುತಿದ್ದಿತು ||೬||

ಒಣಗಿದ ಮನುಷ್ಯದೇಹಗಳನ್ನು, ಅವಳು ಪುಷ್ಪಮಾಲಿಕೆಯಂತೆ ಧರಿಸುತಿದ್ದಳು ; ಇದಲ್ಲದೆ, ಸಮಸ್ತ ಅವಯವಗಳಿಗೂ ದೊಡ್ಡದೊಡ್ಡ ಶವಗಳನ್ನು ಮಾಲಿಕೆಮಾಡಿ ಕಟ್ಟಿಕೊಂಡಿದ್ದಳು||

ಬೇತಾಳಗಳ ಜತೆಯಲ್ಲಿ ನರ್ತನಮಾಡುವಾಗ, ಇವಳ ಕಪ್ಪಾದ—ಕುಂಡಲಗಳು ಘೋರವಾಗಿ ಚಲಿಸುತಿದ್ದುವು; ಇವಳು, ತನ್ನ ಘೋರವಾದ ಭುಜಾಗ್ರಗಳಿಂದ, ಸೂರ್ಯಮಂಡಲವನ್ನು ಹಿಡಿದುಕೊಳ್ಳಲಪೇಕ್ಷಿಸುತಿದ್ದಳು ||೮||

ಅವಳು ಸ್ವಭಾವತಃ ದೊಡ್ಡ ದೇಹವುಳ್ಳವಳಾಗಿದ್ದುದರಿಂದಲೂ, ಅದಕ್ಕೆ ತಕ್ಕಷ್ಟು ಅನ್ನವು ಸಿಕ್ಕದಿರುವುದರಿಂದಲೂ, ಅವಳ ಜಠರಾಗ್ನಿಯು ತೃಪ್ತಿಪಡದೆ ಬಡಬಾಗ್ನಿಯಂತೆ ಸರ್ವದಾ ಪ್ರಜ್ವಲಿಸುತಿದ್ದಿತು ||೯||

ಮಹೋದರಿಯಾದ ಆ ರಾಕ್ಷಸಿಯು, ಬಡಬಾಗ್ನಿಜ್ವಾಲೆಯಂತೆ, ಯಾವಾಗಲೂ ತೃಪ್ತಿಹೊಂದದವಳಾಗಿಯೇ ಇರುತಿದ್ದಳು. ಹೀಗಿರುತ ಒಂದಾನೊಂದು ಸಮಯದಲ್ಲಿ ಹೀಗೆ ಯೋಚಿಸಿದಳು ||೧೦||

ಸಮುದ್ರವು ಇತರವಾದ ಸಮಸ್ತ ಜಲಸಮುದಾಯವನ್ನೂ ನುಂಗಿಬಿಡುವಂತೆ, ನಾನು ಈ ಜಂಬೂದ್ವೀಪದಲ್ಲಿರುವ ಸಮಸ್ತಜನಗಳನ್ನೂ ಪ್ರತಿಯೊಂದು ಶ್ವಾಸಕ್ಕೂ ಒಬ್ಬೊಬ್ಬರಂತೆ ಎಡೆ

ಅನಾರತಮನುಶ್ವಾಸಂ ಜಲರಾಶಿಮಿವಾರ್ಣವಃ ॥೧೧॥
ಮೇಘೇನ ಮೃಗತೃಷ್ಣೇವ ತಸ್ಮೇ ಕ್ಷುದುಪಶಾಮ್ಯತಿ ।
ಅವಿರುದ್ಧೈವ ಸಾ ಯುಕ್ತಿಃ ಯಯಾಪದಿ ಹಿ ಜೀವ್ಯತೇ ॥೧೨॥
ಮನ್ತ್ರೌಷಧತಪೋದಾನದೇವಪೂಜಾದಿರಕ್ಷಿತಮ್ ।
ಸಮಮೇವ ಜನಂ ಸರ್ವಂ ನಿರ್ಬಾಧಂ ಕಃ ಪ್ರಬಾಧತೇ ॥೧೩॥
ತಪಃ ಕರೋಮಿ ಪರಮಂ ಅಖಿನ್ನೇನೈವ ಚೇತಸಾ ।
ತಪಸೈವ ಮಹೋಗ್ರೇಣ ಯದ್ದುರಾಪಂ ತದಾಪ್ಯತೇ ॥೧೪॥
ಇತಿ ಸಞ್ಚಿನ್ತ್ಯ ಸಾ ಸರ್ವಜನ್ತುಜಾತಜಿಘಾಂಸಯಾ ।
ತಪೋರ್ಥಮಥ ಸಸ್ಮಾರ ಪರ್ವತಂ ಭೂತದುರ್ಗಮಮ್ ॥೧೫॥
ಆರುರೋಹ ಚ ತಚ್ಛೃಙ್ಗಂ ಸ್ಥಿರವಿದ್ಯುದ್ವಿಲೋಚನಾ ।
ಹಸ್ತಪಾದಾದಿಮದ್ದೇಹಾ ಶ್ಯಾಮಲೇವಾಭ್ರಮಣ್ಡಲೀ ॥೧೬॥
ತತ್ರ ಗತ್ವಾಥ ಸಾ ಸ್ನಾತ್ವಾ ತಪಃ ಕರ್ತುಂ ಕೃತಸ್ಥಿತಿಃ ।
ಅತಿಷ್ಠದೇಕಪಾದೇನ ಚನ್ದ್ರಾರ್ಕಾಸ್ಪನ್ದಲೋಚನಾ ॥೧೭॥

ಬಿಡದೆ ನುಂಗುತಬಂದ ಪಕ್ಷದಲ್ಲಿ, ಆಗ—ಮೇಘೋದಯದಿಂದ ಮರುಮರೀಚಿಕೆ ಶಾಂತವಾಗುವಂತೆ—ನನ್ನ ಹಸಿವು ಶಾಂತವಾಗಬಹುದು. ಈ ಉಪಾಯವು ಯುಕ್ತವಲ್ಲವೆಂದು ಯೋಚಿಸಲೂ ಅವಕಾಶವಿಲ್ಲ. ಆಪತ್ಕಾಲ ಬಂದಾಗ ಯಾವವಿಧವಾದ ಜೀವನೋಪಾಯವನ್ನು ಕಲ್ಪಿಸಿಕೊಂಡು ಜೀವಿಸಿದರೂ, ಆ ಮಾರ್ಗವೆಂದಿಗೂ ದುಷ್ಟವಾಗಲಾರದು ॥೧೧—೧೨॥

ಆದರೆ, ಮಂತ್ರ ಔಷಧ ತಪಸ್ಸು ದಾನ ಯಜ್ಞ—ಇತ್ಯಾದಿಗಳ ಶಕ್ತಿಯಿಂದ ಸುರಕ್ಷಿತವಾಗಿರುವ ಈಸಮಸ್ತ ಜನಸಮೂಹವನ್ನೂ, ಒಂದೇಸಲ ನಿರಾಬಾಧವಾಗಿ ಕೊಂದುಬಿಡುವುದಕ್ಕೆ ಯಾರುತಾನೆ ಸಮರ್ಥರಾದಾರು ? ॥೧೩॥

ಅದುಕಾರಣ, ಈಗ ನಾನು ಮನಸ್ಸಿಗೆ ಸ್ವಲ್ಪವೂ ಖೇದಹತ್ತಿಸಿಕೊಳ್ಳದೆ, ಶ್ರೇಷ್ಠವಾದ ತಪಸ್ಸನ್ನು ಮಾಡುವೆನು. ಈ ಲೋಕದಲ್ಲಿ ಯಾವುದು ಹೊಂದಲಸಾಧ್ಯವಾಗಿರುವುದೋ, ಅದೆಲ್ಲವೂ ಉಗ್ರವಾದ ತಪಶ್ಶಕ್ತಿಯಿಂದ ಹೊಂದಲ್ಪಡುವುದರಲ್ಲಿ ಸಂಶಯವಿಲ್ಲ ॥೧೪॥

ಅಯ್ಯಾ! ರಾಮ! ಈರೀತಿಯಾಗಿ ಯೋಚಿಸಿ, ಆ ರಾಕ್ಷಸಿಯು, ಸಮಸ್ತಪ್ರಾಣಿಸಮುದಾಯವನ್ನೂ ಕೊಂದುಬಿಡುವುದರಲ್ಲಾಸಕ್ತಳಾಗಿ, ಯಾವ ಪ್ರಾಣಿಯೂ ಬರುವುದಕ್ಕಸಾಧ್ಯವಾಗಿರುವ ಹಿಮವತ್ಪರ್ವತವೇ—ತಾನು ತಪಸ್ಸು ಮಾಡುವುದಕ್ಕೆ ಸರಿಯಾದ ಸ್ಥಳವೆಂದು ಯೋಚಿಸಿದಳು ॥೧೫॥

ಬಳಿಕ, ಆ ಹಿಮವತ್ಪರ್ವತದ ಶಿಖರದ ಮೇಲಕ್ಕೆ ಹತ್ತಿಹೋದಳು ; ಅವಳು ಅಲ್ಲಿ ಕುಳಿತಿರುವಾಗ, ಇವಳ ಹಸ್ತಪಾದಗಳು ಆ ಶಿಖರದಮೇಲೆ ದೊಡ್ಡ ಮೇಘಮಂಡಲ ಕುಳಿತಿರುವಂತೆ ಕಾಣುತಿದ್ದುವು ; ಇವಳ ನೇತ್ರಗಳು, ಸ್ಥಿರವಾದ ಮಿಂಚಿನಂತೆ ಹೊಳೆಯುತಿದ್ದುವು ॥೧೬॥

ಅನಂತರ, ಅವಳು ಅಲ್ಲಿಗೆ ಹೋದವಳಾಗಿ, ಅಲ್ಲಿ ಸ್ನಾನಮಾಡಿ, ತಪಸ್ಸುಮಾಡುವುದಕ್ಕೆ ನಿಯಮವನ್ನು ಕೈಗೊಂಡವಳಾಗಿ, ಚಂದ್ರಸೂರ್ಯರಂತೆ ಜ್ವಲಿಸುತಿರುವ ಕಣ್ಣುಗಳನ್ನು ಸ್ವಲ್ಪವೂ ಅಲುಗಾಡಿಸದೆ, ಒಂಟಿಕಾಲಿನಿಂದ ನಿಂತಿರುತಿದ್ದಳು ॥೧೭॥

ಕ್ರಮೇಣ ದಿವಸಾಃ ಪಕ್ಷಾಃ ತಸ್ಯಾಮಾಸರ್ತವೋ ಯಯುಃ |
ಶೀತಾತಪೇಷು ಲೀನಾಯಾಃ ಕೃತಾಯಾಇವ ಶೈಲತಃ ||೧೮||

ಸಾ ಬಭೂವಾಭ್ರಮಾಲಾಯಾಃ ಸಮಾ ಸಂಸ್ತಬ್ಧಿತಾಕೃತಿಃ |
ಕೃಷ್ಣೋರ್ಧ್ವಗೋರ್ಧ್ವಕೇಶೀ ಚ ಖಮಾಹರ್ತುಮಿವೋದ್ಗತಾ ||೧೯||

ಆಲೋಕ್ಯ ತಾಂ ಪವನಜರ್ಜರಿತಾಙ್ಗಕತ್ವ
ಕೀರಾಂಗಣಾಕೃತಿರಣತ್ಪವನಾವಧೂತೈಃ|
ಊರ್ಧ್ವಸ್ಥಮೂರ್ಧಜತಮಃಪಟಲೈರ್ದಧಾನಾಂ
ತಾರೌಘಮೌಕ್ತಿಕಮಜಃ ಸಮುಪಾಜಗಾಮ ||೨೦||

ಇತಿ ಉತ್ಪತ್ತಿಪ್ರಕರಣೇ ಕರ್ಕಟ್ಯುಪಾಖ್ಯಾನೇ ರಾಕ್ಷಸೀವರ್ಣನಂ ನಾಮ
ಅಷ್ಟಷಷ್ಟಿತಮಃ ಸರ್ಗಃ.

ಹೀಗೆ, ಅವಳು ಬಿಸಿಲು ಮಳೆ ಚಳಿಗಳಲ್ಲಿ ಮುಣುಗಿ ಹೋಗಿ-ಕಲ್ಲಿನಿಂದ ಮಾಡಲ್ಪಟ್ಟವಳಂತೆ ನಿಂತಿರುವಾಗ, ಕ್ರಮಕ್ರಮವಾಗಿ, ದಿವಸಗಳೂ ಪಕ್ಷಗಳೂ ಮಾಸಗಳೂ ಋತುಗಳೂ ಅಸಂಖ್ಯಾಕವಾಗಿ ಕಳೆದುಹೋದುವು ||೧೮||

ಇಷ್ಟಾದರೂ, ತನ್ನ ದೇಹವನ್ನು ಸ್ವಲ್ಪವೂ ಚಂಚಲಪಡಿಸದೆ ನಿಂತಿರುವ ಆ ಕರ್ಕಟಿಯು, ಆ ಪರ್ವತಶಿಖರದಮೇಲೆ ಕುಳಿತಿರುವ ಮೇಘಪಂಕ್ತಿಗೆ ಸದೃಶಳಾಗಿ ಕಾಣಿಸುತಿದ್ದಳು ; ಅವಳ ಕಪ್ಪಾದ ಕೇಶಪಾಶಗಳು ಊರ್ಧ್ವಮುಖವಾಗಿ ಪ್ರಸರಿಸಿರುವುದರಿಂದ, ಅಂತರಿಕ್ಷವನ್ನು ಹಿಡಿದುಕೊಳ್ಳುವುದಕ್ಕೆ ಉದ್ಯೋಗಮಾಡುತಿರುವಂತೆ ವಿರಾಜಿಸುತಿದ್ದಳು ||೧೯||

ಹೀಗಿರುವಾಗ, ಅವಳುಟ್ಟುಕೊಂಡಿರುವ ನಾರುಮಡಿಯನ್ನು, ಶೀತೋಷ್ಣವಾಗಿ ಬೀಸುತಿರುವ ಚಂಡಮಾರುತವು ಜರ್ಜರಮಾಡಿಬಿಟ್ಟಿತು; ಸೇನೆಯ ಕೂಗಿನಂತೆ ಧ್ವನಿಮಾಡುತಿರುವ ವಾಯುವು, ಅವಳ ಊರ್ಧ್ವಮುಖವಾಗಿರುವ ಕೇಶಪಾಶಗಳನ್ನು ಹಾರಾಡಿಸುತಿದ್ದಿತು; ಇಂತಹ ಕೇಶಪಾಶಗಳೆಂಬ ಅಂಧಕಾರಸಮೂಹಗಳಿಂದ, ಮುಕ್ತಾಕಲಾಪದಂತಿರುವ ನಕ್ಷತ್ರ ಸಮೂಹಗಳನ್ನು ಧರಿಸಿಕೊಂಡಿದ್ದಳು. (ಅವಳ ಕೂದಲುಗಳಲ್ಲಿ ನಕ್ಷತ್ರಗಳು ಅಂಟಿಕೊಂಡಿದ್ದುವು) ಇಂತಹ ಕಷ್ಟವನ್ನನುಭವಿಸುತ ಆ ಕರ್ಕಟಿಯು ಘೋರವಾದ ತಪಸ್ಸಿನಲ್ಲಿ ನಿರತಳಾಗಿರುವುದನ್ನು ನೋಡಿ, ಬ್ರಹ್ಮನು ಅವಳಿಗೆ ಪ್ರತ್ಯಕ್ಷನಾಗಿ ಬಂದನು ||೨೦||

ಇದು ಉತ್ಪತ್ತಿಪ್ರಕರಣದಲ್ಲಿ ಕರ್ಕಟ್ಯುಪಾಖ್ಯಾನದೊಳಗೆ ರಾಕ್ಷಸೀತಪಶ್ಚರಣವರ್ಣನೆಯೆಂಬ
ಅರವತ್ತೆಂಟನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕೋನಸಪ್ತತಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಅಥ ವರ್ಷಸಹಸ್ರೇಣ ತಾಂ ಪಿತಾಮಹಆಯಯೌ ।
ದಾರುಣಂ ಹಿ ತಪಃ ಸಿದ್ಧ್ಯೈ ವಿಷಾಗ್ನಿರಪಿ ಶೀತಲಃ ॥೧॥
ಮನಸೈವ ಪ್ರಣಮ್ಯೈನಂ ಸಾ ತಥೈವ ಸ್ಥಿತಾ ಸತೀ ।
ಕೋ ವರಃ ಕ್ಷುಚ್ಛಮಾಯಾಲಂ ಇತಿ ಚಿನ್ತಾನ್ವಿತಾಭವತ್ ॥೨॥
ಆಃ ಸ್ಮೃತಂ ಪ್ರಾರ್ಥಯಿಷ್ಯೇಽಹಂ ವರಮೇಕಮಿಮಂ ವಿಭುಮ್ ।
ಅನಾಯಸೀ ಚಾಯಸೀ ಚ ಸ್ಯಾಮಹಂ ಜೀವಸೂಚಿಕಾ ॥೩॥

ಉತ್ಪತ್ತಿಪ್ರಕರಣದಲ್ಲಿ ಅರುವತ್ತೊಂಬತ್ತನೆಯ ಸರ್ಗವು

ದತ್ವಾತ್ರ ಧಾತುಃ ಕರ್ಕಟ್ಯೈ ಯಥಾಭಿಲಷಿತಂ ವರಮ್ ।
ಮನ್ತ್ರಂ ಚ ಗುಣಿರಕ್ಷಾರ್ಥಂ ಸ್ವಲೋಕೇ ಗತಿರುಚ್ಯತೇ ॥

ಬ್ರಹ್ಮನು, ಆ ಕರ್ಕಟಿಗೆ ಯಥಾಭೀಪ್ಸಿತವಾದ ವರವನ್ನೂ, ಸುಗುಣಶಾಲಿಗಳ ಸಂರಕ್ಷಣಾರ್ಥವಾಗಿ ಮಂತ್ರವನ್ನೂ ಕೊಟ್ಟು, ತನ್ನ ಲೋಕಕ್ಕೆ ಹೊರಟುಹೋದನೆಂಬ ವಿಷಯವು ಈ ಸರ್ಗದಲ್ಲಿ ಹೇಳಲ್ಪಡುವುದು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಆ ಕರ್ಕಟಿಯೆಂಬ ರಾಕ್ಷಸಿಯು ತಪಸ್ಸು ಮಾಡುತಿರುವಾಗ, ಒಂದು ಸಾವಿರವರ್ಷ ಕಳೆದಬಳಿಕ, ಚತುರ್ಮುಖಬ್ರಹ್ಮನು ಪ್ರಸನ್ನನಾಗಿ ಅವಳಿದ್ದ ಕಡೆಗೆ ಬಂದನು. ಅವಳು ಅಷ್ಟು ದುಷ್ಟಳಾಗಿದ್ದರೂ ಕೂಡ, ಬ್ರಹ್ಮನು ಅವಳಿಗೆ ಅನುಗ್ರಹ ಮಾಡಿಯೇ ತೀರಬೇಕಾಯ್ತು. ಘೋರವಾದ ತಪಸ್ಸು, ಎಂಥವರಿಗಾದರೂ ಕಾರ್ಯಸಿದ್ಧಿಪ್ರದವಾಗುವುದು. ಅಂತಹ ತಪಸ್ಸಿದ್ಧಿಯನ್ನು ಪಡೆದಿರತಕ್ಕವರಿಗೆ, ವಿಷಾಗ್ನಿಯೂ ಕೂಡ ತಣ್ಣಗಾಗಿ ಬಿಡುವುದು ॥೧॥

ಆಗ ಆ ಕರ್ಕಟಿಯು, ಮನಸ್ಸಿನಲ್ಲಿಯೇ ಆ ಬ್ರಹ್ಮನಿಗೆ ನಮಸ್ಕರಿಸಿ, ತನಗೆ ಹಸಿವು ಅಡಗಬೇಕಾದರೆ ಯಾವ ವರವು ಸರಿಯಾಗಿರುವುದೆಂದು ಬಹಳವಾಗಿ ಯೋಚಿಸಲುಪಕ್ರಮಿಸಿದಳು॥೨॥

ಹಾಗೆಯೇ ಯೋಚಿಸುತ ಅವಳು—“ಆಹಹ! ನನಗೆ ಈಗ ಸ್ಮೃತಿಯುಂಟಾಯ್ತು. ಈ ಬ್ರಹ್ಮದೇವರನ್ನು, ನಾನು ಈ ವರವನ್ನು ಕೇಳಿಕೊಳ್ಳುವೆನು. ಏನೆಂದರೆ:—ನಾನು (೧) ಅಯೋಮಯುವಲ್ಲದೆಯೂ ಅಯೋಮಯುವಾಗಿಯೂ ಇರುವ ಜೀವಸೂಚಿಕೆಯಾಗಬೇಕು. ಇವನ

(೧) ಅಯೋಮಯು = ಕಬ್ಬಿಣದಿಂದ ಮಾಡಲ್ಪಟ್ಟುದು. ಅಯೋಮಯುವಾದ ಜೀವಸೂಚಿಕೆಯೆಂದರೆ,—ಜೀವಸಹಿತವಾದ ಕಬ್ಬಿಣದ ಸೂಜಿಯೆಂದರ್ಥವು. ಅಯೋಮಯುವಲ್ಲದ ಜೀವಸೂಚಿಕೆಯೆಂದರೆ,—ಸೂಜಿಯಂತೆ ಬಾಧೆಪಡಿಸುವ ರೋಗಗಳೆಂದರ್ಥವು. ಈ ಯೆರಡು ವಿಧವಾದ ಅವಸ್ಥೆಯೂ ಉಂಟಾಗಿಬಿಟ್ಟರೆ, ತಾನು ಸಕಲ ಪ್ರಾಣಿಗಳಲ್ಲಿಯೂ ಅಲಕ್ಷಿತಳಾಗಿ ಪ್ರವೇಶಿಸಿ—ಸರ್ವರನ್ನೂ ಕೊಂದುಬಿಡಬಹುದೆಂದು ಕರ್ಕಟಿಯ ಅಭಿಪ್ರಾಯವು.

ಅಸ್ಯೋಕ್ತಾ ದ್ವಿವಿಧಾ ಸೂಚೀ ಭೂತ್ವಾಽಲಕ್ಷ್ಯ ವಿಶಾಮ್ಯಹಮ್ ।
ಪ್ರಾಣಿನಾಂ ಸಹ ಸರ್ವೇಷಾಂ ಹೃದಯಂ ಸುರಭಿರ್ಯಥಾ ॥೪॥
ಯಥಾಭಿಮತಮೇತೇನ ಗ್ರಸೇಯಂ ಸಕಲಂ ಜಗತ್ ।
ಕ್ರಮೇಣ ಕ್ಷುದ್ವಿನಾಶಾಯ ಕ್ಷುದ್ವಿನಾಶಃ ಪರಂ ಸುಖಮ್ ॥೫॥
ಇತಿ ಸಞ್ಚಿನ್ತಯನ್ತೀಂ ತಾಂ ಉವಾಚ ಕಮಲಾಲಯಃ ।
ಅನ್ಯಾದೃಶ್ಯಾಸ್ತಥಾ ದೃಷ್ಟ್ವಾ ಸ್ತನಿತಾಭ್ರರವೋಪಮಮ್ ॥೬॥

ಬ್ರಹ್ಮೋವಾಚ.

ಪುತ್ರಿ ಕರ್ಕಟಿಕೇ ರಕ್ಷಃಕುಲಶೈಲಾಭ್ರಮಾಲಿಕೇ ।
ಉತ್ತಿಷ್ಠ ತ್ವಂ ತು ತುಷ್ಟೋಽಸ್ಮಿ ಗೃಹಾಣಾಭಿಮತಂ ವರಮ್ ॥೭॥

ಕರ್ಕಟ್ಯುವಾಚ.

ಭಗವನ್ ಭೂತಭವ್ಯೇಶ ಸ್ಯಾಮಹಂ ಜೀವಸೂಚಿಕಾ ।
ಅನಾಯಸೀ ಚಾಯಸೀ ಚ ವಿಧೇಽರ್ಪಯಸಿ ಚೇದ್ವರಮ್ ॥೮॥

ವರದಿಂದ ನಾನು ಈ ಯೆರಡುವಿಧವಾದ ಸೂಚಿಕೆಯಾಗಿ, ಪುಷ್ಪಗಂಧವು ಯಾರಿಗೂ ಕಾಣಿಸದೆ ಪ್ರವೇಶಿಸುವಹಾಗೆ, ಸಮಸ್ತ ಪ್ರಾಣಿಗಳ ಹೃದಯವನ್ನೂ ಅಲಕ್ಷಿತಳಾಗಿ ಪ್ರವೇಶಿಸಬೇಕು. ಈ ವರವೊಂದು ನನಗೆ ಲಬ್ಧವಾಗಿಬಿಟ್ಟರೆ, ಆಮೇಲೆ ನನ್ನ ಕ್ಷುನ್ನಿವೃತ್ತಿಗೋಸ್ಕರ, ಇದರಿಂದಲೇ ಸಮಸ್ತವಾದ ಜಗತ್ತನ್ನೂ ಕ್ರಮೇಣ ನುಂಗಿಬಿಡುವೆನು. ಪ್ರಪಂಚದಲ್ಲಿ, ಪ್ರಾಣಿಗಳಿಗೆ ಕ್ಷುನ್ನಿವೃತ್ತಿಯೇ ಪರಮ ಸುಖವೆನ್ನಿಸುವುದು ॥ ೩—೫ ॥

ಅಯ್ಯಾ! ರಾಮ! ಆ ಕರ್ಕಟಿ ಈ ರೀತಿಯಾಗಿ ಯೋಚಿಸುತಿರುವಾಗ, ಚತುರ್ಮುಖನು, ಇತರ ತಪಸ್ವಿಗಳಂತೆ ಶಮದಮಾದಿಗಳನ್ನಪೇಕ್ಷಿಸದೆ ಪ್ರಾಣಿಹಿಂಸೆಯಲ್ಲಾಸಕ್ತಳಾಗಿ ತಪಸ್ಸು ಮಾಡುತಿರುವ ಆ ಕರ್ಕಟಿಯ ಅಭಿಲಾಷೆಯನ್ನಾಲೋಚಿಸಿದವನಾಗಿ, ಮೇಘಧ್ವನಿಯಂತೆ ಗಟ್ಟಿಯಾಗಿ ಹೀಗೆ ಹೇಳಿದನು ॥೬॥

ಆ ಬ್ರಹ್ಮನು ಹೇಳಿದುದೇನೆಂದರೆ:—

ಹೇ ಪುತ್ರಿ! ಕರ್ಕಟಿಕೆ! ಮೇಘಪಂಕ್ತಿಯು ಪರ್ವತಶಿಖರದಮೇಲಿರುವಂತೆ, ನೀನು ಸಮಸ್ತ ರಾಕ್ಷಸ ಕುಲದಲ್ಲಿಯೂ ಮೇಲಾಗಿರುವೆ. ನೀನು ತಪಸ್ಸುಬಿಟ್ಟು ಏಳುವವಳಾಗು. ನಿನಗೆ ನಾನು ಪ್ರಸನ್ನನಾಗಿರುವೆನು; ನಿನಗಿಷ್ಟವಾದ ವರವನ್ನು ಸ್ವೀಕರಿಸು ॥೭॥

ಇದನ್ನು ಕೇಳಿ ಕರ್ಕಟಿಯು ಪ್ರಾರ್ಥಿಸುವಳು:—

ಭೂತಭವ್ಯಪ್ರಭೋ! ಭಗವನ್! ವಿಧೇ! ನೀನು ನನಗೆ ವರವನ್ನು ಕೊಡುವ ಪಕ್ಷದಲ್ಲಿ, ಇದನ್ನನುಗ್ರಹಿಸು. ನಾನು (೧) ಅನಾಯಸಿಯಾಗಿಯೂ ಆಯಸಿಯಾಗಿಯೂ ಇರುವ ಜೀವಸೂಚಿಕೆಯಾಗಬೇಕು. ಇದೊಂದೇ ವರವು ನನಗೆ ಸಾಕಾಗಿರುವುದು ॥೮॥

---

(೧) ಈ ಸಂದರ್ಭದಲ್ಲಿ ತಿಳಿಯಬೇಕಾದ ಅನೇಕ ವಿಷಯಗಳಿರುವುವು, ಇದಲ್ಲದೆ, ಮಂತ್ರಶಾಸ್ತ್ರಪ್ರಕ್ರಿಯೆಯೆಲ್ಲವೂ ವಕ್ತವ್ಯವಾಗಿರುವುದು. ಮುಖ್ಯವಾದ ವಿಷಯಮಾತ್ರ ಇಲ್ಲಿ ಸೂಚಿಸಲ್ಪಡುವುದು:—ವಿಷ್ಣುವಿನ ಶಕ್ತಿ ಯೆರಡುವಿಧವಾಗಿರುವುದು. ಮೊದಲನೆಯದು ಮಾಯಾಶಕ್ತಿಯು. ಇತರವಾದ ಸಮಸ್ತ ಶಕ್ತಿಗಳೂ ಈ ಮಾಯಾಶಕ್ತ್ಯಧೀನವಾಗಿರುವುವು. ಎರಡನೆಯದು ಯಾವುದೆಂದರೆ,—ಈ ಮಾಯಾಶಕ್ತ್ಯಧೀನವಾಗಿ ಪ್ರತಿಪ್ರಾಣಿಗಳ ವಿಷಯದಲ್ಲಿಯೂ ನಿಯತವಾಗಿರ-

ಶ್ರೀವಸಿಷ್ಠ ಉವಾಚ.

ಏವಮಸ್ತ್ವಿತಿ ತಾಮುಕ್ತ್ವಾ ಪುನರಾಹ ಪಿತಾಮಹಃ ।
ಸೂಚಿಕಾ ಸೋಪಸರ್ಗಾ ತ್ವಂ ಭವಿಷ್ಯಸಿ ವಿಷೂಚಿಕಾ ।
ಸೂಕ್ಷ್ಮಯಾ ಮಾಯಯಾ ಸರ್ವಲೋಕಹಿಂಸಾಂ ಕರಿಷ್ಯಸಿ ॥೯॥
ದುರ್ಭೋಜನಾದುರಾರಬ್ಧಾಃ ಮೂರ್ಖಾದುಸ್ಥಿತಯಶ್ಚ ಯೇ ।
ದುರ್ದೇಶವಾಸಿನೋ ದುಷ್ಟಾಸ್ತೇಷಾಂ ಹಿಂಸಾಂ ಕರಿಷ್ಯಸಿ ॥೧೦॥
ಪ್ರವಿಶ್ಯಾಹೃದಯಂ ಪ್ರಾಣೈಃ ಪದ್ಮಪ್ಲೀಹಾದಿಬಾಧನಾತ್ ।
ವಾತಲೇಖಾತ್ಮಿಕಾ ವ್ಯಾಧಿಃ ಭವಿಷ್ಯಸಿ ವಿಷೂಚಿಕಾ ॥೧೧॥
ಸಗುಣಂ ವಿಗುಣಂ ಚೈವ ಜನಮಾಸಾದಯಿಷ್ಯಸಿ ।
ಗುಣಾನ್ವಿತಚಿಕಿತ್ಸಾರ್ಥಂ ಮನ್ತ್ರೋಯಂ ತು ಮಯೋಚ್ಯತೇ ॥೧೨॥
ಹಿಮಾದ್ರೇರುತ್ತರೇ ಪಾರ್ಶ್ವೇ ಕರ್ಕಟೀ ನಾಮ ರಾಕ್ಷಸೀ ।
ವಿಷೂಚಿಕಾಭಿಧಾನಾ ಸಾ ನಾಮ್ನಾಪ್ಯನ್ಯಾಯಬಾಧಿಕಾ ॥೧೩॥

ಶ್ರೀ ವಸಿಷ್ಠರು ರಾಮಚಂದ್ರನಿಗೆ ಹೇಳುವರು:—

ಅಯ್ಯಾ! ರಾಮ! ಆ ಪಿತಾಮಹನು, ಹಾಗೆಯೇ ಆಗಲೆಂದು ಅವಳಿಗೆ ಹೇಳಿಬಿಟ್ಟು, ಆಮೇಲೆ ಮತ್ತೂ ಒಂದು ಮಾತನ್ನು ಹೇಳಿದನು. ಏನೆಂದರೆ:—ಹೇ ಪುತ್ರಿ! ನೀನು ಕೇಳಿದಂತೆಯೇ ನೀನು ಸೂಚಿಕೆಯಾಗು; ಆದರೆ, ಹಿಂದೆ ಒಂದು ಉಪಸರ್ಗವು ಸೇರಿರಲಿ. ಹಾಗಾದರೆ, ಆಗ ಸೂಚಿಕೆಯೆಂಬ ಶಬ್ದಕ್ಕೆ 'ವಿ' ಎಂಬ ಉಪಸರ್ಗವನ್ನು ಸೇರಿಸಿಬಿಟ್ಟು, ನಿನ್ನನ್ನು ವಿಷೂಚಿಕೆಯೆಂದು ಕರೆಯುವರು. ಆಗ ನೀನು ಸೂಕ್ಷ್ಮವಾದ ಮಾಯೆಯಿಂದ ಸಮಸ್ತ ಲೋಕವನ್ನೂ ಹಿಂಸೆಪಡಿಸುವೆ॥

ಆದರೆ, ಅದರಲ್ಲಿ ಸ್ವಲ್ಪ ವಿವೇಚನೆ ಮಾಡಬೇಕು. ಯಾರು, ನಿಷಿದ್ಧವಾದುದನ್ನಾಗಲಿ—ಅಪಕ್ವವಾದುದನ್ನಾಗಲಿ—ಅತಿಯಾಗಿಯಾಗಲಿ—ಅಥವಾ ಅಕಾಲದಲ್ಲಾಗಲಿ ಭೋಜನಮಾಡುತ್ತಾರೆಯೋ, ಯಾರು ಇತರರಿಗೆ ಅನಿಷ್ಟಾಚರಣೆಮಾಡುತ್ತಾರೆಯೋ, ಯಾರು ಮೂರ್ಖರಾಗಿ ಶಾಸ್ತ್ರನಿಷಿದ್ಧಮಾರ್ಗದಲ್ಲಿರುತ್ತಾರೆಯೋ, ಯಾರು ದುಷ್ಟರಾಗಿಯೂ ದುರ್ದೇಶದಲ್ಲಿ ವಾಸಮಾಡತಕ್ಕವರಾಗಿಯೂ ಇರುತ್ತಾರೆಯೋ, ಅವರಿಗೆಲ್ಲ ನೀನು ಹಿಂಸೆಯನ್ನುಂಟುಮಾಡುವೆ ॥೧೦॥

ಹೇ ಕರ್ಕಟಿ! ನೀನು, ಸೂಕ್ಷ್ಮವಾಯುರೂಪಳಾಗಿ, ಪ್ರಾಣವಾಯುದ್ವಾರಾ ಪ್ರಾಣಿಗಳ ಹೃದಯದವರೆಗೂ ಪ್ರವೇಶಿಸಿ, ಹೃದಯಕಮಲವನ್ನೂ ಹೊಟ್ಟೆಯ ಎಡಭಾಗದಲ್ಲಿರುವ ಗುಲ್ಮವೆಂಬ ಮಾಂಸಗ್ರಂಥಿಯನ್ನೂ ಇತರವಾದ ಅವಯವಗಳನ್ನೂ ಬಾಧೆಪಡಿಸುತ, ವಿಷೂಚಿಕಾನಾಮಕವ್ಯಾಧಿಯಾಗುವೆ ॥೧೧॥

ಆದರೆ, ನೀನು ಸಗುಣರಾದವರನ್ನೂ ವಿಗುಣರಾದವರನ್ನೂ ಸಮಾನವಾಗಿ ಸೇರುವೆ. ಅದುಕಾರಣ, ಗುಣಶಾಲಿಗಳ ಚಿಕಿತ್ಸೆಗೋಸ್ಕರವಾಗಿ ನಾನು ಈ ಮಂತ್ರವನ್ನು ಏರ್ಪಡಿಸಿರುವೆನು॥

ಏನೆಂದರೆ:—ಹಿಮವತ್ಪರ್ವತದ ಉತ್ತರಪಾರ್ಶ್ವದಲ್ಲಿ, ಕರ್ಕಟಿಯೆಂಬ ರಾಕ್ಷಸಿ ಯಿರುವಳು. ಅವಳೇ ವಿಷೂಚಿಕೆಯೆಂದೂ ಅನ್ಯಾಯಬಾಧಿಕೆಯೆಂದೂ ನಾಮಾಂತರವುಳ್ಳವಳಾಗಿರುವಳು॥೧೩॥

ತಕ್ಕ ಶಕ್ತಿಯು; ಇದು, ಸಾತ್ವಿಕವೆಂದೂ,—ರಾಜಸವೆಂದೂ, ತಾಮಸವೆಂದೂ ಮೂರು ಭೇದವುಳ್ಳುದಾಗಿರುವುದು. ರಾಜಸ ಶಕ್ತಿಯಿಂದ ಸೃಷ್ಟಿಯೂ, ಸಾತ್ವಿಕಶಕ್ತಿಯಿಂದ ಸ್ಥಿತಿಯೂ, ತಾಮಸಶಕ್ತಿಯಿಂದ ಲಯವೂ ಆಗುವುವು. ಪ್ರಕೃತದಲ್ಲಿ, ಈ ತಾಮಸಶಕ್ತಿಯು ಅಂಶಗಳಾಗಿ—ಪ್ರಾಣಿಗಳಿಗೆ

ಗದ್ಯ ॥ ತಸ್ಯಾಮನ್ತ್ರಃ. ಓಂ ಹ್ರೀಂ ಹ್ರಾಂ ರೀಂ ರಾಂ ವಿಷ್ಣುಶಕ್ತ್ಯೇ ನಮಃ। ಓಂ ನಮೋ ಭಗವತಿ ವಿಷ್ಣುಶಕ್ತಿಮೇನಾಂ ಓಂ ಹರಹರ ನಯನಯ ಪಚಪಚ ಮಥಮಥ ಉತ್ಸಾದಯ ದೂರೇಕುರು ಸ್ವಾಹಾ ।ಹಿಮವನ್ತಂ ಗಚ್ಛ ಜೀವ ಸಃ ಸಃ ಸಃ ಚನ್ದ್ರಮಣ್ಡಲಗತೋಽಸಿ ಸ್ವಾಹಾ ॥೧೪॥

ಇತಿ ಮನ್ತ್ರೀ ಮಹಾಮನ್ತ್ರಂ ನ್ಯಸ್ಯ ವಾಮಕರೋದರೇ ।
ಮಾರ್ಜಯೇದಾತುರಾಕಾರಂ ತೇನ ಹಸ್ತೇನ ಸಂಯುತಃ ॥೧೫॥

ಆವಳ ಬಾಧೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಈ ಮಂತ್ರವು ಜಪಿಸಲ್ಪಡುವುದು. 'ಓಂ ಹ್ರೀಂ ಹ್ರಾಂ ರೀಂ ರಾಂ ವಿಷ್ಣುಶಕ್ತ್ಯೇನಮಃ ॥ ಓಂ ನಮೋ ಭಗವತಿ......ಸ್ವಾಹಾ' ॥೧೪॥

ಈ ರೀತಿಯಾಗಿ ಮೇಲೆ ಹೇಳಿರುವ ಮಂತ್ರವನ್ನು, ಮಂತ್ರಪುರಶ್ಚರಣೆಮಾಡತಕ್ಕವನು ಬರೆದು, ತನ್ನ ಎಡಗೈಯಲ್ಲಿಟ್ಟುಕೊಂಡು, ಆ ಕೈಯಿಂದಲೇ – ರೋಗಿಯನ್ನು ಮಾರ್ಜನೆಮಾಡಬೇಕು ॥೧೫॥

ದುಷ್ಕರ್ಮಫಲ ಜನನಶಕ್ತಿವಿಶೇಷರೂಪವಾಗಿ ರೋಗಗಳು ಉತ್ಪನ್ನವಾಗುವುವು. ಆದುಕಾರಣ, ಈರೋಗ ನಿವೃತ್ತಿಗಾಗಿ, ಆದ್ಯವಾಗಿರುವ ಮಾಯಾಶಕ್ತಿಯನ್ನು ಪ್ರಾರ್ಥಿಸಬೇಕು. ಇದೇ ಈ ಮಂತ್ರ ಪುರಶ್ಚರಣೆಗೆ ಫಲವು. ಈ ಮಂತ್ರದ ಅರ್ಥವೇನೆಂದರೆ:—ಮೊದಲಿರತಕ್ಕ ಅಯ್ದು ಅಕ್ಷರಗಳಿಗೆ ಬೀಜಾಕ್ಷರಗಳೆಂದು ಹೆಸರು. ಮೊದಲನೆಯದು ಪ್ರಣವಬೀಜವೆಂದೂ, ದ್ವಿತೀಯವು ಮಾಯಾಬೀಜವೆಂದೂ, ಇತ್ಯಾದಿರೀತಿಯಾಗಿ ಶಾಸ್ತ್ರಸಂಕೇತಾನುಗುಣವಾಗಿ ತಿಳಿಯಬೇಕು. ಈ ಅಯ್ದು ಬೀಜಾಕ್ಷರಗಳಿಂದ ಆ ದೇವಿಯನ್ನು ಸಂಬೋಧಿಸಿ, ಬಳಿಕ ನಮಸ್ಕಾರವುಕ್ತವಾಗಿರುವುದು. ಪುನಃ ಪ್ರಣವಾಕ್ಷರವಿರುವುದರಿಂದ, ಅವ್ಯಯವಾದ ಅದು ಚತುರ್ಥೀವಿಭಕ್ತ್ಯಂತವೆಂದಿಟ್ಟುಕೊಂಡು, ಪುನಃ ನಮಶ್ಶಬ್ದದಿಂದ ನಮಸ್ಕಾರವುಕ್ತವಾಗಿರುವುದು. ಅಂತು, ಪರಬ್ರಹ್ಮಾತ್ಮಿಕಳಾದ ವಿಷ್ಣುಶಕ್ತಿಗೆ ನಮಸ್ಕಾರವೆಂದು ಸಿದ್ಧವಾಯ್ತು. ಮುಂದೆ ಪ್ರಾರ್ಥನೆಮಾಡತಕ್ಕ ವಿಧಾನವು. ಸರ್ವನಿಯಾಮಕ ಶಕ್ತಿಯುಳ್ಳ ಆದ್ಯ ವಿಷ್ಣುಶಕ್ತಿಯೆ ! ನಿನ್ನ ಅಂಶಭೂತಳಾದ ಈ ದ್ವಿತೀಯವಾದ ತಾಮಸ ವಿಷ್ಣುಶಕ್ತಿಯನ್ನು, ಓಂಕಾರವಾಚ್ಯವಾದ ಜಗತ್ಕಾರಣ ವಸ್ತುವಿನಲ್ಲಿ ಉಪಸಂಹರಿಸು ; ಅದನ್ನು ತನ್ನ ಸ್ಥಾನಕ್ಕೆ ಕಳುಹಿಸು ; ಪಾಕವುಂಟಾಗುವಂತೆ ಅದನ್ನು ಮೃದುವಾಗಿ ಮಾಡು ; ಚೆನ್ನಾಗಿ ಇದನ್ನು ಕಡೆದುಬಿಡು ; ದೂರವಾಗಿ ಓಡಿಸು. ಹವಿಸ್ಸು ಮೊದಲಾದುವುಗಳನ್ನು ಕೊಟ್ಟು ನಿನಗೆ ಪೂಜೆಮಾಡುವೆನು.—ಇದುವರೆಗೆ ಆದಿಶಕ್ತಿಯನ್ನು ಪ್ರಾರ್ಥಿಸಿ, ಆಮೇಲೆ ರೋಗಶಕ್ತಿಯನ್ನು ಕುರಿತು 'ಹೇ ರೋಗಶಕ್ತೇ ! ನೀನು ಹಿಮವತ್ಪರ್ವತಕ್ಕೆ ಹೊರಟುಹೋಗು' ಎಂದು ಪ್ರಾರ್ಥನೆಮಾಡುವನು. ಮುಂದಕ್ಕೆ ರೋಗಿಯನ್ನು ಕುರಿತು ಹೇಳುವ ವಚನವು:—ಪುರಾತನ ದುಷ್ಕರ್ಮದಿಂದ ಸಂಕಟಪಡುತಲೂ, ರೋಗದಿಂದ ಆಕ್ರಮಿಸಲ್ಪಟ್ಟೂ, ಮೃತ್ಯುವಿನಿಂದ ಸೆಳೆಯಲ್ಪಡುತಲೂ ಇರುವ ಎಲೈ ರೋಗಿಯಾದ ಮನುಷ್ಯನೆ ! ನೀನು ಈ ಮಂತ್ರಮಹಿಮೆಯಿಂದ ಜೀವಿಸುವವನಾಗು. ಸತ್ತವರನ್ನು ಬದುಕಿಸುವುದರಲ್ಲಿ ಸಂಪೂರ್ಣಶಕ್ತಿಯುಳ್ಳ ಅಮೃತದಿಂದ ಪರಿಪೂರ್ಣವಾದ ಚಂದ್ರಮಂಡಲವನ್ನು ನೀನು ಈಗ ಹೊಂದಿದವನಾಗಿರುವೆ,—ಎಂದು ಹೇಳಿ, ಕೊನೆಯಲ್ಲಿ ಅಗ್ನಿಯೊಳಗೆ ಹವಿಸ್ಸನ್ನು ಸಮರ್ಪಿಸುವಂತೆ—ರೋಗಿಯನ್ನು ಚಂದ್ರಮಂಡಲದೊಳಗೆ ಸಮರ್ಪಿಸಿದೆನೆಂದು, ಮಂತ್ರಜ್ಞನು ಭಾವಿಸಬೇಕು. ಇದಿಷ್ಟೂ ಕೂಡ, ಪುಸ್ತಕವನ್ನು ನೋಡಿದ ಮಾತ್ರದಿಂದಲೇ ಸಾಧ್ಯವಾಗಲಾರದು. ಕ್ರಮವಾಗಿ ಉಪದೇಶಾದಿಗಳಿಂದ ಅಧಿಕಾರಿಯಾದವನು ಸಿದ್ಧಿಹೊಂದಿದ ಬಳಿಕ ಪ್ರಯೋಗಿಸಿದರೆ ಫಲಿಸುವುದರಲ್ಲಿ ಸಂಶಯವಿಲ್ಲ.

ಹಿಮಶೈಲಾಭಿಮುಖ್ಯೇನ ವಿದ್ರುತಾಂ ತಾಂ ವಿಚಿನ್ತಯೇತ್ ।
ಕರ್ಕಟೀಂ ಕರ್ಕಶಾಕ್ರನ್ದಾಂ ಮನ್ತ್ರಮುದ್ಗರಮರ್ದಿತಾಮ್ ॥೧೬॥
ಆತುರಂ ಚಿನ್ತಯೇಚ್ಚನ್ದ್ರೇ ರಸಾಯನಹೃದಿ ಸ್ಥಿತಮ್ ।
ಅಜರಾಮರಣಂ ಯುಕ್ತಂ ಮುಕ್ತಂ ಸರ್ವಾಧಿವಿಭ್ರಮೈಃ ॥೧೭॥
ಸಾಧಕೋ ಹಿ ಶುಚಿರ್ಭೂತ್ವಾ ಸ್ವಾಚಾನ್ತಃ ಸುಸಮಾಹಿತಃ ।
ಕ್ರಮೇಣಾನೇನ ಸಕಲಾಂ ಪ್ರೋಚ್ಛಿನತ್ತಿ ವಿಷೂಚಿಕಾಮ್ ॥೧೮॥
ಇತಿ ಗಗನಗತಸ್ತ್ರಿಲೋಕನಾಥೋ ಗಗನಗಸಿದ್ಧಗೃಹೀತಸಿದ್ಧಮನ್ತ್ರಃ ।
ಗತಉಪಗತಶಕ್ರವನ್ದ್ಯಮಾನೋ ನಿಜಪುರಮಕ್ಷಯಮಾಯಯುಜ್ಜ್ವಲಶ್ರೀಃ ॥೧೯॥

ಇತಿ ಉತ್ಪತ್ತಿಪ್ರಕರಣೇ ಸೂಚ್ಯುಪಾಖ್ಯಾನೇ ವಿಷೂಚಿಕಾಮನ್ತ್ರಕಥನಂ ನಾಮ ಏಕೋನಸಪ್ತತಿತಮಃ ಸರ್ಗಃ.

ಬಳಿಕ, ವಿಷೂಚಿಕಾರೂಪಧಾರಿಣಿಯಾದ ಆ ಕರ್ಕಟಿಯು--ಮಂತ್ರವೆಂಬ ಮುದ್ಗರಾಯುಧದಿಂದ ಮರ್ದಿಸಲ್ಪಟ್ಟವಳಾಗಿ--ಕ್ರೂರವಾಗಿ ಕಿರಿಚಿಕೊಳುತ--ಹಿಮವತ್ಪರ್ವತದ ಕಡೆಗೆ ಓಡಿಹೋದಳೆಂದು ಭಾವಿಸಬೇಕು ॥೧೬॥

ಅನಂತರ, ರೋಗಿಯಾದವನನ್ನು, ಚಂದ್ರಮಂಡಲದೊಳಗೆ ಅಮೃತಗರ್ಭದಲ್ಲಿರುವಂತೆಯೂ-- ಜರಾಮರಣವಿಲ್ಲದವನಂತೆಯೂ--ಸರ್ವ ರೋಗವಿಲಾಸ ಮುಕ್ತನಾದಂತೆಯೂ ಭಾವಿಸಬೇಕು ॥೧೭॥

ಆದರೆ, ಈ ಮಂತ್ರಸಾಧನೆ ಮಾಡತಕ್ಕವನು ಶುಚಿಯಾಗಿರಬೇಕು; ಇಂತಹ ಸಾಧಕನು, ಕ್ರಮವಾಗಿ ಆಚಮನಾದಿಗಳನ್ನು ಮಾಡಿ, ಶಮದಮಯುಕ್ತನಾಗಿ, ಪೂರ್ವೋಕ್ತಕ್ರಮದಿಂದ ಚಿಕಿತ್ಸೆಮಾಡಿದರೆ, ಈ ವಿಷೂಚಿಕೆಯನ್ನು ನಿಶ್ಶೇಷಮಾಡುವನು ॥೧೮॥

ಹೀಗೆಂದು ಹೇಳಿ, ಆ ಬ್ರಹ್ಮನು ಅಂತರಿಕ್ಷಗತನಾದವನಾಗಲು, ಅಲ್ಲಿದ್ದ ಸಿದ್ಧರು ಈ ಮಂತ್ರವನ್ನು ಗ್ರಹಿಸಿದರು. ಇಷ್ಟರಲ್ಲಿ, ಇಂದ್ರನು ಇವನನ್ನು ಕರೆದುಕೊಂಡು ಹೋಗುವುದಕ್ಕಾಗಿ ಹತ್ತಿರಕ್ಕೆ ಬಂದು ನಮಸ್ಕರಿಸಿದನು. ಇಂತಹ ಸ್ಥಿತಿಯಲ್ಲಿರುತ, ಮಹಾ ಪ್ರಕಾಶಯುಕ್ತನಾದ ಆ ಬ್ರಹ್ಮನು, ಅವಿನಶ್ವರವಾದ ತನ್ನ ಲೋಕಕ್ಕೆ ಹೊರಟುಹೋದನು ॥೧೯॥

ಇದು ಉತ್ಪತ್ತಿಪ್ರಕರಣದಲ್ಲಿ ವಿಷೂಚಿಕಾಮಂತ್ರಕಥನವೆಂಬ ಅರವತ್ತೊಂಬತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಸಪ್ತತಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಅಥ ಭೂಧರಶೃಙ್ಗಾಭಾ ಸಾ ಮಹಾಕೃಷ್ಣರಾಕ್ಷಸೀ ।
ಕಜ್ಜಲಾಮ್ಬುದಲೇಖೇವ ತಾನವಂ ಗನ್ತುಮುದ್ಯತಾ ॥೧॥
ಬಭೂವಾಭ್ರೋಪಮಾಕಾರಾ ತತೋ ವಿಟಪರೂಪಿಣೀ ।
ಪುಂಸ್ಪ್ರಮಾಣಾ ತತೋಽಪ್ಯಾಸೀತ್ ಅಥಾಭೂದ್ಧಸ್ತಮಾತ್ರಿಕಾ ॥೨॥
ತತಃ ಪ್ರಾದೇಶಮಾತ್ರಾ ಸಾ ತತೋಽಪ್ಯಙ್ಗುಳಿರೂಪಿಣೀ ।
ತತೋ ಮಾಷಶಮೀತುಲ್ಯಾ ತತಃ ಸೂಚೀ ಬಭೂವ ಹ ॥೩॥
ತತಃ ಕೌಶೇಯಸೂಚಿತ್ವಂ ಪದ್ಮಕೇಸರಸುನ್ದರೀ ।
ಪ್ರಾಪ ಸಾ ಶಿಖರಾಕಾರಾ ಸಙ್ಕಲ್ಪಾದ್ರಿರಿವಾಣುತಾಮ್ ॥೪॥

ಉತ್ಪತ್ತಿಪ್ರಕರಣದಲ್ಲಿ ಎಪ್ಪತ್ತನೆಯ ಸರ್ಗವು.

ಕ್ರಮಶಸ್ತನುತಾ ಪೂರ್ವಂ ಸೂಚೀರೂಪದ್ವಯಂ ಗತಿಃ ।
ಸೂಚ್ಯಾಃ ಪ್ರಾಣಿಶರೀರೇಷು ಪ್ರವೇಶಶ್ಚೋಪವರ್ಣ್ಯತೇ ॥

ಆ ಕರ್ಕಟಿಯು ಕ್ರಮವಾಗಿ ಸೂಕ್ಷ್ಮರೂಪಹೊಂದುವಿಕೆಯೂ, ಎರಡುವಿಧವಾದ ಸೂಚೀರೂಪವನ್ನು ಧರಿಸುವಿಕೆಯೂ, ಅವಳ ಸಂಚಾರಪ್ರಕ್ರಮವೂ, ಪ್ರಾಣಿಗಳ ಶರೀರದಲ್ಲಿ ಅವಳು ಪ್ರವೇಶಿಸುವಿಕೆಯೂ ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಶ್ರೀವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಆ ಬ್ರಹ್ಮನು ವರವನ್ನು ಕೊಟ್ಟು ಹೊರಟುಹೋದ ಬಳಿಕ, ದೊಡ್ಡ ಪರ್ವತಶಿಖರದಂತಿದ್ದ ಆ ಮಹಾಕೃಷ್ಣವರ್ಣಳಾದ ರಾಕ್ಷಸಿಯು, ಕಾಡಿಗೆಯ ಮೇಘದಂತೆ ಕ್ರಮವಾಗಿ ಕೃಶತ್ವವನ್ನು ಹೊಂದಲುದ್ಯುಕ್ತಳಾದಳು ॥೧॥

ರಾಕ್ಷಸಿಯು, ಮೊದಲು ದೊಡ್ಡ ಮೇಘದಷ್ಟು ದಪ್ಪವಾದ ಶರೀರವುಳ್ಳವಳಾಗಿದ್ದಳು; ಬಳಿಕ ಒಂದು ಮರದ ಕೊಂಬೆಯಷ್ಟು ದಪ್ಪವಾದಳು; ಆಮೇಲೆ ಒಬ್ಬ ಮನುಷ್ಯನಷ್ಟು ದಪ್ಪವಾದಳು; ಅನಂತರ ಒಂದು ಮೊಳದುದ್ದವಾದಳು ॥೨॥

ಆಬಳಿಕ ಒಂದು ಗೇಣುದ್ದವಾದಳು; ಆಮೇಲೆ ಒಂದು ಬೆರಳಿನಂತಾದಳು; ಅನಂತರ ಒಂದು ಉದ್ದಿನಕಾಯಿನ ಸಿಪ್ಪೆಯಷ್ಟಾದಳು; ಆಮೇಲೆ ಸೂಚಿಯಾಗಿಬಿಟ್ಟಳು ॥೩॥

ಹೀಗೆ, ಪರ್ವತಶಿಖರಾಕಾರಳಾಗಿದ್ದ ಆ ರಾಕ್ಷಸಿಯು, ಮನುಷ್ಯರ ಸಂಕಲ್ಪದಲ್ಲಿ ಕಲ್ಪಿತವಾದ ಪರ್ವತವು ಕೃಶವಾಗುವಂತೆ ಕ್ರಮವಾಗಿ ಕೃಶಳಾಗುತ, ಕೊನೆಗೆ ಪದ್ಮಪುಷ್ಪದ ಕಿಂಜಲ್ಕದಂತೆ ಸೂಕ್ಷ್ಮಳಾಗಿ ಮನೋಹರಳಾಗಿ ತೋರುತ, ಕೌಶೇಯ (ರೇಷ್ಮೆ) ವಸ್ತ್ರವನ್ನು ಹೊಲಿಯುವಷ್ಟು ಸಣ್ಣ ಸೂಚಿರೂಪವನ್ನು ಧರಿಸಿಬಿಟ್ಟಳು. ಆದರೆ, ಮೇಲೆ ಹೇಳಿದ ಸೂಕ್ಷ್ಮಭಾವಪ್ರಾಪ್ತಿಯೂ, ಅವಳು ತನ್ನ ಸಂಕಲ್ಪದಲ್ಲಿ ಕಲ್ಪಿಸಿಕೊಂಡಿದ್ದ ಸ್ಥೂಲದೇಹಕ್ಕೆ ಉಂಟಾದುವೆಂದು ತಿಳಿಯಬೇಕು. ಅವಳ ಪ್ರಾಕ್ತನವಾದ ಅವಿದ್ಯಾಕಲ್ಪಿತವಾದ ಶರೀರವಾದರೋ, ಅಲ್ಲಿಯೇ ಗಳಿತವಾಗಿ ಹೋಗುವ ಕ್ರಮವು ಮುಂದೆ ವಿವರಿಸಲ್ಪಡುವುದು ॥೪॥

ದರಾಜ ಸೂಚಿಕಾ ಕೃಷ್ಣಾ ಸೂಕ್ಷ್ಮಾಯಸಮನಾಯಸೀ ।
ಪುರ್ಯಷ್ಟಕೇನ ಚಲಿತಾ ವ್ಯೋಮಗಾ ವ್ಯೋಮವಾಸಿನೀ ॥೫॥
ಸೂಚೀ ದೃಶ್ಯತಯೈವಾಸೌ ನ ತ್ವಯೋ ನಾಮ ವಿದ್ಯತೇ ।
ಸಂವಿದ್ಭ್ರಮಕುಲೇ ಚೈಷಾ ಸ್ವಲ್ಪಸೂಚೀವ ಲಕ್ಷ್ಯತೇ ॥೬॥
ರತ್ನಸೂಚೀವ ಮಸೃಣಾ ಮನೋಮನನಸಂಯುತಾ ।
ವೈಡೂರ್ಯರಶ್ಮಿಲೇಖೇವ ಭಾನುಸನ್ತಾಸಸುನ್ದರೀ ॥೭॥
ಕಜ್ಜಲಾಮ್ಭೋದಸಜ್ಜಲ್ಕಲತೇವ ಪವನಾಹೃತಾ ।
ಸೂಕ್ಷ್ಮರನ್ಧ್ರೇಕ್ಷಣಸ್ವಚ್ಛದೃಷ್ಟಜ್ಯೋತಿಃಕನೀನಿಕಾ ॥೮॥
ಸುಮುಖಗ್ರಾಹ್ಯರೂಪೇಣ ಶ್ಲಕ್ಷ್ಣಪುಚ್ಛಶಿಖಾಣುನಾ ।
ತದಾ ವೈಪುಲ್ಯಶಾನ್ತ್ಯರ್ಥಂ ಪರಂ ಮೌನವ್ರತಂ ಗತಾ ॥೯॥
ಸುದೂರಾದ್ದೀಪವದ್ದೃಷ್ಟಂ ಖತನ್ಮಾತ್ರತ್ವಮಾಗತಾ ।

ಆಗ ಆ ರಾಕ್ಷಸಿಯು, ಸೂಕ್ಷ್ಮವಾದ ಅಯೋವಿಕಾರವಾದ ಸೂಚಿಯಾಗಿಯೂ, ಅನಾಯಸವಾದ ಜೀವಸೂಚಿಯಾಗಿಯೂ, ಹೀಗೆ ಎರಡುರೂಪವನ್ನು ಧರಿಸಿದವಳಾಗಿ, (೧) ಪುರ್ಯಷ್ಟಕರೂಪದಿಂದ ಅಂತರಿಕ್ಷದಲ್ಲಿ ಸಂಚರಿಸುತ, ಅಂತರಿಕ್ಷದಲ್ಲಿ ವಾಸಮಾಡತಕ್ಕವಳಾಗಿ ಪ್ರಕಾಶಿಸಿದಳು॥

ಆದರೆ, ಈ ಆಯಸಸೂಚಿಯೂ ಭ್ರಾಂತಿ ಮೂಲಕವಾಗಿ ದೃಶ್ಯವಾಗಿರುವುದೇಹೊರತು, ಅಯಸ್ಸೆಂಬುದಾಗಿ ಪದಾರ್ಥವೊಂದಿಲ್ಲವೇ ಇಲ್ಲ. ಘಟ-ಪಟ-ಇತ್ಯಾದಿರೂಪವಾಗಿ ಉಂಟಾಗುವ ಭ್ರಾಂತಿಸಮುದಾಯಮಧ್ಯದಲ್ಲಿ, ಈ ಸ್ವಲ್ಪವಾದ ಸೂಚಿಯೆಂಬುದೊಂದು ಭ್ರಾಂತಿಯೂ ತೋರುವುದು ॥೬॥

ಆಗ ಆ ಸೂಚಿಯು, ಸೂರ್ಯಕಿರಣಗಳು ಒಳಗೆ ಪ್ರವೇಶಿಸಿರುವ-ರತ್ನಮಯವಾದ ಸೂಚಿಯಂತೆಯೂ, ವೈಡೂರ್ಯಮಣಿಯ ಕಿರಣಪಂಕ್ತಿಯಂತೆಯೂ, ಅತಿಯಾಗಿ ಹೊಳೆಯುತಿದ್ದಿತು; ಆದರೆ, ಈ ಸೂಜಿಗೆ ಮನೋವ್ಯಾಪಾರವೊಂದು ಮಾತ್ರ ವಿಶೇಷವಾಗಿದ್ದಿತು ॥೭॥

ಆಗ ಸೂರ್ಯಕಿರಣಸಂಪರ್ಕವಾಗಲಾಗಿ, ಆ ಸೂಜಿಯು, ಕಾಡಿಗೆಯ ಮೇಘವನ್ನುಂಡೆ ಮಾಡಿ ಅದರೊಳಗಿಂದ ತೆಗೆದಿರುವ ಸಣ್ಣ ತಂತುವನ್ನು ವಾಯುವು ಹೊತ್ತುಕೊಂಡು ಬಂದಿರುವುದೋ ಎಂಬಂತೆ ಪ್ರಕಾಶಿಸಿತು. ಅದರ ಸೂಕ್ಷ್ಮವಾದ ರಂಧ್ರವೆಂಬ ಕಣ್ಣಿನಲ್ಲಿ, ತೇಜಸ್ಸೆಂಬ ಕಣ್ಣುಗುಡ್ಡೆಯು ನಿರ್ಮಲವಾಗಿ ಕಾಣಿಸುತಿದ್ದಿತು ॥೮॥

ಅಯ್ಯಾ! ರಾಮ! ಹೀಗೆ ತುದಿಯಲ್ಲಿಯೂ ಬುಡದಲ್ಲಿಯೂ ಪರಮಾಣುವಿನಷ್ಟು ಅತಿಸೂಕ್ಷ್ಮವಾಗಿರುವ ಸೂಚೀರೂಪವನ್ನು ಸಂಪಾದಿಸುವುದಕ್ಕೋಸ್ಕರ—ಬ್ರಹ್ಮನನ್ನು ಪ್ರಸನ್ನನಾಗಿ ಮಾಡಿಕೊಳ್ಳುವಷ್ಟು ಪ್ರಬಲವಾಗಿ ತಪಸ್ಸುಮಾಡಿದ ಆ ಕರ್ಕಟಿಯು ತಪೋವ್ರತವೆಲ್ಲವೂ, ತನ್ನ ಶರೀರಸ್ಥೌಲ್ಯವನ್ನು ಕಳೆದುಕೊಳ್ಳುವುದಕ್ಕಾಗಿ ಮಾತ್ರವೇ ಮಾಡಿದಂತಾಯಿತು ॥೯॥

ಆಗ ಅವಳು, ದೂರದಲ್ಲಿ ನೋಡಿದರೆ ಎರಡುದೀಪಗಳಿದ್ದರೂ ಒಟ್ಟಾಗಿ ಒಂದೇ ದೀಪ

---

೧. ಮಹಾಭೂತ, ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಪ್ರಾಣ, ಅಂತಃಕರಣ, ಅವಿದ್ಯಾ, ಕಾಮ, ಸಂಕಲ್ಪ,—ಇವಿಷ್ಟಕ್ಕೂ ಪುರ್ಯಷ್ಟಕವೆಂದು ಸಂಜ್ಞೆ.

ದೂರಾದೇವ ಮನೋಜ್ಞೇನ ಪ್ರೋದ್ಗಿರನ್ತೀ ಮುಖೇನ ಖಮ್ ॥೧೦॥
ಕುಞ್ಚಿತೇಕ್ಷಣಸನ್ದೃಶ್ಯಾ ದೀರ್ಘದೀಪಾಂಶುಕೋಮಲಾ ।
ಸದ್ಯಃ ಸ್ನಾತಸಮುತ್ಪನ್ನಬಾಲವಾಲವಿಲಾಸಿನೀ ॥೧೧॥
ತನ್ತುರ್ಬಿಸಾದಿವೋಡ್ಡೀನಾ ಬಾಹ್ಯಸಞ್ಚಾರಕೌತುಕಾತ್ ।
ಬ್ರಹ್ಮನಾಡೀರಿವೋದ್ಯುಕ್ತಾ ಬಹೀರನ್ಧ್ರಂ ಸುಸುನ್ದರೀ ॥೧೨॥
ನಿಯತೇನ್ದ್ರಿಯಶಕ್ತಿಃ ಸಾ ಜೀವೈನ್ಯೈವ ಬಹಿಃ ಸ್ಥಿತಾ ।
ಬೌದ್ಧತಾರ್ಕಿಕವಿಜ್ಞಾನಸನ್ತಾನವದಲಕ್ಷಿತಾ ॥೧೩॥

ಕಾಣುವಂತೆ, ದೂರದಲ್ಲಿ ನೋಡಿದವರಿಗೆ ಸೂಚಿರೂಪವೂ ಕಾಣದೆ ಕೇವಲ ಆಕಾಶಮಾತ್ರವಾಗಿರುವಂತೆ ಕಾಣುವಷ್ಟು ಸೂಕ್ಷ್ಮರೂಪವನ್ನು ಹೊಂದಿಬಿಟ್ಟಳು. ಹೀಗಾದುದರಿಂದ, ವರಪ್ರಾಪ್ತಿ ಪಡೆದು ಪ್ರಸನ್ನವಾಗಿರುವ ಮುಖದಿಂದ ಆಕಾಶವನ್ನು ಕುಕ್ಕುತಿರುವಂತೆ ಕಾಣಿಸಿದಳು ॥೧೦॥

ಮತ್ತು, ಆ ಸೂಜಿಯು, ಕಣ್ಣು ಕೊಕ್ಕರಿಸಿಕೊಂಡು ನೋಡುವಾಗ ಕಾಣುವ ದೀರ್ಘವಾದ ದೀಪಕಾಂತಿಯಂತೆ ವಿರಾಜಿಸಿತು; ಆಗತಾನೆ ಸ್ನಾನಮಾಡಿ ಎದ್ದು ಬಂದಿರುವ ಬಾಲಕರ ಕೂದಲಿನಂತೆ ಮಿರುಗುತ ವಿಲಸಿಸಿತು ॥೧೧॥

ಹೊರಗೆ ಸಂಚರಿಸಿ ಸಂತೋಷಪಡಬೇಕೆಂಬ ಕುತೂಹಲದಿಂದ ಹಾರಿಬಂದಿರುವ ತಾವರೆದಂಟಿನ ದಾರವೋ ಎಂಬಂತೆಯೂ, ಬ್ರಹ್ಮರಂಧ್ರದಿಂದ ಹೊರಗೆ ಹೊರಟು ಸೂರ್ಯಮಂಡಲಾಭಿಮುಖವಾಗಿರುವ ಸುಷುಮ್ನಾನಾಡಿಯಂತೆಯೂ ವಿರಾಜಿಸಿತು ॥೧೨॥

ಆಗ ಆ ಸೂಚಿಗೆ, ಚಕ್ಷುರಾದಿ ಇಂದ್ರಿಯಗಳ ಶಕ್ತಿಯು ಯಥಾಕ್ರಮವಾಗಿ ಆಯಾಸ್ಥಾನಗಳಲ್ಲಿದ್ದಿತು; ಇಂತಹ ಶಕ್ತಿಯುಳ್ಳದಾಗಿ ಆ ಸೂಜಿಯು, ಲಿಂಗಶರೀರರೂಪದಿಂದಲೇ ಹೊರಗೆ ಇರುತಿದ್ದಿತು. ಆದರೆ, (೧) ಬೌದ್ಧರೂ ತಾರ್ಕಿಕರೂ ಹೇಳುವ ವಿಜ್ಞಾನ ಸಂತಾನದಂತೆ ಕಣ್ಣಿಗೆ ಕಾಣಿಸದಂತಿದ್ದಿತು ॥೧೩॥

---

೧. ಇಲ್ಲಿ ಸ್ವಲ್ಪವಾಗಿ ಬೌದ್ಧಮತಪ್ರಕ್ರಿಯೆ ತಿಳಿಯಲ್ಪಡಬೇಕಾಗಿರುವುದು. ರೂಪಸ್ಕಂಧ, ವೇದನಾಸ್ಕಂಧ, ವಿಜ್ಞಾನಸ್ಕಂಧ, ಸಂಜ್ಞಾಸ್ಕಂಧ, ಸಂಸ್ಕಾರಸ್ಕಂಧ,—ಎಂದು ಪಂಚಸ್ಕಂಧಗಳಿರುವುವು. ವಿಷಯಪ್ರಪಂಚಕ್ಕೆ ರೂಪಸ್ಕಂಧವೆಂದೂ, ಜ್ಞಾನಪ್ರಪಂಚಕ್ಕೆ ವೇದನಾಸ್ಕಂಧವೆಂದೂ, ವಿಜ್ಞಾನಸಂತಾನಕ್ಕೆ (ಅನುಸ್ಯೂತವಾಗಿರುವಿಕೆ) ವಿಜ್ಞಾನಸ್ಕಂಧವೆಂದೂ, ನಾಮಪ್ರಪಂಚಕ್ಕೆ ಸಂಜ್ಞಾಸ್ಕಂಧವೆಂದೂ ವಾಸನಾಪ್ರಪಂಚಕ್ಕೆ ಸಂಸ್ಕಾರಸ್ಕಂಧವೆಂದೂ ಹೆಸರು. ಸಮಸ್ತಶರೀರಗಳಲ್ಲಿಯೂ ಈ ಸ್ಕಂಧಪಂಚಕವನ್ನು ಬಿಟ್ಟು ಪ್ರತ್ಯೇಕವಾದ ಆತ್ಮನಿಲ್ಲವೆಂದು ಬೌದ್ಧರ ಸಿದ್ಧಾಂತವು. ಇದರಲ್ಲಿ ಮೂರನೆಯದಾದ ವಿಜ್ಞಾನಸ್ಕಂಧವೇ ಪ್ರಕೃತದಲ್ಲಿ ಉಪಮಾನವಾಗಿರುವುದು. ಈ ವಿಜ್ಞಾನಸ್ಕಂಧವು ಇತರರಿಗೆ ಗೋಚರವಾಗದಿರುವಂತೆಯೇ, ಈ ಸೂಚಿಯೂ ಇತರರಿಗೆ ಗೋಚರವಾಗಲಿಲ್ಲವೆಂದು ಭಾವವು. ತಾರ್ಕಿಕರು ಹೇಳುವುದೇನಂದರೆ:—ಒಬ್ಬನು ಒಂದು ಪದಾರ್ಥವನ್ನು ನೋಡಿದರೆ, ಅದನ್ನು ಆಗ ಇಂತಹ ಪದಾರ್ಥವೆಂದು ತಿಳಿದುಕೊಳ್ಳುವನಲ್ಲವೆ ! ಒಂದು ಘಟವನ್ನು ನೋಡಿ, ಇದು ಘಟವೆಂದು ತಿಳಿದುಕೊಳ್ಳುತ್ತಾನೆ; ಆಮೇಲೆ ಎಂದೆಂದಿಗೂ ಇದುಘಟವೆಂದು ಸ್ಫೂರ್ತಿಯುಂಟಾಗುತ್ತದೆ. ಪ್ರಥಮತಃ ಇವನಿಗುಂಟಾದ ಜ್ಞಾನವೇ, ಇವನ ಮನಸ್ಸಿನಲ್ಲಿ ಅನುಸ್ಯೂತವಾಗಿ ನಿಂತಿರುತ್ತದೆ. ಇದಕ್ಕೆ ಧಾರಾವಾಹಿಕಬುದ್ಧಿಯೆಂದು ತಾರ್ಕಿಕರ ಸಂಕೇತವು. ಇದು ಯಾರಿಗೂ ಗೋಚರವಾಗದಿರುವಂತೆಯೇ, ಆ ಸೂಚಿಯು ಪರರಿಗೆ ಸುತರಾಂ ಗೋಚರವಾಗದಂತಿದ್ದಿತೆಂದು ಮುಖ್ಯತಾತ್ಪರ್ಯವು.

ಶೂನ್ಯಸಿದ್ಧಾರ್ಥಸವಿಕಾ ರನ್ಧ್ರನೀಲಮಯಾರವಾ |
ಅದೃಶ್ಯಯಾ ಜೀವಸೂಚ್ಯಾ ಸನ್ತತಾನುಶ್ರಿತಾ ಸ್ಥಿತಾ ||೧೪||
ಕಲಾಕಲನಧರ್ಮಿಣ್ಯಾ ವಾಸನಾಮಾತ್ರಸಾರಯಾ |
ಕ್ಷೀಣದೀಪಾಂಶುಸೂಚೀವತ್ ತೀಕ್ಷ್ಣಯಾನುಪಲಭ್ಯಯಾ ||೧೫||
ಗ್ರಾಸಾರ್ಥಂ ಸೂಚಿತಾಂ ಯಾತಾ ಸೈವಾಸ್ಥಾ ನೋಪಯುಜ್ಯತೇ |
ವಿಚಾರಿತಂ ತದಾ ನೈತತ್ ಅಹೋ ಮೌರ್ಖ್ಯವಿಜೃಮ್ಭಿತಮ್ ||೧೬||
ಸಾ ಗ್ರಾಸಂ ಚಿನ್ತಯಾಮಾಸ ನ ಸೂಚೀರೂಪತುಚ್ಛತಾಮ್ |
ಚಿತ್ತಮಾಹಿತಮೇವೈಕಂ ಪಶ್ಯನ್ತ್ಯಸ್ತೇ ನಿರರ್ಥಕಮ್ ||೧೭||
ಅವಿಚಾರ್ಯೈವ ಸೂಚಿತ್ವಂ ತಯಾ ಮೂಢಧಿಯಾಸ್ಥಿತಮ್ |
ನಾನರ್ಥಬುದ್ಧೇಃ ಸ್ಫುರತಿ ಪೂರ್ವಾಪರವಿಚಾರಣಾ ||೧೮||
ಸ್ವಾರ್ಥಕ್ರಿಯೋಗ್ರಸಾಮರ್ಥ್ಯಾತ್ ಯಾತಿ ಭಾವನಯಾಸ್ಯತಾಮ್ |

ಹೀಗೆ ಅತ್ಯಂತ ಸೂಕ್ಷ್ಮವಾಗಿ ಸುತರಾಂ ಅಲಕ್ಷ್ಯವಾಗಿರುವ ಈ ಸೂಚಿಯು, ಶೂನ್ಯವಾದಿಗಳು ಹೇಳುವ ಪದಾರ್ಥಗಳನ್ನು ಸೃಜಿಸುತ್ತದೆಯೋ ಎಂಬಂತಿದ್ದಿತು; ಅದರ ರಂಧ್ರದಲ್ಲಿರುವ ಆಕಾಶದ ನೈಲ್ಯವೊಂದೇ ಪ್ರಚುರವಾಗಿ ಕಾಣುತಿದ್ದಿತು; ಇದು ನಿಶ್ಶಬ್ದವಾಗಿದ್ದಿತು. ಇಂತಹ ಈ ಆಯಸಸೂಚಿಯನ್ನು ಅನಾಯಸವಾದ ಜೀವಸೂಚಿಯು ಅನವರತವಾಗಿ ಅನುಸರಿಸಿಬಂದಿತು. ಈ ಜೀವಸೂಚಿಯು, ಆರಿಹೋಗುತಿರುವ ದೀಪದ ಕಿರಣದಿಂದ ಸೂಜಿಯಂತೆ ಉದ್ದವಾಗಿ ಪ್ರಸರಿಸುವ ಕಾಂತಿಯಹಾಗೆ, ಕಣ್ಣಿಗೆ ಕಾಣದಿದ್ದರೂ—ಸ್ಪರ್ಶವಾದಾಗ ಅತಿತೀಕ್ಷ್ಣವಾದುದೆಂದು ಜ್ಞಾನಜನಕವಾಗಿರುವುದು. ಇಂತಹ ಜೀವಸೂಚಿಯು (ರೋಗ) ಆ ಆಯಸಸೂಚಿಯನ್ನನುಸರಿಸಿ ಬಂದಿತು ||೧೪—೧೫||

ಅಯ್ಯಾ! ರಾಮ! ಇದೊಂದು ದೊಡ್ಡ ಆಶ್ಚರ್ಯವಲ್ಲವೆ! ಆ ಕರ್ಕಟಿಯೆಂಬ ರಾಕ್ಷಸಿಯು, ಹೊಟ್ಟೆತುಂಬ ತಿನ್ನುವುದಕ್ಕೋಸ್ಕರ, ಮಹಾಕ್ಲೇಶವನ್ನನುಭವಿಸಿ ತಪಸ್ಸುಮಾಡಿ ಈ ಸೂಚಿಯ ಸ್ಥಿತಿಯನ್ನು ಹೊಂದಿದಳು; ಆದರೆ, ಈಗ ಹೊಟ್ಟೆಯೇ ಇಲ್ಲವಾಗಿಬಿಟ್ಟದುದರಿಂದ, ಆಯಿಚ್ಛೆಯೇ ವ್ಯರ್ಥವಾಗಿ ಹೋಯಿತ್ತು. ಅವಳು ವರಪ್ರಾರ್ಥನೆ ಮಾಡುವಕಾಲದಲ್ಲಿ ಇಷ್ಟುಮಾತ್ರವನ್ನೂ ವಿಚಾರಮಾಡಲಿಲ್ಲ. ಆಹ! ಅಜ್ಞಾನದ ಮಹಿಮೆಯನ್ನೆಷ್ಟು ಹೇಳೋಣ! ||೧೬||

ಅವಳು ಹೊಟ್ಟೆಗೆ ತುಂಬುವುದನ್ನು ಮಾತ್ರವೇ ಯೋಚಿಸಿದಳಲ್ಲದೆ, ಸೂಚೀರೂಪದಲ್ಲಿರುವ ಅಲ್ಪತ್ವವನ್ನು ಯೋಚಿಸಲಿಲ್ಲ. ಅಹೋ! ರಾಕ್ಷಸಿ! ಕೇವಲ ಗ್ರಾಸಮಾತ್ರದಲ್ಲಿ ದೃಷ್ಟಿಯಿಟ್ಟ ನಿನಗೆ ವಿಶಾಲವಾದ ಚಿತ್ತವಿದ್ದರೂ ಅದೆಲ್ಲವೂ ಈಗ ವ್ಯರ್ಥವಾಗಿ ಹೋಯಿತ್ತು! ||೧೭||

ಮೂಢಬುದ್ಧಿಯಾದ ಆ ಕರ್ಕಟಿಯು, ಸ್ವಲ್ಪವೂ ವಿಚಾರಮಾಡದೆಯೇ, ಸೂಚೀರೂಪವನ್ನಾಶ್ರಯಿಸಿಬಿಟ್ಟಳು. ಒಬ್ಬರಿಗನರ್ಥವುಂಟುಮಾಡುವುದರಲ್ಲಿ ಮನಸ್ಸಿಟ್ಟವರಿಗೆ, ಪೂರ್ವಾಪರ ವಿಚಾರಗಳೊಂದೂ ಸ್ಫುರಿಸುವುದಿಲ್ಲ ||೧೮||

ತನಗಭಿಲಷಿತವಾದ ವಿಷಯದಲ್ಲಿ ಅಭಿನಿವೇಶವುಳ್ಳುದಾದ ಚಿತ್ತಪದಾರ್ಥವು, ಸ್ವಾಭಿಮತ ಸಂಪಾದನಾರ್ಥವಾಗಿ ದೃಢತರಪ್ರಯತ್ನ ಮಾಡುವುದರಿಂದ ತದನುಗುಣವಾದ ಸಂಸ್ಕಾರವುಳ್ಳ

ಪದಾರ್ಥೋಽಭಿಮತಾಂಶಾಥ್ಯೋ ನಿಶ್ವಾಸೇನೇವ ದರ್ಪಣಃ ॥೧೯॥
ಸೂಚೀಭಾವಂ ಪ್ರಪನ್ನಾಯಾಃ ತ್ಯಜನ್ತ್ಯಾಃ ಪೀವರಂ ವಪುಃ ।
ಮಹಾಮರಣಮಪ್ಯಸ್ಯಾಃ ರಾಕ್ಷಸ್ಯಾಃ ಸುಸುಖಂ ಸ್ಥಿತಮ್ ॥೨೦॥
ಏಕವಸ್ತ್ವತಿರಾಗಾಣಾಂ ಅಹೋ ಸು ವಿಷಮಾ ಗತಿಃ ।
ದೇಹೋಽಪಿ ತೃಣವತ್ ತ್ಯಕ್ತೋ ರಾಕ್ಷಸ್ಯಾ ನಿಜಯೇಚ್ಛಯಾ ॥೨೧॥
ಏಕವಸ್ತ್ವತಿಗನ್ಧೇನ ಭ್ರಶ್ಯನ್ತ್ಯನ್ಯಾಹಿ ಸಂವಿದಃ ।
ರಾಕ್ಷಸ್ಯಾ ಗ್ರಾಸಗನ್ಧೇನ ದೇಹನಾಶೋಽಪಿ ನೇಕ್ಷಿತಃ ॥೨೨॥
ನಾಶೋಽಪಿ ಸುಖಯತ್ಯಜ್ಞಂ ಏಕವಸ್ತ್ವತಿರಾಗಿಣಮ್ ।
ಸೂಚೀಭೂತಾ ವಿದೇಹಾಪಿ ಪರಿತುಷ್ಟೇವ ರಾಕ್ಷಸೀ ॥೨೩॥
ಅನ್ಯಾ ಬಭೂವ ಲಗ್ನಾ ಸಾ ತಥಾ ಜೀವವಿಷೂಚಿಕಾ ।
ವ್ಯೋಮಾತ್ಮಿಕಾ ನಿರಾಕಾರಾ ವ್ಯೋಮವೃತ್ತಿ ಶರೀರಿಕಾ ॥೨೪॥
ತೇಜಸ್ತನುಪ್ರವಾಹಾಭಾ ಪ್ರಾಣತನ್ತುಮಯಾತ್ಮಿಕಾ ।
ಮೂಲಸಂವೇದನಾಕಾರಾ ಚನ್ದ್ರಾರ್ಕಾಂಶುಕಸುನ್ದರೀ ॥೨೫॥

ದಾಗಿಬಿಡುವಕಾರಣ, ದರ್ಪಣವು ನಿಶ್ವಾಸವಾಯುವಿನಿಂದ ಮಲಿನವಾಗುವಂತೆ, ವಿವೇಕಹೀನವಾಗಿ ಕಾಲುಷ್ಯಹೊಂದಿಬಿಡುವುದು ॥೧೯॥

ಆ ರಾಕ್ಷಸಿಯು ತನಗಿಷ್ಟವಾದ ಸೂಚೀಭಾವವನ್ನು ಹೊಂದುವುದಕ್ಕೋಸ್ಕರ ಆ ದೊಡ್ಡ ಸ್ಥೂಲವಾದ ತನ್ನ ದೇಹವನ್ನು ಬಿಡುವಾಗ, ಆ ಮರಣವೂಕೂಡ ಇವಳಿಗೆ ಅತ್ಯಂತ ಸುಖವಾಗಿಯೇ ತೋರಿತು ॥೨೦॥

ಆಹಹ! ಒಂದೇಒಂದು ಪದಾರ್ಥವನ್ನುದ್ದೇಶಿಸಿ ಅದರಲ್ಲಿ ಅತ್ಯಾಸಕ್ತಿಯುಳ್ಳವರಿಗೆ, ಬಹು ವಿಷಮವಾದ ಗತಿಯುಂಟಾಗುವುದಲ್ಲವೆ! ಏಕೆಂದರೆ:—ಆ ರಾಕ್ಷಸಿಯು ತನ್ನ ದೇಹವನ್ನೂಕೂಡ ಮನಃಪೂರ್ವಕವಾಗಿ ಕಸದಂತೆ ಬಿಟ್ಟುಬಿಟ್ಟಳಲ್ಲವೆ! ॥೨೧॥

ಒಂದು ವಸ್ತುವಿನಲ್ಲಿ ಅತಿಯಾಗಿ ಅಭಿನಿವೇಶವುಂಟಾಗಿಬಿಟ್ಟರೆ, ಆದರಿಂದ ಇತರವಾದ ಜ್ಞಾನವೆಲ್ಲವೂ ನಷ್ಟವಾಗಿಬಿಡುವುದು. ಈ ರಾಕ್ಷಸಿಯು, ಗ್ರಾಸದಲ್ಲಭಿನಿವೇಶವಿಟ್ಟು, ತನ್ನ ದೇಹವನ್ನೂ ತಿಳಿಯದೆ ಹೋದಳು ॥೨೨॥

ಒಂದೇಒಂದು ವಸ್ತುವಿನಲ್ಲತ್ಯಾಸಕ್ತನಾದ ಅಜ್ಞನನ್ನು, ನಾಶವೂಕೂಡ ಸುಖಪಡಿಸುವುದು. ಆಗ ಸೂಚೀರೂಪವನ್ನು ಧರಿಸಿದ ಆ ರಾಕ್ಷಸಿಯು, ದೇಹವನ್ನು ಕಳೆದುಕೊಂಡವಳಾದರೂ ಸಂತುಷ್ಟಳಾಗಿಯೇ ಇದ್ದಳು ॥೨೩॥

ವತ್ಸ! ರಾಮ! ಆ ಅಯಸ್ಸೂಚಿಯನ್ನನುಸರಿಸಿ ಬಂದಿರುವ ಜೀವವಿಷೂಚಿಕೆಯು, ಆಕಾಶರೂಪವಾಗಿ ನಿರಾಕಾರವಾಗಿ ಸೂಕ್ಷ್ಮವಾದ ಲಿಂಗ ಶರೀರವುಳ್ಳದಾಗಿದ್ದಿತು ॥೨೪॥

ಅದು, ತೇಜಃಪ್ರವಾಹರೂಪವಾಗಿಯೂ, ಪ್ರಾಣವಾಯುವಿನ ತಂತುರೂಪವೋ ಎಂಬಂತೆಯೂ, ಕುಂಡಲಿನೀಶಕ್ತಿ (ಇದೊಂದುವಿಧವಾದನಾಡಿ· ಇದರ ವಿಷಯವು ಮುಂದೆ ವಿಸ್ತಾರವಾಗಿ ಗುವುದು.) ಯಂತೆಯೂ, ಸೂರ್ಯಚಂದ್ರ ಕಿರಣಗಳಂತೆ ಮನೋಹರವಾಗಿಯೂ ಇದ್ದಿತು ॥೨೫॥

ಪೃಥಗೇವಾಸ್ಥಿಧಾರಾಭಾ ಪರಮಾಣ್ವವಲೀಯ ಸಾ |
ಕೌಸುಮೀ ಗನ್ಧಲೇಖೇವ ಕಲಾಕಲನರೂಪಿಣೀ ||೨೬||
ಪಾಪಾತ್ಮಿಕಾ ಮನೋವೃತ್ತಿಃ ಸಾ ಹಿ ತಸ್ಯಾಸ್ತಥಾ ಸ್ಥಿತಾ |
ಪರಪ್ರಾಣವಶಾದೇವ ಪರಮಾರ್ಥಪರಾಯಣಾ ||೨೭||
ಏವಮಸ್ಯಾಸ್ತನುರ್ಜಾತಾ ಸೂಚೀದ್ವಯಮಯೀ ಹಿ ಸಾ |
ನೀಹಾರಾಂಶುಕವತ್ ತನ್ವೀ ಕಾರ್ಪಾಸಾಂಶುಕಪೇಲವಾ ||೨೮||
ತನುದ್ವಯೇನ ತೇನಾಸೌ ಪ್ರವಿಶ್ಯ ಹೃದಯಂ ನೃಣಾಮ್ |
ವೇಧಯನ್ತೀ ತತಃ ಕ್ರೂರಾ ಪ್ರಬಭ್ರಾಮ ದಿಶೋ ದಶ ||೨೯||
ಸರ್ವಃ ಸ್ವಸಙ್ಕಲ್ಪವಶಾತ್ ಲಘುರ್ಭವತಿ ವಾ ಗುರುಃ |
ಕರ್ಕಟ್ಯೋಗ್ರಂ ವಪುಸ್ತ್ಯಕ್ತ್ವಾ ಸೂಚೀತ್ವಮುರರೀಕೃತಮ್ ||೩೦||
ತುಚ್ಛೋಽಪ್ಯರ್ಥೋಽಲ್ಪಸತ್ತ್ವಾನಾಂ ಗಚ್ಛತಿ ಪ್ರಾರ್ಥನೀಯತಾಮ್ |
ಸೂಚೀವೃತ್ತಪಿಶಾಚೀತ್ವಂ ರಾಕ್ಷಸ್ಯಾ ತಪಸಾಽಽಸ್ಥಿತಮ್ ||೩೧||
ಅಪಿ ಪುಣ್ಯಶರೀರಾಣಾಂ ಜಾತಿಬನ್ಧೋ ನ ಶಾಮ್ಯತಿ |
ತನು ಸೂಚೀಪಿಶಾಚತ್ವಂ ರಾಕ್ಷಸ್ಯಾ ತಪಸಾರ್ಜಿತಮ್ ||೩೨||

ಆ ಕರ್ಕಟಿಯು ಪಾಪಾತ್ಮಿಕಮನೋವೃತ್ತಿರೂಪವಾದ ಆ ಜೀವವಿಷೂಚಿಕೆಯು, ಕತ್ತಿಯ ಅಲಗಿನಂತೆ ಹೊಳೆಯುತ ಪೃಥಕ್ಕಾಗಿಯೇ ಇದ್ದಿತು. ಇದು, ಪುಷ್ಪಪರಿಮಳದಹಾಗೆ ಅತಿಸೂಕ್ಷ್ಮವಾಗಿ ಪ್ರಾಣಿಗಳ ಶರೀರದಲ್ಲಡಗಿಕೊಂಡು, ಹಿಂಸಾದಿಗಳನ್ನುಂಟುಮಾಡುವುದರಲ್ಲಿ ನೈಪುಣ್ಯವುಳ್ಳದಾಯ್ತು. ಹೀಗೆ ಆ ಕರ್ಕಟಿಯು ಇತರರ ಪ್ರಾಣಗಳನ್ನು ಹಾಳುಮಾಡಿ ತನ್ನ ಮನೋರಥವನ್ನು ಈಡೇರಿಸಿಕೊಳ್ಳುವುದರಲ್ಲಿ ಸಿದ್ಧಳಾದಳು ||೨೬-೨೭||

ಹೀಗೆ ಆ ಕರ್ಕಟಿಗೆ, ಹಿಮದ ಕಾಂತಿಯಂತೆ ಸೂಕ್ಷ್ಮವಾಗಿಯೂ ...ಕಾರ್ಪಾಸ(ಹತ್ತಿ)ಕಾಂತಿಯಂತೆ ಮೃದುಳವಾಗಿಯೂ ಇರುವ—ಸೂಚೀರೂಪವಾದ ದೇಹದ್ವಯವುಂಟಾಯ್ತು ||೨೮||

ಇಂತಹ ದೇಹದ್ವಯದಿಂದ, ಆ ಕರ್ಕಟಿಯು ಮನುಷ್ಯರ ಹೃದಯವನ್ನು ಪ್ರವೇಶಿಸಿ ಬಾಧೆಪಡಿಸುತ, ಮಹಾಕ್ರೂರಳಾಗಿ, ದಶದಿಕ್ಕುಗಳಲ್ಲಿಯೂ ಸಂಚರಿಸಿದಳು ||೨೯||

ಸಾಮಾನ್ಯವಾಗಿ, ಪ್ರಪಂಚದಲ್ಲಿ ಸರ್ವರೂ ತಮ್ಮ ಸಂಕಲ್ಪವಶದಿಂದ ಲಘುವಾಗಿಯಾಗಲಿ-ಅಥವಾ ಗುರುವಾಗಿಯಾಗಲಿ—ಆಗುವರು. ಆ ಕರ್ಕಟಿಯು, ತನ್ನ ಸಂಕಲ್ಪಶಕ್ತಿಯಿಂದಲೇ ಉಗ್ರವಾದ ಶರೀರವನ್ನು ಬಿಟ್ಟುಬಿಟ್ಟು, ಸೂಚೀಭಾವವನ್ನಂಗೀಕರಿಸಿದಳು ||೩೦||

ಕ್ಷುದ್ರಮನಸ್ಕರಾದವರಿಗೆ, ಅತ್ಯಲ್ಪವಿಷಯವೂ ಕೂಡ ಪ್ರಾರ್ಥನೀಯವಾಗುವುದು. ಆ ರಾಕ್ಷಸಿಯು, ಅಷ್ಟು ಘೋರವಾಗಿ ತಪಸ್ಸುಮಾಡಿ, ಸೂಚೀಜನ್ಮವೆಂಬ ಪಿಶಾಚತ್ವವನ್ನಾಶ್ರಯಿಸಿ ಬಿಟ್ಟಳು ||೩೧||

ಎಷ್ಟು ಪುಣ್ಯಾತ್ಮರಾದರೂ ಕೂಡ, ಅವರಿಗೆ ತಮ್ಮ ಜಾತಿಯ ವಾಸನೆ ಶಾಂತವಾಗುವುದಿಲ್ಲ. ಆ ರಾಕ್ಷಸಿಯು, ಅಷ್ಟು ಉಗ್ರವಾದ ತಪಸ್ಸನ್ನು ಮಾಡಿಯೂ, ತನ್ನ ಜಾತಿವಾಸನಾನುಗುಣವಾಗಿ, ಅತಿ ತುಚ್ಛವಾದ ಸೂಚೀರೂಪವೆಂಬ ಪಿಶಾಚತ್ವವನ್ನು ಸಂಪಾದಿಸಿಕೊಂಡಳು ||೩೨||

ತಸ್ಯಾಂ ದಿಗನ್ತಭ್ರಮಣೇ ಪ್ರವೃತ್ತಾಯಾಂ ಮಹಾನಿಲೈಃ ।
ತತ್ರೈವ ಸಾ ತನುಃ ಸ್ಥೂಲಾ ಗಳಿತಾ ಶರದಭ್ರವತ್ ॥೩೩॥
ಕಸ್ಯಚಿದ್ವಿವಶಾಙ್ಗಸ್ಯ ಕ್ಷೀಣಸ್ಯ ವಿಪ್ರುಲಸ್ಯ ಚ ।
ಪ್ರವಿಶ್ಯಾನ್ತರ್ವಾತಸೂಚಿಃ ಭವತ್ಯತಿವಿಷೂಚಿಕಾ ॥೩೪॥
ಕಸ್ಯಚಿತ್ ತನುದೇಹಸ್ಯ ಸ್ವಸ್ಥಸ್ಯ ಸುಧಿಯೋಽಪಿ ವಾ ।
ಪ್ರವಿಶ್ಯ ಜೀವಸೂಚಿತ್ವೇ ಭವತ್ಯನ್ತರ್ವಿಷೂಚಿಕಾ ॥೩೫॥
ಏವಂ ಕ್ವಚಿತ್ ತೃಪ್ಯತಿ ಸಾ ದುರ್ಬುದ್ಧಿಹೃದಯಾಸ್ಥಿತಾ ।
ಕ್ವಚಿದುಚ್ಛಿದ್ಯತೇ ಪುಣ್ಯೈಃ ಮನ್ತ್ರೌಷಧಿತಪಃಕ್ರಮೈಃ ॥೩೬॥
ಆಸೀದ್ಬಹೂನಿ ವರ್ಷಾಣಿ ಭ್ರಮಣೈಕಪರಾಯಣಾ।
ದೇಹದ್ವಯೇನ ಗಚ್ಛನ್ತೀ ವ್ಯೋಮ್ನಿ ಭೂಮಿತಲೇ ತಥಾ ॥೩೭॥
ರಜಸ್ತಿರೋಹಿತಾ ಭೂಮೌ ಹಸ್ತೇಽಙ್ಗುಳಿತಿರೋಹಿತಾ ।
ಪ್ರಭಾತಿರೋಹಿತಾ ವ್ಯೋಮ್ನಿ ವಸ್ತ್ರೇ ಸೂತ್ರತಿರೋಹಿತಾ ॥೩೮॥
ಅನ್ತಸ್ಸ್ಥಸ್ನಾಯುಸರಿತಿ ದುರ್ಭಗೇ ಪಾಂಸುಪಾಣ್ಡುರೇ ।

ಅಯ್ಯಾ! ರಾಮ! ಆ ಕರ್ಕಟಿ ಈರೀತಿಯಾಗಿ ಸೂಕ್ಷ್ಮರೂಪದಿಂದ ನಾನಾದಿಕ್ಕುಗಳನ್ನು ಸುತ್ತುವುದಕ್ಕೆ ಹೊರಡಲಾಗಿ, ಪೂರ್ವೋಕ್ತವಾದ ಅವಳ ಆ ಸ್ಥೂಲಶರೀರವು, ಮೊದಲಿದ್ದ ಕಡೆಯಲ್ಲಿಯೇ ಶರತ್ಕಾಲದ ಮೇಘದಂತೆ ಪ್ರಚಂಡಮಾರುತದಿಂದ ಜೀರ್ಣವಾಗಿಹೋಯಿತು ॥೩೩॥

ಇತ್ತಲಾಗಿ, ಸೂಚಿಯು, ರೋಗಾಕ್ರಾಂತನಾಗಿ ಕ್ಷಯಿಸಿಹೋಗಿರುವ ಸ್ಥೂಲಶರೀರನಾದ ಮನುಷ್ಯನ ದೇಹದೊಳಗೆ ವಾತಮಾರ್ಗದಿಂದ ಪ್ರವೇಶಿಸಿ, ದೊಡ್ಡದಾದ ವಿಷೂಚಿಕಾರೋಗವಾಯಿತು ॥೩೪॥

ಮತ್ತೊಬ್ಬಮನುಷ್ಯನು ಸೂಕ್ಷ್ಮದೇಹನಾಗಿಯೂ ಸ್ವಸ್ಥನಾಗಿಯೂ ಬುದ್ಧಿವಂತನಾಗಿಯೂ ಇದ್ದರೂ, ಅವನಲ್ಲಿ ಈ ಸೂಚಿಯು ಪ್ರವೇಶಿಸಿ ಜೀವಸೂಚಿಯಾಗಿ, ದುರ್ಬುದ್ಧಿರೂಪವಾದ ವಿಷೂಚಿಕೆಯಾಗುವುದು ॥೩೫॥

ಈರೀತಿಯಾದ ಆ ವಿಷೂಚಿಕೆಯು, ದುರ್ಬುದ್ಧಿಗಳಾದ ಕೆಲವರಲ್ಲಿ ಪ್ರವೇಶಿಸಿ ತಾನು ತೃಪ್ತಿಪಡುವುದು; ಮತ್ತೆ ಕೆಲವುಕಡೆ ಪುಣ್ಯವಾದ ಮಂತ್ರ ಔಷಧ ತಪಸ್ಸು ಮುಂತಾದುವುಗಳಿಂದ ನಿವಾರಿಸಲ್ಪಡುವುದು ॥೩೬॥

ಆ ಸೂಚಿಯು, ಭೂಮಿಯಲ್ಲಿ ಸಂಚರಿಸುವಂತೆಯೇ ಅಂತರಿಕ್ಷಮಾರ್ಗದಲ್ಲಿಯೂ ಎರಡು ಶರೀರಗಳಿಂದ ಸಂಚರಿಸುತ, ಅನೇಕವರ್ಷಕಾಲ ಭ್ರಮಣೆಯಲ್ಲಿಯೇ ಆಸಕ್ತಳಾಗಿದ್ದಳು ॥೩೭॥

ಅದು, ಭೂಮಿಯಲ್ಲಿದ್ದಾಗ ಧೂಳಿನಲ್ಲಿ ಮರೆಯಾಗುತಲೂ, ಮನುಷ್ಯರ ಕೈಸೇರಿದಾಗ ಬೆರಳಿನಲ್ಲಿ ಮರೆಯಾಗುತಲೂ, ಅಂತರಿಕ್ಷಕ್ಕೆ ಹೋದಾಗ ಸೂರ್ಯಚಂದ್ರಪ್ರಕಾಶದಲ್ಲಿ ಮರೆಯಾಗುತಲೂ, ವಸ್ತ್ರಗಳಲ್ಲಿ ಚುಚ್ಚಿದಾಗ ದಾರಗಳಲ್ಲಿ ಮರೆಯಾಗುತಲೂ ಇದ್ದಿತು ॥೩೮॥

ಆ ಜೀವಸೂಚಿಕೆಯಾದರೋ, ದೇಹವೆಂಬ ದೊಡ್ಡ ಅರಣ್ಯದಲ್ಲಿ ಭ್ರಮಿಸುತಿದ್ದಿತು. ಈ ಅರಣ್ಯದಲ್ಲಿ, ಸ್ನಾಯುವೆಂಬ ಹೊಳೆಯು ಮಧ್ಯದಲ್ಲಿ ಹರಿಯುತ್ತಿರುವುದು; ರಜಸ್ಸೆಂಬ ಧೂಳಿಯು ವ್ಯಾಪಿಸಿರುವುದು; ಇದು ಬಹಳ ತುಚ್ಛವಾಗಿರುವುದು; ಒಣಗಿಹೋಗಿರುವ ಹಸ್ತಪಾದಾದಿರೇ

ಶುಷ್ಕರೇಖಾಸ್ಸರಿತ್ಖಾತೇ ಸೂಕ್ಷ್ಮರೇಖಾಚರತ್ತೃಣೇ ॥೩೯॥
ಅರ್ಥಹೀನೇ ಗತಚ್ಛಾಯೇ ಶೂನ್ಯಉಚ್ಛ್ವಾಸಕಾರಿಣೀ |
ಮಕ್ಷಿಕಾವಾತಹರಿತೇ ಶ್ರೀವೃಕ್ಷಪರಿವರ್ಜಿತೇ ॥೪೦॥
ಸ್ಥೂಲಾಸ್ಥಿಗ್ರನ್ಥಿವಲಿತೇ ನಿತ್ಯಕಮ್ಪಸ್ಫುರತ್ತಮೇ |
ಅನಾತ್ಮೀಯಾಚ್ಛನೀಹಾರೇ ಽಶುದ್ಧಾಂಶುಕಕೃತಭ್ರಮೇ ॥೪೧॥
ಕಿಣಸ್ಥಾಣ್ವಗ್ರವಿಶ್ರಾನ್ತಮಕ್ಷಿಕಾಪಿಕವಾಯಸೇ |
ರೌಕ್ಷರೂಢರಸದ್ವಾತೇ ವಿಲೋಲಾಙ್ಗುಳಿಶಾಖಿನಿ ॥೪೨॥
ಮಾಲಾಭ್ರಲೇಖಾಸಂಸಾರೇ ಸ್ವಾಙ್ಗುಳಿವ್ರಣಗರ್ತಕೇ |
ಸ್ಕನ್ದಾವಶ್ಯಾಯಪೃಷತಿ ಪದವಲ್ಮೀಕಪರ್ವತೇ ॥೪೩॥
ಕಚತ್ಯಾಶು ಜಲಭ್ರಾನ್ತ್ಯಾ ನಖಾಜಗರಕರ್ಕಶೇ |
ಕ್ವಚಿತ್ಕವಿಸರದ್ಭೀತಭೀತಯೂಕಾಕುಪಾನ್ಥಕೇ ॥೪೪॥
ವಿರೂಪಾಶುಷ್ಕಸನ್ದಷ್ಟವೀಟಿಕಾಪೂತಿಪಲ್ವಲೇ |
ಮಧ್ಯಸ್ಥಲೀಖಮಾರ್ಗೌಘಶೀತಶ್ವಸನಗೋಚರೇ ॥೪೫॥
ಗ್ರಸ್ತಯೂಕಾಸರೌಘಾಸೃಕ್ಪೂರ್ಣಸೃಕ್ವಿನಖಾಸ್ಯತಾಮ್ |
ದಧತಾಙ್ಗುಷ್ಠಪಕ್ಷೇಣ ಕಾನ್ತೇ ಸರ್ವತ್ರ ಯಾಯಿನೀ ॥೪೬॥

ಚೆಗಳು, ಈ ಶರೀರವೆಂಬ ಆರಣ್ಯದಲ್ಲಿ ಹಳ್ಳಕೊಳ್ಳಗಳಾಗಿರುವುವು. ಇದರಲ್ಲಿ ಯಾವವಿಧವಾದ ಪ್ರಯೋಜನಲಾಭವೂ ಆಗುವುದಿಲ್ಲ; ವಿಶ್ರಾಂತಿಗೆ ಸ್ವಲ್ಪ ಛಾಯೆಯೂ ಇಲ್ಲ, ಇದು ಕೇವಲಶೂನ್ಯವಾಗಿರುವುದು. ಇಂತಹ ಕಾಡಿನಲ್ಲಿ, ಆ ಸೂಚಿಕೆಯು ನಿಟ್ಟುಸಿರುಬಿಡುತ ಸಂಚರಿಸಿತು. ಮತ್ತು ನೊಣಗಳೂ ಕೆಟ್ಟ ವಾಯುವೂ ಈ ಶರೀರವೆಂಬ ಕಾಡಿನಲ್ಲಿ ವ್ಯಾಪಿಸಿರುವುವು; ಇದರಲ್ಲಿ ಯಾವ ಸೊಬಗೂ ಇಲ್ಲ; ಸ್ಥೂಲವಾದ ಗಂಟುಗಳೆಂಬ ಮೂಳೆಗಳು ಅಲ್ಲಲ್ಲಿ ಬಿದ್ದಿರುವುವು; ಇದು ನಿತ್ಯವಾಗಿ ನಡುಗುತಿರುವುದು; ತನಗೆ ಅಹಿತವಾದ ವ್ಯಾಪಾರಗಳೆಂಬ ಮಂಜು ಇದರಲ್ಲಿ ಮುಸುಕಿಬಿಟ್ಟಿರುವುದು; ಮಲಿನವಸ್ತ್ರಗಳೆಂಬ ಕೃಷ್ಣಕಾಂತಿಗಳು ಇಲ್ಲಿ ಭ್ರಮಿಸುವುವು. ವ್ರಣಗಳೆಂಬ ಮೋಟುಮರಗಳಮೇಲೆ, ಮಕ್ಷಿಕೆಗಳೆಂಬ ಕೋಕಿಲೆಗಳೂ ಕಾಗೆಗಳೂ ವಿಶ್ರಮಿಸಿಕೊಳ್ಳುವುವು; ಅತಿಪರುಷವಾಗಿ ವಾಯುವುದ್ಭವಿಸಿ ಶಬ್ದಮಾಡುತಿರುವುದು; ಬೆರಳುಗಳೆಂಬ ಕೊಂಬೆಗಳು ಹಾರಾಡುತಿರುವುವು. ಮಾಲಿಕೆಗಳೆಂಬ ಮೇಘಪಂಕ್ತಿಗಳು ಪ್ರಸರಿಸುತಿರುವುವು; ಈ ದೇಹದ ಬೆರಳಿನಲ್ಲಿ ಉಂಟಾಗಿರುವ ವ್ರಣವೇ ಹಳ್ಳವಾಗಿರುವುದು; ಧಾತುಮೂತ್ರಾದಿರೂಪವಾಗಿ ಸ್ರವಿಸುವ ಜಲವೇ, ಇದರಲ್ಲಿ ಹಿಮಕಣಗಳಾಗಿರುವುದು; ಕಾಲುಗಳೇ, ವಲ್ಮೀಕವಾಗಿಯೂ ಪರ್ವತವಾಗಿಯೂ ಇರುವುವು. ಅಜ್ಞಾನಭ್ರಾಂತಿಯೆಂಬ ಮರುಭೂಮಿಯು, ಈ ಶರೀರವೆಂಬ ಕಾಡಿನಲ್ಲಿ ಪ್ರಕಾಶಿಸುವುದು; ಉಗುರುಗಳೆಂಬ ಹೆಬ್ಬಾವುಗಳು ಕ್ರೂರವಾಗಿ ವ್ಯಾಪಿಸಿರುವುವು; ಹೇನುಗಳೆಂಬ ಪಥಿಕರು, ಹೆದರಿಹೆದರಿ, ಒಂದೊಂದು ಕಡೆ ಸುಳಿದಾಡುತಿರುವರು. ಸ್ವಲ್ಪ ಒಣಗಿ ವಿಕಾರಹೊಂದಿರುವ ವೀಟಿಕೆಯನ್ನು (ವಿಳ್ಯದೆಲೆಯಮೊಡುಪು) ಕಚ್ಚಿಕೊಂಡಿರುವುದರಿಂದ, ಇದು-ಆ ಶರೀರವೆಂಬ ಆರಣ್ಯದಲ್ಲಿ ದುರ್ಗಂಧಮಯವಾದ ಕ್ಷುದ್ರಜಲಾಶಯವಾಗುವುದು; ಮಧ್ಯದಲ್ಲಿರುವ ಸಣ್ಣಸಣ್ಣ ನಾಡಿಗಳೆಂಬ ಮಾರ್ಗಸಮುದಾಯಗಳಲ್ಲಿ, ತಂಗಾಳಿ ಬೀಸುತಿರುವುದು; ಮನು

ನಾನಾವಿರಚನಾಚಿತ್ರಪಟಪತ್ತನಗಾಮಿನೀ ।
ಗಮಾಗಮಪರಿಶ್ರಾನ್ತಾ ತತಾತ್ಯನ್ತಚಿರಾಧ್ವಗಾ ॥೪೭॥
ನಗರಾನಗರವ್ಯಸ್ತಸೂತ್ರಭಾಣ್ಡೈಕಧಾರಿಣೀ ।
ತಪ್ತೇ ಕಳೇಬರಾರಣ್ಯೇ ಬಲೀವರ್ದಾಪವರ್ತಿನೀ ॥೪೮॥
ಗುಪ್ತಾ ವಿಶ್ರಮಣಾಯೈವ ಮನಾಕ್ ಕರಪರಿಚ್ಯುತಾ ।
ತನ್ತುಪ್ರೋತಾ ಮುಖಾಕೃಷ್ಟಿಃ ಖಿನ್ನಾ ಕ್ವಾಪಿ ವಿಲೀಯತೇ ॥೪೯॥
ಮೇಧನಂ ಕರ್ಮಸಂಶ್ಲಿಷ್ಟಾ ಕಠಿನಾಪಿ ನ ಸಾಕರೋತ್ ।
ನ ಹಿ ತೀಕ್ಷ್ಣೋ ಬಹಿಃ ಕಾರ್ಯೇ ನಿಜತ್ವಂ ವಿಜಹಾತಿ ಚೇತ್ ॥೫೦॥
ಸಾಯಸೂಚೀ ಮನಸ್ಸೂಚ್ಯಾ ವಲಿತಾ ವಿಜಹಾರ ಹ ।
ದಿಕ್ಷ್ವೇವ ಶಿಲಾ ಗುರ್ವೀ ನಾವಾಜ್ಯಪಲಿತಾ ಸತೀ ॥೫೧॥
ವಿಸಸಾರ ದಿಗನ್ತೇಷು ಸಾನ್ತಃಕರಣಸತ್ತಯಾ ।
ತುಷಲೇಶೇವ ಪವನಶಕ್ತ್ಯಾ ಸಂಸೃತಿರೂಪಯಾ ॥೫೨॥

ಷ್ಯರ ರಕ್ತವನ್ನು ಪರಿಪೂರ್ಣವಾಗಿ ಕುಡಿದಿರುವ ಹೇನುಗಳು, ಬೆರಳು ಉಗುರು ಕಣ್ಣು ಮೂಗು ಬಾಯಿ ಮುಂತಾದ ಪ್ರದೇಶಗಳಲ್ಲಿ ತುಂಬಿರುವುವು. ಇಂತಹ ದೇಹದಲ್ಲಿ, ಈ ಸೂಚಿಯು ಸರ್ವತ್ರ ಸಂಚರಿಸುತಿರುವುದು. ಮತ್ತು, ಈ ದೇಹವೆಂಬ ಅರಣ್ಯದಲ್ಲಿ, ನಾನಾವಿಧವಾದ ರಚನೆಗಳಿಂದ ವಿಚಿತ್ರಗಳಾದ ವಸ್ತ್ರಗಳೆಂಬ ಪಟ್ಟಣಗಳು ಮಧ್ಯಮಧ್ಯದಲ್ಲಿರುವುವು. ಇವುಗಳಲ್ಲಿ ಬಹುಕಾಲ ಬಹುದೂರ ಹೋಗಿ ಯಾತಾಯಾತದಿಂದ ಈ ಸೂಚಿಯು ಮಧ್ಯಮಧ್ಯದಲ್ಲಿ ಬಳಲುತಿರುವುದು. ಹೀಗೆ, ಈ ಶರೀರವೆಂಬ ಅರಣ್ಯದಲ್ಲಿ, ಈ ಸೂಚಿಕೆಯು, ಹೋರಿಗರುವಿನಂತೆ ಸಂತೋಷದಿಂದ ಓಡಾಡುತಿರುವುದು. ಆ ಅಯಸ್ಸೂಚಿಯಾದರೋ, ಅಲ್ಲಲ್ಲಿ ಪಟ್ಟಣಗಳಲ್ಲಿಯೂ ಗ್ರಾಮಗಳಲ್ಲಿಯೂ ಜನರು ಪವಣಿಸುವ ಮಣಿ ಮುಂತಾದುವುಗಳ ದಾರಗಳನ್ನು ವಹಿಸುತಿರುವುದು. ಮತ್ತು ಬಬ್ಬನು ಹೊಲಿಯುವುದಕ್ಕೆ ಕೈಯಲ್ಲಿ ಹಿಡಿದುಕೊಂಡರೆ, ಅವನು ದಾರವನ್ನು ಪವಣಿಸಿ ಮುಖವನ್ನು ಹಿಡಿದು ಎಳೆಯುವುದರಿಂದ ಆಯಾಸಪಟ್ಟುದುದರಂತೆ, ಇದು ಮರೆಯಾಗಿ ವಿಶ್ರಾಂತಿ ತೆಗೆದುಕೊಳ್ಳುವುದಕ್ಕೋ ಎಂಬುವಹಾಗೆ, ಕೈಯಿಂದ ಜಾರಿಬಿದ್ದು ಎಲ್ಲಿಯೋ ಹೋಗಿ ಅಡಗಿಕೊಂಡುಬಿಡುವುದು ॥೪೯—೪೯॥

ಇಷ್ಟಾದರೂ, ಆ ಸೂಚಿಯು, ತಾನು ಎಷ್ಟು ಕಠಿನವಾಗಿದ್ದರೂ—ತನ್ನ ಕೆಲಸದಲ್ಲಾಸಕ್ತವಾಗಿದ್ದಕಾರಣ, ಹೊಲಿಯತಕ್ಕವನ ಕೈಯನ್ನು ಮಾತ್ರ ಚುಚ್ಚಲಿಲ್ಲ. ಯಾವನಾದರೂ ತನ್ನ ಸ್ವಭಾವವನ್ನು ಸ್ಪಷ್ಟವಾಗಿ ಹೊರಪಡಿಸುವ ಪಕ್ಷದಲ್ಲಿ, ಅಂತವನನ್ನೆಂದಿಗೂ ದೂರಮಾಡಬಾರದಲ್ಲವೆ! ಅದುಕಾರಣ, ತನ್ನ ಸ್ವಭಾವಕ್ಕೆ ತಕ್ಕಂತೆ ಹೊಲಿಯುತಿರುವ ಆ ಮನುಷ್ಯನನ್ನು ಇದು ದೂರಪಡಿಸಲಿಲ್ಲ ॥೫೦॥

ಅಯ್ಯಾ! ರಾಮ! ಈರೀತಿಯಾದ ಅಯಸ್ಸೂಚಿಯು, ಮನಸ್ಸೂಚಿಯೊಡನೆ ಸೇರಿದುದಾಗಿ, ದೊಡ್ಡ ಶಿಲೆಯು ನಾವೆಯೊಡನೆ ಸೇರಿ ವಿಹರಿಸುವಂತೆಯೂ, ಮುದುಕಿಯಾದವಳಲ್ಲಿರುವ ಆಸೆಯಂತೆಯೂ, ಸಮಸ್ತದಿಕ್ಕುಗಳಲ್ಲಿಯೂ ವಿಹರಿಸಿಕೊಂಡಿದ್ದಿತು ॥೫೧॥

ಭ್ರಮಣವನ್ನುಂಟುಮಾಡುವ ವಾಯುಶಕ್ತಿಯಿಂದ ಸಣ್ಣದಾದ ಹೊಟ್ಟು ಹಾರಾಡುವಂತೆ, ಮನಸ್ಸೂಚಿಯೊಡಗೂಡಿ ಆ ಅಯಸ್ಸೂಚಿಯು ದಿಕ್ಕುಗಳಲ್ಲೆಲ್ಲ ಓಡಾಡಿತು ॥೫೨॥

ಮುಖೇನ ಸೂಕ್ಷ್ಮಸೂತ್ರಾನ್ತಂ ಚರನ್ತೀವ ಪರೋಮ್ಭಿತಮ್ ।
ಪರಪೂರೋದ್ಯಮೇನಾಶು ಜಾತೇವ ಹೃದಯಾನ್ವಿತಾ ॥೫೩॥

ಪರಪೂರರಸೇನೈವ ಸೂಚ್ಯಾ ಹೃತ್ ಸುವಿಕಾಸಿತಮ್ ।
ಅನಾರತಪತತ್ಸೂಕ್ಷ್ಮಸೂತ್ರಾನ್ತ ಇವ ಸ್ತಮ್ಭಿತಾ ॥೫೪॥

ತೀಕ್ಷ್ಣೈರಪಿ ಚಿರಕ್ಷೀಣಂ ಪೂರ್ಯತೇ ನಿರ್ವಿಚಾರಣಾ ।
ದೃಷ್ಟಾನ್ತೋಽತ್ರ ಕ್ಷಣಾತ್ ಸೂಚ್ಯಾ ಪೂರಿತೋ ಜರ್ಜರಃ ಪಟಃ ॥೫೫॥

ಸೂತ್ರಾಂಶುನಿರ್ಗಮೇ ಯೋಗ್ಯಂ ಸೂಚ್ಯಾ ಹೃದಯಮರ್ಜಿತಮ್ ।
ಪರಪೂರಣಯೈವಾಶು ತೇಜಶ್ಚ ಕವಿತಾರ್ಕರುಕ್ ॥೫೬॥

ಅಕಸ್ಮಾತ್ ತೇನ ರೂಢೇನ ಕ್ಷೀಣಪೂರೇಣ ರೂಪಿಣೀ ।
ಹೃದಯೇ ರಾಕ್ಷಸೀ ಸೂಚಿಃ ಕರ್ಮಣಾ ತಪ್ಯತೇ ಚ ಸಾ ॥೫೭॥

ಆ ಆಯಸ್ಸೂಚಿಯನ್ನು ಹಿಡಿದುಕೊಂಡು ಜನರು ಹೊಲಿಯುತಿದ್ದರೆ, ಆಗ ದಾರವು ಕಡಮೆಯಾಗುತಲೂ ಮಧ್ಯಮಧ್ಯದಲ್ಲಿ ಸ್ವಲ್ಪಹೊತ್ತು ಸೂಚಿಯು ನಿಶ್ಚಲವಾಗುತಲೂ ಇರುವಕಾರಣ, ಇತರರಿಂದ ಪವಣಿಸಲ್ಪಟ್ಟ ಸೂಕ್ಷ್ಮವಾದ ದಾರವನ್ನು ಆ ಸೂಚಿಯು ತನ್ನ ಮುಖದಿಂದ ಭಕ್ಷಿಸಿಬಿಡುತ್ತದೆಯೋ ಎಂಬಂತೆಯೂ, ಇತರರು ತನ್ನ ಹೊಟ್ಟೆಯನ್ನು ತುಂಬುವ ಪ್ರಯತ್ನವನ್ನು ಕೈಗೊಂಡಿರುವುದರಿಂದ ತಾನು ಸ್ವಸ್ಥಚಿತ್ತವಾಗಿದೆಯೋ ಎಂಬಂತೆಯೂ ತೋರುತಿದ್ದಿತು ॥೫೩॥

ಇದು ಯುಕ್ತವೂ ಅಹುದು. ಹಿಂದೆ (ಕರ್ಕಟೀಜನ್ಮದಲ್ಲಿ) ಈ ಸೂಚಿಯು, ಪರಹಿಂಸೆಯಿಂದ ತನ್ನ ಹೊಟ್ಟೆಯನ್ನು ತುಂಬಿಕೊಳ್ಳಬೇಕೆಂಬ ಇಚ್ಛೆಯಿಂದಲೇ ತನ್ನ ಮನಸ್ಸನ್ನು ಹರ್ಷಪಡಿಸಿಕೊಂಡಿದ್ದಿತು; ಅದುಕಾರಣ, ಈಗಲೂ ಅವಿಚಿನ್ನವಾಗಿ ತನ್ನ ಮುಖದಲ್ಲಿ ಬೀಳುತಿರುವ ಸೂಕ್ಷ್ಮಸೂತ್ರಗಳಿಂದ ನಿರುದ್ಧವಾಗಿರುವಂತೆ ತೋರುತ್ತಿರುವುದು ॥೫೪॥

ಬಹುಕಾಲದಿಂದ ಕ್ಷೀಣವಾಗಿರುವ ಒಂದು ವಸ್ತುವನ್ನು ನೋಡಿದರೆ, ಮಹಾಕ್ರೂರರಾದವರೂ ಕೂಡ ಅದರಲ್ಲಿ ದಯೆಯಿಟ್ಟು ಅದನ್ನು ಪರಿಪೂರ್ತಿಮಾಡುವರು. ಈ ವಿಷಯದಲ್ಲಿ ಸಂಶಯವಿಲ್ಲ. ಈ ವಿಷಯದಲ್ಲಿ ಈ ಸೂಚಿಯ ನಡತೆಯೇ ದೃಷ್ಟಾಂತವಾಗಿರುವದು. ಈ ಸೂಚಿಯು, ಹರಿದು ಜೂಲಾಗಿರುವ ಬಟ್ಟೆಯನ್ನು, ಒಂದು ಕ್ಷಣದೊಳಗಾಗಿ ಪೂರ್ತಿಮಾಡಿಬಿಟ್ಟಿತಲ್ಲವೆ! ॥೫೫॥

ಆ ಸೂಚಿಯು, ಹಿಂದೆ ತಪಸ್ಸುಮಾಡುವಾಗಲೇ, ದಾರವು ಹೊರಕ್ಕೆ ಹೋಗುವುದಕ್ಕೆ ತಕ್ಕಂತೆಯೇ ತನ್ನ ಹೃದಯವನ್ನು ಸಂಪಾದಿಸಿಕೊಂಡಿತು; ಮತ್ತು, ತನ್ನ ಅಭಿಜ್ಞತೆಯನ್ನು ಸೂರ್ಯಕಿರಣದಂತೆ ಪ್ರಕಾಶಪಡಿಸುವಂತಹ ತೇಜಸ್ಸನ್ನೂ ಕೂಡ, ಪರರ ಪೂರಣೆಯಲ್ಲಿಯೇ ವ್ಯಾಪಿಸುವಂತೆ ಮಾಡಿಕೊಂಡಿತು. ಇಷ್ಟೇಅಲ್ಲದೆ, ತನ್ನ ಹೊಟ್ಟೆತುಂಬುವಂತೆ ಅದಕ್ಕನುಕೂಲವಾಗಿ ಆಗ ವರ ಪ್ರಾರ್ಥನೆಮಾಡಿಕೊಳ್ಳಲಿಲ್ಲ ॥೫೬॥

ಈರೀತಿಯಾಗಿ ಸೂಚೀರೂಪವನ್ನು ಧರಿಸಿಬಿಟ್ಟಿರುವ ಆ ರಾಕ್ಷಸಿಯು, ಆಕಸ್ಮಿಕವಾಗಿ ತನಗುಂಟಾದ ಈ ಪರರ ಹೊಟ್ಟೆಯನ್ನು ತುಂಬುವ ಕೆಲಸದಿಂದ, ಒಂದೊಂದುಸಲ ಪಶ್ಚಾತ್ತಾಪಪಡುತ್ತಿದ್ದಳು ॥೫೭॥

ವೇಧಂ ಪೂರಯೋಽಸ್ಯೈವ ಕರೋತಿ ಸ್ವಂ ಪ್ರಚಾರಿತಾ ।
ಪ್ರಕೃತೇನ ನಿಜೇನಾಪಿ ವೇಧಾಯ ವ್ಯವಹಾರಿತಾ ॥೫೮॥
ಸಞ್ಚಾರಯತಿ ವಸ್ತ್ರೇಷು ಸೂತ್ರಂ ಚತುರವೇಧನಾತ್ ।
ಆದೀರ್ಘಾ ವಾಸನಾತನ್ತುಃ ಶರೀರೇಷ್ವಿವ ಚೇತನಾಮ್ ॥೫೯॥
ಸಞ್ಚಾರ್ಯ ಮರ್ಮವೇಧೇನ ಧಾವನ್ತೀವಾಕ್ಷಿಪಾತನೇ ।
ಅದರ್ಶಿತಮುಖಾವಿವ ದುರ್ಜನಾ ಮರ್ಮವೇಧಿನಃ ॥೬೦॥
ಕಣ್ಠವಸ್ತ್ರದಳಪ್ರೋತಾ ವೇಧಾಕ್ಷ್ಣಾ ಮುಖಮೀಕ್ಷತೇ ।
ಕಥಮೇತಾಭಿನದ್ಮೀತಿ ತೀಕ್ಷ್ಣಾನಾಮೇತದೀಪ್ಸಿತಮ್ ॥೬೧॥
ಸಮಮೇವ ಚ ಕೌಶೇಯೇ ಕ್ಷೌಮೇ ಚ ವಸನೇ ಸೃತಾ ।
ಜಡಃ ಕ ಇವ ವಾ ನಾಮ ಗುಣಾಗುಣಮಪೇಕ್ಷತೇ ॥೬೨॥
ಸಾ ದಧಾನಾ ತತಂ ಸೂತ್ರಂ ಅಙ್ಗುಷ್ಠಾಙ್ಗುಳಪೀಡಿತಾ ।
ಅನ್ತ್ರತನ್ತುಮಿವಾಮಾನ್ತಂ ಉದ್ಗಿರನ್ತೀ ನಿರೀಕ್ಷತೇ ॥೬೩॥

ಹೀಗೆ ಪಶ್ಚಾತ್ತಾಪವುಂಟಾದರೂ, ಅವಳು ಆ ಕೆಲಸವನ್ನು ಮಾತ್ರ ಬಿಡಲಿಲ್ಲ. ಪೂರ್ವದಂತೆಯೇ ಇತರರಿಂದ ಪ್ರೇರಿತಳಾಗಿ ನದೀಪ್ರವಾಹಸದೃಶವಾದ ವೇಗದಿಂದಲೇ ಪುನಃಪುನಃ ಚುಚ್ಚುತಲೇ ಇರುವಳು ॥೫೮॥

ದೀರ್ಘವಾಗಿರತಕ್ಕ ಕರ್ಮವಾಸನೆಯು ಶರೀರಗಳಲ್ಲಿ ಜೀವಚೈತನ್ಯವನ್ನು ಸಂಚಾರಮಾಡಿಸುವಂತೆ, ಇವಳು—ನಿಪುಣವಾದ ವೇಧನದಿಂದ (ಚುಚ್ಚುವಿಕೆ) ವಸ್ತ್ರಗಳಲ್ಲಿ ದಾರವನ್ನು ಸಂಚಾರಮಾಡಿಸುತಿರುವಳು ॥೫೯॥

ಹೊಲಿಯತಕ್ಕವರು ಈ ಸೂಚಿಯನ್ನು ಹಿಡಿದುಕೊಂಡು ಹೊಲಿಯುವಾಗ, ಅವರು ಇದನ್ನು ವಸ್ತ್ರಗಳಲ್ಲಿ ಸಂಚಾರಮಾಡಿಸುತ ಚುಚ್ಚುವುದರಿಂದ, ಅವರ ಕಣ್ಣು ಬೀಳುವುದರೊಳಗಾಗಿ ಇದು ಎಲ್ಲಿಯೋ ಓಡಿಹೋಗಿಬಿಡುವಂತೆ ಕಾಣುವುದು. ದುರ್ಜನರಾದವರು, ಮುಖವನ್ನು ತೋರಿಸಿಕೊಳ್ಳದೆಯೇ ಮರ್ಮವೇಧನೆಮಾಡುವರು. ಇದು ಅವರಿಗೆ ಸ್ವಭಾವಸಿದ್ಧವಾದುದು ॥೬೦॥

ಒಂದೊಂದುಸಲ, ಕಂಠಕ್ಕೆ ಸುತ್ತಿಕೊಂಡಿರುವ ಸಣ್ಣವಸ್ತ್ರಕ್ಕೆ ಈ ಸೂಚಿಯನ್ನು ಕೆಲವರು ಚುಚ್ಚಿಕೊಳ್ಳುವರು; ಆಗ, ಇವರ ಕುತ್ತಿಗೆಯನ್ನು ನಾನು ಹೇಗೆ ಸೀಳಲೆಂಬ ಅಭಿಪ್ರಾಯವನ್ನು ಸೂಚಿಸುತಿರುವಂತೆ, ಇದು ತನ್ನ ಕಣ್ಣಿನಿಂದ ಪರರ ಮುಖವನ್ನು ನೋಡುತ್ತಿರುವುದು. ತೀಕ್ಷ್ಣರಾದವರಿಗೆ, ಈ ಅಭಿಪ್ರಾಯವು ಸ್ವಭಾವಸಿದ್ಧವಾದುದು ॥೬೧॥

ಈ ಸೂಚಿಯು, ದಿವ್ಯವಾದ ಪಟ್ಟೆಯ ವಸ್ತ್ರದಲ್ಲಿಯೂ ನಾರುಮಡಿಯಲ್ಲಿಯೂ ವ್ಯತ್ಯಾಸವೇಯಿಲ್ಲದೆ ಪ್ರಸರಿಸಿತು. ಜಡನಾದವನು ಯಾವನುತಾನೆ ಗುಣಾವಗುಣಗಳನ್ನು ವಿಚಾರಮಾಡುವನು? ॥೬೨॥

ಹೊಲಿಗೆಯುವನು ಹೊಲಿಯುವಾಗ, ಆ ಸೂಚಿಯು ದಾರವನ್ನು ಗುಳುತಿರುವುದರಿಂದ, ಅವನ ಕೈಯಿಂದ ಮರ್ದಿಸಲ್ಪಟ್ಟು ತನ್ನ ಹೊಟ್ಟೆಯೊಳಗೆ ಅಡಗಲಾರದಿರುವ ನರಗಳನ್ನು ಹೊರಕೆ ಕಕ್ಕುತಿದೆಯೋ ಎಂಬಂತೆ ಕಾಣಿಸುತಿದ್ದಿತು ॥೬೩॥

ತೀಕ್ಷ್ಣಾಪ್ಯಹೃದಯತ್ವೇನ ಸರಸೇಷ್ವರಸೇಷ್ವಪಿ ।
ಸೂತ್ರಿತಾಪಿ ಪದಾರ್ಥೇಷು ವಿಶತ್ಯರಸಗಾಮಿನೀ ॥೬೪॥
ಅಗರ್ದತೀ ಮುಖಪ್ರೋತಾ ಸುತೀಕ್ಷ್ಣಾಪಿಚ ತಾಪಿಧೀಃ ।
ಸುವೇಧಿತಾಪ್ಯಹೃದಯಾ ರಾಜಪುತ್ರ್ಯಪಿ ದುರ್ಭಗಾ ॥೬೫॥
ವಿನಾ ಪರಾಪಕಾರೇಣ ತೀಕ್ಷ್ಣಾ ಮರಣಮಿಹತೇ ।
ವೇದನಾದ್ರೋಧಿತಾ ಸೂಚೀ ಕರ್ಮಪಾಶೇ ಪ್ರಲಮ್ಬತೇ ॥೬೬॥
ಶೇತೇ ಕಿಂ ಶ್ಯಾಮಮೈತ್ರ್ಯೇವ ದೂರೇ ಕರಪರಿಚ್ಯುತಾ ।
ಸ್ವರೂಪಸದೃಶಂ ಮಿತ್ರಂ ಕಸ್ಮೈನಾಮ ನ ರೋಚತೇ ॥೬೭॥
ಮಿಶ್ರಿತಾ ಮೂಢಚಿತ್ತಾನಾಂ ವೃತ್ತಿಭಿಃ ಪ್ರಾಕೃತೇ ಜನೇ ।
ತಿಷ್ಠತ್ಯಾತ್ಮಸಮಾಂ ಕೋ ಹಿ ಸಙ್ಗತಿಂ ತ್ಯಕ್ತುಮಿಚ್ಛತಿ ॥೬೮॥
ಭವತ್ಯಯಸ್ಕಾರವಿತ್ತಾ ಸನ್ತ್ಯಜ್ಯಾನ್ತರ್ಧಿಗಾಮಿನೀ।
ಭಸ್ತ್ರಾವಾತೈರ್ವಿಚಲಿತಾ ಗಗನಾದುತ್ಪತೋನ್ಮುಖೀ ॥೬೯॥

ಇದು, ಎಷ್ಟು ತೀಕ್ಷ್ಣವಾಗಿದ್ದರೂ ಹೃದಯಶೂನ್ಯವಾಗಿರುವಕಾರಣ, ಸರಸಪಧಾರ್ಥಗಳಲ್ಲಿಯೂ ವಿರಸಪದಾರ್ಥಗಳಲ್ಲಿಯೂ ತಾರತಮ್ಯಜ್ಞಾನವಿಲ್ಲದೆ, ಸೂತ್ರದಲ್ಲಿ ಪವಣಿಸಲ್ಪಟ್ಟು ರಸಾಸ್ವಾದವಿಹೀನವಾಗಿ ಪ್ರವೇಶಿಸುವುದು ॥೬೪॥

ಈ ಸೂಚಿಗುಂಟಾದ ದುರವಸ್ಥೆಯನ್ನು ಎಷ್ಟುಹೇಳುವ ! ಇದು ಸ್ವಲ್ಪವೂ ಧ್ವನಿಮಾಡದಿದ್ದರೂ ಮುಖದಲ್ಲಿ ಚುಚ್ಚಲ್ಪಟ್ಟಿರುವುದು; ಸ್ವಯಂ ಅತಿತೀಕ್ಷ್ಣವಾಗಿ ಪರರಿಗೆ ಸಂತಾಪವುಂಟುಮಾಡುವ ಶಕ್ತಿಯುಳ್ಳದಾಗಿದ್ದರೂ ಮನಸ್ಸಿನಲ್ಲಿ ಸಂತಾಪಪಡುತಿರುವುದು; ಚೆನ್ನಾಗಿ ಚುಚ್ಚಲ್ಪಟ್ಟಿದ್ದರೂ ಹೃದಯ (ಛಿದ್ರ) ಶೂನ್ಯವಾಗಿರುವುದು. ಹೀಗಿರುವಕಾರಣ, ದೊರೆಮಗಳಾಗಿ ಹುಟ್ಟಿದರೂ ಭಾಗ್ಯಹೀನಳಾದ ಸ್ತ್ರೀಯು ವ್ಯಸನಪಡುವಂತೆ, ಈ ಸೂಚಿಯೂ ವ್ಯಸನಕ್ಕೆ ಗುರಿಯಾಯ್ತು ॥೬೫॥

ತೀಕ್ಷ್ಣವಾದ ಈ ಸೂಚಿಯು, ಇತರರಿಂದ ಯಾವ ಅಪರಾಧವೂ ನಡೆಯದಿದ್ದರೂ, ಅವರಿಗೆ ಮರಣವಾಗಬೇಕೆಂದು ಅಪೇಕ್ಷಿಸಿದಳು. ಹೀಗೆ ಅವಳಿಗುಂಟಾದ ದುರ್ಬುದ್ಧಿವಶದಿಂದಲೇ, ಸೂತ್ರದಲ್ಲಿ ತಡೆಯಲ್ಪಟ್ಟವಳಾಗಿ, ತನ್ನ ಕರ್ಮಪಾಶದಲ್ಲಿ ಸಿಕ್ಕಿಕೊಂಡು ಒದ್ದಾಡುತಿರುವಳು॥೬೬॥

ಹೊಲಿಯುತಿರುವಾಗ ಆಕಸ್ಮಿಕವಾಗಿ ಹೊಲಿಯತಕ್ಕವನ ಕೈಯಿಂದ ಜಾರಿಬಿದ್ದು, ಈ ಸೂಚಿಯು, ಅವನ ತೊಡೆಯಮೇಲೆಯೋ ಅಲ್ಲಿರುವ ಕಪ್ಪಾದ ರೋಮಗಳಲ್ಲಿ ಮೈತ್ರಿಯಿಂದಲೋ ಎಂಬುವಹಾಗೆ ನಿದ್ರೆಮಾಡುವಂತಿರುವುದು. ತನ್ನ ಸ್ವರೂಪಕ್ಕೆ ತಕ್ಕಂತಹ ಮಿತ್ರನು ಸಿಕ್ಕಿದರೆ ಯಾರಿಗೆತಾನೆ ಬೇಕಾಗುವುದಿಲ್ಲ? ॥೬೭॥

ಅದುಕಾರಣವೇ, ಜೀವಸೂಚಿರೂಪಧರಳಾದ ಇವಳು, ಪ್ರಾಕೃತಜನರಲ್ಲಿ ಮೂಢವಾದ ಚಿತ್ತವೃತ್ತಿಯೊಡಗೂಡಿ ವಾಸಮಾಡುವಳು. ತನಗೆ ಸದೃಶವಾದ ಸಹವಾಸವನ್ನು ಯಾರುತಾನೆ ಬಿಡಲಿಚ್ಛಿಸುವರು ? ॥೬೮॥

ಹೀಗಿರುವ ಈ ಅಯಸ್ಸೂಚಿಯು, ಕದಾಚಿತ್ ಲೋಹಕಾರರ ಕೈಗೆ ಸೇರಿಬಿಟ್ಟ ಪಕ್ಷದಲ್ಲಿ, ಆಗ ಅವರು (ಕುಲುಮೆಯ) ಅಗ್ನಿಯಲ್ಲಿ ಹಾಕಲು, ಆಕ್ಷಣವೇ ಚರ್ಮಭಸ್ತ್ರಿಕೆಯ (ತಿದಿ) ಗಾಳಿಯಿಂದ ಸೂಕ್ಷ್ಮರೂಪದಲ್ಲಿ ತೂರಿಹೋಗಿ, ಅವರನ್ನು ಬಿಟ್ಟುಬಿಟ್ಟು ಅಂತರಿಕ್ಷದಲ್ಲಿ ಹಾರಿಹೋಗಿಬಿಡುವುದು॥

ಪ್ರಾಣಾಪಾನಪ್ರವಾಹಸ್ಥಾ ಹೃತ್ಪದ್ಮಾನ್ತರಚಾರಿಣೀ ।
ದುಃಖಶಕ್ತಿರ್ಮಹಾಘೋರಾ ಜೀವಶಕ್ತಿರಿವೋದಿತಾ ॥೨೦॥
ಸಮಾನವೈಪರೀತ್ಯೇನ ಸಮಾನಸಮಗಾಮಿನೀ ।
ಉದಾನವಿಪರೀತತ್ವಾತ್ ಉದಾನಸಮಗಾಮಿನೀ ॥೨೧॥
ವ್ಯಾನಸ್ಥಾ ವ್ಯಾಧಿಜನನೀ ಸರ್ವಾಙ್ಗರಸಚಾರಿಣೀ ।
ಹೃತ್ಕಣ್ಠೇ ಶೂಲಪವನೇ ವೈವರ್ಣ್ಯೋನ್ಮಾದಕಾರಿಣೀ ॥೨೨॥
ಪ್ರಾಯಶೋಽಧಿಕಹಸ್ತಸ್ಥಾ ಸುಪ್ತೋರ್ಣಾಗನ್ಧಕೋಟರೇ ।
ಬಾಲಪಸ್ತ್ರಙ್ಗುಳೀತಲ್ಪವೇಧನೈಕವಿಲಾಸಿನೀ ॥೨೩॥
ಪಾದಪ್ರವಿಷ್ಟಾ ರುಧಿರಪಾನೋಪಾರ್ಜನವಿಸ್ಮಿತಾ ।
ತುಷ್ಯತ್ಯತಿತರಾಂ ಗುಚ್ಛಭೋಜನಾ ತುಚ್ಛಭೋಜನೈಃ ॥೨೪॥
ಶೇತೇ ಕರ್ದಮಕೋಶಸ್ಥಾ ಚಿರಕಾಲಮಧೋಮುಖೀ ।
ಇಚ್ಛಾ ಸುರೂಪಮಾಸಾದ್ಯ ಕಇವಾಸ್ಪದಮುಜ್ಝತಿ ॥೨೫॥

ಜೀವಸೂಚಿಯು, ಪ್ರಾಣ ಅಪಾನ(ಹೃದಯದಲ್ಲಿಯೂ ಗುದಸ್ಥಾನದಲ್ಲಿಯೂ ಇರುವುವು) ಮುಂತಾದ ವಾಯುಗಳ ಪ್ರವಾಹದ ಜೊತೆಯಲ್ಲಿ ಸೇರಿಕೊಂಡು ಪ್ರಾಣಿಗಳ ಹೃದಯಕಮಲದಲ್ಲಿ ಸಂಚರಿಸುವಾಗ, ದುಃಖಪ್ರದವಾದ ಪಾಪಕರ್ಮ ಶಕ್ತಿಯೆಂಬ ಜೀವಶಕ್ತಿಯೇ ಈರೂಪದಲ್ಲಿ ಹುಟ್ಟಿರುವುದೋ ಎಂಬಂತೆ, ಮಹಾ ಘೋರವಾಗಿ ವ್ಯಥೆಯುಂಟುಮಾಡುವುದು ॥೨೦॥

ದೇಹದಲ್ಲಿರುವ ಸಮಾನವೆಂಬ ವಾಯುವು (ಇದು ನಾಭಿಸ್ಥಾನದಲ್ಲಿರುವುದು) ವ್ಯತ್ಯಾಸವಾಗಿ ನಡೆಯುವಂತೆ ಮಾಡಿ,ತಾನೂ ಅದರ ಜತೆಯಲ್ಲಿ ಸಂಚರಿಸುವುದು; ಹಾಗೆಯೇ ಉದಾನವಾಯು (ಕಂಠಸ್ಥಾನದಲ್ಲಿರುವುದು) ವ್ಯತ್ಯಾಸದಿಂದ ನಡೆಯುವಂತೆ ಮಾಡಿ, ತಾನೂ ಅದರ ಜತೆಯಲ್ಲಿ ಸೇರಿ ಸಂಚರಿಸುವುದು ॥೨೧॥

ವ್ಯಾನವಾಯುವಿನಲ್ಲಿ (ಸರ್ವಶರೀರದಲ್ಲಿಯೂ ಇರುವುದು) ಸೇರಿಕೊಂಡು ಸಮಸ್ತವಾದ ಅಂಗರಸಗಳಲ್ಲಿಯೂ ಸಂಚರಿಸುತ, ವ್ಯಾಧಿಯನ್ನು ಹುಟ್ಟಿಸುವುದು; ಹೃದಯದಲ್ಲಿಯೂ ಕಂಠದಲ್ಲಿಯೂ ಶೂಲರೋಗದೊಳಗೆ ಪ್ರವೇಶಿಸಿ, ವೈವರ್ಣ್ಯವನ್ನೂ (ಬಣ್ಣವ್ಯತ್ಯಾಸವಾಗುವಿಕೆ) ಉನ್ಮಾದವನ್ನೂ (ಹುಚ್ಚು) ಉಂಟುಮಾಡುವುದು ॥೨೨॥

ಆಯಸಸೂಚಿಯು, ಬಹುಶಃ ಕುರಿಕಾಯತಕ್ಕವರ ಕೈಯನ್ನು ಸೇರಿ ಕಂಬಳಿ ಮುಂತಾದುದನ್ನು ಹೊಲಿಯುವಾಗ, ಅವರಲ್ಲಿರುವ ಉಣ್ಣೆಯ ಗಂಧದ ಮಧ್ಯದಲ್ಲಿ ಮಲಗಿಕೊಳ್ಳುವುದು; ಬಾಲಕರ ಕೈಬೆರಳೆಂಬ ಹಾಸಿಗೆಯನ್ನು ಚುಚ್ಚಿ ಹೊಲಿಯುವುದರಲ್ಲಿ, ಇದು ಬಹು ವಿಲಾಸಪಡುತಿರುವುದು ॥೨೩॥

ಮನುಷ್ಯರ ಕಾಲನ್ನು ಪ್ರವೇಶಿಸಿದಾಗ, ಅಲ್ಲಿ ರಕ್ತಪಾನಸಂಪಾದನೆಯಿಂದ ಗರ್ವಪಡುವುದು! ಪುಷ್ಪಮಾಲೆಯನ್ನು ಪವಣಿಸುವಾಗ, ಆ ಗೊಂಚಲುಗಳನ್ನು ಚುಚ್ಚಿ ಅಲ್ಪವಾದ ಭೋಜನದಿಂದ ಸಂತೋಷಪಡುವುದು ॥೨೪॥

ಕೆಸರಿನೊಳಗೆ ಬಿದ್ದಾಗ, ಅದರ ಮಧ್ಯದಲ್ಲಿ ಬಹುಕಾಲ ಅಧೋಮುಖವಾಗಿ ಬಿದ್ದುಕೊಂಡಿರುವುದು. ತನ್ನ ಇಚ್ಛಾನುಗುಣವಾದ ಆಶ್ರಯವು ಸಿಕ್ಕಿದಮೇಲೆ, ಅದನ್ನು ಯಾವನು ತಾನೆ ಬಿಟ್ಟುಬಿಡುವನು ? ॥೨೫॥

ಕ್ರೌರ್ಯೇಣಾಪಹತಾತ್ಮಾನಂ ದರ್ಶಯತ್ಯುಪವೇಧನೈಃ ।
ಉತ್ಸವಾದಪಿ ನೀಚಾನಾಂ ಕಲಹೋಪಿ ಸುಖಾಯತೇ ॥೭೬॥
ಕಪರ್ದಕಾರ್ಥಲಾಭೇನ ಕೃಪಣೋ ಬಹುಮನ್ಯತೇ ।
ದುರುಚ್ಛೇದಾ ಹಿ ಭೂತಾನಾಂ ಅಹಙ್ಕಾರಚಮತ್ಕೃತಿಃ ॥೭೭॥
ಸೂಚಿಕಾಯುಗ್ಮಲಭ್ಯೇನ ಮೋಹಿತೇನಾತ್ಮನಾ ನೃಣಾಮ್ ।
ಮೃತಿಮಾಶಙ್ಕತೇ ಚಿತ್ರಾ ಸ್ವಾರ್ಥೇ ನೋದೇತಿ ಮೂಢತಾ ॥೭೮॥
ವಸ್ತ್ರತನ್ತುವಿಭೇದೇನ ಪರಮಾರಣಮಾಶು ಮೇ ।
ಇದಂ ಸಮ್ಪದ್ಯತಇತಿ ಭವತ್ಯನ್ತರ್ಹಿ ನಿರ್ಮಲಾ ॥೭೯॥
ಸ್ಥಾಪಿತಾ ಮಲಮಾದತ್ತೇ ಯಥಾ ಮೃದ್ಘರ್ಷಣಂ ವಿನಾ ।
ಪರಾಪರಾಧವಿರಹಾತ್ ವ್ಯಾಧಿಸ್ತಸ್ಯಾಃ ಪ್ರವರ್ತತೇ ॥೮೦॥
ಸೂಕ್ಷ್ಮಾದೃಶ್ಯಾ ಚೈವ ದಾತ್ರೀ ಕ್ಷಣಾದ್ವಿಸ್ಮೃತಿಮೇತಿ ಸಾ ।
ತೀಕ್ಷ್ಣಭೇದಕರೀ ಕ್ರೂರಾ ಸೂಚೀ ಚೇಷ್ಟೇವ ದೈವಿಕೀ ॥೮೧॥
ತನ್ತುವೇಧನಮಾತ್ರೇಣ ಹತೋನ್ಯಇತಿ ತೋಷಿತಾ ।
ದುರ್ಜನೋ ಯೇನತೇನೈವ ನಾಶಿತೇನೈತಿ ಹೃಷ್ಟತಾಮ್ ॥೮೨॥

ಕೇವಲ ಕ್ರೌರ್ಯದೂಷಿತಳಾಗಿರುವ ಈ ಸೂಚಿಯು, ಪರರಿಗೆ ಪ್ರಾಣಾಪಹಾರಕವಾದ ಹಿಂಸೆಕೊಡುವುದರಿಂದಲೂ, ಅಲ್ಪವಾದ ರಕ್ತಪಾನದಿಂದಲೂ ತನ್ನ ಸ್ವರೂಪವನ್ನು ತೋರ್ಪಡಿಸಿಕೊಳ್ಳುವಳು. ನೀಚರಾದವರಿಗೆ, ಉತ್ಸವಕ್ಕಿಂತಲೂ ಜಗಳವೇ ಸುಖಕರವಾಗಿರುವುದಲ್ಲವೆ! ಅರ್ಧಕವಡೆ ಸಿಕ್ಕಿದಮಾತ್ರದಲ್ಲಿಯೇ ಅಲ್ಪನಾದವನು ಬಹು ದೊಡ್ಡದೆಂದು ಎಣಿಸುವುದಿಲ್ಲವೆ! ಕ್ಷುದ್ರಪ್ರಾಣಿಗಳಿಗೆ ಅಹಂಕಾರವಿಲಾಸವೆಂಬುದು ಪ್ರಬಲವಾದುದಲ್ಲವೆ! ॥೭೬—೭೭॥

ಹೀಗೆ ಆ ರಾಕ್ಷಸಿಯು ಮೂಢಳಾಗಿ, ಸೂಚಿಕಾದ್ವಯರೂಪದಿಂದ ತಾನು ಮಾಡುವ ವೇಧೆಯಿಂದ ಜನರಿಗೆ ಮರಣವುಂಟಾಗಬೇಕೆಂಬುದಾಗಿ ಯೋಚಿಸುವಳು. ಮೂಢರಾದವರಿಗೆ ತಮ್ಮ ಪ್ರಯೋಜನದಲ್ಲಿ ಮಾತ್ರ ಮೂಢತನವುಂಟಾಗುವುದಿಲ್ಲ ॥೭೮॥

ಮತ್ತು, ಈ ಸೂಚಿಯು—'ನಾನು ಕಲಿತಿರುವ ಬಟ್ಟೆಯ ದಾರಗಳನ್ನು ಸೀಳುವ ಕೌಶಲ್ಯದಿಂದ ಇತರರ ಪ್ರಾಣಾಪಹಾರವು ಸುಲಭವಾಗಿರುವುದು.' ಎಂದು ತಿಳಿದು, ಒಳಗೇ ಸಂತೋಷಪಡುವಳು ॥೭೯॥

ಮಣ್ಣನ್ನು ತಿಕ್ಕದೆ ಹಾಗೆಯೇ ನೆಲದಮೇಲೆ ಇರಿಸಲ್ಪಟ್ಟರೆ, ಈ ಸೂಚಿಯು ತಾನು ಮಲವನ್ನು ಸ್ವೀಕರಿಸುವುದು. (ಮಣ್ಣು ಹಿಡಿಯುವುದು) ಪರರಿಗೆ ಅಪರಾಧಮಾಡದೆ ಒಂದುಕ್ಷಣವಿದ್ದರೂ ಆ ಸೂಚಿಗೆ ಹೀಗೆ ವ್ಯಾಧಿಯುಂಟಾಗಿಬಿಡುವುದು॥೮೦॥

ಆ ಸೂಚಿಯು, ದೈವವ್ಯಾಪಾರದಂತೆ, ಅತಿಸೂಕ್ಷ್ಮವಾಗಿಯೂ—ಅದೃಶ್ಯವಾಗಿಯೂ—ಮಧ್ಯಮಧ್ಯದಲ್ಲಿ ಖಂಡಿಸತಕ್ಕುದಾಗಿಯೂ ಇರುವುದು; ಒಂದುಕ್ಷಣದೊಳಗಾಗಿ ವಿಸ್ಮೃತಿಹೊಂದಿಬಿಡುವುದು. ಮತ್ತು ಅತಿ ತೀಕ್ಷ್ಣವಾಗಿ ಭೇದಿಸತಕ್ಕುದಾಗಿಯೂ ಇರುವುದು ॥೮೧॥

ಸಣ್ಣದೊಂದು ದಾರವನ್ನು ಸೀಳುವುದರಿಂದಲೇ, ಈ ಸೂಚಿಯು, ತಾನು ಪರರನ್ನು ಕೊಂದುಬಿಟ್ಟೆನೆಂದು ಸಂತೋಷಪಡುವುದು. ದುಷ್ಟನಾದವನು, ಯಾವನಾದರೊಬ್ಬನಿಗೆ ಹಾನಿಯುಂಟುಮಾಡಿದರೂ ಅದರಿಂದಲೇ ಹರ್ಷಪಡುವನು ॥೮೨॥

ಪಙ್ಕೇ ಮಜ್ಜತಿ ಯಾತಿ ಖಂ ವಿಹರತಿ ವ್ಯೋಮಾನಿಲೈರ್ದಿಕ್ತಟೇ
ಶೇತೇ ಪಾಂಸುಷು ಭೂತಲೇಷ್ವಿವ ವನೇ ಪಟ್ಟೇ ಗೃಹೇನ್ತಃಪುರೇ ।
ಹಸ್ತೇ ಶ್ರೋತ್ರಸರೋರುಹೇಥ ಮೃದುನಿ ಸ್ವೇಚ್ಛೋರ್ಣಿಕಾಖಣ್ಡಕೇ
ರನ್ಧ್ರೇ ಕಾಷ್ಠಮೃದಾಂ ಚ ಮಾತಿ ಹೃದಯೇ ದ್ರವ್ಯಾತ್ಮಶಕ್ತ್ಯೈವ ಸಾ॥೮೩॥

ಶ್ರೀವಾಲ್ಮೀಕಿರುವಾಚ.

ಇತ್ಯುಕ್ತವತ್ಯಥ ಮುನೌ ದಿವಸೋ ಜಗಾಮ
ಸಾಯನ್ತನಾಯ ವಿಧಯೇಸ್ತಮಿನೋ ಜಗಾಮ ।
ಸ್ನಾತುಂ ಸಭಾ ಕೃತನಮಸ್ಕರಣಾ ಜಗಾಮ
ಶ್ಯಾಮಾಕ್ಷಯೇ ರವಿಕರೈಶ್ಚ ಸಹಾಜಗಾಮ ॥೮೪॥

ಇತಿ ಉತ್ಪತ್ತಿಪ್ರಕರಣೇ ಸೂಚೀವ್ಯವಹಾರವರ್ಣನಂ ನಾಮ
ಸಪ್ತತಿತಮಃ ಸರ್ಗಃ.

ಷಷ್ಠಂ ದಿನಮ್.

ಅಯ್ಯಾ! ರಾಮ! ಈಗ ಆ ಸೂಚಿಯು ಚೇಷ್ಟೆಯನ್ನು ಸಂಕ್ಷೇಪವಾಗಿ ಕೇಳು. ಅದು ಒಂದುವೇಳೆ ಕೆಸರಿನಲ್ಲಿ ಮುಣುಗುವುದು; ಆಕಾಶಕ್ಕೆ ಹಾರುವುದು ; ಅಲ್ಲಿರುವ ಗಾಳಿಯಿಂದ ವಿಲಾಸಪಡುವುದು ; ದಿಗಂತಗಳಲ್ಲಿಯೂ— ಧೂಳಿನಲ್ಲಿಯೂ— ಅರಣ್ಯದಲ್ಲಿಯೂ, ಅಂತಃಪುರದಲ್ಲಿ ಹಂಸತೂಲಿಕಾತಲ್ಪದಮೇಲೆ ಮಲಗಿದಂತೆ ಮಲಗುವುದು. ಮತ್ತು, ಮಣಿಮಂತ್ರಾದಿಗಳ ಶಕ್ತಿಯುಳ್ಳದರಂತೆ, ಕೈಯೊಳಗೂ— ಕಿವಿಯೊಳಗೂ— ಉಣ್ಣೆಯ ಮಧ್ಯದಲ್ಲಿಯೂ— ಕಾಷ್ಠಮೃತ್ತುಗಳ ರಂಧ್ರದಲ್ಲಿಯೂ— ಪ್ರಾಣಿಗಳ ಹೃದಯದಲ್ಲಿಯೂ ಅಡಗಿಕೊಳ್ಳುವುದು ॥೮೩॥

ಶ್ರೀವಾಲ್ಮೀಕಿಮಹರ್ಷಿಯು ಭರದ್ವಾಜನನ್ನು ಕುರಿತು ಹೇಳುವರು:—

ಅಯ್ಯಾ! ಭರದ್ವಾಜ! ಹೀಗೆ ವಸಿಷ್ಠಮುನಿ ಹೇಳುತ್ತಿರಲಾಗಿ, ಆ ಹಗಲು ಕಳೆದುಹೋಯಿತು; ಸಾಯಂಕಾಲಿಕವಾದ ಕರ್ಮಗಳು ನೆರವೇರುವುದಕ್ಕಾಗಿ, ಸೂರ್ಯನು ಅಸ್ತಹೊಂದಿದನು; ಸ್ನಾನಮಾಡುವುದಕ್ಕೋಸ್ಕರ, ಆ ಸಭೆಯೆಲ್ಲವೂ ವಸಿಷ್ಠರಿಗೆ ನಮಸ್ಕರಿಸಿ ಹೊರಟುಹೋಯಿತು; ಆ ರಾತ್ರಿ ಕಳೆದಬಳಿಕ, ಸೂರ್ಯಕಿರಣಗಳೊಳನೆ ಮತ್ತೆ ಬಂದು ಸೇರಿತು ॥೮೪॥

ಇದು ಉತ್ಪತ್ತಿಪ್ರಕರಣದಲ್ಲಿ ಸೂಚಿಯ ವ್ಯವಹಾರವರ್ಣನೆಯೆಂಬ
ಎಪ್ಪತ್ತನೆಯ ಸರ್ಗವು.

ಆರನೆಯ ದಿವಸವಾದುದು.

ಅಥ ಉತ್ಪತ್ತಿಪ್ರಕರಣೇ ಏಕಸಪ್ತತಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಅಥ ಸಾ ಬಹುಕಾಲೇನ ಕರ್ಕಟೀನಾಮ ರಾಕ್ಷಸೀ ।
ಸರ್ವೇಷಾಂ ನರಮಾಂಸಾನಾಂ ನ ತು ತೃಪ್ತಿಮುಪಾಯಯೌ ॥೧॥
ಪೂರ್ವೇಣ್ಹೈವ ಕಿಲಾಹ್ನಾ ಸಾ ತೃಪ್ತಾ ರುಧಿರಬಿನ್ದುನಾ ।
ಸೂಚ್ಯಾಃ ಕಿಮಿವ ಮಾತ್ಯನ್ತಃ ತೃಷ್ಣಾ ಸೂಚೀ ಸುದುರ್ಭರಾ ॥೨॥
ಚಿನ್ತಯಾಮಾಸ ಹಾ ಕಷ್ಟಂ ಕಿಮಹಂ ಸೂಚಿತಾಂ ಗತಾ ।
ಸೂಕ್ಷ್ಮಾಸ್ಮಿ ಹತಶಕ್ತಿಶ್ಚ ಅಪಿ ಗ್ರಾಸೋ ನ ಮಾತಿ ಚ ॥೩॥
ಕ್ವ ಮೇ ತಾನಿ ವಿಶಾಲಾನಿ ಗತಾನ್ಯಙ್ಗಾನಿ ದುರ್ಧಿಯಃ ।
ಕಾಲಮೇಘವಿಶಾಲಾನಿ ವನೇ ಶೀರ್ಣಾನಿ ಪರ್ಣವತ್ ॥೪॥

ಉತ್ಪತ್ತಿಪ್ರಕರಣದಲ್ಲಿ ಎಪ್ಪತ್ತೊಂದನೆಯ ಸರ್ಗವು.

ಕರ್ಕಟ್ಯಾಃ ಸೂಚಿಭೂತಾಯಾಃ ಪಶ್ಚಾತ್ತಾಪೋತ್ರ ವರ್ಣ್ಯತೇ ।
ಸ್ಮರನ್ತ್ಯಾಃ ಪ್ರಾಕ್ತನಂ ದೇಹಂ ವಿಸ್ತರಾತ್ ಪರಿದೇವನಮ್ ॥

ಸೂಚಿಯ ಜನ್ಮವನ್ನು ಪಡೆದಿರುವ ಕರ್ಕಟಿಯು ಪಶ್ಚಾತ್ತಾಪಪಡುವಿಕೆಯೂ, ತನ್ನ ಪೂರ್ವದೇಹವನ್ನು ಸ್ಮರಿಸಿಕೊಂಡು ವಿಶೇಷವಾಗಿ ಅಳುವಿಕೆಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಹೀಗೆ ಸೂಚಿಯ ಜನ್ಮವನ್ನು ಪಡೆದು ಸಂಚರಿಸುತ್ತಿದ್ದ ಆ ಕರ್ಕಟಿಯೆಂಬ ರಾಕ್ಷಸಿಯು, ಬಹುಕಾಲಕಳೆದನಂತರ, ಸರ್ವವಿಧವಾದ ಮನುಷ್ಯಮಾಂಸವನ್ನು ರುಚಿನೋಡಿದರೂ, ತೃಪ್ತಿಹೊಂದಲಿಲ್ಲ ॥೧॥

ಆ ಸೂಚಿಯ ಜನ್ಮವನ್ನು ಪಡೆದಾಗಲಾದರೋ, ಅವಳು ಮೊದಲನೆಯ ದಿವಸದಲ್ಲಿಯೇ—ಒಂದು ರಕ್ತದ ತೊಟ್ಟಿನಿಂದಲೇ-ತೃಪ್ತಿಪಟ್ಟಳು. ಸೂಚಿಯ ಹೊಟ್ಟೆಯೊಳಗೆ ಏನುತಾನೆ ಹಿಡಿದೀತು? ಆದರೆ, ತೃಷೆ ಯೆಂಬ ಸೂಚಿಯನ್ನು ತುಂಬುವುದು ಅಸಾಧ್ಯವು ॥೨॥

ಆಗ ಅವಳು ಹೀಗೆ ಚಿಂತೆಪಟ್ಟಳು:—ಹಾ! ಕಷ್ಟ! ನಾನು ಏತಕ್ಕಾಗಿ ಈ ಸೂಚಿಯ ಜನ್ಮವನ್ನು ಪಡೆದೆನು? ಈಗ, ಅತಿಸೂಕ್ಷ್ಮಳಾಗಿ ಶಕ್ತಿಹೀನಳಾಗಿಬಿಟ್ಟೆನಲ್ಲ! ಈ ನನ್ನ ಹೊಟ್ಟೆಯೊಳಗೆ ಒಂದು ತುತ್ತೂ ಹಿಡಿಯುವುದಿಲ್ಲವಲ್ಲ ॥೩॥

ಅಯ್ಯೋ! ದುರ್ಬುದ್ಧಿಯಾದ ನನ್ನ ಆ ಅವಯವಗಳೆಲ್ಲ ಎಲ್ಲಿ ಹೋದುವು! ಕಾಲಮೇಘದಂತೆ ವಿಶಾಲವಾಗಿದ್ದ ಆ ಅವಯವಗಳು, ಕಾಡಿನಲ್ಲಿ ಎಲೆಯಂತೆ ಜೀರ್ಣವಾದುವಲ್ಲ! ॥೪॥

ಮಯ್ಯಸ್ಯಾಂ ಮನ್ದಭಾಗ್ಯಾಯಾಂ ಮನಾಗಪಿ ನ ಮಾತಿ ಹಿ |
ಸ್ವಾದುಮಾಂಸರಸಗ್ರಾಸೋ ವಸಾವಾಸಿತಆಸರ್ಯ ||೫||
ಪಙ್ಕಾನ್ತರ್ವಿನಿಮಜ್ಜಾಮಿ ಪತಾಮಿ ಧರಣೀತಲೇ |
ಹತಾಸ್ಮಿ ಜನಪಾದೌಘೈಃ ಶುಕ್ರೇಣ ಮಲಿನಾಸ್ಮಿ ಚ ||೬||
ಹಾ ಹತಾಹಮನಾಥಾಹಂ ಅನಾಶ್ವಾಸಾ ನಿರಾಸ್ಪದಾ |
ದುಃಖಾದ್ದುಃಖೇ ನಿಮಜ್ಜಾಮಿ ಸಙ್ಕಟಾತ್ ಸಙ್ಕಟೇಪಿ ಚ ||೭||
ನ ಸಖೀ ನ ಚ ಮೇ ದಾಸೀ ನ ಮೇ ಮಾತಾ ನ ಮೇ ಪಿತಾ |
ನ ಮೇ ಬನ್ಧುರ್ನ ಮೇ ಭೃತ್ಯಾಃ ನ ಮೇ ಭ್ರಾತಾ ನ ಮೇ ಸುತಃ ||೮||
ನ ಮೇ ದೇಹೋ ನ ಮೇ ಸ್ಥಾನಂ ನ ಮೇ ಕಶ್ಚಿತ್ ಸಮಾಶ್ರಯಃ |
ನೈಕಸ್ಥಾನೇ ಸಮಾವಾಸೋ ಭ್ರಾಮ್ಯಾಮಿ ವನಪರ್ಣವತ್ ||೯||
ಆಪದಾಂ ಧುರಿ ತಿಷ್ಠಾಮಿ ನಿವಿಷ್ಟಾಸ್ಮಿ ಸುದಾರುಣೇ |
ಅಭಾವಮಪಿ ವಾಞ್ಛಾಮಿ ಸೋಪಿ ಸಂಪದ್ಯತೇ ನ ಮೇ ||೧೦||
ಸ್ವಕೋ ದೇಹಃ ಪರಿತ್ಯಕ್ತೋ ಮೂಢಚೇತನಯಾ ಮಯಾ |
ಕಾಚಬುದ್ಧ್ಯಾ ವಿಮೂಢೇನ ಹಸ್ತಾಚ್ಚಿನ್ತಾಮಣಿರ್ಯಥಾ ||೧೧||

ಮಂದಭಾಗ್ಯಳಾದ ನನ್ನ ಹೊಟ್ಟೆಯೊಳಗೆ, ಮುಖದ್ವಾರದಿಂದ ಪ್ರವೇಶಮಾಡುವ ರುಚಿಯಾದ ಮಾಂಸದ ಒಂದು ಸಣ್ಣ ತುತ್ತೂ ಕೂಡ ಹಿಡಿಸಲಾರದಲ್ಲವೆ! ॥೫॥

ಅಯ್ಯೋ! ನಾನು ಕೆಸರಿನೊಳಗೆ ಮುಣುಗಿಹೋಗುವೆನು; ಭೂಮಿಯಮೇಲೆ ಬೀಳುವೆನು; ಜನರೆಲ್ಲರೂ ನನ್ನನ್ನು ತುಳಿಯುವರು; ಕೊನೆಗೆ ಜನರ ರೇತಸ್ಸೂ ಕೂಡ ನನ್ನಮೆಲೆ ಬೀಳುವುದು ॥೬॥

ಹಾ! ನಾನು ಹತಳಾದೆನು! ಅನಾಥಳಾದೆನು! ನನ್ನನ್ನು ಸಮಾಧಾನಪಡಿಸುವವರೂ ಇಲ್ಲದಂತಾಯ್ತು! ಯಾವ ಆಶ್ರಯವೂ ಇಲ್ಲವಾಯ್ತು! ಈಗ ನಾನು, ಅತ್ಯಂತ ದೊಡ್ಡದಾದ ದುಃಖದಲ್ಲಿಯೂ ಪ್ರಾಣಸಂಕಟದಲ್ಲಿಯೂ ಮುಣುಗಿಬಿಟ್ಟಿರುವೆನು ॥೭॥

ನನಗೆ ಸಖಿಯೂ ಇಲ್ಲ; ದಾಸಿಯೂ ಇಲ್ಲ; ತಾಯಿಯೂ ಇಲ್ಲ; ತಂದೆಯೂ ಇಲ್ಲ; ಬಂಧುಗಳೂ ಇಲ್ಲ; ಭೃತ್ಯರೂ ಇಲ್ಲ; ಸಹೋದರರೂ ಇಲ್ಲ; ಮಕ್ಕಳೂ ಇಲ್ಲ ॥೮॥

ದೇಹವೂ ಇಲ್ಲ; ಒಂದು ಸ್ಥಿತಿಯೂ ಇಲ್ಲ; ಒಂದು ಅವಲಂಬನೆಯೂ ಇಲ್ಲ; ಕೊನೆಗೊಂದು ಕಡೆಯಲ್ಲಿ ಸ್ಥಿರವಾಗಿ ನೆಲೆಸುವುದಕ್ಕೂ ಗತಿಯಿಲ್ಲ; ಕಾಡೆಲೆಯಂತೆ ಸುಮ್ಮನೆ ಭ್ರಮಿಸುವೆನು ॥

ಆಪತ್ತುಗಳಿಗೆಲ್ಲ ಮುಂದುಗಡೆ ನಿಂತಿರುವೆನು; ಅತಿಕಷ್ಟವಾದ ಸ್ಥಿತಿಯಲ್ಲಿ ನೆಲೆಸಿರುವೆನು. ಕೊನೆಗೆ ಮರಣವಾದರೂ ಆಗಿಬಿಟ್ಟರೆ ಸಾಕೆಂದಪೇಕ್ಷಿಸುವೆನು. ನನಗೆ ಅದೂ ಉಂಟಾಗುವುದಿಲ್ಲವಲ್ಲ! ॥೧೦॥

ಕೇವಲ ಮೂಢಚಿತ್ತಳಾದ ನಾನು, ಮೂಢನಾದವನು ದಿವ್ಯವಾದ ಮಣಿಯನ್ನು ಗಾಜೆಂದುತಿಳಿದು ಕೈಯಿಂದ ಆಚೆಗೆಸೆಯುನಂತೆ, ನನ್ನ ಸ್ವಕೀಯವಾದ ಈ ಉತ್ತಮದೇಹವನ್ನು ಬಿಟ್ಟುಬಿಟ್ಟೆನು ॥೧೧॥

ಆಪತದ್ಧಿ ಮನೋ ಮೋಹಂ ಪೂರ್ವಮಾಪತ್ ಪ್ರಯಚ್ಛತಿ ।
ಪಶ್ಚಾದನರ್ಥವಿಸ್ತಾರರೂಪೇಣ ಪರಿಜೃಂಭತೇ ॥೧೦॥
ಧೂಮೇಷು ಪರಿತಿಷ್ಠಾಮಿ ಮಾರ್ಗೇ ವಿಲುಲಿತಾಸ್ಮಿ ಚ ।
ತೃಣೇಷು ಪ್ರೇಷಿತಾಸ್ಮ್ಯನ್ತಃ ಹಾ ಮೇ ದುಃಖಪರಮ್ಪರಾ ॥೧೨॥
ಪರಪ್ರೈಷಕರೀ ನಿತ್ಯಂ ಪರಸಙ್ಗಾಚ್ಚಚಾರಿಣೀ ।
ಪರಂ ಕಾರ್ಪಣ್ಯಮಾಯಾತಾ ಜಾತಾ ಪರವಶಾಸ್ಮ್ಯಲಮ್ ॥೧೪॥
ಭ್ರಾನ್ತಿಂ ಕರೋಮಿ ತುಚ್ಛೇ ಚ ಸಾಪಿ ವೇಧನರೂಪಿಣೀ ।
ಅಹೋ ಮಮಾಲ್ಪಭಾಗ್ಯಾಯಾಃ ದೌರ್ಭಾಗ್ಯಮಪಿ ದುರ್ಭಗಮ್ ॥೧೫॥
ಉತ್ಥಿತಃ ಸ್ಫಾರವೇತಾಲಃ ಕುರ್ವತ್ಯಾಃ ಶಾನ್ತಿಮದ್ಯ ಮೇ ।
ಸರ್ವನಾಶೋವದಾತೇನ ಪ್ರವೃತ್ತಾ ಯಾಮಮೋದಿತಃ ॥೧೬॥
ಕಿಂ ಮನ್ದಯಾ ಮಯಾ ತಾದೃಕ್ ಸನ್ತ್ಯಕ್ತಂ ತನ್ಮಹಾವಪುಃ ।
ಯಥಾ ನಾಶೇನ ವಾ ಭಾವ್ಯಂ ತಥೋದೇತ್ಯಶುಭಾ ಮತಿಃ ॥೧೭॥
ಮಾಮಮಾನ್ತರನಿರ್ಮಗ್ನಾಂ ಸೂಕ್ಷ್ಮಾಂ ಕೀಟತನೋರಪಿ ।
ಉದ್ಧರಿಷ್ಯತಿ ಕೋ ನಾಮ ಪಾಂಸುರಾಶಿಭಿರಾವೃತಾಮ್ ॥೧೮॥

ಮೋಹಕ್ಕೆ ಪರವಶವಾಗುವವನ ಮನಸ್ಸು, ಮೊದಲು ದುರ್ಬುದ್ಧಿಯನ್ನು ಕೊಡುವುದು. ಬಳಿಕ, ಅನರ್ಥಪರಂಪರಾರೂಪದಿಂದ ಅಭಿವೃದ್ಧಿಹೊಂದುವುದು ॥೧೦॥

ಎಂತಹ ಹೊಗೆಯಾದರೂ, ಅದರ ಮಧ್ಯದಲ್ಲಿ ನಾನು ನಿಲ್ಲಬೇಕಾಯ್ತು ; ದಾರಿಯಲ್ಲಿ ಬಿದ್ದು ಹೊರಳಾಡಿದೆನು ; ಕೆಲವರು ನನ್ನನ್ನೊಂದೊಂದುಸಲ ಕಸದೊಳಗೆ ಅಡಗಿಸಿಬಿಟ್ಟರು. ಅಯ್ಯೋ ! ನನ್ನ ದುಃಖಪರಂಪರೆಯನ್ನು ಎಷ್ಟುಹೇಳೋಣ!! ॥೧೨॥

ನಾನು ನಿತ್ಯವೂ ಪರರ ಭೃತ್ಯತ್ವವನ್ನವಲಂಬಿಸಬೇಕಾಯ್ತು ; ಮತ್ತೊಬ್ಬರು ಸಂಚಾರಮಾಡಿದಹಾಗೆಲ್ಲ ನಾನು ಸಂಚಾರಮಾಡಬೇಕಾಯ್ತು. ನಾನು ಈಗ ಕೇವಲ ದೈನ್ಯಹೊಂದಿದವಳಾಗಿಬಿಟ್ಟೆನು ॥೧೪॥

ಅತ್ಯಲ್ಪವಾದ ಪದಾರ್ಥದಲ್ಲಿಯೂ ರಕ್ತಾಸ್ವಾದನಾದಿರೂಪವಾದ ಅಭಿಲಾಷೆಯನ್ನಿಡುವೆನು. ಅದೂಕೂಡ, ಕೇವಲ ವೇಧನ (ಚುಚ್ಚುವಿಕೆ) ಮಾತ್ರದಲ್ಲಿ ಪರ್ಯವಸನ್ನವಾಗುವುದು. ಅಯ್ಯೋ! ಅಲ್ಪಭಾಗ್ಯಳಾದ ನನಗೆ, ದೌರ್ಭಾಗ್ಯವೂ ಅತಿತುಚ್ಛವಾಗಿರುವುದು ॥೧೫॥

ಅಂತು, ಬೇತಾಳವನ್ನು ಶಾಂತಿಪಡಿಸುವುದಕ್ಕಾಗಿ ಪ್ರವರ್ತಿಸಿದ ನನಗೆ, ದೊಡ್ಡದೊಂದು ಬೇತಾಳವೇ ಬಂದಂತಾಯ್ತು. ಹೀಗೆ, ಅತ್ಯುಗ್ರವಾದ ತಪಸ್ಸಿನಿಂದ, ನನಗೆ ಸರ್ವನಾಶವುಂಟಾಗಿಬಿಟ್ಟಿತು ॥೧೬॥

ಅಯ್ಯೋ ! ಕೇವಲ ಮೂಢಳಾದ ನಾನು, ಆ ನನ್ನ ದೊಡ್ಡಶರೀರವನ್ನೇತಕ್ಕಾಗಿ ಬಿಟ್ಟು ಬಿಟ್ಟೆನು ? ಮುಖ್ಯವಾಗಿ, ಮನುಷ್ಯರಿಗೆ, ಹೇಗೆಮಾಡಿದರೆ ನಾಶವುಂಟಾಗಬಹುದೋ—ಅಂತಹ ಕೆಟ್ಟಬುದ್ಧಿಯೇ ಉದಯಿಸುವುದು ॥೧೭॥

ಸಣ್ಣ ಹುಳುವಿನ ಶರೀರಕ್ಕಿಂತಲೂ ಸೂಕ್ಷ್ಮವಾಗಿ–ಧೂಳಿರಾಶಿಗಳಿಂದ ವ್ಯಾಪ್ತವಾಗಿ-ಒಳಗೆ ಮುಣುಗಿಹೋಗಿರುವ ನನ್ನನ್ನು, ಆಗ ಯಾರುತಾನೆ ಉದ್ಧರಿಸುವರು ? ॥೧೮॥

ವಿವಿಕ್ತಮನಸಾಂ ಬುದ್ಧೌ ಕ್ವ ಸ್ಫುರನ್ತಿ ಹತಾಶಯಾಃ ।
ಗ್ರಾಮಮಾರ್ಗತೃಣಾನೀವ ಗಿರೇರುಪರಿವಾಸಿನಾಮ್ ॥೧೯॥
ಸ್ಥಿತಾಯಾಅಜ್ಞತಾಮ್ಭೋದೌ ಕ್ವ ಮಮಾಭ್ಯುದಯೋ ಭವೇತ್ ।
ಅನ್ಧಸ್ಯೋದೇತಿ ಪ್ರಾಕಾಶ್ಯಂ ನ ಖದ್ಯೋತಾನುಸೇವಿನಃ ॥೨೦॥
ಅತಃ ಕಿಯನ್ತಂ ನೋ ಜಾನೇ ಕಾಲಮಾವಲಿತಾಪದಮ್ ।
ಮಯಾಪಚ್ಛ್ವಭ್ರಗರ್ತೇಷು ಲುಠಿತವ್ಯಂ ಹತೇಹಯಾ ॥೨೧॥
ಕದಾ ಸ್ಯಾಮಞ್ಜನಮಹಾಶೈಲಪುತ್ರಕರೂಪಿಣೀ ।
ದ್ಯಾವಾಪೃಥಿವ್ಯೋರ್ವೈಧುರ್ಯೇ ಸ್ತಮ್ಭತಾಮನುತಿಷ್ಠತೀ ॥೨೨॥
ಮೇಘಮಾಲಾಸಮಭುಜಾ ಚಿರಂ ವಿದ್ಯುತ್ಪ್ರದೀಕ್ಷಣಾ ।
ನೀಹಾರಜಾಲವಸನಾ ಪ್ರೋಚ್ಚಕೇಶಮಿತಾಮ್ಬರಾ ॥೨೩॥
ಲಮ್ಬೋದರಾಭ್ರಸನ್ದರ್ಶಪ್ರನರ್ತಿತಶಿಖಣ್ಡಿನೀ ।
ಲಮ್ಬಲೋಲಸ್ತನೀ ಶ್ಯಾಮಾ ದೇಹವಾತದ್ರವತ್ಸ್ತನೀ ॥೨೪॥
ಹಾಸಭಸ್ಮಚ್ಛಟಾಚ್ಛನ್ನಸೂರ್ಯಮಣ್ಡಲರೋಧಿನೀ ।
ಕೃತಾನ್ತಗ್ರಸನೋದ್ಯುಕ್ತಕೃತ್ಯೈಕಾಕೃತಿಧಾರಿಣೀ ॥೨೫॥

ಮಹಾತ್ಮರಾದವರು ಯಾರೂ ಇಲ್ಲವೇ ಇಲ್ಲವೋ?—ಎಂದರೆ,— ಯದ್ಯಪಿ ಮಹಾತ್ಮರಾದವರಿರುವರು; ಆದರೆ, ಅವರ ಮನಸ್ಸು ಕೇವಲ ಪರಿಶುದ್ಧವಾಗಿರುವುದು. ಅಂಥವರ ಚಿತ್ತದಲ್ಲಿ, ನಮ್ಮಂತಹ ನೀಚಾತ್ಮರು ಸ್ಫುರಿಸುವುದೆಲ್ಲಿ ಬಂದೀತು? ಪರ್ವತದ ತುದಿಯಲ್ಲಿ ವಾಸಮಾಡತಕ್ಕವರಿಗೆ, ಕೆಳಗಿರುವ ಹಳ್ಳಿಯ ಮಾರ್ಗದಲ್ಲಿರತಕ್ಕ ಕಸಗಳು ಗೋಚರವಾಗುವುದುಂಟೆ ? ॥೧೯॥

ಅಜ್ಞಾನವೆಂಬ ಸಮುದ್ರದೊಳಗಿರುವ ನನಗೆ, ಅಭ್ಯುದಯವೆಲ್ಲಿ ಉಂಟಾದೀತು ? ದೀಪದ ಹುಳುವನ್ನೂ ತಿಳಿದುಕೊಳ್ಳಲಾರದೆ ಅದನ್ನು ಕುರಿತು ವಿಚಾರಮಾಡುತಿರುವ ಕುರುಡನಿಗೆಂದಿಗೂ ಪದಾರ್ಥದರ್ಶನವಾಗುವುದೇ ಇಲ್ಲವಷ್ಟೆ ! ॥೨೦॥

ಹೀಗಿರುವುದರಿಂದ, ನಾನು ಈ ವಿಪತ್ತೆಂಬ ಹಾಳುಗುಂಡಿಗಳಲ್ಲಿ ದುಃಖಗಳನ್ನನುಭವಿಸುತ ಎಷ್ಟುಕಾಲ ಹೊರಳುತಿರಬೇಕೋ—ತಿಳಿಯದು ॥೨೧॥

ನಾನು ಮತ್ತೆ ಪೂರ್ವದಂತೆ ದೊಡ್ಡ ಕಾಡಿಗೆಯ ಬೆಟ್ಟದಮರಿಯಂತೆ ರೂಪವುಳ್ಳವಳಾಗಿ ಪ್ರಾಣಿಗಳನ್ನು ಸಂಹರಿಸುತ ಭೂಮ್ಯಾಕಾಶಗಳಿಗೆ ಸ್ತಂಭಭೂತಳಾಗಿ ಯಾವಾಗ ನಿಲ್ಲುವೆನು? ॥೨೨॥

ಆಗಿನಂತೆ, ಮೇಘಪಂಕ್ತಿಗಳಿಗೆ ಸಮಾನಗಳಾದ ಭುಜಗಳೂ, ಮಿಂಚಿನಸ್ಥಾನವನ್ನು ಹೊಂದಿರುವ ಕಣ್ಣುಗಳೂ, ಮಂಜಿನಸಮೂಹಗಳೆಂಬ ವಸ್ತ್ರಗಳೂ, ಅಂತರಿಕ್ಷವನ್ನು ಮುಟ್ಟುತಿರುವ ಕೇಶಗಳೂ, ನನಗೆ ಯಾವಾಗ ಉಂಟಾಗುವುವು ॥೨೩॥

ಪೂರ್ವದಂತೆ, ಜೋಲಾಡುತಿರುವ ನನ್ನ ಹೊಟ್ಟೆಯನ್ನು ನೋಡಿ ಮೇಘವೆಂಬ ಭ್ರಾಂತಿಯಿಂದ ನವಿಲುಗಳು ಮತ್ತೆ ಯಾವಾಗ ಕುಣಿದಾವು ! ಸ್ವಭಾವವಾಗಿ ಕೆಳಗೆ ಜೋಲಾಡುತಿರುವ ನನ್ನ ಸ್ತನಗಳು, ನಿಶ್ವಾಸಮಾರುತಗಳಿಂದ ಪುನಃ ಯಾವಾಗ ವಿಶೇಷವಾಗಿಲಂಬಮಾನವಾಗುವುವು!

ನನ್ನ ಅಟ್ಟಹಾಸವೆಂಬ ಭಸ್ಮಸಮೂಹದಿಂದ ಆಚ್ಛಾದಿತವಾದ ಸೂರ್ಯಮಂಡಲವನ್ನು, ಪುನಃ ಯಾವಾಗ ನಾನು ನಿರೋಧಪಡಿಸುವೆನು ! ಯಮನನ್ನು ನುಂಗುವುದರಲ್ಲುದ್ಯುಕ್ತವಾದ ಕೃತ್ಯೆಯೋ (ಮಾಟದಗೊಂಬೆ) ಎಂಬಂತೆ ಕ್ರೂರವಾದ ಶರೀರವು, ಮತ್ತೆ ಯಾವಾಗ ನನಗೆ ಬರುವುದು?

ಕೃಶಾನೂಜ್ಜ್ವಲದೃಶಾ ಸೂರ್ಯಸ್ರಗ್ದಾಮಹಾರಿಣೀ ।
ಪರ್ವತಾತ್ ಪರ್ವತೇ ಶೃಙ್ಗೇ ನ್ಯಸ್ಯ ಪಾದೌ ವಿಹಾರಿಣೀ ॥೨೬॥
ಕದಾ ಮೇ ಸ್ಯಾದ್ಗುರುಶ್ವಭ್ರಭಾಸುರಂ ತನ್ಮಹೋದರಮ್ ।
ಕದಾ ಮೇ ಸ್ಯಾಚ್ಛರನ್ಮೇಘಮೇದುರಾ ನಖರಾವಳೀ ॥೨೭॥
ಕದಾ ಮೇ ಸ್ಯಾನ್ಮಹಾರಕ್ಷೋವಿದ್ರಾವಣಕರಂ ಸ್ಮಿತಮ್ ।
ಸ್ವಸ್ಫಿಗ್ವಾದ್ಯೈರರಣ್ಯಾನ್ಯಾಂ ಕದಾ ನೃತ್ಯೇಯಮುನ್ಮದಾ ॥೨೮॥
ವಸಾಸವಸುಹಾಕುಮ್ಭೈಃ ಮೃತಮಾಂಸಾಸ್ಥಿಸಞ್ಚಯೈಃ ।
ಕದಾ ಕರಿಷ್ಯೇಽವಿರತಂ ಮೇದುರೋದರಪೂರಣಮ್ ॥೨೯॥
ಕದಾ ಪೀತಮಹಾಲೋಕರುಧಿರಾ ಕ್ಷೀಬತಾಂ ಗತಾ ।
ಭವೇಯಂ ಮುದಿತಾ ದೃಪ್ತಾ ಮುದ್ರಿತಾ ನಿದ್ರಯಾ ತತಃ ॥೩೦॥
ಮಯೈವ ಕುತಪೋವಹ್ನೌ ತದಗ್ರ್ಯಂ ಭಾಸುರಂ ವಪುಃ ।
ಭಸ್ಮತ್ವಂ ಕನಕೇನೇವ ಸೂಚಿತ್ವಮುರರೀಕೃತಮ್ ॥೩೧॥
ಕ್ವ ಕಿಲಾಞ್ಜನಶೈಲಾಭಂ ವಪುರ್ಭರಿತದಿಕ್ತಟಮ್ ।
ಕ್ವ ಪ್ರಾಚಿಕಾಖುರಸಮಂ ಸೂಚಿತ್ವಂ ತೃಣಪೇಲವಮ್ ॥೩೨॥

ಅಗ್ನಿಯಂತೆ ಉರಿಯುತಲೂ ಒರಳುಕಲ್ಲಿನಂತೆ ಆಳವಾಗಿಯೂ ಇರುವ ಕಣ್ಣುಗಳು ಪುನಃ ನನಗೆ ಯಾವಾಗ ಉಂಟಾಗುವುವು! ಸೂರ್ಯಮಂಡಲದಲ್ಲಿರುವ ಪುಷ್ಪಮಾಲಿಕೆಯನ್ನು ನಾನು ಯಾವಾಗ ಅಪಹರಿಸುವೆನು ! ಒಂದು ಪರ್ವತದ ಶಿಖರದಿಂದ ಮತ್ತೊಂದು ಶಿಖರದಮೇಲೆ ಕಾಲಿಟ್ಟುಕೊಂಡು ನಡೆಯುತ ನಾನು ಯಾವಾಗ ಅಂತರಿಕ್ಷಮಾರ್ಗದಲ್ಲಿ ವಿಹರಿಸುವೆನು ? ॥೨೬॥

ದೊಡ್ಡ ಹಳ್ಳದಂತೆ ಪ್ರಕಾಶಿಸುವ ಆ ನನ್ನ ಹೊಟ್ಟೆಯು ಯಾವಾಗ ಬರುವುದು ! ಶರತ್ಕಾಲದ ಮೇಘದಂತೆ ಪರಿಪೂರ್ಣವಾದ ನಖಪಂಕ್ತಿಯು ಯಾವಾಗ ಉಂಟಾಗುವುದು ? ॥೨೭॥

ದೊಡ್ಡದೊಡ್ಡ ರಾಕ್ಷಸರನ್ನೂ ಕೂಡ ಓಡಿಸುವಂತಹ ಅಟ್ಟಹಾಸವು ಮತ್ತೆ ಯಾವಾಗ ಉದಯಿಸುವುದು ! ನನ್ನ ಕಟಿಯಲ್ಲಿರುವ ಮಾಂಸಗ್ರಂಥಿಯ ಧ್ವನಿಯೆಂಬ ವಾದ್ಯದೊಡನೆ ಯಾವಾಗ ಸಂತೋಷದಿಂದ ನರ್ತನಮಾಡುವೆನು! ॥೨೮॥

ಪ್ರಾಣಿಗಳ ಹೃದಯದಲ್ಲಿರುವ ಮೇದಸ್ಸೆಂಬ ಮದ್ಯದಿಂದ ಪೂರ್ಣವಾಗಿರುವ ಗಡಿಗೆಗಳಿಂದಲೂ, ಮೃತರಾದವರ ಅಸ್ಥಿಮಾಂಸಗಳ ಸಮೂಹದಿಂದಲೂ, ನನ್ನ ಈ ದೊಡ್ಡ ಹೊಟ್ಟೆಯನ್ನು ಯಾವಾಗ ತುಂಬಿಕೊಳ್ಳುವೆನು ! ॥೨೯॥

ಸಮಸ್ತವಾದ ಲೋಕದ ಜನರಲ್ಲಿರುವ ರಕ್ತವನ್ನೆಲ್ಲ ಕುಡಿದು—ಮತ್ತಳಾಗಿ—ಸಂತೋಷಯುಕ್ತಳಾಗಿ—ಗರ್ವಿತಳಾಗಿ—ಹಾಗೆಯೇ ನಿದ್ರಾಯುಕ್ತಳಾಗಿ ಯಾವಾಗ ಆಗುವೆನು ! ॥೩೦॥

ದಿವ್ಯವಾದ ಚಿನ್ನವು ಬೂದಿಯ ಅವಸ್ಥೆಯನ್ನು ಅಂಗೀಕರಿಸುವಂತೆ, ನಾನಾಗಿಯೇ ಹಾಳು ತಪಸ್ಸೆಂಬ ಅಗ್ನಿಯಲ್ಲಿ ಆ ಸರ್ವೋತ್ಕೃಷ್ಟವಾದ ಪ್ರಕಾಶಮಾನವಾದ ದೇಹವನ್ನು ಸುಟ್ಟುಬಿಟ್ಟು ಈ ಸೂಚೀದಶೆಯನ್ನಂಗೀಕರಿಸಿದೆನು. ॥೩೧॥

ಸಮಸ್ತ ದಿಕ್ಕುಗಳನ್ನೂ ಮುಚ್ಚಿಕೊಂಡು ಅಂಜನಪರ್ವತದಂತೆ ಪ್ರಕಾಶಮಾನವಾಗಿದ್ದ ಆ ದಿವ್ಯದೇಹವೆಲ್ಲಿ?—ಜಾಡಿನ ಹುಳುವಿನ ಕಾಲುತುದಿಯಷ್ಟು ಸೂಕ್ಷ್ಮವಾಗಿ ತೃಣದಂತೆ ಹಗುರವಾಗಿರುವ ಈ ಸೂಚಿಯ ಅವಸ್ಥೆಯೆಲ್ಲಿ? ॥೩೨॥

ತ್ಯಜತ್ಯಾಶು ಮೃದಿತ್ಯಜ್ಞಃ ಪ್ರಾಪ್ಯಾಪಿ ಕನಕಾಙ್ಗದಮ್ ।
ಮಯಾ ಸೂಚಿತ್ವಲಾಭೇನ ಸಂತ್ಯಕ್ತಂ ಭಾಸುರಂ ವಪುಃ ‖೨೩‖
ಹಾ ಮಹೋದರ ವಿನ್ಧ್ಯಾದ್ರಿಸನೀಹಾರಗುಹೋಪಮ ।
ಅದ್ಯ ನಾನ್ತಂ ಕರೋಷಿ ತ್ವಂ ಕಥಂ ಸಿಂಹೇನ ಹಸ್ತಿನಾಮ್ ‖೨೪‖
ಹಾ ಭುಜೌ ಭರನಿರ್ಭಗ್ನಶಿಖರೌ ಶಶಭೃನ್ನಖೈಃ ।
ಪುರೋಡಾಶಧಿಯಾ ಚನ್ದ್ರಂ ಕಥಮದ್ಯ ನ ಬಾಧತಃ ‖೨೫‖
ಹಾ ವಕ್ಷಃ ಕಾಚವೈಧುರ್ಯಗಿರೀನ್ದ್ರತಟಸುನ್ದರ ।
ನಾದ್ಯ ಸಿಂಹಾದಿಯೂಕಂ ತತ್ ಧೃತಂ ರೋಮವನಂ ತಥಾ ‖೨೬‖
ಹಾ ನೇತ್ರೇ ಕೃಷ್ಣರಜನೀರಜಶ್ಶುಷ್ಕೇನ್ಧನೈಜನೇ ।
ಕಸ್ಮಾನ್ನ ಮೇ ಭೂಷಯತೋ ದೃಗ್ಜ್ವಾಲಾಮಾಲಯಾ ದಿಶಃ ‖೨೭‖
ಹಾ ಸ್ಕನ್ಧ ಬನ್ಧೋ ನಷ್ಟೋಽಸಿ ನಿಷಿದ್ಧೋಽಸಿ ಮಹೀತಲೇ ।
ಕಾಲೇನ ವಿನಿಪಿಷ್ಟೋಽಸಿ ನಿಘೃಷ್ಟೋಽಸಿ ಶಿಲಾತಲೇ ‖೨೮‖

ಅಜ್ಞನಾದವನು, ದಿವ್ಯವಾದ ಸುವರ್ಣಮಯವಾದ ಅಂಗದ (ಬಾಜೂಬಂದು)ವನ್ನು ಹೊಂದಿದವನಾದರೂ, ಅದನ್ನು ಮಣ್ಣೆಂದು ಆಚೆಗೆಸೆದುಬಿಡುವನು. ಹೀಗೆಯೇ, ನಾನು, ಈ ಸೂಚೀಜನ್ಮವನ್ನು ಹೊಂದಿಬಿಟ್ಟು, ಆ ಉತ್ತಮದೇಹವನ್ನು ಬಿಟ್ಟುಬಿಟ್ಟೆನು ‖೨೩‖

ಅಯ್ಯೋ! ಹಿಮಯುಕ್ತವಾದ ವಿಂಧ್ಯಪರ್ವತದ ಗುಹೆಗೆ ಸಮಾನವಾಗಿದ್ದ ನನ್ನ ಹೊಟ್ಟೆಯೇ! ನೀನು ಈಗ ಸಿಂಹದಂತೆ ಆವಿರ್ಭವಿಸಿ ಮತ್ತಗಜಗಳನ್ನು ಏತಕ್ಕಾಗಿ ಮಾರಣಮಾಡದಿರುವೆ?‖

ವೇಗಾತಿಶಯದಿಂದ ಪರ್ವತಶಿಖರಗಳನ್ನು ಮುರಿದುಹಾಕುತಿದ್ದ ಎಲೈ ನನ್ನ ಭುಜಗಳೇ! ಪುರೋಡಾಶವೆಂದು ಭ್ರಾಂತಿಪಟ್ಟು(೧)ಚಂದ್ರನಂತಿರುವ ನಿಮ್ಮ ಉಗುರುಗಳಿಂದ ಚಂದ್ರಮಂಡಲವನ್ನು ಏತಕ್ಕಾಗಿ ಬಾಧೆಪಡಿಸದಿರುವಿರಿ? ‖೨೫‖

ಗಾಜಿನಸರ ಮುಂತಾದುವುಗಳೊಂದೂ ಇಲ್ಲದಿದ್ದರೂ ಸ್ವಭಾವವಾಗಿಯೇ ದೊಡ್ಡ ಪರ್ವತಪ್ರದೇಶದಂತೆ ಸುಂದರವಾಗಿದ್ದ ನನ್ನ ವಕ್ಷಸ್ಥಲವೇ! ಪೂರ್ವದಲ್ಲಿ ಸಿಂಹಗಳನ್ನಾದರೂ ತಿಂದುಹಾಕುವಷ್ಟು ಸಾಮರ್ಥ್ಯವುಳ್ಳ ಹೇನುಗಳು, ನಿನ್ನಲ್ಲಿದ್ದ ರೋಮಸಮೂಹಮಧ್ಯದೊಳಗೆ ಸಿಕ್ಕಿಕೊಂಡಿದ್ದುವಲ್ಲ! ಈಗ ಅಂತಹ ರೋಮಸಮೂಹವನ್ನೇತಕ್ಕಾಗಿ ಧರಿಸದಿರುವೆ? ‖೨೬‖

ಕೃಷ್ಣಪಕ್ಷರಾತ್ರಿಯ ಅಂಧಕಾರದಂತೆ ಕಪ್ಪಾಗಿರುವ ಒಣಗಿದ ಸೌದೆಯನ್ನೂ ಸುಟ್ಟುಬಿಡುತಿದ್ದ ನನ್ನ ನೇತ್ರಗಳೇ! ನಿಮ್ಮ ನೋಟಗಳೆಂಬ ಜ್ವಾಲಾಸಮೂಹದಿಂದ, ಈಗ ದಿಕ್ಕುಗಳನ್ನೆಲ್ಲ ಏತಕ್ಕಾಗಿ ಅಲಂಕಾರಪಡಿಸದಿರುವಿರಿ? ‖೨೭‖

ಅಯ್ಯೋ! ನನಗೆ ಕೇವಲ ಬಂಧುವಾಗಿದ್ದ ಸ್ಕಂಧವೇ! ನೀನು ಹಾಳಾಗಿಹೋದೆಯಲ್ಲ! ಭೂಮಿಯಲ್ಲೆಲ್ಲ ನಿನ್ನ ಪ್ರಸರಣೆಯೇ ಇಲ್ಲದಂತಾಯ್ತಲ್ಲ! ಕಾಲದಿಂದ ನೀನು ಚೂರ್ಣಮಾಡಲ್ಪಟ್ಟೆಯಲ್ಲ! ಕಲ್ಲಿನಮೇಲೆ ನೀನು ಅರೆಯಲ್ಪಟ್ಟೆಯಲ್ಲ! ‖೨೮‖

---

(೧) ಪುರೋಡಾಶವೆಂದರೆ, ಯಜ್ಞದಲ್ಲಿ ಹೋಮಕ್ಕಾಗಿ ಸಂಸ್ಕಾರಮಾಡುವ ಅಕ್ಕಿಯಹಿಟ್ಟು. ಇದನ್ನು ಒಂದುಪಾತ್ರೆಯಲ್ಲಿಟ್ಟಿರುವರು. ರಾಕ್ಷಸರು ಯಜ್ಞವಿಘಾತಮಾಡುವುದು ಪ್ರಸಿದ್ಧವಷ್ಟೆ? ಈ ಕರ್ಕಟಿಯು, ದುಂಡುಗಿರುವ ಚಂದ್ರಮಂಡಲವನ್ನು ನೋಡಿ, ಇದು ಪುರೋಡಾಶಪಾತ್ರೆಯೆಂದು ಭ್ರಮಿಸಿ, ಅದನ್ನು ಬಾಧೆಪಡಿಸುತಿದ್ದಳೆಂದು ಭಾವವು.

ಹಾ ಮುಖೇನ್ದೋ ತಪಸಿ ಕಿಂ ನಾದ್ಯ ತ್ವಂ ಮಮ ರಶ್ಮಿಭಿಃ |
ಕಲ್ಪಾನ್ತದಾವಸಂಶಾನ್ತಚನ್ದ್ರಬಿಮ್ಬ ಮನೋಹರ ||೩೯||
ಹಾಹಾ ಹಸ್ತೌ ಮಹಾಕಾರೌ ತಾವದ್ಯ ಕ್ವ ಗತೌ ಮಮ |
ಸಮ್ಪನ್ನಾಸ್ಮಿ ಮಹಾಸೂಚಿಃ ಮಕ್ಷಿಕಾಖುರದೋಳಿತಾ ||೪೦||
ಹಾ ಭಗೋಗ್ರಕರಞ್ಜಾಢ್ಯಸತ್ಕನ್ದಶ್ವಭ್ರಶೋಭನ |
ವಿನ್ಧ್ಯದ್ವಿರೇಣ್ವಿಪುಲನಿತಮ್ಬಾ ಮುಲಬಿಮ್ಬಕ ||೪೧||
ಕ್ವಾಕಾರೋಮ್ಬರಪೂರಕಃ ಕ್ವ ಚ ನವಂ ತುಚ್ಛಾತ್ಮ ಸೂಚೀವಪುಃ
ರೋದೋರನ್ಧ್ರಸಮಂ ಕ್ವ ವಾಸ್ಯಕುಹರಂ ಕ್ವೇದಂ ಚ ಸೂಚೀಮುಖಮ್ |
ಕ್ವ ಗ್ರಾಸೋ ಬಹುಮಾಂಸಭಾರಬಹುಳಃ ಕ್ವಾಬ್ಬಿನ್ದುನಾ ಭೋಜನಂ
ಸೂಕ್ಷ್ಮಾಸ್ಮ್ಯೇತದಹೋ ಮಯ್ಯೈವ ರಚಿತಂ ಸ್ವಾತ್ಮಕ್ಷಯೇ ನಾಟಕಮ್ ||

ಇತಿ ಉತ್ಪತ್ತಿಪ್ರಕರಣೇ ಸೂಚಿಕಾಪರಿದೇವನಂ ನಾಮ
ಏಕಸಪ್ತತಿತಮಃ ಸರ್ಗಃ.

ಪ್ರಳಯಕಾಲದಲ್ಲಿ ಕಾಡುಗಿಚ್ಚಿನಿಂದ ಸುಟ್ಟುಹೋದ ಚಂದ್ರಮಂಡಲದಂತೆ ಕಪ್ಪಗೆ ಪ್ರಕಾಶಿಸುತಿದ್ದ ನನ್ನ ಮುಖವೇ! ನೀನು ಈಗ ನಿನ್ನ ಕಿರಣಗಳಿಂದ ಏತಕ್ಕಾಗಿ ಸಂತಾಪಪಡಿಸದಿರುವೆ?||

ಅಯ್ಯೋ! ಅಯ್ಯೋ!! ವಿಶಾಲವಾಗಿದ್ದ ಆ ನನ್ನ ಕೈಗಳು ಈಗ ಎಲ್ಲಿ ಹೋಗಿಬಿಟ್ಟುವು? ಈಗ ನಾನು ಈ ಸೂಚಿಯ ಅವಸ್ಥೆಯನ್ನು ಹೊಂದಿಬಿಟ್ಟೆನಲ್ಲ! ಒಂದು ನೊಣದ ಕಾಲುತುದಿಯೂ ನನ್ನನ್ನು ಅಳ್ಳಾಡಿಸಿಬಿಡುವುದಲ್ಲ!! ||೪೦||

ಕ್ರೂರವಾದ ಮುಳ್ಳುಗಳಿಂದ ವ್ಯಾಪ್ತವಾಗಿರುವ ಮರದ ಬುಡದೊಡನೆ ಕೂಡಿಕೊಂಡಿರುವ ದೊಡ್ಡ ಗುಂಡಿಗೆ ಸಮಾನವಾಗಿ ಪ್ರಕಾಶಿಸುತ್ತಿದ್ದ ನನ್ನ ಗುಹ್ಯೇಂದ್ರಿಯವೇ! ನೀನು ವಿಂಧ್ಯಪರ್ವತಕ್ಕಿಂತಲೂ ವಿಶಾಲವಾಗಿದ್ದ ನಿತಂಬಪ್ರದೇಶದಿಂದ ಶೋಭಿಸುತ್ತಿದ್ದೆಯಲ್ಲ! ಈಗ ಎಲ್ಲಿ ಹೋಗಿಬಿಟ್ಟೆ? ||೪೧||

ಅಯ್ಯೋ! ಅಂತರಿಕ್ಷವನ್ನೆಲ್ಲ ಮುಚ್ಚಿಬಿಡುತಿದ್ದ ಆ ಆಕಾರವೆಲ್ಲಿ?— ಈ ಹೊಸದಾಗಿ ಬಂದಿರುವ ಅತ್ಯಲ್ಪವಾದ ಸೂಚೀದೇಹವೆಲ್ಲಿ? ಭೂಮ್ಯಾಕಾಶಗಳ ರಂಧ್ರಕ್ಕೆ ಸಮಾನವಾಗಿದ್ದ ಆ ಬಾಯಿಯೆಲ್ಲಿ?—ಈ ಸೂಚಿಯ ಮುಖವೆಲ್ಲಿ? ಅತ್ಯಧಿಕವಾದ ಮಾಂಸಸಮೂಹದಿಂದ ಭರಿತವಾಗಿದ್ದ ಆ ದಿವ್ಯವಾದ ಆಹಾರವೆಲ್ಲಿ?— ಈ ಒಂದು ನೀರುಹನಿಯಿಂದ ತೃಪ್ತಿಪಡುವ ಭೋಜನವೆಲ್ಲಿ? ನಾನು ಎಷ್ಟು ಸೂಕ್ಷ್ಮಳಾಗಿಬಿಟ್ಟೆ! ಅಯ್ಯೋ! ನನ್ನ ಕ್ಷಯಾರ್ಥವಾಗಿ ನಾನೇ ವಿಚಿತ್ರವಾದ ನಾಟಕವನ್ನು ಮಾಡಿಕೊಂಡುಬಿಟ್ಟೆನಲ್ಲ!!! ||೪೨||

ಇದು ಉತ್ಪತ್ತಿಪ್ರಕರಣದಲ್ಲಿ ಸೂಚ್ಯುಪಾಖ್ಯಾನದೊಳಗೆ ಸೂಚಿಕಾಪರಿದೇವನವೆಂಬ
ಎಪ್ಪತ್ತೊಂದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವಿಸಪ್ತತಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಸೂಚೀ ಸಾಽಸಮ್ಭವದ್ವಾಣೀ ಚಿನ್ತಯಿತ್ವೇತ್ಯಕಮ್ಪನಮ್ |
ಪುನಸ್ತದ್ದೇಹಲಾಭಾಯ ಭವಾಮ್ಯಾಶು ತಪಸ್ವಿನೀ ||೧||
ಇತಿ ಸಂಚಿನ್ತ್ಯ ಚಿತ್ತಸ್ಥಂ ಸಂಹೃತ್ಯ ಜನಮಾರಣಮ್ |
ತದೇವ ಹಿಮವಚ್ಛೃಙ್ಗಂ ಜಗಾಮ ತಪಸೇ ಸ್ಥಿತಮ್ ||೨||
ಅಪಶ್ಯದೇವ ಸೂಚಿತ್ವಂ ಸಾ ತನ್ಮಾನಸಮಾತ್ಮನಿ |
ಪ್ರಾಣವಾತಾತ್ಮಿಕಾ ಪ್ರಾಣೈಃ ಪ್ರವಿಶ್ಯ ಪತಮಾನಸಮ್ ||೩||
ಅಥಾತ್ಮನ್ಯೇವ ಸೂಚಿತ್ವಂ ಪಶ್ಯತ್ಯೇವ ಮನೋಮಯಮ್ |
ಪ್ರಾಣವಾತಶರೀರಾಸೌ ಜಗಾಮ ಹಿಮವಚ್ಛಿರಃ ||೪||
ದೃಢದಾವಾನಲೇ ತತ್ರ ಸರ್ವಭೂತವಿವರ್ಜಿತೇ |

ಉತ್ಪತ್ತಿಪ್ರಕರಣದಲ್ಲಿ ಎಪ್ಪತ್ತೆರಡನೆಯ ಸರ್ಗವು.

ವರ್ಣ್ಯತೇತ್ರ ಪುನಃ ಸೂಚ್ಯಾಃ ತಪಉಗ್ರಂ ಹಿಮಾಚಲೇ |
ತದ್ವಿಸ್ಮಿತಸ್ಯ ಶಕ್ರಸ್ಯ ನಾರದೋಕ್ತ್ಯಾ ವಿನಿಶ್ಚಯಃ ||

ಸೂಚಿಯು ಮತ್ತೆ ಹಿಮವತ್ಪರ್ವತದಲ್ಲಿ ಉಗ್ರವಾದ ತಪಸ್ಸನ್ನು ಮಾಡುವಿಕೆಯೂ, ಇದರಿಂದ ಆಶ್ಚರ್ಯಪಟ್ಟ ದೇವೇಂದ್ರನು ನಾರದರ ವಚನದಿಂದ ನಿಶ್ಚಯಿಸುವಿಕೆಯೂ ಕೂಡ, ಈ ಸರ್ಗದಲ್ಲಿ ಹೇಳಲ್ಪಡುವುವು.

ಶ್ರೀವಸಿಷ್ಠರು ಪುನಃ ಹೇಳುವರು :—

ಅಯ್ಯಾ! ರಾಮ! ಈರೀತಿಯಾಗಿ ಮಾತನಾಡದಿರುವ ಆ ಸೂಚಿಯು, ಮನಸ್ಸಿನಲ್ಲಿ ಚೆನ್ನಾಗಿ ಪರ್ಯಾಲೋಚಿಸಿ, ಮತ್ತೆ ಆ ದೇಹವು ಲಭಿಸುವುದಕ್ಕೋಸ್ಕರ ಬೇಗನೆ ತಪಸ್ಸುಮಾಡಬೇಕೆಂದು ನಿಶ್ಚಯಮಾಡಿಕೊಂಡು, ತನ್ನ ಮನಸ್ಸಿನಲ್ಲಿ ಜನರನ್ನು ಕೊಲ್ಲಬೇಕೆಂದಿದ್ದ ಅಭಿಪ್ರಾಯವನ್ನು ಶಾಂತಮಾಡಿಬಿಟ್ಟು, ತಪಸ್ಸಿಗೋಸ್ಕರವಾಗಿ, ತಾನು ಪೂರ್ವದಲ್ಲಿ ಆಶ್ರಯಿಸಿದ್ದ ಹಿಮವತ್ಪರ್ವತದ ಶಿಖರಕ್ಕೇ ಹೊರಟುಹೋದಳು ||೧—೨||

ಅವಳು ಹೋದ ಬಗೆ ಯಾವುದೆಂದರೆ:—ಪ್ರಾಣವಾಯುರೂಪಳಾಗಿದ್ದ ಆ ಜೀವಸೂಚಿಯು, ಪ್ರಾಣಗಳಿಂದ ಕಲ್ಪಿತವಾದ ಮನಸ್ಸನ್ನು ಪ್ರವೇಶಿಸಿ, ಆಗ ಮನೋಮಯವಾದ ಸೂಚಿತ್ವವನ್ನು ನೋಡಿದವಳಾದಳು; ಬಳಿಕ, ಇವಳ ಅಂತರಾತ್ಮನು ಮನೋಮಯ ಸೂಚಿತ್ವವನ್ನು ನೋಡುತಿರುವಾಗಲೇ, ಪ್ರಾಣವಾಯುರೂಪಳಾಗಿದ್ದ ಅವಳು ಹಿಮವತ್ಪರ್ವತದ ಶಿಖರಕ್ಕೆ ಹೊರಟುಹೋದಳು ||೩—೪||

ದೃಢತರವಾಗಿ ಕಾಡುಗಿಚ್ಚು ರಿಯುತಿರುವುದಾಗಿಯೂ-ಸಮಸ್ತ ಪ್ರಾಣಿವರ್ಜಿತವಾಗಿಯೂ-ಇಂದ್ರನೀಲಮಣಿಗಳ ಕಾಂತಿಗಳಿಂದ ವ್ಯಾಪ್ತವಾಗಿಯೂ-ಧೂಳಿಧೂಸರವಾಗಿಯೂ-ತೃಣರಹಿ

ಮಹಾಮಹಾಶಿಲಾಭಾಭಾರೂಕ್ಷೇ ಪಾಂಸುವಿಧೂಸರೇ ||೫||
ತಸ್ಥಾವಭ್ಯುದಿತೇವಾಸೌ ನಿಸ್ತೃಣೇ ವಿಪುಲೇ ಸ್ಥಲೇ |
ಮರಾವಕಸ್ಮಾತ್ ಸಞ್ಜಾತಾ ಶುಷ್ಕಾ ತೃಣಶಿಖಾ ಯಥಾ ||೬||
ಸುಸೂಕ್ಷ್ಮಸ್ಯೈಕಪಾದಸ್ಯ ಸಾರ್ಧೇನ್ಯೈವಾಶ್ರಿತೋರ್ವರಾ |
ಸ್ವಸಂವಿದೇಕಪಾದಾತ್ಮ ತಪಃ ಕರ್ತುಂ ಪ್ರಚಕ್ರಮೇ ||೭||
ಸೂಕ್ಷ್ಮಪಾದತಲೇನೈಷಾ ವಸುಧಾರೇಣುಸಙ್ಕಟೇ |
ನಿವಾರ್ಯ ತ್ರಿಪದೀಂ ಕೃತ್ಸ್ನಾ ಯತ್ನೇನೋರ್ಧ್ವಮುಖೀ ಸ್ಥಿತಾ ||೮||
ಕೃಷ್ಣತ್ವಹಿಂಸ್ರತಾತೈಕ್ಷ್ಣ್ಯವ್ಯಾಪ್ತ್ಯಸ್ಯಪವನಾಶನೈಃ |
ಯತ್ನಾತ್ ಪದಂ ನಿಬಧ್ನನ್ತೀ ರೇಣ್ವಣೂಪಲಸಙ್ಕಟೇ ||೯||
ಅರಣ್ಯೇ ಕ್ಷುಭಿತಾಂ ಸಮ್ಪದೂರ್ಧ್ವರಾಲೋಕಾರ್ಥಮುತ್ಥಿತಾಮ್ |
ಪುಚ್ಛಾಕೋಟಿಸ್ಥಿತಾಂ ವಾತಾಲೋಲಾಮನುಚಕಾರ ಸಾ ||೧೦||
ಮುಖರನ್ಧ್ರವಿನಿಷ್ಕ್ರಾನ್ತಾ ತಸ್ಯಾ ಭಾಸ್ಕರದೀಧಿತಿಃ |
ಸಖೀ ಬಭೂವ ಸೂಚ್ಯಾಭಾ ಪಶ್ಚಾದ್ಭಾಗೈಕರಕ್ಷಿಣೀ ||೧೧||

ತಪಾಗಿಯೂ-ವಿಶಾಲವಾಗಿಯೂ ಇರುವ ಆ ಪರ್ವತಶಿಖರದಲ್ಲಿ, ಈ ಸೂಚಿಯು, ಮರುಭೂಮಿಯಲ್ಲಿ ಆಕಸ್ಮಿಕವಾಗಿ ಹುಟ್ಟಿ ಒಣಗಿಹೋಗಿದ್ದ ಹುಲ್ಲಿನಂತೆ, ಪುನಃ ಹುಟ್ಟಿದವಳಹಾಗೆ ಕಾಣಿಸಿಕೊಂಡಳು ॥೫—೬॥

ಅಲ್ಲಿ ಅವಳು ಅತ್ಯಂತ ಸೂಕ್ಷ್ಮವಾದ ತನ್ನ ಪಾದದ ಅರ್ಧಭಾಗವನ್ನು ಮಾತ್ರ ಭೂಮಿಯಲ್ಲಿಟ್ಟವಳಾಗಿ, ತನ್ನ ಮನಸ್ಸಿನಲ್ಲಿಯೇ—ತಾನು ಒಂಟಿಗಾಲಿನಿಂದ ನಿಂತಿರುವೆನೆಂದು ತಿಳಿದುಕೊಂಡು, ತಪಸ್ಸುಮಾಡುವುದಕ್ಕುಪಕ್ರಮಿಸಿದಳು ॥೭॥

ತನ್ನ ಸೂಕ್ಷ್ಮವಾದ ಅಂಗಾಲಿನಿಂದ ಭೂಮಿಯ ಧೂಳಿಯನ್ನು ಅವುಕುತಿರುವವಳಾಗಿ, ಮುಕ್ಕಾಲುಪಾಲು ಹೊರಗೆ ಪ್ರಸರಿಸುವ ತನ್ನ ಕಣ್ಣನ್ನು ಇತರ ವಿಷಯುಗಳಮೇಲೆ ಬೀಳದಂತೆ ತಡೆದುಕೊಂಡು, ಊರ್ಧ್ವಮುಖವಾಗಿ ನಿಂತಿದ್ದಳು ॥೮॥

ಈ ಸೂಚಿಯು, ಸ್ವತಃ ಉಕ್ಕಿನದಾಗಿರುವುದರಿಂದಲೂ, ಕೇವಲ ಹಿಂಸಾಪ್ರದವಾದ ಸ್ವಭಾವದಿಂದಲೂ, ತೀಕ್ಷ್ಣವಾದ ಮೊನೆಯಿರುವುದರಿಂದಲೂ, ಸಮಸ್ತವಾದ ಅಂಗಗಳನ್ನೂ ವ್ಯಾಪಿಸತಕ್ಕಶಕ್ತಿಯುಳ್ಳದಾದುದರಿಂದಲೂ, ತನ್ನ ಮುಖದಿಂದ ವಾಯುವನ್ನು ಗ್ರಾಸಮಾಡುತಿದ್ದುದರಿಂದಲೂ ಕೂಡ, ಧೂಳಿ ಪರಮಾಣು ಕಲ್ಲು ಮುಂತಾದ ಸಂಕಟಸ್ಥಳಗಳಲ್ಲೆಲ್ಲ ಪ್ರಯತ್ನಪೂರ್ವಕವಾಗಿ ಗಟ್ಟಿಯಾಗಿ ಕಾಲೂರಿ ನಿಲ್ಲುತಿದ್ದಳು ॥೯॥

ಹೀಗಿರುತಿರುವ ಆಸೂಚಿಕೆಯು, ಅರಣ್ಯದಲ್ಲಿ ಹಸಿದು-ಬಳಲಿ-ಜನರನ್ನು ನೋಡಲು ಕತ್ತೆತ್ತಿಕೊಂಡು—ಹುಲ್ಲಿನ ತುದಿಯಲ್ಲಿ ಪುಚ್ಛವನ್ನಿಟ್ಟುಕೊಂಡು—ಗಾಳಿಗೆ ಅಳ್ಳಾಡದೆ ನಿಂತಿರುವ ತೃಣಜಲೌಕೆಯೆಂಬ (ಎಂದುವಿಧವಾದ ಜಿಗಣೆ) ಕ್ರಿಮಿಯನ್ನು ಅನುಕರಿಸುತಿದ್ದಿತು ॥೧೦॥

ಆಗ ಆ ಸೂಚಿಯ ರಂಧ್ರದಿಂದ ಹೊರಟು ಸೂಚಿಯಷ್ಟೇ ಸೂಕ್ಷ್ಮವಾಗಿರುವ ಸೂರ್ಯಕಾಂತಿಯು, ಆ ಸೂಚಿಗೆ ಹಿಂಭಾಗವನ್ನು ರಕ್ಷಿಸುವ ಸಖಿಯಾಯಿತು ॥೧೧॥

ಕ್ಷುದ್ರೇಽಪಿ ಸ್ವಜನೇ ಭೂತೇಽಸ್ತ್ಯೇತಿ ವತ್ಸಲತಾಂ ಜನಃ |
ದೀಧಿತ್ಯಾಪಿ ಸಖೀವೃತ್ತಂ ಸೂಚ್ಯಾಂ ಶುಚಿತಯಾ ಭೃತಮ್ ||೧೨||
ಬಭೂವ ತಸ್ಯಾಃ ಸ್ವಚ್ಛಾಯಾ ದ್ವಿತೀಯಾ ತಾಪಸೀ ಸಖೀ |
ಏವಂ ಸೂಚೀವ ಮಲಿನಾ ತಯಾ ಪಶ್ಚಾತ್ ಕೃತೇವ ಸಾ ||೧೩||
ಸೂಚ್ಯಾ ತಯಾ ಸುನಿರ್ಗತ್ಯ ಸುಪಾತಾಕ್ಷ್ಯಸ್ಮಕೂಣಿತೈಃ |
ಪಶ್ಚಾತ್ ಸಖ್ಯಾಭಯಾ ಸಾಧುಃ ಅನ್ಯೋನ್ಯಾಚಾರಕೇ ಬಲಮ್ ||೧೪||
ಸೂಚ್ಯಭಿಪ್ರೇಕ್ಷಿತೇ ಯಾತಾಃ ಮತಿಂ ದ್ರುಮಲತಾದಯಃ |
ಮಹಾತಪಸ್ವಿನೀಂ ಸೂಚೀಂ ದೃಷ್ಟ್ವಾ ನೋತ್ಕಣ್ಠಯನ್ತಿ ಕೇ ||೧೫||
ಸ್ಥಿರಬದ್ಧಪದಾಮೇನಾಂ ಸ್ವಮನೋವೃತ್ತಿಮುತ್ಥಿತಾಮ್ |
ಅನಿಲಂ ಭೋಜಯಾಂಚಕ್ರುಃ ಮುಖನಿರ್ಗತಭಾಙ್ಕೃತೈಃ ||೧೬||
ಪ್ರಸೂತಾನಿ ಭವಿಷ್ಯಾಣಿ ಗೀರ್ವಾಣಾನ್ಯಾನಿ ವಾ ಚಿರಮ್ |
ಕೌಸುಮಾನಿ ರಜಾಂಸ್ಯಸ್ಯಾಃ ಇತ್ಯಾಸ್ಯಂ ಪರ್ಯಪೂರಯನ್ ||೧೭||

ಪ್ರಪಂಚದಲ್ಲಿ, ತಮ್ಮವರು ಎಷ್ಟು ಕ್ಷುಲ್ಲಕರಾದರೂ—ಅವರಲ್ಲಿ ಜನರು ವಾತ್ಸಲ್ಯವನ್ನಿಡುವರು. ಹೇಗೆಂದರೆ,—ಆ ಸೂಚಿಯು ತಪಸ್ಸುಮಾಡುತಿರುವಾಗ, ನಿರ್ಮಲವಾದ ಅದರ ಕಾಂತಿಯೂ ಕೂಡ, ಆ ಸೂಚಿಯಲ್ಲಿ ತಮ್ಮವಳೆಂಬ ವಾತ್ಸಲ್ಯದಿಂದ ಮೈತ್ರಿಯನ್ನಿಟ್ಟಿತು ||೧೨||

ಇದರಂತೆಯೇ, ಅದರ ನೆಳಲೂ ಕೂಡ ಅದಕ್ಕೆ ಸಖಿಯಾಯ್ತು. ಆದರೆ, ಈ ಸೂಚಿಯು ನೆಳಲನ್ನು ತನ್ನ ಹಿಂದುಗಡೆ ಬಿಟ್ಟುಕೊಂಡಕಾರಣ, ಅದು ಅಸಮಾಧಾನದಿಂದ ಸ್ವಲ್ಪ ಮಲಿನವಾಗಿರುವಂತೆ ತೋರಿತು ||೧೩||

ಹೀಗೆ ಅಯೋಮಯವಾದ ಸೂಚಿ-ಛಾಯಾಸೂಚಿ-ಸೂರ್ಯಕಾಂತಿಸೂಚಿ—ಈ ಮೂರು ಸೂಚಿಗಳೂ ಸೇರಿದಾಗ, ಸೂರ್ಯಕಾಂತಿ ಸೂಚಿಯು ಲೋಹಸೂಚಿಯದ್ವಾರಾ ಹೊರಟು ಛಾಯಾ ಸೂಚಿಯೊಡನೆ ಸೇರಿಕೊಂಡಿತು. ಹೀಗೆ ಒಂದಕ್ಕೊಂದು ಮಾಡಬೇಕಾದ ಸಾಹ್ಯಾಚರಣೆಯಲ್ಲಿ ಸಮಗ್ರವಾಗಿ ಶಕ್ತಿಯನ್ನು ತೋರಿಸುದುದು ಕೇವಲ ಯುಕ್ತವಾಯ್ತು ||೧೪||

ಇಂತಹ ಆ ಸೂಚಿಯನ್ನು ನೋಡಬೇಕೆಂದು, ಅಲ್ಲಿರುವ ವೃಕ್ಷಲತಾದಿಗಳೂ ಕೂಡ ಅಭಿಪ್ರಾಯಪಟ್ಟುವು. ಅಷ್ಟುಮಟ್ಟಿಗೆ ಮಹಾತಪಸ್ವಿನಿಯಾದ ಸೂಚಿಯನ್ನು ನೋಡಿ, ಯಾರುತಾನೆ ಉತ್ಸುಕರಾಗಲಾರರು? ||೧೫||

ಆಗ ಆ ಸೂಚಿಯು ಮುಖದಲ್ಲಿ ಗಾಳಿ ನುಗ್ಗಿ ಭಾಂಕಾರಶಬ್ದವಾಗುತಿದ್ದುದರಿಂದ, ತನ್ನ ಮನೋವೃತ್ತಿಯಂತೆ ಸ್ಥಿರವಾಗಿ ಕಾಲೂರಿ ನಿಂತಿರುವ ಇವಳನ್ನು ನೋಡಿ ಕನಿಕರಪಟ್ಟು ಆ ವೃಕ್ಷಾದಿಗಳು ವಾಯುವನ್ನು ಆಹಾರಮಾಡಿಸುತಿರುವುವೋ ಎಂಬಂತೆ ತೋರಿತು ||೧೬||

ಆಗ ವೃಕ್ಷಲತಾದಿಗಳಿಂದ ಉದುರಿದ ಪುಷ್ಪಪರಾಗವು ಈ ಸೂಚಿಯ ರಂಧ್ರವನ್ನು ಮುಚ್ಚಿಬಿಟ್ಟಕಾರಣ, ಆ ವೃಕ್ಷಾದಿಗಳು—ತಮ್ಮಲ್ಲಿ ಇದುವರೆಗೆ ಹುಟ್ಟಿಯೂ ಮುಂದೆ ಹುಟ್ಟತಕ್ಕುವಾಗಿಯೂ ದೇವತೆಗಳಿಗೆ ಸಲ್ಲತಕ್ಕುವಲ್ಲದುವುಗಳಾಗಿಯೂ ಇರುವ ಸಮಸ್ತ ಪುಷ್ಪಧೂಳಿಗಳೂ ಈ ಸೂಚಿಗೋಸ್ಕರವೇ ಕೊಡಲ್ಪಡಬೇಕೆಂದು ನಿಶ್ಚಯಿಸಿಕೊಂಡು—ಧೂಳಿಗಳಿಂದ ಸೂಚಿಯ ಮುಖವನ್ನು ತುಂಬಿಬಿಟ್ಟುವೋ ಎಂಬಂತೆ ಕಾಣಿಸಿತು ||೧೭||

ತತೋ ಮಹೇನ್ದ್ರಪ್ರಹಿತಂ ವಾತನುನ್ನಾಮಿಷಂ ರಜಃ ।
ತಯಾ ತ್ವಭ್ರತ್ವವ್ಯಾಜೇನ ನ ನಿಗೀರ್ಣಂ ಮುಖೇ ವಿಶತ್ ॥೧೮॥
ನ ನಿಗೀರ್ಣವತೀ ತಾನಿ ರಜಾಂಸಿ ದೃಢನಿಶ್ಚಯಾತ್ ।
ಅನ್ತಸ್ಸಾರತಯಾ ಕಾರ್ಯಂ ಲಘವೋಽಪ್ಯಾಪ್ನುವನ್ತಿ ಹಿ ॥೧೯॥
ನ ಪಿಬತ್ಯಾಸ್ಯಸಂಸ್ಥಾನಿ ತಥಾ ಪುಷ್ಪರಜಾಂಸ್ಯಪಿ ।
ವಿಸ್ಮಯಂ ಪವನಃ ಪ್ರಾಪ ಸುಮೇರೂನ್ಮೂಲನಾಧಿಕಮ್ ॥೨೦॥
ಆಶಿರಃ ಪಿಹಿತಾ ಪಙ್ಕೈಃ ಪೂರಿತಾಪಿ ಮಹಾಜಲೈಃ ।
ವಿಧೂತಾಪಿ ಬೃಹದ್ವಾತೈಃ ದಗ್ಧಾಪಿ ವನವಹ್ನಿಭಿಃ ॥೨೧॥
ಭಿನ್ನಾಪಿ ಕರಕಾಪಾತೈಃ ಭ್ರಾಮಿತಾಪಿ ತಟದ್ಭ್ರಮೈಃ ।
ಉದ್ವೇಜಿತಾಪಿ ಜಲದೈಃ ಕ್ಷೋಭಿತಾಪ್ಯತಿಗರ್ಜಿತೈಃ ॥೨೨॥
ಅಪಿ ವರ್ಷಸಹಸ್ರೈಃ ಸಾ ಚಿತ್ತಸ್ಥದೃಢನಿಶ್ಚಯಾ ।
ಪಾದಾಗ್ರಂ ತು ಕುಸುಪ್ತೇವ ನಾಕಮ್ಪತ ತಪಸ್ವಿನೀ ॥೨೩॥
ನಿವೃತ್ತಾಯಾಬಹಿಸ್ಸ್ಪನ್ದಾತ್ ದೇಶಕಾಲೇ ಬಹೌ ಗತೇ ।
ವಿಚಾರಯನ್ತ್ಯಾಸ್ತಸ್ಯಾಃ ಸ್ವಂ ಆತ್ಮಾ ಸತ್ಯಂ ಸುಚೇತನಮ್ ॥೨೪॥
ಜ್ಞಾನಾಲೋಕಃ ಸಮುದಭೂತ್ ಸಾ ಪರಾವರದರ್ಶಿನೀ ।
ಬಭೂವ ನಿರ್ಮಲಾ ಸೂಚಿಃ ವಿಸೂಚೀ ಪಾವನಂ ಪರಮ್ ॥೨೫॥

ಮಧ್ಯಮಧ್ಯದಲ್ಲಿ ಆಕಸ್ಮಿಕವಾಗಿ ಮಾಂಸಾದಿ ಸಂಪರ್ಕವುಳ್ಳ ಧೂಳಿಯು ಇದರಲ್ಲಿ ಪ್ರವೇಶಿಸಿ ಹಾಗೆಯೇ ಅಂಟಿಕೊಂಡಿರುವುದನ್ನು ನೋಡಿದರೆ, ಇಂದ್ರನು ಇವಳ ತಪೋವಿಘ್ನಾರ್ಥವಾಗಿ ಮಾಂಸವನ್ನು ವಾಯುವಿನ ದ್ವಾರಾ ಕಳುಹಿಸುತ್ತಿರುವನೋ ಎಂದೂ—ಇವಳು ಅದನ್ನು ಸ್ವೀಕರಿಸದೆ ಇರುವಳೋ ಎಂದೂ—ಊಹೆಯುಂಟಾಗುತ್ತಿದ್ದಿತು ॥೧೮॥

ಹೀಗ ಆ ಸೂಚಿಯು ದೃಢವಾದ ನಿಶ್ಚಯವುಳ್ಳವಳಾದುದರಿಂದ ಆ ರಜಸ್ಸನ್ನು ನುಂಗಲಿಲ್ಲ. ಎಷ್ಟು ಅಲ್ಪರಾದರೂ, ಒಳಗೆ ಗಟ್ಟಿಯಾಗಿದ್ದರೆ ಕಾರ್ಯಸಾಧನೆಮಾಡಿಕೊಳ್ಳುವುದರಲ್ಲಿ ಸಂಶಯವಿಲ್ಲ॥

ಹೀಗೆ ಆ ಸೂಚಿಯು ತನ್ನ ಮುಖದೊಳಗೆ ಬಿದ್ದ ಧೂಳಿಯನ್ನೂ ಪಾನಮಾಡದಿರುವುದನ್ನು ನೋಡಿ, ವಾಯುವು—ತಾನು ಸುಮೇರುಪರ್ವತವನ್ನು ಕಿತ್ತುಹಾಕಿದಾಗ ಪಡುವ ಆಶ್ಚರ್ಯಕ್ಕಿಂತಲೂ ಹೆಚ್ಚಾಗಿ ಆಶ್ಚರ್ಯಪಟ್ಟನು ॥೨೦॥

ಹೀಗೆ ದೃಢವಾದ ನಿಶ್ಚಯದಿಂದ ತಪಸ್ಸುಮಾಡುತ್ತಿರುವ ಆ ಸೂಚಿಯು, ತಲೆಯವರೆಗೆ ಕೆಸರಿನಲ್ಲಿ ತಾನು ಮುಣುಗಿಹೋದರೂ, ದೊಡ್ಡ ಜಲಪ್ರವಾಹದಿಂದ ಕೊಚ್ಚಲ್ಪಟ್ಟರೂ, ಮಹಾವಾತಗಳಿಂದ ಅಳ್ಳಾಡಿಸಲ್ಪಟ್ಟರೂ, ಕಾಡುಗಿಚ್ಚಿನಿಂದ ಸುಡಲ್ಪಟ್ಟರೂ, ಆನೆಕಲ್ಲುಗಳಿಂದ ಭೇದಿಸಲ್ಪಟ್ಟರೂ, ಮಿಂಚುಗಳಿಂದ ಕಳವಳಪಡಿಸಲ್ಪಟ್ಟರೂ, ಮೇಘಗಳಿಂದ ಹೆದರಿಸಲ್ಪಟ್ಟರೂ, ಹೆಚ್ಚಾದ ಗುಡುಗುಗಳಿಂದ ಗಾಬರಿಪಡಿಸಲ್ಪಟ್ಟರೂ, ಸಾವಿರಾರು ವರ್ಷಗಳು ಕಳೆದುಹೋದರೂ, ವಿಪಾದಿಗಳಿಂದ ಮೂರ್ಛೆಹೊಂದಿರುವಳಂತೆ, ಕಾಲುತುದಿಯನ್ನೂ ಅಳ್ಳಾಡಿಸಲಿಲ್ಲ ॥೨೧–೨೩॥

ಹೀಗೆ ಅವಳು ಬಾಹ್ಯವ್ಯಾಪಾರಗಳನ್ನೆಲ್ಲ ನಿಶ್ಶೇಷವಾಗಿ ಬಿಟ್ಟುಬಿಟ್ಟು ತಪಸ್ಸುಮಾಡುತ್ತಿರುವಾಗ, ಅನೇಕ ದೇಶಕಾಲಗಳು ಕಳೆದು ಹೋಗಲಾಗಿ, ತನ್ನ ಸ್ವರೂಪವನ್ನು ಒಳಗೆ ವಿಚಾರಮಾಡಲುಪಕ್ರಮಿಸಿದ ಆ ಸೂಚಿಗೆ, ಸ್ವಸ್ವರೂಪಜ್ಞಾನವಾವಿರ್ಭವಿಸಿತು; ಆಗ ಆಸೂಚಿಯು, ಸೂಚೀತ್ವವನ್ನು ಬಿಟ್ಟುಬಿಟ್ಟು, ನಿರ್ಮಲವಾದ ಪರಮಾತ್ಮವಸ್ತುಸ್ವರೂಪಳಾದಳು ॥೨೪–೨೫॥

ಜಾತಾ ವಿದಿತವೇದ್ಯಾ ಸಾ ಸ್ವಯಮೇವ ತಯಾ ಧಿಯಾ |
ತಪಸಾ ದುಷ್ಕೃತೇ ಕ್ಷೀಣೇ ಸೂಚೀ ಸ್ವಸುಖಸೂಚಿನೀ ||೧೬||
ಇತಿ ವರ್ಷಸಹಸ್ರಾಣಿ ಸಾಕರೋದ್ದಾರುಣಂ ತಪಃ |
ಸಪ್ತ ಸಪ್ತಮಹಾಲೋಕಸನ್ತಾಪಕರಮುನ್ಮುಖೀ ||೧೭||
ತಸ್ಯಾಃ ಕಲ್ಪಾಗ್ನಿಭೀಮೇನ ತಪಸಾ ಹಿ ಮಹಾಗಿರಿಃ |
ಬಭೂವ ತೇನ ಜ್ವಲಿತೋ ಜಜ್ವಾಲೇವ ತತೋ ಜಗತ್ ||೧೮||
ಕಸ್ಯೇದಂ ತಪಸಾಕ್ರಾನ್ತಂ ಜಗದಿತ್ಯಥ ವಾಸವಃ |
ನಾರದಂ ಪರಿಪಪ್ರಚ್ಛ ಸ ತಸ್ಯಾಕಥಯಚ್ಚ ತತ್ ||೧೯||
ಸಪ್ತ ವರ್ಷಸಹಸ್ರಾಣಿ ಸೂಚೀ ಧೀರ್ಘತಪಸ್ವಿನೀ |
ಮಹಾವಿಜ್ಞಾನದೇಹಾಸೌ ತೇನೇದಂ ಜ್ವಲಿತಂ ಜಗತ್ ||೨೦||
ನಾಗಾಃ ಶ್ವಸನ್ತಿ ವಿಚಲನ್ತಿ ನಗಾಃ ಪತನ್ತಿ
ವೈಮಾನಿಕಾಜಲಧಿವಾರಿಧರಾಃ ಪ್ರಯಾನ್ತಿ |
ಶೋಷಂ ದಿಶೋರ್ಕಸಹಿತಾಮಲಿನೀಭವನ್ತಿ
ಸೂಚ್ಯಾಃ ಸುರೇನ್ದ್ರ ತಪಸಾ ಕ್ಷಯಮಾಯಯೇವ ||೨೧||
ಇತಿ ಉತ್ಪತ್ತಿಪ್ರಕರಣೇ ಸೂಚೀತಪಃಪ್ರಭಾವೋನಾಮ
ದ್ವಿಸಪ್ತತಿತಮಃ ಸರ್ಗಃ.

ಆಗ ಆಸೂಚಿಯು, ತಪಸ್ಸಿನಿಂದ ಪಾಪಕ್ಷಯವಾಗಲಾಗಿ, ತನಗೆ ತಾನೇ ತತ್ವಜ್ಞಳಾಗಿ, ತನ್ನ ಸುಖವಾವುದೆಂದು ವಿಚಾರಮಾಡತಕ್ಕವಳಾದಳು ||೧೬||

ಅಯ್ಯಾ! ರಾಮ! ಈ ರೀತಿಯಾಗಿ ಆ ಸೂಚಿಯು, ಏಳುಸಾವಿರವರ್ಷಕಾಲ, ಸಪ್ತಮಹಾಲೋಕಕ್ಕೂ ಸಂತಾಪವುಂಟಾಗುವಮಟ್ಟಿಗೆ, ಊರ್ಧ್ವಮುಖಳಾಗಿ, ಕ್ರೂರವಾದತಪಸ್ಸನ್ನು ಮಾಡಿದಳು||

ಪ್ರಳಯಾಗ್ನಿಯಂತೆ ಅತಿಭಯಂಕರವಾಗಿರುವ ಅವಳ ತಪಸ್ಸಿನಿಂದ, ಆ ಹಿಮವತ್ಪರ್ವತವುಬಲು ಬೇಗನೆಹತ್ತಿ ಉರಿಯಲುಪಕ್ರಮಿಸಿತು; ಬಳಿಕ, ಪ್ರಪಂಚವೆಲ್ಲವೂ ಉರಿಯಲಾರಂಭಿಸಿದಂತಾಯ್ತು||

ಬಳಿಕ, ಇಂದ್ರನು, ನಾರದರನ್ನು ಕುರಿತು, ಇದು ಯಾರ ತಪಸ್ಸಿನಿಂದ ಪ್ರಪಂಚವೆಲ್ಲವೂ ವ್ಯಾಪಿಸಲ್ಪಟ್ಟಿತೆಂದು ಪ್ರಶ್ನೆಮಾಡಿದನು. ಅವರು ಈರೀತಿಯಾಗಿ ಉತ್ತರಕೊಟ್ಟರು ||೧೯||

ಅಯ್ಯಾ! ಮಹೇಂದ್ರನೆ! ಮಹಾಜ್ಞಾನಶರೀರವನ್ನು ಪಡೆದಿರುವ ಸೂಚಿಯೆಂಬವಳು, ಏಳುಸಹಸ್ರವರ್ಷಕಾಲ ಅತಿದೀರ್ಘವಾಗಿ ತಪಸ್ಸು ಮಾಡಿರುವಳು; ಅದರಿಂದ ಈ ಜಗತ್ತು ಉರಿಯುತಿರುವುದು ||೨೦||

ಈಗಿನ ಅವಸ್ಥೆಯನ್ನು ಏನುಹೇಳಲಿ! ನಾಗಗಳೆಲ್ಲವೂ ನಿಟ್ಟುಸಿರುಬಿಡುವುವು; ಪರ್ವತಗಳೆಲ್ಲವೂ ಚಲಿಸುತಿರುವುವು; ವಿಮಾನದಲ್ಲಿ ಸಂಚರಿಸುವ ದೇವಾದಿಗಳು ಬೀಳುತಿರುವರು; ಸಮುದ್ರಗಳೂ ಮೇಘಗಳೂ ಒಣಗಿಹೋಗುತಿರುವುವು; ದಿಕ್ಕುಗಳೆಲ್ಲವೂ ಸೂರ್ಯನೊಡನೆ ಮಲಿನವಾಗುತಿರುವುವು; ಅಯ್ಯಾ! ದೇವೇಂದ್ರನೆ! ಕ್ಷಯಕಾಲದಲ್ಲಿ ಪರಮೇಶ್ವರನುಪಯೋಗಿಸುವ ತನ್ನ ಸಂಹಾರಶಕ್ತಿಯಿಂದಾಗುವ ಕಾರ್ಯವೆಲ್ಲವೂ ಈಗ ಈ ಸೂಚಿಯಿಂದುಂಟಾಗುತ್ತಿರುವುದು.—ಎಂದು ನಾರದಮಹರ್ಷಿಗಳು ಇಂದ್ರನಿಗೆ ಹೇಳಿದರು ||೨೧||

ಇದು ಉತ್ಪತ್ತಿಪ್ರಕರಣದಲ್ಲಿ ಸೂಚೀಕೋಪಾಖ್ಯಾನದೊಳಗೆ ಸೂಚೀತಪಃ
ಪ್ರಭಾವವರ್ಣನೆಯೆಂಬ ಎಪ್ಪತ್ತೆರಡನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ತ್ರಿಸಪ್ತತಿತಮಃ ಸರ್ಗಃ

ಶ್ರೀವಸಿಷ್ಠ ಉವಾಚ.

ಕರ್ಕಟೀಕಟುವೃತ್ತಾಂತಂ ಸರ್ವಮಾಕರ್ಣ್ಯ ವಾಸವಃ ।
ನಾರದಂ ಪರಿಪಪ್ರಚ್ಛ ಪುನರ್ಜಾತಕುತೂಹಲಃ ॥೧॥

ಶಕ್ರ ಉವಾಚ.

ಸೂಚೀವೃತ್ತಪಿಶಾಚತ್ವಂ ತಪಸೋಪಾರ್ಜ್ಯ ತತ್ ತಯಾ ।
ಕರ್ಕಟ್ಯಾ ಹಿಮಮರ್ಕಟ್ಯಾ ಕೇ ಭುಕ್ತಾ ವಿಭವಾ ಮುನೇ ॥೨॥

ಶ್ರೀನಾರದ ಉವಾಚ.

ಜೀವಸೂಚ್ಯಾಃ ಪಿಶಾಚತ್ವಂ ಗತಾಯಾಃ ಶಕ್ರ ಪೇಲವಮ್ ।
ಆಸೀತ್ ಕಾಷ್ಣಾಯಸೀ ಸೂಚೀ ತಸ್ಯಾಃ ಸಮವಲಂಬನಮ್ ॥೩॥
ತತ್ ಸಮಾಲಂಬನಂ ತ್ಯಕ್ತ್ವಾ ವ್ಯೋಮವಾತರಥಸ್ಥಯಾ ।
ಪ್ರಾಣಮಾರುತಮಾರ್ಗೇಣ ತಯಾ ದೇಹಪ್ರವಿಷ್ಟಯಾ ॥೪॥
ಸರ್ವೇಷಾಮಾಂತ್ರತಂತ್ರೀಣಾಂ ಸ್ನಾಯುಮೇದೋವಸಾಸೃಜಾಮ್ ।

ಉತ್ಪತ್ತಿಪ್ರಕರಣದಲ್ಲಿ ಎಪ್ಪತ್ತುಮೂರನೆಯ ಸರ್ಗವು.

ಜೀವಸೂಚ್ಯಾ ಇಹ ಪುನಃ ವರ್ಣ್ಯತೇ ಭೋಗವಿಸ್ತರಃ ।
ತಪಶ್ಚಾನ್ವೇಷಣಂ ವಾಯೋಃ ಸರ್ವತಃ ಶಕ್ರಚೋದನಾತ್ ॥

ಜೀವಸೂಚಿಯು ಅನುಭವಿಸಿದ ಭೋಗವಿಸ್ತರವೂ, ಅವಳು ತಪಸ್ಸು ಮಾಡಿದ ವಿಧಾನವೂ, ಇಂದ್ರನ ಆಜ್ಞೆಯಂತೆ ವಾಯುವು ಅವಳನ್ನು ಹುಡುಕುವಿಕೆಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು ॥

ಪುನಃ ಶ್ರೀ ವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು :—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ನಾರದರು ಹೇಳಿದ ಕರ್ಕಟಿಯ ಘೋರವಾದ ವೃತ್ತಾಂತವನ್ನು ಕೇಳಿ ಕುತೂಹಲಾಧಿಕ್ಯವುಳ್ಳವನಾದ ಇಂದ್ರನು, ಪುನಃ ನಾರದರನ್ನು ಕುರಿತು ಪ್ರಶ್ನೆಮಾಡಿದನು ॥೧॥

ಇಂದ್ರನು ಹೇಳಿದುದೇನೆಂದರೆ:—

ಎಲೈ ನಾರದರೆ! ಹಿಮಸಂಬಂಧವುಂಟಾಗಿರುವಹಾಗೆ ಜಾಡ್ಯಯುಕ್ತವಾದ ಬುದ್ಧಿಯುಳ್ಳವಳಾಗಿಯೂ, ಕಪಿಯಂತೆ ಚಪಲಳಾಗಿಯೂ ಇರುವ ಆ ಕರ್ಕಟಿಯು, ಆಗ ತಪಸ್ಸುಮಾಡಿ, ಸೂಚೀಚರಿತವೆಂಬ ಪಿಶಾಚತ್ವವನ್ನು ಸಂಪಾದಿಸಿ, ಯಾವ ವೈಭವವನ್ನನುಭವಿಸಿದಳು? ॥೨॥

ನಾರದರು ಉತ್ತರ ಹೇಳುವರು :—

ಅಯ್ಯಾ! ಇಂದ್ರ! ಆಗ ಅತಿ ಬಲ್ಬಜವಾದ ಪಿಶಾಚತ್ವವನ್ನು ಹೊಂದಿದ ಆ ಜೀವಸೂಚಿಗೆ, ಅಯೋಮಯವಾದ ಸೂಚಿಯು ಆಶ್ರಯವಾಗಿ ದೊರೆಯಿತು ॥೩॥

ಅವಳು, ಆ ಆಶ್ರಯವನ್ನು ಬಿಟ್ಟುಬಿಟ್ಟು, ಅಂತರಿಕ್ಷಮಾರ್ಗದಲ್ಲಿ ವಾಯುರಥವನ್ನು ಹತ್ತಿ,

ರನ್ಧ್ರೇಣ ಪಕ್ಷಿಣೀವಾನ್ತಃ ನಿಲೀನಂ ಮಲಿನಾತ್ಮನಾಮ್ ‖೫‖
ಯಸ್ಯಾಂ ನಾಡ್ಯಾಂ ನಭೋವಾಯುಃ ಯಾತಿ ತತ್ತಾಮುಪೇತಯಾ ।
ತತ್ರ ಶೂಲಂ ಕೃತಂ ಸ್ಥೂಲನ್ಯಗ್ರೋಧಾಗ್ರಇವೋತ್ಕಟಮ್ ‖೬‖
ತಚ್ಛರೀರೇನ್ದ್ರಿಯೈಸ್ತಾನಿ ತಥಾನ್ಯಾನಿ ಬಹೂನಿಚ ।
ಭುಕ್ತಾನಿ ನರಮಾಂಸಾನಿ ಭೋಜನಾನ್ಯುಚಿತಾನಿ ಚ ‖೭‖
ಸುಪ್ತಂ ವಿವಲಿತಾನಲ್ಪಮಾಲಯಾ ಮುಗ್ಧಬಾಲಯಾ ।
ಕಾನ್ತವಕ್ಷಸ್ಸ್ಥಲಸ್ಯೂತಸೃಷ್ಟಪತ್ರಕಪೋಲಯಾ ‖೮‖
ವಿದ್ರುತಂ ವೀತಶೋಕಾಸು ವಿಹಙ್ಗ್ಯ ವನವೀಥಿಷು ।
ಕಲ್ಪದ್ರುಮೌಘಪುಷ್ಪಾಗ್ರದ್ವಿಗುಣಾಮೋಜಸಙ್ಕ್ತಿಷು ‖೯‖
ಪೀತಆಮೋದಮನ್ದಾರಮಕರನ್ದಕಣಾಸವಃ ।
ವನೇಷ್ವಮರಶೈಲಾನಾಂ ಅಳಿನ್ಯಾಮಳಲೀಲಯಾ ‖೧೦‖
ಚರ್ವಿತಾನಿ ಶವಾಙ್ಗಾನಿ ಗೃಧ್ರ್ಯಾಗರ್ತಾನಿ ವೃದ್ಧಯಾ ।
ಖಡ್ಗಯಷ್ಟ್ಯೇವ ಸಙ್ಗ್ರಾಮೇ ವೀರಾಙ್ಗಾನಿ ಜವೇದ್ಧಯಾ ‖೧೧‖

ಪ್ರಾಣವಾಯು ಮಾರ್ಗದಿಂದ ಮಲಿನರಾದ ಸಮಸ್ತ ಪ್ರಾಣಿಗಳ ಶರೀರವನ್ನು ಪ್ರವೇಶಿಸಿ, ಅಲ್ಲಿ ನರ ಕೊಬ್ಬು ರಕ್ತ—ಇತ್ಯಾದಿಗಳ ದ್ವಾರಾ ಒಳಹೊಕ್ಕು, ಪಕ್ಷಿಯಂತೆ ಒಳಗೆ ಅಡಗಿಕೊಂಡಿದ್ದಳು ‖೪—೫‖

ಅಲ್ಲಿ ಅವಳು, ಯಾವ ನಾಡಿಯಲ್ಲಿ ರೋಗಾಶ್ರಯವಾದ ಬಹಿರ್ವಾಯು ಸೇರುವುದೋ—ಅಂತಹ ನಾಡಿಯಾಗಿಬಿಟ್ಟು, ಸಾಕ್ಷಾದ್ದಕ್ಷಿಣಾಮೂರ್ತಿಯು ವಟವೃಕ್ಷದ ಕೊನೆಯಲ್ಲಿ ಶೂಲವನ್ನಿಟ್ಟಂತೆ, ಪ್ರಾಣಿಗಳ ದೇಹದಲ್ಲಿ ಶೂಲರೋಗವನ್ನು ಹುಟ್ಟಿಸಿದಳು ‖೬‖

ಆಯಾ ಪ್ರಾಣಿಗಳ ಶರೀರವಾಗಿಯೂ ಇಂದ್ರಿಯಗಳಾಗಿಯೂ ಪರಿಣಮಿಸಿ, ಅವುಗಳಲ್ಲಿರುವ ಮಾಂಸಗಳನ್ನೂ ಇತರವಾದ ಮನುಷ್ಯಮಾಂಸಗಳನ್ನೂ ಉಚಿತವಾದ ಭೋಜನಗಳನ್ನಾಗಿ ಮಾಡಿಕೊಂಡಳು ‖೭‖

ಇವಳು, ಮುಗ್ಧಸ್ತ್ರೀರೂಪವನ್ನು ಧರಿಸಿದವಳಾಗಿ, ತನ್ನ ಕಾಂತನ ಹೃದಯದಮೇಲೆ ಮಲಗಿಕೊಂಡು, ಅಸಂಖ್ಯಾಕವಾದ ತನ್ನ ಹಾರಗಳನ್ನು ಅಲ್ಲಿ ಹೊರಳಾಡಿಸುತಲೂ—ತನ್ನ ಕಪೋಲಪತ್ರಗಳನ್ನು ಅಲ್ಲಿ ಗಾಢವಾಗಿ ಸೇರಿಸುತಲೂ—ವಿಹಾರಮಾಡಿದಳು ‖೮‖

ಅವಳು, ಹೆಣ್ಣುಹಕ್ಕಿಯ ದೇಹವನ್ನು ಪ್ರವೇಶಮಾಡಿ, ಕಲ್ಪವೃಕ್ಷದ ಉತ್ತಮವಾದ ಪುಷ್ಪಕ್ಕಿಂತಲೂ ಇಮ್ಮಡಿಯಾಗಿ ಪರಿಮಳವುಳ್ಳ ಕಮಲಸಮೂಹವುಳ್ಳದಾಗಿಯೂ ಆನಂದಕರವಾಗಿಯೂ ಇರುವ ಅರಣ್ಯಪಂಕ್ತಿಗಳಲ್ಲಿ ಸಂಚರಿಸಿದಳು ‖೯‖

ಹೆಣ್ಣುದುಂಬಿಯೊಳಗೆ ಪ್ರವೇಶಮಾಡಿ, ಮಹಾಮೇರುಪರ್ವತದ ಅರಣ್ಯಗಳೊಳಗೆ, ಭ್ರಮರದಂತೆ ವಿಹರಿಸುತ, ಪರಿಮಳಯುಕ್ತವಾದ ಮಂದಾರಪುಷ್ಪದ ಮಕರಂದವನ್ನು ಪಾನಮಾಡಿದಳು ‖೧೦‖

ದೊಡ್ಡದಾದ ಹೆಣ್ಣುಹದ್ದಿನೊಳಗೆ ಸೇರಿಕೊಂಡು, ಯುದ್ಧರಂಗದಲ್ಲಿ ವೇಗದಿಂದ ಸಂಚರಿಸುತಿರುವ ಖಡ್ಗವು ವೀರರ ಅಂಗಗಳನ್ನು ಕತ್ತರಿಸುವಂತೆ, ಗುಂಡಿಯಲ್ಲಿ ಹೂತಿರುವ ಶವಗಳನ್ನು ಕಿತ್ತು ಕತ್ತರಿಸಿದಳು ‖೧೧‖

ಸರ್ವಾಙ್ಗಕೋಶನಾಡೀಷು ದಿಕ್ಷ್ವಿವಾನಿಲಲೇಖಯಾ ।
ಉಡ್ಡೀನಮವಡೀನಂ ಚ ಕಾಚಾಭ್ರವ್ಯೋಮವೀಥಿಷು ॥೧೨॥
ವಿರಾಡಾತ್ಮಹೃದಿ ಪ್ರಾಣವಾತಸ್ಪನ್ದಾಃ ಸ್ಫುರನ್ತಿ ತು ।
ಯಥಾ ತಥಾ ಪ್ರಸ್ಫುರಿತಂ ಪ್ರತಿದೇಹಗೃಹಂ ತಯಾ ॥೧೩॥
ಸರ್ವಪ್ರಾಣಿಶರೀರೇಷು ಭ್ರಾನ್ತಿ ಚಿಚ್ಛಕ್ತಯಸ್ತಥಾ ।
ದೀಪಪ್ರಭಾಭೂಷಿತಯಾ ಗೃಹಿಣ್ಯೇವ ಸ್ವಸದ್ಮಸು ॥೧೪॥
ವಿಹೃತಂ ರುಧಿರೇಷ್ವನ್ತಃ ದ್ರವಶಕ್ತ್ಯೇವ ವಾರಿಷು ।
ಅಬ್ಧಿಷ್ವಾವರ್ತವೃತ್ತ್ಯೇವ ಜಠರೇಷು ವಿವಲ್ಗಿತಮ್ ॥೧೫॥
ಸುಪ್ತಂ ಮೇದಸ್ಸು ಶುಭ್ರೇಷು ಶೇಷಾಙ್ಗೇಷ್ವಿವ ಶೌರಿಣಾ ।
ಸ್ವಾದಿತಶ್ಚಾಙ್ಗಗನ್ಧೋನ್ತಃ ಪೀತಶಕ್ತ್ಯಾಮೃತಂ ಯಥಾ ॥೧೬॥
ತರುಗುಲ್ಮೌಷಧಾದೀನಾಂ ಹೃದೌಜಾನ್ಯನಿಲಶ್ರಿಯಾ ।
ಪರಿಭುಕ್ತಾನ್ಯಶುಕ್ಲಾನಿ ಹಿಂಸಯೋಧೀಕೃತಾನಿ ಚ ॥೧೭॥
ಅಥೋ ಜೀವಮಯೀ ಸೂಚೀ ಸ್ಯಾಮಿತಿ ಸ್ಥಾವರೇಣ ಸಾ ।
ಸಮ್ಪನ್ನಾ ತಾಪಸೀ ಸೂಚೀ ಚೇತನಾ ಪಾವನೀ ಸಿತಾ ॥೧೮॥

ಗಾಜಿನಂತೆ ನಿರ್ಮಲವಾದ ಅಂತರಿಕ್ಷಮಾರ್ಗದಲ್ಲಿಯೂ ದಿಕ್ಕುಗಳಲ್ಲಿಯೂ ವಾಯುವು ಹಾರಾಡುವಂತೆ, ಸಮಸ್ತವಾದ ಪ್ರಾಣಿಗಳ ಅಂಗಗಳ ನಾಡಿಗಳಲ್ಲಿಯೂ ಸೇರಿ ಮೇಲಕ್ಕೆ ಹಾರುತಲೂ ಕೆಳಕ್ಕಿಳಿಯುತಲೂ ಇದ್ದಳು ॥೧೨॥

ವಿರಾಟ್ಪುರುಷನ ಹೃದಯದಲ್ಲಿ ಸಮಷ್ಟಿರೂಪವಾದ ಪ್ರಾಣವಾಯುವು ಹೇಗೆ ಸ್ಫುರಿಸುವುದೋ, ಹಾಗೆ ಅವಳು ಪ್ರತಿಯೊಂದು ದೇಹವೆಂಬ ಮನೆಯಲ್ಲಿಯೂ ಸಂಚರಿಸಿದಳು ॥೧೩॥

ಅವಳು ಪ್ರತಿದೇಹದಲ್ಲಿಯೂ ಸಂಚರಿಸಿದುದು ಹೇಗೆಂದರೆ:—ಸಮಸ್ತವಾದ ಪ್ರಾಣಿಗಳಲ್ಲಿಯೂ ವಾಯುಚಲನೆಗಳು ಹೇಗೆ ಸ್ಫುರಿಸುತವೆಯೋ, ಹಾಗೆ ಚಿಚ್ಛಕ್ತಿಯೂ ಸ್ವಚ್ಛಂದವಾಗಿ ಸ್ಫುರಿಸುತಿರುವುದು. ಇಂತಹ ಚಿಚ್ಛಕ್ತಿಯೆಂಬ ದೀಪದಿಂದ ಪ್ರಕಾಶಿಸುತ, ಗೃಹಿಣಿಯಾದವಳು ದೀಪದಿಂದ ಪ್ರಕಾಶಮಾನಳಾಗಿ ತನ್ನ ಮನೆಯೊಳಗೆ ಸಂಚರಿಸುವಂತೆ, ಈ ಕರ್ಕಟಿಯು ಪ್ರಾಣಿಗಳ ಶರೀರಗಳಲ್ಲಿ ಸಂಚರಿಸಿದಳು ॥೧೪॥

ನೀರಿನೊಳಗೆ ದ್ರವರೂಪವಾದ ಶಕ್ತಿಯು ವಿಹರಿಸುವಂತೆ, ರಕ್ತಮಧ್ಯದಲ್ಲಿ ಇವಳು ವಿಹರಿಸಿದಳು ; ಸಮುದ್ರಮಧ್ಯದಲ್ಲಿ ಸುಳಿಗಳು ಸುಳಿದಾಡುವಂತೆ, ಇವಳು ಪ್ರಾಣಿಗಳ ಜಠರಗಳಲ್ಲಿ ಹೊರಳಾಡಿದಳು ॥೧೫॥

ಆದಿಶೇಷನ ಶರೀರದಮೇಲೆ ನಾರಾಯಣನು ಮಲಗುವಂತೆ, ಶುಭ್ರವಾದ ಮೇದಸ್ಸುಗಳ ಮೇಲೆ ಮಲಗಿಕೊಂಡಳು ; ಪ್ರಾಣಿಗಳ ಅವಯವಗಳಲ್ಲಿರುವ ಗಂಧವನ್ನು, ಇವಳು ತನ್ನ ಪಾನಶಕ್ತಿಯಿಂದ, ಅಮೃತದಂತೆ ಪಾನಮಾಡಿದಳು ॥೧೬॥

ಅವಳು ವಾಯುರೂಪವನ್ನು ಧರಿಸಿದವಳಾಗಿ, ವೃಕ್ಷ ಗುಲ್ಮ ಲತಾದಿಗಳ ಹೃದಯದಲ್ಲಿರುವ ನೀಲರಕ್ತಾದಿ ವರ್ಣಗಳಾದ ರಸಗಳನ್ನು, ಪೀಡಿಸಿ ಹೊರಹೊರಡಿಸಿ ಉಪಭೋಗಿಸಿದಳು ॥೧೭॥

ಹೀಗೆ ಕೆಲವು ಕಾಲವಿದ್ದು, ಬಳಿಕ, ಜೀವಸೂಚಿಯಾಗಬೇಕೆಂಬ ನಿಶ್ಚಲಸಂಕಲ್ಪದಿಂದ, ನಿಷ್ಕಲ್ಮಷಳಾದ ಪರಿಶುದ್ಧಳಾದ ತಾಪಸಿಯಾದ ಸೂಚಿಯಾದಳು ॥೧೮॥

ಅದೃಶ್ಯಯಾ ತಯಾ ಚೇಹ ಮಾರುತೋಗ್ರತುರಙ್ಗಯಾ ।
ಅಯಸ್ಸೂಚ್ಯಾನಿಲತಯಾ ವಹನ್ತ್ಯಾ ದಿಕ್ಷ್ವರುದ್ಧಯಾ ॥೧೯॥
ಪೀತಂ ಭುಕ್ತಂ ವಿಲಸಿತಂ ದತ್ತಂ ದಾಪಿತಮಾಹೃತಮ್ ।
ನರ್ತಿತಂ ಗೀತಮುಷಿತಂ ಅನನ್ತೈಃ ಪ್ರಾಣಿದೇಹಕೈಃ ॥೨೦॥
ಅದೃಶ್ಯಯಾಽಶರೀರಿಣ್ಯಾ ಮನಃಪವನದೇಹಯಾ ।
ಕೃತಮಾಕಾಶರೂಪಿಣ್ಯಾ ನ ತದಸ್ತಿ ನ ಯತ್ ತಯಾ ॥೨೧॥
ಮತ್ತಯಾ ಶಕ್ತಯಾಸ್ವಾದರಸಾಚ್ಚಲಿತಮೇತಯಾ ।
ಕಾಲಮಾಲಾನಮಾಶ್ರಿತ್ಯ ಕರಿಣ್ಯೇವ ವಿವಲ್ಗಿತಮ್ ॥೨೨॥
ಕಲ್ಲೋಲಬಹುಳಾಧೂತದೇಹದೃಷ್ಟನದೀಷ್ವಲಮ್ ।
ವೇಗೈರ್ವೈಧುರ್ಯಕಾರಿಣ್ಯಾ ಮತ್ತಯಾ ಮಕರಾಯಿತಮ್ ॥೨೩॥
ಅಶಕ್ತಯಾ ನಿಗಿರಿತುಂ ಮೇದೋಮಾಂಸಂ ತಥಾ ಹೃದಿ ।
ನೂನಂ ರುದಿತಮರ್ಥಾಢ್ಯವೃದ್ಧಾತುರಧಿಯಾ ಯಥಾ ॥೨೪॥

ಆಗ ಆವಳು ಅಯಸಸೂಚಿಯನ್ನು ಉಪಕರಣವಾಗಿ ಮಾಡಿಕೊಂಡು, ವಾಯುವೆಂಬ ದೊಡ್ಡ ಕುದುರೆಯನ್ನು ಹತ್ತಿ, ಯಾರಿಗೂ ಕಾಣಿಸದಂತೆ ಸಮಸ್ತದಿಕ್ಕುಗಳಲ್ಲಿಯೂ ತಡೆಯಿಲ್ಲದವಳಾಗಿ ತನ್ನಿಚ್ಛೆ ಬಂದಂತೆ—ಪಾನಮಾಡಿದಳು; ಊಟಮಾಡಿದಳು; ವಿಲಾಸಪಟ್ಟಳು; ದಾನಮಾಡಿದಳು; ಮತ್ತೊಬ್ಬರಿಂದ ದಾನಮಾಡಿಸಿದಳು; ಬೇಕಾದಷ್ಟು ಸಂಪಾದಿಸಿದಳು; ನರ್ತನಮಾಡಿದಳು; ಗಾನ ಮಾಡಿದಳು; ಅಸಂಖ್ಯಾತವಾದ ಪ್ರಾಣಿಸಮೂಹಗಳೊಡನೆ ವಾಸಮಾಡಿದಳು ॥೧೯—೨೦॥

ಶರೀರರಹಿತಳಾಗಿ ಅದೃಶ್ಯಳಾಗಿರುವ ಆ ಸೂಚಿಯು, ಮನೋದೇಹವನ್ನೂ ವಾಯುದೇಹ ವನ್ನೂ ಹೊಂದಿದವಳಾಗಿ, ಆಕಾಶರೂಪಳಾಗಿ, ಮಾಡದಿರತಕ್ಕ ಕೆಲಸವೊಂದೂ ಇಲ್ಲವೇ ಇಲ್ಲ ವೆಂದು ತಿಳಿಯಬೇಕು ॥೨೧॥

ವಸ್ತುತಃ ಇಷ್ಟುಮಟ್ಟಿಗೆ ಶಕ್ತಳಾಗಿದ್ದರೂ, ಆ ಸೂಚಿಯು, ಪ್ರಾಣಿಗಳ ರಕ್ತವನ್ನು ಆಸ್ವಾದನೆಮಾಡಿ ಮತ್ತಳಾಗಿದ್ದುದರಿಂದ, ತದನುಗುಣವಾಗಿ ಚಲಿಸುತ, ಹೆಣ್ಣಾನೆಯು ಬಂಧಸ್ತಂಭವನ್ನು ಹೊಂದಿ ಸ್ತಬ್ಧವಾಗಿರುವಂತೆ, ಕಾಲಶಕ್ತಿಯನ್ನು ಮೀರಲಾರದೆ ಚೇಷ್ಟೆಮಾಡುತಿದ್ದಳು ॥೨೨॥

ಸುಖದುಃಖಾದಿಗಳೆಂಬ ತರಂಗಗಳಿಂದ ವ್ಯಾಪ್ತವಾಗಿರುವ ದೇಹವೆಂಬ ನದಿಗಳಲ್ಲಿ, ಮತ್ತಳಾದ ಈ ಕರ್ಕಟಿಯು, ಪ್ರಾಣಿಗಳಿಗೆ ವಿಶೇಷವಾಗಿ ಹಿಂಸೆಯುಂಟುಮಾಡುತ, ಮೊಸಳೆಯಂತೆ ಸಂಚರಿಸುತಿದ್ದಳು ॥೨೩॥

ಕೇವಲ ಧನಿಕರಾದವರು, ವೃದ್ಧರಾದಾಗಲೂ—ಪ್ರಬಲರೋಗಿಗಳಾದಾಗಲೂ—ತಮ್ಮ ಧನವನ್ನುಪಭೋಗಿಸುವ ಶಕ್ತಿಯಿಲ್ಲದೆ ಹೇಗೆ ಅಳುವರೋ ಹಾಗೆ, ಪ್ರಾಣಿಗಳ ಮೇದಸ್ಸನ್ನೂ ಮಾಂಸವನ್ನೂ ತಿನ್ನುವುದಕ್ಕೆ ಶಕ್ತಿಯಿಲ್ಲದೆ ಈ ಸೂಚಿಯು ಅಳುತಿದ್ದಳು ॥೨೪॥

ಅಜೋಷ್ಟ್ರಮೃಗಹಸ್ತ್ಯಶ್ವಸಿಂಹವ್ಯಾಘ್ರಾದಿ ನರ್ತಿತಮ್ |
ನರ್ತಕ್ಯೇವ ಚಿರಂ ರಙ್ಗೇ ವಲಯಾಙ್ಗದಮುಙ್ಗಕೇ ‖೨೫‖
ಬಹಿರನ್ತಶ್ಚ ವಾಯೂನಾಂ ಏಕತ್ವಮನುಜಾತಯಾ |
ಗನ್ಧಲೇಖಿಕಯೇವಾನ್ತಃ ಸ್ಥಿತಂ ದುರ್ಬಲಯಾ ತಯಾ ‖೨೬‖
ಮನ್ತ್ರೌಷಧಿತಪೋದಾನದೇವಪೂಜಾದಿಭಿರ್ಹತಾ |
ಬಹಿರ್ಗಿರಿನದೀತುಙ್ಗತರಙ್ಗವದುಪದ್ರುತಾ ‖೨೭‖
ದೀಪಪ್ರಭೇವಾವಿಜ್ಞಾತಗತಿರ್ಗತ್ವಾಶು ಲೀಯತೇ |
ಅಯಸ್ಸೂಚ್ಯಾಂ ಮಾತರೀವ ತತ್ರ ನಿರ್ವೃತಿಮೇತಿ ಸಾ ‖೨೮‖
ಸ್ವವಾಸನಾನುಸಾರೇಣ ಸರ್ವ ಆಸ್ಪದಮೀಹತೇ |
ಸೂಚಿತ್ವಮೇವ ರಾಕ್ಷಸ್ಯಾ ಸೂಚಿತ್ವೇನಾಸ್ಪದೀಕೃತಮ್ ‖೨೯‖
ಸರ್ವಾ ವಿಹೃತ್ಯಾಪಿ ದಿಶಃ ಸ್ವಮೇವಾಸ್ಪದಮಾಪದಿ |
ಜೀವಸೂಚೀ ಲೋಹಸೂಚೀಂ ಇವಾಯಾತಿ ಜಡೋ ಜನಃ ‖೩೦‖

ರಂಗಸ್ಥಲದಲ್ಲಿ ಬಂದು ನಿಂತಿರುವ ನರ್ತಕಿಯು—ತನ್ನ ಮೈಮೇಲಿರುವ ಬಳೆ ಅಂಗದ ಮುಂತಾದ ಆಭರಣಗಳನ್ನು ತನ್ನಿಚ್ಛೆಬಂದಂತೆ ಕುಣಿಯಿಸುವಹಾಗೆ, ಈ ಕರ್ಕಟಿಯು, ಆಡು ಒಂಟೆ ಜಿಂಕೆ ಆನೆ ಕುದುರೆ ಸಿಂಹ ಹುಲಿ--ಮುಂತಾದ ಪ್ರಾಣಿಗಳನ್ನೆಲ್ಲ ಆಕ್ರಮಿಸಿಕೊಂಡು ಕುಣಿಯಿಸುತಿದ್ದಳು ॥೨೫॥

ಪ್ರಾಣಿಗಳ ಒಳಗೂ ಹೊರಗೂ ಇರುವ ವಾಯುಗಳು ಒಟ್ಟುಗೂಡಿಬಿಟ್ಟಾಗ, ಈ ಸೂಚಿಯು ಆ ವಾಯುವಿಗಧೀನಳಾಗಿಬಿಟ್ಟು, ಪುಷ್ಪಾದಿಪರಿಮಳದಂತೆ, ಆ ವಾಯುವನ್ನನುಸರಿಸಿ ಸಂಚರಿಸಿದಳು ॥೨೬॥

ಪ್ರಾಣಿಗಳನ್ನು ಕೇವಲ ಬಾಧೆಪಡಿಸುತಿದ್ದಾಗ, ಮಂತ್ರ ಔಷಧಿ ತಪಸ್ಸು ದಾನ ದೇವಪೂಜೆ–ಇತ್ಯಾದಿಗಳಿಂದ ತಿರಸ್ಕರಿಸಲ್ಪಟ್ಟವಳಾಗಿ, ಗಿರಿನದಿಯ ದೊಡ್ಡ ಅಲೆಯಂತೆ ಒಳಗೆ ಪ್ರವೇಶಿಸದೆ ಹೊರಗೆ ಓಡಿಹೋಗುತಿದ್ದಳು ॥೨೭॥

ಒಂದೊಂದು ಸಮಯದಲ್ಲಿ, ದೀಪದ ಪ್ರಭೆಯಂತೆ, ಒಬ್ಬರಿಗೂ ಗೊತ್ತಾಗದ ಗತಿಯುಳ್ಳವಳಾಗಿ, ಅಯಸ್ಸೂಚಿಯೊಳಗೆ ಅಡಗಿಕೊಳ್ಳುವಳು; ತಾಯಿಯ ಮಡುಲಿನಲ್ಲಿ ಮಕ್ಕಳು ಸುಖಿಸುವಂತೆ, ಅಲ್ಲಿ ಅವಳು ವಿಶ್ರಾಂತಿಸುಖಪಡೆಯುತಿದ್ದಳು ॥೨೮॥

ಪ್ರಪಂಚದಲ್ಲಿ, ಸಮಸ್ತರೂ ತಮ್ಮ ವಾಸನಾನುಸಾರವಾಗಿ ಆಶ್ರಯವನ್ನಪೇಕ್ಷಿಸುವರು. ಈ ಕರ್ಕಟಿಯೆಂಬ ರಾಕ್ಷಸಿಯು, ತಾನು ಸೂಚಿಯಾಗಿದ್ದುದರಿಂದ, ತನ್ನ ವಿಶ್ರಾಂತಿಗೋಸ್ಕರ ಅಯಸಸೂಚಿಯನ್ನಾಶ್ರಯಮಾಡಿಕೊಂಡಳಲ್ಲವೆ! ॥೨೯॥

ಲೋಕದಲ್ಲಿ, ಮೂರ್ಖರಾದವರು, ಸಮಸ್ತದಿಕ್ಕುಗಳಲ್ಲಿಯೂ ವಿಹರಿಸಿ, ಕೊನೆಗೆ ವಿಪತ್ತು ಬಂದಾಗ ತಮ್ಮ ಪೂರ್ವದ ಆವಾಸಕ್ಕೇ ಸೇರುವರು. ಜೀವಸೂಚಿಯು ದಿಕ್ಕುಗಳಲ್ಲೆಲ್ಲ ಭ್ರಮಿಸಿ ಕೊನೆಗೆ ಅಯಸಸೂಚಿಯನ್ನಾಶ್ರಯಿಸಿದುದೇ ಇದಕ್ಕುದಾಹರಣೆಯಲ್ಲವೆ ! ॥೩೦॥

ಏವಂ ಪ್ರಯುತಮಾನಾ ಸಾ ವಿಹರನ್ತೀ ದಿಶೋ ದಶ ।
ಮಾನಸಂ ತೃಪ್ತಿಮಾಯಾತಾ ನ ಶಾರೀರೀಂ ಕದಾಚನ ॥೨೧॥
ಸತಿ ಧರ್ಮಿಣಿ ಧರ್ಮಾಹಿ ಸಮ್ಭವನ್ತೀಹ ನಾಸತಿ ।
ಶರೀರಂ ವಿದ್ಯತೇ ಯಸ್ಯ ತಸ್ಯ ತತ್ ಕಿಲ ತೃಪ್ಯತಿ ॥೨೨॥
ಅಥ ತೃಪ್ತಸ್ಯ ದೇಹಸ್ಯ ಸ್ಮರಣಾತ್ ಪ್ರಾಕ್ತನಸ್ಯ ಸಾ ।
ಬಭೂವ ದುಃಖಿತಸ್ವಾನ್ತಾ ಪೂರ್ಣೋದರಸುಖಾರ್ಥಿನೀ ॥೨೩॥
ತತಃ ಪ್ರಾಕ್ತನದೇಹಾರ್ಥಂ ಕರಿಷ್ಯೇ ವಿಪುಲಂ ತಪಃ ।
ಇತಿ ಸಂಚಿನ್ತ್ಯ ತಪಸೇ ದೇಶಂ ನಿರ್ಣೀಯ ಸಾತ್ಮನಾ ॥೨೪॥
ವಿವೇಶಾಕಾಶಗೃಧ್ರಸ್ಯ ಹೃದಯಂ ತರುಣಸ್ಯ ಸಾ ।
ಪ್ರಾಣಮಾರುತಮಾರ್ಗೇಣ ಖಂ ಖಗೀವ ಬಿಲೇಶಯಾ ॥೨೫॥
ಗೃಧ್ರಃ ಸ್ವಾಮಯಸೂಚಿತ್ವಂ ಕಚ್ಚಿದೇತತ್ ಸಮಾಶ್ರಿತಃ ।
ನಿತಾನ್ತಪ್ರೇರಿತಃ ಸೂಚ್ಯಾ ಕರ್ತುಂ ಮನಸಉಪಾದದೇ ॥೨೬॥
ಸೂಚೀಮಾದಾಯ ಗೃಧ್ರೋಽಸೌ ಯಯೌ ತಚ್ಚಿನ್ತಿತಂ ಗಿರಿಮ್ ।

ಅಯ್ಯಾ! ಮಹೇಂದ್ರ! ಈರೀತಿಯಾಗಿ ಪ್ರಯುಕ್ತಪಟ್ಟು ಹತ್ತು ದಿಕ್ಕುಗಳಲ್ಲಿಯೂ ವಿಹರಿಸುತ್ತಿರುವ ಆ ಜೀವಸೂಚಿಯು, ಮನಸ್ಸಿನಲ್ಲಿ ಮಾತ್ರ ತೃಪ್ತಿಹೊಂದಿದಳಲ್ಲದೆ, ಶರೀರದಲ್ಲಿ ತೃಪ್ತಿಹೊಂದಲಿಲ್ಲ (ಹೊಟ್ಟೆತುಂಬಲಿಲ್ಲ) ॥೨೧।

ಧರ್ಮಿಯಾದ (ಧರ್ಮವುಳ್ಳ) ಪದಾರ್ಥವೊಂದಿದ್ದರಲ್ಲವೆ— ಅದರ ಧರ್ಮಗಳೆಲ್ಲ ಸಂಭವಿಸುವುವು! ಧರ್ಮಿಯೇ ಇಲ್ಲದಿದ್ದರೆ ಧರ್ಮಗಳೆಲ್ಲಿರುವುವು? ಪ್ರಕೃತದಲ್ಲಿ, ಯಾರಿಗೆ ಶರೀರವಿದೆಯೋ, ಅವರಿಗೆ ಅದು ತೃಪ್ತಿಪಡುವುದೆಂದು ಹೇಳಬೇಕಲ್ಲವೆ! ಈ ಸೂಚಿಗಾದರೋ, ಶರೀರವೇ ಇಲ್ಲದುದರಿಂದ, ಅದರ ತೃಪ್ತಿಯೂ ಇಲ್ಲವಾಯ್ತು ॥೨೨॥

ಬಳಿಕ ಬಂದಾನೊಂದು ಸಮಯದಲ್ಲಿ, ಆ ಸೂಚಿಯು, ಪೂರ್ವದಲ್ಲಿ ವಿಶೇಷವಾಗಿ ತೃಪ್ತಿಪಡುತಿದ್ದ ತನ್ನ ಪ್ರಾಕ್ತನ ದೇಹವನ್ನು ಸ್ಮರಿಸಿಕೊಂಡು, ಈಗಲೂ ಅರೀತಿಯಾಗಿ ಹೊಟ್ಟೆತುಂಬಿ ಸುಖಪಡಬೇಕೆಂದು ಇಚ್ಛಿಸಿದವಳಾಗಿ, ಮನಸ್ಸಿನಲ್ಲಿ ಬಹು ದುಃಖಪಟ್ಟಳು ॥೨೩॥

ಅನಂತರ, ಅವಳು, ಪೂರ್ವದ ದೇಹವೇ ನನಗೆ ಮತ್ತೆ ಬರುವುದಕ್ಕಾಗಿ ಅತ್ಯಧಿಕವಾದ ತಪಸ್ಸನ್ನು ಮಾಡುವೆನೆಂದು ನಿಶ್ಚಯಿಸಿಕೊಂಡು, ಅಂತರಿಕ್ಷದಲ್ಲಿ ಹಾರಿಹೋಗುತ್ತಿದ್ದ ತರುಣವಾದ ಒಂದು ಹದ್ದನ್ನು ನೋಡಿ, ಗೂಡಿನಲ್ಲಿದ್ದ ಹಕ್ಕಿಯು ಆಕಾಶಕ್ಕೆ ಹಾರುವಂತೆ, ಪ್ರಾಣವಾಯುಮಾರ್ಗದಿಂದ ಆ ಹದ್ದಿನ ಹೃದಯವನ್ನು ಪ್ರವೇಶಿಸಿದಳು ॥೨೪ — ೨೫॥

ಆಗ, ಎಲ್ಲಿಯೋ ಹೋಗುತ್ತಿದ್ದ ಆ ಗೃಧ್ರವು, ತನ್ನೊಳಗೆ ಪ್ರವೇಶಿಸಿರುವ ಆ ಜೀವಸೂಚೀಭಾವವನ್ನು ತಾನೂ ಹೊಂದಿಬಿಟ್ಟು, ಆ ಸೂಚಿಯಿಂದ ಪ್ರೇರಣೆಯಾದಂತೆಲ್ಲ ಅವಳ ಕೆಲಸವನ್ನು ಮಾಡುವುದಕ್ಕೆ ಮನಗೊಡುತ ಬಂದಿತು ॥೨೬॥

ಬಳಿಕ ಆ ಗೃಧ್ರವು, ಅಂತರ್ಗತವಾಗಿರುವ ಸೂಚಿಪಿಶಾಚಿಯು ನಿವೃತ್ತಿಕಾಲವುಪಸ್ಥಿತವಾ

ಅನ್ತಃ ಸೂಚಿಪಿಶಾಚ್ಯನ್ತೋ ನುನ್ನೋಽಬ್ದ ಇವ ವಾಯುನಾ ॥೩೭॥
ತತ್ರಾಜನೇ ಮಹಾರಣ್ಯೇ ಸ್ಥಾಪಯಾಮಾಸ ತಾಮಸೌ ।
ಸರ್ವಸಙ್ಕಲ್ಪರಹಿತೇ ಪದೇ ಯೋಗೀವ ಚೇತನಾಮ್ ॥೩೮॥
ಏಕೇನೈವಾಶು ಸಾ ತೇನ ಪಾದಪ್ರಾನ್ತೇನ ಸುಸ್ಥಿತಾ ।
ಸಂಪ್ರತಿಷ್ಠಾಪಿತೇವಾದ್ರಿಮೂರ್ಧ್ನಿ ಗೃಧ್ರೇಣ ದೇವತಾ ॥೩೯॥
ರಜಃಕಣಗೃಹಸ್ಥಾಣುಶಿರಸ್ಯೇಕೇನ ಸಾಣುನಾ ।
ಪಾದೇನಾತಿಷ್ಠದುದ್ಗ್ರೀವಂ ಶಿಖೀವ ಗಿರಿಮೂರ್ಧನಿ ॥೪೦॥
ಉತ್ಥಿತಾಂ ಸ್ಥಾಪಿತಾಂ ಸೂಚೀಂ ಗೃಧ್ರೇಣ ಜೀವಸೂಚಿಕಾ ।
ದೃಷ್ಟ್ವೈವ ಬಹಿರ್ವಿನಿರ್ಗನ್ತುಂ ಖಗದೇಹಾತ್ ಪ್ರಚಕ್ರಮೇ ॥೪೧॥
ಖಗದೇಹಾನ್ನಿರ್ಜಗಾಮ ಸೂಚೀ ಪ್ರೋನ್ಮುಖಚೇತನಾ ।
ಪವನಾದ್ಗನ್ಧಲೇಖೇವ ಘ್ರಾಣವಾತಲವೋನ್ಮುಖೀ ॥೪೨॥
ಜಗಾಮ ಗೃಧ್ರಃ ಸ್ವಂ ದೇಶಂ ಭಾರಂ ತ್ಯಕ್ತ್ವೇವ ಭಾರಿಕಃ ।
ನಿವೃತ್ತವ್ಯಾಧಿರಿವ ಸಃ ಬಭೂವಾನ್ತರನಾಕುಲಃ ॥೪೩॥

ಗಿರಲಾಗಿ, ವಾಯುವಿನಿಂದ ಪ್ರೇರಿತವಾದ ಮೇಘದಂತೆ, ಆ ಸೂಚಿಯನ್ನು ಹೊತ್ತುಕೊಂಡು, ಅವಳು ಮನಸ್ಸಿನಲ್ಲಿ ಯೋಚಿಸಿದ್ದ ಪರ್ವತಕ್ಕೆ ಹೋಯಿತು ॥೩೭॥

ಸಕಲವಿಧವಾದ ಸಂಕಲ್ಪಗಳಿಂದಲೂ ವಿಯುಕ್ತವಾದ ಪರಮಪದದಲ್ಲಿ ಯೋಗಿಯಾದವನು—ತನ್ನ ಬುದ್ಧಿವೃತ್ತಿಯನ್ನಿರಿಸುವಂತೆ, ಆ ಗೃಧ್ರವು, ಆ ಪರ್ವತದೊಳಗೆ ನಿರ್ಜನವಾದ ದೊಡ್ಡ ಅರಣ್ಯದಲ್ಲಿ ಆ ಸೂಚಿಯನ್ನಿರಿಸಿತು ॥೩೮॥

ಅಲ್ಲಿ ಒಂದೇ ಒಂದು ತುದಿಗಾಲಿನಿಂದ ತಟ್ಟನೆ ನೆಲೆಸಿದ ಆ ಸೂಚಿಯು, ಪರ್ವತದ ತುದಿಯಲ್ಲಿ ಗೃಧ್ರನಿಂದ ಸ್ಥಾಪಿಸಲ್ಪಟ್ಟ ಒಂದು ದೇವತೆಯೋ ಎಂಬಂತೆ ತೋರುತಿದ್ದಳು ॥೩೯॥

ಅಲ್ಲಿ ಅವಳು, ರಜಃಕಣವೆಂಬ ಮನೆಯೊಳಗಿರುವ ಪರಮಾಣುವಿನ ತಲೆಯಮೇಲೆ, ತನ್ನ ಸೂಕ್ಷ್ಮವಾದ ಕಾಲನ್ನಿಟ್ಟುಕೊಂಡು, ಪರ್ವತಶಿಖರದಲ್ಲಿ ಕುಳಿತಿರುವ ನವಿಲಿನಂತೆ ಕಾಣಿಸುತ, ಕತ್ತೆತ್ತಿಕೊಂಡು ನಿಂತಿದ್ದಳು ॥೪೦॥

ಬಳಿಕ, ಆ ಹದ್ದಿನಿಂದ ಅಲ್ಲಿರಿಸಲ್ಪಟ್ಟು ಊರ್ಧ್ವಮುಖವಾಗಿ ನಿಂತಿರುವ ಲೋಹಸೂಚಿಯನ್ನು ನೋಡಿ, ಜೀವಸೂಚಿಯು, ಆ ಹದ್ದಿನ ದೇಹದಿಂದ ಆಚೆಗೆ ಹೊರಡಲುಪಕ್ರಮಿಸಿದಳು॥೪೧॥

ವಾಯುವಿನಲ್ಲಿರತಕ್ಕ ಪುಷ್ಪವಾಸನೆಯು—ಪುರುಷರ ಮೂಗಿನಿಂದ ಹೊರಡುವ ಸಣ್ಣವಾಯುವಿಗಭಿಮುಖವಾಗಿ ಹೊರಡುವಂತೆ, ಆ ಸೂಚಿಯು ಪಕ್ಷಿದೇಹದ ದೆಸೆಯಿಂದ ಊರ್ಧ್ವಮುಖವಾಗಿ ಹೊರಟುಬಿಟ್ಟಳು ॥೪೨॥

ಅನಂತರ, ಹೊರೆಹೊರತಕ್ಕವನು ಆ ಹೊರೆಯನ್ನಿಳಿಯಿಸಿ ಹೊರಟುಹೋಗುವಂತೆ, ಆ ಹದ್ದು ತನ್ನ ಅಭಿಮತವಾದ ಸ್ಥಳಕ್ಕೆ ಹೊರಟುಹೋಯಿತು. ಆಗ ಅದು ರೋಗಕಳೆದವನಂತೆ ಸುಖಿತವಾಯಿತು ॥೪೩॥

ಅತಃ ಸೂಚಿಸ್ತ್ವಯಾಧಾರಃ ತಪಸೇ ಪರಿಕಲ್ಪಿತಾ |
ದೃಢಃ ಸುಸದೃಶೋರ್ಥಾನಾಂ ವಿನಿಯೋಗೋ ಹಿ ರಾಜತೇ ||೪೪||
ನ ಹ್ಯಮೂರ್ತಸ್ಯ ಸಿಧ್ಯನ್ತಿ ವಿನಾಧಾರಂ ಕಿಲ ಕ್ರಿಯಾಃ |
ಇತ್ಯಾಧಾರೈಕನಿಷ್ಠತ್ವಂ ಆಶ್ರಿತ್ಯಾಸೌ ತಪಸ್ಥಿತಾ ||೪೫||
ಜೀವಸೂಚೀ ಲೋಹಸೂಚೀಂ ಪಿಶಾಚೀ ಶಿಂಶುಪಾಮಿವ |
ಸರ್ವತೋ ವಲಯಾಮಾಸ ವಾತ್ಯೇವಾಮೋದಲೇಖಿಕಾಮ್ ||೪೬||
ತತಸ್ತತಃಪ್ರಭೃತ್ಯೇಷಾ ಸೂಚೀ ದೀರ್ಘತಪಸ್ವಿನೀ |
ಅರಣ್ಯಾನ್ಯಾಂ ಸ್ಥಿತಾ ಶಕ್ರ ತತ್ರ ವರ್ಷಗಣಾನ್ ಬಹೂನ್ ||೪೭||
ತಸ್ಯೈವರಾರ್ಥಂ ಯತ್ನಂ ತ್ವಂ ಕುರು ಕರ್ತವ್ಯಕೋವಿದ |
ಚಿರೇಣ ಸಂಭೃತಂ ಲೋಕಂ ಅಲಂ ದಗ್ಧುಂ ಹಿ ತತ್ತಪಃ ||೪೮||

ಶ್ರೀವಸಿಷ್ಠ ಉವಾಚ.

ಇತಿ ನಾರದತಃ ಶ್ರುತ್ವಾ ಶಕ್ರಃ ಸೂಚೀನಿರೀಕ್ಷಣೇ |
ಮಾರುತಂ ಪ್ರೇಷಯಾಮಾಸ ದಶದಿಙ್ಮಂಡಲಾನ್ಯಥ ||೪೯||
ಜಗಾಮಾಥ ಮರುತ್ ಸಂವಿದಾತ್ಮನಾ ತಾಮವೇಕ್ಷಿತುಮ್ |

ಯಾವ ಪದಾರ್ಥಕ್ಕಾದರೂ, ದೃಢವಾಗಿಯೂ ತನಗನುಗುಣವಾಗಿಯೂ ಇರುವ ಸ್ಥಳದಲ್ಲಿ ವಿನಿಯೋಗವು ಪ್ರಕಾಶಿಸುತ್ತದೆಯಲ್ಲವೆ! ಅದುಕಾರಣವೇ, ಈ ಜೀವಸೂಚಿಯು, ಇಂತಹ ಲೋಹಸೂಚಿಯನ್ನು ಆಧಾರವನ್ನಾಗಿ ಕಲ್ಪಿಸಿಕೊಂಡಳು ||೪೪||

ಶರೀರವೇ ಇಲ್ಲದ ಪದಾರ್ಥಕ್ಕೆ, ಸರಿಯಾದ ಆಧಾರವೂ ಇಲ್ಲದಿದ್ದರೆ, ಯಾವ ಕೆಲಸವೂ ಸಿದ್ಧಿಸುವುದಿಲ್ಲವಷ್ಟೆ! ಅದುಕಾರಣ, ಆ ಸೂಚಿಯು, ತನಗೆ ತಕ್ಕಂತಹ ಆಧಾರವನ್ನು ದೃಢವಾಗಿ ಅವಲಂಬಿಸಿ ತಪಸ್ಸಿನಲ್ಲಿ ನಿರತಳಾದಳು ||೪೫||

ಪಿಶಾಚವು ಶಿಂಶುಪಾವೃಕ್ಷವನ್ನು ಆಶ್ರಯಿಸುವಂತೆಯೂ, ವಾಯುವು ಗಂಧವನ್ನು ವ್ಯಾಪಿಸಿಕೊಳ್ಳುವಂತೆಯೂ, ಆ ಜೀವಸೂಚಿಯು ಅಯಸ್ಸೂಚಿಯನ್ನು ಸುತ್ತಲೂ ಆವರಿಸಿಕೊಂಡಿತು ||

ಅದುಕಾರಣ, ಅಯ್ಯಾ ಇಂದ್ರನೆ! ಅದುಮೊದಲುಗೊಂಡು, ಈಸೂಚಿಯು, ದೀರ್ಘವಾಗಿ ತಪಸ್ಸುಮಾಡುತ, ಆ ಅರಣ್ಯದಲ್ಲಿ ಅನೇಕಸಹಸ್ರವರ್ಷಗಳು ವಾಸಮಾಡಿಕೊಂಡಿರುವಳು ||

ಕರ್ತವ್ಯಾಂಶವನ್ನು ಚೆನ್ನಾಗಿ ಬಲ್ಲವನಾದ ಎಲೈ ಮಹೇಂದ್ರನೆ! ಅವಳಿಗೆ ವರಪ್ರದಾನ ಮಾಡುವ ವಿಷಯದಲ್ಲಿ ನೀನು ಸರಿಯಾಗಿ ಪ್ರಯತ್ನಪಡಬೇಕು. ಬಹುಕಾಲದಿಂದ ನೆಲೆಸಿರುವ ಈ ಲೋಕವನ್ನೆಲ್ಲ, ಅವಳ ತಪಸ್ಸು, ಒಂದುನಿಮಿಷದಲ್ಲಿ ಸುಟ್ಟುಬಿಡಲು ಸಮರ್ಥವಾಗಿರುವುದು ||

ಶ್ರೀವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಈರೀತಿಯಾಗಿ ನಾರದರು ಹೇಳಿದ ಮಾತನ್ನು ಕೇಳಿದಬಳಿಕ, ದೇವೇಂದ್ರನು, ಆಸೂಚಿಯನ್ನು ದಶದಿಕ್ಕುಗಳಲ್ಲಿಯೂ ಹುಡುಕುವುದಕ್ಕೋಸ್ಕರ ವಾಯುವನ್ನು ಕಳುಹಿಸಿದನು ||೪೯||

ಅನಂತರ, ವಾಯುವು ತನ್ನ ಜ್ಞಾನದೇಹದಿಂದ ಅವಳನ್ನು ಹುಡುಕುವುದಕ್ಕಾಗಿ ಹೊರಟನು;

ಅಥಾಮುಚ್ಯ ನಭೋಮಾರ್ಗಂ ವಿಚಚಾರ ತ್ವರಾನ್ವಿತಃ ॥೫೦॥
ಸಾ ತಸ್ಯ ಸಂವಿತ್ ಕ್ಷಿಪ್ರಾರ್ಥೇನೈವ ಸರ್ವಗತಾ ಸತೀ ।
ಪರಮಾರ್ಚಿರಿವಾವಿಘ್ನಂ ಸಹಸೈವ ದದರ್ಶ ಹ ॥೫೧॥
ಭೂಮೇಃ ಸಪ್ತಸಮುದ್ರಾನ್ತೇ ನಿಬದ್ಧಾಂ ವಿಪುಲಸ್ಥಲೀಮ್ ।
ಲೋಕಾಲೋಕಾದ್ರಿರಸನಾಂ ತತೋ ಮಣಿಮಯೋಪಮಮ್ ॥೫೨॥
ಸ್ವಾದೂದಕಾಬ್ಧಿವಲಯಂ ಸಕೋಟರಕಕುಬ್ಗಣಮ್ ।
ಪುಷ್ಕರದ್ವೀಪವಲಯಂ ತದನ್ತರ್ಗಿರಿಮಣ್ಡಲೇ ॥೫೩॥
ಮದಿರಾಮ್ಭೋಧಿವಲಯಂ ತಜ್ಜಲೇ ಚಿರಸಂಸ್ಥಿತಮ್ ।
ಗೋಮೇದದ್ವೀಪಕಟಕಂ ತನ್ಮಧ್ಯವಿಷಯವ್ರಜಮ್ ॥೫೪॥
ಇಕ್ಷೂದಕಾಬ್ಧಿಪರಿಖಂ ಶಾನ್ತಂ ಗಿರಿಗಣಾನ್ತರಮ್ ।
ಕ್ರೌಞ್ಚದ್ವೀಪೋರ್ವರಾಪೀಠಂ ಶಾನ್ತಂ ಗತಗಿರಿಕ್ರಮಮ್ ॥೫೫॥
ಕ್ಷೀರಾಬ್ಧಿಮುಕ್ತಾವಲಯಂ ಸಮಧ್ಯಗತನಾಯಕಮ್ ।
ಶ್ವೇತಾಖ್ಯದ್ವೀಪವಲಯಂ ಸಂಭೂತಪ್ರವಿಭಾಗಕಮ್ ॥೫೬॥
ತತೋ ಘೃತೋದವಲಯಂ ಸ್ವಾನ್ತಸ್ಥಪುರಮನ್ದಿರಮ್ ।
ಕುಶದ್ವೀಪವೃತಿವ್ಯಾಪ್ತಂ ಸಮಹಾಶೈಲಕೋಟರಮ್ ॥೫೭॥
ದಧ್ಯಮ್ಭೋರಾಶಿರಶನಾಸಾನ್ತಾಮ್ಬರಪುರೋದರಮ್ ।
ಶಾಕದ್ವೀಪೋರ್ವರಾಕಾರಂ ಸಾನ್ತಸ್ಥವಿಷಯಾನ್ತರಮ್ ॥೫೮॥

ಆಮೇಲೆ ಅಂತರಿಕ್ಷಮಾರ್ಗವನ್ನು ಹೊಂದಿ, ಕೇವಲ ತ್ವರಾಯುಕ್ತನಾಗಿ ಸಂಚರಿಸಲುಪಕ್ರಮಿಸಿದನು ॥೫೦॥

ಆ ವಾಯುವಿನ ಜ್ಞಾನಶರೀರವು, ಬ್ರಹ್ಮತೇಜಸ್ಸಿನಂತೆ ಸರ್ವತ್ರ ವ್ಯಾಪ್ತವಾದುದಾಗಿ, ಕೇವಲ ತ್ವರೆಯೊಡಗೂಡಿ, ನಿರ್ವಿಘ್ನವಾಗಿ ಸಮಸ್ತ ಲೋಕಗಳಲ್ಲಿಯೂ ನೋಡುತಬಂದಿತು ॥೫೧॥

ಆ ವಾಯುಜ್ಞಾನದೇಹವು,—ಪ್ರಥಮತಃ ಭೂಮಂಡಲವನ್ನೂ, ಬಳಿಕ ಅದರ ಸುತ್ತಲಿರುವ ಸಪ್ತಸಮುದ್ರವಲಯವನ್ನೂ, ಅದರಾಚೆಯಿರುವ ಲೋಕಾಲೋಕ ಪರ್ವತದ ವಿಶಾಲವಾದ ಪ್ರದೇಶವನ್ನೂ (೧) ಆಮೇಲೆ ನಿರ್ಮಲವಾಗಿ ಮಣಿಮಯದಂತೆ ಕಾಣಿಸುವ ಶುದ್ಧೋದಕಸಮುದ್ರಮಂಡಲವನ್ನೂ, ಗುಹೆಗಳೊಡಗೂಡಿದ ದಿಙ್ಮಂಡಲವನ್ನೂ, ಅದರೊಳಗೆ ಪರ್ವತಸಮೂಹದಲ್ಲಿ ಪುಷ್ಕರದ್ವೀಪವನ್ನೂ, ಆಮೇಲೆ ಸುರಾಸಮುದ್ರವನ್ನೂ, ಅದರೊಳಗೆ ಚಿರಕಾಲಸ್ಥಿತವಾದ ಗೋಮೇದದ್ವೀಪವನ್ನೂ, ಅದರೊಳಗಣ ದೇಶಸಮೂಹವನ್ನೂ, ಇಕ್ಷುಸಮುದ್ರವನ್ನೂ, ಅದರೊಳಗೆ ನಿರುಪದ್ರವವಾದ ಪರ್ವತಪ್ರದೇಶವನ್ನೂ, ಕ್ರೌಂಚದ್ವೀಪದ ಭೂಮಿಯನ್ನೂ, ಅದರೊಳಗೂ ನಿರುಪದ್ರವವಾದ ಗಿರಿಪ್ರದೇಶವನ್ನೂ, ಆಮೇಲೆ ಕ್ಷೀರಸಮುದ್ರವೆಂಬ ಮುಕ್ತಾಹಾರವನ್ನೂ, ಅದರ

---

(೧) ಇಲ್ಲಿ ಹೇಳುವ ದ್ವೀಪಸಮುದ್ರಗಳ ವ್ಯವಸ್ಥಿತಿಯು ಕ್ರಮರಹಿತವಾಗಿರುವುದೆಂದು ತಿಳಿಯಬೇಕು.

ಕ್ಷೀರಾಮ್ಭೋರಾಶಿಪರಿಧಿಂ ಸಾನ್ತಸ್ಥವಿಷಯಾನ್ತರಮ್ ।
ಜಮ್ಬೂದ್ವೀಪೇ ಮಹಾಮೇರುಂ ಕುಲಪರ್ವತಸಙ್ಕುಲಮ್ ॥೫೯॥
ವಾತಸ್ಕನ್ಧೇಭ್ಯ ಏವಾದೌ ಪತಿತಾನಿಲವೇದನಾ ।
ಕ್ರಮೇಣಾನೇನ ಪರ್ಯನ್ತೇ ತೇನೈವ ಪ್ರಸೃತೋಽಞ್ಜಸಾ ॥೬೦॥
ವಾಯುರಾಲೋಕಯನ್ನದ್ಧಾ ಜಮ್ಬೂದ್ವೀಪಂ ನಿರೀಕ್ಷ್ಯ ಚ ।
ತತ್ಪ್ರಾಪ ಹಿಮವಚ್ಛೃಙ್ಗಂ ಯತ್ರ ಸೂಚೀ ತಪಸ್ವಿನೀ ॥೬೧॥
ಶೃಙ್ಗಮೂರ್ಧ್ನಿ ಮಹತ್ಯುಗ್ರೇ ಸೋಽರಣ್ಯಾನೀಮವಾಪ ತಾಮ್ ।
ದ್ವಿತೀಯಾಕಾಶವಿತತಾಂ ವರ್ಜಿತಾಂ ಪ್ರಾಣಿಕರ್ಮಭಿಃ ॥೬೨॥
ಅಸಞ್ಜಾತತೃಣವ್ಯೂಹಾಂ ನಿಕಟತ್ವಾದ್ವಿವಸ್ವತಃ ।
ರಜೋಮಯೀಮೇವ ತತಾಂ ಸಂಸಾರರಚನಾಮಿವ ॥೬೩॥
ಮೃಗತೃಷ್ಣಾನದೀಸಾರ್ಥಪೂರಣೀಯಾಬ್ಧಿತಾಂ ಗತಾಮ್ ।
ಶಕ್ರಕೋದಣ್ಡಸಙ್ಕಾಶಮೃಗತೃಷ್ಣಾಸರಿಚ್ಛತಾಮ್ ॥೬೪॥

ಮಧ್ಯದಲ್ಲಿ ನಾಯಕರತ್ನವಾದ ಶ್ವೇತದ್ವೀಪವನ್ನೂ, ಅಲ್ಲಿನ ಪ್ರಾಣಿವರ್ಗದ ವಿಭಾಗಗಳನ್ನೂ, ಆಮೇಲೆ ಘೃತಸಮುದ್ರವನ್ನೂ ಅದರೊಳಗಿರುವ ಪತ್ತನಮಂದಿರಗಳನ್ನೂ, ಕುಲದ್ವೀಪದ ಸುತ್ತಲೂ ವ್ಯಾಪಿಸಿರುವ ದೊಡ್ಡ ಪರ್ವತಗಳ ಗುಹೆಗಳನ್ನೂ, ದಧಿಸಮುದ್ರವನ್ನೂ, ಅದರ ಸುತ್ತಿನಿಂದ ಆವೃತವಾದ ಪಟ್ಟಣಗಳನ್ನೂ, ಅದರಲ್ಲಿ ಶಾಕದ್ವೀಪವನ್ನೂ, ಅಲ್ಲಿರುವ ನಾನಾವಿಧದೇಶಗಳನ್ನೂ, ಲವಣಸಮುದ್ರವನ್ನೂ, ಅದರ ಮಧ್ಯದಲ್ಲಿರುವ ಜಂಬೂದ್ವೀಪವನ್ನೂ, ಅಲ್ಲಿ ಮಹಾಮೇರುಪರ್ವತವನ್ನೂ, ಕುಲಪರ್ವತಗಳನ್ನೂ ಕಂಡಿತು ॥೫೭—೫೯॥

ಆ ವಾಯುವಿನ ಜ್ಞಾನಶರೀರವು, ವಾತಸ್ಕಂಧ(ವಾಯುಲೋಕ)ಗಳಿಂದಲೇ ಭೂಮಿಗಿಳಿಯಿತು; ಕೊನೆಯಲ್ಲಿ, ವಾಯುವೂ ಕೂಡ, ಇದೇ ಕ್ರಮದಿಂದಲೇ ಭೂಮಿಗಿಳಿದುಬಂದನು ॥೬೦॥

ಬಳಿಕ ವಾಯುವು, ಅಲ್ಲಲ್ಲಿ ನೋಡುತ, ಜಂಬೂದ್ವೀಪವನ್ನು ಕಂಡವನಾಗಿ, ಸೂಚಿಯು ತಪಸ್ಸುಮಾಡುತಿರುವ ಆ ಹಿಮವತ್ಪರ್ವತಶಿಖರವನ್ನು ಹೊಂದಿದವನಾದನು ॥೬೧॥

ಅತಿವಿಶಾಲವಾಗಿಯೂ ಉಗ್ರವಾಗಿಯೂ ಇರುವ ಆ ಪರ್ವತಶಿಖರದಲ್ಲಿ, ಎರಡನೆಯ ಅಂತರಿಕ್ಷವೋ ಎಂಬಂತೆ ವಿಸ್ತಾರವಾಗಿಯೂ—ಸರ್ವಪ್ರಾಣಿಚೇಷ್ಟಾವಿವರ್ಜಿತವಾಗಿಯೂ ಇರುವ ಆ ಅರಣ್ಯಪ್ರದೇಶಕ್ಕೆ ಹೋದನು ॥೬೨॥

ಆ ಅರಣ್ಯಪ್ರದೇಶವು ಸೂರ್ಯಮಂಡಲಕ್ಕೆ ಕೇವಲ ಸಮೀಪವಾಗಿದ್ದಕಾರಣ, ಅಲ್ಲಿ ಹುಲ್ಲು ಗರಿಕೆ ಹುಟ್ಟಿರಲಿಲ್ಲ. ಸಂಸಾರರಚನೆಯಂತೆ (೧) ಕೇವಲ ರಜೋಮಯವಾಗಿ ಆ ಅರಣ್ಯವು ವಿಸ್ತರಿಸಿಕೊಂಡಿದ್ದಿತು ॥೬೩॥

ಆ ಅರಣ್ಯಪ್ರದೇಶದೊಳಗೆ, ಕಾಮನಬಿಲ್ಲಿಗೆ ಸಮಾನವಾದ ನೂರಾರು ಮೃಗತೃಷ್ಣಿಕಾನದಿಗಳು ಕಾಣಿಸುತಿದ್ದುವು. ಇವುಗಳು ಬಂದು ಬೀಳುವ ಸಮುದ್ರವೋ ಎಂಬಂತೆ ಆ ಪ್ರದೇಶವು ಪ್ರಕಾಶಿಸುತಿದ್ದಿತು ॥೬೪॥

---

(೧) ರಜೋಮಯ = ಸಂಸಾರಪರ್ಯಾಯವಾಗಿ ರಜೋಗುಣಮಯ; ಅರಣ್ಯಪರ್ಯಾಯವಾಗಿ ಧೂಳಿಮಯ.

ಅಮಿತಾನನ್ತಪರ್ಯನ್ತಾಂ ಲೋಕಪಾಲೇಕ್ಷಿತೈರಪಿ ।
ಕೇವಲಂ ಪವನಸ್ಪನ್ದಪ್ರವಹದ್ಧೂಳಿಕುಣ್ಡಲಾಮ್ ॥೬೫॥
ಸೂರ್ಯಾಂಶುಕುಙ್ಕುಮಾಲಿಪ್ತಾಂ ಲಗ್ನಚನ್ದ್ರಾಂಶುಚನ್ದನಾಮ್ ।
ವಿಲಾಸಿನೀಮಿವ ವ್ಯೋಮ್ನೋ ವಾತಸೂತ್ಕಾರಪಾಯಿನೀಮ್ ॥೬೬॥
ಸಪ್ತದ್ವೀಪಸಮುದ್ರಮುದ್ರಣಸಮುಚ್ಛನ್ನೈಕದೇಶಾಶ್ರಯಂ
ಭೂಪೀಠಂ ಪರಿತೋ ವಿಹೃತ್ಯ ಪವನೋ ದೀರ್ಘಾಧ್ವನಾ ಜರ್ಜರಃ ।
ತಾಂ ಪ್ರಾಪ್ಯೋಗ್ರಗಿರಿಸ್ಥಲೀಮಲಿನಪುರ್ಯ್ಯೋಮಾಙ್ಗಲಗ್ನಾಮಿವ
ವ್ಯಾಪ್ತಾನನ್ತದಿಗನ್ತಪೂರಕಬೃಹದ್ದೇಹೋ ವಿಶಶ್ರಾಮಸಃ ॥೬೭॥

ಇತಿ ಉತ್ಪತ್ತಿಪ್ರಕರಣೇ ಸೂಚೀತಪೋವರ್ಣನಂ ನಾಮ
ತ್ರಿಸಪ್ತತಿತಮಃ ಸರ್ಗಃ.

ಇಂದ್ರಾದಿಲೋಕಪಾಲಕರೂ ಕೂಡ, ಆ ಪ್ರದೇಶದ ಇಯತ್ತೆಯನ್ನು ಕಾಣಲಾರದವರಾಗಿದ್ದರು. ಕೇವಲವಾಗಿ ವಾಯುಚಲನೆಯಿಂದ, ಅಲ್ಲಿ ಧೂಳಿಯು ಮಂಡಲಾಕಾರವಾಗಿ ಹಾರುತಿದ್ದಿತು ॥೬೫॥

ಸೂರ್ಯಕಿರಣವೆಂಬ ಕುಂಕುಮದಿಂದಲೂ ಚಂದ್ರಕಿರಣವೆಂಬ ಗಂಧದಿಂದಲೂ ಲಿಪ್ತವಾಗಿರುವ ಆ ಅರಣ್ಯಭೂಮಿಯು, ವಾಯುವಿನ ಸೂತ್ಕಾರಶಬ್ದದಿಂದ ಪಾನಮಾಡುತಿರುವಂತೆ ತೋರುತಿದ್ದ ಕಾರಣ, ಆಕಾಶವೆಂಬ ಕಾಂತನ ವಿಲಾಸಿನಿಯೋ ಎಂಬಂತೆ ಕಾಣುತಿದ್ದಿತು ॥೬೬॥

ಹೀಗೆ, ಆ ವಾಯುವು, ಸಪ್ತದ್ವೀಪಗಳಿಂದಲೂ ಸಪ್ತಸಮುದ್ರಗಳಿಂದಲೂ ಪರಿವೃತವಾದ ಭೂಮಿಯು ಸುತ್ತಲೂ ವಿಹರಿಸಿ, ಬಹುದೂರಮಾರ್ಗಸಂಚಾರದಿಂದ ಬಳಲಿದವನಾಗಿ, ಭ್ರಮರದೇಹವನ್ನಾಶ್ರಯಿಸಿದವನಾಗಿ ಆ ಆರಣ್ಯಪ್ರದೇಶವನ್ನು ಹೊಂದಿ, ಅಲ್ಲಿ ಪುನಃ ಸ್ಥೂಲಾಕಾರವನ್ನಾಶ್ರಯಿಸಿ ವಿಶ್ರಾಂತಿವಡೆದನು ॥೬೭॥

ಇದು ಉತ್ಪತ್ತಿಪ್ರಕರಣದಲ್ಲಿ ಸೂಚಿಕೋಪಾಖ್ಯಾನದೊಳಗೆ ಸೂಚೀತಪೋವರ್ಣನೆಯೆಂಬ
ಎಪ್ಪತ್ತುಮೂರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಚತುಸ್ಸಪ್ತತಿತಮಃ ಸರ್ಗಃ.

ಶ್ರೀವಸಿಷ್ಠಉವಾಚ.

ತಸ್ಯ ತತೋರ್ಧ್ವಶೃಙ್ಗಸ್ಯ ತಸ್ಯಾಂ ಭುವಿ ಮಹಾವನೌ ।
ದದರ್ಶ ಮಧ್ಯಮಾಂ ಸೂಚೀಂ ಪ್ರೋತ್ಥಿತಾಂ ಸಶಿಲಾಮಿವ ॥೧॥
ಏಕಪಾದಂ ತಪಸ್ಯನ್ತೀಂ ಶುಷ್ಯನ್ತೀಂ ಶಿರಊಷ್ಮಣಾ ।
ಸತತಾನಶನಾಂ ಶುಷ್ಕಪಿಣ್ಡೀಭೂತೋದರತ್ವಚಮ್ ॥೨॥
ಸಕೃದ್ವಿಕಸಿತಾಸ್ಯೇನ ಗೃಹೀತ್ವಾ ವಾತಪಾನಿಲಾನ್ ।
ಪಶ್ಚಾತ್ ತ್ಯಜನ್ತೀಂ ಹೃದಯೇ ಮೇ ನ ಮಾನ್ತೀತ್ಯನಾರತಮ್ ॥೩॥
ಶುಷ್ಕಾಂ ಚಣ್ಡಾಂಶುಕಿರಣೈಃ ಜರ್ಜರಾಂ ವನವಾಯುಭಿಃ ।
ಅಚಲನ್ತೀಂ ನಿಜಾತ್ ಸ್ಥಾನಾತ್ ಸ್ನಾಪಿತಾಮಿನ್ದುರಶ್ಮಿಭಿಃ ॥೪॥

ಉತ್ಪತ್ತಿಪ್ರಕರಣದಲ್ಲಿ ಎಪ್ಪತ್ತುನಾಲ್ಕನೆಯ ಸರ್ಗವು.

ದೃಷ್ಟ್ವೈವ ತಾಂ ತಾಪಸೀಂ ಸೂಚೀಂ ವಾಯೋಃ ಶಕ್ರಾನ್ತಿಕೇ ಗತಿಃ ।
ವರಾರ್ಥಂ ಪ್ರಾರ್ಥನಂ ಧಾತುಃ ಜ್ಞಾನಂ ಸೂಚ್ಯಾಶ್ಚ ವರ್ಣ್ಯತೇ ॥

ತಪಸ್ಸುಮಾಡುತಿರುವ ಆ ಸೂಚಿಯನ್ನು ನೋಡಿ ವಾಯುವು ಇಂದ್ರನಬಳಿಗೆ ಹೋಗುವಿಕೆಯೂ, ದೇವತೆಗಳೆಲ್ಲರೂ ಹೋಗಿ ಬ್ರಹ್ಮನನ್ನು ಸೂಚಿಗೆ ವರಪ್ರದಾನಮಾಡುವಂತೆ ಪ್ರಾರ್ಥಿಸುವಿಕೆಯೂ, ಸೂಚಿಯ ಜ್ಞಾನರೀತಿಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಈರೀತಿಯಾಗಿ ಹಿಮವತ್ಪರ್ವತದ ಶಿಖರಕ್ಕೆ ಹೋದ ವಾಯುವು, ಆ ಪರ್ವತದ ಮೇಲುಗಡೆಯ ಶಿಖರದಲ್ಲಿ, ದೊಡ್ಡ ಅರಣ್ಯವುಳ್ಳ ಆ ಭೂಮಿಯೊಳಗೆ, ಆ ಪರ್ವತಶಿಖರದ ಮಧ್ಯದಲ್ಲಿ ಎದ್ದಿರುವ ಬಂದು ಶಿಲೆಯೋ ಎಂಬಂತಿರುವ ಆ ಸೂಚಿಯನ್ನು ಕಂಡನು ॥೧॥

ಆಗ ಅವಳು, ಒಂಟಿಕಾಲಿನಿಂದ ನಿಂತು ತಪಸ್ಸುಮಾಡುತ್ತಿದ್ದಳು; ಶಿರಸ್ಸಿನಲ್ಲಿ ತಪೋಜ್ವಾಲೆ ಹುಟ್ಟಿ ಒಣಗುತಿದ್ದಳು; ನಿರಂತರವಾಗಿ ಅನಶನವ್ರತವನ್ನು ಕೈಗೊಂಡಿದ್ದಳು; ಆದರಿಂದ, ಅವಳ ಹೊಟ್ಟೆಯ ಚರ್ಮವು ಒಣಗಿ ಉಂಡೆಯಾಗಿರುವುದೋ ಎಂಬಂತೆ ತೋರುತಿದ್ದಿತು ॥೨॥

ಒಂದೊಂದುವೇಳೆ ಬಾಯಿತೆರೆದುಕೊಂಡು ಬಿಸಿಲು ಗಾಳಿಗಳನ್ನು ಆಹಾರಾರ್ಥವಾಗಿ ಸ್ವೀಕರಿಸುವಳಂತೆಯೂ, ಅನಂತರ— ಇದು ಎಂದಿಗೂ ನನ್ನ ಹೊಟ್ಟೆಯಲ್ಲಿ ಹಿಡಿಯಲಾರದೆಂದು ಯೋಚಿಸಿ ಅವುಗಳನ್ನು ಪುನಃ ಹೊರಕ್ಕೆ ಬಿಟ್ಟುಬಿಡುತಿರುವಳಂತೆಯೂ ಕಾಣಿಸಿದಳು ॥೩॥

ಸೂರ್ಯಕಿರಣಗಳಿಂದ ಎಷ್ಟು ಶೋಷಿಸಲ್ಪಟ್ಟವಳಾದರೂ, ಅರಣ್ಯವಾತಗಳಿಂದ ಎಷ್ಟು ಜರ್ಜರಮಾಡಲ್ಪಟ್ಟರೂ, ಚಂದ್ರಕಿರಣಗಳಿಂದ ಎಷ್ಟು ಸ್ನಾನಮಾಡಿಸಲ್ಪಟ್ಟರೂ, ಆ ಸೂಚಿಯು ತನ್ನ ಸ್ಥಳವನ್ನು ಬಿಟ್ಟು ಚಲಿಸುತಿರಲಿಲ್ಲ ॥೪॥

ಪೂರ್ವಂ ರಜೋಣುವೈಕೇನ ಸಂವಿಷ್ಟಚ್ಛನ್ನಮಸ್ತಕಾಮ್ |
ಕೃತಾರ್ಥತ್ವಂ ಕಥಯತೀಂ ದದತಾನ್ಯಸ್ಯ ನಾಸ್ಪದಮ್ ||೫||
ಅರಣ್ಯಾನ್ಯೇವ ದತ್ವಾರ್ಥಂ ಚಿರಂ ಜಾತಶಿಖಾಮಿವ |
ಮೂರ್ಧ್ನ್ಯವಸ್ಥಿಪಿತಪ್ರಾಣಜಟಾಜೂಟವಳೀಮಿವ ||೬||
ತಾಂ ಪ್ರೇಕ್ಷ್ಯ ಪವನಃ ಸೂಚೀಂ ವಿಸ್ಮಯಾಕುಲಚೇತನಃ |
ಪ್ರಣಮ್ಯಾಲೋಕ್ಯ ಸುಚಿರಂ ಭೀತಭೀತಇವಾಗತಃ ||೭||
ಮಹಾತಪಸ್ವಿನೀ ಸೂಚೇ ಕಿಮರ್ಥಂ ತಪ್ಯತೇ ತಪಃ |
ನೇತಿ ಪ್ರಷ್ಟುಂ ಶಶಾಕಾಸೌ ತತ್ತೇಜೋರಾಶಿನಿರ್ಜಿತಃ ||೮||
ಭಗವತ್ಯಾಮಹಾಸೂಚ್ಯಾಃ ಅಹೋ ಚಿತ್ರಂ ಮಹಾತಪಃ |
ಇತ್ಯೇವ ಕೇವಲಂ ಧ್ಯಾಯನ್ ಮಾರುತೋ ಗಗನಂ ಯಯೌ ||೯||
ಸಮುಲ್ಲಙ್ಘ್ಯಭ್ರಮಾರ್ಗಂತು ವಾತಸ್ಕನ್ಧಾನತೀತ್ಯ ಚ |
ಸಿದ್ಧಬೃನ್ದಾನಧಃಕೃತ್ವಾ ಸೂರ್ಯಮಾರ್ಗಮುಪೇತ್ಯಚ ||೧೦||
ಊರ್ಧ್ವಮೇತ್ಯ ವಿಮಾನೇಭ್ಯಃ ಪ್ರಾಪ ಶಕ್ರಪುರಾನ್ತರೇ |
ಸೂಚೀದರ್ಶನಪುಣ್ಯಂ ತಂ ಅಲಿಲಿಙ್ಗ ಪುರನ್ದರಃ ||೧೧||

ಅವಳ ತಲೆಯಮೇಲೆ ಮೊದಲು ಒಂದು ಸಣ್ಣ ರಜಃಕಣವು ಕುಳಿತುಬಿಟ್ಟು ಅವಳ ತಲೆಯನ್ನೆಲ್ಲ ಆಚ್ಛಾದಿಸಿಬಿಟ್ಟಿತು; ಅದು, ಮತ್ತೊಂದಕ್ಕೂ ಅವಕಾಶಕೊಡುತ್ತಿರಲಿಲ್ಲ. ಇದರಿಂದ, ಅವಳು—ತಾನು ಕೃತಾರ್ಥಳಾದೆನೆಂಬುದಾಗಿ ಹೇಳುತಿರುವಳೋ ಎಂಬಂತೆ ಕಾಣುತಿದ್ದಳು ||೫||

ಆ ಅರಣ್ಯಪ್ರದೇಶವು ತನ್ನ ವಿಭವವನ್ನೆಲ್ಲ ಇತರರಿಗೆ ಕೊಟ್ಟುಬಿಟ್ಟು ಬಹುಕಾಲ ತಪಸ್ಸು ಮಾಡಿ ಬೆಳೆಯಿಸಿಕೊಂಡಿರುವ ಒಂದು ಶಿಖೆಯೋ ಎಂಬಂತೆಯೂ, ಬಳಿಕ ಯೋಗಪರಿಪಾದದೆಸೆಯಿಂದ ಬ್ರಹ್ಮರಂಧ್ರದಲ್ಲಿ ಸ್ಥಿರಪಡಿಸಿದ ಪ್ರಾಣವಾಯುವಿನ ಜಟೆಯೋ ಎಂಬಂತೆಯೂ, ಆ ಸೂಚಿಯು ಕಾಣಿಸುತಿದ್ದಳು ||೬||

ಇಂತಹ ಸ್ಥಿತಿಯಲ್ಲಿರುವ ಆ ಸೂಚಿಯನ್ನು ನೋಡಿ, ಕೇವಲ ಆಶ್ಚರ್ಯಯುಕ್ತನಾದ ವಾಯುವು ಅವಳಿಗೆ ನಮಸ್ಕರಿಸಿ, ಬಹಳಹೊತ್ತು ಅವಳನ್ನು ನೋಡಿ,ಅಂಜುತಂಜುತ ಸಮೀಪಕ್ಕೆ ಬಂದನು||

ಆಗ ಅವಳ ತೇಜಃಪುಂಜದಿಂದ ಪರಾಜಿತನಾದ ವಾಯುವು, ಇಷ್ಟುಮಟ್ಟಿಗೆ ಹೆಚ್ಚಾಗಿ ತಪಸ್ಸುಳ್ಳವಳಾಗಿದ್ದರೂ ಪುನಃ ತಪಸ್ಸನ್ನೇಕೆ ಮಾಡಬೇಕೆಂದು ಕೇಳುವಷ್ಟು ಶಕ್ತಿಯುಳ್ಳವನಾಗಲಿಲ್ಲ||

ಅದುಕಾರಣ,—ಆಹಹ! ಪೂಜ್ಯಳಾದ ಈ ಸೂಚಿಯ ತಪಸ್ಸು ಅತ್ಯಾಶ್ಚರ್ಯವಾದುದು!—ಎಂದು ಇಷ್ಟು ಮಾತ್ರವನ್ನೇ ಮನಸ್ಸಿನಲ್ಲಿ ಯೋಚಿಸುತ, ಅಂತರಿಕ್ಷಕ್ಕೆ ಹೊರಟುಹೋದನು ||

ಬಳಿಕ, ಮೇಘಮಂಡಲವನ್ನೂ ವಾಯುಮಂಡಲವನ್ನೂ ದಾಟಿ, ಸಿದ್ಧಸಮೂಹಗಳನ್ನೂ ಕೆಳಕ್ಕೆ ಬಿಟ್ಟುಕೊಂಡು, ಸೂರ್ಯಮಾರ್ಗವನ್ನು ಹೊಂದಿ, ವಿಮಾನಗಳ ಮೇಲುಗಡೆಗೂ ಹೋಗಿ, ಕೊನೆಗೆ ಅಮರಾವತಿಯೊಳಕ್ಕೆ ಹೋದನು. ಸೂಚೀದರ್ಶನಪ್ರಭಾವದಿಂದ ಪುಣ್ಯಾತ್ಮನಾಗಿರುವ ಆ ವಾಯುವನ್ನು ದೇವೇಂದ್ರನು ಸಂತೋಷದಿಂದ ಆಲಿಂಗಿಸಿದನು ||೧೦—೧೧||

ಪೃಷ್ಟಶ್ಚ ಕಥಯಾಮಾಸ ದೃಷ್ಟಂ ಸರ್ವಂ ಮಯೇತ್ಯಸೌ ।
ಸಹದೇವನಿಕಾಯಾಯ ಶಕ್ರಾಯಾಸ್ಥಾನವಾಸಿನೇ ॥೧೨॥

ವಾಯುರುವಾಚ.

ಜಮ್ಬೂದ್ವೀಪೇಽಸ್ತಿ ಶೈಲೇನ್ದ್ರೋ ಹಿಮವಾನ್ನಾಮ ಸೂನ್ನತಃ ।
ಜಾಮಾತಾ ಯಸ್ಯ ಭಗವಾನ್ ಸಾಕ್ಷಾಚ್ಛಶಿಕಲಾಧರಃ ॥೧೩॥
ತಸ್ಯೋತ್ತರೇ ಮಹಾಶೃಙ್ಗಪೃಷ್ಠೇ ಪರಮರೂಪಿಣೀ ।
ಸ್ಥಿತಾ ತಪಸ್ವಿನೀ ಸೂಚೀ ತಪಶ್ಚರತಿ ದಾರುಣಮ್ ॥೧೪॥
ಬಹುನಾತ್ರ ಕಿಮುಕ್ತೇನ ವಾತಾದ್ಯಶನಶಾನ್ತಯೇ ।
ಯಯಾ ಸ್ವೋದರಸೌಷಿರ್ಯಂ ಪಿಣ್ಡೀಕೃತ್ವಾ ನಿವಾರಿತಮ್ ॥೧೫॥
ಶಾನ್ತಸಜ್ಜೀವಸೂಕ್ಷ್ಮಾರ್ಥಂ ವಿಕಾಸ್ಯಾಸ್ಯಂ ರಜೋಣುನಾ ।
ತಯಾದ್ಯ ಸ್ಥಗಿತಂ ಶೀತವಾತಾಶನನಿವೃತ್ತಯೇ ॥೧೬॥
ತಸ್ಯಾಸ್ತೀವ್ರೇಣ ತಪಸಾ ತುಹಿನಾಕಾರಮುತ್ಸೃಜನ್ ।
ಅಗ್ನ್ಯಾಕಾರಮಗೋಗೃಹ್ಣನ್ ದೇವದುಸ್ಸೇವ್ಯತಾಂ ಗತಃ ॥೧೭॥

ಆಗ ಸಭಾಸ್ಥಾನದಲ್ಲಿ ದೇವಸಮೂಹಗಳೊಡನೆ ಕುಳಿತಿರುವ ಇಂದ್ರನಿಂದ ಕೇಳಲ್ಪಟ್ಟವನಾಗಿ, ನಾನು ಅಲ್ಲಿರುವ ವಿಷಯಗಳೆಲ್ಲವನ್ನೂ ನೋಡಿದೆನೆಂದು ಹೇಳಿದನು ॥೧೨॥

ಆ ವಾಯು ಹೇಳಿದುದೇನೆಂದರೆ:—

ಅಯ್ಯಾ! ಮಹೇಂದ್ರನೆ! ಜಂಬೂದ್ವೀಪದಲ್ಲಿ, ಹಿಮವಂತನೆಂದು ಪ್ರಸಿದ್ಧನಾದ ಅತ್ಯುನ್ನತನಾದ ಪರ್ವತರಾಜನೊಬ್ಬನಿರುವನು. ಆ ಸಾಕ್ಷಾದ್ಭಗವಂತನಾದ ಚಂದ್ರಶೇಖರನೇ (ಪರಮೇಶ್ವರ) ಇವನಿಗೆ ಅಳಿಯನಾಗಿರುವನು ॥೧೩॥

ಆ ಪರ್ವತದ ಉತ್ತರದಿಗ್ಭಾಗದಲ್ಲಿರುವ ದೊಡ್ಡ ಶಿಖರದಲ್ಲಿದ್ದುಗೊಂಡು, ಮಹಾತೇಜಸ್ವಿನಿಯಾದ ಸೂಚಿಯು, ಅತ್ಯುಗ್ರವಾದ ತಪಸ್ಸನ್ನು ಮಾಡುತಿರುವಳು ॥೧೪॥

ಸ್ವಾಮಿ! ಮಹೇಂದ್ರ! ಅವಳ ತಪಸ್ಸಿನ ವಿಷಯದಲ್ಲಿ ಹೆಚ್ಚುಹೇಳಿ ಪ್ರಯೋಜನವೇನು? ಅವಳು, ವಾಯು ಮುಂತಾದ ಆಹಾರವೂ ತನ್ನ ಹೊಟ್ಟೆಯೊಳಗೆ ಹೋಗಬಾರದೆಂದು ನಿಶ್ಚಯಮಾಡಿಕೊಂಡು, ತನ್ನ ಹೊಟ್ಟೆಯ ರಂಧ್ರವನ್ನು ಉಂಡೆಮಾಡಿಕೊಂಡು, ವಾಯು ಮುಂತಾದುದೂ ಒಳಗೆ ಹೋಗದಂತೆ ತಡೆದುಬಿಟ್ಟಿರುವಳು ॥೧೫॥

ಅವಳು, ತನ್ನ ಹೊಟ್ಟೆಯೊಳಕ್ಕೆ ತಂಗಾಳಿಯಲ್ಲಿಯಾದರೂ ಪ್ರವೇಶಿಸಿಬಿಟ್ಟೀತೆಂಬ ಶಂಕೆಯಿಂದ, ತನ್ನ ಮುಖವನ್ನು ಸ್ವಲ್ಪಮಾತ್ರ ತೆಗೆದುಕೊಂಡು, ಪುನಃ ಅದನ್ನು ಮುಚ್ಚದೆಯೇ, ಆ ಸ್ಥಳದಲ್ಲಿ ಸಣ್ಣದೊಂದು ರಜಃಕಣವನ್ನು ಮುಚ್ಚಿರುವಳು ॥೧೬॥

ಹೇದೇವ! ಈಗ ಆ ಹಿಮವತ್ಪರ್ವತವು, ಅವಳ ತೀವ್ರವಾದ ತಪೋಜ್ವಾಲೆಯಿಂದ, ತನ್ನಲ್ಲಿದ್ದ ಹಿಮಾಲಯತ್ವವನ್ನು ಬಿಟ್ಟುಬಿಟ್ಟು, ಅಗ್ನ್ಯಾಕಾರವನ್ನು ಧರಿಸಿದುದಾಗಿ, ಯಾವ ಪ್ರಾಣಿಗೂ ಹತ್ತಿರಹೋಗುವುದೇ ಅಸಾಧ್ಯವಾಗುವಂತೆ ಪರಿಣಮಿಸಿರುವುದು ॥೧೭॥

ತದುತ್ತಿಷ್ಠ ಶಕ್ರ ಗಚ್ಛಾಮಃ ಸರ್ವ ಏವ ಪಿತಾಮಹಮ್ ।
ತಸ್ಯಾ ವರಾರ್ಥಮನರ್ಥಾಯ ವಿದ್ಧಿ ತತ್ ಸುಮಹತ್ತಪಃ ॥೧೮॥
ಇತಿ ವಾತೇರಿತಃ ಶಕ್ರಃ ಸಹ ದೇವಗಣೇನ ಸಃ ।
ಜಗಾಮ ಬ್ರಹ್ಮಣೋ ಲೋಕಂ ಪ್ರಾರ್ಥಯಾಮಾಸ ತಂ ವಿಭುಮ್ ॥೧೯॥
ಸೂಚ್ಯಾ ವರಮಹಂ ದಾತುಂ ಗಚ್ಛಾಮಿ ಹಿಮವಚ್ಛಿರಃ ।
ಬ್ರಹ್ಮಣೇತಿ ಪ್ರತಿಜ್ಞಾತೇ ಶಕ್ರಃ ಸ್ವರ್ಗಮುಪಾಯಯೌ ॥೨೦॥
ಏತಾವತಾಥ ಕಾಲೇನ ಸಾ ಬಭೂವಾತಿಪಾವನೀ ।
ಸೂಚೀ ನಿಜತಪಸ್ತಾಪತಾಪಿತಾಮರಮನ್ದಿರಾ ॥೨೧॥
ಮುಖರನ್ಧ್ರಸ್ಥಿತಾರ್ಕಾಂಶುದೃಶಾ ಸ್ವಚ್ಛಾಯಯೈವ ಸಾ ।
ವಿಕಾಸಿನ್ಯಾ ವಿವರ್ತಿಸ್ಥಾ ಚೋದಿತಾನ್ತಮವೇಕ್ಷಿತಾ ॥೨೨॥
ಕೌಶೇಯರೂಪಯಾ ಸೂಚ್ಯಾ ಮೇರುಃ ಸ್ಥೈರ್ಯೇಣ ನಿರ್ಜಿತಃ ।
ಮಜ್ಜನಂ ನೈತಿ ವೃದ್ಧ್ಯೈವಂ ಮುಕ್ತಮಾದ್ಯನ್ತಯೋರ್ದಿನೇ ॥೨೩॥
ಮಧ್ಯಾಹ್ನೇ ತಾಪಭೀತ್ಯೇವ ವಿಶನ್ತ್ಯಾ ಮಾರುತಾನ್ತರಮ್ ।

ಆದುಕಾರಣ, ಅಯ್ಯಾ! ಮಹೇಂದ್ರ! ನೀನು ಬೇಗನೇಳು; ಅವಳಿಗೆ ವರವನ್ನು ಕೊಡಿಸುವುದಕ್ಕೋಸ್ಕರ, ನಾವೆಲ್ಲರೂ ಒಟ್ಟಾಗಿ ಬ್ರಹ್ಮನ ಹತ್ತಿರಕ್ಕೆ ಹೋಗುವ. ಇಲ್ಲದಿದ್ದರೆ ಅವಳ ತಪಸ್ಸು ಅನರ್ಥಹೇತುವಾಗುವುದೆಂದು ತಿಳಿ ॥೧೮॥

ವತ್ಸ! ರಾಮ! ಹೀಗೆಂದು ವಾಯುವಿನಿಂದ ಪ್ರೇರಿತನಾದ ಮಹೇಂದ್ರನು, ಸಮಸ್ತ ದೇವತೆಗಳೊಡಗೂಡಿದವನಾಗಿ ಬ್ರಹ್ಮಲೋಕಕ್ಕೆ ಹೋದನು; ಅಲ್ಲಿ ಆ ಬ್ರಹ್ಮನನ್ನು, ಸೂಚಿಗೆ ವರಪ್ರದಾನಮಾಡಬೇಕೆಂದು ಪ್ರಾರ್ಥಿಸಿದನು ॥೧೯॥

ಅನಂತರ, ಬ್ರಹ್ಮನಿಂದ 'ಸೂಚಿಗೆ ವರವನ್ನು ಕೊಡಲು ನಾನು ಹಿಮವತ್ಪರ್ವತದ ಶಿಖರಕ್ಕೆ ಹೋಗುವೆನು' ಎಂದು ಪ್ರತಿಜ್ಞೆ ಮಾಡಲ್ಪಡಲಾಗಿ, ಇಂದ್ರನು ಸ್ವರ್ಗಲೋಕಕ್ಕೆ ಹೊರಟು ಹೋದನು ॥೨೦॥

ಅಷ್ಟರೊಳಗಾಗಿ, ಆ ಸೂಚಿಯು, ಅತಿ ಪರಿಶುದ್ಧಳಾಗಿಬಿಟ್ಟು, ತನ್ನ ತಪೋವೇಗದಿಂದ ಸ್ವರ್ಗಲೋಕವೂ ಸುಡುವಂತೆ ಮಾಡಿದಳು ॥೨೧॥

ಪದೇಪದೇ ಅಭಿವೃದ್ಧಿಹೊಂದುತಿರುವ ತಪಸ್ಸಿನಲ್ಲಿ ನೆಲೆಸಿರುವ ಆ ಕರ್ಕಟಿಯು, ತನ್ನ ಮುಖರಂಧ್ರದಲ್ಲಿರುವ ಸೂರ್ಯಕಿರಣಗಳೆಂಬ ನೇತ್ರವನ್ನು ಪ್ರಸರಣಪಡಿಸಿ, ತನ್ನ ಛಾಯೆಯಿಂದ ಪ್ರೇರಿತಳಾಗಿ, ನಿಯತಿಯ ಅವಧಿಯನ್ನು ಪ್ರತೀಕ್ಷಿಸುತ್ತಿದ್ದಳು ॥೨೨॥

ಹೀಗೆ ಸ್ಥಿರವಾಗಿ ನಿಂತಿರುವ ಸೂಚಿಯ ಛಾಯೆಯು, ಸ್ಥೈರ್ಯವಿಷಯದಲ್ಲಿ ಸೂಚಿಯಿಂದ ಪರಾಜಿತವಾದ ಮೇರುಪರ್ವತವು ಲಜ್ಜೆಯಿಂದ ಸಮುದ್ರದಲ್ಲೇಕೆ ಮುಣುಗಿರುವುದೆಂದು ನೋಡುವುದಕ್ಕೋ ಎಂಬಂತೆ, ದಿವಸದ ಆದ್ಯಂತಕಾಲಗಳಲ್ಲಿ (ಬೆಳಗ್ಗೆ-ಸಾಯಂಕಾಲ) ದೀರ್ಘವಾಗಿ ಬೆಳೆಯುವುದು ॥೨೩॥

ಆ ಛಾಯೆಯು, ಮಧ್ಯಾಹ್ನಕಾಲದಲ್ಲಿ, ಸೂರ್ಯಕಿರಣಗಳಿಂದ ಸಂತಾಪವುಂಟಾದೀತೆಂಬ ಭಯದಿಂದಲೋ ಎಂಬಹಾಗೆ, ಸೂಚಿಯ ಪ್ರಾಣಭೂತವಾದ ಮಧ್ಯಭಾಗದಲ್ಲಿ ಅಡಗಿಕೊಳ್ಳುವುದು.

ಅನ್ಯದಾ ಗೌರವಾದ್ದೃಷ್ಟ್ವೈವ ದೂರತಃ ಪ್ರೇಕ್ಷಮಾಣಯಾ ||೨೪||
ಸಾ ತಾಮವೇಕ್ಷತೇ ಕ್ಷಾರಾತ್ ತಾಪಾದಙ್ಗೇ ನಿಮಜ್ಜತಿ |
ಸಙ್ಕಟೇ ವಿಸ್ಮರತ್ಯೇವ ಜನೋ ಗೌರವಸತ್ಕ್ರಿಯಾಮ್ ||೨೫||
ಛಾಯಾಸೂಚೀ ತಾಪಸೂಚೀ ಯಶ್ಚಾತ್ಮಾ ಸ ತೃತೀಯಯಾ |
ತ್ರಿಕೋಣಂ ತಪಸಾ ಪೂತಂ ವಾರಾಣಸ್ಯಾ ಸಮಂ ಕೃತಮ್ ||೨೬||
ಗತಾಸ್ತೇನ ತ್ರಿಕೋಣೇನ ತ್ರಿವರ್ಣಪರಿಭಾವತಾ |
ವಾಯವಃ ಪಾಂಸವೋ ಯೇಽಪಿ ತೇ ಪರಾಂ ಮುಕ್ತಿಮಾಗತಾಃ ||೨೭||

ವಿದಿತಪರಮಕಾರಣಾದ್ಯ ಜಾತಾ
ಸ್ವಯಮನುಚೇತನಸಂವಿದಂ ವಿಚಾರ್ಯ |
ಸ್ವಮನನಕಲನಾನುಸಾರವಿಕ
ಸ್ತ್ವಿಹ ಹಿ ಗುರುಃ ಪರಮೋ ನ ರಾಘವಾನ್ಯಃ ||೨೮||

ಇತಿ ಉತ್ಪತ್ತಿಪ್ರಕರಣೇ ಸೂಚೀತಪಃ ಪರಿಪಾಕವರ್ಣನಂ ನಾಮ
ಚತುಸ್ಸಪ್ತತಿತಮಃ ಸರ್ಗಃ.

ಇತರಕಾಲದಲ್ಲಿಯಾದರೋ, ಕೇವಲ ಗೌರವದಿಂದ ದೂರದಲ್ಲಿಯೇ ನೋಡುತ ನಿಂತಿರುವಂತಿರುವುದು ॥೨೪॥

ಹೀಗಿದ್ದರೂ, ಆ ಛಾಯೆಯು, ಮಧ್ಯಾಹ್ನಕಾಲದಲ್ಲಿ ಮಾತ್ರ, ಆ ಸೂಚಿಯನ್ನು ನೋಡುತಲೂ—ವೇಗವಾದ ಬಿಸಿಲಿಗೆ ಹೆದರಿ ಅದರ ಅಂಗದೊಳಗೆ ಸೇರಿಕೊಳ್ಳುತಲೂ ಇರುವುದು. 'ಆಗ ಗೌರವದಿಂದ ದೂರದಲ್ಲಿಡಬೇಡವೊ?' ಎಂದರೆ,—ಪ್ರಪಂಚದಲ್ಲಿ ಎಂತಹ ಜನರಾದರೂ ಸಂಕಟಕಾಲವೊದಗಿದಾಗ ಗೌರವಮರ್ಯಾದೆಗಳನ್ನು ಮರತೇಬಿಡುವರು ॥೨೫॥

ಹೀಗೆ, ತಪಶ್ಶುದ್ಧವಾದ ಛಾಯಾಸೂಚಿ ತಾಪಸೂಚಿ ಲೋಹಸೂಚಿ—ಈ ಮೂರೂಸೇರಿರುವುದರಿಂದ, ಅಸೀ ವರುಣಾ ಗಂಗಾ ಈ ಮೂರರಿಂದಲೂ ಪರಿವೃತವಾದ ಸಾಕ್ಷಾದ್ವಾರಾಣಸಿಯಂತೆ ಕಾಣಿಸುತಿದ್ದಿತು ॥೨೬॥

ಆಗ, ಮೂರುಬಣ್ಣಗಳಿಂದ ಕೂಡಿಕೊಂಡಿರುವ ಆ ಸೂಚೀತ್ರಯಮಾರ್ಗದಿಂದ ಸಂಚರಿಸಿದ ವಾಯುಗಳೂ ಧೂಳಿಗಳೂ ಕೂಡ ಮುಕ್ತಿಹೊಂದಿಬಿಟ್ಟುವು ॥೨೭॥

ಅಯ್ಯಾ! ರಾಘವ! ಆಗ ಆ ಸೂಚಿಯು, ತನ್ನ ಚಿತ್ತದಲ್ಲಿಯೇ ವಿಚಾರಮಾಡಿ ತತ್ವಜ್ಞಾನವನ್ನು ಪಡೆದವಳಾದಳು. ಪ್ರಪಂಚದಲ್ಲಿ, ವಿವೇಕಿಯಾದವರಿಗೆ, ತಮ್ಮ ಮನಸ್ಸಿನಲ್ಲಿ ಉಂಟಾಗುವ ಮನನವೇ ಮುಖ್ಯಗುರುವು; ಇತರವಾದ ಗುರುವಿಲ್ಲವೇ ಇಲ್ಲ. ಹೀಗಿರುವುದರಿಂದ, ಆ ಸೂಚಿಯು, ಗುರೂಪದೇಶಾದಿಗಳಿಲ್ಲದೆಯೇ, ತನ್ನ ದೃಢತರಾಭ್ಯಾಸದಿಂದ ಮುಕ್ತಳಾಗಿಬಿಟ್ಟಳು॥

ಇದು ಉತ್ಪತ್ತಿಪ್ರಕರಣದಲ್ಲಿ ಸೂಚ್ಯುಪಾಖ್ಯಾನದೊಳಗೆ ಸೂಚೀತಪಃ
ಪರಿಪಾಕವರ್ಣನೆಯೆಂಬ ಎಪ್ಪತ್ತುನಾಲ್ಕನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚಸಪ್ತತಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಅಥ ವರ್ಷಸಹಸ್ರೇಣ ತಾಂ ಪಿತಾಮಹ ಆಯಯೌ ।
ವರಂ ಪುತ್ರಿ ಗೃಹಾಣೇತಿ ವ್ಯಾಜಹಾರ ನಭಸ್ಥಿತಃ ॥೧॥
ಸೂಚೀ ಕರ್ಮೇನ್ದ್ರಿಯಾಭಾವಾತ್ ಜೀವಮಾತ್ರಕಲಾವತೀ ।
ನ ಕಿಞ್ಚಿದ್ವ್ಯಾಜಹಾರಾಸ್ಮೈ ಚಿನ್ತಯಾಮಾಸ ಕೇವಲಮ್ ॥೨॥
ಪೂರ್ಣಾಸ್ಮಿ ಗತಸನ್ದೇಹಾ ಕಿಂ ವರೇಣ ಕರೋಮ್ಯಹಮ್ ।
ಶಾಮ್ಯಾಮಿ ಪರಿನಿರ್ವಾಮಿ ಸುಖಮಾಸೇ ಚ ಕೇವಲಮ್ ॥೩॥
ಜ್ಞಾತಂ ಜ್ಞಾತವ್ಯಮಖಿಲಂ ಶಾನ್ತಾ ಸನ್ದೇಹಜಾಲಿಕಾ ।
ಸ್ವವಿವೇಕೋ ವಿಕಸಿತಃ ಕಿಮನ್ಯೇನ ಪ್ರಯೋಜನಮ್ ॥೪॥
ಯಥಾ ಸ್ಥಿತೇಯಮಸ್ಮೀಹ ಸನ್ತಿಷ್ಠೇಯಂ ತಥೈವ ಹಿ ।
ಸತ್ಯಾಸತ್ಯಕಲಾಮೇವ ತ್ಯಕ್ತ್ವಾ ಕಿಮಿತರೇಣ ಮೇ ॥೫॥

ಉತ್ಪತ್ತಿಪ್ರಕರಣದಲ್ಲಿ ಎಪ್ಪತ್ತೈದನೆಯ ಸರ್ಗವು.

ಪ್ರಸನ್ನೇಪಿ ವಿಧೌ ಸೂಚ್ಯಾಃ ಪ್ರಬೋಧಾಜ್ಜೋಷಮಾಸನಮ್ ।
ತಥಾಪ್ಯಸ್ಯಾ ವರಾದ್ಧಾತುಃ ದೇಹೋತ್ಪತ್ತಿಶ್ಚ ಕೀರ್ತ್ಯತೇ ॥

ಚತುರ್ಮುಖಬ್ರಹ್ಮನು ಪ್ರಸನ್ನನಾದರೂ—ಪ್ರಬುದ್ಧಳಾಗಿರುವ ಕಾರಣ--ಸೂಚಿಯು ವರವನ್ನು ಯಾಚಿಸದೆ ಸುಮ್ಮನಿರುವಿಕೆಯೂ, ಆದರೂ ಬ್ರಹ್ಮನ ವರದಿಂದ ಇವಳಿಗೆ ಪುನಃ ಶರೀರೋತ್ಪತ್ತಿಯೂ ಕೂಡ, ಈ ಸರ್ಗದಲ್ಲಿ ಹೇಳಲ್ಪಡುವುವು.

ಶ್ರೀವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಸೂಚಿಗೆ ಪ್ರಬೋಧವಾದಬಳಿಕ, ಸಾವಿರ ವರ್ಷಗಳು ಕಳೆಯಲಾಗಿ, ಬ್ರಹ್ಮದೇವನು ಅವಳಿಗೆ ವರಪ್ರದಾನಮಾಡುವುದಕ್ಕೆ ಬಂದನು. 'ಹೇ! ಪುತ್ರಿ! ವರವನ್ನು ಸ್ವೀಕರಿಸುವಳಾಗು' ಎಂದು ಅಂತರಿಕ್ಷದಲ್ಲಿಯೇ ಹೇಳಿದನು ॥೧॥

ಆಗ ಆಸೂಚಿಯು, ತಾನು ಕೇವಲ ಜೀವಕಲಾಮಾತ್ರಯುಕ್ತಳಾಗಿ ಕರ್ಮೇಂದ್ರಿಯಶೂನ್ಯಳಾಗಿರುವುದರಿಂದ, ಬ್ರಹ್ಮನಿಗೆ ಯಾವುದೊಂದುತ್ತರವನ್ನೂ ಕೊಡಲಿಲ್ಲ; ಮನಸ್ಸಿನಲ್ಲಿ ಮಾತ್ರ ಈ ರೀತಿಯಾಗಿ ಯೋಚಿಸಿದಳು ॥೨॥

ನಾನು ಈಗ ಪರಿಪೂರ್ಣಳಾಗಿರುವೆನು; ಸಮಸ್ತಸಂದೇಹಗಳೂ ಈಗ ನನಗೆ ಲಯಹೊಂದಿರುವುವು. ಹೀಗಿರುವಾಗ, ವರದಿಂದ ನಾನೇನುಮಾಡಿಕೊಳ್ಳಬೇಕಾಗಿದೆ? ನಾನು, ಕೇವಲಶಾಂತಳಾಗಿ ಸರ್ವತ್ರನಿರ್ವೃತಳಾಗಿಯೂ ಕೇವಲ ಸುಖವಾಗಿಯೂ ಇದ್ದುಗೊಂಡಿರುವೆನು ॥೩॥

ಈಗ ನಮಗೆ, ತಿಳಿಯಬೇಕಾದುದೆಲ್ಲವು ತಿಳಿದಂತಾಯ್ತು; ಸಮಸ್ತಸಂದೇಹಪರಂಪರೆಯೂ ಶಾಂತವಾಯ್ತು; ಸ್ವಾತ್ಮಜ್ಞಾನೋದಯವೂ ಉಂಟಾಯ್ತು. ಹೀಗಿರುವದರಿಂದ, ಇತರವಾದ ವರದಿಂದ ನನಗೇನೂ ಪ್ರಯೋಜನವು? ॥೪॥

ನಾನು ಈಗ ಹೇಗಿರುವೆನೋ ಹೀಗೆಯೆ ಎಂದಿಗೂ ಪರಮಾರ್ಥಸ್ವರೂಪಳಾಗಿ ಇದ್ದುಗೊಂಡಿರುವೆನು. ಇಂತಹ ಸತ್ಯಸ್ವರೂಪವನ್ನು ಬಿಟ್ಟು, ನನಗೆ ಇತರಪದಾರ್ಥದಿಂದ ಪ್ರಯೋಜನವೇನು?॥

ಏತಾವನ್ತಮಹಂ ಕಾಲಂ ಅವಿವೇಕೇನ ಯೋಜಿತಾ |
ಸ್ವಸಙ್ಕಲ್ಪಸಮುತ್ಥೇನ ವೇತಾಳೇನೇವ ಬಾಲಿಕಾ ||೬||
ಇದಾನೀಮುಪಶಾನ್ತೋಽಸೌ ಸ್ವವಿಚಾರಯಾ ಸ್ವಯಮ್ |
ಈಪ್ಸಿತಾನೀಪ್ಸಿತೈರರ್ಥೈಃ ಕೋ ಭವೇತ್ ಕಲಿತೈರ್ಮಮ ||೭||
ಇತಿ ನಿಶ್ಚಯಯುಕ್ತಾಂ ತಾಂ ಸೂಚೀಂ ಕರ್ಮೇನ್ದ್ರಿಯೋಜ್ಝಿತಾಮ್ |
ತೂಷ್ಣೀಂ ಸ್ಥಿತಾಂ ಸನಿಯತಿಃ ಸ ಪಶ್ಯನ್ ಭಗವಾನ್ ಸ್ಥಿತಃ ||೮||
ಬ್ರಹ್ಮಾ ಪುನರುವಾಚೇದಂ ವೀತರಾಗಾಂ ಪ್ರಸನ್ನಧೀಃ |
ವರಂ ಪುತ್ರಿ ಗೃಹಾಣ ತ್ವಂ ಕಿಞ್ಚಿತ್ ಕಾಲಂ ಚ ಭೂತಲೇ ||೯||
ಭೋಗಾನ್ ಭುಕ್ತ್ವಾ ತತಃ ಪಶ್ಚಾತ್ ಗಮಿಷ್ಯಸಿ ಪರಂ ಪದಮ್ |
ಅವ್ಯಾವೃತ್ತಿಸ್ವರೂಪಾಯಾಃ ನಿಯತೇರೇಷ ನಿಶ್ಚಯಃ ||೧೦||
ತಪಸಾನೇನ ಸಙ್ಕಲ್ಪಃ ಸಫಲೋಽಸ್ತು ತವೋತ್ತಮೇ |
ಪೀನಾ ಭವ ಪುನಶ್ಶೈಲೇ ಹಿಮಕಾನನರಾಕ್ಷಸೀ ||೧೧||
ಯಯಾ ಪೂರ್ವಂ ವಿಯುಕ್ತಾಸಿ ತನ್ವಾ ಜಲದರೂಪಯಾ |
ಬೀಜಾನ್ತರ್ವೃಕ್ಷತಾ ಪುತ್ರಿ ಬೃಹದ್ವೃಕ್ಷತಯಾ ಯಥಾ ||೧೨||

ನಾನು ಇಷ್ಟುಕಾಲವೂ, ಬೇತಾಳದಿಂದ ಬಾಲಿಕೆಯು ಆಕ್ರಮಿಸಲ್ಪಡುವಂತೆ, ನನ್ನ ಸಂಕಲ್ಪದಿಂದ ಉಂಟಾಗಿದ್ದ ಅವಿವೇಕದಿಂದ ಆಕ್ರಮಿಸಲ್ಪಟ್ಟಿದ್ದೆನು ॥೬॥

ಈಗ ಸ್ವಸ್ವರೂಪವಿಚಾರದಿಂದ ಆ ಅವಿವೇಕವು ಶಾಂತವಾಯ್ತು. ಇನ್ನು ನನಗೆ ಯಾವ ಇಷ್ಟಾನಿಷ್ಟಗಳು ಪ್ರಾಪ್ತವಾದರೆತಾನೆ ಏನು? ॥೭॥

ಈರೀತಿಯಾದ ನಿಶ್ಚಯದಿಂದ ಯುಕ್ತಳಾಗಿ ತೂಷ್ಣೀಂಭೂತಳಾಗಿರುವ ಕರ್ಮೇಂದ್ರಿಯಶೂನ್ಯಳಾದ ಆ ಸೂಚಿಯನ್ನು, ನಿಯತಿ (ಕರ್ಮಕ್ಕೆ ತಕ್ಕ ಫಲವಾಗಿಯೇ ತೀರಬೇಕೆಂಬ ಈಶ್ವರಸಂಕಲ್ಪ) ಯುಕ್ತನಾದ ಚತುರ್ಮುಖನು ಸುಮ್ಮನೆ ನೋಡುತ ನಿಂತುಕೊಂಡನು ॥೮॥

ಆಮೇಲೆ, ಪುನಃ ಆ ಬ್ರಹ್ಮನು, ಪ್ರಸನ್ನಹೃದಯನಾಗಿ, ಕೇವಲ ವಿರಕ್ತಳಾಗಿರುವ ಸೂಚಿಯನ್ನು ಕುರಿತು ಹೀಗೆ ಹೇಳಿದನು:—ಹೆ! ಪುತ್ರಿ! ನೀನು ಈ ವರವನ್ನು ಸ್ವೀಕರಿಸು. ಸ್ವಲ್ಪಕಾಲ ಭೂಮಿಯಲ್ಲಿ ಭೋಗಗಳನ್ನನುಭವಿಸಿ, ಬಳಿಕ ಪರಮಪದವನ್ನು ಹೊಂದುವೆ. ಕರ್ಮಕ್ಕೆ ತಕ್ಕ ಫಲವನ್ನನುಭವಿಸಿಯೇ ತೀರಬೇಕೆಂಬ ಈಶ್ವರಸಂಕಲ್ಪವನ್ನು, ನಮ್ಮಂಥವರೂ ಕೂಡ ಮೀರುವುದಕ್ಕಾಗಲಾರದು. ಅದುಕಾರಣ, ಆ ಈಶ್ವರಸಂಕಲ್ಪದ ನಿಶ್ಚಯವೇ ಈರೀತಿಯಾಗಿರುವುದು ॥೯—೧೦॥

ಎಲೌ ಉತ್ತಮ ತಪಸ್ವಿನಿಯಾದ ಕರ್ಕಟಿಯೆ! ಈಗ ಫಲೋನ್ಮುಖವಾಗಿರುವ ಈ ನಿನ್ನ ತಪಸ್ಸಿನಿಂದ, ನಿನಗೆ ಹಿಂದೆ ಉಂಟಾಗಿದ್ದ ಮನಸ್ಸಂಕಲ್ಪವು ಸಫಲವಾಗಲಿ. ನೀನು ಪುನಃ ಪೂರ್ವದಂತೆ ಸ್ಥೂಲದೇಹಳಾಗಿ ಹಿಮವತ್ಪರ್ವತದ ಅರಣ್ಯದಲ್ಲಿ ರಾಕ್ಷಸಿಯಾಗಿ ಸಂಚರಿಸು ॥೧೧॥

ಹೇ ಪುತ್ರಿ! ಬೀಜದೊಳಗೆ ಅಂತರ್ಗತವಾದ ಸೂಕ್ಷ್ಮವೃಕ್ಷಾವಸ್ಥೆಯು ದೊಡ್ಡದಾದ ವೃಕ್ಷಾವಸ್ಥೆಯಿಂದ ರಹಿತವಾದಂತೆ, ನೀನು ದೊಡ್ಡ ಮೇಘದಂತಿದ್ದ ಯಾವ ಶರೀರದಿಂದ ಬಿಡಲ್ಪಟ್ಟಿರುವೆ

ಯೋಗಮೇಷ್ಯಸಿ ಭೂಯಶ್ಚ ತನ್ವಾನ್ತರ್ಬೀಜರೂಪಿಣೀ ।
ತಯೈವ ರಸಸೇಕೇನ ಲತಯೇವಾಙ್ಕುರಸ್ಥಿತಿಃ ॥೧೩॥
ಬಾಧಾಂ ವಿದಿತವೇದ್ಯತ್ವಾತ್ ನ ಚ ಲೋಕೇ ಕರಿಷ್ಯಸಿ ।
ಅನ್ತಶ್ಶುದ್ಧಾ ಸ್ಪನ್ದವತೀ ಶಾರದೀವಾಭ್ರಮಣ್ಡಲೀ ॥೧೪॥
ಅಶ್ರಾನ್ತಧ್ಯಾನನಿರತಾ ಕದಾಚಿಲ್ಲೀಲಯಾ ಯದಿ ।
ಭವಿಷ್ಯಸಿ ಬಹೀರೂಪಾ ಸರ್ವಾತ್ಮಧ್ಯಾನರೂಪಿಣೀ ॥೧೫॥
ವ್ಯವಹಾರಾತ್ಮಕಧ್ಯಾನಧಾರಣಾಧಾರರೂಪಿಣೀ ।
ವಾತಸ್ವಭಾವವದ್ದೇಹಪರಿಸ್ಪನ್ದಾದ್ವಿಲಾಸಿನೀ ॥೧೬॥
ತದಾಽವಿರೋಧಿನೀ ಪುತ್ರಿ ಸ್ವಕರ್ಮಸ್ಪನ್ದರೋಧಿನೀ ।
ನ್ಯಾಯೇನ ಕ್ಷುನ್ನಿವೃತ್ತ್ಯರ್ಥಂ ಭೂತಬಾಧಾಂ ಕರಿಷ್ಯಸಿ ॥೧೭॥
ಭವಿಷ್ಯಸಿ ನ್ಯಾಯವೃತ್ತಿಃ ಲೋಕೇ ತ್ವನ್ಯಾಯಬಾಧಿಕಾ ।
ಜೀವನ್ಮುಕ್ತತಯಾ ದೇಹೇ ಸ್ವವಿವೇಕೈಕಪಾಲಿಕಾ ॥೧೮॥

ಇತ್ಯುಕ್ತ್ವಾ ಗಗನತಲಾಜ್ಜಗಾಮ ದೇವಃ ಸೂಚೀ ಸಾ ಭವತು ಮಮೇತಿ ಕಿಂ ವಿರೋಧಃ।
ರಾಗೋವಾಬ್ಜಜವಚಸಾರ್ಥವಾರಣೇಽಸ್ಮಿನ್ ಇತ್ಯನ್ತಃ ಸ್ವತನುಮಯೀ ಮನಾಗ್ಬಭೂವ॥

ಯೋ, ನೀರು ಸುರಿದು ತಂಪಾದಮೇಲೆ ಬೀಜರೂಪವಾಗಿದ್ದ ವೃಕ್ಷಾವಸ್ಥೆಯು ಪುನಃ ಅಂಕುರ ರೂಪವಾಗಿರುವಂತೆ, ಆ ಸ್ಥೂಲಶರೀರದೊಡನೆ ನೀನು ಪುನಃ ಕೂಡಿಕೊಳ್ಳುವೆ ॥೧೨--೧೩॥

ನೀನು ತಿಳಿಯಬೇಕಾದುದನ್ನೆಲ್ಲ ತಿಳಿದಿರುವೆಯಾದಕಾರಣ, ಕೇವಲ ಪರಿಶುದ್ಧಳಾಗಿಯೂ ಪ್ರಪಂಚವ್ಯಾಪಾರಪರಾಯಣೆಯಾಗಿಯೂ ಇದ್ದುಗೊಂಡು, ಶರತ್ಕಾಲಿಕವಾದ ಮೇಘಮಂಡಲ ದಂತೆ, ಪ್ರಪಂಚದಲ್ಲಿ ಯಾರಿಗೂ ಬಾಧೆಯನ್ನುಂಟುಮಾಡದಿರುವೆ ॥೧೪॥

ಎಲೌ ಪುತ್ರಿ! ನೀನು ನಿರಂತರವೂ ಧ್ಯಾನನಿಷ್ಠಳಾಗಿರುವೆ; ಸಮಸ್ತವನ್ನೂ ಆತ್ಮತ್ವೇನ ಧ್ಯಾನಮಾಡುತಿರುವೆ; ವಸ್ತುತಃ ಧ್ಯಾನಧಾರಣಾದಿಗಳೆಲ್ಲವೂ ಅಸತ್ಯಗಳಾಗಿದ್ದರೂ, ವ್ಯವಹಾ ರಾತ್ಮಕವಾದ ಧ್ಯಾನಧಾರಣಾದಿಗಳನ್ನು ನೀನು ಧರಿಸಿರುವೆ; ವಾಯುವಿಗೆ ಸ್ಪಂದವೇ ಸ್ವಭಾವ ವಾಗಿರುವಂತೆ, ದೇಹಕ್ಕೂ ಸ್ಪಂದವು ಸ್ವಾಭಾವಿಕವಾಗಿರುವುದರಿಂದ, ಒಂದೊಂದುವೇಳೆ ಶರೀರ ಸ್ಪಂದದಿಂದ ವಿಲಾಸಪಡುವೆ. ಇಂತಹ ನೀನು, ಯಾವಾಗಲಾದರೂ ಒಂದು ಸಲ ಬಹಿರ್ಮುಖ ಳಾಗುವೆಯಾದರೆ, ಆಗ—ಯಾರಿಗೂ ವಿರೋಧವಿಲ್ಲದವಳಾಗಿ—ಸ್ವಕೀಯವಾದ ಮನೋವ್ಯಾ ಪಾರಗಳನ್ನು ಸ್ವೇಚ್ಛೆಯಾಗಿ ಬಿಡದೆ—ನ್ಯಾಯವಾಗಿ ಹಸಿವೆಯಡಗುವುದಕ್ಕೋಸ್ಕರ—ಆ ಸಮ ಯಕ್ಕೆ ಆವಶ್ಯಕವಾದಷ್ಟುಮಾತ್ರವೇ ಪ್ರಾಣಿಹಿಂಸೆಯನ್ನು ಮಾಡುವೆ ॥೧೫-೧೭॥

ಆಗ ನೀನು ಕೇವಲ ನ್ಯಾಯಯುಕ್ತವಾದ ಜೀವನವುಳ್ಳವಳಾಗಿ, ಲೋಕದಲ್ಲಿ ಅನ್ಯಾಯ ಬಾಧಿಕೆಯೆಂದು ಹೆಸರುಪಡೆದು, ಜೀವನ್ಮುಕ್ತಶರೀರವುಳ್ಳವಳಾಗಿ, ಆತ್ಮಜ್ಞಾನನಿಷ್ಠಳಾಗಿರುವೆ ॥

ಅಯ್ಯಾ! ರಾಮ! ಆ ಬ್ರಹ್ಮನು ಈ ರೀತಿಯಾಗಿ ಹೇಳಿ ಅಂತರಿಕ್ಷದಲ್ಲಿಯೇ ಅಂತರ್ಧಾನ ಹೊಂದಿಬಿಟ್ಟನು. ಬಳಿಕ ಆ ಸೂಚಿಯು 'ಹಾಗೆಯೇ ಆಗಲಿ; ಬ್ರಹ್ಮನ ಮಾತನ್ನು ನಾನು ನಡೆ

ಪ್ರಾದೇಶಃಪ್ರಥಮಮಭೂತ್ತತೋಽಪಿಹಸ್ತೋಽವ್ಯಾಮಶ್ಚಾಪ್ಯಥವಿಟಪಸ್ತತೋಽಭ್ರಮಾಲಾ
ಸೋಽದ್ಯತ್ಸ್ವಾವಯವಲತಾಬಭೌ ನಿಮೇಷಾತ್ ಸಙ್ಕಲ್ಪದ್ರುಮಕಣಿಕಾಙ್ಕುರಕ್ರಮೇಣ॥೨೦॥
ತದ್ಗಾತ್ರಾಣ್ಯವಿಕಲಶಕ್ತಿಮನ್ತಿ ದೇಹಾತ್ ಉದ್ಭೂತಾನ್ಯಥ ಕರಣೇನ್ದ್ರಿಯಾಣಿ ಸಮ್ಯಕ್।
ಸಙ್ಕಲ್ಪದ್ರುಮವನಪುಷ್ಪವತ್ಸಮನ್ತಾತ್ ಬೀಜೌಘಾನ್ಯಲಮಭವಂಸ್ತಿರೋಹಿತಾನಿ॥೨೧॥

ಇತಿ ಉತ್ಪತ್ತಿಪ್ರಕರಣೇ ಸೂಚ್ಯುಪಾಖ್ಯಾನೇ ಸೂಚೀಶರೀರಲಾಭೋ ನಾಮ
ಪಞ್ಚಸಪ್ತತಿತಮಃ ಸರ್ಗಃ.

ಯಿಸಿದ ಮಾತ್ರದಿಂದಲೇ ಏನು ದೋಷವು? ಅಥವಾ ಅದನ್ನು ಪರಿಹರಿಸಿದ ಮಾತ್ರದಿಂದಲೇ ಉಂಟಾಗುವ ಸಂತೋಷವೇನು?'–ಎಂದು ಯೋಚಿಸಿಕೊಂಡು, ಮನಸ್ಸಿನೊಳಗೇ ಪೂರ್ವಶರೀರ ವಾಸನೆಯುಳ್ಳವಳಾದಳು ॥೧೯॥

ಆಗ ಮೊದಲು ಒಂದು ಗೇಣುದ್ದವಾದಳು; ಆಮೇಲೆ ಮೊಳದುದ್ದವಾದಳು; ಬಳಿಕ ಕ್ರಮವಾಗಿ ಮಾರುದ್ದವಾಗಿಯೂ, ಮರದ ಕೊಂಬೆಯಷ್ಟುದ್ದವಾಗಿಯೂ, ಮೇಘಪಂಕ್ತಿಯಷ್ಟು ದೊಡ್ಡ ಆಕಾರವುಳ್ಳವಳಾಗಿಯೂ ಆಗುತ, ಸಂಕಲ್ಪದಲ್ಲಿ ಕಲ್ಪಿಸಿದ ಅಂಕುರವು ಬೆಳೆಯುವಂತೆ, ಒಂದು ಕ್ಷಣದೊಳಗಾಗಿ ತನ್ನ ಪೂರ್ವದೇಹವುಳ್ಳವಳಾಗಿ ಪ್ರಕಾಶಿಸಿದಳು ॥೨೦॥

ಸಂಕಲ್ಪಕಲ್ಪಿತವಾದ ಕಾಡಿನ ಮರಗಳ ಪುಷ್ಪಗಳಂತೆ, ಪೂರ್ವದಲ್ಲಿ ಅಂತರ್ಧಾನಹೊಂದಿದ್ದ ಅವಳ ಶರೀರಾವಯವಗಳು, ಪೂರ್ವದಂತೆಯೇ ಸಂಪೂರ್ಣಶಕ್ತಿಯುಳ್ಳವುಗಳಾಗಿ ಪ್ರಾದುರ್ಭವಿಸಿದುವು ॥೨೧॥

ಇದು ಉತ್ಪತ್ತಿಪ್ರಕರಣದಲ್ಲಿ ಸೂಚ್ಯುಪಾಖ್ಯಾನದೊಳಗೆ ಸೂಚೀಶರೀರಲಾಭವೆಂಬ
ಎಪ್ಪತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಷಟ್ಸಪ್ತತಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಅಥಾಭವದಸೌ ಸೂಚೀ ಕರ್ಕಟೀ ರಾಕ್ಷಸೀ ಪುನಃ ।
ಸೂಕ್ಷ್ಮೈವ ಸ್ಥೌಲ್ಯಮಾಯಾತಾ ಮೇಘಲೇಖೇವ ವಾರ್ಷಿಕೀ ॥೧॥
ನಿಜಮಾಕಾಶಮಾಸಾದ್ಯ ಕಿಂಚಿತ್ ಪ್ರಮುದಿತಾ ಸತೀ ।
ಬೃಹದ್ರಾಕ್ಷಸಭೂಃವಂ ತತ್ ಬೋಧಾತ್ ಕಂಚುಕವಜ್ಜಹೌ ॥೨॥
ತತ್ರೈವ ಧ್ಯಾಯತೀ ತಸ್ಥೌ ಬದ್ಧಪದ್ಮಾಸನಸ್ಥಿತಿಃ ।
ವ್ಯಾಲಮ್ಬ್ಯ ಸಂವಿದಂ ಶುದ್ಧಾಂ ಸಂಸ್ಥಿತಾ ಗಿರಿಕೂಟವತ್ ॥೩॥
ಅಥ ಸಾ ಮಾಸಷಟ್ಕೇನ ಧ್ಯಾನಾದ್ಬೋಧಮುಪಾಗತಾ ।
ಮಹಾಜಲದನಾದೇನ ಪ್ರಾವೃಷೀವ ಶಿಖಣ್ಡಿನೀ ॥೪॥
ಪ್ರಬುದ್ಧಾ ಸಾ ಬಹಿರ್ವೃತ್ತಿಃ ಬಭೂವ ಕ್ಷುತ್ಪರಾಯಣಾ ।
ಯಾವದ್ದೇಹಂ ಸ್ವಭಾವೋಽಸ್ಯ ದೇಹಸ್ಯ ನ ನಿವರ್ತತೇ ॥೫॥

ಉತ್ಪತ್ತಿಪ್ರಕರಣದಲ್ಲಿ ಎಪ್ಪತ್ತಾರನೆಯ ಸರ್ಗವು.

ಲಬ್ಧ್ವಾ ದೇಹಂ ಸಮಾಧಿಸ್ಥಾ ಷಣ್ಮಾಸಾತ್ಕ್ಷುಧಿತೋತ್ಥಿತಾ ।
ಕರ್ಕಟೀ ವಾಯುವಚಸಾ ಕಿರಾತವಿಷಯಂ ಯಯೌ ॥

ಸಮಾಧಿಯಲ್ಲಿದ್ದ ಕರ್ಕಟಿಯು-ಆರುತಿಂಗಳುಕಾಲ ಹಸಿವಿಲ್ಲದೆಯೂ, ಏಳದೆಯೂ ಇದ್ದು ಗೊಂಡು—ಬಳಿಕ ವಾಯುವಿನ ಮಾತಿನಮೇರೆಗೆ ಕಿರಾತದೇಶಕ್ಕೆ ಹೋದಳೆಂಬ ವಿಷಯವು ಈ ಸರ್ಗದಲ್ಲಿ ಹೇಳಲ್ಪಡುವುದು ॥

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಸಮಸ್ತವಾದ ಅವಯವಗಳೂ ಪ್ರಾದುರ್ಭವಿಸಿದನಂತರ, ವರ್ಷಾಕಾಲಿಕವಾದ ಮೇಘಪಂಕ್ತಿಯಂತೆ, ಆ ಸೂಚಿಯೇ ಸ್ಥೂಲತ್ವವನು ಹೊಂದಿ ಮತ್ತೆ ಕರ್ಕಟಿಯೆಂಬ ರಾಕ್ಷಸಿಯಾದಳು ॥೧॥

ಆಗ ಸ್ವಾತ್ಮಭೂತವಾದ ಬ್ರಹ್ಮಾಕಾಶವನ್ನು ಹೊಂದಿದವಳಾಗಿ, ಸ್ವಲ್ಪ ಸಂತೋಷಪಟ್ಟವಳಾಗಿ, ಹಾವು ಪೊರೆಯನ್ನು ಬಿಡುವಂತೆ, ಜ್ಞಾನೋದಯವಾದಕಾರಣ ಆ ದೊಡ್ಡ ರಾಕ್ಷಸ ಶರೀರವನ್ನು ಬಿಟ್ಟುಬಿಟ್ಟಳು ॥೨॥

ಅವಳು, ಪದ್ಮಾಸನ ಹಾಕಿಕೊಂಡು ಅಲ್ಲಿಯೇ ಧ್ಯಾನಮಾಡುತ, ಪ್ರಾಪಂಚಿಕವ್ಯವಹಾರ ಶೂನ್ಯವಾದ ಜ್ಞಾನವೃತ್ತಿಯನ್ನಾಶ್ರಯಿಸಿದವಳಾಗಿ, ಪರ್ವತಶಿಖರದಂತೆ ನಿಶ್ಚಲಳಾಗಿದ್ದಳು ॥೩॥

ಅನಂತರ ಆರು ತಿಂಗಳು ಕಳೆಯಲಾಗಿ, ವರ್ಷಾಕಾಲದಲ್ಲಿ ಮೇಘಧ್ವನಿಯಿಂದ ಹೆಣ್ಣುನವಿಲು ಎಚ್ಚರಗೊಳ್ಳುವಂತೆ, ಅವಳು ಧ್ಯಾನದಿಂದ ನಿವೃತ್ತಳಾಗಿ ಎಚ್ಚರಗೊಂಡಳು ॥೪॥

ಹೀಗೆ ಪ್ರಬುದ್ಧಳಾಗಿ ಬಹಿರ್ಮುಖಳಾದ ಆ ಕರ್ಕಟಿಯು, ಮತ್ತೆ ಹಸಿವೆಗೊಳಗಾದಳು. ಈ ದೇಹಕ್ಕೆ ಈ ಕ್ಷುತ್ತೃಷ್ಣಾದಿಗಳು ಸ್ವಭಾವಸಿದ್ಧವಾದುವುಗಳು. ಈ ಸ್ವಭಾವವು ಈ ದೇಹವಿರುವವರೆಗೂ ಹೋಗುವುದಿಲ್ಲ ॥೫॥

ಅಥ ಸಾ ಕಿಂ ಗ್ರಸಇತಿ ಚಿನ್ತಯಾವಾಸ ಚಿನ್ತಯಾ ।
ಭೋಕ್ತವ್ಯಃ ಪರಜೀವಶ್ಚ ನ್ಯಾಯೇನ ನ ವಿನಾ ಮಯಾ ॥೬॥
ಯದಾರ್ಯಗರ್ಹಿತಂ ಯದ್ವಾ ನ್ಯಾಯೇನ ನ ಸಮಾರ್ಜಿತಮ್ ।
ತಸ್ಮಾದ್ಗ್ರಾಸಾದ್ವರಂ ಮನ್ಯೇ ಮರಣಂ ದೇಹಿನಾಮಿದಮ್ ॥೭॥
ಯದಿ ದೇಹಂ ತ್ಯಜಾಮೀದಂ ತನ್ನ್ಯಾಯೋಪಾರ್ಜಿತಂ ವಿನಾ ।
ನ ಕಿಞ್ಚಿದಸ್ತಿ ನ್ಯಾಯಂ ಭುಕ್ತೋಽರ್ಥೋಽಹಿ ಗರಾಯತೇ ॥೮॥
ಯನ್ನ ಲೋಕಕ್ರಮಾಪ್ರಾಪ್ತಂ ತೇನ ಭುಕ್ತೇನ ಕಿಂ ಭವೇತ್ ।
ನ ಜೀವಿತೇನ ಮೇ ಮೃತ್ಯಾ ಕಿಞ್ಚಿತ್ ಕಾರಣಮಸ್ತಿ ಮೇ ॥೯॥
ಮನೋಮಾತ್ರಮಹಂ ಹ್ಯಾಸಂ ದೇಹಾದಿಭ್ರಮಭೂಷಣಮ್ ।
ತಚ್ಛಾನ್ತಂ ಸ್ವಾವಬೋಧೇನ ದೇಹಾದೇಹದೃಶಃ ಕುತಃ ॥೧೦॥
ಏವಂ ಸ್ಥಿತಾ ಮೌನವತೀ ಶುಶ್ರಾವ ಗಗನಾದ್ಗಿರಮ್ ।
ರಕ್ಷಸ್ಸ್ವರೂಪಸನ್ತ್ಯಗತುಷ್ಟೇನೋಕ್ತಾಂ ನಭಸ್ವತಾ ॥೧೧॥

ಬಳಿಕ ಅವಳು, ಈಗ ನಾನೇನುತಿನ್ನಲೆಂಬ ಚಿಂತೆಗೊಳಪಟ್ಟು ಈರೀತಿಯಾಗಿ ಯೋಚಿಸಿದಳು:—ನನಗಂತು ಈಗ ಹಸಿವೆ ಹೆಚ್ಚಾಗಿರುವುದು. ಆದರೂ ನ್ಯಾಯವಿಲ್ಲದೆ ನಾನು ಯಾವುದೊಂದು ಇತರವಾದ ಪ್ರಾಣಿಯನ್ನೂ ತಿನ್ನಕೂಡದು ॥೬॥

ಪ್ರಪಂಚದಲ್ಲಿ ಯಾವುದು ಶಿಷ್ಟರಿಂದ ನಿಂದಿತವಾದುದೋ, ಯಾವುದು ನ್ಯಾಯದಿಂದ ಉಪಾರ್ಜಿತವಲ್ಲವೋ, ಅಂತಹ ಗ್ರಾಸಕ್ಕಿಂತಲೂ ಮನುಷ್ಯರಿಗೆ ಮರಣವೇ ಲೇಸೆಂದು ನಾನು ತಿಳಿದಿರುವೆನು ॥೭॥

ಅದುಕಾರಣ, ನ್ಯಾಯೋಪಾರ್ಜಿತವಾದ ಆಹಾರ ಸಿಕ್ಕದೆ ನಾನು ಈಗ ಈ ದೇಹವನ್ನು ಬಿಟ್ಟಪಕ್ಷದಲ್ಲಿ, ಇದರಿಂದ ಯಾವುದೊಂದು ಅನ್ಯಾಯವೂ ಸಂಘಟಿಸಿದಂತಾಗಲಾರದು. ಅದಲ್ಲದೆ ಅನ್ಯಾಯಾರ್ಜಿತವಾದುದನ್ನು ತಿಂದಪಕ್ಷದಲ್ಲಿ, ಅದು ಕೇವಲ ವಿಷವಾಗುವುದು॥೮॥

ಯಾವುದು ಲೋಕನ್ಯಾಯದಿಂದ ಪ್ರಾಪ್ತವಾಗುವುದಿಲ್ಲವೋ, ಅದನ್ನು ತಿಂದುದರಿಂದ ಫಲವೇನು? ನನಗಾದರೋ, ಈಗ ಜೀವಿತದಿಂದಲೂ ಯಾವುದೊಂದು ಫಲವೂ ಇಲ್ಲ; ಮರಣದಿಂದಲೂ ಇಲ್ಲ ॥೯॥

ನಾನು ದೇಹಾದಿಭ್ರಮಕ್ಕೆ ಭೂಷಣವಾಗಿದ್ದ ಕೇವಲ ಮನೋಮಾತ್ರಳಾಗಿದ್ದೆನು. ಈಗ ಅದು ಸ್ವಾತ್ಮಜ್ಞಾನದಿಂದ ಶಾಂತವಾಯ್ತು; ಇನ್ನು ದೇಹವೆಂದೂ, ದೇಹವಿಲ್ಲವೆಂದೂ ಭ್ರಮೆಯೆಲ್ಲಿರುವುದು? ॥೧೦॥

ಅಯ್ಯಾ! ರಾಮ! ಈ ರೀತಿಯಾಗಿ ಯೋಚಿಸುತ ಮೌನದಿಂದಿದ್ದ ಆ ರಾಕ್ಷಸಿಯು, ಇವಳು ರಾಕ್ಷಸರೂಪವನ್ನು ಹೊಂದಿದ್ದರೂ ದೇಹಾಭಿಮಾನರಹಿತಳಾಗಿರುವುದನ್ನು ಕಂಡು ಸಂತುಷ್ಟನಾದ ವಾಯುವಿನಿಂದ ಹೇಳಲ್ಪಟ್ಟ ಈ ಮಾತನ್ನು ಅಂತರಿಕ್ಷದಲ್ಲಿ ಕೇಳಿದಳು ॥೧೧॥

ಗಚ್ಛ ಕರ್ಕಟಿ ಮೂಢಾಂಸ್ತ್ವಂ ಜ್ಞಾನೇನಾಶ್ವವಬೋಧಯ ।
ಮೂಢೋತ್ತಾರಣಮೇವೇಹ ಸ್ವಭಾವೋ ಮಹತಾಮಿತಿ ॥೧೨॥
ಬೋಧ್ಯಮಾನೋ ಭವತ್ಯಾಪಿ ಯೋ ನ ಬೋಧಮುಪೈಷ್ಯತಿ ।
ಸ್ವನಾಶಾಯೈವ ಜಾತೋಽಸೌ ನ್ಯಾಯ್ಯೋ ಗ್ರಾಸೋ ಭವೇತ್ ತವ ॥೧೩॥
ಶ್ರುತ್ವೇತ್ಯನುಗೃಹೀತಾಸ್ಮಿ ತ್ವಯೇತ್ಯುಕ್ತವತೀ ಶನೈಃ ।
ಉತ್ತಸ್ಥೌ ಶೈಲಶಿಖರಾತ್ ಕ್ರಮಾದವರುರೋಹ ಚ ॥೧೪॥
ಅಧಿತ್ಯಕಾಮತೀತ್ಯಾಶು ಗತ್ವಾ ಚೋಪತ್ಯಕಾತಟಮ್ ।
ವಿವೇಶ ಶೈಲಪಾದಸ್ಥಂ ಕಿರಾತಜನಮಣ್ಡಲಮ್ ॥೧೫॥
ಬಹ್ವನ್ನಪಶುಲೋಕೌಘದ್ರವ್ಯಶಷ್ಪೌಷಧಾಮಿಷಮ್ ।
ಅನನ್ತಮೂಲಪಾನಾನ್ನಮೃಗಕೀಟಖಗಾದಿಕಮ್ ॥೧೬॥
ಪ್ರಚಲಿತವಲಿತಾಂಜನಾಚಲಾಭಾ ಹಿಮಗಿರಿಪಾದನಿವೇಶಿತಂ ಸುದೇಶಮ್ ।
ತದನು ಗತವತೀ ನಿಶಾಚರೀ ಸಾ ನಿಶಿ ಸುಘನಾನ್ಧತಮಿಸ್ರಮಾರ್ಗಭೂಮೌ॥೧೭॥

ಇತಿ ಉತ್ಪತ್ತಿಪ್ರಕರಣೇ ಸೂಚ್ಯುಪಾಖ್ಯಾನೇ ಅನ್ಯಾಯಬಾಧಿಕೋ ನಾಮ
ಷಟ್ಸಪ್ತತಿತಮಃ ಸರ್ಗಃ.

ಆ ವಾಯು ಹೇಳಿದುದೇನೆಂದರೆ:—ಎಲೌ! ಕರ್ಕಟಿ! ನೀನು ಈಗ ಹೋಗು; ಮೂಢರನ್ನೆಲ್ಲ ಜ್ಞಾನೋಪದೇಶದಿಂದ ಎಚ್ಚರಪಡಿಸು. ಈ ಪ್ರಪಂಚದಲ್ಲಿ ಮೂಢರನ್ನು ಉದ್ಧಾರಮಾಡುವುದೇ ಮಹಾತ್ಮರಿಗೆ ಸ್ವಭಾವವು ॥೧೨॥

ನಿನ್ನಿಂದ ಎಚ್ಚರಗೊಳಿಸಲ್ಪಟ್ಟರೂ ಯಾವನು ಜಾಗರೂಕನಾಗುವುದಿಲ್ಲವೋ, ಅವನು ತನ್ನ ನಾಶಕ್ಕಾಗಿಯೇ ಹುಟ್ಟಿದವನೆಂದು ತಿಳಿಯಬೇಕು. ಅಂಥವನು ನಿನಗೆ ಯುಕ್ತವಾದ ಗ್ರಾಸವಾಗುವನು ॥೧೩॥

ಅಯ್ಯಾ! ರಾಮ! ಈರೀತಿಯಾಗಿ ವಾಯುವಿನಿಂದ ಹೇಳಲ್ಪಟ್ಟ ಮಾತನ್ನು ಕೇಳಿ, ಆ ಕರ್ಕಟಿಯು, ಆ ವಾಯುವನ್ನು ಕುರಿತು—ನೀನು ನನ್ನನ್ನು ಅನುಗ್ರಹಿಸಿದಂತಾಯ್ತೆಂಬುದಾಗಿ ಹೇಳಿ, ಮೆಲ್ಲಗೆ ಎದ್ದವಳಾದಳು ; ಆ ಪರ್ವತಶಿಖರದ ದೆಸೆಯಿಂದ ಮೆಲ್ಲಗೆ ಇಳಿದವಳೂ ಆದಳು ॥

ಅಲ್ಲಿಂದ ಕ್ರಮವಾಗಿ ಪರ್ವತದ ಮೇಲುಭಾಗಕ್ಕಿಳಿದು, ಆಮೇಲೆ ಕಿಬ್ಬಿಗೆ ಬಂದು, ಅಲ್ಲಿ ಪರ್ವತ ಸಮೀಪದಲ್ಲಿದ್ದ ಕಿರಾತದೇಶವನ್ನು ಪ್ರವೇಶಿಸಿದಳು ॥೧೫॥

ಆ ದೇಶದಲ್ಲಿ, ಅನ್ನ ಪಶು ಜನ ದ್ರವ್ಯ ಹುಲ್ಲು ಲತೆ ಮಾಂಸ—ಇವುಗಳು ಯಥೇಚ್ಛವಾಗಿದ್ದುವು ; ಮತ್ತು, ಕಂದಮೂಲಗಳು ಪಾನ ಆಹಾರ ಮೃಗ ಕೀಟ ಪಕ್ಷಿ—ಇತ್ಯಾದಿಗಳೂ ಅಪಾರವಾಗಿ ತುಂಬಿದ್ದುವು ॥೧೬॥

ಈರೀತಿಯಾಗಿ ಆ ಹಿಮವತ್ಪರ್ವತದ ತೊಪ್ಪಲಿನಲ್ಲಿ ಏರ್ಪಡಿಸಲ್ಪಟ್ಟಿದ್ದ ಆ ದೇಶವನ್ನು, ಅಂಜನಪರ್ವತವೇ ಸಂಚರಿಸುತಿರುವುದೋ ಎಂಬ ಭ್ರಮೆಯುಂಟುಮಾಡುತಿರುವ ಆ ಕರ್ಕಟಿಯು, ಮಾರ್ಗದಲ್ಲೆಲ್ಲ ಕತ್ತಲೆಗವಿದಿರುವ ರಾತ್ರಿಕಾಲದಲ್ಲಿ ಪ್ರವೇಶ ಮಾಡಿದವಳಾದಳು ॥೧೭॥

ಇದು ಉತ್ಪತ್ತಿಪ್ರಕರಣದಲ್ಲಿ ಕರ್ಕಟಿಕೋಪಾಖ್ಯಾನದೊಳಗೆ
ಅನ್ಯಾಯಬಾಧಿಕವೆಂಬ ಎಪ್ಪತ್ತಾರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಸಪ್ತಸಪ್ತತಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಏತಸ್ಮಿನ್ನನ್ತರೇ ತತ್ರ ಕಿರಾತಜನಮಣ್ಡಲೇ ।
ಹಸ್ತಹಾರ್ಯತಮಃಪಿಣ್ಡಾ ಬಭೂವಾಸಿತಯಾಮಿನೀ ॥೧॥
ನೀಲಮೇಘಪಟಚ್ಛನ್ನಾ ನಿರಿನ್ದುಗಗನಾನ್ತರಾ ।
ತಮಾಲವನಸಂಪಿಣ್ಡಾ ಮಾಂಸಲೋಡ್ಡೀನಕಜ್ಜಲಾ ॥೨॥
ಲತಾಘನತಯಾ ಗ್ರಾಮಕೋಟರೈಕಾನ್ಧ್ಯಮನ್ಥರಾ ।
ಗೃಹಚತ್ವರಸಮಾಬ್ಧೇ ನಗರೇ ನವಯೌವನಾ ॥೩॥
ಚತ್ವರೇಷು ತಮಃಪಿಣ್ಡೀ ಪ್ರಜ್ವಲೀಕೃತದೀಪಿಕಾ ।
ಕುಞ್ಜೇ ತಚ್ಛಿದ್ರನಿಷ್ಕ್ರಾನ್ತದೀಪಿಕಾರೋಚಿರಾಜಿತಾ ॥೪॥

ಉತ್ಪತ್ತಿಪ್ರಕರಣದಲ್ಲಿ ಎಪ್ಪತ್ತೇಳನೆಯ ಸರ್ಗವು.

ತಮಿಸ್ರಾ ವರ್ಣ್ಯತೇ ಪಶ್ಚಾತ್ ದರ್ಶನಂ ರಾಜಮನ್ತ್ರಿಣೋಃ ।
ಕರ್ಕಟ್ಯಾಸ್ತತ್ಪರೀಕ್ಷಾರ್ಥಂ ಪ್ರಶ್ನೇಚ್ಛಾ ಚಾತ್ರ ವಿಸ್ತರಾತ್ ॥

ಈ ಸರ್ಗದಲ್ಲಿ ಪ್ರಥಮತಃ ಅಂಧಕಾರಮಯವಾದ ರಾತ್ರಿಯೂ, ಬಳಿಕ ಕರ್ಕಟಿಯು ರಾಜಮಂತ್ರಿಗಳ ದರ್ಶನಮಾಡುವಿಕೆಯೂ, ಅನಂತರ ಅವರ ಪರೀಕ್ಷಾರ್ಥವಾಗಿ ಪ್ರಶ್ನೆಮಾಡಲೆಳಸುವಿಕೆಯೂ ಕೂಡ, ವಿಸ್ತಾರವಾಗಿ ವರ್ಣಿಸಲ್ಪಡುವುವು.

ವಸಿಷ್ಠರು ರಾಮನನ್ನು ಕುರಿತು ಹೇಳಿದರು:—

ಅಯ್ಯಾ! ರಾಮ! ಹಿಂದೆ ಹೇಳಿದಂತೆ ಕರ್ಕಟಿಯು ಆ ಕಿರಾತದೇಶಕ್ಕೆ ಪ್ರವೇಶಮಾಡುವುದರೊಳಗಾಗಿ, ಅಲ್ಲಿ ಕೈಯಿಂದ ಹಿಡಿದುಕೊಳ್ಳಬಹುದೋ ಎಂಬಮಟ್ಟಿಗೆ ಸಾಂದ್ರವಾದ ಅಂಧಕಾರವುಳ್ಳದಾಗಿರುವ ಕೃಷ್ಣಪಕ್ಷರಾತ್ರಿಯುಂಟಾಗಿಬಿಟ್ಟಿತ್ತು ॥೧॥

ಆ ರಾತ್ರಿಯಲ್ಲಿ—ಕೃಷ್ಣಮೇಘಗಳು ವಸ್ತ್ರದಂತೆ ಆಚ್ಛಾದಿಸಿಕೊಂಡಿದ್ದುವು; ಅಂತರಿಕ್ಷಪ್ರದೇಶವು ಚಂದ್ರಶೂನ್ಯವಾಗಿದ್ದಿತು; ಹೊಂಗೆಯ ತೋಪುಗಳನ್ನೆಲ್ಲ ಒಟ್ಟಾಗಿ ಕೂಡಿಸಿಬಿಟ್ಟಿದೆಯೋ ಎಂಬಂತೆಯೂ, ಕಾಡಿಗೆಯು ಗಟ್ಟಿಯಾಗಿ ಮೇಲಕ್ಕೆ ಹಾರುತ್ತಿದೆಯೋ ಎಂಬಂತೆಯೂ ತೋರುತಿದ್ದಿತು ॥೨॥

ಲತೆಗಳು ದಟ್ಟವಾಗಿ ಹಬ್ಬಿರುವುದರಿಂದ, ಆ ರಾತ್ರಿಯಲ್ಲಿ ಆ ಗ್ರಾಮದ ಮೂಲೆಗಳೊಳಗೆ ಕತ್ತಲೆಯೊಂದೇ ಚೆನ್ನಾಗಿ ವ್ಯಾಪಿಸುತಿದ್ದಿತು; ಮನೆಗಳಿರುವ ಬೀದಿಗಳಲ್ಲಿಯೂ ಚತುಷ್ಪಥಗಳಲ್ಲಿಯೂ ದೀಪಹಚ್ಚಿಸಿರುವುದರಿಂದ, ಪಟ್ಟಣಗಳೊಳಗೆ ನವಯೌವನ ಪರಿಪೂರ್ಣಳಂತೆ ಕಾಣಿಸುತಿದ್ದಿತು ॥೩॥

ಆ ರಾತ್ರಿಯಲ್ಲಿ, ಚತುಷ್ಪಥಗಳೊಳಗೆ ದೀಪಗಳುರಿಯುತಿರುವುದರಿಂದ ಅಂಧಕಾರವೆಲ್ಲವೂ ಮೂಲೆಗಳಲ್ಲಿ ಉಂಡುಂಡೆಯಾಗಿ ಅಡಗಿಹೋಯ್ತು; ಸ್ವಲ್ಪ ವಕ್ರವಾಗಿರುವ ಗವಾಕ್ಷಚ್ಛಿದ್ರಗಳಿಂದ ಮನೆಯೊಳಗುರಿಯುತ್ತಿರುವ ದೀಪಗಳ ಕಾಂತಿಯು ಹೊರಗೆ ಹೊರಟು ಆ ರಾತ್ರಿಯನ್ನೆಲ್ಲ ಪ್ರಕಾಶಪಡಿಸುತಿದ್ದಿತು ॥೪॥

ಸುವಯಸ್ಯೇವ ಕರ್ಕಟ್ಯಾಃ ಪರಿನೃತ್ಯತ್ಪಿಶಾಚಿಕಾ ।
ಮತ್ತವೇತಾಳಕಙ್ಕಾಳಕಾಷ್ಠಮೌನಮಿವಾಸ್ಥಿತಾ ॥೫॥
ಸುಷುಪ್ತಮೃಗಭೂತೌಘಘನನೀಹಾರಹಾರಿಣೀ ।
ಮನ್ದಮನ್ದಮರುತ್ಸ್ಪರ್ಶಲಸತ್ಪ್ರಾಲೇಯಸೀಕರಾ ॥೬॥
ಸರಸ್ಸು ವಿವಟದ್ವಾರಿ ಕಾಕಭೇಕತರಙ್ಗಿತಾ ।
ಅನ್ತಃಪುರೇಷು ರಮಣರಣನ್ನಾರೀನರಾನನಾ ॥೭॥
ಜಙ್ಗಲೇಷು ಜಗಜ್ಜ್ವಾಲಾಜಟಾಲಜ್ವಲನೋಜ್ಜ್ವಲಾ ।
ಕೇದಾರೇಷ್ವಮ್ಬುಸಂಸೇಕಪೃಷ್ಠಪಾಕಮಿಳಚ್ಛಲಾ ॥೮॥
ನಭಸ್ಸ್ಥಲೇಕ್ಷಿತಸ್ಪನ್ದಪ್ರವಿವಿಕ್ತರ್ಕ್ಷಚಕ್ರಿಕಾ ।
ವನೇಷು ವಿರಸದ್ವಾತಪತತ್ಪುಷ್ಪಫಲದ್ರುಮಾ ॥೯॥
ಶ್ವಭ್ರೇಷು ಕೌಶಿಕಸ್ಯಾನ್ತಃ ವಾಯಸವ್ಯಾಹತಾರವಾ ।
ತಸ್ಕರಾಕ್ರಾನ್ತಪರ್ಯನ್ತಗ್ರಾಮ್ಯಾಕ್ರನ್ದಸಕರ್ಕಶಾ ॥೧೦॥

ಆ ರಾತ್ರಿಯು ಕರ್ಕಟಿಗೆ ಒಳ್ಳೆಯ ಸಖಿಯೋ ಎಂಬಂತೆ ತೋರುತಿದ್ದಿತು; ಆಗ ಅನೇಕ ಪಿಶಾಚಗಳು ನರ್ತನಮಾಡುತಿದ್ದುವು; ಮದಿಸಿದ ಬೇತಾಳಗಳು ಮೂಳೆ ಮುಂತಾದುವುಗಳನ್ನು ಹೊತ್ತುಕೊಂಡು ಹೋಗುತಿದ್ದರೂ, ಅದನ್ನು ತಡೆಯತಕ್ಕವರಿಲ್ಲದೆ—ಆ ರಾತ್ರಿಯು ಕಟ್ಟಿಗೆಯಂತೆ ಮೌನವ್ರತವನ್ನು ಧರಿಸಿರುವುದೋ ಎಂಬಂತೆ ತೋರುತಿದ್ದಿತು ॥೫॥

ಅಲ್ಲಲ್ಲಿ ಮಲಗಿರುವ ಮೃಗಸಮೂಹಗಳಿಂದಲೂ, ಭೂತಸಮುದಾಯಗಳಿಂದಲೂ ಸಾಂದ್ರವಾದ ಹಿಮದಿಂದಲೂ ಆ ರಾತ್ರಿಯು ಶೋಭಿಸುತಿದ್ದಿತು; ಹಿಮರಾಶಿಗಳ ಮೇಲೆ ಮೆಲ್ಲಮೆಲ್ಲಗೆ ಗಾಳಿ ಬೀಸುತಿರುವುದರಿಂದ, ಅದರಲ್ಲಿ ತುಂತುರುಗಳು ಸ್ವಲ್ಪ ಹಾರಾಡುತಿದ್ದುವು ॥೬॥

ಕೊಳಗಳಲ್ಲಿಯೂ ಹಳ್ಳಗಳಲ್ಲಿಯೂ, ಕಾಗೆಗಳೂ ಕಪ್ಪೆಗಳೂ ಮಲಗಿಕೊಂಡಿದ್ದುವು; ಅಂತಃಪುರಗಳಲ್ಲಿ ಕ್ರೀಡಾಸಕ್ತರಾದ ಸ್ತ್ರೀಪುರುಷರು ವಿನೋದದಿಂದ ಸಲ್ಲಾಪಮಾಡುತಿದ್ದರು॥

ಕಾಡುಗಳಲ್ಲಿ ಪ್ರಳಯಾಗ್ನಿಯಂತೆ ಕಾಡುಗಿಚ್ಚು ಉರಿಯುತಿದ್ದಿತು; ಮುಳ್ಳುಹಂದಿಗಳ ಬೆನ್ನುಮೇಲೆ ಬೆಳೆದು ಪರಿಪಕ್ವವಾಗಿರುವ ಮುಳ್ಳುಗಳು, ಆ ರಾತ್ರಿಯಲ್ಲಿ ವಿಶೇಷವಾಗಿ ನೀರಿನಲ್ಲಿ ನೆನೆದು, ಅಲ್ಲಿಂದ ಜಾರಿಬಿದ್ದು, ಗದ್ದೆಗಳಲ್ಲೆಲ್ಲ ಸಿಕ್ಕುತಿದ್ದುವು ॥೮॥

ಅಂತರಿಕ್ಷಪ್ರದೇಶದಲ್ಲಿ ಕಣ್ಣು ಹುಟ್ಟಿದಂತೆ ಉದಯಿಸಿದ ನಕ್ಷತ್ರಮಂಡಲವು ನಿಶ್ಚಲವಾಗಿದ್ದಿತು; ಕಾಡುಗಳಲ್ಲಿ ವಾಯು ಬೀಸುತ- ಅದರ ವೇಗದಿಂದ ಮರಗಳ ಹೂವುಗಳೂ ಹಣ್ಣುಗಳೂ ಉದುರಿಬೀಳುತಿದ್ದುವು ॥೯॥

ಮರದ ಪೊಟ್ಟರೆಗಳಲ್ಲಿ ಗೂಗೆಗಳ ಕೂಗನ್ನು ಕೇಳಿ, ಕಾಗೆಗಳೂ ಕೂಗುತಿದ್ದುವು; ಕಳ್ಳರುಗಳು ಹತ್ತಿರ ಬಂದು ಆಕ್ರಮಿಸಿಕೊಳ್ಳುತಿರುವುದರಿಂದ, ಗ್ರಾಮಸ್ಥರೆಲ್ಲರೂ ಕ್ರೂರವಾಗಿ ಕಿರಿಚಿಕೊಳ್ಳುತಿದ್ದರು ॥೧೦॥

ವಿಪಿನೇ ವಿಪಿನಾಮೌನಾ ನಗರೇ ಸುಪ್ತನಾಗರಾ |
ವನೇಷು ವಿಸರದ್ವಾತಾ ನೀಡೇಷ್ವಸ್ಪನ್ದಪಕ್ಷಿಕಾ ||೧೧||
ಗುಹಾಸು ಸುಪ್ತಸಿಂಹಾಢ್ಯಾ ಕುಞ್ಜೇಷು ಸ್ವಪದೇಣಕಾ |
ಖೇ ಸಾವಶ್ಯಾಯನಿಕರಾ ವಿಪಿನೇ ಮೌನಚಾರಿಣೀ ||೧೨||
ಕಜ್ಜಲಾಮ್ಭೋದಮಧ್ಯಾಭಾ ಕಾಚಶೈಲೋದರೋಪಮಾ |
ಪಙ್ಕಪಿಣ್ಡಾನ್ತರಘನಾ ಖಡ್ಗಚ್ಛೇದ್ಯಾನ್ಧ್ಯಮಾಂಸಲಾ ||೧೩||
ಪ್ರಳಯಾನಿಲವಿಕ್ಷುಬ್ಧಕಜ್ಜಲಾಚಲಚಞ್ಚಲಾ |
ಏಕಾರ್ಣವಮಹಾಪಙ್ಕಪರ್ವತೋದರಮೇದುರಾ ||೧೪||
ಅಙ್ಗಾರಕೋಟರಘನಾ ಸೌಷುಪ್ತಪದಸುನ್ದರೀ |
ಅಜ್ಞಾನನಿದ್ರಾನಿಬಿಡಾ ಭೃಙ್ಗಪೃಷ್ಠಚ್ಛದಚ್ಛವಿಃ ||೧೫||
ತಸ್ಯಾಂ ರಜನ್ಯಾಂ ಭೀಮಾಯಾಂ ಕಿರಾತಜನಮಣ್ಡಲೇ |
ಮನ್ತ್ರಿಣಾ ಸಹ ಭೂಪಾಲಃ ತಸ್ಮಿನ್ನವಸರೇ ತದಾ ||೧೬||
ನಿರ್ಜಗಾಮ ಸುವೀರಾತ್ಮಾ ನಗರಾತ್ ಸುಪ್ತನಾಗರಾತ್ |
ಅಟವೀಂ ವಿಕ್ರಮೋನಾಮ ವಿಷಮಾಂ ವೀರಚರ್ಯಯಾ ||೧೭||

ಅರಣ್ಯದಲ್ಲೆಲ್ಲ ಕೇವಲ ನಿಶ್ಶಬ್ದವಾಗಿದ್ದಿತು; ಪಟ್ಟಣದೊಳಗೆ ಪಟ್ಟಣಿಗರೆಲ್ಲರೂ ಮಲಗಿಕೊಂಡಿದ್ದರು; ತೋಪುಗಳಲ್ಲಿ ಗಾಳಿ ಬೀಸುತಿದ್ದಿತು; ಗೂಡುಗಳಲ್ಲಿದ್ದ ನೊಣಗಳೂ ಕೂಡ ಅಲುಗಾಡುತಿರಲಿಲ್ಲ ||೧೧||

ಗುಹೆಗಳಲ್ಲಿ ಸಿಂಹಗಳು ಮಲಗಿದ್ದುವು; ಲತಾಗೃಹದಲ್ಲಿ ಜಿಂಕೆಗಳು ನಿದ್ರೆಮಾಡುತಿದ್ದುವು; ಅಂತರಿಕ್ಷಪ್ರದೇಶದಲ್ಲಿ ಮಂಜುಹನಿಗಳು ವಿಶೇಷವಾಗಿ ಪ್ರಸರಿಸುತಿದ್ದುವು; ಕಾಡಿನಲ್ಲಿದ್ದ ಮೃಗಗಳೂ ಮೌನದಿಂದ ಸಂಚರಿಸುತಿದ್ದುವು ||೧೨||

ಆಪಾತತಃ ಆ ರಾತ್ರಿಯನ್ನು ನೋಡಿದರೆ,- ಕಾಡಿಗೆಯ ಮೇಘದ ಮಧ್ಯದಂತೆಯೂ, ಗಾಜಿನ ಬೆಟ್ಟದ ಒಳಭಾಗದಂತೆಯೂ ಮಣ್ಣಿನುಂಡೆಯ ಒಳಭಾಗದಂತೆ ನಿಬಿಡವಾಗಿಯೂ ಕಾಣಿಸುತಿದ್ದಿತು; ಮತ್ತು, ಆಗಿನ ಅಂಧಕಾರವನ್ನು ಕತ್ತಿಯಿಂದ ಕತ್ತರಿಸಬಹುದೋಎಂಬಂತೆ ತೋರುತಿದ್ದಿತು ||೧೩||

ಪ್ರಳಯಮಾರುತದಿಂದ ಚೂರ್ಣೀಕೃತವಾಗಿ ಅಂಜನಪರ್ವತವೇ ಹಾರಾಡುತಿದೆಯೋ ಎಂಬಂತೆ ಭಾಸಮಾನವಾಗುತಿದ್ದಿತು; ಪ್ರಳಯಕಾಲಿಕವಾದ ಏಕಾರ್ಣವದ ಕೆಸರಿನಂತೆಯೂ, ಪರ್ವತದ ಅಂತರ್ಭಾಗದಂತೆಯೂ ಆ ರಾತ್ರಿಯು ಗಾಢವಾಗಿದ್ದಿತು ||೧೪||

ಇದ್ದಲಿನಂತೆ ಕಪ್ಪಾಗಿ ಸಾಂದ್ರವಾಗಿಯೂ, ಗಾಢಾಜ್ಞಾನದಂತೆ ಭಾಸಮಾನವಾಗಿಯೂ ಮಾಯಾಮಯವಾದ ನಿದ್ರೆಯಂತೆ ನಿಬಿಡವಾಗಿಯೂ, ಆ ರಾತ್ರಿಯು ಪ್ರಕಾಶಮಾನವಾಗಿದ್ದಿತು ||೧೫||

ಅಯ್ಯಾ! ರಾಮ! ಹೀಗೆ ಆ ಕರ್ಕಟಿಯು ಕಿರಾತದೇಶವನ್ನು ಪ್ರವೇಶಿಸಿದ ಆ ರಾತ್ರಿಯಲ್ಲಿಯೇ ಆ ಸಮಯದಲ್ಲಿಯೇ ಊರಿನ ಜನರೆಲ್ಲರೂ ಮಲಗಿಕೊಂಡಿರುವಾಗ, ಮಹಾವೀರನಾದ ವಿಕ್ರಮನೆಂಬ ಆ ಪಟ್ಟಣದ ದೊರೆಯು, ವೀರರಿಗುಚಿತವಾದ ತಸ್ಕರಶಿಕ್ಷಣಾದಿ ಕಾರ್ಯಗಳನ್ನು ನಿರ್ವರ್ತಿಸುವುದಕ್ಕೋಸ್ಕರ, ತನ್ನ ಮಂತ್ರಿಯೊಡನೆ ಅತಿ ವಿಷಮವಾಗಿದ್ದ ಅರಣ್ಯಕ್ಕೆ ಹೋಗಿದ್ದನು ||೧೬-೧೭||

ಅಟವ್ಯಾಂ ಕರ್ಕಟೀ ಸಾ ತೌ ಚರನ್ತೌ ರಾಜಮನ್ತ್ರಿಣೌ ।
ಅಪಶ್ಯದ್ಧೃತಧೈರ್ಯಾಸ್ತ್ರೌ ವೇತಾಳಾಲೋಕನೋನ್ಮುಖೌ ‖೧೮‖
ಅಥ ಸಾ ಚಿನ್ತಯಾಮಾಸ ಲಬ್ಧೋ ಭಕ್ಷ್ಯೋ ಹ್ಯಹೋ ಮಯಾ ।
ಮೂಢಾವೇತಾವನಾತ್ಮಜ್ಞೌ ಭಾರೋ ದೇಹಃ ಕಿಲಾನಯೋಃ ‖೧೯‖
ಇಹಾಮುತ್ರ ಚ ನಾಶಾಯ ಮೂಢೋ ದುಃಖಾಯ ಜೀವತಿ ।
ಯತ್ನಾದ್ವಿನಾಶನೀಯೋಽಸೌ ನಾನರ್ಥಃ ಪರಿಪಾಲ್ಯತೇ ‖೨೦‖
ಅಪಶ್ಯತಃ ಸ್ವಮಾತ್ಮಾನಂ ಮೃತಿರ್ಮೂಢಸ್ಯ ಜೀವಿತಮ್ ।
ಮರಣೇನೋದಯೋಽಸ್ಯಾಸ್ತಿ ಪಾಪಾಸಂಪತ್ತಿಹೇತುತಃ ‖೨೧‖
ಆದಿಸರ್ಗೇ ಚ ನಿಯಮಃ ಕೃತಃ ಪಙ್ಕಜಜನ್ಮನಾ ।
ಹಿಂಸ್ರಾಣಾಂ ಭೋಜನಾಯಾಸ್ತು ಮೂಢಾತ್ಮಾನಾತ್ಮವಾನಿತಿ ‖೨೨‖
ತಸ್ಮಾದಿಮೌ ಮಯೈವಾದ್ಯ ಭೋಕ್ತವ್ಯೌ ಭೋಜ್ಯತಾಂ ಗತೌ ।
ಅಭವ್ಯ ಏವ ನಿರ್ದೋಷಂ ಪ್ರಾಪ್ತಮರ್ಥಮುಪೇಕ್ಷತೇ ‖೨೩‖

ಆ ರಾಜಮಂತ್ರಿಗಳಿಬ್ಬರೂ, ಧೈರ್ಯವನ್ನೂ ಅಸ್ತ್ರಗಳನ್ನೂ ಧರಿಸಿ ಆರಣ್ಯದಲ್ಲಿ ಸಂಚರಿಸುತ-ಬೇತಾಳಗಳನ್ನು ಹುಡುಕುವುದರಲ್ಲುದ್ಯುಕ್ತರಾಗಿರುವಾಗ, ಆ ಕರ್ಕಟಿಯು ಅವರಿಬ್ಬರನ್ನೂ ಕಂಡಳು ‖ ೧೮‖

ಬಳಿಕ ಅವಳು ಈ ರೀತಿಯಾಗಿ ಯೋಚಿಸಿದಳು :—ಅಹೋ! ನನಗೆ ಈಗ ದಿವ್ಯವಾದ ಆಹಾರವು ಸಿಕ್ಕಿತು ; ಈ ಇಬ್ಬರು ಮೂಢರೂ ಕೇವಲ ಆತ್ಮಜ್ಞಾನಶೂನ್ಯರಾಗಿರುವರು ; ಇವರಿಗೆ ಈ ದೇಹವು ಕೇವಲ ಭಾರಮಾತ್ರಮಾಗಿರುವುದು ‖೧೯‖

ಮೂಢನಾದವನು, ಇಹಪರಗಳೆರಡರಲ್ಲಿಯೂ ಹಾನಿಯನ್ನೂ ದುಃಖವನ್ನೂ ಅನುಭವಿಸುವುದಕ್ಕೆ ಮಾತ್ರವೇ ಬದುಕುವನು. ಆದುಕಾರಣ, ಇಂತಹ ಅನಾತ್ಮಜ್ಞರನ್ನು ಪ್ರಯತ್ನಪೂರ್ವಕವಾಗಿ ನಾಶಪಡಿಸಬೇಕು. ಪ್ರಪಂಚದಲ್ಲಿ ಅನರ್ಥವನ್ನು ಯಾರೂ ಸಂರಕ್ಷಿಸಿಕೊಳ್ಳುವುದಿಲ್ಲವಷ್ಟೆ ! ‖೨೦‖

ಸ್ವಾತ್ಮಜ್ಞಾನವಿಲ್ಲದ ಮೂಢನಿಗೆ, ಜೀವಿತವೂ ಮರಣವೇ ಸರಿ ; ಇವನಿಗೆ ಮರಣದಿಂದಲೇ ಅಭ್ಯುದಯವುಂಟೆಂದು ತಿಳಿಯಬೇಕು. ಏಕೆಂದರೆ,—ಇಂಥವನು ಬದುಕಿರುವವರೆಗೂ ಪಾಪ ಮಾಡುತಲೇ ಇರುವನಾದಕಾರಣ, ಮರಣವಾಗಿಬಿಟ್ಟರೆ ಇನ್ನುಮುಂದೆ ಇವನಿಗೆ ಪಾಪಸಂಘಟನೆಯಾಗುವುದಿಲ್ಲವಲ್ಲವೆ! ‖೨೧‖

ಇದೂ ಅಲ್ಲದೆ, ಆದಿಸೃಷ್ಟಿಯಲ್ಲಿಯೇ ಚತುರ್ಮುಖನು 'ಮೂಢನಾದ ಅನಾತ್ಮಜ್ಞನು ಕ್ರೂರ ಜೀವಗಳಿಗೆ ಆಹಾರಾರ್ಥವಾಗಿರಲಿ' ಎಂದು ನಿಯಮವನ್ನೂ ಕಲ್ಪಿಸಿರುವನು ‖೨೨‖

ಹೀಗಿರುವುದರಿಂದ, ನನಗೆ ಭೋಜ್ಯವಾಗಿ ಬಂದಿರುವ ಇವರಿಬ್ಬರನ್ನೂ ನಾನು ಈಗಲೇ ತಿಂದುಬಿಡಬೇಕು. ದೋಷವಿಲ್ಲದೆ ತಾನಾಗಿ ಪ್ರಾಪ್ತವಾದ ದ್ರವ್ಯವನ್ನು ಉಪೇಕ್ಷಿಸತಕ್ಕವನು ನಿರ್ಭಾಗ್ಯನೇ ಸರಿ ‖೨೩‖

ಕದಾಚಿತ್ ತಾವಿಮೌ ಸ್ಯಾತಾಂ ಗುಣಯುಕ್ತೌ ಮಹಾಶಯೌ ।
ತಾದೃಙ್ನರವಿನಾಶೋ ಹಿ ಸ್ವಭಾವಾನ್ಮೇ ನ ರೋಚತೇ ॥೨೪॥
ತದೇತೌ ಸಂಪರೀಕ್ಷೇಽಹಂ ಯದಿ ತಾದೃಗ್ಗುಣಾನ್ವಿತೌ ।
ತದ್ಭಕ್ಷ್ಯಂ ನ ಕರೋಮ್ಯೇತೌ ನ ಹಿಂಸ್ಯಾಂ ಗುಣಿನಃ ಕ್ವಚಿತ್ ॥೨೫॥
ಅಕೃತ್ರಿಮಂ ಸುಖಂ ಕೀರ್ತಿಂ ಆಯುಶ್ಚೈವಾಭಿವಾಞ್ಛತಾ ।
ಸರ್ವಾಭಿಮತದಾನೇನ ಪೂಜನೀಯಾಗುಣಾನ್ವಿತಾಃ ॥೨೬॥
ಅಪಿ ನಂಕ್ಷ್ಯಾಮಿ ದೇಹೇನ ನೈವ ಭೋಕ್ಷ್ಯೇ ಗುಣಾನ್ವಿತಮ್ ।
ಸುಖಯನ್ತಿ ಹಿ ಚೇತಾಂಸಿ ಜೀವಿತಾದಪಿ ಸಾಧವಃ ॥೨೭॥
ಅಪಿ ಜೀವಿತದಾನೇನ ಗುಣಿನಂ ಪರಿಪಾಲಯೇತ್ ।
ಗುಣವತ್ಸಙ್ಗಮೌಷಧ್ಯಾ ಮೃತ್ಯುರಪ್ಯೇತಿ ಮಿತ್ರತಾಮ್ ॥೨೮॥
ಯತ್ರಾಹಮಪಿ ರಕ್ಷಾಮಿ ರಾಕ್ಷಸೀ ಗುಣಶಾಲಿನಮ್ ।
ತತ್ರಾನ್ಯಃ ಕೋ ನ ಕುರ್ಯಾತ್ ತಂ ಹೃದಿ ಹಾರಮಿವಾಮಲಮ್ ॥೨೯॥
ಉದಾರಗುಣಯುಕ್ತಾ ಯೇ ವಿಹರನ್ತೀಹ ದೇಹಿನಃ ।
ಧರಾತಲೇನ್ದವಸ್ಸಙ್ಗಾತ್ ಭೃಶಂ ಶೀತಲಯನ್ತಿ ತೇ ॥೩೦॥

ಅಥವಾ ಕದಾಚಿತ್ ಇವರಿಬ್ಬರೂ ಗುಣಯುಕ್ತರಾಗಿ ಸದಭಿಪ್ರಾಯಶೀಲರಾಗಿದ್ದ ಪಕ್ಷದಲ್ಲಿ, ಅಂತಹ ಗುಣಾಢ್ಯರನ್ನು ನಾಶಪಡಿಸುವುದು ನನಗೆ ಸ್ವಭಾವತಃ ಇಷ್ಟವಾಗಿಲ್ಲ ॥೨೪॥

ಅದುಕಾರಣ, ನಾನು ಇವರಿಬ್ಬರನ್ನೂ ಪರೀಕ್ಷಿಸುವೆನು. ಇವರು ಅಂತಹ ಆತ್ಮಜ್ಞಾನ ಗುಣಯುಕ್ತರಾಗಿದ್ದಪಕ್ಷದಲ್ಲಿ, ನಾನಿವರನ್ನು ಆಹಾರವಾಗಿ ಮಾಡಿಕೊಳ್ಳುವುದಿಲ್ಲ. ಗುಣಾಢ್ಯರಾದವರನ್ನು ನಾನು ಎಂದಿಗೂ ಎಲ್ಲಿಯೂ ಹಿಂಸಿಸಕೂಡದು ॥೨೫॥

ಲೋಕದಲ್ಲಿ, ಅಪ್ರಾಕೃತವಾದ ಸುಖವನ್ನೂ, ಕೀರ್ತಿಯನ್ನೂ ಆಯುಸ್ಸನ್ನೂ ಅಪೇಕ್ಷಿಸತಕ್ಕ ಪುರುಷನು, ಸುಗುಣಶಾಲಿಗಳು ಸಿಕ್ಕಿದರೆ—ಅವರಿಗೆ ಸಕಲ ಇಷ್ಟಾರ್ಥಗಳನ್ನೂ ಕೊಟ್ಟು—ಅವರನ್ನು ಪೂಜಿಸಬೇಕು ॥೨೬॥

ನಾನು ಕೊನೆಗೆ ಈ ದೇಹವನ್ನಾದರೂ ನಾಶಪಡಿಸಿಕೊಂಡೇನು ;—ಸುಗುಣಸಂಪನ್ನನನ್ನು ಮಾತ್ರ ಭುಜಿಸಲಾರೆನು. ಸಾಧುಗಳಾದವರು ನಮ್ಮ ಜೀವಿತಕ್ಕಿಂತಲೂ ಹೆಚ್ಚಾಗಿ ಮನಸ್ಸಿಗೆ ಆನಂದವುಂಟುಮಾಡುವರು ॥೨೭॥

ಮನುಷ್ಯನಾದವನು, ತನ್ನ ಪ್ರಾಣವನ್ನಾದರೂ ಕೊಟ್ಟು ಗುಣಾಢ್ಯನನ್ನು ಕಾಪಾಡಬೇಕು. ಗುಣವಂತರ ಸಹವಾಸವೆಂಬ ದಿವ್ಯೌಷಧಿಯಿಂದ, ಮೃತ್ಯುವೂ ಮಿತ್ರನಾಗುವನು ॥

ಸ್ವಭಾವತಃ ರಾಕ್ಷಸಿಯಾಗಿರುವ ನಾನೂ ಕೂಡ ಗುಣಶಾಲಿಯಾದವನನ್ನು ಸಂರಕ್ಷಿಸುವಾಗ, ಇತರರು ಯಾರುತಾನೆ ಗುಣಸಂಪನ್ನನನ್ನು ನಿರ್ಮಲವಾದ ಮುಕ್ತಾಹಾರದಂತೆ ಹೃದಯದಲ್ಲಿಟ್ಟು ಕೊಳ್ಳುವುದಿಲ್ಲ? ॥೨೯॥

ಉದಾರ ಗುಣಶಾಲಿಗಳಾದ ಯಾವ ಪುರುಷರು ಈ ಲೋಕದಲ್ಲಿ ವಿಹರಿಸಿಕೊಂಡಿರುವರೋ, ಅವರು ಭೂಮಿಗೆ ಚಂದ್ರಪ್ರಾಯರಾದವರು ; ಅವರು ತಮ್ಮ ಸಂಗದಿಂದ ಸರ್ವರನ್ನೂ ಆನಂದಪಡಿಸುವರು ॥೩೦॥

ಮೃತಿರ್ಗುಣಿತಿರಸ್ಕಾರೋ ಜೀವಿತಂ ಗುಣಿಸಂಶ್ರಯಃ |
ಫಲಂ ಸ್ವರ್ಗಾಪವರ್ಗಾದಿ ಜೀವಿತಾದ್ಗುಣಿಸಂಶ್ರಿತಾತ್ ||೭೧||
ತಸ್ಮಾದಿಮೌ ಪರೀಕ್ಷೇಽಹಂ ಕಯಾಚಿತ್ ಪ್ರಶ್ನಲೀಲಯಾ |
ಕಿಂಮಾತ್ರಜ್ಞಾನಕಾವೇತೌ ಇತಿ ತಾಮರಸೇಕ್ಷಣೌ ||೭೨||

ಆದೌ ವಿಚಾರ್ಯ ಸುಗುಣಾಗುಣಲೇಶಯುಕ್ತಿಂ
ಪಶ್ಚಾತ್ ಸ್ವತೋಽಧಿಕತರಂ ಚ ಗುಣೈರ್ಯದಿ ಸ್ಯಾತ್ |
ಕುರ್ಯಾತ್ ತತಃ ಸಮುಪಪತ್ತಿವಶೇನ ದಣ್ಡಂ
ದಣ್ಡ್ಯಸ್ಯ ಯುಕ್ತಿಸದೃಶಂ ಪುನಸಮ್ಭವೇ ನ ||೭೩||

ಇತಿ ಉತ್ಪತ್ತಿಪ್ರಕರಣೇ ರಾಕ್ಷಸೀವಿಚಾರೋನಾಮ ಸಪ್ತಸಪ್ತತಿತಮಃ ಸರ್ಗಃ.

ಪ್ರಪಂಚದಲ್ಲಿ, ಗುಣಾಢ್ಯರ ತಿರಸ್ಕಾರವೇ ಮರಣವೆನ್ನಿಸುವುದು; ಗುಣವಂತರ ಸಹವಾಸವೇ ಬದುಕುವಿಕೆಯು. ಗುಣಿಗಳನ್ನು ಆಶ್ರಯಿಸಿಕೊಂಡಿರುವ ಬದುಕಿನಿಂದಲೇ, ಸ್ವರ್ಗಮೋಕ್ಷಾದಿ ಫಲಗಳೆಲ್ಲವೂ ಸಿದ್ಧಿಸುವುವು ||೭೧||

ಅದುಕಾರಣ, ಕಮಲನೇತ್ರರಾಗಿರುವ ಈ ಇಬ್ಬರೂ ಎಷ್ಟುಮಟ್ಟಿನ ಜ್ಞಾನವುಳ್ಳವರೆಂದು ತಿಳಿಯುವುದಕ್ಕಾಗಿ, ನಾನೊಂದು ಪ್ರಶ್ನವಿಲಾಸದಿಂದ ಇವರನ್ನು ಪರೀಕ್ಷಿಸುವೆನು ||೭೨||

ಪ್ರಪಂಚದಲ್ಲಿ, ಪುರುಷನಾದವನು ಯಾರನ್ನು ನೋಡಿದರೂ,—ಇವನಲ್ಲಿ ಸ್ವಲ್ಪವಾಗಿ ಸುಗುಣವಿದೆಯೆ? ಅಥವಾ ದುರ್ಗುಣವಿದೆಯೇ?–ಎಂದು ಪ್ರಥಮತಃ ವಿಚಾರ ಮಾಡಬೇಕು; ಬಳಿಕ,—ಅವನು ಗುಣಾಧಿಕನಾಗಿದಾನೆಯೆ? ಅಥವಾ ಇಲ್ಲವೆ?—ಎಂಬುದನ್ನು ವಿಚಾರಮಾಡಬೇಕು. ಆಗ ಅವನು ಗುಣಹೀನನೆಂದು ಕಂಡುಬಂದಪಕ್ಷದಲ್ಲಿ, ಅವನಿಗೆ ಸರಿಯಾಗಿ ಶಾಸ್ತ್ರಾನುಸಾರವಾದ ಶಿಕ್ಷೆಯನ್ನು ಮಾಡಬೇಕು; ಹಾಗಲ್ಲದೆ— ಅವನು ಸದ್ಗುಣಸಂಪನ್ನನೆಂದು ಗೊತ್ತಾದಪಕ್ಷದಲ್ಲಿ, ಅಂಥವನಿಗೆ ಯಾವ ಶಿಕ್ಷೆಯನ್ನೂ ಮಾಡಬಾರದು ||೭೩||

ಇದು ಉತ್ಪತ್ತಿಪ್ರಕರಣದಲ್ಲಿ ಕರ್ಕಟ್ಯುಪಾಖ್ಯಾನದೊಳಗೆ ರಾಕ್ಷಸೀ
ವಿಚಾರವೆಂಬ ಎಪ್ಪತ್ತೇಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟಸಪ್ತತಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.—

ಅಥ ಸಾ ರಾಕ್ಷಸೀ ರಕ್ಷಃಕುಲಕಾನನಮಞ್ಜರೀ ।
ತಮಸ್ಯೇವಾಭ್ರಲೇಖೇವ ಗಮ್ಭೀರಂ ವಿನನಾದ ಹ ॥೧॥
ನಾದಾನ್ತೇ ಸಮುವಾಚೇದಂ ಹುಙ್ಕಾರಾಪರುಷಂ ವಚಃ ।
ಗರ್ಜಿತಾನನ್ತರಂ ಜಾತಕರಕಾಶನಿಶಬ್ದವತ್ ॥೨॥
ಭೋಭೋ ಘೋರಾಟವೀವ್ಯೋಮಪದವೀಶಶಿಭಾಸ್ಕರೌ ।
ಮಹಾಮಾಯಾತಮಃಪೀಠಶಿಲಾಕೋಟರಕೀಟಕೌ ॥೩॥
ಕೌ ಭವನ್ತೌ ಮಹಾಬುದ್ಧೀ ದುರ್ಬುದ್ಧೀ ವಾ ಸಮಾಗತೌ ।
ಮದ್ಗ್ರಾಸಪದಮಾಪನ್ನೌ ಕ್ಷಣಾನ್ಮರಣಕೋಚಿತೌ ॥೪॥

ಉತ್ಪತ್ತಿಪ್ರಕರಣದಲ್ಲಿ ಎಪ್ಪತ್ತೆಂಟನೆಯ ಸರ್ಗವು.

ಭೀಷಣೋಕ್ತ್ಯಪ್ಯಭೀತಸ್ಯ ರಾಜ್ಞಃ ಕರ್ಕಟಿದರ್ಶನಮ್ ।
ಮನ್ತ್ರಿವಾಕ್ಯಾನುನೀತಾಯಾಃ ಪ್ರಶ್ನಾರಮ್ಭಶ್ಚ ಕೀರ್ತ್ಯತೇ ॥

ಕರ್ಕಟಿಯು ಹೇಳಿದ ಅತಿಭೀಷಣವಾದ ಮಾತಿನಿಂದಲೂ ಹೆದರದೆ ಆ ಕಿರಾತರಾಜನು ಕರ್ಕಟಿಯನ್ನು ನೋಡುವಿಕೆಯೂ, ಮಂತ್ರಿಯಿಂದ ಸಮಾಧಾನಮಾಡಲ್ಪಟ್ಟ ಆ ಕರ್ಕಟಿಯು ಪ್ರಶ್ನೆಮಾಡಲುಪಕ್ರಮಿಸುವಿಕೆಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಮತ್ತೆ ಶ್ರೀ ವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ರಾಕ್ಷಸರ ವಂಶವೆಂಬ ಅರಣ್ಯಕ್ಕೆ ಕುಸುಮಮಂಜರೀಪ್ರಾಯಳಾದ ಆ ಕರ್ಕಟಿಯು, ಪೂರ್ವೋಕ್ತರೀತಿಯಾಗಿ ವಿಚಾರಮಾಡಿದ ಬಳಿಕ, ಆ ಕತ್ತಲೆಯಲ್ಲಿಯೇ ಮೇಘದಂತೆ ಗಂಭೀರವಾಗಿ ಗರ್ಜನೆಮಾಡಿದಳು ॥೧॥

ಗರ್ಜನೆ ಮಾಡಿದನಂತರ, ಗುಡುಗಿದನಂತರ ಆನೆಕಲ್ಲುಮಳೆಸುರಿದ ಶಬ್ದದಂತೆ, ಹುಂಕಾರದಿಂದ ಭೀಷಣವಾಗಿ ಕಂಡರೂ ಅರ್ಥತಃ ಮೃದುವಾಗಿರುವ ಈ ಮಾತನ್ನು ಹೇಳಿದಳು ॥೨॥

ಅವಳು ಹೇಳಿದುದೇನೆಂದರೆ:—ಅತಿ ಘೋರವಾಗಿರುವ ಈ ಅರಣ್ಯವೆಂಬ ಅಂತರಿಕ್ಷಮಾರ್ಗಕ್ಕೆ ಚಂದ್ರಸೂರ್ಯಪ್ರಾಯರಾಗಿರುವ ಎಲೈ ಪುರುಷರೆ! ನೀವುಗಳು, ಮಹಾಮಾಯಾತಮಸ್ಸೆಂಬ—ಸರ್ವಭೂತಗಳಿಗೂ ಆಧಾರವಾದ—ಪೀಠದ ಪೊಟ್ಟರೆಯಲ್ಲಿ ಸಣ್ಣ ಹುಳುಗಳಂತಿರುವಿರಿ. ನೀವು ಯಾರು? ನೀವು ಸ್ವಭಾವತಃ ಮಹಾ ಬುದ್ಧಿಶಾಲಿಗಳಾಗಿರುವಿರಾ? ಅಥವಾ ದುರ್ಬುದ್ಧಿಯುಳ್ಳವರಾಗಿ ಇಲ್ಲಿ ನನಗೆ ಗ್ರಾಸವಾಗಿ ಬಂದಿರುವಿರಾ? ನೀವು ಈಕ್ಷಣದಲ್ಲಿಯೇ ಮರಣಕ್ಕೆ ಪಾತ್ರರಾಗಿರುವಿರಿ ॥೩-೪॥

ರಾಜೋವಾಚ.

ಭೋಭೋ ಭೂತಕ ಕಿಂಸ್ಯಾಸ್ತ್ವಂ ಕ್ವ ತಿಷ್ಠಸಿ ಚ ದೇಹಕಮ್ ।
ದರ್ಶಯಾಸ್ಮ್ಯಾಸ್ತವ ಗಿರಃ ಕೋ ಬಿಭೇತ್ಯಳಿನೀಧ್ವನೇಃ ॥೫॥
ಸಿಂಹವತ್ ಸರ್ವವೇಗೇನ ಪತನ್ತ್ಯರ್ಥೇ ಕಿಲಾರ್ಥಿನಃ ।
ತ್ಯಜ ಸಂರಮ್ಭಮಾರಮ್ಭಂ ಸ್ವಸಾಮರ್ಥ್ಯಂ ಪ್ರದರ್ಶಯ ॥೬॥
ಕಿಂ ಪ್ರಾರ್ಥಯಸಿ ಮೇ ಬ್ರೂಹಿ ದದಾಮಿ ತವ ಸುವ್ರತ ।
ಕಿಂ ವಾ ಸಂರಮ್ಭಶಬ್ದಾಭ್ಯಾಂ ಭೀಷಯಾಸ್ಮಾನ್ ಬಿಭೇಷಿ ಕಿಮ್ ॥೭॥
ಕ್ಷಿಪ್ರಮಾಕಾರಶಬ್ದಾಭ್ಯಾಂ ಮಾಯಯಾ ಸಮ್ಮುಖೀಭವ ।
ನ ಕಿಞ್ಚಿದ್ದೀರ್ಘಸೂತ್ರಾಣಾಂ ಸಿಧ್ಯತ್ಯಾತ್ಮಕ್ಷಯಾದೃತೇ ॥೮॥
ರಾಜ್ಞೇತ್ಯುಕ್ತೇ ರಮ್ಯಮುಕ್ತಂ ಇತಿ ಸಞ್ಚಿನ್ತ್ಯ ಸಾ ತಯೋಃ ।
ಪ್ರಕಾಶಾಯಾಪ್ಯಧೈರ್ಯಾಯ ನನಾದ ಚ ಜಹಾಸ ಚ ॥೯॥
ತತೋ ದದೃಶತುಸ್ತಾಂ ತೌ ಶಬ್ದಪೂರಿತದಿಗ್ಗಣಾಮ್ ।
ಸ್ಫುಟಾಟ್ಟಹಾಸಪ್ರಭಾಪಿಣ್ಡಪೂರಪ್ರಕಟಿತಾಕೃತಿಮ್ ॥೧೦॥

ಆ ಕಿರಾತರಾಜನು ಉತ್ತರ ಹೇಳುವನು :—

ಎಲೈ ಭೂತವೆ! ನೀನು ಯಾರು? ಎಲ್ಲಿರುವೆ? ನಿನ್ನ ದೇಹವನ್ನು ತೋರಿಸು. ಒಂದು ಹೆಣ್ಣುದುಂಬಿಯ ಶಬ್ದದಂತಿರುವ ನಿನ್ನ ಈ ಕೂಗಿಗೆ ಹೆದರತಕ್ಕವರಾರಿರುವರು? ॥೫॥

ಕಾರ್ಯಾರ್ಥಿಗಳಾದವರು, ಸಿಂಹದಂತೆ ಸರ್ವಪ್ರಯತ್ನದಿಂದಲೂ ಉದ್ದಿಷ್ಟವಿಷಯಗಳಲ್ಲಿ ಪ್ರವೇಶಿಸುವರು. ಈ ಕೋಪವನ್ನೂ, ಸಂಭ್ರಮವನ್ನೂ ಬಿಟ್ಟುಬಿಡು; ನಿನ್ನ ಸಾಮರ್ಥ್ಯವನ್ನು ತೋರ್ಪಡಿಸು ॥೬॥

ಎಲೈ ಭೂತವೆ! ನೀನು ಉತ್ತಮವಾದ ನಿಯಮವುಳ್ಳುದಾಗಿದ್ದಪಕ್ಷದಲ್ಲಿ, ನನ್ನಿಂದ ಏನ ಪೇಕ್ಷಿಸುವೆ?—ಹೇಳು; ಅದನ್ನು ನಾನು ನಿನಗೆ ಕೊಟ್ಟುಬಿಡುತ್ತೇನೆ. ನಮ್ಮ ವಿಷಯದಲ್ಲಿ, ಈ ಸಂಭ್ರಮದಿಂದಲೂ, ಕೂಗಿನಿಂದಲೂ, ಭಯಪಡಿಸುವಿಕೆಯಿಂದಲೂ ಏನು ಪ್ರಯೋಜನವು? ಅಥವಾ ನೀನೇ ನಮ್ಮಿಂದ ಹೆದರಿ ಈ ರೀತಿಯಾಗಿ ಮಾಡುತಿರುವೆಯೋ? ॥೭॥

ನಿನ್ನ ಶರೀರವನ್ನೂ, ಶಬ್ದವನ್ನೂ, ಪ್ರತ್ಯಕ್ಷವಾಗಿ ಬಂದು ಬೇಗನೆ ತೋರ್ಪಡಿಸು; ತಡಮಾಡಬೇಡ. ಯಾವ ಕೆಲಸದಲ್ಲಿಯಾದರೂ, ತಡಮಾಡತಕ್ಕವರಿಗೆ ಆತ್ಮಹಾನಿ ಹೊರತು ಮತ್ತಾವ ಫಲವೂ ಸಿದ್ಧಿಸುವುದಿಲ್ಲ ॥೮॥

ವತ್ಸ! ರಾಮ! ಆಗ ಈ ರೀತಿಯಾಗಿ ದೊರೆಯು ಹೇಳಲಾಗಿ, ಆ ಕರ್ಕಟಿಯು ಸರಿಯಾದ ಮಾತು ಹೇಳಲ್ಪಟ್ಟಿತೆಂದು ಯೋಚಿಸಿದವಳಾಗಿ, ತನ್ನ ರೂಪ ಅವರಿಗೆ ಕಾಣಿಸುವುದಕ್ಕಾಗಿಯೂ-ಅವರಿಗೆ ಅಧೈರ್ಯ ಹುಟ್ಟುವುದಕ್ಕಾಗಿಯೂ ಕೂಡ, ಒಂದಾವೃತ್ತಿ ಗಟ್ಟಿಯಾಗಿ ಗರ್ಜಿಸಿ ನಕ್ಕಳು ॥

ಬಳಿಕ ಅವರಿಬ್ಬರೂ ಅವಳನ್ನು ನೋಡಿದರು. ಆಗ ಅವಳು ಹೇಗಿದ್ದಳೆಂದರೆ:—ಅವಳ ಕೂಗಿನಿಂದ ದಿಕ್ಕುಗಳೆಲ್ಲ ತುಂಬಿಹೋಗಿದ್ದುವು. ಅವಳ ಅಟ್ಟಹಾಸಕಾಂತಿಪ್ರವಾಹದಿಂದ ಅಂತಹ ಕತ್ತಲೆಯುಲ್ಲಿಯೂ ಆ ವಳ ಆಕಾರವು ಚೆನ್ನಾಗಿ ಕಾಣಿಸುತಿದ್ದಿತು ॥೧೦॥

ಕಲ್ಪಾಭ್ರಾಶನಿಕಾಷೇಣ ಘೃಷ್ಟಾಮದ್ರಿತಟೀಮಿವ ।
ಸ್ವನೇತ್ರವಿದ್ಯುದ್ವಲಯಬಲಾಕೋಜ್ಜ್ವಲಿತಾಂಬರಾಮ್ ॥೧೧॥
ತಿಮಿರೈಕಾರ್ಣವೌರ್ವಾಗ್ನಿಜ್ವಾಲಾವಿವಲನಾಮಿವ ।
ಗರ್ಜದ್ಘನಘಟಾಟೋಪಪೀವರಾಸಿತಕನ್ಧರಾಮ್ ॥೧೨॥
ರಣದ್ದಶನಸಂರಮ್ಭಹಾಹಾಹತನಿಶಾಚರಾಮ್ ।
ರೋದಸೀಕಜ್ಜಲಸ್ತಮ್ಭಾಂ ಲೀಲಯೋಲ್ಲಸಿತಾಂ ಪುನಃ ॥೧೩॥
ಊರ್ಧ್ವಕೇಶೀಂ ಸಿರಾಲಾಙ್ಗೀಂ ಕಪಿಲಾಕ್ಷೀಂ ತಮೋಮಯೀಮ್ ।
ಯಕ್ಷರಕ್ಷಃಪಿಶಾಚಾನಾಂ ಅಪ್ಯನರ್ಥಭಯಪ್ರದಾಮ್ ॥೧೪॥
ದೇಹರನ್ಧ್ರವಿಶಚ್ಛ್ವಾಸವಾತಭಾಙ್ಕಾರಭೀಷಣಾಮ್ ।
ಮುಸಲೋಲೂಖಲಾಲಾತಹಲಶೂರ್ಪಕಶೇಖರಾಮ್ ॥೧೫॥
ಸ್ಫುರನ್ತೀಮಿವ ಕಲ್ಪಾನ್ತೇ ವೈದೂರ್ಯಶಿಖರಸ್ಥಲೀಮ್ ।
ಹಾಸಘಟ್ಟಿತವಿಶ್ವೇಶಾಂ ಕಾಳರಾತ್ರಿಮಿವೋದಿತಾಮ್ ॥೧೬॥

ಪ್ರಳಯಕಾಲಿಕವಾದ ಮೇಘಗಳೆಂಬ ವಜ್ರಾಯುಧದ ಏಟಿನಿಂದ ಘರ್ಷಿಸಲ್ಪಟ್ಟ ಪರ್ವತ ಪ್ರದೇಶವೋ ಎಂಬಂತೆ ಅವಳು ಕಾಣಿಸುತಿದ್ದಳು. ಮಿಂಚಿನಂತಿದ್ದ ಅವಳ ಕಣ್ಣುಗಳೂ, ಹೆಣ್ಣು ಹಂಸೆಯಂತಿದ್ದ ಅವಳ ಬಳೆಗಳೂ, ಅಂತರಿಕ್ಷವನ್ನೆಲ್ಲ ಬೆಳಗುತಿದ್ದುವು ॥೧೧॥

ಆ ಅಂಧಕಾರವೆಂಬುದೇ ಏಕಾರ್ಣವದಂತಿದ್ದಿತು; ಅದರಲ್ಲಿ ಇವಳು ಬಡಬಾಗ್ನಿಜ್ವಾಲೆಯಾಗಿದ್ದಳು. ಅವಳ ಕುತ್ತಿಗೆಯು, ಗರ್ಜಿಸುತಿರುವ ಮೇಘಸಮುದಾಯದಂತೆ ಭಯಂಕರವಾಗಿಯೂ ಸ್ಥೂಲವಾಗಿಯೂ ಕಪ್ಪಾಗಿಯೂ ಇದ್ದಿತು ॥೧೨॥

ಕಟಕಟಧ್ವನಿ ಮಾಡುತಿರುವ ತನ್ನ ದಂತಗಳ ಸಂಭ್ರಮದಿಂದಲೇ, ರಾತ್ರಿಯಲ್ಲಿ ಸಂಚರಿಸುತ್ತಿದ್ದ ಚೋರವ್ಯಾಘ್ರಾದಿಗಳನ್ನು ಹಾಹಾಕಾರಪೂರ್ವಕವಾಗಿ ನಾಶಪಡಿಸುತಿದ್ದಳು. ಭೂಮ್ಯಂತರಿಕ್ಷಮಧ್ಯದಲ್ಲಿ ವಿಲಾಸದಿಂದ ನಿಂತಿರುವ ಕಾಡಿಗೆಯ ಕಂಬವೋ ಎಂಬಂತೆ ಕಾಣಿಸುತಿದ್ದಳು ॥೧೩॥

ಅವಳ ಕೂದಲುಗಳು ಊರ್ಧ್ವಮುಖವಾಗಿಯೂ, ಕಣ್ಣುಗಳು ಕ್ರೂರವಾಗಿಯೂ, ಶರೀರವೆಲ್ಲ ನರಗಳಿಂದ ವ್ಯಾಪಿಸಲ್ಪಟ್ಟುದಾಗಿಯೂ ಇದ್ದುವು. ಅವಳು, ಕೇವಲ ಅಂಧಕಾರಮಯಳಾಗಿಯೂ, ಯಕ್ಷರಾಕ್ಷಸ ಪಿಶಾಚಾದಿಗಳಿಗೂ ವಿಶೇಷವಾಗಿ ವಿಪತ್ತನ್ನೂ ಭಯವನ್ನೂ ಉಂಟುಮಾಡತಕ್ಕವಳಾಗಿಯೂ ಇದ್ದಳು ॥೧೪॥

ಅವಳ ಶರೀರ ರಂಧ್ರಗಳಲ್ಲಿ ಶ್ವಾಸಮಾರುತವು ಪ್ರವೇಶಮಾಡುತಿರುವುದರಿಂದ, ಅದರ ಭಾಂಕಾರಧ್ವನಿಯು ಇತರರಿಗೆ ಭಯಂಕರವಾಗಿದ್ದಿತು. ಅವಳು ತನ್ನ ತಲೆಯಮೇಲೆ, ಒನಕೆ ಒರಳು ಕೊಳ್ಳಿ ನೇಗಿಲು ಮೊರ—ಇತ್ಯಾದಿಗಳನ್ನೆಲ್ಲ ಅಲಂಕಾರದಂತೆ ಧರಿಸಿದ್ದಳು ॥೧೫॥

ಪ್ರಳಯಕಾಲದಲ್ಲಿ ಸೀಳಿಹೋದ ವೈದೂರ್ಯಪರ್ವತದ ಶಿಖರಪ್ರದೇಶದಂತೆ ಅವಳು ಪ್ರಕಾಶಿಸುತಿದ್ದಳು, ಕಾಳರಾತ್ರಿಯೇ ಶರೀರಗ್ರಹಣಮಾಡಿ ಬಂದಿರುವಳೋ ಎಂಬಂತೆ, ಆ ಕರ್ಕಟೆಯು ತನ್ನ ಮಂದಹಾಸದಿಂದಲೇ ಲೋಕಪಾಲಕರನ್ನೂ ತಿರಸ್ಕರಿಸುತಿದ್ದಳು ॥೧೬॥

ಶರದ್ವ್ಯೋಮಾಟವೀಂ ಸಾಭ್ರಾಂ ಕೃತದೇಹಾಮಿವಾಗತಾಮ್ ।
ಶರೀರಿಣೀಂ ಮಹಾಭ್ರಾಢ್ಯಾಂ ಯಾಮಿನೀಮಿವ ಮಾಂಸಲಾಮ್ ॥೧೭॥
ಶರೀರಸನ್ನಿವೇಶೇನ ಪಙ್ಕಪೀಠಮಿವೋತ್ಥಿತಮ್ ।
ತನುಂ ಚನ್ದ್ರಾರ್ಕಯುದ್ಧಾಯ ತಮಸೇವ ಸಮಾಶ್ರಿತಾಮ್ ॥೧೮॥
ಇನ್ದ್ರನೀಲಮಹಾಶುಭ್ರಲಮ್ಬಾಭ್ರಯುಗಳೋಪಮೌ ।
ಉಲೂಖಲಾದಿಹಾರೌಘೌ ದಧಾನಾವಸಿತೌ ಸ್ತನೌ ॥೧೯॥
ಲಗ್ನಾಮಙ್ಗಾರಕಾಷ್ಠೇನ ಸಮಾನಾಂ ಚ ಮಹಾತನುಮ್ ।
ದ್ರುಮಾಭಾಸ್ಪನ್ದಸಿರಲಸದ್ಭುಜಲತಾತನುಮ್ ॥೨೦॥
ತಾಮವೇಕ್ಷ್ಯ ಮಹಾವೀರೌ ತಥೈವಾಕ್ಷುಭಿತೌ ಸ್ಥಿತೌ ।
ನ ತದಸ್ತಿ ವಿಮೋಹಾಯ ಯದ್ವಿವಿಕ್ತಸ್ಯ ಚೇತಸಃ ॥೨೧॥

ಮನ್ತ್ರ್ಯುವಾಚ.

ಮಹಾರಾಕ್ಷಸಿ ಸಂರಮ್ಭೋ ಮಹಾತ್ಮಾ ಕಿಮಯಂ ತವ ।
ಲಘವೋ ಹ್ಯಥವಾ ಕಾರ್ಯೇ ಲಘಾವಪ್ಯತಿಸಮ್ಭ್ರಮಾಃ ॥೨೨॥

ಶರತ್ಕಾಲಿಕವಾದ ಅಂತರಿಕ್ಷಸ್ಥಳವು ಮೇಘಸಹಿತವಾಗಿ ಮೂರ್ತಿಮತ್ತಾಗಿ ಬಂದಿದೆಯೋ ಎಂಬಂತೆಯೂ, ಮಹಾಮೇಘಪರಿಪೂರ್ಣವಾಗಿರುವ ರಾತ್ರಿಯು ಶರೀರಯುಕ್ತವಾಗಿದೆಯೋ ಎಂಬಂತೆಯೂ, ಆ ಕರ್ಕಟಿಯು ಕಾಣಿಸುತಿದ್ದಳು ॥೧೭॥

ಮತ್ತೂ ಆ ಕರ್ಕಟಿಯು, ಭೂಪೀಠವೇ ಶರೀರವನ್ನು ಧರಿಸಿ ಎದ್ದಿರುವುದೋ ಎಂಬಂತೆಯೂ, ಸೂರ್ಯಚಂದ್ರರೊಡನೆ ಯುದ್ಧಮಾಡುವುದಕ್ಕಾಗಿ ರಾಹುವಿನಿಂದ ಆಶ್ರಯಿಸಲ್ಪಟ್ಟ ದೇಹವೋ ಎಂಬಂತೆಯೂ ಕಾಣಿಸಿದಳು ॥೧೮॥

ಇಂದ್ರನೀಲಮಣಿಯಂತೆ ಕಪ್ಪಗಿರುವ ಮೇಘಗಳಿಗೆ ಸಮಾನವಾಗಿಯೂ, ಒರಳು ಒನಕೆ ಮುಂತಾದುವುಗಳನ್ನು ಹಾರಮಾಡಿಕೊಂಡು ಧರಿಸಿದುವಾಗಿಯೂ ಇರುವ ಸ್ತನಗಳನ್ನು, ಆ ಕರ್ಕಟಿಯು ವಹಿಸಿದ್ದಳು ॥೧೯॥

ಆವಳ ಶರೀರವು, ಇದ್ದಲಾದ ಕಟ್ಟಿಗೆಯಿಂದ ಲಾಂಛಿತವಾಗಿಯೂ, ಅದರಂತೆ ಕಪ್ಪಾಗಿಯೂ ಇದ್ದಿತು; ದೊಡ್ಡದಾದ ಅವಳ ಭುಜವು, ಮರಕ್ಕೆ ಸಮಾನವಾಗಿಯೂ-ನಿಶ್ಚಲವಾಗಿಯೂ-ನರಗಳು ಸ್ಫುಟವಾಗಿ ಕಾಣಿಸತಕ್ಕುದಾಗಿಯೂ ಇದ್ದಿತು ॥೨೦॥

ಇಂತಹ ಆ ಕರ್ಕಟಿಯನ್ನು ನೋಡಿ, ಆ ಮಹಾವೀರರಿಬ್ಬರೂ ಪೂರ್ವದಂತೆಯೇ ಕದಲದೆ ನಿಂತಿದ್ದರು. ಈ ಪ್ರಪಂಚದಲ್ಲಿ ಇದು ಸತ್ಯ—ಇದು ಅಸತ್ಯ—ಎಂಬ ವಿವೇಕವುಳ್ಳ ಮನುಸ್ಸನು ಮೋಹಪಡಿಸತಕ್ಕ ಪದಾರ್ಥವಾವುದೂ ಇಲ್ಲವಲ್ಲವೆ! ॥೨೧॥

ಆಗ ಆ ಮಂತ್ರಿಯು ಕರ್ಕಟಿಯನ್ನು ಕುರಿತು ಹೇಳುವನು :—

ಎಲೌ ಮಹಾರಾಕ್ಷಸಿ! ಇದೇನು ನಿನಗಿಷ್ಟು ಸಂರಂಭವು ? ಅಥವಾ ನಾನು ಹೀಗೆ ಕೇಳಬೇಕಾದುದೇನಿದೆ? ಅಲ್ಪರಾದವರು ಅಲ್ಪವಾದ ಕಾರ್ಯದಲ್ಲಿಯೂ ಕೂಡ ಬಹಳವಾಗಿ ಸಂಭ್ರಮಪಡುವರು ॥೨೨॥

ತ್ಯಜ ಸಂರಮ್ಭಮಾರಮ್ಭೋ ನಾಯಂ ತವ ವಿರಾಜತೇ ।
ವಿಷಯೇ ಹಿ ಪ್ರವರ್ತನ್ತೇ ಧೀಮನ್ತಃ ಸ್ವಾರ್ಥಸಾಧಕಾಃ ॥೨೩॥
ತ್ವಾದೃಶಾನಾಂ ಸಹಸ್ರಾಣಿ ಮಶಕಾನಾಮಿವಾಬಲೇ ।
ಅಸ್ಮಾಕಂ ಧೀರತಾವಾತ್ಯಾವ್ಯೂಢಾನಿ ತೃಣಪರ್ಣವತ್ ॥೨೪॥
ಸಂರಮ್ಭದ್ವಾರಮುತ್ಸೃಜ್ಯ ಸಮತಾಸ್ವಚ್ಛಯಾ ಧಿಯಾ ।
ಯುಕ್ತ್ಯಾ ಚ ವ್ಯವಹಾರಿಣ್ಯಾ ಸ್ವಾರ್ಥಃ ಪ್ರಾಜ್ಞೇನ ಸಾಧ್ಯತೇ ॥೨೫॥
ಸ್ವೇನೈವ ವ್ಯವಹಾರೇಣ ಕಾರ್ಯಂ ಸಿಧ್ಯತು ವಾ ನವಾ ।
ಮಹಾನಿಯತಿರಿತ್ಯೇವ ಭ್ರಮಸ್ಯಾವಸರೋ ಹಿ ಕಃ ॥೨೬॥
ಕಥಯಾಭಿಮತಂ ಕಿಂ ತೇ ಕಿಮರ್ಥಯಸಿ ಚಾರ್ಥಿನೀ ।
ಅರ್ಥೀ ಸ್ವಪ್ನೇಪಿ ನಾಸ್ಮಾಕಂ ಅಪ್ರಾಪ್ತಾರ್ಥಃ ಪುರೋ ಗತಃ ॥೨೭॥
ಇತ್ಯುಕ್ತ್ವಾ ಸಾ ತದಾ ತೇನ ಚಿನ್ತಯಾಮಾಸ ರಾಕ್ಷಸೀ ।
ಅಹೋ ನು ವಿಮಲಾಚಾರಂ ಸತ್ವಂ ಪುರುಷಸಿಂಹಯೋಃ ॥೨೮॥

ಈಗ ನೀನು ಈ ಸೌರಂಭವನ್ನು ಬಿಟ್ಟುಬಿಡು ; ನೀನು ಮಾಡುತಿರುವ ಈ ಕಾರ್ಯಾರಂಭವು ಚೆನ್ನಾಗಿ ಕಾಣಿಸುವುದಿಲ್ಲ. ಪ್ರಪಂಚದಲ್ಲಿ ಬುದ್ಧಿವಂತರಾದವರು, ತಮ್ಮ ಕೆಲಸವನ್ನು ಸಾಧಿಸಿಕೊಳ್ಳಲು ಪ್ರಯತ್ನಪಟ್ಟು, ತಮಗೆ ಸಾಧ್ಯವಾದ ವಿಷಯದಲ್ಲಿ ಕೇವಲ ಸಾಮೋಪಾಯದಿಂದ ಪ್ರವರ್ತಿಸುವರು ॥೨೩॥

ಎಲೌ ಅಬಲೆ! ಸೊಳ್ಳೆಯಹಾಗಿರುವ ನಿನ್ನಂತಹ ಸಾವಿರಾರು ಪ್ರಾಣಿಗಳನ್ನು, ಕಸಕಡ್ಡಿಗಳನ್ನೂ ಜೀರ್ಣಪರ್ಣಗಳನ್ನೂ ವಾಯು ಹೊತ್ತುಕೊಂಡು ಹೋಗುವಂತೆ, ನಮ್ಮ ಧೈರ್ಯವು ಅಪಹರಿಸಿಬಿಟ್ಟಿರುವುದು ॥೨೪॥

ಪ್ರಾಜ್ಞರಾದವರು, ಈ ವಿಧವಾದ ಸಂರಂಭಮಾರ್ಗಗಳನ್ನು ಬಿಟ್ಟು ಬಿಟ್ಟು, ಸರ್ವತ್ರಸಮವಾಗಿ ನಿರ್ಮಲವಾಗಿರುವ ಬುದ್ಧಿಯಿಂದಲೂ, ಪ್ರಾಜ್ಞರ ಚರಣೆಗೆ ತಕ್ಕಂತಹ ಬುದ್ಧಿಯಿಂದಲೂಕೂಡ, ತಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳುವರು ॥೨೫॥

ತಾನು ನಡೆಯಿಸಿದ ಆಚರಣೆಯಿಂದಲೇ ಕಾರ್ಯಸಿದ್ಧಿಯಾಗಲಿ,-ಅಥವಾ ಆಗದಿರಲಿ,-ಅನಾದಿನಿಯತಿಸಿದ್ಧವಾಗಿರತಕ್ಕ ಸಾಮೋಪಾಯವನ್ನು ಬಿಟ್ಟು ನಡೆಯಕೂಡದು. ಹೀಗಿರುವಾಗ, ಕಾರ್ಯಸಿದ್ಧಿ ನಿಶ್ಚಿತವಾಗಿರುವ ಸಂದರ್ಭದಲ್ಲಿ ಹೇಳತಕ್ಕುದೇನು? ಅದುಕಾರಣ, ಭ್ರಾಂತರಿಗುಚಿತವಾದ ಈ ಸಂರಂಭಕ್ಕವಕಾಶವೆಲ್ಲಿರುವುದು ? ॥೨೬॥

ಎಲೌ! ರಾಕ್ಷಸಿ! ನಿನ್ನ ಅಭಿಮತವಾವುದು ?—ಹೇಳು. ನಮ್ಮಲ್ಲಿ ಯಾಚಕಳಾಗಿ ಬಂದು ನೀನು ಯಾವುದನ್ನಪೇಕ್ಷಿಸುವೆ? ಸ್ವಪ್ನದಲ್ಲಿಯಾದರೂ ನಮ್ಮ ಮುಂದೆ ಬಂದು ನಿಂತ ಯಾಚಕನು ವಿಫಲನಾಗಿ ಹೋಗುವುದಿಲ್ಲ ॥೨೭॥

ಅಯ್ಯಾ ! ರಾಮ ! ಆಗ ಈ ರೀತಿಯಾಗಿ ಅವನಿಂದ ಹೇಳಲ್ಪಟ್ಟವಳಾಗಿ, ಆ ರಾಕ್ಷಸಿಯು ತನ್ನ ಮನಸ್ಸಿನಲ್ಲಿ ಹೀಗೆ ಯೋಚನೆ ಮಾಡಿದಳು:—ಅಹಹ! ಈ ಪುರುಷಸಿಂಹರ ಧೈರ್ಯವೂ, ಬುದ್ಧಿಬಲವೂ ಎಷ್ಟು ನಿರ್ಮಲವಾದ ಆಚರಣೆಯುಳ್ಳುವಾಗಿರುವುವು ! ॥೨೮॥

ನ ಸಾಮಾನ್ಯಾವಿಮೌ ಮನ್ಯೇ ವಿಚಿತ್ರೇಯಂ ಚಮತ್ಕೃತಿಃ ।
ವಚೋ ವಕ್ತ್ರೇಕ್ಷಣೇನೈವ ವದತ್ಯನ್ತರ್ವಿನಿಶ್ಚಯಮ್ ॥೧೯॥
ವಚೋವಕ್ತ್ರೇಕ್ಷಣದ್ವಾರೈಃ ಧೀಮತಾಮಾಶಯಾಮಿಥಃ ।
ಏಕೀಭವನ್ತಿ ಸರಿತಾಂ ಪಯಾಂಸಿ ವಲನೈರಿವ ॥೨೦॥
ಆಭ್ಯಾಂ ಪ್ರಾಯಃ ಪರಿಜ್ಞಾತೋ ಮಮ ಭಾವೋನಯೋರ್ಮಯಾ ।
ನ ವಿನಾಶ್ಯೌ ಮಯಾ ಚೇಮೌ ಸ್ವಯಮೇವಾವಿನಾಶಿನೌ ॥೨೧॥
ಮನ್ಯೇ ಭವೇತಾಮಾತ್ಮಜ್ಞೌ ನಾತ್ಮಜ್ಞಾನಾದೃತೇ ಮತಿಃ ।
ಪ್ರವೃತ್ತಸದಸದ್ಭಾವಾತ್ ಭವತ್ಯಸ್ತಭಯಾ ಮೃತೌ ॥೨೨॥
ತದೇತೌ ಪರಿಪೃಚ್ಛಾಮಿ ಕಿಞ್ಚಿತ್ ಸನ್ದೇಹಮುತ್ಥಿತಮ್ ।
ಪ್ರಾಜ್ಞಂ ಪ್ರಾಪ್ಯ ನ ಪೃಚ್ಛನ್ತಿ ಯೇ ಕೇಚಿತ್ ತೇ ನರಾಧಮಾಃ ॥೨೩॥
ಇತಿ ಸಞ್ಚಿನ್ತ್ಯ ಪೃಚ್ಛಾಯೈ ತನ್ವಾನಾವಸರಂ ತತಃ ।
ಅಕಾಲಕಲ್ಪಾಭ್ರರವಂ ಹಾಸಂ ಸಂಯಮ್ಯ ಸಾಬ್ರವೀತ್ ॥೨೪॥
ಕೌ ಭವನ್ತೌ ಸತೌ ಧೀರೌ ಕಥ್ಯತಾಮಿತಿ ಮೇನಘೌ ।
ಜಾಯತೇ ದರ್ಶನಾದೇವ ಮೈತ್ರೀ ವಿಶದಚೇತಸಾಮ್ ॥೨೫॥

ನಾನು ಇವರನ್ನು ಸಾಮಾನ್ಯಪುರುಷರೆಂದು ಹೇಳಲಾರೆನು. ಈ ಚಮತ್ಕಾರವತ್ಯಾಶ್ಚರ್ಯವಾಗಿರುವುದು. ಇವರ ಮುಖದರ್ಶನದಿಂದಲೇ, ಇವರ ಮಾತು ಹೃದಯಗತವಾದ ನಿಶ್ಚಯವನ್ನು ತೋರಿಸುವುದೆಂದು ಸ್ಪಷ್ಟವಾಗುವುದು ॥೧೯॥

ಪ್ರಪಂಚದಲ್ಲಿ, ಸಂಗಮಗಳಿಂದ ನದೀಜಲಗಳು ಒಟ್ಟುಗೂಡುವಂತೆ, ವಚನ ವದನ ಈಕ್ಷಣ-ಇವುಗಳ ದ್ವಾರದಿಂದಲೇ, ಪ್ರಾಜ್ಞರ ಅಭಿಪ್ರಾಯಗಳು ಪರಸ್ಪರವಾಗಿ ಏಕೀಭವಿಸುವುವು ॥೨೦॥

ಪ್ರಾಯಶಃ ಇವರು ನನ್ನ ಅಭಿಪ್ರಾಯವನ್ನು ತಿಳಿದಿರುವರು; ಇವರ ಅಭಿಪ್ರಾಯವನ್ನು ನಾನೂ ತಿಳಿದಿರುವೆನು. ಇವರು ಸ್ವತಏವ ನಾಶವಿಲ್ಲದವರಾಗಿರುವುದರಿಂದ, ನಾನೂ ಇವರನ್ನು ನಾಶಪಡಿಸಲಾರದವಳಾಗಿರುವೆನು ॥೨೧॥

ಇವರು ಆತ್ಮಜ್ಞಾನಿಗಳಾಗಿರಬಹುದೆಂದು ನನಗೆ ತೋರುವುದು. ಜೀವನಮರಣಗಳೆಂಬ ನಂಬುಗೆಯು, ಆತ್ಮಜ್ಞಾನದಿಂದಲೇ ತೊಡೆದುಹೋಗತಕ್ಕುದಾಗಿರುವುದು; ಇಂತಹ ಆತ್ಮಜ್ಞಾನವಿಲ್ಲದಿದ್ದರೆ, ಇವರ ಮನಸ್ಸು ಇಷ್ಟುಮಟ್ಟಿಗೆ ಮರಣದಲ್ಲಿ ನಿರ್ಭಯವಾಗಿರುತಿರಲಿಲ್ಲ ॥೨೨॥

ಆದುಕಾರಣ, ನನಗುಂಟಾಗಿರುವ ಸ್ವಲ್ಪ ಸಂಶಯವನ್ನು ಇವರನ್ನು ಕುರಿತು ಪ್ರಶ್ನೆಮಾಡುತ್ತೇನೆ. ಪ್ರಪಂಚದಲ್ಲಿ, ಪ್ರಾಜ್ಞರಾದವರು ಸಿಕ್ಕಿದಾಗಲೂ ಯಾರು ವಿಷಯಗಳನ್ನು ಪ್ರಶ್ನೆಮಾಡಿ ತಿಳಿದುಕೊಳ್ಳುವುದಿಲ್ಲವೋ,-ಅವರು ಪುರುಷಾಧಮರೆನ್ನಲ್ಪಡುವರು ॥೨೩॥

ವತ್ಸ! ರಾಮ! ಆ ರಾಕ್ಷಸಿಯು ಈರೀತಿಯಾಗಿ ಯೋಚಿಸಿ, ಬಳಿಕ ತನ್ನ ಪ್ರಶ್ನೆಗೆ ಅವಕಾಶವನ್ನುಂಟುಮಾಡಿಕೊಳ್ಳುವುದಕ್ಕೋಸ್ಕರ, ಅಕಾಲಪ್ರಳಯ ಮೇಘಗರ್ಜನೆಗೆ ಸಮಾನವಾಗಿದ್ದ ತನ್ನ ಅಟ್ಟಹಾಸವನ್ನು ತಡೆದುಕೊಂಡು, ಈ ರೀತಿಯಾಗಿ ಪ್ರಶ್ನೆಮಾಡಿದಳು ॥೨೪॥

ಎಲೌ! ನಿರ್ದೋಷರಾದ ಮಹಾತ್ಮರೆ! ಇಷ್ಟು ಧೀರಪುರುಷರಾಗಿರುವ ನೀವಿಬ್ಬರೂ ಯಾರೆಂಬುದನ್ನು ನನಗೆ ಅನುಗ್ರಹವಿಟ್ಟು ಹೇಳಿರಿ. ಲೋಕದಲ್ಲಿ, ನಿರ್ಮಲಚಿತ್ತರಾದವರಿಗೆ,

ಮನ್ತ್ರ್ಯುವಾಚ.

ಅಯಂ ರಾಜಾ ಕಿರಾತಾನಾಂ ಅಸ್ಯಾಹಂ ಮನ್ತ್ರಿತಾಂ ಗತಃ ।
ಉದ್ಯತೌ ರಾತ್ರಿಚರ್ಯೇಣ ತ್ವಾದೃಗ್ಜನವಿನಿಗ್ರಹೇ ॥೩೬॥
ರಾಜ್ಞೋ ರಾತ್ರಿಂದಿವಂ ಧರ್ಮೋ ದುಷ್ಟಭೂತವಿನಿಗ್ರಹಃ ।
ಸ್ವಧರ್ಮತ್ಯಾಗಿನೋ ಯೇ ತು ತೇ ವಿನಾಶಾನಲೇನ್ಧನಮ್ ॥೩೭॥

ರಾಕ್ಷಸ್ಯುವಾಚ.

ರಾಜಂಸ್ತ್ವಮಸಿ ದುರ್ಮನ್ತ್ರೀ ದುರ್ಮನ್ತ್ರೀ ನ ನೃಪೋ ಭವೇತ್ ।
ಸದ್ರೂಪಸ್ಯ ಭವೇನ್ಮನ್ತ್ರೀ ರಾಜಾ ಸನ್ಮನ್ತ್ರಿಣೋ ಭವೇತ್ ॥೩೮॥
ರಾಜಾ ಚಾದೌ ವಿವೇಕೇನ ಯೋಜನೀಯಃ ಸುಮನ್ತ್ರಿಣಾ ।
ತೇ ನಾರ್ಯತಾಮುಪಾಯಾತಿ ಯಥಾ ರಾಜಾ ತಥಾ ಪ್ರಜಾಃ ॥೩೯॥
ಸಮಸ್ತಗುಣಜಾಲಾನಾಂ ಅಧ್ಯಾತ್ಮಜ್ಞಾನಮುತ್ತಮಮ್ ।
ತದ್ವಿದ್ರಾಜಾ ಭವೇದ್ರಾಜಾ ತದ್ವಿನ್ಮನ್ತ್ರೀ ಚ ಮನ್ತ್ರವಿತ್ ॥೪೦॥

ಪರಸ್ಪರ ದರ್ಶನದಿಂದಲೇ ಮೈತ್ರಿ ಹುಟ್ಟಿಬಿಡುವುದು. ಅದುಕಾರಣ, ನಾನು ನಿಮ್ಮಲ್ಲಿ ಮೈತ್ರಿಯುಳ್ಳವಳಾಗಿ ಪ್ರಶ್ನೆಮಾಡುತಿರುವೆನು ॥೩೫॥

ಆಗ ಮಂತ್ರಿಯು ಉತ್ತರ ಹೇಳುವನು :—

ಎಲೌ! ರಾಕ್ಷಸಿ! ಈತನು ಕಿರಾತರಿಗೆಲ್ಲ ಒಡೆಯನಾದವನು ; ನಾನು ಈತನಿಗೆ ಮಂತ್ರಿಯಾದವನು. ನಾವಿಬ್ಬರೂ, ರಾತ್ರಿಯಲ್ಲಿ ಸಂಚರಿಸುತ ನಿಮ್ಮಂತಹ ದುಷ್ಟರನ್ನು ನಿಗ್ರಹಿಸುವುದಕ್ಕೆ ಉದ್ಯುಕ್ತರಾಗಿರುವೆವು ॥೩೬॥

ದೊರೆಯಾದವನಿಗೆ, ರಾತ್ರಿ ಹಗಲೂ ದುಷ್ಟಪ್ರಾಣಿಗಳ ನಿಗ್ರಹವೇ ಧರ್ಮವಾದುದು. ಯಾರಾದರೆ, ಸ್ವಧರ್ಮಪರಿತ್ಯಾಗಮಾಡುವರೋ,—ಅವರು, ವಿನಾಶವೆಂಬ ಅಗ್ನಿಗೆ ಸೌದೆಯಾಗಿಬಿಡುವರು ॥೩೭॥

ಇದನ್ನು ಕೇಳಿ ರಾಕ್ಷಸಿಯು ಮತ್ತೆ ಮಾತನಾಡುವಳು :—

ಅಯ್ಯಾ! ದೊರೆಯೆ! ನೀನು ಕೆಟ್ಟ ಮಂತ್ರಿಯುಳ್ಳವನಾಗಿರುವೆ. ದೊರೆಯಾದವನು, ಎಂದಿಗೂ ದುರ್ಮಂತ್ರಿಯುಳ್ಳವನಾಗಿರಬಾರದು. ಮಂತ್ರಿಯಾಗತಕ್ಕವನು, ಯೋಗ್ಯನಾದ ರಾಜನಿಗೇ ಮಂತ್ರಿಯಾಗಬೇಕು; ರಾಜನಾಗತಕ್ಕವನೂ, ಯೋಗ್ಯನಾದ ಮಂತ್ರಿಗೇ ರಾಜನಾಗಬೇಕು ॥೩೮॥

ಮಂತ್ರಿಯಾದವನು, ಪ್ರಥಮತಃ ದೊರೆಯನ್ನು ವಿವೇಕಯುಕ್ತನನ್ನಾಗಿ ಮಾಡಬೇಕು. ಹೀಗೆ ಮಾಡಿದರೇ, ದೊರೆಯು ಶ್ರೇಷ್ಠನಾಗುವನು. ಬಳಿಕ, ದೊರೆಯು ಹೇಗಿರುವನೋ, ಪ್ರಜೆಗಳೂ ಹಾಗೆಯೇ ಆಗುವರು ॥೩೯॥

ಪ್ರಪಂಚದಲ್ಲಿ, ಸಮಸ್ತ ಗುಣಸಮುದಾಯದೊಳಗೂ ಅಧ್ಯಾತ್ಮಜ್ಞಾನವೇ ಉತ್ತಮವಾದ ಗುಣವೆನ್ನಿಸಲ್ಪಡುವುದು ; ಅದನ್ನು ತಿಳಿದ ದೊರೆಯೇ, ದೊರೆಯೆನ್ನಿಸಿಕೊಳ್ಳುವನು ; ಮಂತ್ರಿಯೂ ಅದನ್ನು ತಿಳಿದಿದ್ದರೆಯೇ ಮಂತ್ರಿಯೆನ್ನಿಸಿಕೊಳ್ಳುವನು ॥೪೦॥

ಪ್ರಭುತ್ವಂ ಸಮದೃಷ್ಟಿತ್ವಂ ತಚ್ಚ ಸ್ಯಾದ್ರಾಜವಿದ್ಯಯಾ ।
ತಾಮೇವ ಯೋ ನ ಜಾನಾತಿ ನಾಸೌ ಮನ್ತ್ರೀ ನ ಸೋಽಧಿಪಃ ॥೪೧॥
ಭವನ್ತೌ ತದ್ವಿದೌ ಸಾಧೂ ಯದಿ ತಚ್ಛ್ರೇಯಆಪ್ಸ್ಯಥಃ ।
ನೋ ಚೇದನರ್ಥದೌ ಸ್ವಸ್ಯಾಃ ಪ್ರಕೃತೇರದ್ಮ್ಯಹಂ ಯುವಾಮ್ ॥೪೨॥
ಏಕೋಪಾಯೇನ ಮತ್ಪಾರ್ಶ್ವಾತ್ ಬಾಲಕಾವುತ್ತರಿಷ್ಯಥಃ ।
ಮತ್ಪ್ರಶ್ನಪಞ್ಜರಂ ಸಾರಂ ಚೇದ್ವಿಚಾರಯಥೋ ಧಿಯಾ ॥೪೩॥

ಪ್ರಶ್ನಾನಿಮಾನ್ ಕಥಯ ಪಾರ್ಥಿವ ವಾಥ ಮನ್ತ್ರಿನ್
ತತ್ಪ್ರಾರ್ಥಿನೀ ಭೃಶಮಹಂ ಪರಿಪೂರಯಾರ್ಥಮ್ ।
ಅಙ್ಗೀಕೃತಾರ್ಥಮದದತ್ ಕ ಇವಾಸ್ತಿ ಲೋಕೇ
ದೋಷೇಣ ಸಂಕ್ಷಯಕರೇಣ ನ ಯುಜ್ಯತೇ ಯಃ ॥೪೪॥

ಇತಿ ಉತ್ಪತ್ತಿಪ್ರಕರಣೇ ರಾಕ್ಷಸೀವರ್ಣನಂ ನಾಮ
ಅಷ್ಟಸಪ್ತತಿತಮಃ ಸರ್ಗಃ.

ಪ್ರಪಂಚದಲ್ಲಿ, ಪ್ರಭುತ್ವವೆಂದರೆ,- ಸರ್ವರಲ್ಲಿಯೂ . ಸಮದೃಷ್ಟಿಯಾಗಿರುವಿಕೆಯೆಂದರ್ಥವು. ಈ ಸಮದೃಷ್ಟಿತ್ವವು, ವಿದ್ಯೆಗಳಿಗೆಲ್ಲ ದೊರೆಯಾಗಿರುವ ಅಧ್ಯಾತ್ಮವಿದ್ಯೆಯಿಂದಲೇ ಉಂಟಾಗಬೇಕು. ಇಂತಹ ಅಧ್ಯಾತ್ಮವಿದ್ಯೆಯನ್ನೇ ಯಾವನು ಅರಿಯನೋ,-ಅಂಥವನು ಮಂತ್ರಿಯೂ ಅಲ್ಲ; ಅಂತಹ ದೊರೆ ದೊರೆಯೂ ಅಲ್ಲ ॥೪೧॥

ಆದುಕಾರಣ, ಸಾಧುಗಳಾಗಿರತಕ್ಕ ನೀವಿಬ್ಬರೂ ಅಂತಹ ಅಧ್ಯಾತ್ಮ ವಿದ್ಯೆಯನ್ನು ಬಲ್ಲವರಾಗಿದ್ದಪಕ್ಷದಲ್ಲಿ, ನೀವು ಶ್ರೇಯಸ್ಸನ್ನು ಹೊಂದುವಿರಿ. ಹಾಗಿಲ್ಲದಪಕ್ಷದಲ್ಲಿ, ನೀವು ಸ್ವಕೀಯರಾದ ಪ್ರಜೆಗಳಿಗೆ ಉಪದ್ರವ ಕೊಡತಕ್ಕವರೇ ಸರಿ. ಇಂತಹ ನಿಮ್ಮನ್ನು ನಾನು ತಿಂದುಬಿಡುವೆನು ॥೪೨॥

ಎಲೈ ಪುತ್ರರಿರಾ! ನಾನು ಈಗ ಸಾರತರವಾದ ಒಂದು ಪ್ರಶ್ನಸಮುದಾಯವನ್ನು ನಿಮಗೆ ಕೊಡುವೆನು; ಅದನ್ನು ನೀವು ನಿಮ್ಮ ಬುದ್ಧಿಯಿಂದ ಸರಿಯಾಗಿ ವಿಚಾರಮಾಡಿ ಉತ್ತರಕೊಟ್ಟಪಕ್ಷದಲ್ಲಿ, ನನ್ನ ಕೈಯಿಂದ ನೀವು ಬಿಡಿಸಿಕೊಂಡು ಹೋಗುವಿರಿ. ನೀವು ಬಿಡುಗಡೆ ಹೊಂದುವುದಕ್ಕೆ ಇದೊಂದೇ ಉಪಾಯವು ॥೪೩॥

ಅಯ್ಯಾ! ದೊರೆಯೆ! ನೀನು ಈ ಪ್ರಶ್ನೆಗಳಿಗುತ್ತರ ಹೇಳು. ಅಥವಾ, ಎಲೈ ಮಂತ್ರಿಯೆ! ನೀನಾದರೂ ಹೇಳು. ನೀನು ನನ್ನನ್ನು ಕುರಿತು- ನಿನಗೇನುಬೇಕೆಂದು ಪ್ರಶ್ನೆಮಾಡಿದೆಯಲ್ಲವೆ! ನನಗೆ ಬೇಕಾದುದೇ ಇದು; ಇದನ್ನು ನೀನು ಪೂರ್ತಿಗೊಳ್ಳಿಸು. ನನ್ನ ಇಷ್ಟಾರ್ಥವನ್ನು ಕೊಡು. ಪ್ರಪಂಚದಲ್ಲಿ, ಕೇವಲ ಹಾನಿಕರವಾದ ದೋಷದಿಂದ ರಹಿತನಾದವನು ಯಾವನುತಾನೆ, ತಾನು ಒಪ್ಪಿಕೊಂಡಿರುವಂತೆ ಯಾಚಕರ ಇಷ್ಟಾರ್ಥವನ್ನು ಕೊಡದಿರುವನು! ॥೪೪॥

ಇದು ಉತ್ಪತ್ತಿಪ್ರಕರಣದಲ್ಲಿ ಕರ್ಕಟ್ಯುಪಾಖ್ಯಾನದೊಳಗೆ ರಾಕ್ಷಸೀವರ್ಣನವೆಂಬ
ಎಪ್ಪತ್ತೆಂಟನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕೋನಾಶೀತಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಇತ್ಯುಕ್ತ್ವಾ ರಾಕ್ಷಸೀ ಪ್ರಶ್ನಾನ್ ಸಾ ವಕ್ತುಮುಪಚಕ್ರಮೇ ।
ಉಚ್ಯತಾಮಿತಿ ರಾಜ್ಞೋಕ್ತೇ ತಾನಿಮಾನ್ ಶೃಣು ರಾಘವ ॥೧॥

ರಾಕ್ಷಸ್ಯುವಾಚ.

ಏಕಸ್ಯಾನೇಕಸಙ್ಖ್ಯಸ್ಯ ಕಸ್ಯಾಣೋರಮ್ಬುಧೇರಿವ ।
ಅನ್ತರ್ಬ್ರಹ್ಮಾಣ್ಡಲಕ್ಷಾಣಿ ಲೀಯನ್ತೇ ಬುದ್ಬುದಾ ಇವ ॥೨॥

ಉತ್ಪತ್ತಿಪ್ರಕರಣದಲ್ಲಿ ಎಪ್ಪತ್ತೊಂಬತ್ತನೆಯ ಸರ್ಗವು.

ಅನಾತ್ಮವಿದ್ವಜ್ರಸಮಾನ್ ಆತ್ಮವಿದ್ಧೃದಯಙ್ಗಮಾನ್ ।
ಚಕ್ರೇ ದ್ವಿಸಪ್ತತಿಪ್ರಶ್ನಾನ್ ಕ್ರಮಾತ್ ಸರ್ಗೇತ್ರ ಕರ್ಕಟೀ ॥

ಈ ಸರ್ಗದಲ್ಲಿ, ಆತ್ಮಜ್ಞಾನರಹಿತರಾದವರಿಗೆ ವಜ್ರಸಮಾನವಾಗಿಯೂ-ಆತ್ಮಜ್ಞಾನಿಗಳಿಗೆ ಹೃದಯಂಗಮವಾಗಿಯೂ ಇರುವ-ಎಪ್ಪತ್ತೆರಡು ಪ್ರಶ್ನೆಗಳನ್ನು-ಕರ್ಕಟಿಯು ಕೇಳಿದಳೆಂಬ ವಿಷಯವು ವರ್ಣಿಸಲ್ಪಡುವುದು.

ಪುನಃ ಶ್ರೀ ವಸಿಷ್ಠರು ಹೇಳಲುಪಕ್ರಮಿಸಿದರು :—

ಅಯ್ಯಾ! ರಾಮ! ಆ ರಾಕ್ಷಸಿಯು ಪೂರ್ವೋಕ್ತರೀತಿಯಾಗಿ ಹೇಳಿ, ನಿನ್ನ ಪ್ರಶ್ನೆಗಳನ್ನು ಹೇಳೆಂದು ದೊರೆಯಿಂದ ಹೇಳಲ್ಪಟ್ಟಬಳಿಕ, ತಾನು ಹೇಳಲುಪಕ್ರಮಿಸಿದಳು. ಅವಳು ಕೇಳಿದ ಪ್ರಶ್ನೆಗಳನ್ನು (೧) ನಾನು ನಿನಗೆ ಹೇಳುವೆನು ; ಕೇಳುವವನಾಗು ॥೧॥

ಆ ರಾಕ್ಷಸಿ ಹೇಳಿದುದೇನೆಂದರೆ :—

ಅಯ್ಯಾ ಮಂತ್ರಿ! 1. ಯಾವ ಪದಾರ್ಥವು, ಒಂದೇ ಆಗಿದ್ದರೂ ಅನೇಕ ಸಂಖ್ಯವಾಗಿರುವುದು ? 2. ಯಾವುದು ಕೇವಲ ಅಣುವಾಗಿರುವುದು? 3. ಸಮುದ್ರದಲ್ಲಿ ಗುಳ್ಳೆಗಳಡಗಿರುವಂತೆ, ಯಾವುದರೊಳಗೆ ಅನೇಕಲಕ್ಷ ಬ್ರಹ್ಮಾಂಡಗಳಡಗಿ ರುವುವು? ॥೨॥

---

(೧) ಇದರ ಮೂಲಗ್ರಂಥದಲ್ಲಿ ಸರಿಯಾಗಿ ಎಪ್ಪತ್ತೆರಡು ಪ್ರಶ್ನೆಗಳು ಇರುವುದಿಲ್ಲ. ಆದರೂ ಉತ್ತರಗಳನ್ನು ಅನುಸರಿಸಿ ಪ್ರಶ್ನಗಳು ಕ್ರಮಪಡಿಸಲ್ಪಟ್ಟವೆ. ಆಯಾ ಪ್ರಶ್ನಗಳಿಗೆ ಉತ್ತರಗಳು ಕ್ರಮವಾಗಿ ತಿಳಿಯುವುದಕ್ಕೋಸ್ಕರ, ಪಶ್ನೆಗಳಿಗೂ ಉತ್ತರಗಳಿಗೂ ಇಂಗ್ಲೀಷ್ ಸಂಖ್ಯೆಯನ್ನು ಹಾಕಿದೆ. ಪ್ರಶ್ನೆಗಳಿಗೆಲ್ಲ ಕ್ರಮವಾಗಿ ಉತ್ತರ ಹೇಳಲ್ಪಟ್ಟಿಲ್ಲ; ಸ್ವಲ್ಪ ಕ್ರಮದಪ್ಪಿದೆ. ಇದಲ್ಲದೆ, ಕೆಲವು ಪ್ರಶ್ನಗಳಿಗೆ ಎರಡುವೇಳೆ ಉತ್ತರ ಹೇಳಲ್ಪಟ್ಟಿದೆ. ಉತ್ತರಕಾಲದಲ್ಲಿಯೇ ಪ್ರಶ್ನೆಗಳಿಗೆ ಅರ್ಥವು ಸ್ಪಷ್ಟವಾಗುವುದರಿಂದ, ಪ್ರಶ್ನೆಗಳಿಗೆ ವಿಶೇಷವಾಗಿ ಅರ್ಥವಿವರಣೆಯನಾವಶ್ಯಕವಾಗಿರುವುದು.

ಕಿಮಾಕಾಶಮನಾಕಾಶಂ ನ ಕಿಞ್ಚಿತ್ ಕಿಞ್ಚಿದೇವ ಕಿಮ್ ।
ಕೋಽಹಮೇವಾಸಿ ಸಮ್ಪನ್ನಃ ಕೋ ಭವಾನಪ್ಯಹಂ ಸ್ಥಿತಃ ॥೩॥
ಗಚ್ಛನ್ನ ಗಚ್ಛತಿ ಚ ಕಃ ಕೋಽತಿಷ್ಠನ್ನಪಿ ತಿಷ್ಠತಿ ।
ಕಶ್ಚೇತನೋಽಪಿ ಪಾಷಾಣಃ ಕಶ್ಚಿದ್ವ್ಯೋಮ್ನಿ ವಿಚಿತ್ರಕೃತ್ ॥೪॥
ವಹ್ನಿತಾಮಜಹಚ್ಚೈವ ಕಶ್ಚ ವಹ್ನಿರದಾಹಕಃ ।
ಅವಹ್ನೇರ್ಜಾಯತೇ ವಹ್ನಿಃ ಕಸ್ಮಾದಾರ್ಯ ನಿರನ್ತರಮ್ ॥೫॥
ಅಚನ್ದ್ರಾರ್ಕಾಗ್ನಿತಾರೋಽಪಿ ಕೋಽವಿನಾಶಃ ಪ್ರಕಾಶಕಃ ।
ಅನೇತ್ರಲಭ್ಯಾತ್ ಕಸ್ಮಾಚ್ಚ ಪ್ರಕಾಶಃ ಸಮ್ಪ್ರವರ್ತತೇ ॥೬॥
ಲತಾಗುಲ್ಮಾಙ್ಕುರಾದೀನಾಂ ಜಾತ್ಯನ್ಧಾನಾಂ ತಥೈವ ಚ ।
ಅನ್ಯೇಷಾಮಪ್ಯನಕ್ಷ್ಣಾಂ ಆಲೋಕಃ ಕಇಹೋತ್ತಮಃ ॥೭॥
ಜನಕಃ ಕೋಽಮ್ಬರಾದೀನಾಂ ಸತ್ತಾಯಾಃ ಕಃ ಸ್ವಭಾವದಃ ।
ಕೋ ಜಗದ್ರತ್ನಕೋಶಃ ಸ್ಯಾತ್ ಕಸ್ಯ ಕೋಶೋ ಮಣೇರ್ಜಗತ್ ॥೮॥
ಕೋಽಣುಸ್ತಮಃ ಪ್ರಕಾಶಃ ಸ್ಯಾತ್ ಕೋಽಣುರಸ್ತಿ ಚ ನಾಸ್ತಿ ಚ ।

---

4. ಆಕಾಶವಾಗಿದ್ದರೂ ಆಕಾಶವಲ್ಲದುದು (ಅಶೂನ್ಯ) ಯಾವುದು? 5. ಯಾವ ವಸ್ತುವು ಒಂದೂ ಅಲ್ಲದಿದ್ದರೂ, ಯಾವುದೋ ಒಂದು (ಅನಿರ್ದೇಶ್ಯ) ಪದಾರ್ಥವಾಗಿರುವುದು? 6. ನಾನೇ ನೀನೆನ್ನಿಸುವುದೂ ನೀನೇ ನಾನೆನ್ನಿಸುವುದೂ ಆಗಿರುವ ಪದಾರ್ಥವು ಯಾವುದು? ॥೩॥

7. ನಡೆಯುತಿದ್ದರೂ ನಡೆಯದಿರುವುದು ಯಾವುದು? 8. ನಿಲ್ಲದಿದ್ದರೂ ನಿಂತಿರುವುದಾವುದು? 9. ಯಾವುದು ಚೈತನ್ಯವಾಗಿದ್ದರೂ ಕಲ್ಲಿನಂತೆ ಜಡವಾಗಿರುವುದು? 10. ಚಿದಾಕಾಶದಲ್ಲಿ ವಿಚಿತ್ರವಾದ ವ್ಯಾಪಾರವನ್ನು ಮಾಡುವುದಾವುದು? ॥೪॥

11. ಅಗ್ನಿರೂಪವಾದ ಯಾವ ಪದಾರ್ಥವು, ಅಗ್ನಿಸ್ವಭಾವವನ್ನು ಬಿಡದಿರುವುದಾಗಿದ್ದರೂ ಸುಡದಿರುವುದು? 12. ಅಯ್ಯಾ! ದೊರೆಯೆ! ಅಗ್ನಿಯಲ್ಲದ ಯಾವ ಪದಾರ್ಥದಿಂದ ನಿರಂತರವೂ ಅಗ್ನಿ ಹುಟ್ಟುತಿರುವುದು? ॥೫॥

13. ಚಂದ್ರ ಸೂರ್ಯ ವಹ್ನಿ ನಕ್ಷತ್ರಗಳಿಲ್ಲದುದಾಗಿದ್ದರೂ ಯಾವ ಪದಾರ್ಥವು ನಾಶವಿಲ್ಲದೆಯೇ ಪ್ರಕಾಶವುಂಟುಮಾಡುವುದು? 14. ಯಾರಿಗೂ ದೃಗ್ಗೋಚರವಾಗದ ಯಾವ ಪದಾರ್ಥದಿಂದ ಪ್ರಕಾಶವು ಹೊರಡುವುದು? ॥೬॥

15. ಲತೆ ಗುಲ್ಮ ಅಂಕುರ ಇತ್ಯಾದಿಗಳಿಗೂ, ಹುಟ್ಟು ಕುರುಡರಿಗೂ, ಇನ್ನೂ ಇತರವಾದ ಅಂಗಹೀನ ಪ್ರಾಣಿಗಳಿಗೂ ಕೂಡ, ಉತ್ತಮವಾದ ಪ್ರಕಾಶವು ಯಾವುದು? ॥೭॥

16. ಆಕಾಶಾದಿಗಳಿಗೆ ಜನಕನು ಯಾರು? 17. ಯಾವನು ಸತ್ತೆ (ಇರುವಿಕೆ) ಗಳಿಗೆ ಸ್ವಭಾವವಾಗಿ ಸತ್ತಾಪ್ರದನಾದವನು? 18. ಜಗತ್ತೆಂಬ ರತ್ನಗಳಿಗೆ ಕೋಶಭೂತನಾದವನಾರು? 19. ರತ್ನಭೂತವಾದ ಯಾವ ಪದಾರ್ಥಕ್ಕೆ ಜಗತ್ತು ಕೋಶವೆನ್ನಿಸುವುದು? ॥೮॥

20. ಅಣುವಾದ ಯಾವ ಪದಾರ್ಥವು ತಮಸ್ಸಾಗಿಯೂ ಪ್ರಕಾಶವಾಗಿಯೂ ಇರುವುದು? 21. ಯಾವ ಅಣುವು ಇರತಕ್ಕದೂ ಇಲ್ಲದುದೂ ಆಗಿರುವುದು? 22. ಯಾವ

ಕೋಣುದರ್ಗರೇಪ್ಯದೂರೇ ಚ ಕೋಣುರೇವ ಮಹಾಗಿರಿಃ ‖೯‖
ನಿಮೇಷಏವ ಕಃ ಕಲ್ಪಃ ಕಃ ಕಲ್ಪೋಪಿ ನಿಮೇಷಕಃ ।
ಕಿಂ ಪ್ರತ್ಯಕ್ಷಮಸದ್ರೂಪಂ ಕಿಂ ಚೇತನಮಚೇತನಮ್ ‖೧೦‖
ಕಶ್ಚ ವಾಯುರವಾಯುಶ್ಚ ಕಃ ಶಬ್ದೋಽಶಬ್ದಏವಕಃ ।
ಕಃ ಸರ್ವಂ ನ ಚ ಕಿಂಚಿಚ್ಚ ಕೋಽಹಂ ನಾಹಂ ಚ ಕಿಂ ಭವೇತ್ ‖೧೧‖
ಕಿಂ ಪ್ರಯತ್ನಶತಪ್ರಾಪ್ಯಂ ಲಬ್ಧ್ವಾಪಿ ಬಹುಜನ್ಮನಿ ।
ಲಬ್ಧಂ ನ ಕಿಂಚಿದ್ಭವತಿ ಕಿಂ ತು ಸರ್ವಂ ನ ಲಭ್ಯತೇ ‖೧೨‖
ಸ್ವಸ್ಥೇನ ಜೀವಿತೇನೋಚ್ಚೈಃ ಕೇನಾತ್ಮೈವಾಪಹಾರಿತಃ ।
ಕೇನಾಣುನಾನ್ತಃ ಕ್ರಿಯತೇ ಮೇರುಸ್ತ್ರಿಭುವನಂ ತೃಣಮ್ ‖೧೩‖
ಕೇನಾಪ್ಯಣುಕಮಾತ್ರೇಣ ಪೂರಿತಾ ಶತಯೋಜನೀ ।
ಕೋಣುರೇವ ಭವರ್ವ ಮಾತಿ ನ ಯೋಜನಶತೇಷ್ವಪಿ ‖೧೪‖
ಕೇನಾಲೋಕನಮಾತ್ರೇಣ ಜಗದ್ಬಾಲಃ ಪ್ರನಾಟ್ಯತೇ ।

ಅಣುವು ದೂರದಲ್ಲಿಯೂ ಹತ್ತಿರದಲ್ಲಿಯೂ ಇರುವುದು? 23. ಯಾವ ಪದಾರ್ಥವು ಅಣುವಾಗಿಯೇ ಇದ್ದರೂ ದೊಡ್ಡ ಬೆಟ್ಟವಾಗಿರುವುದು ? ‖೯‖

24. ಯಾವ ವಸ್ತುವು ನಿಮೇಷವಾಗಿದ್ದರೂ ಕಲ್ಪವಾಗಿರುವುದು? 25. ಯಾವುದು ಕಲ್ಪವಾಗಿದ್ದರೂ ನಿಮೇಷವಾಗಿರುವುದು ? 26. ಪ್ರತ್ಯಕ್ಷವಾಗಿ ಪ್ರಕಾಶಿಸುವುದಾವುದು ? 27. ಹೀಗಿದ್ದರೂ ಯಾವುದು ರೂಪರಹಿತವಾಗಿರುವುದು ? 28. ಯಾವ ಪದಾರ್ಥವು ಚೇತನವಾಗಿಯೂ ಅಚೇತನವಾಗಿಯೂ ಇರುವುದು ? ‖೧೦‖

29. ವಾಯುವಾಗಿಯೂ ವಾಯುವಲ್ಲದೆಯೂ ಇರುವುದಾವುದು ? 30. ಶಬ್ದಶೂನ್ಯವಾಗಿದ್ದರೂ ಶಬ್ದವಾಗಿರುವುದಾವುದು ? 31. ಸರ್ವಪದಾರ್ಥರೂಪವಾಗಿಯೂ ಯಾವುದೂ ಅಲ್ಲದೆಯೂ ಇರುವುದಾವುದು ? 32. ನಾನೆಂಬುದೂ ನಾನಲ್ಲವೆಂಬುದೂ ಯಾವುದು ? ‖೧೧‖

33. ಹಿಂದೆ ಅನೇಕ ಜನ್ಮಗಳಲ್ಲಿ ಪಡೆಯಲ್ಪಟ್ಟಿದ್ದರೂ, ಈಗಲೂ ಯಾವುದು ಬಹು ಪ್ರಯತ್ನಲಭ್ಯವಾದುದು ? 34. ಯಾವುದು ಹೊಂದಲ್ಪಟ್ಟರೆ ಯಾವ ಲಾಭವೂ ಆದಂತಾಗುವುದಿಲ್ಲ ? 35. ಯಾವುದು ಸಂಪೂರ್ಣವಾಗಿ ಹೊಂದಲ್ಪಡುವುದಿಲ್ಲ ? ‖೧೨‖

36. ಯಾವನು ಸ್ವಸ್ಥನಾಗಿದ್ದುಗೊಂಡು–ಬಹುಕಾಲ ಬದುಕಿ-ತನ್ನನ್ನು ತಾನೇ ಅಪಹರಿಸಿಕೊಳ್ಳುವನು ? 37. ಯಾವ ಪರಮಾಣುವು ಮೇರುಪರ್ವತವನ್ನೂ ತನ್ನೊಳಗಡೆಯಿಟ್ಟುಕೊಳ್ಳುವುದು ? 38. ಯಾವುದು ಮೂರು ಲೋಕವನ್ನೂ ತೃಣವಾಗಿ ಮಾಡುವುದು ? ‖೧೩‖

39. ಅಣುಮಾತ್ರರೂಪನಾಗಿರತಕ್ಕ ಯಾವನು ನೂರಾರು ಯೋಜನಗಳನ್ನು ತುಂಬಿಕೊಂಡಿರುವನು ? 40. ಅಣುಮಾತ್ರನೇ ಆಗಿರತಕ್ಕ ಯಾವನು ನೂರಾರು ಯೋಜನಗಳಲ್ಲಿಯೂ ಹಿಡಿಯಲಾರದವನಾಗಿರುವನು ? ‖೧೪‖

41. ಯಾವನು ತನ್ನ ದರ್ಶನಮಾತ್ರದಿಂದಲೇ ಈ ಜಗತ್ತೆಂಬ ಬಾಲಕನನ್ನು ಕುಣಿಯಿ

ಕಸ್ಯಾಣೋರುದರೇ ಸನ್ತಿ ಶಿಲಾವನಿಭೃತಾಂ ಘಟಾಃ ॥೧೫॥
ಅಣುತ್ವಮಜಹತ್ ಕೋಣುಃ ಮೇರೋಃ ಸ್ಥೂಲತರಾಕೃತಿಃ ।
ವಾಲಾಗ್ರಶತಭಾಗಾತ್ಮಾ ಕೋಣುರುಚ್ಚೈಃ ಶಿಲೋಚ್ಚಯಃ ॥೧೬॥
ಕೋಣುಃ ಪ್ರಕಾಶತಮಸಾಂ ದೀಪಃ ಪ್ರಕಟನಪ್ರದಃ ।
ಕಸ್ಯಾಣೋರುದರೇ ಸನ್ತಿ ಸಮಗ್ರಾನುಭವಾರ್ಣವಃ ॥೧೭॥
ಕೋಣುರತ್ಯನ್ತನಿಸ್ವಾದುರಪಿ ಸಂಸ್ವದತೇನಿಶಮ್ ।
ಕೇನ ಸನ್ತ್ಯಜತಾ ಸರ್ವಂ ಅಣುನಾ ಸರ್ವಮಾಶ್ರಿತಮ್ ॥೧೮॥
ಕೇನಾತ್ಮಾಚ್ಛಾದನಾಶಕ್ತೇನಾಣುನಾಚ್ಛಾದಿತಂ ಜಗತ್ ।
ಜಗಲ್ಲಯೇನ ಕಸ್ಯಾಣೋಃ ಸದ್ಭೂತಮಪಿ ಜೀವತಿ ॥೧೯॥
ಅಜಾತಾವಯವಃ ಕೋಣುಃ ಸಹಸ್ರಕರಲೋಚನಃ ।
ಕೋ ನಿಮೇಷೋ ಮಹಾಕಲ್ಪಃ ಕಲ್ಪಕೋಟಿಶತಾನಿ ಚ ॥೨೦॥
ಅಣೌ ಜಗನ್ತಿ ತಿಷ್ಠನ್ತಿ ಕಸ್ಮಿನ್ ಬೀಜಇವ ದ್ರುಮಃ ।
ಬೀಜಾನಿ ನಿಷ್ಕಲಾನ್ತಾನಿ ಸ್ಫುಟಾನ್ಯನುದಿತಾನ್ಯಪಿ ॥೨೧॥

ಸುವನು ? 42. ಯಾವ ಪರಮಾಣುವಿನ ಹೊಟ್ಟೆಯೊಳಗೆ ಅನೇಕ ಪರ್ವತ ಸಮುದಾಯಗಳಿರುವುವು ? ॥೧೫॥

43. ಯಾವ ಅಣುವು ತನ್ನ ಅಣುತ್ವವನ್ನು ಬಿಡದೆಯೇ ಮೇರುಪರ್ವತಕ್ಕಿಂತಲೂ ಸ್ಥೂಲತರವಾದ ಆಕಾರವುಳ್ಳುದಾಗಿರುವುದು ? 44. ಕೂದಲ ತುದಿಯಲ್ಲಿ ನೂರನೆಯ ಭಾಗದಷ್ಟು ಸೂಕ್ಷ್ಮವಾಗಿರುವ ಯಾವ ಅಣುಪದಾರ್ಥವು ದೊಡ್ಡ ಬೆಟ್ಟವಾಗಿರುವುದು ? ॥೧೬॥

45. ಯಾವ ಅಣುವು ಬೆಳಕಿಗೂ ಕತ್ತಲೆಗೂ ಪ್ರಕಾಶ ಕೊಡತಕ್ಕುದು ? 46. ಯಾವ ಅಣುವಿನ ಒಳಗಡೆ ಸಮಸ್ತವಾದ ಚಿತ್ತವೃತ್ತಿಗಳೂ ಇರುವುವು ? ॥೧೭॥

47. ಯಾವ ಅಣುವು ಮಧುರಾದಿ ರಸಗಳು ಸುತರಾಂ ಇಲ್ಲದಿದ್ದುದಾದರೂ ಸರ್ವದಾ ಸರ್ವರಿಗೂ ಆಸ್ವಾದನೀಯವಾದುದು ? 48. ಯಾವ ಅಣುವು ಸಮಸ್ತವನ್ನೂ ಬಿಡುತಿದ್ದರೂ ಸಮಸ್ತವನ್ನೂ ಸ್ವೀಕರಿಸುವುದು ? ॥೧೮॥

49. ತನ್ನನ್ನು ತಾನೇ ಮರೆಮಾಡಿಕೊಳ್ಳಲಾರದ ಯಾವ ಅಣುವು ಪ್ರಪಂಚವನ್ನೆಲ್ಲ ಆಚ್ಛಾದಿಸಿಕೊಂಡಿರುವುದು? 50. ಪ್ರಳಯದಿಂದ ಅಂತರ್ಹಿತವಾಗಿದ್ದರೂ ಈ ಜಗತ್ತು ಯಾವ ಅಣುವಿನ ಸತ್ತೆಯಿಂದ ಪುನಃ ಜೀವಿಸುವುದು ? ॥೧೯॥

51. ಅವಯವಗಳೊಂದೂ ಸುತರಾಂ ಇಲ್ಲದಿರುವ ಯಾವ ಅಣುವು ಸಾವಿರ ಕೈಕಾಲು ಕಣ್ಣುಗಳುಳ್ಳುದಾಗಿರುವುದು ? 52. ಯಾವುದು ಒಂದೇ ಒಂದು ನಿಮಿಷವಾಗಿದ್ದರೂ ಮಹಾಕಲ್ಪವಾಗಿಯೂ ಕಲ್ಪಕೋಟಿಶತವಾಗಿಯೂ ಇರುವುದು? ॥೨೦॥

53. ಬೀಜದಲ್ಲಿ ವೃಕ್ಷವಿರುವಂತೆ, ಯಾವ ಪರಮಾಣುವಿನಲ್ಲಿ ಸಮಸ್ತ ಜಗತ್ತುಗಳೂ ಇರುವುವು ? ಮತ್ತು, ಅವ್ಯಕ್ತವೇ ಪರಮಾವಧಿಯಾಗಿರುವ ಬೀಜಗಳು ವಿಕಸಿತಗಳಾಗಿದ್ದರೂ ಯಾವನಲ್ಲಿ ಉದಯಹೊಂದದಿರುವುವು ? ॥೨೧॥

ಕಲ್ಪಃ ಕಸ್ಯ ನಿಮೇಷಸ್ಯ ಬೀಜಸ್ಯೇವಾನ್ತರಸ್ಥಿತಃ |
ಕಃ ಪ್ರಯೋಜನಕರ್ತೃತ್ವಂ ಅಪ್ಯನಾಶ್ರಿತ್ಯ ಕಾರಕಃ ||೨೨||
ದೃಶ್ಯಸಮ್ಪತ್ತಯೇ ದ್ರಷ್ಟಾ ಸ್ವಾತ್ಮಾನಂ ದೃಶ್ಯತಾಂ ನಯನ್ |
ದೃಶ್ಯಂ ಪಶ್ಯನ್ ಸ್ವಮಾತ್ಮಾನಂ ಕೋ ಹಿ ಪಶ್ಯತ್ಯನೇತ್ರವಾನ್ ||೨೩||
ಅನ್ತರ್ಗಳಿತದೃಶ್ಯಂ ಚ ಕಲಿತಾತ್ಮಾನಮಖಣ್ಡಿತಮ್ |
ದೃಶ್ಯಾಸಮ್ಪತ್ತಯೇ ಪಶ್ಯನ್ ಪುರೋ ದೃಶ್ಯಂ ನ ಪಶ್ಯತಿ ||೨೪||
ಆತ್ಮಾನಂ ದರ್ಶನಂ ದೃಶ್ಯಂ ಕೋ ಭಾಸಯತಿ ದೃಶ್ಯವತ್ |
ಕಟಕಾದೀನಿ ಹೇಮ್ನೇವ ವಿಕೀರ್ಣಂ ಕೇನ ಚ ತ್ರಯಮ್ ||೨೫||
ಕಸ್ಮಾನ್ನ ಕಿಞ್ಚಿಚ್ಚ ಪೃಥಕ್ ಊರ್ಮ್ಯಾದೀವ ಮಹಾಮ್ಭಸಃ |
ಕಸ್ಯೇಚ್ಛಯಾ ಪೃಥಕ್ಚಾಸ್ತಿ ವೀಚಿತೇವ ಮಹಾಮ್ಭಸಃ ||೨೬||
ದಿಕ್ಕಾಲಾನವಚ್ಛಿನ್ನಾತ್ ಏಕಸ್ಮಾದಸತಃ ಸತಃ |
ದ್ವೈತಮಪ್ಯಪೃಥಕ್ ಕಸ್ಮಾತ್ ದ್ರವತೇವ ಮಹಾಮ್ಭಸಃ ||೨೭||

---

54. ಬೀಜದೊಳಗೆ ಮರವಿರುವಂತೆ, ನಿಮೇಷರೂಪವಾದ ಯಾವ ವಸ್ತುವಿನಲ್ಲಿ ಕಲ್ಪವು ಅಡಗಿರುವುದು ? 55. ಪ್ರಯೋಜನವೊಂದರಲ್ಲಿಯೂ ಕರ್ತೃತ್ವವನ್ನು ಹೊಂದದಿದ್ದರೂ ಯಾವುದು ಕರ್ತೃವಾಗಿರುವುದು ? ||೨೨||

56. ನೇತ್ರರಹಿತನಾದ ಯಾವ ಪುರುಷನು ದೃಶ್ಯವಸ್ತು ಸಿದ್ಧಿಸುವುದಕ್ಕೋಸ್ಕರ ತನ್ನನ್ನೇ ದೃಶ್ಯನನ್ನಾಗಿ ಮಾಡಿಕೊಂಡು ಸ್ವಾತ್ಮನನ್ನೇ ದೃಶ್ಯವನ್ನಾಗಿ ನೋಡುವನು ? ||೨೩||

57. ಈ ದೃಶ್ಯವು ಅಭಾವವನ್ನು ಹೊಂದುವುದಕ್ಕೋಸ್ಕರ, ಜ್ಞಾನದಿಂದ ದೃಶ್ಯವು ಒಳಗೇ ಲಯಹೊಂದಿರುವಂತೆ ಅಖಂಡನಾದ ಆತ್ಮನನ್ನೇ ನೋಡುತ, ಮುಂದುಗಡೆಯಿರುವ ದೃಶ್ಯವನು ನೋಡದಿರುವನು ? ||೨೪||

58. ದ್ರಷ್ಟೃ ದರ್ಶನ ದೃಶ್ಯ—ಇವು ಮೂರನ್ನೂ ಯಾವನು ದೃಗ್ಗೋಚರವಾಗಿರುವಂತೆ ಪ್ರಕಾಶಪಡಿಸುವನು ? 59. ಕಟಕ ಅಂಗದ ಮುಂತಾದ ಆಭರಣಗಳು ಸುವರ್ಣದಿಂದ ವಿಕೀರ್ಣವಾಗಿರುವಂತೆ, ದ್ರಷ್ಟೃ ದೃಶ್ಯ ದರ್ಶನಗಳನ್ನು ಯಾವನು ವಿಕ್ಷೇಪಶಕ್ತಿಯಿಂದ ಪ್ರಕಟಪಡಿಸುವನು ? ||೨೫||

60. ದೊಡ್ಡ ಸಮುದ್ರದ ನೀರಿಗಿಂತ ಬೇರೆಯಾಗಿ ಸಣ್ಣ ದೊಡ್ಡ ಅಲೆಗಳೊಂದೂ ಇಲ್ಲದಿರುವಂತೆ, ಯಾವನಿಗಿಂತ ಪೃಥಕ್ಕಾಗಿ ಯಾವುದೊಂದು ಪದಾರ್ಥವೂ ಇಲ್ಲ? 61. ಸಮುದ್ರದ ನೀರಿಗೇ ತರಂಗಾವಸ್ಥೆಯುಂಟಾಗುವಂತೆ, ಯಾವನಿಗೆ ಸ್ವೇಚ್ಛೆಯಿಂದ ಪೃಥಕ್ಪದಾರ್ಥವುಂಟು? ||೨೬||

62. ದಿಕ್ಕಾಲಾದ್ಯನವಚ್ಛಿನ್ನನಾಗಿಯೂ-ಅತಿ ಸೂಕ್ಷ್ಮನಾಗಿರುವುದರಿಂದ ಇಲ್ಲದಿರುವಂತೆ ತೋರತಕ್ಕವನಾಗಿಯೂ-ಅದ್ವಿತೀಯನಾಗಿಯೂ ಇರುವವನು ಯಾರು ? 63. ದ್ರವತ್ವವು ಜಲಕ್ಕಿಂತ ಪೃಥಕ್ಕಲ್ಲದಿರುವಂತೆ, ಯಾವನಿಗಿಂತ ದ್ವೈತವೂ ಪೃಥಕ್ಕಲ್ಲದಿರುವುದು ? ||೨೭||

ಆತ್ಮಾನಂ ದರ್ಶನಂ ದೃಶ್ಯಂ ಸದಸಚ್ಚ ಜಗತ್ತ್ರಯಮ್ |
ಕೋನ್ತರ್ಬೀಜಮಿವಾನ್ತಸ್ಸ್ಥಂ ಸ್ಥಿತಃ ಕೃತ್ವಾ ತ್ರಿಕಾಲಗಃ ||೬೪||
ಭೂತಂ ಭವದ್ಭವಿಷ್ಯಚ್ಚ ಜಗದ್ಬ್ರಲದ್ಧಂ ಬೃಹದ್ಭ್ರಮಮ್ |
ನಿತ್ಯಂ ಸಮಸ್ಯ ಕಸ್ಯಾನ್ತಃ ಬೀಜಸ್ಯಾನ್ತರಿವ ದ್ರುಮಃ ||೬೫||
ಬೀಜಂ ದ್ರುಮತಯೇವಾಶು ದ್ರುಮೋ ಬೀಜತಯೇವ ಚ |
ಸ್ವಮೇಕಮಜಹದ್ರೂಪಂ ಉದೇತ್ಯನುದಿತೋಪಿ ಕಃ ||೩೦||
ಬಿಸತನ್ತುರ್ಮಹಾಮೇರುಃ ಭೋರಾಜ್ಞ ಯದಪೇಕ್ಷಯಾ |
ತಸ್ಯ ಕಸ್ಯೋದರೇ ಸನ್ತಿ ಮೇರುಮನ್ದರಕೋಟಯಃ ||೩೧||
ಕೇನೇದಮಾತತಮನೇಕಚಿದೇವ ವಿಶ್ವಂ
ಕಿಂಸಾರಏವಮತಿವಲ್ಗಸಿ ಹಂಸಿ ಪಾಸಿ |
ಕಿಂದರ್ಶನೇನ ನ ಭವಸ್ಯಥವಾ ಸದೈವ
ನೂನಂ ಭವಸ್ಯಮಲದೃಗ್ವದ ನಃ ಸ್ವಶಾನ್ತ್ಯೈ ||೩೨||
ಏಷೋಸೌ ಪ್ರಗಳತು ಸಂಶಯೋ ಮಮೋಚ್ಚೈಃ
ಚಿತ್ತಶ್ರೀಮುಖಮಿಹಿಕಾಮಲಾನುಲೇಪಃ |

---

64. ದ್ರಷ್ಟೃ ದೃಶ್ಯ ದರ್ಶನಗಳನ್ನೂ, ಉದಯಾವಸ್ಥೆಯಲ್ಲಿಯೂ ತಿರೋಧಾನಾವಸ್ಥೆಯಲ್ಲಿಯೂ ಇರುವ ಲೋಕತ್ರಯವನ್ನೂ, ಯಾವನು ಬೀಜದಂತೆ ಸರ್ವದಾ ತನ್ನ ಅಂತರ್ಗತವಾಗಿ ಇಟ್ಟುಕೊಂಡಿರುವನು ? ||೨೮||

65. ಭೂತಭವಿಷ್ಯದ್ವರ್ತಮಾನವಾದ-ಮಹಾಭ್ರಾಂತಿಮಯವಾದ-ಈ ಜಗತ್ಸಮೂಹವು ಯಾರೊಳಗಿರುವುದು? 66. ಇದು ಯಾವನೊಳಗೆ ನಿತ್ಯವೂ ಒಟ್ಟಾಗಿ ಸೇರಿಕೊಂಡಿರುವುದು? ||

67. ವಸ್ತುತಃ ಆವಿರ್ಭಾವರಹಿತನಾಗಿದ್ದರೂ-ಯಾವನು, ತನ್ನ ನಿಜರೂಪವನ್ನು ಬಿಡದೆ, ಬೀಜವು ವೃಕ್ಷರೂಪವಾಗುವಂತೆಯೂ-ವೃಕ್ಷವು ಬೀಜರೂಪವಾಗುವಂತೆಯೂ ಉದಯಹೊಂದುವನು ? ||೩೦||

68. ಅಯ್ಯಾ! ರಾಜನೆ! ಯಾವ ಪದಾರ್ಥಕ್ಕಿಂತಲೂ ಬಿಸತಂತುವೂ ಮಹಾಮೇರುಪರ್ವತವಾಗಬಹುದೋ, ಅಂತಹ ಸೂಕ್ಷ್ಮವಾದ ಯಾವ ಪದಾರ್ಥದೊಳಗೆ ಮೇರುಮಂದರಗಳು ಕೋಟಿಸಂಖ್ಯಾಕವಾಗಿರುವುವು? ||೩೧||

69. ಅನೇಕ ಚೇತನಯುಕ್ತವಾಗಿರುವ ಈ ಪ್ರಪಂಚವು ಯಾರಿಂದ ವಿಸ್ತರಿಸಲ್ಪಟ್ಟಿತು? 70. ನೀನು ಯಾವ ಸಾರವುಳ್ಳವನಾಗಿ-ಹೀಗೆ ನಾನಾವಿಧವಾಗಿ ವ್ಯವಹಾರಮಾಡುತಲೂ ನಾಶಮಾಡುತಲೂ ಪರಿಪಾಲನೆಮಾಡುತಲೂ ಇರುವೆ? 71. ಯಾವ ಪದಾರ್ಥದ ದರ್ಶನದಿಂದ-ನೀನು ನಿರ್ಮಲಜ್ಞಾನನಾಗಿ ಅದಕ್ಕಿಂತ ಭಿನ್ನನಾಗಿರುವೆ ? 72. ಅಥವಾ ಸರ್ವದಾ ಅದರ ರೂಪದಲ್ಲಿಯೇ ಇರುವೆ ? ಅಯ್ಯಾ! ರಾಜ! ನಿನಗುಂಟಾಗಿರುವ ಮೃತ್ಯುವನ್ನು ಪರಿಹರಿಸಿಕೊಳ್ಳುವುದುಕ್ಕೋಸ್ಕರ, ಈ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ನನಗೆ ಹೇಳುವವನಾಗು ||೩೨||

ಅಯ್ಯಾ! ದೊರೆಯೆ! ಈ ದೊಡ್ಡ ಸಂಶಯವು, ನನ್ನ ಚಿತ್ತವೆಂಬ ಲಕ್ಷ್ಮಿಯ ಮುಖಚಂದ್ರನಿಗೆ ಮಂಜುಸುರಿದು ಕೊಳೆಕೂತಂತಾಗಿರುವುದು. ಇದು ನಿನ್ನ ಮುಂದೆ ಬಗೆಹರಿಯಬೇಕಾಗಿದೆ.

ಯಸ್ಯಾಗ್ರೇ ನ ಗಳತಿ ಸಂಶಯಃ ಸಮೂಲೋ
ನೈವಾಸೌ ಕ್ವಚಿದಪಿ ಪಣ್ಡಿತೋಕ್ತಿಮೇತಿ ॥೩೩॥
ಏವಂ ಮೇ ಯದಿ ನ ವಿನೇಷ್ಯಥಃ ಕ್ರಮೋಕ್ತಂ
ಸಂಶಾನ್ತಂ ಲಘುತರಸಂಶಯಂ ಸುಬುದ್ಧೀ ।
ತದ್ರಕ್ಷೋಜಠರಹುತಾಶನೇನ್ಧನತ್ವಂ
ನಿರ್ವಿಘ್ನಂ ಝಟಿತಿ ಗಮಿಷ್ಯಥಃ ಕ್ಷಣೇನ ॥೩೪॥
ಪಶ್ಚಾತ್ ತಾಂ ಜನಪದಮಣ್ಡಲೀಂ ಸಮಸ್ತಾತ್
ಭೋಕ್ಷ್ಯಾಮ್ಯುರುಜಠರಾ ಕ್ಷಣಾದ್ಗ್ರಸೇಹಮ್ ।
ಏವಂ ತೇ ಭವತು ಸುರಾಜತೇತಿ ಮನ್ಯೇ
ಮೂರ್ಖಾಣಾಮತಿರಸ ಏವ ಸಂಕ್ಷಯಾಯ ॥೩೫॥

ಶ್ರೀ ವಸಿಷ್ಠ ಉವಾಚ.

ಇತ್ಯುಕ್ತ್ವಾ ವಿಪುಲಗಭೀರಮೇಘನಾದ
ಪ್ರೋಲ್ಲಾಸಪ್ರಕಟಗಿರಾ ಪಿಶಾಚರೀ ಸಾ ।
ತೂಷ್ಣೀಮಪ್ಯತಿವಿಕಟಾಕೃತಿಸ್ತದಾಸೀತ್
ಶುದ್ಧಾನ್ತಃ ಶರದಮಲಾಭ್ರಮಣ್ಡಲೀವ ॥೩೬॥

ಇತಿ ಉತ್ಪತ್ತಿಪ್ರಕರಣೇ ರಾಕ್ಷಸೀಪ್ರಶ್ನೋ ನಾಮ
ಏಕೋನಾಶೀತಿತಮಃ ಸರ್ಗಃ.

ಯಾವನೆದುರಿಗೆ ಸಂಶಯವು ಸಮೂಲವಾಗಿ ನಾಶಹೊಂದುವುದಿಲ್ಲವೋ, ಅಂಥವನು ಎಲ್ಲಿಯೂ ಪಂಡಿತನೆಂಬ ಹೆಸರನ್ನು ಪಡೆಯಲಾರನು ॥೩೩॥

ಎಲೈ ಮಹಾಬುದ್ಧಿಗಳಾದ ರಾಜಮಂತ್ರಿಗಳಿರಾ! ಈಗ ನಾನು ಕ್ರಮವಾಗಿ ಹೇಳಿದ ಈ ಸಣ್ಣ ಸಂಶಯವನ್ನು ನೀವುಗಳು ಹೋಗಲಾಡಿಸದಿದ್ದಪಕ್ಷದಲ್ಲಿ, ಈಕ್ಷಣವೇ ರಾಕ್ಷಸರ ಜಠರಾಗ್ನಿಗೆ ಕಾಷ್ಠಭೂತರಾಗಿಬಿಡುವಿರಿ; ಇದನ್ನು ಯಾರೂ ತಡೆಯಲಾರರು ॥೩೪॥

ಇದರಿಂದ ನಿಮ್ಮಿಬ್ಬರಿಗೆ ಮಾತ್ರವೇ ವಿಪತ್ತೆಂದು ತಿಳಿಯಬೇಡಿರಿ. ನೀವಿಬ್ಬರೂ ಮರಣ ಹೊಂದಿದಬಳಿಕ, ದೊಡ್ಡ ಹೊಟ್ಟೆಯವಳಾದ ನಾನು, ನಿಮ್ಮ ಈ ದೇಶವನ್ನೆಲ್ಲ ಒಂದು ಕ್ಷಣದೊಳಗಾಗಿ ತಿಂದುಬಿಡುವೆನು. ಅದುಕಾರಣ, ಅಯ್ಯಾ! ರಾಜ! ನೀನು ನನ್ನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಹೇಳಿ, ನಿನ್ನನ್ನೂ ನಿನ್ನ ರಾಷ್ಟ್ರವನ್ನೂ ಕಾಪಾಡಿಕೊಂಡು, ಉತ್ತಮ ರಾಜನೆನ್ನಿಸಿಕೊ. ಮೂರ್ಖರಾದವರಿಗೆ, ಅತಿಯಾಗಿ ಭೋಗೇಚ್ಛೆಯು ಎಂದಿಗೂ ಹಾನಿಪ್ರದವೇ ಆಗುವುದು. ಆದುದರಿಂದ, ನೀನು ಭೋಗೇಚ್ಛೆಯುಳ್ಳವನಾಗದೆ, ಪಾರಮಾರ್ಥಿಕ ವಿಚಾರದಿಂದ ನನ್ನ ಪ್ರಶ್ನೆಗಳಿಗುತ್ತರ ಹೇಳುವವನಾಗು ॥೩೫॥

ಶ್ರೀ ವಸಿಷ್ಠರು ರಾಮನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಆಗ ಆ ರಾಕ್ಷಸಿ ಈರೀತಿಯಾಗಿ-ದೊಡ್ಡ ಮೇಘಧ್ವನಿಯಂತೆ ಮಾತನಾಡಿ, ಶರತ್ಕಾಲದ ಮೇಘಮಂಡಲದಂತೆ ನಿರ್ಮಲಳಾಗಿ ದೊಡ್ಡ ದೇಹವನ್ನು ಧರಿಸಿದವಳಾದಳು॥

ಇದು ಉತ್ಪತ್ತಿಪ್ರಕರಣದಲ್ಲಿ ಕರ್ಕಟ್ಯುಪಾಖ್ಯಾನದೊಳಗೆ ರಾಕ್ಷಸೀಪ್ರಶ್ನವೆಂಬ
ಎಪ್ಪತ್ತೊಂಭತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಶೀತಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಮಹಾನಿಶಿ ಮಹಾರಣ್ಯೇ ಮಹಾರಾಕ್ಷಸಕನ್ಯಯಾ ।
ಇತಿ ಪ್ರೋಕ್ತೇ ಮಹಾಪ್ರಶ್ನೇ ಮಹಾಮನ್ತ್ರೀ ಗಿರಂ ದದೌ ‖೧‖

ಮನ್ತ್ರ್ಯುವಾಚ.

ಶೃಣು ತೋಯದಸಙ್ಕಾಶೇ ಪ್ರಶ್ನಮೇತಂ ಭಿನದ್ಮಿ ತೇ ।
ಅನುಕ್ರಮಾತ್ಮಕಂ ಮತ್ತಂ ಗಜೇನ್ದ್ರಮಿವ ಕೇಸರೀ ‖೨‖
ಭವತ್ಯಾ ಪರಮಾತ್ಮೈಷಃ ಕಥಿತಃ ಕಮಲೇಕ್ಷಣೇ ।
ಅನಯೈವ ವಚೋಭಙ್ಗ್ಯಾ ಪ್ರಶ್ನವಿದ್ಬೋಧಯೋಗ್ಯಯಾ ‖೩‖
ಅನಾಖ್ಯತ್ವಾದಗಮ್ಯತ್ವಾತ್ ಮನಷ್ಷಷ್ಠೇನ್ದ್ರಿಯಸ್ಥಿತೇಃ ।

ಉತ್ಪತ್ತಿಪ್ರಕರಣದಲ್ಲಿ ಎಂಬತ್ತನೆಯ ಸರ್ಗವು.

ಸಮಾದಧೇತ್ರ ಪ್ರಥಮಂ ಮನ್ತ್ರೀ ಪ್ರಶ್ನಗಣಾನ್ ಕ್ರಮಾತ್ ।
ವ್ಯುತ್ಕ್ರಮಾಚ್ಚ ಯಥಾನ್ಯಾಯಂ ಸೂಕ್ಷ್ಮಾಭಿರುಪಪತ್ತಿಭಿಃ ‖

ಕರ್ಕಟಿ ಹೇಳಿದ ಪ್ರಶ್ನೆಗಳಿಗೆ ಮೊದಲು ಮಂತ್ರಿಯು ಕ್ರಮವಾಗಿಯೂ ವ್ಯುತ್ಕ್ರಮವಾಗಿಯೂ ಶಾಸ್ತ್ರನ್ಯಾಯವನ್ನು ಬಿಡದೆ ಸೂಕ್ಷ್ಮವಾದ ಯುಕ್ತಿಗಳಿಂದ ಸಮಾಧಾನ ಹೇಳಿದನೆಂಬ ವಿಷಯವು ಈ ಸರ್ಗದಲ್ಲಿ ಹೇಳಲ್ಪಡುವುದು.

ಶ್ರೀ ವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳುವರು :—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಮಹಾನಿಶಿಯಲ್ಲಿ ಮಹಾರಣ್ಯದೊಳಗೆ ಆ ಕರ್ಕಟಿಯು ಪ್ರಶ್ನೆಗಳನ್ನು ಹೇಳಿದಬಳಿಕ, ಮಹಾತ್ಮನಾದ ಮಂತ್ರಿಯು ಉತ್ತರಕೊಟ್ಟನು ‖೧‖

ಆ ಮಂತ್ರಿ ಹೇಳಿದುದೇನೆಂದರೆ :—

ಎಲೌ ಮೇಘದಂತಿರುವ ಕರ್ಕಟಿಯೆ! ಮದ್ದಾನೆಯನ್ನು ಸಿಂಹವು ಭೇದಿಸುವಂತೆ, ನೀನು ಕ್ರಮವಾಗಿ ಹೇಳಿರುವ ಈ ಪ್ರಶ್ನೆಯನ್ನು ನಾನು ಭೇದಿಸುವೆನು ; ಕೇಳುವವಳಾಗು ‖೨‖

ನೀನು ಹೇಳಿದ ವಚನರೀತಿಯು, ನಿನ್ನ ಪ್ರಶ್ನೆಗಳನ್ನು ತಿಳಿದುಕೊಳ್ಳತಕ್ಕವರಿಗೆ ಸರಿಯಾಗಿ ಗೊತ್ತಾಗುವಂತಿರುವುದು ; ಇಂತಹ ವಚನಕ್ರಮದಿಂದಲೇ, ನೀನು ಕೇಳುವ ಪದಾರ್ಥವು ಪರಮಾತ್ಮನೆಂದು ಗೊತ್ತಾಗುವುದು ‖೩‖

2. 'ಯಾವುದು ಕೇವಲ ಅಣುವಾಗಿರುವುದು?' ಎಂದು ಕೇಳಿದೆಯಲ್ಲವೆ! ಮೊದಲು ಅದಕ್ಕೆ ಉತ್ತರವನ್ನು ಕೇಳುವವಳಾಗು. ಈ ಪರಮಾತ್ಮನೇ ಅಣುಪದಾರ್ಥವು. ಇದು ಹೀಗಿ

ಚಿನ್ಮಾತ್ರಮೇವಮಾತ್ಮಾಣುಃ ಆಕಾಶಾದಪಿ ಸೂಕ್ಷ್ಮಕಃ ॥೪॥
ಚಿದಣೋಃ ಪರಮಸ್ಯಾನ್ತಃ ಸದಿವಾಸದಿವಾಪಿ ವಾ ।
ಬೀಜೇನ್ತರ್ದ್ರುಮಸತ್ತೇವ ಸ್ಫುರತೀದಂ ಜಗತ್ ಸ್ಥಿತಮ್ ॥೫॥
ಸತ್ತಿಕ್ಞ್ಚಿದನುಭೂತಿತ್ವಾತ್ ಸರ್ವಾತ್ಮಕತಯಾ ಸ್ವತಃ ।
ತದಾತ್ಮಕತಯಾ ಪೂರ್ವಂ ಭಾವಾಃ ಸತ್ತಾಂ ಕಿಲಾಗತಾಃ ॥೬॥
ಆಕಾಶಂ ಬಾಹ್ಯಶೂನ್ಯತ್ವಾತ್ ಅನಾಕಾಶಂ ತು ಚಿತ್ತ್ವತಃ ।
ಅತೀನ್ದ್ರಿಯತ್ವಾನ್ನೋ ಕಿಞ್ಚಿತ್ ಸಪರಮಾಣುರನನ್ತಕಃ ॥೭॥
ಸರ್ವಾತ್ಮಕತ್ವಾದ್ಭುಕ್ತೇ ಚ ತೇನ ಕಿಞ್ಚಿನ್ನ ಕಿಞ್ಚನ ।
ಚಿದಣೋಃ ಪ್ರತಿಭಾ ಸಾ ಸ್ಯಾತ್ ಏಕಸ್ಯಾನೇಕತೋದಿತಾ ।

ದೆಯೆಂದು ನಿರ್ದೇಶಿಸುವುದಕ್ಕಾಗಲಾರದು; ಪಂಚಜ್ಞಾನೇಂದ್ರಿಯಗಳಿಗೂ ಮನಸ್ಸಿಗೂಕೂಡ ಇದು ಅಗಮ್ಯವಾಗಿರುವುದು. ಹೀಗಿರುವುದರಿಂದ, ಈ ಆತ್ಮಪದಾರ್ಥವು ಆಕಾಶಕ್ಕಿಂತ ಸೂಕ್ಷ್ಮವಾಗಿರುವುದು ॥೪॥

3. 'ಸಮುದ್ರದೊಳಗೆ ಗುಳ್ಳೆಗಳಿರುವಂತೆ, ಯಾವುದರೊಳಗೆ ಅನೇಕಲಕ್ಷ ಬ್ರಹ್ಮಾಂಡಗಳಿರುವುವು?' ಎಂಬ ಪ್ರಶ್ನೆಗೆ ಈಗ ಸಮಾಧಾನವನ್ನು ಕೇಳು:—ಆ ಚಿತ್ಪರಮಾಣುವಿನಲ್ಲಿ, ಬೀಜದೊಳಗೆ ವೃಕ್ಷವಿರುವಂತೆ, ಅನೇಕಲಕ್ಷ ಸಂಖ್ಯಾಕವಾಗಿ ಕಾಣಿಸುವ ಈ ಜಗತ್ತು, ಒಂದುವೇಳೆ ಇರುವಂತೆಯೂ ಮತ್ತೊಂದುವೇಳೆ ಇಲ್ಲದಂತೆಯೂ ಸ್ಫುರಿಸುವುದು ॥೫॥

17. 'ಸತ್ತೆಗಳಿಗೆಲ್ಲ ಯಾವನು ಸ್ವಭಾವವಾಗಿ ಸತ್ತೆಯನ್ನು ಕೊಡತಕ್ಕವನು?' ಎಂಬ ಪ್ರಶ್ನೆಗೆ ಸಮಾಧಾನ ಹೇಳುವೆನು:—ಅನುಭವಮಾತ್ರ ರೂಪವಾಗಿರುವುದರಿಂದ, ಅನಿರ್ದೇಶ್ಯವಾಗಿರುವ ಆ ಬ್ರಹ್ಮವಸ್ತುವೊಂದೇ ಸತ್ತಾಗೋಚರವಾಗಿರುವುದು. ಇತರವಾದ ಸಮಸ್ತ ವಸ್ತುಸತ್ತೆಯೂ ಈ ಅನುಭವಸತ್ತೆಗೆ ಅಧೀನವಾಗಿರುವುದು. 'ಈ ಅನುಭವಸತ್ತೆಯೂ ಮತ್ತೊಂದು ಸತ್ತೆಗೆ ಅಧೀನವಾಗಿರಬಹುದು' ಎಂದರೆ,—ಆಗ ಅದು ಮತ್ತೊಂದಕ್ಕೆ ಅಧೀನವೆಂದೂ, ಅಲ್ಲಿಂದ ಮುಂದಕ್ಕೂ ಹೀಗೆಯೇ ಬಂದಕ್ಕೊಂದು ಅಧೀನವೆಂದೂ, ಹೇಳಬೇಕಾಗುವುದು. ಹೀಗೆ ಒಂದು ನೆಲೆಯೇ ಇಲ್ಲವಾಗುವಕಾರಣ, ಅನವಸ್ಥಾಪ್ರಸಂಗವಾಗುವುದು. ಹೀಗಿರುವುದರಿಂದ, ಸಕಲ ಪದಾರ್ಥಸತ್ತೆಯೂ ಅನುಭವಸತ್ತಾಧೀನವಾಗಿರುವುದೆಂದು ತಿಳಿಯಬೇಕು. ಅಂತು, ಅನುಭವವೇದ್ಯವಾದ ಆ ಸತ್ಪದಾರ್ಥವೇ ಸಮಸ್ತ ಪದಾರ್ಥಗಳಿಗೂ ಸತ್ತಾಪ್ರದವೆಂದು ನಿಶ್ಚಯಿಸಬೇಕು ॥೬॥

4. ಆಕಾಶವಾಗಿದ್ದರೂ ಆಕಾಶವಲ್ಲದುದು ಯಾವುದೆಂಬ ಪ್ರಶ್ನೆಗೆ ಸಮಾಧಾನವನ್ನು ಕೇಳು:—ಆ ಪರಬ್ರಹ್ಮವಸ್ತುವು, ತನ್ನ ಹೊರಗೆ ಮತ್ತೊಂದು ಪದಾರ್ಥವಾವುದೂ ಇಲ್ಲದೆ ಶೂನ್ಯವಾಗಿರುವುದರಿಂದ ಆಕಾಶವೆನ್ನಿಸುವುದು. ಇದು ಚಿತ್ಪದಾರ್ಥವಾಗಿರುವುದರಿಂದ ಅನಾಕಾಶವೆನ್ನಿಸುವುದು. 5. ಅನಂತವಾಗಿರುವ ಆ ಪರಮಾಣುವೇ, ಸರ್ವೇಂದ್ರಿಯಗಳಿಗೂ ಅಪ್ರತ್ಯಕ್ಷವಾಗಿರುವುದರಿಂದ ಯಾವುದೊಂದೂ ಆಗದಿರುವುದು ॥೭॥

ಮತ್ತು, ಆ ಆತ್ಮನೇ ಸರ್ವಾತ್ಮಕನಾಗಿರುವುದರಿಂದ, ಅವನು ಸಮಸ್ತವನ್ನೂ ತನ್ನೊಳಗೆ ಅಡಗಿಸಿಬಿಟ್ಟುಕೊಂಡಿರುವಾಗ ಯಾವುದೂ ಇಲ್ಲವೇ ಆಗುವುದು. ಈ ರೀತಿಯಾಗಿರುವುದರಿಂದ,

ಅಸತ್ಯೈವ ಯಥಾ ಹೇಮ್ನಃ ಕಟಕಾದಿ ತಥಾ ಪರೇ ‖೮‖
ಏಷೋಽಣುಃ ಪರಮಾಕಾಶಃ ಸೂಕ್ಷ್ಮತ್ವಾದಪ್ಯಲಕ್ಷಿತಃ ।
ಮನಷ್ಷಷ್ಠೇನ್ದ್ರಿಯಾತೀತಃ ಸ್ಥಿತಃ ಸರ್ವಾತ್ಮಕೋಽಪಿ ಸನ್ ‖೯‖
ಸರ್ವಾತ್ಮಕತ್ವಾನ್ನೈವಾಸೌ ಶೂನ್ಯೋ ಭವತಿ ಕರ್ಹಿಚಿತ್ ।
ಯದಸ್ತಿ ನ ತದಸ್ತೀತಿ ವಕ್ತಾ ಮನ್ತಾ ಇತಿ ಸ್ಮೃತಃ ‖೧೦‖
ಕಯಾಚಿದಪಿ ಯುಕ್ತ್ಯೇಹ ಸತೋಽಸತ್ತ್ವಂ ನ ಯುಜ್ಯತೇ ।
ಸರ್ವಾತ್ಮಾ ಸ್ವಾತ್ಮಗುಪ್ತೇನ ಕರ್ಪೂರೇಣೇವ ದೃಶ್ಯತೇ ‖೧೧‖
ಚಿನ್ಮಾತ್ರಾಣುಃ ಸ ಏವೇಹ ಸರ್ವಂ ಕಿಞ್ಚಿನ್ಮನಃ ಸ್ಥಿತಮ್ ।
ನ ಕಿಞ್ಚಿದಿನ್ದ್ರಿಯಾತೀತರೂಪತ್ವಾದಮಲಃ ಸ್ಥಿತಃ ‖೧೨‖

ನೀನು ಪ್ರಥಮಪ್ರಶ್ನೆಯಲ್ಲಿ ಒಂದೇ ಅನೇಕ ಸಂಖ್ಯೆವಾಗಿರುವುದೆಂದು ಹೇಳಿದ ಮಾತು ಕೇವಲ ಪ್ರತೀತಿಜನ್ಯವಲ್ಲದೆ ವಾಸ್ತವ್ಯವಲ್ಲ. ಸುವರ್ಣದಲ್ಲಿ ಕಟಕಾದಿಧರ್ಮಗಳು ಹೇಗೆ ಅಸತ್ಯವಾಗಿರುವುವೋ, ಹಾಗೆ ಆತ್ಮನಲ್ಲಿಯೂ ದ್ವಿತ್ವಾದಿ ಜ್ಞಾನವು ಕೇವಲ ಅಸತ್ಯವೆಂದೇ ತಿಳಿಯಬೇಕು ‖ ೮‖

ನೀನು ಕೇಳಿದ ಪ್ರಶ್ನೆಯಲ್ಲಿ, ಪದೇಪದೇ ಅಣುಶಬ್ದವನ್ನುಪಯೋಗಿಸಿರುವುದಕ್ಕೆ ತಾತ್ಪರ್ಯವೇನೆಂದರೆ:—ಈ ಆತ್ಮನು, ಪರಮಾಕಾಶರೂಪನಾಗಿರುವುದರಿಂದ ಅಣುವೆನ್ನಿಸುವನು; ಅತಿಸೂಕ್ಷ್ಮನಾಗಿ ಅಗೋಚರನಾಗಿರುವುದರಿಂದಲೂ ಇವನನ್ನು ಅಣುವೆನ್ನುವರು. ಇವನು ಸರ್ವಾತ್ಮಕನಾಗಿರುತಿದ್ದರೂ, ಮನಸ್ಸಿಗೂ ಇಂದ್ರಿಯಗಳಿಗೂ ಅಪ್ರತ್ಯಕ್ಷನಾದವನು ‖೯‖

ನೀನು ಇಪ್ಪತ್ತೊಂದನೆಯ ಪ್ರಶ್ನೆಯಲ್ಲಿ 'ಕೋಽಣುರಸ್ತಿ ಚ ನಾಸ್ತಿ ಚ' ಎಂದು ಹೇಳಿರುವೆ. ಆದರೆ, ಅಲ್ಲಿ 'ನಾಸ್ತಿಚ' ಎಂದು ಹೇಳಿರುವುದು ಸಂಗತವಾಗಿ ತೋರುವುದಿಲ್ಲ. ಈ ಆತ್ಮನು ಸರ್ವಾತ್ಮಕನಾಗಿರುವುದರಿಂದ, ಇವನು ಎಂದಿಗೂ ಶೂನ್ಯಪದಾರ್ಥವಾಗುವುದಿಲ್ಲ. ಏಕೆಂದರೆ:— ಆ ಆತ್ಮಪದಾರ್ಥವುಂಟೆಂದೂ ಇಲ್ಲವೆಂದೂ ಹೇಳತಕ್ಕವನೂ, ಆ ರೀತಿಯಾಗಿ ಮನನಮಾಡತಕ್ಕವನೂಕೂಡ, ಆತ್ಮನೇ ಆಗಿರುವನು. ಹೀಗಿರುವುದರಿಂದ, ತಾನೇ ತನ್ನನ್ನು ಇಲ್ಲವೆಂದು ಹೇಳಿಕೊಳ್ಳುವುದು ಅಸಂಗತವಾಗಿ ಕಾಣುವುದು ‖೧೦‖

ಇದೂ ಅಲ್ಲದೆ, ಈ ಪ್ರಪಂಚದಲ್ಲಿ ಯಾವ ಯುಕ್ತಿಯಿಂದಲೂ, ಇರುವ ವಸ್ತುವನ್ನು ಇಲ್ಲವೆಂದು ಸಾಧಿಸುವುದು ಯುಕ್ತವಾಗಲಾರದು. ಇರುವ ಪಕ್ಷದಲ್ಲಿ ಏಕೆ ಪ್ರತ್ಯಕ್ಷನಾಗಬಾರದೆಂದರೆ,- ಅವನು ಸರ್ವಾತ್ಮಕನಾಗಿದ್ದರೂ ತನ್ನನ್ನುತಾನೇ ಮರೆಮಾಡಿಕೊಂಡಿರುವನಾದಕಾರಣ, ಕರ್ಪೂರವು ಮರೆಯಾಗಿದ್ದರೂ ಸುಗಂಧದಿಂದ ಗೊತ್ತಾಗುವಂತೆ, ಅವನ ಕಾರ್ಯಗಳಿಂದ ಸ್ಪಷ್ಟವಾಗಿ ಗೊತ್ತಾಗುವನು ‖೧೧‖

ಆ ಚಿನ್ಮಾತ್ರರೂಪವಾದ ಅಣುಪದಾರ್ಥವೇ ಸರ್ವಪದಾರ್ಥರೂಪವಾದುದು. ಇಂದ್ರಿಯವೃತ್ತಿಗಳಿಂದ ಮನಸ್ಸಿನಲ್ಲಿರುವಾಗ, ಅದೆಯೇ ಯಾವುದೋ ಒಂದು ಪದಾರ್ಥವೆನ್ನಿಸುವುದು; ಇಂದ್ರಿಯಗಳಿಗೆ ಅಗೋಚರವಾದ ರೂಪವುಳ್ಳುದಾದಕಾರಣ, ನಿರ್ಮಲವಾದ ಅದೇ ಯಾವುದೊಂದೂ ಅಲ್ಲವೆನ್ನಿಸುವುದು ‖೧೨‖

ಸ ಏವ ಚೈಕೋಽನೇಕಶ್ಚ ಸರ್ವಸತ್ವಾತ್ಮವೇದನಾತ್ |
ಸ ಏವೇದಂ ಜಗದ್ಧತ್ತೇ ಜಗತ್ಕೋಶಸ್ತಥೈವ ಹಿ ||೧೩||
ಇಮಾಶ್ಚಿತ್ತಮಹಾಮ್ಭೋಧೌ ತ್ರಿಜಗಲ್ಲವವೀಚಯಃ |
ಪ್ರಜ್ಞಾಸ್ತಸ್ಮಿನ್ ಕಚನ್ತ್ಯಪ್ಸು ದ್ರವತ್ವಾಚ್ಚಕ್ರತಾಇವ ||೧೪||
ಚಿತ್ತೇನ್ದ್ರಿಯಾದ್ಯಲಭ್ಯತ್ವಾತ್ ಸೋಽಣುಃ ಶೂನ್ಯಸ್ವರೂಪವತ್ |
ಸ್ವಸಂವೇದನಲಭ್ಯತ್ವಾತ್ ಅಶೂನ್ಯಂ ವ್ಯೋಮರೂಪ್ಯಪಿ ||೧೫||
ಸೋಽಹಂ ಭವಾನೇವ ಭವಾನ್ ಸಮ್ಪನ್ನೋಽದ್ವೈತವೇದನಾತ್ |
ಸ ಭವಾನ್ ನ ಭವೇನ್ನಾಹಂ ಜಾತೋ ಬೋಧಬೃಹದ್ವಪುಃ ||೧೬||
ತ್ವನ್ತಾಹನ್ತಾತ್ಮಕಂ ಸರ್ವಂ ವಿನಿಗೀರ್ಯಾವಬೋಧತಃ |
ನ ತ್ವಂ ನಾಹಂ ನ ಸರ್ವಂ ಚ ಸರ್ವಂ ವಾ ಭವತಿ ಸ್ವಯಮ್ ||೧೭||
ಗಚ್ಛನ್ ನ ಗಚ್ಛತ್ಯೇಷೋಽಣುಃ ಯೋಜನೌಘಗತೋಽಪಿ ಸನ್ |
ಸಂವಿತ್ತ್ಯಾ ಯೋಜನೌಘತ್ವಂ ತಸ್ಯಾಣೋರನ್ತರೇ ಸ್ಥಿತಮ್ ||೧೮||
ನ ಗಚ್ಛತ್ಯೇಷ ಯಾತೋಽಪಿ ಸಂಪ್ರಾಪ್ತೋಽಪಿ ಚ ನಾಗತಃ |

---

1. ಹೀಗೆ ಸರ್ವಸತ್ವಸ್ವರೂಪವಾಗಿರುವುದರಿಂದ, ಆ ಆತ್ಮಪದಾಥವೇ, ಒಂದೇ ಆಗಿದ್ದರೂ ಅನೇಕ ಸಂಖ್ಯಾಕವಾಗಿರುವುದು. 66. ಆ ಆತ್ಮಪದಾರ್ಥವೇ ಈ ಸಮಸ್ತ ಜಗತ್ತನ್ನೂ ಧರಿಸಿಕೊಂಡಿರುವುದರಿಂದ, ರತ್ನಗಳು ಬೊಕ್ಕಸದಲ್ಲಿರುವಂತೆ, ಈ ಜಗತ್ತು ನಿತ್ಯವೂ ಆತ್ಮನಲ್ಲಿ ಒಟ್ಟಾಗಿ ಸೇರಿಕೊಂಡಿರುವುದು ॥೧೩॥

ಚಿತ್ತವೆಂಬ ದೊಡ್ಡ ಸಮುದ್ರದಲ್ಲಿ, ಈ ಜಗತ್ತ್ರಯ ಪರಮಾಣುವೆಂಬ ಅಲೆಗಳು, ಜಲದಲ್ಲಿ ಸುಳಿಗಳಿರುವಂತೆ, ನಿರಂತರವಾಗಿ ಭಾಸಮಾನವಾಗುವುವು ॥೧೪॥

ಮನಸ್ಸು ಇಂದ್ರಿಯ ಮೊದಲಾದುವುಗಳಿಗೆ ಅಲಭ್ಯವಾಗಿರುವಕಾರಣ, ಆ ಆತ್ಮಪದಾರ್ಥವೇ ಶೂನ್ಯಸ್ವರೂಪವನ್ನು ಧರಿಸಿದಂತಾಯ್ತು. ಇದು ಸ್ವಾನುಭವಗೋಚರವಾಗಿರುವುದರಿಂದ, ಆಕಾಶರೂಪವಾಗಿದ್ದರೂ ಅಶೂನ್ಯವಾದಂತಾಯ್ತು ॥೧೫॥

6. ಆತ್ಮನಲ್ಲಿ ಅದ್ವೈತಜ್ಞಾನವುಂಟಾದಬಳಿಕ, ನಾನೇ ನೀನಾಗಿಯೂ ನೀನೇ ನಾನಾಗಿಯೂ ಆಗುವುದು. ಆದರೆ, ಈ ‘ನಾನು ನೀನು’ ಎಂಬ ಭೇದಜ್ಞಾನವೂಕೂಡ, ಕೇವಲ ವ್ಯವಹಾರದಶೆಯಲ್ಲಿ ಮಾತ್ರವೇ ಇರುವುದೆಂದು ತಿಳಿಯಬೇಕು. ಪರಮಾರ್ಥದಶೆಯಲ್ಲಿಯಾದರೋ, ಆ ಆತ್ಮನು ಕೇವಲ ಜ್ಞಾನಶರೀರನಾಗಿರುವನು ॥೧೬॥

ಆ ಆತ್ಮನು, ನೀನೆಂಬುದನ್ನೂ ನಾನೆಂಬುದನ್ನೂ ಎಲ್ಲವನ್ನೂ ಜ್ಞಾನದಿಂದ ಅಂತರ್ಧಾನಪಡಿಸಿಕೊಂಡು, ನೀನೂ ಅಲ್ಲವಾಗಿಯೂ ನಾನೂ ಅಲ್ಲವಾಗಿಯೂ ಈ ಸಮಸ್ತ ದೃಶ್ಯಜಾತವೂ ಅಲ್ಲವಾಗಿಯೂ ಇರುವನು. ಅಥವಾ, ಅವನೇ ಇದೆಲ್ಲವೂ ಆಗಿರುವನು ॥೧೭॥

7. ಈ ಪರಮಾಣುವೇ, ನೂರಾರುಗಾವುದಹೋದರೂ ಹೋಗದಂತೆಯೇ ಇರುವುದು. ಈ ಯೋಜನೌಘತ್ವವೂ ಕೂಡ, ಆ ಅಣುವಿನೊಳಗೆಯೇ ಕಲ್ಪಿತವಾಗಿರುವುದು ॥೧೮॥

ಸ್ವಸತ್ತಾಕಾಶಕೋಶಾನ್ತರ್ವಾಸಿತ್ವಾದ್ದೇಶಕಾಲಯೋಃ ॥೧೯॥
ಗಮ್ಯಂ ಯಸ್ಯ ಶರೀರಸ್ಥಂ ಕ್ವ ಕಿಲಾಸೌ ಪ್ರಯಾತಿ ಹಿ ।
ಕುಚಕೋಟರಗಃ ಪುತ್ರಃ ಕಿಂ ಮಾತ್ರಾನ್ಯತ್ರ ವೀಕ್ಷ್ಯತೇ ॥೨೦॥
ಗಮ್ಯೋ ಯಸ್ಯ ಮಹಾದೇಶೋ ಯಾವತ್ಸಂಭವಮಕ್ಷಯಃ ।
ಅನ್ತಸ್ಥಃ ಸರ್ವಕರ್ತುರ್ಹಿ ಸ ಕಥಂ ಕ್ವೇವ ಗಚ್ಛತಿ ॥೨೧॥
ಯಥಾ ದೇಶಾನ್ತರಪ್ರಾಪ್ತೇ ಕುಮ್ಭೇ ವಕ್ತ್ರಸಮುದ್ರಿತೇ ।
ತದಾಕಾಶಸ್ಯ ಗಮನಾಗಮನೇ ನ ತಥಾತ್ಮನಃ ॥೨೨॥
ಚಿತ್ತತಾ ಸ್ಥಾಣುತಾ ಸ್ವಾನ್ತಃ ಯದಾ ಸ್ತೋನುಭವಾತ್ಮಿಕೇ ।
ಚೇತನಸ್ಯ ಜಡಸ್ಯೈವ ತದಾಸೌ ದ್ವಯಮೇವ ಚ ॥೨೩॥
ಯದಾ ಚೇತನಪಾಷಾಣಸತ್ತೈಕಾತ್ಮೈಕಚಿದ್ವಪುಃ ।

---

8. ದೇಶಕಾಲಗಳೆರಡೂ ಈ ಆತ್ಮಸತ್ತೆಯಲ್ಲಿ ಅಂತರ್ಭವಿಸಿರುವಕಾರಣ, ಈ ಆತ್ಮನು, ನಿಲ್ಲದಿದ್ದರೂ ನಿಂತಿರುವಂತಿರುವನು; ಹತ್ತಿರಕ್ಕೆ ಬಂದರೂ ಬರದಂತೆಯೇ ಇರುವನು ॥೧೯॥

ಯಾವ ಆತ್ಮಪದಾರ್ಥಕ್ಕೆ, ತಾನು ಹೊಂದಬೇಕಾದ ಪ್ರದೇಶವು ತನ್ನೊಳಗೆಯೇ ಇರುವುದೋ, ಅಂತಹ ಆತ್ಮನು ಹೋಗಬೇಕಾದುದೆಲ್ಲಿಗೆ? ತಾಯಿಯ ಸ್ತನಮಧ್ಯದಲ್ಲಿರುವಂತಹ ಪುತ್ರನು, ಅವನ ತಾಯಿಂದ ಮತ್ತೊಂದೆಡೆಯಲ್ಲಿ ಹುಡುಕಲ್ಪಡುವನೆ ? ॥೨೦॥

ಯಾವ ಆತ್ಮನಿಗೆ, ಗಮ್ಯವಾದ ಮಹಾದೇಶವು (ಪರಮಪದ) ಅಕ್ಷಯವಾಗಿರುವುದೋ, ಸಮಸ್ತ ಕರ್ತೃಗಳಿಗೂ ಅಂತರ್ಗತನಾಗಿರುವ ಅಂತಹ ಆತ್ಮನು ಎಲ್ಲಿಗೆತಾನೆ ಹೇಗೆ ಹೋಗುವನು ? ॥೨೧॥

ಈಗ ಇದಕ್ಕೊಂದು ದೃಷ್ಟಾಂತವನ್ನು ಹೇಳುವೆನು :—ಬಾಯಿಕಟ್ಟುಕಟ್ಟಿರುವ ಒಂದು ಗಡಿಗೆಯನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆಗೆದುಕೊಂಡುಹೋದಮಾತ್ರದಿಂದಲೇ-ಅದರೊಳಗಿರುವ ಆಕಾಶಕ್ಕೆ ಗಮನಾಗಮನಗಳುಂಟಾಗದಿರುವಂತೆ, ಈ ಆತ್ಮನಿಗೂ ಎಂತಹ ಸಂದರ್ಭದಲ್ಲಿಯೂ ಗಮನಾಗಮನಗಳಿಲ್ಲವೆಂದು ತಿಳಿಯಬೇಕು ॥೨೨॥

9. 'ಕಶ್ಚೇತನೋಽಪಿ ಪಾಷಾಣಃ' ಎಂಬ ಪ್ರಶ್ನೆಗೆ ಎರಡು ವಿಧವಾಗಿ ಅರ್ಥವಾಗುವುದು. ಚಿದ್ರೂಪನಾಗಿಯೂ, ಜಡರೂಪನಾಗಿಯೂ, ಪರಸ್ಪರವಿರುದ್ಧವಾದ ಧರ್ಮದ್ವಯವುಳ್ಳವನು ಯಾರೆಂದು ಒಂದು ವಿಧವಾಗಿ ಅರ್ಥವಾಗುವುದು; ಚೇತನನಾಗಿದ್ದರೂ ಪಾಷಾಣದಂತೆ ಘನರೂಪನಾದವನು ಯಾರೆಂದು ಎರಡನೆಯ ಅರ್ಥವಾಗುವುದು. ನಿನ್ನ ಪ್ರಶ್ನೆಗೆ ಮೊದಲನೆಯ ಅರ್ಥವು ಅಭಿಮತವಾಗಿದ್ದಪಕ್ಷದಲ್ಲಿ, ಆಗ ಈ ಸಮಾಧಾನವನ್ನು ಹೇಳುವೆನು :— ಜಡವಾಗಿರುವ ದೇಹಾದಿಗಳಲ್ಲಿಯೇ ಆತ್ಮತ್ವವನ್ನು ಅಧ್ಯಾರೋಪಿಸಿರುವುದರಿಂದ, ಆ ಚೈತನ್ಯದೊಳಗೆ ಪ್ರಕಾಶಸ್ವರೂಪತ್ವವೂ ಜಡಸ್ವರೂಪತ್ವವೂ ಎರಡೂ ಸ್ವಾನುಭವಸಾಕ್ಷಿಕವಾಗಿ ಯಾವಾಗ ಉಂಟಾಗುವುವೋ,-ಆಗ ಅವೆರಡು ಧರ್ಮಗಳೂ ಅವನಲ್ಲಿರುವುವೆಂದು ಸ್ಪಷ್ಟವಾಗಿ ಗೊತ್ತಾಯಿತು. ಅದಲ್ಲದೆ, ನಿನ್ನ ಪ್ರಶ್ನೆಗೆ ಎರಡನೆಯ ಅರ್ಥವು ಅಭಿಮತವಾಗಿದ್ದರೆ,-ಆಗ ಈ ಸಮಾಧಾನವನ್ನು

ತದಾ ಚೇತನಮೇವಾಸೌ ಪಾಷಾಣಇವ ರಾಕ್ಷಸಿ ||೨೪||
ಪರಮವ್ಯೋಮ್ನ್ಯನಾದ್ಯನ್ತೇ ಚಿನ್ಮಾತ್ರಪರಮಾತ್ಮನಾ |
ವಿಚಿತ್ರಂ ತ್ರಿಜಗಚ್ಚಿತ್ರಂ ತೇನೇದಮಕೃತಂ ಕೃತಮ್ ||೨೫||
ತತ್ಸಂವಿತ್ತ್ಯಾ ವಹ್ನಿಸತ್ತಾ ತೇನಾತ್ಯಕ್ತಾನಲಾಕೃತಿಃ |
ಸರ್ವಗೋಽಪ್ಯದಹತ್ಯೇವ ಸ ಜಗದ್ದ್ರವ್ಯಪಾವಕಃ ||೨೬||
ಪ್ರಜ್ವಲದ್ಭಾಸ್ವರಾಕಾರಾತ್ ನಿರ್ಮಲಾದ್ಗಗನಾದಪಿ |
ಪ್ರಜ್ವಲಚ್ಚೇತನೈಕಾತ್ಮಾ ತಸ್ಮಾದಗ್ನಿಃ ಸ ಜಾಯತೇ ||೨೭||
ಸಂವೇದನಾದ್ಯದರ್ಕಾದಿ ಪ್ರಕಾಶಸ್ಯ ಪ್ರಕಾಶಕಃ |
ನ ನಶ್ಯತ್ಯಾತ್ಮಭಾರೂಪೋ ಮಹಾಕಲ್ಪಾಮ್ಬುದೈರಪಿ ||೨೮||
ಅನೇತ್ರಲಭ್ಯೋಽನುಭವರೂಪೋ ಹೃದ್ಗೃಹದೀಪಕಃ |
ಸರ್ವಸತ್ತಾಪ್ರದೋಽನನ್ತಃ ಪ್ರಕಾಶಃ ಪರಮಃ ಸ್ಮೃತಃ ||೨೯||
ಪ್ರವರ್ತತೇಽಸ್ಮಾದಾಲೋಕೋ ಮನಷ್ಷಷ್ಠೇನ್ದ್ರಿಯಾತಿಗಾತ್ |

ಹೇಳುವೆನು:—ಎಲೌ ! ರಾಕ್ಷಸಿ! ಈ ಆತ್ಮಪದಾರ್ಥವು, ಕೇವಲ ಚೇತನರೂಪವಾಗಿ ಪಾಷಾಣದಂತೆ ಘನವಾಗಿರುವುದೆಂಬುದು ಪರಮಾರ್ಥವೇ ಆಗಿರುವುದು ||೨೩–೨೪||

10. ಆದ್ಯಂತರಹಿತವಾಗಿರುವ ಆ ಪರಮಾಕಾಶದಲ್ಲಿ, ಚೈತನ್ಯರೂಪನಾದ ಆತ್ಮನು, ವಿಚಿತ್ರವಾದ ಜಗತ್ತೆಂಬ ಚಿತ್ರವನ್ನು ಕಲ್ಪಿಸಿರುವನು; ವಸ್ತುತಃ ಈ ಜಗತ್ತೆಂಬ ಚಿತ್ರವು ಸುತರಾಂ ಅಕೃತವಾದುದು ||೨೫||

11. ಆ ಆತ್ಮನ ಕಲ್ಪನೆಯಿಂದಲೇ ವಹ್ನಿಗೆ ಸದ್ಭಾವವುಂಟಾಗಿರುವುದು. ಅದುಕಾರಣ, ಅವನು ವಹ್ನಿಭಾವವನ್ನು ಬಿಡದಿದ್ದರೂ ಸರ್ವಗತನಾಗಿದ್ದರೂ ಯಾವುದನ್ನೂ ಸುಡದಿರುವನು. ತಾವನ್ಮಾತ್ರೇಣ ಅವನು ಸರ್ವಗತನಲ್ಲವೆಂದು ಶಂಕಿಸಬಾರದು. ಅವನು ಸರ್ವದಾ ಸಮಸ್ತವಾದ ಜಗತ್ಪದಾರ್ಥವನ್ನೂ ಪ್ರಕಾಶಪಡಿಸುತಲೇ ಇರುವನು ||೨೬||

12. ಜಾಜ್ವಲ್ಯಮಾನವಾದ ದಿವ್ಯರೂಪವುಳ್ಳವನಾಗಿ-ಆಕಾಶಕ್ಕಿಂತ ನಿರ್ಮಲನಾಗಿರುವ ಆ ಆತ್ಮನ ದೆಸೆಯಿಂದ, ಚೇತನರೂಪನಾಗಿರುವ ಅಗ್ನಿ ಹುಟ್ಟುವನು ||೨೭||

13. ಈ ಸ್ವಪ್ರಕಾಶರೂಪನಾದ ಆತ್ಮನು, ಸ್ವಕಲ್ಪನೆಯಿಂದ ಸೂರ್ಯಚಂದ್ರಾದಿ ತೇಜಸ್ಸುಗಳಿಗೂ ಪ್ರಕಾಶವುಂಟುಮಾಡತಕ್ಕವನಾಗಿರುವಕಾರಣ, ಮಹಾಪ್ರಳಯ ಮೇಘಗಳಿಂದಲೂ ನಾಶಪಡೆಯುವುದಿಲ್ಲ ||೨೮||

14. ಈ ಆತ್ಮನೇ, ಯಾರಿಗೂ ದೃಗ್ಗೋಚರನಲ್ಲದವನಾಗಿಯೂ, ಅನುಭವೈಕರೂಪನಾಗಿಯೂ, ಹೃದಯವೆಂಬ ಗೃಹದಲ್ಲಿ ದೀಪಪ್ರಾಯನಾಗಿಯೂ, ಸರ್ವಪದಾರ್ಥಕ್ಕೂ ಸತ್ತಾಪ್ರದನಾಗಿಯೂ, ಅಂತರಹಿತನಾಗಿಯೂ, ಪರಮಪ್ರಕಾಶನಾಗಿಯೂ ಇರುವನೆಂದು ಪ್ರಾಜ್ಞರಿಂದ ಹೇಳಲ್ಪಡುವನು. ಇಂದ್ರಿಯಗಳಿಗೆ ಅಗೋಚರನಾಗಿರುವ ಇವನ ದೆಸೆಯುಂದಲೇ, ಅಹಂಕಾರಾದಿಪ್ರಥೆಯುಂಟಾಗುವುದು. ಹೇಗೆಂದರೆ:—ದೀಪಾದಿ ಪ್ರಕಾಶವಿಲ್ಲದಿದ್ದರೂ, ಪದಾರ್ಥಗಳು ದೃಗ್ಗೋಚರಗಳಂತೆ ಅನುಭವವಿಷಯವಾಗುವುವು. ಅಂಧಕಾರದಲ್ಲಿರುವ ಒಬ್ಬ ಪುರುಷನು ಇತರರಿಗೆ ಗೋಚರನಾಗದಿದ್ದರೂ, ನೀನೆಲ್ಲಿರುವೆಯೆಂದು ಮತ್ತೊಬ್ಬನು ಕೇಳಿದಾಗ ನಾನಿಲ್ಲಿರುವೆ

ಯೇನಾನ್ತರಾಪಿ ವಸ್ತೂನಾಂ ದೃಷ್ಟ್ವಾ ದೃಶ್ಯಚಮತ್ಕೃತಿಃ ॥೨೦॥
ಲತಾಗುಲ್ಮಾಙ್ಕುರಾದೀನಾಂ ಅನಕ್ಷ್ಣಾಂ ಚ ಪೋಷಕಃ ।
ಉತ್ಸೇಧವೇದನಾಕಾರಃ ಪ್ರಕಾಶೋಽನುಭವಾತ್ಮಕಃ ॥೨೧॥
ಕಾಲಾಕಾಶಕ್ರಿಯಾಸತ್ತಾ ಜಗತ್ ತತ್ರಾಸ್ತಿ ವೇದನೇ ।
ಸ್ವಾಮೀ ಕರ್ತಾ ಪಿತಾ ಭೋಕ್ತಾ ಆತ್ಮತ್ವಾಚ್ಚ ನ ಕಿಞ್ಚನ ॥೨೨॥
ಅಣುತ್ವಮಜಹತ್ ಸೋಽಣುಃ ಜಗದ್ರತ್ನಸಮುದ್ಗಕಃ ।
ಮಾತೃಮಾನಪ್ರಮೇಯಾತ್ಮ ಜಗನ್ನಾಸ್ತೀತಿ ಕೇವಲೇ ॥೨೩॥
ಸ ಏವ ಸರ್ವಜಗತಿ ಸರ್ವತ್ರ ಕಚತಿ ಸ್ಫುಟಮ್ ।
ಯದಾ ಜಗತ್ಸಮುದ್ಗೇಽಸ್ಮಿನ್ ತದಾಸೌ ಪರಮೋ ಮಣಿಃ ॥೨೪॥
ದುರ್ಬೋಧತ್ವಾತ್ ತಮಃ ಸೋಽಣುಃ ಚಿನ್ಮಾತ್ರತ್ವಾತ್ ಪ್ರಕಾಶದೃಕ್ ।
ಸೋಽಸ್ತಿ ಸಂವಿತ್ತಿರೂಪತ್ವಾತ್ ಅಕ್ಷಾತೀತಸ್ತಥಾ ನ ಸನ್ ॥೨೫॥
ದೂರೇ ಸೋಽನಕ್ಷಲಭ್ಯತ್ವಾತ್ ಚಿದ್ರೂಪತ್ವಾನ್ನ ದೂರಗಃ ।
ಸರ್ವಸಂವೇದನಾಚ್ಛೈಲೋ ಹ್ಯಸಾವೇವಾಣುರೇವ ಸನ್ ॥೨೬॥

ನೆಂದುತ್ತರ ಕೊಡುವನು. ಆಗ ದೀಪಾದಿಗಳಿಲ್ಲದಿದ್ದರೂ ಆತ್ಮಶಕ್ತಿಯಿಂದ ಪದಾರ್ಥಾನುಭವವುಂಟಾಗುವುದು ॥೧೯-೨೦॥

16. ಲತಾಗುಲ್ಮಾಂಕುರಾದಿಗಳಿಗೂ, ಇಂದ್ರಿಯರಹಿತರಿಗೂ, ಈ ಅನುಭವಸ್ವರೂಪನಾದ ಆತ್ಮನು, ತನ್ನ ಸಾನ್ನಿಧ್ಯದಿಂದ ಪೋಷಣೆಯನ್ನುಂಟುಮಾಡತಕ್ಕವನು; ಇಂತಹ ಆತ್ಮಪ್ರಕಾಶವೇ, ಅವುಗಳ ಅಭಿವೃದ್ಧಿರೂಪವಾಗಿಯೂ ಫಲರೂಪವಾಗಿಯೂ ಇರುವುದು ॥೨೧॥

17. ಜ್ಞಾನರೂಪನಾದ ಆ ಆತ್ಮನಲ್ಲಿ, ಕಾಲ ಆಕಾಶ ಕ್ರಿಯೆ ಇವುಗಳ ಸ್ಥಿತಿಯಿರುವುದು. ಈ ಆಕಾಶಾದಿಗಳಿಗೆಲ್ಲ, ಇವನೇ ಸ್ವಾಮಿಯಾಗಿಯೂ ಕರ್ತೃವಾಗಿಯೂ ಪಿತೃವಾಗಿಯೂ ಭೋಕ್ತೃವಾಗಿಯೂ ಇರುವನು. ಪರಮಾರ್ಥದೃಷ್ಟಿಯಲ್ಲಿ ವಿಚಾರಮಾಡಿದರೋ, ಸರ್ವವೂ ಆತ್ಮರೂಪವೇ ಆದುದರಿಂದ-ಆಗ ಯಾವುದೂ ಅಲ್ಲ ॥೨೨॥

18. ಅಣುವಾದ ಆ ಆತ್ಮಪದಾರ್ಥವೇ, ತನ್ನ ಅಣುತ್ವವನ್ನು ಬಿಡದಿರತಕ್ಕುದಾಗಿ, ಜಗತ್ತೆಂಬ ರತ್ನಗಳಿಗೆ ಪೆಟ್ಟಿಗೆಯಾಗಿರುವುದು. 19. ಈ ರೀತಿಯಾಗಿ ಮಾತೃ ಮಾನ ಮೇಯರೂಪವಾಗಿರುವ ಜಗತ್ತು, ವಸ್ತುತಃ ಕೇವಲ ಸ್ವರೂಪನಾದ ಆತ್ಮನಲ್ಲಿಲ್ಲವೇ ಇಲ್ಲ. ಆದರೆ, ವ್ಯವಹಾರದಶೆಯಲ್ಲಿ, ಅವನೇ ಸರ್ವಜಗತ್ತುಗಳೊಳಗೂ ಸ್ಫುಟವಾಗಿ ಯಾವಾಗ ವಿಕಾಸಹೊಂದುವನೋ, ಆಗ ಈ ಜಗತ್ತೆಂಬ ಪೆಟ್ಟಿಗೆಯೊಳಗೆ ಇವನು ದಿವ್ಯರತ್ನವಾಗಿರುವನು ॥೨೩-೨೪॥

20. ಅಣುವಾದ ಆತ್ಮಪದಾರ್ಥವೇ, ಕೇವಲ ದುಜ್ಞೇಯವಾಗಿರುವುದರಿಂದ ತಮಸ್ಸೆಂದೂ-ಚಿನ್ಮಾತ್ರವಾಗಿರುವಕಾರಣ ಪ್ರಕಾಶವೆಂದೂ ಹೇಳಲ್ಪಡುವುದು. 21. ಇದು, ಜ್ಞಾನರೂಪವಾಗಿರುವುದರಿಂದ ಇರುವುದೆಂದೂ, ಇಂದ್ರಿಯಾಗೋಚರವಾದಕಾರಣ ಇಲ್ಲದುದೆಂದೂ ಗೊತ್ತಾಗುವುದು ॥೨೫॥

22. ಆ ಆತ್ಮನೇ, ಇಂದ್ರಿಯಗಳಿಗೆ ಅಗೋಚರನಾಗಿರುವುದರಿಂದ ದೂರದಲ್ಲಿಯೂ, ಜ್ಞಾನರೂಪನಾಗಿರುವುದರಿಂದ ಹತ್ತಿರದಲ್ಲಿಯೂ ಇರುವನು. 23. ಈ ಆತ್ಮನೇ ಅಣುರೂಪಿಯಾದ್ದರೂ, ಸರ್ವರಿಂದಲೂ ಮುಂದಿರುವ ದೊಡ್ಡ ಬೆಟ್ಟದಂತೆ ಅಪರೋಕ್ಷವಾಗಿ ಅನುಭವಿಸಲ್ಪಡಬಹುದಾಗಿರುವುದರಿಂದ ಮಹಾಗಿರಿಯೆನ್ನಿಸುವನು ॥೨೬॥

ತತ್ಸಂವೇದನಮಾತ್ರಂ ಯತ್ ತದಿದಂ ಭಾಸತೇ ಜಗತ್ |
ನ ಸತ್ಯಮಸ್ತಿ ಶೈಲಾದಿ ತೇನಾಣಾವೇವ ಮೇರುತಾ ||೩೭||
ನಿಮೇಷಪ್ರತಿಭಾಸೋ ಹಿ ನಿಮೇಷಇತಿ ಕಥ್ಯತೇ |
ಕಲ್ಪೇತಿಪ್ರತಿಭಾಸೋ ಹಿ ಕಲ್ಪಶಬ್ದೇನ ಕಥ್ಯತೇ ||೩೮||
ಕಲ್ಪಕ್ರಿಯಾವಿಲಾಸೋಹಿ ನಿಮೇಷಃ ಪ್ರತಿಭಾಸತೇ |
ಬಹುಯೋಜನಕೋಟಿಸ್ಥಂ ಮನಸ್ಯೇವ ಮಹಾಪುರಮ್ ||೩೯||
ನಿಮೇಷಜಠರೇ ಕಲ್ಪಸಮ್ಭವಃ ಸಮುದೇತಿ ಹಿ |
ಮಹಾನಗರನಿರ್ಮಾಣಾ ಮುಕುರೇನ್ತರಿವಾಮಲೇ ||೪೦||
ನಿಮೇಷಕಲ್ಪಶೈಲಾದಿಪೂರಯೋಜನಕೋಟಯಃ |
ಯತ್ರಾಣಾವೇವ ವಿದ್ಯನ್ತೇ ತತ್ರ ದ್ವೈತೈಕ್ಯತೇ ಕುತಃ ||೪೧||
ಕೃತವಾನ್ ಪ್ರಾಗಿದಮಹಂ ಇತಿ ಬುದ್ಧಾವುದೇತಿ ಹಿ |
ಕ್ಷಣಾತ್ ಸತ್ಯಮಸತ್ಯಂ ಚ ದೃಷ್ಟಾನ್ತಃ ಸ್ವಪ್ನವಿಭ್ರಮಃ ||೪೨||
ದುಃಖೇ ಕಾಲಃ ಸುದೀರ್ಘೋ ಹಿ ಸುಖೇ ಲಘುತರಃ ಸದಾ |

ಆ ಆತ್ಮನ ಸಂಕಲ್ಪಮಾತ್ರವೆಂಬುದಾವುದುಂಟೋ ಅದೇ ಈ ಜಗತ್ತಾಗಿ ಭಾಸಿಸುವುದು; ಇಷ್ಟೇ ಹೊರತು, ಪರ್ವತ ಮುಂತಾದುದೊಂದೂ ಸತ್ಯವಾಗಿಲ್ಲ. ಅದುಕಾರಣ, ಅಣುಪದಾರ್ಥದಲ್ಲಿಯೇ ಮೇರುತ್ವವು ಸಂಭವಿಸಿದಂತಾಗುವುದು ||೩೭||

24-25. ನಿಮಿಷವೆಂಬ ಪ್ರತಿಭೆಯೇ ನಿಮಿಷವೆಂದು ಹೇಳಲ್ಪಡುವುದು. ಕಲ್ಪವೆಂಬ ಪ್ರತಿಭೆಯೇ ಕಲ್ಪವೆಂದು ಹೇಳಲ್ಪಡುವುದು ||೩೮||

ಒಂದು ನಿಮಿಷದಲ್ಲಿಯೇ ಒಂದು ಕಲ್ಪದಲ್ಲಿ ನಡೆಯಬಹುದಾದ ವ್ಯಾಪಾರಗಳೆಲ್ಲ ನಡೆದಂತೆ ಅನುಭವವಾಗುವುದು. ಅನೇಕಗಾವುದದ ದೂರದಲ್ಲಿರುವ ದೊಡ್ಡ ಪಟ್ಟಣವು, ಸ್ವಪ್ನಸಂಕಲ್ಪಾದಿಗಳಲ್ಲಿ ನಮ್ಮ ಮನಸ್ಸಿನೊಳಗೆಯೇ ಇರುವಂತೆ ಕಾಣಲ್ಪಡುವುದು ||೩೯||

ಹೀಗೆಯೇ ನಿರ್ಮಲವಾದ ಕನ್ನಡಿಯೊಳಗೆ ದೊಡ್ಡ ಪಟ್ಟಣದ ಸನ್ನಿವೇಶವೆಲ್ಲವೂ ಅಡಗುವಂತೆ ಒಂದು ನಿಮಿಷದೊಳಗೆ ಒಂದುಕಲ್ಪ ಸಂಭವವೂ ಉಂಟಾಗುವುದು ||೪೦||

ನಿಮಿಷ ಕಲ್ಪ ಪರ್ವತಾದಿಸಮೂಹ ಯೋಜನಕೋಟಿ—ಇತ್ಯಾದಿಗಳೆಲ್ಲವೂ ಯಾವ ಪರಮಾಣುವಿನೊಳಗೇ ಇರುವುವೋ, ಅಲ್ಲಿ ದ್ವೈತ (ಎರಡೆಂಬುದು) ವೆಂಬುದೂ, ಏಕತ್ವವೆಂಬುದೂ ಎಲ್ಲಿರುವುವು? ||೪೧||

ಮನುಷ್ಯರಿಗೆ, ನಾನು ಪೂರ್ವದಲ್ಲಿ ಇಂತಹ ಕೆಲಸ ಮಾಡಿದೆನೆಂದು, ಬಹುಕಾಲ ಮಾಡಿದ ವ್ಯಾವಹಾರಿಕ ವ್ಯಾಪಾರವೂ, ಪ್ರಾತಿಭಾಸಿಕ ವ್ಯಾಪಾರವೂ ಕೂಡ, ಒಂದುಕ್ಷಣದೊಳಗಾಗಿ ಮನಸ್ಸಿನಲ್ಲಿ ಸ್ಫುರಿಸುವುದು. ಹೀಗೆ ಅನೇಕ ವರ್ಷಕಾಲವೇ ಒಂದು ನಿಮಿಷದಂತಾಯ್ತು. ಈ ವಿಷಯದಲ್ಲಿ, ಸ್ವಪ್ನವಿಲಾಸವೇ ಉದಾಹರಣೆಯಾಗಿರುವುದು ||೪೨||

ದುಃಖಬಂದಾಗ ಮನುಷ್ಯರಿಗೆ ಕಾಲವು ಅತಿ ದೀರ್ಘವಾಗಿ ಕಾಣುವುದು; ಸುಖವುಂಟಾದಾಗ ಅತಿ ಸ್ವಲ್ಪವಾಗಿ ಕಾಣುವುದು. ಈ ವಿಷಯವು ಸರ್ವದಾ ಸರ್ವರಿಗೂ ಅನುಭವಗೋಚ

ರಾತ್ರಿರ್ದ್ವಾದಶವರ್ಷಾಣಿ ಹರಿಶ್ಚನ್ದ್ರಸ್ಯ ಚೋದಿತಾ ‖೪೩‖
ನಿಶ್ಚಯೋ ಯಉದೇತ್ಯನ್ತಃ ಸತ್ಯಾತ್ಮಾಽಸತ್ಯಏವ ಚ ।
ಹೇಮ್ನೀವ ಕಟಕಾದಿತ್ವಂ ಸಏವ ಚಿತಿ ರಾಜತೇ ‖೪೪‖
ನ ನಿಮೇಷೋಽಸ್ತಿ ನೋ ಕಲ್ಪೋ ನಾದೂರಂ ನ ಚ ದೂರತಾ ।
ಚಿದಣುಪ್ರತಿಭೈವೈವಂ ಸ್ಥಿತಾನ್ಯಾನ್ಯಾನ್ಯವಸ್ತುವತ್ ‖೪೫‖
ಪ್ರಕಾಶತಮಸೋರ್ದೂರಾದೂರಯೋಃ ಕ್ಷಣಕಲ್ಪಯೋಃ ।
ಏಕಚಿದ್ದೇಹಯೋರೇಷ ನ ಭೇದೋಽಸ್ತಿ ಮನಾಗಪಿ ‖೪೬‖
ಪ್ರತ್ಯಕ್ಷಮಕ್ಷಸಾರತ್ವಾತ್ ಅಪ್ರತ್ಯಕ್ಷಂ ತತೋಽತಿಗಮ್ ।
ದೃಶ್ಯತ್ವೇನೈಷ ವೋದೇತಿ ಚೇತಾ ದ್ರಷ್ಟೈವ ಸದ್ವಪುಃ ‖೪೭‖
ಯಾವತ್ ಕಟಕಸಂವಿತ್ತಿಃ ತಾವನ್ನಾಸ್ತೀವ ಹೇಮತಾ ।
ಯಾವಚ್ಚ ದೃಶ್ಯತಾಪತ್ತಿಃ ತಾವನ್ನಾಸ್ತೀವ ಸಾ ಕಲಾ ‖೪೮‖
ಕಟಕತ್ವೇಽಕೃತೇಽದೃಷ್ಟೇ ಸುವರ್ಣತ್ವಮಿವಾತತಮ್ ।

ರವಾಗಿಯೇ ಇರುವುದು. ಹಿಂದೆ ಹರಿಶ್ಚಂದ್ರನೆಂಬ ದೊರೆಗೆ ಒಂದು ರಾತ್ರಿಯೇ ಹನ್ನೆರಡು ವರ್ಷಗಳಾಗಿಹೋದುವು ‖೪೩‖

ಸುವರ್ಣದಲ್ಲಿ ಕಟಕಾದಿ ಜ್ಞಾನವುಂಟಾಗುವಂತೆ, ಪುರುಷರ ಹೃದಯದೊಳಗೆ-ಸತ್ಯವಾಗಲಿ ಅಥವಾ ಅಸತ್ಯವಾಗಲಿ-ಯಾವ ವಿಧವಾದ ನಿಶ್ಚಯವುಂಟಾಗುವುದೋ, ಅದೇ ಆ ಚಿತ್ತಿನಲ್ಲಿ ಭಾಸಮಾನವಾಗುವುದು ‖೪೪‖

ವಸ್ತುತಃ ವಿಚಾರಮಾಡಿದರೋ,— ನಿಮಿಷವೂ ಇಲ್ಲ; ಕಲ್ಪವೂ ಇಲ್ಲ; ಸಮೀಪವೂ ಇಲ್ಲ; ದೂರವೂ ಇಲ್ಲ. ಆ ಚಿತ್ಪರಮಾಣುವಿನ ಪ್ರತಿಭೆಯೇ ಹೀಗೆ ಬೇರೆಬೇರೆಯಾದ ಪದಾರ್ಥದಂತಿರುವುದು ‖೪೫‖

ಅದುಕಾರಣ, ತಮಃಪ್ರಕಾಶಗಳೂ-ದೂರಸಮೀಪಗಳೂ-ಕ್ಷಣಕಲ್ಪಗಳೂಕೂಡ, ಅದ್ವಿತೀಯ ಚಿದಾಕಾರಗಳೇ ಆಗಿರುವುವು. ಹೀಗಿರುವುದರಿಂದ, ಇವುಗಳಿಗೆ ಸ್ವಲ್ಪವೂ ಭೇದವಿಲ್ಲ ‖

26. ಸಮಸ್ತವಾದ ಅಂತರಿಂದ್ರಿಯ ಬಹಿರಿಂದ್ರಿಯಗಳಿಗೂ ಅಪರೋಕ್ಷವಿಷಯನಾಗುವುದರಿಂದ, ಈ ಆತ್ಮನೇ ಪ್ರತ್ಯಕ್ಷನೆನ್ನಿಸುವನು; ಆಯಿಂದ್ರಿಯಗಳಿಗೆ ಅಗೋಚರನಾದಾಗ ಇವನ ಅಪ್ರತ್ಯಕ್ಷನೆನ್ನಿಸುವನು. ಅಥವಾ, ಈ ಆತ್ಮನೇ ದೃಶ್ಯರೂಪನಾಗಿ ಉದಯಿಸುವಕಾರಣ ಇವನು ಪ್ರತ್ಯಕ್ಷನೆಂಬುದಾಗಿಯಾದರೂ ಹೇಳಬಹುದು ‖೪೭‖

'ಆತ್ಮನೇ ದೃಶ್ಯರೂಪನಾಗಿದ್ದ ಪಕ್ಷದಲ್ಲಿ, ದೃಶ್ಯವು ಹೇಯವೆಂದು ಹೇಳುವುದೇಕೆ?' ಎಂದು ಶಂಕಿಸಬಾರದು. ಪ್ರಪಂಚದಲ್ಲಿ, ಎಲ್ಲಿಯವರೆಗೆ ಕಡಗವೆಂದು ಪ್ರತ್ಯಯವಿರುವುದೋ, ಅಲ್ಲಿಯವರೆಗೂ ಅದರಲ್ಲಿ ಸುವರ್ಣತ್ವವು ಇಲ್ಲದಂತೆಯೇ ಜ್ಞಾನವುಂಟಾಗುತಿರುವುದು. ಹೀಗೆಯೇ, ದೃಶ್ಯಜ್ಞಾನವಿರುವವರೆಗೂ ಆ ಚಿತ್ಕಲಾನುಭವವುಂಟಾಗುವುದಿಲ್ಲ. ಅದುಕಾರಣ, ದೃಶ್ಯಜ್ಞಾನವು ಸುತರಾಂ ಹೇಯವೆಂದು ತಿಳಿಯಬೇಕು ‖೪೮‖

ಕಟಕತ್ವವನ್ನು ನಾವು ಕಲ್ಪಿಸಿಕೊಳ್ಳದೆಯೂ ಅದನ್ನು ನೋಡದೆಯೂ ಇರುವಾಗ—

ಕೇವಲಂ ನಿರ್ಮಲಂ ಶುದ್ಧಂ ಬ್ರಹ್ಮೈವ ಪರಿದೃಶ್ಯತೇ ||೪೯||
ಸರ್ವತ್ವಾದೇವ ಸದ್ರೂಪೋ ದುರ್ಲಕ್ಷ್ಯತ್ವಾದಸದ್ವಪುಃ |
ಚೇತನಶ್ಚೇತನಾತ್ಮತ್ವಾತ್ ಚೇತ್ಯಾಸಮ್ಭವತಸ್ತ್ವಚಿತ್ ||೫೦||
ಚಿಚ್ಚಮತ್ಕಾರಮಾತ್ರಾತ್ಮನ್ಯಸ್ಮಿಂಶ್ಚಿತ್ಪ್ರತಿಭಾತ್ಮನಿ |
ಜಗತ್ಯನಿಲವೃಕ್ಷಾಭೇ ಚಿಚ್ಚೇತ್ಯಕಲನೇ ಕುತಃ ||೫೧||
ಯಥಾ ತಾಪಸ್ಯ ಪೀನಸ್ಯ ಭಾಸನಂ ಮೃಗತೃಷ್ಣಿಕಾ |
ಏವಂ ಪೀವರಮದ್ವೈತಂ ತಥಾ ಚಿದ್ಭಾಸನಂ ಜಗತ್ ||೫೨||
ಅರ್ಕಾಂಶುಭಿಃ ಸೂಕ್ಷ್ಮತರನಿರ್ಮಾಣಂ ಯದನಾಮಯಮ್ |
ಅಸ್ತಿತಾನಾಸ್ತಿತೇ ತತ್ರ ಕಲ್ಪಾದೇರಿವ ಕೈವ ಧೀಃ ||೫೩||
ಮಾಯಯಾಂಶುಕಣಾಚ್ಛೇ ಖೇ ಯಥಾ ಕಚತಿ ಕಾಞ್ಚನಮ್ |
ತಥಾ ಜಗದಿದಂ ಭಾತಿ ಚಿಚ್ಚೇತ್ಯಕಲನೇ ಕುತಃ ||೫೪||

ಸುವರ್ಣತ್ವವೇ ವ್ಯಾಪಿಸಿಕೊಂಡಿರುವಂತೆ, ದೃಶ್ಯಕಲ್ಪನೆಯುಲ್ಲಿದ್ದಾಗ—ಅದ್ವಿತೀಯವಾಗಿ ಶುದ್ಧವಾಗಿರುವ ಬ್ರಹ್ಮಪದಾರ್ಥವೊಂದೇ ಕಾಣಲ್ಪಡುವುದು ||೪೯||

27. ಆ ಆತ್ಮನು ಸರ್ವಪದಾರ್ಥದಲ್ಲಿಯೂ ಅನುಗತನಾಗಿರುವುದರಿಂದ ಆಕಾರಯುಕ್ತನೆಂದು ಹೇಳಲ್ಪಡುತ್ತಿದ್ದರೂ, ಸಾಮಾನ್ಯದೃಷ್ಟ್ಯಾ ಅವನ ರೂಪವು ನಿಷ್ಕರ್ಷಿಸಲ್ಪಡಲಸಾಧ್ಯವಾಗಿರುವುದರಿಂದ ರೂಪರಹಿತನೆಂದು ಹೇಳಲ್ಪಡುವನು. 28. ಆ ಆತ್ಮನು, ಚೇತನಾತ್ಮಕನಾಗಿರುವುದರಿಂದ ಚೇತನನೆಂದೂ, ಚೇತನೀಯ (ದೃಶ್ಯ) ಪದಾರ್ಥವೇ ಇಲ್ಲದಾಗ ಅಚೇತನನೆಂದೂ ಹೇಳಲ್ಪಡುವನು ||೫೦||

ಚೇತನೀಯವೇ ಇಲ್ಲವೆಂಬುದು ಹೇಗೆಂದರೆ:—ಆ ಚಿತ್ಪದಾರ್ಥದ ಚಮತ್ಕಾರಮಾತ್ರರೂಪವಾಗಿಯೂ, ಚಿತ್ತಿನ ಪ್ರತಿಭಾಸರೂಪವಾಗಿಯೂ, ಗಾಳಿಯಿಂದ ಅಳ್ಳಾಡುತಿರುವ ವೃಕ್ಷದಂತೆ ಚಂಚಲವಾಗಿಯೂ ಇರುವ ಈ ಜಗತ್ತಿನಲ್ಲಿ, ಚಿತ್ತೆಂದೂ ಚೇತ್ಯವೆಂದೂ ಬೇರೆಬೇರೆಯಾಗಿ ಕಲ್ಪನೆಯೆಲ್ಲಿಯದು? ||೫೧||

ಚಿಚ್ಚಮತ್ಕಾರಮಾತ್ರವೆಂಬ ವಿಷಯದಲ್ಲಿ ಒಂದುದಾಹರಣೆಯನ್ನು ಹೇಳುವೆನು:—ಅರಣ್ಯದಲ್ಲಿ ಮೃಗತೃಷ್ಣಿಕೆ ಕಾಣಿಸುವುದಿಲ್ಲವೆ! ಅದು ಪ್ರತ್ಯೇಕಪದಾರ್ಥವೆ? ಬಿಸಿಲಿನ ತಾಪವೇ ಅತಿಯಾಗಿ ಹೆಚ್ಚಿ, ಅದರ ಪ್ರಕಾಶವೇ ಮೃಗತೃಷ್ಣಿಕಾರೂಪವಾಗಿ ಕಾಣಲ್ಪಡುವುದಷ್ಟೆ! ಇದರಂತೆಯೇ, ಚಿತ್ತಿನ ಭಾನವೇ ಜಗತ್ತಾಗಿ ಕಾಣುವುದು. ಅದುಕಾರಣ, ಅದ್ವೈತವೇ ಸುದೃಢವಾಗುವುದು ||೫೨||

ಆಕಾಶದಲ್ಲಿ ಸೂರ್ಯಕಿರಣಗಳು ಸಾಂದ್ರವಾಗಿ ಪ್ರಸರಿಸಿದಾಗ, ಹೊಂಬಣ್ಣವಾಗಿ ಕಾಣುತ, ಸುವರ್ಣರೇಖೆಯಿರುವುದೆಂಬ ಭ್ರಾಂತಿಯುಂಟಾಗುವುದು. ಇದು, ಚತುರ್ಮುಖಬ್ರಹ್ಮನ ಕಲ್ಪಾದಿಯಂತೆ ಅಸತ್ಯವಾದುದು; ಇದರಲ್ಲಿ ಅಸ್ತಿತ್ವವೆಂಬುದೂ ನಾಸ್ತಿತ್ವವೆಂಬುದೂ ಹೇಗೆ ವಿಚಾರಾರ್ಹವಾಗುವುವು? ಅಂತು, ಚಿತ್ತೆಂದೂ ಚೇತ್ಯವೆಂದೂ ಭೇದಬುದ್ಧಿಯೆಲ್ಲಿಯದು? ||೫೩||

ಸೂರ್ಯಕಿರಣವ್ಯಾಪ್ತವಾದ ಅಂತರಿಕ್ಷದಲ್ಲಿ, ನಮ್ಮ ಅಜ್ಞಾನದಿಂದ ಸುವರ್ಣವು ಹೇಗೆ ಭಾಸಿಸುವುದೋ,—ಹಾಗೆ ಈ ಜಗತ್ತೂ ಭಾಸಿಸುವುದು. ಹೀಗಿರುವುದರಿಂದ, ಚಿತ್ತೆಂದೂ ಚೇತ್ಯವೆಂದೂ ಕಲ್ಪನೆಯೆಲ್ಲಿಯದು? ||೫೪||

ಸ್ವಪ್ನಗನ್ಧರ್ವಸಙ್ಕಲ್ಪನಗರೇ ಕುಡ್ಯವೇದನಮ್ ।
ನ ಸನ್ನಾಸದ್ಯಥಾ ತದ್ವತ್ ವಿದ್ಧಿ ದೀರ್ಘಭ್ರಮಂ ಜಗತ್ ॥೫೫॥
ತಥಾ ಚೈವಂವಿಧನ್ಯಾಯಭಾವನಾಭ್ಯಾಸನಿರ್ಮಲಾತ್ ।
ಚಿದಾಕಾಶೇ ನ ನಿರ್ಯಾತಿ ಯಥಾಭೂತಾರ್ಥದರ್ಶಿನಃ ॥೫೬॥
ನ ಕುಡ್ಯಾಕಾಶಯೋರ್ಭೇದೋ ದೃಶ್ಯಸಂವೇದನಾದೃತೇ ।
ಆಬ್ರಹ್ಮಜೀವಕಲನಾತ್ ಯದ್ರೂಢಂ ರೂಢಮೇವ ಚ ॥೫೭॥
ಪ್ರತಿಭಾಸಾಚ್ಚಿದಾಕಾಶೇ ಸತ್ವಶೂನ್ಯಂ ಭವನ್ತಿ ತಾಃ ।
ಪ್ರಕಟನ್ತಿ ಹ್ಯನಿರ್ಭಾವ್ಯಾಃ ಪ್ರಭಾಪಿಣ್ಡ ಇವ ಪ್ರಭಾಃ ॥೫೮॥
ಪೃಥಕ್ತ್ವಮತಿಭಾಸಸ್ಯ ಸ್ವಚಮತ್ಕಾರಯೋಗತಃ ।
ಸರ್ವಾತ್ಮಿಕಾ ಹಿ ಪ್ರತಿಭಾ ಪರಾ ವೃಕ್ಷಾತ್ಮಬೀಜವತ್ ॥೫೯॥

ಎಲೌ! ರಾಕ್ಷಸಿ! ಸ್ವಪ್ನದಲ್ಲಿಯೂ, ಗಂಧರ್ವನಗರದಲ್ಲಿಯೂ, ಸಂಕಲ್ಪಪಟ್ಟಣದಲ್ಲಿಯೂ ಭಿತ್ತಿ ಮೊದಲಾದ ಜ್ಞಾನವು, ಹೇಗೆ ಸತ್ಯಾಸತ್ಯವಾಗಿರುವುದೋ,—ಹಾಗೆಯೇ ಈ ಪ್ರಪಂಚ ಜ್ಞಾನವೂ ಇರುವುದೆಂದು ತಿಳಿ. ಆದರೆ ಆ ಸ್ವಪ್ನಾದಿ ಭ್ರಮೆಯು ಅತ್ಯಲ್ಪಕಾಲಮಾತ್ರವಿರುವುದು; ಪ್ರಪಂಚಜ್ಞಾನವಾದರೋ-ದೀರ್ಘಕಾಲವಿರುವುದು ॥೫೫॥

ಏವಂಚ, ಈ ಪೂರ್ವೋಕ್ತವಿಧಗಳಾದ ನ್ಯಾಯಗಳಿಂದ ಜಗತ್ತು ಅಸತ್ಯವೆಂದು ಭಾವನೆ ಮಾಡುತ ಬಂದರೆ, ಆ ಅಭ್ಯಾಸಾತಿಶಯದಿಂದ ಮನಸ್ಸು ನಿರ್ಮಲವಾಗುವುದು. ಆಗ ಪುರುಷನಿಗೆ ತತ್ವದೃಷ್ಟಿಯುಂಟಾಗುವುದು. ಅಂತಹ ಸ್ಥಿತಿಯಲ್ಲಿರುವವನಿಗೆ, ಪುನಃ ಈ ಸಂಸಾರಭ್ರಮೆಯುಂಟಾಗುವುದಿಲ್ಲ ॥೫೬॥

ಇನ್ನೂ ಕೇಳು:—ಇದು ಕುಡ್ಯವೆಂದೂ ಇದು ಆಕಾಶವೆಂದೂ ಬೇರೆಬೇರೆಯಾಗಿ ಪದಾರ್ಥಜ್ಞಾನವುಂಟಾಗುವುದಕ್ಕೆ, ನಾವು ಆ ರೀತಿಯಾಗಿ ತಿಳಿದುಕೊಳ್ಳುವುದೇ ಕಾರಣವಾಗಿರುವುದು. ಇಷ್ಟೇ ಹೊರತು, ಕುಡ್ಯಕ್ಕೂ ಆಕಾಶಕ್ಕೂ ವಾಸ್ತವಿಕವಾದ ಭೇದವೇ ಇಲ್ಲ. ಹೀಗೆಯೇ, ಆಬ್ರಹ್ಮಸ್ತಂಬಪರ್ಯಂತವಾಗಿ ಯಾವುದು ಯಾವರೀತಿಯಾಗಿ ರೂಢವಾಗಿರುವುದೋ- ಅದು ಹಾಗೆಯೇ ರೂಢವಾಗಿ ನೆಲೆಸಿಬಿಟ್ಟಿರುವುದು ॥೫೭॥

'ಭೇದವೇಇಲ್ಲದಮೇಲೆ ಕುಡ್ಯಾದಿ ಭೇದಕಲ್ಪನೆಗಳು ಹೇಗುಂಟಾಗುವುವು!' ಎಂದರೆ, ಚಿದಾಕಾಶದಲ್ಲಿ ಪ್ರತಿಭಾಸ (ಕೋರುವಿಕೆ) ದಿಂದ ಆ ಕಲ್ಪನೆಗಳುಂಟಾಗುವುವು. ವಸ್ತುತಃ ನಿಸ್ಸತ್ವಗಳು. ಆದರೆ, ಶಶಶೃಂಗಾದಿಗಳಂತಿರುವುವೆಂದು ಹೇಳಲಾಗದು. ಒಂದು ಪ್ರಭಾಪುಂಜದೊಳಗಿರುವ ಪ್ರಭೆಗಳಂತೆ, ಇವುಗಳೂ ಯುಕ್ತಿಯಿಂದ ಸರಿಯಾಗಿ ನಿರ್ವಚನಮಾಡಲು ಅಸಾಧ್ಯಗಳಾಗಿರುವುವು ॥೫೮॥

ಎಲೌ! ರಾಕ್ಷಸಿ! ಮುಂದಕ್ಕೆ ಕೇಳು:—ಪದಾರ್ಥಗಳು ಬೇರೆಬೇರೆಯಾಗಿರುವುವೆಂಬ ಸಂಸ್ಕಾರವು ನಮ್ಮ ಬುದ್ಧಿಗೆ ಬಹುಕಾಲದಿಂದುಂಟಾಗಿರುವುದು. ಇಂತಹ ಸಂಸ್ಕಾರವುಳ್ಳ ಬುದ್ಧಿಯೊಳಗೆ, ಅಂತರ್ಗತವಾಗಿ ಆತ್ಮಪ್ರಕಾಶವಿರುವುದು. ಇಂತಹ ಆತ್ಮಪ್ರಕಾಶಕ್ಕೆ, ಪೃಥಗ್ಭಾವವನ್ನು ಪ್ರಕಟಪಡಿಸತಕ್ಕ ಶಕ್ತಿಯೊಡನೆ ಯೋಗವಾಗುವುದು. ಹೀಗಾಗುವುದರಿಂದ ದ್ವೈತಪ್ರತಿಭೆಯುಂಟಾಗುವುದು. ಆದರೂ, ವಸ್ತುತಃ ಪಾರ್ಥಕ್ಯವೆಂಬುದಿಲ್ಲವೇ ಇಲ್ಲ. ಇದಕ್ಕೆ ಕಾರಣವೇನೆಂದರೆ,—ಮುಂದೆ ದೊಡ್ಡ ಮರವಾಗಿ ಬೆಳೆಯುತಕ್ಕುದಾಗಿರುವ ಬೀಜದಂತೆ, ಆತ್ಮಪ್ರತಿಭೆಯೆಂಬುದು ಸರ್ವವಸ್ತುರೂಪವಾಗಿರುವುದು ॥೫೯॥

ಬೀಜಮನ್ತಸ್ಸ್ಥವೃಕ್ಷತ್ವಂ ನಾನಾಽನಾನಾ ಯಥೈಕದೃಕ್ ।
ತಥಾಽಸಙ್ಖ್ಯಜಗದ್ಬ್ರಹ್ಮ ಶಾನ್ತಮಾಕಾಶಕೋಶವತ್ ॥೬೦॥
ಬೀಜಸ್ಯಾನ್ತಸ್ಸ್ಥವೃಕ್ಷಸ್ಯ ವ್ಯೋಮಾದ್ವೈತಾ ಸ್ಥಿತಿರ್ಯಥಾ ।
ಬ್ರಹ್ಮಣೋನ್ತಸ್ಸ್ಥಜಗತಃ ಸಾಕ್ಷಿತ್ವಾಚ್ಛಿತ್ಸ್ಥಿತಿಸ್ತಥಾ ॥೬೧॥
ಶಾನ್ತಂ ಸಮಸ್ತಮಜಮೇಕಮನಾದಿಮಧ್ಯಂ
ನೇಹಾಸ್ತಿ ಕಾಚನಕಲಾಕಲನಾ ಕಥಞ್ಚಿತ್ ।
ನಿರ್ದ್ವನ್ದ್ವಶಾನ್ತಮತಿರೇಕಮನೇಕಮಚ್ಛಂ
ಆಭಾಸರೂಪಮಜಮೇಕವಿಕಾಸಮಾಸ್ತೇ ॥೬೨॥

ಇತಿ ಉತ್ಪತ್ತಿಪ್ರಕರಣೇ ಪ್ರಶ್ನಭೇದನಂ ನಾಮಾಶೀತಿತಮಃ ಸರ್ಗಃ.

ಏಕರೂಪವಾಗಿರುವ ಬೀಜವು ವೃಕ್ಷದಶೆಯನ್ನೊಳಗೊಂಡಿರುವುದಾಗಿ ವಸ್ತುತಃ ಅನೇಕವಲ್ಲದಿದ್ದರೂ ಅನೇಕವಾಗಿ ತೋರುವಂತೆ, ಅಸಂಖ್ಯಾತವಾದ ಜಗತ್ತುಳ್ಳದಾಗಿರುವ ಬ್ರಹ್ಮವು ಆಕಾಶಪ್ರದೇಶದಹಾಗೆ ಶಾಂತವಾಗಿರುವುದು ॥೬೦॥

ಒಳಗಡೆ ವೃಕ್ಷವುಳ್ಳದಾಗಿರುವ ಬೀಜದ ಸ್ಥಿತಿಯು ವಸ್ತುತಃ ಆಕಾಶಸದೃಶವಾಗಿರುವಂತೆ, ಜಗತ್ತನ್ನು ಅಂತರ್ಗತವಾಗಿ ಇಟ್ಟುಕೊಂಡಿರುವ ಬ್ರಹ್ಮನ ಸ್ಥಿತಿಯೂ ಆಕಾಶಸದೃಶವಾಗಿ ನಿರ್ಲಿಪ್ತವಾಗಿರುವುದು ॥೬೧॥

ಎಲೌ! ರಾಕ್ಷಸಿ! ಇಷ್ಟರಿಂದಲೇ ನಿನ್ನ ಪ್ರಶ್ನೆಗಳಿಗೆಲ್ಲ ಉತ್ತರ ಹೇಳಲ್ಪಟ್ಟಂತಾಯ್ತಲ್ಲವೆ! ಅದುಕಾರಣ, ಮುಖ್ಯಾಂಶವನ್ನು ಹೇಳುವೆನು:—ಶಾಂತವಾಗಿಯೂ, ಸಮಸ್ತ ವಸ್ತುರೂಪವಾಗಿಯೂ, ಅದ್ವಿತೀಯವಾಗಿಯೂ, ಆದಿಮಧ್ಯರಹಿತವಾಗಿಯೂ, ದ್ವಂದ್ವಹೀನರಾಗಿ ಶಾಂತರಾಗಿರುವ ಮಹಾತ್ಮರ ಬುದ್ಧಿಗೆ ಗೋಚರವಾಗಿಯೂ, ನಿರ್ಮಲವಾಗಿಯೂ, ಸ್ವಪ್ರಕಾಶರೂಪವಾಗಿಯೂ ಇರುವ ಆ ಬ್ರಹ್ಮವಸ್ತುವೊಂದೇ ಇರತಕ್ಕುದು. ಇತರವಾದ ಕಲ್ಪನೆಯೊಂದೂ ಸುತರಾಂ ಇಲ್ಲವೇ ಇಲ್ಲ ॥೬೨॥

ಇದು ಉತ್ಪತ್ತಿಪ್ರಕರಣದಲ್ಲಿ ಕರ್ಕಟ್ಯುಪಾಖ್ಯಾನದೊಳಗೆ
ಪ್ರಶ್ನಭೇದನವೆಂಬ ಎಂಬತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕಾಶೀತಿತಮಃ ಸರ್ಗಃ.

ರಾಕ್ಷಸ್ಯುವಾಚ.

ಅಹೋನು ಪರಮಾರ್ಥೋಕ್ತಿಃ ಪಾವನೀ ತವ ಮನ್ತ್ರಿಣಃ ।
ರಾಜಾ ರಾಜೀವಪತ್ರಾಕ್ಷಃ ಇದಾನೀಮೇಷ ಭಾಷತಾಮ್ ॥೧॥

ರಾಜೋವಾಚ.

ಜಾಗತಪ್ರತ್ಯಯಾಭಾವೋ ಯಸ್ಯಾಹುಃ ಪ್ರತ್ಯಯಂ ಪರಮ್
ಸರ್ವಸಙ್ಕಲ್ಪಸನ್ನ್ಯಾಸಃ ಚೇತಸಾ ಯತ್ಪರಿಗ್ರಹಃ ॥೨॥
ಯತ್ಸಙ್ಕೋಚವಿಕಾಸಾಭ್ಯಾಂ ಜಗತ್ಪ್ರಳಯಸೃಷ್ಟಯಃ ।
ನಿಷ್ಠಾ ವೇದಾನ್ತವಾಕ್ಯಾನಾಂ ಅಥ ವಾಚಾಮಗೋಚರಃ ॥೩॥
ಕೋಟಿದ್ವಯಾನ್ತರಾಳಸ್ಥಂ ಮಧ್ಯೇ ಕೋಟಿದ್ವಯಾಮಯಮ್ ।

ಉತ್ಪತ್ತಿಪ್ರಕರಣದಲ್ಲಿ ಎಂಭತ್ತೊಂದನೆಯ ಸರ್ಗವು.

ಇಹ ರಾಜಾವಶಿಷ್ಟಾನಾಂ ಪ್ರಶ್ನಾನಾಮುತ್ತರಂ ಕ್ರಮಾತ್ ।
ವರ್ದ ವಕ್ತಿ ವಿಶೇಷಜ್ಞೋ ಯುಕ್ತಿಮುಕ್ತೇಷ್ವಪಿ ಕ್ವಚಿತ್ ॥

ತತ್ವವಿಶೇಷವನ್ನು ಚೆನ್ನಾಗಿ ಬಲ್ಲವನಾದ ರಾಜನು, ಉಳಿದ ಪ್ರಶ್ನೆಗಳಿಗೆ ಕ್ರಮವಾಗಿ ಉತ್ತರಹೇಳುತ, ಮಂತ್ರಿಹೇಳಿದ ಉತ್ತರಗಳಲ್ಲಿಯೂ ಕೆಲವುಕಡೆ ಯುಕ್ತಿಯನ್ನು ತೋರಿಸುವನೆಂಬ ವಿಷಯವು, ಈ ಸರ್ಗದಲ್ಲಿ ಹೇಳಲ್ಪಡುವುದು. ॥

ಪೂರ್ವೋಕ್ತರೀತಿಯಾಗಿ ಮಂತ್ರಿ ಹೇಳಿದುದನ್ನು ಕೇಳಿ, ಆ ರಾಕ್ಷಸಿ ಹೇಳುವಳು :—

ಅಯ್ಯಾ ಮಂತ್ರಿ! ನೀನು ಹೇಳಿದ ಈ ಪರಮಾರ್ಥವಿಚಾರವು ಕೇವಲ ಪವಿತ್ರವಾಗಿರುವುದು. ಈಗ, ಕಮಲನೇತ್ರನಾದ ಈ ರಾಜನು ಹೇಳಲಿ. ॥೧॥

ಇದನ್ನು ಕೇಳಿ ಆ ಕಿರಾತರಾಜನು ಹೇಳಲುಪಕ್ರಮಿಸಿದನು :—

ಎಲೌ! ರಾಕ್ಷಸಿ! ನೀನು ಆ ಪರಮಾತ್ಮನನ್ನು ಉದ್ದೇಶಿಸಿಕೊಂಡು ಪ್ರಶ್ನೆಮಾಡಿರುವೆಯಾದಕಾರಣ, ಆ ಪರಮಾತ್ಮನ ಸ್ವರೂಪವನ್ನು ಸ್ವಲ್ಪವಾಗಿ ವಿವರಿಸುವೆನು. ಇದರಿಂದಲೇ ನಿನ್ನ ಸಮಸ್ತ ಪ್ರಶ್ನೆಗಳಿಗೂ ಉತ್ತರವಿತ್ತಂತಾಗುವುದು. ಪ್ರಾಪಂಚಿಕಜ್ಞಾನವಿಲ್ಲದಿರುವುದೇ ಯಾವ ಬ್ರಹ್ಮನ ಸಾಕ್ಷಾತ್ಕಾರವೆಂದು ಜ್ಞಾನಿಗಳು ಹೇಳಿರುವರೋ, ನಮ್ಮ ಮನಸ್ಸಿನಲ್ಲಿ ಸಮಸ್ತವಾದ ಸಂಕಲ್ಪಗಳನ್ನೂ ಸುತರಾಂ ಪರಿಹರಿಸುವುದೇ ಯಾವನ ಪರಿಗ್ರಹವಾಗುವುದೋ, ಯಾವನ ಸಂಕೋಚವಿಕಾಸಗಳಿಂದ ಪ್ರಪಂಚದ ಪ್ರಳಯ ಸೃಷ್ಟಿಗಳಾಗುವುವೋ, ಯಾವನು ವೇದಾಂತವಾಕ್ಯಗಳಿಗೆಲ್ಲ ಮುಖ್ಯಾಶ್ರಯನಾಗಿದ್ದರೂ ವಾಕ್ಕಿಗೆ ಅವಿಷಯನಾಗಿರುವನೋ, ಸತ್ತೆ ಅಸತ್ತೆ-ಭಾನ ಅಭಾನ-ಇವುಗಳೆಂಬ ಕೋಟಿದಯದ ಮಧ್ಯದೊಳಗಿರತಕ್ಕುದಾಗಿಯೂ—(ಸೃಷ್ಟಿಯಲ್ಲಿ

ಯಸ್ಯ ಚಿತ್ತಮಯೀ ಲೀಲಾ ಜಗದೇತಚ್ಚರಾಚರಮ್ ‖೪‖
ಯಸ್ಯ ವಿಶ್ವಾತ್ಮಕತ್ವೇಽಪಿ ಖಣ್ಡ್ಯತೇ ನೈಕಪಿಣ್ಡತಾ |
ಸನ್ಮಾತ್ರಂ ತತ್ ತ್ವಯಾ ಭದ್ರೇ ಕಥ್ಯತೇ ಬ್ರಹ್ಮ ಶಾಶ್ವತಮ್ ‖೫‖
ಏಷೋಽಣುರ್ವೇದನಾದ್ವಾಯುಃ ಸ್ವಭ್ರಾನ್ತಿರ್ದೃಗದೃಶ್ಯತ |
ಅತೋ ನ ಕಿಞ್ಚಿದ್ವಾಯ್ವಾದಿ ಕೇವಲಂ ಶುದ್ಧಚೇತನಮ್ ‖೬‖
ಶಬ್ದಸಂವೇದನಾಚ್ಛಬ್ದಃ ಶಬ್ದಸ್ಯ ಭ್ರಾನ್ತಿದರ್ಶನಮ್ |
ತತೋಽತ್ರ ಶಬ್ದಶಬ್ದಾರ್ಥದೃಷ್ಟೇರ್ದೂರತರಂ ಗತಃ ‖೭‖
ಸೋಽಣುಃ ಸರ್ವಂ ನ ಕಿಞ್ಚಿಚ್ಚ ಸೋಽಹಂ ನಾಹಂ ಸ ಏವ ಚ |
ಸರ್ವಶಕ್ತ್ಯಾತ್ಮನೋಽಸ್ಯೈವ ಪ್ರತಿಭೈಕಾತ್ರ ಕಾರಣಮ್ ‖೮‖
ಆತ್ಮಾ ಯತ್ನಶತಪ್ರಾಪ್ಯೋ ಲಬ್ಧೇಽಸ್ಮಿನ್ನ ಚ ಕಿಞ್ಚನ |
ಲಬ್ಧಂ ಭವತಿ ತಚ್ಚೈತತ್ ಪರಮಂ ವಾ ನ ಕಿಞ್ಚನ ‖೯‖

ಯೂ ಲಯದಲ್ಲಿಯೂ ಜಗತ್ತು ಸತ್ತಾಸತ್ತೆಗಳಿಗೂ ಭಾನಾಭಾನಗಳಿಗೂ ಒಳಪಟ್ಟಿರುವುದೆಂದು ಭಾವವು) ಮಧ್ಯದಲ್ಲಿಯೂ ಈ ಕೋಟಿದ್ವಯಪ್ರಾಯವಾಗಿಯೂ ಇರುವ ಈ ಚರಾಚರಾತ್ಮಕವಾದ ಜಗತ್ತು-ಯಾವನ ಮನೋಮಯವಾದ ಲೀಲೆಯೆನ್ನಿಸುವುದೋ, ಯಾವನು ಸಕಲರೂಪನಾಗಿದ್ದರೂ ಅಖಂಡೈಕಸ್ವರೂಪನಾಗಿರುವನೋ,—ಎಲೌ ಭದ್ರಳೆ! ಅಂತಹ ಸತ್ತಾಮಾತ್ರಗೋಚರನಾದ ಬ್ರಹ್ಮನನ್ನು ಕುರಿತು ನೀನು ಪ್ರಶ್ನೆಮಾಡುವೆ ॥೨-೫॥

ಎಲೌ! ಕರ್ಕಟಿ! ನಮ್ಮ ಮಂತ್ರಿಯೇ ನಿನ್ನ ಪ್ರಶ್ನೆಗಳಿಗೆ ಸಮಾಧಾನವನ್ನು ಹೇಳಿರುವನು; ಆದರೂ, ಅವನು ಉತ್ತರ ಹೇಳದಿರುವ ಕೆಲವು ಪ್ರಶ್ನೆಗಳಿಗೆ ಈಗ ನಾನು ಸಮಾಧಾನ ಹೇಳುವೆನು:—29. ಈ ಬ್ರಹ್ಮಪರಮಾಣುವೇ, ತನ್ನಲ್ಲಿತಾನೇ ವಾಯುವೆಂಬ ಭ್ರಾಂತಿಯುಳ್ಳುದಾಗಿ, ವಾಯುವಾಗಿ ಕಾಣಿಸಿಕೊಳ್ಳುವುದು. ಅದುಕಾರಣ, ವಸ್ತುತಃ ವಾಯು ಮುಂತಾದುದಾವುದೂ ಇಲ್ಲ. ಶುದ್ಧಚೈತನ್ಯವಾದ ಬ್ರಹ್ಮವೊಂದೇ ಇರುವುದು ॥೬॥

30. ಹೀಗೆಯೇ, ಆ ಬ್ರಹ್ಮವು ತನ್ನನ್ನು ಶಬ್ದವೆಂದು ತಿಳಿದುಕೊಂಡು ಭ್ರಮೆಪಡುವುದರಿಂದ ಶಬ್ದವಾಗಿ ಕಾಣುವುದು. ಹೀಗಿರುವುದರಿಂದ, ವಾಸ್ತವ್ಯವಾಗಿ ಶಬ್ದವೆಂಬ ಪದದ ಅರ್ಥಕ್ಕೆ ಈ ಪರಮಾತ್ಮನು ಅತಿ ದೂರದಲ್ಲಿರುವನು ॥೭॥

31. ಆ ಬ್ರಹ್ಮಪರಮಾಣುವೇ ಸರ್ವಸ್ವರೂಪವಾದುದಾಗಿರುವುದು; ವಸ್ತುತಃ ಅದು ಯಾವುದೂ ಅಲ್ಲವಾಗಿಯೂ ಇರುವುದು. 32. ಆ ಬ್ರಹ್ಮಪರಮಾಣುವೇ ನಾನೆಂಬ ಪದಾರ್ಥವಾಗಿಯೂ ನಾನಲ್ಲದುದಾಗಿಯೂ ಆಗಿರುವುದು. ಇದಕ್ಕೆ ಕಾರಣವೇನೆಂದರೆ:—ಸರ್ವಶಕ್ತಿರೂಪನಾದ ಆ ಬ್ರಹ್ಮನ ಪ್ರತಿಭೆಯೊಂದೇ ಈ ವಿಷಯದಲ್ಲಿ ಕಾರಣವಾಗಿರುವುದು ॥೮॥

33. ಅನೇಕ ಶತಪ್ರಯತ್ನಗಳಿಂದ ಲಭ್ಯವಾದುದು ಆತ್ಮಪದಾರ್ಥವು. 34. ಇವನು ಲಬ್ಧನಾದುದರಿಂದ ಹೊಸದಾಗಿ ಯಾವದೊಂದು ಲಾಭವೂ ಆದಂತಾಗುವುದಿಲ್ಲ. ಏಕೆಂದರೆ:—ಈ ಆತ್ಮಪದಾರ್ಥವು ಸ್ವಾಭಾವಿಕವಾಗಿ ಲಬ್ಧವಾದುದೇ ಆಗಿರುವುದು. ಅಥವಾ, ಇದಕ್ಕಿಂತ ಉತ್ಕೃಷ್ಟವಾದ ಲಭ್ಯಪದಾರ್ಥವಾವುದೂ ಇಲ್ಲವೆಂದು ನೀನು ಈ ರೀತಿಯಾಗಿ ಪ್ರಶ್ನೆಮಾಡಿರಬಹುದಲ್ಲವೆ! ॥೯॥

ತಾವಜ್ಜನ್ಮವಸನ್ತೇಷು ಸಂಸೃತಿವ್ರತತಿಶ್ಚಿರಮ್ ।
ವಿಕಸತ್ಯುದಿತೋ ಯಾವತ್ ನ ಬೋಧೋ ಮೂಲಕಾಷಕೃತ್ ॥೧೦॥
ಅಣುನಾನೇನ ರೂಪತ್ವಂ ದೃಶ್ಯತಾಮಿವ ಗಚ್ಛತಾ ।
ತಾಪೇನಾಮ್ಬುಧಿಯೇವೇದಂ ಸ್ವಸ್ಥೇನೈವಾಪಹಾರಿತಮ್ ॥೧೧॥
ಅನೇನ ಸಂವಿದಣುನಾ ಮೇರುಸ್ತ್ರಿಭುವನಂ ತೃಣಮ್ ।
ವಮಿತ್ವಾ ಬಹಿರನ್ತಸ್ಸ್ಥಂ ಮಾಯಯಾತ್ಮಕಮವೇಕ್ಷ್ಯತೇ ॥೧೨॥
ಚಿದಣೋರನ್ತರೇ ಯದ್ಯತ್ ಅಸ್ತಿ ತದ್ದೃಶ್ಯತೇ ಬಹಿಃ ।
ಸಙ್ಕಲ್ಪೇಷ್ಟಾಲಿಙ್ಗನಾದಿ ದೃಷ್ಟಾನ್ತೋತ್ರ ಹಿ ರಾಗಿಣಃ ॥೧೩॥
ಆದಿಸರ್ಗೇ ಸರ್ವಶಕ್ತಿಃ ಚಿದ್ಯಥೈವೋದಿತಾತ್ಮನಾ ।
ತಥಾಶು ಪಶ್ಯತ್ಯಖಿಲಂ ಸಙ್ಕಲ್ಪೇ ಪರ್ವತಃ ಸ್ವತಃ ॥೧೪॥

---

35. ಹೀಗೆ ಹೇಳಿದ ಮಾತ್ರದಿಂದಲೇ, ಜ್ಞಾನಸಂಪಾದನಾರ್ಥವಾಗಿ ಪ್ರಯತ್ನವೇ ವ್ಯರ್ಥವೆಂದು ತಿಳಿಯಬಾರದು. ಸಂಸಾರವೆಂಬುದೇ ಒಂದು ಲತೆಯು. ಇದು, ಪ್ರತಿಯೊಂದು ಜನ್ಮವೆಂಬ ವಸಂತಋತುವಿನಲ್ಲಿಯೂ ವಿಕಾಸಹೊಂದುತಲೇ ಇರುವುದು. ಆದರೆ, ಜ್ಞಾನವು ಈ ಸಂಸಾರಲತೆಯ ಬುಡವನ್ನು ಕತ್ತರಿಸಿಹಾಕತಕ್ಕದು. ಇಂತಹ ತತ್ವಜ್ಞಾನವುದಯಿಸುವವರೆಗೂ ಈ ಸಂಸಾರಲತೆ ಇದ್ದೇಯಿರುವುದು. ಅದುಕಾರಣ, ಮೂಲಾಜ್ಞಾನನಾಶವುಂಟಾಗುವವರೆಗೂ, ಆತ್ಮಲಾಭವಾಗಿದ್ದರೂ-ಅದು ಪರಿಪೂರ್ಣವಾದಂತಾಗುವುದಿಲ್ಲ ॥೧೦॥

36. ಮರುಭೂಮಿಯಲ್ಲಿ ತಾಪವನ್ನು ನೋಡಿ ಜಲಭ್ರಾಂತಿಯುಂಟಾಗುವುದಷ್ಟೆ! ಆಗ ಜಲಭ್ರಾಂತಿಯಿಂದ ತಾಪವು ಅಪಹರಿಸಲ್ಪಟ್ಟಹಾಗಾಯ್ತಲ್ಲವೆ! ಹೀಗೆಯೇ ಈ ಬ್ರಹ್ಮಪರಮಾಣುವು ಸಾಕಾರಭಾವವನ್ನು ಹೊಂದಿ ದೃಶ್ಯರೂಪವನ್ನು ಹೊಂದಿದಂತೆ ತೋರುವಕಾರಣ, ಆ ದೃಶ್ಯಜ್ಞಾನಸಂಸ್ಕಾರಬಲದಿಂದ ಬ್ರಹ್ಮಪದಾರ್ಥಸ್ಮೃತಿಯೇ ಇಲ್ಲವಾಗಿಬಿಡುವುದು. ಹೀಗೆ, ಈ ಬ್ರಹ್ಮಪರಮಾಣುವು ತನ್ನನ್ನು ತಾನೇ ಅಪಹರಿಸಿಕೊಂಡಂತಾಗುವುದು ॥೧೧॥

37. ಈ ಜ್ಞಾನಪರಮಾಣುವೇ, ಮೇರುಪರ್ವತವನ್ನು ತನ್ನ ಹೊಟ್ಟೆಯೊಳಗಿಟ್ಟುಕೊಂಡಿರುವುದು. 38. ಇದೆಯೇ, ಮೂರುಲೋಕವನ್ನೂ ತೃಣಪ್ರಾಯವನ್ನಾಗಿ ಮಾಡಿರುವುದು. ಒಳಗಿಟ್ಟುಕೊಂಡಿದ್ದಮೇಲೆ ಹೊರಗೆ ಕಾಣುವುದು ಹೇಗೆಂದರೆ:—ತನ್ನೊಳಗಿರುವುದನ್ನೇ ಹೊರಕ್ಕೆ ಬಿಟ್ಟು, ಮಾಯಾರೂಪವಾದ ಅದನ್ನು ಹೊರಗೆ ನೋಡುತಿರುವುದು ॥೧೨॥

ಚಿತ್ಪರಮಾಣುವಿನ ಒಳಗೆ ಯಾವಯಾವುದಿರುವುದೋ, ಅದದು ಹೊರಗೆ ಕಾಣಲ್ಪಡುವುದು. ಕೇವಲರಾಗಿಯಾದವನು-ತನ್ನ ಮನಸ್ಸಿನಲ್ಲಿ ಸಂಕಲ್ಪಿಸಿಕೊಂಡ ಸ್ತ್ರೀಯರನ್ನು ತನ್ನ ವಾಸನಾನುಸಾರವಾಗಿ ಆಲಂಗಿಸಿಕೊಳ್ಳುವುದೇ ಇದರಲ್ಲಿ ದೃಷ್ಟಾಂತವೆಂದು ತಿಳಿಯಬೇಕು ॥೧೩॥

ಇಂತಹ ನಿಯಮಗಳ್ಲಿ ಕಾರಣವೇನೆಂದರೆ:—ಒಂದು ಕಬ್ಬಿನ ಜಲ್ಲೆಯಲ್ಲಿ ಮೊದಲನೆಯ ಗಿಣ್ಣಿನಲ್ಲಿರುವಂತೆಯೇ ಪ್ರತಿಯೊಂದು ಗಿಣ್ಣಿನಲ್ಲಿಯೂ ರಸವೂ ಪತ್ರವೂ ಇರುವುದಲ್ಲವೆ! ಹೀಗೆಯೇ, ಆದಿಸೃಷ್ಟಿಯಲ್ಲಿ ಸರ್ವಶಕ್ತವಾದ ಚಿತ್ತು ಯಾವ ವಿಧವಾಗಿ ಉದಯಿಸಿತೋ, ಆ ವಿಧವಾಗಿಯೇ ಪ್ರತಿಯೊಂದು ಸೃಷ್ಟಿಯಲ್ಲಿಯೂ ಸರ್ವವನ್ನೂ ನೋಡುತಿರುವುದು ॥೧೪॥

ಅಭಿಜಾತಸ್ಯ ಯಸ್ಯಾನ್ತಃ ಯದ್ಯಥಾ ಪ್ರತಿಭಾಸತೇ ।
ತತ್ ತಥಾ ಪಶ್ಯತೀವಾಸೌ ದೃಷ್ಟಾನ್ತೋಽತ್ರ ಶಿಶೋರ್ಮನಃ ॥೧೫॥
ಪರಮಾಣುತಯೈವಾಪಿ ಚಿನ್ಮಾತ್ರೇಣಾಣುನಾಮುನಾ ।
ಪರಿಸೂಕ್ಷ್ಮತಮೇನೈವ ವಿಷ್ವಗ್ವಿಶ್ವಂ ಪ್ರಪೂರಿತಮ್ ॥೧೬॥
ಅಣುರೇವ ನ ಮಾತ್ಯೇಷಃ ಯೋಜನಾನಾಂ ಶತೇಷ್ವಪಿ ।
ಸರ್ವಗತ್ವಾದನಾದಿತ್ವಾತ್ ಅರೂಪತ್ವಾದನಾಕೃತಿಃ ॥೧೭॥
ಯಥಾ ಧೂರ್ತೇನ ಖಿಙ್ಗೇನ ಪುಂಸಾ ಬಾಲಃ ಪ್ರತಾರ್ಯತೇ ।
ಸುಭ್ರೂವಿಕಾರನಯನನಿರೀಕ್ಷಣವಿಚೇಷ್ಟಿತೈಃ ॥೧೮॥
ಚಿದಾಲೋಕೇನ ಶುದ್ಧೇನ ಸಪರ್ವತತೃಣಂ ಜಗತ್ ।
ನಾಟ್ಯತೇಽವಿರತಂ ತದ್ವತ್ ವಿವೃತ್ಯಾಭಿನಯಂ ಸದಾ ॥೧೯॥
ತೇನೈವಾನನ್ತರೂಪತ್ವಾತ್ ಅಣುನಾ ವಾಸಸಾ ಯಥಾ ।
ಸಂವಿದಾ ತದ್ಭವದ್ಬಾಹ್ಯೇ ಕೃತ್ವಾ ಮೇರ್ವಾದಿ ವೇಷ್ಟಿತಮ್ ॥೨೦॥
ದಿಕ್ಕಾಲಾದ್ಯನವಚ್ಛಿನ್ನರೂಪತ್ವಾನ್ಮೇರುತೋಽ ಬೃಹತ್ ।
ವಾಲಾಗ್ರಶತಭಾಗಾತ್ಮಾಪ್ಯೇಷ ಸೂಕ್ಷ್ಮಃ ಪರೋಽಣುಕಃ ॥೨೧॥

ಸೃಷ್ಟಿಯಾದಮೇಲೂ ಯಾವನ ಚಿತ್ತದಲ್ಲಿ ಯಾವುದು ಯಾವರೀತಿಯಾಗಿ ಭಾಸಿಸುತ್ತದೆಯೋ, ಅವನು ಅದನ್ನು ಆರೀತಿಯಾಗಿಯೇ ತಿಳಿಯುವನು. ಈ ವಿಷಯದಲ್ಲಿ ಬಾಲಕರ ಮನಸ್ಸೇ ದೃಷ್ಟಾಂತವಾಗಿರುವುದು. ಬಾಲಕನು, ತನ್ನ ಮನಸ್ಸಿನಲ್ಲಿ ಯಾವುದೋ ಒಂದನ್ನು ಪಿಶಾಚಾದಿ ಭ್ರಾಂತಿಯಿಂದ ನೋಡುತ, ಗಾಬರಿಪಡುವನಲ್ಲವೆ! ॥೧೫॥

39. ದೇಶ ಕಾಲ ವಸ್ತುಗಳಲ್ಲಿ ಸೂಕ್ಷ್ಮತಮವಾಗಿರುವ ಈ ಬ್ರಹ್ಮಪರಮಾಣುವೇ, ಈ ಪ್ರಪಂಚವನ್ನೆಲ್ಲ ಸುತ್ತಲೂ ಪರಿಪೂರ್ಣವಮಾಡಿಕೊಂಡಿರುವುದು ॥೧೬॥

40. ಈ ಬ್ರಹ್ಮಪರಮಾಣುವೇ, ಸರ್ವವ್ಯಾಪಿಯಾಗಿ ಅನಾದಿಯಾಗಿ ಅನಾಕೃತಿಯಾಗಿರುವುದರಿಂದ, ನೂರಾರು ಯೋಜನದಲ್ಲಿಯೂ ಹಿಡಿಯಲಾರದುದಾಗಿರುವುದು ॥೧೭॥

41. ಧೂರ್ತನಾಗಿರುವ ವಿಟಪುರುಷನು ಮುಗ್ಧರಾದ ಸ್ತ್ರೀಯರನ್ನು ಹುಬ್ಬುಹಾರಿಸುತ ಕಡೆಗಣ್ಣಿನ ನೋಟದಿಂದ ಹೇಗೆ ವಂಚಿಸುವನೋ, ಹಾಗೆ-ಶುದ್ಧವಾದ ಆ ಚಿದಾಲೋಕವು-ನಾನಾವಿಧವಾದ ವಿಲಾಸವ್ಯಾಪಾರವನ್ನು ವಿಸ್ತರಿಸಿ-ತೃಣಪರ್ವತಯುಕ್ತವಾಗಿರುವ ಈ ಜಗತ್ತನ್ನು ಸರ್ವದಾ ಕುಣಿಯಿಸುತ್ತಿರುವುದು ॥೧೮-೧೯॥

42. ಸುರುಳಿ ಸುತ್ತಿರುವ ಒಂದು ಚಿತ್ರಪಟವು ಅನೇಕವಾದ ಚಿತ್ರವನ್ನು ತನ್ನೊಳಗೆ ಧರಿಸಿಕೊಂಡು ಸುರುಳಿಯನ್ನು ಬಿಚ್ಚಿದಹಾಗೆಲ್ಲ ಆ ಚಿತ್ರವನ್ನು ತೋರ್ಪಡಿಸುವಂತೆ, ಈ ಬ್ರಹ್ಮಪರಮಾಣುವು ಮೇರುಪರ್ವತ ಮುಂತಾದುದನ್ನೆಲ್ಲ ತನ್ನೊಳಗೆ ಧರಿಸಿಕೊಂಡು ಹೊರಗಡೆಯೂ ಆವರಿಸಿಕೊಂಡಿರುವುದು ॥೨೦॥

43. ಈ ಬ್ರಹ್ಮಪರಮಾಣುವು, ದಿಕ್ಕು ಕಾಲ ಮುಂತಾದುವುಗಳಿಂದ ಪರಿಚ್ಛಿನ್ನವಲ್ಲದಿರುವಕಾರಣ, ಮೇರುಪರ್ವತಕ್ಕಿಂತಲೂ ದೊಡ್ಡದೆನ್ನಿಸುವುದು. 44. ಹೀಗಿದ್ದರೂ ಇದು ಕೂದಲ ತುದಿಯ ನೂರರಲ್ಲೊಂದುಭಾಗದಷ್ಟು ಸೂಕ್ಷ್ಮವಾಗಿರುವುದು ॥೨೧॥

ಶುದ್ಧಸಂವೇದನಾಕಾಶರೂಪಸ್ಯ ಪರಮಾಣುನಾ ।
ಶೋಭತೇ ನ ಹಿ ಸಾಮ್ಯೋಕ್ತಿಃ ಮೇರುಸರ್ಷಪಯೋರಿವ ॥೨೨॥
ಮಾಯಾಕಲಾಪಿನಾಣುತ್ವಂ ನಿರ್ಮಾಯ ಪರಮಾತ್ಮನಿ ।
ಹೇಮ್ನೀವ ಕಟಕತ್ವೇನ ನಾನಾತ್ರ ಸಮತಾ ಭವೇತ್ ॥೨೩॥
ಪ್ರಕಟೋನೇನ ದೀಪೇನ ಪ್ರಕಾಶೋನುಭವಾತ್ಮನಾ ।
ಸ್ವಸತ್ತಾನಾಶಪೂರ್ವೋ ಹಿ ವಿನಾನೇನ ಭವೇತ್ ತತಃ ॥೨೪॥
ಯದಿ ಸೂರ್ಯಾದಿಕಂ ಸರ್ವಂ ಜಗದೇಕಂ ಜಡಂ ಭವೇತ್ ।
ತತಃ ಕಿಮಾತ್ಮಕಂ ರೂಪಂ ಪ್ರಕಾಶಃ ಸ್ಯಾತ್ ಕ್ವಾಥ ಕಿಮ್ ॥೨೫॥
ಶುದ್ಧಸನ್ಮಾತ್ರಚಿತ್ತ್ವಂ ಯತ್ ಸ್ವತಃ ಸ್ವಾತ್ಮನಿ ಸಂಸ್ಥಿತಮ್ ।
ತದೇತದಣುನಾ ತೇಜೋ ದೃಷ್ಟಂ ಬಹಿರವಸ್ಥಿತಮ್ ॥೨೬॥
ತೇಜಾಂಸ್ಯರ್ಕೇಂದುವಹ್ನೀನಾಂ ನ ಭಿನ್ನಾನಿ ತಮೋಘನಾತ್ ।

ಎಲೌ ರಾಕ್ಷಸಿ! ನೀನು ಹೇಳಿದ ಪ್ರತಿ ಪ್ರಶ್ನೆಯಲ್ಲಿಯೂ 'ಅಣು' ಶಬ್ದವನ್ನುಪಯೋಗಿಸಿರುವೆಯಲ್ಲವೆ! ಅದಕ್ಕೆ 'ಅನಾಖ್ಯತ್ವಾದಗಮ್ಯತ್ವಾತ್' (೮೦. ಸರ್ಗ. ೪. ಶ್ಲೋಕ) ಇತ್ಯಾದಿ ಶ್ಲೋಕದಲ್ಲಿ ನಮ್ಮ ಮಂತ್ರಿಯು ಹೇಳಿದ ತಾತ್ಪರ್ಯವನ್ನು ನೀನು ಒಪ್ಪಿರುವೆಯಷ್ಟೆ! ಆದರೆ, ಆ ಭಾಗದಲ್ಲಿ ಸ್ವಲ್ಪ ವಿಶೇಷವಿರುವುದು. ಕೇವಲ ಶುದ್ಧಜ್ಞಾನಾಕಾಶರೂಪನಾಗಿರುವ ಆತ್ಮನಿಗೆ ಪರಮಾಣುವಿನೊಡನೆ ಸಾಮ್ಯಹೇಳಿದರೆ, ಇದು-ಮೇರುಪರ್ವತಕ್ಕೆ ಸಾಸುವೆಕಾಳಿನೊಡನೆ ಸಾಮ್ಯ ಹೇಳಿದಂತಾಗುವುದು. ಅದುಕಾರಣ, ಈ ಸಾಮ್ಯಕಥನವು ಅಷ್ಟು ಚೆನ್ನಾಗಿ ಶೋಭಿಸುವುದಿಲ್ಲ॥

'ಹಾಗಾದರೆ— ಅಣೋರಣೀಯಾನ್ ಮಹತೋ ಮಹೀಯಾನ್- ಇತ್ಯಾದಿ ಶ್ರುತಿಗಳಲ್ಲಿ ಅಣುಶಬ್ದವಿರುವುದಕ್ಕೆ ತಾತ್ಪರ್ಯವೇನು?' ಎಂದರೆ, —ಮಾಯಾಶಬಳವಾದ ಚೈತನ್ಯವು ಪರಮಾತ್ಮನಲ್ಲಿ ಅಣುತ್ವಮಹತ್ವಾದಿಗಳನ್ನು ಕಲ್ಪಿಸುವುದು. ಅಂದರೆ, ಅಣುತ್ವಮಹತ್ವಾದಿಗಳು ಮಾಯೆಯಿಂದ ಆತ್ಮನಲ್ಲಿ ನಿರ್ಮಿತಗಳೆಂದು ತಿಳಿಯಬೇಕು. ಅದುಕಾರಣ, ಸುವರ್ಣದಲ್ಲಿ ಕಟಕತ್ವವಿರುವುದಲ್ಲದೆ ಕಟಕದೊಡನೆ ಸಾಮ್ಯವಿಲ್ಲದಿರುವಂತೆ, ಆತ್ಮನಲ್ಲಿ ಅಣುತ್ವವಿರುವುದಲ್ಲದೆ, ಅಣುವಿನೊಡನೆ ಸಾಮ್ಯವಿರುವುದಿಲ್ಲವೆಂದು ತಿಳಿಯಬೇಕು ॥೨೩॥

45. ಪ್ರಕಾಶವೂ ತಮಸ್ಸೂ ಅನುಭವಾತ್ಮಕವಾದ ಈ ಆತ್ಮದಿಂದಲೇ ಪ್ರಕಟವಾಗುವುದು. ಈ ಆತ್ಮದೀಪವನ್ನು ಬಿಟ್ಟರತಕ್ಕಪಕ್ಷದಲ್ಲಿ, ಈ ಪ್ರಕಾಶಾದಿಗಳು ಇಲ್ಲದುವೇ ಆಗುವುವು ॥

ಹೀಗೆ ಈ ಸೂರ್ಯ ಮೊದಲಾದ ಸಮಸ್ತ ಜಗತ್ತೂ ಕೇವಲ ಜಡವೇ ಆಗಿಬಿಟ್ಟಪಕ್ಷದಲ್ಲಿ, ಆಗ-ಪ್ರಕಾಶದ ಸ್ವರೂಪವೆಂಬುದಾವುದು? ಅದೆಲ್ಲಿರುವುದು? ಸಮಸ್ತ ಜಗತ್ತೂ ಕೇವಲ ಅಂಧವಾಗಿಯೇ ಇರಬೇಕಾಗುವುದು ॥೨೫॥

ಪ್ರಕಾಶವೆಂಬುದಾವುದೆಂದರೆ,—ಆತ್ಮನಲ್ಲಿ ಸ್ವತಸ್ಸಿದ್ಧವಾಗಿ ಶುದ್ಧಸನ್ಮಾತ್ರಚಿದ್ರೂಪಸ್ಥಿತಿಯಾವುದಿರುವುದೋ, ಅದೇ ಈ ಬ್ರಹ್ಮಪರಮಾಣುವಿನಿಂದ ತೇಜಸ್ಸೆಂದು ತಿಳಿಯಲ್ಪಟ್ಟು ತೇಜೋರೂಪವಾಗಿ ಹೊರಗೆ ಏರ್ಪಟ್ಟಿರುವುದು ॥೨೬॥

'ಸೂರ್ಯಚಂದ್ರಾದಿ ತೇಜಸ್ಸುಗಳಿಂದಲೇ ಪ್ರಕಾಶವುಂಟಾಗುತಿರುವಾಗ ಈ ಚಿತ್ಪರಮಾಣುವಿನಿಂದ ಪ್ರಯೋಜನವೇನು?' ಎಂದರೆ,—ಸೂರ್ಯಚಂದ್ರವಹ್ನಿಗಳ ತೇಜಸ್ಸುಗಳಿಗೂ ಗಾಢತಮ

ಏತಾವಾನೇವ ಭೇದೋಽಸ್ತಿ ಯದ್ವರ್ಣೌ ಶೌಕ್ಲ್ಯಕೃಷ್ಣತೇ ॥೨೭॥
ಯಾದೃಕ್ ಕಜ್ಜಲನೀಹಾರೇ ಮೇಘನೀಹಾರಯೋರ್ಭವೇತ್ ।
ತಾದೃಕ್ ಪ್ರಕಾಶತಮಸೋಃ ಭೇದೋ ನೇತಿ ತಯೋಃ ಸ್ಥಿತಿಃ ॥೨೮॥
ಜಡಯೋರುಪಲಮ್ಭಾಯ ಚಿದಾದಿತ್ಯಃ ಕಿಲೈತಯೋಃ ।
ಯದಾ ತಪತಿ ತೇನೈತೇ ಲಬ್ಧಸತ್ತೈಕತಾಂ ಗತೇ ॥೨೯॥
ತಪತ್ಯೇಕಶ್ಚಿದಾದಿತ್ಯೋ ರಾತ್ರಿಂದಿವಮತನ್ದ್ರಿತಃ ।
ಅನ್ತರ್ಬಹಿಶ್ಶಿಲಾದ್ಯನ್ತಃ ಅಪ್ಯನಸ್ತಮಯೋದಯಃ ॥೩೦॥
ತ್ರಿಲೋಕೀ ಭಾತಿ ತೇನೇಯಂ ಜೀವಸ್ಯ ಪ್ರಥಿತಾತ್ಮನಃ ।
ನಾನೋಪಲಮ್ಭಭಾಣ್ಡಾಢ್ಯಾ ಕುಟೀಕರಿನಕೋಟರಾ ॥೩೧॥
ತಮಸ್ತ್ವಂ ತಮಸೋ ದೇಹಂ ಅವಿನಾಶಯತಾಮುನಾ ।
ತಪ್ಯತೇಽಭಾಸಯಾ ಭಾಸಾ ಸರ್ವಮಾಭಾಸ್ಯತೇ ತಮಃ ॥೩೨॥
ಪದ್ಮೋತ್ಪಲೇ ಯಥಾರ್ಕೇಣ ತಪತಾ ಪ್ರಕಟೀಕೃತೇ ।

ಸ್ಸಿಗೂ ಏನೂ ಭೇದವೇ ಇಲ್ಲ. ಆದರೆ, ಸೂರ್ಯಾದಿಗಳ ಬಣ್ಣವು ಶುಭ್ರವಾಗಿಯೂ ತಮಸ್ಸಿನ ಬಣ್ಣವು ಕೃಷ್ಣವಾಗಿಯೂ ಇರುವುವು; ಇದಿಷ್ಟುಮಾತ್ರ ಭೇದವೇ ಹೊರತು, ಅವೆರಡೂ ಜಡ ಪದಾರ್ಥವೆನ್ನುವುದರಲ್ಲಿ ಯಾವ ಭೇದವೂ ಇಲ್ಲ ॥೨೭॥

ಕಾಡಿಗೆಯಂತೆ ಕಪ್ಪಾಗಿರುವ ಜಲಬಿಂದುಗಳನ್ನು ನೋಡಿ ಮೇಘವೆಂದು ವ್ಯವಹರಿಸುವಾಗ, ಬಿಂದುಗಳಿಗೂ ಮೇಘಕ್ಕೂ ಎಷ್ಟುಮಟ್ಟಿನ ಭೇದವಿರುವುದೋ,— ಪ್ರಕಾಶತಮಸ್ಸುಗಳಿಗೂ ಅಷ್ಟುಮಟ್ಟಿನ ಭೇದವೇ ಇರುವುದು. ಹೀಗಿರುವುದರಿಂದ, ಅವುಗಳಿಗೆ ಸ್ವತಸ್ಸಿದ್ಧವಾಗಿ ಭೇದವಿಲ್ಲವೆಂಬುದೇ ವಸ್ತುಸ್ಥಿತಿಯು ॥೨೮॥

ವಸ್ತುತಃ ಜಡಪದಾರ್ಥಗಳಾದ ಈ ತಮಃಪ್ರಕಾಶಗಳ ಅನುಭವಕ್ಕಾಗಿ ಆ ಜ್ಞಾನಸೂರ್ಯನು ಯಾವಾಗ ತಪಿಸುವನೋ, ಆಗ ಇವೆರಡೂ ಅವನ ಪ್ರಕಾಶದಿಂದ ಸ್ಥಿತಿಹೊಂದಿದುವುಗಳಾಗುವುವು. ಹೀಗೂ ಇವೆರಡೂ ಪರಸ್ಪರ ಭೇದರಹಿತಗಳೆಂದು ಸಿದ್ಧವಾಯಿತು ॥೨೯॥

ಉದಯಾಸ್ತರಹಿತನಾದ ಆ ಅದ್ವಿತೀಯನಾದ ಚೈತನ್ಯಸೂರ್ಯನು, ಒಳಗೂ ಹೊರಗೂ ಶಿಲೆ ಮುಂತಾದುವುಗಳೊಳಗೂ, ರಾತ್ರಿ ಹಗಲೂ ಜಾಗರೂಕನಾಗಿ ತಪಿಸುತಿರುವನು ॥೩೦॥

ಹೀಗಿರುವುದರಿಂದ, ಜೀವನೆಂದು ಪ್ರಥಿತನಾದ ಆತ್ಮನಿಗೆ, ಅನೇಕವಾದ ಭೋಗೋಪಕರಣಗಳಿಂದ ಪರಿಪೂರ್ಣವಾಗಿಯೂ ಪರ್ಣಕುಟೀಸದೃಶವಾಗಿಯೂ ಇರುವ ಈ ತ್ರಿಲೋಕವೂ ಭಾಸಮಾನವಾಗುವುದು ॥೩೧॥

ಆ ಆತ್ಮನು ತಮಸ್ಸನ್ನು ಪ್ರಕಾಶಪಡಿಸುವ ಬಗೆಯಾವುದೆಂದರೆ:—ತಮಸ್ಸಿಗೆ ಸ್ವರೂಪಭೂತವಾದ ತಮಸ್ತ್ವವನ್ನು ನಾಶಪಡಿಸದೆಯೇ (ತಮಸ್ಸಿನಲ್ಲಿ ತಮಸ್ತ್ವವನ್ನಿಟ್ಟುಕೊಂಡೇ) ತಪಿಸುತ, ಸಮಸ್ತವಾದ ತಮಸ್ಸನ್ನೂ ಪ್ರಕಾಶಪಡಿಸುವನು ॥೩೨॥

ಸೂರ್ಯನು ತಾನು ತಪಿಸುವಾಗ-ಇದು ಕಮಲವೆಂದೂ ಇದು ನೈದಿಲೆಯೆಂದೂ—ಹೇಗೆ

ಪ್ರಕಾಶತಮಸೋಃ ಸತ್ತೇ ಚಿತ್യೈವಂ ಪ್ರಕಟೀಕೃತೇ ‖೩೩‖
ಅರ್ಕಃ ಕುರ್ವನ್ನಹೋರಾತ್ರೇ ದರ್ಶಯತ್ಯಾಕೃತಿಂ ಯಥಾ |
ಚಿತಿಃ ಸದಸತೀ ಕೃತ್ವಾ ದರ್ಶಯತ್ಯಾಕೃತಿಂ ತಥಾ ‖೩೪‖
ಚಿದಣೋರನ್ತರೇ ಸನ್ತಿ ಸಮಗ್ರಾನುಭವಾಣವಃ |
ಯಥಾ ಮಧುರಸಸ್ಯಾನ್ತಃ ಪುಷ್ಪಪತ್ರಫಲಶ್ರಿಯಃ ‖೩೫‖
ಉದ್ಯನ್ತಿ ಚಿದಣೋರೇತೇ ಸಮಗ್ರಾನುಭವಾಣವಃ |
ಮಧುಮಾಸರಸೋಚ್ಛ್ರಿತಾಃ ಇವ ಖಣ್ಡಪರಮ್ಪರಾಃ ‖೩೬‖
ಪರಮಾತ್ಮಾಣುರತ್ಯನ್ತನಿಸ್ಸ್ವಾದುಃ ಸೂಕ್ಷ್ಮತಾವಶಾತ್ |
ಸಮಗ್ರಸ್ವಾದುಸತ್ತೈಕಜನಕಃ ಸ್ವದತೇ ಸ್ವಯಮ್ ‖೩೭‖
ಯೋಯೋ ನಾಮ ರಸಃ ಕಶ್ಚಿತ್ ಸಮಸ್ತೋಪ್ಯಪ್ಸ್ವವಸ್ಥಿತಃ |
ಪ್ರತಿಬಿಮ್ಬಮಿವಾದರ್ಶೇ ತಂ ವಿನಾ ನಾಸ್ತ್ಯಸೌ ಸ್ವತಃ ‖೩೮‖
ತ್ಯಜತಾ ಸಂಸ್ಥಿತಂ ಸರ್ವಂ ಚಿನ್ಮಾತ್ರಪರಮಾಣುನಾ |
ತ್ಯಕ್ತಂ ಜಗದಸಂವಿತ್ತ್ಯಾ ಸಂವಿತ್ತ್ಯಾ ಸರ್ವಮಾಶ್ರಿತಮ್ ‖೩೯‖

ಪ್ರಕಟಪಡಿಸುವನೋ, ಹಾಗೆ ಆ ಚೈತನ್ಯವು ಪ್ರಕಾಶವನ್ನೂ ತಮಸ್ಸನ್ನೂ ಪ್ರಕಟಪಡಿಸುವುದು ‖೩೩‖

ಸೂರ್ಯನು ಅಹೋರಾತ್ರಿಗಳನ್ನು ಮಾಡುತ ಪದಾರ್ಥಗಳ ಸ್ವರೂಪವನ್ನು ಹೇಗೆ ತೋರಿಸುವನೋ, ಹಾಗೆ ಚೈತನ್ಯವು ಆವಿರ್ಭಾವತಿರೋಭಾವ ಲಕ್ಷಣಗಳಾದ ಪ್ರಕಾಶತಮಸ್ಸುಗಳನ್ನು ಮಾಡುತ ಪ್ರಪಂಚಪದಾರ್ಥವನ್ನು ತೋರಿಸುವನು ‖೩೪‖

46. ವಸಂತಮಾಸದ ಸೊಬಗಿನೊಳಗೆ ಪುಷ್ಪಪತ್ರಫಲಸಮೃದ್ಧಿಗಳು ಹೇಗೆ ತುಂಬಿರುವುವೋ, ಹಾಗೆ ಚೈತನ್ಯಪರಮಾಣುವಿನೊಳಗೆ ಸಮಸ್ತವಾದ ಅನುಭವಾಣುಗಳೂ ತುಂಬಿರುವುವು ‖೩೫‖

ಮಧುಮಾಸದ ಸೊಬಗಿನ ದೆಸೆಯಿಂದ ನಾನಾವಿಧವಾದ ಅರಣ್ಯಪ್ರದೇಶಗಳ ಸೌಂದರ್ಯ ವಿಶೇಷಗಳು ತೋರ್ಪಡುವಂತೆ, ಚೈತನ್ಯಪರಮಾಣುವಿನ ದೆಸೆಯಿಂದ ಈ ಸಮಸ್ತವಾದ ಪ್ರಾಪಂಚಿಕ ಪದಾರ್ಥಾನುಭವಗಳೂ ಹುಟ್ಟುವುವು ‖೩೬‖

47. ಅತಿ ಸೂಕ್ಷ್ಮವಾಗಿರುವಕಾರಣ, ಈ ಬ್ರಹ್ಮಪರಮಾಣುವೇ ಅತ್ಯಂತನಿಸ್ಸ್ವಾದುವಾಗಿರುವುದು; ಆದರೂ ಸಮಗ್ರವಾದ ಸ್ವಾದುತ್ವವನ್ನೂ ತಾನೇ ಸೃಷ್ಟಿಸತಕ್ಕುದಾಗಿ ಸರ್ವರಿಗೂ ಅತ್ಯಂತ ಆಸ್ವಾದನೀಯವಾಗಿಯೂ ಇರುವುದು ‖೩೭‖

ಮುಖ್ಯವಾಗಿ ರಸವೆಂಬುದು ಜಲದ ಗುಣವು. ಇಂತಹ ಜಲದಲ್ಲಿ, ಯಾವಯಾವ ಸಮಸ್ತವಾದ ರಸವಿದೆಯೋ, ಅದು-ಕನ್ನಡಿಯನ್ನು ಬಿಟ್ಟು ಪ್ರತಿಬಿಂಬವಿಲ್ಲದಿರುವಂತೆ-ಆತ್ಮನನ್ನು ಹೊರತು ಸ್ವತಂತ್ರವಾಗಿರುವುದಿಲ್ಲ ‖೩೮‖

48. ಆ ಚಿನ್ಮಾತ್ರವಾದ ಬ್ರಹ್ಮಪರಮಾಣುವೇ, ಅಪ್ರಕಾಶಾವಸ್ಥೆಯಲ್ಲಿದ್ದಾಗ ಈ ಸಮಸ್ತ ಜಗತ್ತನ್ನೂ ಬಿಟ್ಟುಬಿಟ್ಟಿರುವುದು; ಮತ್ತೆ ಸ್ಫುರಣೆಯುಂಟಾದಾಗ ಸರ್ವವನ್ನೂ ಆಶ್ರಯಿಸಿರುವುದು ‖೩೯‖

ಅಶಕ್ತ್ಯಾ ಸ್ವಾತ್ಮಗುಪ್ತೌ ಸರ್ವಮಾಚ್ಛಾದಿತಂ ಜಗತ್ ।
ಚಿತಾಣುತಾಮೇವ ಪರಾಂ ಸಂಪ್ರಸಾರ್ಯ ವಿತಾನವತ್ ॥೪೦॥
ಆತ್ಮಗುಪ್ತೌ ನ ಶಕ್ನೋತಿ ಪರಮಾತ್ಮಾಮ್ಬರಾಕೃತಿಃ ।
ಮನಾಗಪಿ ಕ್ಷಣಮಪಿ ಗಜೋ ದೂರ್ವಾವನೇ ಯಥಾ ॥೪೧॥
ತಥಾಪ್ಯಾಕ್ರಾನ್ತವಾನ್ ವಿಶ್ವಂ ಜ್ಞಾತೋ ಗೋಪಾಯತಿ ಕ್ಷಣಾತ್ ।
ಜಗದ್ಧಾನಾಕಣಂ ಬಾಲಃ ಇವಾಹೋ ಘನಮಾಯಿತಾ ॥೪೨॥
ಚಿನ್ಮಾತ್ರಾನುನಯೇನೇದಂ ಜಗತ್ ಸನ್ನಪಿ ಜೀವತಿ ।
ವಸನ್ತರಸಬೋಧೇನ ವಿಚಿತ್ರೇವ ವನಾವಳೀ ॥೪೩॥
ಚಿತ್ತಸತ್ತೈವಮಖಿಲಂ ಸ್ವತೋ ಜಗದಿವೋದಿತಮ್ ।
ಮಧುಮಾಸರಸೋಲ್ಲಾಸಾತ್ ಚಿತ್ರೋ ಹಿ ವನಖಣ್ಡಕಃ ॥೪೪॥

---

49. ಆ ಚೈತನ್ಯವು, ತನ್ನ ಪರಮಾಣುತ್ವವನ್ನೇ ಚೆನ್ನಾಗಿ ವಿಸ್ತರಿಸಿಕೊಂಡು, ತನ್ನನ್ನು ತಾನು ಮರೆಮಾಡಿಕೊಳ್ಳುವುದಕ್ಕಶಕ್ತವಾಗಿದ್ದರೂ, ಸಮಸ್ತ ಜಗತ್ತನ್ನೂ ಮೇಲುಕಟ್ಟಿನಂತೆ ಆವರಿಸಿಕೊಂಡಿರುವುದು ॥೪೦॥

ವಸ್ತುತಃ ಆಕಾಶರೂಪನಾಗಿದ್ದರೂ, ದೂರ್ವಾವನ (ಹುಲ್ಲುಗಾವಲು) ದಲ್ಲಿ ಆನೆಯು ತನ್ನನ್ನು ತಾನು ಮರೆಮಾಡಿಕೊಳ್ಳಲಾರದಂತೆ, ಆತ್ಮನು ಸ್ವಲ್ಪವೂ ಒಂದು ಕ್ಷಣವೂ ತನ್ನನ್ನು ತಾನು ಮರೆಮಾಡಿಕೊಳ್ಳಲಾರನು ॥೪೧॥

ಹೀಗಿದ್ದರೂ, ಬಾಲಕನು ಎಚ್ಚರವಾಗಿದ್ದುಕೊಂಡು ಭತ್ತದ ಕಣವನ್ನು ಕಾಯುವಂತೆ, ಸರ್ವವ್ಯಾಪಿಯಾದ ಆತ್ಮನೂ ಎಚ್ಚರವಾದಾಗ (ಪ್ರಪಂಚೋನ್ಮುಖನಾದಾಗ) ಈ ಜಗತ್ತನ್ನು ಕಾಪಾಡುವನು. 'ಇಂತಹ ಸ್ವಪ್ರಕಾಶಪೂರ್ಣನಾದ ಆತ್ಮನು ತನ್ನನ್ನು ತಾನೇ ಮರೆಯುವುದು ಹೇಗೆ?' ಎಂದರೆ,—ಇದೇ ಮಾಯಾಶಕ್ತಿಯು. ಅದು ಅತಿ ಘನವಾಗಿಯೂ ಆಶ್ಚರ್ಯಕರವಾಗಿಯೂ ಇರುವುದು ॥೪೨॥

50. ವಸಂತಕಾಲದಲ್ಲಿ ರಸೋದ್ಬೋಧದಿಂದ ಪತ್ರಪುಷ್ಪಾದಿಭರಿತವಾಗಿ ವನಪಂಕ್ತಿಯು ಜೀವಿಸುವಂತೆ, ಪ್ರಳಯದಲ್ಲಿ ಉತ್ಪನ್ನವಾಗಿದ್ದ ಈ ಜಗತ್ತು, ಪುನಃ ಆತ್ಮಚೈತನ್ಯಾವಲಂಬದಿಂದ ಜೀವಿಸುವುದು ॥೪೩॥

'ಹೀಗೆ ಪ್ರಳಯದಲ್ಲಿಯೂ ಸೃಷ್ಟಿಯಲ್ಲಿಯೂ ಸಮಾನವಾಗಿ ಬ್ರಹ್ಮಸತ್ತೆಯಿಂದಲೇ ಜಗತ್ತು ಜೀವಿಸಿರುವ ಪಕ್ಷದಲ್ಲಿ, ಸೃಷ್ಟಿಯಲ್ಲಿ ವಿಶೇಷವೇನು? ಆಗ ಆವಿರ್ಭಾವವೆಂಬ ವ್ಯವಹಾರವೇಕೆ?' ಎಂದು ಶಂಕಿಸಿದರೆ,—ಜಗತ್ಸೃಷ್ಟಿಕಾಲದಲ್ಲಿ, ಚಿತ್ತಸತ್ತೆಯೇ ಈ ಸಮಸ್ತ ಜಗತ್ತೆಂದು ಉದಯಹೊಂದುವುದು. ವಸಂತಮಾಸದ ರಸೋದ್ಬೋಧನೆಯಿಂದ ವನಪ್ರದೇಶವು ನಾನಾವಿಧವಾಗುವುದಲ್ಲವೆ! ಹಾಗೆ ಚಿತ್ತಸತ್ತೆಯಿಂದ ಸೃಷ್ಟಿಸಮಯದಲ್ಲಿ ನಾನಾವಿಧವಾಗಿ ಜಗತ್ತು ಉದಯಹೊಂದಿದಂತೆ ಕಾಣುವುದು. ಪ್ರಳಯದಲ್ಲಿಯಾದರೋ, ಚಿತ್ತಸತ್ತೆಯು ಪೃಥಕ್ಕಾಗಿರುವುದಿಲ್ಲ. ಇದೇ ಸೃಷ್ಟಿಲಯಗಳಿಗಿರುವ ವ್ಯತ್ಯಾಸವು ॥೪೪॥

ಸತ್ಯಂ ಚಿನ್ಮಯಮೇವೇದಂ ಜಗದಿತ್ಯೇವ ವಿದ್ಧ್ಯಲಮ್ ।
ವಸನ್ತರಸಮೇವ ತ್ವಂ ವಿದ್ಧಿ ಪಲ್ಲವಗುಲ್ಮಕಮ್ ॥೪೫॥
ಸರ್ವಾವಯವಿಸಾರತ್ವಾತ್ ಸಹಸ್ರಕರಲೋಚನಃ ।
ಪರಮಾಣುರಸಾವೇವ ನಿತ್ಯಾನವಯವೋದಯಃ ॥೪೬॥
ನಿಮೇಷಾಂಶಾವಬೋಧೋ ಹಿ ಚಿದಣೋಃ ಪ್ರತಿಭಾಸತೇ ।
ಯತಃ ಕಲ್ಪಸಹಸ್ರೌಘಃ ಸ್ವಪ್ನೇ ವಾರ್ಧಕಬಾಲ್ಯವತ್ ॥೪೭॥
ತತಃ ಸೋಽಪಿ ನಿಮೇಷೋಽಣುಃ ಕಲ್ಪಕೋಟಿಶತಾನ್ಯಲಮ್ ।
ಸರ್ವಸತ್ತಾವಿಲಾಸೇನ ಪ್ರತಿಭೈಕಾ ವಿಜೃಮ್ಭತೇ ॥೪೮॥
ಅಭುಕ್ತವತ್ಯೇವ ಯಥಾ ಭುಕ್ತವಾನಹಮಿತ್ಯಲಮ್ ।
ಜಾಯತೇ ಪ್ರತ್ಯಯಸ್ತದ್ವತ್ ನಿಮೇಷೇ ಕಲ್ಪನಿಶ್ಚಯಃ ॥೪೯॥
ಅಭುಕ್ತ್ವಾ ಭುಕ್ತವಾನಸ್ಮೀತ್ಯೇವಂ ಪ್ರತ್ಯಯಶಾಲಿನಃ ।
ದೃಶ್ಯನ್ತೇ ವಾಸನಾವಿಷ್ಟಾಃ ಸ್ವಪ್ನೇ ಸ್ವಮರಣಂ ಯಥಾ ॥೫೦॥
ಜಗನ್ತಿ ಪರಿತಿಷ್ಠನ್ತಿ ಪರಮಾಣೌ ಚಿದಾತ್ಮನಿ ।
ಪ್ರತಿಭಾಸಾಃ ಪ್ರವರ್ತನ್ತೇ ತತಏವ ಹಿ ಜಾಗತಾಃ ॥೫೧॥

ಹೇ ರಾಕ್ಷಸಿ ! ಸತ್ಯವಾಗಿ ಆ ಚಿತ್ತೇ ಈ ಜಗತ್ತೆಂದು ನೀನು ಸ್ಪಷ್ಟವಾಗಿ ತಿಳಿಯುವ ಳಾಗು. ವಸಂತಕಾಲಿಕವಾದ ರಸೋದ್ಬೋಧವನ್ನೇ ಪಲ್ಲವಗುಲ್ಮಗಳೆಂದು ತಿಳಿ ॥೪೫॥

51, ಈ ಆತ್ಮಪರಮಾಣುವೇ, ಎಂದಿಗೂ ಅವಯವಪ್ರಾದುರ್ಭಾವವಿಲ್ಲದುದಾಗಿದ್ದರೂ, ಸಕಲವಾದ ಭೂತಸಮುದಾಯಗಳಿಗೂ ಸಾರಭೂತವಾಗಿರುವುದರಿಂದ ಸಾವಿರ ಕೈಯೂ ಕಣ್ಣೂ ಉಳ್ಳುದುದಾಯ್ತೆಂದು ತಿಳಿಯಬೇಕು ॥೪೬॥

52. ಸ್ವಪ್ನದಲ್ಲಿ ಬಾಲ್ಯ ವಾರ್ಧಕಗಳನ್ನು ಬೇಗನೆ ನೋಡುವಂತೆ, ಈ ಚಿತ್ಪರಮಾಣು ವಿನ ಒಂದು ನಿಮೇಷದ ಅಂಶವೇ ಸಾವಿರಾರು ಕಲ್ಪಸಮೂಹವಾಗಿ ಭಾಸಿಸುವುದು ; ಅದುಕಾ ರಣ, ಆ ಒಂದು ನಿಮೇಷಕಾಲಪರಮಾಣುವೇ ಕಲ್ಪಕೋಟಿಶತಗಳಾಗುವುದು. ಹೀಗೆ ಸರ್ವಸತ್ತಾ ರೂಪವಾಗಿ ಆ ಆತ್ಮಪ್ರಕಾಶವೊಂದೇ ಉಜ್ಜೃಂಭಿಸುತಿರುವುದು ॥೪೭--೪೮॥

ಊಟಮಾಡದೆಯೇ ಇರತಕ್ಕವನಿಗೆ, ಸ್ವಪ್ನಾದಿಗಳಲ್ಲಿ, ನಾನು ಊಟಮಾಡಿರುವೆನೆಂದು ಹೇಗೆ ದೃಢತರಪ್ರತ್ಯಯ ಹುಟ್ಟುವುದೋ, ಹಾಗೆ—ನಿಮಿಷದಲ್ಲಿ ಕಲ್ಪವೆಂಬ ಪ್ರತ್ಯಯಹು ಟ್ಟುವುದು ॥೪೯॥

ಊಟಮಾಡದೆಯೇ ತಾನು ಊಟಮಾಡಿರುವೆನೆಂದು ತಿಳಿದುಕೊಳ್ಳತಕ್ಕವನಿಗೆ, ಸ್ವಪ್ನದಲ್ಲಿ ತನ್ನ ಮರಣವನ್ನು ತಾನೇ ಕಾಣುವಂತೆ, ಆವಿಧವಾದ ವಾಸನಾ ವಿಶೇಷಗಳಿಂದ ಆಯಾವಿಧವಾದ ಪ್ರತ್ಯಯಗಳುಂಟಾಗುವುವು ॥೫೦॥

53. ಸಮಸ್ತವಾದ ಜಗತ್ತುಗಳೂ ಆ ಚಿತ್ಪರಮಾಣುವಿನಲ್ಲಿಯೇ ನೆಲೆಸಿರುವುವು. ಈ ಸಮಸ್ತವಾದ ಜಾಗತಪ್ರತ್ಯಯಗಳೂ ಅದರಿಂದಲೇ ಪ್ರವರ್ತಿಸುವುವು ॥೫೧॥

ಯದಸ್ತಿ ಯತ್ರ ತತ್ ತಸ್ಮಾತ್ ಸಮುದೇತಿ ತದೇವ ತತ್ ।
ಆಕಾರಿಣಿ ವಿಕಾರಾದಿ ದೃಷ್ಟಂ ನ ಗಗನೇಽಮಲೇ ॥೫೨॥
ಚಿತಿ ಭೂತಾನಿ ಭೂತಾನಿ ವರ್ತಮಾನಾನಿ ಸಂಪ್ರತಿ ।
ಭವಿಷ್ಯನ್ತಿ ಚ ಭೂತಾನಿ ಸನ್ತಿ ಬೀಜೇ ದ್ರುಮಾ ಇವ ॥೫೩॥
ನಿಮೇಷಕಲ್ಪಾವೇತೇನ ತುಷೇಣಾನ್ನಕಣಾವಿವ ।
ವಲಿತಾವೇಷ ಚೇತ್ಯಾಭ್ಯಾಂ ಅಣುಃ ಸ್ವಾತ್ಮಾಙ್ಗಕಂ ಶ್ರಿತಃ ॥೫೪॥
ಉದಾಸೀನವದಾಸೀನೋ ನ ಸಂಸ್ಪೃಷ್ಟೋ ಮನಾಗಪಿ ।
ಏಷ ಭೋಕ್ತೃತ್ವಕರ್ತೃತ್ವೈಃ ಸ್ವಾತ್ಮಾ ಸರ್ವಜಗತ್ಯಪಿ ॥೫೫॥
ಜಗತ್ಸತ್ತೋದಿತೇಯಂ ಹಿ ಶುದ್ಧಚಿತ್ಪರಮಾಣುತಃ ।
ಪರಮಾಣೋಶ್ಚ ಭೋಕ್ತೃತ್ವಕರ್ತೃತ್ವೇ ಕೇವಲಂ ಸ್ಥಿತೇ ॥೫೬॥
ಜಗನ್ನ ಕಿಞ್ಚಿತ್ ಕ್ರಿಯತೇ ಸರ್ವದೈವ ನ ಕೇನಚಿತ್ ।

ಯಾವುದರಲ್ಲಿ ಯಾವುದಿರುವುದೋ, ಅದರಿಂದಲೇ ಅದು ಹುಟ್ಟುವುದು; ಮತ್ತು, ಅದೇ (ಜನ್ಮಕಾರಣವೇ) ಅದು (ಉತ್ಪನ್ನವಾದುದು) ಆಗುವುದು. ಶರೀರವುಳ್ಳ ಪದಾರ್ಥದಲ್ಲಿ ವಿಕಾರಾದಿಗಳು ಕಾಣಿಸುವುವಲ್ಲದೆ, ನಿರ್ಮಲವಾದ ಗಗನತಲದಲ್ಲಿ ಕಾಣಿಸುವುದಿಲ್ಲ ॥೫೨॥

ಎಲೌ! ರಾಕ್ಷಸಿ! ಮತ್ತು, ಅವ್ಯಕ್ತಾವಧಿಯಾದ ಬೀಜಗಳು ಎಲ್ಲಿರುವುವೆಂದು ನೀನು ಕೇಳಿದ ಅಂಶದಲ್ಲಿ ಉತ್ತರವನ್ನು ಕೇಳುವವಳಾಗು:—ಆ ಚಿತ್ತಿನೊಳಗೆ, ಭೂತಭವಿಷ್ಯದ್ವರ್ತಮಾನಗಳಾದ ಭೂತಗಳೆಲ್ಲವೂ, ಬೀಜದೊಳಗೆ ದ್ರುಮವಿರುವಂತೆ ಇರುವುವು ॥೫೩॥

54. ಬತ್ತವನ್ನು ಬೇಯಿಸಿದಾಗ ಅದರೊಳಗಿರುವ ಅನ್ನವನ್ನು ಹೊಟ್ಟು ಮುಚ್ಚಿಕೊಂಡಿರುವಂತೆ, ಈ ಬ್ರಹ್ಮಪರಮಾಣುವು ಕಲ್ಪನಿಮೇಷಗಳನ್ನು ಆವರಿಸಿಕೊಂಡಿರುವುದು. ಮತ್ತು, ಈ ಪರಮಾಣುವಿನ ಯಾವುದೋ ಒಂದು ಅತ್ಯಲ್ಪವಾದ ಅವಯವವನ್ನು ಆ ಕಲ್ಪನಿಮೇಷಗಳು ಆಶ್ರಯಿಸಿಕೊಂಡಿರುವುವು ॥೫೪॥

55. ವಸ್ತುತಃ ಈ ಬ್ರಹ್ಮಪರಮಾಣುವು ತಟಸ್ಥವಾಗಿರುವುದು; ಸರ್ವಜಗತ್ತಿನಲ್ಲಿಯೂ, ಕರ್ತೃತ್ವಭೋಕ್ತೃತ್ವಾದಿಗಳ ಸಂಪರ್ಕವು ಇದಕ್ಕೆ ಸ್ವಲ್ಪವೂ ಇಲ್ಲ ॥೫೫॥

ಹೀಗಿದ್ದರೂ, ಇಂತಹ ಬ್ರಹ್ಮಪರಮಾಣುವಿನ ದೆಸೆಯಿಂದ ಈ ಜಗತ್ಸತ್ತೆಯುದಯಿಸುವುದು. ಅದುಕಾರಣ, ಕ್ರಿಯಾದಿಸಂಬಂಧವಿಲ್ಲದಿದ್ದರೂ—ಆ ಬ್ರಹ್ಮಪರಮಾಣುವಿಗೆ ಕರ್ತೃತ್ವಭೋಕ್ತೃತ್ವಗಳುಂಟಾಗಿರುವಂತೆ ತೋರುವುದು ॥೫೬॥

ಕ್ರಿಯಾಭೋಗಾದಿಸಂಬಂಧವೇಕಿಲ್ಲವೆಂದರೆ,—ಕ್ರಿಯಾದಿಗಳಿಗೆ ವಿಷಯವಾದುದೇ ಅಸತ್ಯವಾಗಿರುವುದು. ಈ ಜಗತ್ತಲ್ಲವೆ ಕ್ರಿಯಾದಿವಿಷಯವಾಗಬೇಕಾದುದು ! ಇದು, ಯಾರಿಂದಲೂ ಯಾವಾಗಲೂ ಯಾವುದೊಂದು ಪದಾರ್ಥವಾಗಿಯೂ ಮಾಡಲ್ಪಟ್ಟೇ ಇಲ್ಲ; ಲಯಹೊಂದುವುದೂ ಯಾವುದೂ ಇಲ್ಲ. ಹೀಗಿರುವುದರಿಂದ, ಇಂತಹ ಜಗತ್ತಿನ ಕ್ರಿಯೆಯಾಗಲೀ—ಭೋಗವಾಗಲೀ—ಸುತರಾಂ ಅಸಂಭವವೆಂದು ಸ್ಪಷ್ಟವಾಯ್ತು. ‘ ಹಾಗಾದರೆ, ವೇದಾಂತಗಳಲ್ಲಿ ದೃಶ್ಯವನ್ನು ಖಂಡಿಸುವುದು ಏತಕ್ಕೆ? ದೃಶ್ಯವಿದ್ದರಲ್ಲವೆ ಅದನ್ನು ಬಿಟ್ಟುಬಿಡಬೇಕೆಂದು ಖಂಡಿಸಬೇಕು ! ಅದೇ

ವಿಲೀಯತೇ ಚ ನೋ ಕಿಞ್ಚಿತ್ ಮಾನುಷ್ಯಾದ್ದೃಶ್ಯಖಣ್ಡನಮ್ ॥೫೭॥
ಸರ್ವಂ ಸಮಸಮಾಭಾಸಂ ಇದಮಾಕಾಶಕೋಶಕಮ್ ।
ಜಗತ್ತ್ರಯೋಪಶಬ್ದಂ ಚ ವಿದ್ಧ್ಯನಾದ್ಯಂ ನಿಶಾಚರಿ ॥೫೮॥
ಚಿದಣುರ್ದೃಶ್ಯಸಿದ್ಧ್ಯರ್ಥಂ ಆನ್ತರೀಂ ಚಿಚ್ಛಮತ್ಕೃತಿಮ್ ।
ಬಹೀರೂಪತಯಾ ಧತ್ತೇ ಸ್ವಾತ್ಮನಿ ಪರಿಸಂಸ್ಥಿತಾಮ್ ॥೫೯॥
ಏತದ್ಬಹಿಷ್ಟಮನ್ತಸ್ಸ್ಥಂ ಅಸ್ತಿ ಶಬ್ದೇ ನ ವಸ್ತುನಿ ।
ಉಪದೇಶಾಯ ಸತ್ವಾನಾಂ ಚಿದ್ರೂಪತ್ವಾಜ್ಜಗತ್ತ್ರಯೇ ॥೬೦॥
ದ್ರಷ್ಟಾಽದೃಷ್ಟಂ ಪದಂ ಗಚ್ಛನ್ ಆತ್ಮಾನಂ ಸಂಪ್ರಪಶ್ಯತಿ ।
ನೇತ್ರದೃಶ್ಯಾಭಿಪಾತೀವ ಸದೇವಾಸದಿವ ಸ್ಥಿತಮ್ ॥೬೧॥

ಇಲ್ಲವೆಂದು ಹೇಳುವಾಗ ಅದರ ಖಂಡನೆಯೇತಕ್ಕೆ? ' ಎಂದು ಶಂಕಿಸಬಹುದಲ್ಲವೆ ! ಮನುಷ್ಯವ್ಯವಹಾರಸಿದ್ಧವಾಗಿ ಈ ದೃಶ್ಯವೆಂಬುದೊಂದು ತೋರುತಿರುವುದು. ಇದು ಸುತರಾಂ ಅಸತ್ಯವೆಂದು ಜ್ಞಾನದೃಢವಾಗುವುದಕ್ಕೋಸ್ಕರ, ವೇದಾಂತದಲ್ಲಿ ದೃಶ್ಯವನ್ನು ಖಂಡಿಸಿರುವರೆಂದು ತಿಳಿಯಬೇಕು॥

ಎಲೌ ರಾಕ್ಷಸಿ! ವಾಸ್ತವ್ಯವಾಗಿ ಇರುವುದಾವುದೆಂದರೆ,—ಜಗತ್ತೆಂಬ ಶಬ್ದದಿಂದ ವ್ಯವಹರಿಸಲ್ಪಡುತಿರುವ ಈ ಸಮಸ್ತವೂ ಕೂಡ, ಸರ್ವದಾ ಸಮವಾಗಿ(ನಿರ್ವಿಕಾರವಾಗಿ)ರುವ ಆ ಪರಬ್ರಹ್ಮಾಕಾಶವೆಂದು ತಿಳಿಯುವಳಾಗು ॥೫೮॥

56. ಚಿತ್ಪರಮಾಣುವು, ದೃಶ್ಯವು ಸಿದ್ಧಿಸುವುದಕ್ಕಾಗಿ, ತನ್ನೊಳಗೆ ನೆಲೆಸಿರುವ ಮಾಯಾಶಕ್ತಿಯನ್ನು, ಬಾಹ್ಯಪ್ರಪಂಚರೂಪದಿಂದ ಧರಿಸಿರುವುದು ॥೫೯॥

'ಅನೇಕ ಶ್ರುತಿಗಳಲ್ಲಿ ಅಂತರಬಾಹ್ಯಗಳೆಂಬ ಭೇದವೇ ಇಲ್ಲವೆಂದು ಸ್ಪಷ್ಟವಾಗಿ ಹೇಳಿರುವಾಗ, ತನ್ನೊಳಗಿರುವ ಶಕ್ತಿಯನ್ನು ಬಾಹ್ಯಪ್ರಪಂಚರೂಪೇಣ ಧರಿಸಿರುವುದೆಂದು ಹೇಳುವುದು ವಿರುದ್ಧವಲ್ಲವೆ!' ಎಂದು ಕೇಳಿದರೆ,-ಬಹಿಸ್ಸ್ಥಿತವಾದುದೆಂದೂ ಅಂತಸ್ಸ್ಥಿತವಾದುದೆಂದೂ ಜಗತ್ತ್ರಯದಲ್ಲಿ ಪ್ರಾಣಿಗಳ ಉಪದೇಶಕ್ಕಾಗಿ ಶಬ್ದಮಾತ್ರದಲ್ಲಿ ಇರುವುದಲ್ಲದೆ, ಅರ್ಥದಲ್ಲಿಲ್ಲ. ವಸ್ತುತಃ ಅವೆಲ್ಲವೂ ಚಿದ್ರೂಪಗಳೇ ಸರಿ ॥೬೦॥

ಎಲೌ ಕರ್ಕಟಿ! ಈಗ ಆ ಪ್ರಶ್ನೆಯಲ್ಲಿಯೇ ಅವಶಿಷ್ಟಾಂಶಕ್ಕುತ್ತರವನ್ನು ಕೇಳುವವಳಾಗು:- ಆತ್ಮನು, ತಾನು ನಿತ್ಯವಾಗಿ ಅಪರೋಕ್ಷನಾಗಿದ್ದರೂ, ಅವಿದ್ಯಾವರಣವಿಲ್ಲದಾಗ ಅಂತಃಕರಣರೂಪದಿಂದ ಸ್ಫುರಿಸುತ, ಆ ಅಂತಃಕರಣಾಭಿಮಾನದಿಂದ ದ್ರಷ್ಟೃತ್ವ (ನೋಡತಕ್ಕವನ ಭಾವ)ವನ್ನು ಹೊಂದಿ, ಬಹಿರ್ವಿಷಯತ್ವೇನ ಆವೃತವಾಗಿರುವುದರಿಂದ ಆತ್ಮತ್ವೇನ ಕಾಣಿಸದಿರುವ ಪದವನ್ನು ಹೊಂದಿದವನಾಗಿ, ನೇತ್ರಮಾರ್ಗದಿಂದ ದೃಶ್ಯವನ್ನು ಗ್ರಹಿಸುವನಂತೆ ಕಾಣುತ, ಆತ್ಮಪದಾರ್ಥವನ್ನೇ ಘಟಾದಿರೂಪವಾಗಿರುವಂತೆ ನೋಡುತಿರುವನು. ಇಂತಹ ಸ್ಥಿತಿಯಲ್ಲಿಯೂ, ಆತ್ಮನು ತನ್ನ ಚಿಚ್ಛಕ್ತಿಯಿಂದಲೇ ತನ್ನನ್ನು ತಾನು ನೋಡುವನಲ್ಲದೆ, ನೇತ್ರದಿಂದಲ್ಲ. ನೇತ್ರವು ಕೇವಲ ದ್ವಾರಮಾತ್ರವಾದುದೇ ಹೊರತು, ಅದು ದರ್ಶನದಲ್ಲಿ ಕರ್ತೃವಾದುದಲ್ಲ. ಅದುಕಾರಣವೇ, ಪ್ರಶ್ನೆಯಲ್ಲಿ ನೇತ್ರರಹಿತನೆಂದು ಹೇಳಿರುವುದು ಸಂಗತವಾಗುವುದು ॥೬೧॥

ನ ಚ ಗಚ್ಛತಿ ದೃಶ್ಯತ್ವಂ ದ್ರಷ್ಟಾ ಹ್ಯಸದವಾಸ್ತವಮ್ ।
ಆತ್ಮನ್ಯೇವ ನ ಯತ್ ಕಿಞ್ಚಿತ್ ತತ್ತಾಮೇತಿ ಕಥಂ ಪರಃ ॥೬೨॥
ದೃಗೇವ ಲೋಚನೇ ಸಾ ಚ ವಾಸನಾನ್ತಂ ನಿಜಂ ವಪುಃ ।
ಬಹೀರೂಪತಯಾ ದೃಶ್ಯಂ ಕೃತ್ವಾ ದ್ರಷ್ಟೃತಯೋದಿತಾ ॥೬೩॥
ನ ವಿನಾ ದ್ರಷ್ಟೃತಾಮಸ್ತಿ ದೃಶ್ಯಸತ್ತಾ ಕಥಞ್ಚನ ।
ಪಿತೃತೇವ ವಿನಾ ಪುತ್ರಂ ದ್ವಿತೇವೈಕ್ಯಪದಂ ವಿನಾ ॥೬೪॥
ದ್ರಷ್ಟೃವ ದೃಶ್ಯತಾಮೇತಿ ನ ದ್ರಷ್ಟೃತ್ವಂ ವಿನಾಸ್ತಿ ತತ್ ।
ವಿನಾ ಪಿತ್ರೇವ ತನಯೋ ವಿನಾ ಭೋಕ್ತ್ರೇವ ಭೋಗ್ಯತಾ ॥೬೫॥
ದ್ರಷ್ಟುರ್ದೃಶ್ಯವಿನಿರ್ಮಾಣೇ ಚಿತ್ತ್ವಾದಸ್ತ್ಯೇವ ಶಕ್ತತಾ ।
ಕನಕಸ್ಯಾವದಾತಸ್ಯ ಕಟಕಾದಿಕೃತಾವಿವ ॥೬೬॥

ಈಗ ನಾನು ಹೇಳಿದ 'ಸದೇವಾಸದಿವ ಸ್ಥಿತಂ' ಎಂಬ ವಿಷಯವನ್ನು ಇನ್ನೂ ಸ್ಪಷ್ಟವಾಗಿ ಹೇಳುವೆನು :—ದ್ರಷ್ಟೃವಾಗಿರುವ ಈ ಆತ್ಮನು, ಅಸತ್ಯವಾಗಿ ಅವಾಸ್ತವವಾಗಿರುವ ದೃಶ್ಯತ್ವವನ್ನು ಹೊಂದುವನೆಂಬುದೂ ಇಲ್ಲ. ಏಕೆಂದರೆ:—ಯಾವುದೊಂದು ಗುಣವು ಸ್ವರೂಪತಃ ಇಲ್ಲವೇಇಲ್ಲವೋ, ಆ ಗುಣರೂಪತ್ವವನ್ನು ಮತ್ತೊಂದು ಪದಾರ್ಥವು ಹೊಂದುವ ಬಗೆ ಹೇಗೆ? ದೃಶ್ಯತ್ಕವು ಸ್ವರೂಪತಃ ಅಭಾವಪದಾರ್ಥವಾಗಿರುವುದರಿಂದ, ಅಂತಹ ದೃಶ್ಯತ್ವವನ್ನು ಆತ್ಮನು ಹೊಂದುವನೆಂಬುದೂ ತತ್ವದೃಷ್ಟ್ಯಾ ಅಸಂಗತವೇ ಸರಿ. ಸತ್ಯವಾದುದು ಅಸದ್ರೂಪವನ್ನು ಹೊಂದುವುದೆಂಬುದು ಒಪ್ಪತಕ್ಕುದಲ್ಲವಷ್ಟೆ! ॥೬೨॥

ಎಲೌ! ಕರ್ಕಟಿ! 'ಚಕ್ಷುಷಶ್ಚಕ್ಷುಃ' ಇತ್ಯಾದಿ ಶ್ರುತಿಪ್ರಮಾಣಾನುಸಾರವಾಗಿ, ಕೇವಲ ದ್ವಾರಮಾತ್ರವಾಗಿರುವ ಚರ್ಮಚಕ್ಷುಸ್ಸು ನೇತ್ರವೆನ್ನಿಸಿಕೊಳ್ಳುವುದಿಲ್ಲ. ಅಪರೋಕ್ಷವಾದ ಆತ್ಮಚೈತನ್ಯವೇ ನೇತ್ರವಾಗಿರುವುದು. ಇಂತಹ ಚೈತನ್ಯವು, ಆವಿರ್ಭಾವ ಮೊದಲುಗೊಂಡು ತಿರೋಭಾವವುಂಟಾಗುವವರೆಗೂ ತನ್ನ ಆಕಾರವನ್ನೇ ಬಹಿರ್ಭೂತವಾದ ದೃಶ್ಯವನ್ನಾಗಿ ಮಾಡಿಕೊಂಡು, ತಾನು ದ್ರಷ್ಟೃವಾಗಿ ಕಾಣಿಸಿಕೊಳ್ಳುತಿರುವುದು. ಹೀಗೆ ದೃಶ್ಯವಿಲ್ಲದೆ ದ್ರಷ್ಟೃತ್ವವು ಸಿದ್ಧಿಸುವುದಿಲ್ಲವಾದುದರಿಂದಲೂ, ದೃಶ್ಯವೆಂಬುದು ಮಿಥ್ಯಾಭೂತವಾದುದರಿಂದಲೂ, ಆತ್ಮನಿಗೆ ದ್ರಷ್ಟೃತ್ವವೆಂಬುದೂ ಮಿಥ್ಯಾಭೂತವಾದುದೆಂದು ಸ್ಪಷ್ಟವಾಗುವುದು ॥೬೩॥

ಹೀಗೆಯೇ, ಪುತ್ರನಿಲ್ಲದೆ ಪಿತೃವೆಂಬ ವ್ಯವಹಾರವು ಸಿದ್ಧಿಸದಿರುವಂತೆಯೂ, ಏಕತ್ವವಿಲ್ಲದೆ ದ್ವಿತ್ವವಿಲ್ಲದಿರುವಂತೆಯೂ, ದ್ರಷ್ಟೃತ್ವವಿಲ್ಲದೆ ದೃಶ್ಯತ್ವವೂ ಎಂದಿಗೂ ಸಿದ್ಧಿಸುವುದಿಲ್ಲ ॥೬೪॥

ಮತ್ತು, ತಂದೆಯಿಲ್ಲದೆ ಮಗನೆಂಬ ವ್ಯವಹಾರವು ಸಿದ್ಧಿಸದಿರುವಂತೆಯೂ, ದೃಶ್ಯತ್ವವಿಲ್ಲದೆ ದ್ರಷ್ಟೃತ್ವವೂ ಸಿದ್ಧಿಸುವುದಿಲ್ಲ. ಪ್ರಕೃತಸಂದರ್ಭದಲ್ಲಿ, ದ್ರಷ್ಟೃವೇ ದೃಶ್ಯತ್ವವನ್ನು ಹೊಂದುವನೆಂದು ಹೇಳಿಯೇ ಇರುವೆನು ॥೬೫॥

ನಿರ್ದೋಷವಾದ ಚಿನ್ನಕ್ಕೆ ಕಡಗ ಮುಂತಾದುವುಗಳ ನಿರ್ಮಾಣದಲ್ಲಿ ಸಾಮರ್ಥ್ಯವಿರುವಂತೆ, ಕೇವಲ ಚಿತ್ಪದಾರ್ಥವಾಗಿರುವಕಾರಣ, ದ್ರಷ್ಟೃವಿಗೆ ದೃಶ್ಯನಿರ್ಮಾಣ ವಿಷಯದಲ್ಲಿ ಸಾಮರ್ಥ್ಯವಿದ್ದೇ ಇರುವುದು ॥೬೬॥

ದೃಶ್ಯಸ್ಯ ದ್ರಷ್ಟೃನಿರ್ಮಾಣೇ ಜಡತ್ವಾನ್ನಾಸ್ತಿ ಶಕ್ತತಾ ।
ಕಟಕಸ್ಯ ತು ಹೈಮಸ್ಯ ಯಥಾ ಕನಕನಿರ್ಮಿತೌ ॥೬೭॥
ಚೇತನಾದ್ದೃಶ್ಯನಿರ್ಮಾಣಂ ಚಿತ್ ಕರೋತ್ಯಸದೇವ ಸತ್ ।
ಅಕಾರಣಂ ಮೋಹಹೇತುಂ ಹೇಮೇವ ಕಟಕಭ್ರಮಮ್ ॥೬೮॥
ಕಟಕತ್ವಾವಭಾಸೇ ಹಿ ಯಥಾ ಹೇಮ್ನೋ ನ ಹೇಮತಾ ।
ಸತ್ಯೇವ ಪ್ರಕಚತ್ಯೇವಂ ದ್ರಷ್ಟೃದೃಶ್ಯಸ್ಥಿತೌ ವಪುಃ ॥೬೯॥
ದ್ರಷ್ಟಾ ದೃಶ್ಯತಯಾ ತಿಷ್ಠನ್ ದ್ರಷ್ಟೃತಾಮುಪಜೀವತಿ ।
ಸತ್ಯಾಂ ಕಟಕಸಂವಿತ್ತೌ ಹೇಮ ಕಾಞ್ಚನತಾಮಿವ ॥೭೦॥
ಏಕಸ್ಮಿನ್ ಪ್ರತಿಭಾಸೇ ಹಿ ನ ಸತ್ತಾ ದ್ರಷ್ಟೃದೃಶ್ಯಯೋಃ ।
ಪುಂಪ್ರತ್ಯಯಪ್ರಕಚನೇ ಕ್ವ ಪಶುಪ್ರತ್ಯಯೋದಯಃ ॥೭೧॥

'ದೃಶ್ಯವೇ ದ್ರಷ್ಟೃವನ್ನೇಕೆ ನಿರ್ಮಿಸಬಾರದು?' ಎಂದರೆ,—ಸುವರ್ಣಮಯವಾದ ಕಡಗವು ಚಿನ್ನವನ್ನು ನಿರ್ಮಿಸಲಾರದಾಗಿರುವಂತೆ, ದೃಶ್ಯವು ಜಡವಾಗಿರುವುದರಿಂದ ದ್ರಷ್ಟೃವನ್ನು ನಿರ್ಮಿಸುವುದರಲ್ಲಿ ಶಕ್ತವಾಗಲಾರದು ॥೬೭॥

ಚಿತ್ತಾದರೋ,—ಚೇತ್ಯವನ್ನು ಪ್ರಕಾಶಪಡಿಸುವುದೇ ಮುಂತಾದ ಕರ್ಮಗಳಲ್ಲಿ ಸಮರ್ಥವಾಗಿರುವುದರಿಂದ, ಸುವರ್ಣವು ಕಟಕಭ್ರಾಂತಿಯನ್ನುಂಟುಮಾಡುವಂತೆ, ಕಾರಣರಹಿತವಾಗಿ-ಕೇವಲ ಮೋಹಜನ್ಯವಾಗಿ-ಅಸತ್ಯವಾಗಿದ್ದರೂ ಸತ್ಯದಂತೆ ಭಾಸಿಸುವ-ದೃಶ್ಯನಿರ್ಮಾಣವನ್ನುಂಟು ಮಾಡತಕ್ಕುದಾಗಿರುವುದು ॥೬೮॥

'ಹೀಗೆ ದ್ರಷ್ಟ್ರವೇ ದೃಶ್ಯವಾಗಿದ್ದಪಕ್ಷದಲ್ಲಿ, ಈ ದೃಶ್ಯವು ದ್ರಷ್ಟೃರೂಪವಾಗಿಯೇ ಏತಕ್ಕೆ ಕಾಣಿಸಬಾರದು?' ಎಂದರೆ,—ಕಡಗವೆಂದು ಕಾಣಿಸಿಕೊಳ್ಳುವಾಗ ಆ ಸುವರ್ಣವನ್ನು ಸುವರ್ಣವೆಂದು ಹೇಗೆ ವ್ಯವಹರಿಸುವುದಿಲ್ಲವೋ, ಹೀಗೆಯೇ ದ್ರಷ್ಟೃದೃಶ್ಯಗಳ ವಿಷಯದಲ್ಲಿಯೂ ಇರುವುದೆಂದು ತಿಳಿಯಬೇಕು ॥೬೯॥

'ಹಾಗಾದರೆ ದ್ರಷ್ಟೃವು ಸ್ಫುರಿಸದೆಯೇ ಇರುವಾಗ, ಆ ದ್ರಷ್ಟೃವಿನ ಅಪೇಕ್ಷೆಯೇ ಇಲ್ಲದೆ ದೃಶ್ಯವಿರಬಹುದಲ್ಲವೆ!' ಎಂದರೆ,—ಅದೂ ಸಂಭವಿಸುವುದಿಲ್ಲ. ಕಟಕದಶೆಯನ್ನು ಹೊಂದಿದ್ದರೂ ಸುವರ್ಣವು ತನ್ನ ಸುವರ್ಣತ್ವವನ್ನು ಬಿಡದಿರುವಂತೆ, ದೃಶ್ಯರೂಪನಾಗಿ ಕಾಣಿಸುತಿರುವ ದ್ರಷ್ಟೃವು ತನ್ನ ದ್ರಷ್ಟೃತ್ವವನ್ನು ಬಿಡದೆಯೇ ಇರುವನು ॥೭೦॥

'ದ್ರಷ್ಟೃತ್ವವೂ ದೃಶ್ಯತ್ವವೂ ಜತೆಯಲ್ಲೇ ಕಾಣಿಸಬಹುದಲ್ಲವೆ!' ಎಂದರೆ,—ಅದೂ ಉಪಪನ್ನವಲ್ಲ. ದೂರದಲ್ಲಿರುವ ಒಂದು ಪದಾರ್ಥವನ್ನು ಕಂಡು—ಇದು ಪಶುವೋ ಮನುಷ್ಯನೋ ಎಂದು ಸಂದೇಹಪಡುವಾಗ, ಪುರುಷನೆಂದು ತೋರುತಿರುವಕಾಲದಲ್ಲಿ ಪಶುವೆಂದು ಪ್ರತ್ಯಯವುಂಟಾಗುವುದೆ? ಹಾಗೆಯೇ ಪಶುವೆಂಬ ಪ್ರತ್ಯಯವಿರುವಾಗ ಪುರುಷಪ್ರತ್ಯಯವೂ ಇರುವುದಿಲ್ಲವಷ್ಟೆ! ಅಂತು, ಎರಡು ಧರ್ಮಗಳು ಒಂದೇಕಾಲದಲ್ಲಿ ಉದಯಿಸುವುದು ಅನುಪಪನ್ನವಲ್ಲವೆ! ಹೀಗೆ ದ್ರಷ್ಟೃತ್ವ ದೃಶ್ಯತ್ವಗಳೆರಡೂ ಒಟ್ಟಿಗೆ ಸ್ಫುರಿಸುವುದು ಅನುಪಪನ್ನವೆಂದು ತಿಳಿಯಬೇಕು ॥೭೧॥

ದೃಶ್ಯಂ ಪಶ್ಯನ್ ಸ್ವಮಾತ್ಮಾನಂ ನ ದ್ರಷ್ಟಾ ಸಮ್ಪ್ರಪಶ್ಯತಿ ।
ದ್ರಷ್ಟುರ್ಹಿ ದೃಶ್ಯತಾಪತ್ತೌ ಸತ್ತಾಽಸತ್ತೇವ ತಿಷ್ಠತಿ ॥೨೦॥

ಬೋಧಾದ್ಗಳಿತದೃಶ್ಯಸ್ಯ ದ್ರಷ್ಟುಃ ಸತ್ತೈವ ಭಾಸತೇ ।
ಅಬುದ್ಧೇ ಕಟಕೇ ಸ್ವಸ್ಯ ಹೇಮ್ನೋಽಕಟಕತಾ ಯಥಾ ॥೨೨॥

ದೃಶ್ಯೇ ಸತ್ಯಸ್ತಿ ವೈ ದ್ರಷ್ಟಾ ದೃಶ್ಯಂ ದ್ರಷ್ಟರಿ ಭಾಸತೇ ।
ದ್ವಯೋನ ಚ ವಿನಾ ನೈಕಂ ನೈಕಮಪ್ಯಸ್ತಿ ಚಾನಯೋಃ ॥೨೪॥

ಸರ್ವಂ ಯಥಾವದ್ವಿಜ್ಞಾಯ ಶುದ್ಧಸಂವಿನ್ಮಯಾತ್ಮನಾ ।
ವಾಚಾಮವಿಷಯಂ ಸ್ವಚ್ಛಂ ಕಿಞ್ಚಿದೇವಾವಶಿಷ್ಯತೇ ॥೨೫॥

ಆತ್ಮಾನಂ ದರ್ಶನಂ ದೃಶ್ಯಂ ದೀಪೇನೇವಾವಭಾಸಿತಮ್ ।
ಕೃತಂ ಚ ಸರ್ವಮೇತೇನ ಚಿನ್ಮಾತ್ರಪರಮಾಣುನಾ ॥೨೬॥

ಮಾತೃಮಾನಪ್ರಮೇಯಾಖ್ಯಂ ಬುಧೋ ನಿಗಿರತಿ ತ್ರಯಮ್ ।
ಹೇಮೇವ ಕಟಕಾದಿತ್ವಂ ಅಸನ್ಮಯಮುಪಸ್ಥಿತಮ್ ॥೨೭॥

ದ್ರಷ್ಟೃವು ದೃಶ್ಯವನ್ನು ನೋಡುತಿರುವಾಗ, ತನ್ನ ದ್ರಷ್ಟೃತ್ವವನ್ನು ಕಾಣದೆಯೇ ಇರುವನು. ದ್ರಷ್ಟೃವಿಗೆ ದೃಶ್ಯತಾವಸ್ಥೆಯುಂಟಾಗಿರುವಾಗ, ದ್ರಷ್ಟೃತ್ವವೆಂಬುದು ಇಲ್ಲದಂತೆಯೇ ಆಗುವುದು ॥೨೧॥

57. ಎಲೌ ಕರ್ಕಟಿ! ಈಗ ಮುಂದಣ ಪ್ರಶ್ನೆಗೆ ಸಮಾಧಾನವನ್ನು ಕೇಳುವಳಾಗು:— ಜ್ಞಾನೋದಯವುಂಟಾದಬಳಿಕ ದೃಶ್ಯವು ಲಯಹೊಂದಿಬಿಡುವುದು. ಆಗ, ಸುವರ್ಣವನ್ನು ಕಟಕವೆಂದು ತಿಳಿಯದಿದ್ದಾಗ ಅದಕ್ಕೆ ಕಟಕತ್ವ ಹೋಗಿ ಸುವರ್ಣತ್ವಮಾತ್ರವೇ ಸ್ಫುರಿಸುವಂತೆ, ಈ ದ್ರಷ್ಟೃವಿನ ದ್ರಷ್ಟೃತ್ವವೊಂದೇ ಭಾಸಿಸುತ್ತಿರುವುದು ॥೨೩॥

ದೃಶ್ಯವಿದ್ದರೆಯೇ ದ್ರಷ್ಟೃವಿರುವನು ; ದ್ರಷ್ಟೃವಿದ್ದರೆಯೇ ದೃಶ್ಯವು ಭಾಸಿಸುವುದು. ಬೋಧಾನಂತರದಲ್ಲಿ ದೃಶ್ಯಜ್ಞಾನರಹಿತನಾದವನಿಗೆ, ಛತ್ರಿಯಿಲ್ಲದಾಗ ನೆಳಲೂ ಇಲ್ಲವಾಗುವಂತೆ, ದೃಶ್ಯಜ್ಞಾನವಿಲ್ಲದಕಾರಣ ದ್ರಷ್ಟೃಜ್ಞಾನವೂ ಲಯಹೊಂದುವುದು. ಅಂತು, ದ್ರಷ್ಟೃದೃಶ್ಯಜ್ಞಾನಗಳಲ್ಲೊಂದೂ ಇರುವುದಿಲ್ಲ ॥೨೪॥

ಆಗ, ಸಮಸ್ತವೂ ಶುದ್ಧಚಿನ್ಮಯರೂಪವೆಂದು ತತ್ವಜ್ಞಾನವುಂಟಾದ ಬಳಿಕ, ವಾಕ್ಕಿಗೆ ಅಗೋಚರವಾಗಿ ನಿರ್ಮಲವಾಗಿರುವ ಸತ್ಪದಾರ್ಥವೊಂದೇ ಅವಶಿಷ್ಟವಾಗುವುದು ॥೨೫॥

58. ಈ ಚಿತ್ಪರಮಾಣುವೇ, ತನ್ನನ್ನೂ (ದ್ರಷ್ಟೃ) ದರ್ಶನವನ್ನೂ ದೃಶ್ಯವನ್ನೂ ಕೂಡ, ದೀಪದಂತೆ ಪ್ರಕಾಶಪಡಿಸತಕ್ಕುದು. 59. ಮತ್ತು, ಸುವರ್ಣವು ಕಟಕಾದಿಜ್ಞಾನವನ್ನು ಕಲ್ಪಿಸುವಂತೆ, ಮಾತೃಮೇಯಮಾನರೂಪವಾದ ಸಮಸ್ತವನ್ನೂ ಅದೇ ಕಲ್ಪಿಸಿರುವುದು. ತತ್ವಜ್ಞಾನಿಯಾದವನು, ಇದೆಲ್ಲವನ್ನೂ ತನ್ನೊಳಗೆ ಅಡಗಿಸಿಕೊಂಡುಬಿಡುವನು. (ಇದೆಲ್ಲವೂ ಇಲ್ಲವೆಂದು ಸ್ಪಷ್ಟವಾಗಿ ತಿಳಿದುಕೊಳ್ಳುವನು) ॥೨೬—೨೭॥

ಯಥಾ ನ ಜಲಭೂವಾಯ್ವಾದೇಃ ಪೃಥಕ್ ಕಿಞ್ಚಿನ್ಮನಾಗಪಿ ।
ತಥೈತಸ್ಮಾತ್ ಸ್ವಭಾವಾಣೋಃ ನ ಕಿಞ್ಚಿತ್ ಪೃಥಗಸ್ತಿ ಹಿ ॥೫೮॥
ಸರ್ವಗಾನುಭವಾತ್ಮತ್ವಾತ್ ಸರ್ವಾನುಭವರೂಪತಃ ।
ಏಕತ್ವಾನುಭವನ್ಯಾಯೇ ರೂಢೇ ಸರ್ವೈಕತಾಸ್ಯ ಹಿ ॥೫೯॥
ಅಸ್ಯೇಚ್ಛಯಾ ಪೃಥಙ್ನಾಸ್ತಿ ವೀಚಿತೇವ ಮಹಾಮ್ಭಸಃ ।
ಇಚ್ಛಾನುರೂಪಸಮ್ಪತ್ತೇಃ ಭಾವಿತಾರ್ಥೈಕತಾ ಕಿಲ ॥೬೦॥
ದಿಕ್ಕಾಲಾದ್ಯನವಚ್ಛಿನ್ನಃ ಪರಮಾತ್ಮಾಸ್ತಿ ಕೇವಲಃ ।
ಸರ್ವಾತ್ಮತ್ವಾತ್ ಸ ಸರ್ವಾತ್ಮಾ ಸರ್ವಾನುಭವತಃ ಸ್ವತಃ ॥೬೧॥
ಸನ್ನೇಷ ಚೇತನಾತ್ಮತ್ವಾತ್ ದರ್ಶನಾನವಬೋಧತಃ ।
ದ್ವೈತೈಕ್ಯೇ ನಾತ್ರ ವಿದ್ಯೇತೇ ಸರ್ವರೂಪೇ ಮಹಾತ್ಮನಿ ॥೬೨॥
ಯದಿ ಕಶ್ಚಿದ್ದ್ವಿತೀಯಃ ಸ್ಯಾತ್ ತದೈಕಸ್ಯೈಕತಾ ಭವೇತ್ ।

---

60. ಜಲ ಪೃಥಿವಿ ಮುಂತಾದ ಪಂಚಭೂತಗಳಿಗಿಂತ ಪೃಥಕ್ಕಾಗಿ ಸ್ವಲ್ಪವೂ ಭೌತಿಕಪದಾರ್ಥವು ಹೇಗಿಲ್ಲವೋ, ಹಾಗೆ ಈ ಸ್ವಯಂಭವವಾದ ಪರಮಾಣುವಿಗಿಂತ ಪೃಥಕ್ಕಾದ ಭೌತಿಕವಾವುದೂ ಇಲ್ಲ ॥೫೮॥

ಅದು ಹೇಗೆನ್ನುವೆಯೋ,— ಈ ಆತ್ಮನು, ಸಮಸ್ತರ ಅನುಭವರೂಪನಾಗಿಯೂ ಸಮಸ್ತವಾದ ಅನುಭವರೂಪನಾಗಿಯೂ ಇರುವುದರಿಂದ, ಅದ್ವಿತೀಯನಾಗಿರುವನು. ಹೀಗೆ ಈ ಅನುಭವವು ಚೆನ್ನಾಗಿ ರೂಢವಾದ ಬಳಿಕ, ಇವನು ಸಮಸ್ತ ಪದಾರ್ಥಕ್ಕೂ ಪೃಥಗ್ಭೂತನಲ್ಲವೆಂಬುದು ಗೊತ್ತಾಗುವುದು ॥೫೯॥

61. ಎಲೌ! ಕರ್ಕಟಿ! 'ಕಸ್ಯೇಚ್ಛಯಾ ಪೃಥಕ್ ಚಾಸ್ತಿ' ಎಂದು ಕೇಳಿರುವೆಯಲ್ಲವೆ! ಆ ಪ್ರಶ್ನೆಯೇ ಸಂಗತವಲ್ಲವೆಂದು ತೋರುವುದು. ಜಲಸಮುದಾಯವನ್ನು ಬಿಟ್ಟು ತರಂಗತ್ವವಿಲ್ಲದಿರುವಂತೆ, ಈ ಆತ್ಮನ ಇಚ್ಛೆಯಿಂದ ಪೃಥಕ್ಪದಾರ್ಥವಿಲ್ಲವೇ ಇಲ್ಲ. ಏತಕ್ಕೆಂದರೆ,— ಪ್ರಪಂಚದಲ್ಲಿ, ಇಚ್ಛಾನುಗುಣವಾಗಿ ಫಲಸಿದ್ಧಿಯಾಗುವುದಕ್ಕೂ, ಇಚ್ಛೆಯಲ್ಲಿ ಪರಿಭಾವಿಸಲ್ಪಟ್ಟ ಪದಾರ್ಥಕ್ಕೂ, ಯಾವ ಭೇದವೂ ಇಲ್ಲವಲ್ಲವೆ! ಅದುಕಾರಣ, ಆತ್ಮನು ತನ್ನಿಚ್ಛೆಯಲ್ಲಿ ಭಾವಿತವಾದ ಪದಾರ್ಥಾಕಾರವಾಗಿ ಭಾಸಿಸುವನಾದುದರಿಂದ, ಇವನಿಚ್ಛೆಯಿಂದ ಪೃಥಕ್ಕಾಗಿ ಪದಾರ್ಥವಿರುವುದೆಂಬುದು ಉಪಪನ್ನವಾಗಿ ತೋರುವುದಿಲ್ಲ ॥೬೦॥

62. ದಿಕ್ಕಾಲಾದಿಗಳಿಂದ ಪರಿಚ್ಛಿನ್ನವಿಲ್ಲದೆ ಕೇವಲವಾಗಿರುವುದು ಈ ಆತ್ಮಪದಾರ್ಥವೇಯೇ. ಇವನು, ಸರ್ವರಿಗೂ ಆತ್ಮರೂಪನಾಗಿರುವುದರಿಂದಲೂ, ಸ್ವತಃ ಸರ್ವಾನುಭವರೂಪನಾಗಿರುವುದರಿಂದಲೂ ಕೂಡ, ಸಮಸ್ತವೂ ಇವನಿಗಿಂತ ಅಪೃಥಕ್ಕಾಗಿ ಇರುವುದು ॥೬೧॥

ಸರ್ವಚೇತನಗಳಿಗೂ ಆತ್ಮರೂಪನಾಗಿರುವುದರಿಂದ, ಈ ಪರಮಾತ್ಮನು ಸದ್ರೂಪನಾದವನು; ಚಕ್ಷುರಾದಿಗಳಿಂದ ತಿಳಿಯಲಸಾಧ್ಯನಾಗಿರುವುದರಿಂದ, ಸರ್ವರೂಪನಾದ ಈ ಪರಮಾತ್ಮನೊಳಗೆ ದ್ವಿತ್ವವೂ ಏಕತ್ವವೂ ಇರುವುದಿಲ್ಲ ॥೬೨॥

ಈಗ ಇಲ್ಲಿ ಒಂದು ವಿಧವಾಗಿ ಆಕ್ಷೇಪಿಸಬಹುದಲ್ಲವೆ! ಹೇಗೆಂದರೆ:— ದ್ವಿತ್ವವುಂಟಾಗಬೇಕಾದರೆ ಪದಾರ್ಥದ್ವಯವಿರಬೇಕಾಗುವುದರಿಂದ, ದ್ವಿತ್ವವೆಂಬುದು ಅಸತ್ಯವಾಗಲಿ;— ಏಕತ್ವವೆಂಬು

ದ್ವೈತೈಕ್ಯಯೋರ್ವಿರ್ಥಃ ಸಿದ್ಧಿಃ ಆತಪಚ್ಛಾಯಯೋರಿವ ||೬೩||
ಯತ್ರ ನಾಸ್ತಿ ದ್ವಿತೀಯೋ ಹಿ ತತ್ರೈಕಸ್ಯೈಕತಾ ಕಥಮ್ |
ಏಕತಾಯಾಮಸಿದ್ಧಾಯಾಂ ದ್ವಯಮೇವ ನ ವಿದ್ಯತೇ ||೬೪||
ಏವಂ ಸ್ಥಿತೇ ತು ಯಸ್ತಿಷ್ಠೇತ್ ತತ್ತಾದೃಕ್ ತದಿವಾಸ್ತಿ ಹಿ |
ತಸ್ಮಾನ್ನ ವ್ಯತಿರಿಕ್ತಂ ತತ್ ರೂಪಂ ದ್ರವಇವಾಮ್ಭಸಃ ||೬೫||
ನಾನಾರಮ್ಭವಿಭಾಸಂ ಚ ಸಾಮ್ಯೇನಾಕ್ಷುಬ್ಧರೂಪಿಣಃ |
ಬೀಜಸ್ಯಾನ್ತಸ್ತರುರಿವ ಬ್ರಹ್ಮಣೋನ್ತಸ್ಸ್ಥಿತಂ ಜಗತ್ ||೬೬||
ದ್ವೈತಮಪ್ಯಪೃಥಕ್ ತಸ್ಮಾತ್ ಹೇಮ್ನಃ ಕಟಕತಾ ಯಥಾ |
ಸಮ್ಯಗುದ್ಬಧಾವಬೋಧೋ ಹಿ ದ್ವೈತಂ ತಚ್ಚ ನ ಸನ್ಮಯಮ್ ||೬೭||
ಯಥಾ ದ್ರವತ್ವಂ ಪಯಸಃ ಸ್ಪನ್ದನಂ ಮಾತರಿಶ್ವನಃ |
ವ್ಯೋಮ್ನಃ ಶೂನ್ಯತ್ವಮೇವಂ ಹಿ ನ ಪೃಥಗ್ದ್ವೈತಮೀಶ್ವರಾತ್ ||೬೮||

ವಾದರೆ, ಸ್ವಭಾವಸಿದ್ಧವಾಗಿರುವುದರಿಂದ ಅದನ್ನೇಕೆ ಅಸತ್ಯವೆಂದು ಹೇಳಬೇಕು?—ಎಂದಲ್ಲವೆ ಶಂಕೆಯುಂಟಾಗುವುದು! ಇದು ಸಂಗತವಲ್ಲ. ಎರಡನೆಯದೊಂದು ಪದಾರ್ಥವಿದ್ದಪಕ್ಷದಲ್ಲಿ, ಆಗ ಏಕವಾದುದಕ್ಕೆ ಏಕತ್ವವೆಂಬುದು ಉಪಪನ್ನವಾಗುವುದು. (ಎರಡನೆಯದೊಂದಿದ್ದರಲ್ಲವೆ ಒಂದೆಂದು ವ್ಯವಹಾರವುಂಟಾಗುವುದೆಂದು ಭಾವವು.) ಅದುಕಾರಣ, ಬಿಸಿಲುನೆಳಲುಗಳಂತೆ ದ್ವಿತ್ವೈಕತ್ವಗಳು ಪರಸ್ಪರ ಆಶ್ರಯವುಳ್ಳವುಗಳೆಂದು ತಿಳಿಯಬೇಕು ||೬೩||

ಯಾವಾಗ ಎರಡನೆಯದಿಲ್ಲವಾಯ್ತೋ, ಆಗ ಏಕದ ಏಕತ್ವವೆಂಬುದಾವುದು? ಏಕತ್ವವೇ ಇಲ್ಲದಾಗ ದ್ವಯ (ಎರಡು) ವೆಂಬುದೂ ಇಲ್ಲವೇ ಇಲ್ಲ ||೬೪||

65. ಈರೀತಿಯಾಗಿ ದ್ವಿತ್ವೈಕತ್ವಶೂನ್ಯವಾಗಿ ವಸ್ತುತತ್ವವಿರುವಾಗ, ಯಾವ ಆತ್ಮನು ದ್ವಿತ್ವೈಕತ್ವಯುಕ್ತನಂತೆಯೂ ದ್ವಿತ್ವೈಕತ್ವಗಳಂತೆಯೂ ಭಾಸಿಸುವನೋ,—ಜಲಕ್ಕಿಂತ ದ್ರವತ್ವವು ಪೃಥಕ್ಕಲ್ಲದಿರುವಂತೆ-- ಆ ಪರಮಾತ್ಮನಿಗಿಂತ ಆ ದ್ವಿತ್ವೈಕತ್ವರೂಪವೂ ಪೃಥಕ್ಕಲ್ಲವಾಗಿರುವುದು ||೬೫||

64. ಭೂಮಿ ಜಲ ಮುಂತಾದುವು ಸಮವಾಗಿರುವಾಗ ಬೀಜವು ಪೂರ್ವಾವಸ್ಥೆಯನ್ನು ಬಿಡದಿರುವಂತೆ, ಸತ್ವರಜಸ್ತಮಸ್ಸುಗಳು ಸಮವಾಗಿರುವಾಗ ಪರಬ್ರಹ್ಮನು ಯಾವ ವಿಕಾರವೂ ಇಲ್ಲದಿರುವನು; ಇಂತಹ ಬ್ರಹ್ಮನೊಳಗೆ, ಬೀಜದೊಳಗೆ ವೃಕ್ಷವಿರುವಂತೆ, ನಾನಾವಿಧವಾದ ಕಾರ್ಯಗಳಿಂದ ಪ್ರಕಾಶಿಸುತಿರುವ ಈ ಜಗತ್ತಿರುವುದು ||೬೬||

ಹೀಗಿರುವುದರಿಂದ, ಸುವರ್ಣಕ್ಕಿಂತ ಕಟಕತ್ವವು ಪೃಥಕ್ಕಲ್ಲದಿರುವಂತೆ, ದ್ವೈತವೂ ಕೂಡ ಆ ಪರಮಾತ್ಮನಿಗಿಂತ ಪೃಥಕ್ಕಾಗಿಲ್ಲ. ದ್ವೈತವೆಂಬುದು, ಆ ರೀತಿಯಾಗಿ ಜ್ಞಾನವು ಮನಸ್ಸಿನಲ್ಲಿ ಚೆನ್ನಾಗಿ ನೆಲೆಸುವಿಕೆಯೇ ಆಗಿರುವುದು. ಅದೂ ಅವಾಸ್ತವವಾದುದು ||೬೭||

ನೀರಿಗಿಂತ ಬೇರೆಯಾಗಿ ದ್ರವತ್ವವು ಹೇಗಿಲ್ಲವೋ, ವಾಯುವಿಗಿಂತ ಬೇರೆಯಾಗಿ ಸ್ಪಂದವು ಹೇಗಿಲ್ಲವೋ, ಆಕಾಶಕ್ಕಿಂತ ಬೇರೆಯಾಗಿ ಶೂನ್ಯತ್ವವು ಹೇಗಿಲ್ಲವೋ, ಹಾಗೆ ಈಶ್ವರನಿಗಿಂತ ಪೃಥಕ್ಕಾಗಿ ದ್ವೈತವಿಲ್ಲ ||೬೮||

ದ್ವೈತಾದ್ವೈತೋಪಲಮ್ಭೇ ಹಿ ದುಃಖಾಯೈವ ಕ್ರಿಯಾತ್ಮನೇ ।
ನಿಪುಣೋಽನುಪಲಮ್ಭೋ ಯಸ್ತ್ವೇತಯೋಸ್ತತ್ ಪರಂ ವಿದುಃ ॥೮೯॥
ಮಾತೃಮಾನಪ್ರಮೇಯಾದಿ ದ್ರಷ್ಟೃದರ್ಶನದೃಶ್ಯತಾ ।
ಏತಾವಜ್ಜಗದೇತಚ್ಚ ಪರಮಾಣೌ ಚಿತಿ ಸ್ಥಿತಮ್ ॥೯೦॥
ಅಯಂ ಜಗದಣುರ್ನಿತ್ಯಂ ಏತೇನಾಣುಸುಮೇರುಣಾ ।
ಸ್ಪನ್ದನಂ ಪವನೇನೇವ ಸ್ವಾಙ್ಗ ಏವ ಕೃತಾಕೃತಃ ॥೯೧॥
ಅಹೋನು ಭೀಮಾ ಮಾಯೇಯಂ ಅಥವಾ ಮಾಯಿನಾಂ ಪರಾ ।
ಪರಮಾಣ್ವನ್ತರೇವಾಸ್ತಿ ಯತ್ ತ್ರೈಲೋಕ್ಯಪರಮ್ಪರಾ ॥೯೨॥
ಅಥಾಸಮ್ಭವಮಾಯಿತ್ವಂ ಏವೈತತ್ ಸರ್ವದಾ ಸ್ಥಿತಮ್ ।
ಚಿನ್ಮಾತ್ರಪರಮಾಣುತ್ವಮಾತ್ರಮೇವ ಜಗತ್ಸ್ಥಿತಿಃ ॥೯೩॥
ಅನ್ತರ್ಗತಜಗಜ್ಜಾಲೋಪ್ಯೇಷೋಽಣುಃ ಸೌಮ್ಯಮತ್ಯಜನ್ ।
ಸ್ಥಿತೋಽನ್ತಸ್ಥಬೃಹದ್ವೃಕ್ಷಂ ಬೀಜಂ ಭಾಣ್ಡೋದರೇ ಯಥಾ ॥೯೪॥
ಬೀಜೇನ್ತರ್ವೃಕ್ಷವಿಸ್ತಾರಃ ಸ್ಥಿತಃ ಸಫಲಪಲ್ಲವಃ ।

ದ್ವೈತವೆಂದೂ ಅದ್ವೈತವೆಂದೂ ಅನುಭವವುಂಟಾಗುವಿಕೆಯಾವುದುಂಟೋ, ಅದು-ಕೇವಲ ದುಃಖಮಯವಾದ ಪ್ರವೃತ್ತಿಮಾರ್ಗವ್ಯವಹಾರಸಿದ್ಧಿಗೋಸ್ಕರವಲ್ಲದೆ-ನಿವೃತ್ತಿಸಿದ್ಧಿಗಾಗುವುದಿಲ್ಲ. ಇವೆರಡೂ ಸುತರಾಂ ಅಗೋಚವಾಗದಿರುವಿಕೆಯಾವುದುಂಟೋ, ಅದೇ ಪರಮಪದವೆಂದು ಜ್ಞಾನಿಗಳ ಅಭಿಪ್ರಾಯವು ॥೮೯॥

65. ಮಾತೃ ಮಾನ ಮೇಯಗಳೆಂದೂ-ದ್ರಷ್ಟೃ ದರ್ಶನ ದೃಶ್ಯಗಳೆಂದೂ- ಯಾವ ವ್ಯವಹಾರವುಂಟೋ, ಇದಿಷ್ಟೇ ಜಗತ್ತೆಂಬುದು; ಇದೆಲ್ಲವೂ ಆ ಚಿತ್ಪರಮಾಣುವಿನಲ್ಲಿರುವುದು ॥೯೦॥

ಅಣುವಾಗಿಯೂ ಮಹಾಮೇರುಪರ್ವತಾಕಾರವಾಗಿಯೂ ಇರುವ ಈ ಪರಬ್ರಹ್ಮನು, ವಾಯುವು ಸ್ಪಂದವನ್ನು, ತೋರ್ಪಡಿಸುತಲೂ ಉಪಸಂಹರಿಸುತಲೂ ಇರುವಂತೆ, ಈ ಜಗತ್ತೆಂಬ ಪರಮಾಣುವನ್ನು, ತನ್ನ ಶರೀರದಲ್ಲಿಯೇ ಉಂಟುಮಾಡುತಲೂ ಉಪಸಂಹರಿಸುತಲೂ ಇರುವನು॥

ಅಹಹ! ಈ ಮಾಯೆಯೆಷ್ಟು ಭಯಂಕರವಾದುದು! ಅಥವಾ, ಜನರಿಗೆ ವ್ಯಾಮೋಹವನ್ನುಂಟುಮಾಡತಕ್ಕವರಿಗಿದು ಶ್ರೇಷ್ಠವೇ ಅಹುದು! ಏನೆಂದರೆ:—ಒಂದು ಪರಮಾಣುವಿನೊಳಗೆ ಅನೇಕಕೋಟಿ ತ್ರೈಲೋಕ್ಯಗಳು ಅಡಗಿರುವುವಲ್ಲ! ॥೯೨॥

ಅಥವಾ ಮಾಯಾಸಂಭವಶೂನ್ಯವಾಗಿರುವ ಈ ಬ್ರಹ್ಮವೇ ಸರ್ವದಾ ಇರತಕ್ಕುದು. ಈ ಜಗತ್ತಿನ ಸ್ಥಿತಿಯೆಂಬುದೂ ಕೂಡ, ಚಿನ್ಮಾತ್ರಪರಮಾಣುತ್ವವೇ ಹೊರತು ಪ್ರತ್ಯೇಕವಲ್ಲ. ಹೀಗಿದ್ದರೂ, ಜಗತ್ತೆಂಬ ಪ್ರತ್ಯಯವುಂಟಾಗುತಿರುವುದಲ್ಲ! ಇದು ದೊಡ್ಡ ಭ್ರಮೆಯೇ ಸರಿ ॥

66. ಹೀಗೆ ಅನೇಕ ಜಗತ್ತುಗಳನ್ನು ಒಳಗಡೆಯಿಟ್ಟುಕೊಂಡಿದ್ದರೂ ಕೂಡ, ಈ ಬ್ರಹ್ಮಪರಮಾಣುವು, ದೊಡ್ಡ ಮರವನ್ನು ಒಳಗಡೆ ಧರಿಸಿರುವ ಬೀಜವು ಒಂದು ಮಡಕೆಯೊಳಗಿರುವಂತೆ, ಯಾವ ವಿಕಾರವೂ ಇಲ್ಲದಿರುವುದು ॥೯೪॥

67. ಬೀಜದೊಳಗೆ ಫಲಪಲ್ಲವಯುಕ್ತವಾಗಿ ದೊಡ್ಡ ಮರವಿರುವುದೆಂಬುದು, ಸೂಕ್ಷ್ಮ

ಪರಯಾ ದೃಶ್ಯತೇ ದೃಷ್ಟ್ಯಾ ಜಗಚ್ಚಿದಣುಉದರೇ ||೯೫||
ಸಶಾಖಾಫಲಪುಷ್ಪಂ ಸ್ವಂ ಅಜಹದ್ಬೀಜಕೋಟರೇ |
ಯಥಾ ತರುಃ ಸ್ಥಿತಸ್ತದ್ವತ್ ವಿಕಾಸಿ ಚಿದಣೋರ್ಜಗತ್ ||೯೬||
ಸಂಸ್ಥಿತಂ ದ್ವೈತಮದ್ವೈತಂ ಬೀಜಕೋಶಇವ ದ್ರುಮಃ |
ಜಗಚ್ಚಿತ್ಪರಮಾಣ್ವಂತಃ ಯಃ ಪಶ್ಯತಿ ಸ ಪಶ್ಯತಿ ||೯೭||
ನ ದ್ವೈತಂ ನೈವ ಚಾದ್ವೈತಂ ನ ಚ ಬೀಜಂ ನ ಚಾಙ್ಕುರಃ |
ನ ಸ್ಥೂಲಂ ನ ಚ ವಾ ಸೂಕ್ಷ್ಮಂ ನಾಜಾತಂ ಜಾತಮೇವ ಚ ||೯೮||
ನ ಚಾಸ್ತಿ ನ ಚ ನಾಸ್ತೀದಂ ನ ಸೌಮ್ಯಂ ಕ್ಷುಭಿತಂ ನ ಚ |
ತ್ರಿಜಗಚ್ಚಿದಣೋರಂತಃ ಖವಾಯ್ವಪಿ ನ ಕಿಞ್ಚನ ||೯೯||
ನ ಜಗನ್ನಾಜಗಚ್ಚಾಸ್ತಿ ವಿದ್ಯತೇ ಚಿತ್ ಪರಾ ಶುಭಾ |
ಸರ್ವಾತ್ಮಿಕಾ ಯದಾ ಯತ್ರ ಸಾ ಯಥೋದೇತಿ ತತ್ ತಥಾ ||೧೦೦||
ಉದೇತ್ಯನುದಿತೋಪ್ಯೇಷಃ ಸ್ವಯಂ ವೇದನಜೃಮ್ಭಿತಃ |

ವಾದ ಬುದಿಯಿಂದ ತಿಳಿಯಲ್ಪಡುವುದು. ಇದರಂತೆಯೇ, ಚಿತ್ಪರಮಾಣುವಿನೊಳಗೆ ಜಗತ್ತಿರುವುದೆಂಬುದು ಯೋಗದೃಷ್ಟಿಯಿಂದ ಗೊತ್ತಾಗುವುದು ||೯೫||

ಒಂದು ದೊಡ್ಡ ಮರವು ಸಣ್ಣ ಬೀಜದೊಳಗಡೆಯಲ್ಲಿ ಕೊಂಬೆ ಹೂವು ಹಣ್ಣು ಮುಂತಾದುವುಗಳನ್ನು ಬಿಡದೆ ಹೇಗೆ ನಿಂತಿರುವುದೋ, ಹಾಗೆ—ನಾನಾವಿಧ ವಿಕಾಸವುಳ್ಳ ಈ ಜಗತ್ತು ಚಿತ್ಪರಮಾಣುವಿನಲ್ಲಿ ನೆಲೆಸಿರುವುದು ||೯೬||

ಬೀಜದೊಳಗೆ ವೃಕ್ಷವಿರುವಂತೆ ಚಿತ್ಪರಮಾಣುವಿನೊಳಗೆ ಭೇದವಾಗಿಯೂ ಅಭೇದವಾಗಿಯೂ ಈ ಜಗತ್ತಿರುವುದೆಂದು ಯಾವನು ತಿಳಿಯುವನೋ, ಅವನೇ ಆತ್ಮಜ್ಞಾನಸಂಪನ್ನನಾಗುವನು ||೯೭||

ಸರಿಯಾಗಿ ವಿಚಾರಮಾಡಿದರೆ,—ದ್ವೈತವೂ ಇಲ್ಲ; ಅದ್ವೈತವೂ ಇಲ್ಲ. ಬೀಜವೂ ಇಲ್ಲ; ಅಂಕುರವೂ ಇಲ್ಲ. ಸ್ಥೂಲವೂ ಇಲ್ಲ; ಸೂಕ್ಷ್ಮವೂ ಇಲ್ಲ. ಹುಟ್ಟದಿರುವುದೂ ಇಲ್ಲ; ಹುಟ್ಟುವುದೂ ಇಲ್ಲ ||೯೮||

ಆ ಚಿತ್ಪರಮಾಣುವಿನೊಳಗೆ ಈ ಜಗತ್ತ್ರಯವು ಇದೆಯೆಂಬುದೂ ಇಲ್ಲ; ಇಲ್ಲವೆಂಬುದೂ ಇಲ್ಲ. ಇದು ನಿರ್ವಿಕಾರವಾಗಿದೆಯೆಂಬುದೂ ಇಲ್ಲ; ವಿಕಾರಹೊಂದುವುದೆಂಬುದೂ ಇಲ್ಲ. ಆಕಾಶ ವಾಯು ಮುಂತಾದ ಭೂತಗಳೂ ಇಲ್ಲ ||೯೯||

ಈ ಜಗತ್ತು ಇದೆಯೆಂಬುದೂ ಇಲ್ಲ; ಇಲ್ಲವೆಂಬುದೂ ಇಲ್ಲ. ಪರಮಮಂಗಳವಾದ ಆ ಪರಬ್ರಹ್ಮಚೈತನ್ಯವೊಂದೇ ಇರುವುದು. ಸರ್ವಾತ್ಮಕವಾದ ಅದು ಯಾವಾಗ ಎಲ್ಲಿ ಯಾವರೀತಿಯಾಗಿ ಉದಯಿಸುವುದೋ, ಆಗ ಅಲ್ಲಿ ಆರೀತಿಯಾಗಿ ಆ ಪದಾರ್ಥವೆಂದು ತೋರುವುದು ||೧೦೦||

ಅದ್ವಿತೀಯವಾದ ಈ ಬ್ರಹ್ಮಪರಮಾಣುವೇ, ಸ್ವಯಂ ಸರ್ವಸ್ವರೂಪವಾಗಿರುವಕಾರಣ, ವಸ್ತುತಃ ಉದಯಹೊಂದದಿದ್ದರೂ, ತನ್ನ ಜ್ಞಾನಾನುಗುಣವಾಗಿ ಉದಯಹೊಂದಿದಂತೆ ಕಾಣುವುದು ||೧೦೧||

ಪರಮಾತ್ಮಾಣುರೇಕಾತ್ಮಾ ಸಮಗ್ರಾತ್ಮತಯೈವ ಖೇ ॥೧೦೧॥
ದ್ರುಮೋ ಭೂಮೌ ಸ್ವಬೀಜತ್ವಂ ಇವೋದೇತ್ಯನುದೇತ್ಯಪಿ ।
ಪರಂ ತತ್ತ್ವಂ ಜಗದ್ಭಙ್ಗ್ಯಾ ಜಗತ್ತ್ವಂ ಸ್ವೋದಯೇನ ಚ ॥೧೦೨॥
ದ್ರುಮೋ ಬೀಜತಯೈವಾಶು ನ ಸನ್ತ್ಯಕ್ತಸಮುಸ್ಥಿತಿಃ ।
ತಿಷ್ಠತ್ಯಪಗತಸ್ಪನ್ದಃ ತ್ಯಾಗಾತ್ಯಾಗಪರೋಣುಕಃ ॥೧೦೩॥
ಬಿಸತನ್ತುರ್ಮಹಾಮೇರುಃ ಪರಮಾಣೋರಪೇಕ್ಷಯಾ ।
ದೃಶ್ಯಂ ಕಿಲ ವಿಶೇತ್ ತನ್ತುಃ ಅದೃಶ್ಯಾಕ್ಷ್ಣಾ ಪರಾಣುತಾ ॥೧೦೪॥
ಬಿಸತನ್ತುರ್ಮಹಾಮೇರುಃ ಪರಮಾಣೋಃ ಕಿಲಾತ್ಮನಃ ।
ತಸ್ಯೈವ ತದ್ಘನಾಃ ಸ್ವಾನ್ತಃಸ್ಥಿತಾಮೇರ್ವಾದಿಕೋಟಯಃ ॥೧೦೫॥

ಏಕೇನ ತೇನ ಮಹತಾ ಪರಮಾಣುನಾ ಚ
ವ್ಯಾಪ್ತಂ ತತಂ ವಿರಚಿತಂ ಜನಿತುಂ ಕೃತಂ ಚ ।
ದೃಶ್ಯಂ ಪ್ರಪಞ್ಚರಚಿತಂ ನಭಸೇವ ವಿಶ್ವಂ
ಶೂನ್ಯತ್ವಮುಚ್ಛಮಭಿತಃ ಪರಿಲಬ್ಧಮೇವ ॥೧೦೬॥

ಬೀಜವು ತನ್ನ ಬೀಜರೂಪಾವಸ್ಥೆಯನ್ನು ಬಿಡದೆಯೇ ಹೇಗೆ ಭೂಮಿಯಲ್ಲಿ ಹುಟ್ಟುತಿರುವುದೋ, ಹಾಗೆ ಪರಮಾತ್ಮನು ಜಗದ್ರೂಪವಾಗಿ ಉದಯಿಸುತಲೂ—ತಜ್ಜನ್ಯವಾದ ಜನನ ಮರಣಾದಿಗಳನ್ನನುಭವಿಸುತಲೂ ಇರುವನು ॥೧೦೨॥

ಆದರೆ, ಇವೆರಡಕ್ಕೂ ಸ್ವಲ್ಪ ವ್ಯತ್ಯಾಸವುಂಟು. ವೃಕ್ಷವು ಬೀಜರೂಪವಾಗಿಯಾಗಲಿ—ಅಥವಾ ವೃಕ್ಷರೂಪವಾಗಿಯಾಗಲಿ—ಯಾವುದಾದರೊಂದು ರೂಪದಲ್ಲಿದ್ದೇ ಇರಬೇಕು. ಬ್ರಹ್ಮಪರಮಾಣುವಾದರೋ, ಯಾವ ರೂಪವೂ ಇಲ್ಲದೆಯೂ—ಒಂದೊಂದುವೇಳೆ ಸರ್ವರೂಪವಾಗಿಯೂ ಇರುವುದು ॥೧೦೩॥

68. ಆ ಬ್ರಹ್ಮಪರಮಾಣುವಿನ ದೃಷ್ಟ್ಯಾ ಮಹಾಮೇರುಪರ್ವತವೂ ಸಣ್ಣ ತಾವರೆದಂಟಿನ ದಾರವಾಗುವುದು. ಆದರೆ, ಆ ತಾವರೆದಂಟಿನ ದಾರವು ಕಣ್ಣಿಗೆ ಗೋಚರವಾಗುವುದು; ಬ್ರಹ್ಮಪರಮಾಣುವಾದರೆ, ಆದಕ್ಕಿಂತ ಸೂಕ್ಷ್ಮವಾಗಿರುವುದರಿಂದ ದೃಷ್ಟಿಗೋಚರವಾಗುವುದಿಲ್ಲ॥೧೦೪॥

ಹೀಗೆ ಈ ಆತ್ಮಪರಮಾಣುವಿನ ದೃಷ್ಟ್ಯಾ ಮಹಾಮೇರುವೂ ಬಿಸತಂತು (ತಾವರೆ ದಂಟಿನ ದಾರ) ವಾಗಿರುವುದು. ಇಂತಹ ಬ್ರಹ್ಮಪರಮಾಣುವಿನೊಳಗೆ, ಚಿದ್ರೂಪಗಳಾದ ಮೇರು ಮಂದರಾದಿಗಳು ಅನೇಕ ಕೋಟಿ ಸಂಖ್ಯಾಕವಾಗಿರುವುವು ॥೧೦೫॥

69. ಅದ್ವಿತೀಯವಾಗಿ ಮಹತ್ತಾಗಿರುವ ಆ ಬ್ರಹ್ಮಪರಮಾಣುವಿನಿಂದಲೇ, ಈ ಸಮಸ್ತ ದೃಶ್ಯವೂ ವ್ಯಾಪ್ತವಾಗಿಯೂ ವಿಸ್ತೃತವಾಗಿಯೂ ಸೃಷ್ಟವಾಗಿಯೂ ಕೃತವಾಗಿಯೂ ಇರುವುದು. ಆಕಾಶವು ಗಂಧರ್ವನಗರಾದಿ ನಾನಾವಿಧರೂಪಗಳಿಂದ ಕಾಣಲ್ಪಟ್ಟರೂ ಅದು ನಿರ್ಮಲವಾಗಿಯೇ ಇರುವಂತೆ, ಈ ಆತ್ಮನೂ ನಾನಾರೂಪವಾಗಿ ಕಾಣಿಸಿಕೊಂಡರೂ ಸ್ವಭಾವತಃ ನಿರಲನಾಗಿಯೇ ಇರುವನು. 70. ಇಂತಹ ಆತ್ಮನ ಸಾರವುಳ್ಳವನಾದುದರಿಂದಲೇ, ನಾನು ರಕ್ಷಣಾದಿ ವ್ಯಾಪಾರವನ್ನು ನೆರವೇರಿಸುತಿರುವೆನು ॥೧೦೬॥

ದ್ವೈತೇನ ಸುನ್ದರತರಂ ಸ್ವಮನುಜ್ಝಿತೇನ
ರೂಪಂ ಸುಷುಪ್ತಸದೃಶೇನ ಯಥಾವಬೋಧಾತ್ |
ಐಕ್ಯಂ ಗತಂ ಸ್ಥಿತಿಗಮಾಗಮಮುಕ್ತಮೇವಂ
ಇತ್ಥಂ ಸ್ಥಿತಂ ತನು ಜಗತ್ ಪರಮಾರ್ಥಪಿಣ್ಡಃ ||೧೦೨||

ಇತಿ ಉತ್ಪತ್ತಿಪ್ರಕರಣೇ ಪರಮಾರ್ಥಪಿಣ್ಡೀಕರಣಂ ನಾಮ
ಏಕಾಶೀತಿತಮಃ ಸರ್ಗಃ.

71. ಎಲೌ! ಕರ್ಕಟಿ! ದ್ವೈತಭ್ರಾಂತಿಯೆಂಬುದು, ಆ ಪರಮಾತ್ಮಸ್ವರೂಪವನ್ನು ಬಿಡದಿರುವುದು. ಇದು ಜ್ಞಾನೋದಯದಿಂದ ಕಳೆದುಹೋದರೆ, ಸುಷುಪ್ತಕಾಲದಲ್ಲುಂಟಾಗುವಂತೆ ಸಮಸ್ತ ಪ್ರಪಂಚಜ್ಞಾನಲಯವುಂಟಾಗಿ, ಸ್ಥಿತಿ ಗಮನ ಆಗಮನ ಮುಂತಾದುವುಗಳಿಂದ ರಹಿತವಾಗಿರುವ ಬ್ರಹ್ಮಪದಾರ್ಥವೊಂದೇ ಸ್ಫುರಿಸುವುದು. ಇಂತಹ ಬ್ರಹ್ಮನ ಸಾಕ್ಷಾತ್ಕಾರವಿಲ್ಲದಾಗ ನಾನು ಅದಕ್ಕಿಂತ ಭಿನ್ನನಾಗಿರುವೆನು. 72. ಅದರ ಸಾಕ್ಷಾತ್ಕಾರವಾದಾಗ ಅದರಲ್ಲಿ ಐಕ್ಯಹೊಂದಿದವನಾಗುವಕಾರಣ, ನಾನು ಆದರ ರೂಪದಲ್ಲಿಯೇ ಇರುವೆನು. ಎಲೌ! ರಾಕ್ಷಸಿ! ಈ ಜಗತ್ಸ್ವರೂಪವೀರೀತಿಯಾಗಿ ಸೂಕ್ಷ್ಮವಾಗಿರುವುದು. ಇಂತು ಸಮಸ್ತವಾದ ತತ್ವವನ್ನೂ ಒಟ್ಟುಗೂಡಿಸಿ ಹೇಳಿರುವೆನು.—ಎಂದು ಆರಾಜನು ಕರ್ಕಟಿಗುತ್ತರ ಹೇಳಿದನು ||೧೦೨||

ಇದು ಉತ್ಪತ್ತಿಪ್ರಕರಣದಲ್ಲಿ ಕರ್ಕಟಿಕೋಪಾಖ್ಯಾನದೊಳಗೆ ಪರಮಾರ್ಥ
ಪಿಂಡೀಕರಣವೆಂಬ ಎಂಭತ್ತೊಂದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವ್ಯಶೀತಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಇತಿ ರಾಜಮುಖಾಚ್ಛ್ರುತ್ವಾ ಕರ್ಕಟೀ ವನಮರ್ಕಟೀ ।
ಅವಬುದ್ಧಪದಾನ್ತಂ ಸ್ವಂ ಜಹೌ ಮತ್ಸರಚಾಪಲಮ್ ॥೧॥
ಅನ್ತಃ ಶೀತಲತಾಮೇತ್ಯ ವಿಶ್ರಾನ್ತಿಮುಪತಾಪತಾಮ್ ।
ಪ್ರಾಪ್ತಾ ಪ್ರಾವೃಣ್ಮಯೂರೀವ ಸಜ್ಯೋತ್ಸ್ನೇವ ಕುಮುದ್ವತೀ ॥೨॥
ತಥಾ ರಾಜಗಿರಾ ತಸ್ಯಾಃ ಆನನ್ದ ಉದಭೂದ್ಭೃಶಮ್ ।
ಗರ್ಜೇನ್ತಃ ಖೇ ಬಲಾಕಾಯಾಃ ರವೇಣೇವ ಪಯೋಮುಚಃ ॥೩॥

ರಾಕ್ಷಸ್ಯುವಾಚ.

ಅಹೋ ಬತ ಪವಿತ್ರೇಯಂ ಭವತೋರ್ಭಾತಿ ಶೇಮುಷೀ ।
ಅನಸ್ತಮಿತಸಾರೇಣ ಪ್ರಬೋಧಾರ್ಕೇಣ ಭಾಸಿತಾ ॥೪॥

ಉತ್ಪತ್ತಿಪ್ರಕರಣದಲ್ಲಿ ಎಂಭತ್ತೆರಡನೆಯ ಸರ್ಗವು.

ಪ್ರಸನ್ನಯಾ ಮನ್ತ್ರದಾನಂ ವರ್ಣ್ಯತೇತ್ರಾನಯಾ ತಯೋಃ ।
ವಧ್ಯಭೋಜ್ಯಾರ್ಪಣಂ ಚಾಸ್ಯೈ ವ್ಯುತ್ಥಿತಾಯೈ ಸಮಾಧಿತಃ ॥

ಆ ಕರ್ಕಟಿಯು ಪ್ರಸನ್ನಳಾಗಿ ಆ ಕಿರಾತರಾಜಮಂತ್ರಿಗಳಿಗೆ ವರಪ್ರದಾನ ಮಾಡುವಿಕೆಯೂ, ಸಮಾಧಿಯಿಂದ ಬಹಿರ್ಮುಖಳಾದ ಅವಳಿಗೆ ವಧ್ಯರನ್ನು ಭೋಜನಾರ್ಥವಾಗಿ ಕೊಡುವಿಕೆಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀ ವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸುವರು:—

ಅಯ್ಯಾ ! ರಾಮ ! ಇದುವರೆಗೆ ಹೇಳಿದಂತೆ, ರಾಜನು ಹೇಳಿದ ಸಮಾಧಾನವನ್ನು ಕೇಳಿ, ವನದಲ್ಲಿ ಕಪಿಯಂತೆ ಸಂಚರಿಸುತ್ತಿದ್ದ ಆ ಕರ್ಕಟಿಯು, ಬ್ರಹ್ಮಜ್ಞಾನವುಂಟಾಗಿ ಮೂಲಾಜ್ಞಾನ ನಾಶವುಂಟಾದವಳಾದಕಾರಣ, ತನ್ನ ಮಾತ್ಸರ್ಯ ಚಾಪಲ್ಯಗಳನ್ನು ಬಿಟ್ಟುಬಿಟ್ಟಳು ॥೧॥

ಆಗ ಅವಳು, ವರ್ಷಾಕಾಲದಲ್ಲಿರುವ ಹೆಣ್ಣು ನವಿಲಿನಂತೆಯೂ, ಚಂದ್ರಿಕಾಯುಕ್ತವಾದ ನೈದಿಲೆಯ ಲತೆಯಂತೆಯೂ, ಒಳಗೆ ಶೈತ್ಯವನ್ನು ಹೊಂದಿ, ತಾಪರಹಿತಳಾಗಿ, ವಿಶ್ರಾಂತಿಯನ್ನು ಪಡೆದಳು ॥೨॥

ಆಗ ಅವಳಿಗೆ, ಅಂತರಿಕ್ಷದಲ್ಲಿ ಮೇಘಧ್ವನಿಯುಂಟಾಗುವುದರಿಂದ ನವಿಲಿಗೆ ಮನಸ್ಸಿನಲ್ಲಿ ಸಂತೋಷವುಂಟಾಗುವಂತೆ, ರಾಜನ ಮಾತಿನಿಂದ ಅತಿಯಾಗಿ ಆನಂದವುದ್ಭವಿಸಿತು ॥೩॥

ಆಗ ಆ ರಾಕ್ಷಸಿ ಹೇಳುವಳು:—

ಅಯ್ಯಾ ! ರಾಜಮಂತ್ರಿಗಳಿರಾ ! ಎಂದಿಗೂ ಅಸ್ತಹೊಂದದೆ ಪ್ರಶಸ್ತವಾಗಿರುವ ಜ್ಞಾನವೆಂಬ ಸೂರ್ಯನಿಂದ ಪ್ರಕಾಶಿತವಾದ ನಿಮ್ಮ ಬುದ್ಧಿಯು, ಅತಿ ಪರಿಶುದ್ಧವಾಗಿಯೂ-ಚಂದ್ರ

ಶೀತಾ ಸಮರಸಾ ಶುದ್ಧಾ ಜ್ಯೋತ್ಸ್ನೇವ ಶಶಿಮಣ್ಡಲಾತ್ |
ವಿವೇಕಕಣಿಕಾಂ ಶ್ರುತ್ವಾ ಭವತೋ ಹೃದಯಾದಿಯಮ್ ||೫||
ವಿವೇಕಿನೋ ಜಗತ್ಪೂಜ್ಯಾಃ ಸೇವ್ಯಾಮನ್ಯೇ ಭವಾದೃಶಾಃ |
ಸತ್ಸಙ್ಗಾತ್ ಸವಿಕಾಸಾಸ್ಮಿ ಚನ್ದ್ರೇಣೇವ ಕುಮುದ್ವತೀ ||೬||
ಸೌರಭಂ ಕುಸುಮಾಸಙ್ಗಾತ್ ಏವ ಸತ್ಸಙ್ಗಮಾಚ್ಛುಭಮ್ |
ವರ್ತತೇ ಹ್ಯರ್ಕಸಮ್ಪರ್ಕಾತ್ ವಿಕಾಸೋಮ್ಬುರುಹಾಮಿವ ||೭||
ಮಹತಾಮೇವ ಸಮ್ಪರ್ಕಾತ್ ಪುನರ್ದುಃಖಂ ನ ಬಾಧತೇ |
ಕೋ ಹಿ ದೀಪಶಿಖಾಹಸ್ತಃ ತಮಸಾ ಪರಿಭೂಯತೇ ||೮||
ಮಯೇಮೌ ಜಙ್ಗಲಪ್ರಾಪ್ತೌ ಭವನ್ತೌ ಭೂಮಿಭಾಸ್ಕರೌ |
ಪೂಜನೀಯಾವತಃ ಶೀಘ್ರಂ ಈಹಿತಂ ಕಥ್ಯತಾಂ ಶುಭಮ್ ||೯||

ರಾಜೋವಾಚ.

ಅಸ್ಮಿನ್ ಜನಪದೇ ರಕ್ಷಃಕುಲಕಾನನಮಞ್ಜರಿ |
ಜನಸ್ಯ ಬಾಧತೇತ್ಯನ್ತಂ ಸದಾ ಹೃದಯಶೂಲನಮ್ ||೧೦||
ಯತಃ ಸರ್ವೈವ ಜನತಾ ತಪ್ತಾ ದೃಢವಿಷೂಚಿಕಾ |
ಮಣ್ಡಲೇ ನನು ತೇನಾಹಂ ನಿರ್ಗತೋ ರಾತ್ರಿಚರ್ಯಯಾ ||೧೧||

ಮಂಡಲದಿಂದ ಹೊರಟಿರುವ ಚಂದ್ರಿಕೆಯಂತೆ ಶೀತಳವಾಗಿಯೂ, ಸಮರಸವಾಗಿಯೂ, ಶುದ್ಧವಾಗಿಯೂ ಶೋಭಿಸುತಿರುವುದು. ನಿಮ್ಮ ಹೃದಯದಿಂದ ಹೊರಟ ಈ ವಿವೇಕಸಾರಲವಗಳನ್ನು ಕೇಳಿ, ವಿವೇಕಿಗಳಾಗಿಯೂ ಲೋಕಪೂಜ್ಯರಾಗಿಯೂ ಇರುವ ನಿಮ್ಮಂತಹವರನ್ನು ಸೇವಿಸಬೇಕೆಂದು ನಾನು ತಿಳಿದುಕೊಂಡವಳಾಗಿ, ಚಂದ್ರನಿಂದ ನೈದಿಲೆಯ ಲತೆಯು ಅರಳುವಂತೆ, ಸತ್ಸಹವಾಸದಿಂದ ವಿಕಾಸಯುಕ್ತಳಾದೆನು ॥೫-೬॥

ಪುಷ್ಪಸಂಪರ್ಕದಿಂದ ಸುವಾಸನೆಯುಂಟಾಗುವಂತೆಯೂ, ಸೂರ್ಯಸಂಪರ್ಕದಿಂದ ಕಮಲಗಳಿಗೆ ವಿಕಾಸವುಂಟಾಗುವಂತೆಯೂ, ಮಹಾತ್ಮರ ಸಹವಾಸದಿಂದಲೇ ಶುಭವುಂಟಾಗುವುದು ॥೭॥

ಮಹಾತ್ಮರ ಸಂಗದಿಂದ ಪುನಃ ಎಂದಿಗೂ ದುಃಖವು ಪೀಡಿಸುವುದಿಲ್ಲ. ಕೈಯಲ್ಲಿ ದೀವಟಿಗೆಯನ್ನು ಹಿಡಿದುಕೊಂಡಿರುವವನು ಯಾವನುತಾನೆ ಕತ್ತಲೆಯಿಂದ ಸಂಕಟಪಡುವನು? ॥೮॥

ಅಯ್ಯಾ ರಾಜಮಂತ್ರಿಗಳಿರಾ! ಈ ದೊಡ್ಡ ಕಾಡಿನಲ್ಲಿ ನನಗೆ ಸಿಕ್ಕಿದ ನಿಮ್ಮಗಳನ್ನು ನಾನು ಅವಶ್ಯವಾಗಿ ಪೂಜಿಸಬೇಕಾಗಿರುವುದು; ಅದುಕಾರಣ ನಿಮ್ಮಗಳ ಇಷ್ಟಾರ್ಥವನ್ನು ಹೇಳಿರಿ ॥೯॥

ಆಗ ರಾಜನು ಮಾತನಾಡುವನು :—

ರಾಕ್ಷಸವಂಶವೆಂಬ ಅರಣ್ಯಕ್ಕೆ ಪುಷ್ಪಮಂಜರೀಪ್ರಾಯಳಾದ ಕರ್ಕಟಿಯೆ! ಈ ನಮ್ಮ ದೇಶದೊಳಗೆ, ಸರ್ವದಾ ಹೃದಯಶೂಲವು (ಎದೆನೋವು) ಜನರನ್ನು ವಿಶೇಷವಾಗಿ ಬಾಧೆಪಡಿಸುತಿರುವುದು ॥೧೦॥

ನಮ್ಮ ರಾಷ್ಟ್ರದೊಳಗೆ,ಸಮಸ್ತ ಜನಸಮೂಹವೂಕೂಡ, ದೃಢವಾದ ವಿಷೂಚಿಕಾರೋಗಕ್ಕೊಳಪಟ್ಟು ಸಂಕಟಪಡುತಿರುವುದು. ಅದರಿಂದ ನಾನು ರಾತ್ರಿ ಸಂಚಾರಮಾಡುತ ಹೊರಟಿರುವೆನು ॥೧೧॥

ಶೂಲಾದಿ ಹೃದಯೇ ನೃಣಾಂ ನ ಶಾಮ್ಯತಿ ಯದೌಷಧೈಃ |
ತತೋಽಹಂ ತ್ವದ್ವಿಧಪ್ರೋಕ್ತಮನ್ತ್ರಾರ್ಥೇನ ವಿನಿರ್ಗತಃ ||೧೨||
ತ್ವಾದೃಶಸ್ಯ ಚ ಲೋಕಸ್ಯ ಮುಗ್ಧಲೋಕಾಭಿಘಾತಿನಃ |
ನಿಗ್ರಹಾರ್ಥಂ ಪ್ರವೃತ್ತಿರ್ಮೇ ಸಾ ಚ ಸಮ್ಪತ್ತಿಮೇತ್ಯಲಮ್ ||೧೩||
ಏತಾವದೇವ ಚ ಶುಭೇ ತ್ವಯಾಙ್ಗೀಕ್ರಿಯತಾಂ ವಚಃ |
ಭೂಯೋ ಭವತ್ಯಾ ಪ್ರಾಣಾಹಿ ಹಿಂಸನೀಯಾನ ಕಸ್ಯಚಿತ್ ||೧೪||

ರಾಕ್ಷಸ್ಯುವಾಚ.

ಬಾಢಮೇವಂ ಕರೋಮ್ಯದ್ಯಪ್ರಭೃತ್ಯವಿತಥಂ ಪ್ರಭೋ |
ಸತ್ಯಮೇವ ನ ಕಿಞ್ಚಿದ್ಧಿ ಹಿಂಸನೀಯಂ ಮಯಾಧುನಾ ||೧೫||

ರಾಜೋವಾಚ.

ಯದ್ಯೇವಂ ಫುಲ್ಲಪದ್ಮಾಕ್ಷಿ ಪರದೇಹೈಕಭೋಜನೇ |
ಕಿಂ ಸ್ಯಾಚ್ಛರೀರವೃತ್ತ್ಯೈ ತೇ ಸ್ಥಿತಾಯಾಮುತ್ಸವಿಹಿತೇ ||೧೬||

ರಾಕ್ಷಸ್ಯುವಾಚ.

ಷಡ್ಭಿರ್ವರ್ಷೈರ್ಗಿರೌ ರಾಜನ್ ಪ್ರಬುದ್ಧಾಯಾಃ ಸಮಾಧಿತಃ |
ಜಾತಾ ಭೋಜನಸಙ್ಕಲ್ಪಾತ್ ಭೋಜನೇಚ್ಛೇಯಮದ್ಯ ಮೇ ||೧೭||

ನಮ್ಮ ಜನಗಳಿಗೆ ಹೃದಯಶೂಲ ಮುಂತಾದುವು ಯಾವಾಗ ಔಷಧೋಪಚಾರಗಳಿಂದ ಶಾಂತಿಹೊಂದಲಿಲ್ಲವೋ, ಆಗ ನಾನು ನಿಮ್ಮಂಥವರು ಹೇಳಿದ ಆಲೋಚನೆಯಿಂದ ಹೊರಟು ಬಂದೆನು ||೧೨||

ಮುಗ್ಧರಾದ ಜನರನ್ನು ಕೊಲ್ಲುವ ನಿನ್ನಂಥವರ ನಿಗ್ರಹಾರ್ಥವಾಗಿಯೇ ನಾನು ಪ್ರವರ್ತಿಸಿ ರತಕ್ಕವನು. ಈಗ ನನ್ನ ಪ್ರವೃತ್ತಿಯು ಸಂಪೂರ್ಣವಾಗಿ ಫಲಿಸುತ್ತಿರುವುದು ||೧೩||

ಎಲೌ ಶುಭಳೆ! ನನ್ನದೊಂದು ಇಷ್ಟುಮಾತ್ರ ಮಾತನ್ನು ನೀನು ಅಂಗೀಕರಿಸಬೇಕು. ಏನೆಂದರೆ,—ಇಲ್ಲಿಂದ ಮುಂದಕ್ಕೆ ನೀನು ಯಾರ ಪ್ರಾಣವನ್ನೂ ಹಿಂಸಿಸಕೂಡದು ||೧೪||

ಇದನ್ನು ಕೇಳಿ ರಾಕ್ಷಸಿ ಉತ್ತರ ಹೇಳುವಳು :—

ಎಲೈ ಪ್ರಭುವೆ! ಹಾಗೆಯೇ ಆಗಲಿ; ಇಂದು ಮೊದಲು ನಾನು ನಿಶ್ಚಯವಾಗಿ ನೀನು ಹೇಳಿದಂತೆಯೇ ಮಾಡುವೆನು. ಇನ್ನುಮೇಲೆ ನಾನು ಯಾವ ಪ್ರಾಣಿಯನ್ನೂ ಹಿಂಸೆಪಡಿಸು ವುದಿಲ್ಲ ||೧೫||

ಅದಕ್ಕೆ ರಾಜನು ಪುನಃ ಪ್ರಶ್ನೆಮಾಡುವನು :—

ಎಲೌ ಕಮಲನೇತ್ರೆ! ನೀನು ಹೀಗೆ ನನ್ನ ಮಾತನ್ನು ನಡೆಯಿಸುತ ಇದ್ದುಬಿಟ್ಟರೆ, ಪರರ ದೇಹವೇ ಆಹಾರವಾಗುಳ್ಳ ನಿನ್ನ ಪ್ರಾಣರಕ್ಷಣೆಗೆ ಆಹಾರವೇನಿರುವುದು? ||೧೬||

ರಾಕ್ಷಸಿಯು ಉತ್ತರ ಹೇಳುವಳು :—

ಅಯ್ಯಾ ರಾಜ! ನಾನು ಆ ಪರ್ವತದಲ್ಲಿ ಸಮಾಧಿಗೆ ಕುಳಿತು ಆರು ತಿಂಗಳಾದುವು. ಈಗ ಬಹಿರ್ಮುಖಳಾದಾಗ, ಭೋಜನ ಮಾಡಬೇಕೆಂದು ಸಂಕಲ್ಪಿಸಿಕೊಂಡಕಾರಣ, ನನಗೆ ಭೋಜನ ದಲ್ಲಿಚ್ಛೆಯುಂಟಾಗಿರುವುದು ||೧೭||

ಇದಾನೀಂ ಶಿಖರಂ ಗತ್ವಾ ತದೇವ ಧ್ಯಾನನಿಶ್ಚಲಾ |
ಯಾವದಿಚ್ಛಂ ಸುಖೇನಾಸೇ ಸಜೀವಾ ಸಾಲಭಂಜಿಕಾ ||೧೮||
ಆಮೃತಿಂ ಧಾರಣಾಂ ಬದ್ಧ್ವಾ ಧಾರಯಾಮಿ ಶರೀರಕಮ್ |
ಯಥೇಚ್ಛಮಥ ಕಾಲೇನ ತ್ಯಕ್ಷ್ಯಾಮೀತಿ ಮತಿರ್ಮಮ ||೧೯||
ಆಶರೀರಪರಿತ್ಯಾಗಂ ಇದಾನೀಂ ನ ಮಯಾ ನೃಪ |
ಹಿಂಸನೀಯಾಃ ಪರಪ್ರಾಣಾಃ ತೇನೇದಂ ಮದ್ವಚಃ ಶೃಣು ||೨೦||
ಹಿಮವಾನ್ ನಾಮ ಶೈಲೋಸ್ತಿ ಶರಚ್ಚಂದ್ರಾಂಶುನಿರ್ಮಲಃ |
ಯ ಉತ್ತರಾಶಾಹೃದಯೇ ಸ್ಪೃಷ್ಟಪೂರ್ವಾಪರಾರ್ಣವಃ ||೨೧||
ತತ್ರಾಹಂ ನಿವಸಾಮ್ಯಗ್ರೇ ಹೇಮಶೃಂಗದರೀಗೃಹೇ |
ಆಯಸೀ ಮೇಘಲೇಖೇವ ಕರ್ಕಟೀನಾಮ ರಾಕ್ಷಸೀ ||೨೨||
ತಪಸೋಪಾರ್ಜಿತೋ ಬ್ರಹ್ಮಾ ಜನತಾಮಾರಣೇಚ್ಛಯಾ |
ವಿಷೂಚಿಕಾ ಪ್ರಾಣಹರಾ ಸ್ಯಾಂ ಸೂಚ್ಯಾತ್ಮೇತಿ ಭೋ ಮಯಾ ||೨೩||
ತಸ್ಮಾತ್ ಸಂಪ್ರಾಪ್ತವರಯಾ ಬಹೂನ್ ವರ್ಷಗಣಾನ್ ಮಯಾ |
ಭುಕ್ತಾ ವಿಷೂಚಿಕಾತ್ವೇನ ಜನತಾ ಜೀವಬಾಧನೈಃ ||೨೪||

ಈಗ ಪುನಃ ಅದೇ ಪರ್ವತಶಿಖರಕ್ಕೆ ಹೊರಟುಹೋಗಿ, ಪೂರ್ವದಂತೆಯೇ ನನ್ನ ಮನಸ್ಸಿಗೆ ತೋರಿದವರೆಗೂ ಸಮಾಧಿಲೀನಳಾಗಿಬಿಟ್ಟು, ಜೀವಯುಕ್ತವಾದ ಪುತ್ಥಳಿಯಂತೆ ಸುಖವಾಗಿರುವೆನು ||೧೮||

ಮರಣವಾಗುವವರೆಗೂ ಧಾರಣೆಯನ್ನು ಮಾಡಿಕೊಂಡಿದ್ದು, ನನಗಿಚ್ಛೆಯಿರುವವರೆಗೂ ಶರೀರವನ್ನು ಧರಿಸಿಕೊಂಡಿರುವೆನು. ಬಳಿಕ ಮರಣಕಾಲ ಸನ್ನಿಹಿತವಾದರೆ ಈ ಶರೀರವನ್ನು ಬಿಟ್ಟುಬಿಡುವೆನು. ಹೀಗೆಂದು ನನ್ನ ಅಭಿಪ್ರಾಯವಿರುವುದು ||೧೯||

ಅಯ್ಯಾ ದೊರೆ! ಈ ಶರೀರತ್ಯಾಗವಾಗುವವರೆಗೂ ನಾನು ಪರರ ಪ್ರಾಣವನ್ನು ಹಿಂಸಿಸಕೂಡದು. ಆದುಕಾರಣ, ನಾನು ಹೇಳುವ ಈ ಮಾತನ್ನು ಕೇಳುವವಳಾಗು ||೨೦||

ಶರಚ್ಚಂದ್ರಕಿರಣದಂತೆ ನಿರ್ಮಲವಾಗಿಯೂ, ಉತ್ತರದಿಕ್ಕಿನಲ್ಲಿ ಪೂರ್ವಪಶ್ಚಿಮ ಸಮುದ್ರಗಳನ್ನು ವ್ಯಾಪಿಸಿಯೂ ಇರುವ ಹಿಮವಂತನೆಂಬ ಪರ್ವತರಾಜನಿರುವನಷ್ಟೆ! ||೨೧||

ಆ ಪರ್ವತದ ಸುವರ್ಣಶಿಖರದಲ್ಲಿ, ಗುಹೆಯೊಳಗೆ, ಅಯೋಮಯಳಾಗಿ ಕರ್ಕಟಿಯೆಂಬ ರಾಕ್ಷಸಿಯಾದ ನಾನು, ಮೇಘಪಂಕ್ತಿಯಂತೆ ವಾಸಮಾಡಿಕೊಂಡಿರುವೆನು ||೨೨||

ಅಯ್ಯಾ! ರಾಜನೆ! ನಾನು ಹಿಂದೆ, ಜನಗಳನ್ನು ಕೊಲ್ಲುವುದಕ್ಕೆ ಸೂಚೀರೂಪವಾಗಿ ಪ್ರಾಣಿಗಳ ಪ್ರಾಣವನ್ನಪಹರಿಸತಕ್ಕ ವಿಷೂಚಿಕೆಯಾಗಬೇಕೆಂಬ ಉದ್ದೇಶದಿಂದ, ಚತುರ್ಮುಖ ಬ್ರಹ್ಮನನ್ನು ತಪಸ್ಸಿನಿಂದ ಒಲಿಸಿಕೊಂಡೆನು ||೨೩||

ಆ ಬ್ರಹ್ಮನ ದೆಸೆಯಿಂದ ವರವನ್ನು ಹೊಂದಿದವಳಾಗಿ, ವಿಷೂಚಿಕಾರೂಪದಿಂದ ಜನರ ಜೀವವನ್ನು ಬಾಧೆಪಡಿಸುತ, ಅನೇಕ ವರ್ಷಗಳನ್ನನುಭವಿಸಿದೆನು ||೨೪||

ತ್ವಯಾ ನ ಗುಣಿನೋ ಹಿಂಸ್ಯಾಃ ಇತಿ ಮೇ ಬ್ರಹ್ಮಣಾ ತತಃ ।
ನಿಯಮಾರ್ಥಂ ಮಹಾಮನ್ತ್ರಃ ತದಾಯತ್ತಾಸ್ಮಿ ಸಂಸ್ಥಿತಾ ॥೨೫॥
ಸೋಽಯಂ ಪ್ರಗೃಹ್ಯತಾಂ ತೇನ ಸರ್ವಂ ಹೃದಯಶೂಲನಮ್ ।
ಶಮಮೇಷ್ಯತಿ ಲೋಕೇಽಸ್ಮಾತ್ ಕಾ ಕಥಾ ಮತ್ಕೃತೇ ಭ್ರಮೇ ॥೨೬॥
ವಿತತೈವಾಸ್ಮಿ ಹಿಂಸಾಯಾಂ ಯತ್ ಪುರಾ ಹಿಂಸಿತಂ ಮಯಾ ।
ಜನಸ್ಯ ಹೃದಯಂ ತೇನ ನಾಡ್ಯೋ ವೈಧುರ್ಯಮಾಗತಾಃ ॥೨೭॥
ಹಿಂಸಿತ್ವಾ ರಕ್ತಮಾಂಸಾನಿ ಸನ್ತ್ಯಕ್ತಾಯೇ ಮಹಾಜನಾಃ ।
ತೇಭ್ಯೋ ವಿಧುರನಾಡಿಭ್ಯೋ ಯೇ ಜಾತಾಸ್ತೇಪಿ ತಾದೃಶಾಃ ॥೨೮॥
ರಾಜನ್ ವಿಷೂಚಿಕಾಮನ್ತ್ರಃ ಸೋಽಯಂ ಸಮ್ಪನ್ನಏವ ತೇ ।
ನ ಹಿ ಸತ್ವವತಾಮಸ್ತಿ ದುಸ್ಸಾಧ್ಯಮಿಹ ಕಿಞ್ಚನ ॥೨೯॥
ಅತೋ ದುರ್ನಾಡಿಕೋಽಶೇಷು ಶೂಲಾನಾಂ ಪರಿಶಾನ್ತಯೇ ।
ಮನ್ತ್ರೋ ಯೋ ಬ್ರಹ್ಮಣಾ ಪ್ರೋಕ್ತೋ ರಾಜನ್ ಶೀಘ್ರಂ ಗೃಹಾಣ ತಮ್॥
ಆಗಚ್ಛ ನಿಕಟಂ ನದ್ಯಾಃ ಗಚ್ಛಾಮಸ್ತತ್ರ ಭೂಮಿಪ ।
ಸ್ನಾನಾಚಾನ್ತಾಭ್ಯಾಂ ಸಂಯತಾಭ್ಯಾಂ ಭವದ್ಭ್ಯಾಂ ಸುಮತಾ ದದೇ ॥೩೧॥

ಆಮೇಲೆ ಬ್ರಹ್ಮನು 'ಗುಣಶಾಲಿಗಳನ್ನು ನೀನು ಹಿಂಸಿಸಕೂಡದು' ಎಂದು ನಿಯಮನ ಮಾಡಿ, ಅದಕ್ಕೋಸ್ಕರವಾಗಿ ಒಂದು ಮಹಾಮಂತ್ರವನ್ನು ಏರ್ಪಡಿಸಿದನು. ನಾನು ಈಗ ಆ ಮಂತ್ರಾಧೀನಳಾಗಿರುವೆನು ॥೨೫॥

ಆ ಮಂತ್ರವನ್ನು ನೀನು ಈಗ ಪರಿಗ್ರಹಿಸು. ಅದರಿಂದ, ಈ ಲೋಕದಲ್ಲಿ ಸಮಸ್ತವಾದ ಹೃದಯಶೂಲೆಯೂ ಶಾಂತವಾಗುವುದು. ಹೀಗಿರುವಾಗ, ನನ್ನಿಂದುಂಟಾಗುವ ಭ್ರಮೆಯ ವಿಷಯದಲ್ಲಿ ಹೇಳುವುದೇನಿದೆ? ॥೨೬॥

ನಾನು ಸಾಮಾನ್ಯವಾಗಿ ಸರ್ವದಾ ಪ್ರಾಣಿಹಿಂಸೆಯಲ್ಲುದ್ಯುಕ್ತಳಾಗಿಯೇ ಇರುವೆನು. ಹೀಗಿರುವುದರಿಂದ, ನಾನು ಪೂರ್ವದಲ್ಲಿ ಹಿಂಸೆಪಡಿಸಿದುದಾವುದುಂಟೋ,-ಅದರಿಂದ ಜನರ ನಾಡಿಗಳೆಲ್ಲವೂ ದುರ್ಬಲಗಳಾಗಿಬಿಟ್ಟಿರುವುವು ॥೨೭॥

ಹೀಗೆ ರಕ್ತಮಾಂಸಗಳನ್ನೆಲ್ಲ ಹೀರಿಬಿಟ್ಟು ನನ್ನಿಂದ ಪರಿತ್ಯಕ್ತರಾಗಿ-ದುರ್ಬಲವಾದ ನಾಡಿಯುಳ್ಳ-ಆ ಜನಗಳ ದೆಸೆಯಿಂದ ಯಾರುಯಾರು ಹುಟ್ಟಿದರೋ, ಅವರೂ ಹಾಗೆಯೇ ದುರ್ಬಲರೇ ಆಗಿಬಿಟ್ಟರು ॥೨೮॥

ಅಯ್ಯಾ! ರಾಜ! ಆ ವಿಷೂಚಿಕಾಮಂತ್ರವು ನಿನಗೆ ಸಿದ್ಧಿಸಿಯೇ ಇರುವುದೆಂದು ತಿಳಿ. ಸಾತ್ವಿಕರಾದವರಿಗೆ ಈ ಲೋಕದಲ್ಲಿ ಅಸಾಧ್ಯವಾದುದಾವುದೂ ಇಲ್ಲವಷ್ಟೆ! ॥೨೯॥

ಆದುಕಾರಣ, ಎಲೈ ರಾಜನೆ! ದುರ್ಬಲವಾದ ನಾಡಿಯುಳ್ಳವರಲ್ಲಿ ಶೂಲವು ಶಾಂತಿಹೊಂದುವುದಕ್ಕೋಸ್ಕರ, ಬ್ರಹ್ಮನಿಂದ ಉಪದಿಷ್ಟವಾದ ಆ ದಿವ್ಯಮಂತ್ರವನ್ನು ನೀನು ಸ್ವೀಕರಿಸು ॥

ಎಲೈ ಭೂಮಿಪಾಲನೆ! ನದೀತೀರಕ್ಕೆ ಬರುವವನಾಗು; ಅಲ್ಲಿ ಹೋಗೋಣ. ಅಲ್ಲಿ ಕ್ರಮವಾಗಿ ಸ್ನಾನಾದಿಗಳಿಂದ ಪರಿಶುದ್ಧರಾಗಿ ನಿಯಮಯುಕ್ತರಾದರೆ, ನಾನು ಕೇವಲ ಸಂತೋಷದಿಂದ ಆ ಮಂತ್ರವನ್ನು ನಿಮ್ಮಿಬ್ಬರಿಗೂ ಉಪದೇಶಿಸುವೆನು ॥೩೧॥

ಶ್ರೀ ವಸಿಷ್ಠ ಉವಾಚ.

ಇತಿ ತಸ್ಯಾಂ ತದಾ ರಾತ್ರ್ಯಾಂ ರಾಕ್ಷಸೀಮನ್ತ್ರಿಭೂಭೃತಃ ।
ಜಗ್ಮುಸ್ತೇ ಸರಿತಸ್ತೀರಂ ಮಿಥಃ ಸಞ್ಜಾತಸೌಹೃದಾಃ ॥೨೧॥
ಅನ್ವಯವ್ಯತಿರೇಕೇಣ ರಾಕ್ಷಸ್ಯಾಃ ಸೌಹೃದಂ ತದಾ ।
ಜ್ಞಾತ್ವಾ ಸ್ಥಿತೌ ತೌ ಸ್ವಾಚಾನ್ತೌ ಉಭಾವನ್ತೇನಿವಾಸಿನೌ ॥೨೨॥
ತಯಾ ಬ್ರಹ್ಮೋಪದಿಷ್ಟೋಽಸೌ ತತಸ್ತಾಭ್ಯಾಂ ಯಥಾಕ್ರಮಮ್ ।
ಸ್ನೇಹಾದ್ವಿಷೂಚಿಕಾಮನ್ತ್ರಃ ಪ್ರದತ್ತೋ ಜಪಸಿದ್ಧಿದಃ ॥೨೩॥
ತತಃ ಸಞ್ಜಾತಸೌಹಾರ್ದೌ ತೌ ವಿಸೃಜ್ಯ ನಿಶಾಚರೀ ।
ಯದಾ ಗನ್ತುಂ ಪ್ರವೃತ್ತಾಸೌ ತದಾ ರಾಜಾಬ್ರವೀದ್ವಚಃ ॥೨೪॥

ರಾಜೋವಾಚ.

ಗುರುಸ್ತ್ವಂ ನೌ ಮಹಾದೇಹೇ ವಯಸ್ಯಾ ಚ ಸುನಿರ್ವೃತಾ ।
ನಿಮನ್ತ್ರಯಾವಹೇ ಯತ್ನಾತ್ ಗ್ರಾಸಾಯ ತವಸುನ್ದರಿ ॥೨೫॥
ನ ಚಾಸ್ಮತ್ಪ್ರಣಯಂ ಪ್ರೀತಾ ವಿತಥೀಕರ್ತುಮರ್ಹಸಿ ।
ಸೌಹಾರ್ದಂ ಸುಜನಾನಾಂ ಹಿ ದರ್ಶನಾದೇವ ವರ್ಧತೇ ॥೨೬॥
ಉಪು ಸೌಭಾಗ್ಯಸಂಯುಕ್ತಂ ಕೃತ್ವಾಕಾರಂ ಮನೋರಮಮ್ ।

ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳುವರು :—

ಅಯ್ಯಾ! ರಾಮ! ಹೀಗೆ ಆ ರಾತ್ರಿಯಲ್ಲಿ ಆ ರಾಕ್ಷಸಿಯೂ, ಮಂತ್ರಿಯೂ, ದೊರೆಯೂ ಕೂಡ ಪರಸ್ಪರ ಸ್ನೇಹವುಂಟಾದವರಾಗಿ ನದೀತೀರಕ್ಕೆ ಹೋದರು ॥೨೧॥

ಆಗ, ಅವರಿಬ್ಬರೂ ರಾಕ್ಷಸಿಯ ಮನೋಭಾವವನ್ನು ಸರಿಯಾದ ಗುರುತುಗಳಿಂದ ನಿಶ್ಚಯಿಸಿದವರಾಗಿ, ಶುಚಿಭೂತರಾಗಿ ಅವಳಿಗೆ ಶಿಷ್ಯರಾಗಿ ನಿಂತರು ॥೨೨॥

ಅನಂತರ, ಆ ಕರ್ಕಟಿಯು, ಬ್ರಹ್ಮನಿಂದ ತನಗುಪದೇಶಿಸಲ್ಪಟ್ಟಿದ್ದ ಸಿದ್ಧಿಪ್ರದವಾದ ವಿಷೂಚಿಕಾಮಂತ್ರವನ್ನು, ಪ್ರೀತಿಯಿಂದ ಅವರಿಬ್ಬರಿಗೂ ಕ್ರಮವಾಗಿ ಉಪದೇಶಿಸಿದಳು ॥೨೩॥

ಬಳಿಕ ಸ್ನೇಹವುಳ್ಳವರಾದ ಅವರಿಬ್ಬರನ್ನೂ ಬಿಟ್ಟುಬಿಟ್ಟು ಆ ರಾಕ್ಷಸಿ ಯಾವಾಗ ಹೊರಡಲುಪಕ್ರಮಿಸಿದಳೋ, ಆಗ ಆ ದೊರೆಯು ಅವಳನ್ನು ಕುರಿತು ಈ ಮಾತನ್ನು ಹೇಳಿದನು ॥೨೪॥

ಆ ದೊರೆ ಹೇಳಿದುದೇನೆಂದರೆ:—

ಎಲೌ ಮಹಾಕಾಯಳೆ! ನೀನು ನಮ್ಮಿಬ್ಬರಿಗೂ ಗುರುವಾಗಿರುವೆ; ಮತ್ತು, ಕೇವಲ ತೃಪ್ತಳಾದ ಸಖಿಯೂ ಆಗಿರುವೆ. ಅದುಕಾರಣ, ನೀನು ನಮ್ಮಲ್ಲಿ ಆಹಾರವನ್ನು ಸ್ವೀಕರಿಸಬೇಕೆಂದು ನಾವು ನಿನ್ನನ್ನು ಕರೆಯುವೆವು ॥೨೫॥

ನೀನು ನಮ್ಮಲ್ಲಿ ಕೇವಲ ಪ್ರೀತಿಯುಕ್ತಳಾಗಿರುವಕಾರಣ, ನಮ್ಮ ಪ್ರೀತಿಪೂರ್ವಕವಾದ ಈ ಪ್ರಾರ್ಥನೆಯನ್ನು ವ್ಯರ್ಥಮಾಡಲಾಗದು. ಲೋಕದಲ್ಲಿ ಸತ್ಪುರುಷರಿಗೆ ಸೌಹಾರ್ದವು ದರ್ಶನದಿಂದಲೇ ವೃದ್ಧಿಹೊಂದುವುದಲ್ಲವೆ! ॥೨೬॥

ಅದುಕಾರಣ, ಎಲೌ ಭದ್ರಳೆ! ನೀನು ಬೇಗನೆ ನಿನ್ನ ಶರೀರವನ್ನು ಸೌಭಾಗ್ಯಯುಕ್ತವ

ಆಗಚ್ಛಾಸ್ಮದ್ಗೃಹಂ ಭದ್ರೇ ತತ್ರ ತಿಷ್ಠ ಯಥಾಸುಖಮ್ ॥೩೮॥

ರಾಕ್ಷಸ್ಯುವಾಚ.

ಮುಗ್ಧಸ್ತ್ರೀರೂಪಧಾರಿಣ್ಯೈ ದಾತುಂ ಶಕ್ತೋಽಸಿ ಭೋಜನಮ್ ।
ಸಂತರ್ಪಯಸಿ ಮಾಂ ಕೇನ ರಾಕ್ಷಸಾಕಾರಧಾರಿಣೀಮ್ ॥೩೯॥
ರಕ್ಷೋಽನ್ನಮೇವ ಸಂತುಷ್ಟ್ಯೈ ನ ಸಾಮಾನ್ಯಜನಾಶನಮ್ ।
ಪೂರ್ವಸಿದ್ಧಸ್ವಭಾವೋಽಯಂ ಆದೇಹಂ ನ ನಿವರ್ತತೇ ॥೪೦॥

ರಾಜೋವಾಚ.

ಹೇಮಸ್ರಗ್ದಾಮವಲಿತಾ ದಿನಾನಿ ಕತಿಚಿದ್ಗೃಹೇ ।
ಮಮ ಸ್ತ್ರೀರೂಪಿಣೀ ತಿಷ್ಠ ಯಾವದಿಚ್ಛಮನಿನ್ದಿತೇ ॥೪೧॥
ತತೋ ದುಷ್ಕೃತಿನಶ್ಚೋರಾನ್ ವಧ್ಯಾಞ್ಛತಸಹಸ್ರಶಃ ।
ಮಣ್ಡಲೇಭ್ಯಃ ಸಮಾನೀಯ ದದೇ ತುಭ್ಯಂ ಸುಭೋಜನಮ್ ॥೪೨॥
ಕಾನ್ತರೂಪಂ ಪರಿತ್ಯಜ್ಯ ಗೃಹೀತ್ವಾ ರಾಕ್ಷಸಂ ವಪುಃ ।
ಆದಾಯ ವಧ್ಯಾಞ್ಛತಶಃ ಪುರುಷಾಂಸ್ತಾನ್ ಸುಸಞ್ಚಿತಾನ್ ॥೪೩॥
ನಯಸ್ವ ಹಿಮವಚ್ಛೃಙ್ಗಂ ತತ್ರ ಭುಂಕ್ಷ್ವ ಯಥಾಸುಖಮ್ ।

ನ್ನಾಗಿಯೂ, ಮನೋಹರವನ್ನಾಗಿಯೂ ಮಾಡಿಕೊಂಡು, ನಮ್ಮ ಮನೆಗೆ ಬರುವಳಾಗು. ಅಲ್ಲಿ ಸ್ವಲ್ಪಕಾಲ ಸುಖವಾಗಿ ವಾಸಮಾಡಿಕೊಂಡಿರು ॥೩೮॥

ಇದಕ್ಕೆ ರಾಕ್ಷಸಿಯುತ್ತರ ಹೇಳುವಳು :—

ಹೇರಾಜ! ಮುಗ್ಧಳಾದ ಸ್ತ್ರೀಯ ರೂಪವನ್ನು ನಾನು ಧರಿಸಿದರೆ, ಆಗ ನೀನು ನನಗೆ ಉಚಿತವಾದ ಭೋಜನವನ್ನು ಕೊಡಲು ಶಕ್ತನಾಗಿರುವೆ. ಆದರೆ, ರಾಕ್ಷಸಶರೀರವನ್ನು ನಾನು ಧರಿಸಿದಾಗ, ನೀನು ಯಾವುದರಿಂದ ನನಗೆ ತೃಪ್ತಿಯುಂಟುಮಾಡುವೆ? ॥೩೯॥

ನನಗಾದರೋ,—ರಾಕ್ಷಸೋಚಿತವಾದ ಆಹಾರದಿಂದ ತೃಪ್ತಿಯಾಗುವುದೇ ಹೊರತು, ಸಾಮಾನ್ಯಜನರ ಆಹಾರದಿಂದ ತೃಪ್ತಿಯಾಗುವುದಿಲ್ಲ. ಈ ಸ್ವಭಾವವು ಪೂರ್ವದಿಂದಲೂ ಸಿದ್ಧವಾಗಿರುವಕಾರಣ, ಇದು ಮರಣವಾಗುವವರೆಗೂ ತಪ್ಪುವುದಿಲ್ಲ ॥೪೦॥

ಆಗ ರಾಜನು ಉತ್ತರ ಹೇಳುವನು :—

ಎಲೌ ಮಹಾಮಹಿಮಳೆ! ನೀನು ಸುವರ್ಣಮಾಲ್ಯಭೂಷಿತಳಾಗಿ ಸ್ತ್ರೀರೂಪವನ್ನು ಧರಿಸಿ ಕೆಲವು ದಿನ ನಿನ್ನ ಮನಬಂದಂತೆ ನನ್ನ ಮನೆಯಲ್ಲಿರುವಳಾಗು ॥೪೧॥

ಬಳಿಕ, ಪಾಪಾತ್ಮರಾಗಿ ಕಳ್ಳರಾಗಿ ವಧ್ಯರಾಗಿ ಇರುವವರನ್ನು ನನ್ನ ದೇಶದ ಸಮಸ್ತಭಾಗದಿಂದಲೂ ನೂರುಗಟ್ಟಲೆಯಾಗಿಯೂ ಸಾವಿರಗಟ್ಟಲೆಯಾಗಿಯೂ ತರಿಸಿ, ನಿನಗೆ ದಿವ್ಯಭೋಜನವನ್ನು ಕೊಡುವೆನು ॥೪೨॥

ಆಮೇಲೆ ನೀನು ಸುಂದರೀರೂಪವನ್ನು ಬಿಟ್ಟು, ರಾಕ್ಷಸೀರೂಪವನ್ನು ಧರಿಸಿ, ನಾನು ನೂರುಗಟ್ಟಲೆ ಕೂಡಿಹಾಕಿರುವ ಆ ವಧ್ಯಪುರುಷರನ್ನು ತೆಗೆದುಕೊಂಡು ಹಿಮವತ್ಪರ್ವತಕ್ಕೆ ಹೋಗು;

ಮಹಾಶನಾನಾಮೇಕಾನ್ತೇ ಭೋಜನಂ ಹಿ ಸುಖಾಯತೇ ॥೪೪॥
ತೃಪ್ತೋ ನಿದ್ರಾಂ ಮನಾಕ್ ಕೃತ್ವಾ ಭವ ಭೂಯಃ ಸಮಾಧಿಭಾಕ್ ।
ಸಮಾಧಿವಿರತಾ ಭೂಯೋಽಪ್ಯಾಗತ್ಯ ಪುನರನ್ಯದಾ ॥೪೫॥
ನೇಷ್ಯಸ್ಯನ್ಯಾನ್ ವಧ್ಯಜನಾನ್ ಹಿಂಸಾ ನೈಷಾಂ ಚ ಧರ್ಮತಃ ।
ಸ್ವಧರ್ಮೇಣ ಚ ಹಿಂಸೈವ ಮಹಾಕರುಣಯಾ ಸಮಾ ॥೪೬॥
ತ್ವಂ ಸಮೇಷ್ಯಸಿ ಚಾವಶ್ಯಂ ಮಾಂ ಸಮಾಧಿವಿರಾಗಿಣೀ ।
ಅಸತಾಮಪಿ ಸಂರೂಢಂ ಸೌಹಾರ್ದಂ ನ ನಿವರ್ತತೇ ॥೪೭॥

ರಾಕ್ಷಸ್ಯುವಾಚ.

ಯುಕ್ತಮುಕ್ತಂ ತ್ವಯಾ ರಾಜನ್ ಕರೋಮ್ಯೇವಮಹಂ ಸಖೇ ।
ಸೌಹಾರ್ದೇನ ಪ್ರವೃತ್ತಸ್ಯ ಕೋ ವಾಕ್ಯಂ ನಾಭಿನನ್ದತಿ ॥೪೮॥
ಇತ್ಯುಕ್ತ್ವಾ ರಾಕ್ಷಸೀ ತತ್ರ ಸಮ್ಪನ್ನಾ ಸುವಿಲಾಸಿನೀ ।
ಹಾರಕೇಯೂರಕಟಕಪಟ್ಟಸ್ರಗ್ದಾಮಧಾರಿಣೀ ॥೪೯॥
ರಾಜನ್ನಾಗಚ್ಛ ಗಚ್ಛಾಮಃ ಇತ್ಯುಕ್ತ್ವಾ ಭೂಪಮನ್ತ್ರಿಣೌ ।
ಅಗ್ರೇ ಗನ್ತುಂ ಪ್ರವೃತ್ತೌ ತೌ ರಾತ್ರಾವನುಸಸಾರ ಸಾ ॥೫೦॥

ಅಲ್ಲಿ ಯಥಾಸುಖವಾಗಿ ಭೋಜನಮಾಡು. ಪ್ರಪಂಚದಲ್ಲಿ, ಹೆಚ್ಚಾಗಿ ಊಟಮಾಡತಕ್ಕವರಿಗೆ ಏಕಾಂತದಲ್ಲಿ ಭೋಜನವೇ ಸುಖಕರವಲ್ಲವೆ! ॥೪೩-೪೪॥

ಹೀಗೆ ಭೋಜನದಿಂದ ತೃಪ್ತಳಾಗಿ, ಸ್ವಲ್ಪ ನಿದ್ರೆಮಾಡಿ, ಪುನಃ ಸಮಾಧಿನಿಷ್ಠಳಾಗು. ಸಮಾಧಿಯಿಂದ ವಿರಾಮಪಡೆದಾಗ, ಮತ್ತೆ ಇನ್ನೊಂದು ವೇಳೆ ಇಲ್ಲಿಗೆ ಬಂದು, ಅದುವರೆಗೆ ನಾನು ಕೂಡಿಸಿಟ್ಟಿರುವ ವಧ್ಯರನ್ನು ತೆಗೆದುಕೊಂಡು ಹೋಗು. ಅವರುಗಳನ್ನು ಹಿಂಸೆ ಪಡಿಸುವುದರಿಂದ ಪಾಪಸಂಘಟನೆಯಾಗುವುದೆಂದೆಣಿಸಬೇಡ. ಅವರನ್ನು ಹಿಂಸಿಸುವುದು ಧರ್ಮಪ್ರಾಪ್ತವಾಗಿರುವುದರಿಂದ, ಅದು ಹಿಂಸೆಯೇ ಅಲ್ಲ. ನ್ಯಾಯವಾಗಿ ಸ್ವಧರ್ಮದಿಂದ ಮಾಡುವ ಹಿಂಸೆಯೂ ಮಹಾಕರುಣೆಗೆ ಸಮಾನವಾದುದು ॥೪೫-೪೬॥

ನೀನು ಸಮಾಧಿವಿಶ್ರಾಂತಿಯಾದ ಕಾಲದಲ್ಲಿ ನನ್ನ ಮನೆಗೆ ಅವಶ್ಯವಾಗಿ ಬಂದೇತೀರಬೇಕು. ವಸ್ತುತಃ ನಾನು ನಿನ್ನಷ್ಟು ಮಹಿಮವಂತನಲ್ಲ. ಆದರೂ ಅಸತ್ಪುರುಷರಿಗೂ ಕೂಡ ಒಂದಾವೃತ್ತಿ ಬೇರುಬಿಟ್ಟ ಸೌಹಾರ್ದವು ಯಾವಾಗಲೂ ಹೋಗಲಾರದಲ್ಲವೆ! ॥೪೭॥

ಇದನ್ನು ಕೇಳಿ ಆ ಕರ್ಕಟಿ ಹೇಳುವಳು:—

ಹೇ ರಾಜ! ನೀನು ಹೇಳಿದುದು ಅತ್ಯಂತ ಯುಕ್ತವಾಗಿರುವುದು. ಎಲೈ ಸಖನೆ! ನಾನು, ನೀನು ಹೇಳಿದಂತೆ ಅವಶ್ಯವಾಗಿ ಮಾಡುವೆನು. ಸೌಹಾರ್ದದಿಂದ ನಡೆಯುತ್ತಿರತಕ್ಕವನ ಮಾತನ್ನು ಯಾರುತಾನೆ ಸಮ್ಮತಿಸುವುದಿಲ್ಲ! ॥೪೮॥

ಹೀಗೆಂದು ಹೇಳಿ ಆ ರಾಕ್ಷಸಿಯು, ಹಾರ ಅಂಗದ ಕಟಕ ಪಟ್ಟವಸ್ತ್ರ ಪುಷ್ಪಮಾಲ್ಯ— ಇತ್ಯಾದಿಗಳಿಂದ ಭೂಷಿತಳಾದ ಸುಂದರಿಯಾಗಿಬಿಟ್ಟಳು ॥೪೯॥

'ದೊರೆಯೆ! ಬಾ ಹೋಗೋಣ' ಎಂದು ಹೇಳಿ, ಆ ಕರ್ಕಟಿಯು, ಆ ರಾತ್ರಿಯಲ್ಲಿ ಮುಂದುಗಡೆ ಹೊರಟ ಕಿರಾತರಾಜಮಂತ್ರಿಗಳನ್ನು ಅನುಸರಿಸಿ ಹೊರಟಳು ॥೫೦॥

ಅಥ ತೇ ಪಾರ್ಥಿವಗೃಹಂ ಪ್ರಾಪ್ಯ ತಾಂ ರಜನೀಂ ಮಿಥಃ ।
ಕಥಯೈಕಗೃಹೇ ರಮ್ಯೇ ಕ್ಷಪಯಾಮಾಸುರಾದೃತಾಃ ॥೫೧॥
ಪ್ರಭಾತೇಽನ್ತಃಪುರೇ ತಸ್ಥೌ ಪುರನ್ಧ್ರೀಜನಲೀಲಯಾ ।
ರಾಕ್ಷಸೀ ಮನ್ತ್ರಿರಾಜಾನೌ ಸ್ವವ್ಯಾಪಾರೌ ಬಭೂವತುಃ ॥೫೨॥
ತತೋ ದಿವಸಷಟ್ಕೇನ ಸಞ್ಚಿತಾನಿ ಮಹೀಭೃತಾ ।
ನೃಪಃ ಪರಪುರೇಭ್ಯೋಽಪಿ ಸ್ವಮಣ್ಡಲಗಣಾತ್ ತಥಾ ॥೫೩॥
ತ್ರೀಣಿ ವಧ್ಯಸಹಸ್ರಾಣಿ ತಾನಿ ತಸ್ಯೈ ತದಾ ದದೌ ।
ಸಾ ಬಭೂವ ನಿಶಾಕಾಲೇ ಸೈವೋಗ್ರಾ ಕೃಷ್ಣರಾಕ್ಷಸೀ ॥೫೪॥
ತಾನಿ ವಧ್ಯಸಹಸ್ರಾಣಿ ಜಗ್ರಾಹ ಭುಜಮಣ್ಡಲೇ ।
ಧಾರಾನಿಕರಜಾಲಾನಿ ಮೇಘಮಾಲೇವ ಕೋಟರೇ ॥೫೫॥
ಯಯೌ ರಾಜಾನಮಾಪೃಚ್ಛ್ಯ ತದೇವ ಹಿಮವಚ್ಛಿರಃ ।
ದರಿದ್ರಾ ಲಬ್ಧಹೇಮೇವ ಗೃಹೇಷೂಗ್ರಶರೀರಿಣೀ ॥೫೬॥
ತತ್ರ ತೃಪ್ತಾ ಭೃಶಂ ಭುಕ್ತ್ವಾ ಸುಖಂ ಸುಪ್ತ್ವಾ ದಿನತ್ರಯಮ್ ।
ಆಸೀತ್ ಪ್ರಬೋಧಸುಸ್ವಸ್ಥಾ ಸಾ ಸಮಾಧಿಮತಿಃ ಪುನಃ ॥೫೭॥
ಪಞ್ಚಭಿರ್ವಾ ಚತುರ್ಭಿರ್ವಾ ವರ್ಷೈಃ ಸಾ ಸಮ್ಪ್ರಬುಧ್ಯತೇ ।
ತತ್ ತತೋ ಮಣ್ಡಲಂ ಯಾತಿ ತೇನ ರಾಜಸಭಾಜನೇ ॥೫೮॥

ಅನಂತರ ಆ ಮೂರು ಜನರೂ ಅರಮನೆಗೆ ಹೋಗಿ, ಅಲ್ಲಿ ಒಂದು ದಿವ್ಯಭವನದೊಳಗೆ ಪರಸ್ಪರ ಸಲ್ಲಾಪಗಳಿಂದ ಆ ರಾತ್ರಿಯನ್ನು ಕಳೆದರು ॥೫೧॥

ಬೆಳಗಾದಮೇಲೆ, ಆ ಕರ್ಕಟಿಯು ಸಾಮಾನ್ಯಸ್ತ್ರೀಯಂತೆ ಆ ಅಂತಃಪುರದಲ್ಲಿ ವಾಸಮಾಡಿಕೊಂಡಿದ್ದಳು. ರಾಜನೂ ಮಂತ್ರಿಯೂ ತಮ್ಮ ಕೆಲಸದಲ್ಲಿ ವ್ಯಾಪೃತರಾದರು ॥೫೨॥

ಆಮೇಲೆ, ಆರು ದಿವಸಗಳಲ್ಲಿ, ಆ ರಾಜನು ರಾಜಧಾನಿಯಿಂದಲೂ ಇತರ ಪಟ್ಟಣಗಳಿಂದಲೂ ತರಿಸಿ ಕೂಡಿಸಿದ ಮೂರುಸಾವಿರ ವಧ್ಯಪುರುಷರನ್ನು ಅವಳಿಗೆ ಕೊಟ್ಟನು. ಅವಳು ರಾತ್ರಿಯಲ್ಲಿ ಪುನಃ ಪೂರ್ವದಂತೆ ಉಗ್ರಳಾದ ರಾಕ್ಷಸಿಯೇ ಆಗಿಬಿಟ್ಟಳು ॥೫೩–೫೪॥

ಆಮೇಲೆ, ಮೇಘಪಂಕ್ತಿಯು ತನ್ನ ಒಳಭಾಗದಲ್ಲಿರುವ ಜಲಧಾರಾ ಸಮೂಹಗಳನ್ನು ಧರಿಸುವಂತೆ, ಆ ಮೂರುಸಾವಿರ ವಧ್ಯರನ್ನೂ ಕರ್ಕಟಿಯು ತನ್ನ ಭುಜಗಳಲ್ಲಿ ಧರಿಸಿಕೊಂಡಳು ॥

ಅನಂತರ, ಸಮಸ್ತ ದುರ್ಗ್ರಹಮಧ್ಯದಲ್ಲಿಯೂ ಉಗ್ರದೇಹಳಾದ ಆ ಕರ್ಕಟಿಯು, ಯಥೇಚ್ಛವಾಗಿ ಸುವರ್ಣವನ್ನು ಪಡೆದ ದರಿದ್ರಳಂತೆ ಸಂತುಷ್ಟಳಾಗಿ, ದೊರೆಯನ್ನು ಕೇಳಿಕೊಂಡು, ಆ ಹಿಮವತ್ಪರ್ವತದ ಶಿಖರಕ್ಕೇ ಹೊರಟುಹೋದಳು ॥೫೬॥

ಅಲ್ಲಿ ಯಥೇಚ್ಛವಾಗಿ ಭೋಜನ ಮಾಡಿ ತೃಪ್ತಳಾಗಿ, ಮೂರುದಿವಸ ಸುಖವಾಗಿ ನಿದ್ರೆಮಾಡಿ, ಎಚ್ಚರವಾದ ಬಳಿಕ ಮತ್ತೆ ಸಮಾಧಿಯಲ್ಲಿ ಮನಸ್ಸಿಟ್ಟವಳಾದಳು ॥೫೭॥

ಬಳಿಕ ಅವಳು, ನಾಲ್ಕೈದು ವರ್ಷಗಳಿಗೊಂದಾವೃತ್ತಿ ಸಮಾಧಿಯಿಂದ ಬಹಿರ್ಮುಖಳಾಗುತಲೂ, ಆಗ ರಾಜನ ಪೂಜೆಯನ್ನು ಸ್ವೀಕರಿಸುವುದಕ್ಕೆ ಅವನ ಪಟ್ಟಣಕ್ಕೆ ಹೋಗುತಲೂ ಇದ್ದಳು ॥೫೮॥

ತತ್ರ ವಿಸ್ರಮ್ಭಗರ್ಭಾಭಿಃ ಕಥಾಭಿಃ ಕಿಞ್ಚಿದೇವ ಸಾ ।
ಸ್ಥಿತ್ವಾ ಕಾಲಂ ಗೃಹೀತ್ವಾ ತಾನ್ ವಧ್ಯಾನ್ ಸ್ವಾಸ್ಪದಮೇತ್ಯಥ ॥೫೯॥
ಜೀವನ್ಮುಕ್ತತಯೈವಮೇವ ವಿಪಿನೇ ಸಾದ್ಯಾಪಿ ರಕ್ಷೋಙ್ಗನಾ
ತಸ್ಮಿನ್ನೇವ ಗಿರೌ ಸ್ಥಿತಾ ವಿಚಲಿತಧ್ಯಾನೈಕತಾನಾಶಯಾ ।
ತಸ್ಮಿನ್ ರಾಜನಿ ಶಾನ್ತಿಮಾಗತವತಿ ತ್ಯಕ್ತೇಷಣೇನಾತ್ಮನಾ
ತದ್ರಾಷ್ಟ್ರಾಧಿಪಸೌಹೃದೈಃ ಸ್ವಕಬಳಾನಾಸ್ವಾದಯನ್ತೀ ಚಿರಮ್ ॥

ಇತಿ ಉತ್ಪತ್ತಿಪ್ರಕರಣೇ ರಾಕ್ಷಸೀಸೌಹಾರ್ದಂ ನಾಮ
ದ್ವ್ಯಶೀತಿತಮಃ ಸರ್ಗಃ.

ಅಲ್ಲಿ ಕೇವಲ ವಿಶ್ವಾಸಗರ್ಭಿತಗಳಾದ ಸಲ್ಲಾಪಗಳಿಂದ ಸ್ವಲ್ಪಕಾಲ ಮಾತ್ರವಿದ್ದು, ಆ ರಾಜನಿಂದ ಸಮರ್ಪಿಸಲ್ಪಟ್ಟ ವಧ್ಯರನ್ನು ತೆಗೆದುಕೊಂಡು, ಮತ್ತೆ ತನ್ನ ಸ್ಥಳಕ್ಕೇ ಹೋಗುತಿದ್ದಳು ॥

ಅಯ್ಯಾ! ರಾಮ! ಆ ರಾಕ್ಷಸಿ ಈರೀತಿಯಾಗಿ ಜೀವನ್ಮುಕ್ತಳಾಗಿರುವುದರಿಂದ, ಈಗಲೂ ಆ ಕಾಡಿನಲ್ಲಿ, ಆ ಪರ್ವತದ ಮೇಲೆ, ಆ ದೊರೆಯು ನಾಶಹೊಂದಿದ್ದರೂ, ಆ ದೇಶಕ್ಕೆ ರಾಜರಾಗಿ ಬಂದ ಇತರರಲ್ಲಿಯೂ ಸೌಹಾರ್ದಬೆಳೆಯಿಸಿ, ಸಮಾಧಿವಿಶ್ರಾಂತಿ ಕಾಲದಲ್ಲಿ ಅವರು ಕೊಡುವ ಆಹಾರವನ್ನಾಸ್ವಾದಿಸುತ ಸುಖವಾಗಿರುವಳು ॥೬೦॥

ಇದು ಉತ್ಪತ್ತಿಪ್ರಕರಣದಲ್ಲಿ ಕರ್ಕಟ್ಯುಪಾಖ್ಯಾನದೊಳಗೆ ರಾಕ್ಷಸೀಸೌಹಾರ್ದವೆಂಬ
ಎಂಭತ್ತೆರಡನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ತ್ರ್ಯಶೀತಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಕಿರಾತಮಣ್ಡಲೇ ತಸ್ಮಿನ್ ಯೇ ಭವನ್ತಿ ಮಹೀಭೃತಃ |
ತೈಸ್ತೈಃ ಸಹ ಪರಾ ಮೈತ್ರೀ ತಸ್ಯಾಃ ಸಮಭಿಜಾಯತೇ ||೧||
ಸರ್ವಾಂಸ್ತತ್ರ ಮಹೋತ್ಪಾತಾನ್ ಪಿಶಾಚಾದಿಭಯಾನ್ಯಪಿ |
ರೋಗಾಂಶ್ಚ ಯೋಗಸಂಸಿದ್ಧಾ ನಿವಾರಯತಿ ರಾಕ್ಷಸೀ ||೨||
ಬಹುವರ್ಷಗಣೇನೈಷಾ ಧ್ಯಾನಾದ್ವಿರತಿಮಾಗತಾ |
ತತ್ರಾಗತ್ಯ ಸಮಸ್ತಾಂಸ್ತಾನ್ ವಧ್ಯಾನ್ಪ್ರಾಣ್ಯಾನ್ ಸುಸಙ್ಗತಾನ್ ||೩||
ಅದ್ಯಾಪಿ ತತ್ರ ಯೇ ವಧ್ಯಾಃ ತೇ ತದರ್ಥಂ ಮಹೀಭುಜಾ |
ನೀಯನ್ತೇ ಮಿತ್ರಸನ್ಮಾನೇ ಕೇ ಹಿ ನಾಧ್ಯವಸಾಯಿನಃ ||೪||
ತಸ್ಯಾಂ ಧ್ಯಾನನಿಷಣ್ಣಾಯಾಂ ಕಿರಾತಜನಮಣ್ಡಲೇ |
ಅನಾಮಯಾನ್ತ್ಯಂ ಚಿರಂ ಕಾಲಂ ಜನೈರ್ದೋಷಪ್ರಶಾನ್ತಯೇ ||೫||
ಸಾ ದೇವೀ ಕನ್ದರಾನಾಮ್ನೀ ಮಙ್ಗಳೇತರನಾಮಿಕಾ |

ಉತ್ಪತ್ತಿಪ್ರಕರಣದಲ್ಲಿ ಎಂಭತ್ತುಮೂರನೆಯ ಸರ್ಗವು.

ಅವ್ಯುತ್ಥಿತಾ ಸಮಾಧೇಃ ಸಾ ಚಿರಾತ್ ಕೈರಾತಮಣ್ಡಲೇ |
ಪ್ರತಿಷ್ಠಿತಾಭವದ್ದೇವೀ ಕನ್ದರೇತ್ಯತ್ರ ವರ್ಣ್ಯತೇ ||

ಆ ಕಿರಾತದೇಶದಲ್ಲಿ ಬಹುಕಾಲದವರೆಗೂ ಸಮಾಧಿಲೀನಳಾಗಿದ್ದ ಆ ಕರ್ಕಟಿಯು ಕಂದರಾದೇವಿಯೆಂಬುದಾಗಿ ಅಲ್ಲಿ ಪ್ರತಿಷ್ಠಿಸಲ್ಪಟ್ಟಳೆಂದು ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಶ್ರೀ ವಸಿಷ್ಠರು ರಾಮನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಆ ಕಿರಾತದೇಶದಲ್ಲಿ ಆಗ ಇದ್ದ ರಾಜನಲ್ಲದೆ ಈಚೆಗೆ ಯಾರುಯಾರು ದೊರೆಗಳಾಗುವರೋ, ಅವರೆಲ್ಲರೊಡನೆಯೂ ಅವಳಿಗೆ ಹೆಚ್ಚಾಗಿ ಮೈತ್ರಿಯುಂಟಾಗುವುದು ||೧||

ಯೋಗಸಿದ್ಧಳಾದ ಆ ರಾಕ್ಷಸಿಯು, ಅಲ್ಲಿ ಸಮಸ್ತವಾದ ಮಹೋತ್ಪಾತಗಳನ್ನೂ ಪಿಶಾಚಾದಿಭಯವನ್ನೂ, ಸಕಲ ರೋಗವನ್ನೂ ನಾಶಪಡಿಸುತಿದ್ದಳು ||೨||

ಅನೇಕ ವರ್ಷಗಣವು ಕಳೆದ ಬಳಿಕ ಒಂದೊಂದಾವೃತ್ತಿ ಧ್ಯಾನದಿಂದ ನಿವೃತ್ತಳಾಗಿ ಅಲ್ಲಿಗೆ ಬಂದು, ಅದುವರೆಗೆ ಕೂಡಿಸಿಟ್ಟಿದ್ದ ಸಮಸ್ತರಾಜ ವಧ್ಯಪ್ರಾಣಿಗಳನ್ನೂ ಸ್ವೀಕರಿಸುತಿದ್ದಳು ||೩||

ಈಗಲೂಕೂಡ ಅಲ್ಲಿ ಯಾರು ವಧ್ಯರಾಗುವರೋ-ಅವರನ್ನೆಲ್ಲ ಅವಳಿಗೆ ಕೊಡುತಿರುವರು. ಮಿತ್ರರನ್ನು ಸಮ್ಮಾನಪಡಿಸುವುದರಲ್ಲಿ ಯಾರುತಾನೆ ವ್ಯವಸಾಯ ಮಾಡುವುದಿಲ್ಲ! ||೪||

ಅವಳು ಒಂದುಸಲ ಬಹುಕಾಲ ಸಮಾಧಿಯಲ್ಲಿದ್ದುಬಿಟ್ಟು ಆ ಕಿರಾತದೇಶಕ್ಕೆ ಬರದಿರಲಾಗಿ, ಅಲ್ಲಿರುವ ಜನಗಳು ಪೀಡಾನಿವೃತ್ತಿಗಾಗಿ ಅಲ್ಲಿಯೇ ಒಂದು ಗುಹೆಯಲ್ಲಿ ಆ ಕರ್ಕಟಿಯ ಮೂರ್ತಿ

ಸಂಪ್ರತಿಷ್ಠಾಪಿತಾ ಮೂರ್ತ್ಯಾ ಪುರೇ ಗಗನಕೋಟರೇ ‖೬‖
ತತಃಪ್ರಭೃತಿ ತತ್ರತ್ಯೋ ಯೋಯೋ ಭವತಿ ಭೂಮಿಪಃ ।
ಸ ಕನ್ದರಾಂ ಭಗವತೀಂ ಪ್ರತಿಷ್ಠಾಪಯತಿ ಸ್ವಯಮ್ ‖೭‖
ಯಃ ಕನ್ದರಾಪ್ರತಿಷ್ಠಾಂ ಚ ನ ಕರೋತಿ ನೃಪಾಧಮಃ ।
ತಸ್ಯೋಪತಾಪನಿಚಯಾಃ ಪ್ರಜಾನಿಘ್ನನ್ತಿ ಯತ್ನತಃ ‖೮‖
ತತ್ಪೂಜನಾದವಾಪ್ನೋತಿ ಜನಸ್ತನ್ನಿಖಿಲಂ ಫಲಮ್ ।
ಸ್ವವಾಸನಾವಶೋಚ್ಛೂನಂ ಅನರ್ಥಂ ಯಾತ್ಯಪೂಜನಾತ್ ‖೯‖
ವಧ್ಯಲೋಕೋಪಹಾರೇಣ ಸಾ ದೇವೀ ಪರಿಪೂಜ್ಯತೇ ।
ಪ್ರತಿಮಾ ಸಾ ಸ್ಥಿತಾದ್ಯಾಪಿ ಚಿತ್ರಸ್ಥಾ ಫಲದಾಯಿನೀ ‖೧೦‖
ಸಕಲಕೋಮಲಮಙ್ಗಳಕಾರಿಣೀ ಕಬಳಿತಾಖಿಲವಧ್ಯಮಹಾಜನಾ ।
ಜಯತಿ ಸಾತ್ರ ಕಿರಾತಜನಾಸ್ಪದೇ ಪರಮಬೋಧವತೀ ಚಿರದೇವತಾ ‖೧೧‖

ಇತಿ ಉತ್ಪತ್ತಿಪ್ರಕರಣೇ ಕರ್ಕಟ್ಯುಪಾಖ್ಯಾನೇ ಕಂದರಾಪೂಜನಂ
ನಾಮ ತ್ರ್ಯಶೀತಿತಮಃ ಸರ್ಗಃ.

ಯನ್ನು ಪ್ರತಿಷ್ಠೆ ಮಾಡಿದರು. ಆ ಮೂರ್ತಿಗೆ ಕಂದರೆಯೆಂದೂ, ಮಂಗಳೆಯೆಂದೂ ಹೆಸರನ್ನಿಟ್ಟರು ‖೫-೬‖

ಅದು ಮೊದಲುಗೊಂಡು, ಆ ಕಿರಾತದೇಶದಲ್ಲಿ ಯಾರುಯಾರು ದೊರೆಯಾಗುವರೋ, ಅವರೆಲ್ಲರೂ ಅಲ್ಲಿ ಪೂಜ್ಯಳಾದ ಕಂದರಾದೇವಿಯನ್ನು ಪ್ರತಿಷ್ಠೆ ಮಾಡಿರುವರು ‖೭‖

ಯಾವ ನೃಪಾಧಮನು ಕಂದರಾಪ್ರತಿಷ್ಠೆಯನ್ನು ಮಾಡುವುದಿಲ್ಲವೋ, ಅವನ ಪ್ರಜೆಗಳನ್ನು ನಾನಾವಿಧವಾದ ಉಪದ್ರವಗಳು ಪೀಡಿಸುವುವು ‖೮‖

ಆ ಕಂದರೆಯ ಪೂಜೆಯಿಂದ ಜನರು ತಮ್ಮ ಸಕಲೇಷ್ಟಾರ್ಥಗಳನ್ನೂ ಪಡೆಯುವರು. ಪೂಜಿಸದಿದ್ದಪಕ್ಷದಲ್ಲಿ, ತಮ್ಮ ವಾಸನಾಬಲದಿಂದ ಫಲಿಸಿದ ಅನರ್ಥವನ್ನು ಪಡೆಯುವರು ‖೯‖

ವಧ್ಯರಾದ ಜನರನ್ನು ಉಪಹಾರವಾಗಿ ಕೊಟ್ಟು ಆ ದೇವಿಯ ಪೂಜೆಯನ್ನು ಮಾಡುವರು. ಆ ಪ್ರತಿಮೆಯು ಈಗಲೂ ಅಲ್ಲಿರುವುದು. ಇದು ಚಿತ್ರದಲ್ಲಿದ್ದರೂ ಫಲವನ್ನು ಕೊಡತಕ್ಕದಾಗುವುದು ‖೧೦‖

ಮಹಾಜ್ಞಾನವತಿಯಾದ ಆ ಕರ್ಕಟಿಯು, ಆ ಕಿರಾತದೇಶದಲ್ಲಿ ದೇವತಾರೂಪಳಾಗಿ ಸಮಸ್ತರಾದ ವಧ್ಯರನ್ನೂ ಉಪಹಾರವಾಗಿ ಸ್ವೀಕರಿಸುತ, ಸಮಸ್ತರ ಇಷ್ಟಾರ್ಥಗಳನ್ನೂ ನೆರವೇರಿಸುತ, ಈಗಲೂ ಬಿಜಯಗೈದಿರುವಳು ‖೧೧‖

ಇದು ಉತ್ಪತ್ತಿಪ್ರಕರಣದಲ್ಲಿ ಕರ್ಕಟಿಕೋಪಾಖ್ಯಾನದೊಳಗೆ ಕಂದರಾಪೂಜನ
ವೆಂಬ ಎಂಭತ್ತುಮೂರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಚತುರಶೀತಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಏತತ್ತೇ ಕಥಿತಂ ಸರ್ವಂ ಮಯಾಖ್ಯಾನಮನಿನ್ದಿತಮ್ ।
ಕರ್ಕಟ್ಯ್ಯಹಿಮರಾಕ್ಷಸ್ಯಾಃ ಯಥಾವದನುಪೂರ್ವಶಃ ॥೧॥

ಶ್ರೀರಾಮ ಉವಾಚ.

ಹಿಮವದ್ಗಹ್ವರೇ ಪ್ರೋತ್ಥಾ ಸಾ ಕಥಂ ಕೃಷ್ಣರಾಕ್ಷಸೀ ।
ಬಭೂವ ಕರ್ಕಟೀ ನಾಮ್ನಾ ಯಥಾವದ್ವದ ಮೇ ಪ್ರಭೋ ॥೨॥

ಶ್ರೀ ವಸಿಷ್ಠ ಉವಾಚ.

ಕುಲಾನಿ ಸನ್ತ್ಯನೇಕಾನಿ ರಾಕ್ಷಸಾನಾಂ ಸ್ವಭಾವತಃ ।
ತಾನಿ ಶುಕ್ಲಾನಿ ಕೃಷ್ಣಾನಿ ಹರಿತಾನ್ಯುಜ್ಜ್ವಲಾನಿಚ ॥೩॥
ಕರ್ಕಟಪ್ರಾಣಿಸಾದೃಶ್ಯಾತ್ ಕರ್ಕಟೋ ನಾಮ ರಾಕ್ಷಸಃ ।

ಉತ್ಪತ್ತಿಪ್ರಕರಣದಲ್ಲಿ ಎಂಭತ್ತನಾಲ್ಕನೆಯ ಸರ್ಗವು.

ನಿಮಿತ್ತಂ ಕರ್ಕಟೀನಾಮ್ನಃ ಉಪದೇಶಾರ್ಥಕಲ್ಪನಮ್ ।
ದೃಷ್ಟಾನ್ತೋಕ್ತ್ಯಪಯೋಗಶ್ಚ ವಿಸ್ತರಾದತ್ರ ವರ್ಣ್ಯತೇ ॥

ಕರ್ಕಟಿಯೆಂದು ಹೆಸರು ಬರುವುದಕ್ಕೆ ನಿಮಿತ್ತವೂ, ಉಪದೇಶಾರ್ಥವಾಗಿ ಈ ವುಪಾಖ್ಯಾನವನ್ನು ಕಲ್ಪಿಸಿದುದೂ, ದೃಷ್ಟಾಂತಗಳನ್ನು ಹೇಳುವುದರ ಪ್ರಯೋಜನವೂ ಕೂಡ, ವಿಸ್ತರವಾಗಿ ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಶ್ರೀ ವಸಿಷ್ಠರು ಹೇಳುವರು :—

ವತ್ಸ ! ರಾಮ ! ಹಿಮವತ್ಪರ್ವತದಲ್ಲಿ ವಾಸಮಾಡುವ ಕರ್ಕಟಿಯೆಂಬ ರಾಕ್ಷಸಿಯ ಈ ಉಪಾಖ್ಯಾನವನ್ನು ನಾನು ನಿನಗೆ ಯಥಾಕ್ರಮವಾಗಿ ಹೇಳಿರುವೆನು ॥೧॥

ಶ್ರೀರಾಮನು ಪ್ರಶ್ನೆಮಾಡುವನು :—

ಹೇ ಗುರೋ ! ಹಿಮವತ್ಪರ್ವತದ ಗುಹೆಯಲ್ಲಿ ಹುಟ್ಟಿದ ಆ ಕೃಷ್ಣರಾಕ್ಷಸಿಯು ಕರ್ಕಟಿಯೆಂಬ ಹೆಸರನ್ನು ಹೇಗೆ ಹೊಂದಿದಳು? ಈ ವಿಷಯವನ್ನು ನನಗೆ ಯಥಾಸ್ಥಿತವಾಗಿ ಅಪ್ಪಣೆ ಕೊಡಿಸಬೇಕು ॥೨॥

ವಸಿಷ್ಠರು ಹೇಳುವರು :—

ಅಯ್ಯಾ ರಾಮ ! ಅನೇಕವಾಗಿ ರಾಕ್ಷಸರ ಕುಲಗಳಿರುವುವು; ಅವು ಸ್ವಭಾವತಃ ಕೆಲವು ಶುಭ್ರವಾಗಿಯೂ, ಕೆಲವು ಕೃಷ್ಣವಾಗಿಯೂ, ಕೆಲವು ಹರಿತವರ್ಣ (ಹಸುರು) ವಾಗಿಯೂ ಕೆಲವು ರಕ್ತವರ್ಣವಾಗಿಯೂ ಇರುವುವು. ಈ ಕರ್ಕಟಿಯು ಕೃಷ್ಣವರ್ಣವಾದ ವಂಶದಲ್ಲಿ ಹುಟ್ಟಿದವಳು ॥೩॥

ಶರೀರದಲ್ಲಿ ಕರ್ಕಟನಾಮಕನಾದ ಪ್ರಾಣಿಯ (ನಳ್ಳಿ) ಸಾಮ್ಯವಿದ್ದಕಾರಣ, ಒಬ್ಬ ರಾಕ್ಷ

ಬಭೂವ ತಜ್ಜಾ ಸಾ ಕೃಷ್ಣಾ ಕರ್ಕಟೀ ಕರ್ಕಟಾಕೃತಿಃ ‖೪‖
ಕರ್ಕಟೀಪ್ರಶ್ನಸಂಸ್ಮೃತ್ಯಾ ಮಯೈಷಾ ಕಥಿತಾ ತವ ।
ಅಧ್ಯಾತ್ಮೋಕ್ತಿಪ್ರಸಂಗೇನ ವಿಶ್ವರೂಪನಿರೂಪಣೇ ‖೫‖
ಸಮುತ್ಪನ್ನಮೇವಮೇಕಸ್ಮಾತ್ ಅಸಮುತ್ಪನ್ನಮಿವ ಸ್ಫುಟಮ್ ।
ಇದಂ ಜಗದನಾದ್ಯಂತಾತ್ ಪದಾತ್ ಪರಮಕಾರಣಾತ್ ‖೬‖
ಪ್ಲಾವಿನ್ಯೋ ವೀಚಯೋ ವಾರಿಣ್ಯನ್ಯಾನನ್ಯಾಃ ಸ್ಥಿತಾ ಯಥಾ ।
ವರ್ತಮಾನಾ ಅಪಿ ಪರೇ ಸೃಷ್ಟಯಃ ಸಂಸ್ಥಿತಾಸ್ತಥಾ ‖೭‖
ಅಜ್ವಲನ್ನೇವ ಕಾಷ್ಠೇಷು ವಹ್ನಿರರ್ಥಕ್ರಿಯಾಂ ಯಥಾ ।
ಕರೋತಿ ಮರ್ಕಟಾದೀನಾಂ ಶೀತಾಪಹರಣಾದಿಕಮ್ ‖೮‖
ಸಮಂ ಸೌಮ್ಯತ್ವಮಜಹದೇವ ನಿತ್ಯೋದಯಸ್ಥಿತಿ ।
ತಥಾ ಬ್ರಹ್ಮ ಕರೋತೀದಂ ನಾನಾಕರ್ತೇವ ಸಜ್ಜಗತ್ ‖೯‖
ಅಪ್ಯನಾಗತಮೇವಾಯಂ ಏವಂ ಸರ್ಗ ಉಪಾಗತಃ ।
ಭೋಃ ಸಾಲಭಂಜಿಕಾಸಂವಿತ್ ದಾರುಣ್ಯೇವ ಮುಧೋದಿತಾ ‖೧೦‖

ಸನು ಕರ್ಕಟನೆಂಬ ಹೆಸರುಳ್ಳವನಾದನು. ಆವನಿಂದ ಉತ್ಪನ್ನಳಾದುದರಿಂದಲೂ, ಸ್ವಯಂ ಕರ್ಕಟ ಶರೀರವುಳ್ಳವಳಾದುದರಿಂದಲೂ, ಇವಳಿಗೂ ಕರ್ಕಟಿಯೆಂಬ ಹೆಸರು ರೂಢವಾಗಿಬಿಟ್ಟಿತು ‖೪‖

ನಾನು ಅಧ್ಯಾತ್ಮವಿಚಾರವನ್ನು ಹೇಳುತ, ಮಧ್ಯದಲ್ಲಿ ಪ್ರಸಂಗವಶಾತ್ ಪ್ರಪಂಚಸ್ವರೂಪವನ್ನು ನಿರೂಪಿಸುವುದಕ್ಕೆ ಹೊರಟು, ಆಗ ಈ ಕರ್ಕಟೀಪ್ರಶ್ನವು ಸ್ಮರಣೆಗೆ ಬಂದುದರಿಂದ, ಇವಳ ವಿಷಯವನ್ನೆಲ್ಲ ನಿನಗೆ ಹೇಳಿದೆನು ‖೫‖

ಈ ಕರ್ಕಟಿಯ ಉಪಾಖ್ಯಾನದಲ್ಲಿ ತೋರಿಸುವಂತೆ, ಆದ್ಯಂತರಹಿತವಾಗಿ ಸರ್ವಕಾರಣವಾಗಿರುವ ಆ ಪರಮಪದದ ದೆಸೆಯಿಂದ, ವಸ್ತುತಃ ಅನುತ್ಪನ್ನವಾದರೂ—ಈ ಜಗತ್ತು ಉತ್ಪನ್ನವಾದಂತಿರುವುದು ‖೬‖

ಜಲದಲ್ಲಿ ಹಾರಾಡುತಿರುವ ಅಲೆಗಳು ಬೇರೆಬೇರೆಯಾಗಿರುವಂತೆ ಹೇಗೆ ಕಾಣಿಸುವುವೋ, ಹಾಗೆ ಪರಬ್ರಹ್ಮನಲ್ಲಿ ಭೂತಭವಿಷ್ಯದ್ವರ್ತಮಾನಗಳಾದ ಪ್ರಪಂಚಸೃಷ್ಟಿಗಳು ಕಾಣಿಸುತ್ತಿರುವುವು ‖೭‖

ಕಾಷ್ಠದಲ್ಲಿರುವ ಬೆಂಕಿಯು ಉರಿಯದೆಯೇ ವಾನರಾದಿಗಳಿಗೆ ಶೀತಾಪಹಾರ ಮುಂತಾದ ಕೆಲಸವನ್ನು ಹೇಗೆ ಉಂಟುಮಾಡುವುದೋ, ಹಾಗೆ ಪರಬ್ರಹ್ಮವು ಸೌಮ್ಯತ್ವವನ್ನು ಬಿಡದೆಯೇ ಸಮವಾಗಿದ್ದುಗೊಂಡು ನಿತ್ಯವೂ ಉದಯಿಸುವಂತೆಯೂ, ಕರ್ತೃವಿನಂತೆಯೂ ತೋರುತ ಈ ಜಗತ್ತೆಂಬ ಕಾರ್ಯವನ್ನು ಮಾಡುವುದು ‖೮-೯‖

ಅಯ್ಯಾ ರಾಮ! ಈ ಸೃಷ್ಟಿಯೆಂಬುದು ಈರೀತಿಯಾಗಿ ವಸ್ತುತಃ ಬ್ರಹ್ಮನದೆಸೆಯಿಂದ ಉತ್ಪನ್ನವಾದಂತಿರುವುದು. ಮರದಲ್ಲಿ ಬೊಂಬೆಯಿರುವುದೆಂಬ ಜ್ಞಾನವು ಅಸತ್ಯವಾಗಿಯೇ ಉದಯಿಸುವುದಲ್ಲವೆ! ‖೧೦‖

ಬೀಜೇ ಯಥಾಽಸ್ಯದಪಿ ಫಲಾದ್ಯನ್ಯದಿವೋದಿತಮ್ |
ಚಿತೌ ತಥಾನನ್ಯದಪಿ ಚೇತ್ಯಮನ್ಯದಿವೋದಿತಮ್ ||೧೧||
ಅಚ್ಛೇದಾದೇಕಸತ್ತಾಯಾಃ ನ ಭೇದಃ ಫಲಬೀಜಯೋಃ |
ಚಿಚ್ಚೇತ್ಯಯೋಶ್ಚ ವಾಯ್ವೂರ್ಮ್ಯೋಃ ಇವ ವಸ್ತುನಿ ಕಶ್ಚನ ||೧೨||
ಅವಿಚಾರಾತ್ ಕುತೋ ಭೇದೋ ನೈತಯೋರುಪಪದ್ಯತೇ |
ಯತಃಕುತಶ್ಚಿದುದಿತಃ ಸ ವಿಚಾರೇಣ ನಶ್ಯತಿ ||೧೩||
ಭ್ರಾನ್ತಿರೇಷಾ ಯಥಾಯಾತಾ ತಥಾ ಯಾತು ರಘೂದ್ವಹ |
ಜ್ಞಾಸ್ಯಸೇ ತತ್ ಪ್ರಬುದ್ಧಸ್ತ್ವಂ ಏನಾಂ ಕೇವಲಮುತ್ಸೃಜ ||೧೪||
ಭ್ರಾನ್ತಿಗ್ರನ್ಥೌ ವಿತ್ರುಟಿತೇ ಮದುಕ್ತಿಶ್ರವಣಾತ್ ತತಃ |
ಜ್ಞಾನಶಬ್ದಾರ್ಥಭೇದಾನಾಂ ವಸ್ತು ಜ್ಞಾಸ್ಯಸ್ಯಲಂ ಸ್ವಯಮ್ ||೧೫||
ಚಿತ್ತಾದಿಯಮನರ್ಥಶ್ರೀಃ ತಚ್ಚ ಸಾ ಚೇತರಾ ಚ ತೇ |
ಮದುಕ್ತಿಶ್ರವಣಾದೇವ ಶಾನ್ತಿಮೇಷ್ಯತ್ಯಸಂಶಯಮ್ ||೧೬||
ಬ್ರಹ್ಮಣಃ ಸರ್ವಮುತ್ಪನ್ನಂ ಸರ್ವಂ ಬ್ರಹ್ಮೈವಮೇತಿ ಚ |
ಮದ್ಗೀರ್ಭಿಃ ಸಮ್ಪ್ರಬುದ್ಧಸ್ಸನ್ ಜ್ಞಾಸ್ಯಸ್ಯಲಮನಿನ್ದಿತಮ್ ||೧೭||

ಬೀಜದಲ್ಲಿರುವ ಫಲಾದಿಗಳು ವಸ್ತುತಃ ಬೇರೆಯಲ್ಲದಿದ್ದರೂ ಬೇರೆಯಾಗಿರುವಂತೆ ಹೇಗೆ ಕಾಣಿಸುವುವೋ, ಹಾಗೆ ಚಿತ್ತಿನಲ್ಲಿ ಚೇತ್ಯವು ಅನನ್ಯವಾಗಿದ್ದರೂ ಅನ್ಯವಾಗಿರುವಂತೆ ತೋರುವುದು ||೧೧||

ಬೀಜಾವಸ್ಥೆ ಮೊದಲುಗೊಂಡು ಫಲಾವಸ್ಥೆಯಾಗುವವರೆಗೂ ಮಧ್ಯದಲ್ಲಿ ಎಡೆಬಿಡದೆ ಒಂದೇ ಸ್ಥಿತಿಯಿರುವುದರಿಂದ, ಫಲಕ್ಕೂ ಬೀಜಕ್ಕೂ ಭೇದವಿಲ್ಲವೆಂದು ಸ್ಪಷ್ಟವಾಗುವುದು. ಹೀಗೆಯೇ, ಜಲತರಂಗಗಳಂತೆ-ಚಿಚ್ಚೇತ್ಯಗಳಿಗೂ ವಾಸ್ತವ್ಯವಾಗಿ ಯಾವ ಭೇದವೂ ಇಲ್ಲ ||೧೨||

ಈ ಚಿಚ್ಚೇತ್ಯಗಳಿಗೆ ತೋರುವ ಭೇದವು, ವಿಚಾರವಿಲ್ಲದಿರುವ ಕಾಲದಲ್ಲಿ ಎಲ್ಲಿಂದಲೋ ಉದಯಿಸಿಬಿಡುವುದು. ಇದು ವಿಚಾರದಿಂದ ನಾಶಹೊಂದುವುದು ||೧೩||

ಅಯ್ಯಾ! ರಾಮ ! ಈ ಪ್ರಪಂಚಭ್ರಾಂತಿಯು ಹೇಗೆ ಬಂದಿತೋ, ಹಾಗೆಯೇ ಅದು ಹೊರಟುಹೋಗಲಿ; ಹಾಗಾದರೆ, ಆಗ ನೀನು ಪ್ರಬುದ್ಧನಾಗಿ ಆ ಪರತತ್ವವನ್ನು ತಿಳಿಯುವೆ. ಆದುಕಾರಣ, ಈ ಭ್ರಾಂತಿಯೊಂದನ್ನು ಮಾತ್ರ ಬಿಟ್ಟುಬಿಡು ||೧೪||

ಈ ಭ್ರಾಂತಿಯೆಂಬ ಗ್ರಂಥಿಯು ಕಿತ್ತುಹೋದರೆ, ಬಳಿಕ ನೀನು ನನ್ನ ಮಾತುಗಳನ್ನು ಕೇಳಿ, ಜ್ಞಾನಪದಾರ್ಥದಲ್ಲಿರುವ ಭೇದಗಳ ತತ್ವವನ್ನು ನೀನೇ ಚೆನ್ನಾಗಿ ತಿಳಿದುಕೊಳ್ಳುವೆ ||೧೫||

ಈ ಪ್ರಪಂಚಭ್ರಾಂತಿಯೆಂಬ ಅನರ್ಥವು ಚಿತ್ತದಿಂದ ಉದಯಿಸುವುದು. ನನ್ನ ಮಾತನ್ನು ಚೆನಾಗಿ ಕೇಳುವೆಯಾದರೆ,—ಆಗ ಆ ಚಿತ್ತವೂ, ಅದರಿಂದುದಯಿಸಿದ ಪ್ರಪಂಚಜ್ಞಾನವೂ, ಇವೆಲ್ಲಕ್ಕೂ ಮೂಲಹೇತುವಾದ ಅವಿದ್ಯೆಯೂ ಕೂಡ, ನಿಸ್ಸಂಶಯವಾಗಿ ಶಾಂತಿಹೊಂದುವುವು ||

ಸರ್ವವೂ ಬ್ರಹ್ಮನ ದೆಸೆಯಿಂದಲೇ ಉತ್ಪನ್ನವಾದುದು; ಸಕಲವೂ ಬ್ರಹ್ಮನಲ್ಲಿಯೇ ಲಯ ಹೊಂದುವುದು. ಉತ್ತಮವಾದ ಈ ವಿಷಯವನ್ನು, ನೀನು ನನ್ನ ವಚನದಿಂದ ಪ್ರಬುದ್ಧನಾಗಿ ತಿಳಿದುಕೊಳ್ಳುವೆ ||೧೭||

ಶ್ರೀರಾಮ ಉವಾಚ.

ತಸ್ಮಾದಿಯಮಿತಿ ಬ್ರಹ್ಮಣ ವ್ಯತಿರೇಕಾರ್ಥಪಞ್ಚಮೀ ।
ನನು ಕಿಂ ವಿದ್ಧಿ ದೇವೇಶಾತ್ ಅಭಿನ್ನಂ ಸರ್ವಮಿತ್ಯಪಿ ॥೧೮॥

ಶ್ರೀ ವಸಿಷ್ಠ ಉವಾಚ.

ಉಪದೇಶಾಯ ಶಾಸ್ತ್ರೇಷು ಜಾತಃ ಶಬ್ದೋऽಥವಾರ್ಥಜಃ ।
ಪ್ರತಿಯೋಗಿವ್ಯವಚ್ಛೇದಸಙ್ಖ್ಯಾಲಕ್ಷಣಪಕ್ಷವಾನ್ ॥೧೯॥
ಭೇದೋ ದೃಶ್ಯತಏವಾಯಂ ವ್ಯವಹಾರಾನ್ನ ವಾಸ್ತವಃ ।
ವೇತಾಳೋ ಬಾಲಕಸ್ಯೇವ ಕಾರ್ಯಾರ್ಥಂ ಪರಿಕಲ್ಪಿತಃ ॥೨೦॥
ದ್ವೈತೈಕ್ಯಮಪಿ ನೋ ಯಸ್ಯಾಂ ತಥಾಭೂತಾರ್ಥಸಂಸ್ಥಿತೌ ।
ಅಸ್ತಿ ತಸ್ಯಾಮೀದೃಶಃ ಸ್ಯಾತ್ ಕುತಃ ಸಙ್ಕಲ್ಪವಿಪ್ಲವಃ ॥೨೧॥
ಕಾರ್ಯಕಾರಣಭಾವೋ ಹಿ ತಥಾ ಸ್ವಸ್ವಾಮಿಲಕ್ಷಣಮ್ ।
ಹೇತುಶ್ಚ ಹೇತುಮಾಂಶ್ಚೈವಾವಯವಾವಯವಿಕ್ರಮಃ ॥೨೨॥

ಶ್ರೀರಾಮನು ಪ್ರಶ್ನೆಮಾಡುವನು:—

ಪೂಜ್ಯರೇ! ತಮ್ಮ ಆಜ್ಞೆಯನ್ನು ಶಿರಸಾ ವಹಿಸಿರುವೆನು. ಈಗ ನನಗೊಂದು ಸಂಶಯ ವುಂಟಾಗಿಬಿಟ್ಟಿರುವುದು. ಏನೆಂದರೆ:—ತಾವು 'ಬ್ರಹ್ಮನ ದೆಸೆಯಿಂದ ಸರ್ವವೂ ಉತ್ಪನ್ನವಾದುದು' ಎಂದು ಹೇಳಿರುವಿರಿ. 'ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಮ್ಭೂತಃ' ಇತ್ಯಾದಿಯಾದ ಉಪ ನಿಷದ್ವಾಕ್ಯವೂ ಹೀಗೆಯೇ ಹೇಳುತಿರುವುದು. ಇವೆರಡುಕಡೆಯಲ್ಲಿಯೂ 'ಬ್ರಹ್ಮನದೆಸೆ ಯಿಂದ' ಎಂದು ಪಂಚಮೀವಿಭಕ್ತಿ ಇರುವುದು. ಇದು ಸ್ಪಷ್ಟವಾಗಿ ಜಗತ್ತಿಗೂ ಬ್ರಹ್ಮನಿಗೂ ಭೇದವನ್ನೇ ತೋರಿಸುವುದು. ಹೀಗಿರುವಾಗ 'ಎಲ್ಲವೂ ಬ್ರಹ್ಮನಿಗಿಂತ ಅಭಿನ್ನವೆಂದು ತಿಳಿ' ಎಂದು ತಾವೇ ಅಪ್ಪಣೆ ಕೊಡಿಸಿರುವ ವಚನವು ಹೇಗೆ ಉಪಪನ್ನವಾಗುವುದು? ಇದೇ ನನಗುಂ ಟಾಗಿರುವ ಸಂಶಯವು ॥೧೮॥

ಇದಕ್ಕೆ ಶ್ರೀ ವಸಿಷ್ಠರು ಉತ್ತರ ಹೇಳುವರು—

ಅಯ್ಯಾ! ರಾಮ! ನೀನು ಕೇಳಿದುದು ಸರಿಯೇ! ಆದರೆ, ಇಲ್ಲಿ ತಿಳಿಯಬೇಕಾದ ಒಂದಂ ಶವನ್ನು ನಾನು ನಿನಗೆ ಹಿಂದೆಯೇ ಹೇಳಿರುವೆನು. ಬೇಕಾದರೆ ಈಗಲೂ ಹೇಳುವೆನು:—ಇಲ್ಲಿ ರುವ ಭೇದವಾಚಕವಾದ ಶಬ್ದವು, ಉಪದೇಶಸಿದ್ಧಿಗಾಗಿ ಶಾಸ್ತ್ರಗಳಲ್ಲಿ ಕಲ್ಪಿತವಾಗಿರುವುದೆಂದು ತಿಳಿ. ಅಥವಾ, ಲೋಕವ್ಯವಹಾರಸಿದ್ಧವಾಗಿರುವುದೆಂದಾದರೂ ತಿಳಿ. ವಾಸ್ತವ್ಯವಾಗಿಯಾ ದರೋ, ಇದು ಭೇದದ್ಯೋತಕವಲ್ಲವಾಗಿಯೇ ಇರುವುದು ॥೧೯॥

ಈ ಭೇದವು ಕೇವಲ ವ್ಯವಹಾರದಿಂದ ತೋರುತಿರುವುದಲ್ಲದೆ ವಾಸ್ತವ್ಯವಲ್ಲ. ಹುಡುಗ ನನ್ನು ಹೆದರಿಸುವುದಕ್ಕೋಸ್ಕರ ಬೇತಾಳನನ್ನು ಕಲ್ಪಿಸಿಕೊಂಡಿರುವರಲ್ಲವೆ! ॥೨೦॥

ಹೀಗೆ ಯಾವ ಸ್ಥಿತಿಯಲ್ಲಿ ದ್ವೈತವೂ ಐಕ್ಯವೂ ಯಾವುದೂ ಇಲ್ಲವೇ ಇಲ್ಲವೋ, ಅದರಲ್ಲಿ ಈ ಸಂಕಲ್ಪಜನ್ಯವಾದ ವಿಪ್ಲವವು ಎಲ್ಲಿರುವುದು? ॥೨೧॥

ಕಾರ್ಯಕಾರಣ ಭಾವವೆಂಬುದೂ, ಸ್ವಸ್ವಾಮಿಭಾವವೆಂಬುದೂ, ಹೇತುಹೇತುಮದ್ಭಾವವೆಂ ಬುದೂ, ಅವಯವಾವಯವಿಭಾವವೆಂಬುದೂ, ಅನುಯೋಗಿ ಪ್ರತಿಯೋಗಿ ಮುಂತಾದ ವಾದವೂ,

ವ್ಯತಿರೇಕಾವ್ಯತಿರೇಕೌ ಪರಿಣಾಮಾದಿವಿಭ್ರಮಃ ।
ತಥಾ ಭಾವವಿಲಾಸಾದಿ ವಿದ್ಯಾವಿದ್ಯೇ ಸುಖಾಸುಖೇ ‖೨೩‖
ಏವಮಾದಿಮಯೀ ಮಿಥ್ಯಾ ಸಙ್ಕಲ್ಪಕಲನಾ ಮಿತಾ ।
ಅಜ್ಞಾನಾಮವಬೋಧಾರ್ಥಂ ನ ತು ಭೇದೋಽಸ್ತಿ ವಸ್ತುನಿ ‖೨೪‖
ಅವಿಬೋಧಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ ।
ಜ್ಞಾತೇ ಸಂಶಾನ್ತಕಲನಂ ಮೌನಮೇವಾವಶಿಷ್ಯತೇ ‖೨೫‖
ಸರ್ವಮೇಕಮನಾದ್ಯನ್ತಂ ಅವಿಭಾಗಮಖಣ್ಡಿತಮ್ ।
ಇತಿ ಜ್ಞಾಸ್ಯಸಿ ಸಿದ್ಧಾನ್ತಂ ಕಾಲೇ ಬೋಧಮುಪಾಗತಃ ‖೨೬‖
ವಿವದನ್ತೇ ಹ್ಯಸಮ್ಬುದ್ಧಾಃ ಸ್ವವಿಕಲ್ಪವಿಜೃಮ್ಭಿತೈಃ ।
ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ ‖೨೭‖
ವಾಚ್ಯವಾಚಕಸಮ್ಬನ್ಧೋ ವಿನಾ ದ್ವೈತಂ ನ ಸಿಧ್ಯತಿ ।
ನ ಚ ದ್ವೈತಂ ಸಮ್ಭವತಿ ಮೌನಂ ವಾಪಾದಯತ್ಯಲಮ್ ‖೨೮‖
ಮಹಾವಾಕ್ಯಾರ್ಥನಿಷ್ಠಾನ್ತಾಂ ಬುದ್ಧಿಂ ಕೃತ್ವಾ ರಘೂದ್ವಹ ।
ವಚೋಭೇದಮನಾದೃತ್ಯ ಯದಿದಂ ವಚ್ಮಿ ತೇ ಶೃಣು ‖೨೯‖

ಪರಿಣಾಮ ಮುಂತಾದ ಭ್ರಮೆಯೂ, ಭಾವ ಅಭಾವ ಮುಂತಾದ ಕ್ರಮವೂ, ವಿದ್ಯೆ ಅವಿದ್ಯೆ ಎಂಬ ವ್ಯವಹಾರವೂ, ಅಜ್ಞರ ತಿಳಿವಳಿಕೆಗಾಗಿ ಕಲ್ಪಿತವಾಗಿರುವುವು. ವಾಸ್ತವ್ಯವಾಗಿ ಯಾವ ಭೇದವೂ ಇರುವುದಿಲ್ಲ ॥೨೨—೨೪॥

ಈ ಭೇದವಾದವೆಲ್ಲವೂ ಅಜ್ಞಾನದಿಂದ ಉಂಟಾಗಿರುವುದು. ಬೋಧೋದಯವಾದಬಳಿಕ ಈ ಭೇದಜ್ಞಾನವೇ ಇರುವುದಿಲ್ಲ. ಪ್ರಬೋಧಾವಸ್ಥೆಯಲ್ಲಿ, ಸಮಸ್ತ ಕಲ್ಪನೆಗಳೂ ಶಾಂತವಾಗಿ-ಯಾವ ಶಬ್ದವೂ ಇಲ್ಲವಾಗಿಬಿಡುವುದು ॥೨೫॥

ಅಯ್ಯಾ! ರಾಮ! ನೀನು ಕಾಲಕ್ರಮೇಣ ಬೋಧವನ್ನು ಹೊಂದಿರುವವನಾಗಿ, ಈ ಸಮಸ್ತವೂ ಆದ್ಯಂತರಹಿತವಾದ ಪರಿಚ್ಛೇದಶೂನ್ಯವಾದ ಅಖಂಡವಾದ ಬ್ರಹ್ಮವೇ ಎಂದು ಸಿದ್ಧಾಂತವನ್ನು ತಿಳಿಯುವೆ ॥೨೬॥

ತತ್ವಜ್ಞಾನರಹಿತರಾದವರು, ತಂತಮ್ಮ ಮನಸ್ಸಿಗೆ ತೋರಿದಂತೆ ನಾನಾವಿಧ ವಿಕಲ್ಪಗಳನು ಮಾಡಿಕೊಂಡು ವಿವಾದಮಾಡುವರು. ಈ ಸಮಸ್ತವಾದ ಭೇದವಾದವೂ ಉಪದೇಶಸಿದ್ಧ್ಯರ್ಥವಾಗಿಯೇ ಅಲ್ಲದೆ, ತತ್ವಜ್ಞಾನವಾದ ಬಳಿಕ ಭೇದವೊಂದೂ ಇರುವುದಿಲ್ಲ ॥೨೭॥

ದ್ವೈತವಾದವನ್ನೇಕೆ ಕಲ್ಪಿಸಬೇಕೆಂದರೆ,—ಯಾವುದಾದರೊಂದು ವಿಷಯವನ್ನು ತಿಳಿಸಬೇಕಾದರೆ, ವಾಚ್ಯವಾಚಕಗಳಿದ್ದೇತೀರಬೇಕಾಗುವುದಲ್ಲವೆ! ಹೀಗೆ ಈ ವಾಚ್ಯವಾಚಕಜ್ಞಾನವು, ದ್ವೈತಕಲ್ಪನೆಯಿಲ್ಲದೆ ಸಿದ್ಧಿಸುವುದಿಲ್ಲ. ಹಾಗಾದರೆ ದ್ವೈತವೇ ಇದ್ದುಗೊಂಡಿರಲೆಂದರೆ,—ಅದೆಂದಿಗೂ ಸಂಭವಿಸತಕ್ಕುದಲ್ಲ. ಆದುಕಾರಣ, ಪರ್ಯವಸಾನದಲ್ಲಿ ಮೌನವೇ ದೃಢಪಡುವುದು ॥

ಎಲೈ ರಘುಶ್ರೇಷ್ಠನೇ! 'ಯತೋವಾ ಇಮಾನಿ ಭೂತಾನಿ ಜಾಯನ್ತೇ' ಇತ್ಯಾದ್ಯುಪನಿಷದ್ವಾಕ್ಯಗಳಲ್ಲಿರುವ ಪಂಚಮಿ ಮುಂತಾದ ವಿಭಕ್ತಿಗಳ ಅರ್ಥದಲ್ಲಿ ಗಮನವಿಡದೆ, ಆ ಶಬ್ದಗಳ ಮುಖ್ಯಾರ್ಥದಲ್ಲಿ ಮಾತ್ರ ಬುದ್ಧಿಯಿಟ್ಟು, ಈವಿಭಕ್ತ್ಯರ್ಥಗಳಿಂದುಂಟಾಗುವ ಭೇದವನ್ನು ಅನಾದರಿಸಿ, ನಾನು ಹೇಳುವುದನ್ನು ಚೆನ್ನಾಗಿ ಲಾಲಿಸು ॥೨೯॥

ಯತಃಕುತಶ್ಚಿದುಚ್ಛ್ರಾಯಂ ಗನ್ಧರ್ವಪುರವನ್ಮನಃ ।
ಭ್ರಾನ್ತಿಮಾತ್ರಂ ತನೋತೀದಂ ಜಗದಾಖ್ಯಂ ಸ್ವಜೃಮ್ಭಣಮ್ ॥೩೦॥
ಯಥಾ ಚೇತಸ್ತನೋತೀಮಾಂ ಜಗನ್ಮಾಯಾಂ ತಥಾನಘ ।
ಶೃಣು ತ್ವಂ ಕಥಯಾಮೀದಂ ದೃಷ್ಟಾನ್ತಂ ದೃಷ್ಟಿವೇದನಮ್ ॥೩೧॥
ಯಂ ಶ್ರುತ್ವಾ ಸರ್ವಮೇವೇದಂ ಭ್ರಾನ್ತಿಮಾತ್ರಮಿತಿ ಸ್ವಯಮ್ ।
ರಾಮ ನಿಶ್ಚಯವಾನ್ ಭೂತ್ವಾ ದೂರೇ ತ್ಯಕ್ಷ್ಯಸಿ ವಾಸನಾಮ್ ॥೩೨॥
ಮನೋಮನನನಿರ್ಮಾಣಮಾತ್ರಮೇವ ಜಗತ್ತ್ರಯಮ್ ।
ಸರ್ವಮುತ್ಸೃಜ್ಯ ಶಾನ್ತಾತ್ಮಾ ಸ್ವಾತ್ಮನ್ಯೇವ ನಿವತ್ಸ್ಯಸಿ ॥೩೩॥
ಮದ್ವಾಕ್ಯಾರ್ಥಾವಧಾನಸ್ಥೋ ಮನೋವ್ಯಾಧಿಚಿಕಿತ್ಸನೇ ।
ವಿವೇಕೌಷಧಲೇಶೇನ ಪ್ರಯತ್ನಂ ಚ ಕರಿಷ್ಯಸಿ ॥೩೪॥
ಏವಂ ಸ್ಥಿತೇ ಜಗದ್ರೂಪಂ ಚಿತ್ತಮೇವೇಹ ಜೃಮ್ಭತೇ ।
ನ ವಿದ್ಯತೇ ಶರೀರಾದಿ ಸಿಕತಾನ್ತರತೈಲವತ್ ॥೩೫॥
ಚಿತ್ತಮೇವ ಹಿ ಸಂಸಾರೋ ರಾಗಾದಿಕ್ಲೇಶದೂಷಿತಮ್ ।
ತದೈವ ತೈರ್ವಿನಿರ್ಮುಕ್ತಂ ಭವಾನ್ತ ಇತಿ ಕಥ್ಯತೇ ॥೩೬॥

ಈ ಮನಸ್ಸು, ಗಂಧರ್ವನಗರದಂತೆ, ಯಾವುದೋ ಒಂದು ಕಾರಣದಿಂದ, ಈ ಜಗತ್ತೆಂಬ ಭ್ರಾಂತಿಯನ್ನು ವಿಜೃಂಭಣೆ ಪಡಿಸುತ್ತಿರುವುದು ॥೩೦॥

ನಿರ್ದೋಷನಾದ ರಾಮನೆ! ಮನಸ್ಸು ಈ ಜಗತ್ತೆಂಬ ಮಾಯೆಯನ್ನು ಹೇಗುಂಟುಮಾಡುತದೆಂಬುದಕ್ಕೆ ಸರಿಯಾದ ದೃಷ್ಟಾಂತವನ್ನು ಹೇಳುವೆನು ಕೇಳು. ಈ ದೃಷ್ಟಾಂತವನ್ನು ಸರಿಯಾಗಿ ತಿಳಿದುಕೊಂಡರೆ, ದಾರ್ಷ್ಟಾಂತಿಕ (ಪ್ರಕೃತ)ವು ಚಟ್ಟನೆ ಗೊತ್ತಾಗುವುದು ॥೩೧॥

ಹೇ ರಾಮ! ನೀನು ಇದನ್ನು ಕೇಳಿದಮಾತ್ರದಿಂದಲೇ, ಸಮಸ್ತವೂ ಕೇವಲ ಭ್ರಾಂತಿಮಾತ್ರವೆಂದು ನಿಶ್ಚಯವುಳ್ಳವನಾಗಿ, ಅವಿದ್ಯಾವಾಸನೆಯನ್ನು ಸ್ವಯಮೇವ ದೂರವಾಗಿ ಬಿಟ್ಟುಬಿಡುವೆ ॥೩೨॥

ಈ ಜಗತ್ತ್ರಯವೂ ಮನಸ್ಸಿನ ಸಂಕಲ್ಪನಿರ್ಮಾಣಮಾತ್ರವೇಯೆ. ಅದುಕಾರಣ, ನೀನು ನನ್ನ ಮಾತನ್ನು ಲಾಲಿಸಿ, ಇವೆಲ್ಲವನ್ನೂ ಬಿಟ್ಟುಬಿಟ್ಟು, ಕೇವಲ ಶಾಂತನಾಗಿ, ಆತ್ಮನಿಷ್ಠನಾಗುವೆ॥

ನನ್ನ ಮಾತಿನ ಅರ್ಥವನ್ನು ಚೆನ್ನಾಗಿ ವಿಚಾರಮಾಡಿದರೆ, ನೀನು ವಿವೇಕವೆಂಬ ಔಷಧಲೇಶದಿಂದ ಮನೋರೋಗವನ್ನು ನಿಗ್ರಹಿಸುವುದರಲ್ಲಿ ಪ್ರಯತ್ನವನ್ನೂ ಮಾಡುವೆ ॥೩೪॥

ನಾನು ಮುಂದೆ ಹೇಳುವ ಉಪಾಖ್ಯಾನರೀತಿಯಾಗಿ ವಸ್ತುತತ್ವವಿರಲಾಗಿ, ಚಿತ್ತವೇ ಪ್ರಪಂಚರೂಪೇಣ ವಿಜೃಂಭಿಸುತ್ತಿರುವುದೆಂದೂ, ಶರೀರಮುಂತಾದುದು ಮಳಲಿನೊಳಗೆ ಎಣ್ಣೆಯಂತೆ ಸುತರಾಂ ಇಲ್ಲವೆಂದೂ, ನಿನಗೆ ಗೊತ್ತಾಗುವುದು ॥೩೫॥

ಕಾಮಕ್ರೋಧಾದಿ ದೋಷಗಳಿಂದ ದೂಷಿತವಾದ ಚಿತ್ತವೇ ಸಂಸಾರವು. ಅದೇ ಆ ದೋಷಗಳಿಂದ ಬಿಡಲ್ಪಟ್ಟಿದ್ದಾದರೆ, ಸಂಸಾರಕ್ಕೆ ನಾಶವೆಂದು ಹೇಳಲ್ಪಡುವುದು ॥೩೬॥

ಚಿತ್ತಂ ಸಾಧ್ಯಂ ಪಾಲನೀಯಂ ವಿಚಾರ್ಯಂ ಕಾರ್ಯಮಾರ್ಯವತ್ ।
ಆಹಾರ್ಯಂ ವ್ಯವಹಾರ್ಯಂ ಚ ಸಞ್ಚಾರ್ಯಂ ಧಾರ್ಯಮಾದರಾತ್ ॥೩೭॥
ಸರ್ವಮಭ್ಯನ್ತರೇ ಚಿತ್ತಂ ಬಿಭರ್ತಿ ತ್ರಿಜಗನ್ನಭಃ ।
ಅಹಮಾಪೂರಮಿವ ತತ್ ಯಥಾಕಾಲಂ ವಿಜೃಮ್ಭತೇ ॥೩೮॥
ಯೋಽಯಂ ಚಿತ್ತಸ್ಯ ಚಿದ್ಭಾಗಃ ಸೈಷಾ ಸರ್ವಾರ್ಥಬೀಜತಾ ।
ಯಶ್ಚಾಸ್ಯ ಜಡಭಾಗಶ್ಚ ತಜ್ಜಗತ್ ಸೋಽಙ್ಗ ಸಮ್ಭ್ರಮಃ ॥೩೯॥
ಅವಿದ್ಯಮಾನಮೇವೇದಂ ಆದಿಸರ್ಗೇ ಧರಾದಿಕಮ್ ।
ನಿರಾಕೃತಿರಜಃ ಸ್ವಪ್ನಂ ಪಶ್ಯತೀವ ನ ಪಶ್ಯತಿ ॥೪೦॥
ಸರ್ಗಾದಿ ದೀರ್ಘಸಂವಿತ್ತ್ಯಾ ಶೈಲಾದಿ ಜಡಸಂವಿದಾ ।
ಸೂಕ್ಷ್ಮಂ ಸೂಕ್ಷ್ಮವಿದಾ ಚೇತಿ ದೇಹಂ ಶೂನ್ಯಂ ನ ವಾಸ್ತವಮ್ ॥೪೧॥
ಸರ್ವಗೇನಾತ್ಮನಾ ವ್ಯಾಪ್ತಂ ಸ್ವಚೇತ್ಯಾತ್ಮವಪುರ್ಮನಃ ।
ಆತತಂ ಸೌಮ್ಯವಿಮಲಂ ವಾರೀವ ರವಿತೇಜಸಾ ॥೪೨॥
ಚಿತ್ತಬಾಲೋ ಜಗದ್ಯಕ್ಷಂ ಮಿಥ್ಯಾ ಪಶ್ಯತ್ಯಬೋಧತಃ ।
ಬೋಧಿತೋಽಸೌ ಪರಂ ರೂಪಂ ಸ್ವಂ ಪಶ್ಯತಿ ನಿರಾಮಯಮ್ ॥೪೩॥

ಪ್ರಪಂಚದಲ್ಲಿ, ಸಾಧಿಸಲ್ಪಡಬೇಕಾದುದು—ರಕ್ಷಣೆ ಮಾಡಲ್ಪಡಬೇಕಾದುದು—ವಿಚಾರ ಮಾಡಲ್ಪಡುವುದು—ದೊಡ್ಡವರಂತೆ ಕೆಲಸ ಮಾಡುವುದು—ಆಹಾರ-ವ್ಯವಹಾರ-ಸಂಚಾರ-ಆದರಾತಿಶಯದಿಂದ ಧಾರಣೆಮಾಡುವಿಕೆ,—ಇತ್ಯಾದಿಗಳೆಲ್ಲವೂ ಚಿತ್ತವೇಯೆ ॥೩೭॥

ಈ ಜಗತ್ಕಲ್ಪನೆಗೆ ಆಕಾಶಭೂತವಾದ ಚಿತ್ತವು, ಸಮಸ್ತ ದೃಶ್ಯವನ್ನೂ ತನ್ನೊಳಗೆ ಧರಿಸಿಕೊಂಡಿರುವುದು. ಅದೇ ಚಿತ್ತವು, ಆಯಾ ಕಾಲಾನುಗುಣವಾಗಿ ದೇಹಪ್ರಾಣಾದಿಗಳಲ್ಲಿ ಅಹಂಭಾವವನ್ನು ಪಡೆದು ತತ್ತದ್ರೂಪೇಣ ವಿಜೃಂಭಿಸುವುದು ॥೩೮॥

ಅಯ್ಯಾ! ರಾಮ! ಈ ಚಿತ್ತದಲ್ಲಿ, ಚಿದ್ಭಾಗವೆಂದೂ, ಜಡಭಾಗವೆಂದೂ ಭಾಗದ್ವಯವಿರುವುದು. ಅದರಲ್ಲಿ ಚಿದ್ಭಾಗವು ಸಮಸ್ತ ಪ್ರಾಪಂಚಿಕ ಪದಾರ್ಥವ್ಯವಹಾರಕ್ಕೂ ಬೀಜರೂಪವೆನ್ನಿಸುವುದು. ಜಡಭಾಗವೇ ಸಂಸಾರವು; ಅದೇ ಇಷ್ಟು ಸಂಭ್ರಮಪಡುತಿರುವುದು ॥೩೯॥

ಈ ಪೃಥಿವ್ಯಾದಿಗಳು ವಸ್ತುತಃ ಇಲ್ಲವೇ ಆದರೂ, ನಿರಾಕಾರನಾಗಿ ಜನ್ಮಶೂನ್ಯನಾಗಿರುವ ಪರಮಾತ್ಮನು ಆದಿಸೃಷ್ಟಿಯಲ್ಲಿ ಇವುಗಳನ್ನು ಇರುವಂತೆ ನೋಡುವವನಹಾಗೆ ಕಾಣಿಸಿಕೊಳ್ಳುವನು. ವಸ್ತುತಃ ಅವನು ನೋಡುವುದೂ ಅಸತ್ಯವೇಯೆ ॥೪೦॥

ಸೃಷ್ಟಿಸ್ಥಿತಿಲಯಗಳಲ್ಲಿ ಏಕವಿಧವಾಗಿರುವ ಸಾಕ್ಷಿಚೈತನ್ಯಜ್ಞಾನದಿಂದ ನೋಡಿದರೆ ಪರ್ವತ ಮುಂತಾದ ಸ್ಥೂಲದೇಹವು ಕಾಣುವುದು ; ಜಡತಾದಾತ್ಮ್ಯಜ್ಞಾನದಿಂದ ನೋಡಿದರೆ ಸೃಷ್ಟ್ಯಾದಿಯಾಗಿ ಸಮಸ್ತವೂ ಕಾಣುವುದು ; ಲಿಂಗದೇಹತಾದಾತ್ಮ್ಯಜ್ಞಾನದಿಂದ ನೋಡುವಾಗ ಸೂಕ್ಷ್ಮದೇಹವು ಕಾಣುವುದು. ಹೀಗಿರುವುದರಿಂದ, ದೇಹವೆಲ್ಲವೂ ಶೂನ್ಯವಲ್ಲದೆ ವಾಸ್ತವ್ಯವಲ್ಲ ॥೪೧॥

ಸೌಮ್ಯವಾಗಿಯೂ ನಿರ್ಮಲವಾಗಿಯೂ ಇರುವ ನೀರನ್ನು ಸೂರ್ಯಕಿರಣವು ವ್ಯಾಪಿಸುವಂತೆ, ಸರ್ವವ್ಯಾಪಿಯಾದ ಆತ್ಮನು, ತನ್ನಿಂದ ಚೇತನೀಯವಾದ ಮನಸ್ಸನ್ನು ವ್ಯಾಪಿಸಿರುವನು ॥

ಅಯ್ಯಾ! ರಾಮ! ಮನಸ್ಸೆಂಬ ಬಾಲಕನು, ತನ್ನ ಅಜ್ಞಾನದಿಂದ ಜಗತ್ತೆಂಬ ಬೇತಾಳವನ್ನು ನೋಡುತಿರುವನು. ಇವನಿಗೆ ಚೆನ್ನಾಗಿ ಜ್ಞಾನೋದಯವುಂಟಾಗುವಂತೆ ಮಾಡಿದರೆ, ಆಗ ಇವನು ನಿರುಪದ್ರವವಾದ ತನ್ನ ಪರಮಾರ್ಥವನ್ನು ತಿಳಿದುಕೊಳ್ಳುವನು ॥೪೩॥

ಯಥಾತ್ಮಾ ದೃಶ್ಯತಾಮೇತಿ ದ್ವಿತ್ವೈಕ್ಯಭ್ರಮದಾಯಿನೀಮ್ |
ಶೃಣು ತತ್ ತೇ ಪ್ರವಕ್ಷ್ಯಾಮಿ ವಕ್ಷ್ಯಮಾಣಕಥಾಗಮೈಃ ||೪೪||
ಯತ್ ಕಥ್ಯತೇ ಹಿ ಹೃದಯಙ್ಗಮಯೋಪಮಾನ
ಯುಕ್ತ್ಯಾ ಗಿರಾ ಮಧುರಯುಕ್ತಪದಾರ್ಥಯಾ ಚ |
ಶ್ರೋತುಸ್ತದಙ್ಗ ಹೃದಯಂ ಪರಿತೋ ವಿಸಾರಿ
ವ್ಯಾಪ್ನೋತಿ ತೈಲಮಿವ ವಾರಿಣಿ ವಾರ್ಯಶಙ್ಕಾಮ್ ||೪೫||
ತ್ಯಕ್ತೋಪಮಾನಮಮನೋಜ್ಞಪದಂ ದುರಾಪಂ
ಕ್ಷುಬ್ಧಂ ಧರಾವಿಧುರಿತಂ ವಿನಿಗೀರ್ಣವರ್ಣಮ್ |
ಶ್ರೋತುರ್ನ ಯಾತಿ ಹೃದಯಂ ಪ್ರವಿನಾಶಮೇತಿ
ವಾಕ್ಯಂ ಕಿಲಾಜ್ಯಮಿವ ಭಸ್ಮನಿ ಹೂಯಮಾನಮ್ ||೪೬||
ಆಖ್ಯಾನಕಾನಿ ಭುವಿ ಯಾನಿ ಕಥಾಶ್ಚ ಯಾಯಾಃ
ಯದ್ಯತ್ ಪ್ರಮೇಯಮುಚಿತಂ ಪರಿಪೇಲವಂ ವಾ |
ದೃಷ್ಟಾನ್ತದೃಷ್ಟಿಕಥನೇನ ತದೇತಿ ಸಾಧೋ
ಪ್ರಾಕಾಶ್ಯಮಾಶು ಭುವನಂ ಸಿತರಶ್ಮಿನೇವ ||೪೭||

ಇತಿ ಉತ್ಪತ್ತಿಪ್ರಕರಣೇ ಮನೋಙ್ಕುರೋತ್ಪತ್ತಿಕಥನಂ ನಾಮ
ಚತುರಶೀತಿತಮಃ ಸರ್ಗಃ.

ಅದುಕಾರಣ, ಈ ಆತ್ಮನು ದ್ವೈತಾದ್ವೈತಭ್ರಮಪ್ರದವಾದ ಈ ದೃಶ್ಯರೂಪವನ್ನು ಹೇಗೆ ಹೊಂದುವನೋ—ಅದನ್ನು ನಿನಗೆ ಮುಂದೆ ಹೇಳುವ ಕಥಾದೃಷ್ಟಾಂತಗಳಿಂದ ಹೇಳುವೆನು ಕೇಳು ||೪೪||

ವತ್ಸ ! ರಾಮ ! ದೃಷ್ಟಾಂತವನ್ನೇತಕ್ಕೆ ಹೇಳಬೇಕೆನ್ನುವೆಯೋ ?—ಪ್ರಪಂಚದಲ್ಲಿ, ಮನೋಹರವಾದ ಉಪಮಾನಗಳನ್ನು ಕೊಟ್ಟು ಮಧುರವಾದ ಪದಾರ್ಥಗಳನ್ನು ಸೇರಿಸಿ ಹೇಳಲ್ಪಡುವ ವಿಷಯವಾವುದುಂಟೋ,—ಅದೇಯೆ, ನೀರಿನಲ್ಲಿ ಬಿಟ್ಟ ಎಣ್ಣೆಯ ಬೊಟ್ಟಿನಂತೆ, ಕೇಳತಕ್ಕವನ ಮನಸ್ಸಿನಲ್ಲಿ ನಿರಾತಂಕವಾಗಿ ಪ್ರಸರಿಸುವುದು ||೪೫||

ಹಾಗಲ್ಲದೆ, ಉಪಮಾನರಹಿತವಾಗಿ—ಮಧುರವಾದ ಪದಗಳಿಲ್ಲದೆ—ಸ್ಪಷ್ಟವಾಗಿ ಅರ್ಥಗೊತ್ತಾಗದೆ—ಕ್ರೋಧಾದಿಗಳಿಂದ ಅಸ್ಫುಟವಾಗಿ—ಅಕ್ಷರಗಳನ್ನು ತಪ್ಪುತ—ಕೆಲವುಕಡೆ ಅಕ್ಷರಗಳನ್ನು ನುಂಗುತ—ಹೇಳುವ ಮಾತು ಯಾವುದುಂಟೋ,—ಅದು, ಕೇಳತಕ್ಕವನ ಮನಸ್ಸಿಗೆ ಪ್ರವೇಶಿಸುವುದೇ ಇಲ್ಲ. ಪ್ರತ್ಯುತ, ಬೂದಿಯಲ್ಲಿ ಹೋಮ ಮಾಡಲ್ಪಡುವ ತುಪ್ಪದಂತೆ ಅದು ವ್ಯರ್ಥವೇ ಆಗುವುದು ||೪೬||

ಈ ಲೋಕದಲ್ಲಿ, ದೊಡ್ಡವಾಗಿಯೂ ಸಣ್ಣವಾಗಿಯೂ ಇರುವ ಯಾವ ಕಥೆಗಳುಂಟೋ, ಶಾಸ್ತ್ರ ಕಾವ್ಯ ನಾಟಕಾದಿರೂಪವಾದ ಯಾವ ದೊಡ್ಡ ಪ್ರಮೇಯಜಾತವುಂಟೋ, ಅಥವಾ ಸಣ್ಣ ಸಣ್ಣದಾದ ಯಾವ ಪ್ರಮೇಯವುಂಟೋ,—ಅವೆಲ್ಲವೂ, ಚಂದ್ರನಿಂದ ಪ್ರಪಂಚವು ಪ್ರಕಾಶ ಹೊಂದುವಂತೆ, ದೃಷ್ಟಾಂತಕಥನದಿಂದ ಪ್ರಕಾಶಹೊಂದುವುವು ||೪೭||

ಇದು ಉತ್ಪತ್ತಿಪ್ರಕರಣದಲ್ಲಿ ಕರ್ಕಟಿಕೋಪಾಖ್ಯಾನದೊಳಗೆ ಮನೋಂಕುರೋತ್ಪತ್ತಿಕಥನವೆಂಬ ಎಂಭತ್ತುನಾಲ್ಕನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚಾಶೀತಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಪುರಾ ಮೇ ಬ್ರಹ್ಮಣಾ ಪ್ರೋಕ್ತಂ ಸರ್ವಂ ತತ್ಕಥಯಾನಘ ।
ಯದಿದಂ ತತ್ ಪ್ರವಕ್ಷ್ಯಾಮಿ ತ್ವಯಿ ಪೃಚ್ಛತಿ ರಾಘವ ॥೧॥
ಪುರಾ ಮಯಾ ಹಿ ಭಗವಾನ್ ಪೃಷ್ಟಃ ಕಮಲಸಮ್ಭವಃ ।
ಇಮೇ ಕಥಮುಪಾಯಾನ್ತಿ ಬ್ರಹ್ಮನ್ ಸರ್ಗಗಣಾ ಇತಿ ॥೨॥
ತದುಪಾಶ್ರುತ್ಯ ಭಗವಾನ್ ಬ್ರಹ್ಮಾ ಲೋಕಪಿತಾಮಹಃ ।
ಐನ್ದವಾಖ್ಯಾನಸಹಿತಂ ಮಾಮುವಾಚ ಬೃಹದ್ವಚಃ ॥೩॥

ಬ್ರಹ್ಮೋವಾಚ.

ಸರ್ವಂ ಹಿ ಮನಏವೇದಂ ಇತ್ಥಂ ಸ್ಫುರತಿ ಭೂತಿಮತ್ ।
ಜಲಂ ಜಲಾಶಯಸ್ಫಾರೈಃ ವಿಚಿತ್ರೈಶ್ಚಕ್ರಕೈರಿವ ॥೪॥

ಉತ್ಪತ್ತಿಪ್ರಕರಣದಲ್ಲಿ ಎಂಭತ್ತೈದನೆಯ ಸರ್ಗವು.

ಸೃಷ್ಟಿಂ ಚಿಕೀರ್ಷತೋ ಧಾತುಃ ದಶಬ್ರಹ್ಮಾಣ್ಡದರ್ಶನಮ್ ।
ತತ್ರೈಕರವಿಣಾ ತೇಷಾಂ ತತ್ತ್ವೋಕ್ತಿಶ್ಚಾತ್ರ ವರ್ಣ್ಯತೇ ॥

ಜಗತ್ತನ್ನು ಸೃಜಿಸಬೇಕೆಂದು ಅಪೇಕ್ಷಿಸಿದ ಚತುರ್ಮುಖನು ಹತ್ತು ಬ್ರಹ್ಮಾಂಡಗಳನ್ನು ನೋಡುವಿಕೆಯೂ, ಆಗ ಅವುಗಳಲ್ಲೊಂದರಲ್ಲಿರುವ ಸೂರ್ಯನು ಅವುಗಳ ಸ್ವರೂಪವನ್ನು ಹೇಳುವಿಕೆಯೂ ಕೂಡ, ಈ ಸರ್ಗದಲ್ಲಿ ಹೇಳಲ್ಪಡುವುವು.

ಪುನಃ ಶ್ರೀ ವಸಿಷ್ಠರು ಹೇಳಲುಪಕ್ರಮಿಸಿದರು :—

ನಿರ್ದೋಷನಾದ ರಾಘವನೆ! ನೀನು ನನ್ನನ್ನು ಕೇಳುತಿರುವುದರಿಂದ, ಪೂರ್ವದಲ್ಲಿ ಬ್ರಹ್ಮನು ನನಗೆ ಹೇಳಿದ ಒಂದು ಕಥೆಯನ್ನು, ಆವನು ಹೇಳಿದಂತೆಯೇ ಈಗ ನಾನು ನಿನಗೆ ಹೇಳುವೆನು॥

ಪೂರ್ವದಲ್ಲಿ ನಾನು ಒಂದು ಸಮಯದಲ್ಲಿ ಚತುರ್ಮುಖನನ್ನು ನೋಡಿ 'ಹೇ ಬ್ರಹ್ಮನ್! ಈ ಸೃಷ್ಟಿಸಮುದಾಯಗಳು ಹೇಗೆ ಬರುತ್ತವೆ?' ಎಂದು ಪ್ರಶ್ನೆಮಾಡಿದೆನು ॥೨॥

ಅದನ್ನು ಕೇಳಿ, ಸರ್ವಲೋಕಪಿತಾಮಹನಾದ ಆ ಚತುರ್ಮುಖಬ್ರಹ್ಮನು, ಐಂದವೋಪಾಖ್ಯಾನದೊಡನೆ ಅರ್ಥವಿಶೇಷಯುಕ್ತವಾದ ವಚನವನ್ನು ನನಗೆ ಹೇಳಿದನು ॥೩॥

ಬ್ರಹ್ಮನು ಹೇಳಿದುದೇನೆಂದರೆ :—

ಮನಸ್ಸು, ಜಗತ್ತೆಂಬ ಭಾವವನ್ನು ಧರಿಸುವುದರಲ್ಲಿ ಸಾಮರ್ಥ್ಯವುಳ್ಳುದು. ಅದುಕಾರಣ, ಜಲಾಶಯದಲ್ಲಿ ವಿಜೃಂಭಿಸುವ ವಿಚಿತ್ರವಾದ ಸುಳಿಗಳ ರೂಪದಿಂದ ಜಲವು ಸ್ಫುರಿಸುವಂತೆ, ಆ ಮನಸ್ಸೇ ಈ ಸಮಸ್ತ ಪ್ರಪಂಚರೂಪವಾಗಿಯೂ ಸ್ಫುರಿಸುತಿರುವುದು ॥೪॥

ದಿನಾದೌ ಸಮ್ಪ್ರಬುದ್ಧಸ್ಯ ಸಂಸಾರಂ ಸ್ರಷ್ಟುಮಿಚ್ಛತಃ ।
ಪುರಾ ಕಲ್ಪೇ ಹಿ ಕಸ್ಮಿಂಶ್ಚಿತ್ ಶೃಣು ಕಿಂ ವೃತ್ತಮಙ್ಗ ಮೇ ॥೫॥
ಕದಾಚಿದಖಿಲಂ ಸರ್ಗಂ ಸಂಹೃತ್ಯ ದಿವಸಕ್ಷಯೇ ।
ಏಕಏವಾಹಮೇಕಾಗ್ರಃ ಸ್ವಸ್ಥಸ್ತ್ವಮನಯಂ ನಿಶಾಮ್ ॥೬॥
ನಿಶಾನ್ತೇ ಸಮ್ಪ್ರಬುದ್ಧಾತ್ಮಾ ಸನ್ಧ್ಯಾಂ ಕೃತ್ವಾ ಯಥಾವಿಧಿ ।
ಪ್ರಜಾಃ ಸ್ರಷ್ಟುಂ ದೃಶೌ ಸ್ಫಾರೇ ವ್ಯೋಮ್ನಿ ಯೋಜಿತವಾನಹಮ್ ॥೭॥
ಯಾವತ್ ಪಶ್ಯಾಮಿ ಗಗನಂ ನ ತಮೋಭಿರ್ನ ತೇಜಸಾ ।
ವ್ಯಾಪ್ತಮತ್ಯನ್ತವಿತತಂ ಶೂನ್ಯಮನ್ತವಿವರ್ಜಿತಮ್ ॥೮॥
ಸರ್ಗಂ ಸಙ್ಕಲ್ಪಯಾಮೀತಿ ಮತಿಂ ನಿಶ್ಚಿತ್ಯ ತನ್ಮಯಾ ।
ಸಮವೇಕ್ಷಿತುಮಾರಬ್ಧಂ ಶುದ್ಧಂ ಸೂಕ್ಷ್ಮೇಣ ಚೇತಸಾ ॥೯॥
ಅಥಾಹಂ ದೃಷ್ಟವಾಂಸ್ತತ್ರ ಮನಸಾ ವಿತತೇಮ್ಬರೇ ।
ಪೃಥಕ್ ಸ್ಥಿತಾನ್ ಮಹಾರಮ್ಭಾನ್ ಸರ್ಗಾನ್ ಸ್ಥಿತಿನಿರರ್ಗಳಾನ್ ॥೧೦॥
ತೇಷು ಮತ್ಪ್ರತಿಬಿಮ್ಬಾಭಾಃ ಪದ್ಮಕೋಶನಿವಾಸಿನಃ ।
ರಾಜಹಂಸಾನ್ ಸಮಾರೂಢಾಃ ಸಂಸ್ಥಿತಾದಶ ಪದ್ಮಜಾಃ ॥೧೧॥

ವತ್ಸ! ವಸಿಷ್ಠ! ಪೂರ್ವಕಲ್ಪದಲ್ಲಿ ಬಂದು ದಿನ ಬೆಳಗ್ಗೆ ಈ ಪ್ರಪಂಚವನ್ನು ಸೃಷ್ಟಿಮಾಡಲಿಚ್ಛಿಸಿದ ನನಗೆ ಏನಾಯ್ತೆಂಬುದನ್ನು ನೀನು ಕೇಳುವವನಾಗು ॥೫॥

ಹಿಂದೆ ಒಂದುಸಲ ಸಂಧ್ಯಾಕಾಲದಲ್ಲಿ ಈ ಸಮಸ್ತ ಸೃಷ್ಟಿಯನ್ನೂ ಉಪಸಂಹರಿಸಿಬಿಟ್ಟು, ನಾನೊಬ್ಬನೇ ಧ್ಯಾನತತ್ಪರನಾಗಿ ಆ ರಾತ್ರಿಯನ್ನು ಕಳೆದೆನು ॥೬॥

ಬೆಳಗಾದಮೇಲೆ ಎಚ್ಚರಗೊಂಡು, ಯಥಾವಿಧಿಯಾಗಿ ಸಂಧ್ಯಾದಿ ಕರ್ಮಗಳನ್ನು ನೆರವೇರಿಸಿ, ಪ್ರಜಾಸೃಷ್ಟಿಮಾಡಲೆಳಸಿದವನಾಗಿ, ಕಣ್ಣುಗಳನ್ನು ವಿಸ್ತರಿಸಿಕೊಂಡು ಅಂತರಿಕ್ಷಪ್ರದೇಶದಲ್ಲಿಟ್ಟೆನು ॥೭॥

ನಾನು ನೋಡುವಹೊತ್ತಿಗೆ, ಆ ಅಂತರಿಕ್ಷಭಾಗದಲ್ಲಿ ಕತ್ತಲೆಯೂ ಇಲ್ಲ,—ಬೆಳಕೂ ಇಲ್ಲ, ಕೇವಲ ಶೂನ್ಯವಾಗಿ ಕೊನೆಯೇ ಇಲ್ಲದಿದ್ದಿತು ॥೮॥

ಆಗ ನಾನು ಸೃಷ್ಟಿಯನ್ನು ಸಂಕಲ್ಪಿಸಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಸೂಕ್ಷ್ಮವಾದ ಮನಸ್ಸಿನಿಂದ ಅಂತರಿಕ್ಷಭಾಗವನ್ನು ನೋಡಲುಪಕ್ರಮಿಸಿದೆನು ॥೯॥

ಹಾಗೆ ನೋಡಲುಪಕ್ರಮಿಸಿದ ಬಳಿಕ, ನನ್ನ ಮನಸ್ಸಿನಿಂದ ವಿಸ್ತೃತವಾದ ಅಂತರಿಕ್ಷದಲ್ಲಿ, ಬೇರೆಬೇರೆಯಾಗಿ—ನಾನಾಕಾರ್ಯಾರಂಭಪರಿಪೂರ್ಣವಾಗಿ—ರಕ್ಷಣೆ ಹೊಂದುತಿರುವ— ಇನ್ನೂ ಹತ್ತು ಸೃಷ್ಟಿಗಳನ್ನು ನೋಡಿದೆನು ॥೧೦॥

ಅವುಗಳಲ್ಲಿ, ನನ್ನ ಪ್ರತಿಬಿಂಬಕ್ಕೆ ಸಮಾನರಾಗಿ ಕಮಲಾಸನ ನಿಷಣ್ಣರಾಗಿ ರಾಜಹಂಸಗಳನ್ನು ಆರೋಹಣಮಾಡಿರುವ ಹತ್ತುಮಂದಿ ಬ್ರಹ್ಮರಿದ್ದರು ॥೧೧॥

ಪೃಥಕ್ ಸ್ಥಿತೇಷು ಸರ್ಗೇಷು ತೇಷೂದ್ಯದ್ಭೂತಪಙ್ಕ್ತಿಷು |
ಜಲಜಾಲೇಷು ಶುದ್ಧೇಷು ಜಗತ್ಸು ಜಲದಾಯಿಷು ||೧೨||
ಪ್ರವಹನ್ತಿ ಮಹಾನದ್ಯಃ ಪ್ರಧ್ವನನ್ತಿ ಯಥಾಬ್ಧಯಃ |
ಪ್ರತಪನ್ತ್ಯುಷ್ಣರುಚಯಃ ಪ್ರಸ್ಫುರನ್ತ್ಯಮ್ಬರೇಽನಿಲಾಃ ||೧೩||
ದಿವಿ ಕ್ರೀಡನ್ತಿ ವಿಬುಧಾಃ ಭುವಿ ಕ್ರೀಡನ್ತಿ ಮಾನವಾಃ |
ದಾನವಾಭೋಗಿನಶ್ಚೈವ ಪಾತಾಳೇಷು ಚ ಸಂಸ್ಥಿತಾಃ ||೧೪||
ಕಾಲಚಕ್ರಪರಿಪ್ರೋತಾಃ ಯದ್ಭಾವಾಃ ಸಕಲರ್ತವಃ |
ಯಥಾಕಾಲಂ ಫಲಾಪೂರ್ಣಾಃ ಭೂಷಯನ್ತ್ಯಭಿತೋಮಹೀಮ್ ||೧೫||
ಪ್ರೌಢ್ಯಂ ಶುಭಾಶುಭಾಚಾರಸ್ಮೃತಯಃ ಕಕುಭಂ ಪ್ರತಿ |
ನರಕಸ್ವರ್ಗಫಲದಾಃ ಸರ್ವತ್ರ ಸಮುಪಾಗತಾಃ ||೧೬||
ಭೋಗಮೋಕ್ಷಫಲಾರ್ಥಿನ್ಯಃ ಸಮಸ್ತಾ ಭೂತಜಾತಯಃ |
ಸ್ವವಿಹಿತಂ ಯಥಾಕಾಲಂ ಪ್ರಯತನ್ತೇ ಯಥಾಕ್ರಮಮ್ ||೧೭||
ಸಪ್ತ ಲೋಕಾಸ್ತಥಾ ದ್ವೀಪಾಃ ಸಮುದ್ರಾಗಿರಯಸ್ತಥಾ |
ಅಪ್ಯೇಪ್ಯಮಾನಾಃ ಕಲ್ಪಾನ್ತಂ ಸ್ಫುರನ್ತ್ಯುರುತರಾರವಮ್ ||೧೮||

ಹೀಗೆ ಬೇರೆಬೇರೆಯಾಗಿರುವ ಆ ಸೃಷ್ಟಿಗಳಲ್ಲಿ, ಯಥಾಪ್ರಕಾರವಾಗಿ ಭೂತಸಮುದಾಯುಗಳು ಉದಯಿಸುತಿದ್ದುವು; ಶುದ್ಧವಾದ ಜಲಪ್ರವಾಹಗಳು ಹರಿಯುತ ಜನರಿಗೆಲ್ಲ ಜಲದಾನ ಮಾಡುತಿದ್ದುವು ||೧೨||

ಅವುಗಳಲ್ಲಿ, ದೊಡ್ಡ ನದಿಗಳು ಹರಿಯುತ ಸಮುದ್ರದಂತೆ ಧ್ವನಿಮಾಡುತಿದ್ದುವು; ಸೂರ್ಯರು ಲೋಕಗಳನ್ನು ತಪಿಸುತಿದ್ದರು; ಆಕಾಶದಲ್ಲಿ ವಾಯುಗಳು ಬೀಸುತಿದ್ದುವು ||೧೩||

ಆ ಸೃಷ್ಟಿಗಳಲ್ಲಿಯೂ, ಬೇರೆಬೇರೆಯಾಗಿ, ಸ್ವರ್ಗದಲ್ಲಿ ದೇವತೆಗಳೂ, ಭೂಮಿಯಲ್ಲಿ ಮಾನವರೂ, ಪಾತಾಳದಲ್ಲಿ ರಾಕ್ಷಸರೂ ಸರ್ಪಗಳೂ ಕ್ರೀಡಿಸುತಿದ್ದರು ||೧೪||

ಕಾಲವೆಂಬ ಚಕ್ರದಲ್ಲಿ ಪವಣಿಸಲ್ಪಟ್ಟಿರುವ ಸಮಸ್ತ ಋತುಗಳೂ, ಆಯಾ ಸ್ವಭಾವಾನುಗುಣವಾದ ಪುಷ್ಪಫಲಗಳಿಂದ ಭರಿತಗಳಾಗಿ, ಸುತ್ತಲೂ ಭೂಮಿಯನ್ನಲಂಕರಿಸುತಿದ್ದುವು ||

ಆ ಸಮಸ್ತ ಸೃಷ್ಟಿ (ಬ್ರಹ್ಮಾಂಡ) ಗಳಲ್ಲಿಯೂ, ಪ್ರತಿ ದಿಕ್ಕಿನಲ್ಲಿಯೂ, ಶುಭಾಶುಭಾಚಾರ ವಾಸನೆಗಳು ಸ್ವರ್ಗನರಕ ಫಲಪ್ರದಗಳಾಗಿ ಸ್ಥಿರಗೊಂಡಿದ್ದುವು ||೧೬||

ಅಲ್ಲಿರತಕ್ಕ ಸಮಸ್ತ ಭೂತಸಮುದಾಯುಗಳೂ, ಭೋಗಮೋಕ್ಷರೂಪವಾದ ಫಲಗಳನು ಪ್ರಾರ್ಥಿಸುತ, ತಂತಮ್ಮ ಇಷ್ಟಾರ್ಥಾನುಸಾರವಾಗಿ ಆಯಾಕಾಲಕ್ಕೆ ತಕ್ಕಂತೆ ಯಥಾಕ್ರಮವಾಗಿ ಪ್ರಯತ್ನಪಡುತಿದ್ದುವು ||೧೭||

ಸಪ್ತದ್ವೀಪಗಳೂ, ಸಪ್ತಲೋಕಗಳೂ, ಸಪ್ತಸಮುದ್ರಗಳೂ, ಸಪ್ತಕುಲಾಚಲಗಳೂ ಕೂಡ, ಅಲ್ಲಿಯೂ ಬೇರೆಬೇರೆಯಾಗಿ ಪ್ರಳಯೋನ್ಮುಖಗಳಾಗಿ ಮಹತ್ತಾದ ಧ್ವನಿಯೊಡನೆ ಸ್ಫುರಿಸುತಿರುವುವು ||೧೮||

ಕ್ವಚಿದ್ಧ್ರಸಿತ್ವಮಾಯಾತಂ ಕ್ವಚಿತ್ ಸ್ಥಿರತರಂ ಸ್ಥಿತಮ್ ।
ಸ್ಥಿತಂ ಸರ್ವತ್ರ ಕುಞ್ಜೇಷು ತಮಸ್ತೇಜೋಲವಾವೃತಮ್ ॥೧೯॥
ನಭೋನೀಲೋತ್ಪಲಸ್ಯಾನ್ತಃ ಭ್ರಮದಭ್ರಮಧುವ್ರತಮ್ ।
ಪ್ರಸ್ಫುರತ್ತಾರಕಾಜಾಲಂ ಕೇಸರಾಪೂರ್ಣತಾಂ ಗತಮ್ ॥೨೦॥
ಕಲ್ಪಾನ್ತಘನನೀಹಾರೋ ಮೇರುಕುಞ್ಜೇಷು ಸಂಸ್ಥಿತಃ ।
ಶಾಲ್ಮಲೇರಮಲಂ ತೂಲಂ ಅಷ್ಠಿಲಾ ಕೋಟರೇಷ್ವಿವ ॥೨೧॥
ಲೋಕಾಲೋಕಾದ್ರಿರಶನಾರಣದರ್ಣವಘುಙ್ಘುಮಾ ।
ತಮಃಖಣ್ಡೇನ್ದ್ರನೀಲಾಭಾ ನಿಜರತ್ನವಿರಾಜಿತಾ ॥೨೨॥
ಧಾನಾಧರಸುಧಾಭೂತರವಕಾಕಲಿಘುಙ್ಘುಮಾ ।
ಸಂಸ್ಥಿತಾ ಭುವನಾಭೋಗೇ ಸ್ವಾನ್ತಃಪುರಇವಾಙ್ಗನಾ ॥೨೩॥
ಗೌರಾಙ್ಗಪಙ್ಕ್ತಿಮಧ್ಯಸ್ಥಾ ರಜನೀರಾಜಿರಞ್ಜಿತಾ ।
ಪದ್ಮೋತ್ಪಲಸ್ರಜ ಇವ ಲಕ್ಷ್ಯತೇ ವತ್ಸರಶ್ರಿಯಃ ॥೨೪॥

ಅಲ್ಲಿಯೂ, ತಮಸ್ಸು--ಕೆಲವುಕಡೆ ಹ್ರಸ್ವವಾಗಿಯೂ, ಕೆಲವುಕಡೆ ಸಾಂದ್ರವಾಗಿಯೂ, ಸಮಸ್ತವಾದ ಕುಂಜಗಳಲ್ಲಿಯೂ ತೇಜೋಲವದಿಂದ ಸಂಯುಕ್ತವಾಗಿ ವಿರಳವಿರಳವಾಗಿಯೂ ಕಾಣಿಸುತಿದ್ದಿತು ॥೧೯॥

ಆ ಸೃಷ್ಟಿಗಳಲ್ಲಿಯೂ, ಜಗತ್ತು ಸರೋವರದಂತೆ ಭಾಸಿಸುತಿದ್ದಿತು. ಅಲ್ಲಿ ಆಕಾಶವೆಂಬ ಕನ್ನೈದಿಲೆಯೊಳಗೆ ಮೇಘವೆಂಬ ದುಂಬಿಯು ಸುತ್ತುತಿದ್ದಿತು; ನಕ್ಷತ್ರಗಳೆಂಬ ಕೇಸರಗಳು, ಆ ಜಗನ್ನೀಲೋತ್ಪಲದ ಮಧ್ಯದಲ್ಲಿ ತುಂಬ ಪ್ರಸ್ಫುರಿಸುತಿದ್ದುವು ॥೨೦॥

ಮೇರುಪರ್ವತದಂತೆ ಮಹಾಮಹಿಮನಾದ ಹಿಮವತ್ಪರ್ವತನ ಲತಾಗೃಹಗಳೊಳಗೆ, ದೂದಿ ಕಾಯಿಯ ಸಿಪ್ಪೆಯೊಳಗಡೆ ಶುಭ್ರವಾದ ಹತ್ತಿಯಿರುವಂತೆ, ಪ್ರಳಯಕಾಲಮೇಘವೆಂಬ ಮಂಜು ತುಂಬಿಕೊಂಡಿದ್ದಿತು ॥೨೧॥

ಆ ಸೃಷ್ಟಿಸಮುದಾಯದ ವಿಶಾಲವಾದ ಭುವನದೊಳಗೆ, ತನ್ನ ಅಂತಃಪುರದೊಳಗೆ ಯುವತಿಯಿರುವಂತೆ, ಭೂಮಿಯು ಪ್ರಕಾಶಿಸುತಿದ್ದಿತು. ಈ ಭೂಮಿಯೆಂಬ ಯುವತಿಗೆ, ಲೋಕಾಲೋಕಪರ್ವತವೇ ಒಡ್ಯಾಣವಾಗಿಯೂ, ಸಮುದ್ರದ ಧ್ವನಿಗಳೇ ಆಭರಣಶಬ್ದವಾಗಿಯೂ, ತಮಃಖಂಡಗಳೇ ಇಂದ್ರನೀಲ ರತ್ನಕಾಂತಿಯಾಗಿಯೂ, ಆ ಭೂಮಿಯೊಳಗಿರುವ ರತ್ನಗಳೇ ರತ್ನಾಭರಣಗಳಾಗಿಯೂ, ಮಧುರವಾದ ಧಾನ್ಯಬೀಜಗಳೇ ಅಧರಾಮೃತವಾಗಿಯೂ, ಭೂತಜಾತಗಳ ಧ್ವನಿಯೇ ಮಧುರವಾದ ಕಂಠರವವಾಗಿಯೂ ಇದ್ದುವು ॥೨೨-೨೩॥

ಆಗ ಅಂತರಿಕ್ಷವು, ಸಂವತ್ಸರಲಕ್ಷ್ಮಿಯ ಶುಭ್ರವಾದ ಅವಯವಸಮುದಾಯದಂತೆ ಕಾಣಿಸಿತು; ಅದರ ಸುತ್ತಲೂ ಇದ್ದ ಪ್ರಕಾಶವು ಪದ್ಮಮಾಲಿಕೆಯಂತೆಯೂ, ತಮಸ್ಸು ಉತ್ಪಲಮಾಲಿಕೆಯಂತೆಯೂ ಭಾಸಿಸಿತು; ಮಿಂಚು ನಕ್ಷತ್ರ ಮುಂತಾದುವು, ಆ ಸಂವತ್ಸರಲಕ್ಷ್ಮಿಯ ಅಂಗಗಳಲ್ಲಿ ಅರಿಸಿನಬೊಳಿದಂತೆ ತೋರುತಿದ್ದುವು ॥೨೪॥

ಬಹುಗರ್ತವಿಭಾಗಸ್ಥಭೂತಾಲೋಕಾಃ ಪೃಥಕ್‌ಪೃಥಕ್ ।
ಜಾತಾರುಣಾವಿಲೋಕ್ಯನ್ತೇ ದಾಡಿಮಾನೀವ ಕಾನ್ತಿಕಾಃ ॥೨೫॥
ತ್ರಿಪ್ರವಾಹಾ ತ್ರಿಪಥಗಾ ಕೃತೋರ್ಧ್ವಾಧೋಗಮಾಗಮಾ ।
ಜಗದ್ಯಜ್ಞೋಪವೀತಾಭಾ ಸ್ಫುರತೀನ್ದುಕಲಾಮಲಾ ॥೨೬॥
ಇತಶ್ಚೇತಶ್ಚ ಗಚ್ಛನ್ತಿ ಶೀರ್ಯನ್ತೇ ಪ್ರೋದ್ಭವನ್ತಿ ಚ ।
ದಿಗ್ಲತಾಸು ತಟಿತ್ಪುಷ್ಪಾಃ ವಾತಾರ್ತಾಮೇಘಪಲ್ಲವಾಃ ॥೨೭॥
ಗನ್ಧರ್ವನಗರೋದ್ಯಾನಲತಾವಿತಾನಮಾಲಿನೀ ।
ಸಮುದ್ರಭೂಮಿನಭಸಾಂ ಪದವೀ ಪ್ರವಿರಾಜತೇ ॥೨೮॥
ಲೋಕಾನ್ತರೇಷು ಸಙ್ಘೇನ ದೇವಾಸುರನರೋರಗಾಃ ।
ಉದುಮ್ಬರೇಷು ಮಶಕಾಃ ಇವ ಘುಙ್ಘುಮಿತಾಃ ಸ್ಥಿತಾಃ ॥೨೯॥
ಯುಗಕಲ್ಪಕ್ಷಣಲವಕಲಾಕಾಷ್ಠಾಕಳಙ್ಕಿತಃ ।
ಕಾಲೋ ವಹತ್ಯಕಲಿತಸರ್ವನಾಶಪ್ರತೀಕ್ಷಕಃ ॥೩೦॥
ಏವಮಾಲೋಕ್ಯ ಶುದ್ಧೇನ ಪರೇಣ ಸ್ವೇನ ಚೇತಸಾ ।
ಭೃಶಂ ವಿಸ್ಮಯಮಾಪನ್ನಃ ಕಿಮೇತತ್ ಕಥಮಿತ್ಯಲಮ್ ॥೩೧॥

ಅಲ್ಲಿ ಅನೇಕವಾಗಿ ಆಯಾ ಸ್ಥಳ ವಿಭಾಗಗಳಲ್ಲಿ ಭೂತಗಳುಳ್ಳವಾಗಿರುವ ಬ್ರಹ್ಮಾಂಡಗಳು, ದಿವ್ಯವಾದ ಕಾಂತಿಯುಂಟಾದುವಾಗಿ ಪ್ರಕಾಶಿಸುತ, ಬೇರೆಬೇರೆಯಾಗಿ ದಾಳಿಂಬರೆಹಣ್ಣುಗಳಂತೆ ಕಾಣಿಸುತಿದ್ದುವು ॥೨೫॥

ಮತ್ತು, ಮೂರು ಪ್ರವಾಹವುಳ್ಳದಾಗಿ ಹರಿಯುತ—ಮೇಲಕ್ಕೂ ಕೆಳಕ್ಕೂ ಹೋಗುತಲೂ ಬರುತಲೂ ಇರುವ—ಚಂದ್ರಕಿರಣದಂತೆ ನಿರ್ಮಲವಾದ—ಗಂಗಾನದಿಯು, ಜಗತ್ತಿಗೆ ಯಜ್ಞೋಪವೀತವೋ ಎಂಬಂತೆ ಸ್ಫುರಿಸುತಿದ್ದಿತು ॥೨೬॥

ಅಲ್ಲಿ ಪ್ರತಿಯೊಂದು ಬ್ರಹ್ಮಾಂಡದೊಳಗೂ, ದಿಕ್ಕುಗಳೆಂಬ ಲತೆಗಳಲ್ಲಿ, ಮಿಂಚೆಂಬ ಪುಷ್ಪದೊಡಗೂಡಿದ ಮೇಘಗಳೆಂಬ ಚಿಗುರುಗಳು, ವಾಯುವಿನಿಂದ ಪೀಡಿತಗಳಾಗಿ, ಅತ್ತಿತ್ತ ಹಾರುತಲೂ ಸೀಳಿಹೋಗುತಲೂ ಮತ್ತೆ ಹೊಸದಾಗಿ ಹುಟ್ಟುತಲೂ ಇರುವುವು ॥೨೭॥

ಈರೀತಿಯಾಗಿ ಆಗ ನನಗೆ ಕಾಣಿಸಿದ ಆ ಸಮುದ್ರ ಭೂಮಿ ಆಕಾಶಗಳ ಮಾರ್ಗವು, ಗಂಧರ್ವನಗರದ ಉದ್ಯಾನದಲ್ಲಿರುವ ಲತೆಯಂತೆ ಕೇವಲ ಮಿಥ್ಯಾಭೂತವಲ್ಲದೆ ವಾಸ್ತವ್ಯವಲ್ಲ ॥

ಅತ್ತಿಯ ಹಣ್ಣಿನಲ್ಲಿ ಸೊಳ್ಳೆಗಳು ತುಂಬಿರುವಂತೆ, ಆ ಲೋಕಾಂತರಗಳಲ್ಲಿಯೂ ಜನರು ಗುಂಪುಗುಂಪಾಗಿ ಘುಮಘುಮಧ್ವನಿಮಾಡುತ ತುಂಬಿದ್ದರು ॥೨೯॥

ಅಲ್ಲಿಯೂ ಕೂಡ, ಯುಗ ಕಲ್ಪ ಕ್ಷಣ ಲವ ಕಲಾ ಕಾಷ್ಠಾ—ಇತ್ಯಾದಿ ಭೇದಯುಕ್ತವಾಗಿರುವ ಅಖಂಡವಾದ ಕಾಲವು, ಅತರ್ಕಿತವಾಗಿ ಸರ್ವನಾಶವನ್ನುಂಟುಮಾಡುತ ಪ್ರವಹಿಸುತಿರುವುದು ॥೩೦॥

ವತ್ಸ! ವಸಿಷ್ಠ! ಈರೀತಿಯಾಗಿ ಅಲ್ಲಿ ಆ ಹತ್ತು ಬ್ರಹ್ಮಾಂಡಗಳನ್ನು ನೋಡಿ, ಶುದ್ಧವಾಗಿ ಉತ್ತಮವಾಗಿರುವ ನನ್ನ ಮನಸ್ಸಿನಲ್ಲಿ 'ಇದೇನು?—ಹೇಗೆ ಬಂದಿತು?' ಎಂದು ಅತ್ಯಾಶ್ಚರ್ಯವುಂಟಾಯಿತು ॥೩೧॥

ಕಥಂ ಮಾಂಸಮಯೇನಾಕ್ಷ್ಣಾ ಯನ್ನ ಪಶ್ಯಾಮಿ ಕಿಞ್ಚನ ।
ತನ್ಮಾಯಾಜಾಲಮತುಲಂ ಪಶ್ಯಾಮಿ ಮನಸಾಮ್ಬರೇ ॥೨೧॥
ಅಥಾಲೋಕ್ಯ ಚಿರಂ ಕಾಲಂ ಮನಸೈವಾಹಮಮ್ಬರಾತ್ ।
ಅರ್ಕಂ ತಸ್ಮಾಜ್ಜಗಜ್ಜಾಲಾತ್ ಏಕಮಾನೀಯ ಪೃಷ್ಟವಾನ್ ॥೨೨॥
ಆಗಚ್ಛ ದೇವದೇವೇಶ ಭೋ ಭಾಸ್ಕರ ಮಹಾದ್ಯುತೇ ।
ಸ್ವಾಗತಂ ತೇಽಸ್ತ್ವಿತಿ ಪ್ರೋಕ್ತೋ ಮಯಾಸೌ ಕಥಿತೋಽಪ್ಯಥ ॥೨೪॥
ಕಸ್ತ್ವಂ ಕಥಮಿದಂ ಜಾತಂ ಜಗದೇವ ಜಗನ್ತಿ ಚ ।
ಯದಿ ಜಾನಾಸಿ ಭಗವನ್ ತದೇತತ್ ಕಥಯಾನಘ ॥೨೫॥
ಇತ್ಯುಕ್ತೋ ಮಾಂ ಸಮಾಲೋಕ್ಯ ಸಮ್ಪರಿಜ್ಞಾತವಾನಥ ।
ನಮಸ್ಕೃತ್ವಾಭ್ಯುವಾಚೇದಂ ಅನಿನ್ದ್ಯಪದಯಾ ಗಿರಾ ॥೨೬॥

ಭಾನುರುವಾಚ.

ಅಸ್ಯ ದೃಶ್ಯಪ್ರಪಞ್ಚಸ್ಯ ನಿತ್ಯಂ ಕಾರಣತಾಮಸಿ ।
ಗತಃ ಕಸ್ಮಾನ್ನ ಜಾನೀಷೇ ಕಿಂ ಮಾಮೀಶ್ವರ ಪೃಚ್ಛಸಿ ॥೨೭॥

'ನನ್ನ ಚರ್ಮಚಕ್ಷುಸ್ಸಿಗೆ ಯಾವುದು ಸ್ವಲ್ಪವೂ ಗೋಚರವಾಗುವುದಿಲ್ಲವೋ, ಅಂತಹ ಅಸದೃಶವಾದ ಮಾಯಾಜಾಲವು ಅಂತರಿಕ್ಷದಲ್ಲಿ ನನ್ನ ಮನಸ್ಸಿಗೆ ಗೋಚರವಾಗುತಿರುವುದು; ಇದು ಹೇಗೆ? ' ಎಂದು ನಾನು ಆಶ್ಚರ್ಯಪಟ್ಟೆನು ॥೩೧॥

ಬಳಿಕ ನಾನು ಬಹುಕಾಲ ಹಾಗೆಯೇ ಮನಸ್ಸಿನಲ್ಲಿಯೇ ನೋಡುತಿದ್ದು, ಆ ಬ್ರಹ್ಮಾಂಡ ಜಾಲದ ಮಧ್ಯದಲ್ಲಿ ಒಬ್ಬ ಸೂರ್ಯನನ್ನು ಕರೆದು, ಈರೀತಿಯಾಗಿ ಪ್ರಶ್ನೆಮಾಡಿದೆನು ॥೩೨॥

'ದೇವದೇವೇಶ! ಮಹಾಕಾಂತಿಯುತ! ಭಾಸ್ಕರ! ಇಲ್ಲಿ ಬಾ; ನಿನಗೆ ಶುಭಾಗಮವಾಗಲಿ' ಎಂದು ಹೇಳಿ, ಆಮೇಲೆ ಅವನನ್ನು ಕುರಿತು ಹೀಗೆ ಹೇಳಿದೆನು ॥೩೪॥

ಅಯ್ಯಾ! ಮಹಾತ್ಮನೆ! ನೀನು ಯಾರು? ನೀನಿರುವ ಈ ಜಗತ್ತು ಹೇಗೆ ಹುಟ್ಟಿತು? ಮತ್ತು, ಇತರವಾದ ಈ ಬ್ರಹ್ಮಾಂಡಗಳೂ ಹೇಗೆ ಹುಟ್ಟಿದುವು? ಹೇ ಭಗವನ್! ದೋಷರಹಿತ! ನೀನು ಇದನ್ನು ತಿಳಿದಿದ್ದಪಕ್ಷದಲ್ಲಿ, ಅನುಗ್ರಹವಿಟ್ಟು ನನಗೂ ಹೇಳುವವನಾಗು ॥೩೫॥

ಅಯ್ಯಾ! ವಸಿಷ್ಠ! ನನ್ನಿಂದ ಹೀಗೆ ಹೇಳಲ್ಪಟ್ಟ ಆ ಭಾನುವು, ನನ್ನನ್ನು ಚೆನ್ನಾಗಿ ಅವಲೋಕಿಸಿ, ನನ್ನ ಗುರುತು ಹಿಡಿದವನಾಗಿ, ನನ್ನನ್ನು ನಮಸ್ಕರಿಸಿ, ಈ ರೀತಿಯಾಗಿ ಅತಿ ಪ್ರಶಸ್ತವಾದ ಮಾತನ್ನು ಹೇಳಿದನು ॥೩೬॥

ಆ ಭಾನು ಹೇಳಿದುದೇನೆಂದರೆ:—

ಸಕಲನಿಯಾಮಕನಾದ ಬ್ರಹ್ಮನೆ! ಈ ದೃಶ್ಯಪ್ರಪಂಚಕ್ಕೆ ಪದೇಪದೇ ನೀನೇ ಕಾರಣಭೂತನಾಗುತಿರುವೆ. ಹೀಗಿದ್ದರೂ, ನೀನು ಇದನ್ನು ತಿಳಿಯದಿರಲು ಕಾರಣವೇನು? ನನ್ನನ್ನೇಕೆ ಕೇಳುವೆ? ॥೩೭॥

ಅಥ ಮದ್ವಾಕ್ಯಸಂದರ್ಭೇ ಲೀಲಾ ಚೇತ್ ತವ ಸರ್ವಗ ।
ಅಚಿನ್ತಿತಾಂ ಮದುತ್ಪತ್ತಿಂ ತಚ್ಛೃಣುಷ್ವ ವದಾಮ್ಯಹಮ್ ॥೩೮॥
ಸದಸದಿತಿ ಕಲಾಭಿರಾತತಂ ಯತ್ ಸದಸದಬೋಧವಿಮೋಹದಾಯಿನೀಭಿಃ ।
ಅವಿರತರಚನಾಭಿರೀಶ್ವರಾತ್ಮನ್ ಪ್ರವಿಲಸತೀಹ ಮನೋ ಮಹನ್ಮಹಾತ್ಮನ್ ॥೩೯॥

ಇತಿ ಉತ್ಪತ್ತಿಪ್ರಕರಣೇ ಐಂದವೋಪಾಖ್ಯಾನೋಪಕ್ರಮೇ ಬ್ರಹ್ಮಾದಿತ್ಯ
ಸಮಾಗಮೋನಾಮ ಪಞ್ಚಾಶೀತಿತಮಃ ಸರ್ಗಃ.

ಅಥವಾ, ಸರ್ವವ್ಯಾಪಿಯಾದ ಬ್ರಹ್ಮನೆ! ನನ್ನ ಮಾತನ್ನು ಕೇಳುವುದರಲ್ಲಿ ನಿನಗೆ ಕುತೂಹಲವಿರುವಪಕ್ಷದಲ್ಲಿ, ನಿನ್ನಿಂದ ಸ್ವಲ್ಪವೂ ಪರ್ಯಾಲೋಚಿಸಲ್ಪಡದಿರುವ ನನ್ನ ಉತ್ಪತ್ತಿಕ್ರಮವನ್ನು ಹೇಳುವೆನು—ಕೇಳು ॥೩೮॥

ಅಯ್ಯಾ! ಬ್ರಹ್ಮನೆ! ವ್ಯವಹಾರದೃಷ್ಟ್ಯಾ ನೀನು ಸರ್ವಶಕ್ತನಾಗಿರುವೆ; ಪರಮಾರ್ಥದೃಷ್ಟ್ಯಾ ನೀನೇ ಪರಮಾತ್ಮನಾಗಿರುವೆ. ಇಂತಹ ನಿನಗೆ ಅಗೋಚರವಾದುದಾವುದು? ಮನಸ್ಸೇ ನಾನಾವಿಧ ಕೌಶಲದಿಂದ ವಿಲಾಸಪಡುತಿರುವುದು. 'ಜಗತ್ತು ಸತ್ಯವೇ?—ಅಥವಾ ಅಸತ್ಯವೇ?' ಎಂದು, ಈ ಮನೋವಿಲಾಸದಿಂದಲೇ ಶಂಕೆಯುಂಟಾಗುತಿರುವುದು. ಇದು, ಒಂದುವೇಳೆ ಸತ್ಯವೆಂದೂ—ಮತ್ತೊಂದುವೇಳೆ ಅಸತ್ಯವೆಂದೂ, ನಾನಾವಿಧವಾಗಿ ವಿತರ್ಕವುಂಟಾಗುತಿರುವುದೂ ಈ ಮನೋವಿಲಾಸದಿಂದಲೇಯೆಂದು ದೃಢವಾಗಿ ನಿಶ್ಚಯಿಸು ॥೩೯॥

ಇದು ಉತ್ಪತ್ತಿಪ್ರಕರಣದಲ್ಲಿ ಐಂದವೋಪಾಖ್ಯಾನೋಪಕ್ರಮದೊಳಗೆ ಬ್ರಹ್ಮಾದಿತ್ಯ
ಸಮಾಗಮವೆಂಬ ಎಂಭತ್ತೈದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಷಡಶೀತಿತಮಃ ಸರ್ಗಃ.

ಶ್ರೀ ಭಾನುರುವಾಚ.

ಕಲ್ಪನಾಮ್ನಿ ಮಹಾದೇವ ಹ್ಯಸ್ತನೇ ದಿವಸೇ ತವ ।
ತಲೇ ಕೈಲಾಸಶೈಲಸ್ಯ ಜಮ್ಬೂದ್ವೀಪೈಕಕೋಣಕೇ ॥೧॥
ಸುವರ್ಣಜಟನಾಮ್ನಾ ಯಃ ತ್ವತ್ಪುತ್ರೈರ್ಜನಿತಪ್ರಜೈಃ ।
ಮಣ್ಡಲಂ ಕಲ್ಪಿತಂ ಶ್ರೀಮತ್ ಅನಲ್ಪಸುಖಸುನ್ದರಮ್ ॥೨॥
ತತ್ರಾಭೂದತಿಧರ್ಮಾತ್ಮಾ ಬ್ರಾಹ್ಮಣೋ ಬ್ರಹ್ಮವಿತ್ತಮಃ ।
ಇನ್ದುನಾಮಾತಿಶಾನ್ತಾತ್ಮಾ ಕಶ್ಯಪಸ್ಯ ಕುಲೋದ್ಭವಃ ॥೩॥
ತಸ್ಮಿಂಸ್ತದಾ ನಿವಸತೋ ನಿತ್ಯಂ ಸ್ವಜನಮಣ್ಡಲೇ ।
ತಸ್ಯ ಪ್ರಾಣಸಮಾ ಭಾರ್ಯಾ ಕಾಚಿತ್ ತಸ್ಯಾಂ ಮಹಾತ್ಮನಃ ।
ನ ಬಭೂವಾತ್ಮಜಸ್ತಸ್ಯ ಮರುಭೂಮೌ ತೃಣಂ ಯಥಾ ॥೪॥

ಉತ್ಪತ್ತಿಪ್ರಕರಣದಲ್ಲಿ ಎಂಭತ್ತಾರನೆಯ ಸರ್ಗವು.

ಇಹೇನ್ದೋಃ ಸಹಭಾರ್ಯಸ್ಯ ತಪಸ್ಯೈನ್ದವಸಮ್ಭವಃ ।
ತೇಷಾಂ ಜ್ಯೇಷ್ಠೋಪದೇಶೇನ ಧಾತ್ರಹಮ್ಭಾವನೇರ್ಯತೇ ॥

ಇಂದುವೆಂಬ ಬ್ರಾಹ್ಮಣನು ಪತ್ನಿಯೊಡನೆ ತಪಸ್ಸುಮಾಡಿ ಮಕ್ಕಳನ್ನು ಪಡೆಯುವಿಕೆಯೂ, ಆ ಮಕ್ಕಳೆಲ್ಲರೂ ಹಿರಿಯವನ ಉಪದೇಶದಿಂದ ತಮ್ಮನ್ನು ತಾವೇ ಬ್ರಹ್ಮನೆಂದು ಭಾವಿಸಿಕೊಳುವಿಕೆಯೂ ಕೂಡ ಈ ಸರ್ಗದಲ್ಲಿ ಹೇಳಲ್ಪಡುವುವು.

ಮತ್ತೆ ಆ ಭಾನುವು ಬ್ರಹ್ಮನನ್ನು ಕುರಿತು ಹೇಳುವನು :—

ಎಲೈ ಬ್ರಹ್ಮನೆ! ಕಲ್ಪವೆಂದು ಪ್ರಸಿದ್ಧವಾದ ನಿನ್ನ ನಿನ್ನೆಯ ದಿವಸದಲ್ಲಿ, ಜಂಬೂದ್ವೀಪದ ಒಂದು ಮೂಲೆಯಾಗಿಯೂ ಸುವರ್ಣಜಟವೆಂದು ಪ್ರಸಿದ್ಧವಾಗಿಯೂ ಇರುವ ಕೈಲಾಸಪರ್ವತದ ಒಂದು ಪ್ರದೇಶದೊಳಗೆ, ನಿನ್ನ ಮಕ್ಕಳಾದ ಮರೀಚಿಮುನಿಯೇ ಮೊದಲಾದವರು, ಪ್ರಜೆಗಳನ್ನು ಸೃಷ್ಟಿಮಾಡಿ, ಆ ಪ್ರಜೆಗಳ ನಿವಾಸಾರ್ಥವಾಗಿ ಅತ್ಯಧಿಕ ಸುಖಸಂಪೂರ್ಣವಾಗಿರುವ ವಾಸಸ್ಥಾನವನ್ನು ಕಲ್ಪಿಸಿದರು ॥೧-೨॥

ಅಲ್ಲಿ, ಅತಿ ಧರ್ಮಿಷ್ಠನಾಗಿಯೂ, ಬ್ರಹ್ಮಜ್ಞಾನಿಗಳಲ್ಲಿ ಅಗ್ರಗಣ್ಯನಾಗಿಯೂ, ಅತಿ ಶಾಂತನಾಗಿಯೂ ಇದ್ದ, ಕಶ್ಯಪವಂಶಸಂಭೂತನಾದ, ಇಂದುವೆಂದು ಹೆಸರುಳ್ಳ, ಒಬ್ಬ ಬ್ರಾಹ್ಮಣನಿದ್ದನು ॥೩॥

ಹೀಗೆ ಸ್ವಜನಸಮೂಹದಲ್ಲಿ ವಾಸಮಾಡುತಿರುವ ಆ ಬ್ರಾಹ್ಮಣನಿಗೆ, ಪ್ರಾಣಸಮಾನಳಾಗಿದ್ದ ಒಬ್ಬ ಪತ್ನಿಯಿದ್ದಳು. ಮರುಭೂಮಿಯಲ್ಲಿ ತೃಣಹುಟ್ಟದಿರುವಂತೆ, ಆ ಪತ್ನಿಯಲ್ಲಿ ಅವನಿಗೆ ಮಕ್ಕಳು ಹುಟ್ಟಲಿಲ್ಲ ॥೪॥

ನ ವ್ಯರಾಜತ ಸಾ ಭಾರ್ಯಾ ತಸ್ಯ ನಿಷ್ಫಲಪುಷ್ಪಿತಾ ।
ಋಜ್ವೀ ಗೌರೀ ಸುಶುದ್ಧಾಪಿ ಶೂನ್ಯಾ ಶರಲತಾ ಯಥಾ ॥೫॥
ತೌ ತತೋ ದಮ್ಪತೀ ಖಿನ್ನೌ ಪುತ್ರಾರ್ಥಂ ತಪಸೇ ಗಿರೇಃ ।
ಕೈಲಾಸಸ್ಯಾಂಶಮಾರೂಢೌ ರೂಢಾವಿವ ನವದ್ರುಮೌ ॥೬॥
ಭೂತೈರನಾವೃತೇ ಶೂನ್ಯೇ ತಸ್ಮಿನ್ ಕೈಲಾಸಕುಞ್ಜಕೇ ।
ತೇಪತುಸ್ತೌ ತಪೋ ಘೋರಂ ಜಲಾಹಾರೌ ತರುಸ್ಥಿತೀ ॥೭॥
ಏಕಂ ಪಾನೀಯಚುಳಕಂ ಪೀತ್ವಾ ದಿವಸಪರ್ಯಯೇ ।
ನಿಸ್ಪನ್ದಮುತ್ಥಿತೌ ವಾರ್ಕ್ಷೀಂ ವೃತ್ತಿಮಾಶ್ರಿತ್ಯ ಸಂಸ್ಥಿತೌ ॥೮॥
ತಸ್ಥತುಸ್ತೌ ತದಾ ತತ್ರ ತಾವತ್ಕಾಲಂ ತರುವ್ರತೌ ।
ಯಾವತ್ ತ್ರೇತಾ ದ್ವಾಪರಂ ಚ ಯುಗೇ ದ್ವೇ ಏವ ತೇ ಗತೇ ॥೯॥
ತತಸ್ತುಷ್ಟೋಽಭವದ್ದೇವಃ ತಯೋಃ ಶಶಿಕಲಾಧರಃ ।
ದಿನಾತಪಾತಾಪಿತಯೋಃ ಇನ್ದುಃ ಕುಮುದಯೋರಿವ ॥೧೦॥

ನೆಟ್ಟಗೆ ಬೆಳೆದು ಶುಭ್ರವಾಗಿ ನಿರ್ದೋಷವಾಗಿದ್ದರೂ ಫಲಶೂನ್ಯವಾಗಿರುವ ಜೊಂಡು ಹುಲ್ಲು ಪ್ರಕಾಶಿಸದಿರುವಂತೆ, ಅವನ ಹೆಂಡತಿಯೂ ನಿಷ್ಫಲವಾದ ರಜೋದರ್ಶನವುಳ್ಳವಳಾಗಿ ಪ್ರಕಾಶಹೀನಳಾಗಿದ್ದಳು ॥೫॥

ಬಳಿಕ ಆ ದಂಪತಿಗಳಿಬ್ಬರೂ ಖೇದಪಟ್ಟು, ಪುತ್ರಾರ್ಥವಾಗಿ ತಪಸ್ಸುಮಾಡುವುದಕ್ಕೋಸ್ಕರ, ಕೈಲಾಸಪರ್ವತ ಶಿಖರವನ್ನಾಶ್ರಯಿಸಿ, ಹೊಸದಾಗಿ ಹುಟ್ಟಿರುವ ಎರಡು ಮರಗಳಂತೆ ತೋರುತಿದ್ದರು ॥೬॥

ಸಕಲಭೂತವರ್ಜಿತವಾಗಿ ಶೂನ್ಯವಾಗಿರುವ ಆ ಕೈಲಾಸಪರ್ವತದ ಒಂದು ಲತಾಗೃಹದೊಳಗೆ, ಅವರಿಬ್ಬರೂ ಜಲಾಹಾರಮಾಡುತ, ವೃಕ್ಷದಂತೆ ನಿಶ್ಚಲರಾಗಿ ಘೋರವಾದ ತಪಸ್ಸನ್ನು ಮಾಡಿದರು ॥೭॥

ಹಗಲೆಲ್ಲ ಕಳೆದಮೇಲೆ ಒಂದು ಆಪೋಶನಕ್ಕಾಗುವಷ್ಟು ನೀರನ್ನು ಕುಡಿದು, ಮರದ ಸ್ಥಿತಿಯನ್ನು ಆಶ್ರಯಿಸಿ, ನಿಶ್ಚಲರಾಗಿ ನಿಂತು ತಪಸ್ಸುಮಾಡುತಿದ್ದರು ॥೮॥

ಹೀಗೆ ಅಲ್ಲಿ ವೃಕ್ಷಸ್ಥಿತಿಯಲ್ಲಿ ತಪಸ್ಸು ಮಾಡುತಿರುವ ಅವರಿಬ್ಬರೂ, ತ್ರೇತಾಯುಗ ದ್ವಾಪರಯುಗಗಳೆರಡೂ ಬರುವವರೆಗೂ ಅಲ್ಲಿಯೇ ನಿಂತಿದ್ದರು ॥೯॥

ಹೀಗೆ ಎರಡು ಯುಗಗಳು ಕಳೆದಬಳಿಕ, ಹಗಲೆಲ್ಲ ಸೂರ್ಯಕಿರಣದಿಂದ ತಪ್ತಗಳಾದ ನೈದಿಲೆಗಳಲ್ಲಿ ಚಂದ್ರನು ಅನುಗ್ರಹವಿಡುವಂತೆ, ಭಗವಂತನಾದ ಚಂದ್ರಶೇಖರ (ಪರಮೇಶ್ವರ) ನು ಅವರಲ್ಲಿ ಅನುಗ್ರಹವಿಟ್ಟನು ॥೧೦॥

ಆಜಗಾಮ ತಮುದ್ದೇಶಂ ಯತ್ರ ತೌ ವಿಪ್ರದಮ್ಪತೀ ।
ಸಲತಾಪಾದಪಂ ದೇಶಂ ಪುಷ್ಪಾಕರಇವೇಶ್ವರಃ ॥೧೧॥
ದಮ್ಪತೀ ತೌ ವೃಷಾರೂಢಂ ಸೋಮಂ ಸೋಮಾರ್ಧಶೇಖರಮ್ ।
ಫುಲ್ಲಾನನೌ ದದೃಶತುಃ ಕುಮುದೇ ಶಶಿನಂ ಯಥಾ ॥೧೨॥
ತೌ ತಂ ಪ್ರಣೇಮತುರ್ದೇವಂ ತುಷಾರಾಮಲಮೀಶ್ವರಮ್ ।
ದ್ಯಾವಾಪೃಥಿವ್ಯಾವುದಿತಂ ಪರಿಪೂರ್ಣಮಿವೋಡುಪಮ್ ॥೧೩॥
ತರ್ಜಯನ್ ಪವನಾಧೂತನವವೃಕ್ಷಾನನಸ್ವರಮ್ ।
ಮೃದೂದ್ದಾಮಸ್ಮಿತಸ್ಪನ್ದಿ ಪ್ರೋವಾಚಾಥ ವಚಃ ಶಿವಃ ॥೧೪॥

ಈಶ್ವರ ಉವಾಚ.

ವರಂ ವಿಪ್ರ ಗೃಹಾಣಾಶು ತುಷ್ಟೋಽಸ್ಮಿ ತವ ವಾಞ್ಛಿತಮ್ ।
ಮಧುಮಾಸರಸಾಕ್ರಾನ್ತವೃಕ್ಷವನ್ಮುದಿತೋಽಭವ ॥೧೫॥

ವಿಪ್ರ ಉವಾಚ.

ಭಗವನ್ ದೇವದೇವೇಶ ದಶಪುತ್ರಾ ಮಹಾಧಿಯಃ ।
ಭವ್ಯಾಭವನ್ತು ಮೇ ಭೂಯಃ ಶೋಕೋ ಯೇನ ನ ಬಾಧತೇ ॥೧೬॥

ಬಳಿಕ, ಲತೆಗಳೂ ವೃಕ್ಷಗಳೂ ಇರುವ ಪ್ರದೇಶಕ್ಕೆ ವಸಂತಋತು ಬರುವಂತೆ, ಆ ಬ್ರಾಹ್ಮಣದಂಪತಿಗಳಿದ್ದ ಸ್ಥಳಕ್ಕೆ ಪರಮೇಶ್ವರನು ಬಂದನು ॥೧೧॥

ಆ ದಂಪತಿಗಳಿಬ್ಬರೂ, ಕುಮುದಪುಷ್ಪಗಳು ಚಂದ್ರನನ್ನು ನೋಡುವಂತೆ, ವೃಷಭಾರೂಢನಾಗಿ ಪಾರ್ವತಿಯೊಡನೆ ಬಂದಿರುವ ಆ ಚಂದ್ರಶೇಖರನನ್ನು ಹರ್ಷದಿಂದ ವಿಕಸಿತಮುಖರಾಗಿ ನೋಡಿದರು ॥೧೨॥

ಆಗತಾನೆ ಉದಯಿಸಿರುವ ಪೂರ್ಣಚಂದ್ರನನ್ನು ಭೂಮ್ಯಂತರಿಕ್ಷಗಳು ನಮಸ್ಕರಿಸುವಂತೆ, ಆ ದಂಪತಿಗಳಿಬ್ಬರೂ ಹಿಮದಂತೆ ಶುಭ್ರನಾಗಿರುವ ಆ ಪರಮೇಶ್ವರನನ್ನು ನಮಸ್ಕರಿಸಿದರು ॥

ಬಳಿಕ ಆ ಪರಮೇಶ್ವರನು ವಾಯುವಿನಿಂದ ಕಂಪಿತವಾದ ವೃಕ್ಷದ ಶಬ್ದವನ್ನು ತಿರಸ್ಕರಿಸುತ, ಮೃದುವಾಗಿಯೂ ಕೇವಲ ಗಂಭೀರವಾಗಿಯೂ ಮಂದಹಾಸಪೂರ್ವಕವಾಗಿಯೂ ಇರುವಂತೆ ಮಾತನಾಡಿದನು ॥೧೪॥

ಆ ಪರಮೇಶ್ವರನು ಹೇಳಿದುದೇನೆಂದರೆ:—

ಅಯ್ಯಾ! ಬ್ರಾಹ್ಮಣ! ಬೇಗನೆ ನಿನಗೆ ಬೇಕಾದ ವರವನ್ನು ಸ್ವೀಕರಿಸು. ನಿನ್ನ ವಿಷಯದಲ್ಲಿ ನಾನು ಸಂತುಷ್ಟನಾಗಿರುವೆನು. ವಸಂತಋತುವಿನ ರಸದಿಂದ ಪರಿಪೂರ್ಣವಾದ ವೃಕ್ಷದಂತೆ ನೀನು ಹರ್ಷಯುಕ್ತನಾಗಿರು ॥೧೫॥

ಇದನ್ನು ಕೇಳಿ ಆ ಬ್ರಾಹ್ಮಣನು ಪ್ರಾರ್ಥಿಸುವನು :—

ಭಗವಂತನೆ! ದೇವದೇವನೆ! ಪರಮೇಶ್ವರನೆ! ನನಗೆ, ಮಹಾಬುದ್ಧಿಶಾಲಿಗಳಾಗಿಯೂ ಪ್ರಶಸ್ತರಾಗಿಯೂ ಇರುವ ಹತ್ತುಮಂದಿ ಮಕ್ಕಳಾಗಬೇಕು. ಹೀಗಾದರೆ, ನನಗೆ ಪುನಃ ವ್ಯಸನವುಂಟಾಗದಿರುವುದು ॥೧೬॥

ಭಾನುರುವಾಚ.

ಅಥೈವಮಸ್ತ್ವಿತಿ ಪ್ರೋಚ್ಯ ಜಗಾಮಾನ್ತರ್ಧಿಮೀಶ್ವರಃ |
ವ್ಯೋಮ್ನಿ ವಾರಿನಿಧಿಹ್ರಾದಂ ಕೃತ್ವೇವೋರ್ಮಿಮಹಾವಪುಃ ||೧೭||

ತತಸ್ತೌ ದಮ್ಪತೀ ತುಷ್ಟೌ ಶಿವಲಬ್ಧವರೌ ಗೃಹಮ್ |
ಗತೌ ಗೀರ್ವಾಣಸದೃಶೌ ಖಮಿವೋಮಾಮಹೇಶ್ವರೌ ||೧೮||

ತತ್ರಾಸೌ ಬ್ರಾಹ್ಮಣೀ ಗೇಹೇ ಬಭೂವೋದಾರಗರ್ಭಿಣೀ |
ಬಭೌ ಪೂರ್ಣೋದರಾ ಶ್ಯಾಮಾ ಮೇಘಲೇಖೇವ ವಾರಿಣಾ ||೧೯||

ಕಾಲೇಥ ಸುಷುವೇ ಪುತ್ರಾನ್ ಪ್ರತಿಪಚ್ಚನ್ದ್ರಕೋಮಲಾನ್ |
ದಶ ಬಾಲಾಂಸ್ತತೋ ಮುಗ್ಧಾನ್ ವಸುಧೇವ ನವಾಙ್ಕುರಾನ್ ||೨೦||

ಕೃತಬ್ರಾಹ್ಮಣಸಂಸ್ಕಾರಾಃ ವೃದ್ಧಿಮಾಯುರ್ಮಹೌಜಸಃ |
ಸ್ವಲ್ಪೇನೈವ ಹಿ ಕಾಲೇನ ಪ್ರಾವೃಷೇವ ನವಾಮ್ಬುದಾಃ ||೨೧||

ತೇ ಸಪ್ತವರ್ಷವಯಸೋ ಬಭೂವುರ್ಜ್ಞಾತವಾಙ್ಮಯಾಃ |
ವಿರೇಜುಸ್ತೇಜಸಾ ತತ್ರ ನಭಸೀವಾಮಲಾಗ್ರಹಾಃ ||೨೨||

ಭಾನುವು ಬ್ರಹ್ಮನಿಗೆ ಹೇಳುವನು :—

ಅಯ್ಯಾ! ಬ್ರಹ್ಮ! ಬಳಿಕ ಆ ಪರಮೇಶ್ವರನು, ತರಂಗಬಹುಳವಾದ ಸಮುದ್ರದಂತೆ ಮಹಾಗಂಭೀರವಾದ ಧ್ವನಿಯಿಂದ, ಹಾಗೆಯೇ ಆಗಲೆಂದು ಹೇಳಿಬಿಟ್ಟು, ಅಂತರಿಕ್ಷದಲ್ಲಿಯೇ ಅಂತರ್ಧಾನಹೊಂದಿದನು ||೧೭||

ಅನಂತರ ದೇವಸಮಾನರಾದ ಆ ದಂಪತಿಗಳಿಬ್ಬರೂ, ಪರಮೇಶ್ವರನಿಂದ ವರವನ್ನು ಪಡೆದುಕೊಂಡು ಸಂತೋಷಯುಕ್ತರಾಗಿ, ಪಾರ್ವತೀಪರಮೇಶ್ವರರು ಅಂತರಿಕ್ಷಕ್ಕೆ ಹೋಗುವಂತೆ, ತಮ್ಮ ಮನೆಗೆ ಹೊರಟುಹೋದರು ||೧೮||

ಅಲ್ಲಿ ಆ ಬ್ರಾಹ್ಮಣಿಯು, ಉತ್ತಮವಾದ ಗರ್ಭವನ್ನು ಧರಿಸಿದವಳಾಗಿ, ಜಲಪರಿಪೂರ್ಣವಾಗಿ ಕಪ್ಪಾಗಿರುವ ಮೇಘಪಂಕ್ತಿಯಂತೆ ಪ್ರಕಾಶಿಸಿದಳು ||೧೯||

ಬಳಿಕ, ಪ್ರಸವಕಾಲ ಬರಲಾಗಿ, ಭೂಮಿಯು ಹೊಸದಾದ ಮೊಳಕೆಗಳನ್ನು ಪ್ರಸವಿಸುವಂತೆ, ಆ ಬ್ರಾಹ್ಮಣಿಯು ಚಂದ್ರಮಂಡಲದಂತೆ ಮನೋಹರವಾಗಿರುವ ಸುಂದರವಾದ ಹತ್ತು ಮಂದಿ ಮಕ್ಕಳನ್ನು ಹೆತ್ತಳು ||೨೦||

ಬ್ರಾಹ್ಮಣಜಾತಿಗುಚಿತವಾದ ಸಂಸ್ಕಾರವನ್ನು ಪಡೆದ ಮಹಾತೇಜಸ್ವಿಗಳಾದ ಆ ಬಾಲಕರು, ವರ್ಷರ್ತುವಿನಿಂದ ಮೇಘಗಳು ವೃದ್ಧಿಹೊಂದುವಂತೆ, ಸ್ವಲ್ಪ ಕಾಲದಲ್ಲಿಯೇ ವೃದ್ಧಿಹೊಂದಿದರು ||೨೧||

ಅವರುಗಳು, ಏಳನೆಯ ವರ್ಷದೊಳಗಾಗಿ ಸಮಸ್ತ ವಿದ್ಯಾಸಮುದಾಯವನ್ನೂ ತಿಳಿದವರಾಗಿ, ಅಂತರಿಕ್ಷದಲ್ಲಿರುವ ನಿರ್ಮಲವಾದ ಗ್ರಹಗಳಂತೆ ವಿರಾಜಿಸುತಿದ್ದರು ||೨೨||

ಅಥ ಕಾಲೇನ ಮಹತಾ ತೇಷಾಂ ತೌ ಪಿತರೌ ತದಾ ।
ಸಂಜಗ್ಮತುಸ್ತನುಂ ತ್ಯಕ್ತ್ವಾ ಸ್ವಾಂ ಗತಿಂ ಗತಿಕೋವಿದೌ ॥೨೩॥
ಮಾತಾಪಿತೃಭ್ಯಾಂ ರಹಿತಾಃ ದಶ ತೇ ಬ್ರಾಹ್ಮಣಾಸ್ತತಃ ।
ಯಯುಃ ಕೈಲಾಸಶಿಖರಂ ಗೃಹಂ ಸನ್ತ್ಯಜ್ಯ ಖೇದಿನಃ ॥೨೪॥
ತತ್ರ ಸಞ್ಚಿನ್ತಯಾಮಾಸುಃ ಉದ್ವಿಗ್ನಾಸ್ತೇ ವಿಬಾನ್ಧವಾಃ ।
ಕಿಂ ಸ್ಯಾದಿಹ ಪರಂ ಶ್ರೇಯಃ ಊಚುಶ್ಚೇದಂ ಪರಸ್ಪರಮ್ ॥೨೫॥
ಕಿಮಿಹ ಸ್ಯಾತ್ ಸಮುಚಿತಂ ಭ್ರಾತರಃ ಕಿಮದುಃಖದಮ್ ।
ಕಿಂ ಮಹತ್ತ್ವಂ ಕಿಮೈಶ್ವರ್ಯಂ ಕಿಂ ಮಹಾವಿಭವಂ ಶುಭಮ್ ॥೨೬॥
ಕಿಂ ತದೇತಜ್ಜನೈಶ್ವರ್ಯಂ ಸಾಮನ್ತೋ ಹಿ ಮಹೇಶ್ವರಃ ।
ಸಾಮನ್ತಸಮ್ಪತ್ ಕಿಂನಾಮ ರಾಜಾನೋ ಹಿ ಮಹೇಶ್ವರಾಃ ॥೨೭॥
ಕಾ ನಾಮ ಸಮ್ಪದ್ಭೂಪಾನಾಂ ಸಮ್ರಾಡಿಹ ಮಹೇಶ್ವರಃ ॥೨೮॥
ಕಿಂ ನಾಮ ತನ್ಮಹೇನ್ದ್ರತ್ವಂ ಯನ್ಮುಹೂರ್ತಂ ಪ್ರಜಾಪತೇಃ ।
ವಿನಶ್ಯತಿ ನ ಯತ್ ಕಲ್ಪೇ ಕಿಂ ಸ್ಯಾತ್ ತದಿಹ ಶೋಭನಮ್ ॥೨೯॥

ಅನಂತರ ಬಹುಕಾಲ ಕಳೆದಮೇಲೆ, ಉತ್ತಮಗತಿಯನ್ನು ಪಡೆಯುವುದರಲ್ಲಿ ಕುಶಲರಾದ ಆ ತಾಯಿತಂದೆಗಳು, ಈ ಶರೀರವನ್ನು ಬಿಟ್ಟುಬಿಟ್ಟು, ತಮ್ಮ ಕರ್ಮಾನುಗುಣವಾದ ಸದ್ಗತಿಯನ್ನು ಪಡೆದರು ॥೨೩॥

ಬಳಿಕ, ಆ ಹತ್ತುಮಂದಿ ಬ್ರಾಹ್ಮಣರು, ಮಾತಾಪಿತೃವಿಯುಕ್ತರಾಗಿ, ಕೇವಲ ಖೇದಪಟ್ಟು, ಮನೆಯನ್ನು ಪರಿತ್ಯಜಿಸಿ ಕೈಲಾಸಪರ್ವತ ಶಿಖರಕ್ಕೆ ಹೋದರು ॥೨೪॥

ಅಲ್ಲಿ, ಬಂಧುರಹಿತರಾಗಿರುವ ಈ ಬ್ರಾಹ್ಮಣರು, ಕಳವಳಪಡುತ, ಈ ಪ್ರಪಂಚದಲ್ಲಿ ಉತ್ತಮವಾದ ಶ್ರೇಯಸ್ಸಾವುದೆಂದು ಯೋಚಿಸುತ, ಪರಸ್ಪರವಾಗಿ ಹೀಗೆ ಮಾತನಾಡಿದರು ॥

ಅಣ್ಣಂದಿರಾ! ಇಲ್ಲಿ ಯಾವುದು ಉಚಿತವಾದುದು? ಯಾವುದು ದುಃಖಪ್ರದವಾಗದಿರುವುದು? ಮಹತ್ವವೆಂಬುದಾವುದು? ಐಶ್ವರ್ಯವೆಂಬುದಾವುದು? ಮಹಾವಿಭವಯುಕ್ತವಾದ ಮಂಗಳವಾವುದು? ॥೨೬॥

ಜನಗಳಿಗಿರುವ ಸಂಪತ್ಸಮೃದ್ಧಿಯೇ ಇಷ್ಟು ಪ್ರಶಸ್ತವೆಂದು ಹೇಳೋಣವೆ? ಜನರಿಗೆಲ್ಲ ಅಧಿಪತಿಯಾದ ಸಾಮಂತರಾಜನೊಬ್ಬನಿರುವನಲ್ಲ! ಆ ಸಾಮಂತರ ಸಂಪತ್ತುತಾನೆ ಎಷ್ಟರದು? ಇವರಿಗೆಲ್ಲ ಮೇಲಿರುವ ರಾಜರೇ ಅಧಿಕರಲ್ಲವೆ! ಆ ರಾಜರ ಸಂಪತ್ತುತಾನೆ ಯಾವುದು? ಅವರೆಲ್ಲರ ಮೇಲಿರುವ ಚಕ್ರವರ್ತಿಯೇ ದೊಡ್ಡವನು ॥೨೭-೨೮॥

ಇವೆಲ್ಲವೂ ಇರಲಿ; ಆ ಮಹೇಂದ್ರಪದವಿತಾನೆ ಏನು ದೊಡ್ಡದು? ಆ ಮಹೇಂದ್ರನ ಪರಮಾಯುಸ್ಸು ಬ್ರಹ್ಮನಿಗೊಂದು ಮುಹೂರ್ತದಷ್ಟಾಗುವುದು. ಹೀಗಿರುವುದರಿಂದ, ಮಹಾಕಲ್ಪದಲ್ಲಿಯೂ ನಾಶಹೊಂದದಿರುವ ಶುಭವಾವುದು? ॥೨೯॥

ಭಾಷಮಾಣೇಷ್ವಥೈತೇಷು ಜ್ಯೇಷ್ಠೋ ಭ್ರಾತಾ ಮಹಾಮತಿಃ |
ಗಮ್ಭೀರವಾಗುವಾಚೇದಂ ಮೃಗಯೂಥಾನ್ಮೃಗೋ ಯಥಾ ||೨೦||
ಐಶ್ವರ್ಯಾಣಾಂ ಹಿ ಸರ್ವೇಷಾಂ ಆಕಲ್ಪಂ ನ ವಿನಾಶಿ ಯತ್ |
ರೋಚತೇ ಭ್ರಾತರಸ್ತನ್ಮೇ ಬ್ರಹ್ಮತ್ವಮಿಹ ನೇತರತ್ ||೨೧||
ಏತದುಕ್ತಂ ತದಖಿಲಾಃ ದ್ವಿಜಪುತ್ರಾಸ್ತ ಉತ್ತಮಾಃ |
ವಚೋಭಿರೈನ್ದವಾಸ್ತತ್ರ ಸಾಧುಸಾಧ್ವಿತ್ಯಪೂಜಯನ್ ||೨೨||
ಊಚುಶ್ಚೇದಂ ಕಥಂ ತಾತ ಸರ್ವದುಃಖೋಪಮಾರ್ಜನಮ್ |
ಪದ್ಮಾಸನಂ ಜಗತ್ಪೂಜ್ಯಂ ವಿರಿಞ್ಚತ್ವಮವಾಪ್ನುಮಃ ||೨೩||
ಭ್ರಾತ್ರಾ ತೇನ ಪುನಃ ಪ್ರೋಕ್ತಾಃ ಭ್ರಾತರೋ ಭೂರಿತೇಜಸಃ |
ಮದುಕ್ತಂ ಸರ್ವಮೇವೇದಂ ಭವನ್ತಃ ಪಾಲಯನ್ತು ವೈ ||೨೪||
ಪದ್ಮಾಸನಗತೋ ಭಾಸ್ವಾನ್ ಬ್ರಹ್ಮಾಹಮಿತಿ ತೇಜಸಾ |
ಸೃಜಾಮಿ ಸಂಹರಾಮೀತಿ ಧ್ಯಾನಮಸ್ತು ಚಿರಾಯ ವಃ ||೨೫||
ಅಗ್ರಜೇನೇತಿ ಕಥಿತೇ ಬಾಢಂ ಕೃತ್ವಾ ತ ಉತ್ತಮಾಃ |
ಧ್ಯಾನಾಧೀನಧಿಯಸ್ತಸ್ಥುಃ ಸಹೈವ ಜ್ಯಾಯಸಾ ರಸಾತ್ ||೨೬||

ಹೀಗೆ ಅವರೆಲ್ಲರೂ ಮಾತನಾಡುತಿರುವಾಗ, ಅವರಲ್ಲಿ ಜ್ಯೇಷ್ಠನಾದವನು, ಮಹಾಬುದ್ಧಿಶಾಲಿಯಾಗಿದ್ದಕಾರಣ, ಮೃಗಸಮೂಹವನ್ನು ಕುರಿತು ಸಲಗನಾದ ಮೃಗವು ಹೇಳುವಂತೆ, ಮಹಾಗಂಭೀರವಾದ ಮಾತಿನಿಂದ, ತನ್ನ ತಮ್ಮಂದಿರನ್ನು ಕುರಿತು ಹೀಗೆ ಹೇಳಿದನು ||೨೦||

ಎಲೈ ತಮ್ಮಂದಿರಾ ! ಸಮಸ್ತವಾದ ಐಶ್ವರ್ಯಗಳ ಮಧ್ಯದಲ್ಲಿಯೂ, ಮಹಾಪ್ರಳಯದವರೆಗೂ ನಾಶಹೊಂದದಿರುವ ಬ್ರಹ್ಮಪದವಿಯೇ ಸರ್ವೋತ್ತಮವಲ್ಲದೆ ಮತ್ತೊಂದೂ ಅಲ್ಲವೆಂದು ತೋರುವಕಾರಣ, ಅದೇ ನನಗಿಷ್ಟವಾಗಿರುವುದು ||೨೧||

ಹೀಗೆ ಅವನು ಹೇಳಿದ ಮಾತನ್ನು, ಆ ಉತ್ತಮ ಬ್ರಾಹ್ಮಣಪುತ್ರರಾದ ಐಂದವ (ಇಂದುವಿನ ಮಕ್ಕಳು) ರೆಲ್ಲರೂ 'ಸಾಧು ಸಾಧು' ಎಂದು ಮರ್ಯಾದಿಸಿದರು ||೨೨||

ಆಮೇಲೆ 'ಅಣ್ಣಾ ! ಸರ್ವದುಃಖ ಶಾಂತಿಕರವಾದ ಲೋಕಪೂಜ್ಯವಾದ ಆ ಬ್ರಹ್ಮಪದವಿಯನ್ನು ನಾವು ಹೇಗೆ ಹೊಂದುವೆವು ?' ಎಂದು ಹೇಳಿದರು ||೨೩||

ಬಳಿಕ ಆ ಜ್ಯೇಷ್ಠನು ಪುನಃ ಅವರನ್ನು ಕುರಿತು 'ನಾನು ಹೇಳುವ ಮಾತನ್ನು ನೀವುಗಳು ನಡೆಯಿಸಿರಿ; ನಿಮ್ಮ ಇಷ್ಟಾರ್ಥಸಿದ್ಧಿಯಾಗುವುದರಲ್ಲಿ ಸಂಶಯವಿಲ್ಲ. ಪದ್ಮಾಸನಗತನಾದ ಮಹಾತೇಜಸ್ವಿಯಾದ ಬ್ರಹ್ಮನೇ ನಾನೆಂದು ಭಾವನೆಮಾಡುತ, ಸೃಷ್ಟಿಯನ್ನೂ ಸಂಹಾರವನ್ನೂ ನಾನೇ ಮಾಡತಕ್ಕವನೆಂದು ಸ್ಥಿರವಾಗಿ ಧ್ಯಾನಮಾಡಿರಿ. ಆಗ ನಮ್ಮೆಲ್ಲರಿಗೂ ಇಷ್ಟಸಿದ್ಧಿಯಾಗುವುದರಲ್ಲಿ ಸಂಶಯವಿಲ್ಲ' ಎಂದು ಹೇಳಿದನು ||೨೪-೨೫||

ಅಣ್ಣನಿಂದ ಹೀಗೆ ಹೇಳಲ್ಪಡಲಾಗಿ, ಆ ಬ್ರಾಹ್ಮಣರು—ಹಾಗೆಯೇ ಆಗಲೆಂದೊಪ್ಪಿಕೊಂಡು, ಅತ್ಯಾಸಕ್ತಿಯಿಂದ ಅಣ್ಣನೊಡನೆಯೇ ಧ್ಯಾನನಿಷ್ಠಹೃದಯರಾಗಿ ಕುಳಿತರು ||೨೬||

ಲಿಪಿಕರ್ಮಾರ್ಪಿತಾಕಾರಾಃ ಧ್ಯಾನಾಸಕ್ತಧಿಯಶ್ಚ ತೇ ।
ಅನ್ತಸ್ಥೇನೈವ ಮನಸಾ ಚಿನ್ತಯಾಮಾಸುರಾದೃತಾಃ ॥೩೭॥
ಅಥ ಉತ್ಫುಲ್ಲಕಮಲಕೋಶವಕ್ತ್ರೇನ್ನತಾಸನಃ ।
ಬ್ರಹ್ಮಾಹಂ ಜಗತಾಂ ಸ್ರಷ್ಟಾ ಕರ್ತಾ ಭೋಕ್ತಾ ಮಹೇಶ್ವರಃ ॥೩೮॥
ಯಜ್ಞಕ್ರಿಯಾಕ್ರಮವತಃ ಸಾಙ್ಗೋಪಾಙ್ಗಾ ಮಹರ್ಷಯಃ ।
ಸರಸ್ವತ್ಯಾಥ ಗಾಯತ್ರ್ಯಾ ಯುಕ್ತಾ ವೇದಾನರಾ ಇಮೇ ॥೩೯॥
ಲೋಕಪಾಲಪರಾಕ್ರಾನ್ತಃ ಸಞ್ಚರತ್ಸಿದ್ಧಮಣ್ಡಲಃ ।
ಅಯಮುದ್ದಾಮಸೌಭಾಗ್ಯಃ ಸ್ವರ್ಗಃ ಸ್ವರವಿಭೂಷಿತಃ ॥೪೦॥
ಪರ್ವತದ್ವೀಪಜಲಧಿಕಾನನೈಃ ಸಮಲಙ್ಕೃತಮ್ ।
ಇದಂ ಭೂಮಣ್ಡಲಂ ಚೈವ ತ್ರಿಲೋಕೀ ಕರ್ಣಕುಣ್ಡಲಮ್ ॥೪೧॥
ಏತತ್ ಪಾತಾಳಕುಹರಂ ದೈತ್ಯದಾನವಭೋಜಿತಮ್ ।
ಅನ್ಯತಸ್ತ್ರೀಗಣಾಕೀರ್ಣಂ ಗೃಹಂ ಗಗನಕೋಟರಮ್ ॥೪೨॥
ಅಯಮಿನ್ದ್ರೋ ಮಹಾಬಾಹುಃ ಪ್ರಜಾಲಙ್ಕೃತದೋತ್ತಮಃ ।
ತ್ರೈಲೋಕ್ಯನಗರೀಮೇಕಃ ಪಾತಿ ಪಾವನಯಜ್ಞಭುಕ್ ॥೪೩॥

ಹೀಗೆ ಧ್ಯಾನಾಸಕ್ತಮತಿಗಳಾದ ಆ ಬ್ರಾಹ್ಮಣರು, ಚಿತ್ರದಲ್ಲಿ ಬರೆಯಲ್ಪಟ್ಟವರಂತೆ ನಿಶ್ಚಲರಾಗಿ, ಅಂತರ್ಮುಖವಾದ ಮನಸ್ಸಿನಿಂದ ಆದರಪೂರ್ವಕವಾಗಿ ಹೀಗೆ ಧ್ಯಾನಮಾಡುತಿದ್ದರು ॥

ವಿಕಸಿತವಾದ ಕಮಲವನ್ನೇ ದಿವ್ಯಾಸನವನ್ನಾಗಿ ಮಾಡಿಕೊಂಡು ಕುಳಿತಿರುವ—ಸಮಸ್ತ ಜಗತ್ತಿಗೂ ಸೃಷ್ಟೃವಾಗಿಯೂ ಕರ್ತೃವಾಗಿಯೂ ಭೋಕ್ತೃವಾಗಿಯೂ ಇರುವ ಬ್ರಹ್ಮನೇ ನಾನು ॥೩೮॥

ಯಜ್ಞಕರ್ಮವನ್ನು ಮಾಡುತಿರುವ ನನಗೆ, ಈ ಮಹರ್ಷಿಗಳು ಯಾಜಕ (ಋತ್ವಿಕ್ಕು) ರಾಗಿರುವರು. ಶಿಕ್ಷಾವ್ಯಾಕರಣಾದ್ಯಂಗಗಳಿಂದಲೂ ಪುರಾಣ ಮುಂತಾದ ಉಪಾಂಗಗಳಿಂದಲೂ ಸರಸ್ವತಿಯಿಂದಲೂ ಗಾಯತ್ರಿಯಿಂದಲೂ ಯುಕ್ತಗಳಾಗಿ ಪುರುಷರೂಪವನ್ನು ಧರಿಸಿರುವ ಸಮಸ್ತ ವೇದಗಳೂ ನನ್ನಲ್ಲಿ ಅಂತರ್ಭವಿಸಿರುವುವು ॥೩೯॥

ಸಮಸ್ತ ಲೋಕಪಾಲಕರಿಂದಲೂ ವ್ಯಾಪ್ತವಾಗಿ–ಸಿದ್ಧಸಮೂಹಗಳು ಸಂಚರಿಸುತಿರುವ–ಮಧುರಸ್ವರಯುಕ್ತವಾದ— ಮಹಾಸೌಭಾಗ್ಯಯುಕ್ತವಾದ ಸ್ವರ್ಗಲೋಕವು ನನ್ನೆದುರಿಗೇ ಇರುವುದು ॥೪೦॥

ಪರ್ವತ ದ್ವೀಪ ಸಮುದ್ರ ಅರಣ್ಯ—ಇತ್ಯಾದಿಗಳಿಂದಲಂಕರಿಸಲ್ಪಟ್ಟು ಲೋಕತ್ರಯ ಮಧ್ಯದಲ್ಲಿ ಕರ್ಣಕುಂಡಲಪ್ರಾಯವಾಗಿರುವ ಈ ಭೂಮಂಡಲವು ನನ್ನಿಂದ ಸೃಷ್ಟವಾಯ್ತು ॥

ದೈತ್ಯರಿಂದಲೂ ದಾನವರಿಂದಲೂ ಪರಿಪೂರಿತವಾದ ಈ ಪಾತಾಳಲೋಕವು; ಈ ಅಂತರಿಕ್ಷಪ್ರದೇಶದಲ್ಲಿ, ಅಪ್ಸರಸ್ತ್ರೀ ಸಮೂಹಗಳು ಮನೆಯೊಳಗಿರುವಂತೆ ತುಂಬಿಕೊಂಡಿರುವುವು ॥

ಪ್ರಜೆಗಳನ್ನು ರಕ್ಷಿಸುವವರಲ್ಲಿ ಶ್ರೇಷ್ಠನಾದ ಮಹಾಬಾಹುವಾದ ಈ ಮಹೇಂದ್ರನು, ಪಾವನವಾದ ಯಜ್ಞಹವಿಸ್ಸುಗಳನ್ನು ಸ್ವೀಕರಿಸುತ, ತ್ರಿಲೋಕವೆಂಬ ಪಟ್ಟಣವನ್ನು ಒಬ್ಬನೇ ಪರಿಪಾಲಿಸುತಿರುವನು ॥೪೩॥

ದೀಪ್ರಜಾಲವರತ್ರಾಭಿಃ ಅವಷ್ಟಭ್ಯಾಥ ದಿಗ್ಗಣಮ್ |
ಕ್ರಮೇಣ ಪ್ರತಪನ್ತ್ಯೇತೇ ಭಾನವೋ ಭೂರಿಭಾನವಃ ||೪೪||
ಲೋಕಪಾಲಾ ಇಮೇ ಲೋಕಂ ರಕ್ಷನ್ತಿ ಶುದ್ಧವೃತ್ತಯಃ |
ಮರ್ಯಾದಾಭಿರತುಚ್ಛಾಭಿಃ ಗೋಪಾಲಾ ಗೋಗಣಂ ಯಥಾ ||೪೫||
ಉನ್ಮಜ್ಜನ್ತಿ ನಿಮಜ್ಜನ್ತಿ ಪ್ರಸ್ಫುರನ್ತಿ ಪತನ್ತಿ ಚ |
ತರಙ್ಗಾ ಇವ ತೋಯಾನಾಂ ಇಮಾಃ ಪ್ರತಿದಿನಂ ಪ್ರಜಾಃ ||೪೬||
ಸೃಜಾಮಿಮಾಮಹಂ ಸರ್ಗಂ ಸಂಹರಾಮಿ ತಥಾದೃತಃ |
ಅಯಮಾತ್ಮನಿ ತಿಷ್ಠಾಮಿ ಶಾಮ್ಯಾಮಿ ಭುವನೇಶ್ವರಃ ||೪೭||
ಅಯಂ ಸಂವತ್ಸರೋ ಯಾತಃ ಇದಂ ಪರಿಣತಂ ಯುಗಮ್ |
ಸೃಷ್ಟೇರಯಮಸೌ ಕಾಲಃ ಸ್ವಯಂ ಸಂಹರಣಸ್ಯ ಚ ||೪೮||
ಅಯಮೇವ ಗತಃ ಕಲ್ಪೋ ಬ್ರಾಹ್ಮೀ ರಾತ್ರಿರಿಯಂ ತಥಾ |
ಅಯಮಾತ್ಮನಿ ತಿಷ್ಠಾಮಿ ಪೂರ್ಣಾತ್ಮಾ ಪರಮೇಶ್ವರಃ ||೪೯||
ಇತಿ ಭಾವಿತಯಾ ಬುದ್ಧ್ಯಾ ತೇ ದ್ವಿಜಾ ಅಥ ಐನ್ದವಾಃ |
ದಶಾದ್ರಿವೃತ್ತಯಸ್ತಸ್ಥುಃ ಸಮುತ್ಕೀರ್ಣಾ ಇವೋಪಲಾತ್ ||೫೦||

ಮಹಾಕಿರಣಭರಿತರಾಗಿರುವ ಈ ಸೂರ್ಯರುಗಳು, ಅತ್ಯುಜ್ಜ್ವಲವಾದ ಕಾಂತಿಪರಂಪರೆಯೆಂಬ ರಜ್ಜುಗಳಿಂದ ಸಮಸ್ತ ದಿಕ್ಕುಗಳನ್ನೂ ಬಂಧಿಸಿಬಿಟ್ಟು, ಕ್ರಮವಾಗಿ ಪ್ರತಪಿಸುತಿರುವರು ||೪೪||

ಅತಿ ಪರಿಶುದ್ಧವಾದ ವೃತ್ತಿಯುಳ್ಳ ಈ ಲೋಕಪಾಲಕರು. ಗೋಪಾಲಕರು ಗೋಸಮೂಹವನ್ನು ಕಾಪಾಡುವಂತೆ, ಅತಿ ಪ್ರಶಸ್ತವಾದ ಏರ್ಪಾಟುಗಳಿಂದ ಲೋಕಗಳನ್ನು ಪರಿಪಾಲಿಸುತಿರುವರು ||೪೫||

ಈ ಸಮಸ್ತ ಪ್ರಜೆಗಳೂ, ಜಲತರಂಗಗಳಂತೆ—ಪ್ರತಿದಿನವೂ ಮೇಲಕ್ಕೇಳುತಲೂ ಮುಳುಗುತಲೂ ಸ್ಫುರಣೆಹೊಂದುತಲೂ ಬೀಳುತಲೂ ಇರುವರು ||೪೬||

ಇಂತಹ ಈ ಸಮಸ್ತ ಸೃಷ್ಟಿಯನ್ನೂ ನಾನು ಸೃಷ್ಟಿಮಾಡುವೆನು; ಹಾಗೆಯೇ ಆದರಪೂರ್ವಕವಾಗಿ ಸಂಹರಿಸಿಯೂ ಬಿಡುವೆನು. ಸಮಸ್ತ ಭುವನಾಧಿಪತಿಯಾಗಿರುವ ನಾನು, ಆತ್ಮನಿಷ್ಠನಾಗಿ ಶಾಂತನಾಗಿರುವೆನು ||೪೭||

ಇದೋ ಈಗ ಒಂದು ಸಂವತ್ಸರ ಕಾಲ ಕಳೆಯಿತು ; ಈ ಯುಗವು ಕಳೆಯುತ ಬಂದಿತು ; ಇದು ಸೃಷ್ಟಿಗೆ ಕಾಲವು ; ಸಂಹಾರಕಾಲವೂ ಬಂದೇಬಿಟ್ಟಿತು ||೪೮||

ಈಗಾಗಲೇ ಒಂದು ಕಲ್ಪಕಳೆಯಿತು. ಬ್ರಹ್ಮಮಾನದಲ್ಲಿ ಒಂದು ರಾತ್ರಿಯೂ ಆಯ್ತು. ನಾನು ಕೇವಲ ಪರಿಪೂರ್ಣರೂಪನಾಗಿ ಪರಮೇಶ್ವರರೂಪನಾಗಿ ಸ್ವಾತ್ಮಸ್ಥಿತನಾಗಿರುವೆನು||೪೯||

ಈರೀತಿಯಾಗಿ ಭಾವನೆಮಾಡುತ, ಆ ಹತ್ತುಮಂದಿ ಐಂದವರೂ, ಪರ್ವತದಂತೆ ನಿಶ್ಚಲರಾಗಿ ಕಲ್ಲಿನಲ್ಲಿ ಕೊರೆಯಲ್ಪಟ್ಟವರಂತೆ ನಿಂತಿದ್ದರು ||೫೦||

ಅಧಿಗತಕಮಲಾಸನಕ್ರಮಾಸ್ತೇ ಪರಿಗಳಿತೇತರತುಚ್ಛವೃತ್ತಿಜಾಲಾಃ |
ಸತತಮತಿತರಾಂ ಕುಶಾಸನಸ್ಥಾಃ ಚಿರಮಿತಿ ಪಙ್ಕಜಕಲ್ಪನೇ ವಿರೇಜುಃ ||೫೧||

ಇತಿ ಉತ್ಪತ್ತಿಪ್ರಕರಣೇ ಐನ್ದವಸಮಾಧಾನಂ ನಾಮ

ಷಡಶೀತಿತಮಃ ಸರ್ಗಃ.

ಹೀಗೆ ಭಾವನಾಪರಿಪಾಕದಿಂದ ಅವರು ಬ್ರಹ್ಮಪದವಿಯನ್ನು ಹೊಂದಿದವರಾಗಿ, ಇತರವಾದ ಅಲ್ಪಮನೋವೃತ್ತಿಗಳನ್ನೆಲ್ಲ ಸುತರಾಂ ಪರಿಹರಿಸಿ, ಸ್ವಯಂ ಕುಶಾಸನಾಸೀನರಾಗಿ, ಬಹುಕಾಲದವರೆಗೂ ಇದ್ದರು ||೫೧||

ಇದು ಉತ್ಪತ್ತಿಪ್ರಕರಣದಲ್ಲಿ ಐಂದವೋಪಾಖ್ಯಾನದೊಳಗೆ ಐಂದವಸಮಾಧಾನವೆಂಬ

ಎಂಬತ್ತಾರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಸಪ್ತಾಶೀತಿತಮಃ ಸರ್ಗಃ.

ಭಾನುರುವಾಚ.

ಪಿತಾಮಹ ಕ್ರಮೇ ತಸ್ಮಿನ್ ತತಸ್ತೇ ಬಹುಭಾವನಾತ್ ।
ಕರ್ಮಭಿಸ್ತೈಃ ಸಮಾಕ್ರಾನ್ತಮನಸ್ಕಾಸ್ತಸ್ಥುರಾದೃತಾಃ ॥೧॥
ಯಾವತ್ ತೇ ದೇಹಕಾಸ್ತೇಷಾಂ ತಾಪೇನ ಪವನೈಸ್ತಥಾ ।
ಕಾಲೇನ ಶೋಷಮಭ್ಯೇತ್ಯ ಗಳಿತಾಃ ಶೀರ್ಣಪರ್ಣವತ್ ॥೨॥
ಚಕ್ಷುಸ್ತಾನ್ ದೇಹಕಾಂಸ್ತತ್ರ ಕ್ರವ್ಯಾದಾವನವಾಸಿನಃ ।
ಇತಶ್ಚೇತಶ್ಚ ಲುಠಿತಾನ್ ಸುಫಲಾನೀವ ಮರ್ಕಟಾಃ ॥೩॥
ಅಥ ತೇ ಶಾನ್ತಬಾಹ್ಯಾರ್ಥಾಃ ಬ್ರಹ್ಮತ್ವೇ ಕೃತಭಾವನಾಃ ।
ತಸ್ಥುಶ್ಚತುರ್ಯುಗಸ್ಯಾನ್ತೇ ಯಾವತ್ ಕಲ್ಪಃ ಕ್ಷಯಂ ಗತಃ ॥೪॥
ಕ್ಷೀಯಮಾಣೇ ತತಃ ಕಲ್ಪೇ ತಪತ್ಯಾದಿತ್ಯಸಞ್ಚಯೇ ।
ಪುಷ್ಕರಾವರ್ತಕೇಷೂಚ್ಚೈಃ ವರ್ಷತ್ಸು ಕಠಿನಾರವಮ್ ॥೫॥

ಉತ್ಪತ್ತಿಪ್ರಕರಣದಲ್ಲಿ ಎಂಭತ್ತೇಳನೆಯ ಸರ್ಗವು.

ಮನಸಾ ಬ್ರಹ್ಮಭೂತಾನಾಂ ಕ್ರವ್ಯಾದೈರ್ದೇಹಭಕ್ಷಣೇ ।
ಪ್ರತಿಸರ್ಗೇಥ ಸರ್ಗೇ ಚ ತಥಾವಸ್ಥಿತಿರೀರ್ಯತೇ ॥

ಮನಸ್ಸಿನ ಭಾವನಾ ಬಲದಿಂದ ಬ್ರಹ್ಮಭೂತರಾದ ಆ ಐಂದವರು, ಮಾಂಸಾಹಾರಿಗಳಿಂದ ತಿನ್ನಲ್ಪಟ್ಟವರಾದರೂ, ಪ್ರಳಯದಲ್ಲಿಯೂ ಮಹಾಸೃಷ್ಟಿಯಲ್ಲಿಯೂ ಏಕರೀತಿಯಾಗಿದ್ದರೆಂಬ ವಿಷಯವು, ಈ ಸರ್ಗದಲ್ಲಿ ಹೇಳಲ್ಪಡುವುದು.

ಮತ್ತೆ ಸೂರ್ಯನು ಹೇಳುವನು:—

ಅಯ್ಯಾ! ಬ್ರಹ್ಮನೇ! ಆವುಪಾಸನಾಕ್ರಮದಲ್ಲಿ, ಆ ಐಂದವರು, ವಿಶೇಷವಾದ ಭಾವನಾಬಲದಿಂದ ಆಯಾ ಕರ್ಮವಾಸನಾಕ್ರಾಂತವಾದ ಮನಸ್ಸುಳ್ಳವರಾಗಿ, ತಮ್ಮ ದೇಹವು ಕಾಲಪರಿಣಾಮವಶವಾಗಿ ತಾಪದಿಂದ ಬಣಗಿ ವಾತದಿಂದ ಜರ್ಜರವಾಗಿ ಜೀರ್ಣಪರ್ಣದಂತೆ ಗಳಿತವಾಗುವವರೆಗೂ, ಅಲ್ಲಿಯೇ ಆದರಾತಿಶಯದಿಂದಿದ್ದರು ॥೧—೨॥

ಹೀಗೆ ಜರ್ಜರವಾಗಿ ಅತ್ತಿತ್ತ ಹೊರಳಾಡುತ್ತಿರುವ ಅವರ ದೇಹಗಳನ್ನು, ಕಪಿಗಳು ಫಲಗಳನ್ನು ಭಕ್ಷಿಸುವಂತೆ, ಅರಣ್ಯವಾಸಿಗಳಾದ ಮೃಗಪಕ್ಷಿಗಳು ತಿಂದುಬಿಟ್ಟವು ॥೩॥

ಬಳಿಕ ಅವರು, ಬಾಹ್ಯಪ್ರಪಂಚವೆಲ್ಲವೂ ಅಡಗಿದವರಾಗಿ, ತಾವೇ ಸಾಕ್ಷಾದ್ಬ್ರಹ್ಮರೆಂದು ಭಾವಿಸಿಕೊಂಡು, ಚತುರ್ಯುಗದ ಕೊನೆಯಲ್ಲಿ ಪ್ರಳಯವಾಗುವವರೆಗೂ ಹಾಗೆಯೇ ಇದ್ದರು ॥

ಬಳಿಕ, ಆ ಕಲ್ಪವು ಕ್ಷಯಿಸಲಾಗಿ, ಸೂರ್ಯಮಂಡಲ ಸಮುದಾಯವು ತಪಿಸುತಿರಲು, ಪುಷ್ಕರಾವರ್ತಕಮೇಘಗಳು ಘೋರಧ್ವನಿಯೊಡನೆ ಮಳೆಗರೆಯುತಿರಲು, ಪ್ರಳಯಮಾರುತಗಳು ಬೀಸು

ಮಹತ್ಸು ಕಲ್ಪವಾತೇಷು ಸ್ಥಿತಏಕಮಹಾರ್ಣವೇ ।
ಕ್ಷೀಣೇಷು ಭೂತಬೃಂದೇಷು ತೇ ತಥೈವ ವ್ಯವಸ್ಥಿತಾಃ ॥೬॥
ತತೋ ರಾತ್ರಿಕ್ರಮಪರೇ ಸರ್ವಾಂ ಸಂಹೃತ್ಯ ತಾಂ ಸ್ಥಿತಿಮ್ ।
ಸ್ಥಿತೇ ತ್ವಯ್ಯಾತ್ಮನಿ ವಿಭೋ ತೇ ತಥೈವ ವ್ಯವಸ್ಥಿತಾಃ ॥೭॥
ಅದ್ಯ ಪ್ರಬುದ್ಧೇ ಭವತಿ ಸ್ರಷ್ಟುಮಿಚ್ಛತಿ ಸಂಸ್ಥಿತಿಮ್ ।
ಸುಖೇನೈವ ಕ್ರಮೇಣೋಚ್ಛೈಃ ತೇ ತಥೈವ ವ್ಯವಸ್ಥಿತಾಃ ॥೮॥
ತಥೈತೇ ಭಗವನ್ ಬ್ರಹ್ಮನ್ ಬ್ರಹ್ಮಾಣೋ ಬ್ರಾಹ್ಮಣಾದಶ ।
ತಏತೇ ದಶ ಸಂಸಾರಮನೋವ್ಯೋಮನಿ ಸಂಸ್ಥಿತಾಃ ॥೯॥
ತೇಷಾಮೇಕತಮಸ್ಯಾಹಂ ಅಯಮಾಕಾಶಮನ್ದಿರೇ ।
ಭಾನುರ್ಭುವಿ ವಿಭೋ ಕಾಲ ಕಲಾಕರ್ಮಣಿ ಯೋಜಿತಃ ॥೧೦॥
ಏಷ ತೇ ಕಥಿತಃ ಸರ್ಗೋ ದಶಾನಾಮಬ್ಜಸಮ್ಭವ ।
ಬ್ರಹ್ಮಣಾಂ ಸಮ್ಭವೋ ವ್ಯೋಮ್ನಿ ಯಥೇಚ್ಛಸಿ ತಥಾ ಕುರು ॥೧೧॥
ವಿವಿಧಕಲ್ಪನಯಾ ವಲಿತಾಮ್ಬರಂ ಯದಿದಮುತ್ತಮ ಜಾಗತಮುತ್ಥಿತಮ್ ।
ಕರಣಜಾಲಕಮಾಹಿತಮೋಹನಂ ತದಖಿಲಂ ನಿಜಚೇತಸಿ ವಿಭ್ರಮಃ ॥೧೨॥

ಇತಿ ಉತ್ಪತ್ತಿಪ್ರಕರಣೇ ದಶಜಗದ್ವರ್ಣನಂ ನಾಮ
ಸಪ್ತಾಶೀತಿತಮಃ ಸರ್ಗಃ.

ತಿರಲು, ಜಗತ್ತೆಲ್ಲವೂ ಏಕಾರ್ಣವವಾಗಿರಲು, ಸಮಸ್ತ ಭೂತಸಮೂಹಗಳೂ ಕ್ಷಯಹೊಂದುತಿರುವಾಗ, ಆ ಐಂದವರು ಮೊದಲಿನಂತೆಯೇ ನಿಶ್ಚಲರಾಗಿದ್ದರು ॥೫—೬॥

ಅಯ್ಯಾ! ಬ್ರಹ್ಮನೆ! ಆ ಹಗಲು ಕಳೆದ ಬಳಿಕ ನೀನು ರಾತ್ರಿಯ ಕ್ರಮವನ್ನು ಜರುಗಿಸಲುದ್ಯುಕ್ತನಾಗಿರಲು, ಆ ಐಂದವರು ಮೊದಲಿನಂತೆಯೇ ನಿಶ್ಚಲರಾಗಿದ್ದರು ॥೭॥

ಈಗ ನೀನು ಪುನಃ ಪ್ರಬೋಧಹೊಂದಿ ಈ ಪ್ರಪಂಚವನ್ನು ಸೃಜಿಸುವುದರಲ್ಲುದ್ಯುಕ್ತನಾಗಿದ್ದರೂ, ಅವರು ಮಾತ್ರ ಪೂರ್ವದಂತೆಯೇ ಇರುವರು ॥೮॥

ಭಗವಂತನೆ! ಬ್ರಹ್ಮನೆ! ಆ ಹತ್ತು ಮಂದಿ ಬ್ರಾಹ್ಮಣರೂ ಈಗ ಹತ್ತು ಮಂದಿ ಬ್ರಹ್ಮರಾಗಿರುವರು; ಅವರು, ಮನಃಕಲ್ಪಿತವಾದ ಈ ಸಂಸಾರವೆಂಬ ಆಕಾಶದಲ್ಲಿ ನೆಲೆಸಿರುವರು ॥೯॥

ಹೇ ವಿಭೋ! ಆ ಹತ್ತು ಬ್ರಹ್ಮಾಂಡಗಳ ಮಧ್ಯದಲ್ಲಿ ಒಂದರೊಳಗೆ ನಾನು ಕಾಲಚಕ್ರಪರಿವರ್ತನಕೃತ್ಯದಲ್ಲಿ ನಿಯೋಜಿತನಾಗಿರುವೆನು ॥೧೦॥

ಅಯ್ಯಾ! ಬ್ರಹ್ಮನೆ! ಇದೋ ನಾನು ಈ ರೀತಿಯಾಗಿ ಹತ್ತುಮಂದಿ ಬ್ರಹ್ಮರು ಆಕಾಶದಲ್ಲಿರುವ ವಿಷಯವನ್ನು ನಿನಗೆ ಹೇಳಿರುವೆನು. ಮುಂದೆ ನಿನಗೆ ತೋರಿದಂತೆ ಮಾಡು ॥೧೧॥

ಎಲೈ ಮಹಾತ್ಮನೆ! ನಾನಾವಿಧವಾದ ಕಲ್ಪನೆಯಿಂದ ವ್ಯಾಪ್ತವಾಗಿ ಈ ಜಗದ್ಭ್ರಮೆಯಾವುದು ಉತ್ಪನ್ನವಾಗಿರುವುದೋ, ಮಹಾಮೋಹಯುತವಾದ ಈ ಇಂದ್ರಿಯಜಾಲವಾವುದುಂಟೋ,—ಅದೆಲ್ಲವೂ ಕೇವಲ ಮನೋಭ್ರಮೆಯೇ ಎಂದು ತಿಳಿ ॥೧೨॥

ಇದು ಉತ್ಪತ್ತಿಪ್ರಕರಣದಲ್ಲಿ ಐಂದವೋಪಾಖ್ಯಾನದೊಳಗೆ
ಎಂಭತ್ತೇಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟಾಶೀತಿತಮಃ ಸರ್ಗಃ.

ಶ್ರೀ ಬ್ರಹ್ಮೋವಾಚ.

ಬ್ರಹ್ಮಣೋ ಬ್ರಾಹ್ಮಣಾಭಾನುಃ ಇತ್ಯುಕ್ತ್ವಾ ಬ್ರಹ್ಮಣೋ ಮಮ |
ಬ್ರಹ್ಮರ್ಷೇ ಬ್ರಹ್ಮವಿದಾಂ ಶ್ರೇಷ್ಠ ತೂಷ್ಣೀಮೇವ ಬಭೂವ ಸಃ ||೧||
ತತಉಕ್ತಂ ಮಯಾ ತಸ್ಯ ಚಿರಂ ಸಞ್ಚಿನ್ತ್ಯ ಚೇತಸಾ |
ಭಾನೋಭಾನೋ ವದಾಶು ತ್ವಂ ಕಿಮನ್ಯತ್ ಸಂಸೃಜಾಮ್ಯಹಮ್ ||೨||
ಏತಾನಿ ದಶ ವಿದ್ಯನ್ತೇ ಕಿಲ ಯತ್ರ ಜಗನ್ತಿ ವೈ |
ತತ್ರಾನ್ಯೇ ಮಮ ಸರ್ಗೇಣ ಕೋರ್ಥಃ ಕಥಯ ಭಾಸ್ಕರ ||೩||
ಇತ್ಯುಕ್ತೋಥ ಮಯಾ ಭಾನುಃ ಸಞ್ಚಿನ್ತ್ಯ ಸುಚಿರಂ ಧಿಯಾ |
ಇದಮತ್ರ ವಚೋ ಯುಕ್ತಂ ಉವಾಚ ಸ ಮಹಾಮುನೇ ||೪||

ಉತ್ಪತ್ತಿಪ್ರಕರಣದಲ್ಲಿ ಎಂಭತ್ತೆಂಟನೆಯ ಸರ್ಗವು.

ಇಹ ಧಾತುರನಾಸಕ್ತ್ಯಾ ಸರ್ಗಸಿದ್ಧಿರುದೀರ್ಯತೇ |
ಮನಸಾ ದೃಢಸಿದ್ಧಸ್ಯ ತಥಾನ್ಯೈರನಿವರ್ತನಮ್ ||

ಬ್ರಹ್ಮನು ಆಸಕ್ತಿಯಿಲ್ಲದೆ ಉದಾಸೀನನಾಗಿದ್ದರೂ ಅವನಿಂದ ಪ್ರಪಂಚಸೃಷ್ಟಿಯಾಗುವ ಬಗೆಯೂ, ಮನಸ್ಸಂಕಲ್ಪದಿಂದ ದೃಢವಾಗಿ ಸಿದ್ಧವಾದ ವಿಷಯವು ಮತ್ತಾವುದರಿಂದಲೂ ಬದಲಾಗುವುದಿಲ್ಲವೆಂಬ ರೀತಿಯೂ ಕೂಡ, ಈ ಸರ್ಗದಲ್ಲಿ ಹೇಳಲ್ಪಡುವುವು.

ಬ್ರಹ್ಮನು ವಸಿಷ್ಠರನ್ನು ಕುರಿತು ಹೇಳುವನು :—

ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಎಲೈ ಬ್ರಾಹ್ಮಣೋತ್ತಮನೆ! ಆ ಸೂರ್ಯನು, ಆ ಬ್ರಾಹ್ಮಣರು ಬ್ರಹ್ಮರಾದರೆಂದು ನನಗೆ ಹೇಳಿ, ಅನಂತರ ಸುಮ್ಮನಾದನು ||೧||

ಬಳಿಕ ನಾನು ಮನಸ್ಸಿನಲ್ಲಿಯೇ ಬಹಳಹೊತ್ತು ಆಲೋಚಿಸಿ, ಸೂರ್ಯನನ್ನು ಕುರಿತು ಈ ರೀತಿಯಾಗಿ ಹೇಳಿದೆನು:—ಸೂರ್ಯ! ಸೂರ್ಯ! ನಾನು ಈಗ ಇನ್ನೇನು ಸೃಷ್ಟಿಮಾಡಲಿ? ನೀನು ಬೇಗನೆ ಹೇಳು ||೨||

ಅಯ್ಯಾ! ಭಾಸ್ಕರ! ಈ ಹತ್ತು ಬ್ರಹ್ಮಾಂಡಗಳು ಯಾವಾಗ ಸಿದ್ಧವಾಗಿರುವುವೋ, ಆಗ—ನಾನು ಮತ್ತೊಂದು ಸೃಷ್ಟಿಮಾಡುವುದರಿಂದ ಪ್ರಯೋಜನವೇನು?—ನೀನೇ ಹೇಳುವವನಾಗು ||೩||

ಅಯ್ಯಾ ವಸಿಷ್ಠಮಹರ್ಷಿಯೆ! ನನ್ನಿಂದ ಈ ರೀತಿಯಾಗಿ ಹೇಳಲ್ಪಟ್ಟ ಆ ಭಾಸ್ಕರನು, ತನ್ನ ಮನಸ್ಸಿನಲ್ಲಿಯೇ ಬಹಳಹೊತ್ತು ಚೆನ್ನಾಗಿ ಪರ್ಯಾಲೋಚಿಸಿ, ನನ್ನನ್ನು ಕುರಿತು ಹೀಗೆ ಯುಕ್ತಿಯುಕ್ತವಾದ ಮಾತನ್ನು ಹೇಳಿದನು ||೪||

ಭಾನುರುವಾಚ.

ನಿರೀಹಸ್ಯ ನಿರಿಚ್ಛಸ್ಯ ಕೋರ್ಥಃ ಸರ್ಗೇಣ ತೇ ಪ್ರಭೋ |
ವಿನೋದಮಾತ್ರಮೇವೇದಂ ಸೃಷ್ಟಿಸ್ತವ ಜಗತ್ಪತೇ ||೫||
ನಿಷ್ಕಾಮಾದೇವ ಭವತಃ ಸರ್ಗಃ ಸಮ್ಪ್ರವರ್ತತೇ ಪ್ರಭೋ |
ಅರ್ಕಾದಿವ ಜಲಾದಿತ್ಯಪ್ರತಿಬಿಮ್ಬಮಿವಾಧಿಯಃ ||೬||
ಶರೀರಸನ್ನಿವೇಶಸ್ಯ ತ್ಯಾಗೇ ರಾಗೇ ಚ ತೇ ಯದಾ |
ನಿಷ್ಕಾಮೋ ಭಗವನ್ ಭಾವೋ ನಾಭಿವಾಞ್ಛತಿ ನೋಜ್ಝತಿ ||೭||
ಸೃಜಸೀದಂ ತಥಾ ದೇವ ವಿನೋದಾಯೈವ ಭೂತಪ |
ಪುನಃ ಸಂಹೃತ್ಯಸಂಹೃತ್ಯ ದಿವಂ ದಿನಪತಿರ್ಯಥಾ ||೮||
ತವ ನಿತ್ಯಮಸಂಸಕ್ತಂ ವಿನೋದಾಯೈವ ಕೇವಲಮ್ |
ಇದಂ ಕರ್ತವ್ಯಮೇವೇತಿ ಜಗನ್ನ ತೂದ್ಯಮೇಚ್ಛಯಾ ||೯||
ಸೃಷ್ಟಿಂ ಚೇನ್ನ ಕರೋಷಿ ತ್ವಂ ಮಹೇಶ ಪರಮಾತ್ಮನಃ |
ನಿತ್ಯಕರ್ಮಪರಿತ್ಯಾಗಾತ್ ಕಿಮಪೂರ್ವಮವಾಪ್ಸ್ಯಸಿ ||೧೦||
ಯಥಾಪ್ರಾಪ್ತಂ ಹಿ ಕರ್ತವ್ಯಂ ಅಸಕ್ತೇನ ಸದಾ ಸತಾ |

ಆಗ ಸೂರ್ಯನು ಹೇಳಿದುದೇನೆಂದರೆ:—

ಹೇ ಪ್ರಭೋ! ಸುತರಾಂ ನಿಸ್ಪೃಹನಾಗಿರುವ ನಿನಗೆ ಯಾವ ಸೃಷ್ಟಿಯಿಂದತಾನೇ ಏನು ಪ್ರಯೋಜನವಿರುವುದು? ಹೇ ಜಗನ್ನಾಯಕ! ಈ ಸೃಷ್ಟಿಯೆಂಬುದು ನಿನಗೆ ಕೇವಲ ವಿನೋದಮಾತ್ರವಾಗಿರುವುದು ||೫||

ಹೇ ವಿಭೋ! ಇಚ್ಛಾಶೂನ್ಯನಾಗಿರುವ ಸೂರ್ಯನ ದೆಸೆಯಿಂದ ಜಲಗತವಾದ ಪ್ರತಿಬಿಂಬವುದಯಿಸುವಂತೆ, ನಿಷ್ಕಾಮನಾಗಿರುವ ನಿನ್ನ ದೆಸೆಯಿಂದ ಈ ಜಗತ್ಸೃಷ್ಟಿ ಸಂಭವಿಸುವುದು ||೬||

ಎಲೈ ಭಗವಂತನೆ! ನಿನ್ನ ಭಾವವು ಶರೀರಸನ್ನಿವೇಶವನ್ನು ಬಿಡುವುದರಲ್ಲಿಯೂ ಅದನ್ನು ಪ್ರೀತಿಸುವುದರಲ್ಲಿಯೂ ಯಾವಾಗ ನಿಷ್ಕಾಮವಾಯ್ತೋ, ಆಮೇಲೆ ಅದು (ನಿನ್ನ ಭಾವವು) ಅಪೇಕ್ಷಿಸುವುದೂ ಇಲ್ಲ—ಬಿಡುವುದೂ ಇಲ್ಲ—ಎಂದು ನಾವು ಹೇಳಬೇಕಾದುದೇನು? ||೭||

ಎಲೆ ಸರ್ವಭೂತಾಧಿಪತಿಯಾದ ಬ್ರಹ್ಮದೇವನೆ! ಸೂರ್ಯನು ಹಗಲನ್ನು ಮತ್ತೆಮತ್ತೆ ಉಪಸಂಹರಿಸುತಲೂ ಸೃಷ್ಟಿಮಾಡುತಲೂ ಇರುವಂತೆ, ನೀನು ಈ ಜಗತ್ತನ್ನು ಕೇವಲ ವಿನೋದಾರ್ಥವಾಗಿಯೇ ಪುನಃಪುನಃ ಸೃಜಿಸುತಿರುವೆ ||೮||

ಈ ಜಗತ್ತು, ಕೇವಲ ವಿನೋದಾರ್ಥವಾಗಿಯೇ ನಿನಗೆ ನಿತ್ಯವೂ ಸೃಜಿಸಲ್ಪಡುತಕ್ಕುದಾಗಿರುವುದೇ ಹೊರತು, ಸ್ವಪ್ರಯೋಜನ ಸಂಪಾದನೇಚ್ಛೆಯಿಂದಲ್ಲ ||೯||

ಹೇ ಮಹೇಶ! ನೀನು ಸೃಷ್ಟಿಯನ್ನು ಮಾಡದಿದ್ದಪಕ್ಷದಲ್ಲಿ, ಆಗ ನಿನ್ನ ನಿತ್ಯಕರ್ಮವನ್ನು ಬಿಟ್ಟಂತಾಗುವುದು ಮಾತ್ರವೇ ಹೊರತು, ಇದರಿಂದ ನೀನು ಇನ್ನು ಯಾವ ಅಪೂರ್ವವಾದ ಫಲವನ್ನು ಹೊಂದುವೆ? ||೧೦||

ಕನ್ನಡಿಯು ತಾನು ನಿಷ್ಕಳಂಕವಾಗಿಯೇ ಇದ್ದುಗೊಂಡು—ಎಂತಹ ಸಂದರ್ಭದಲ್ಲಿಯೂ

ಮುಕುರೇಣಾಕಳಙ್ಕೇನ ಪ್ರತಿಬಿಮ್ಬಕ್ರಿಯಾ ಯಥಾ ||೧೧||
ಯಥೈವ ಕರ್ಮಕರಣೇ ಕಾಮನಾ ನಾಸ್ತಿ ಧೀಮತಾಮ್ |
ತಥೈವ ಕರ್ಮಸನ್ತ್ಯಾಗೇ ಕಾಮನಾ ನಾಸ್ತಿ ಧೀಮತಾಮ್ ||೧೨||
ಅತಃ ಸುಷುಪ್ತೋಪಮಯಾ ಧಿಯಾ ನಿಷ್ಕಾಮಯಾ ತಯಾ |
ಸುಷುಪ್ತಬುದ್ಧಸಮಯಾ ಕುರು ಕಾರ್ಯಂ ಯಥಾಗತಮ್ ||೧೩||
ಸರ್ಗೈರಥೈನ್ದುಪುತ್ರಾಣಾಂ ತೋಷಮೇಷಿ ಜಗತ್ಪ್ರಭೋ |
ತದೇತೇ ತೋಷಯಿಷ್ಯನ್ತಿ ತಂ ತ್ವಾಂ ಸರ್ಗಾತ್ ಸುರೇಶ್ವರ ||೧೪||
ಚಿತ್ತನೇತ್ರೈರ್ಭವಾನೇತಾನ್ ಸರ್ಗಾನನ್ಯಸ್ಯ ನೋ ದೃಶಾ |
ಅವಶ್ಯಂ ಚಕ್ಷುಷಾ ಸರ್ಗಂ ಸೃಷ್ಟಮಿತ್ಯೇವ ವೇತ್ತಿ ಕಃ ||೧೫||
ಯೇನೈವ ಮನಸಾ ಸರ್ಗೋ ನಿರ್ಮಿತಃ ಪರಮೇಶ್ವರ |
ಸ ಏವ ಮಾಂಸನೇತ್ರೇಣ ತಂ ಪಶ್ಯತಿ ಹಿ ನೇತರಃ ||೧೬||
ನ ಚೈತಾನ್ ದಶ ಸಂಸಾರಾನ್ ದಶ ನೀರಜಸಮ್ಭವಾನ್ |
ಕಶ್ಚಿನ್ನಾಶಯಿತುಂ ಶಕ್ತಃ ಚಿತ್ತದಾರ್ಢ್ಯಾಚ್ಚಿರಸ್ಥಿತಾನ್ ||೧೭||

ದರೂ ಪ್ರತಿಬಿಂಬವನ್ನು ಗ್ರಹಿಸುವಂತೆ, ಸತ್ಪುರುಷನಾದವನು ಸರ್ವದಾ ತಾನು ನಿರ್ಲಿಪ್ತನಾಗಿದ್ದುಗೊಂಡು ಆಯಾ ಕಾಲದಲ್ಲಿ ಪ್ರಾಪ್ತವಾದುದನ್ನು ನಡೆಯಿಸುತಿರುಬೇಕು ||೧೧||

ಪ್ರಾಜ್ಞರಾದವರಿಗೆ, ಕರ್ಮಮಾಡುವುದರಲ್ಲಿ ಹೇಗೆ ಯಾವ ಕಾಮನೆಯೂ ಇರುವುದಿಲ್ಲವೋ, ಹಾಗೆಯೇ ಕರ್ಮಪರಿತ್ಯಾಗದಲ್ಲಿಯೂ ಕಾಮನೆಯಿರುವುದಿಲ್ಲ ||೧೨||

ಅದುಕಾರಣ, ಕೇವಲ ನಿಷ್ಕಾಮವಾಗಿ ವಸ್ತುತಃ ಯಾವ ಕರ್ಮವನ್ನೂ ಮಾಡದಿರುವುದರಿಂದ ಸುಷುಪ್ತಸಮವಾಗಿಯೂ—ಲೋಕಪ್ರತೀತಿಯಲ್ಲಿ ಕರ್ಮಕರ್ತೃವಾಗಿರುವುದರಿಂದ ಸ್ವಪ್ನಸಮವಾಗಿಯೂ ಇರುವ ಬುದ್ಧಿಯಿಂದ, ಆಯಾಕಾಲಪ್ರಾಪ್ತವಾದ ಕರ್ಮವನ್ನು ಮಾಡುತಿರು ||೧೩||

ಅಥವಾ, ಹೇ ಜಗತ್ಪ್ರಭೋ! ನೀನು ಐಂದವರ ಸೃಷ್ಟಿಯಿಂದಲೇ ಸಂತೋಷಹೊಂದತಕ್ಕವನಾಗಿದ್ದಪಕ್ಷದಲ್ಲಿ, ಇವರು ತಮ್ಮ ಸೃಷ್ಟಿಕ್ರಮದಿಂದ ನಿನ್ನನ್ನು ಸಂತೋಷಪಡಿಸತಕ್ಕವರಾಗಿಯೇ ಇರುವರು ||೧೪||

‘ಹಾಗಾದಮೇಲೆ ನಾನೇಕೆ ಸೃಷ್ಟಿಮಾಡಬೇಕು?’ ಎನ್ನುವೆಯೋ?—ಇತರರು ಮಾಡಿರುವ ಸೃಷ್ಟಿಯನ್ನು ನೀನು ಚಿತ್ತರೂಪವಾದ ನೇತ್ರದಿಂದ ನೋಡಬಲ್ಲೆಯಲ್ಲದೆ ಚರ್ಮಚಕ್ಷುಸ್ಸಿನಿಂದ ನೋಡಲಾರೆ. ಅದನ್ನು ಸೃಷ್ಟಿಮಾಡಿದವನಾದರೋ, ಅವಶ್ಯವಾಗಿ ಚರ್ಮಚಕ್ಷುಸ್ಸಿನಿಂದಲೇ ಅದನ್ನು ನೋಡುವನು. ಅದುಕಾರಣ, ನೀನೂ ನಿನ್ನ ಚರ್ಮಚಕ್ಷುಸ್ಸಿನಿಂದ ನೋಡಿ ಸಂತೋಷಪಡಲೋಸುಗ, ಅವಶ್ಯವಾಗಿ ಸೃಷ್ಟಿಮಾಡಿಯೇ ತೀರಬೇಕು ||೧೫-೧೬||

ಅದರೆ, ಈಗ ಇಲ್ಲಿರುವ ಈ ಹತ್ತು ಬ್ರಹ್ಮಾಂಡಗಳನ್ನೂ—ಹತ್ತುಮಂದಿ ಬ್ರಹ್ಮರನ್ನೂ ಕೂಡ, ಯಾರೂ ನಾಶಪಡಿಸುವುದಕ್ಕೆ ಸಮರ್ಥರಾಗಲಾರರು. ಏಕೆಂದರೆ,—ಇವರು ಮನೋದಾರ್ಢ್ಯವುಳ್ಳವರಾಗಿರುವಕಾರಣ ಬಹುಕಾಲದಿಂದ ಸ್ಥಿರವಾಗಿ ನೆಲೆಸಿಬಿಟ್ಟಿರುವರು ||೧೭||

ಕರ್ಮೇನ್ದ್ರಿಯೈರ್ಯತ್ ಕ್ರಿಯತೇ ತದ್ರೋದ್ಧುಂ ಕಿಲ ಯುಜ್ಯತೇ |
ನ ಮನೋನಿಶ್ಚಯಕೃತಂ ಕಶ್ಚಿದ್ರೋಧಯಿತುಂ ಕ್ಷಮಃ ||೧೮||
ಯೋ ಬದ್ಧಪದತಾಂ ಯಾತೋ ಜನ್ತೋರ್ಮನಸಿ ನಿಶ್ಚಯಃ |
ಸ ತೇನೈವ ವಿನಾ ಬ್ರಹ್ಮನ್ ನಾನ್ಯೇನ ವಿನಿವಾರ್ಯತೇ ||೧೯||
ಬಹುಕಾಲಂ ಯದಭ್ಯಸ್ತಂ ಮನಸಾ ದೃಢನಿಶ್ಚಯಮ್ |
ಶಾಪೇನಾಪಿ ನ ತಸ್ಯಾಸ್ತಿ ಕ್ಷಯೋ ನಷ್ಟೇಪಿ ದೇಹಕೇ ||೨೦||
ಯದದ್ಬಧಪೀಠಮಭಿತೋ ಮನಸಿ ಪ್ರರೂಢಂ
ತದ್ರೂಪಮೇವ ಪುರುಷೋ ಭವತೀಹ ನಾನ್ಯತ್ |
ತದ್ಬೋಧನಾದಿತರಮತ್ರ ಕಿಲಾಭ್ಯುಪಾಯಂ
ಶೈಲೌಘಸೇಕಮಿವ ನಿಷ್ಫಲಮೇವ ಮನ್ಯೇ ||೨೧||

ಇತಿ ಉತ್ಪತ್ತಿಪ್ರಕರಣೇ ಐನ್ದವನಿಶ್ಚಯಕಥನಂ
ನಾಮಾಷ್ಟಾಶೀತಿತಮಃ ಸರ್ಗಃ.

ಪ್ರಪಂಚದಲ್ಲಿ, ಕರ್ಮೇಂದ್ರಿಯಗಳಿಂದ ಯಾವುದು ಮಾಡಲ್ಪಡುವುದೋ,—ಅದನ್ನು ತಡೆಯುವುದು ಹೇಗಾದರೂ ಯುಕ್ತವಾಗಬಹುದು. ಮನೋನಿಶ್ಚಯದಿಂದ ನಿಷ್ಪನ್ನವಾದುದನ್ನು ನಾಶಪಡಿಸುವುದಕ್ಕೆ ಯಾರೂ ಸಮರ್ಥರಲ್ಲ ||೧೮||

ಅಯ್ಯಾ ! ಬ್ರಹ್ಮ ! ಪ್ರಾಣಿಗಳ ಮನಸ್ಸಿನೊಳಗೆ ಯಾವ ನಿಶ್ಚಯವು ಸ್ಥಿರವಾಗಿ ಕಾಲೂರಿ ನಿಂತಿರುವುದೋ, ಅದನ್ನು ಬದಲು ಮಾಡುವುದಕ್ಕೆ ಅದೇ ಸಮರ್ಥವಾಗಬೇಕಲ್ಲದೆ ಇತರವಾದುದಾವುದೂ ಸಮರ್ಥವಲ್ಲ ||೧೯||

ಯಾವುದು ದೃಢನಿಶ್ಚಯವಾಗಿ ಮನಸ್ಸಿನಿಂದ ಬಹುಕಾಲ ಅಭ್ಯಸಿಸಲ್ಪಡುವುದೋ, ಅದು-ದೇಹನಾಶವಾದಾಗ್ಗೂ—ಮಹಾತ್ಮರ ಶಾಪದಿಂದಲೂ ಕೂಡ ಕ್ಷಯಹೊಂದಲಾರದು ||೨೦||

ಅದುಕಾರಣ, ಅಯ್ಯಾ ಬ್ರಹ್ಮ! ಪುರುಷನಿಗೆ ಯಾವುದು ಚೆನ್ನಾಗಿ ಕಾಲೂರಿ ಮನಸ್ಸಿನಲ್ಲಿ ನೆಲೆಸಿರುವುದೋ, ಆ ಮನುಷ್ಯನು ಆ ರೂಪವೇ ಆಗಿಬಿಡುವನು. ಹೀಗಿರುವುದರಿಂದ, ಮೂಢರಾದವರಿಗೆ ಸಂಸಾರನಿವೃತ್ತಿ ಹೊಂದಬೇಕಾದರೆ, ಆ ಸಂಸಾರಸ್ವರೂಪ ಬೋಧನೆಯೇ ಪರಮೋಪಾಯವಲ್ಲದೆ, ಇತರವಾದ ಪ್ರಯತ್ನವೆಲ್ಲವೂ—ಕಲ್ಲುಚೂರುಗಳ ಮೇಲೆ ಚಿಗುರು ಬಿಡಲೆಂಬ ಆಸೆಯಿಂದ ನೀರುಹೊಯ್ದುಹಾಗೆ—ಕೇವಲ ವ್ಯರ್ಥವೇ ಸರಿಯೆಂದು ನಾನು ತಿಳಿದಿರುವೆನು ||

ಇದು ಉತ್ಪತ್ತಿಪ್ರಕರಣದಲ್ಲಿ ಐಂದವನಿಶ್ಚಯಕಥನವೆಂಬ
ಎಂಬತ್ತೆಂಟನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕೋನನವತಿತಮಃ ಸರ್ಗಃ.

ಭಾನುರುವಾಚ.

ಮನೋ ಹಿ ಜಗತಾಂ ಕರ್ತೃ ಮನೋ ಹಿ ಪುರುಷಃ ಪರಃ ।
ಮನಃಕೃತಂ ಕೃತಂ ಲೋಕೇ ನ ಶರೀರಕೃತಂ ಕೃತಮ್ ‖೧‖
ಸಾಮಾನ್ಯಬ್ರಾಹ್ಮಣಾಭೂತ್ವಾ ಮನೋಭಾವನಯಾ ಕಿಲ ।
ಐನ್ದವಾಬ್ರಹ್ಮತಾಂ ಯಾತಾಃ ಮನಸಃ ಪಶ್ಯ ಶಕ್ತತಾಮ್ ‖೨‖
ಮನಸಾ ಭಾವ್ಯಮಾನೋ ಹಿ ದೇಹತಾಂ ಯಾತಿ ದೇಹಕಃ ।
ದೇಹಭಾವನಯಾಽಯುಕ್ತೋ ದೇಹಧರ್ಮೈರ್ನ ಬಾಧ್ಯತೇ ‖೩‖
ಬಾಹ್ಯದೃಷ್ಟಿರ್ಹಿ ನಿಯತಂ ಸುಖದುಃಖಾದಿ ವಿನ್ದತಿ।
ನಾನ್ತರ್ಮುಖತಯಾ ಯೋಗೀ ದೇಹೇ ವೇತ್ತಿ ಪ್ರಿಯಾಪ್ರಿಯೇ ‖೪‖

ಉತ್ಪತ್ತಿಪ್ರಕರಣದಲ್ಲಿ ಎಂಭತ್ತೊಂಭತ್ತನೆಯ ಸರ್ಗವು.

ಮನಸೋ ಬದ್ಧಪೀಠಸ್ಯ ಪರಯತ್ನೈರಚಾಲ್ಯತಾ ।
ಇನ್ದ್ರಾಹಲ್ಯಾಮನೋವೃತ್ತಿಕಥಯಾತ್ರ ಪ್ರಕಾಶ್ಯತೇ ‖

ಇಂದ್ರ ಅಹಲ್ಯೆ ಇವರುಗಳ ಕಥೆಯು ಉದಾಹರಣೆಯಿಂದ, ಚೆನ್ನಾಗಿ ಸ್ಥಿರವಾದ ಮನಸ್ಸನ್ನು ಮತ್ತಾವ ಪ್ರಯತ್ನದಿಂದಲೂ ಅಳ್ಳಾಡಿಸುವುದಕ್ಕಾಗಲಾರದೆಂಬ ವಿಷಯವು, ಈ ಸರ್ಗದಲ್ಲಿ ನಿರೂಪಿಸಲ್ಪಡುವುದು ॥

ಪುನಃ ಸೂರ್ಯನು ಬ್ರಹ್ಮನನ್ನು ಕುರಿತು ಹೇಳುವನು :—

ಅಯ್ಯಾ! ಬ್ರಹ್ಮ! ಈ ಸಮಸ್ತ ಜಗತ್ತಿಗೂ ಮನಸ್ಸೇ ಕರ್ತೃವಾದುದು; ಈ ಮನಸ್ಸೇ ಸಮಷ್ಟಿರೂಪವನ್ನು ಹೊಂದಿ ಹಿರಣ್ಯಗರ್ಭನೆನ್ನಿಸುವುದು. ಪ್ರಪಂಚದಲ್ಲಿ, ಮನಸ್ಸಿನಿಂದ ಯಾವುದು ಮಾಡಲ್ಪಡುವುದೋ—ಅದೇ ಮಾಡಲ್ಪಟ್ಟಂತಾಗುವುದು ; ಶರೀರದಿಂದ ಕೃತವಾದುದು ಎಂದಿಗೂ ಕೃತವೇ ಅಲ್ಲ ॥೧॥

ಆ ಐಂದವರು, ಕೇವಲ ಸಾಮಾನ್ಯರಾದ ಬ್ರಾಹ್ಮಣರಾಗಿದ್ದುಗೊಂಡೂ, ತಮ್ಮ ಮನಸ್ಸಿನ ಭಾವನೆಯಿಂದ ಬ್ರಹ್ಮಪದವಿಯನ್ನು ಹೊಂದಿಬಿಟ್ಟರು. ಮನಸ್ಸಿನ ಸಾಮರ್ಥ್ಯವನ್ನು ನೀನೇ ನೋಡು ॥೨॥

ಈ ದೇಹವೂ ಕೂಡ, ಮನಸ್ಸಿನಿಂದ ದೇಹವೆಂದು ಭಾವಿಸಲ್ಪಟ್ಟರೆ ದೇಹಧರ್ಮವನ್ನು ಪಡೆಯುವುದು ; ಮನೋಭಾವನೆಯಿಲ್ಲದಿದ್ದರೆ, ಆಗ ಅದು ದೇಹಸಹಜವಾದ ಧರ್ಮಗಳಿಂದ ಬಾಧಿಸಲ್ಪಡುವುದಿಲ್ಲ ॥೩॥

ಬಹಿರ್ಮುಖವ್ಯಾಪಾರವುಳ್ಳವನೇ ಸುಖದುಃಖಾದಿಗಳನ್ನು ಹೊಂದುವನು. ಅಂತರ್ಮುಖಯಾಗಿರುವ ಯೋಗಿಯು, ದೇಹಕ್ಕುಂಟಾಗುವ ಪ್ರಿಯಾಪ್ರಿಯಗಳೊಂದನ್ನೂ ಅರಿಯುವುದೇ ಇಲ್ಲ ॥೪॥

ಮನಃಕಾರಣಕಂ ತಸ್ಮಾತ್ ಜಗದ್ವಿವಿಧವಿಭ್ರಮಮ್ |
ಇನ್ದ್ರಸ್ಯಾಹಲ್ಯಯಾ ಸಾರ್ಧಂ ವೃತ್ತಾನ್ತೋತ್ರ ನಿದರ್ಶನಮ್ ||೫||

ಬ್ರಹ್ಮೋವಾಚ.

ಕಾಹಲ್ಯಾ ಭಗವನ್ ಭಾನೋ ಕೋವಾತ್ರೇನ್ದ್ರಸ್ತಮೋನುದ |
ಯಯೋರುದನ್ತಶ್ರವಣೋ ಪಾವನೀದೃಷ್ಟಿರೇತಿ ಹಿ ||೬||

ಭಾನುರುವಾಚ.

ಶ್ರೂಯತೇ ಹಿ ಪುರಾ ದೇವ ಮಾಗಧೇಷು ಮಹೀಪತಿಃ |
ಇನ್ದ್ರದ್ಯುಮ್ನಇತಿ ಖ್ಯಾತಃ ಇನ್ದ್ರದ್ಯುಮ್ನಇವಾಪರಃ ||೭||
ತಸ್ಯೇನ್ದುಬಿಮ್ಬಪ್ರತಿಮಾ ಭಾರ್ಯಾ ಕಮಲಲೋಚನಾ |
ಅಹಲ್ಯಾ ನಾಮ ತತ್ರಾಸೀತ್ ಶಶಾಙ್ಕಸ್ಯೇವ ರೋಹಿಣೀ ||೮||
ತಸ್ಮಿನ್ನೇವ ಪುರೇ ಷಿಙ್ಗಃ ಷಿಙ್ಗಪ್ರಕರಶೇಖರಃ |
ಇನ್ದ್ರನಾಮಾಪರಃ ಕಶ್ಚಿತ್ ಧೀಮಾನ್ ವಿಪ್ರಕುಮಾರಕಃ ||೯||
ಅಹಲ್ಯಾ ಪೂರ್ವಮಿನ್ದ್ರಸ್ಯ ಬಭೂವೇಷ್ಟೇತ್ಯಹಲ್ಯಯಾ |
ಶ್ರುತಂ ರಾಜಮಹಿಷ್ಯಾಥ ಕಥಾಪ್ರಸ್ತಾವತಃ ಕ್ವಚಿತ್ ||೧೦||

ಆದುಕಾರಣ, ಈ ನಾನಾವಿಧ ವಿಲಾಸವುಳ್ಳ ಜಗತ್ತಿಗೆ ಮನಸ್ಸೇ ಕಾರಣವಾದುದು. ಈ ವಿಷಯದಲ್ಲಿ, ಇಂದ್ರನಿಗೆ ಅಹಲ್ಯೆಯೊಡನೆ ನಡೆದ ವೃತ್ತಾಂತವೇ ನಿದರ್ಶನವು ||೫||

ಬ್ರಹ್ಮನು ಕೇಳುವನು :—

ಭಗವಂತನೆ! ಅಜ್ಞಾನಧ್ವಾಂತನಿವಾರಕನೆ! ಯಾವಳ ವೃತ್ತಾಂತವನ್ನು ಕೇಳಿದರೆ ಪವಿತ್ರವಾದ ಜ್ಞಾನವುದಯಿಸುವುದೆಂದು ನೀನು ಹೇಳುವೆಯೋ, ಅಂತಹ ಅಹಲ್ಯೆಯೆಂಬವಳಾರು ? ಇಂದ್ರನೆಂಬವನೂ ಯಾರು ? ||೬||

ಸೂರ್ಯನು ಉತ್ತರ ಹೇಳುವನು :—

ಅಯ್ಯಾ! ಬ್ರಹ್ಮನೆ! ಪೂರ್ವದಲ್ಲಿ, ಮಗಧದೇಶದೊಳಗೆ, ಪುರಾಣಪ್ರಸಿದ್ಧನಾದ ಮತ್ತೊಬ್ಬ ಇಂದ್ರದ್ಯುಮ್ನನೋ ಎಂಬಂತೆ ವಿರಾಜಿಸುತಿದ್ದ—ಇಂದ್ರದ್ಯುಮ್ನನಾಮಕನಾದ ರಾಜನೊಬ್ಬನಿದ್ದನೆಂದು ಎಲ್ಲರೂ ಕೇಳಿರಬಹುದಲ್ಲವೆ! ||೭||

ಅಲ್ಲಿ, ಆ ದೊರೆಗೆ, ಚಂದ್ರನಿಗೆ ರೋಹಿಣೀದೇವಿ ಪತ್ನಿಯಾಗಿರುವಂತೆ, ಚಂದ್ರಮಂಡಲ ಸಮಾನಳಾದ ಕಮಲನೇತ್ರೆಯಾದ ಅಹಲ್ಯೆಯೆಂಬವಳು ಪತ್ನಿಯಾಗಿದ್ದಳು ||೮||

ಆ ಪಟ್ಟಣದಲ್ಲಿಯೇ, ವಿಟಸಮೂಹದಲ್ಲಿ ಅಗ್ರಗಣ್ಯನಾಗಿ ಶೃಂಗಾರವಿದ್ಯಾಚತುರನಾದ ಇಂದ್ರನೆಂಬ ಹೆಸರಿನ ಒಬ್ಬ ಬ್ರಾಹ್ಮಣಕುಮಾರಕನು ವಿಟಪುರುಷನಾಗಿ ತಿರುಗುತಿದ್ದನು ||೯||

ಹೀಗಿರುವಾಗ, ಆ ರಾಜಮಹಿಷಿಯಾದ ಅಹಲ್ಯೆಯು, ಯಾವುದೋ ಒಂದು ಕಥಾಪ್ರಸ್ತಾವದಲ್ಲಿ, ಹಿಂದೆ ಅಹಲ್ಯೆಯು ಇಂದ್ರನಿಗೆ ಕೇವಲ ಪ್ರಿಯಳಾಗಿದ್ದಳೆಂಬುದಾಗಿ ಕೇಳಿದಳು ||೧೦||

ಆಕರ್ಣ್ಯೈವಮಹಲ್ಯಾ ಸಾ ಬಭೂವೇನ್ದ್ರಾನುರಾಗಿಣೀ |
ಅಹಲ್ಯಾಂ ಮಾಂ ಸನೋ ಕಸ್ಮಾತ್ ಸಕೋ೭ಭ್ಯೇತೀತ್ಯಥೋತ್ಸುಕಾ ||೧೧||
ಮೃಣಾಳಭಾರಕದಳೀಪಲ್ಲವಾಸ್ತರಣೇಷು ಸಾ |
ಅತಪ್ಯತ ಭೃಶಂ ಬಾಲಾ ಲತಾ ಲೂನಾ ವನೇಷ್ವಿವ ||೧೨||
ಖೇದಮಾಪ ಸಮಗ್ರಾಸು ತಾಸು ಭೂಪವಿಭೂತಿಷು |
ಮತ್ಸ್ಯೀ ನಿದಾಘತಪ್ತಾಸು ಪರಿಲೋಲಾ ಸ್ಥಲೀಷ್ವಿವ ||೧೩||
ಅಯಮಿನ್ದ್ರೋಯಮಿನ್ದ್ರಶ್ಚೇತ್ಯೇವಂ ಜಾತಪ್ರಲಾಪಯಾ |
ಲಜ್ಜಾಪಿ ಹಿ ತಯಾ ತ್ಯಕ್ತಾ ವೈವಶ್ಯಮನುಯಾತಯಾ ||೧೪||
ಇತ್ಯಾರ್ತಯಾ ಪುನಸ್ನೇಹಂ ಅಥ ತಸ್ಯಾವಯಸ್ಯಯಾ |
ಉಕ್ತಂ ತಯಾ ಪ್ರಿಯೇ೭ವಿಘ್ನಂ ಇನ್ದ್ರಮಭ್ಯಾನಯಾಮ್ಯಹಮ್ ||೧೫||
ಇಷ್ಟಂ ತವಾನಯಾಮೀತಿ ಶ್ರುತ್ವಾ ವಿಕಸಿತೇಕ್ಷಣಾ |
ಪಪಾತ ಪಾದಯೋಃ ಸಖ್ಯಾಃ ನಳಿನ್ಯಾನಳಿನೀ ಯಥಾ ||೧೬||
ತತಃ ಪ್ರಯಾತೇ ದಿವಸೇ ಸಮಾಯಾತೇ ನಿಶಾಗಮೇ |
ಸಾ ವಯಸ್ಯಾ ತಮಿನ್ದ್ರಾಖ್ಯಂ ಯಯೌ ದ್ವಿಜಕುಮಾರಕಮ್ ||೧೭||

ಹೀಗೆ ಕೇಳಿದಬಳಿಕ ಆ ಅಹಲ್ಯೆಯು, ಅಹಲ್ಯೆಯಾದ ನನ್ನನ್ನು ಇಂದ್ರನು ಇನೂ ಏಕೆ ಸೇರದಿರುವನೆಂದು, ಇಂದ್ರನಲ್ಲಿ ಅತ್ಯಂತವಾಗಿ ಅನುರಾಗವನ್ನಿಟ್ಟವಳಾದಳು ||೧೧||

ಆ ಅಹಲ್ಯೆಯು, ಕೇವಲ ವಿರಹಾತುರಳಾಗಿ, ತಾವರೆದಂಟು ಕದಳೀಸ್ತಂಭ ಮರದ ಚಿಗುರು—ಇವುಗಳ ಹಾಸಿಗೆಯಲ್ಲಿ ಮಲಗಿಕೊಂಡು, ಅರಣ್ಯದಲ್ಲಿ ಕತ್ತರಿಸಿಹಾಕಲ್ಪಟ್ಟ ಲತೆಯಂತೆ, ಅತಿಯಾಗಿ ತಾಪವನ್ನನುಭವಿಸಿದಳು ||೧೨||

ಬೇಸಿಗೆಯಲ್ಲಿ ಕಾಯ್ದ ನೆಲದಮೇಲೆ ಬಿದ್ದ ಮೀನು ಸಂಕಟಪಡುವಂತೆ, ಆ ಅಖಂಡರಾಜಸಂಪತ್ತಿನಲ್ಲಿ ಅವಳು ಅತಿಯಾಗಿ ಖೇದಪಟ್ಟಳು ||೧೩||

ಕೇವಲ ಕಾಮಪರವಶಳಾದ ಆ ಅಹಲ್ಯೆಯು, ಕಂಡಕಂಡವರನ್ನೆಲ್ಲ--ಇವನೇ ಇಂದ್ರನು, ಇವನೇ ಇಂದ್ರನು—ಎಂದು ಹೇಳುತ, ಲಜ್ಜೆಯನ್ನೂ ತ್ಯಜಿಸಿಬಿಟ್ಟಳು ||೧೪||

ಹೀಗೆ ಆರ್ತಳಾದ ಅವಳನ್ನು ಕಂಡು, ಅವಳ ಸಖಿಯೊಬ್ಬಳು 'ಪ್ರಿಯಸಖಿ! ನಾನು ನಿರ್ವಿಘ್ನವಾಗಿ ಇಂದ್ರನನ್ನು ಕರೆದು ತರುವೆನು' ಎಂದು ಹೇಳಿದಳು ||೧೫||

ನಿನ್ನ ಪ್ರಿಯನನ್ನು ಕರೆತರುವೆನೆಂಬ ಮಾತನ್ನು ಕೇಳಿ, ಅರಳಿದ ಕಣ್ಣುಳ್ಳವಳಾದ ಆ ಅಹಲ್ಯೆಯು, ಬಾಡಿರುವ ಒಂದು ಕಮಲಲತೆಯು ಮತ್ತೊಂದರ ಬುಡದಲ್ಲಿ ಬೊಗ್ಗುವಂತೆ, ಆ ಸಖಿಯ ಕಾಲಿಗೆ ನಮಸ್ಕಾರಮಾಡಿದಳು ||೧೬||

ಅನಂತರ, ಹಗಲು ಕಳೆದು ರಾತ್ರಿ ಬರಲಾಗಿ, ಆ ಸಖಿಯು ಇನ್ದ್ರನೆಂಬ ಬ್ರಾಹ್ಮಣಪುತ್ರನಿದ್ದ ಬಳಿಗೆ ಹೋದಳು ||೧೭||

ಬೋಧಯಿತ್ವಾ ಯಥಾಯುಕ್ತಂ ಸಾ ತಮಿನ್ದ್ರಮಥಾಜ್ಞನಾ |
ಅಹಲ್ಯಾನಿಕಟಂ ರಾತ್ರ್ಯಾಂ ಆನಯಾಮಾಸ ಸತ್ವರಮ್ ||೧೮||
ತತಃ ಸಾ ತೇನ ಷಿಙ್ಗೇನ ಸಹೇನ್ದ್ರೇಣ ರತಿಂ ಯಯೌ |
ಕಸ್ಮಿಂಶ್ಚಿತ್ ಸದನೇ ಗುಪ್ತೇ ಬಹುಮಾಲ್ಯವಿಲೇಪನಾ ||೧೯||
ಹಾರಾಙ್ಗದಮನೋಜ್ಞೇನ ತರುಣೀ ತೇನ ಸಾ ತದಾ |
ರತೇನಾವರ್ಜಿತಾ ವಲ್ಲೀ ರಸೇನ ಮಧುನಾ ಯಥಾ ||೨೦||
ತತಸ್ತದನುರಕ್ತಾ ಸಾ ಪಶ್ಯನ್ತೀ ತನ್ಮಯಂ ಜಗತ್ |
ನ ಸಮಸ್ತಗುಣಾಕೀರ್ಣಂ ಭರ್ತಾರಂ ಬಹ್ವಮನ್ಯತ ||೨೧||
ಕೇನಚಿತ್ತ್ವಥ ಕಾಲೇನ ತಸ್ಯಾ ಇನ್ದ್ರಾನುರಾಗಿತಾ |
ಸಾ ಜ್ಞಾತಾ ರಾಜಸಿಂಹೇನ ತಸ್ಮಾದ್ವ್ಯೋಮಚನ್ದ್ರಿಕಾ ||೨೨||
ಇನ್ದ್ರಂ ಧ್ಯಾಯತಿ ಸಾ ಯಾವತ್ ತಾವತ್ ತಸ್ಯಾ ವಿರಾಜತೇ |
ಮುಖಂ ಪೂರ್ಣೇನ ಚನ್ದ್ರೇಣ ಪ್ರಬುದ್ಧಮಿವ ಕೈರವಮ್ ||೨೩||
ಇನ್ದ್ರೋಽಪಿ ಚ ತದಾಸಕ್ತಸಮಸ್ತಕರಣಾಕುಲಃ |
ನ ತಿಷ್ಠತಿ ಕ್ಷಣಮಹೋ ತಯಾ ವಿರಹಿತಃ ಕ್ವಚಿತ್ ||೨೪||
ಅಥಾತಿಸುಘನಸ್ನೇಹನಿರಾವರಣಚೇಷ್ಟಯೋಃ |

ಬಳಿಕ ಆ ಸಖಿಯು ಇನ್ದ್ರನನ್ನು ಯಥಾಯೋಗ್ಯವಾಗಿ ತಿಳಿಯಪಡಿಸಿ, ಆ ರಾತ್ರಿಯಲ್ಲಿಯೇ ಬೇಗನೆ ಅವನನ್ನು ಅಹಲ್ಯೆಯಬಳಿಗೆ ಕರೆದುಕೊಂಡು ಬಂದಳು ||೧೮||

ಅನಂತರ ಅಹಲ್ಯೆಯು, ಆ ಇಂದ್ರನೆಂಬ ವಿಟನೊಡನೆ, ಒಂದು ರಹಸ್ಯವಾದ ಮನೆಯೊಳಗೆ, ಗಂಧಪುಷ್ಪಾದಿಗಳಿಂದ ಅಲಂಕೃತಳಾಗಿ ಕ್ರೀಡಿಸಿದಳು ||೧೯||

ಹಾರ ಅಂಗದ ಮುಂತಾದ ಭೂಷಣಗಳಿಂದಲಂಕೃತನಾದ ಆ ಇಂದ್ರನು, ಮಧುಮಾಸವು ರಸದಿಂದ ಲತೆಯನ್ನು ಸಂತೋಷಪಡಿಸುವಂತೆ, ರತಿವಿಲಾಸದಿಂದ ಆ ತರುಣಿಯನ್ನು ಸಂತೋಷಪಡಿಸಿದನು ||೨೦||

ಆಮೇಲೆ ಅವನಲ್ಲನುರಕ್ತಳಾದ ಅಹಲ್ಯೆಯು, ಜಗತ್ತನ್ನೆಲ್ಲ ಇಂದ್ರಮಯವನ್ನಾಗಿ ನೋಡುತ, ಸಮಸ್ತ ಗುಣಭೂಷಿತನಾದ ತನ್ನ ಪತಿಯನ್ನು ಸ್ವಲ್ಪವೂ ಪ್ರೀತಿಸಲಿಲ್ಲ ||೨೧||

ಅನಂತರ ಕೆಲವುಕಾಲ ಕಳೆಯಲಾಗಿ, ಚಂದ್ರಿಕೆಯು ಅಂತರಿಕ್ಷವನ್ನು ಪ್ರಕಾಶಪಡಿಸುವಂತೆ ಅವಳ ಮುಖವನ್ನು ಪ್ರಕಾಶಪಡಿಸುತಿದ್ದ ಆಯಿಂದ್ರಾನುರಾಗವು ಅವಳ ಪತಿಯಿಂದ ತಿಳಿಯಲ್ಪಟ್ಟಿತು ||೨೨||

ಅವಳು ಯಾವಾಗ ಇಂದ್ರನನ್ನು ಸ್ಮರಿಸುತ್ತಾಳೋ, ಆಗ ಅವಳ ಮುಖವು, ಪೂರ್ಣಚಂದ್ರನಿಂದರಳಿದ ನೈದಿಲೆಯಂತೆ ವಿರಾಜಿಸುವುದು ||೨೩||

ಇಂದ್ರನೂ ಕೂಡ, ತನ್ನ ಸಮಸ್ತೇಂದ್ರಿಯಗಳನ್ನೂ ಅವಳಲ್ಲಾಸಕ್ತಿಪಡಿಸಿ, ಅವಳಿಂದ ವಿರಹಿತನಾಗಿ ಒಂದುಕ್ಷಣವೂ ಎಲ್ಲಿಯೂ ಇರಲಾರದವನಾದನು ||೨೪||

ಅನಂತರ, ಅವರಿಬ್ಬರೂ ಅತಿಘನಸ್ನೇಹವುಳ್ಳವರಾಗಿ, ತಮ್ಮ ಕಾಮಚೇಷ್ಟೆಯನ್ನು ಮರೆ

ತಯೋರನಯುವೃತ್ತಾನ್ತೇ ರಾಜ್ಞಾ ಕರ್ಣೇ ಕಟುವ್ಯಥಃ ||೨೫||
ಏವಮನ್ಯೋನ್ಯಮಾಸಕ್ತಂ ಭಾವಮಾಲಕ್ಷ್ಯ ಭೂಪತಿಃ |
ಚಕಾರ ಬಹುಭಿರ್ದಣ್ಡೈಃ ಸ ದ್ವಯೋರಥ ಶಾಸನಮ್ ||೨೬||
ತಾವುಭಾವಪಿ ಸನ್ತ್ಯಕ್ತೌ ಹೇಮನ್ತೇ ಸಲಿಲಾಶಯೇ |
ತುಷ್ಟೌ ಜಹಸತುಸ್ತತ್ರ ನ ಖೇದಂ ಸಮುಪಾಗತೌ ||೨೭||
ಅಪೃಚ್ಛತ ತತೋ ರಾಜಾ ಖಿನ್ನೌ ಸ್ಥೋ ನ ತು ದುರ್ಮತೀ |
ತಾವೂಚತುರ್ಮಹೀಪಾಲಂ ಜಲಾಶಯುಸಮುದ್ಧೃತೌ ||೨೮||
ಸಂಸ್ಮೃತ್ಯಾವಾಮಿಹಾನ್ಯೋನ್ಯಮುಖಕಾನ್ತಿಮನಿನ್ದಿತಾಮ್ |
ಆತ್ಮಾನಂ ನ ವಿಜಾನೀವೋ ರೂಢಭಾವಂ ಪರಸ್ಪರಮ್ ||೨೯||
ಶಾಸನೇಷು ಚ ಯತ್ ಸಙ್ಗೇ ನಿಶ್ಯಙ್ಕಸ್ತೇನ ಹರ್ಷಿತೌ |
ಮುಹ್ಯಾವೋ ನ ಮಹೀಪಾಲ ಸ್ವಾಙ್ಗೈರಪಿ ವಿಕರ್ತಿತೈಃ ||೩೦||
ತತೋ ಭ್ರಾಷ್ಟ್ರೇ ಪರಿಕ್ಷಿಪ್ತಾವಖಿನ್ನಾವೇವಮೇವ ತೌ |
ಊಚತುರ್ಮುದಿತಾತ್ಮಾನಾವನ್ಯೋನ್ಯಸ್ಮೃತಿಹರ್ಷಿತೌ ||೩೧||

ಯಿಲ್ಲದೇ ಮಾಡಲುಪಕ್ರಮಿಸಿದರು. ಈ ವೃತ್ತಾಂತವನ್ನು ಕೇಳಿ, ರಾಜನಿಗೆ ಬಹಳ ವ್ಯಥೆಯುಂಟಾಯಿತು ||೨೫||

ಬಳಿಕ ಹೀಗೆ ಅವರಿಬ್ಬರ ಮನಸ್ಸೂ ಅನ್ಯೋನ್ಯವಾಗಿ ಆಸಕ್ತಿಪಟ್ಟಿರುವುದನ್ನು ಕಂಡು, ಆ ದೊರೆಯು ಅವರಿಬ್ಬರಿಗೂ ಬಹುಕ್ರೂರವಾದ ದಂಡಗಳಿಂದ ಶಿಕ್ಷೆಯನ್ನು ಮಾಡಿಸಿದನು||೨೬||

ಹಿಮಂತಋತುವಿನಲ್ಲಿ ಜಲಾಶಯದೊಳಗೆ ತಮ್ಮನ್ನು ಎತ್ತಿಹಾಕಲಾಗಿ, ಅವರಿಬ್ಬರೂ ಕೇವಲ ಸಂತೋಷಪಟ್ಟರಲ್ಲದೆ—ಖೇದಪಡಲಿಲ್ಲ ||೨೭||

ಆಗ ಅದನ್ನು ನೋಡಿ, ರಾಜನು ಅವರಿಬ್ಬರನ್ನೂ ಆ ಜಲಾಶಯದಿಂದ ಮೇಲಕ್ಕೆ ತೆಗೆಯಿಸಿ— 'ಎಲೈ ದುರ್ಬುದ್ಧಿಗಳಿರಾ! ನೀವು ಖೇದಪಡದೆಯೇ ಇರುವಿರಲ್ಲ! ಇದು ಹೇಗೆ?' ಎಂದು ಕೇಳಿದನು. ಅದಕ್ಕವರು ಈರೀತಿಯಾಗಿ ಉತ್ತರಕೊಟ್ಟರು ||೨೮||

ನಾವಿಬ್ಬರೂ ಇಲ್ಲಿ ಪರಸ್ಪರವಾಗಿ ಮುಖಕಾಂತಿಯನ್ನು ಸ್ಮರಿಸುತಿದ್ದವರಾದಕಾರಣ, ಪರಸ್ಪರ ಮನೋಭಾವ ಸ್ಥಿರಪಟ್ಟು, ನಮ್ಮನ್ನೇ ನಾವು ಅರಿಯದವರಾಗಿರುವೆವು ||೨೯||

ಎಲೈ ದೊರೆಯೆ! ನೀನು ಕೊಡುವ ಶಿಕ್ಷೆಯನ್ನನುಭವಿಸುವಾಗಲೂ ನಮಗೆ ನಿರಾಬಾಧವಾಗಿ ಸಹವಾಸವಿರುವುದರಿಂದ, ನಾವು ಕೇವಲ ಹರ್ಷಯುಕ್ತರಾಗಿಯೇ ಇರುವೆವು. ಹೀಗಿರುವಕಾರಣ, ನಮ್ಮ ಅವಯವಗಳನ್ನು ಕತ್ತರಿಸಿಹಾಕಿದರೂ ನಾವು ಸ್ವಲ್ಪವೂ ಮೂರ್ಛೆಯನ್ನೂ ಕೂಡ ಅನುಭವಿಸಲಾರೆವು ||೩೦||

ಹೀಗೆ ಹೇಳುತಿರುವ ಅವರನ್ನು, ದೊರೆಯು ಹುರಿಯುವ ಓಡಿನಲ್ಲಿ ಹಾಕಿಸಿದನು. ಆಗಲೂ ಅವರು ಖೇದವಿಲ್ಲದವರಾಗಿ, ಪರಸ್ಪರಸ್ಮರಣೆಯಿಂದ ಸಂತೋಷಪಡುತ, ಹಿಂದೆ ಹೇಳಿದಂತೆಯೇ ಹೇಳಿದರು ||೩೧||

ಗ್ರಥಿತೌ ಗಜಪಾದೇಷು ನಲಿನ್ಯಾವೇವ ಸಂಸ್ಥಿತೌ |
ಏವಮೇವೋಚತುರ್ಭೂಪಂ ಅನ್ಯೋನ್ಯಸ್ಮೃತಿಹರ್ಷಿತೌ ||೨೦||
ಕಶಾಹತಾವಲಿನ್ಯೌ ತೌ ಏವಮೇವ ಕಿಲೋಚತುಃ |
ಅನ್ಯಸ್ಮಾಚ್ಛಾಸನಾದ್ರಾಜ್ಞಾ ಕಲ್ಪಿತಾಚ್ಚ ಪುನಃಪುನಃ ||೨೨||
ಉದ್ಧೃತಾವೂಚತುಃ ಪೃಷ್ಟೌ ತಮೇವಾರ್ಥಂ ಪುನಃಪುನಃ |
ಉವಾಚೇನ್ದ್ರೋ ಮಹೀಪಾಲಂ ಜಗನ್ಮೇ ದಯಿತಾಮಯಮ್ |
ನ ಶಾತನಾನಿ ದುಃಖಾನಿ ಬಾಧನ್ತೇ ಕಿಞ್ಚಿದೇವ ಮೇ ||೨೪||
ಅಸ್ಯಾಶ್ಚೈವ ಜಗದ್ರಾಜನ್ ಸರ್ವಂ ಮನ್ಮಯಮೇವ ಚ |
ತೇನಾನ್ಯಶಾಸನಾದ್ದುಃಖಂ ಕಿಞ್ಚಿದೇವ ನ ವಿದ್ಯತೇ ||೨೫||
ಮನೋಮಾತ್ರಮಹಂ ರಾಜನ್ ಮನೋ ಹಿ ಪುರುಷಃ ಸ್ಮೃತಃ |
ಪ್ರಪಞ್ಚಮಾತ್ರಮೇವಾಯಂ ದೇಹೋ ದೃಶ್ಯತಏವ ಹಿ ||೨೬||
ಸಮಕಾಲಪ್ರಯುಕ್ತೇನ ಸಹಸಾ ದಣ್ಡರಾಶಿನಾ |
ವೀರಂ ಮನೋ ಭೇದಯಿತುಂ ಮನಾಗಪಿ ನ ಶಕ್ಯತೇ ||೨೭||

ಆಮೇಲೆ, ದೊರೆಯು ಅವರನ್ನು ಆನೆಯ ಕಾಲಿಗೆ ಕಟ್ಟಿ ಎಳೆಯಿಸಿದನು. ಅದರಿಂದಲೂ ಅವರು ಖೇದಪಡದೆ, ಪರಸ್ಪರಸ್ಮೃತಿಯಿಂದ ಹರ್ಷಿತರಾಗಿ, ದೊರೆಯನ್ನು ನೋಡಿ ಮೊದಲಿನಂತೆಯೇ ಹೇಳಿದರು ||೨೦||

ಅನಂತರ, ದೊರೆಯು ಅವರನ್ನು ಕಶೆ (ಕುದುರೆಯ ಕೋರಡೆ)ಗಳಿಂದ ಹೊಡೆಯಿಸಿದನು. ಅದರಿಂದಲೂ ಅವರು ಖೇದಪಡದೆ ಮೊದಲಿನಂತೆಯೇ ಹೇಳಿದರು, ಇದನ್ನು ನೋಡಿ ದೊರೆಯು ಇನ್ನೂ ನಾನಾವಿಧವಾದ ಶಿಕ್ಷೆಗಳನ್ನು ಪುನಃಪುನಃ ಮಾಡಿಸಿದನು. ಅದಕ್ಕೂ ಅವರು ವ್ಯಸನವಿಲ್ಲದೆ ಪೂರ್ವದಂತೆಯೇ ಹೇಳುತಬಂದರು ||೨೨||

ಆಗ ದೊರೆಯು ಅವರಿಬ್ಬರಿಗೂ ಶಿಕ್ಷೆಯನ್ನೆಲ್ಲ ತಪ್ಪಿಸಿ, ಅನುನಯದಿಂದ ಕೇಳಿದನು. ಆಗಲೂ ಅವರು ಪೂರ್ವದ ಮಾತನ್ನೇ ಮತ್ತೆಮತ್ತೆ ಹೇಳುತಬಂದರು. ಆ ಸಮಯದಲ್ಲಿ, ಇಂದ್ರನು ದೊರೆಯನ್ನು ಕುರಿತು ಹೀಗೆ ಹೇಳಿದನು:—ಮಹಾರಾಜ! ನನಗೆ ಜಗತ್ತೆಲ್ಲವೂ ಕಾಂತಾಮಯವಾಗಿಬಿಟ್ಟಿರುವುದು. ಅದುಕಾರಣ, ನೀನು ಕೊಡುವ ಅತಿದುಃಖಕರವಾದ ಶಿಕ್ಷೆಗಳು ನನಗೆ ಸ್ವಲ್ಪವೂ ಬಾಧೆಯುಂಟುಮಾಡುವುದಿಲ್ಲ ||೨೪||

ಈ ಅಹಲ್ಯೆಗೂ ಕೂಡ ಸಮಸ್ತಜಗತ್ತೂ ನನ್ನಿಂದಲೇ ವ್ಯಾಪ್ತವಾದಂತಿರುವುದು. ಅದು ಕಾರಣ, ಇತರವಾದ ಯಾವ ಶಿಕ್ಷೆಯಿಂದಲೂ ಇವಳಿಗೆ ಸ್ವಲ್ಪವೂ ದುಃಖವಿಲ್ಲ ||೨೫||

ಅಯ್ಯಾ! ರಾಜನೆ! ನಾನು ಕೇವಲ ಮನೋಮಾತ್ರನಾಗಿರುವೆನು. ಮನಸ್ಸೇ ಪುರುಷನೆಂದೂ ಹೇಳಲ್ಪಟ್ಟಿರುವುದು. ಈ ಸಮಸ್ತವಾದ ದೃಶ್ಯಪ್ರಪಂಚವೂ ದೇಹಸನ್ನಿವೇಶವೂ ಕೂಡ, ಮನಸ್ಸಿನಿಂದಲೇ ಕಲ್ಪಿತವಾಗಿರುವುವು ||೨೬||

ಆ ಮನಸ್ಸನ್ನೇ ಶಿಕ್ಷಿಸೋಣವೆಂದರೆ,—ಅದು ಮಹಾವೀರ್ಯವುಳ್ಳದು. ಒಂದೇಕಾಲದಲ್ಲಿ ತಟ್ಟನೆ ಅಸಂಖ್ಯಾತವಾದ ಶಿಕ್ಷಾಸಮುದಾಯವನ್ನುಪಯೋಗಿಸಿದರೂ ಕೂಡ, ಈ ಮನಸ್ಸನ್ನು ಭೇದಿಸುವುದು ಅಶಕ್ಯವಾದುದು ||೨೭||

ಕಾನಾಮ ತಾನ್ಮಹಾರಾಜ ಕೀದೃಶ್ಯಃ ಕಸ್ಯ ಶಕ್ತಯಃ ।
ಯಾಭಿರ್ಮನಾಂಸಿ ಭಿದ್ಯನ್ತೇ ದೃಷ್ಟನಿಶ್ಚಯವನ್ತ್ಯಪಿ ॥೩೮॥
ವೃದ್ಧಿಮಾಯಾತು ವಾ ದೇಹೋ ಯಾತು ವಾ ವಿಶರಾರುತಾಮ್ ।
ಭಾವಿತಾರ್ಥಾಭಿಪತಿತಂ ಮನಸ್ತಿಷ್ಠತಿ ಪೂರ್ವವತ್ ॥೩೯॥
ಇಷ್ಟೇರ್ಥೇ ಚಿರಮಾವಿಷ್ಟಂ ದಧಾನಂ ತತ್ ಸ್ಥಿತಂ ಮನಃ ।
ಭಾವಾಭಾವಾಃ ಶರೀರಸ್ಥಾಃ ನೃಪ ಶಕ್ತಾ ನ ಬಾಧಿತುಮ್ ॥೪೦॥
ಭಾವಿತಂ ತೀವ್ರವೇಗೇನ ಮನಸಾ ಯನ್ಮಹೀಪತೇ ।
ತದೇವ ಪಶ್ಯತ್ಯಚಲಂ ನ ಶರೀರವಿಚೇಷ್ಟಿತಮ್ ॥೪೧॥
ನ ಕಾಶ್ಚನ ಕ್ರಿಯಾರಾಜನ್ ವರಶಾಪಾದಿಕಾಅಪಿ ।
ತೀವ್ರವೇಗೇನ ಸಮ್ಪನ್ನಂ ಶಕ್ತಾಶ್ಚಾಲಯಿತುಂ ಮನಃ ॥೪೨॥
ತೀವ್ರವೇಗೇನ ಸಂಯುಕ್ತಂ ಪುರುಷಾಹ್ಯಭಿವಾಞ್ಛಿತಾತ್ ।
ಮನಶ್ಚಾಲಯಿತುಂ ಶಕ್ತಾಃ ನ ಮಹಾದ್ರಿಂ ಮೃಗಾಇವ ॥೪೩॥
ಮಮೇಯಮಸಿತಾಪಾಙ್ಗೀ ಮನಃಕೋಶೇ ಪ್ರತಿಷ್ಠಿತಾ ।
ದೇವಾಗಾರೇ ಮಹೋತ್ಸೇಧೇ ದೇವೀ ಭಗವತೀ ಯಥಾ ॥೪೪॥

ಅಯ್ಯಾ! ಮಹಾರಾಜ! ದೃಢವಾದ ನಿಶ್ಚಯವನ್ನನುಭವಿಸುತಿರುವ ಮನಸ್ಸನ್ನು ಭೇದಿಸುವಂತಹ ಶಕ್ತಿಯಾವುದು? ಅದೆಂತಹುದು? ಯಾರಿಗಿರುವುದು? ॥೩೮॥

ಈ ದೇಹವು ಅಭಿವೃದ್ಧಿಯನ್ನಾದರೂ ಹೊಂದಲಿ;—ಅಥವಾ ಜೀರ್ಣವಾಗಿಯಾದರೂ ಹೋಗಲಿ. ಮನಸ್ಸುಮಾತ್ರ, ತನ್ನಿಂದ ದೃಢನಿಶ್ಚಿತವಾದ ವಿಷಯದಲ್ಲಿಯೇ ನೆಲೆಸಿದುದಾಗಿ, ಯಾವ ವಿಕಾರವೂ ಇಲ್ಲದೆ ಮೊದಲಿನಂತೆಯೇ ಇರುವುದು ॥೩೯॥

ಎಲೈ ದೊರೆಯೆ! ತನಗಿಷ್ಟವಾದ ವಿಷಯದಲ್ಲಿ ಚಿರಕಾಲ ಅಭಿನಿವೇಶವನ್ನು ಧರಿಸಿಕೊಂಡು ಅದರಲ್ಲಿಯೇ ಸ್ಥಿರವಾಗಿ ನೆಲೆಸಿರುವ ಮನಸ್ಸನ್ನು ಬಾಧಿಸಲು, ಶರೀರನಿಷ್ಠಗಳಾದ ಭಾವಾಭಾವಗಳು ಎಂದಿಗೂ ಶಕ್ತವಾಗಲಾರವು ॥೪೦॥

ಎಲೈ ಮಹೀಪತಿಯೆ! ತೀವ್ರವೇಗವಾದ ಮನಸ್ಸು, ತಾನು ಯಾವುದನ್ನು ಭಾವನೆಮಾಡುವುದೋ—ಅದನ್ನೇ ನೋಡುತಿರುವುದಲ್ಲದೆ, ಶರೀರವ್ಯಾಪಾರವೊಂದನ್ನೂ ನೋಡುವುದಿಲ್ಲ ॥೪೧॥

ಹೇ ರಾಜ! ಯಾವ ಕರ್ಮಗಳೂ, ಯಾವ ವರಗಳೂ, ಯಾವ ಶಾಪಾದಿಗಳೂ ಕೂಡ, ತೀವ್ರವೇಗಯುಕ್ತವಾದ ಮನಸ್ಸನ್ನು ಅಳ್ಳಾಡಿಸುವುದಕ್ಕೆ ಶಕ್ತಗಳಾಗುವುದಿಲ್ಲ ॥೪೨॥

ದೊಡ್ಡಬೆಟ್ಟವನ್ನು ಅಳ್ಳಾಡಿಸುವುದಕ್ಕೆ ಮೃಗಗಳಿಗೆ ಶಕ್ತಿಯಿಲ್ಲದಿರುವಂತೆ, ತೀವ್ರವೇಗಯುಕ್ತವಾದ ಮನಸ್ಸನ್ನು ಅಳ್ಳಾಡಿಸುವುದಕ್ಕೆ ಎಂತಹ ಮನುಷ್ಯರಿಗೂ ಶಕ್ತಿಯಿಲ್ಲ ॥೪೩॥

ಅತ್ಯುನ್ನತವಾದ ದೇವಸ್ಥಾನದಲ್ಲಿ ಪೂಜ್ಯಳಾದ ದೇವಿಯು ಪ್ರತಿಷ್ಠಿಸಲ್ಪಡುವಂತೆ, ನನ್ನ ಮನಸ್ಸೆಂಬ ಕೋಶದಲ್ಲಿ ಈ ಸುಂದರಿಯು ಪ್ರತಿಷ್ಠಿಸಲ್ಪಟ್ಟಿರುವಳು ॥೪೪॥

ನ ದುಃಖಮನುಗಚ್ಛಾಮಿ ಪ್ರಿಯಯಾ ಜೀವರಕ್ಷಯಾ ।
ಗಿರಿರ್ಗ್ರೀಷ್ಮದಶಾದಾಹಂ ಲಗ್ನಯೇವಾಬ್ದಮಾಲಯಾ ॥೪೫॥
ಯತ್ರಯತ್ರ ಯಥಾ ರಾಜನ್ ತಿಷ್ಠಾಮ್ಯಭಿಸರಾಮಿ ವಾ ।
ತತ್ರೇಷ್ಟಸಙ್ಗಮಾದನ್ಯಾತ್ ಕಿಞ್ಚಿನ್ನಾನುಭವಾಮ್ಯಹಮ್ ॥೪೬॥
ಅಹಲ್ಯಾದಯಿತಾನಾಮ್ನಾ ಮನಸೇನ್ದ್ರಾಭಿಧಂ ಮನಃ ।
ಸಂಸಕ್ತಮಿದಮಾಯಾತಿ ನ ಸ್ವಭಾವಾದೃತೇ ಪರಮ್ ॥೪೭॥
ಏಕಕಾರ್ಯನಿವಿಷ್ಟಂ ಹಿ ಮನೋ ಧೀರಸ್ಯ ಭೂಪತೇ ।
ನ ಚಾಲ್ಯತೇ ಮೇರುರಿವ ವರಶಾಪಬಲೈರಪಿ ॥೪೮॥
ದೇಹೋ ಹಿ ವರಶಾಪಾಭ್ಯಾಂ ಅನ್ಯತ್ವಮಿವ ಗಚ್ಛತಿ ।
ನ ತು ಧೀರಂ ಮನೋ ರಾಜನ್ ವಿಜಿಗೀಷುತಯಾ ಸ್ಥಿತಮ್ ॥೪೯॥
ಏತಾನಿ ಚಾತ್ರ ಮನಸಾಂ ನ ಚ ಕಾರಣಾನಿ
ರಾಜನ್ ಶರೀರಶಕಲಾನಿ ವೃಥೋತ್ಥಿತಾನಿ ।
ಚೇತೋ ಹಿ ಕಾರಣಮಮೀಷು ಶರೀರಕೇಷು
ವಾರೀವ ಸರ್ವವನಖಣ್ಡಲತಾರಸೇಷು ॥೫೦॥

ಪರ್ವತದಮೇಲೆ ಮೇಘಪಂಕ್ತಿಯು ಕುಳಿತಿದ್ದರೆ ಆ ಪರ್ವತಕ್ಕೆ ಬೇಸಿಗೆಯ ಕಾಡುಗಿಚ್ಚು ಹೇಗೆ ತಟ್ಟುವುದಿಲ್ಲವೋ, ಹಾಗೆ—ನನ್ನ ಪ್ರಾಣವನ್ನು ರಕ್ಷಿಸತಕ್ಕ ಈ ಪ್ರಿಯೆಯು ಸರ್ವದಾ ನನ್ನ ಹೃದಯದಲ್ಲಿ ನೆಲೆಸಿರುವುದರಿಂದ—ನನಗೆ ಯಾವ ದುಃಖಸಂಪರ್ಕವೂ ಇಲ್ಲವಾಗಿರುವುದು ॥೪೫॥

ಅಯ್ಯಾ ದೊರೆಯೆ! ನಾನು ಯಾವಯಾವಾಗ ಎಲ್ಲೆಲ್ಲಿರುವೆನೋ, ಅಲ್ಲೆಲ್ಲ—ಈ ಪ್ರಿಯೆಯ ಸಮಾಗಮಹೊರತು—ಮತ್ತೊಂದೂ ನನ್ನ ಅನುಭವಕ್ಕೆ ಗೋಚರವಾಗುವುದಿಲ್ಲ ॥೪೬॥

ಈ ಪ್ರಿಯೆಯಾದ ಅಹಲ್ಯೆಯೆಂಬುದೂ ಒಂದು ಮನಸ್ಸು; ಇಂದ್ರನೆಂಬುದೂ ಒಂದು ಮನಸ್ಸು. ಅಹಲ್ಯೆಯೆಂಬ ಮನಸ್ಸಿನೊಡನೆ ಸೇರಿಕೊಂಡಿರುವ ಇಂದ್ರನೆಂಬ ಮನಸ್ಸು, ತನ್ನ ಸ್ವಭಾವವನ್ನು ಬಿಟ್ಟು ಮತ್ತಾವುದನ್ನೂ ಹೊಂದುವುದೇ ಇಲ್ಲ ॥೪೭॥

ಅಯ್ಯಾ! ಭೂಪತಿಯೆ! ಧೀರನಾದವನ ಮನಸ್ಸು ಏಕಕಾರ್ಯನಿಷ್ಠಿತವಾಗಿರುವುದರಿಂದ, ಅದು ಮೇರುಪರ್ವತದಂತೆ ನಿಶ್ಚಲವಾಗಿರುವುದು. ಎಂತಹ ವರಬಲದಿಂದಲೂ ಎಂತಹ ಶಾಪಬಲದಿಂದಲೂ ಅದನ್ನು ಅಲ್ಲಾಡಿಸುವುದಕ್ಕಾಗಲಾರದು ॥೪೮॥

'ಹಾಗಾದರೆ ವರಕ್ಕೂ ಶಾಪಕ್ಕೂ ಫಲವೇ ಇಲ್ಲದಂತಾಗುವುದಲ್ಲವೆ!' ಎಂದರೆ,—ಹಾಗೆ ಹೇಳಬಾರದು. ವರಶಾಪಗಳ ಬಲದಿಂದ, ದೇಹವು ರೂಪಾಂತರವನ್ನು ಹೊಂದುವುದು. ಸಮಸ್ತವಾದ ವಿಕ್ಷೇಪಗಳನ್ನೂ ಗೆಲ್ಲಬೇಕೆಂದು ನೆಲೆಸಿರುವ ಧೀರವಾದ ಮನಸ್ಸಾದರೋ, ಯಾವ ವರಶಾಪಗಳಿಂದಲೂ ರೂಪಾಂತರ ಹೊಂದುವುದಿಲ್ಲ ॥೪೯॥

'ದೇಹವೇ ಮನಸ್ಸಿಗೆ ಕಾರಣವಾಗಿರುವುದರಿಂದ, ದೇಹವನ್ನು ಪೀಡಿಸಿದರೆ ಮನಸ್ಸಿಗೇಕೆ ಪೀಡೆಯುಂಟಾಗಬಾರದು?' ಎಂದರೆ,—ಅಯ್ಯಾ! ರಾಜ! ವೃಥಾ ಉತ್ಪನ್ನವಾದ ಈ ಶರೀರವೆಂಬ ಖಂಡಗಳು ಮನಸ್ಸಿಗೆ ಕಾರಣವೇ ಅಲ್ಲ. ಮತ್ತೇನೆನ್ನುವೆಯೋ?—ಸಮಸ್ತವಾದ ವನಪ್ರದೇಶದಲ್ಲಿರುವ ಲತೆಗಳ ರಸಕ್ಕೂ ನೀರೇ ಕಾರಣವಾಗಿರುವಂತೆ, ಈ ಸಮಸ್ತದೇಹಕ್ಕೂ ಮನಸ್ಸೇ ಕಾರಣವಾಗಿರುವುದು ॥೫೦॥

ಆದ್ಯಂ ಶರೀರಮಿಹ ವಿದ್ಧಿ ಮನೋ ಮಹಾತ್ಮನ್
ಸಙ್ಕಲ್ಪಿತೋ ಜಗತಿ ತೇನ ಶರೀರಸಙ್ಘಃ ।
ಆದ್ಯಂ ಶರೀರಮಧಿತಿಷ್ಠತಿ ಯತ್ರಯತ್ರ
ತತ್ತದ್ವ್ಯಶಂ ಫಲತಿ ನೇತರದಸ್ಯ ಪುಂಸಃ ॥೫೧॥
ಮುಖ್ಯಾಙ್ಕುರಂ ಸುಭಗ ವಿದ್ಧಿ ಮನೋ ಹಿ ಪುಂಸೋ
ದೇಹಾಸ್ತತಃ ಪ್ರವಿಸೃತಾಸ್ತರುಪಲ್ಲವಾಭಾಃ ।
ನಷ್ಟೇಙ್ಕುರೇ ಪುನರುದೇತಿ ನ ಪಲ್ಲವಶ್ರೀಃ
ನೈವಾಙ್ಕುರಃ ಕ್ಷಯಮುಪೈತಿ ದಳಕ್ಷಯೇಪಿ ॥೫೨॥
ದೇಹೇ ಕ್ಷತೇ ವಿವಿಧದೇಹಗಣಂ ಕರೋತಿ
ಸ್ವಪ್ನೇವನಾವಿವ ನವಂನವಮಾಶು ಚೇತಃ ।
ಚಿತ್ತೇ ಕ್ಷತೇ ತು ನ ಕರೋತಿ ಹಿ ಕಿಞ್ಚಿದೇವ
ದೇಹಸ್ತತಃ ಸಮನುಪಾಲಯ ಚಿತ್ತರತ್ನಮ್ ॥೫೩॥
ದಿಶಿದಿಶಿ ಹರಿಣಾಕ್ಷೀಮೇವ ಪಶ್ಯಾಮಿ ರಾಜನ್
ಪ್ರಿಯಯುವತಿಮನಸ್ತ್ವಾನ್ನಿತ್ಯಮಾನನ್ದಿತೋಽಸ್ಮಿ ।

ಎಲೈ ಮಹಾಪ್ರಭುವೆ! ಈ ಪ್ರಪಂಚದಲ್ಲಿ, ಮನಸ್ಸೇ ಆದಿಶರೀರವೆಂಬುದಾಗಿ ತಿಳಿ. ಈ ಜಗತ್ತಿನಲ್ಲಿರುವ ಶರೀರಸಮುದಾಯಗಳೆಲ್ಲವೂ ಅದರಿಂದಲೇ ಸಂಕಲ್ಪಿಸಲ್ಪಟ್ಟವುಗಳು. ಆದ್ಯ ಶರೀರವಾದ ಮನಸ್ಸು, ಎಲ್ಲೆಲ್ಲಿ 'ಅಹಂ' ಎಂಬ ಅಭಿಮಾನದಿಂದ ವರ್ತಿಸುವುದೋ, ಅದಮಾತ್ರವೇ ಪುರುಷನಿಗೆ ಚೆನ್ನಾಗಿ ಫಲಿಸುವುದು ; ಮತ್ತಾವುದೂ ಫಲಿಸುವುದಿಲ್ಲ ॥೫೧॥

ಎಲೈ ಸೌಭಾಗ್ಯವಂತನೆ! ಪುರುಷನಿಗೆ ಮನಸ್ಸೇ ಮುಖ್ಯವಾದ ಅಂಕುರವೆಂದು ತಿಳಿ. ಮೊಳಕೆಯಿಂದ ಮರದ ಚಿಗುರು ಪ್ರಸರಿಸುವಂತೆ, ಆ ಮನಸ್ಸಿನದೆಸೆಯಿಂದಲೇ ಸಮಸ್ತದೇಹಗಳೂ ಹೊರಟಿರುವುವು. ಪ್ರಪಂಚದಲ್ಲಿ, ಅಂಕುರವು ನಷ್ಟವಾಗಿಬಿಟ್ಟರೆ, ಮತ್ತೆ ಚಿಗುರು ಹುಟ್ಟುವುದೇ ಇಲ್ಲ. ಎಲೆಗಳು ಎಷ್ಟು ಕ್ಷಯಿಸಿದರೂ, ಮೊಳಕೆಮಾತ್ರ ಎಂದಿಗೂ ಕ್ಷಯಹೊಂದುವುದೇ ಇಲ್ಲ. ಇದು ಅನುಭವಸಿದ್ಧವಷ್ಟೆ! ಹೀಗೆ ದೇಹಗಳೆಷ್ಟು ನಾಶಹೊಂದಿದರೂ ಮನಸ್ಸಿಗೆ ನಾಶವಿಲ್ಲ. ಮನಸ್ಸು ನಾಶಹೊಂದಿಬಿಟ್ಟರೆ, ದೇಹವಿರುವುದೇ ಇಲ್ಲ ॥೫೨॥

ಅಯ್ಯಾ! ರಾಜ! ಈ ದೇಹವು ನಷ್ಟವಾದರೆ, ಮನಸ್ಸು, ಸ್ವಪ್ನಕಾಲದಲ್ಲಿಯೋಪಾದಿಯಲ್ಲಿ ಅನೇಕವಿಧವಾದ ದೇಹಸಮೂಹವನ್ನು ಹೊಸಹೊಸದಾಗಿ ಬೇಗನೆ ಸೃಷ್ಟಿಮಾಡುವುದು; ಚಿತ್ತವು ಕ್ಷಯಹೊಂದಿದರೋ, ದೇಹವು ಯಾವುದೊಂದನ್ನೂ ಮಾಡಲರಿಯದು, ಅದುಕಾರಣ, ಈ ಚಿತ್ತವೆಂಬ ರತ್ನವನ್ನು ಚೆನ್ನಾಗಿ ಕಾಪಾಡಿಕೊಳ್ಳುವವನಾಗು ॥೫೩॥

ಅಯ್ಯಾ! ದೊರೆಯೆ! ನಾನು ಪ್ರತಿಯೊಂದು ದಿಕ್ಕಿನಲ್ಲಿಯೂ ಈ ಮೃಗಾಕ್ಷಿಯಾದ ಅಹಲ್ಯೆಯನ್ನೇ ನೋಡುತಿರುವೆನು. ನನ್ನ ಮನಸ್ಸು ಕಾಂತಾಮಯವಾಗಿರುವುದರಿಂದ, ನಾನು ಸರ್ವದಾ

ತವ ಪುರ ಪ್ರಕೃತೀನಾಂ ಯತ್ ಫಲಂ ದುಃಖದಾಯಿ
ಕ್ಷಣಮಥ ಸುಚಿರಂ ತತ್ತನ್ನ ಪಶ್ಯಾಮಿ ಕಿಞ್ಚಿತ್ ॥೫೪॥

ಇತಿ ಉತ್ಪತ್ತಿಪ್ರಕರಣೇ ಇನ್ದ್ರಾಹಲ್ಯಾಖ್ಯಾನೇ ಕೃತ್ರಿಮೇನ್ದ್ರವಾಕ್ಯಂ
ನಾಮೈಕೋನನವತಿತಮಃ ಸರ್ಗಃ.

ಆನಂದಯುಕ್ತನಾಗಿಯೇ ಇರುವೆನು. ಹೀಗಿರುವುದರಿಂದ, ನಿನ್ನ ಪಟ್ಟಣಿಗರ ಮಧ್ಯದಲ್ಲಿ ದುಃಖಪ್ರದವಾದ ಕಶಾಘಾತಮುಂತಾದ ಯಾವ ಶಿಕ್ಷೆಯನ್ನು ನೀನು ಕ್ಷಣಕಾಲವಾಗಲಿ ಚಿರಕಾಲವಾಗಲಿ ಮಾಡಿಸಿದೆಯೋ,—ಅದೊಂದೂ ಸ್ವಲ್ಪವೂ ನನಗೆ ಗೊತ್ತೇ ಆಗಲಿಲ್ಲ ॥೫೪॥

ಇದು ಉತ್ಪತ್ತಿಪ್ರಕರಣದಲ್ಲಿ ಇಂದ್ರಾಹಲ್ಯೋಪಾಖ್ಯಾನದೊಳಗೆ ಕೃತ್ರಿಮೇಂದ್ರವಚನ
ನಿರೂಪಣವೆಂಬ ಎಂಭತ್ತೊಂಭತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ನವತಿತಮಃ ಸರ್ಗಃ.

ಭಾನುರುವಾಚ.

ಅಥೇನ್ದ್ರೇಣೈವಮುಕ್ತೋಽಸೌ ರಾಜಾ ರಾಜೀವಲೋಚನಃ ।
ಮುನಿಂ ಭರತನಾಮಾನಂ ಪಾರ್ಶ್ವಸಂಸ್ಥಮುವಾಚ ಹ ॥೧॥

ರಾಜೋವಾಚ.

ಭಗವನ್ ಸರ್ವಧರ್ಮಜ್ಞ ಪಶ್ಯಾಮಿ ಸುದುರಾತ್ಮನಃ ।
ಭೃಶಮಸ್ಯ ಮುಖೇ ಸ್ಫಾರಂ ಧಾರ್ಷ್ಟ್ಯಂ ಮದ್ದಾರಹಾರಿಣಃ ॥೨॥
ಪಾಪಾನುರೂಪಮಸ್ಯಾಶು ಶಾಪಂ ದೇಹಿ ಮಹಾಮುನೇ ।
ಯದವಧ್ಯವಧಾತ್ ಪಾಪಂ ವಧ್ಯತ್ಯಾಗಾತ್ ತದೇವ ಹಿ ॥೩॥
ಇತ್ಯುಕ್ತೋ ರಾಜಸಿಂಹೇನ ಭರತೋ ಮುನಿಸತ್ತಮಃ ।
ಯಥಾವತ್ ಪ್ರವಿಚಾರ್ಯಾಶು ಪಾಪಂ ತಸ್ಯ ದುರಾತ್ಮನಃ ॥೪॥
ಸಹಾನಯಾ ದುಷ್ಕೃತಿನ್ಯಾ ಭರ್ತೃದ್ರೋಹಾಭಿಭೂತಯಾ ।
ವಿನಾಶಂ ವ್ರಜ ದುರ್ಬುದ್ಧೇ ಇತಿ ಶಾಪಂ ವಿಸೃಷ್ಟವಾನ್ ॥೫॥

ಉತ್ಪತ್ತಿಪ್ರಕರಣದಲ್ಲಿ ತೊಂಭತ್ತನೆಯ ಸರ್ಗವು.

ಭರತಸ್ಯ ಮುನೇಃ ಶಾಪಾತ್ ನಷ್ಟಯೋರಪಿ ದೇಹಯೋಃ ।
ನ ಮಾನಸೀ ತನ್ಮಯತಾ ತಯೋರ್ನಷ್ಟೇತಿ ಕೀರ್ತ್ಯತೇ ॥

ಭರತನೆಂಬ ಮುನಿಯ ಶಾಪದಿಂದ ಆಯಿಂದ್ರಾಹಲ್ಯೆಯರಿಗೆ ದೇಹವು ನಷ್ಟವಾದರೂ ಮನಸ್ಸಿನಲ್ಲಿದ್ದ ತನ್ಮಯತ್ವವು ನಷ್ಟವಾಗಲಿಲ್ಲವೆಂದು ಈ ಸರ್ಗದಲ್ಲಿ ಹೇಳಲ್ಪಡುವುದು.

ಪುನಃ ಭಾನುವು ಬ್ರಹ್ಮನನ್ನು ಕುರಿತು ಹೇಳುವನು :—

ಅಯ್ಯಾ! ಬ್ರಹ್ಮನೆ! ಆಯಿಂದ್ರನಾಮಕನಾದ ಬ್ರಾಹ್ಮಣನಿಂದ ಆ ರೀತಿ ಹೇಳಲ್ಪಡಲಾಗಿ, ಕಮಲನೇತ್ರನಾದ ಆ ರಾಜನು, ತನ್ನ ಪಾರ್ಶ್ವದಲ್ಲಿದ್ದ ಭರತನೆಂಬ ಮುನಿಯನ್ನು ಕುರಿತು ಹೀಗೆ ಹೇಳಿದನು ॥೧॥

ಆ ರಾಜನು ಹೇಳಿದುದೇನೆಂದರೆ :—

ಭಗವಂತನೆ! ಸಕಲ ಧರ್ಮಗಳನ್ನೂ ತಿಳಿದಿರುವ ಭರತಮುನಿಯೆ! ನನ್ನ ಪತ್ನಿಯನ್ನು ಅಪಹರಿಸಿರುವ ಈ ದುರಾತ್ಮನಿಗೆ, ಬಾಯಿಯಲ್ಲಿಯೂ ಈಅತಿಶಯವಾದ ಧೃಷ್ಟತೆ ಕಾಣುವುದಲ್ಲ!॥

ಎಲೈ ಮಹಾಮುನಿಯೆ! ಇವನಿಗೆ ಪಾಪಕ್ಕೆ ತಕ್ಕಂತಹ ಶಾಪವನ್ನು ಕೊಡುವವನಾಗು. ಕೊಲ್ಲಬಾರದವರನ್ನು ಕೊಂದರೆ ಯಾವ ಪಾಪವು ಬರುವುದೋ, ಕೊಲ್ಲತಕ್ಕವರನ್ನು ಬಿಟ್ಟರೂ ಅದೇ ಪಾಪವೇ ಬರುವುದಲ್ಲವೆ! ॥೩॥

ಈರೀತಿಯಾಗಿ ಆ ರಾಜಶ್ರೇಷ್ಠನಿಂದ ಹೇಳಲ್ಪಟ್ಟ ಭರತಮುನಿಯು, ಆ ದುರಾತ್ಮನ ಪಾಪವನ್ನು ಯಥಾವತ್ತಾಗಿ ಚೆನ್ನಾಗಿ ಪರ್ಯಾಲೋಚಿಸಿ,—'ಎಲೈ ದುರ್ಬುದ್ಧಿಯಾದವನೆ! ಪತಿಗೆ ದ್ರೋಹಮಾಡಿದ ಪಾಪದಿಂದ ಲೋಕತಿರಸ್ಕೃತಳಾಗಿ ಮಹಾದುಷ್ಕೃತಪರಿಪೂರ್ಣಳಾಗಿರುವ ಈ ಅಹಲ್ಯೆಯೊಡನೆ ನೀನೂ ನಾಶಹೊಂದು' ಎಂದು ಶಾಪವನ್ನು ಕೊಟ್ಟನು ॥೪-೫॥

ತತಸ್ತೌ ರಾಜಭರತೌ ಪ್ರತ್ಯೂಚತುರಿದಂ ವಚಃ |
ಸುದುರ್ಮತೀ ಯುವಾಂ ಯಾಭ್ಯಾಂ ಕ್ಷಪಿತಂ ದುಶ್ಚರಂ ತಪಃ ||೬||
ಅನೇನ ಶಾಪದಾನೇನ ಕಿಞ್ಚಿದ್ಭವತಿ ನಾವಯೋಃ |
ದೇಹೇ ನಷ್ಟೇ ಸ ನೌ ಕಿಞ್ಚಿತ್ ನಶ್ಯತಿ ಸ್ವಾನ್ತರೂಪಯೋಃ ||೭||
ಸ್ವಾನ್ತಂ ಹಿ ನ ಹಿ ಕೇನಾಪಿ ಶಕ್ಯತೇ ನಾಶಿತುಂ ಕ್ವಚಿತ್ |
ಸೂಕ್ಷ್ಮತ್ವಾಚ್ಚಿನ್ಮಯತ್ವಾಚ್ಚ ದುರ್ಲಕ್ಷ್ಯತ್ವಾಚ್ಚ ವಿದ್ಧಿ ನೌ ||೮||

ಭಾನುರುವಾಚ.

ಸುಘನಸ್ನೇಹಸಮ್ಬದ್ಧಮನಸಸ್ತಾವೇವ ಶಾಪತಃ |
ಪತಿತೌ ಭೂತಲೇ ವೃಕ್ಷವಿಚ್ಯುತಾವಿವ ಪಲ್ಲವೌ ||೯||
ಅಥ ವ್ಯಸನಸಂಸಕ್ತೌ ಮೃಗಯೋನಿಮುಪಾಗತೌ |
ತತೋ ದ್ವಾವಪಿ ಸಂಸಕ್ತೌ ಭೂಯೋ ಜಾತೌ ವಿಹಙ್ಗಮೌ ||೧೦||
ಅಥಾಸ್ಮಾಕಂ ವಿಭೋ ಸರ್ಗೇ ಮಿಥಃಸಮ್ಬನ್ಧಭಾವನೌ |
ತಪಃಪರೌ ಮಹಾಪುಣ್ಯೌ ಜಾತೌ ಬ್ರಾಹ್ಮಣದಮ್ಪತೀ ||೧೧||

ಅನಂತರ, ಆಯಿಂದ್ರಾಹಲ್ಯೆಯರು ದೊರೆಯನ್ನೂ ಭರತಮುನಿಯನ್ನೂ ಕುರಿತು ಈ ಮಾತು ಹೇಳಿದರು:—ಅಯ್ಯಾ ರಾಜನೆ! ಎಲೈ ಭರತಮುನಿಯೆ! ನೀವಿಬ್ಬರೂ ಅತ್ಯಂತವಾಗಿ ಬುದ್ಧಿಹೀನರೆಂದು ನಮಗೆ ತೋರುವುದು. ಏಕೆಂದರೆ,—ನೀವಿಬ್ಬರೂ ಅಸಾಧ್ಯವಾದ ತಪಸ್ಸನ್ನು ಮಾಡಿದ್ದರೂ, ನಮಗೆ ಶಾಪಕೊಡುವುದಕ್ಕಾಗಿ ಅದನ್ನೆಲ್ಲ ಕಳೆದುಕೊಂಡುಬಿಟ್ಟಿರಿ ||೬||

ನಿಮ್ಮ ಈಶಾಪಪ್ರದಾನದಿಂದ, ನಮಗೇನೂ ಆಗುವುದಿಲ್ಲ. ಈ ದೇಹವು ನಷ್ಟವಾದ ಮಾತ್ರದಿಂದಲೇ, ಕೇವಲ ಮನೋರೂಪವಾಗಿರುವ ನಮಗೆ ಯಾವ ನಷ್ಟವೂ ಇಲ್ಲ ||೭||

ಮನಸ್ಸಾದರೆ, ಕೇವಲ ಸೂಕ್ಷ್ಮವಾಗಿಯೂ ಚಿನ್ಮಯವಾಗಿಯೂ ಕಣ್ಣಿಗೆ ಕಾಣಿಸತಕ್ಕುದಲ್ಲವಾಗಿಯೂ ಇರುವುದು. ಇಂತಹ ನಮ್ಮ ಮನಸ್ಸು ಯಾರಿಂದಲೂ ಯಾವಾಗಲೂ ನಾಶಪಡಿಸುವುದಕ್ಕೆ ಶಕ್ಯವಲ್ಲವೆಂದು ತಿಳಿಯಿರಿ.—ಎಂದು ಹೇಳಿದರು ||೮||

ಸೂರ್ಯನು ಬ್ರಹ್ಮನಿಗೆ ಹೇಳುವನು :—

ಅಯ್ಯಾ! ಬ್ರಹ್ಮ! ಹೀಗೆ ಮಹಾಸ್ನೇಹಯುಕ್ತವಾದ ಮನಸ್ಸುಳ್ಳವರಾಗಿ ಹೇಳುತ್ತಿರುವಾಗಲೇ, ಮರದ ದೆಸೆಯಿಂದ ಕೆಳಗೆ ಬಿದ್ದ ಚಿಗುರುಗಳಂತೆ, ಅವರಿಬ್ಬರೂ ಶಾಪಬಲದಿಂದ ಭೂಮಿಯಮೇಲೆ ಬಿದ್ದುಬಿಟ್ಟರು ||೯||

ಬಳಿಕ, ಅವರಿಬ್ಬರೂ ಕೇವಲ ವ್ಯಸನಾಕ್ರಾಂತರಾಗಿ ಜತೆಯಲ್ಲಿಯೇ ಮೃಗಯೋನಿಯನ್ನು ಹೊಂದಿದರು. ಆ ಜನ್ಮಕಳೆದನಂತರ, ಮತ್ತೆ ಕೂಡಿದವರಾಗಿ ಪಕ್ಷಿಗಳಾಗಿ ಹುಟ್ಟಿದರು||

ಹೇ ವಿಭೋ! ಆಮೇಲೆ, ಅವರಿಬ್ಬರೂ ನಮ್ಮ ಬ್ರಹ್ಮಾಂಡದಲ್ಲಿ ಪರಸ್ಪರ ಸಂಬಂಧವನ್ನು ಪರಿಭಾವಿಸುತ ತಪಶ್ಶಾಲಿಗಳಾಗಿ ಮಹಾಪುಣ್ಯವಂತರಾದ ಬ್ರಾಹ್ಮಣದಂಪತಿಗಳಾಗಿ ಹುಟ್ಟಿದರು||

ಭಾರತೋಪಿ ತಯೋಃ ಶಾಪಃ ಸ ಸ ಮರ್ಥೋ ಬಭೂವ ಹ ।
ಶರೀರಮಾತ್ರಾಕ್ರಮಣೇ ನ ಮನೋನಿಗ್ರಹೇ ಪ್ರಭೋ ॥೧೨॥
ತಾವದ್ಯಾಪಿ ಹಿ ತೇನೈವ ಮೋಹಸಂಸ್ಕಾರಹೇತುನಾ ।
ಯತ್ರಯತ್ರ ಪ್ರಜಾಯೇತೇ ಭವತಸ್ತತ್ರ ದಮ್ಪತೀ ॥೧೩॥
ಅಕೃತ್ರಿಮಪ್ರೇಮರಸಾನುವಿದ್ಧಂ ಸ್ನೇಹಂ ತಯೋಸ್ತಂ ಪ್ರತಿವೀಕ್ಷ್ಯ ಕಾನ್ತಮ್ ।
ವೃಕ್ಷಾ ಅಪಿ ಪ್ರೇಮರಸಾನುವಿದ್ಧಾಃ ಶೃಙ್ಗಾರಚೇಷ್ಟಾಕುಲಿತಾಭವನ್ತಿ ॥೧೪॥

ಇತಿ ಉತ್ಪತ್ತಿಪ್ರಕರಣೇ ಕೃತ್ರಿಮೇನ್ದ್ರಾಹಲ್ಯಾನುರಾಗೋ ನಾಮ
ನವತಿತಮಃ ಸರ್ಗಃ.

ಅಯ್ಯಾ ಪ್ರಭುವೆ! ಅಂತಹ ಮಹಾತ್ಮನಾದ ಭರತಮುನಿಯಿಂದ ಕೊಡಲ್ಪಟ್ಟ ಶಾಪವೂ ಕೂಡ, ಅವರಿಬ್ಬರ ಶರೀರಮಾತ್ರವನ್ನಾಕ್ರಮಿಸುವುದರಲ್ಲಿ ಸಾಮರ್ಥ್ಯವುಳ್ಳದಾಯಿತೇ ಹೊರತು, ಮನಸ್ಸನ್ನು ನಿಗ್ರಹಿಸುವುದರಲ್ಲಿ ಸಮರ್ಥವಾಗಲಿಲ್ಲ ॥೧೨॥

ಆ ಇಂದ್ರಾಹಲ್ಯೆಯರು, ಈಗಲೂ ಅದೇ ಮೋಹಸಂಸ್ಕಾರರೂಪವಾದ ಕಾರಣದಿಂದ, ಎಲ್ಲೆಲ್ಲಿ ಹುಟ್ಟುವರೋ—ಅಲ್ಲಲ್ಲಿ ದಂಪತಿಗಳಾಗಿಯೇ ಆಗುವರು ॥೧೩॥

ಹೀಗೆ ಅಕೃತ್ರಿಮವಾದ ಪ್ರೇಮರಸದಿಂದ ಪರಿಪೂರ್ಣವಾಗಿ ಅತಿರಮ್ಯವಾಗಿರುವ ಅವರಿಬ್ಬರ ಅನುರಾಗವನ್ನು ನೋಡಿ, ಜಡವಾದ ವೃಕ್ಷಗಳೂ ಕೂಡ, ಪ್ರೇಮರಸಪರಿಪೂರ್ಣಗಳಾಗಿ ಶೃಂಗಾರಚೇಷ್ಟೆಯಿಂದ ವ್ಯಾಕುಲಪಡುವುವು. ಹೀಗಿರುವಾಗ ಮನುಷ್ಯರ ವಿಷಯವನ್ನು ಹೇಳುವುದೇನಿದೆ ? ॥೧೪॥

ಇದು ಉತ್ಪತ್ತಿಪ್ರಕರಣದಲ್ಲಿ ಕೃತ್ರಿಮೇಂದ್ರಾಹಲ್ಯೆಯರ ಅನುರಾಗ ನಿರೂಪಣವೆಂಬ
ತೊಂಭತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕನವತಿತಮಃ ಸರ್ಗಃ.

ಭಾನುರುವಾಚ.

ತೇನೈತದ್ವಚ್ಮಿ ಭಗವನ್ ಯಥಾಕಾಲಂ ಮನೋ ಮುನೇ ।
ಅನಿಗ್ರಾಹ್ಯಮಭೇದ್ಯಂ ಚ ಶಾಪೈರಪಿ ದುರಾಸದೈಃ ॥೧॥
ಐನ್ದವಾನಾಮತಃ ಸೃಷ್ಟಿಕ್ರಮಾಣಾಂ ಪ್ರವಿನಾಶನಮ್ ।
ಯುಜ್ಯತೇ ನ ಚ ತದ್ಬ್ರಹ್ಮನ್ ಯುಕ್ತಮೇತನ್ಮಹಾತ್ಮನಃ ॥೨॥
ಕಿಂ ತದಸ್ತಿ ಜಗತ್ಯಸ್ಮಿನ್ ವಿವಿಧೇಷು ಜಗತ್ಸು ಚ ।
ತವಾಪಿ ನಾಥನಾಥಸ್ಯ ಯದ್ದೈನ್ಯಾಯ ಮಹಾತ್ಮನಃ ॥೩॥
ಮನೋ ಹಿ ಜಗತಾಂ ಕರ್ತೃ ಮನೋ ಹಿ ಪುರುಷಃ ಸ್ಮೃತಃ ।
ಯನ್ಮನೋನಿಶ್ಚಯಕೃತಂ ತದ್ದ್ರವ್ಯೌಷಧಿದಣ್ಡನೈಃ ।
ಹನ್ತುಂ ನ ಶಕ್ಯತೇ ಜನ್ತೋಃ ಪ್ರತಿಬಿಮ್ಬಂ ಮಣೇರಿವ ॥೪॥

ಉತ್ಪತ್ತಿಪ್ರಕರಣದಲ್ಲಿ ತೊಂಭತ್ತೊಂದನೆಯ ಸರ್ಗವು.

ಇಹ ಭಾನುಂ ಮನುಂ ಕೃತ್ವಾ ಧಾತುಃ ಸರ್ಗೋ ನಿರೂಪ್ಯತೇ ।
ಮನೋಮಾತ್ರವಿಲಾಸತ್ವಂ ವಿಶ್ವಸ್ಯೈನ್ದವಸರ್ಗವತ್ ॥

ಬ್ರಹ್ಮನು ಸೂರ್ಯನನ್ನು ಮನುವನ್ನಾಗಿ ಮಾಡಿಕೊಂಡು ಸೃಷ್ಟಿಮಾಡಿದುದೂ, ಪ್ರಪಂಚವು ಐಂದವಬ್ರಹ್ಮಾಂಡದಂತೆ ಕೇವಲ ಮನೋವಿಲಾಸಮಾತ್ರವೆಂಬುದೂ ಈ ಸರ್ಗದಲ್ಲಿ ನಿರೂಪಿಸಲ್ಪಡುವುವು.

ಮತ್ತೆ ಸೂರ್ಯನು ಬ್ರಹ್ಮನನ್ನು ಕುರಿತು ಹೇಳುವನು :—

ಎಲೈ ಪೂಜ್ಯನಾದ ಬ್ರಹ್ಮನೆ! ನಾನು ಇದುವರೆಗೆ ಹೇಳಿದಂತೆ ಭರತಮುನಿಯ ಶಾಪವು ಕೇವಲ ಶರೀರವ್ಯತ್ಯಾಸಮಾತ್ರದಲ್ಲಿ ಪರ್ಯವಸನ್ನವಾಗಿ ಮನೋನಿಗ್ರಹದಲ್ಲಿ ಸುತರಾಂ ಶಕ್ತಿಯಿಲ್ಲವಾಗಿಬಿಟ್ಟಕಾರಣ, ನಾನು ನಿನಗೆ ಈ ಮಾತನ್ನು ಹೇಳುವೆನು. ಈ ಮನಸ್ಸು, ಅತಿ ಪ್ರಬಲವಾದ ವರಶಾಪಗಳಿಂದಲಾದರೂ ಕೂಡ ನಿಗ್ರಹಿಸುವುದಕ್ಕೂ ಭೇದಿಸುವುದಕ್ಕೂ ಅಸಾಧ್ಯವಾದುದು ॥೧॥

ಅಯ್ಯಾ! ಬ್ರಹ್ಮ! ಅದುಕಾರಣ, ಈ ಐಂದವರ ಸೃಷ್ಟಿಗಳನ್ನು ನಾಶಪಡಿಸುವಿಕೆಯು ನಿನಗೆ ಸಾಧ್ಯವಲ್ಲ. ಮತ್ತು, ಮಹಾತ್ಮನಾದ ನಿನಗೆ ಅದು ಯುಕ್ತವೂ ಅಲ್ಲ ॥೨॥

ಆದರೆ, ನೀನು ಈ ವಿಷಯದಲ್ಲಿ ದೈನ್ಯವಹಿಸುವುದು ಸರಿಯಲ್ಲ. ದೇವದೇವನಾದ ನಿನಗೂ ದೈನ್ಯವನ್ನುಂಟುಮಾಡುವ ವಸ್ತುವು, ಈ ಜಗತ್ತಿನಲ್ಲಿ ಯಾವುದಿರುವುದು? ಅಥವಾ, ಇತರವಾದ ಸಮಸ್ತಬ್ರಹ್ಮಾಂಡಗಳಲ್ಲಿತಾನೆ ಯಾವುದಿರುವುದು? ॥೩॥

ಮನಸ್ಸೇ ಈ ಸಮಸ್ತ ಜಗತ್ತಿಗೂ ಕರ್ತೃವಾದುದು; ಮನಸ್ಸೇ ಪುರುಷನೆಂದು ಸರಶಾಸ್ತ್ರಗಳಲ್ಲಿಯೂ ಹೇಳಲ್ಪಟ್ಟಿರುವುದು. ಮನೋನಿಶ್ಚಯದಿಂದ ಯಾವುದು ಮಾಡಲ್ಪಡುವುದೋ, ಅದು—ಮಣಿಯ ಪ್ರತಿಬಿಂಬದಂತೆ—ದ್ರವ್ಯ ಔಷಧ ಮುಂತಾದುವುಗಳ ಪ್ರಯೋಗದಿಂದ ನಾಶಪಡಿಸಲು ಸಾಧ್ಯವಲ್ಲ ॥೪॥

ತಸ್ಮಾದೇತೇತ್ರ ತಿಷ್ಠನ್ತು ಭಾಸುರೈಃ ಸರ್ಗಸಮ್ಭ್ರಮೈಃ |
ತ್ವಂ ಸೃಷ್ಟ್ವೇಹ ಪ್ರಜಾಸ್ತಿಷ್ಠ ಬುದ್ಧ್ಯಾಕಾಶೋ ಹ್ಯನನ್ತಕಃ ||೫||
ಚಿತ್ತಾಕಾಶಶ್ಚಿದಾಕಾಶಃ ಆಕಾಶಶ್ಚ ತೃತೀಯಕಃ |
ಅನನ್ತಾಸ್ತ್ರಯಏವೈತೇ ಚಿದಾಕಾಶಪ್ರಕಾಶಿತಾಃ ||೬||
ಏಕಂ ದ್ವೌ ತ್ರೀನ್ ಬಹೂನ್ ವಾಪಿ ಕುರು ಸರ್ಗಾನ್ ಜಗತ್ಪತೇ |
ಸ್ವೇಚ್ಛಯಾತ್ಮನಿ ತಿಷ್ಠ ತ್ವಂ ಕಿಂ ಗೃಹೀತಂ ತವೈನ್ದವೈಃ ||೭||

ಬ್ರಹ್ಮೋವಾಚ.

ಅಥೈನ್ದವಜಗಜ್ಜಾಲೇ ಭಾನುನೈವಮುದಾಹೃತೇ |
ಮಯಾ ಸಞ್ಚಿನ್ತ್ಯ ಸುಚಿರಂ ಇದಮುಕ್ತಂ ಮಹಾಮುನೇ ||೮||
ಯುಕ್ತಮುಕ್ತಂ ತ್ವಯಾ ಭಾನೋ ವಿತತಂ ಹಿ ಕಿಲಾಮ್ಬರಮ್ |
ಮನಶ್ಚ ವಿತತಂ ವಾಪಿ ಚಿದಾಕಾಶಶ್ಚ ವಿಸ್ತೃತಃ ||೯||
ತದ್ಯಥಾಭಿಮತಂ ಸರ್ಗಂ ನಿತ್ಯಕರ್ಮ ಕರೋಮ್ಯಹಮ್ |
ಕಲ್ಪಯಾಮಿ ಬಹೂನ್ಯಾಶು ಭೂತಜಾಲಾನಿ ಭಾಸ್ಕರ ||೧೦||

ಅದುಕಾರಣ, ಇವರು ಇಲ್ಲಿರಲಿ; ನೀನು ಅತಿಮನೋಹರವಾದ ಸೃಷ್ಟಿಪ್ರಕ್ರಮಗಳಿಂದ ಪ್ರಜೆಗಳನ್ನು ಸೃಷ್ಟಿಮಾಡಿ, ಈ ನಿನ್ನ ಬ್ರಹ್ಮಾಂಡದಲ್ಲಿರು. ಇವರು ಮಾಡಿರುವ ಸೃಷ್ಟಿಗಿಂತ ವ್ಯತ್ಯಾಸವಾಗಿ ಸೃಷ್ಟಿಮಾಡುವುದು ನಿನಗೆ ಅಸಾಧ್ಯವಲ್ಲ. ಬುದ್ಧಿಯೆಂಬುದು ಅನಂತವಾಗಿರುವುದು ||೫||

ಚಿತ್ತಾಕಾಶ ಚಿದಾಕಾಶ ಮಹಾಕಾಶ—ಈ ಮೂರೂ ಅನಂತವಾದುವುಗಳೇಯೆ. ಇವೆಲ್ಲಕ್ಕೂ ಚಿದಾಕಾಶವೇ ಪ್ರಕಾಶವುಂಟುಮಾಡತಕ್ಕುದು ||೬||

ಅಯ್ಯಾ ಜಗನ್ನಾಯಕನೆ! ನೀನು, ಒಂದು--ಅಥವಾ ಎರಡು—ಇಲ್ಲದಿದ್ದರೆ ಮೂರು—ಇನ್ನೂ ಹೆಚ್ಚಾಗಿಬೇಕಾದರೆ ಅಸಂಖ್ಯಾಕವಾದ—ಪ್ರಪಂಚಗಳನ್ನು ಸೃಷ್ಟಿಮಾಡಿ, ನಿನ್ನಲ್ಲಿ ನೀನೇ ಸಂತೋಷದಿಂದಿರು. ಐಂದವರು ನಿನ್ನದಾವುದನ್ನು ತೆಗೆದುಕೊಂಡರು? ಅವರಿಂದ ನಿನಗೇನು ಹಾನಿಯಾಯಿತ್ತು? ||೭||

ಬ್ರಹ್ಮನು ವಸಿಷ್ಠರನ್ನು ಕುರಿತು ಹೇಳುವನು:—

ಅಯ್ಯಾ ವಸಿಷ್ಠಮಹರ್ಷಿಯೆ! ಈ ರೀತಿಯಾಗಿ ಬ್ರಹ್ಮನು ಐಂದವರ ಪ್ರಪಂಚಸಮುದಾಯವನ್ನು ಹೇಳಲಾಗಿ, ಅನಂತರ ನಾನು ಬಹಳಹೊತ್ತು ಯೋಚಿಸಿ ಈ ಮಾತನ್ನು ಹೇಳಿದೆನು ||೮||

ಎಲೈ ಸೂರ್ಯನೆ! ನೀನು ಹೇಳಿದುದು ಯುಕ್ತವಾಗಿರುವುದು. ಆಕಾಶವು ಅತಿವಿಸ್ತಾರವಾಗಿರುವುದು. ಮನಸ್ಸೂ ವಿಸ್ತಾರವಾಗಿರುವುದು. ಆ ಚಿದಾಕಾಶವೂ ವಿಸ್ತಾರವಾಗಿಯೇ ಇರುವುದು ||೯||

ಅದುಕಾರಣ, ಎಲೈ ಭಾಸ್ಕರನೆ! ನಾನು ನನ್ನ ಮನಸ್ಸಿಗೆ ತೋರಿದಂತೆ ಸೃಷ್ಟಿರೂಪವಾದ ನಿತ್ಯಕರ್ಮವನ್ನು ಮಾಡುವೆನು. ಅನೇಕವಾದ ಭೂತಜಾತಗಳನ್ನು ಕಲ್ಪಿಸುವೆನು ||೧೦||

ತತ್ ತ್ವಮೇವಾಶು ಭಗವನ್ ಪ್ರಥಮೋ ಮೇ ಮನುರ್ಭವ |
ಕುರು ಸರ್ಗಂ ಯಥಾಕಾಮಂ ಮಯಾ ಸಮಭಿಚೋದಿತಃ ||೧೧||
ಅಥೈತತ್ ಸ ಮಹಾತೇಜಾಃ ಮಮ ವಾಕ್ಯಂ ಪ್ರಭಾಕರಃ |
ಅಙ್ಗೀಕೃತ್ಯ ದ್ವಿಧಾತ್ಮಾನಂ ಚಕಾರ ತಪತಾಂ ವರ ||೧೨||
ಏಕೇನ ಪ್ರಾಕ್ತನೇನಾಸ್ಮಿನ್ ವಪುಷಾ ಸೂರ್ಯತಾಂ ಗತಃ |
ವ್ಯೋಮಾಧ್ವಗತಯಾ ಸರ್ಗೇ ತತಾನ ದಿವಸಾವಳಿಮ್ ||೧೩||
ಮನ್ಮನುತ್ವಂ ದ್ವಿತೀಯೇನ ಕೃತ್ವಾ ಸ್ವವಪುಷಾ ಕ್ಷಣಾತ್ |
ಸಸರ್ಜ ಸಕಲಾಂ ಸೃಷ್ಟಿಂ ತಾಂತಾಮಭಿಮತಾಂ ಮಮ ||೧೪||
ಏತತ್ ತೇ ಕಥಿತಂ ಸರ್ವಂ ವಸಿಷ್ಠ ಮನಸೋ ಮುನೇ |
ಸ್ವರೂಪಂ ಸರ್ವಕೃತ್ತ್ವಂ ಚ ಶಕ್ತತ್ವಂ ಚ ಮಹಾತ್ಮನಃ ||೧೫||
ಪ್ರತಿಭಾಸಮುಪಾಯಾತಿ ಯದ್ಯದಸ್ಯ ಹಿ ಚೇತಸಃ |
ತತ್ತತ್ ಪ್ರಕಟತಾಮೇತಿ ಸ್ಥೈರ್ಯಂ ಸಫಲತಾಮಪಿ ||೧೬||
ಸಾಮಾನ್ಯಬ್ರಾಹ್ಮಣಾಭೂತ್ವಾ ಪ್ರತಿಭಾಸವಶಾತ್ ಕಿಲ |
ಐನ್ದವಾಬ್ರಹ್ಮತಾಂ ಯಾತಾಃ ಮನಸಃ ಪಶ್ಯ ಶಕ್ತತಾಮ್ ||೧೭||
ಯಥಾ ಚೈನ್ದವಜೀವಾಸ್ತೇ ಚಿತ್ತತ್ವಾದ್ಬ್ರಹ್ಮತಾಂ ಗತಾಃ |

ಆದುದರಿಂದ, ಎಲೈ ಭಗವಂತನೆ! ನನ್ನ ಸೃಷ್ಟಿಗೆ ನೀನೇ ಮೊದಲನೆಯ ಮನುವಾಗು. ಬಳಿಕ ನನ್ನಿಂದ ಪ್ರೇರಿಸಲ್ಪಟ್ಟು ಯಥೇಚ್ಛವಾಗಿ ಸೃಷ್ಟಿಮಾಡು ॥೧೧॥

ತಪಸ್ವಿಗಳಲ್ಲಿ ಶ್ರೇಷ್ಠನಾದ ಎಲೈ ವಸಿಷ್ಠನೆ! ಬಳಿಕ ಮಹಾತೇಜಸ್ವಿಯಾದ ಆ ಸೂರ್ಯನು ನನ್ನ ಮಾತನ್ನು ಅಂಗೀಕರಿಸಿ, ತನ್ನ ಸ್ವರೂಪವನ್ನು ಎರಡುವಿಧವಾಗಿ ಮಾಡಿಕೊಂಡನು ॥೧೨॥

ಅವುಗಳಲ್ಲೊಂದಾದ ಮೊದಲಿದ್ದ ಶರೀರದಿಂದ, ಈ ಪ್ರಪಂಚದಲ್ಲಿ ಸೂರ್ಯನೆಂದು ಹೇಳಿಸಿಕೊಳ್ಳುತ, ಅಂತರಿಕ್ಷಮಾರ್ಗದಲ್ಲಿದ್ದುಗೊಂಡು, ದಿನಪಂಕ್ತಿಯನ್ನು ಮಾಡುತಿದ್ದನು ॥೧೩॥

ಎರಡನೆಯದಾದ ಶರೀರದಿಂದ, ಆಕ್ಷಣವೇ ನನ್ನ ಸೃಷ್ಟಿಯಲ್ಲಿ ಮನುವಾಗಿ, ನನಗಿಷ್ಟವಾದ ಆಯಾ ಸಮಸ್ತಸೃಷ್ಟಿಯನ್ನೂ ಮಾಡಿದನು ॥೧೪॥

ಅಯ್ಯಾ ವಸಿಷ್ಠಮುನಿಯೆ! ಇದೋ ಈರೀತಿಯಾಗಿ ಮನಸ್ಸಿನ ಸ್ವರೂಪವೂ ಸರ್ವಕರ್ತೃತ್ವವೂ ಸಾಮರ್ಥ್ಯವೂಕೂಡ ನನ್ನಿಂದ ನಿನಗೆ ಹೇಳಲ್ಪಟ್ಟಿರುವುದು ॥೧೫॥

ಈ ಮನಸ್ಸಿಗೆ ಯಾವಯಾವುದು ಪ್ರತಿಭಾಸಿಸುತದೆಯೋ, ಅದದು ಆ ರೀತಿಯಾಗಿ ಪ್ರಕಟವಾಗುವುದು; ಆ ರೀತಿಯಾಗಿಯೇ ಸ್ಥೈರ್ಯಹೊಂದುವುದು; ಆ ರೀತಿಯಾಗಿ ಸಫಲವೂ ಆಗುವುದು ॥೧೬॥

ಐಂದವರು ಕೇವಲ ಸಾಮಾನ್ಯಬ್ರಾಹ್ಮಣರಾಗಿಯೇ ಇದ್ದುಗೊಂಡು, ಮನಸ್ಸಿನ ಪ್ರತಿಭಾಶಕ್ತಿಯಿಂದಲೇ ಬ್ರಹ್ಮತ್ವವನ್ನು ಹೊಂದಿದರಲ್ಲವೆ! ಮನಸ್ಸಿನ ಶಕ್ತಿಯನ್ನು ನೋಡು ॥೧೭॥

ಆ ಐಂದವ ಜೀವರುಗಳು ಹೇಗೆ ಮನಶ್ಶಕ್ತಿಯಿಂದ ಬ್ರಹ್ಮತ್ವವನ್ನು ಪಡೆದರೋ, ನಾವೂ

ವಯಂ ತಥೈವ ಚಿದ್ಭಾವಾತ್ ಚಿತ್ತತ್ವಾದ್ಬ್ರಹ್ಮತಾಂ ಗತಾಃ ||೧೮||
ಚಿತ್ತಂ ಹಿ ಪ್ರತಿಭಾಸಾತ್ಮ ಯಚ್ಚ ತತ್ಪ್ರತಿಭಾಸನಮ್ |
ತದಿದಂ ಭಾತಿ ದೇಹಾದಿ ಸ್ವಾನ್ತಂ ನಾನ್ಯಾಸ್ತಿ ದೇಹದೃಕ್ ||೧೯||
ಚಿತ್ತಮಾತ್ಮಚಮತ್ಕಾರಂ ತಚ್ಚ ತತ್ ಕುರುತೇ ಸ್ವತಃ |
ಯಥಾವತ್ಸಂಭವಂ ಸ್ವಾತ್ಮನ್ಯೇವಾನ್ತರ್ಮರಿಚಾದಿವತ್ ||೨೦||
ತದೇತಚ್ಚಿತ್ತವದ್ಭಾತಂ ಆತಿವಾಹಿಕನಾಮಕಮ್ |
ತದೇವೋದಾಹರನ್ತ್ಯೇವಂ ದೇಹಾನಾಮ್ನಾ ಘನಭ್ರಮಮ್ ||೨೧||
ಕಥ್ಯತೇ ಜೀವನಾಮ್ನೈತತ್ ಚಿತ್ತಂ ಪ್ರತನುವಾಸನಮ್ |
ಶಾನ್ತದೇಹಚಮತ್ಕಾರಂ ಜೀವಂ ವಿದ್ಧಿ ಕ್ರಮಾತ್ ಪರಮ್ ||೨೨||
ನಾಹಂ ನ ಚಾನ್ಯದಸ್ತೀಹ ಚಿತ್ರಂ ಚಿತ್ತಮಿದಂ ಸ್ಥಿತಮ್ |
ವಸಿಷ್ಠೈನ್ದವಸಂವಿದ್ವತ್ ಅಸತ್ ಸತ್ತಾಮಿವಾಗತಮ್ ||೨೩||
ಯಥೈನ್ದವಮನೋ ಬ್ರಹ್ಮ ತಥೈವಾಯಮಹಂ ಸ್ಥಿತಃ |
ತತ್ಕೃತಂ ಚಾಹಮೇವೇದಂ ಸಙ್ಕಲ್ಪಾತ್ಮೈವ ಭಾಸತೇ ||೨೪||

ಹಾಗೆಯೇ ಚಿದ್ಭಾವದಿಂದ ಚಿತ್ತಭಾವವನ್ನು ಹೊಂದಿ, ಚಿತ್ಶಕ್ತಿಯಿಂದ ಬ್ರಹ್ಮತ್ವವನ್ನು ಹೊಂದಿರುವೆವು ||೧೮||

ಚಿತ್ತವೆಂಬುದು ಕೇವಲ ಪ್ರತಿಭಾಸ್ವರೂಪವಾದುದು. ಅದರ ಪ್ರತಿಭಾಸವಾವುದುಂಟೋ, ಅದೇ ಈ ದೇಹಾದಿರೂಪವಾಗಿ ಭಾಸಿಸುವುದು. ಅಂತು, ಸಕಲವೂ ಮನಸ್ಸೇ ಹೊರತು, ಅದಕ್ಕಿಂತ ಬೇರೆಯಾದ ದೇಹಾದಿಜ್ಞಾನವಿಲ್ಲವೇ ಇಲ್ಲ ||೧೯||

ಚಿತ್ತವು ತನ್ನಲ್ಲಿಯೇ ನಾನಾವಿಧಕಲ್ಪನೆಗಳನ್ನು ಮಾಡತಕ್ಕುದು. ಮೆಣಸು ಕಾರವಾಗಿಯೂ—ಬೇವು ಕಹಿಯಾಗಿಯೂ—ದ್ರಾಕ್ಷೆ ಸಿಹಿಯಾಗಿಯೂ ಇರುವಹಾಗೆ, ಆ ಚಿತ್ತವು ತನೊಳಗೆಯೇ ಯಥಾಸಂಭವವಾಗಿ ನಾನಾವಿಧಕಲ್ಪನೆಗಳನ್ನು ಮಾಡುತಿರುವುದು ||೨೦||

ಈ ಚಿತ್ತವೇ ಆತಿವಾಹಿಕ (ಸೂಕ್ಷ್ಮ) ದೇಹವೆಂಬ ಹೆಸರಿನಿಂದ ಭಾಸಮಾನವಾಗುವುದು. ಇದನ್ನೇ, ಭ್ರಮೆ ದೃಢವಾದಹಾಗೆಲ್ಲ—ಸ್ಥೂಲದೇಹವೆಂದೂ ಕರೆಯುವರು ||೨೧||

ವಾಸನೆ ಸೂಕ್ಷ್ಮಸ್ಥಿತಿಗೆ ಬಂದಾಗ, ಈ ಚಿತ್ತವೇ ಜೀವನೆಂಬ ಹೆಸರಿನಿಂದ ಕರೆಯಲ್ಪಡುವುದು. ಹೀಗಿರುವುದರಿಂದ, ದೇಹವೆಂಬ ಕಲ್ಪನೆಯು ಶಾಂತವಾದಾಗ ಪರಬ್ರಹ್ಮನೇ ಜೀವನೆಂದು ಕರೆಯಲ್ಪಡುವನೆಂಬುದಾಗಿ ತಿಳಿ ||೨೨||

ಅಯ್ಯಾ! ವಸಿಷ್ಠ! ಅಂತು, ನಾನೆಂಬುದೂ ಇಲ್ಲ; ಅಥವಾ ಮತ್ತಾವುದೂ ಇಲ್ಲ. ಈ ವಿಚಿತ್ರವಾದ ಚಿತ್ತವೊಂದೇ ಇರುವುದು. ಐಂದವಜ್ಞಾನದಂತೆ, ಅಸತ್ಯವೇ ಸದ್ಭಾವಹೊಂದಿದಂತೆ ಕಾಣುವುದು ||೨೩||

ಆ ಐಂದವರ ಮನಸ್ಸು ಹೇಗೋ, ಹಾಗೆಯೇ ನಾನೂ ಬ್ರಹ್ಮರೂಪನಾಗಿದ್ದೆನು. ಅವರಿಂದ ಮಾಡಲ್ಪಟ್ಟ ಸೃಷ್ಟಿಯೂ ಕೂಡ, ಕೇವಲ ಸಂಕಲ್ಪಮಾತ್ರರೂಪವಾಗಿರುವುದರಿಂದ, ಅದೂ ನನ್ನ ಚಿತ್ತರೂಪವೇ ಆದಂತಾಯಿತು ||೨೪||

ಕಶ್ಚಿಚ್ಚಿತ್ತವಿಲಾಸೋಽಯಂ ಬ್ರಹ್ಮಾಹಮಿಹ ಸಂಸ್ಥಿತಃ ।
ಸ್ವಭಾವಮೇವ ದೇಹಾದಿ ವಿದ್ಧಿ ಶೂನ್ಯತರಾತ್ಮ ಖಾತ್ ॥೨೫॥
ಶುದ್ಧಚಿತ್ ಪರಮಾರ್ಥೈಕರೂಪಿಣೀತ್ಯೇವ ಭಾವನಾತ್ ।
ಜೀವೋ ಭೂಯೋ ಮನೋ ಭೂತ್ವಾ ವೇತ್ತೀತ್ಥಂ ದೇಹತಾಂ ಮುಧಾ ॥
ಸರ್ವಮೈನ್ದವಸಂಸಾರವದಿದಂ ಭಾತಿ ಚಿದ್ವಪುಃ ।
ಸಮ್ಪನ್ನಸಮ್ಪ್ರಬೋಧಾತ್ಮಾ ಸ್ವಪ್ನೋ ದೀರ್ಘಃ ಸ್ವಶಕ್ತಿಜಃ ॥೨೭॥
ದ್ವಿಚನ್ದ್ರವಿಭ್ರಮಾಕಾರಂ ತನ್ಮಾತ್ರಾಭಾಸಪೂರ್ವಕಮ್ ।
ಐನ್ದವಾಮ್ಬರವದ್ರೂಢಂ ಚಿತ್ತಾದೇವಾಖಿಲಂ ಭವೇತ್ ॥೨೮॥
ನ ಸನ್ನಾಸದಹಂರೂಪಂ ಸತ್ತಾಸತ್ತೇ ತದೇವ ಚ ।
ಉಪಲಮ್ಭೇನ ಸದ್ರೂಪಂ ಅಸತ್ಯಂ ತದ್ವಿರೋಧತಃ ॥೨೯॥
ಜಡಾಜಡಂ ಮನೋ ವಿದ್ಧಿ ಸಙ್ಕಲ್ಪಾತ್ಮಬೃಹದ್ವಪುಃ ।

ಯಾವುದೋ ಒಂದು ಚಿತ್ತವಿಲಾಸವೇ, ಇಲ್ಲಿ ಈ ಬ್ರಹ್ಮನೆಂಬ ನನ್ನ ರೂಪವಾಗಿರುವುದು. ಹೀಗೆ ಈ ದೇಹಾದಿ ವಸ್ತುಜಾತವು ಸ್ವಭಾವತಃ ಆಕಾಶಕ್ಕಿಂತಲೂ ಶೂನ್ಯತಮವಾದುದೆಂದು ತಿಳಿ ॥೨೫॥

'ಶುದ್ಧವಾದ ಚಿತ್ತು ಪರಮಾರ್ಥತಃ ಏಕರೂಪವಾದುದು' ಎಂದು ತಿಳಿವಳಿಕೆಯುಂಟಾಗಿಬಿಟ್ಟರೆ, ಆಗ ಈ ಜೀವನು ಪುನಃ ಮನಸ್ಸಾಗಿ ದೇಹಾದ್ಯವಸ್ಥೆಯನ್ನನುಭವಿಸುವುದಿಲ್ಲ ॥೨೬॥

ಈ ಚಿತ್ತಿನ ಸ್ವರೂಪವು, ಆ ಐಂದವಬ್ರಹ್ಮಾಂಡದಂತೆ ಸರ್ವರೂಪವಾಗಿ ಸ್ಫುರಿಸುವುದು. ನಮ್ಮ ಅಜ್ಞಾನಶಕ್ತಿಯಿಂದುತ್ಪನ್ನವಾದ ದೀರ್ಘಕಾಲಿಕಸ್ವಪ್ನವು, ಜಾಗ್ರದವಸ್ಥೆಯಂತೆ ಸುರಿಸುವುದೇ ಇದಕ್ಕುದಾಹರಣೆಯು ॥೨೭॥

ನಮ್ಮ ನೇತ್ರದೋಷದಿಂದ, ಅಂತರಿಕ್ಷದಲ್ಲಿ ಎರಡು ಚಂದ್ರಮಂಡಲಗಳಿರುವಂತೆ ನೋಡುವೆವಲ್ಲವೆ! ಐಂದವರ ಬ್ರಹ್ಮಾಂಡವಿಷಯವಂತೂ ಗೊತ್ತೇ ಇದೆಯಷ್ಟೆ! ಇವುಗಳಂತೆ, ಪಂಚತನ್ಮಾತ್ರ ಪೂರ್ವಕವಾಗಿ ಸಮಸ್ತಪ್ರಪಂಚಜಾತವೂ ಚಿತ್ತದದೆಸೆಯಿಂದಲೇ ಉಂಟಾಗುವುದು॥

'ಚಿತ್ತವು ಉದಾಸೀನವಾಗಿದ್ದು ಇದರಿಂದಲೇ ಸಮಸ್ತವೂ ರೂಢವಾಗಿದ್ದಪಕ್ಷದಲ್ಲಿ, ಇದು ದೇಹಾದಿಗಳಲ್ಲಿ ಅಹಂಭಾವವನ್ನಿಟ್ಟು ಅನುದಾಸೀನಸ್ವರೂಪವನ್ನು ತೋರ್ಪಡಿಸುತಿರುವುದು ಹೇಗೆ?' ಎಂದರೆ,—ಈ ಚಿತ್ತವು ಅಹಂಭಾವವುಳ್ಳುದಾಗಿ ಅನುಭವಗೋಚರವಾಗುವುದಾವುದುಂಟೋ, ಅದು—ಸತ್ಯವಾದುದಲ್ಲ. ಏಕೆಂದರೆ,—ಚಿತ್ತಕಾರ್ಯಗಳಲ್ಲೆಲ್ಲ ಇದು ಗೋಚರವಾಗುವುದಿಲ್ಲ. ಅಸತ್ಯವಾದುದೋ ಎಂದರೆ—ಹಾಗೂ ಹೇಳಲಾಗದು. ಅತ್ಯಂತಾಸತ್ಯವಾದರೆ, ಆಗ ಅದು ಅನುಭವವಿಷಯವಾಗದಿರಬೇಕಾದೀತು. ವಸ್ತುತಃ ಸತ್ತಾದುದು ಎಂದಿಗೂ ಸತ್ತಾಗಿಯೇ ಇರುವುನು. ಅಸತ್ತಾದರೆ ಅದು ಅಸತ್ತಾಗಿಯೇ ಇರುವುದು. ಈ ಚಿತ್ತದ ಅಹಂಭಾವವಾದರೋ, ಒಂದು ನಿಯತಸ್ವಭಾವವುಳ್ಳುದಾಗಿಲ್ಲ. ಕೆಲವುಕಡೆ ಗೋಚರವಾಗುವುದರಿಂದ ಸದ್ರೂಪವಾಗಿಯೂ, ಮತ್ತೆ ಕೆಲವು ಕಡೆ ಗೋಚರವಾಗದಿರುವುದರಿಂದ ಅಸದ್ರೂಪವಾಗಿಯೂ ಇರುವುದು. ಹೀಗಿರುವುದರಿಂದ, ಇದು ಕೇವಲ ಮಾಯಿಕಸ್ವಭಾವವೆಂದು ತಿಳಿಯಬೇಕು ॥೨೯॥

ಹೀಗೆಯೇ ಈ ಮನಸ್ಸನ್ನು ಜಡವನ್ನಾಗಿಯೂ ಅಜಡವನ್ನಾಗಿಯೂ ತಿಳಿಯಬೇಕು. ಇದು ಸಂಕಲ್ಪಾತ್ಮಕವಾಗಿ ಮಹಾ ವಿಸ್ತಾರವಾದ ಆಕಾರವುಳ್ಳುದಾಗಿರುವುದು. ಬ್ರಹ್ಮರೂಪವಾಗಿರು

ಅಜಡಂ ಬ್ರಹ್ಮರೂಪತ್ವಾತ್ ಜಡಂ ದೃಶ್ಯಾತ್ಮತಾವಶಾತ್ ‖೨೦‖
ದೃಶ್ಯಾನುಭವಸತ್ಯಾತ್ಮ ನ ಸದ್ಭಾವೇ ವಿಲಾಸಿ ತತ್ |
ಕಟಕತ್ವಂ ಯಥಾ ಹೇಮ್ನಿ ತಥಾ ಬ್ರಹ್ಮಣಿ ಸಂಸ್ಥಿತಮ್ ‖೨೧‖
ಸರ್ವತ್ವಾದ್ಬ್ರಹ್ಮಣಃ ಸರ್ವಂ ಜಡಂ ಚಿನ್ಮಯಮೇವ ಚ |
ಅಸ್ಮದಾದಿಶಿಲಾನ್ತಾತ್ಮ ನ ಜಡಂ ನ ಚ ಚೇತನಮ್ ‖೨೨‖
ದಾರ್ವಾದೀನಾಮಚಿತ್ತ್ವೇನ ನೋಪಲಮ್ಭಸ್ಯ ಸಮ್ಭವಃ |
ಉಪಲಮ್ಭೋ ಹಿ ಸದೃಶಸಮ್ಬನ್ಧಾದೇವ ಜಾಯತೇ ‖೨೩‖
ಉಪಲಬ್ಧೇರಜಡಂ ವಿದ್ಧಿ ತೇನೇದಂ ಸರ್ವಮೇವ ಹಿ |
ಉಪಲಮ್ಭೋ ಹಿ ಸದೃಶಸಮ್ಬನ್ಧಾತ್ ಸ್ಯಾತ್ ಸಮಾತ್ಮನೋಃ ‖೨೪‖
ಜಡಚೇತನಭಾವಾದಿಶಬ್ದಾರ್ಥಶ್ರೀರ್ನ ವಿದ್ಯತೇ |
ಅನಿರ್ದೇಶ್ಯಪದೇ ಪತ್ರಲತಾದೀವ ಮಹಾಮರೌ ‖೨೫‖

ವುದರಿಂದ ಇದು ಅಜಡವೆಂಬುದಾಗಿಯೂ, ದೃಶ್ಯರೂಪವಾಗಿರುವುದರಿಂದ ಇದು ಜಡವೆಂಬುದಾಗಿಯೂ ಏರ್ಪಟ್ಟಿರುವುದು ‖೨೦‖

ಆ ಮನಸ್ಸು, ದೃಶ್ಯಾನುಭವಕಾಲದಲ್ಲಿ ದೃಶ್ಯದಂತೆ ಸತ್ಯವಾಗಿ ತೋರುವುದು. ಬ್ರಹ್ಮಾನುಭವಕಾಲದಲ್ಲಿಯಾದರೋ, ಪೃಥಕ್ಕಾಗಿ ಸ್ಫುರಿಸತಕ್ಕ ಸ್ವಭಾವವಿಲ್ಲದಕಾರಣ ಇದು ಬ್ರಹ್ಮವೆಂದೇ ಗೊತ್ತಾಗುವುದು. ಇದಕ್ಕೊಂದುದಾಹರಣೆಯನ್ನು ಕೇಳು :— ಸುವರ್ಣವು, ಕಡಗವೆಂದು ತಿಳಿಯಲ್ಪಡುವಾಗ ಪ್ರಥಗ್ರೂಪವಾಗಿಯೂ, ಸುವರ್ಣವೆಂದು ತಿಳಿಯಲ್ಪಡುವಾಗ ಅಭಿನ್ನರೂಪವಾಗಿಯೂ ಕಾಣುವುದಲ್ಲವೆ! ‖೨೧‖

ಮತ್ತು, ಬ್ರಹ್ಮನು ಸರ್ವರೂಪನಾಗಿರುವುದರಿಂದ, ಸರ್ವವೂ ಜಡವಾಗಿಯೂ ಚಿನ್ಮಯವಾಗಿಯೂ ಆಗುವುದು. ನಾನು (ಚತುರ್ಮುಖಬ್ರಹ್ಮ) ಮೊದಲಾಗಿ ಒಂದು ಶಿಲೆಯವರೆಗಿನ ಸಮಸ್ತ ದೃಶ್ಯವೂ— ಜಡವೂ ಅಲ್ಲ; ಚೇತನವೂ ಅಲ್ಲ ‖೨೨‖

ಇದು ಜಡವೆಂದಾಗಲಿ—ಅಥವಾ ಚೇತನವೆಂದಾಗಲಿ– ವ್ಯವಸ್ಥೆಮಾಡುವುದೇ ಸಾಧ್ಯವಲ್ಲ. ಹೇಗೆಂದರೆ :—ಒಂದು ಪದಾರ್ಥವು ನಮ್ಮನುಭವಕ್ಕೆ ಬರಬೇಕಾದರೆ, ನಮ್ಮ ಅಂತಃಕರಣವೃತ್ತಿಯು ಅದರಲ್ಲಿ ಪ್ರವೇಶಿಸಿ—ತದಾಕಾರವಾಗಿ ಪರಿಣಮಿಸಬೇಕಾಗಿರುವುದು. ಹೀಗೆ ಪರಸ್ಪರ ಅನುಗುಣವಾದ ಸಂಬಂಧದಿಂದಲೇ ಪದಾರ್ಥಜ್ಞಾನವುಂಟಾಗುವುದು. ಕಾಷ್ಠಪಾಷಾಣ ಮುಂತಾದುವುಗಳು ಕೇವಲ ಜಡವೆಂದಿಟ್ಟುಕೊಂಡರೆ, ಆಗ ಜಡವಾದ ಕಾಷ್ಠಾದಿಗಳನ್ನು ಅಜಡವಾದ ಚಿತ್ತವೃತ್ತಿಯು ಗ್ರಹಿಸುವುದೆಂಬುದು ಅನುಪಪನ್ನವಾಗುವುದು ‖೨೩‖

ಅಯ್ಯಾ ವಸಿಷ್ಠ! ಮೇಲೆಹೇಳಿದಂತೆ ಅನುಗುಣಸಂಬಂಧದಿಂದಲೇ ವಸ್ತುಜ್ಞಾನವುಂಟಾಗಬೇಕಾಗಿರುವ ಕಾರಣ, ಈ ಕಾಷ್ಠಪಾಷಾಣಗಳ ಜ್ಞಾನವುಂಟಾದಾಗ ಅವೆಲ್ಲವೂ ಚಿತ್ತವೃತ್ತಿಯಲ್ಲಿ ಏಕೀಭವಿಸಿರುವುದರಿಂದ, ಅವು ಚೇತನವಾದ ಪೃಥಕ್ಪದಾರ್ಥವೆಂದು ನಿರ್ಣಯಿಸುವುದೂ ಅಸಾಧ್ಯವಾಗಿರುವುದೆಂದು ತಿಳಿ ‖೨೪‖

ದೊಡ್ಡ ಮರುಭೂಮಿಯಲ್ಲಿ ಪತ್ರ ಲತೆ ಮುಂತಾದ ವ್ಯವಹಾರವೊಂದೂ ಇಲ್ಲದಿರುವಂತೆ, ಇದು ಹೀಗಿದೆಯೆಂದು ನಿರ್ದೇಶಿಸುವುದಕ್ಕಸಾಧ್ಯವಾದ ಆ ಪರಮಪದದಲ್ಲಿ—ಜಡ ಚೇತನ ಇತ್ಯಾದಿ ಶಬ್ದಗಳ ಅರ್ಥವೇ ಸುತರಾಂ ಇಲ್ಲ ‖೨೫‖

ಚಿತೋ ಯಚ್ಚೇತ್ಯಕಲನಂ ತನ್ಮನಸ್ತ್ವಮುದಾಹೃತಮ್ |
ಚಿದ್ಭಾಗೋತ್ರಾಜಡೋ ಭಾಗೋ ಜಾಡ್ಯಮತ್ರ ಹಿ ಚೇತ್ಯತಾ ||೩೬||

ಚಿದ್ಭಾಗೋತ್ರಾವಬೋಧಾಂಶೋ ಜಡಂ ಚೇತ್ಯಂ ಹಿ ದೃಶ್ಯತೇ |
ಇತಿ ಜೀವೋ ಜಗದ್ಭ್ರಾನ್ತಿಂ ಪಶ್ಯನ್ ಗಚ್ಛತಿ ಲೋಲತಾಮ್ ||೩೭||

ಚಿತ್ತಸ್ಥಏವ ಭಾವೋಽಸೌ ಶುದ್ಧಏವ ದ್ವಿಧಾಕೃತಃ |
ಅತಃ ಸರ್ವಂ ಜಗತ್ ಸೈವ ದ್ವೈತಲಬ್ಧಂ ಚ ಸೈವ ತತ್ ||೩೮||

ಸ್ವಮೇವಾನ್ಯತಯಾ ದೃಷ್ಟ್ವಾ ಚಿತಿರ್ದೃಶ್ಯತಯಾ ವಪುಃ |
ನಿರ್ಭಾಗಾಪ್ಯೇಕಭಾಗಾಭಂ ಭ್ರಮತೀವ ಭ್ರಮಾತುರಾ ||೩೯||

ನ ಭ್ರಾನ್ತಿರಸ್ತಿ ಭ್ರಮಭಾಕ್ ನಾನ್ಯೈವೇತೀಹ ನಿಶ್ಚಯಃ |
ಪರಿಪೂರ್ಣಾರ್ಣವಪ್ರಖ್ಯಾ ವೇತ್ತೀತ್ಥಂ ಸಂಸ್ಥಿತಾ ಚಿತಿಃ ||೪೦||

ಸರ್ವಂ ಸ್ಯಾಜ್ಜಾಡ್ಯಮಪ್ಯಸ್ಯಾಃ ಚಿತಿಶ್ಚಿತ್ತ್ವಂ ಚ ವೇತ್ಸಿ ತತ್ |
ಚಿದ್ಭಾಗೋಂಶೋವಬೋಧಸ್ಯ ತ್ವಹನ್ತಾ ಜಡತೋದಯಃ ||೪೧||

ಅಯ್ಯಾ ವಸಿಷ್ಠ ! ಚಿತ್ತು–ಚೇತ್ಯಗಳನ್ನು ಕಲ್ಪಿಸುವುದಾವುದುಂಟೋ, ಅದೇ ಮನಸ್ಸೆಂಬ ಸ್ಥಿತಿಯೆಂದು ದೊಡ್ಡವರು ಹೇಳಿರುವರು. ಈ ಮನಸ್ಸಿನಲ್ಲಿ, ಚಿದಂಶ ಜಡಾಂಶಗಳೆರಡೂ ಇರುವುವು. ಆದರಲ್ಲಿ ಚಿತ್ತಿನ ಅಂಶವು ಅಜಡಭಾಗವಾಗಿಯೂ, ಚೇತ್ಯತ್ವವು ಜಡಭಾಗವಾಗಿಯೂ ಇರುವುವು ||೩೬||

ಇದರಲ್ಲಿ (ಮನಸ್ಸಿನಲ್ಲಿ), ಜ್ಞಾನಭಾಗವಾವುದುಂಟೋ—ಅದು ಚಿದ್ಭಾಗವು. ಚೇತ್ಯಭಾಗವಾವುದುಂಟೋ—ಅದು ಜಡಭಾಗವು. ಹೀಗೆ ಜೀವನು ಜಗತ್ತೆಂಬ ಭ್ರಾಂತಿಯನ್ನು ಅನುಭವಿಸುತ, ಅದರಲ್ಲಿಯೇ ಆಸಕ್ತನಾಗಿ ಬಿಡುವನು ||೩೭||

ಹೀಗೆ ಚಿತ್ತದಲ್ಲಿರುವ ಶುದ್ಧವಾದ ಚಿತ್ಸ್ವಭಾವವೇ, ಚಿತ್ತವೆಂದೂ ಜಗತ್ತೆಂದೂ ಎರಡು ವಿಧವಾಗಿ ಮಾಡಲ್ಪಟ್ಟಿರುವುದು. ಆದುಕಾರಣ, ಈ ಸಮಸ್ತ ಜಗತ್ತೂ ಚಿತ್ತೇಯೇ. ಇದು ಭಿನ್ನಭಿನ್ನವಾಗಿ ಅನುಭವಕ್ಕೆ ಬಂದರೂ, ವಸ್ತುತಃ ಚಿತ್ತೇಯೇ ||೩೮||

ಈ ಚಿತ್ತು, ತನ್ನ ಆಕಾರವನ್ನೇ—ಪ್ರತ್ಯೇಕವಾದ ದೃಶ್ಯವೆಂದು ತಿಳಿದು, ವಸ್ತುತಃ ತನ್ನೊಳಗೆ ಭೇದಗಳಿಲ್ಲದಿದ್ದರೂ, ತನ್ನಿಂದ ಕಲ್ಪಿತವಾದ ಭೇದಜ್ಞಾನಕ್ಕನುಗುಣವಾಗಿ ಭ್ರಮೆಪಡುತಿರುವುದು ||೩೯||

ವಸ್ತುತಃ ಭ್ರಮೆಯೂ ಇಲ್ಲ; ಭ್ರಮೆಪಡತಕ್ಕ ಪುರುಷನೂ ಇಲ್ಲ. ಇದೇ ನಿಶ್ಚಯವು. ಪೂರ್ಣಸಮುದ್ರದಂತೆ ಗಂಭೀರವಾಗಿರುವ ಚಿತ್ತು, ಒಂದೊಂದು ಸಮಯದಲ್ಲಿ ಈರೀತಿಯಾದ ಕಲ್ಪನೆಯನ್ನೆಲ್ಲ ಮಾಡುವುದು ||೪೦||

ಈ ಚಿತ್ತಿನ ಜಡತ್ವವೆಂಬುದೂ ಚಿತ್ತೇ ಹೊರತು ಬೇರೆಯಾಗಿಲ್ಲ. ಈ ಜಡತ್ವದಲ್ಲಿ ಚಿತ್ತ್ವವಿರುವುದೂ ನಿನಗೇ ಗೊತ್ತಾಗುವುದು. ಇದರಲ್ಲಿರುವ ಚಿದ್ಭಾಗವೇ ಜ್ಞಾನದ ಅಂಶವು; ಅಹಂಕಾರವೇ ಜಡತ್ವದ ಅಂಶವು ||೪೧||

ಅಹನ್ತಾದಿ ಪರೇ ತತ್ತ್ವೇ ಮನಾಗಪಿ ನ ವಿದ್ಯತೇ |
ಊರ್ಮ್ಯಾದೀವ ಪೃಥಕ್ ತೋಯೇ ಸಂವಿತ್ಸಾರಂ ಹಿ ತದ್ಯತಃ ||೪೨||
ಅಹಂಪ್ರತ್ಯಯಸಂದೃಶ್ಯಂ ಚೇತ್ಯಂ ವಿದ್ಧಿ ಸಮುತ್ಥಿತಮ್ !
ಮೃಗತೃಷ್ಣಾಮ್ಬುವಾನ್ತಸ್ಥಂ ನೂನಂ ವಿದ್ಯತಏವ ನೋ ||೪೩||
ಅಹಂತಾಪದಮನಾತ್ಮಪದಂ ವಿದ್ಧಿ ನಿರಾಮಯಮ್ |
ವಿದಂ ವಿದುರಹನ್ತಾದಿ ಶೈತ್ಯಮೇವ ಯಥಾ ಹಿಮಮ್ ||೪೪||
ಚಿತ್ಯೈವ ಚೇತ್ಯತೇ ಜಾಡ್ಯಂ ಸ್ವಪ್ನೇ ಸ್ವಮರಣೋಪಮಮ್ |
ಸರ್ವಾತ್ಮತ್ವಾತ್ ಸರ್ವಶಕ್ತೇಃ ಕುರ್ವತೀ ನೈತಿ ಸಾಮ್ಯತಾಮ್ ||೪೫||
ಮನಃಪದಾರ್ಥಾದಿತಯಾ ಸರ್ವರೂಪಂ ವಿಜೃಮ್ಭತೇ |
ನಾನಾತ್ಮಾ ಚಿತ್ತದೇಹೋಯಂ ಆಕಾಶವಿಶದಾಕೃತಿಃ ||೪೬||
ದೇಹಾದಿದೇಹಪ್ರತಿಭಾರೂಪಾತ್ಮ್ಯಂ ತ್ಯಜತಾ ಸತಾ |
ವಿಚಾರ್ಯಂ ಪ್ರತಿಭಾಸಾತ್ಮ ಚಿತ್ತಂ ಚಿತ್ತೇನ ವೈ ಸ್ವಯಮ್ ||೪೭||
ಚಿತ್ತತಾಮ್ರೇ ಶೋಧಿತೇ ಹಿ ಪರಮಾರ್ಥಸುವರ್ಣತಾಮ್ |

ಆ ಪರಮತತ್ವವು ಕೇವಲ ಜ್ಞಾನೈಕಸಾರವಾಗಿರುವುದರಿಂದ, ನೀರಿನಲ್ಲಿ ಪೃಥಕ್ಕಾಗಿ ಅಲೆ ಮುಂತಾದುವಿಲ್ಲದಿರುವಂತೆ, ಆ ಪರತತ್ವದಲ್ಲಿ ಅಹಂಕಾರ ಮುಂತಾದುದೊಂದೂ ಇಲ್ಲ ॥೪೨॥

ಈ ಅಹಂಕಾರಪ್ರತ್ಯಯದಿಂದ ಕಾಣಿಸಿಕೊಳ್ಳುತಿರುವ ಚೇತ್ಯವನ್ನು, ಮೃಗತೃಷ್ಣಿಕಾಜಲದಂತೆ ಉತ್ಪನ್ನವಾಗಿರುವುದೆಂದು ತಿಳಿಯುವನಾಗು. ವಸ್ತುತಃ ಒಳಗೆ ಇದು ಇಲ್ಲವೇಇಲ್ಲ ॥೪೩॥

ಅಯ್ಯಾ ವಸಿಷ್ಠ! ಸಕಲವಿಧವಾದ ದ್ವೈತದಿಂದಲೂ ಅಬಾಧ್ಯವಾಗಿರುವ ಆತ್ಮವಸ್ತುವನ್ನು, ಅಹಂಕಾರಾಶ್ರಯವಲ್ಲದುದನ್ನಾಗಿ ತಿಳಿ. ಶೈತ್ಯವೇ ಹಿಮವಾಗಿರುವಂತೆ, ಚಿತ್ತೇ ಅಹಂಕಾರಾದಿ ರೂಪವಾಗಿರುವುದೆಂದು ಪಂಡಿತರ ಅಭಿಪ್ರಾಯವು ॥೪೪॥

ಸ್ವಪ್ನದಲ್ಲಿ ತನ್ನ ಮರಣವನ್ನು ತಾನೇ ಕಾಣುವಂತೆ, ಜಡತ್ವವೆಂಬುದೂ ಚಿತ್ತಿನಿಂದಲೇ ಪ್ರಕಾಶಕ್ಕೆ ಬರುವುದು. ಆ ಚಿತ್ತು, ಸ್ವಯಂ ಸರ್ವಾತ್ಮಕವಾಗಿ ಸರ್ವಶಕ್ತಿಗಳನ್ನೂ ಮಾಡುತ್ತಿರುವುದಾದಕಾರಣ, ಜ್ಞಾನದಾರ್ಢ್ಯವುಂಟಾದಹೊರತು ಸಾಮ್ಯಸ್ಥಿತಿಯನ್ನು ಹೊಂದುವುದಿಲ್ಲ ॥೪೫॥

ನಾನಾವಿಧವಾದ ಆಕಾರವುಳ್ಳುದಾಗಿ ಆಕಾಶದಂತೆ ನಿರ್ಮಲವಾಗಿರುವ ಈ ಚಿತ್ತ (ಸೂಕ್ಷ್ಮ) ದೇಹವು, ಮನಸ್ಸು ಮುಂತಾದ ಪದಾರ್ಥರೂಪವಾಗಿ ವಿಜೃಂಭಿಸುತ್ತಿರುವುದು ॥೪೬॥

ಇದನ್ನು ತಿಳಿಯುವ ಬಗೆ ಹೇಗೆಂದರೆ:—ಈ ಚಿತ್ತವು, ಸ್ಥೂಲದೇಹಮುಂತಾದುವನ್ನೂ ದೇಹರೂಪವಾದ ಪ್ರತಿಭೆಯನ್ನೂ ನಿಶ್ಶೇಷವಾಗಿ ಪರಿಹರಿಸಿ, ತನ್ನನ್ನು ತಾನೇ ಕೇವಲ ಪ್ರತಿಭಾಸಜನ್ಯವಾದುದೆಂದು ವಿಚಾರಮಾಡಿಕೊಳ್ಳಬೇಕು ॥೪೭॥

ಚಿತ್ತವೆಂಬುದೇ ಒಂದು ತಾಮ್ರಖಂಡವು. ಇದು ಚೆನ್ನಾಗಿ ಶೋಧಿಸಲ್ಪಟ್ಟರೆ, ಪರಮಾರ್ಥವೆಂಬ ಸುವರ್ಣರೂಪವನ್ನು ಹೊಂದುವುದು. ಹೀಗಾಗಿಬಿಟ್ಟಮೇಲೆ, ದೇಹ

ಗತೇಽಕೃತ್ರಿಮಆನನ್ದಃ ಕಿಂ ದೇಹೋಪಲಖಣ್ಡಕೈಃ ||೪೮||

ಯದ್ವಿದ್ಯತೇ ಶೋಧ್ಯತೇ ತದ್ಬೋಧಃ ಕೇ ಚ ಖಪಾದಪಾಃ |
ದೇಹಾದ್ಯವಿದ್ಯಾ ಸತ್ಯಾ ಚೇತ್ ಯುಕ್ತ ಏತಾಂ ಪ್ರತಿ ಗ್ರಹಃ ||೪೯||

ಅಸತ್ಯವಿನಿವಿಷ್ಟಾನಾಂ ದೇಹವಾಚಿತಯಾ ತ್ವಿಹ |
ಯೇ ನಾವೋಽಪದಿಶನ್ತ್ಯಜ್ಞಾಃ ಕಿಞ್ಚಿತ್ ತೇ ಪುರುಷೈಡಕಾಃ ||೫೦||

ಯಥೈತದ್ಭಾವಯೇತ್ ಸ್ವಾನ್ತಂ ತಥೈವ ಭವತಿ ಕ್ಷಣಾತ್ |
ದೃಷ್ಟಾನ್ತೋಽತ್ರೈನ್ದವಾಹಲ್ಯಾಕೃತ್ರಿಮೇನ್ದ್ರಾದಿನಿಶ್ಚಯಾಃ ||೫೧||

ಯದ್ಯದ್ಯಥಾ ಸ್ಫುರತಿ ಸುಪ್ರತಿಭಾತ್ಮ ಚಿತ್ತಂ
ತತ್ತತ್ ತಥಾ ಭವತಿ ದೇಹತಯೋದಿತಾತ್ಮಾ |
ದೇಹೋಽಯಮಸ್ತಿ ನ ನ ಚಾಹಮಿತಿ ಸ್ವರೂಪಂ
ವಿಜ್ಞಾನಮೇಕಮವಗಮ್ಯ ನಿರಿಚ್ಛ ಆಸ್ವ ||೫೨||

ವೆಂಬ ಕಲ್ಲುಚೂರುಗಳಿಂದ ಪ್ರಯೋಜನವೇನು ? ಅವುಗಳನ್ನು ಶುದ್ಧಿಮಾಡುವ ಪ್ರಯತ್ನವೇಕೆ? ||೪೮||

ವಸ್ತುತಃ ಯಾವುದಿರುವುದೋ, ಅದು ಶೋಧಿಸಲ್ಪಡುವುದು ; ಅದನ್ನು ತಿಳಿದುಕೊಳ್ಳುವಿಕೆಯೇ ಸಫಲವಾದುದು. ಅದಲ್ಲದೆ, ಆಕಾಶದಲ್ಲಿ ಕಲ್ಪಿಸಿಕೊಂಡ ವೃಕ್ಷಗಳು ಶೋಧಿಸಲ್ಪಡುವುದನ್ನು ಯಾರು ನೋಡುವರು? ದೇಹಾದಿಭ್ರಾಂತಿಯು ಸತ್ಯವಾಗಿದ್ದಪಕ್ಷದಲ್ಲಿ, ಇದರ ವಿಷಯದಲ್ಲಿ ಶೋಧನೆ ಮಾಡಬೇಕೆಂಬ ಅಭಿನಿವೇಶವು ಯುಕ್ತವಾಗುತ್ತಿದ್ದಿತು. ಅದೇ ಇಲ್ಲದಮೇಲೆ ಇದಕ್ಕಾಗಿ ಅಭಿನಿವೇಶವೇತಕ್ಕೆ? ||೪೯||

ಹೀಗಿರುವುದರಿಂದ, ಶ್ರುತಿಯಲ್ಲಿ ಆತ್ಮಾದಿಶಬ್ದಗಳನ್ನು ದೇಹದಲ್ಲಿ ಉಪಯೋಗಿಸಿದ್ದರೂ, ವಸ್ತುತಃ ಆ ಶಬ್ದಗಳು ದೇಹವಾಚಕಗಳಲ್ಲ. ಆದುದರಿಂದಲೇ ದೇಹಾತ್ಮವಾದವು ಸುತರಾಂ ದುಷ್ಟವು. ಯಾರು ಅಸತ್ಯವಾದ ದೇಹಾತ್ಮವಾದದಲ್ಲಿ ಅಭಿನಿವೇಶವುಳ್ಳವರಾಗಿರುವ ನಾಸ್ತಿಕ ಚಾರ್ವಾಕಾದಿಗಳಿಗೆ— ಆತ್ಮಾದಿ ಶಬ್ದಗಳು ದೇಹವಾಚಕಗಳೆಂದುಪದೇಶಿಸುವರೋ, ಅಂತಹ ಅಜ್ಞಾನಿಗಳು ಕೇವಲ ಪುರುಷಪಶುಗಳೆಂದು ತಿಳಿಯಬೇಕು ||೫೦||

ಮುಖ್ಯವಾಗಿ, ನಮ್ಮ ಮನಸ್ಸು ಹೇಗೆ ಭಾವಿಸುವುದೋ, ಹಾಗೆಯೇ ಒಂದುಕ್ಷಣದೊಳಗಾಗಿ ಆಗಿಬಿಡುವುದು. ಈ ವಿಷಯದಲ್ಲಿ, ಐಂದವರು ಅಹಲ್ಯೆ ಕೃತ್ರಿಮೇಂದ್ರ—ಇತ್ಯಾದಿ ಪುರುಷರ ಮನೋನಿಶ್ಚಯವೇ ದೃಷ್ಟಾಂತವು||೫೧||

ಚಿತ್ತವು ಕೇವಲ ಪ್ರತಿಭಾರೂಪವಾದುದು. ಹೀಗಿರುವುದರಿಂದ, ಯಾವಯಾವ ಚಿತ್ತವು ಹೇಗೆಹೇಗೆ ಸ್ಫುರಿಸುವುದೋ, ಅದದು ಆಯಾ ದೇಹರೂಪವಾಗಿ ಉದಯಿಸಿದಂತೆ ಆಗುವುದು. ಅಯ್ಯಾ ವಸಿಷ್ಠ! ಈ ದೇಹವೂ ಇಲ್ಲ; ಅಹಂ ಎಂಬ ಪದಾರ್ಥವೂ ಇಲ್ಲ. ನೀನು ಅದ್ವಿತೀಯವಾದ ವಿಜ್ಞಾನವಸ್ತುವನ್ನು ತಿಳಿದುಕೊಂಡು, ಯಾವವಿಧವಾದ ಇಚ್ಛೆಯೂ ಇಲ್ಲದವನಾಗಿರು ||೫೨||

ದೇಹೋಽಯಮೇಷ ಚ ಕಿಲಾಯಮಿತಿ ಸ್ವಭಾವಾತ್
ದೇಹೋಽಯಮೇತದಖಿಲಂ ತತಪತಿ ನಾಶಮ್ ।
ಯಕ್ಷಾದಿಕಲ್ಪನವಶಾದ್ಭಯಮೇತಿ ಬಾಲೋ
ನಿರ್ಯಕ್ಷದೇಹಗತಏವ ಕಯಾಪಿ ಯುಕ್ತ್ಯಾ ॥೫೭॥

ಇತಿ ಉತ್ಪತ್ತಿಪ್ರಕರಣೇ ಜೀವಾವತರಣಕ್ರಮೋಪದೇಶೋ ನಾಮ
ಏಕನವತಿತಮಃ ಸರ್ಗಃ.

ಪ್ರಪಂಚದಲ್ಲಿ, ವಸ್ತುತಃ ಬಾಲಕನಿಗೆಯಾವವಿಧವಾದ ದುರ್ಗ್ರಹಬಾಧೆಯೂ ಇಲ್ಲದಿದ್ದರೂ, ಅವನು ಏನೋ ಒಂದು ಕಾರಣದಿಂದ 'ತಾನು ಯಕ್ಷಗೃಹೀತನಾಗಿರುವೆನು' ಎಂದು ತಿಳಿದುಕೊಳ್ಳುವ ಮಾತ್ರದಿಂದಲೇ, ಅವನಿಗೆ ಆ ಬಾಧೆಯುಂಟಾಗುವುದಲ್ಲವೆ! ಹೀಗೆಯೇ, ಇದು ದೇಹವೆಂದೂ—ಇದು ದೇಹಭೋಗ್ಯವಾದ ವಸ್ತುಜಾತವೆಂದೂ—ಕಲ್ಪನೆಯುಂಟಾದಾಗ, ಇವೆಲ್ಲವೂ ಗೋಚರವಾಗುವುವು; ಆ ಕಲ್ಪನೆಯು ಸತ್ಯವೆಂದು ಜ್ಞಾನವುಂಟಾದಾಗ, ಎಲ್ಲವೂ ಲಯಹೊಂದುವುದು ॥೫೭॥

ಇದು ಉತ್ಪತ್ತಿಪ್ರಕರಣದಲ್ಲಿ ಜೀವಾವತರಣಕ್ರಮೋಪದೇಶವೆಂಬ
ತೊಂಭತ್ತೊಂದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವಿನವತಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಇತ್ಯುಕ್ತವಾನ್ ಸ ಭಗವಾನ್ ಮಯಾ ಕಮಲಸಮ್ಭವಃ ।
ರಘೂದ್ವಹ ಪುನಃ ಪೃಷ್ಟೋ ವಾಕ್ಯಮಾಕ್ಷಿಪ್ಯ ಭೂತಪಃ ॥೧॥
ತ್ವಯೈವ ಭಗವನ್ ಪ್ರೋಕ್ತಾಃ ಶಾಪಮನ್ತ್ರಾದಿಶಕ್ತಯಃ ।
ಅಮೋಘಾ ಇತಿ ತಾಏವ ಕಥಂ ಮೋಘಾಃ ಕೃತಾಃ ಪುನಃ ॥೨॥
ಶಾಪೇನ ಮನ್ತ್ರವೀರ್ಯೇಣ ಮನೋಬುದ್ಧೀನ್ದ್ರಿಯಾಣ್ಯಪಿ ।
ಸರ್ವಾಣ್ಯೇವ ವಿಮೂಢಾನಿ ದೃಷ್ಟಾನಿ ಕಿಲ ಜನ್ತುಷು ॥೩॥
ಯಥೈತೌ ಪವನಸ್ಪನ್ದೌ ಯಥಾ ಸ್ನೇಹತಿಲೌ ತಥಾ ।
ಅಭಿನ್ನೌ ತದ್ವದೇವೇತೌ ಮನೋದೇಹೌ ಸಏವ ತತ್ ॥೪॥

ಉತ್ಪತ್ತಿಪ್ರಕರಣದಲ್ಲಿ ತೊಂಭತ್ತೆರಡನೆಯ ಸರ್ಗವು.

ಇಹಾಕ್ಷಿಪ್ಯ ಮನಶ್ಶಕ್ತಿಃ ಅಮೋಘಾ ಸ್ಥಾಪ್ಯತೇ ದೃಢಾ ।
ದಾರ್ಢ್ಯೇ ಪುರುಷಯತ್ನಸ್ಯ ಯಥೇಷ್ಟಾರೋಪಣಕ್ಷಮಾ ॥

ಪುರುಷಪ್ರಯತ್ನವು ದೃಢವಾಗಿದ್ದಪಕ್ಷದಲ್ಲಿ ಮನಶ್ಶಕ್ತಿಯನ್ನು ಇಷ್ಟಾನುಸಾರವಾಗಿ ಉಪಯೋಗಿಸುವುದು ಸಾಧ್ಯವೆಂದೂ, ಇದು ಎಂದಿಗೂ ವ್ಯರ್ಥವಲ್ಲವೆಂದೂ, ದೃಢತಮವೆಂದೂ ಕೂಡ, ಈ ಸರ್ಗದಲ್ಲಿ ಆಕ್ಷೇಪಣಪುರಸ್ಸರವಾಗಿ ಸ್ಥಿರಪಡಿಸಲ್ಪಡುವುದು.

ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು :—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಹೇಳುತಿರುವ ಪೂಜ್ಯನಾದ ಆ ಚತುರ್ಮುಖನನ್ನು ಕುರಿತು, ನಾನು ಅವನ ವಾಕ್ಯವನ್ನು ಆಕ್ಷೇಪಿಸಿ ಮತ್ತೆ ಪ್ರಶ್ನೆಮಾಡಿದೆನು ॥೧॥

ನಾನು ಪ್ರಶ್ನೆಮಾಡಿದುದೇನೆಂದರೆ :—ಹೇ ಭಗವನ್! ಶಾಪ ಮಂತ್ರ ಮುಂತಾದುವುಗಳ ಶಕ್ತಿಯು ಎಂದಿಗೂ ವ್ಯರ್ಥವಲ್ಲವೆಂದು ನೀನೇ ಹೇಳಿರುವೆ. ಈಗ ಅವುಗಳೆಲ್ಲವೂ ವ್ಯರ್ಥವೆಂದು ನೀನು ಹೇಳುವುದು ಹೇಗೆ? ॥೨॥

ಶಾಪದಿಂದಲೂ, ಮಂತ್ರಶಕ್ತಿಯಿಂದಲೂ, ಪ್ರಾಣಿಗಳ ಮನಸ್ಸು ಬುದ್ಧಿ ಇಂದ್ರಿಯ ಮುಂತಾದುವುಗಳೆಲ್ಲವೂ ಸಂಪೂರ್ಣವಾಗಿ ಮೂಢವಾಗಿರುವುದನ್ನು ನಾವು ಅನೇಕವಾಗಿ ನೋಡಿರುವೆವು ॥೩॥

ವಾಯುವೂ ಚಲನೆಯೂ ಹೇಗೆ ಪರಸ್ಪರ ಭೇದರಹಿತಗಳಾಗಿರುವುವೋ, ಎಣ್ಣೆಯೂ ಎಳ್ಳೂ ಹೇಗೆ ಭೇದರಹಿತವಾಗಿರುವುವೋ, ಹಾಗೆ ಈ ಮನಸ್ಸೂ ದೇಹವೂ ಪರಸ್ಪರ ಭೇದವಿಲ್ಲದುವಾಗಿರುವುವು. ಹೀಗೆ ದೇಹವೇ ಮನಸ್ಸಾಗಿರುವುದು ॥೪॥

ಅಥ ನಾಸ್ತ್ಯೇಷ ವಾ ದೇಹಃ ಕೇವಲಂ ಚೈತಸ್ಯೈವ ಸಃ ।
ಮುಧಾನುಭೂಯತೇ ಸ್ವಪ್ನಮೃಗತೃಷ್ಣಾದ್ವಿಚನ್ದ್ರವತ್ ॥೫॥
ಏಕನಾಶೇ ದ್ವಯೋರೇವ ನಾಶೋಽತ್ರಾಭ್ಯುಪಪದ್ಯತೇ ।
ಅವಶ್ಯಂ ಭವಿತುಂ ಮನೋನಾಶೇ ದೇಹಪರಿಕ್ಷಯಃ ॥೬॥

ಮನಃ ಶಾಪಾದಿಭಿರ್ದೋಷೈಃ ಕಥಂ ನಾಕ್ರಮ್ಯತೇ ಪ್ರಭೋ ।
ಕಥಮಾಕ್ರಮ್ಯತೇ ವಾಪಿ ಬ್ರೂಹಿ ಮೇ ಪರಮೇಶ್ವರ ॥೭॥

ಬ್ರಹ್ಮೋವಾಚ.

ನ ತದಸ್ತಿ ಜಗತ್ಕೋಶೇ ಶುಭಕರ್ಮಾನುಪಾತಿನಾ ।
ಯತ್ ಪೌರುಷೇಣ ಶುದ್ಧೇನ ನ ಸಮಾಸಾದ್ಯತೇ ಜನೈಃ ॥೮॥
ಆಬ್ರಹ್ಮ ಸ್ಥಾವರಾನ್ತಂ ಚ ಸರ್ವದಾ ಸರ್ವಜಾತಯಃ ।
ಸರ್ವಏವ ಜಗತ್ಯಸ್ಮಿನ್ ದ್ವಿಶರೀರಾಃ ಶರೀರಿಣಃ ॥೯॥
ಏಕಂ ಮನಶ್ಶರೀರಂ ತು ಕ್ಷಿಪ್ರಕಾರಿ ಸದಾ ಚಲಮ್ ।
ಅಕಿಞ್ಚಿತ್ಕರಮನ್ಯತ್ ತು ಶರೀರಂ ಮಾಂಸನಿರ್ಮಿತಮ್ ॥೧೦॥
ತತ್ರ ಮಾಂಸಮಯಃ ಕಾಯಃ ಸರ್ವಸ್ಯೈವ ಚ ಸಙ್ಗತಃ ।
ಸರ್ವೈರಾಕ್ರಮ್ಯತೇ ಶಾಪೈಃ ತಥಾಽವಿದ್ಯಾದಿಸಞ್ಚಯೈಃ ॥೧೧॥

ಅಥವಾ, ದೇಹವೆಂಬುದು ಸುತರಾಂ ಇಲ್ಲವಾಗಿದ್ದು—ಸ್ವಪ್ನ ಮೃಗತೃಷ್ಣಿಕಾದಿಗಳಂತೆ ಅದು ಮನಸ್ಸಿಗೆ ವೃಥಾ ಅನುಭವಗೋಚರವಾಗುವಪಕ್ಷದಲ್ಲಿ, ಆಗ—ಒಂದಕ್ಕೆ ನಾಶವಾದರೆ ಎರಡಕ್ಕೂ ನಾಶವಾಗುತ್ತದೆಂದು ಒಪ್ಪಿಕೊಂಡಂತೆಯೇ ಆಗುವುದು. ಹೀಗೆ ಮನೋನಾಶವಾದರೆ, ದೇಹಕ್ಕೂ ಅವಶ್ಯವಾಗಿ ನಾಶವಾಗಿಯೇ ತೀರಬೇಕು ॥೫—೬॥

ಹೇ ಪರಮೇಶ್ವರ ! ಬ್ರಹ್ಮ ! ಈ ಮನಸ್ಸು, ಶಾಪಾದಿ ದೋಷಗಳಿಂದ ಆಕ್ರಮಿಸಲ್ಪಡುವುದು ಹೇಗೆ ? ಅಥವಾ, ಆಕ್ರಮಿಸಲ್ಪಡದಿರುವುದು ಹೇಗೆ ?—ಅಪ್ಪಣೆಯಾಗಬೇಕು ॥೭॥

ಇದನ್ನು ಕೇಳಿ ಬ್ರಹ್ಮನು ಉತ್ತರಹೇಳಿದನೇನೆಂದರೆ :—

ಅಯ್ಯಾ ! ವಸಿಷ್ಠ ! ಈ ಪ್ರಪಂಚದೊಳಗೆ, ಶುಭಕರ್ಮಾನುಸಾರಿಯಾಗಿ ಶುದ್ಧವಾಗಿರುವ ಪೌರುಷದಿಂದ ಜನರು ಹೊಂದಲಾರದ ಪದಾರ್ಥವೇ ಇಲ್ಲ ॥೮॥

ಈ ಲೋಕದಲ್ಲಿ ಬ್ರಹ್ಮ ಮೊದಲುಗೊಂಡು ಸ್ಥಾವರಪರ್ಯಂತವಾಗಿರುವ ಸಮಸ್ತವಿಧವಾದ ಪ್ರಾಣಿಗಳೂ, ಎರಡು ಶರೀರವುಳ್ಳವಾಗಿರುವುವು ॥೯॥

ಅದರಲ್ಲೊಂದಾದ ಮನೋರೂಪಶರೀರವು, ಕ್ಷಿಪ್ರವಾಗಿ ಕೆಲಸಮಾಡತಕ್ಕದಾಗಿಯೂ ಸರ್ವದಾ ಚಂಚಲವಾಗಿಯೂ ಇರುವುದು. ಮತ್ತೊಂದಾದ ಮಾಂಸಮಯ ಶರೀರವಾದರೋ ಕೇವಲ ಜಡವಾಗಿಯೂ ಯಾವ ಕೆಲಸವನ್ನೂ ಮಾಡಲಾರದುದಾಗಿಯೂ ಇರುವುದು ॥೧೦॥

ಅದರಲ್ಲಿ ಮಾಂಸಮಯವಾದ ದೇಹವು, ಸರ್ವರಿಗೂ ಅಧೀನವಾಗಿ, ಶಾಪಗಳಿಂದಲೂ ಅಭಿಚಾರ ವಿಷ ಮುಂತಾದುವುಗಳಿಂದಲೂ ಆಕ್ರಮಿಸಲ್ಪಡುವುದು ॥೧೧॥

ಮೂಕಪ್ರಾಯೋ ಹ್ಯಶಕ್ತೋಽಸೌ ದೀನಃ ಕ್ಷಣವಿನಶ್ವರಃ |
ಪದ್ಮಪತ್ರಾಮ್ಬುಚಪಲೋ ದೈವಾದಿವಿವಶಸ್ಥಿತಿಃ ||೧೨||
ಮನೋನಾಮ ದ್ವಿತೀಯೋ ಯಃ ಕಾಯಃ ಕಾಯವತಾಮಿಹ |
ಸ ಆಯತ್ತೋಽಪಿ ನಾಯತ್ತೋ ಭೂತಾನಾಂ ಭುವನತ್ರಯೇ ||೧೩||
ಪೌರುಷಂ ಸ್ವಮವಷ್ಟಭ್ಯ ಧೈರ್ಯಮಾಲಮ್ಬ್ಯ ಶಾಶ್ವತಮ್ |
ಯದಿ ತಿಷ್ಠತ್ಯಗಮ್ಯೋಽಸೌ ದುಃಖಾನಾಂ ತದನಿನ್ದಿತಃ ||೧೪||
ಯಥಾಯಥಾಸೌ ಯತತೇ ಮನೋದೇಹೋ ಹಿ ದೇಹಿನಾಮ್ |
ತಥಾತಥಾಸೌ ಭವತಿ ಸ್ವನಿಶ್ಚಯಫಲೈಕಭಾಕ್ ||೧೫||
ಸಫಲೋ ಮಾಂಸದೇಹಸ್ಯ ನ ಕಶ್ಚಿತ್ ಪೌರುಷಕ್ರಮಃ |
ಮನೋದೇಹಸ್ಯ ಸಫಲಂ ಸರ್ವಮೇವ ಸ್ವಚೇಷ್ಟಿತಮ್ ||೧೬||
ಪವಿತ್ರಮನುಸನ್ಧಾನಂ ಚೇತಃ ಸ್ಮರತಿ ಸರ್ವದಾ |
ನಿಷ್ಫಲಾಸ್ತತ್ರ ಶಾಪಾದ್ಯಾಃ ಶಿಲಾಯಾಮಿವ ಸಾಯಕಾಃ ||೧೭||
ಪತತ್ವಮ್ಬುಸಿ ವಹ್ನೌ ವಾ ಕರ್ದಮೇ ವಾ ಶರೀರಕಮ್ |
ಮನೋ ಯದನುಸನ್ಧತ್ತೇ ತದೇವಾಪ್ನೋತಿ ತತ್ಕ್ಷಣಾತ್ ||೧೮||

ಇದು, ಕೇವಲ ಮೂಕಸದೃಶವಾಗಿಯೂ—ಯಾವ ಕೆಲಸದಲ್ಲಿಯೂ ಶಕ್ತಿಯಿಲ್ಲದುದಾಗಿಯೂ—ಅತಿದೀನವಾಗಿಯೂ—ಕ್ಷಣಿಕವಾಗಿಯೂ—ಪದ್ಮಪತ್ರದಲ್ಲಿರುವ ಜಲದಂತೆ ಚಂಚಲವಾಗಿಯೂ—ದೈವ ಮುಂತಾದುವುಗಳಿಗಧೀನವಾಗಿಯೂ ಇರುವುದು ||೧೨||

ಮನಸ್ಸೆಂಬ ದ್ವಿತೀಯವಾದ ಯಾವ ಶರೀರವುಂಟೋ, ಅದು ಸ್ವತಂತ್ರವಾಗಿಯೂ ಪ್ರಪಂಚದಲ್ಲಿ ಮತ್ತೊಬ್ಬರಿಗಧೀನವಲ್ಲದೆಯೂ ಇರುವುದು ||೧೩||

ಈ ಮನೋಮಯದೇಹವು, ತನ್ನ ಪೌರುಷವನ್ನವಲಂಬಿಸಿ ಸ್ಥಿರವಾದ ಧೈರ್ಯವನ್ನಾಶ್ರಯಿಸಿಕೊಂಡಿದ್ದಪಕ್ಷದಲ್ಲಿ, ಆಗ ಇದು—ಯಾವವಿಧವಾದ ದೋಷಕ್ಕೂ ಗುರಿಯಾಗದೆ—ಯಾವ ವಿಧವಾದ ದುಃಖಕ್ಕೂ ಒಳಗಾಗದಿರುವುದು ||೧೪||

ಪ್ರಾಣಿಗಳ ಈ ಮನೋದೇಹವು, ಹೇಗೆ ಹೇಗೆ ಪ್ರಯತ್ನಮಾಡುವುದೋ—ಹಾಗೆಹಾಗೆ ತನ್ನ ನಿಶ್ಚಯರೂಪವಾದ ಫಲವನ್ನು ಹೊಂದತಕ್ಕುದಾಗುವುದು ||೧೫||

ಮಾಂಸಮಯದೇಹದ ಯಾವುದೊಂದು ಪ್ರಯತ್ನವೂ ಸುತರಾಂ ಸಫಲವಾಗುವುದಿಲ್ಲ. ಮನೋದೇಹದ ಸಕಲವಿಧವಾದ ವ್ಯಾಪಾರವೂ ಸಂಪೂರ್ಣವಾಗಿ ಸರ್ವದಾ ಸಫಲವಾಗುವುದು ||

ಪುರುಷರ ಮನಸ್ಸು ಸರ್ವದಾ ನಿರ್ದೋಷವಾದ ಅನುಸಂಧಾನವನ್ನೇ ಸ್ಮರಿಸುತಿದ್ದಪಕ್ಷದಲ್ಲಿ, ಆಗ—ಕಲ್ಲಿನಮೇಲೆ ಬಿಟ್ಟ ಬಾಣಗಳಂತೆ—ಅದರಮೇಲೆ ಬಿಡುವ ಶಾಪಾದಿಗಳೆಲ್ಲವೂ ವ್ಯರ್ಥವೇ ಆಗುವುವು||೧೭||

ಈ ಹಾಳುಶರೀರವು, ನೀರಿನಲ್ಲಿಯಾಗಲಿ ಕೆಸರಿನಲ್ಲಿಯಾಗಲಿ ಬಿದ್ದುಹೋಗಲಿ; ಆದರೆ, ಮನಸ್ಸು ಯಾವ ಅನುಸಂಧಾನದಲ್ಲಿರುವುದೋ—ಆದನ್ನೇ ಆಕ್ಷಣವೇ ಹೊಂದುವುದು ||೧೮||

ಪುರುಷಾತಿಶಯಃ ಸರ್ವಃ ಸರ್ವಭಾವೋಪಮರ್ದನೇ ।
ದದಾತ್ಯವಿಘ್ನೇನ ಫಲಂ ಮನೋ ಹಿ ಮನಸೋ ಮುನೇ ॥೧೯॥
ಪೌರುಷೇಣ ಬಲೇನಾನ್ತಃ ಚಿತ್ತಂ ಕೃತ್ವಾ ಪ್ರಿಯಾಮಯಮ್ ।
ಕೃತ್ರಿಮೇನ್ದ್ರೇಣ ದುಃಖಾರ್ತಿಃ ನ ದೃಷ್ಟಾ ಸಾ ಮನಾಗಪಿ ॥೨೦॥
ಪೌರೇಷೇಣ ಮನಃ ಕೃತ್ವಾ ವಿರಾಗಂ ವಿಗತಜ್ವರಮ್ ।
ಮಾಣ್ಡವ್ಯೇನ ಜಿತಾಃ ಕ್ಲೇಶಾಃ ಶೂಲಪ್ರಾನ್ತೇಽಪಿ ತಿಷ್ಠತಾ ॥೨೧॥
ಅನ್ಧಕೂಪಸ್ಥಿತೇನಾಪಿ ಮಾನಸೈರ್ಯಜ್ಞಸಞ್ಚಯೈಃ ।
ಋಷಿಣಾ ದೀರ್ಘತಪಸಾ ಸಮ್ಪ್ರಾಪ್ತಂ ವೈಬುಧಂ ಪದಮ್ ॥೨೨॥
ಇನ್ದುಪುತ್ರೈರ್ನರೈರೇವ ಪುರುಷಾಧ್ಯವಸಾಯತಃ ।
ಧ್ಯಾನೇನ ಬ್ರಹ್ಮತಾ ಪ್ರಾಪ್ತಾ ಸಾ ಮಯಾಪಿ ನ ಖಣ್ಡ್ಯತೇ ॥೨೩॥
ಅನ್ಯೇಽಪಿ ಸಾವಧಾನಾಯೇ ಧೀರಾಃ ಸುರಮಹರ್ಷಯಃ ।
ಚಿತ್ತಾತ್ ಸ್ವಮನುಸನ್ಧಾನಂ ನ ತ್ಯಜನ್ತಿ ಮನಾಗಪಿ ॥೨೪॥

ಹೇ ವಸಿಷ್ಠಮುನೇ! ಪ್ರಪಂಚದಲ್ಲಿ, ದೇಹ ಮುಂತಾದ ಸಮಸ್ತ ಪದಾರ್ಥವೂ ಹೋಗಿಬಿಟ್ಟರೂ—ಸಮಗ್ರವಾದ ಪುರುಷಕಾರವು ನಿರ್ವಿಘ್ನವಾಗಿ ಫಲವನ್ನು ಕೊಡುವುದಾವುದುಂಟೋ, ಅದು ಮನಸ್ಸೇ ಮನಸ್ಸಿಗೆ ಕೊಟ್ಟಂತಾಗುವುದು. ಪುರುಷಕಾರವೆಂಬುದೂ ಮನಸ್ಸಿನ ಭೇದವೇ ಅಲ್ಲವೆ! ॥೧೯॥

ಕೃತ್ರಿಮನಾದ ಇಂದ್ರನು, ಬಲಾತ್ಕಾರಪೂರ್ವಕವಾಗಿ ಪುರುಷಕಾರದಿಂದ ತನ್ನ ಮನಸ್ಸನ್ನು ದೃಢವಾಗಿ ಅಹಲ್ಯಾಮಯವನ್ನಾಗಿ ಮಾಡಿಕೊಂಡು, ಆ ರಾಜನು ಕೊಟ್ಟ ಶಿಕ್ಷೆಯಿಂದುಂಟಾದ ದುಃಖವನ್ನು ಸ್ವಲ್ಪವೂ ನೋಡಲೇ ಇಲ್ಲವಲ್ಲ! ॥೨೦॥

ಹೀಗೆಯೇ, ಮಾಂಡವ್ಯನೆಂಬವನು, ಶೂಲಕ್ಕೆ ಹಾಕಲ್ಪಟ್ಟು ಅದರ ತುದಿಯಲ್ಲಿ ಸಿಕ್ಕಿಕೊಂಡಿದ್ದಾಗಲೂ, ತನ್ನ ಮನಸ್ಸನ್ನು ಪುರುಷಕಾರದಿಂದ ರಾಗಶೂನ್ಯವನ್ನಾಗಿಯೂ ಸಂತಾಪರಹಿತವನ್ನಾಗಿಯೂ ಮಾಡಿಕೊಂಡು, ಸಮಸ್ತ ಕ್ಲೇಶಗಳನ್ನೂ ಗೆದ್ದುಬಿಟ್ಟನಲ್ಲವೆ! ॥೨೧॥

ದೀರ್ಘತಪೋನಾಮಕನಾದ ಮುನಿಯೂಕೂಡ, ಯಜ್ಞಮಾಡಬೇಕೆಂದುದ್ದೇಶಿಸಿ, ಯಾಗಸಾಮಗ್ರಿಗಳನ್ನು ಸಂಪಾದಿಸಿ ತರಲು ಹೊರಟವನಾಗಿ, ಮಧ್ಯದಲ್ಲಿ ದೈವವಶಾತ್ ದೊಡ್ಡ ಹಾಳುಬಾವಿಯಲ್ಲಿ ಬಿದ್ದುಬಿಟ್ಟು, ಯಜ್ಞಮಾಡುವುದಕ್ಕಿಲ್ಲದೆಹೋದುದರಿಂದ ತುಂಬ ದುಃಖಪಡುತ, ತಾನು ಮಾಡಬೇಕಾಗಿದ್ದ ಸಮಸ್ತ ಯಜ್ಞಗಳನ್ನೂ ಅಲ್ಲಿಯೇ ಮನಸ್ಸಿನೊಳಗೆ ಮಾಡಿಬಿಟ್ಟು, ದಿವ್ಯಗತಿಯನ್ನು ಹೊಂದಲಿಲ್ಲವೆ !॥೨೨॥

ಇಂದುವೆಂಬ ಬ್ರಾಹ್ಮಣನ ಮಕ್ಕಳು, ಸಾಮಾನ್ಯ ಮನುಷ್ಯರಾಗಿದ್ದರೂ ಕೂಡ, ಪುರುಷಕಾರಮೂಲಕವಾಗಿ ಧ್ಯಾನದಿಂದ ಬ್ರಹ್ಮಪದವಿಯನ್ನು ಹೊಂದಿದರಲ್ಲವೆ! ಅದನ್ನು, ನಾನೂ ವ್ಯತ್ಯಾಸಮಾಡಲಾರದವನಾಗಿರುವೆನು ॥೨೩॥

ಹೀಗೆಯೇ, ಇನ್ನೂ ಇತರರಾದ ಧೀರರಾಗಿರುವ ದೇವತೆಗಳೂ ಮಹರ್ಷಿಗಳೂ ತಮ್ಮ ಮನಸ್ಸಿನಲ್ಲಿರುವ ಅನುಸಂಧಾನವನ್ನು ಎಂತಹ ವಿಷಮಕಾಲದಲ್ಲಿಯೂ ಸ್ವಲ್ಪವೂ ಬಿಡದಿರುವುದನ್ನು ನಾವೆಲ್ಲರೂ ನೋಡಿಯೇ ಇರುವೆವಲ್ಲವೆ! ॥೨೪॥

ಆಧಯೋ ವ್ಯಾಧಯಶ್ಚೈವ ಶಾಪಾಃ ಪಾಪದೃಶಸ್ತಥಾ ।
ನ ಖಣ್ಡಯನ್ತಿ ತಚ್ಚಿತ್ತಂ ಪದ್ಮಘಾತಾಃ ಶಿಲಾಮಿವ ‖೧೫‖
ಯೇ ಚಾಪಿ ಖಣ್ಡಿತಾಃ ಕೇಚಿತ್ ಶಾಪಾದ್ಯೈರಾಧಿಸಾಯಕೈಃ ।
ಸ್ವವಿವೇಕಾಕ್ಷಮಂ ತೇಷಾಂ ಮನೋ ಮನ್ಯೇ ವಿಪೌರುಷಮ್ ‖೧೬‖
ನ ಕದಾಚನ ಸಂಸಾರೇ ಸಾವಧಾನಮನಾಮನಾಕ್ ।
ಸ್ವಪ್ನೇಪಿ ಕಶ್ಚಿದ್ದೃಶ್ಯೇ ವಾ ದೋಷಜಾಲೈಃ ಖಲೀಕೃತಃ‖೧೭‖
ಮನಸೈವ ಮನಸ್ತಸ್ಮಾತ್ ಪೌರುಷೇಣ ಪುಮಾನಿಹ ।
ಸ್ವಕಮೇವ ಸ್ವಕೇನೈವ ಯೋಜಯೇತ್ ಪಾವನೇ ಪಥಿ ‖೧೮‖
ಪ್ರತಿಭಾತಂ ಯದೇವಾಸ್ಯ ಯಥಾಭೂತಂ ಭವತ್ಯಲಮ್ ।
ಕ್ಷಣಾದೇವ ಮನಃಪೀನಂ ಬಾಲವೇತಾಳವನ್ಮನೇ ‖೧೯‖
ಪ್ರತಿಭಾಸಸ್ಯಾನುಪದಂ ಪ್ರಾಕ್ತನೀಂ ಸ್ಥಿತಿಮುಜ್ಝತಿ ।
ಕುಲಾಲಕರ್ಮಾನುಪದಂ ಘಟೋ ಮೃತ್ಪಿಣ್ಡತಾಮಿವ ‖೨೦‖
ಪ್ರತಿಭಾಸಾರ್ಥತಾಮೇತಿ ಕ್ಷಣಾದೇವ ಮನೋ ಮುನೇ ।
ಸ್ಪನ್ದಮಾತ್ರಾತ್ಮಕಂ ವಾರಿ ಯಥಾ ತುಙ್ಗತರಙ್ಗತಾಮ್ ‖೨೧‖

ಆದುಕಾರಣ ಕಮಲಪುಷ್ಪಗಳಿಂದ ತಾಡನೆಮಾಡುವಿಕೆಯು ಕಲ್ಲನ್ನು ಸೀಳಲಾರದಿರುವಂತೆ, ಆಧಿಗಳೂ ವ್ಯಾಧಿಗಳೂ ಶಾಪಗಳೂ ಇತರವಾದ ಪಾಪಮಾರ್ಗಗಳೂ ಕೂಡ ಮನಸ್ಸನ್ನು ಖಂಡಿಸಲಾರವು ‖೧೫‖

ನೀನು ಹೇಳಿದಂತೆ, ಶಾಪ ಮುಂತಾದುವುಗಳಿಂದಲೂ ಮನೋರೋಗವೆಂಬ ಬಾಣಗಳಿಂದಲೂ ಯಾವ ಕೆಲವರು ಖಂಡಿಸಲ್ಪಟ್ಟಿರುವರೋ, ಅವರ ಮನಸ್ಸು ತನ್ನ ವಿವೇಕವನ್ನುಪಯೋಗಿಸುವುದರಲ್ಲಿ ಅಸಮರ್ಥವೂ ಪೌರುಷಹೀನವೂ ಆಗಿರುವುದೆಂದು ನಾನು ತಿಳಿದಿರುವೆನು ‖೧೬‖

ಈ ಪ್ರಪಂಚದಲ್ಲಿ, ಸಾವಧಾನಮನಸ್ಕನಾದವನೊಬ್ಬನೂ ಕೂಡ, ಸ್ವಪ್ನದಲ್ಲಿಯಾಗಲಿ—ಜಾಗ್ರತ್ತಿನಲ್ಲಿಯಾಗಲಿ—ದೋಷಸಮುದಾಯಗಳಿಂದ ಸ್ವಲ್ಪವೂ ಕೆಡಿಸಲ್ಪಟ್ಟಿಲ್ಲ ‖೧೭‖

ಆದುದರಿಂದ, ಈ ಪ್ರಪಂಚದಲ್ಲಿ ಮನುಷ್ಯನು ಪುರುಷಕಾರ ಮೂಲಕವಾಗಿ ತನ್ನ ಮನಸ್ಸಿನಿಂದಲೇ ತನ್ನ ಮನಸ್ಸನ್ನು ಪರಿಶುದ್ಧವಾದ ಮಾರ್ಗದಲ್ಲಿ ಸೇರಿಸಬೇಕು ‖೧೮‖

ಅಯ್ಯಾ ವಸಿಷ್ಠಮುನಿಯೆ? ಬಾಲಕನು ಬೇತಾಳವನ್ನು ನೋಡಿ ಹಾಗೆಯೇ ನಿಶ್ಚಯವುಳ್ಳವನಾಗುವಂತೆ, ಈ ಮನಸ್ಸಿಗೆ ಯಾವುದು ತೋರುವುದೋ ಅದರಂತೆಯೇ ಇದು ಸಾಂದ್ರವಾಗಿ ಪರಿಣಮಿಸಿಬಿಡುವುದು ‖೧೯‖

ಹೀಗೆ ಪ್ರತಿಭಾಸವುಂಟಾದ ಉತ್ತರಕ್ಷಣವೇ, ಕುಂಬಾರನು ಕೆಲಸಮಾಡಿದೊಡನೆಯೇ ಘಟವು ಮೃತ್ಪಿಂಡಾವಸ್ಥೆಯನ್ನು ಬಿಟ್ಟುಬಿಡುವಂತೆ, ಈ ಮನಸ್ಸೂ ಪೂರ್ವಸ್ಥಿತಿಯನ್ನು ಬಿಟ್ಟುಬಿಡುವುದು ‖೨೦‖

ಎಲೈ ವಸಿಷ್ಠನೆ! ಸ್ವಲ್ಪ ಚಲಿಸಿದಮಾತ್ರದಿಂದಲೇ ನೀರು ದೊಡ್ಡ ಅಲೆಯಾಗುವಂತೆ, ಈ ಮನಸ್ಸು ಒಂದು ಕ್ಷಣದೊಳಗಾಗಿಯೇ ಆ ಪ್ರತಿಭಾಸಪದಾರ್ಥರೂಪವನು ಹೊಂದುವುದು ‖

ಅನುಸನ್ಧಾನಮಾತ್ರೇಣ ಸೂರ್ಯಬಿಮ್ಬೇಽಪಿ ಯಾಮಿನೀಮ್ ।
ಮನಃ ಪಶ್ಯತ್ಯಶುದ್ಧಾಕ್ಷಃ ಚನ್ದ್ರಬಿಮ್ಬೇ ದ್ವಿತಾಮಿವ ॥೩೧॥
ಯತ್ ಪಶ್ಯತಿ ತದೇವಾಶು ಫಲೀಭೂತಮಿದಂ ಮನಃ ।
ಸಹ ಹರ್ಷವಿಷಾದಾಭ್ಯಾಂ ಭುಙ್ಕ್ತೇ ತಸ್ಮಾತ್ ತದೇವ ತತ್ ॥೩೩॥
ಪ್ರತಿಭಾನುಪದಂ ಚೇತಃ ಚನ್ದ್ರೇಽಪ್ಯಗ್ನಿಶಿಖಾಶತಮ್ ।
ದೃಷ್ಟ್ವಾ ದಾಹಮವಾಪ್ನೋತಿ ದಗ್ಧಂ ಚ ಪರಿತಪ್ಯತೇ ॥೩೪॥
ಪ್ರತಿಭಾನುಪದಂ ಚೇತಃ ಕ್ಷಾರೇಽಪಿ ಹಿ ರಸಾಯನಮ್ ।
ದೃಷ್ಟ್ವಾ ಪೀತ್ವಾ ಪರಾಂ ತೃಪ್ತಿಂ ಯಾತಿ ವಲ್ಗತಿ ನೃತ್ಯತಿ ॥೩೫॥
ಪ್ರತಿಭಾನುಪದಂ ಚೇತೋ ವ್ಯೋಮನ್ಯಪಿ ಮಹಾವನಮ್ ।
ದೃಷ್ಟ್ವಾ ಲುನಾತಿ ಲೂತ್ವಾ ಚ ಪುನರಾರೋಪಯತ್ಯಲಮ್ ॥೩೬॥

ಇತ್ಥಂ ಯದೇವ ಪರಿಕಲ್ಪಯತೀನ್ದ್ರಜಾಲಂ
ಕ್ಷಿಪ್ರಂ ತದೇವ ಪರಿಪಶ್ಯತಿ ತಾತ ಚೇತಃ ।

ಕಣ್ಣುಕೆಟ್ಟುಹೋಗಿರತಕ್ಕವನು ಎರಡು ಚಂದ್ರಮಂಡಲಗಳನ್ನು ನೋಡುವಂತೆ, ಅನುಸಂಧಾನಮಾತ್ರದಿಂದಲೇ ಮನಸ್ಸು ಸೂರ್ಯಮಂಡಲದಲ್ಲಿಯೂ ರಾತ್ರಿಯೆಂಬ ಜ್ಞಾನವುಳ್ಳದಾಗುವುದು ॥೩೨॥

ಈ ಮನಸ್ಸು, ತಾನು ಯಾವುದನ್ನು ಕಾಣುವುದೋ, ಅದನ್ನೇ ತಾನು ತನ್ನ ಅನುಸಂಧಾನಕ್ಕೆ ತಕ್ಕ ಫಲವನ್ನಾಗಿ ಮಾಡಿಕೊಂಡು, ಆಯಾವಿಷಯಾನುಗುಣವಾಗಿ, ಹರ್ಷದೊಡನೆಯೂ ವಿಷಾದದೊಡನೆಯೂ ಅನುಭವಿಸುವುದು. ಹೀಗಿರುವುದರಿಂದ, ಮನಸ್ಸಿನಿಂದನುಭವಿಸಲ್ಪಡುವ ಪದಾರ್ಥವೂ ಮನಸ್ಸೇ ಆದಂತಾಯ್ತು ॥೩೩॥

ಮತ್ತು, ಮನಸ್ಸು ಚಂದ್ರನನ್ನು ಅಗ್ನಿಯೆಂದು ತಿಳಿದುಕೊಂಡರೆ, ಆ ಪ್ರತಿಭೆಯುಂಟಾದ ಉತ್ತರಕ್ಷಣವೇ, ಚಂದ್ರಮಂಡಲದಲ್ಲಿ ನೂರಾರು ಅಗ್ನಿಜ್ವಾಲೆಗಳನ್ನು ನೋಡುವುದು; ಅನಂತರ, ಅದರಿಂದ ತಾನು ಸುಡಲ್ಪಟ್ಟಂತೆಯೂ ಆಗುವುದು. ಸುಡಲ್ಪಟ್ಟ ಬಳಿಕ, ವಿಶೇಷವಾಗಿ ಸಂತಾಪವನ್ನೂ ಹೊಂದುವುದು ॥೩೪॥

ಮನಸ್ಸು, ಕ್ಷಾರವನ್ನು ದಿವ್ಯವಾದ ರಸಾಯನವೆಂದು ಕಲ್ಪಿಸಿಕೊಂಡರೆ, ಆಕ್ಷಣ ಅದನ್ನು ರಸಾಯನವಾಗಿಯೇ ಕಾಣುತ, ಅದನ್ನು ಕುಡಿದು, ವಿಶೇಷವಾಗಿ ಸಂತೋಷಪಟ್ಟು, ನಲಿಯುತಲೂ ಕುಣಿಯುತಲೂ ಇರುವುದು ॥೩೫॥

ಮನಸ್ಸು, ಆಕಾಶದಲ್ಲಿ ದೊಡ್ಡ ಕಾಡಿರುವುದೆಂದು ಕಲ್ಪಿಸಿಕೊಂಡರೆ, ಆಕ್ಷಣವೇ ಅಲ್ಲಿ ದೊಡ್ಡ ಕಾಡನ್ನು ಕಾಣುತ, ಅದನ್ನು ಕತ್ತರಿಸಿ ಹಾಕುತಲೂ ಮತ್ತೆ ಬೆಳೆಯಿಸುತಲೂ ಇರುವುದು ॥೩೬॥

ವತ್ಸ! ವಸಿಷ್ಠ! ಈರೀತಿಯಾಗಿ ಮನಸ್ಸು ಯಾವ ಇಂದ್ರಜಾಲವನ್ನು ಕಲ್ಪಿಸಿಕೊಳ್ಳುವುದೋ, ಅದನ್ನು ಆಕ್ಷಣವೇ ಸತ್ಯವಾಗಿರುವಂತೆ ನೋಡುವುದು. ಆದುಕಾರಣ, ಈ ಜಗತ್ತು

ನಾಸಜ್ಜಗನ್ನ ಚ ಸದಿತ್ಯವಗಮ್ಯ ನೂನಂ
ಲೂನಾಂ ದೃಶಂ ವಿವಿಧಭೇದವತೀಂ ಜಹೀಹಿ ||೩೭||

ಇತಿ ಉತ್ಪತ್ತಿಪ್ರಕರಣೇ ಮನೋಮಾಹಾತ್ಮ್ಯವರ್ಣನಂ ನಾಮ
ದ್ವಿನವತಿತಮಃ ಸರ್ಗಃ.

ಅಸತ್ಯವೂ ಸತ್ಯವೂ ಅಲ್ಲವೆಂದು ನೀನು ನಿಶ್ಚಯವಾಗಿ ತಿಳಿದುಕೊಂಡು, ನಾನಾವಿಧಭೇದಯುಕ್ತವಾಗಿ ಕಳವಳಪಡುತಿರುವ ಬುದ್ಧಿಯನ್ನು ಬಿಟ್ಟುಬಿಡು ||೩೭||

ಇದು ಉತ್ಪತ್ತಿಪ್ರಕರಣದಲ್ಲಿ ಮನೋಮಾಹಾತ್ಮ್ಯವರ್ಣನವೆಂಬ
ತೊಂಭತ್ತೆರಡನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ತ್ರಿಣವತಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಗ॥ಇತಿ ಮೇ ಭಗವತಾ ಪೂರ್ವಮುಕ್ತಂ, ತದೇತದದ್ಯ ತುಭ್ಯಂ ಕಥಿತಮ್॥೧॥

ತಸ್ಮಾದನಾಖ್ಯಾನಾದ್ಬ್ರಹ್ಮಣಃ ಸರ್ವತಃ ಸರ್ವಮನಾಖ್ಯಾನಮುತ್ಪದ್ಯತೇ, ಸ್ವಯಮೇವ ತದ್ಘನತಾಂ ಪ್ರಾಪ್ಯ ಮನಃ ಸಮ್ಪದ್ಯತೇ ॥೨॥

ತನ್ಮನಸ್ತನ್ಮಾತ್ರಕಲ್ಪನಪೂರ್ವಕಸನ್ನಿವೇಶಂ ಭವತಿ, ತತಸ್ತೈಜಸಃ ಪುರುಷಃ ಸಂಪದ್ಯತೇ, ಸೋಽಯಂ ಬ್ರಹ್ಮೇತ್ಯಾತ್ಮನಿ ನಾಮ ಕೃತವಾನ್ ॥೩॥

ತೇನ ರಾಮ ಯೋಽಯಂ ಪರಮೇಷ್ಠೀ ತನ್ಮನಸ್ತತ್ತ್ವಂ ವಿದ್ಧಿ ॥೪॥

ಉತ್ಪತ್ತಿಪ್ರಕರಣದಲ್ಲಿ ತೊಂಭತ್ತುಮೂರನೆಯ ಸರ್ಗವು.

**

ಮನೋಽತ್ರ ಬ್ರಹ್ಮಣೋ ಜಜ್ಞೇ ತತೋಽಭೂತ್ ತೈಜಸೋ ವಿಧಿಃ ।
ತತೋ ಮೋಹಾದಹಙ್ಕಾರಃ ತತೋ ವಿಶ್ವಮಿತೀರ್ಯತೇ ॥

ಪರಬ್ರಹ್ಮನ ದೆಸೆಯಿಂದ ಮನಸ್ಸೂ, ಅದರ ದೆಸೆಯಿಂದ ತೈಜಸನಾದ ಬ್ರಹ್ಮನೂ, ಆಮೇಲೆ ಅವನಿಂದ ಅಹಂಕಾರವೂ, ಅಹಂಕಾರದಿಂದ ಜಗತ್ತೂ ಉತ್ಪನ್ನವಾಯ್ತೆಂದು, ಈ ಸರ್ಗದಲ್ಲಿ ಹೇಳಲ್ಪಡುವುದು.

ಪುನಃ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು :—

ಅಯ್ಯಾ! ರಾಮ! ನಾನು ಇದುವರೆಗೂ ನಿನಗೆ ಹೇಳಿದರೀತಿಯಾಗಿ, ಶ್ರೀಚತುರ್ಮುಖನು ಹಿಂದೆ ನನಗೆ ಹೇಳಿದ್ದನು. ಈಗ ಅದನ್ನೇ ನಾನು ನಿನಗೆ ಹೇಳಿರುವೆನು ॥೧॥

ಈಗ ಸಮಸ್ತಸೃಷ್ಟಿಗೂ ಮನಸ್ಸೇ ಆದಿಕಾರಣವೆಂಬುದನ್ನು ನಿನಗೆ ಹೇಳುವೆನು. ನಾಮರೂಪವಿಹೀನನಾಗಿರುವ ಆ ಪರಬ್ರಹ್ಮನ ದೆಸೆಯಿಂದ, ಸಮಸ್ತದೃಶ್ಯವೂ ನಾಮರೂಪವಿಕಾರಗಳಿಲ್ಲದೆ ಸೂಕ್ಷ್ಮರೂಪದಲ್ಲಿ ಉದಯಿಸುವುದು. ಬಳಿಕ ಕಾಲಪರಿಣಾಮವಾಗಲಾಗಿ, ತನಗೆ ತಾನೇ, ಸಂಕಲ್ಪವಿಕಲ್ಪರೂಪವಾದ ಮನನಶಕ್ತಿಯಿಂದ ಘನವಾಗಿ, ಮನಸ್ಸಾಗುವುದು ॥೨॥

ಬಳಿಕ ಆ ಮನಸ್ಸು, ಪಂಚತನ್ಮಾತ್ರಕಲ್ಪನಾಪೂರ್ವಕವಾದ ಸನ್ನಿವೇಶವುಳ್ಳದಾಗುವುದು. ಈ ಸನ್ನಿವೇಶದ ದೆಸೆಯಿಂದ, ತೇಜಃಪ್ರಧಾನವಾದ ಲಿಂಗಶರೀರೋಪಾಧಿಕನಾಗಿರುವ ಪುರುಷನುದಯಿಸುವನು. ಈ ಪುರುಷನು, ತನಗೆ ಬ್ರಹ್ಮನೆಂದು ಹೆಸರಿಟ್ಟುಕೊಳ್ಳುವನು ॥೩॥

ಅದುಕಾರಣ, ಅಯ್ಯಾ ರಾಮ! ಯಾವ ಈ ಪರಮೇಷ್ಠಿ (ಚತುರ್ಮುಖ) ಯಿರುವನೋ, ಅವನು ಮನಸ್ತತ್ವವೆಂದು ತಿಳಿಯುವನಾಗು ॥೪॥

ಸ ಮನಸ್ತತ್ತ್ವಾಕಾರೋ ಭಗವಾನ್ ಬ್ರಹ್ಮಾ ಸಙ್ಕಲ್ಪಮಯತ್ವಾ
ದ್ಯದೇವ ಸಙ್ಕಲ್ಪಯತಿ ತದೇವ ಪಶ್ಯತಿ ‖೫‖

ತತಸ್ತೇನೇಯಮವಿದ್ಯಾ ಪರಿಕಲ್ಪಿತಾ ಅನಾತ್ಮನ್ಯಾತ್ಮಾಭಿಮಾನಮ
ಯೀ, ಇತಿ ತೇನ ಬ್ರಹ್ಮಣಾ ಗಿರಿತೃಣಜಲಧಿಮಯಮಿದಂ ಕ್ರಮೇಣ
ಜಗತ್ ಪರಿಕಲ್ಪಿತಮ್ ‖೬‖

ಇತ್ಥಂ ಕ್ರಮೇಣ ಬ್ರಹ್ಮತತ್ತ್ವಾದಿಯಮಾಗತಾ ಸೃಷ್ಟಿಃ, ಅನ್ಯತ
ಏವಾಗತೇಯಮಿತಿ ಲಕ್ಷ್ಯತೇ ‖೭‖

ಪ‖ತಸ್ಮಾತ್ ಸರ್ವಪದಾರ್ಥಾನಾಂ ತ್ರೈಲೋಕ್ಯೋದರವರ್ತಿನಾಮ್।
ಉತ್ಪತ್ತಿರ್ಬ್ರಹ್ಮಣೋ ರಾಮ ತರಙ್ಗಾಣಾಮಿವಾರ್ಣವಾತ್ ‖೮‖

ಹೀಗೆ ಮನಸ್ತತ್ತ್ವರೂಪನಾದ ಆ ಭಗವಂತನಾದ ಬ್ರಹ್ಮನು, ಸ್ವಯಂ ಸಂಕಲ್ಪಮಯನಾಗಿರುವುದರಿಂದ, ತಾನು ಯಾವುದನ್ನು ಸಂಕಲ್ಪಿಸಿಕೊಳ್ಳುವನೋ—ಅದನ್ನೇ ಕಾಣುವನು ‖೫‖

ಅನಂತರ ಅವನಿಂದ ಈ ಅವಿದ್ಯೆಯು ಕಲ್ಪಿತವಾಗಿರುವುದು ; ಆತ್ಮನಲ್ಲದ ಪದಾರ್ಥದಲ್ಲಿ ಆತ್ಮನೆಂಬ ಅಭಿಮಾನವೇ ಅವಿದ್ಯೆಯೆನ್ನಿಸುವುದು. ಹೀಗೆ ಆ ಬ್ರಹ್ಮನು, ತೃಣ ಪರ್ವತ ಸಮುದ್ರಾದಿಮಯವಾದ ಈ ಜಗತ್ತನ್ನು ಕ್ರಮವಾಗಿ ಕಲ್ಪಿಸುವನು ‖೬‖

ಹೀಗೆ ಈ ಸೃಷ್ಟಿಯು ಕ್ರಮವಾಗಿ ಬ್ರಹ್ಮನ ದೆಸೆಯಿಂದಲೇ ಉಂಟಾಗಿರುವುದು; ಆದರೂ, ಇದು ಮತ್ತೆಲ್ಲಿಂದಲೋ ಬಂದಿರುವಂತೆ ಕಾಣಿಸುತಿರುವುದು ‖೭‖

ಆದುಕಾರಣ, ಎಲೈ ರಾಮನೆ ! ಸಮುದ್ರದ ದೆಸೆಯಿಂದ ತರಂಗಗಳುದಯಿಸುವಂತೆ, ಈ ಮೂರುಲೋಕ ಮಧ್ಯದಲ್ಲಿರುವ ಸರ್ವಪದಾರ್ಥಗಳೂ ಬ್ರಹ್ಮನ ದೆಸೆಯಿಂದಲೇ ಉದಯಿಸುವುವು. ಪರಮಾಣುವೇ ಜಗತ್ತಿಗೆ ಕಾರಣವೆಂದು ಕೆಲವರೂ, ಪ್ರಧಾನವೇ ಜಗತ್ಕಾರಣವೆಂದು ಕೆಲವರೂ, ವಿಜ್ಞಾನಪರಿಣಾಮವೇ ಜಗತ್ತೆಂದು ಕೆಲವರೂ, ಶೂನ್ಯವು ಜಗತ್ಕಾರಣವೆಂದು ಕೆಲವರೂ ಹೇಳುವರು. ಇವರ ಪಕ್ಷಗಳಲ್ಲೆಲ್ಲ ದೋಷವಿರುವುದು. ಹೇಗೆಂದರೆ:—ಪರಮಾಣು ಕಾರಣವೆಂದು ಹೇಳಿದರೆ, ಒಂದೊಂದು ಪದಾರ್ಥ ಸೃಷ್ಟಿಯಾಗಬೇಕಾದರೆ ಅನೇಕ ಪರಮಾಣುಗಳು ಸೇರಬೇಕೆಂದು ಒಪ್ಪಬೇಕಾಗುವುದು. ಇದು ಕೇವಲ ಕಲ್ಪನಾಗೌರವವಲ್ಲದೆ ಮತ್ತೆಬೇರೆಯಲ್ಲ. ಆದುಕಾರಣ, ಈ ಪರಮಾಣುವಾದವು ಯುಕ್ತವಲ್ಲ. ಸಾಂಖ್ಯರು ಹೇಳುವಂತೆ—ಪ್ರಧಾನವೇ ಜಗತ್ಕಾರಣವೆಂದು ಹೇಳಿದರೆ,-ಪ್ರಧಾನವೆಂಬುದು ಜಡವಾಗಿರುವುದರಿಂದ, ಮತೊಬ್ಬ ಕರ್ತೃವಿಲ್ಲದೆ ಇದು ಸ್ವತಂತ್ರವಾಗಿ ಈ ವಿಚಿತ್ರಪ್ರಪಂಚವನ್ನು ಸೃಷ್ಟಿಮಾಡಲು ಅಶಕ್ಯವಾಗಿರುವಕಾರಣದಿಂದಲೂ, ಸಂಗರಹಿತವಾಗಿ ಉದಾಸೀನವಾಗಿರುವುದಕ್ಕೆ ಕರ್ತೃತ್ವವು ಅನುಪಪನ್ನವಾದುದರಿಂದಲೂ, ಪ್ರಧಾನಜಗತ್ಕಾರಣತಾವಾದವು ಯುಕ್ತವಲ್ಲ. ವಿಜ್ಞಾನಪರಿಣಾಮವೇ ಜಗತ್ಕಾರಣವೆಂದರೆ,—ಚೈತನ್ಯವು ಜಡರೂಪವಾಗಿ ಪರಿಣಮಿಸುತ್ತದೆಂಬುದು ಅಸಂಗತವಾದುದರಿಂದ, ಈ ಪರಿಣಾಮವಾದವೂ ಉಪಪನ್ನವಲ್ಲ. ಶೂನ್ಯವು ಕಾರಣವಾಗಿರುವುದನ್ನು ಎಲ್ಲಿಯೂ ಯಾರೂ ನೋಡಿಲ್ಲವಾದಕಾರಣ, ಶೂನ್ಯವಾದವೂ ಯುಕ್ತವಲ್ಲ. ಇದಲ್ಲದೆ, ಈ ಪಕ್ಷಗಳಿಗೆ ಸರಿಯಾದ ಪ್ರಮಾಣವೂ ಇಲ್ಲ. ಇದನ್ನೆಲ್ಲ ಯೋಚಿಸಿದರೆ, ಈ ಸೃಷ್ಟಿಯು ಮತ್ತಾವುದರಿಂದಲೂ ಆಗಲಿಲ್ಲವೆಂದು ನಿಶ್ಚಯವಾಗುವುದು. ಬಳಿಕ, ಸಕಲ ಶ್ರುತಿ ಪ್ರಮಾಣಗಳಿರುವುದರಿಂದಲೂ, ಕಲ್ಪನಾಗೌರವವಿಲ್ಲದುದರಿಂದಲೂ, ಅನಿರ್ವಚನೀಯಮಾಯಾಶಕ್ತಿಯುಕ್ತವಾದ ಬ್ರಹ್ಮನ ರೂಪಾಂತರವೇ ಈ ಪ್ರಪಂಚವೆಂದು ಹೇಳುವ ಪಕ್ಷವೇ ಕೊನೆಗೆ ನಿಲ್ಲುವುದೆಂದು ತಿಳಿಯಬೇಕು‖

ಗ|| ಏವಮನುತ್ಪನ್ನೇ ಜಗತಿ ಯಾ ಬ್ರಹ್ಮಣಶ್ಚಿನ್ಮನೋರೂಪಿಣೀ ಸಾಹಙ್ಕಾರೇ ಪರಿಕಲ್ಪ್ಯ ಬ್ರಹ್ಮ ಬ್ರಹ್ಮತಾಮೇತಿ ||೯||

ಯಾಸ್ತ್ವನ್ಯಾಶ್ಚಿಚ್ಛಕ್ತಯಃ ಸರ್ವಶಕ್ತೇರಭಿನ್ನಾ ಏವ ಕಲ್ಪ್ಯನ್ತೇ, ಜಗತಿ ಸ್ಫಾರತಾಂ ನೀತೇ ಪಿತಾಮಹರೂಪೇಣ ಮನಸಾ ಸಮುಲ್ಲಸನ್ತಿ ||

ಏತೇ ಸಹಸ್ರಶೋಽಪಿ ಪರಿವರ್ತಮಾನಜೀವಾ ಉಚ್ಯನ್ತೇ ||೧೧||

ತೇಽಭ್ಯುತ್ಥಿತಾ ಏವ ಚಿನ್ನಭಸೋ ನಭಸಿ ತನ್ಮಾತ್ರೈರಾವಲಿತಾಃ ಗಗನಪವನಾನ್ತರ್ವರ್ತಿನಶ್ಚತುರ್ದಶವಿಧಾಃ ಯೇ ಭೂತಜಾತಮಧ್ಯತಯಾ ಅಭ್ಯಾಸೇ ತಿಷ್ಠನ್ತಿ, ತಸ್ಯಾಏವ ಪ್ರಾಣಶಕ್ತಿದ್ವಾರೇಣ ಪ್ರವಿಶ್ಯ ಶರೀರಂ ಸ್ಥಾವರಂ ಜಙ್ಗಮಂ ವಾಪಿ ಬೀಜತಾಂ ಗಚ್ಛನ್ತಿ ||೧೨||

ತದನು ಯೋನಿತೋ ಜಗತಿ ಜಾಯನ್ತೇ, ತದನು ಕಾಕತಾಳೀಯಯೋಗೇನೋತ್ಪನ್ನವಾಸನಾಪ್ರವಾಹಾನುರೂಪಕರ್ಮಫಲಭಾಗಿನೋ ಭವನ್ತಿ ||೧೩||

ತತಃ ಕರ್ಮರಜ್ಜುಭಿರ್ವಾಸನಾವಲಿತಾಭಿರ್ಬದ್ಧಶರೀರಾಃ ಭ್ರಮನ್ತಃ ಪ್ರೋತ್ಪತನ್ತಿ ನಿಪತನ್ತಿ ಚ ||೧೪||

ಹೀಗೆ ಜಗತ್ತು ಬ್ರಹ್ಮನ ರೂಪಾಂತರವಾದುದರಿಂದ, ವಸ್ತುತಃ ಉತ್ಪತ್ತಿರಹಿತವಾಗಿರುವುದು. ಹೀಗಿರುವಾಗ, ಬ್ರಹ್ಮನಿಗೆ ಮನೋರೂಪವಾದ ಯಾವ ಚಿತ್ತಿರುವುದೋ,—ಅದು, ಅಹಂಕಾರದಲ್ಲಿ ಬ್ರಹ್ಮನನ್ನು ಪ್ರವೇಶಿಸಿರುವಂತೆ ಕಲ್ಪಿಸಿ, ಕೊನೆಗೆ ತಾನೇ ಚತುರ್ಮುಖಬ್ರಹ್ಮದಶೆಯನ್ನು ಪಡೆಯುವುದು ||೯||

ಪರಬ್ರಹ್ಮನಿಗಿಂತ ಅಭಿನ್ನವಾಗಿರುವ ಯಾವ ಇತರವಾದ ಚಿಚ್ಛಕ್ತಿಗಳು ಕಲ್ಪಿಸಲ್ಪಡುವುವೋ, ಅವುಗಳೆಲ್ಲವೂ ಅತಿವಿಶಾಲವಾದ ಈ ಜಗತ್ತಿನಲ್ಲಿ ಪಿತಾಮಹರೂಪವಾದ ಮನಸ್ಸಿನಿಂದಲೇ ಪ್ರಥಮತಃ ವಿಕಾಸಹೊಂದುವುವು ||೧೦||

ಇವುಗಳೇ, ಸಾವಿರಾರು ಜನ್ಮಗಳಲ್ಲಿ ಹೊರಳಾಡುವ ಜೀವಗಳೆಂದು ಕರೆಯಲ್ಪಡುವುವು ||

ಚಿದಾಕಾಶದಿಂದಲೇ ಉದಯಿಸಿರುವ ಆ ಜೀವಗಳು, ಮಾಯಾಕಾಶದಲ್ಲಿ ತನ್ಮಾತ್ರೆಗಳಿಂದ ಆವೃತಗಳಾದ, ಆಕಾಶದಲ್ಲಿರುವ ಆವಹ ಪ್ರವಹ ಮುಂತಾದ ವಾಯುಗಳ ಮಧ್ಯದೊಳಗೆ ಸೇರಿಕೊಂಡು, ಚತುರ್ದಶಭುವನಗಳಲ್ಲಿರುವ ಭೂತಸಮುದಾಯಗಳಲ್ಲಿ ತಮ್ಮ ವಾಸನಾನುಗುಣವಾಗಿ ನಿಲ್ಲುತ, ಆ ಭೂತಗಳ ಪ್ರಾಣಶಕ್ತಿದ್ವಾರದಿಂದ ಜಂಗಮಶರೀರವನ್ನಾಗಲಿ—ಸ್ಥಾವರ ಶರೀರವನ್ನಾಗಲಿ ಪ್ರವೇಶಿಸಿ, ಶುಕ್ಲಶೋಣಿತಾದಿರೂಪವಾದ ಬೀಜಾವಸ್ಥೆಯನ್ನು ಹೊಂದುವುವು ||೧೨||

ಬಳಿಕ, ಜನನೇಂದ್ರಿಯದ್ವಾರಾ ಜಗತ್ತಿನಲ್ಲಿ ಹುಟ್ಟುವುವು. ಅನಂತರ, ಕಾಕತಾಳೀಯನ್ಯಾಯದಿಂದ ಆಕಸ್ಮಿಕವಾಗಿ ಹುಟ್ಟಿದ ತಮ್ಮ ವಾಸನಾಪ್ರವಾಹಕ್ಕೆ ಅನುಗುಣವಾದ ಕರ್ಮಗಳನ್ನು ಮಾಡುತ, ಆಯಾಕರ್ಮ ಫಲಗಳಿಗೆ ಭಾಗಿಗಳಾಗುವುವು ||೧೩||

ಆಮೇಲೆ, ವಾಸನಾವಲಿತವಾದ ಕರ್ಮಪಾಶಗಳಿಂದ ಕಟ್ಟಲ್ಪಟ್ಟ ಶರೀರವುಳ್ಳವುಗಳಾಗಿ, ನಾನಾಯೋನಿಗಳಲ್ಲಿ ಭ್ರಮಿಸುತ, ತಮ್ಮ ಕರ್ಮಾನುಗುಣವಾಗಿ ಉತ್ತಮಲೋಕವನ್ನಾಗಲಿ—ಅಧಮಲೋಕವನ್ನಾಗಲಿ ಹೊಂದುವುವು ||೧೪||

ಇಚ್ಛೈಕವೈ ತಾ ಭೂತಜಾತಯಃ ||೧೫||
ಕಾಶ್ಚಿಜ್ಜನ್ಮಸಹಸ್ರಾನ್ತಾಃ ಪತನ್ತಿ ವನಪರ್ಣವತ್ |
ಕರ್ಮವಾತ್ಯಾಪರಿಭ್ರಾನ್ತಾಃ ಲುಠನ್ತಿ ಗಿರಿಕುಕ್ಷಿಷು ||೧೬||
ಅಪ್ರಮೇಯಭವಾಃ ಕಾಶ್ಚಿತ್ ಚಿತ್ಸತ್ತಾಜ್ಞಾನಮೋಹಿತಾಃ |
ಚಿರಜಾತಾಭವನ್ತೀಹ ಬಹುಕಲ್ಪಶತಾನ್ಯಪಿ ||೧೭||
ಕಾಶ್ಚಿತ್ ಕತಿಪಯಾತೀತಾಮನೋರಮಭವಾನ್ತರಾಃ |
ವಿಹರನ್ತಿ ಜಗತ್ಯಸ್ಮಿನ್ ಶುಭಕರ್ಮಪರಾಯಣಾಃ ||೧೮||
ಕಾಶ್ಚಿದ್ವಿಜ್ಞಾತವಿಜ್ಞಾನಾಃ ಪರಮೇವ ಪದಂ ಗತಾಃ |
ವಾತೋದ್ಧೂತಾಃ ಪಯೋಮಧ್ಯಂ ಸಾಮುದ್ರಾ ಇವ ಬಿನ್ದವಃ ||೧೯||
ಉತ್ಪತ್ತಿಃ ಸರ್ವಜೀವಾನಾಂ ಇತೀಹ ಬ್ರಹ್ಮಣಃ ಪದಾತ್ |
ಆವಿರ್ಭಾವತಿರೋಭಾವಭಙ್ಗುರಾ ಭವಭಾವಿನೀ ||೨೦||
ವಾಸನಾವಿಷವೈಷಮ್ಯವೈಧುರ್ಯಜ್ವರಧಾರಿಣೀ |
ಅನನ್ತಸಙ್ಕಟಾನರ್ಥಕಾರ್ಯಸತ್ಕಾರಕಾರಿಣೀ ||೨೧||

ಅಯ್ಯಾ ! ರಾಮ ! ಅಂತು, ಕರ್ಮಕ್ಕೂ ಕರ್ಮವಾಸನೆಗೂ ಕಾಮವೇ ಬೀಜವಾಗಿರುವುದ ರಿಂದ, ಈ ಸಮಸ್ತ ಜೀವರಾಶಿಗಳೂ ಕಾಮಮಯವೇ ಆದುವೆಂದು ತಿಳಿಯಬೇಕು ||೧೫||

ಹೀಗಿರುವ ಈ ಜೀವರಾಶಿಗಳ ಮಧ್ಯದಲ್ಲಿ, ಕೆಲವು ಜೀವಗಳು, ಸಾವಿರಾರುಜನ್ಮಗಳನ್ನ ನುಭವಿಸಿ, ಕಾಡಿನಲ್ಲಿರುವ ಎಲೆಯಂತೆ ಸಂಸಾರದಲ್ಲಿ ಬಿದ್ದುಹೋಗುವುವು; ಆಮೇಲೆ ಕರ್ಮವಾಸನೆ ಯೆಂಬ ವಾತಸಮೂಹಕ್ಕೆ ಸಿಕ್ಕಿ ಸುತ್ತುತ, ನಾನಾವಿಧ ಯೋನಿಗಳೆಂಬ ಪರ್ವತಗುಹೆಗಳಲ್ಲಿ ಹೊರ ಳಾಡುವುವು ||೧೬||

ಮತ್ತೆ ಕೆಲವು ಜೀವರುಗಳು, ಆ ಚಿತ್ತಿನ ಸ್ವರೂಪವನ್ನು ತಿಳಿಯದೆ ಮೋಹಪರವಶರಾಗಿ, ಅಸಂಖ್ಯಾಕವಾದ ಜನ್ಮಪರಂಪರೆಯನ್ನನುಭವಿಸುತ, ಲಕ್ಷೋಪಲಕ್ಷ ಕಲ್ಪಗಳಾದರೂ ಈ ಪ್ರಪಂ ಚದಲ್ಲಿ ಹುಟ್ಟುತಲೇ ಇರುವರು ||೧೭||

ಇನ್ನು ಕೆಲವು ಜೀವಗಳು, ದುಃಖಬಹುಳವಾದ ಕೆಲವು ಜನ್ಮಾಂತರಗಳನ್ನತಿಕ್ರಮಿಸಿ, ಈ ಲೋಕದಲ್ಲಿ ಶುಭಕರ್ಮತತ್ಪರಗಳಾಗಿ ವಿಹರಿಸುವುವು ||೧೮||

ಮತ್ತೆ ಕೆಲವು ಜೀವಗಳು, ಗಾಳಿಯಿಂದ ಮೇಲಕ್ಕೆ ಹಾರಿಸಲ್ಪಟ್ಟ ಸಮುದ್ರಜಲಕಣಗಳು ಮತ್ತೆ ಆ ಸಮುದ್ರಜಲಮಧ್ಯವನ್ನೇ ಸೇರುವಂತೆ, ಜ್ಞಾನಸಂಪಾದನೆಯಿಂದ ಪರಮಪದವನ್ನೇ ಹೊಂದುವುವು ||೧೯||

ಅಯ್ಯಾ! ರಾಮ! ಹೀಗೆ ಆ ಬ್ರಹ್ಮನ ದೆಸೆಯಿಂದ ಸಮಸ್ತ ಭೂತಗಳೂ ಉದ್ಭವಿಸುವ ರೀತಿಯು ಉಕ್ತವಾಯಿತು. ಇದರಲ್ಲಿ, ಆವಿರ್ಭಾವತಿರೋಭಾವಗಳು ಮಧ್ಯಮಧ್ಯದಲ್ಲಿ ಕಾಣಿಸಿ ಕೊಳ್ಳುತಿರುವುವು ||೨೦||

ಕರ್ಮವಾಸನೆಯೆಂಬ ವಿಷದ ಪ್ರಾಬಲ್ಯದಿಂದ, ಇದರಲ್ಲಿ ಜ್ವರಸಂತಾಪವುಂಟಾಗುವುದು. ಅಪಾರವಾದ ಸಂಕಟವುಳ್ಳುದಾಗಿಯೂ ನಿಷ್ಫಲವಾಗಿಯೂ ಇರುವ ಕಾರ್ಯಗಳಿಗೆಲ್ಲ ಇದು ಮರ್ಯಾ ದೆಮಾಡತಕ್ಕುದಾಗಿರುವುದು ||೨೧||

ನಾನಾದಿಗ್ದೇಶಕಾಲಾನ್ತಶೈಲಕನ್ದರಚಾರಿಣೀ ।
ರಚಿತೋತ್ತಮವೈಚಿತ್ರ್ಯವಿಹಿತಾಸನ್ಮ್ರಮಾಽಸತೀ ॥೨೦॥
ಏಷಾ ಜಗಜ್ಜಾಙ್ಗಲಜೀರ್ಣವಲ್ಲೀ ಸಮ್ಯಕ್ಸಮಾಲೋಕಕುಠಾರಕೃತ್ತಾ ।
ವಲ್ಲೀವ ವಿಕ್ಷುಬ್ಧಮನಶ್ಶರೀರಾ ಭೂಯೋ ನ ಸಂರೋಹತಿ ರಾಮಭದ್ರ ॥೨೩॥

ಇತಿ ಉತ್ಪತ್ತಿಪ್ರಕರಣೇ ಉತ್ಪತ್ತಿದರ್ಶನಂ ನಾಮ
ತ್ರಿಣವತಿತಮಃ ಸರ್ಗಃ.

ಅನೇಕವಿಧವಾದ ದಿಕ್ಕುಗಳಲ್ಲಿಯೂ, ದೇಶಗಳಲ್ಲಿಯೂ, ಕಾಲಗಳಲ್ಲಿಯೂ, ಅನೇಕವಾದ ಪರ್ವತಗುಹೆಗಳಲ್ಲಿಯೂ, ಆಯಾ ಕರ್ಮಾನುಗುಣವಾಗಿ ಸಂಚಾರಮಾಡಿಸುತಿರುವುದು. ನಾನಾ ವಿಧವಾದ ವೈಚಿತ್ರ್ಯಗಳಿಂದ ಇದು ಮಾಡಲ್ಪಟ್ಟಿರುವುದು. ಇದರಲ್ಲಿ ಸರ್ವತ್ರ ಭ್ರಮೆಯೇ ವ್ಯಾಪಿಸಿರುವುದು. ಇದು ವಸ್ತುತಃ ಅಸತ್ಯವಾದುದು ॥೨೨॥

ಅಯ್ಯಾ! ರಾಮಭದ್ರ! ಈ ಜೀವೋತ್ಪತ್ತಿಯೆಂಬುದು, ಜಗತ್ತೆಂಬ ದೊಡ್ಡ ಕಾಡಿನಲ್ಲಿ ಜೀರ್ಣವಾದ ಲತೆಯಾಗಿರುವುದು. ಇದು ಉತ್ತಮವಾದ ವಿಚಾರವೆಂಬ ಕೊಡಲಿಯಿಂದ ಕತ್ತರಿಸಲ್ಪಟ್ಟರೆ, ಮನಸ್ಸೆಂಬ ಇದರ ಶರೀರವು ಕತ್ತರಿಸಿಹೋಗುವುದು. ಆಮೇಲೆ ಮತ್ತೆ ಇದು ಹುಟ್ಟುವುದಿಲ್ಲ ॥೨೩॥

ಇದು ಉತ್ಪತ್ತಿಪ್ರಕರಣದಲ್ಲಿ ಉತ್ಪತ್ತಿದರ್ಶನವೆಂಬ
ತೊಂಭತ್ತುಮೂರನೆಯ ಸರ್ಗವು,

ಅಥ ಉತ್ಪತ್ತಿಪ್ರಕರಣೇ ಚತುರ್ನವತಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಉತ್ತಮಾಧಮಮಧ್ಯಾನಾಂ ಪದಾರ್ಥಾನಾಮಿತಸ್ತತಃ ।
ಉತ್ಪತ್ತೀನಾಂ ವಿಭಾಗೋಽಯಂ ಶೃಣು ವಕ್ಷ್ಯಾಮಿ ರಾಘವ ॥೧॥
ಇದಂಪ್ರಥಮತೋತ್ಪನ್ನೋ ಯೋಽಸ್ಮಿನ್ನೇವ ಹಿ ಜನ್ಮನಿ ।
ಇದಂಪ್ರಥಮತಾನಾಮ್ನಾ ಶುಭಾಭ್ಯಾಸಸಮುದ್ಭವಾ ॥೨॥

ಉತ್ಪತ್ತಿಪ್ರಕರಣದಲ್ಲಿ ತೊಂಭತ್ತನಾಲ್ಕನೆಯ ಸರ್ಗವು.

ಇಹ ದ್ವಾದಶಧಾ ಭಿನ್ನಾಃ ವರ್ಣ್ಯನ್ತೇ ಜೀವಜಾತಯಃ ।
ಉಪಾಧಿಗುಣವೈಚಿತ್ರ್ಯಾತ್ ಚಿರಾಚಿರವಿಮುಕ್ತಿಗಾಃ ॥

ಗುಣತಾರತಮ್ಯರೂಪವಾದ ಕಾರಣದಿಂದ ಕಾಲವಿಳಂಬವಾಗಿ—ಅಥವಾ ಬೇಗನೆ—ಜೀವಗಳಿಗೆ ಮೋಕ್ಷವುಂಟಾಗುವುದೆಂದೂ, ಇಂತಹ ಗುಣವಿಭಾಗವುಳ್ಳ ಜೀವರಾಶಿಗಳು ಹನ್ನೆರಡುವಿಧ ಇರುವುವೆಂದೂ, ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಪುನಃ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು :—

ವತ್ಸ ! ರಾಮ ! ನಾನು ಹಿಂದೆ ಹೇಳಿದ ಜೀವಪದಾರ್ಥಗಳು ಸತ್ವರಜಸ್ತಮೋಗುಣವಿಶಿಷ್ಟವಾಗಿರುವುದರಿಂದ, ಅವುಗಳಲ್ಲಿ ಸತ್ವಗುಣಪ್ರಧಾನವಾದುವು ಉತ್ತಮಗಳೆಂದೂ, ರಜೋಗುಣಪ್ರಧಾನಗಳು ಮಧ್ಯಮಗಳೆಂದೂ, ತಮೋಗುಣಪ್ರಧಾನಗಳು ಅಧಮಗಳೆಂದೂ, ಪ್ರಥಮತಃ ಮೂರುವಿಧವಾಗಿ ವ್ಯವಸ್ಥೆಮಾಡಬೇಕು. ಇವುಗಳು ಮುಂದೆ ಜನ್ಮಪಡೆದಾಗ ಗುಣತಾರತಮ್ಯದಿಂದುಂಟಾಗುವ ವಿಭಾಗವೀರೀತಿಯಾಗಿರುವುದು. ಇದನ್ನು ನಿನಗೆ ಹೇಳುವೆನು ಕೇಳು ॥೧॥

ಇದಂಪ್ರಥಮತಾ, ಗುಣಪೀವರೀ, ಸಸತ್ವಾ, ಅಧಮಸತ್ವಾ, ಅತ್ಯಂತತಾಮಸೀ, ರಾಜಸೀ, ರಾಜಸಸಾತ್ವಿಕೀ, ರಾಜಸರಾಜಸೀ, ರಾಜಸತಾಮಸೀ, ರಾಜಸಾತ್ಯಂತತಾಮಸೀ, ತಾಮಸೀ, ತಾಮಸಸತ್ವಾ, ತಮೋರಾಜಸೀ, ತಾಮಸತಾಮಸೀ,—ಎಂದು ಹದಿನಾಲ್ಕುವಿಧ ಭೂತಜಾತಿಗಳುಂಟು. ಇವುಗಳಲ್ಲಿ, ಆಯ್ದನೆಯದಕ್ಕೂ ಹದಿನಾಲ್ಕನೆಯದಕ್ಕೂ ವಿಶೇಷ ವ್ಯತ್ಯಾಸವಿಲ್ಲ. ಹಾಗೆಯೇ, ಒಂಬತ್ತನೆಯದಕ್ಕೂ ಹದಿಮೂರನೆಯದಕ್ಕೂ ವಿಶೇಷ ಭೇದವಿಲ್ಲ. ಅಂತು, ಹನ್ನೆರಡು ಭೇದಗಳು ನಿಲ್ಲುವುವು. ಈ ಹದಿನಾಲ್ಕು ಭೇದಗಳ ಸ್ವರೂಪವನ್ನೂ ಕ್ರಮವಾಗಿ ನಿನಗೆ ಹೇಳುವೆನು. ಯಾವ ಜೀವನು, ಹಿಂದಿನಕಲ್ಪದ ಕೊನೆಯ ಜನ್ಮದಲ್ಲಿ ಶಮದಮಾದಿ ಸಾಧನಸಂಪನ್ನನಾಗಿದ್ದರೂ, ಶ್ರವಣಾದಿಗಳು ಲಭಿಸದೆಯೋ—ಅಥವಾ ಪ್ರತಿಬಂಧಕಕರ್ಮಪ್ರಾಬಲ್ಯದಿಂದಲೋ—ಮುಕ್ತನಾಗದೆ, ಈ ಕಲ್ಪದ ಪ್ರಥಮಜನ್ಮದಲ್ಲಿಯೇ ಶಮದಮಾದಿಸಂಪನ್ನನಾಗಿ ಮೋಕ್ಷಯೋಗ್ಯನಾಗುವನೋ, ಅವನ ಜೀವಜಾತಿಯು ಇದಂಪ್ರಥಮತೆಯೆಂದು ಹೇಳಲ್ಪಡುವುದು. ಇದು, ಪೂರ್ವಜನ್ಮದಲ್ಲಿ ಮಾಡಿದ ಶುಭಕರ್ಮಾಭ್ಯಾಸದಿಂದುಂಟಾದುದು ॥೨॥

ಶುಭಲೋಕಾಶ್ರಯಾ ಸಾಚ ಶುಭಕಾರ್ಯಾನುಬನ್ಧಿನೀ ।
ಸಾ ಚೇದ್ವಿಚಿತ್ರಸಂಸಾರವಾಸನಾವ್ಯವಹಾರಿಣೀ ।
ಭವೈಃ ಕತಿಪಯೈರ್ಮೋಕ್ಷಂ ಇತ್ಯುಕ್ತಾ ಗುಣಪೀವರೀ ॥೩॥
ತಾದೃಕ್ಫಲಪ್ರದಾನೈಕಕಾರ್ಯಾಕಾರ್ಯಾನುಮಾನದಾ ।
ತೇನ ರಾಮ ಸಸತ್ವೇತಿ ಪ್ರೋಚ್ಯತೇ ಸಾ ಕೃತಾತ್ಮಭಿಃ ॥೪॥
ಅಥ ಚೇಚ್ಚಿತ್ರಸಂಸಾರವಾಸನಾವ್ಯವಹಾರಿಣೀ ।
ಅತ್ಯನ್ತಕಲುಷಾ ಜನ್ಮಸಹಸ್ರೈರ್ಜ್ಞಾನಭಾಗಿನೀ ॥೫॥
ತಾದೃಕ್ಫಲಪ್ರದಾನೈಕಧರ್ಮಾಧರ್ಮಾನುಮಾನದಾ ।
ಅಸಾವಧಮಸತ್ವೇತಿ ತೇನ ಸಾಧುಭಿರುಚ್ಯತೇ ॥೬॥
ಸೈವ ಸಙ್ಖ್ಯಾತಿಗಾನನ್ತಜನ್ಮಬೃನ್ದಾದನನ್ತರಮ್ ।
ಸನ್ದಿಗ್ಧಮೋಕ್ಷಾ ಯದಿ ತತ್ ಪ್ರೋಚ್ಯತೇತ್ಯನ್ತತಾಮಸೀ ॥೭॥
ಅನದ್ಯತನಜನ್ಮಾ ತು ಜಾತಿಸ್ತಾದೃಶಕಾರಿಣೀ ।
ಯೋತ್ಪತ್ತಿರ್ಮಧ್ಯಮಾ ಪುಂಸೋ ರಾಮ ದ್ವಿತ್ರಿಭವಾನ್ತರಾ ॥೮॥

ಇದೇ ಜಾತಿಯು, ವೈರಾಗ್ಯಮಾಂದ್ಯದಿಂದ ಶುಭಲೋಕಾನುಭವೇಚ್ಛಾಪೂರ್ವಕವಾಗಿ ಶುಭ ಕಾರ್ಯಗಳನ್ನು ಮಾಡುತ ಬಂದರೆ, ಆಗ ಅದು ವಿಚಿತ್ರವಾದ ಸಂಸಾರವಾಸನಾನುಗುಣವಾಗಿ ನಾನಾವಿಧ ಕಾರ್ಯವುಳ್ಳದಾಗಿ, ಆ ಜನ್ಮದಲ್ಲಿಯೇ ಮೋಕ್ಷಪಡೆಯಲಶಕ್ತವಾಗಿ, ಮುಂದೆ ಕೆಲವು ಜನ್ಮಗಳು ಕಳೆದಬಳಿಕ ಮೋಕ್ಷಹೊಂದತಕ್ಕುದಾಗುವುದು. ಮೋಕ್ಷಯೋಗ್ಯವಾದ ಶಮದಮಾದಿ ಗುಣಗಳೂ ಸಂಸಾರಹೇತುವಾದ ರಾಗಾದಿ ಗುಣಗಳೂ ಇರುವುದರಿಂದ, ಇದು ಗುಣಪೀವರಿಯೆಂದು ಹೇಳಲ್ಪಡುವುದು ॥೩॥

'ಸಸತ್ವಾ' ಎಂಬ ಜಾತಿಯಲ್ಲಿ, ಪೂರ್ವಜನ್ಮಗಳಲ್ಲಿ ಮಾಡಿದ ಶುಭಾಶುಭಕರ್ಮಗಳ ಫಲವು ಅನುಭವಕ್ಕೆ ಬರುವುದು. ಈ ಫಲಪ್ರಾಪ್ತಿಯಿಂದಲೇ, ಪೂರ್ವಜನ್ಮದಲ್ಲಿ ಇಂತಹ ಶುಭಾಶುಭ ಕರ್ಮಗಳು ಮಾಡಲ್ಪಟ್ಟದ್ದುವೆಂದು ಊಹಿಸಬೇಕಾಗಿರುವುದು. ಇದು ನೂರಾರು ಜನ್ಮಗಳಲ್ಲಿ ಮೋಕ್ಷಪಡೆಯುವುದು. ಇಂತಹ ಜಾತಿಯು, ಪಂಡಿತರಿಂದ 'ಸಸತ್ವಾ' ಎಂದು ಹೇಳಲ್ಪಡುವುದು ॥೪॥

'ಅಧಮಸತ್ವ' ಎಂಬ ಜಾತಿಯಲ್ಲಿ, ವಿಚಿತ್ರವಾದ ಸಂಸಾರವಾಸನಾ ವ್ಯವಹಾರಗಳು ತುಂಬಿರುವುವು; ಇದು, ಜನ್ಮಾಂತರೀಯ ದುಷ್ಕರ್ಮವಾಸನಾ ಪ್ರಾಬಲ್ಯದಿಂದ ಮಲಿನವಾಗಿರುವುದು. ಇದರಲ್ಲಿಯೂ ಆಯಾ ಫಲಗಳಿಂದ ಪೂರ್ವಜನ್ಮದ ಧರ್ಮಗಳನ್ನು ಊಹಿಸಬೇಕಾಗಿರುವುದು. ಇದು ಸಾವಿರಾರು ಜನ್ಮಗಳಿಗೆ ಮೋಕ್ಷಭಾಗಿಯಾಗುವುದು. ಇಂತಹ ಜಾತಿಯು 'ಅಧಮಸತ್ವ' ಎಂದು ಸಾಧುಗಳಿಂದ ಹೇಳಲ್ಪಡುವುದು ॥೫-೬॥

ಇದೇ ಜಾತಿಯು, ಅಸಂಖ್ಯಾಕವಾಗಿ ಅನಂತವಾದ ಜನ್ಮಸಮೂಹಗಳು ಕಳೆದರೂ ಮೋಕ್ಷ ಪಡೆಯುವುದರಲ್ಲಿ ನಿಶ್ಚಯವಿಲ್ಲದುದಾಗಿದ್ದರೆ, ಇದು ಅತ್ಯಂತತಾಮಸಿಯೆಂದು ಹೇಳಲ್ಪಡುವುದು ॥೭॥

ಎಲೈ ರಾಜಶ್ರೇಷ್ಠನಾದ ರಾಮಚಂದ್ರನೆ! ರಾಜಸಿಯೆಂಬ ಜಾತಿಯು ಪೂರ್ವಕಲ್ಪದ ವಾಸನಾನುಸಾರವಾಗಿ ಆಯಾ ಕರ್ಮಗಳನ್ನು ಮಾಡುತಿರುವುದು. ಈ ಕಲ್ಪದಲ್ಲಿಯೂ ಎರಡು

ತಾದೃಕ್ಕಾರ್ಯಾ ತು ಸಾ ಲೋಕೇ ರಾಜಸೀ ರಾಜಸತ್ತಮ ।
ಅವಿಪ್ರಕೃಷ್ಟಜನ್ಮಾಪಿ ಸೋಚ್ಯತೇ ಕೃತಬುದ್ಧಿಭಿಃ ॥೯॥
ಸಾ ಹಿ ತಸ್ಮೃತಿಮಾತ್ರೇಣ ಮೋಕ್ಷಯೋಗ್ಯಾ ಮುಮುಕ್ಷುಭಿಃ ।
ತಾದೃಕ್ಕಾರ್ಯಾನುಮಾನೇನ ಪ್ರೋಕ್ತಾ ರಾಜಸಸಾತ್ತ್ವಿಕೀ ॥೧೦॥
ಸೈವ ಚೇದಿತರೈರಲ್ಪೈಃ ಜನ್ಮಭಿರ್ಮೋಕ್ಷಭಾಗಿನೀ ।
ತತ್ ತಾದೃಶೀ ಹಿ ಸಾ ತಜ್ಜ್ಞೈಃ ಪ್ರೋಕ್ತಾ ರಾಜಸರಾಜಸೀ ॥೧೧॥
ಸೈವ ಜನ್ಮಶತೈರ್ಮೋಕ್ಷಭಾಗಿನೀ ಚೇಚ್ಚಿರೈಷಿಣೀ ।
ತದುಕ್ತಾ ತಾದೃಗಾರಬ್ಧಾ ಸದ್ಭೀರಾಜಸತಾಮಸೀ ॥೧೨॥
ಸೈವ ಸನ್ದಿಗ್ಧಮೋಕ್ಷಾ ಚೇತ್ ಸಹಸ್ರೈರಪಿ ಜನ್ಮನಾಮ್ ।
ತದುಕ್ತಾ ತಾದೃಶಾರಬ್ಧಾ ರಾಜಸಾತ್ಯನ್ತತಾಮಸೀ ॥೧೩॥
ಭುಕ್ತಜನ್ಮಸಹಸ್ರಾ ತು ಯೋತ್ಪತ್ತಿರ್ಬ್ರಹ್ಮಣೋ ನೃಣಾಮ್ ।
ಚಿರಮೋಕ್ಷಾ ಹಿ ಕಥಿತಾ ತಾಮಸೀ ಸಾ ಮಹರ್ಷಿಭಿಃ ॥೧೪॥
ತಜ್ಜನ್ಮನೈವ ಮೋಕ್ಷಸ್ಯ ಭಾಗಿನೀ ಚೇತ್ ತದುಚ್ಯತೇ ।
ತಜ್ಜ್ಞೈಸ್ತಾಮಸಸತ್ತ್ವೇತಿ ತಾದೃಶಾರಬ್ಧಶಾಲಿನೀ ॥೧೫॥

ಮೂರು ಜನ್ಮಗಳಲ್ಲಿ ಮನುಷ್ಯಲೋಕದೊಳಗೆ ಹುಟ್ಟುವುದು. ಇದು ರಾಜಸಿಯೆಂದು ವಿದ್ವಾಂಸರಿಂದ ಹೇಳಲ್ಪಡುವುದು ॥೮—೯॥

ಈ ಜಾತಿಯೇ, ಆಯಾ ಫಲಗಳಿಂದ ಊಹಿಸಬೇಕಾದ ಪೂರ್ವಜನ್ಮದ ಕರ್ಮಗಳುಳ್ಳುದಾಗಿ, ಆ ಜನ್ಮದಲ್ಲಿ ಮರಣಮಾತ್ರದಿಂದಲೇ ಮೋಕ್ಷಪಡೆಯುವುದಕ್ಕೆ ತಕ್ಕುದಾಗಿದ್ದರೆ, ಇದು ರಾಜಸಸಾತ್ವಿಕೆಯೆಂದು ಮುಮುಕ್ಷುಗಳಿಂದ ಹೇಳಲ್ಪಟ್ಟಿರುವುದು ॥೧೦॥

ಪೂರೋಕ್ತಗುಣವಿಶಿಷ್ಟವಾಗಿರುವ ಜಾತಿಯೇ, ಮನುಷ್ಯಜನ್ಮವಲ್ಲದೆ ಇತರವಾದ ಯಕ್ಷಗಂಧರ್ವಾದಿ ಜನ್ಮಗಳನ್ನು ಸ್ವಲ್ಪವಾಗಿ ಪಡೆದು ಮೋಕ್ಷಭಾಗಿಯಾಗುವ ಪಕ್ಷದಲ್ಲಿ, ಅದು ರಾಜಸರಾಜಸಿಯೆಂದು ಅದರ ಸ್ವರೂಪವನ್ನು ಬಲ್ಲವರಿಂದ ಹೇಳಲ್ಪಟ್ಟಿರುವುದು ॥೧೧॥

ಈ ಜಾತಿಯೇ ನೂರಾರು ಜನ್ಮ ಕಳೆದನಂತರ ಮೋಕ್ಷಭಾಗಿನಿಯಾಗುವ ಪಕ್ಷದಲ್ಲಿ, ಅದು ರಾಜಸತಾಮಸಿಯೆಂದು ಸಾಧುಗಳಿಂದ ಹೇಳಲ್ಪಟ್ಟಿರುವುದು ॥೧೨॥

ಈ ಜಾತಿಯೇ, ಸಾವಿರಾರು ಜನ್ಮ ಕಳೆದರೂ ಮೋಕ್ಷ ಪಡೆಯುವುದರಲ್ಲಿ ಸಂಶಯವುಳ್ಳುದಾಗಿದ್ದ ಪಕ್ಷದಲ್ಲಿ, ಆಗ ರಾಜಸಾತ್ಯಂತತಾಮಸಿಯೆಂದು ಹೇಳಲ್ಪಡುವುದು ॥೧೩॥

ಸಾವಿರ ಜನ್ಮಗಳನ್ನನುಭವಿಸಿದ ಬಳಿಕ ಹಿರಣ್ಯಗರ್ಭ ಬ್ರಹ್ಮನ ದೆಸೆಯಿಂದ ಹುಟ್ಟುವುದಾವುದುಂಟೋ, ಬಹುಕಾಲಾನಂತರ ಮೋಕ್ಷಪಡೆಯುವ ಆ ಜಾತಿಯು ತಾಮಸಿಯೆಂದು ಮಹರ್ಷಿಗಳಿಂದ ಹೇಳಲ್ಪಟ್ಟಿರುವುದು ॥೧೪॥

ಪೂರ್ವೋಕ್ತವಾದ ಜಾತಿಯೇ, ಆ ಜನ್ಮದಲ್ಲಿಯೇ ಮೋಕ್ಷಹೊಂದತಕ್ಕುದಾಗಿದ್ದು ಅದಕ್ಕನುಗುಣವಾದ ಕರ್ಮಗಳನ್ನು ಮಾಡುತಿದ್ದರೆ, ಅದು ತಾಮಸಸತ್ವವೆಂದು ಹೇಳಲ್ಪಡುವುದು ॥

ಭವ್ಯೈಃ ಕತಿಪಯೈರ್ಮೋಕ್ಷಭಾಗಿನೀ ಚೇತ್ ತದುಚ್ಯತೇ |
ತಮೋರಾಜಸರೂಪೇತಿ ತಾದೃಶೈರ್ಗುಣಬೃಂಹಿತೈಃ ||೧೬||
ಪೂರ್ವಜನ್ಮಸಹಸ್ರಾಢ್ಯಾ ಪುರೋಜನ್ಮಶತೈರಪಿ |
ಮೋಕ್ಷಾಯೋಗ್ಯಾ ತತಃ ಪ್ರೋಕ್ತಾ ತಜ್ಜ್ಞೈಸ್ತಾಮಸತಾಮಸೀ ||೧೭||
ಪೂರ್ವಂ ತು ಜನ್ಮಲಕ್ಷಾಢ್ಯಾ ಜನ್ಮಲಕ್ಷೈಃ ಪುರೋಪಿ ಚೇತ್ |
ಸನ್ದಿಗ್ಧಮೋಕ್ಷಾ ತದಸೌ ಪ್ರೋಚ್ಯತೇತ್ಯನ್ತತಾಮಸೀ ||೧೮||
ಸರ್ವಾಏತಾಃ ಸಮಾಯಾನ್ತಿ ಬ್ರಹ್ಮಣೋ ಭೂತಜಾತಯಃ |
ಕಿಞ್ಚಿತ್ ಪ್ರಚಲಿತಾಭೋಗಾತ್ ಪಯೋರಾಶೇರಿವೋರ್ಮಯಃ ||೧೯||
ಸರ್ವ್ವಾಏವ ವಿನಿಷ್ಕ್ರಾನ್ತಾಃ ಬ್ರಹ್ಮಣೋ ಜೀವರಾಶಯಃ |
ಸ್ವತೇಜಸ್ಸ್ಪನ್ದಿತಾಭೋಗಾತ್ ದೀಪಾದಿವ ಮರೀಚಯಃ ||೨೦||
ಸರ್ವ್ವಾಏವ ಸಮುತ್ಪನ್ನಾಃ ಬ್ರಹ್ಮಣೋ ಭೂತಪಙ್ಕ್ತಯಃ |
ಸ್ವಮರೀಚಿಬಲೋದ್ಭೂತಾತ್ ಜ್ವಲಿತಾಗ್ನೇಃ ಕಣಾಇವ ||೨೧||
ಸರ್ವ್ವಾಏವೋತ್ಥಿತಾಸ್ತಸ್ಮಾತ್ ಬ್ರಹ್ಮಣೋ ಜೀವರಾಶಯಃ |
ಮನ್ದಾರಮಞ್ಜರೀರೂಪಾಃ ಚನ್ದ್ರಬಿಮ್ಬಾದಿವಾಂಶವಃ ||೨೨||
ಸರ್ವ್ವಾಏವ ಸಮುತ್ಪನ್ನಾಃ ಬ್ರಹ್ಮಣೋ ದೃಶ್ಯದೃಷ್ಟಯಃ |
ಯಥಾ ವಿಟಪಿನಶ್ಚಿತ್ರಾಃ ತದ್ರೂಪಾವಿಟಪಶ್ರಿಯಃ ||೨೩||

ಪೂರ್ವೋಕ್ತ ಗುಣವಿಶಿಷ್ಟವಾಗಿರುವ ಜಾತಿಯೇ ಕೆಲವು ಜನ್ಮಗಳು ಕಳೆದು ಮೋಕ್ಷಪಡೆಯುವುದಾಗಿದ್ದಪಕ್ಷದಲ್ಲಿ, ತಮೋರಾಜಸವೆಂದು ಹೇಳುವರು ॥೧೬॥

ಹಿಂದೆ ಸಾವಿರಾರು ಜನ್ಮ ಕಳೆದು ಮುಂದೆಯೂ ಸಾವಿರಾರು ಜನ್ಮಗಳಾದರೂ ಮೋಕ್ಷ ಪಡೆಯಲಯೋಗ್ಯವಾಗಿದ್ದಪಕ್ಷದಲ್ಲಿ, ಅದು ಪ್ರಾಜ್ಞರಾದವರಿಂದ ತಾಮಸತಾಮಸಿಯೆಂದು ಹೇಳಲ್ಪಡುವುದು ॥೧೭॥

ಹಿಂದೆ ಲಕ್ಷಜನ್ಮ ಕಳೆದು ಮುಂದೆಯೂ ಲಕ್ಷ ಜನ್ಮಗಳು ಕಳೆದರೂ ಮೋಕ್ಷಪಡೆಯುವುದರಲ್ಲಿ ಸಂಶಯವುಳ್ಳದಾಗಿದ್ದರೆ, ಅದು ಅತ್ಯಂತತಾಮಸಿಯೆನ್ನಿಸಿಕೊಳ್ಳುವುದು ॥ ೧೮ ॥

ಈ ಸಮಸ್ತ ಭೂತಜಾತಿಗಳೂ ಕೂಡ, ಸಮುದ್ರದದೆಸೆಯಿಂದ ಅಲೆಗಳು ಹುಟ್ಟುವಂತೆ, ಮಾಯಾಸಾನ್ನಿಧ್ಯದಿಂದ ಸ್ವಲ್ಪ ಚಲಿತವಾದ ಬ್ರಹ್ಮನ ದೆಸೆಯಿಂದ ಹುಟ್ಟಿರುವುವು ॥೧೯॥

ತನ್ನ ತೇಜಸ್ಸಿನಿಂದ ಸ್ವಲ್ಪ ಚಲಿಸಿದ ದೀಪದದೆಸೆಯಿಂದ ಜ್ವಾಲೆಗಳು ಹುಟ್ಟುವಂತೆ, ಈ ಸಮಸ್ತ ಭೂತಜಾತಿಗಳೂ ಬ್ರಹ್ಮನ ದೆಸೆಯಿಂದ ಹುಟ್ಟುವುವು ॥೨೦॥

ತನ್ನ ಜ್ವಾಲೆಯಿಂದ ಚಲಿಸುತಿರುವ ಅಗ್ನಿಯ ದೆಸೆಯಿಂದ ಕಿಡಿಗಳು ಹುಟ್ಟುವಂತೆ, ಈ ಸಮಸ್ತ ಭೂತಜಾತಿಗಳೂ ಬ್ರಹ್ಮನ ದೆಸೆಯಿಂದ ಹುಟ್ಟುವುವು ॥೨೧॥

ಚಂದ್ರಮಂಡಲದದೆಸೆಯಿಂದ ಮಂದಾರಪುಷ್ಪಗುಚ್ಛಸದೃಶವಾದ ಚಂದ್ರಿಕೆಗಳು ಹೊರಡುವಂತೆ, ಈ ಸಮಸ್ತ ಜೀವರಾಶಿಗಳೂ ಬ್ರಹ್ಮನ ದೆಸೆಯಿಂದ ಉದಯಿಸಿರುವುವು ॥೨೨॥

ಒಂದು ಮರದದೆಸೆಯಿಂದ ಅದಕ್ಕೆ ಸಮಾನವಾಗಿಯೇ ಇರುವ ಕೊಂಬೆಗಳು ಹೊರಡುವಂತೆ, ಈ ಸಮಸ್ತ ದೃಶ್ಯಜಾತಗಳೂ ಬ್ರಹ್ಮನ ದೆಸೆಯಿಂದ ಉದಯಿಸುವುವು ॥೨೩॥

ಸರ್ವಾ ಏವ ಸಮುತ್ಪನ್ನಾಃ ಬ್ರಹ್ಮಣೋ ಜೀವಪಙ್ಕ್ತಯಃ ।
ಕಟಕಾಙ್ಗದಕೇಯೂರಯುಕ್ತಯಃ ಕನಕಾದಿವ ॥೧೪॥
ಸರ್ವಾ ಏವೋತ್ಥಿತಾ ರಾಮ ಬ್ರಹ್ಮಣೋ ಜೀವರಾಶಯಃ ।
ನಿರ್ಝರಾದಮಲೋದ್ಯೋತಾತ್ ಪಯಸಾಮಿವ ಬಿನ್ದವಃ ॥೧೫॥
ಅಜಸ್ಯೈವಾಖಿಲಾ ರಾಮ ಭೂತಸನ್ತತಿಕಲ್ಪನಾಃ ।
ಆಕಾಶಸ್ಯ ಘಟಸ್ಥಾಲೀರನ್ಧ್ರಾಕಾಶಾದಯೋ ಯಥಾ ॥೧೬॥
ಸರ್ವಾ ಏವೋತ್ಥಿತಾ ಲೋಕಕಲನಾ ಬ್ರಹ್ಮಣಃ ಪದಾತ್ ।
ಸೀಕರಾವರ್ತಲಹರೀಬಿನ್ದವಃ ಪಯಸೋ ಯಥಾ ॥೧೭॥
ಸರ್ವಾ ಏವೋತ್ಥಿತಾ ರಾಮ ಬ್ರಹ್ಮಣೋ ದೃಶ್ಯದೃಷ್ಟಯಃ ।
ಮೃಗತೃಷ್ಣಾತರಙ್ಗಿಣ್ಯೋ ಯಥಾ ಭಾಸ್ಕರತೇಜಸಃ ॥೧೮॥
ಸರ್ವಾ ದೃಶ್ಯದೃಶೋ ದ್ರಷ್ಟುಃ ವ್ಯತಿರಿಕ್ತಾ ನ ರೂಪತಃ ।
ಶೀತರಶ್ಮೇರಿವ ಜ್ಯೋತ್ಸ್ನಾ ಸ್ವಾಲೋಕ ಇವ ತೇಜಸಃ ॥೧೯॥
ಏವಮೇತಾ ಹಿ ಭೂತಾನಾಂ ಜಾತಯೋ ವಿವಿಧಾಶ್ಚ ಯಾಃ ।
ಯಸ್ಮಾದೇವ ಸಮಾಯಾನ್ತಿ ತಸ್ಮಿನ್ನೇವ ವಿಶನ್ತಿ ಚ ॥೨೦॥
ಕಾಶ್ಚಿಜ್ಜನ್ಮಸಹಸ್ರಾನ್ತೇ ಜಾತಯಶ್ಚಿರಕಾಲಿಕಾಃ ।
ಕಾಶ್ಚಿತ್ ಕತಿಪಯಾತೀತಜನ್ಮರೂಪಾ ವ್ಯವಸ್ಥಿತಾಃ ॥೨೧॥

ಕಟಕ ಅಂಗದ ಕೇಯೂರ— ಮುಂತಾದ ಪದಾರ್ಥಗಳು ಸುವರ್ಣದದೆಸೆಯಿಂದ ಉಂಟಾಗುವಂತೆ, ಈ ಸಮಸ್ತ ಭೂತಪರಂಪರೆಗಳೂ ಬ್ರಹ್ಮನ ದೆಸೆಯಿಂದ ಉದಯಿಸುವುವು ॥೧೪॥

ಅಯ್ಯಾ ರಾಮ! ಶುದ್ಧವಾದ ಗಿರಿನದೀ ಪ್ರವಾಹದದೆಸೆಯಿಂದ ಜಲಕಣಗಳು ಹುಟ್ಟುವಂತೆ, ಸಮಸ್ತ ಭೂತಜಾತಗಳೂ ಬ್ರಹ್ಮನ ದೆಸೆಯಿಂದ ಉದಯಿಸುವುವು ॥೧೫॥

ಅಯ್ಯಾ ರಾಮ! ಘಟ ಸ್ಥಾಲಿ ರಂಧ್ರ—ಇತ್ಯಾದಿ ಪದಾರ್ಥಗಳಲ್ಲಿರುವ ಆಕಾಶವೆಲ್ಲವೂ ಹೇಗೆ ಮಹಾಕಾಶದ ಕಲ್ಪನೆಗಳೇ ಆಗಿರುವುವೋ, ಹಾಗೆ ಈ ಸಮಸ್ತ ಭೂತಜಾತಿಗಳೂ ಬ್ರಹ್ಮನ ಕಲ್ಪನೆಗಳೇ ಆಗಿರುವುವು ॥೧೬॥

ತುಂತುರು ಸುಳಿ ಪ್ರವಾಹ ಹನಿ— ಇವುಗಳೆಲ್ಲವೂ ನೀರಿನ ದೆಸೆಯಿಂದ ಹೇಗೆ ಹುಟ್ಟುವುವೋ, ಹಾಗೆ ಈ ಸಮಸ್ತ ಲೋಕಕಲ್ಪನೆಯೂ ಬ್ರಹ್ಮನ ದೆಸೆಯಿಂದ ಹುಟ್ಟುವುದು ॥೧೭॥

ಸೂರ್ಯನ ಕಿರಣದ ದೆಸೆಯಿಂದ ಮೃಗತೃಷ್ಣಿಕಾಜಲವು ಹೇಗೆ ಹುಟ್ಟುವುದೋ, ಹಾಗೆ ಈ ದೃಶ್ಯಜಾತವೆಲ್ಲವೂ ಬ್ರಹ್ಮನ ದೆಸೆಯಿಂದ ಹುಟ್ಟುವುದು ॥೧೮॥

ಬೆಳದಿಂಗಳು ಚಂದ್ರನಿಗಿಂತ ಬೇರೆಯಲ್ಲದಿರುವಂತೆಯೂ, ಪ್ರಕಾಶವು ತೇಜಸ್ಸಿಗಿಂತ ಬೇರೆಯಲ್ಲದಿರುವಂತೆಯೂ, ಈ ಸಮಸ್ತ ದೃಶ್ಯವೂ ದ್ರಷ್ಟೃ(ಬ್ರಹ್ಮ)ವಿಗಿಂತ ಸ್ವರೂಪತಃ ಬೇರೆಯಲ್ಲದುದಾಗಿರುವುದು ॥೧೯॥

ಅಯ್ಯಾ ರಾಮ! ಈ ರೀತಿಯಾಗಿರುವ ನಾನಾವಿಧ ಭೂತಜಾತಿಗಳೆಲ್ಲವೂ, ತಾವು ಯಾವುದರಿಂದ ಉದಯಿಸುವುವೋ—ಅದರಲ್ಲಿಯೇ ಲಯಹೊಂದುವುವು ॥೨೦॥

ಇವುಗಳಲ್ಲಿ ಕೆಲವು ಭೂತಜಾತಿಗಳು, ಸಾವಿರಾರು ಜನ್ಮ ಕಳೆದು ಬಹುಕಾಲದಿಂದಿರತಕ್ಕುವು; ಮತ್ತೆ ಕೆಲವು ಜಾತಿಗಳು, ಕೆಲವು ಜನ್ಮಗಳನ್ನು ಮಾತ್ರ ಕಳೆದಿರುವುವು ॥೨೧॥

ಇತ್ಥಂ ಜಗತ್ಸು ವಿವಿಧೇಷು ವಿಚಿತ್ರರೂಪಾಃ
ತಸ್ಯೇಚ್ಛಯಾ ಭಗವತೋ ವ್ಯವಹಾರವತ್ಯಃ ।
ಆಯಾನ್ತಿ ಯಾನ್ತಿ ನಿಪತನ್ತಿ ತಥೋತ್ಪತನ್ತಿ
ರೂಪಶ್ರಿಯಃ ಕಣಘಟಾಇವ ಪಾವಕೋತ್ಥಾಃ ॥೩೦॥

ಇತಿ ಉತ್ಪತ್ತಿಪ್ರಕರಣೇ ಬ್ರಹ್ಮಣಃ ಸರ್ವಮುತ್ಪದ್ಯತ ಇತಿ ಕಥನಂ
ನಾಮ ಚತುರ್ಣವತಿತಮಃ ಸರ್ಗಃ.

ಈ ವಿಧವಾಗಿರುವ ಜೀವರಾಶಿಗಳು, ಆ ಪರಮಾತ್ಮನ ಇಚ್ಛಾನುಗುಣವಾಗಿ ನಾನಾವಿಧವಾದ ಲೋಕಗಳಲ್ಲಿ ನಾನಾವಿಧ ರೂಪಗಳನ್ನು ಪಡೆಯುತ, ಬೆಂಕಿಯ ಕಿಡಿಗಳಂತೆ, ಬರುತಲೂ ಹೋಗುತಲೂ ಬೀಳುತಲೂ ಏಳುತಲೂ ಇರುವುವು ॥೩೦॥

ಇದು ಉತ್ಪತ್ತಿಪ್ರಕರಣದಲ್ಲಿ ಬ್ರಹ್ಮನ ದೆಸೆಯಿಂದ ಸಕಲವೂ ಉದಯಿಸುವ ಬಗೆಯನ್ನು
ವರ್ಣಿಸುವುದೆಂಬ ತೊಂಭತ್ತನಾಲ್ಕನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚನವತಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಅಭಿನ್ನೌ ಕರ್ಮಕರ್ತಾರೌ ಸಮಮೇವ ಪರಾತ್ ಪದಾತ್ ।
ಸ್ವಯಂ ಪ್ರಕಟತಾಂ ಯಾತೌ ಪುಷ್ಪಾಮೋದೌ ತರೋರಿವ ॥೧॥
ಸರ್ವಸಙ್ಕಲ್ಪನಾಮುಕ್ತೇ ಜೀವಾ ಬ್ರಹ್ಮಣಿ ನಿರ್ಮಲೇ ।
ಸ್ಫುರನ್ತಿ ವಿತತೇ ವ್ಯೋಮ್ನಿ ನೀಲಿಮೇವಾಜ್ಞ ಚಕ್ಷುಷಃ ॥೨॥
ಅಪ್ರಬುದ್ಧ ಜನಾಚಾರೋ ಯತ್ರ ರಾಘವ ದೃಶ್ಯತೇ ।
ತತ್ರ ಬ್ರಹ್ಮಣ ಉತ್ಪನ್ನಾಃ ಜೀವಾ ಇತ್ಯುಕ್ತಯಃ ಸ್ಥಿತಾಃ ॥೩॥
ಸಮ್ಪ್ರಬುದ್ಧ ಜನಾಚಾರೇ ವಕ್ತುಮೇತನ್ನ ಶೋಭನಮ್ ।
ಯದ್ಬ್ರಹ್ಮಣ ಇದಂ ಜಾತಂ ನ ಜಾತಂ ಚೇತಿ ರಾಘವ ॥೪॥
ಕಾಚಿದ್ಯಾ ಕಲನಾ ಯಾವತ್ ನ ನೀತಾ ರಾಘವ ಪ್ರಥಾಮ್ ।
ಉಪದೇಶ್ಯೋಪದೇಶಶ್ರೀಃ ತಾವಲ್ಲೋಕೇ ನ ಶೋಭತೇ ॥೫॥

ಉತ್ಪತ್ತಿಪ್ರಕರಣದಲ್ಲಿ ತೊಂಭತ್ತೈದನೆಯ ಸರ್ಗವು.

ಅಪ್ರಬುದ್ಧ ಜನೌಘಸ್ಯ ಪ್ರಬೋಧಾಯ ನ ವಸ್ತುತಃ ।
ಕರ್ಮಕರ್ತ್ರೋಃ ಸಹೋದ್ಭೂತಿಃ ಆಕ್ಷಿಪ್ಯೇಹ ಸಮರ್ಥ್ಯತೇ ॥

ಕರ್ಮಕರ್ತೃಗಳಿಬ್ಬರೂ ಜತೆಯಲ್ಲಿಯೇ ಸೇರಿರುವರೆಂದೂ, ಈ ವಿಷಯವು ಅಪ್ರಬುದ್ಧರ ಬೋಧೋದಯಕ್ಕಾಗಿ ಹೇಳಲ್ಪಡುವುದೇ ಹೊರತು ವಾಸ್ತವ್ಯವಲ್ಲವೆಂದೂ, ಈ ಸರ್ಗದಲ್ಲಿ ಆಕ್ಷೇಪಣಪುರಸ್ಸರವಾಗಿ ನಿರ್ಣಯಿಸಲ್ಪಡುವುದು.

ಪುನಃ ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ ರಾಮ! ಒಂದೇ ಮರದದೆಸೆಯಿಂದ ಪುಷ್ಪವೂ ಪರಿಮಳವೂ ಜತೆಯಲ್ಲಿಯೇ ಹುಟ್ಟುವಂತೆ, ಕರ್ಮವೂ ಕರ್ತೃವೂ ಪರಮಾತ್ಮನ ದೆಸೆಯಿಂದ ಜತೆಯಲ್ಲಿಯೇ ಪ್ರಕಟವಾಗುವುವು॥

ವಿಶಾಲವಾದ ಆಕಾಶದಲ್ಲಿ ಅಜ್ಞರ ಕಣ್ಣಿಗೆ ನೈಲ್ಯವು ಕಾಣುವಂತೆ, ಸರ್ವಸಂಕಲ್ಪರಹಿತವಾಗಿ ನಿರ್ಮಲವಾಗಿರುವ ಬ್ರಹ್ಮನಲ್ಲಿ ಈ ಸಮಸ್ತ ಜೀವಗಳೂ ಸ್ಫುರಿಸುವುವು ॥೨॥

ಅಯ್ಯಾ ರಾಘವ! ಯಾವ ಸ್ಥಿತಿಯಲ್ಲಿ ಅಪ್ರಬುದ್ಧರ ಆಚಾರವು ಕಾಣಿಸಿಕೊಳ್ಳುವುದೋ, ಅಲ್ಲಿ 'ಜೀವರು ಬ್ರಹ್ಮನ ದೆಸೆಯಿಂದ ಉತ್ಪನ್ನರಾದರು' ಎಂಬ ವ್ಯವಹಾರವಿರುವುದು ॥೩॥

ವತ್ಸ! ರಾಘವ! ಬ್ರಹ್ಮನ ದೆಸೆಯಿಂದ ಈ ಪ್ರಪಂಚವು ಜನಿಸಿತೆಂದೂ—ಅಥವಾ ಜನಿಸಿಲ್ಲವೆಂದೂ ಹೇಳುವ ಮಾತಾವುದಿರುವುದೋ, ಅದು—ಪ್ರಾಜ್ಞರ ಆಚಾರವುಂಟಾಗಿರುವ ಸ್ಥಿತಿಯಲ್ಲಿ ಹೇಳಲಯುಕ್ತವಾದುದು ॥೪॥

'ಹಾಗಾದರೆ, ಪರಮಾರ್ಥವನ್ನುಪದೇಶಿಸುವುದಕ್ಕೆ ಪ್ರವರ್ತಿಸಿರುವ ಶಾಸ್ತ್ರದಲ್ಲಿ, ಅಜ್ಞಾದಪ್ರಾಪ್ತವಾಗಿ ತೋರುವ ಸೃಷ್ಟ್ಯಾದಿಗಳನ್ನು ಏಕೆ ವಿವರಿಸಿರುವುದು?' ಎಂದರೆ,—ಪ್ರಪಂಚದಲ್ಲಿ, ಯಾವುದಾದರೊಂದು ಕಲ್ಪನೆಯೆಲ್ಲಿಯವರೆಗೆ ಮಾಡಲ್ಪಡುವುದಿಲ್ಲವೋ, ಅಲ್ಲಿಯವರೆಗೆ—ಉಪದೇಶ್ಯವೆಂದೂ ಉಪದೇಶವೆಂದೂ ವ್ಯವಹಾರವೇ ಶೋಭಿಸುವುದಿಲ್ಲ॥೫॥

ಅತೋ ಭೇದದೃಶಾ ದೀನಾಂ ಅಙ್ಗೀಕೃತ್ಯೋಪದಿಶ್ಯತೇ |
ಬ್ರಹ್ಮೇದಮೇತೇ ಜೀವಾವ್ವೈ ವೇತಿ ವಾಚಾಮಯಂ ಕ್ರಮಃ ||೬||
ಇತಿ ದೃಷ್ಟೋ ನಿರಾಸಙ್ಗಾತ್ ಬ್ರಹ್ಮಣೋ ಜಾಯತೇ ಜಗತ್ |
ತಜ್ಜಂ ತದೇವ ತದ್ಧೇತುಗಕಂ ದುರವಬೋಧತಃ ||೭||
ಮೇರುಮನ್ದರಸಙ್ಕಾಶಾಃ ಬಹವೋ ಜೀವರಾಶಯಃ |
ಉತ್ಪತ್ಯೋತ್ಪತ್ಯ ಸಂಲೀನಾಃ ತಸ್ಮಿನ್ನೇವ ಪರೇ ಪದೇ ||೮||
ಅಥಾನನ್ತಾಃ ಸ್ಫುರನ್ತ್ಯೇತೇ ಜಾಯಮಾನಾಃ ಸಹಸ್ರಶಃ |
ನಾನಾಃ ಕಕುಬ್ನಿಕುಞ್ಜೇಷು ಪಾದಪೇಷ್ವಿವ ಪಲ್ಲವಾಃ ||೯||
ಜೀವೌಘಾಶ್ಚೋದ್ಭವಿಷ್ಯನ್ತಿ ಮಧಾವಿವ ನವಾಙ್ಕುರಾಃ |
ತತ್ರೈವ ಲಯಮೇಷ್ಯನ್ತಿ ಗ್ರೀಷ್ಮೇ ಮಧುರಸಾ ಇವ ||೧೦||
ತಿಷ್ಠನ್ತ್ಯಜಸ್ರಂ ಕಾಲೇಷು ತಪಿವಾನ್ಯೇ ಚ ಭೂರಿಶಃ |
ಜಾಯನ್ತೇ ಚ ಪ್ರಲೀಯನ್ತೇ ಪರಸ್ಮಿನ್ ಜೀವರಾಶಯಃ ||೧೧||

ಅದುಕಾರಣ, ಭೇದದೃಷ್ಟಿಯಿಂದ ಶೋಚನೀಯವಾದ ದ್ವೈತಕಲ್ಪನೆಯನ್ನಂಗೀಕರಿಸಿ, ಇದು ಬ್ರಹ್ಮವೆಂದೂ—ಇವರು ಜೀವರೆಂದೂ ಈ ವಿಧವಾದ ವ್ಯವಹಾರವು ಉಪದೇಶಿಸಲ್ಪಡುವುದು ||೬||

ಅನಂಗನಾಗಿಯೂ ಅದ್ವಿತೀಯನಾಗಿಯೂ ಇರುವ ಪರಮಾತ್ಮನ ದೆಸೆಯಿಂದ ಜಗತ್ತು ಉತ್ಪನ್ನವಾಗುವುದು. ಆ ಪರಮಾತ್ಮನ ದೆಸೆಯಿಂದ ಹುಟ್ಟಿದುದೂ ಆ ಬ್ರಹ್ಮವೇ ಆಗಿರುವುದು. ಆದರೆ, ಇದು ಆ ಬ್ರಹ್ಮನನ್ನು ಕಾರಣವನ್ನಾಗಿ ಮಾಡಿಕೊಂಡು ಹುಟ್ಟಿ—ಅದಕ್ಕಿಂತ ಪೃಥಕ್ಕಾಗಿದೆಯೆಂಬ ವ್ಯವಹಾರವು, ಕೇವಲ ಭ್ರಮೆಯಿಂದ ಉಂಟಾಗಿರುವುದು. ಹೀಗೆಂಬ ವಾದವು, ಪ್ರಪಂಚದಲ್ಲಿ ಸರ್ವತ್ರ ಪ್ರಾಜ್ಞರ ಅನುಭವಸಿದ್ಧವಾಗಿಯೇ ಇರುವುದು ||೭||

ಮೇರು ಮಂದರ ಪರ್ವತಗಳಿಗೆ ಸಮಾನವಾಗಿರುವ ಅನೇಕ ಜೀವರಾಶಿಗಳು, ಉದಯಿಸಿ ಉದಯಿಸಿ, ಆ ಪರಮಪದದಲ್ಲಿಯೇ ಲಯಹೊಂದಿರುವುವು ||೮||

ಹಾಗೆಯೇ,ಮರಗಳಲ್ಲಿ ಚಿಗುರುಗಳು ಹುಟ್ಟುವಂತೆ, ಅನಂತವಾಗಿರುವ ನಾನಾವಿಧ ಜೀವರಾಶಿಗಳು ಸರ್ವದಿಕ್ಕುಗಳಲ್ಲಿಯೂ ಸಾವಿರಗಟ್ಟಲೆಯಾಗಿ ವರ್ತಮಾನಕಾಲದಲ್ಲಿಯೂ ಜನ್ಮವೆತ್ತಿ ಸ್ಫುರಿಸುತಿರುವುವು ||೯||

ಭವಿಷ್ಯತ್ಕಾಲಗಳಲ್ಲಿಯೂಕೂಡ, ವಸಂತಕಾಲದಲ್ಲಿ ಹೊಸದಾಗಿ ಅಂಕುರಗಳು ಹುಟ್ಟುವಂತೆ, ಅನೇಕ ಜೀವಸಮೂಹಗಳು ಬ್ರಹ್ಮನಲ್ಲಿ ಉದಯಿಸುವುವು. ಮತ್ತು, ಗ್ರೀಷ್ಮಋತುವಿನಲ್ಲಿ ಮಕರಂದರಸಗಳು ಶೋಷಿಸಿ ಹೋಗುವಂತೆ, ಆ ಬ್ರಹ್ಮನಲ್ಲಿಯೇ ಲಯವನ್ನೂ ಹೊಂದುವುವು ||೧೦||

ಹೀಗೆ ಹುಟ್ಟಿದ ಜೀವಗಳೂ, ಇನ್ನೂ ಅನೇಕವಾದ ಜೀವರಾಶಿಗಳೂ, ಭೂತಭವಿಷ್ಯದ್ವರ್ತಮಾನಕಾಲಗಳಲ್ಲಿ ಆ ಪರಮಾತ್ಮನೊಳಗೆ ನಿರಂತರವಾಗಿ ಇರುವುವು. ಮತ್ತು ಹುಟ್ಟುತಲೂ ಲಯಹೊಂದುತಲೂ ಇರುವುವು ||೧೧||

ಪುಷ್ಪಾಮೋದಾವಿವಾಭಿನ್ನೌ ಪುರ್ವಾ ಕರ್ಮ ಚ ರಾಘವ ।
ಪರಮೇಶಾತ್ ಸಮಾಯಾತೇ ತತ್ರೈವ ವಿಶತಃ ಶನೈಃ ॥೧೦॥
ದೃಷ್ಟಮೇತೇ ಜಗತ್ಯಸ್ಮಿನ್ ದೈತ್ಯೋರಗನರಾಮರಾಃ ।
ಉದ್ಭವನ್ತ್ಯಭವಾಭಾವೈಃ ಪ್ರಸ್ಫುರನ್ತಿ ಪುನಃಪುನಃ ॥೧೧॥
ಹೇತುರ್ವಿಹರಣೇ ತೇಷಾಂ ಆತ್ಮವಿಸ್ಮರಣಾದೃತೇ ।

ಅಯ್ಯಾ ರಾಘವ! ಮುಖ್ಯವಿಷಯವನ್ನು ಕೇಳು:—**ಪುಷ್ಪವೂ ಪರಿಮಳವೂ ಇರುವಂತೆ**—ಸರ್ವದಾ ಅಭಿನ್ನಗಳಾಗಿರುವ ಕರ್ತೃಕರ್ಮಗಳು, ಪರಮಾತ್ಮನಿಂದ ಉದಯಿಸಿರುವುವು; ಅಲ್ಲಿಯೇ ಮೆಲ್ಲಗೆ ಲಯವನ್ನೂ ಹೊಂದುವುವು ॥೧೦॥

ವಸ್ತುತಃ ಉತ್ಪತ್ತಿರಹಿತರಾಗಿದ್ದರೂ—ವಾಸನಾವಿಶೇಷದಿಂದ ಉದಯಹೊಂದುವರಂತೆ ಕಾಣುವ—ದೈತ್ಯ ಸರ್ಪ ದೇವ ಮನುಷ್ಯಪ್ರಮುಖರಾದವರು **ಪುನಃಪುನಃ** ಸ್ಫುರಿಸುತಿರುವರೆಂಬುದು, ಈ ಪ್ರಪಂಚದಲ್ಲಿ ಸರ್ವಾನುಭವಸಿದ್ಧವಾಗಿರುವುದಲ್ಲವೆ! ಈ ಸಂದರ್ಭದಲ್ಲಿ ಕರ್ಮವೂ ಕರ್ತನೂ ಜತೆಯಲ್ಲಿ ಉದ್ಭವಿಸುವರೆಂಬುದು ಗೊತ್ತಾಗುವುದಿಲ್ಲವೆ! ॥೧೧॥

ಅಯ್ಯಾ ಸಾಧುಶಿಖಾಮಣಿಯೆ! ಇವರುಗಳು ಹೀಗೆ ವಿಹರಿಸಿಕೊಂಡಿರುವುದಕ್ಕೆ ಕಾರಣವೇನೆನ್ನುವೆಯೋ?—ಅವರುಗಳು ಸ್ವಸ್ವರೂಪವನ್ನು ಮರೆತಿರುವರು. ಇದೇ ಇವರಿಗೆ ಜನ್ಮಾಂತರರೂಪವಾದ ಫಲವನ್ನು ಕೊಡತಕ್ಕುದಾಗಿರುವುದು. ಹೀಗೆ ಅವರಿಗೆ ಸ್ವಸ್ವರೂಪ ವಿಸ್ಮೃತಿಯೇ ಕಾರಣವಲ್ಲದೆ, ಮತ್ತೊಂದೂ ಕಾರಣವಲ್ಲ. ಇಲ್ಲಿ ವಿಶೇಷವಾಗಿ ಸೂಕ್ಷ್ಮವಿಚಾರವಿರುವುದು. ಏನೆಂದರೆ:—ಕರ್ಮವೂ ಕರ್ತೃವೂ ಜತೆಯಲ್ಲಿಯೇ ಬ್ರಹ್ಮನದೆಸೆಯಿಂದ ಉದಯಿಸುತಲೂ ಲಯಹೊಂದುತಲೂ ಇರುವರು. ಹೀಗೆ ಉದಯಲಯಗಳನ್ನು ಹೊಂದುವುದಕ್ಕೆ ಜೀವರ ಸ್ವಸ್ವರೂಪ ವಿಸ್ಮೃತಿಯೇ ಕಾರಣವು. ಕರ್ತೃವು ಅನಾದಿಯೆಂದು ಹೇಳುವುದು ಸಾಧ್ಯವಲ್ಲ. ಹಾಗೆ ಹೇಳಿದರೆ, ಮುಂದೆ ತೋರಿಸುವ ಅನುಪಪತ್ತಿಗಳು ಬರುವುವು. ಕರ್ತೃತ್ವವು ಅನಾದಿಸಿದ್ಧವೆ? ಅಥವಾ ಯಾವುದಾದರೊಂದು ಕಾರಣದಿಂದ ಸಿದ್ಧಿಸುವುದೆ? ಅನಾದಿಯಾಗಿ ಸ್ವಭಾವಸಿದ್ಧವಾಗಿದ್ದಪಕ್ಷದಲ್ಲಿ, ಅನಾದಿಸಿದ್ಧಸ್ವಭಾವವಾದ ಅಗ್ನಿಯ ಉಷ್ಣತೆಯು ಪರಿಹರಿಸುವುದಕ್ಕೆ ಅಸಾಧ್ಯವಾಗಿರುವಂತೆ, ಈ ಕರ್ತೃವೂ ಸಾವಿರಾರು ಉಪಾಯಮಾಡಿದರೂ ಪರಿಹರಿಸಲಸಾಧ್ಯವಾಗುವುದು. ಹೀಗಾದಮೇಲೆ, ಆತ್ಮನಿಗೆ ಮೋಕ್ಷವೆಂಬುದೇ ಇಲ್ಲವಾಗುವುದು. ಆದಲ್ಲದೆ, ಉಪಾಧಿ(ಕಾರಣ)ಜನ್ಯವೆಂದು ಹೇಳುವಪಕ್ಷದಲ್ಲಿ,—ಆವುಪಾಧಿಯಾವುದು? ಅವಿದ್ಯೆಯೋ? ಅಥವಾ ಬೇರೆ ಯಾವುದಾದರೂ ಇದೆಯೆ? ಅವಿದ್ಯೆಯೆನ್ನುವಪಕ್ಷದಲ್ಲಿ, ನಾವು ಹೇಳುವ ಸಿದ್ಧಾಂತದಲ್ಲಿಯೇ ಈ ಪಕ್ಷವೂ ಫಲತಃ ಅಂತರ್ಭವಿಸಿದಹಾಗಾಗುವುದು. ಈಪಕ್ಷದಲ್ಲಿ ಮತ್ತೊಂದುವಿಧವಾದ ಶಂಕೆಯೂ ಇರುವುದು. ಏನೆಂದರೆ,—ಈ ಅವಿದ್ಯೆಯು ಆತ್ಮನಲ್ಲಿ ಕರ್ತೃವನ್ನುಂಟುಮಾಡುವಿಕೆಯು—ಸ್ವತಃ ಇರುವುದೆ? ಅಥವಾ ಮತ್ತೊಂದು ಪದಾರ್ಥದ ಸಹಾಯದಿಂದಲೆ? ಸ್ವತಃ ಅವಿದ್ಯೆಯು ಆತ್ಮನಲ್ಲಿ ಕರ್ತೃತ್ವವನ್ನುಂಟುಮಾಡುವ ಶಕ್ತಿಯುಳ್ಳದೆಂದು ಹೇಳಿದರೆ,—ಅಂತಹ ಶಕ್ತಿಯುಳ್ಳ ಅವಿದ್ಯೆಯು ಸುಷುಪ್ತಿಮೂರ್ಛಾದಿಕಾಲಗಳಲ್ಲಿಯೂ ಆತ್ಮನಲ್ಲಿ ಕರ್ತೃತ್ವವನ್ನುಂಟುಮಾಡಿ—ಆಗಲೂ ಆತ್ಮನಿಂದ ಕರ್ಮಗಳನ್ನು ಮಾಡಿಸಬಹುದಾಗಿದ್ದಿತೆಂದು ಶಂಕೆಯುಂಟಾಗುವುದು. ಮೂರ್ಛಾದಿಸಮಯಗಳಲ್ಲಿ ಆತ್ಮನು ಕರ್ಮಮಾಡುತಿರುವುದು ಅನುಭವವಿರುದ್ಧವು. ಇದುಬಿಟ್ಟು, ಅವಿದ್ಯೆಯು ಮತ್ತೊಂದರ ಸಹಾಯದಿಂದ ಕರ್ತೃತ್ವವನ್ನುಂಟುಮಾಡತಕ್ಕುದೆಂದು ಹೇಳುವಪಕ್ಷದಲ್ಲಿ,—ಯಾವ ಉಪಾಧಿ(ಸಹಾಯ)

ನ ಕಶ್ಚಿಲ್ಲಕ್ಷ್ಯತೇ ಸಾಧೋ ಜನ್ಮಾಂತರಫಲಪ್ರದಃ ॥೧೪॥

ಶ್ರೀ ರಾಮಉವಾಚ.

ಅವಿಸಂವಾದಿ ನಾರ್ಥೇ ಯತ್ ಯತ್ ಪ್ರಾಮಾಣಿಕದೃಷ್ಟಿಭಿಃ ।
ವೀತರಾಗೈರ್ವಿನಿರ್ಣೀತಂ ತಚ್ಛಾಸ್ತ್ರಮಿತಿ ಕಥ್ಯತೇ ॥೧೫॥

ಯಿಂದ ಅವಿದ್ಯೆಯು ಕರ್ತೃತ್ವವನ್ನುಂಟುಮಾಡುವುದೋ—ಆವುಪಾಧಿಯೇ ಸಾಕ್ಷಾತ್ತಾಗಿ ಆತ್ಮನಲ್ಲಿ ಕರ್ತೃತ್ವವನ್ನುಂಟುಮಾಡುವುದೆಂದು ಏತಕ್ಕೆ ಹೇಳಬಾರದು? ಆತ್ಮನಲ್ಲಿ ಕರ್ತೃತ್ವವುಂಟಾಗುವುದಕ್ಕೆ ಅವಿದ್ಯೆ ಉಪಾಧಿಯೆಂದೂ, ಈ ಅವಿದ್ಯೆಗೆ ಇಂತಹ ಶಕ್ತಿಯುಂಟಾಗುವುದಕ್ಕೆ ಮತ್ತೊಂದು ಉಪಾಧಿಯಿರುವುದೆಂದೂ ಕಲ್ಪಿಸುವುದು ಕೇವಲ ಗೌರವಪಕ್ಷವೇ ಹೊರತು, ಇದು ಯುಕ್ತವಾಗಿ ಕಾಣಿಸುವುದಿಲ್ಲ. ಒಂದು ಉಪಾಧಿಗೆ ಮತ್ತೊಂದುಪಾಧಿಯನ್ನು ಕಲ್ಪಿಸುವುದು ಅನಾವಶ್ಯಕವಾಗಿರುವುದು. ಅಯ್ಯಾ ರಾಮ! ಹೀಗೆ, ಆತ್ಮನಲ್ಲಿ ಕರ್ತೃವು ಔಪಾಧಿಕವೆಂದೂ ಅವಿದ್ಯೆಯೇ ಆವುಪಾಧಿಯೆಂದೂ ಹೇಳುವಪಕ್ಷದಲ್ಲಿರುವ ವಿಚಾರವೆಲ್ಲವೂ ಗೊತ್ತಾಯ್ತಷ್ಟೆ! ಈಗ, ಆತ್ಮನಲ್ಲಿ ಕರ್ತೃತ್ವವು ಔಪಾಧಿಕವೆಂದೂ—ಆವುಪಾಧಿಯು ಅವಿದ್ಯೆಯಲ್ಲವೆಂದೂ—ಮತ್ತಾವುದೋ ಒಂದಿರುವುದೆಂದೂ—ಹೇಳುವಪಕ್ಷದಲ್ಲಿರತಕ್ಕ ವಿಚಾರವನ್ನು ಕೇಳುವವನಾಗು:—ಈ ಪಕ್ಷದಲ್ಲಿ, ಆವುಪಾಧಿ ಯಾವುದೆಂದು ಪ್ರಶ್ನೆಮಾಡಿದರೆ, ಆಗ ಆವುಪಾಧಿಯು ಅವಿದ್ಯಾಕಾರ್ಯವೆಂದಾಗಲಿ—ಅಥವಾ ಸ್ವತಂತ್ರವಾದ ಮತ್ತಾವುದೋ ಒಂದು ಪದಾರ್ಥವಿರುವುದೆಂದಾಗಲಿ—ಒಪ್ಪಬೇಕಾಗುವುದು. ಸ್ವತಂತ್ರವೆಂದು ಹೇಳಿದರೆ, ಆಗ 'ಅದು ಅನಾದಿಯೇ?—ಅಥವಾ ಸಾದಿ(ಆದಿಯುಳ್ಳದು)ಯೇ?' ಎಂದು ಕೇಳಬೇಕಾಗುವುದು. ಅನಾದಿಯಾಗಿರುವುದೆಂದು ಹೇಳಿದರೆ,—ಆಗ ಅದು ಸುಷುಪ್ತಿ ಪ್ರಳಯಕಾಲಗಳಲ್ಲಿಯೂ ಆತ್ಮನಿಗೆ ಕರ್ತೃತ್ವವನ್ನುಂಟುಮಾಡಬೇಕಾಗಿದ್ದಿತೆಂದು ಆಕ್ಷೇಪಣೆ ಬರುವುದು. ಸಾದಿಯೆಂದು ಹೇಳುವಪಕ್ಷದಲ್ಲಿ,—ಇಂತಹ ಸಾದಿಯಾದ ಉಪಾಧಿಯಿಂದುಂಟಾದ ಕರ್ತೃತ್ವವೂ ಸಾದಿಯೇ ಆಗಬೇಕಾಗುವುದು. ಹೀಗಾಗಿಬಿಟ್ಟಮೇಲೆ, ಕರ್ತೃತ್ವವು ಅನಾದಿಯೆಂದು ಮೊದಲು ಮಾಡಿದ ಪ್ರತಿಜ್ಞೆಯೇ ಅಸಿದ್ಧವಾಗುವುದು. ಇದನ್ನು ಬಿಟ್ಟು, ಅವಿದ್ಯಾಕಾರ್ಯವೇ ಆತ್ಮನಲ್ಲಿ ಕರ್ತೃತ್ವವುಂಟಾಗುವುದಕ್ಕೆ ಉಪಾಧಿಯೆಂದು ಹೇಳಿದರೆ,—ಆಗಲೂ ಈ ದೋಷಗಳು ಇದ್ದೇಇರುವುವು. ಹೀಗೆ ಈ ಪಕ್ಷಗಳಲ್ಲೆಲ್ಲ ದೋಷವಿರುವುದರಿಂದ, ಆತ್ಮವಿಸ್ಮೃತಿಯೇ ಉತ್ಪತ್ತಿಲಯಾದಿಗಳಲ್ಲಿ ಹೇತುಭೂತವೆಂಬ ಪಕ್ಷವೇ ಕೊನೆಗೆ ನಿಲ್ಲುವುದೆಂದು ತಿಳಿಯಬೇಕು. 'ಏತೇಭ್ಯೋ ಭೂತೇಭ್ಯಃ ಸಮುತ್ಥಾಯ ತಾನ್ಯೇವಾನುವಿನಶ್ಯತಿ' ಇತ್ಯಾದಿ ಶ್ರುತಿಗಳೂ ಈ ವಿಷಯದಲ್ಲಿ ಪ್ರಮಾಣವಾಗಿರುವುವು ॥೧೪॥

ಹೀಗೆ ಹೇಳುತಿರುವ ಶ್ರೀ ವಸಿಷ್ಠರ ಮಾತನ್ನು ಕೇಳಿದ ಶ್ರೀರಾಮನು, ಅವರ ಅಭಿಪ್ರಾಯದಲ್ಲಿ ಅನುಪಪತ್ತಿಯನ್ನು ತೋರಿಸುವುದಕ್ಕೆ ಹೊರಟವನಾಗಿ, ಪ್ರಥಮತಃ ಅದಕ್ಕೆ ತಕ್ಕಂತೆ ಭೂಮಿಕಾರಚನೆಯನ್ನು ಮಾಡಿಕೊಳ್ಳುವುದಕ್ಕಾಗಿ, ಶ್ರೀ ವಸಿಷ್ಠರನ್ನು ಕುರಿತು ಹೇಳಲುಪಕ್ರಮಿಸಿದನು:—

ಪೂಜ್ಯರೆ! ಪ್ರಪಂಚದಲ್ಲಿ ಯಾವ ವಿಷಯವನ್ನು ನಿರ್ಣಯಿಸಬೇಕಾದರೂ, ಪ್ರಥಮತಃ ಶಾಸ್ತ್ರಗಳೂ ಸದಾಚಾರಗಳೂ ಪ್ರಮಾಣಗಳಲ್ಲವೆ! ಹೀಗಿರುವುದರಿಂದ, ಮೊದಲು ಶಾಸ್ತ್ರಸ್ವರೂಪವನ್ನು ತಿಳಿಯಬೇಕಾಗಿರುವುದು. ಯಾವುದು ಅರ್ಥದಲ್ಲಿ ಪರಸ್ಪರ ವಿರೋಧವಿಲ್ಲದುದಾಗಿರುವುದೋ, ಯಾವುದು ಕೇವಲ ಪ್ರಾಮಾಣಿಕಜ್ಞಾನವುಳ್ಳವರಾಗಿಯೂ ಕಾಮಕ್ರೋಧಾದಿರಹಿತರಾಗಿಯೂ ಇರುವವರಿಂದ ನಿರ್ಣಯಿಸಲ್ಪಟ್ಟಿರುವುದೋ, ಅದು ಶಾಸ್ತ್ರವೆಂದು ಹೇಳಲ್ಪಡುವುದು ॥೧೫॥

ಮಹಾಸತ್ತ್ವಗುಣೋಪೇತಾಃ ಯೇ ಧೀರಾಃ ಸಮದೃಷ್ಟಯಃ ।
ಅನಿರ್ದೇಶ್ಯಕಲೋಪೇತಾಃ ಸಾಧವಸ್ತ ಉದಾಹೃತಾಃ ॥೧೬॥
ದ್ವಯಂ ಹಿ ದೃಷ್ಟಿರ್ಬಾಲಾನಾಂ ಸಿದ್ಧಯೇ ಸರ್ವಕರ್ಮಣಾಮ್ ।
ಸಾಧುವೃತ್ತಂ ತಥಾ ಶಾಸ್ತ್ರಂ ಸರ್ವದೈವಾನುವರ್ತತೇ ॥೧೭॥
ಸಾಧುಸಂವ್ಯವಹಾರಾರ್ಥಂ ಶಾಸ್ತ್ರಂ ಯೋ ನಾನುವರ್ತತೇ ।
ಬಹಿಃ ಕುರ್ವನ್ತಿ ತಂ ಸರ್ವೇ ಸ ಚ ದುಃಖೇ ನಿಮಜ್ಜತಿ ॥೧೮॥
ಇಹ ಲೋಕೇ ಚ ವೇದೇ ಚ ಶ್ರುತಿರಿತ್ಥಂ ಸದಾ ಪ್ರಭೋ ।
ಯಥಾ ಕರ್ಮ ಚ ಕರ್ತಾ ಚ ಪರ್ಯಾಯೇಣೇಹ ಸಙ್ಗತೌ ॥೧೯॥
ಕರ್ಮಣಾ ಕ್ರಿಯತೇ ಕರ್ತಾ ಕರ್ತ್ರಾ ಕರ್ಮ ಪ್ರಣೀಯತೇ ।
ಬೀಜಾಙ್ಕುರಾದಿವನ್ನ್ಯಾಯೋ ಲೋಕವೇದೋಕ್ತ ಏವ ಸಃ ॥೨೦॥
ಕರ್ಮಣೋ ಜಾಯತೇ ಜನ್ತುಃ ಬೀಜಾದಿವ ನವಾಙ್ಕುರಃ ।
ಜನ್ತೋಃ ಪ್ರಜಾಯತೇ ಕರ್ಮ ಪುನರ್ಬೀಜಮಿವಾಙ್ಕುರಾತ್ ॥೨೧॥
ಯಯಾ ವಾಸನಯಾ ಜನ್ತುಃ ನೀಯತೇ ಭವಪಞ್ಜರೇ ।
ತದ್ವಾಸನಾನುರೂಪೇಣ ಫಲಂ ಸಮನುಭೂಯತೇ ॥೨೨॥

ಯಾರು—ಅತಿ ಶುದ್ಧವಾದ ಸತ್ವಗುಣದಿಂದ ಕೂಡಿದವರಾಗಿಯೂ—ಸುಖದುಃಖಾದಿಗಳಿಗೆ ಪರವಶವಾಗದ ಹೃದಯವುಳ್ಳವರಾಗಿಯೂ—ರಾಗದ್ವೇಷಶೂನ್ಯರಾಗಿಯೂ—ವಾಚಾಮಗೋಚರವಾದ ಆ ನಿರತಿಶಯವಾದ ಬ್ರಹ್ಮಾನಂದದೊಡಗೂಡಿದವರಾಗಿಯೂ ಇರುವರೋ,-ಅವರು ಸಾಧುಗಳೆಂದು ಹೇಳಲ್ಪಟ್ಟಿರುವರು ॥೧೬॥

ಹೀಗೆ, ಇಂತಹ ಸಾಧುಗಳ ಆಚರಣೆ ಶಾಸ್ತ್ರ ಇವೆರಡೂ, ಅಜ್ಞರಿಗೆ ಸರ್ವಕರ್ಮ ಸಿದ್ಧಿಪ್ರದವಾಗಿ ಸರ್ವದಾ ಅನುಸರಿಸಿಕೊಂಡು ಬರುತಿರುವುವು ॥೧೭॥

ಹೀಗೆ ಅನುಸರಿಸಿಬಂದು ಸದಾಚಾರಪ್ರಯೋಜನಕರವಾಗಿರುವ ಶಾಸ್ತ್ರವನ್ನು ಯಾವ ಮೂಢನು ಅನುಸರಿಸುವುದಿಲ್ಲವೋ, ಅವನನ್ನು ಸಮಸ್ತರಾದ ಶಿಷ್ಟರೂ ಬಹಿಷ್ಕರಿಸುವರು; ಇದಲ್ಲದೆ, ಅವನು ಅಪಾರವಾದ ದುಃಖದಲ್ಲಿಯೂ ಮುಣುಗುವನು ॥೧೮॥

ಹೇ ಗುರೋ! ಹೀಗಿರುವುದರಿಂದ, ಶಾಸ್ತ್ರವನ್ನೂ ಸದಾಚಾರವನ್ನೂ ಅಂಗೀಕರಿಸಿಯೇ ತೀರಬೇಕಾಗುವುದು. ಸಕಲ ಶಾಸ್ತ್ರಗಳಿಗೂ ಮೂರ್ಧನ್ಯವಾದ ಶ್ರುತಿಯು, ಕರ್ಮವೂ ಕರ್ತನೂ ಪರ್ಯಾಯವಾಗಿ(ಒಂದಾದಮೇಲೊಂದು) ಸೇರುವರೆಂದು ಹೇಳುವುದು. ಲೋಕದಲ್ಲಿಯೂ ಶಿಷ್ಟರ ಅಭಿಪ್ರಾಯವೀರೀತಿಯಾಗಿಯೇ ಇರುವುದು ॥೧೯॥

ಅಂತು, ಕರ್ಮದಿಂದ ಕರ್ತೃವು ಮಾಡಲ್ಪಡುವನು; ಹಾಗೆಯೇ, ಕರ್ತೃವಿನಿಂದ ಕರ್ಮವು ಮಾಡಲ್ಪಡುವುದು. ಬೀಜಾಂಕುರಾದಿಗಳಂತಿರುವ ಈ ನ್ಯಾಯವು ಲೋಕದಲ್ಲೆಲ್ಲ ಪ್ರಸಿದ್ಧವಾಗಿರುವುದು. ವೇದದಲ್ಲಿಯೂ ಈ ನ್ಯಾಯವೇ ಹೇಳಲ್ಪಟ್ಟಿರುವುದು ॥೨೦॥

ಬೀಜದಿಂದ ಹೊಸದಾಗಿ ಅಂಕುರಹುಟ್ಟುವಂತೆ, ಕರ್ಮದದೆಸೆಯಿಂದ ಜೀವನು ಹುಟ್ಟುವನು. ಪುನಃ ಅಂಕುರದಿಂದ ಬೀಜ ಹುಟ್ಟುವಂತೆ, ಜೀವನದೆಸೆಯಿಂದ ಕರ್ಮವು ಜನಿಸುವುದು ॥

ಯಾವ ಕರ್ಮವಾಸನೆಯಿಂದ ಜೀವನು ಸಂಸಾರಪಂಜರದಲ್ಲಿ ಸೇರಿಸಲ್ಪಡುವನೋ, ಆ ವಾಸನೆಗನುಸಾರವಾಗಿ ಅವನು ಫಲವನ್ನನುಭವಿಸುವನು ॥೨೨॥

ಏವಂ ಸ್ಥಿತೇ ಕಥಂ ನಾಮ ಜನ್ಮಬೀಜೇನ ಕರ್ಮಣಾ |
ವಿನೋತ್ಪತ್ತಿಸ್ತ್ವಯಾ ಪ್ರೋಕ್ತಾ ಭೂತಾನಾಂ ಬ್ರಹ್ಮಣಃ ಪದಾತ್ ||೨೩||
ಪಕ್ಷೇಣಾನೇನ ಭಗವನ್ ಭವತಾ ಜೀವಕರ್ಮಣೋಃ |
ತಿರಸ್ಕೃತಾ ಜಗಜ್ಜಾತಾ ಸಾಽವಿನಾಭಾವಿತೈತಯೋಃ ||೨೪||
ಬ್ರಹ್ಮಣ್ಯಕಾರಣೇ ಬ್ರಹ್ಮನ್ ಬ್ರಹ್ಮಾದಿಷು ಫಲೇಷು ಚ |
ಕರ್ಮಣಾಂ ಫಲಮಸ್ತೀತಿ ದ್ವಯಂ ಲೋಕೇ ಪ್ರಮಾರ್ಜಿತಮ್ ||೨೫||
ಸಞ್ಜಾತೇ ಸಙ್ಕರೇ ಲೋಕೇ ಕರ್ಮಸ್ವಫಲದಾಯಿಷು |
ಮಾತ್ಸ್ಯನ್ಯಾಯೇ ವಿಲಸತಿ ನಾಶಏವಾವಶಿಷ್ಯತೇ ||೨೬||
ಕಿಂ ತತ್ ಕೃತಂ ಭವತ್ಯೇವ ಭಗವನ್ ಬ್ರೂಹಿ ತತ್ತ್ವತಃ |
ಏವಂ ಮೇ ಸಂಶಯಂ ಸ್ಫಾರಂ ಛಿನ್ಧಿ ವೇದ್ಯವಿದಾಂ ವರ ||೨೭||

ಶ್ರೀ ವಸಿಷ್ಠ ಉವಾಚ.

ಸಾಧು ರಾಘವ ಪೃಷ್ಟೋಽಸ್ಮಿ ತ್ವಯಾ ಪ್ರಶ್ನಮಿಮಂ ಶುಭಮ್ |

ಸ್ವಾಮಿ! ವಸಿಷ್ಠರೆ! ಹೀಗಿರುವಾಗ, ಜನ್ಮಕ್ಕೆ ಬೀಜಭೂತವಾದ ಕರ್ಮವಿಲ್ಲದೆಯೇ ಪರಬ್ರಹ್ಮನದೆಸೆಯಿಂದ ಜೀವಗಳು ಹುಟ್ಟುವುವೆಂದು ತಾವು ಹೇಗೆ ಅಪ್ಪಣೆಕೊಟ್ಟಿರಿ? ॥೨೩॥

ಪೂಜ್ಯರೆ! ತಾವು ಈಗ ಹೇಳಿದ ಕರ್ತೃಕರ್ಮಗಳು ಜತೆಯಲ್ಲಿ ಹುಟ್ಟುವುವೆಂಬಪಕ್ಷದಿಂದ, ಜೀವನೂ ಕರ್ಮವೂ ಒಂದನ್ನು ಬಿಟ್ಟು ಮತ್ತೊಂದಿರುವುದಿಲ್ಲವೆಂದು ಜಗತ್ತಿನಲ್ಲಿ ಸುಪ್ರಸಿದ್ಧವಾಗಿರುವ ವ್ಯವಹಾರವು ತಿರಸ್ಕರಿಸಲ್ಪಟ್ಟಂತಾಗುವುದಲ್ಲವೆ! ॥೨೪॥

ಎಲೈ ಬ್ರಾಹ್ಮಣೋತ್ತಮರಾದ ವಸಿಷ್ಠರೆ! ಅದ್ವಿತೀಯನಾಗಿ ಕಾರಣಾಂತರಶೂನ್ಯನಾಗಿರುವ ಮಾಯಾಶಬಳನಾದ ಬ್ರಹ್ಮನಲ್ಲಿ—ಆಕಾಶ ಮೊದಲು ಸ್ಥೂಲದೇಹದವರೆಗಿರುವ ಭೋಗಾಯತನ ಸೃಷ್ಟಿರೂಪವಾದ ಕರ್ಮಫಲವಿರುವುದೆಂದೂ, ತತ್ಫಲಭೂತರಾದ ಚತುರ್ಮುಖಾದಿಗಳಲ್ಲಿ— ಭೋಗಸಾಮಗ್ರೀ ಸೃಷ್ಟಿರೂಪವಾದ ಕರ್ಮಫಲವಿರುವುದೆಂದೂ, ಪ್ರಪಂಚದಲ್ಲಿ ಸರ್ವರೂ ಹೇಳುವರು. ಈಗ ತಾವು ಅಪ್ಪಣೆಕೊಟ್ಟಿರುವ ಪಕ್ಷವನ್ನು ಪರ್ಯಾಲೋಚಿಸಿದರೆ, ಲೋಕವಾದಸಿದ್ಧವಾಗಿರುವ ಈ ಕರ್ಮಫಲಗಳೆರಡೂ ತೊಡೆಯಲ್ಪಟ್ಟಂತಾಗುವುದು ॥೨೫॥

ಪೂಜ್ಯರೆ! ಹೀಗೆ ಕರ್ಮಗಳು ಫಲಕೊಡತಕ್ಕುವುಗಳಲ್ಲವೆಂದು ಗೊತ್ತಾದಮೇಲೆ, ಜನರು ಯಾರೂ ಕರ್ಮವನ್ನು ಮಾಡದೆಯೇ ಬಿಟ್ಟುಬಿಡುವರು; ಇದರಿಂದ ವರ್ಣಸಂಕರವಾಗುವುದು; ಹೀಗಾದಮೇಲೆ ಮಾತ್ಸ್ಯನ್ಯಾಯವು (ಬಲಿಷ್ಠರು ಬಲಹೀನರನ್ನು ನುಂಗುವುದು) ಪ್ರವರ್ತಿಸುವುದು. ಇಷ್ಟೆಲ್ಲವೂ ಆಗಿಬಿಟ್ಟಮೇಲೆ, ಕೊನೆಗೆ ಪ್ರಪಂಚನಾಶವೇ ಉಳಿಯುವುದು ॥೨೬॥

ಹೇ ಭಗವನ್! ಹೀಗೆಲ್ಲ ತೋರುವುದರಿಂದ, ಕರ್ಮವು ಸಫಲವೇ? ಅಥವಾ ನಿಷ್ಫಲವೆ?—ಇದನ್ನು ತತ್ವತಃ ನನಗೆ ಅಪ್ಪಣೆ ಕೊಡಿಸಬೇಕು. ಹೇ ತತ್ವಜ್ಞವರ್ಯ! ಈ ರೀತಿಯಾಗಿ ನನಗುದಯಿಸಿರುವ ದೊಡ್ಡ ಸಂಶಯವನ್ನು ತಾವು ಪರಿಹರಿಸಬೇಕು ॥೨೭॥

ಹೀಗೆ ಶ್ರೀರಾಮನು ಪ್ರಶ್ನೆಮಾಡಿದ ಬಳಿಕ, ವಸಿಷ್ಠಮಹರ್ಷಿಗಳು ಸಮಾಧಾನ ಹೇಳುವರು:—

ಅಯ್ಯಾ ರಾಘವ! ನೀನು ಬಲು ಚೆನ್ನಾಗಿ ಪ್ರಶ್ನೆಮಾಡಿದೆ; ನಿನ್ನ ಈ ಪ್ರಶ್ನೆಯು ಕೇವಲ

ಶೃಣು ವಕ್ಷ್ಯಾಮಿ ತೇ ಯೇನ ಭೃಶಂ ಜ್ಞಾನೋದಯೋ ಭವೇತ್ ॥೨೮॥
ಮಾನಸೋ ಯಃ ಸಮುನ್ಮೇಷಃ ಕಲಾಕಲನರೂಪತಃ ।
ಏತತ್ ತತ್ ಕರ್ಮಣಾಂ ಬೀಜಂ ಫಲಮಸ್ಯೈವ ವಿದ್ಯತೇ ॥೨೯॥
ಯದೈವ ಹಿ ಮನಸ್ತತ್ತ್ವಂ ಉತ್ಥಿತಂ ಬ್ರಹ್ಮಣಃ ಪದಾತ್ ।
ತದೈವ ಕರ್ಮ ಜನ್ತೂನಾಂ ಜೀವೋ ದೇಹತಯಾ ಸ್ಥಿತಃ ॥೩೦॥
ಕುಸುಮಾಶಯಯೋರ್ಭೇದೋ ನ ಯಥಾಽಭಿನ್ನಯೋರಿಹ ।
ತಥೈವ ಕರ್ಮಮನಸೋಃ ಭೇದೋ ನಾಸ್ತ್ಯವಿಭಿನ್ನಯೋಃ ॥೩೧॥
ಕ್ರಿಯಾಸ್ಪನ್ದೋ ಜಗತ್ಯಸ್ಮಿನ್ ಕರ್ಮೇತಿ ಕಥಿತೋ ಬುಧೈಃ ।
ಪೂರ್ವಂ ತಸ್ಯ ಮನೋದೇಹಂ ಕರ್ಮಾತಶ್ಚಿತ್ತಮೇವ ಹಿ ॥೩೨॥
ನ ಸ ಶೈಲೋ ನ ತದ್ವ್ಯೋಮ ನ ಸೋಽಬ್ಧಿಶ್ಚ ನ ವಿಷ್ಟಪಮ್ ।

ಪ್ರಮಾಣಯುಕ್ತವಾದುದು. ನಿನಗೆ ಈಗ ಸಂಪೂರ್ಣವಾಗಿ ಜ್ಞಾನೋದಯವಾಗುವಂತೆ ಹೇಳುವೆನು, ಕೇಳು ॥೨೮॥

'ಯನ್ಮನಸಾ ಧ್ಯಾಯತಿ, ತದ್ವಾಚಾ ವದತಿ, ತತ್‌ಕರ್ಮಣಾ ಕರೋತಿ' ಇತ್ಯಾದಿ ಶ್ರುತ್ಯನುಸಾರವಾಗಿ, ಮನಸ್ಸು ಕರ್ಮಕೌಶಲರೂಪವಾಗಿ ವಿಕಸಿಸುವುದಾವುದುಂಟೋ, ಅದೇ ಕರ್ಮಗಳಿಗೆ ಬೀಜಭೂತವಾದುದು. ಹೀಗೆ ಮನಃಪೂರ್ವಕವಾಗಿ ಮಾಡಿದ ಕರ್ಮಕ್ಕೇ ಫಲವಿರುವುದಲ್ಲದೆ, ಮನಸ್ಸಿಲ್ಲದೆ ಮಾಡಿದ ಶರೀರವ್ಯಾಪಾರಕ್ಕೆ ಯಾವ ಫಲವೂ ಎಲ್ಲಿಯೂ ಇಲ್ಲ ॥೨೯॥

ಅಯ್ಯಾ ರಾಮ! ಆದಿಸೃಷ್ಟಿಯಲ್ಲಿ ಪರಮಾತ್ಮನ ದೆಸೆಯಿಂದ ಯಾವಾಗ ಮನಸ್ಸು ಹುಟ್ಟಿತೋ, ಆಗಲೇ ಪ್ರಾಣಿಗಳ ಕರ್ಮವೂ ಹುಟ್ಟಿತು; ಜೀವನೂ ಆಗಲೇ ದೇಹಾಭಿಮಾನವುಳ್ಳವನಾದನು. ಹೀಗೆ ಮನಸೇ ಕರ್ತೃವಲ್ಲದೆ ಆತ್ಮನಲ್ಲವೆಂದು ನಿನಗೆ ಚೆನ್ನಾಗಿ ಸ್ಪಷ್ಟಪಡಿಸುವುದಕ್ಕೋಸ್ಕರ, ನಾನು ಈಗ ಈ ಸಹೋತ್ಪತ್ತಿಪಕ್ಷವನ್ನು ವಿವರಿಸಿರುವೆನು ॥೩೦॥

ಪರಸ್ಪರ ಭೇದವಿಲ್ಲದೆ ಒಟ್ಟಾಗಿರುವ ಕುಸುಮಕ್ಕೂ ಪರಿಮಳಕ್ಕೂ ಹೇಗೆ ಭೇದವಿಲ್ಲವೋ, ಹಾಗೆ ಅಭಿನ್ನವಾಗಿರತಕ್ಕ ಕರ್ಮಮನಸ್ಸಿಗಳಿಗೂ ಭೇದವಿಲ್ಲವೇ ಇಲ್ಲ ॥೩೧॥

ಅಯ್ಯಾ ರಾಮ! ಈಗ ಇಲ್ಲಿ ಒಂದು ವಿಧವಾಗಿ ಆಕ್ಷೇಪಿಸಬಹುದಲ್ಲವೆ! ಹೇಗೆಂದರೆ:—ಕರ್ಮವೆಂಬ ಶಬ್ದಕ್ಕೆ, ಯಜ್ಞಾದಿ ಕ್ರಿಯಾಕಲಾಪವಾಗಲಿ—ಅಥವಾ ಇದರಿಂದ ಹುಟ್ಟಿದ ಅದೃಷ್ಟವಾಗಲಿ ಅರ್ಥವಾಗುವುದು. ಅದರಲ್ಲಿ ಮೊದಲನೆಯದು ದೇಹದ ಧರ್ಮವಾಯ್ತು; ಎರಡನೆಯದು ಭೋಕ್ತೃವಿನ ಜತೆಯಲ್ಲಿಯೇ ಎಡೆಬಿಡದೆ ಇರತಕ್ಕುದು. ಹೀಗಿರುವಾಗ, ಇವುಗಳು ಮನೋಧರ್ಮಗಳೆಂದು ಹೇಳುವುದು ಹೇಗೆ?—ಎಂದಲ್ಲವೆ ಆಕ್ಷೇಪಣೆಯುಂಟಾಗುವುದು! ಇದಕ್ಕೆ ಅವಕಾಶವಿಲ್ಲ. ಯದ್ಯಪಿ, ಕ್ರಿಯಾರೂಪವಾದ ಚಲನೆಯನ್ನೇ ಕರ್ಮವೆಂದು ಪ್ರಾಜ್ಞರು ಹೇಳುವರು. ಆದರೆ, ಅದರಲ್ಲೊಂದು ತತ್ವವುಂಟು. ಈ ಕರ್ಮಕ್ಕೆ ಆಶ್ರಯವಾದ ದೇಹವೂಕೂಡ, ಪೂರ್ವದಲ್ಲಿ ಮನಸ್ಸೇ ಆಗಿರುವುದು. ಆದುಕಾರಣ, ಚಿತ್ತವೇ ಕರ್ಮವಾದಂತಾಯ್ತು ॥೩೨॥

ಅಂತು, ನೀನು ಹೇಳಿದಹಾಗೆ ಕರ್ಮಕ್ಕೆ ಫಲವೇ ಇಲ್ಲವೆಂಬುದು ಅನುಪಪನ್ನವಾಗುವುದು. ಈ ಪ್ರಪಂಚದಲ್ಲಿ, ತನ್ನಿಂದ ಮಾಡಲ್ಪಟ್ಟ ಕರ್ಮಗಳಿಗೆ ಫಲವಿಲ್ಲದ ಪರ್ವತವೂ ಇಲ್ಲ; ಆಕಾಶವೂ

ಅಸ್ತಿ ಯತ್ರ ಫಲಂ ನಾಸ್ತಿ ಕೃತಾನಾಮಾತ್ಮಕರ್ಮಣಾಮ್ ‖೩೩‖
ಐಹಿಕಂ ಪ್ರಾಕ್ತನಂ ವಾಪಿ ಕರ್ಮ ಯದ್ರಚಿತಂ ಸ್ಫುರತ್ ।
ಪೌರುಷೋಽಸೌ ಪರೋ ಯತ್ನೋ ನ ಕದಾಚನ ನಿಷ್ಫಲಃ ‖೩೪‖
ಕೃಷ್ಣತಾಸಂಕ್ಷಯೇ ಯದ್ವತ್ ಕ್ಷೀಯತೇ ಕಜ್ಜಲಂ ಸ್ವಯಮ್ ।
ಸ್ಪಂದಾತ್ಮ ಕರ್ಮವಿಗಮೇ ತದ್ವತ್ ಪ್ರಕ್ಷೀಯತೇ ಮನಃ ‖೩೫‖
ಕರ್ಮನಾಶೇ ಮನೋನಾಶೋ ಮನೋನಾಶೋ ಹ್ಯಕರ್ಮತಾ ।
ಮುಕ್ತಸ್ಯೈಷ ಭವತ್ಯೇವ ನಾಮುಕ್ತಸ್ಯ ಕದಾಚನ ‖೩೬‖
ವಹ್ನ್ಯೌಷ್ಣ್ಯಯೋರಿವ ಸದಾ ಶ್ಲಿಷ್ಟಯೋಶ್ಚಿತ್ತಕರ್ಮಣೋಃ ।
ದ್ವಯೋರೇಕತರಾಭಾವೇ ದ್ವಯಮೇವ ವಿಲೀಯತೇ ‖೩೭‖
ಚಿತ್ತಂ ಸದಾಸ್ಪಂದವಿಲಾಸಮೇತ್ಯ ಸ್ಪಂದೈಕರೂಪಂ ನನು ಕರ್ಮ ವಿದ್ಧಿ ।
ಕರ್ಮಾಥ ಚಿತ್ತಂ ಕಿಲ ಧರ್ಮಕರ್ಮಪದಂ ಗತೇ ರಾಮ ಪರಸ್ಪರೇಣ ‖೩೮‖

ಇತಿ ಉತ್ಪತ್ತಿಪ್ರಕರಣೇ ಕರ್ಮಪುರುಷಯೋರೈಕ್ಯಪ್ರತಿಪಾದನಂ
ನಾಮ ಪಞ್ಚನವತಿತಮಃ ಸರ್ಗಃ.

ಇಲ್ಲ; ಸಮುದ್ರವೂ ಇಲ್ಲ; ಜಗತ್ತೂ ಇಲ್ಲ. ಮಾಡಲ್ಪಟ್ಟ ಕರ್ಮಗಳಿಗೆ, ಎಲ್ಲಿಯಾದರೂ ಫಲವಿದ್ದೇ ಇರುವುದು ॥೩೩॥

ಈ ಜನ್ಮದಲ್ಲಿಯಾಗಲಿ—ಅಥವಾ ಹಿಂದಣ ಜನ್ಮದಲ್ಲಿಯಾಗಲಿ—ಪುರುಷರಿಂದ ಮಾಡಲ್ಪಟ್ಟ ಕರ್ಮವಾವುದುಂಟೋ, ಅದೇ ಪುರುಷಪ್ರಯತ್ನವೆನ್ನಿಸುವುದು. ಇದೆಂದಿಗೂ ನಿಷ್ಫಲವಾಗುವುದಿಲ್ಲ ॥೩೪॥

ಅಯ್ಯಾ! ರಾಮ! ಕೃಷ್ಣತೆ(ಕಪ್ಪಾಗಿರುವಿಕೆ)ಯು ಕ್ಷಯಹೊಂದಲಾಗಿ ಕಾಡಿಗೆಯು ತಾನಾಗಿಯೇ ಹೇಗೆ ಕ್ಷಯಿಸುವುದೋ, ಹಾಗೆಕರ್ಮವು ಕಳೆಯಲಾಗಿ—ಸ್ಪಂದರೂಪವಾದ ಮನಸ್ಸೂ ತಾನಾಗಿಯೇ ಕ್ಷೀಣವಾಗುವುದು ॥೩೫॥

ಕರ್ಮನಾಶವೇ ಮನೋನಾಶವೆನ್ನಿಸುವುದು; ಮನೋನಾಶವೆಂದರೆ ನಿಷ್ಕರ್ಮಸ್ಥಿತಿಯೆಂದರ್ಥವು. ಇಂತಹ ಮನೋನಾಶವು, ಯೋಗಾಭ್ಯಾಸಾದಿಗಳಿಂದ ಜೀವನ್ಮುಕ್ತಸ್ಥಿತಿಯನ್ನು ಪಡೆದವನಿಗೇ ಆಗುತ್ತದೆಯಲ್ಲದೆ, ಮುಕ್ತನಲ್ಲದವನಿಗಾಗುವುದಿಲ್ಲ ॥೩೬॥

ಬೆಂಕಿಯೂ ಶಾಖವೂ ಇರುವಂತೆ ಸರ್ವದಾ ಸೇರಿಕೊಂಡೇ ಇರುವ ಚಿತ್ತಕರ್ಮಗಳೆರಡರೊಳಗೆ, ಒಂದಕ್ಕೆ ಲಯವಾದರೆ ಎರಡಕ್ಕೂ ಲಯವಾದಂತೆಯೇ ಆಗುವುದು ॥೩೭॥

ಅಯ್ಯಾ ರಾಮ! ಚಿತ್ತವು ಸರ್ವದಾ ಸ್ಪಂದರೂಪವಾದ ವಿಲಾಸವನ್ನು ಹೊಂದಿ, ವಿಹಿತಕರ್ಮವನ್ನೂ ನಿಷಿದ್ಧಕರ್ಮವನ್ನೂ ಮಾಡಿಸುತ, ಪುಣ್ಯಪಾಪಾತ್ಮಕ ಧರ್ಮಾಧರ್ಮರೂಪವಾಗಿ ಪರಿಣಮಿಸುವುದು; ಬಳಿಕ, ಕರ್ಮವೂ ಫಲಭೋಗರೂಪವಾದ ಸ್ಪಂದವನ್ನು ಹೊಂದಿ, ಚಿತ್ತರೂಪವಾಗುವುದು. ಹೀಗೆ ಇವೆರಡೂ ಒಂದಕ್ಕೊಂದು ನಿಮಿತ್ತಭೂತಗಳಾಗಿ, ಪ್ರಪಂಚದಲ್ಲಿ ಧರ್ಮವೆಂಬ ಶಬ್ದದಿಂದಲೂ ಕರ್ಮವೆಂಬ ಶಬ್ದದಿಂದಲೂ ವ್ಯವಹರಿಸಲ್ಪಡುತಿರುವುವು ॥೩೮॥

ಇದು ಉತ್ಪತ್ತಿಪ್ರಕರಣದಲ್ಲಿ ಕರ್ಮಕ್ಕೂ ಪುರುಷನಿಗೂ ಐಕ್ಯಪ್ರತಿಪಾದನವೆಂಬ
ತೊಂಭತ್ತೈದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಷಣ್ಣವತಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಮನೋ ಹಿ ಭಾವನಾಮಾತ್ರಂ ಭಾವನಾ ಸ್ಪನ್ದಧರ್ಮಿಣೀ ।
ಕ್ರಿಯಾ ತದ್ಭಾವಿತಾರೂಪಂ ಫಲಂ ಸರ್ವೋಽನುಧಾವತಿ ॥೧॥

ಶ್ರೀ ರಾಮ ಉವಾಚ.

ವಿಸ್ತರೇಣ ಮಮ ಬ್ರಹ್ಮನ್ ಜಡಸ್ಯಾಪ್ಯಜಡಾಕೃತೇಃ ।
ರೂಪಮಾರೂಢಸಙ್ಕಲ್ಪಂ ಮನಸೋ ವಕ್ತುಮರ್ಹಸಿ ॥೨॥

ಶ್ರೀ ವಸಿಷ್ಠ ಉವಾಚ.

ಅನನ್ತಸ್ಯಾತ್ಮತತ್ತ್ವಸ್ಯ ಸರ್ವಶಕ್ತೇರ್ಮಹಾತ್ಮನಃ ।
ಸಙ್ಕಲ್ಪಶಕ್ತಿ ರಚಿತಂ ಯದ್ರೂಪಂ ತನ್ಮನೋ ವಿದುಃ ॥೩॥

ಉತ್ಪತ್ತಿಪ್ರಕರಣದಲ್ಲಿ ತೊಂಭತ್ತಾರನೆಯ ಸರ್ಗವು.

ಮನಸಃ ಕರ್ಮವೈಚಿತ್ರ್ಯಾತ್ ಇಹ ನಾನಾವಿಧಾಕೃತೇಃ ।
ವ್ಯಾಖ್ಯಾಯನ್ತೇಽಭಿದಾಭೇದಾಃ ತತ್ತ್ವಂ ಚಾಸ್ಯ ವಿಶುದ್ಧಯೇ ॥

ನಾನಾ ವಿಧರೂಪವುಳ್ಳದಾದ ಮನಸ್ಸಿಗೆ ಕರ್ಮವೈಚಿತ್ರ್ಯದಿಂದುಂಟಾಗುವ ನಾಮಭೇದಗಳೂ, ಈ ಮನಸ್ಸಿನ ಸ್ವರೂಪವೂಕೂಡ, ಈ ಸರ್ಗದಲ್ಲಿ ತತ್ವಶುದ್ಧಿಗೋಸ್ಕರ ಹೇಳಲ್ಪಡುವುವು.

ಶ್ರೀ ವಸಿಷ್ಠರು ಶ್ರೀ ರಾಮಚಂದ್ರನನ್ನು ಕುರಿತು ಮತ್ತೆ ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಅನುಭೂತವಾದ ಅರ್ಥಗಳ ಭಾವನಾಮಾತ್ರನೇ ಮನಸ್ಸೆನ್ನಲ್ಪಡುವುದು; ಭಾವನೆಯೆಂಬುದು, ಸ್ಪಂದರೂಪವಾದ ಕ್ರಿಯೆಯಾಗುವುದು. ಈ ಕ್ರಿಯೆಯೇ ಸೂಕ್ಷ್ಮಾವಸ್ಥೆಯಿಂದ ಅದೃಶ್ಯರೂಪವಾಗಿ ಜನ್ಮಾಂತರಾದಿ ಶಬ್ದಗಳಿಂದ ವ್ಯವಹರಿಸಲ್ಪಡುವುದು. ಇದು ಅವಶ್ಯವಾಗಿ ಆಗಿಯೇ ತೀರಬೇಕೆಂಬುದೇ ಫಲವೆನ್ನಿಸಿಕೊಳ್ಳುವುದು. ಈ ಫಲವನ್ನು ಪ್ರಪಂಚದಲ್ಲಿರುವ ಸಕಲ ಪ್ರಾಣಿಯೂ ಅನುಸರಿಸಿಯೇ ತೀರಬೇಕಾಗಿರುವುದು ॥೧॥

ಶ್ರೀರಾಮನು ಕೇಳುವನು:—

ಎಲೈ ಬ್ರಾಹ್ಮಣಶ್ರೇಷ್ಠರೆ! ಜಡವಾಗಿಯೂ ಅಜಡವಾಗಿಯೂ ಇರುವಮನಸ್ಸಿನ ಸ್ವರೂಪವೆಂತಹುದು? ಇದು ಸಂಕಲ್ಪಯುಕ್ತವಾಗಿದ್ದಾಗ ಹೇಗಿರುವುದು ? ಇದನ್ನು ತಾವು ನನಗೋಸ್ಕರ ಅಪ್ಪಣೆಕೊಡಿಸಬೇಕು ॥೨॥

ಇದಕ್ಕೆ ವಸಿಷ್ಠರು ಉತ್ತರ ಹೇಳುವರು:—

ಅಯ್ಯಾ! ರಾಮ! ಸರ್ವಶಕ್ತಿಯುಕ್ತವಾದ ಮಾಯಾಶಕ್ತಿಯಿಂದ ಶಬಳಿತವಾಗಿ ಅನಂತವಾಗಿರುವ ಆತ್ಮಪದಾರ್ಥದ ಪ್ರಥಮ ಕಲ್ಪಿತವಾದ ರೂಪವಾವುದುಂಟೋ, ಸಂಕಲ್ಪಶಕ್ತಿಯುಕ್ತವಾದ ಇದನ್ನೇ ಮನಸ್ಸೆಂದು ಪ್ರಾಜ್ಞರು ತಿಳಿದಿರುವರು ॥೩॥

ಭಾವಃ ಸದಸತೋರ್ಮಧ್ಯೇ ನೃಣಾಂ ಚಲತಿ ಯಶ್ಚ ಯಃ ।
ಕಲನೋನ್ಮುಖತಾಂ ಯಾತಃ ತದ್ರೂಪಂ ಮನಸೋ ವಿದುಃ ॥೪॥
ನಾಹಂ ವೇದಾವಭಾಸಾತ್ಮಾ ಕುರ್ವಾಣೋಽಸ್ಮೀತಿ ನಿಶ್ಚಯಃ ।
ತಸ್ಮಾದೇಕಾನ್ತಕಲನಃ ತದ್ರೂಪಂ ಮನಸೋ ವಿದುಃ ॥೫॥
ಕಲ್ಪನಾತ್ಮಿಕಯಾ ಕರ್ಮಶಕ್ತ್ಯಾ ವಿರಹಿತಂ ಮನಃ ।
ನ ಸಮ್ಭವತಿ ಲೋಕೇಽಸ್ಮಿನ್ ಗುಣಹೀನೋ ಗುಣೀ ಯಥಾ ॥೬॥
ಯಥಾ ವಹ್ನ್ಯೌಷ್ಣ್ಯಯೋಃ ಸತ್ತಾ ನ ಸಮ್ಭವತಿ ಭಿನ್ನಯೋಃ ।
ತಥೈವ ಕರ್ಮಮನಸೋಃ ತಥಾತ್ಮಮನಸೋರಪಿ ॥೭॥
ಸ್ವೇನೈವ ಚಿತ್ತರೂಪೇಣ ಕರ್ಮಣಾ ಫಲಧರ್ಮಿಣಾ ।
ಸಙ್ಕಲ್ಪೈಕಶರೀರೇಣ ನಾನಾವಿಸ್ತರಶಾಲಿನಾ ॥೮॥
ಇದಂ ತತಮನೇಕಾತ್ಮ ಮಾಯಾಮಯಮಕಾರಣಮ್ ।
ವಿಶ್ವಂ ವಿಗತವಿನ್ಯಾಸಂ ವಾಸನಾಕಲ್ಪನಾಕುಲಮ್ ॥೯॥

ಪುರುಷರ ಯಾವ ಭಾವವು-ಸತ್ತು ಅಸತ್ತು ಇವುಗಳ ಮಧ್ಯದಲ್ಲಿ ಚಲಿಸುತ್ತಿರುವುದೋ,— ಮತ್ತು, ಯಾವುದು ಕೋಟಿದ್ವಯಕಲ್ಪನೆಯಲ್ಲಿ ಅಭಿಮುಖವಾಗಿರುವುದೋ,—ಅದು ಮನಸ್ಸಿನ ರೂಪವೆಂದು ಪ್ರಾಜ್ಞರು ತಿಳಿದಿರುವರು ॥೪॥

ಸರ್ವದಾ ಚಿದ್ರೂಪನಾಗಿದ್ದರೂ ತಾನು ಜ್ಞಾನಿಯಲ್ಲವೆಂಬ ಪ್ರತ್ಯಯವಾವುದುಂಟೋ, ಇದರ ದೆಸೆಯಿಂದ ಜನಿಸತಕ್ಕುದಾಗಿ ವಸ್ತುತಃ ಕರ್ತೃವಲ್ಲದಿದ್ದರೂ ತಾನು ಕರ್ತೃವೆಂಬ ನಿಶ್ಚಯವಾವುದುಂಟೋ, ಇದು ಮನಸ್ಸಿನ ರೂಪವೆಂದು ಪ್ರಾಜ್ಞರು ಹೇಳುವರು ॥೫॥

ಅಯ್ಯಾ! ರಾಮ ! ಸ್ಪಂದರಹಿತವಾಗಿರುವ ಮನಸ್ಸಿನಲ್ಲಿ ಈ ಲಕ್ಷಣ ಸಂಭವಿಸುವುದಿಲ್ಲವೆಂದು ಆಶಂಕೆ ಮಾಡಬಾರದು. ಈ ಲೋಕದಲ್ಲಿ ಗುಣಯುಕ್ತನಾದವನು ಗುಣಹೀನನಾಗಿರುವುದು ಹೇಗೆ ಅಸಂಭವವೋ, ಹಾಗೆ ಕಲ್ಪನಾತ್ಮಿಕವಾದ ಕರ್ಮಶಕ್ತಿಯಿಂದ ವಿರಹಿತವಾದ ಮನಸ್ಸು ಸಂಭವಿಸುವುದೇ ಇಲ್ಲ ॥೬॥

ಮತ್ತು, ವಹ್ನಿಯೂ ಉಷ್ಣತೆಯೂ ಪರಸ್ಪರ ಭಿನ್ನಗಳಾಗಿರುವುದು ಹೇಗೆ ಸಂಭವಿಸುವುದಿಲ್ಲವೋ, ಹಾಗೆ ಕರ್ಮ ಮನಸ್ಸುಗಳೂ ಜೀವ ಮನಸ್ಸುಗಳೂ ಪರಸ್ಪರ ಭಿನ್ನಗಳಾಗಿರುವುದೂ ಸುತರಾಂ ಅಸಂಭವವು ॥೭॥

ಈ ಚಿತ್ತರೂಪಕ್ಕೆ ಕರ್ಮವೇ ಫಲವಾಗಿಯೂ ಧರ್ಮವಾಗಿಯೂ ಇರುವುದು; ಇದಕ್ಕೆ ಸಂಕಲ್ಪವೊಂದೇ ಶರೀರವಾಗಿರುವುದು; ಇದು ನಾನಾವಿಧವಾದ ವಿಸ್ತಾರಗಳಿಂದ ಶೋಭಿಸುತ್ತಿರುವುದು. ಇಂತಹ ಚಿತ್ತರೂಪದಿಂದ, ಅನೇಕರೂಪವಾದ ಈ ವಿಶ್ವವು ವಿಸ್ತರಿಸಲ್ಪಟ್ಟಿರುವುದು. ವಸ್ತುತಃ ಈ ವಿಶ್ವವು, ಕೇವಲ ಮಾಯಾಮಯವಾಗಿಯೂ ಅಕಾರಣಕವಾಗಿಯೂ ಇರುವುದು. ಇದಕ್ಕೆ ಯಾವವಿಧವಾದ ವಿನ್ಯಾಸವೂ ಸತ್ಯವಾಗಿಲ್ಲ. ಇದು ಕೇವಲ ವಾಸನಾಕಲ್ಪನೆಗಳಿಂದ ವ್ಯಾಕುಲವಾಗಿರುವುದು. ಇಂತಹ ವಿಶ್ವವು ಚಿತ್ತದಿಂದ ವಿಸ್ತರಿಸಲ್ಪಟ್ಟಿರುವುದು ॥೮—೯॥

ಯಾ ಯೇನ ವಾಸನಾ ಯತ್ರ ಲತೇವಾರೋಪಿತಾ ಯಥಾ |
ಸಾ ತೇನ ಫಲಸೂತ್ತತ್ರ ತದೇವ ಪ್ರಾಪ್ಯತೇ ತಥಾ ||೧೦||

ಕರ್ಮಬೀಜಂ ಮನಸ್ಸ್ಪನ್ದಃ ಕಥ್ಯತೇಥಾನುಭೂಯತೇ |
ಕ್ರಿಯಾಸ್ತು ವಿವಿಧಾಸ್ತಸ್ಯ ಶಾಖಾಶ್ಚಿತ್ರಫಲಾಸ್ತರೋಃ ||೧೧||

ಮನೋ ಯದನುಸನ್ಧತ್ತೇ ತತ್ ಕರ್ಮೇನ್ದ್ರಿಯವೃತ್ತಯಃ |
ಸರ್ವಾಃ ಸಮ್ಪಾದಯನ್ತ್ಯೇತಾಃ ತಸ್ಮಾತ್ ಕರ್ಮ ಮನಃ ಸ್ಮೃತಮ್ ||೧೨||

ಮನೋ ಬುದ್ಧಿರಹಙ್ಕಾರಃ ಚಿತ್ತಂ ಕರ್ಮಾಥ ಕಲ್ಪನಾ |
ಸಂಸೃತಿರ್ವಾಸನಾ ವಿದ್ಯಾ ಪ್ರಯತ್ನಃ ಸ್ಮೃತಿರೇವ ಚ ||೧೩||

ಇನ್ದ್ರಿಯಂ ಪ್ರಕೃತಿರ್ಮಾಯಾ ಕ್ರಿಯಾ ಚೇತೀತರಾ ಅಪಿ |
ಚಿತ್ರಾಃ ಶಬ್ದೋಕ್ತಯೋ ಬ್ರಹ್ಮ ಸಂಸಾರಭ್ರಮಹೇತವಃ ||೧೪||

ಕಾಕತಾಳೀಯಯೋಗೇನ ತ್ಯಕ್ತಸ್ಫಾರದೃಗಾಕೃತೇಃ |
ಚಿತೇಶ್ಚೇತ್ಯಾನುಪಾತಿನ್ಯಾಃ ಕೃತಾಃ ಪರ್ಯಾಯವೃತ್ತಯಃ ||೧೫||

ಯಾವ ಸ್ಥಳದಲ್ಲಿ ಯಾವ ವಾಸನೆಯು ಯಾವರೀತಿಯಾಗಿ ಆರೋಪಿಸಲ್ಪಡುವುದೋ,— ತನ್ನಿಂದ ನೆಡಲ್ಪಟ್ಟು ಫಲಭರಿತವಾದ ಲತೆಯು ತನ್ನಿಂದ ಅನುಭವಿಸಲ್ಪಡುವಂತೆ, ಅದೇ ಸ್ಥಳದಲ್ಲಿ ಅದೇ ವಾಸನೆಯು— ಆರೀತಿಯಾಗಿಯೇ ಫಲಕೊಡತಕ್ಕುದಾಗಿ ಹೊಂದಲ್ಪಡುವುದು ||೧೦||

ಈ ವಾಸನೆಯೆಂಬ ವೃಕ್ಷಕ್ಕೆ ಕರ್ಮವೇ ಬೀಜವೆಂದೂ, ಮನಸ್ಸೇ ಚಲನೆಯೆಂದೂ, ನಾನಾವಿಧವಾದ ವ್ಯಾಪಾರಗಳೇ ವಿಚಿತ್ರಫಲಗಳಾದ ಶಾಖೆಗಳೆಂದೂ, ಶಾಸ್ತ್ರಗಳಲ್ಲಿ ಹೇಳಲ್ಪಡುವುದು; ಲೋಕಾನುಭವವೂ ಹೀಗೆಯೇ ಇರುವುದು ||೧೧||

'ಕರ್ಮೇಂದ್ರಿಯವ್ಯಾಪಾರಗಳೇ ಕರ್ಮವೆನಿಸಲ್ಪಡುವಕಾರಣ, ಮನಸ್ಸು ಕರ್ಮವೆನ್ನುವುದು ಹೇಗೆ?' ಎಂದು ಶಂಕಿಸಬಹುದಲ್ಲವೆ! ಇದಕ್ಕೆ ಸಮಾಧಾನವನ್ನು ಹೇಳುವೆನು. ಪುರುಷರ ಮನಸ್ಸು ಯಾವುದನ್ನು ಅನುಸಂಧಾನಮಾಡಿಕೊಳ್ಳುವುದೋ, ಅದನ್ನೇ ಈ ಸಮಸ್ತವಾದ ಕರ್ಮೇಂದ್ರಿಯ ವೃತ್ತಿಗಳೂ ನೆರವೇರಿಸುವುವು. ಹೀಗಿರುವುದರಿಂದ ಮನಸ್ಸೇ ಕರ್ಮವೆಂದು ನಿಶ್ಶಂಕವಾಗಿ ಹೇಳಲ್ಪಡುವುದು ||೧೨||

ಅಯ್ಯಾ! ರಾಮ! ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಕರ್ಮ ಕಲ್ಪನಾ, ಸಂಸೃತಿ, ವಾಸನಾ, ವಿದ್ಯಾ, ಪ್ರಯತ್ನ, ಸ್ಮೃತಿ, ಇಂದ್ರಿಯ, ಪ್ರಕೃತಿ, ಮಾಯಾ, ಕ್ರಿಯಾ, ಇತ್ಯಾದಿರೂಪವಾಗಿ ವಿಚಿತ್ರವಾದ ಶಬ್ದಗಳೆಲ್ಲವೂ, ಸಂಸಾರಭ್ರಮಮೂಲಕವಾಗಿ ಬ್ರಹ್ಮನಲ್ಲಿ ಪ್ರವರ್ತಿಸುವುವು ||೧೩—೧೪||

ಚಿತ್ತು ಆಕಸ್ಮಿಕವಾಗಿ ಸ್ವರೂಪ ವಿಸ್ಮೃತಿಯನ್ನು ಹೊಂದಿ, ಅಪರಿಚ್ಛಿನ್ನವಾದ ಚಿದೇಕರಸವಾದ ತನ್ನ ಆಕಾರವನ್ನು ಬಿಟ್ಟುಬಿಟ್ಟಂತೆ ತೋರುತ, ಬಾಹ್ಯಪ್ರಪಂಚಕಲ್ಪನೆಯಲ್ಲಿ ಅಭಿಮುಖವಾಗುವುದು. ಆಗ ಅದು ಪೂರ್ವೋಕ್ತವಾದ ಮನಸ್ಸುಮುಂತಾದ ಪರ್ಯಾಯಶಬ್ದಗಳಿಂದ ವ್ಯವಹರಿಸಲ್ಪಡುವುದು ||೧೫||

ಶ್ರೀ ರಾಮಉವಾಚ.

ಪರ್ಯಾಯಾಃ ಸಂವಿದೋ ಬ್ರಹ್ಮನ್ ಏತಾಃ ಪರ್ಯಾಯವೃತ್ತಯಃ ।
ಕಲ್ಪ್ಯಮಾನವಿಚಿತ್ರಾರ್ಥಾಃ ಕಥಂ ರೂಢಿಮುಪಾಗತಾಃ ॥೧೬॥

ಶ್ರೀ ವಸಿಷ್ಠಉವಾಚ.

ಗತೇವ ಸಕಳಙ್ಕತ್ವಂ ಕದಾಚಿತ್ ಕಲ್ಪನಾತ್ಮಕಮ್ ।
ಉನ್ಮೇಷರೂಪಿಣೀ ನಾನಾ ತದೈವ ಹಿ ಮನಃ ಸ್ಥಿತಾ ॥೧೭॥
ಭಾವನಾಮನುಸನ್ಧಾನಂ ಯದಾ ನಿಶ್ಚಿತ್ಯ ಸಂಸ್ಥಿತಾ ।
ತದೈಷಾ ಪ್ರೋಚ್ಯತೇ ಬುದ್ಧಿಃ ಇಯತ್ತಾಗ್ರಹಣಕ್ಷಮಾ ॥೧೮॥
ಯದಾ ಮಿಥ್ಯಾಭಿಮಾನೇನ ಸತ್ತಾಂ ಕಲ್ಪಯತಿ ಸ್ವಯಮ್ ।
ಅಹಙ್ಕಾರಾಭಿಮಾನೇನ ಪ್ರೋಚ್ಯತೇ ಭವಬನ್ಧನೀ ॥೧೯॥
ಇದಂ ತ್ಯಕ್ತ್ವೇದಮಾಯಾತಿ ಬಾಲವತ್ ಪೇಲವಾ ಯದಾ ।
ವಿಚಾರಂ ಸಮ್ಪರಿತ್ಯಜ್ಯ ತದಾ ಸಾ ಚಿತ್ತಮುಚ್ಯತೇ ॥೨೦॥
ಯದಾ ಸ್ಪನ್ದೈಕಧರ್ಮತ್ವಾತ್ ಕರ್ತುಃ ಸಾ ಶೂನ್ಯಶಂಸಿನೀ ।
ಆಧಾವತಿ ಸ್ಪನ್ದಫಲಂ ತದಾ ಕರ್ಮೇತ್ಯುದಾಹೃತಾ ॥೨೧॥

ಶ್ರೀರಾಮನು ಪುನಃ ಪ್ರಶ್ನೆಮಾಡುವನು:—

ಬ್ರಾಹ್ಮಣೋತ್ತಮರೆ! ತಾವು ಅಪ್ಪಣೆಕೊಡಿಸಿದ ಈ ಪರ್ಯಾಯಶಬ್ದಗಳು, ನಾನಾವಿಧವಾದ ಅರ್ಥಕಲ್ಪನೆಯುಳ್ಳವಾಗಿ, ಆ ಪರಮಾತ್ಮನಲ್ಲಿ ಹೇಗೆ ರೂಢಿಹೊಂದಿರುವುವು? ॥೧೬॥

ಶ್ರೀ ವಸಿಷ್ಠರು ಉತ್ತರ ಹೇಳುವರು:—

ಅಯ್ಯಾ! ರಾಮ! ಈ ಪರಮಾತ್ಮಚೈತನ್ಯವು, ಯಾವಾಗಲೋ ಒಂದುವೇಳೆ ಅವಿದ್ಯೆಯಿಂದ ಸಕಳಂಕವಾದಂತಾಗಿ, ನಾನಾವಿಧವಾದ ಕಲ್ಪನೆಗಳಿಗೊಳಪಟ್ಟು, ಅನೇಕವಿಧ ವಿಲಾಸವುಳ್ಳದಾಗುವುದು. ಇದಕ್ಕೆ ಮನಸ್ಸೆಂದು ಹೆಸರು ॥೧೭॥

ಈ ಚೈತನ್ಯವು, ವಿಶೇಷವಾದ ಭಾವನೆಯನ್ನು ಹೊಂದಿ, ಯಾವುದಾದರೊಂದುವಿಧವಾದ ಅನುಸಂಧಾನವನ್ನು ನಿಶ್ಚಯಿಸಿಕೊಂಡು, ಯಾವಾಗ ಈ ಪದಾರ್ಥಸ್ವರೂಪವಿಷ್ಟೇಸರಿಯೆಂದು ಗ್ರಹಿಸುವುದರಲ್ಲಿ ಶಕ್ತಿಯುಳ್ಳದಾಗುವುದೋ, ಆಗ ಇದು ಬುದ್ಧಿಯೆಂದು ಹೇಳಲ್ಪಡುವುದು ॥

ಯಾವಾಗ ಈ ಚೈತನ್ಯವು ಮಿಥ್ಯಾಭೂತವಾದ ದೇಹಾದಿಗಳಲ್ಲಿ ಅಭಿಮಾನವುಳ್ಳದಾಗಿ ತಾನು ಆಯಾವಿಧವಾಗಿ ಸದ್ಭಾವವನ್ನು ಕಲ್ಪಿಸಿಕೊಳ್ಳುವುದೋ, ಆಗ ಅಹಂಕಾರವೆಂಬುದಾಗಿ ಹೇಳಲ್ಪಡುವುದು. ಈ ಅಹಂಕಾರವೇ ಸಂಸಾರಬಂಧವುಂಟುಮಾಡತಕ್ಕುದು ॥೧೯॥

ಈ ಚಿತ್ತು, ಬಾಲಕನಂತೆ ಪೇಲವವಾಗಿ ಒಂದನ್ನು ಬಿಟ್ಟು ಮತ್ತೊಂದನ್ನು ಹೊಂದುತ— ಒಂದು ಸ್ಥಳದಲ್ಲಿ ನಿಲ್ಲದೆ ಯಾವಾಗ ವಿಚಾರಶೂನ್ಯವಾಗಿರುವುದೋ, ಆಗ ಚಿತ್ತವೆಂದು ಹೇಳಲ್ಪಡುವುದು ॥೨೦॥

ಆ ಚಿತ್ತೇ, ಯಾವಾಗ ಸ್ವಯಂ ಸ್ಪಂದವೇ ಮುಖ್ಯವಾಗುಳ್ಳದರಂತೆ ತೋರುತ, ವಸ್ತುತಃ ಕರ್ತೃವಿಗೆ ಶೂನ್ಯವಾಗಿರುವ ಸ್ಪಂದವನ್ನು ವಿಷಯಮಾಡಿಕೊಂಡು, ಆ ಸ್ಪಂದಫಲವನ್ನು ಕುರಿತು ಓಡುತದೆಯೋ, ಆಗ ಕರ್ಮವೆಂದು ಹೇಳಲ್ಪಡುವುದು ॥೨೧॥

ಕಾಕತಾಳೀಯಯೋಗೇನ ತ್ಯಕ್ತ್ವೈಕಘನನಿಶ್ಚಯಮ್ ।
ಯದೇಹಿತಂ ಕಲ್ಪಯತಿ ಭಾವಂ ತೇನೇಹ ಕಲ್ಪನಾ ॥೨೨॥
ಪೂರ್ವದೃಷ್ಟಮದೃಷ್ಟಂ ವಾ ಪ್ರಾಗ್ದೃಷ್ಟಮಿತಿ ನಿಶ್ಚಯೈಃ ।
ಯದೈವೇಹಾಂ ವಿಧತ್ತೇಽನ್ತಃ ತದಾ ಸ್ಮೃತಿರುದಾಹೃತಾ ॥೨೩॥
ಯದಾ ಪದಾರ್ಥಶಕ್ತೀನಾಂ ಸಮ್ಭುಕ್ತಾನಾಮಿವಾಮ್ಬರೇ ।
ವಸತ್ಯಸ್ತಮಿತಾನ್ಯೇಹಾ ವಾಸನೇತಿ ತದೋಚ್ಯತೇ ॥೨೪॥
ಅಸ್ತ್ಯಾತ್ಮತತ್ತ್ವಂ ವಿಮಲಂ ದ್ವಿತೀಯಾ ದೃಷ್ಟಿರಜ್ಕಿತಾ ।
ಜಾತಾ ಹ್ಯವಿದ್ಯಮಾನೈವ ತದಾ ವಿದ್ಯೇತಿ ಕಥ್ಯತೇ ॥೨೫॥
ಸ್ಫುರತ್ಯಾತ್ಮವಿನಾಶಾಯ ವಿಸ್ಮಾರಯತಿ ತತ್ ಪದಮ್ ।
ಮಿಥ್ಯಾವಿಕಲ್ಪಜಾಲೇನ ತನ್ಮಲಂ ಪರಿಕಲ್ಪ್ಯತೇ ॥೨೬॥
ಶ್ರುತ್ವಾ ಸ್ಪೃಷ್ಟ್ವಾ ಚ ದೃಷ್ಟ್ವಾ ಚ ಭುಕ್ತ್ವಾ ಘ್ರಾತ್ವಾ ವಿಮೃಶ್ಯ ಚ ।

ಕಾಕತಾಳೀಯನ್ಯಾಯದಿಂದ ಆಕಸ್ಮಿಕವಾಗಿ ದೃಢನಿಶ್ಚಯವನ್ನು ಬಿಟ್ಟು, ಯಾವಾಗ ತನ್ನ ಇಚ್ಛಾನುಗುಣವಾದ ಪದಾರ್ಥಗಳನ್ನು ಕಲ್ಪಿಸಿಕೊಳ್ಳುವುದೋ, ಆಗ ಆ ಚಿತ್ತು ಕಲ್ಪನೆಯೆಂದು ಹೇಳಲ್ಪಡುವುದು ॥೨೨॥

'ಇದು ಪೂರ್ವದಲ್ಲಿ ನೋಡಲ್ಪಟ್ಟಿತ್ತೇ? ಅಥವಾ ನೋಡಲ್ಪಟ್ಟಿಲ್ಲವೆ? ನೋಡಲ್ಪಟ್ಟದ್ದುದೇ ಅಹುದು!' ಎಂದು ನಿಶ್ಚಯಮಾಡಿಕೊಳ್ಳುತ, ಯಾವಾಗ ಒಳಗೇ ತದನುಗುಣವಾಗಿ ವ್ಯಾಪಾರಮಾಡುವುದೋ, ಆಗ ಆ ಚಿತ್ತು ಸ್ಮೃತಿಯೆಂದು ಕರೆಯಲ್ಪಡುವುದು ॥೨೩॥

ಈ ಚಿತ್ತು, ಯಾವಾಗ ಅನುಭೂತವಾದ ಪದ ಪದಾರ್ಥ ಪದಾರ್ಥಶಕ್ತಿಗಳ ಸೂಕ್ಷ್ಮಾವಸ್ಥೆಯಲ್ಲಿದ್ದುಗೊಂಡು, ಇತರವಾದ ವ್ಯಾಪಾರವನ್ನೆಲ್ಲ ಮರೆತಿರುವುದೋ, ಆಗ ವಾಸನೆಯೆಂದು ಹೇಳಲ್ಪಡುವುದು ॥೨೪॥

'ಆತ್ಮವಸ್ತುವೊಂದೇ ನಿರ್ಮಲವಾಗಿರುವುದು; ಇತರವಾದ ಜ್ಞಾನವೆಲ್ಲವೂ ಮಾಯಾಕಳಂಕಿತವಾದುದು. ಇದು ವಸ್ತುತಃ ಕಾಲತ್ರಯದಲ್ಲಿಯೂ ಇಲ್ಲದೆಯೇ ಇರತಕ್ಕುದಾದರೂ, ಇರತಕ್ಕುದರಂತೆ ತೋರುವುದು' ಎಂದು ಯಾವಾಗ ಬೋಧವುಂಟಾಗುವುದೋ, ಆಗ ವಿದ್ಯೆಯೆಂದು ಹೇಳಲ್ಪಡುವುದು ॥೨೫॥

ಅಯ್ಯಾ! ರಾಮ! ನಾನು ಹಿಂದೆ (೧೩ನೆ ಶ್ಲೋಕ) 'ಪ್ರಯತ್ನಃ ಸ್ಮೃತಿರೇವ ಚ' ಎಂದು ಹೇಳಿರುವೆನಷ್ಟೆ! ಅಲ್ಲಿ 'ವಿಸ್ಮೃತಿರ್ಮಲಮೇವ ಚ' ಎಂದೂ ಹೇಳಬಹುದಾಗಿರುವುದು. ಅದು ಕಾರಣ, ಈಗ ಆ ಮಲವೆಂಬ ಶಬ್ದದ ವ್ಯುತ್ಪತ್ತಿಯನ್ನೂ ನಿನಗೆ ಹೇಳುವೆನು:—ಇದೇ ಚಿತ್ತು, ಆತ್ಯಂತಿಕವಾಗಿ ಆತ್ಮಸ್ವರೂಪವನ್ನರಿಯದಂತೆ ಸ್ಫುರಣೆಹೊಂದುತ, ನಾನಾವಿಧವಾಗಿ ಮಿಥ್ಯಾಭೂತವಾದ ವಿಕಲ್ಪಗಳಿಂದ ಆ ಪರಮಪದವನ್ನು ಸಂಪೂರ್ಣವಾಗಿ ಮರೆಯಿಸಿಬಿಡುವುದು; ಆಗ ಅದಕ್ಕೆ ಮಲವೆಂದು ವ್ಯವಹಾರವು. ಅಂತು, ಆವರಣಶಕ್ತಿಪ್ರಧಾನವಾಗಿರುವಾಗ ಮಲವೆಂದೂ, ವಿಕ್ಷೇಪಶಕ್ತಿಪ್ರಧಾನವಾಗಿರುವಾಗ ಪ್ರಯತ್ನವೆಂದೂ ಸಂಕೇತವುಂಟಾಗುವುದೆಂಬುದಾಗಿ ತಿಳಿಯಬೇಕು ॥೨೬॥

ಈ ಮನೋರೂಪವಾದ ಚಿತ್ತು, ಶ್ರವಣ ಸ್ಪರ್ಶನ ದರ್ಶನ ಭೋಜನ ಆಘ್ರಾಣನರೂಪವಾದ ಕರ್ಮಗಳನ್ನು ಮಾಡಿ, ಕಾರ್ಯಕರಣಸ್ವಾಮಿಯಾಗಿ ಜೀವರೂಪವನ್ನು ಹೊಂದಿರುವ ಪರಮೇ

ಇನ್ದ್ರನಾನನ್ದಯತ್ಯೇಷಾ ತೇನೇನ್ದ್ರಿಯಮಿತಿ ಸ್ಮೃತಮ್ ॥೨೭॥
ಸರ್ವಸ್ಯ ದೃಶ್ಯಜಾಲಸ್ಯ ಪರಮಾತ್ಮನ್ಯಲಕ್ಷಿತೇ ।
ಪ್ರಕೃತತ್ವೇನ ಭಾವಾನಾಂ ಲೋಕೇ ಪ್ರಕೃತಿರುಚ್ಯತೇ ॥೨೮॥
ಸದಸತ್ತಾಂ ನಯತ್ಯಾಶು ಸತ್ತಾಂ ವಾಽಸತ್ತ್ವಮಞ್ಜಸಾ ।
ಸತ್ತಾಸತ್ತಾವಿಕಲ್ಪೋಽಯಂ ತೇನ ಮಾಯೇತಿ ಕಥ್ಯತೇ ॥೨೯॥
ದರ್ಶನ ಶ್ರವಣ ಸ್ಪರ್ಶ ರಸನ ಘ್ರಾಣ ಕರ್ಮಭಿಃ ।
ಕ್ರಿಯೇತಿ ಕಥ್ಯತೇ ಲೋಕೇ ಕಾರ್ಯಕಾರಣತಾಂ ಗತಾ ॥೩೦॥
ಚಿತೇಶ್ಚೇತ್ಯಾನುಪಾತಿನ್ಯಾಃ ಗತಾಯಾಃ ಸಕಳಙ್ಕತಾಮ್ ।
ಪ್ರಸ್ಫುರದ್ರೂಪಧರ್ಮಿಣ್ಯಾಃ ಏತಾಃ ಪರ್ಯಾಯವೃತ್ತಯಃ ॥೩೧॥
ಚಿತ್ತತಾಮುಪಯಾತಾಯಾಃ ಗತಾಯಾಃ ಪ್ರಕೃತಂ ಪದಮ್ ।
ಸ್ವೈರೇವ ಸಙ್ಕಲ್ಪಶತೈಃ ಭೃಶಂ ರೂಢಿಮುಪಾಗತಾಃ ॥೩೨॥
ಚೇತನೀಯಕಳಙ್ಕಾಙ್ಕಾತ್ ಜಾಡ್ಯಜಾಲಾನುಪಾತಿನೀ ।
ಸಙ್ಖ್ಯಾವಿಭಾಗಕಲನಾ ಸ್ವವೈಕಲ್ಯಾಕುಲೇವ ಚಿತ್ ॥೩೩॥
ಜೀವಇತ್ಯುಚ್ಯತೇ ಲೋಕೇ ಮನಇತ್ಯಪಿ ಕಥ್ಯತೇ ।

ಶ್ವರನನ್ನು ಯಾವಾಗ ಆನಂದಪಡಿಸುವುದೋ, ಆಗ ಇದು ಇಂದ್ರಿಯವೆಂದು ಹೇಳಲ್ಪಡುವುದು ॥೨೭॥

ಪರಮಾತ್ಮನು ಸಮಸ್ತವಾದ ದೃಶ್ಯಜ್ಞಾನಕ್ಕೂ ಅಪ್ರತ್ಯಕ್ಷನಾಗಿರುವಾಗ, ಪದಾರ್ಥಗಳಿಗೆಲ್ಲ ಇದೇ ಉಪಾದಾನಕಾರಣವಾಗಿರುವುದರಿಂದ, ಇದು ಪ್ರಕೃತಿಯೆನ್ನಲ್ಪಡುವುದು ॥೨೮॥

ಸತ್ತು ಅಸತ್ತೆಂದು ಕಾಣುವಹಾಗೂ, ಅಸತ್ತು ಸತ್ತೆಂದು ಕಾಣುವಹಾಗೂ ಮಾಡುತ, ಸದ್ಭಾವ ಅಸದ್ಭಾವಗಳ ವಿಕಲ್ಪವನ್ನುಂಟುಮಾಡುವಾಗ, ಇದನ್ನು ಮಾಯೆಯೆಂದು ಕರೆಯುಯುವರು ॥೨೯॥

ದರ್ಶನ ಶ್ರವಣ ಸ್ಪರ್ಶನ ರಸನ ಘ್ರಾಣರೂಪವಾದ ಕರ್ಮಗಳಿಂದ ಸಂಸಾರಬೀಜರೂಪವನ್ನು ಹೊಂದಿರುವಾಗ, ಇದು ಕ್ರಿಯೆಯೆಂದು ಹೇಳಲ್ಪಡುವುದು ॥೩೦॥

ಅಯ್ಯಾ! ರಾಮ! ಚಿತ್ತು ಚೇತ್ಯವನ್ನನುಸರಿಸಿ ಸಕಳಂಕವಾಗುವುದು; ಆಗ, ಇದಕ್ಕೆ ರೂಪಸ್ಫುರಣೆಯೇ ಧರ್ಮವಾಗಿ ನಿಲ್ಲುವುದು. ಬಳಿಕ ಇದು ಚಿತ್ತತ್ವವನ್ನು ಹೊಂದಿ, ತನ್ನ ನೂರಾರು ಸಂಕಲಗಳಿಂದಲೇ ಸಂಸಾರಪದವಿಯನ್ನು ಸೇರುವುದು. ಇಂತಹ ಚಿತ್ತಿಗೆ, ಈ ಪೂರ್ವೋಕ್ತವಾಗಿರುವ ಮನಸ್ಸು ಮುಂತಾದ ಪರ್ಯಾಯನಾಮಗಳು ಅತ್ಯಂತವಾಗಿ ರೂಢಿಯನ್ನು ಹೊಂದಿರುವುವು ॥೩೧-೩೨॥

'ಅದ್ವಿತೀಯವಾಗಿರುವ ಚಿತ್ತಿಗೆ, ಮನಸ್ಸು ಬುದ್ಧಿ ಇತ್ಯಾದಿರೂಪವಾಗಿ ನಾನಾವಿಧವಾದ ಸಂಖ್ಯಾಕಲ್ಪನೆಯೇತಕ್ಕೆ?' ಎಂದರೆ,—ಚಿತ್ತು, ತಾನು ಅಜ್ಞನೆಂದು ತಿಳಿಯುವುದಕ್ಕೆ ತಕ್ಕಂತಹ ಅಜ್ಞಾನಕಳಂಕದ ಸಾನ್ನಿಧ್ಯದಿಂದ, ತನ್ನ ಪೂರ್ಣಸ್ವರೂಪವೈಕಲ್ಯವನ್ನು ಹೊಂದಿ ಆಕುಲವಾದಂತಾಗುವುದು. ಆಗ ಇದು ಪೂರ್ವೋಕ್ತವಾದ ಚಿತ್ತಪ್ರಭೃ ಸಂಖ್ಯಾವಿಭಾಗಕಲ್ಪನೆಯುಳ್ಳದಾಗಿ,

ಚಿತ್ತಮಿತ್ಯುಚ್ಯತೇ ಸೈವ ಬುದ್ಧಿರಿತ್ಯುಚ್ಯತೇ ತಥಾ ‖೩೪‖
ನಾನಾಸಙ್ಕಲ್ಪಕಲಿಲಂ ಪರ್ಯಾಯನಿಚಯಂ ಬುಧಾಃ ।
ವದನ್ತ್ಯಸ್ಯಾಃ ಕಳಙ್ಕಿನ್ಯಾಃ ಚ್ಯುತಾಯಾಃ ಪರಮಾತ್ಮನಃ ‖೩೫‖

ಶ್ರೀರಾಮಉವಾಚ.

ಮನಃ ಕಿಂ ಸ್ಯಾಜ್ಜಡಂ ಬ್ರಹ್ಮನ್ ತಥಾ ವಾಪಿಚ ಚೇತನಮ್ ।
ಇತ್ಯೇಕೋ ಮಮ ತತ್ತ್ವಜ್ಞ ನಿಶ್ಚಯೋಽನ್ತರ್ನ ಜಾಯತೇ ‖೩೬‖

ಶ್ರೀ ವಸಿಷ್ಠ ಉವಾಚ.

ಮನೋ ಹಿ ನ ಜಡಂ ರಾಮ ನಾಪಿ ಚೇತನತಾಂ ಗತಮ್ ।
ಮ್ಲಾನಾಽಜಡಾ ತದಾ ದೃಷ್ಟಿಃ ಮನಇತ್ಯೇವ ಕಥ್ಯತೇ ‖೩೭‖
ಮಧ್ಯೇ ಸದಸತೋರೂಪಂ ಪ್ರತಿಭಾತಂ ಯದಾವಿಲಮ್ ।
ಜಗತಃ ಕಾರಣಂ ನಾಮ ತದೇತಚ್ಚಿತ್ತಮುಚ್ಯತೇ ‖೩೮‖
ಶಾಶ್ವತೇನೈಕರೂಪೇಣ ನಿಶ್ಚಯೇನ ವಿನಾ ಸ್ಥಿತಿಃ ।
ಯೇನ ಸಾ ಚಿತ್ತಮಿತ್ಯುಕ್ತಾ ತಸ್ಮಾಜ್ಜಾತಮಿದಂ ಜಗತ್ ‖೩೯‖

ದೇಹ ಮುಂತಾದ ಜಡಜಾಲರೂಪವನ್ನನುಸರಿಸುವುದು. ಇದು ಆಗ ಜೀವನೆಂದೂ ಮನಸ್ಸೆಂದೂ ಚಿತ್ತವೆಂದೂ ಬುದ್ಧಿಯೆಂದೂ ಹೇಳಲ್ಪಡುವುದು ‖೩೩-೩೪‖

ಹೀಗೆ ಪರಮಾತ್ಮಸ್ವರೂಪವನ್ನು ಪರಿತ್ಯಜಿಸಿ ಸಕಳಂಕವಾಗಿರುವ ಚಿತ್ತಿಗೆ, ನಾನಾವಿಧ ಸಂಕಲ್ಪಕಲ್ಪಿತವಾಗಿರುವ ಈ ಪರ್ಯಾಯನಾಮ ಸಮುದಾಯಗಳಿರುವುವೆಂದು ಪ್ರಾಜ್ಞರು ಹೇಳುವರು ‖೩೫‖

ಶ್ರೀರಾಮನು ಪ್ರಶ್ನೆಮಾಡುವನು:—

ಎಲೈ ತತ್ವಜ್ಞವರ್ಯರಾದ ಶ್ರೀ ವಸಿಷ್ಠಮಹರ್ಷಿಗಳೆ! ನೀವು ಈಗ ಮನಸ್ಸನ್ನು ಜೀವವೆಂದು ಹೇಳಿರುವುದರಿಂದ, ಅದು ಚೇತನವಾದಂತಾಯ್ತು; ಲೋಕದಲ್ಲಿಯೂ ಇತರ ಶಾಸ್ತ್ರಗಳಲ್ಲಿಯೂ ಇದು ಜಡವೆಂದು ವ್ಯವಹಾರವಿರುವುದು. ಹೀಗಿರುವುದರಿಂದ, ಎಲೈ ಬ್ರಾಹ್ಮಣೋತ್ತಮರೆ!—ಈ ಮನಸ್ಸು ಜಡವೆ? ಅಥವಾ ಚೇತನವೆ?—ಎಂಬುದೊಂದು ನಿಶ್ಚಯವು, ಇದುವರೆಗೂ ನನ್ನ ಮನಸ್ಸಿನಲ್ಲುಂಟಾಗಲಿಲ್ಲ. ತಾವು ಈಗ ಇದನ್ನುಂಟುಮಾಡಬೇಕು ‖೩೬‖

ಶ್ರೀ ವಸಿಷ್ಠರು ಉತ್ತರ ಹೇಳುವರು:—

ಅಯ್ಯಾ! ರಾಮ! ಮನಸ್ಸು ಜಡವೂ ಅಲ್ಲ; ಚೇತನವೂ ಅಲ್ಲ. ಅಜಡವಾಗಿರತಕ್ಕ ಚಿತ್ತೇ, ಆಗ ಸಂಸಾರದಶೆಯಲ್ಲಿ ಉಪಾಧಿಮಾಲಿನ್ಯವನ್ನನುಭವಿಸುತ ಮನಸ್ಸೆಂದು ಹೇಳಲ್ಪಡುವುದು ‖೩೭‖

ಸತ್ತಿಗೂ ಅಸತ್ತಿಗೂ ಮಧ್ಯದಲ್ಲಿ, ಯಾವುದೊಂದು ಕಲುಷವಾದ ರೂಪವುದಯಿಸುವುದೋ, ಅದೇ ಜಗತ್ತಿಗೆ ಕಾರಣವಾದ ಚಿತ್ತವೆಂದು ಹೇಳಲ್ಪಡುವುದು ‖೩೮‖

ಶಾಶ್ವತವಾಗಿ ಏಕರೂಪವಾದ ನಿಶ್ಚಯವಿಲ್ಲದಿರುವ ಸ್ಥಿತಿ ಯಾವುದರಿಂದುಂಟಾಗುವುದೋ, ಅದೇ ಚಿತ್ತವೆಂದು ಹೇಳಲ್ಪಡುವುದು; ಇದರಿಂದಲೇ ಈ ಜಗತ್ತು ಹುಟ್ಟುವುದು ‖೩೯‖

ಜಡಾಜಡದೃಶೋರ್ಮಧ್ಯೇ ದೋಲಾರೂಪಂ ಸ್ವಕಲ್ಪನಮ್ ।
ಯಚ್ಚಿತೋ ಮ್ಲಾನರೂಪಿಣ್ಯಾಃ ತದೇತನ್ಮನಉಚ್ಯತೇ ॥೪೦॥
ಚಿನ್ನಿಸ್ಪನ್ದೋ ಹಿ ಮಲಿನಃ ಕಳಙ್ಕವಿಕಲಾನ್ತರಮ್ ।
ಮನಇತ್ಯುಚ್ಯತೇ ರಾಮ ನ ಜಡಂ ನ ಚ ಚಿನ್ಮಯಮ್ ॥೪೧॥
ತಸ್ಯೇಮಾನಿ ವಿಚಿತ್ರಾಣಿ ನಾಮಾನಿ ಕಲಿತಾನ್ಯಲಮ್ ।
ಅಹಙ್ಕಾರ ಮನೋ ಬುದ್ಧಿ ಜೀವಾದ್ಯಾನೀತರಾಣ್ಯಪಿ ॥೪೨॥
ಯಥಾ ಗಚ್ಛತಿ ಶೈಲೂಷೋ ರೂಪಾಣ್ಯಲಂ ತಥೈವ ಹಿ ।
ಮನೋ ನಾಮಾನ್ಯನೇಕಾನಿ ಧತ್ತೇ ಕರ್ಮಾನ್ತರಂ ವ್ರಜತ್ ॥೪೩॥
ಚಿತ್ರಾಧಿಕಾರವಶತೋ ವಿಚಿತ್ರಾ ವಿಕೃತಾಭಿಧಾಃ ।
ಯಥಾ ಯಾತಿ ನರಃ ಕರ್ಮವಶಾದ್ಯಾತಿ ತಥಾ ಮನಃ ॥೪೪॥
ಯಾಏತಾಃ ಕಥಿತಾಃ ಸಂಜ್ಞಾಃ ಮಯಾ ರಾಘವ ಚೇತಸಃ ।
ಏತಾಏವಾನ್ಯಥಾ ಪ್ರೋಕ್ತಾಃ ವಾದಿಭಿಃ ಕಲ್ಪನಾಶತೈಃ ॥೪೫॥
ಸ್ವಭಾವಾಭಿಮತಾಂ ಬುದ್ಧಿಂ ಆರೋಪ್ಯ ಮನಸಾ ಕೃತಾಃ ।

ಉಪಾಧಿಮಲಿನವಾಗಿರುವ ಚಿತ್ತು—ಜಡಾಜಡಜ್ಞಾನಗಳ ಮಧ್ಯದಲ್ಲಿ ದೋಲಾಯಮಾನವಾಗಿ ತನ್ನ ರೂಪವನ್ನು ಕಲ್ಪಿಸಿಕೊಳ್ಳುವುದಾವುದುಂಟೋ, ಅದೇ ಮನಸ್ಸೆಂದು ಹೇಳಲ್ಪಡುವುದು ॥೪೦॥

ಈ ಚಿತ್ತಿನ ಔಪಾಧಿಕವಾದ ಚಾಂಚಲ್ಯವೇ, ಅಂತಃಕಳಂಕಶೂನ್ಯವಾಗಿದ್ದರೂ ಬಹಿಃಕಳಂಕಸಹಿತವಾಗಿರುವಂತೆ ತೋರುತ, ಮನಸ್ಸೆಂದು ಹೇಳಲ್ಪಡುವುದು. ಅಯ್ಯಾ! ರಾಮ! ಇದು ಜಡವೂ ಅಲ್ಲ; ಚೇತನವೂ ಅಲ್ಲ ॥೪೧॥

ಇದಕ್ಕೆ, ಅಹಂಕಾರ ಮನಸ್ಸು ಬುದ್ಧಿ ಜೀವ—ಇತ್ಯಾದಿಯಾದ ಈ ವಿಚಿತ್ರನಾಮಧೇಯಗಳೆಲ್ಲವೂ ಕಲ್ಪಿತವಾಗಿರುವುವು ॥೪೨॥

ನಾಟ್ಯಗಾರನು ತನಗೆ ಬೇಕಾದಂತೆ ನಾನಾವಿಧರೂಪಗಳನ್ನು ಹೇಗೆ ಹೊಂದುತಿರುವನೋ, ಹಾಗೆ—ಈ ಮನಸ್ಸು ನಾನಾವಿಧಕರ್ಮಗಳನ್ನು ಮಾಡುತ—ನಾನಾ ನಾಮಧೇಯಗಳನ್ನು ಹೊಂದುವುದು ॥೪೩॥

ಒಬ್ಬನೇ ಮನುಷ್ಯನು, ನಾನಾವಿಧವಾದ ಅಧಿಕಾರಗಳನ್ನು ಹೊಂದುತ, ಒಂದುಸಲ ಪರಿಚಾರಕನೆಂದೂ—ಒಂದುಸಲ ಲೇಖಕನೆಂದೂ—ಮತ್ತೊಂದುಸಲ ಗುರುವೆಂದೂ ಹೇಗೆ ಹೇಳಲ್ಪಡುವನೋ,—ಹಾಗೆ ಈ ಮನಸ್ಸೂಕೂಡ, ಆಯಾ ಕರ್ಮಾನುಗುಣವಾಗಿ ನಾನಾವಿಧ ನಾಮಧೇಯಗಳನ್ನು ಹೊಂದುವುದು ॥೪೪॥

ಅಯ್ಯಾ! ರಾಘವ! ನಾನು ಈಗ ಮನಸ್ಸಿಗೆ ಯಾವಯಾವ ಸಂಜ್ಞೆಗಳನ್ನು ಹೇಳಿರುವೆನೋ, ಅವುಗಳನ್ನೇ—ವಾದಿಗಳು ನಾನಾವಿಧವಾಗಿ ಕಲ್ಪನೆಮಾಡಿಕೊಂಡು ಬೇರೆಬೇರೆವಿಧವಾಗಿ ಹೇಳಿರುವರು ॥೪೫॥

ಆ ವಾದಿಗಳು, ತಮ್ಮ ಅಭಿಪ್ರಾಯಕ್ಕನುಸಾರಿಯಾದ ಬುದ್ಧಿಯನ್ನು ಮಾಡಿಕೊಂಡು, ತಮ್ಮ

ಮನೋಬುದ್ಧೀನ್ದ್ರಿಯಾದೀನಾಂ ವಿಚಿತ್ರಾ ನಾಮರೀತಯಃ ॥೪೬॥
ಮನೋ ಹಿ ಜಡಮನ್ಯಸ್ಯ ಭಿನ್ನಮನ್ಯಸ್ಯ ಜೀವತಃ ।
ತಥಾಹಙ್ಕೃತಿರನ್ಯಸ್ಯ ಬುದ್ಧಿರನ್ಯಸ್ಯ ವಾದಿನಃ ॥೪೭॥
ಅಹಙ್ಕಾರಮನೋಬುದ್ಧಿದೃಷ್ಟಯಃ ಸೃಷ್ಟಿಕಲ್ಪನಾಃ ।
ಏಕರೂಪತಯಾ ಪ್ರೋಕ್ತಾಃ ಯಾಮಯಾ ರಘುನನ್ದನ ॥೪೮॥
ನೈಯಾಯಿಕೈರಿತರಥಾ ತಾದೃಶೈಃ ಪರಿಕಲ್ಪಿತಾಃ ।
ಅನ್ಯಥಾ ಕಲ್ಪಿತಾಃ ಸಾಙ್ಖ್ಯೈಃ ಚಾರ್ವಾಕೈರಪಿ ಚಾನ್ಯಥಾ ॥೪೯॥
ಜೈಮಿನೀಯೈಶ್ಚಾರ್ಹತೈಶ್ಚ ಬೌದ್ಧೈರ್ವೈಶೇಷಿಕೈಸ್ತಥಾ ।
ಅನ್ಯೈರಪಿ ವಿಚಿತ್ರೈಸ್ತೈಃ ಪಾಞ್ಚರಾತ್ರಾದಿಭಿಸ್ತಥಾ ॥೫೦॥
ಸರ್ವೈರೇವ ಚ ಗನ್ತವ್ಯಂ ತೈಃ ಪದಂ ಪಾರಮಾರ್ಥಿಕಮ್ ।
ವಿಚಿತ್ರಂ ದೇಶಕಾಲೋತ್ಥೈಃ ಪುರಮೇಕಮಿವಾಧ್ವಗೈಃ ॥೫೧॥
ಅಜ್ಞಾನಾತ್ ಪರಮಾರ್ಥಸ್ಯ ವಿಪರೀತಾವಬೋಧತಃ ।
ಕೇವಲಂ ವಿವದನ್ತ್ಯೇತೇ ವಿಕಲ್ಪೈರಾರುರುಕ್ಷವಃ ॥೫೨॥

ಹೃದಯದಲ್ಲಿಯೇ, ಮನಸ್ಸು ಬುದ್ಧಿ ಇಂದ್ರಿಯ ಮುಂತಾದುವುಗಳಿಗೆ, ನಾನಾವಿಧವಾದ ನಾಮಧೇಯಗಳನ್ನೂ ಲಕ್ಷಣಗಳನ್ನೂ ಹೇಳಿಕೊಳ್ಳುವರು ॥೪೬॥

ಒಬ್ಬ ವಾದಿಯ ಪಕ್ಷದಲ್ಲಿ ಈ ಮನಸ್ಸು ಜಡವಾಗಿರುವುದು; ಮತ್ತೊಬ್ಬನ ಪಕ್ಷದಲ್ಲಿ ಇದು ಜೀವನಿಗಿಂತ ಪೃಥಕ್ಕಾದುದಾಗುವುದು; ಇನ್ನೊಬ್ಬನು ಇದನ್ನು ಅಹಂಕಾರವೆಂದು ಕರೆಯುವನು; ಮತ್ತೊಬ್ಬನು ಬುದ್ಧಿಯೆನ್ನುವನು ॥೪೭॥

ಅಯ್ಯಾ! ರಘುನಂದನ! ಏಕರೂಪವಾಗಿರುವುವೆಂದು ನಾನು ಈಗ ಸಿನಗೆ ಹೇಳಿದ ಅಹಂಕಾರ ಮನಸ್ಸು ಬುದ್ಧಿ ಮುಂತಾದ ಕಲ್ಪನೆಗಳಾವುವುಂಟೋ, ಅವುಗಳನ್ನು ನೈಯಾಯಿಕರು ಅನ್ಯಥಾ ಕಲ್ಪಿಸಿಕೊಂಡಿರುವರು; ಸಾಂಖ್ಯರು ಮತ್ತೊಂದುರೀತಿಯಾಗಿ ಕಲ್ಪಿಸಿರುವರು; ಚಾರ್ವಾಕರೊಂದುವಿಧವಾಗಿಯೂ, ಮೀಮಾಂಸಕರೊಂದುವಿಧವಾಗಿಯೂ, ಆರ್ಹತರೊಂದುವಿಧವಾಗಿಯೂ, ಬೌದ್ಧರೊಂದುವಿಧವಾಗಿಯೂ, ವೈಶೇಷಿಕರೊಂದುವಿಧವಾಗಿಯೂ, ಹೀಗೆಯೇ ಇತರರಾದ ಪಾಂಚರಾತ್ರಾಗಮಜ್ಞರಾದಿಯಾದವರೆಲ್ಲರೂ ತಮತಮಗೆ ತೋರಿದಂತೆ ಒಂದೊಂದುವಿಧವಾಗಿ ಕಲ್ಪಿಸಿಕೊಂಡಿರುವರು ॥೪೮-೫೦॥

ಹೀಗೆ, ನಾನಾವಿಧವಾಗಿ ಕಲ್ಪಿಸಿಕೊಂಡಿದ್ದರೂ, ನಾನಾವಿಧ ದೇಶಕಾಲೋತ್ಪನ್ನರಾದ ಮಾರ್ಗಸ್ಥರೆಲ್ಲರೂ ತಮ್ಮ ಮನಸ್ಸಿನಲ್ಲಿ ಉದ್ದಿಷ್ಟವಾದ ಒಂದೇ ಪಟ್ಟಣವನ್ನು ತಲಪುವಂತೆ, ಈ ವಾದಿಗಳೆಲ್ಲರೂ ಪರಮಾರ್ಥವಾದ ಒಂದೇ ಸ್ಥಾನವನ್ನು ಹಿಡಿದುಕೊಂಡು ವಿವಾದಮಾಡುತಿರುವರು. ಕೊನೆಗೆ ಅವರೆಲ್ಲರೂ ಅಲ್ಲಿಗೇ ಸೇರುವರು ॥೫೧॥

'ಹೀಗೆ ಸರ್ವರಿಗೂ ಪ್ರಾಪ್ಯವಾದುದೊಂದೇ ಆಗಿದ್ದಪಕ್ಷದಲ್ಲಿ, ಇವರೆಲ್ಲರೂ ಪರಸ್ಪರವಾಗಿ ಇಷ್ಟು ವಿವಾದಮಾಡುವುದೇಕೆ?' ಎಂದು ಶಂಕಿಸಬಹುದಲ್ಲವೆ! ಇವರೆಲ್ಲರೂ ಇನ್ನೂ ಆರುರುಕ್ಷುಗಳಾಗಿರುವರು; ಅದುಕಾರಣ, ಪರಮಾರ್ಥವನ್ನು ತಿಳಿಯದೆಯೂ, ವ್ಯತ್ಯಸ್ತವಾಗಿ ತಿಳಿದುಕೊಂಡೂ, ನಾನಾವಿಧ ವಿಕಲ್ಪಗಳಿಂದ ವಿವಾದಮಾಡುತಿರುವರು ॥೫೨॥

ಸ್ವಮಾರ್ಗಮಭಿಶಂಸನ್ತಿ ವಾದಿನಶ್ಚಿತ್ರಯಾ ದೃಶಾ ।
ವಿಚಿತ್ರದೇಶಕಾಲೋತ್ಥಾಃ ಮಾರ್ಗಂ ಸ್ವಂ ಪಥಿಕಾಇವ ॥೫೩॥
ತೈರ್ವಿರ್ಥ್ಯಾ ರಾಘವ ಪ್ರೋಕ್ತಾಃ ಕರ್ಮಮಾನಸಚೇತಸಾಮ್ ।
ಸ್ವವಿಕಲ್ಪಾರ್ಪಿತೈರರ್ಥೈಃ ಸ್ವಾಃಸ್ವಾವೈಚಿತ್ರ್ಯಯುಕ್ತಯಃ ॥೫೪॥
ಯಥೈವ ಪುರುಷಃ ಸ್ನಾನದಾನಾದಾನಾದಿಕಾಃ ಕ್ರಿಯಾಃ ।
ಕುರ್ವಂಸ್ತತ್ಕರ್ತೃವೈಚಿತ್ರ್ಯಂ ಏತಿ ತದ್ವದಿದಂ ಮನಃ ॥೫೫॥
ವಿಚಿತ್ರಕಾರ್ಯವಶತೋ ನಾಮಭೇದೇನ ಕರ್ತೃತಾ ।
ಮನಃ ಸಮ್ಪ್ರೋಚ್ಯತೇ ಜೀವವಾಸನಾಕರ್ಮನಾಮಭಿಃ ॥೫೬॥
ಚಿತ್ತಮೇವೇದಮಖಿಲಂ ಸರ್ವೇಣೈವಾನುಭೂಯತೇ ।
ಅಚಿತ್ತೋ ಹಿ ನರೋ ಲೋಕಂ ಪಶ್ಯನ್ನಪಿ ನ ಪಶ್ಯತಿ ॥೫೭॥
ಶ್ರುತ್ವಾ ಸ್ಪೃಷ್ಟ್ವಾಚ ದೃಷ್ಟ್ವಾಚ ಭುಕ್ತ್ವಾ ಘ್ರಾತ್ವಾ ಶುಭಾಶುಭಮ್ ।
ಅನ್ತರ್ಹರ್ಷಂ ವಿಷಾದಂ ಚ ಸಮನಸ್ಕೋ ಹಿ ವಿನ್ದತಿ ॥೫೮॥

ಹೀಗಿರುವುದರಿಂದಲೇ, ನಾನಾವಿಧ ದೇಶಕಾಲೋತ್ಪನ್ನರಾದ ಪಥಿಕರುಗಳು ತಮ್ಮತಮ್ಮ ಮಾರ್ಗವನ್ನು ಪ್ರಶಂಸಿಸುವಂತೆ, ಈ ವಾದಿಗಳೂ ತಮ್ಮತಮ್ಮ ಮಾರ್ಗವನ್ನು ನಾನಾವಿಧವಾದ ಯುಕ್ತಿಗಳಿಂದ ಹೊಗಳಿಕೊಳ್ಳುವರು ॥೫೩॥

ಅಯ್ಯಾ ರಾಘವ! ನಾನಾವಿಧವಾದ ಫಲಗಳನ್ನನುಭವಿಸಬೇಕೆಂಬ ಇಚ್ಛೆಯಿಂದ ಫಲಸಾಧನವಾದ ಕರ್ಮಗಳಲ್ಲಿ ಆಸಕ್ತವಾದ ಮನಸ್ಸುಳ್ಳವರಿಗೋಸ್ಕರವಾಗಿ, ಆಯಾ ವಾದಿಗಳು, ತಮ್ಮತಮ್ಮ ಬುದ್ಧಿಕೃತವಾದ ಮಿಥ್ಯಾವಿಕಲ್ಪಗಳಿಂದ ತಮ್ಮತಮ್ಮ ವಿಚಿತ್ರಯುಕ್ತಿಗಳನ್ನು ಹೇಳಿಕೊಂಡಿರುವರು ॥೫೪॥

ತತ್ವವೇನೆಂದರೆ,—ಜೀವನು ಸ್ನಾನ ದಾನ ಸ್ವೀಕಾರ ಮುಂತಾದ ಕ್ರಿಯೆಗಳನ್ನು ಮಾಡುತ ಆಯಾ ಕರ್ಮಕರ್ತೃತ್ವವನ್ನು ಹೇಗೆ ಹೊಂದುವನೋ, ಈ ಮನಸೂ ಹಾಗೆಯೇ ಆಯಾ ಕರ್ಮಾಚರಣಕಾಲದಲ್ಲಿ ಆಯಾ ಕರ್ಮಕರ್ತೃತ್ವವನ್ನು ಹೊಂದುವುದು ॥೫೫।

ಅಂತು, ಕಾರ್ಯವೈಚಿತ್ರ್ಯಾನುಗುಣವಾಗಿ ನಾಮಭೇದಗಳನ್ನು ಕಲ್ಪಿಸಿಕೊಂಡು, ತತ್ತತ್ಕಾರ್ಯಕರ್ತೃತ್ವವುಂಟಾಗಿರುವುದೆಂಬುದು ಯುಕ್ತಿಯುಕ್ತವಾಗಿ ನಿಲ್ಲುವುದಲ್ಲವೆ! ಅದುಕಾರಣವೇ, ಮನಸ್ಸೊಂದೇ ಜೀವ ವಾಸನಾ ಕರ್ಮ ಮುಂತಾದ ನಾಮಗಳಿಂದ ಕರೆಯಲ್ಪಡುವುದೆಂದು ನಾನು ಮೊದಲು ಹೇಳಿದುದು ದೃಢಪಡುವುದು ॥೫೬॥

ಪ್ರಪಂಚದಲ್ಲಿ ಅನುಭವವೂ ಹೀಗೆಯೇ ಇರುವುದು. ಈ ಸಮಸ್ತದೃಶ್ಯಜಾತವೂ ಚಿತ್ತವೇಯೆಂಬುದು ಸಮಸ್ತರಿಂದಲೂ ಅನುಭವಿಸಲ್ಪಡುತಿರುವುದು. ಚಿತ್ತರಹಿತನಾದ ಪುರುಷನು, ಜಗತ್ತನ್ನು ನೋಡುತಿದ್ದರೂ ನೋಡದವನಂತೆಯೇ ಇರುವನು ॥೫೭॥

ಒಳ್ಳೆಯದನ್ನಾಗಲಿ-ಅಥವಾ ಕೆಟ್ಟದನ್ನಾಗಲಿ-ಕೇಳುವುದರಿಂದಲೂ ಸ್ಪರ್ಶಿಸುವುದರಿಂದಲೂ ನೋಡುವುದರಿಂದಲೂ ಭುಂಜಿಸುವುದರಿಂದಲೂ ಆಘ್ರಾಣಿಸುವುದರಿಂದಲೂ ಒಳಗೆ ಹರ್ಷವನ್ನಾಗಲಿ ವಿಷಾದವನ್ನಾಗಲಿ ಪಡೆಯಬೇಕಾದರೆ, ಸಮನಸ್ಕನಿಗೇ ಸಾಧ್ಯವಲ್ಲದೆ—ವಿಮನಸ್ಕನಿಗೆಂದಿಗೂ ಸಾಧ್ಯವಲ್ಲವಷ್ಟೆ! ॥೫೮॥

ಆಲೋಕಇವ ರೂಪಾಣಾಂ ಅರ್ಥಾನಾಂ ಕಾರಣಂ ಮನಃ |
ಬಧ್ಯತೇ ಬದ್ಧಚಿತ್ತೋ ಹಿ ಮುಕ್ತಚಿತ್ತೋ ಹಿ ಮುಚ್ಯತೇ ||೪೯||
ತಂ ಜಡಾನಾಂ ಪರಂ ವಿದ್ಧಿ ಜಡಂ ಯೇನೋಚ್ಯತೇ ಮನಃ |
ನ ಚಾವಗಚ್ಛತಿ ಜಡಂ ಮನೋ ಯಸ್ಯ ಹಿ ಚೇತನಮ್ ||೬೦||
ನ ಚೇತನಂ ನ ಚ ಜಡಂ ಯದಿದಂ ಪ್ರೋತ್ಥಿತಂ ಮನಃ |
ವಿಚಿತ್ರಸುಖದುಃಖೇಹಂ ಜಗದಭ್ಯುದಿತಂ ತದಾ ||೬೧||
ಏಕರೂಪೇ ಹಿ ಮನಸಿ ಸಂಸಾರಃ ಪ್ರವಿಲೀಯತೇ |
ಉಪಾವಿಲಂ ಕಾರಣಂ ತೈಃ ಭ್ರಾನ್ತ್ಯಾ ಜಗದುಪಸ್ಥಿತಮ್ ||೬೨||
ಅಜಡಂ ಹಿ ಮನೋ ರಾಮ ಸಂಸಾರಸ್ಯ ನ ಕಾರಣಮ್ |
ಜಡಂ ಚೋಪಲಧರ್ಮಾಪಿ ಸಂಸಾರಸ್ಯ ನ ಕಾರಣಮ್ ||೬೩||
ನ ಚೇತನಂ ನ ಚ ಜಡಂ ತಸ್ಮಾಜ್ಜಗತಿ ರಾಘವ |
ಮನಃ ಕಾರಣಮರ್ಥಾನಾಂ ರೂಪಾಣಾಮಿವ ಭಾಸನಮ್ ||೬೪||
ಚಿತ್ತಾದೃತೇನ್ಯದ್ಯದ್ಯಸ್ತಿ ತದಚಿತ್ತಸ್ಯ ಕಿಂ ಜಗತ್ |
ಸರ್ವಸ್ಯ ಭೂತಜಾತಸ್ಯ ಸಮಗ್ರಂ ಪ್ರವಿಲೀಯತೇ ||೬೫||

ಸಮಸ್ತ ರೂಪಜ್ಞಾನಕ್ಕೂ ಪ್ರಕಾಶವು ಕಾರಣವಾಗಿರುವಂತೆ, ಸಕಲವಾದ ಅರ್ಥಕ್ಕೂ ಮನಸ್ಸೇ ಕಾರಣವಾಗಿರುವುದು. ಆದುಕಾರಣ, ಮನಸ್ಸುಬದ್ಧವಾಗಿರತಕ್ಕವನು ತಾನೂ ಬದ್ಧನಾಗುವನು; ಮನಸ್ಸುಮುಕ್ತವಾಗಿರತಕ್ಕವನು ತಾನೂ ಮುಕ್ತನಾಗುವನು ||೫೯||

ಆದುಕಾರಣ, ಎಲೈ ರಾಘವ! ಯಾವನು ಮನಸ್ಸ ಜಡವೆಂದು ಹೇಳುವನೋ, ಅವನು ಜಡರಲ್ಲೆಲ್ಲ ಅಗ್ರಗಣ್ಯನೆಂದು ತಿಳಿ; ಯಾವನು ಇದನ್ನು ಚೇತನವೆಂದು ತಿಳಿಯುವನೋ, ಅವನೂ ತಿಳಿವಳಿಕೆಯಿಲ್ಲದವನೆಂದು ತಿಳಿ. ಅಂತು, ಈ ಮನಸ್ಸು ಜಡವೂ ಅಜಡವೂ ಅಲ್ಲವೆಂದು ನಿಶ್ಚಯಿಸುವನಾಗು ||೬೦||

ಹೀಗೆ ಚೇತನವೂ ಅಲ್ಲದೆ ಜಡವೂ ಅಲ್ಲದೆ ಇರುವ ಮನಸ್ಸು ಯಾವಾಗ ವಿಕ್ಷಿಪ್ತವಾಗುವುದೋ, ಆಗ ವಿಚಿತ್ರವಾದ ಸುಖದುಃಖವ್ಯಾಪಾರಗಳುಳ್ಳ ಜಗತ್ತು ಉದಯಹೊಂದಿದಂತೆ ಕಾಣುವುದು ||೬೧||

ವತ್ಸ! ರಾಮ! ಈ ಮನಸ್ಸು ಅದ್ವಿತೀಯಬ್ರಹ್ಮಾಕಾರವಾಗಿರುವಾಗ, ಸಂಸಾರವು ಆತ್ಯಂತಿಕವಾಗಿ ಲಯಹೊಂದಿರುವುದು; ಇದು ಕಲುಷವಾದಾಗ ಸಂಸಾರಕ್ಕೆ ಕಾರಣವೆನ್ನಿಸುವುದು. ಇಂತಹ ಅನೇಕ ಮನಸ್ಸುಗಳಿಂದ, ಈ ಜಗತ್ತೆಂಬ ಭ್ರಾಂತಿಯುದಯಿಸುವುದು ||೬೨||

ವಸ್ತುತಃ ವಿಚಾರಮಾಡಿ ನೋಡಿದರೆ, ಜಡವಲ್ಲದಿರುವಾಗಲೂ ಮನಸ್ಸು ಸಂಸಾರಕ್ಕೆ ಕಾರಣವಾಗಲಾರದು; ಜಡವಾಗಿ ಕಲ್ಲಿನಂತಿರುವಾಗಲೂ ಸಂಸಾರಕ್ಕೆ ಕಾರಣವಾಗಲಾರದು ||೬೩||

ಆದುಕಾರಣ, ಅಯ್ಯಾ ರಾಘವ! ರೂಪ ಪ್ರತ್ಯಕ್ಷವಾಗುವುದಕ್ಕೆ ಪ್ರಕಾಶವು ಕಾರಣವಾಗಿರುವಂತೆ, ಚೇತನವೂ ಜಡವೂ ಅಲ್ಲದಿರುವ ಮನಸ್ಸು ಸಮಸ್ತವಾದ ಅರ್ಥಕ್ಕೂ ಕಾರಣವಾಗುವುದು ||೬೪||

ಚಿತ್ತವನ್ನು ಬಿಟ್ಟು ಬೇರೆಯಾದ ಪದಾರ್ಥವೊಂದಿರುವಪಕ್ಷದಲ್ಲಿ, ಆಗ ಚಿತ್ತಶೂನ್ಯನಾದವನ ದೃಷ್ಟ್ಯಾ ಜಗತ್ತು ಯಾವುದಿರುವುದು? ಚಿತ್ತವು ಲಯಹೊಂದಿರುವಾಗ, ಸಮಸ್ತ ಪ್ರಾಣಿವರ್ಗಕ್ಕೂ ಸಮಸ್ತವೂ ಲಯಹೊಂದಿಬಿಟ್ಟಿರುವುದಲ್ಲವೆ! ||೬೫||

ನಾನಾಕರ್ಮಾವೇಶವಶಾತ್ ಮನೋ ನಾನಾಭಿಧೇಯತಾಮ್।
ಏಕಂ ವಿಚಿತ್ರತಾಮೇತಿ ಕಾಲೋ ನಾನಾ ಯಥರ್ತುಭಿಃ ॥೬೬॥
ಯದಿ ನಾಮಾಽಮನಸ್ಕಾರಂ ಅಹಙ್ಕಾರೇನ್ದ್ರಿಯಕ್ರಿಯಾಃ।
ಕ್ಷೋಭಯನ್ತಿ ಶರೀರಂ ತತ್ ಸನ್ತು ಜೀವಾದಯಃ ಪರೇ ॥೬೭॥
ದರ್ಶನೇಷು ತು ಯೇ ಪ್ರೋಕ್ತಾಃ ಭೇದಾ ಮನಸಿ ತರ್ಕತಃ ।
ಕ್ವಚಿತ್ಕ್ವಚಿದ್ವಾದಕರ್ಯೈಃ ಅಪವಾದಕರ್ಯೈಃ ಕಿಲ ॥೬೮॥
ತೇ ಹಿ ರಾಮ ನ ಬುಧ್ಯನ್ತೇ ವಿಶಿಷ್ಯನ್ತೇ ನ ಚ ಕ್ವಚಿತ್ ।
ಸರ್ವಾ ಹಿ ಶಕ್ತಯೋ ದೇವೇ ವಿದ್ಯನ್ತೇ ಸರ್ವಗಾಯತಃ ॥೬೯॥
ಯದೈವ ಖಲು ಶುದ್ಧಾಯಾಂ ಮನಾಗಪಿ ಹಿ ಸಂವಿದಃ ।
ಜಡೇವ ಶಕ್ತಿರುದಿತಾ ತದಾ ವೈಚಿತ್ರ್ಯಮಾಗತಮ್ ॥೭೦॥
ಊರ್ಣನಾಭಾದ್ಯಥಾ ತನ್ತುಃ ಜಾಯತೇ ಚೇತನಾಜ್ಜಡಃ ।
ನಿತ್ಯಪ್ರಬುದ್ಧಾತ್ ಪುರುಷಾತ್ ಬ್ರಹ್ಮಣಃ ಪ್ರಕೃತಿಸ್ತಥಾ ॥೭೧॥

ಕಾಲವು ಸ್ವರೂಪತಃ ಒಂದೇ ಆಗಿದ್ದರೂ ಆಯಾ ಋತುಭೇದಗಳಿಂದ ನಾನಾವಿಧ ನಾಮಧೇಯಗಳನ್ನು ಹೊಂದುವಂತೆ, ಮನಸ್ಸು ಸ್ವರೂಪತಃ ಒಂದೇ ಆಗಿದ್ದರೂ ನಾನಾವಿಧವಾದ ಕರ್ಮವಾಸನಾವಶದಿಂದ ನಾನಾವಿಧವಾದ ಹೆಸರುಗಳನ್ನು ಹೊಂದುವುದು ॥೬೬॥

ಮನಸ್ಸಿನ ಬಲವೇ ಇಲ್ಲದಿರುವ ಶರೀರವನ್ನು ಅಹಂಕಾರವೂ ಇಂದ್ರಿಯವ್ಯಾಪಾರಗಳೂ ಕ್ಷೋಭೆಪಡಿಸಿದ ಪಕ್ಷದಲ್ಲಿ, ಆಗ ಜೀವಾದಿಗಳು ಪೃಥಗೂ ತಗಳಾಗಬಹುದು. (ಎಂದರೆ, ಎರಡೂ ಇಲ್ಲವೆಂದು ಭಾವವು) ॥೬೭॥

ಅಯ್ಯಾ! ರಾಮ! ಕೇವಲ ಅಪವಾದಮಾಡತಕ್ಕ ವಾದಿಗಳು ಆಯಾ ಶಾಸ್ತ್ರಗಳಲ್ಲಿ ಒಂದೊಂದುಕಡೆ ತಮ್ಮತಮ್ಮ ಯುಕ್ತಿಗಳಿಗನುಸಾರವಾಗಿ ಯಾವ ಭೇದಗಳನ್ನು ಹೇಳಿರುವರೋ, ಅವುಗಳು ವ್ಯಾಸಾದಿ ಮಹರ್ಷಿಗಳಿಗೆ ಸಮ್ಮತಗಳಲ್ಲ; ಅವರು ಅವುಗಳನ್ನು ಹೇಳಿಯೂ ಇಲ್ಲ. ಆ ಪರಮಾತ್ಮನೊಬ್ಬನಲ್ಲಿ, ಸಮಸ್ತವಾದ ಶಕ್ತಿಗಳೂ ಇದ್ದೇ ಇರುವುವು ॥೬೮—೬೯॥

'ಹಾಗಾದರೆ, ಆ ವಾದಿಗಳೆಲ್ಲರೂ ಸರ್ವದಾ ಸಂಶಯಗ್ರಸ್ತರಾಗಿಯೇ ಇರಬೇಕಲ್ಲದೆ, ಒಬ್ಬೊಬ್ಬರು ಒಂದೊಂದು ವಿಧವಾಗಿ ನಿರ್ಣಯಮಾಡಿಕೊಂಡಿರುವುದು ಹೇಗೆ?' ಎಂದರೆ,—ಶುದ್ಧವಾಗಿರುವ ಜ್ಞಾನಕ್ಕೆ ಯಾವಾಗ ಸ್ವಲ್ಪವಾಗಿ ಜಡವಾದ ಶಕ್ತಿಯುದಯಿಸುವುದೋ, ಆಗ ಈ ವಿವಾದವೈಚಿತ್ರ್ಯವುಂಟಾಯಿತು. ಹೀಗೆ ಅವರವರು ಆಯಾ ವಿಕಲ್ಪಗಳನ್ನೇ ನಿಶ್ಚಯವೆಂದು ನಂಬಿಕೊಂಡುಬಿಟ್ಟಿರುವರು ॥೭೦॥

'ಸಮಸ್ತವಾದಿಗಳ ಪಕ್ಷಗಳೂ ಕಲ್ಪಿತವೆನ್ನುವ ಪಕ್ಷದಲ್ಲಿ, ನಾನು ಹೇಳುವುದೇ ಕಲ್ಪಿತವೆಂದು ಏಕೆ ಹೇಳಬಾರದು?' ಎಂದು ಆಕ್ಷೇಪಿಸಿದರೆ,—ನಾನು ಹೇಳುವ ಪಕ್ಷವು ಸ್ವಕಪೋಲಕಲ್ಪಿತವಲ್ಲ; 'ಯಥೋರ್ಣನಾಭಿಃ ಸೃಜತೇ' ಇತ್ಯಾದಿ ಶ್ರುತಿಸಿದ್ಧಾಂತವನ್ನನುಸರಿಸಿರುವುದು. ಚೇತನವಾದ ಜಾಡರ ಹುಳುವಿನ ದೆಸೆಯಿಂದ ಜಡವಾದ ದಾರವು ಹೇಗೆ ಹುಟ್ಟುತಿರುವುದೋ, ಹಾಗೆ ನಿತ್ಯಬುದ್ಧಸ್ವರೂಪನಾದ ಬ್ರಹ್ಮನ ದೆಸೆಯಿಂದ ಜಡವಾದ ಮನಸ್ಸು ಹುಟ್ಟುವುದು ॥೭೧॥

ಅವಿದ್ಯಾವಶತಶ್ಚಿತ್ತಭಾವನಾಃ ಸ್ಥಿತಿಮಾಗತಾಃ |
ಚಿತಿ ಪರ್ಯಾಯಶಬ್ದಾಹಿ ಭಿನ್ನಾಸ್ತೇನೇಹ ವಾದಿನಾಮ್ ||೨೦||

ಜೀವೋ ಮನಶ್ಚ ನನು ಬುದ್ಧಿರಹಙ್ಕೃತಿಶ್ಚೇ
ತ್ಯೇವಂ ಪ್ರಥಾಮುಪಗತೇಯಮನಿರ್ಮಲಾ ಚಿತ್ |
ಸೈಷೋಚ್ಯತೇ ಜಗತಿ ಚೇತನ ಚಿತ್ತ ಜೀವ
ಸಂಜ್ಞಾಗಣೇನ ಕಿಲ ನಾಸ್ತಿ ವಿವಾದವಿಷಃ ||೨೧||

ಇತಿ ಉತ್ಪತ್ತಿಪ್ರಕರಣೇ ಮನಸ್ಸಂಜ್ಞಾವಿಚಾರೋ ನಾಮ

ಷಣ್ಣವತಿತಮಃ ಸರ್ಗಃ.

ಇತರವಾದಿಗಳಿಗಾದರೋ, ಅಜ್ಞಾನವಶದಿಂದ ಶ್ರುತಿಯಲ್ಲಾದರವಿಲ್ಲದೆ ತಮ್ಮತಮ್ಮ ಭಾವನೆಯೇ ಸ್ಥಿರಪಟ್ಟಿರುವುವು. ಅದುಕಾರಣ, ಚಿತ್ತಭಾವವನ್ನು ಹೊಂದಿರುವ ಚೈತನ್ಯದಲ್ಲಿ ಅವರು ನಾನಾವಿಧವಾದ ಪರ್ಯಾಯಶಬ್ದಗಳನ್ನು ಕಲ್ಪಿಸಿರುವರು ||೨೦||

ಹೀಗೆ ಕಲುಷವಾದ ಚಿತ್ತೇ, ಜೀವ ಮನಸ್ಸು ಬುದ್ಧಿ ಅಹಂಕಾರ—ಇತ್ಯಾದಿ ರೂಪದಿಂದ ಪ್ರಸಿದ್ಧಿಯನ್ನು ಪಡೆದಿರುವುದು. ಇದೇಯೆ, ಈ ಪ್ರಪಂಚದಲ್ಲಿ ಚೇತನ ಚಿತ್ತ ಜೀವ ಇತ್ಯಾದಿ ಸಂಜ್ಞೆಗಳಿಂದಲೂ ಕರೆಯಲ್ಪಡುವುದು. ಇಷ್ಟೇ ಹೊರತು, ಇತರವಾದ ಈ ವಿವಾದವೊಂದೂ ವಾಸ್ತವ್ಯವಾಗಿಲ್ಲ ||೨೧||

ಇದು ಉತ್ಪತ್ತಿಪ್ರಕರಣದಲ್ಲಿ ಮನಸ್ಸಂಜ್ಞಾ ವಿಚಾರವೆಂಬ

ತೊಂಬತ್ತಾರನೆಯ ಸರ್ಗವು.

ಉತ್ಪತ್ತಿಪ್ರಕರಣೇ ಸಪ್ತನವತಿತಮಃ ಸರ್ಗಃ.

ಶ್ರೀರಾಮ ಉವಾಚ.

ಬ್ರಹ್ಮನ್ ಮನಸಏವೇದಂ ಅನ್ತಶ್ಛಾಡಮ್ಬರಂ ಸ್ಮೃತಮ್ ।
ಯತಸ್ತದೇವ ಕರ್ಮೇತಿ ವಾಕ್ಯಾರ್ಥಾದುಪಲಭ್ಯತೇ ॥೧॥

ಶ್ರೀ ವಸಿಷ್ಠ ಉವಾಚ.

ದೃಢಭಾವೋಪರಕ್ತೇನ ಮನಸ್ಯೈವೋರರೀಕೃತಮ್ ।
ಮರುಚಣ್ಡಾತಪೇನೇವ ಭಾಸ್ವರಾವರಣಂ ಪುನಃ ॥೨॥
ಬ್ರಹ್ಮಾತ್ಮನಿ ಜಗತ್ಯಸ್ಮಿನ್ ಮನಏಕಾಕೃತಿಂ ಗತಿಮ್ ।
ಕ್ವಚಿನ್ನರತಯಾ ರೂಢಂ ಕ್ವಚಿತ್ ಸುರತಯೋತ್ಥಿತಮ್ ॥೩॥

ಉತ್ಪತ್ತಿಪ್ರಕರಣದಲ್ಲಿ ತೊಂಬತ್ತೇಳನೆಯ ಸರ್ಗವು.

ಸರ್ವಾಕಾರೇಣ ಸಂಸ್ಥಾನಂ ಮನಸೋತ್ರ ನಿರೂಪ್ಯತೇ ।
ಚಿತ್ತಾಕಾಶಚಿದಾಕಾಶಭೂತಾಕಾಶಾಶ್ಚ ವಿಸ್ತರಾತ್ ॥

ಮನಸ್ಸು ಸಕಲರೂಪವಾಗಿರುವಿಕೆಯೂ, ಚಿತ್ತಾಕಾಶ ಚಿದಾಕಾಶ ಭೂತಾಕಾಶಗಳೂ, ಈ ಸರ್ಗದಲ್ಲಿ ವಿಸ್ತರವಾಗಿ ವರ್ಣಿಸಲ್ಪಡುವುವು.

ಪೂರ್ವೋಕ್ತರೀತಿಯಾಗಿ ಕರ್ತೃ ಕರ್ಮ ಮನಸ್ಸುಗಳ ಸ್ವರೂಪಗಳನ್ನೂ ಅವುಗಳ ನಾಮಭೇದಗಳನ್ನೂ ನಾನಾಪ್ರಕಾರವಾಗಿ ಗುರುಮುಖದಿಂದ ಕೇಳಿ ತಿಳಿದುಕೊಂಡ ಶ್ರೀರಾಮನು, ತಾನು ತಿಳಿದುಕೊಂಡಿರುವಂತೆಯೇ ಗುರುಗಳ ತಾತ್ಪರ್ಯವೂ ಇರುವುದೋ ಇಲ್ಲವೋ ಎಂಬುದನ್ನು ನಿಶ್ಚಯಿಸುವುದಕ್ಕೋಸ್ಕರವಾಗಿ, ಶ್ರೀವಸಿಷ್ಠರನ್ನು ಕುರಿತು ಈ ರೀತಿಯಾಗಿ ಹೇಳುವನು:—

ಎಲೈ ಬ್ರಾಹ್ಮಣೋತ್ತಮರೆ! ತಾವು ಇದುವರೆಗೆ ಅಪ್ಪಣೆಕೊಟ್ಟ ವಾಕ್ಯಾರ್ಥವನ್ನು ವಿಚಾರಮಾಡಲಾಗಿ, ಈ ಬ್ರಹ್ಮಾಂಡರೂಪವಾದ ಆಡಂಬರವು ಮನಸ್ಸಿನ ದೆಸೆಯಿಂದಲೇ ಉತ್ಪನ್ನವಾಗಿರುವುದೆಂದು ಗೊತ್ತಾಗುವುದು. ಹೀಗಿರುವುದರಿಂದ, ಮನಸ್ಸಿಗೆ ಜಗತ್ತೇ ಕರ್ಮವೆಂದು ತಾತ್ಪರ್ಯವೆಂಬುದಾಗಿ ನಾನು ತಿಳಿದುಕೊಂಡಿರುವೆನು ॥೧॥

ಇದನ್ನು ಕೇಳಿ ಶ್ರೀ ವಸಿಷ್ಠರು ಉತ್ತರಕೊಡುವರು:—

ವತ್ಸ! ರಾಮ! ನೀನು ತಿಳಿದುಕೊಂಡಿರುವುದು ಸರಿಯಾಗಿರುವುದು; ನಿನ್ನ ಮಾತಿಗೆ ಇದೇ ತಾತ್ಪರ್ಯವು. ಇದನ್ನೇ ಇನ್ನೂ ಹೇಳುವೆನು. ಮನಸ್ಸು ವಾಸನಾದಾರ್ಢ್ಯದಿಂದ ಆಕ್ರಮಿಸಲ್ಪಡುವುದು; ಆಗ ಅದು, ಮರುಭೂಮಿಯಲ್ಲಿರುವ ಉರಿಬಿಸಿಲು ತನ್ನ ತೇಜೋರೂಪವನ್ನು ಮರೆಮಾಡುವ ಜಲಸ್ವರೂಪವನ್ನು ಸ್ವೀಕರಿಸುವಂತೆ, ಆತ್ಮಸ್ವರೂಪವನ್ನು ಮರೆಯಾಗಿಸುವ ಅಜ್ಞಾನಜಾಡ್ಯವನ್ನು ಸ್ವೀಕರಿಸುವುದು ॥೨॥

ಬ್ರಹ್ಮಸ್ವರೂಪವಾದ ಈ ಜಗತ್ತಿನಲ್ಲಿ, ಮನಸ್ಸು ಮುಖ್ಯವಾದ ಆಕಾರವನ್ನು ಹೊಂದಿಬಿಟ್ಟಿರುವುದು. (ಜಗತ್ತಿನ ಸ್ಥಿತಿಯನ್ನು ಪಡೆದಿರುವುದೆಂದು ಭಾವವು) ಹೀಗಿರುವುದರಿಂದ, ಇದ್ದ

ಕ್ವಚಿದ್ಗನ್ಧರ್ವತಾಂ ಪ್ರಾಪ್ತಂ ಕ್ವಚಿತ್ ಕಿನ್ನರರೂಪಿ ಚ ||೪||
ನಾನಾಚಾರನಭೋಭಾಗಪುರಪತ್ತನರೂಪಯಾ |
ಮನ್ಯೇ ವಿತತಯಾಕೃತ್ಯಾ ಮನ ಏವ ವಿಜೃಮ್ಭತೇ ||೫||
ಏವಂ ಸ್ಥಿತೇ ಶರೀರೌಘಃ ತೃಣಕಾಷ್ಠಲತೋಪಮಃ |
ತದ್ವಿಚಾರಣಯಾ ಕೋಽರ್ಥೋ ವಿಚಾರ್ಯಂ ಮನ ಏವ ನಃ ||೬||
ತೇನೇದಂ ಸರ್ವಮಾಭೋಗಿ ಜಗದಿತ್ಯಾಕುಲಂ ತತಮ್ |
ಮನ್ಯೇ ತದ್ವ್ಯತಿರೇಕೇಣ ಪರಮಾತ್ಮೈವ ಶಿಷ್ಯತೇ ||೭||
ಆತ್ಮಾ ಸರ್ವಪದಾತೀತಃ ಸರ್ವಗಃ ಸರ್ವಸಂಶ್ರಯಃ |
ತತ್ಪ್ರಸಾದೇನ ಸಂಸಾರೇ ಮನೋ ಧಾವತಿ ವಲ್ಗತಿ ||೮||
ಮನೋ ಮನ್ಯೇ ಮನಃಕರ್ಮ ಶರೀರೇಷು ಕಾರಣಮ್ |
ಜಾಯತೇ ಮ್ರಿಯತೇ ತದ್ಧಿ ನಾತ್ಮನೀದೃಗ್ವಿಧಾಗುಣಾಃ ||೯||
ಮನ ಏವ ವಿಚಾರೇಣ ಮನ್ಯೇ ವಿಲಯಮೇಷ್ಯತಿ |
ಮನೋವಿಲಯಮಾತ್ರೇಣ ತತಃ ಶ್ರೇಯೋ ಭವಿಷ್ಯತಿ ||೧೦||

ಕೆಲವುಕಡೆಯಲ್ಲಿ ಮನುಷ್ಯರೂಪವಾಗಿಯೂ, ಮತ್ತೆ ಕೆಲವೆಡೆಯಲ್ಲಿ ದೇವರೂಪವಾಗಿಯೂ, ಇನ್ನೂ ಕೆಲವು ಸ್ಥಳಗಳಲ್ಲಿ ದೈತ್ಯರೂಪವಾಗಿಯೂ, ಕೆಲವುಕಡೆಯಲ್ಲಿ ಯಕ್ಷರೂಪವಾಗಿಯೂ, ಕೆಲವುಕಡೆಯಲ್ಲಿ ಗಂಧರ್ವರೂಪವಾಗಿಯೂ, ಕೆಲವುಕಡೆಯಲ್ಲಿ ಕಿನ್ನರರೂಪವಾಗಿಯೂ ಹರಡಿಕೊಂಡಿರುವುದು ||೩—೪||

ನಾನಾವಿಧವಾದ ಆಚಾರವುಳ್ಳ ಅಂತರಿಕ್ಷ ಪುರ ಪಟ್ಟಣಗಳ ರೂಪವಾಗಿ ವಿಸ್ತಾರವಾದ ಆಕಾರದಿಂದ ಮನಸ್ಸೇ ವಿಜೃಂಭಿಸುತ್ತಿರುವುದೆಂದು ನಾನು ತಿಳಿದಿರುವೆನು ||೫||

ವಸ್ತುತತ್ವವೀರೀತಿಯಿರಲಾಗಿ, ಈ ಶರೀರಸಮುದಾಯವು ತೃಣ ಕಾಷ್ಠ ಲವಸದೃಶವಾದದೆಂದು ಸ್ಪಷ್ಟವಾಗಿ ಗೊತ್ತಾಗುವುದು. ಆದುಕಾರಣ, ಆ ಶರೀರವನ್ನು ಕುರಿತು ವಿಚಾರಮಾಡುವುದರಿಂದ ಪ್ರಯೋಜನವೇನಿರುವುದು? ಮನಸ್ಸೇ ಈಗ ನಮಗೆ ವಿಚಾರಯೋಗ್ಯವಾದುದು ||೬||

ಈ ವಿಶಾಲವಾದ ಜಗತ್ತೆಂಬ ಪದಾರ್ಥವೆಲ್ಲವೂ ಆ ಮನಸ್ಸಿನಿಂದಲೇ ವಿಸ್ತರಿಸಲ್ಪಟ್ಟಿರುವುದು. ಈ ಮನಸ್ಸನ್ನು ಬಿಟ್ಟು ಬೇರೆಯಾದ ಪದಾರ್ಥವಾವುದೆಂದರೆ,—ಪರಮಾತ್ಮವೊಂದೇ ಒಂದೆಂದು ನಾನು ತಿಳಿದಿರುವೆನು ||೭||

ಆ ಪರಮಾತ್ಮನಾದರೋ, ಸರ್ವಪದವನ್ನೂ ಅತಿಕ್ರಮಿಸಿರತಕ್ಕವನು; ಸರ್ವವ್ಯಾಪಿಯಾದವನು; ಸರ್ವಾಧಾರನಾದವನು. ಆ ಪರಮಾತ್ಮನ ಬಲದಿಂದಲೇ, ಮನಸ್ಸು ಈ ಸಂಸಾರದಲ್ಲಿ ಓಡುತ್ತಲೂ ಕುಣಿಯುತ್ತಲೂ ಇರುವುದು ||೮||

ಮನಸ್ಸೇ ಮನಸ್ಸಿಗೆ ಕರ್ಮಭೂತವಾದುದೆಂದು ನನಗೆ ತೋರುವುದು. ಅದೇ ಈ ಶರೀರಗಳ ಉತ್ಪತ್ತಿಗೂ ಕಾರಣವು. ಅದು ಜನಿಸುತಲೂ ಮೃತಿಹೊಂದುತಲೂ ಇರುವುದು. ಆತ್ಮನಲ್ಲಿ ಇಂತಹ ಜನನಮರಣಾದಿಗುಣಗಳಾವುವೂ ಇಲ್ಲ ||೯||

ವಿಚಾರಮಾಡುತಬಂದರೆ, ಈ ಮನಸ್ಸೇ ಲಯಹೊಂದುವುದು. ಬಳಿಕ, ಮನೋಲಯಮಾತ್ರದಿಂದಲೇ ಆತ್ಮನಿಗೆ ಮೋಕ್ಷವುಂಟಾಗುವುದು ||೧೦||

ಮನೋನಾಮ್ನಿ ಪರಿಕ್ಷೀಣೇ ಕರ್ಮಣ್ಯಾಹಿತಸಮ್ಭ್ರಮೇ ।
ಮುಕ್ತ ಇತ್ಯುಚ್ಯತೇ ಜನ್ತುಃ ಪುನರ್ನಾಮ ನ ಜಾಯತೇ ॥೧೧॥

ಶ್ರೀರಾಮ ಉವಾಚ.

ಭಗವನ್ ಭವತಾ ಪ್ರೋಕ್ತಾಃ ಜಾತಯಸ್ತ್ರಿವಿಧಾನ್ಯಥಾಮ್ ।
ಪ್ರಥಮಂ ಕಾರಣಂ ತಾಸಾಂ ಮನಃ ಸದಸದಾತ್ಮಕಮ್ ॥೧೨॥

ತತ್ ಕಥಂ ಶುದ್ಧಚಿನ್ಮಾತ್ರಾತ್ ತತ್ತ್ವಾದ್ಬುದ್ಧಿವಿವರ್ಜಿತಾತ್ ।
ಉತ್ಥಿತಂ ಸ್ಫಾರತಾಂ ಯಾತಂ ಜಗಚ್ಚಿತ್ರಕರಂ ಮನಃ ॥೧೩॥

ಶ್ರೀ ವಸಿಷ್ಠ ಉವಾಚ.

ಆಕಾಶಾಹಿ ತ್ರಯೋ ರಾಮ ವಿದ್ಯನ್ತೇ ವಿತತಾನ್ತರಾಃ ।
ಚಿತ್ತಾಕಾಶಶ್ಚಿದಾಕಾಶೋ ಭೂತಾಕಾಶಸ್ತೃತೀಯಕಃ ॥೧೪॥

ಮನಸ್ಸೆಂಬುದೇ ನಾನಾವಿಧವಾದ ಈ ಪ್ರಪಂಚಸಂಭ್ರಮವನ್ನುಂಟುಮಾಡಿರುವುದು. ಇದು ಕ್ಷೀಣವಾಗಿಬಿಟ್ಟರೆ, ಜೀವನು ಮುಕ್ತನೆನ್ನಿಸಿಕೊಳ್ಳುವನು. ಮತ್ತೆ ಜನ್ಮವನ್ನು ಹೊಂದುವುದೂ ಇಲ್ಲ ॥೧೧॥

ಹೀಗೆ ವಸಿಷ್ಠರು ಹೇಳಿದ ಮಾತನ್ನು ಕೇಳಿ, ಶ್ರೀರಾಮನಿಗೆ ಹೀಗೆ ಶಂಕೆಯುಂಟಾಯಿತು:— ಈಗ ವಸಿಷ್ಠರು ಅಪ್ಪಣೆಕೊಟ್ಟಂತೆ ಮನಸ್ಸಿನ ದೆಸೆಯಿಂದ ಜಗತ್ತು ಉತ್ಪನ್ನವಾಗಬಹುದು; ಆದರೆ, ಮನಸ್ಸು ಉದಾಸೀನನಾಗಿರುವ ಪರಮಾತ್ಮನದೆಸೆಯಿಂದ ತಾನಾಗಿ ಉತ್ಪನ್ನವಾಗುವುದೆಂಬುದು ಉಪಪನ್ನವಾಗಿ ಕಾಣುವುದಿಲ್ಲ. 'ತನ್ಮನೋಕುರುತ' ಇತ್ಯಾದಿ ಶ್ರುತಿಗಳಿಗನುಸಾರವಾಗಿ, ಆತ್ಮನು ಬುದ್ಧಿಪೂರ್ವಕವಾಗಿ ಮನಸ್ಸನ್ನು ಸೃಷ್ಟಿಮಾಡಿದನೆಂದು ನಿಶ್ಚಯವಾಗಿರುವುದು.— ಹೀಗೆಂದು ಶಂಕಿಸಿದವನಾಗಿ ಶ್ರೀರಾಮನು ವಸಿಷ್ಠರನ್ನು ಕುರಿತು ಪ್ರಶ್ನೆಮಾಡುವನು :-

ಪೂಜ್ಯರೆ! ತಾವು ಹಿಂದೆ ಅಪ್ಪಣೆಕೊಟ್ಟಂತೆ ಭೂತಜಾತಿಗಳು ಹನ್ನೆರಡು ವಿಧಗಳಾಗಿದ್ದರೂ, ಮುಖ್ಯವಾಗಿ ಸಾತ್ವಿಕ ರಾಜಸ ತಾಮಸಗಳೆಂದು ಮೂರು ವಿಧವಾದ ಭೂತಜಾತಿಗಳಿರುವುವೆಂಬುದಾಗಿ ಗೊತ್ತಾಗುವುದು. ಅವುಗಳಿಗೆ, ಸದಸದ್ರೂಪವಾದ ಈ ಮನಸ್ಸು ಮುಖ್ಯಕಾರಣವಾಗಬಹುದು ॥೧೨॥

ಆದರೆ, ಶುದ್ಧಚಿನ್ಮಯವಾಗಿರುವ ಆ ಪರಬ್ರಹ್ಮತತ್ವವು ಬುದ್ಧಿಶೂನ್ಯವಾಗಿರುವಾಗ, ಅದರ ದೆಸೆಯಿಂದ ಈ ಜಗತ್ತೆಂಬ ಚಿತ್ರವನ್ನುಂಟುಮಾಡುವ ಮನಸ್ಸು ಉದಯಿಸಿ ವಿಸ್ತರಿಸಿಕೊಂಡಿರುವುದೆಂಬುದು ಹೇಗೆ? ॥೧೩॥

ಶ್ರೀ ವಸಿಷ್ಠರು ಉತ್ತರಹೇಳುವರು:—

ಅಯ್ಯಾ! ರಾಮ! ನೀನು ಹೀಗೆ ಆಶಂಕೆಪಡುವುದು ಯುಕ್ತವೇ ಸರಿ. ಇದಕ್ಕೆ ತಕ್ಕ ಸಮಾಧಾನವನ್ನೂ ಕೇಳುವವನಾಗು. ಚಿತ್ತಾಕಾಶವೆಂದೂ ಚಿದಾಕಾಶವೆಂದೂ ಭೂತಾಕಾಶವೆಂದೂ ಮೂರುವಿಧವಾದ ಆಕಾಶಗಳಿರುವುವು. ಇವುಗಳೆಲ್ಲವೂ ಅಂತರ್ಭಾಗದಲ್ಲಿ ವಿಸ್ತಾರವಾಗಿರುವುವು ॥೧೪॥

ಏತೇ ಹಿ ಸರ್ವಸಾಮಾನ್ಯಾಃ ಸರ್ವತ್ರೈವ ವ್ಯವಸ್ಥಿತಾಃ |
ಶುದ್ಧಚಿತ್ತತ್ವಶಕ್ತ್ಯಾ ತು ಲಬ್ಧಸತ್ತಾತ್ಮತಾಂ ಗತಾಃ ||೧೫||

ಸಬಾಹ್ಯಾಭ್ಯಂತರಸ್ಥೋಯಃ ಸತ್ತಾಸತ್ತಾವಬೋಧಕಃ |
ವ್ಯಾಪೀ ಸಮಸ್ತಭೂತಾನಾಂ ಚಿದಾಕಾಶಃ ಸ ಉಚ್ಯತೇ ||೧೬||

ಸರ್ವಭೂತಹಿತಃ ಶ್ರೇಷ್ಠೋ ಯಃ ಕಾಲಕಲನಾತ್ಮಕಃ |
ಯೇನೇದಮಾತತಂ ಸರ್ವಂ ಚಿತ್ತಾಕಾಶಃ ಸ ಉಚ್ಯತೇ ||೧೭||

ದಶದಿಙ್ಮಂಡಲಾಭೋಗೈಃ ಅವ್ಯುಚ್ಛಿನ್ನವಪುರ್ಹಿ ಯಃ |
ಭೂತಾತ್ಮಾಸೌ ಯ ಆಕಾಶಃ ಪವನಾಬ್ದಾದಿಸಂಶ್ರಯಃ ||೧೮||

ಆಕಾಶಚಿತ್ತಾಕಾಶೌ ದ್ವೌ ಚಿದಾಕಾಶಬಲೋದ್ಭವೌ |
ಚಿತ್ ಕಾರಣಂ ಹಿ ಸರ್ವಸ್ಯ ಕಾರ್ಯೌಘಸ್ಯ ದಿನಂ ಯಥಾ ||೧೯||

ಇವುಗಳು ಸರ್ವತ್ರಸಮವಾಗಿ ಸರ್ವತ್ರ ನೆಲೆಸಿರುವುವು. ಹೀಗೆ ಹೇಳಿದಮಾತ್ರದಿಂದಲೇ, ಪದಾರ್ಥತ್ರಯವಾದಂತಾಗುವುದೆಂದೂ ಅದ್ವೈತಹಾನಿಯುಂಟಾಗುವುದೆಂದೂ ಶಂಕಿಸಬಾರದು. ಇವುಗಳೆಲ್ಲವೂ, ಶುದ್ಧಚೈತನ್ಯಶಕ್ತಿಯಿಂದ ಸತ್ತೆಯನ್ನು ಪಡೆದಿರುವುವಲ್ಲದೆ, ಇವುಗಳಿಗೆ ಸ್ವತಸ್ಸಿದ್ಧವಾದ ಸತ್ತೆಯಿಲ್ಲವೇ ಇಲ್ಲ ||೧೫||

'ಹೀಗೆ ಮೂರೂ ಒಂದೇವಿಧವಾದ ಸತ್ತೆಯುಳ್ಳುವಾದಮೇಲೆ, ಚಿದಾಕಾಶದಲ್ಲಿರುವ ಅತಿಶಯವೇನು?' ಎಂದರೆ,—ಈ ಚಿದಾಕಾಶವು, ಅಭ್ಯಂತರವಾದ ಬುದ್ಧ್ಯಾದಿಗಳಿಗೂ ಬಾಹ್ಯಪದಾರ್ಥಗಳಿಗೂ ಉಂಟಾಗುವ ಆಗಮಾಪಾಯಗಳಿಗೆ ಸಾಕ್ಷಿಭೂತವಾಗಿರುವುದು ; ಇದು ಸಮಸ್ತಭೂತಗಳನ್ನೂ ವ್ಯಾಪಿಸಿಕೊಂಡಿರುವುದು. ಅಂತು, ಹೀಗೆ ಮಾಯಾಶಬಳವಾಗಿರುವ ಇದಕ್ಕೆ ಚಿದಾಕಾಶವೆಂದು ಹೆಸರು ||೧೬||

ಸರ್ವಭೂತಗಳಿಗೂ ಸಮಸ್ತವಿಧ ವ್ಯವಹಾರಹೇತುವಾಗಿರುವುದರಿಂದ ಹಿತವಾಗಿಯೂ, ಸರ್ವಕಾರ್ಯಕಾರಣಗಳಿಗೂ ನಿಯಾಮಕವಾಗಿರುವುದರಿಂದ ಶ್ರೇಷ್ಠವಾಗಿಯೂ, ತನ್ನ ಕಲ್ಪನೆಯಿಂದ ಈ ಸಮಸ್ತವನ್ನೂ ವಿಸ್ತಾರಪಡಿಸಿಕೊಂಡಿರುವುದಾಗಿಯೂ ಇರುವ, ಕಾಲಕಲ್ಪನಾತ್ಮಕವಾದುದೇ ಚಿತ್ತಾಕಾಶವೆನ್ನಿಸಲ್ಪಡುವುದು ||೧೭||

ದಶದಿಙ್ಮಂಡಲಗಳಿಂದಲೂ ಅಪರಿಚ್ಛಿನ್ನವಾದುದಾಗಿ–ವಾಯು ಮೇಘ ಮುಂತಾದುವುಗಳಿಗೆಲ್ಲ ಆಶ್ರಯಭೂತವಾಗಿ—ಸಕಲ ಭೂತಸ್ವರೂಪವಾಗಿರುವುದೇ, ಭೂತಾಕಾಶವೆನ್ನಿಸಿಕೊಳ್ಳುವುದು ||೧೮||

ಹೀಗಿರುವ ಈ ಆಕಾಶತ್ರಯಮಧ್ಯದಲ್ಲಿ, ಭೂತಾಕಾಶ ಚಿತ್ತಾಕಾಶಗಳೆರಡೂ ಚಿದಾಕಾಶದ ಬಲದಿಂದ ಉದ್ಭವಿಸತಕ್ಕುವುಗಳೆಂದು ತಿಳಿಯಬೇಕು. ಸಮಸ್ತಕಾರ್ಯ ಸಮುದಾಯವೂ ನಡೆಯುವುದಕ್ಕೆ ಹಗಲು ಕಾರಣವಾಗಿರುವಂತೆ, ಸಮಸ್ತ ವಸ್ತುಜಾತಕ್ಕೂ ಚಿತ್ತೇ ಕಾರಣವಾಗಿರುವುದು ||೧೯||

ಜಡೋಽಸ್ಮಿ ನ ಜಡೋಽಸ್ಮೀತಿ ನಿಶ್ಚಯೋ ಮಲಿನಶ್ಚಿತಃ ।
ಯಸ್ತದೇವ ಮನೋ ವಿದ್ಧಿ ತೇನಾಕಾಶಾದಿ ಭಾವ್ಯತೇ ॥೧೦॥
ಅಪ್ರಬುದ್ಧಾತ್ಮವಿಷಯಂ ಆಕಾಶತ್ರಯಕಲ್ಪನಮ್ ।
ಕಲ್ಪ್ಯತೇ ಉಪದೇಶಾರ್ಥಂ ಪ್ರಬುದ್ಧವಿಷಯಂ ನ ತು ॥೧೧॥
ಏಕಮೇವ ಪರಂ ಬ್ರಹ್ಮ ಸರ್ವಂ ಸರ್ವಾರ್ಣವಪೂರಕಮ್ ।
ಪ್ರಬುದ್ಧವಿಷಯಂ ನಿತ್ಯಂ ಕಲಾಕಲನವರ್ಜಿತಮ್ ॥೧೨॥
ದ್ವೈತಾದ್ವೈತಸಮುದ್ಭೇದೈಃ ವಾಕ್ಯಸನ್ದರ್ಭಗರ್ಭಿತೈಃ ।
ಉಪದೇಶ್ಯತ ಏವಾಜ್ಞೋ ನ ಪ್ರಬುದ್ಧಃ ಕಥಞ್ಚನ ॥೧೩॥
ಯಾವದ್ರಾಮಾಪ್ರಬುದ್ಧಸ್ತ್ವಂ ಆಕಾಶತ್ರಯಕಲ್ಪನಾಮ್ ।
ತಾವದೇವಾವಬೋಧಾರ್ಥಂ ಮಯಾ ತ್ವಮುಪದಿಶ್ಯಸೇ ॥೧೪॥
ಆಕಾಶಚಿತ್ತಾಕಾಶಾದ್ಯಾಃ ಚಿದಾಕಾಶಕಳಙ್ಕಿತಾತ್ ।
ಪ್ರಸೂತಾದಾವದಹನಾತ್ ಯಥಾ ಮರುಮರೀಚಯಃ ॥೧೫॥
ಚಿನೋತಿ ಮಲಿನಂ ರೂಪಂ ಚಿತ್ತತಾಂ ಸಮುಪಾಗತಮ್ ।
ತ್ರಿಜಗನ್ತೀನ್ದ್ರಜಾಲಾನಿ ರಚಯತ್ಯಾಕುಲಾತ್ಮಕಮ್ ॥೧೬॥

ಅಯ್ಯಾ! ರಾಮ! ತಾನು ಜಡನಾಗಿರುವೆನೆಂದೂ ಅಜಡನಾಗಿರುವೆನೆಂದೂ ಚಿತ್ತಿನ ಮಲಿನವಾದ ನಿಶ್ಚಯವಾವುದಿರುವುದೋ, ಅದನ್ನೇ ಮನಸ್ಸೆಂದು ತಿಳಿಯುವನಾಗು. ಇದರಿಂದ ಆಕಾಶಾದಿಗಳೆಲ್ಲವೂ ಕಲ್ಪಿತವಾಗುನುವು ॥೨೦॥

ಹೀಗೆ ಈ ಆಕಾಶತ್ರಯಕಲ್ಪನೆಯು, ಆತ್ಮಜ್ಞಾನವಿಲ್ಲದವರನ್ನುದ್ದೇಶಿಸಿ ಮಾಡಲ್ಪಡುವುದೆಂದು ತಿಳಿಯಬೇಕು. ಇದು, ಅಜ್ಞರ ಉಪದೇಶಸಿದ್ಧಿಗಾಗಿ ಕಲ್ಪಿಸಲ್ಪಡುವುದು. ಇಷ್ಟೇ ಹೊರತು, ಪ್ರಬುದ್ಧರನ್ನು ಕುರಿತು ಹೇಳಲ್ಪಟ್ಟುದಲ್ಲ ॥೨೧॥

ಪ್ರಬುದ್ಧರಿಗೆ ವಿಷಯವಾದುದಾವುದೆಂದರೆ,—ಆ ಪರಬ್ರಹ್ಮವಸ್ತುವೊಂದೆಯೇ; ಇದು, ಸರ್ವಸ್ವರೂಪವಾಗಿ-ಸರ್ವವ್ಯಾಪಿಯಾಗಿ-ನಿತ್ಯವಾಗಿ-ಕಲ್ಪನಾಶೂನ್ಯವಾದುದಾಗಿರುವುದು ॥೨೨॥

ಆಯಾ ವಿಷಯಾನುಗುಣವಾಗಿ ವಾಕ್ಯಸಂದರ್ಭಗಳಿಂದ ದ್ವೈತಾದ್ವೈತ ವಿಕಲ್ಪಗಳನ್ನು ಮಾಡಿಕೊಂಡು ಅಜ್ಞನಾದವನೇ ಉಪದೇಶಿಸಲ್ಪಡುವನಲ್ಲದೆ, ಪ್ರಬುದ್ಧನಾದವನು ಹೇಗೂ ಉಪದೇಶಿಸಲ್ಪಡುವುದಿಲ್ಲ ॥೨೩॥

ಅಯ್ಯಾ! ರಾಮ! ನೀನು ಎಲ್ಲಿಯವರೆಗೆ ಅಪ್ರಬುದ್ಧನಾಗಿರುವೆಯೋ, ಅಲ್ಲಿಯವರೆಗೆ ಮಾತ್ರವೇ ನಾನು ನಿನಗೆ ಈ ಆಕಾಶತ್ರಯವನ್ನು ಕಲ್ಪಿಸಿ ಉಪದೇಶಿಸುತ್ತಿರುವೆನು ॥೨೪॥

ಕಾಡುಗಿಚ್ಚಿಗೆ ಸಮಾನವಾದ ಬಿಸಿಲಿನಿಂದ ಮೃಗತೃಷ್ಣಿಕೆಯುದಯಿಸುವಂತೆ, ಭೂತಾಕಾಶ ಚಿತ್ತಾಕಾಶಮುಂತಾದುವುಗಳೆಲ್ಲವೂ ಚಿದಾಕಾಶಕಲ್ಪನೆಯಿಂದಉದಯಿಸುವುವೆಂದು ತಿಳಿಯಬೇಕು॥

ಆ ಚಿದಾಕಾಶವು, ಚಿತ್ತರೂಪವನ್ನು ಹೊಂದಿದುದಾಗಿ, ಮಲಿನವಾಗಿರುವ ಕಾರ್ಯಗಳನ್ನೇ ಮಾಡುತಿರುವುದು; ಬಹು ವ್ಯಾಕುಲವಾಗಿ ಮೂರು ಲೋಕಗಳೆಂಬ ಇಂದ್ರಜಾಲಗಳನ್ನು ರಚಿಸುವುದು. ಈರೀತಿಯಾಗಿರುವುದರಿಂದ, ಚಿತ್ತವು ಶುದ್ಧಚಿತ್ತಿನ ಕಾರ್ಯಭೂತವಾದುದಲ್ಲವೆಂದು ದೃಢವಾಗಿ ತಿಳಿಯಬೇಕು ॥೨೬॥

ಚಿತ್ತತ್ವಮಸ್ಯ ಮಲಿನಸ್ಯ ಚಿದಾತ್ಮಕಸ್ಯ
ತತ್ತ್ವಸ್ಯ ದೃಶ್ಯತಇದಂ ನನು ಬೋಧಹೀನೈಃ ।
ಶುಕ್ತ್ಯಾ ಯಥಾ ರಜತತಾ ನ ತು ಬೋಧವದ್ಭಿಃ
ಮೌರ್ಖ್ಯೇಣ ಬನ್ಧ ಇಹ ಬೋಧಬಲೇನ ಮೋಕ್ಷಃ ॥೨೭॥

ಇತಿ ಉತ್ಪತ್ತಿಪ್ರಕರಣೇ ಚಿದಾಕಾಶಮಾಹಾತ್ಮ್ಯಂ ನಾಮ
ಸಪ್ತನವತಿತಮಃ ಸರ್ಗ.

ಅಯ್ಯಾ! ರಾಮ! ಈ ಚಿದ್ರೂಪವಾದ ತತ್ವವು ಮಲಿನವಾದಾಗ ಅದಕ್ಕೆ ಚಿತ್ತತ್ವವುಂಟಾಗುವುದು. ಇದೂಕೂಡ, ಶುಕ್ತಿಯನ್ನು ನೋಡಿ ರಜತವೆಂದು ತಿಳಿಯುವಂತೆ, ಅಜ್ಞರಿಂದ ತಿಳಿಯಲ್ಪಡುವುದೇಹೊರತು, ಬುದ್ಧಿವಂತರಿಂದ ಈರೀತಿಯಾಗಿ ತಿಳಿಯಲ್ಪಡುವುದಿಲ್ಲ. ಅಂತು, ಅಜ್ಞಾನದಿಂದ ಬಂಧವುಂಟಾಗಿರುವಂತೆ ಕಾಣುವುದೆಂದೂ, ಜ್ಞಾನಬಲದಿಂದ ಮೋಕ್ಷವುಂಟಾಗುವುದೆಂದೂ ಸ್ಪಷ್ಟವಾಯ್ತು ॥೨೭॥

ಇದು ಉತ್ಪತ್ತಿಪ್ರಕರಣದಲ್ಲಿ ಚಿದಾಕಾಶಮಾಹಾತ್ಮ್ಯವೆಂಬ
ತೊಂಬತ್ತೇಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟನವತಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಯತಃಕುತಶ್ಚಿದುತ್ಪನ್ನಂ ಚಿತ್ತಂ ಯತ್ಕಿಞ್ಚಿದೇವ ಹಿ ।
ನಿತ್ಯಮಾತ್ಮವಿಮೋಕ್ಷಾಯ ಯೋಜಯೇದ್ಯತ್ನತೋಽನಘ ॥೧॥
ಸಂಯೋಜಿತಂ ಪರೇ ಚಿತ್ತಂ ಶುದ್ಧಂ ನಿರ್ವಾಸನಂ ಭವೇತ್ ।
ತತಸ್ತು ಕಲ್ಪನಾಶೂನ್ಯಂ ಆತ್ಮತಾಂ ಯಾತಿ ರಾಘವ ॥೨॥
ಚಿತ್ತಾಯತ್ತಮಿದಂ ಸರ್ವಂ ಜಗತ್ ಸ್ಥಿರಚರಾತ್ಮಕಮ್ ।
ಚಿತ್ತಾಧೀನಾವತೋ ರಾಮ ಬನ್ಧಮೋಕ್ಷಾವಪಿ ಸ್ಫುಟಮ್ ॥೩॥

ಉತ್ಪತ್ತಿಪ್ರಕರಣದಲ್ಲಿ ತೊಂಬತ್ತೆಂಟನೆಯ ಸರ್ಗವು.

ಉಕ್ತಾರ್ಥಪ್ರತಿಬೋಧಾರ್ಥಂ ಚಿತ್ತಾಖ್ಯಾನಮಿಹೋಚ್ಯತೇ ।
ಚಿತ್ತತತ್ತ್ವವಿಮರ್ಶಾಚ್ಚ ನಾಶಶ್ಚಿತ್ತಸ್ಯ ವಿಸ್ತರಾತ್ ॥

ಹಿಂದೆ ಹೇಳಲ್ಪಟ್ಟಿರುವ ವಿಷಯವು ಚೆನ್ನಾಗಿ ಗೊತ್ತಾಗುವುದಕ್ಕೋಸ್ಕರ, ಚಿತ್ತೋಪಾಖ್ಯಾನವೂ, ಚಿತ್ತದ ತತ್ವವನ್ನು ಪರಾಮರ್ಶಿಸಿದರೆ ಚಿತ್ತನಾಶವುಂಟಾಗುವುದೆಂಬ ವಿಷಯವೂ ಕೂಡ, ವಿಸ್ತಾರವಾಗಿ ಈ ಸರ್ಗದಲ್ಲಿ ಹೇಳಲ್ಪಡುವುವು.

ಪುನಃ ಶ್ರೀ ವಸಿಷ್ಠರು ಹೇಳಲುಪಕ್ರಮಿಸಿದರು:—

ಎಲೈ ನಿರ್ದೋಷನಾದ ರಾಮನೆ! ಒಬ್ಬ ವೈದ್ಯನು ರೋಗಿಯನ್ನು ಕುರಿತು ಮಾತನಾಡುವಾಗ, ರೋಗಿಯು ಹಿಂದೆ ಮಾಡಿದ ಅಪಥ್ಯವಿಷಯವನ್ನೆಲ್ಲ ಪ್ರಸ್ತಾವಿಸುವನಲ್ಲವೆ! ಈ ಅಪಥ್ಯಕಥನವು, ಅವನ ರೋಗದ ಮೂಲಕಾರಣವನ್ನು ಗೊತ್ತುಮಾಡಿಕೊಡುವುದಕ್ಕೇಹೊರತು, ಮತ್ತಾವುದಕ್ಕೂ ಅಲ್ಲವಷ್ಟೆ! ರೋಗದ ಕಾರಣವು ಗೊತ್ತಾದಮೇಲೆ, ಅದಕ್ಕೆ ತಕ್ಕ ಚಿಕಿತ್ಸೆಯನ್ನು ಕುರಿತು ವಿಚಾರಮಾಡಬೇಕೇಹೊರತು, ರೋಗನಿದಾನದ ಪ್ರಸ್ತಾವವಾವಶ್ಯಕವಲ್ಲವಷ್ಟೆ! ಹೀಗೆಯೇ ಈ ಚಿತ್ತದ ವಿಷಯದಲ್ಲಿಯೂ ತಿಳಿಯಬೇಕು. ಇದುವರೆಗೂ ಚಿತ್ತದ ಸ್ವರೂಪ ಗೊತ್ತಾಗುವುದಕ್ಕಾಗಿ ನಿನಗೆ ಇಷ್ಟು ವಿವರಿಸಿ ಹೇಳಿದೆನು. ಇನ್ನು ಅದರ ಸ್ವರೂಪ ಗೊತ್ತಾದಮೇಲೆ, ಅದರ ಉಪ್ಪತ್ತಿಪ್ರಕ್ರಮವನ್ನು ಕುರಿತು ವಿಚಾರಮಾಡುವುದನಾವಶ್ಯಕವಷ್ಟೆ! ಅದುಕಾರಣ, ಇನ್ನುಮುಂದೆ ಆ ಮನಸ್ಸಿನ ಚಿಕಿತ್ಸಾಕ್ರಮವನ್ನು ತಿಳಿಯುವನಾಗು. ಈ ಚಿತ್ತವು ಎಲ್ಲಿಂದಲಾದರೂ ಹುಟ್ಟಿರಲಿ; ಇದು ಯಾವುದಾದರೂ ಆಗಿರಲಿ. ಇದನ್ನು ನಿತ್ಯನಾಗಿ ಆತ್ಮನಿಗೆ ಮೋಕ್ಷವುಂಟಾಗುವುದಕ್ಕಾಗಿ ಉಪಯೋಗಿಸಬೇಕು ॥೧॥

ಈ ಚಿತ್ತವು ಪರಮಾತ್ಮನಲ್ಲಿ ಸೇರಿಸಲ್ಪಟ್ಟರೆ, ಆಗ ಇದು ಶುದ್ಧವಾದುದಾಗಿ ವಾಸನಾಶೂನ್ಯವಾಗುವುದು. ಬಳಿಕ ಇದು ನಿರ್ವಿಕಲ್ಪವಾಗಿ ತಾನೂ ಆತ್ಮಸಾರೂಪ್ಯವನ್ನು ಹೊಂದುವುದು॥

ಅಯ್ಯಾ! ರಾಮ! ಈ ಸ್ಥಾವರ ಜಂಗಮಾತ್ಮಕ ಜಗತ್ತೆಲ್ಲವೂ ಚಿತ್ತಕ್ಕೆ ಅಧೀನವಾದುದು. ಆದುಕಾರಣ, ಬಂಧಮೋಕ್ಷಗಳೂ ಚಿತ್ತಕ್ಕೆ ಅಧೀನಗಳಾದುವೆಂದು ಸ್ಪಷ್ಟವಾಗಿರುವುದು ॥೩॥

ಅತ್ರಾರ್ಥೇ ಕಥ್ಯಮಾನಂ ಮೇ ಚಿತ್ತಾಖ್ಯಾನಮನುತ್ತಮಮ್ ।
ಬ್ರಹ್ಮಣಾ ಯತ್ ಪುರಾ ಪ್ರೋಕ್ತಂ ಶೃಣು ರಾಮಾತಿಯತ್ನತಃ ॥೪॥
ಅಸ್ತಿ ರಾಮಾಟವೀ ಸ್ಫಾರಾ ಶೂನ್ಯಾ ಶಾಂತಾತಿಭೀಷಣಾ ।
ಯೋಜನಾನಾಂ ಶತಂ ಯಸ್ಯಾಂ ಲಕ್ಷ್ಯತೇ ಕಣಮಾತ್ರಕಮ್ ॥೫॥
ತಸ್ಯಾಮೇಕೋ ಹಿ ಪುರುಷಃ ಸಹಸ್ರಕರಲೋಚನಃ ।
ಪರ್ಯಾಕುಲಮತಿರ್ಭೀಮಃ ಸಂಸ್ಥಿತೋ ವಿತತಾಕೃತಿಃ ॥೬॥
ಸ ಸಹಸ್ರೇಣ ಬಾಹೂನಾಂ ಆದಾಯ ಪರಿಘಾನ್ ಬಹೂನ್ ।
ಪ್ರಹರತ್ಯಾತ್ಮನಃ ಪೃಷ್ಠೇ ಸ್ವಾತ್ಮನೈವ ಪಲಾಯತೇ ॥೭॥
ದೃಢಪ್ರಹಾರೈಃ ಪ್ರಹರನ್ ಸ್ವಯಮೇವಾತ್ಮನಾತ್ಮನಿ ।
ಪ್ರವಿದ್ರವತಿ ಭೀತಾತ್ಮಾ ಸ ಯೋಜನಶತಾನ್ಯಪಿ ॥೮॥
ಕ್ರಂದನ್ ಪಲಾಯಮಾನೋಽಸೌ ಗತ್ವಾ ದೂರಮಿತಸ್ತತಃ ।
ಶ್ರಮವಾನ್ ವಿವಶಾಕಾರೋ ವಿಶೀರ್ಣಚರಣಾಙ್ಗಕಃ ॥೯॥
ಪತಿತೋಽವಶವಿವಾಶು ಮಹತ್ಯನ್ಧೇಽನ್ಧಕೂಪಕೇ ।
ಕೃಷ್ಣರಾತ್ರಿತಮೋಭೀಮೇ ನಭೋಗವಿಸ್ಫಾರಕೋಟರೇ ॥೧೦॥

ವತ್ಸ! ರಾಮ! ಈ ವಿಷಯದಲ್ಲಿ ಹಿಂದೆ ಬ್ರಹ್ಮನು ನನಗೆ ಹೇಳಿದ ಅತ್ಯುತ್ತಮವಾದ ಚಿತ್ತೋಪಾಖ್ಯಾನವನ್ನು ನಾನು ನಿನಗೆ ಹೇಳುವೆನು. ನೀನು ಅದನ್ನು ಪ್ರಯತ್ನಪೂರ್ವಕವಾಗಿ ಕೇಳುವವನಾಗು ॥೪॥

ಅಯ್ಯಾ! ರಾಮ! ಪ್ರಕಾಶಮಾನವಾದೊಂದು ಅರಣ್ಯವಿರುವುದು. ಇದು ಸರ್ವದಿಕ್ಕುಗಳಲ್ಲಿಯೂ ಶೂನ್ಯವಾಗಿಯೂ ಅತಿ ಭಯಂಕರವಾಗಿಯೂ ಇರುವುದು. ನೂರಾರು ಯೋಜನವೂಕೂಡ ಇದರಲ್ಲಿ ಒಂದು ಕಣವಾಗಿ ಕಾಣಿಸುವುದು ॥೫॥

ಈ ಅರಣ್ಯದೊಳಗೆ, ಸಾವಿರ ಕೈಗಳೂ ಕಣ್ಣುಗಳೂ ಉಳ್ಳವನಾಗಿ ಅತಿ ವಿಶಾಲದೇಹನಾಗಿರುವ ಒಬ್ಬ ಪುರುಷನು, ಅತಿ ಭಯಂಕರನಾಗಿ ವ್ಯಾಕುಲಬುದ್ಧಿಯಾಗಿರುವನು ॥೬॥

ಅವನು, ತನ್ನ ಸಾವಿರ ಬಾಹುಗಳಿಂದ ಅನೇಕ ಪರಿಘಾಯುಧಗಳನ್ನು ಹಿಡಿದುಕೊಂಡು, ತನ್ನ ಬೆನ್ನುಮೇಲೆ ತಾನೇ ಹೊಡೆದುಕೊಳ್ಳುತ, ತನ್ನಷ್ಟಕ್ಕೆತಾನೇ ಓಡುತಿರುವನು ॥೭॥

ಹೀಗೆ ಅವನು ತನ್ನನ್ನು ತಾನೇ ಗಟ್ಟಿಯಾದ ಏಟುಗಳಿಂದ ಹೊಡೆದುಕೊಳ್ಳುತ, ತಾನೇ ಹೆದರಿಕೊಳ್ಳುತ, ನೂರಾರು ಗಾವುದವಾದರೂ ಓಡಿಹೋಗುವನು ॥೮॥

ಹೀಗೆ ಅರಚಿಕೊಂಡು ಅತ್ತಿತ್ತ ಓಡುತಿರುವ ಆ ಪುರುಷನು, ಬಹುದೂರ ಹೋದವನಾಗಿ, ಬಲು ಆಯಾಸಪಟ್ಟು, ದೇಹವೆಲ್ಲ ಪರಾಧೀನವಾದವನಾಗಿ, ಕೈಕಾಲುಗಳೆಲ್ಲ ಜಜ್ಜಿಹೋದವನಾಗಿ, ಕಣ್ಣುಕಾಣದೆ, ಕೃಷ್ಣಪಕ್ಷರಾತ್ರಿಯಂತೆ ಅಂಧಕಾರಮಯವಾಗಿಯೂ ಆಕಾಶದಂತೆ ವಿಶಾಲವಾಗಿಯೂ ಆಳವಾಗಿಯೂ ಇರುವ ದೊಡ್ಡದೊಂದು ಹಾಳುಬಾವಿಯೊಳಗೆ ತನ್ನ ಯತ್ನವಿಲ್ಲದೆ ಬಿದ್ದುಬಿಟ್ಟನು ॥೯-೧೦॥

ತತಃ ಕಾಲೇನ ಬಹುನಾ ಸೋಂಧಕೂಪಾತ್ ಸಮುತ್ಥಿತಃ ।
ಪುನಃ ಪ್ರಹಾರ್ಯೈಃ ಪ್ರಹರನ್ ವಿದ್ರವತ್ಯಾತ್ಮನಾತ್ಮನಃ ॥೧೧॥
ಪುನರ್ದೂರತರಂ ಗತ್ವಾ ಕರಞ್ಜವನಗುಲ್ಮಕಮ್ ।
ಪ್ರವಿಷ್ಟಃ ಕಣ್ಟಕವ್ಯಾಪ್ತಂ ಶಲಭಃ ಪಾವಕಂ ಯಥಾ ॥೧೨॥
ತಸ್ಮಾತ್ ಕರಞ್ಜಗಹನಾತ್ ವಿನಿಸ್ಸೃತ್ಯ ಕ್ಷಣಾದಿವ ।
ಪುನಃ ಪ್ರಹಾರ್ಯೈಃ ಪ್ರಹರನ್ ವಿದ್ರವತ್ಯಾತ್ಮನಾತ್ಮನಃ ॥೧೩॥
ಪುನರ್ದೂರತರಂ ಗತ್ವಾ ಶಶಾಙ್ಕಕರಶೀತಲಮ್ ॥೧೪॥
ಕದಳೀಷಣ್ಡಕಾತ್ ತಸ್ಮಾತ್ ವಿನಿಸ್ಸೃತ್ಯ ಕ್ಷಣಾತ್ ಪುನಃ ।
ಸ್ವಯಂ ಪ್ರಹಾರ್ಯೈಃ ಪ್ರಹರನ್ ವಿದ್ರವತ್ಯಾತ್ಮನಾತ್ಮನಿ ॥೧೫॥
ಪುನರ್ದೂರತರಂ ಗತ್ವಾ ತಮೇವಾನ್ಧೋಂಧಕೂಪಕಮ್ ।
ಸ ಸಮ್ಪ್ರವಿಷ್ಟಸ್ತ್ವರಯಾ ವಿಶೀರ್ಣಾವಯವಾಕೃತಿಃ ॥೧೬॥
ಅನ್ಧಕೂಪಾತ್ ಸಮುತ್ಥಾಯ ಪ್ರವಿಷ್ಟಃ ಕದಳೀವನಮ್ ।
ಕದಳೀಕಾನನಾಚ್ಛ್ವಭ್ರಂ ಕರಞ್ಜವನಗುಲ್ಮಕಮ್ ॥೧೭॥
ಕರಞ್ಜಕಾನನಾತ್ ಕೂಪಂ ಕೂಪಾದ್ರಮ್ಭಾವನಾನ್ತರಮ್ ।
ಪ್ರವಿಶನ್ ಪ್ರಹರಂಶ್ಚೈವ ಸ್ವಯಮಾತ್ಮನಿ ಸಂಸ್ಥಿತಃ ॥೧೮॥

ಬಳಿಕ ಬಹುಕಾಲಾನಂತರ ಅವನು ಆ ಹಾಳುಬಾವಿಯ ದೆಸೆಯಿಂದ ಹೊರಕ್ಕೆದ್ದವನಾಗಿ, ಮತ್ತೆ ತನ್ನನ್ನು ತಾನೇ ಪರಿಘಗಳಿಂದ ಹೊಡೆದುಕೊಳ್ಳುತ ಓಡಿಹೋಗುವನು ॥೧೧॥

ಮತ್ತೆ ಬಹುದೂರ ಹೋದವನಾಗಿ, ಪತಂಗದ ಹುಳುವು ಅಗ್ನಿಯನ್ನು ಪ್ರವೇಶಿಸುವಂತೆ, ಮುಳ್ಳುಗಳಿಂದ ವ್ಯಾಪ್ತವಾಗಿರುವ ಮುಳ್ಳುಬಳ್ಳಿಯ ಪೊದೆಯೊಳಗೆ ನುಗ್ಗಿಬಿಟ್ಟನು ॥೧೨॥

ಆ ಪೊದೆಯ ದೆಸೆಯಿಂದ ಒಂದು ಕ್ಷಣದೊಳಗಾಗಿ ಹೊರಕ್ಕೆ ಬಂದು, ಮತ್ತೆ ತನ್ನನ್ನು ತಾನೇ ಪರಿಘಗಳಿಂದ ಹೊಡೆದುಕೊಳ್ಳುತ, ಓಡಿಹೋಗುವನು ॥೧೩॥

ಪುನಃ ಅತಿದೂರ ಹೋಗಿ, ಬೆಳದಿಂಗಳಿನಂತೆ ತಣ್ಣಗಿರುವ ಅತಿರಮ್ಯವಾದ ಬಾಳೆಯತೋಟವನ್ನು, ಸಂತೋಷಪಟ್ಟವನಂತೆ ಪ್ರವೇಶಿಸುವನು ॥೧೪॥

ಆ ಬಾಳೆಯ ತೋಟದ ದೆಸೆಯಿಂದ ಒಂದುಕ್ಷಣದೊಳಗಾಗಿ ಹೊರಕ್ಕೆ ಬಂದು, ಪುನಃ ತನ್ನನ್ನು ತಾನೇ ಹೊಡೆದುಕೊಳ್ಳುತ ಓಡುವನು ॥೧೫॥

ಪುನಃ ಅತಿದೂರ ಹೋಗಿ, ಆ ಪುರುಷನು, ಕಣ್ಣುಕಾಣದೆ, ತಾನು ಪೂರ್ವದಲ್ಲಿ ಬಿದ್ದಿದ್ದ ಹಾಳುಭಾವಿಯೊಳಗೇ ತಟ್ಟನೆ ಬಿದ್ದವನಾಗಿ, ಮೈಯೆಲ್ಲ ಜಜ್ಜಿಹೋದವನಾದನು ॥೧೬॥

ಅವನು ಹೀಗೆಯೇ ಮತ್ತೆಮತ್ತೆ ಹಾಳುಬಾವಿಯಿಂದೆದ್ದು ಬಾಳೆಯತೋಟವನ್ನು ಪ್ರವೇಶಿಸುತಲೂ, ಬಾಳೆಯತೋಟದಿಂದ ಹಳ್ಳಕ್ಕೆ ಬೀಳುತಲೂ, ಅಲ್ಲಿಂದೆದ್ದು ಮುಳ್ಳಿನಪೊದೆಗೆ ನುಗ್ಗುತಲೂ, ಮತ್ತೆ ಮುಳ್ಳಿನ ಪೊದೆಯಿಂದ ಹಾಳುಬಾವಿಗೆ ಬೀಳುತಲೂ, ಹಾಳುಬಾವಿಯಿಂದೆದ್ದು ಮತ್ತೆ ಬಾಳೆಯತೋಟದೊಳಗೆ ನುಗ್ಗುತಲೂ, ಪದೇಪದೇ ತನ್ನನ್ನು ತಾನೇ ಹೊಡೆದುಕೊಳ್ಳುತಲೂ ಇದ್ದನು ॥೧೭—೧೮॥

ಏವಂರೂಪನಿಜಾಚಾರಂ ಸೋಽನಲೋಕ್ಯ ಚಿರಂ ಮಯಾ ।
ಅನಷ್ಟಭ್ಯ ಬಲಾದೇವ ಮುಹೂರ್ತಂ ರೋಧಿತಃ ಪಥಿ ‖೧೯‖
ಪೃಷ್ಟಃ ಸ ಕಸ್ತ್ವಂ ಕಿಮಿದಂ ಕೇನಾರ್ಥೇನ ಕರೋಷಿ ವಾ ।
ಕಿಂ ನಾಮಾಭಿಮತಂ ತೇತ್ರ ಕಿಂ ಮುಧಾ ಪರಿಮುಹ್ಯಸಿ ‖೨೦‖
ಇತಿ ಪೃಷ್ಟೇನ ಕಥಿತಂ ತೇನ ಮೇ ರಘುನನ್ದನ ।
ನಾಹಂ ಕಶ್ಚಿನ್ನಚೈವೇದಂ ಮುನೇ ಕಿಞ್ಚಿತ್ ಕರೋಮ್ಯಹಮ್ ‖೨೧‖
ತ್ವಯಾಹಮವಭಗ್ನೋಽಸ್ಮಿ ತ್ವಂ ಮೇ ಶತ್ರುರಹೋ ಬತ ।
ತ್ವಯಾ ದೃಷ್ಟೋಽಸ್ಮಿ ನಷ್ಟೋಽಸ್ಮಿ ದುಃಖಾಯ ಚ ಸುಖಾಯ ಚ ‖೨೨‖
ಇತ್ಯುಕ್ತ್ವಾ ವಿಕಲಾನ್ಯಙ್ಗಾನ್ಯಾಲೋಕ್ಯ ಸ್ವಾನ್ಯತುಷ್ಟಿಮಾನ್ ।
ರುರೋದಾತಿರವಂ ದೀನೋ ಮೇಘೋ ವರ್ಷನ್ನಿವಾಟವೀಮ್ ‖೨೩‖
ಕ್ಷಣಮಾತ್ರೇಣ ತತ್ರಾಸೌ ಉಪಸಂಹೃತ್ಯ ರೋದನಮ್ ।
ಸ್ವಾನ್ಯಙ್ಗಾನಿ ಸಮಾಲೋಕ್ಯ ಜಹಾಸ ಚ ನನಾದ ಚ ‖೨೪‖
ಅಥಾಟ್ಟಹಾಸಪರ್ಯನ್ತೇ ಸ ಪುಮಾನ್ ಪುರತೋ ಮಮ ।
ಕ್ರಮೇಣ ತಾನಿ ತತ್ಯಾಜ ಸ್ವಾನ್ಯಙ್ಗಾನಿ ಸಮನ್ತತಃ ‖೨೫‖

ಹೀಗೆ ಮಾಡುತಿರುವ ಅವನನ್ನು ನಾನು ಬಹುಕಾಲ ನೋಡಿ, ನನ್ನ ಯೋಗಬಲದಿಂದ ಅವನನ್ನು ಹಿಡಿದುಕೊಂಡು, ಒಂದು ಮುಹೂರ್ತಕಾಲ ದಾರಿಯಲ್ಲಿ ತಡೆದು ನಿಲ್ಲಿಸಿಕೊಂಡೆನು ॥

ಆಮೇಲೆ ಅವನನ್ನು ಕುರಿತು ‘ ನೀನು ಯಾರು ? ನೀನು ಮಾಡುವ ಈ ಕೆಲಸವೇನು? ಇದನ್ನು ಏತಕ್ಕಾಗಿ ಮಾಡುವೆ? ನಿನಗೆ ಈಗ ಅಭಿಮತವಾದುದಾವುದು ? ಏತಕ್ಕಾಗಿ ಹೀಗೆ ವ್ಯರ್ಥವಾಗಿ ಮೋಹಪಡುತಿರುವೆ? ’ ಎಂದು ನಾನು ಪ್ರಶ್ನೆಮಾಡಿದೆನು ॥೨೦॥

ಅಯ್ಯಾ! ರಘುನಂದನ! ಹೀಗೆ ನನ್ನಿಂದ ಕೇಳಲ್ಪಟ್ಟ ಆ ಪುರುಷನು, ನನ್ನನ್ನು ಕುರಿತು ‘ ನಾನು ಯಾರೂ ಅಲ್ಲ; ಇದು ಯಾವುದೂ ಇಲ್ಲ; ಎಲೈ ಮುನಿಯೇ! ನಾನು ಯಾವುದೊಂದು ಕೆಲಸವನ್ನೂ ಮಾಡುತಲಿಲ್ಲ. ಈಗ ನೀನೇ ನನ್ನನ್ನು ಭಂಗಪಡಿಸಿದೆ. ಅಯ್ಯೋ! ನೀನೇ ನನ್ನ ಶತ್ರುವಾದೆಯಲ್ಲ!! ನೀನು ನನ್ನನ್ನು ನೋಡಿದುದೇ ನನಗೆ ನಾಶಹೇತುವಾಯ್ತಲ್ಲ!!! ಈಗ ನಿನ್ನಿಂದಲೇ ನನಗೆ ಸುಖದುಃಖಗಳುಂಟಾದುವು.’ ಎಂದು ನನಗುತ್ತರಕೊಟ್ಟನು ॥೨೧—೨೨॥

ಹೀಗೆ ಹೇಳಿದ ಬಳಿಕ, ಅವನು ಅತಿಯಾಗಿ ಬಳಲಿ ಹೋಗಿರುವ ತನ್ನ ಅವಯವಗಳನ್ನು ನೋಡಿಕೊಂಡು, ತಾನನುಭವಿಸಿದ ಭೋಗದಲ್ಲಿ ತೃಪ್ತಿಯಿಲ್ಲದವನಾಗಿ, ಅರಣ್ಯದಲ್ಲಿ ವರ್ಷಿಸುತಿರುವ ಮೇಘದಂತೆ, ಬಲುಗಟ್ಟಿಯಾಗಿ ದೈನ್ಯದಿಂದ ಅಳಲುಪಕ್ರಮಿಸಿದನು ॥೨೩॥

ಆಗ ಅವನು ಒಂದುಕ್ಷಣಕಾಲದಲ್ಲಿ ತನ್ನ ಅಳುವನ್ನು ನಿಲ್ಲಿಸಿಕೊಂಡು, ತನ್ನ ಅವಯುವಗಳನ್ನು ಮತ್ತೆ ನೋಡಿಕೊಂಡವನಾಗಿ, ಅಟ್ಟಹಾಸಮಾಡಿ ಕೂಗಿಕೊಂಡನು ॥೨೪॥

ಬಳಿಕ ಅಟ್ಟಹಾಸವೆಲ್ಲ ಮುಗಿದಮೇಲೆ, ಆ ಪುರುಷನು, ನನ್ನ ಮುಂದುಗಡೆಯೇ, ತನ್ನ ಆ ಅವಯುವಗಳನ್ನೆಲ್ಲ ಸುತ್ತಲೂ ಒಂದೊಂದನ್ನಾಗಿ ಬಿಟ್ಟುಬಿಟ್ಟನು ॥೨೫॥

ಪ್ರಥಮಂ ಪತಿತಂ ತಸ್ಯ ಶಿರಃ ಪರಮದಾರುಣಮ್ ।
ತತಸ್ತೇ ಬಾಹವಃ ಪಶ್ಚಾತ್ ವಕ್ಷಸ್ತದನು ಚೋದರಮ್ ॥೨೬॥
ಅಥ ಕ್ಷಣೇನ ಸ ಪುಮಾನ್ ತಾನ್ಯಙ್ಗಾನಿ ಯಥಾಕ್ರಮಮ್ ।
ಸನ್ತ್ಯಜ್ಯ ನಿಯತೇಃ ಶಕ್ತ್ಯಾ ಕ್ವಾಪಿ ಗನ್ತುಮುಪಸ್ಥಿತಃ ॥೨೭॥
ದೃಷ್ಟವಾನಹಮೇಕಾನ್ತೇ ಪುನರನ್ಯಂ ತಥಾ ನರಮ್ ।
ಸೋಽಪಿ ಪ್ರಹಾರಾನ್ ಪರಿತಃ ಪ್ರಯಚ್ಛನ್ ಸ್ವಯಮಾತ್ಮನಿ ॥೨೮॥
ಬಹುಭಿಃ ಪೀವರಾಕಾರೈಃ ಸ್ವಯಮೇವ ಪಲಾಯತೇ ।
ಕೂಪೇ ಪತತಿ ಕೂಪಾತ್ ತು ಸಮುತ್ಥಾಯಾಭಿಧಾವತಿ ॥೨೯॥
ಪುನಃ ಪತತಿ ಕುಣ್ಡೇನ್ತಃ ಪುನರಾರ್ತಃ ಪಲಾಯತೇ ।
ಪುನಃ ಪ್ರವಿಶತಿ ಶ್ವಭ್ರಾನ್ ಕ್ಷಣಂ ಶಿಶಿರಕಾನನಮ್ ।
ಕಷ್ಟಂ ಪುನಃಪುನಸ್ತುಷ್ಟಃ ಪುನಃ ಪ್ರಹರತಿ ಸ್ವಯಮ್ ॥೩೦॥
ಏವಂಪ್ರಾಯನಿಜಾಚಾರಃ ಚಿರಮಾಲೋಕ್ಯ ಸಸ್ಮಯಮ್ ।
ಸ ಮಯಾ ಸಮವಷ್ಟಭ್ಯ ಪರಿಪೃಷ್ಟಸ್ತಥೈವ ಹಿ ॥೩೧॥
ತೇನೈವಾಸೌ ಕ್ರಮೇಣಾದ್ಯ ರುದಿತ್ವಾ ಸಮ್ಪ್ರಹಸ್ಯ ಚ ।
ಅಙ್ಗೈರ್ವಿಶೀರ್ಣತಾಮೇತ್ಯ ಯಯಾವಲಮಲಕ್ಷ್ಯತಾಮ್ ॥೩೨॥

ಪ್ರಥಮತಃ ಅವನ ಅತಿಘೋರವಾದ ತಲೆಯು ಬಿದ್ದುಹೋಯ್ತು; ಬಳಿಕ ಆ ತೋಳುಗಳು ಬಿದ್ದುವು; ಆಮೇಲೆ ಹೃದಯವೂ, ಅನಂತರ ಹೊಟ್ಟೆಯೂ ಬಿದ್ದುಬಿಟ್ಟುವು ॥೨೬॥

ಬಳಿಕ ಆ ಪುರುಷನು, ನಿಯತಿಶಕ್ತಿಯಿಂದ ಒಂದುಕ್ಷಣಕಾಲದೊಳಗಾಗಿ ತನ್ನ ಆ ಅವಯವಗಳನ್ನೆಲ್ಲ ಬಿಟ್ಟುಬಿಟ್ಟು, ಎಲ್ಲಿಯೋ ಹೊರಟುಹೋಗಬೇಕೆಂದು ಉದ್ಯೋಗಿಸಿದನು ॥೨೭॥

ಆಮೇಲೆ ನಾನು ಮತ್ತೊಂದು ರಹಸ್ಯವಾದ ಸ್ಥಳದಲ್ಲಿ ಮತ್ತೆ ಆರೀತಿಯಾಗಿಯೇ ಇರುವ ಮತ್ತೊಬ್ಬ ಪುರುಷನನ್ನು ಕಂಡೆನು. ಅವನೂಕೂಡ, ಮೊದಲಿನವನಂತೆಯೇ, ನಾನಾಕಡೆಯಲ್ಲಿಯೂ ಪರಿಘಸದೃಶವಾದ ಬಾಹುಗಳಿಂದ ತನ್ನನ್ನು ತಾನೇ ಹೊಡೆದುಕೊಳ್ಳುತಲೂ, ತನ್ನಷ್ಟಕ್ಕೆತಾನೇ ಓಡಿಹೋಗುತಲೂ, ಹಾಳುಬಾವಿಯಲ್ಲಿ ಬೀಳುತಲೂ, ಬಾವಿಯಿಂದೆದ್ದು ಓಡಿಹೋಗುತಲೂ, ಮತ್ತೆ ಹಳ್ಳದೊಳಗೆ ಬೀಳುತಲೂ, ಪುನಃ ದೀನನಾಗಿ ಓಡಿಹೋಗುತಲೂ, ಮತ್ತೆ ಗುಂಡಿಗೆ ಬೀಳುತಲೂ, ಆಮೇಲೆ ತಣ್ಣಗಿರುವ ಬಾಳೆಯತೋಟದೊಳಗೆ ನುಗ್ಗುತಲೂ, ಅಯ್ಯೋ ಕಷ್ಟ! ಅವನು ಇದರಿಂದಲೇ ಮತ್ತೆಮತ್ತೆ ಸಂತೋಷಪಡುತಲೂ, ಮತ್ತೆಮತ್ತೆ ತನ್ನನ್ನು ಹೊಡೆದುಕೊಳ್ಳುತಲೂ ಇದ್ದನು ॥೨೮—೩೦॥

ಈರೀತಿಯಾಗಿ ಆಚರಿಸುತಿರುವ ಅವನನ್ನು ನಾನು ಆಶ್ಚರ್ಯದೊಡನೆ ಬಹಳ ಹೊತ್ತು ನೋಡಿ, ಯೋಗಬಲದಿಂದ ನಿಲ್ಲಿಸಿಕೊಂಡು, ಮೊದಲಿನವನನ್ನು ಕೇಳಿದಂತೆಯೇ ಅವನನ್ನೂ ಕೇಳಿದೆನು ॥೩೧॥

ಅವನೂಕೂಡ ಮೊದಲಿನವನಂತೆಯೇ ಉತ್ತರಹೇಳಿ, ಅತ್ತು ಆಮೇಲೆ ನಕ್ಕು, ಅವಯವಗಳೆಲ್ಲ ಜರ್ಜರವಾದವನಾಗಿ, ಸುತರಾಂ ಅದೃಶ್ಯನಾಗಿ ಹೋಗಿಬಿಟ್ಟನು ॥೩೨॥

ವಿಚಾರ್ಯರ್ನ ನಿಯತೇಃ ಶಕ್ತಿಂ ತತೋ ಗನ್ತುಮುಪಸ್ಥಿತಃ ।
ದೃಷ್ಟವಾನಹಮೇಕಾನ್ತೇ ಪುನರನ್ಯಂ ತಥಾ ನರಮ್ ॥೩೩॥
ಪ್ರಹರಂಸ್ತದ್ವದೇವಾಸೌ ಸ್ವಯಮೇವ ಪಲಾಯತೇ ।
ಪಲಾಯಮಾನಃ ಪತಿತೋ ಮಹತ್ಯನ್ಧೇನ್ಧಕೂಪಕೇ ॥೩೪॥
ತತ್ರಾಹಂ ಸುಚಿರಂ ಕಾಲಂ ಅವಸಂ ತತ್ಪ್ರತೀಕ್ಷಕಃ ।
ಯಾವತ್ ಸ ಸುಚಿರೇಣಾಪಿ ಕೂಪಾನ್ನಾಭ್ಯುದಿತಃ ಶಠಃ ॥೩೫॥
ಅಥಾಹಮುತ್ಥಿತೋ ಗನ್ತುಂ ದೃಷ್ಟವಾನ್ ಪುರುಷಂ ಪುನಃ ।
ತಾದೃಶಂ ತಾದೃಶಾಕಾರಂ ಪ್ರಪತನ್ತಂ ತಥೈವ ಚ ॥೩೬॥
ಅವಷ್ಟಭ್ಯ ತಥೈವಾಶು ತಸ್ಯ ಪ್ರೋಕ್ತಂ ಪುನರ್ಮಯಾ ।
ತಥೈವೋತ್ಪಲಪತ್ರಾಕ್ಷ ನಾಸೌ ತದವಬುದ್ಧವಾನ್ ॥೩೭॥
ಕೇವಲಂ ಮಾಮಸೌ ಮೂಢೋ ನೈವ ಜಾನಾಸಿ ಕಿಞ್ಚನ ।
ಆಃ ಪಾಪ ದುರ್ದ್ವಿಜೇತ್ಯುಕ್ತ್ವಾ ಸ್ವವ್ಯಾಪಾರಪರೋ ಯಯೌ ॥೩೮॥
ಅಥ ತಸ್ಮಿನ್ ಮಹಾರಣ್ಯೇ ತಥಾ ವಿಹರತಾ ಮಯಾ ।
ಬಹವಸ್ತಾದೃಶಾದೃಷ್ಟಾಃ ಪುರುಷಾದೋಷಕಾರಿಣಃ ॥೩೯॥
ಮತ್ಪೃಷ್ಟಾಃ ಕೇಚಿದಾಯಾನ್ತಿ ಸ್ವಪ್ನಸಮ್ಭ್ರಮವಚ್ಛಮಮ್ ।
ಮದುಕ್ತಂ ನಾಭಿನನ್ದನ್ತಿ ಕೇಚಿಚ್ಛವತನುಂ ಯಥಾ ॥೪೦॥

ಬಳಿಕ ನಾನು ಆ ನಿಯತಿಶಕ್ತಿಯನ್ನು ವಿಚಾರಮಾಡುತ, ಅಲ್ಲಿಂದ ಹೊರಡಲುಪಕ್ರಮಿಸಿ, ಮತ್ತೊಂದುಕಡೆ ವಿಜನವಾದ ಸ್ಥಳದಲ್ಲಿ, ಪೂರ್ವದಂತೆಯೇ ಮತ್ತೊಬ್ಬಪುರುಷನನ್ನು ಕಂಡೆನು॥

ಇವನೂಕೂಡ, ಅವರಿಬ್ಬರಂತೆಯೇ, ತನ್ನನ್ನು ತಾನೇ ಹೊಡೆದುಕೊಳ್ಳುತ ಓಡಿಹೋಗಿ, ಕಣ್ಣುಕಾಣದೆ, ದೊಡ್ಡಹಾಳುಬಾವಿಯಲ್ಲಿ ಬಿದ್ದುಬಿಟ್ಟನು ॥೩೪॥

ನಾನು ಅಲ್ಲಿಯೇ ಅವನನ್ನು ನಿರೀಕ್ಷಿಸುತ ಬಹಳಕಾಲ ವಾಸಮಾಡಿದೆನು. ಆ ಶಠನು ಯಾವಾಗ ಬಹುಕಾಲವಾದರೂ ಆ ಬಾವಿಯದೆಸೆಯಿಂದ ಎದ್ದು ಬರಲಿಲ್ಲವೋ, ಆಬಳಿಕ ನಾನು ಅಲ್ಲಿಂದ ಹೊರಟವನಾಗಿ, ಮೊದಲಿನವರಂತೆಯೇ ಬೀಳುತಲೂ ಓಡುತಲೂ ಇರುವ ಮತ್ತೊಬ್ಬ ಪುರುಷನನ್ನು ಕಂಡೆನು ॥೩೫—೩೬॥

ಎಲೈ ಕಮಲಾಕ್ಷನಾದ ರಾಮನೆ! ನಾನು ಅವನನ್ನೂ ತಡೆದು ನಿಲ್ಲಿಸಿಕೊಂಡು ಪೂರ್ವದಂತೆಯೇ ಪ್ರಶ್ನೆಮಾಡಿದೆನು. ಅವನೂಕೂಡ ನನ್ನ ಮಾತಿನ ಅರ್ಥವನ್ನೇ ತಿಳಿಯಲಾರದೆ ಹೋದನು ॥೩೭॥

ಅತಿಮೂಢನಾದ ಆ ಪುರುಷನು, ನನ್ನನ್ನು ಕುರಿತು 'ಹೇಪಾಪ! ದುಷ್ಟಬ್ರಾಹ್ಮಣ! ನಿನಗೊಂದೂ ತಿಳಿಯದು' ಎಂದು ಇಷ್ಟುಮಾತ್ರ ಹೇಳಿದವನಾಗಿ, ತನ್ನ ಕೆಲಸದಲ್ಲಿ ಆಸಕ್ತನಾಗಿ ಹೊರಟುಹೋದನು ॥೩೮॥

ಬಳಿಕ, ಆ ದೊಡ್ಡ ಕಾಡಿನಲ್ಲಿ ಸಂಚರಿಸುತಿರುವ ನಾನು, ಹಾಗೆಯೇ ದುಷ್ಕಾರ್ಯಮಾಡುತಿರುವ ಅಂತಹ ಅನೇಕ ಪುರುಷರನ್ನು ನೋಡಿದೆನು ॥೩೯॥

ನಾನು ಪ್ರಶ್ನೆಮಾಡಿದಾಗ, ಕೆಲವರು ಸ್ವಪ್ನಸಂಭ್ರಮದಂತೆ ಶಾಂತರಾಗಿಬಿಡುತಿದ್ದರು; ಕೆಲವರು ಶವವನ್ನು ಕಂಡಂತೆ ನನ್ನ ಮಾತನ್ನು ನಿಂದೆಯಿಂದ ಕಾಣುತಿದ್ದರು; ಕೆಲವರು ಹಾಳುಬಾ

ವಿನಿಪತ್ಯಾನ್ಧಕೂಪೇಭ್ಯಃ ಕೇಚಿತ್ ತತೋತ್ಥಿತಾಃ ಪುನಃ ।
ಕದಳೀಷಣ್ಡಕಾತ್ ಕೇಚಿತ್ ಚಿರೇಣಾಪಿ ನ ನಿರ್ಗತಾಃ ॥೪೧॥
ಕೇಚಿದನ್ತರ್ಹಿತಾಃ ಸ್ಫಾರೇ ಕರಞ್ಜವನಗುಲ್ಮಕೇ ।
ನ ಕ್ವಚಿತ್ ಸ್ಥಿತಿಮಾಯಾನ್ತಿ ಕೇಚಿದ್ಧರ್ಮಪರಾಯಣಾಃ ॥೪೨॥
ಏವಂವಿಧಾ ಸಾ ವಿತತಾ ರಘೂದ್ವಹ ಮಹಾಟವೀ ।
ಅದ್ಯಾಪಿ ವಿದ್ಯತೇ ಯಸ್ಯಾಂ ಇತ್ಥಂ ತೇ ಪುರುಷಾಃ ಸ್ಥಿತಾಃ ॥೪೩॥
ಸಾ ಚ ದೃಷ್ಟಾ ತ್ವಯಾ ರಾಮ ತ್ವಯೇಹ ವ್ಯವಹಾರಿಣೀ ।
ಬಾಲ್ಯಾತ್ ತು ಬುದ್ಧಿತತ್ತ್ವಸ್ಯ ನ ತಾಂ ಸ್ಮರಸಿ ರಾಘವ ॥೪೪॥

ಸಾ ಭೀಷಣಾ ವಿವಿಧಕಣ್ಟಕಸಙ್ಕಟಾಙ್ಗೀ
ಘೋರಾಟವೀ ಘನತಮೋಗಹನಾಪಿ ಲೋಕೇ ।
ಆಗತ್ಯ ನಿರ್ವೃತಿಮಲಬ್ಧಪರಾವಬೋಧೈಃ
ಆಸೇವ್ಯತೇ ಕುಸುಮಗುಲ್ಮಕವಾಟಿಕೇವ ॥೪೫॥

ಇತಿ ಉತ್ಪತ್ತಿಪ್ರಕರಣೇ ಚಿತ್ತೋಪಾಖ್ಯಾನಂ ನಾಮ
ಅಷ್ಟನವತಿತಮಃ ಸರ್ಗಃ.

ವಿಗೆ ಬೀಳುತಲೂ ಅಲ್ಲಿಂದ ಏಳುತಲೂ, ಕೆಲವರು ಬಾಳೆಯತೋಟಕ್ಕೆ ಪ್ರವೇಶಿಸುತಲೂ ಬಹಳ ಕಾಲಕಳೆದಮೇಲೆ ಅಲ್ಲಿಂದ ಹೊರಕ್ಕೆ ಹೊರಡುತಲೂ, ಕೆಲವರು ದೊಡ್ಡದಾದ ಮುಳ್ಳುಬಳ್ಳಿಯ ಪೊದೆಯಲ್ಲಿ ಅಡಗಿಕೊಳ್ಳುತಲೂ ಇದ್ದರು. ಅಂತು, ಅವರೆಲ್ಲರೂ ತಮತಮಗೆ ತೋರಿದಕಾರ್ಯದಲ್ಲಿ ಉದ್ಯುಕ್ತರಾಗಿದ್ದರೇಹೊರತು, ಒಂದುಕಡೆಯಲ್ಲಿಯೂ ಸ್ಥಿರವಾಗಿ ನಿಲ್ಲಲಿಲ್ಲ ॥೪೦—೪೨॥

ಅಯ್ಯಾ! ರಘುಶ್ರೇಷ್ಠ! ಈ ವಿಧವಾದ ಆ ದೊಡ್ಡ ಕಾಡು ಈಗಲೂ ಇದ್ದೇಇರುವುದು; ಅದರಲ್ಲಿ ಆರೀತಿಯಾದ ಪುರುಷರೂ ಇದ್ದೇಇರುವರು ॥೪೩॥

ಆ ಮಹಾರಣ್ಯವು, ಈಗಲೂ ನಿನ್ನಿಂದಲೇ ನಾನಾವಿಧವಾದ ವ್ಯವಹಾರವನ್ನು ನಡೆಯಿಸುತಿರುವುದು; ಅದು ನಿನಗೂ ಗೋಚರವಾಗಿಯೇ ಇರುವುದು. ಆದರೆ, ಅಯ್ಯಾ! ರಾಘವ! ನಿನ್ನ ಬುದ್ಧಿ ಇನ್ನೂ ಪರಿಪಕ್ವವಾಗಿಲ್ಲವಾದಕಾರಣ, ಅದನ್ನು ಈಗ ನೀನು ಸ್ಮರಿಸಲಾರದವನಾಗಿರುವೆ ॥೪೪॥

ಅತಿ ಭಯಂಕರವಾದ ಆ ಮಹಾಟವಿಯು, ನಾನಾವಿಧವಾದ ಮುಳ್ಳುಗಳಿಂದ ತುಂಬಲ್ಪಟ್ಟು—ಗಾಢಾಂಧಕಾರಪರಿಪೂರ್ಣವಾಗಿ-ದುಷ್ಪ್ರವೇಶವಾಗಿದ್ದರೂ, ಪರಮಾತ್ಮಜ್ಞಾನರಹಿತರಾದವರು, ದಿವ್ಯವಾದ ಪುಷ್ಪವಾಟಿಕೆಯಂತೆ, ಅದನ್ನು ಕೇವಲ ಸಂತೋಷಪುರಸ್ಸರವಾಗಿ ಅನುಭವಿಸುತಿರುವರು ॥೪೫॥

ಇದು ಉತ್ಪತ್ತಿಪ್ರಕರಣದಲ್ಲಿ ಚಿತ್ತೋಪಾಖ್ಯಾನವೆಂಬ
ತೊಂಬತ್ತೆಂಟನೆಯ ಸರ್ಗವು.

ಉತ್ಪತ್ತಿಪ್ರಕರಣೇ ಏಕೋನಶತತಮಃ ಸರ್ಗಃ

ಶ್ರೀರಾಮ ಉವಾಚ.

ಕಾಸೌ ಮಹಾಟವೀ ಬ್ರಹ್ಮನ್ ಕದಾ ದೃಷ್ಟಾ ಕಥಂ ಮಯಾ ।
ಕೇ ಚ ತೇ ಪುರುಷಾಸ್ತತ್ರ ಕಿಂ ತತ್ ಕರ್ತುಂ ಕೃತೋದ್ಯಮಾಃ ‖೧‖

ಶ್ರೀವಸಿಷ್ಠ ಉವಾಚ.

ರಘುನಾಥ ಮಹಾಬಾಹೋ ಶೃಣು ವಕ್ಷ್ಯಾಮಿ ತೇಖಿಲಮ್ ।
ನ ಸಾ ಮಹಾಟವೀ ರಾಮ ದೂರೇ ನೈವ ಚ ತೇ ನರಾಃ ‖೨‖
ಯೇಯಂ ಸಂಸಾರಪದವೀ ಗಭೀರಾಪಾರಕೋಟರಾ ।
ತಾಂತಾಂ ಶೂನ್ಯಾಂ ವಿಕಾರಾಢ್ಯಾಂ ವಿದ್ಧಿ ರಾಮ ಮಹಾಟವೀಮ್ ‖೩‖
ವಿಚಾರಾಲೋಕಲಭ್ಯೇಯಂ ಯದ್ಯೈಕೇನೈವ ವಸ್ತುನಾ ।
ಪೂರ್ಣಾ ನಾನ್ಯೇನ ಸಂಯುಕ್ತಾ ಕೇವಲೇವ ತದೈವ ಸಾ ‖೪‖

ಉತ್ಪತ್ತಿಪ್ರಕರಣದಲ್ಲಿ ತೊಂಭತ್ತೊಂಭತ್ತನೆಯ ಸರ್ಗವು.

ಉಕ್ತಸ್ಯ ಚಿತ್ರಾಖ್ಯಾನಸ್ಯ ಕ್ರಮೇಣ ವ್ಯುತ್ಕ್ರಮೇಣ ಚ ।
ರಾಮಪ್ರಶ್ನಮುಖೇನಾತ್ರ ತಾತ್ಪರ್ಯಾರ್ಥೋನುವರ್ಣ್ಯತೇ ‖

ಹಿಂದೆ ಹೇಳಲ್ಪಟ್ಟ ಚಿತ್ರೋಪಾಖ್ಯಾನದ ತಾತ್ಪರ್ಯವು, ಶ್ರೀರಾಮನ ಪ್ರಶ್ನೆಯದ್ವಾರಾ, ಕ್ರಮವಾಗಿಯೂ ವ್ಯುತ್ಕ್ರಮವಾಗಿಯೂ ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಶ್ರೀವಸಿಷ್ಠರು ಹೇಳಿದ ಚಿತ್ರೋಪಾಖ್ಯಾನವನ್ನು ಕೇಳಿ, ಶ್ರೀರಾಮನು, ಅವರ ಮಾತಿನ ಅಭಿಪ್ರಾಯವನ್ನು ತಿಳಿಯಲಪೇಕ್ಷಿಸಿದವನಾಗಿ ಪ್ರಶ್ನೆ ಮಾಡುವನು:—

ಎಲೈ ಬ್ರಾಹ್ಮಣೋತ್ತಮರೆ! ತಾವು ಅಪ್ಪಣೆಕೊಟ್ಟ ಆ ಮಹಾಟವಿಯಾವುದು? ನಾನು ಅದನ್ನು ಯಾವಾಗ ಹೇಗೆ ನೋಡಿರುವೆನು? ಅಲ್ಲಿರುವ ಆ ಪುರುಷರು ಯಾರು? ಅವರು ತಮ್ಮ ದೇಹವನ್ನು ಪ್ರಹರಿಸಿಕೊಳ್ಳುವಿಕೆಯೇ ಮೊದಲಾದ ಆ ಕೆಲಸವನ್ನು ಏತಕ್ಕಾಗಿ ಮಾಡಲುದ್ಯೋಗಿಸುತಿದ್ದರು? ‖೧‖

ಶ್ರೀವಸಿಷ್ಠರು ಉತ್ತರಹೇಳುವರು:—

ಮಹಾಬಾಹುವಾದ ಎಲೈ ರಘುನಾಥನೆ! ಕೇಳುವವನಾಗು; ನಿನಗೆ ಸಮಸ್ತ ವಿಷಯವನ್ನೂ ಹೇಳುವೆನು. ನಾನು ಈಗ ಹೇಳಿದ ಆ ಅರಣ್ಯವೂ ಆ ಪುರುಷರೂ ಕೂಡ ದೂರದಲ್ಲಿಲ್ಲ‖೨‖

ಅಯ್ಯಾ! ರಾಮ! ಅತಿಗಂಭೀರವಾಗಿ ನಾನಾವಿಧವಾದ ಪೊಟ್ಟರೆಯುಳ್ಳದಾಗಿರುವ ಈ ಸಂಸಾರಮಾರ್ಗವಾವುದಿರುವುದೋ, ಅದನ್ನೇ—ನಾನು ಹಿಂದೆ ನಿನಗೆ ಹೇಳಿದ-ವಸ್ತುತಃ ಶೂನ್ಯವಾಗಿರುವ ಮಹಾಟವಿಯೆಂದು ತಿಳಿ‖೩‖

ಈ ಮಹಾಟವಿಯು, ಯಾವಾಗ ಒಂದೇಒಂದು ವಸ್ತುವಿನಿಂದ ಪರಿಪೂರ್ಣವಾಗಿಯೂ ಮತ್ತೊಂದು ಪದಾರ್ಥದೊಡಗೂಡದಿರುವುದಾಗಿಯೂ ಆಯ್ತೋ, ಆಗಲೇ ಇದು ಶೂನ್ಯವಾದಂತೆಯೇ ಆಯ್ತು. ಇಂತಹ ಮಹಾಟವಿಯು, ವಿಚಾರವೆಂಬ ಬೆಳಕಿದ್ದವನಿಗೆ ಲಭ್ಯವಾಗುವುದು‖

ತತ್ರ ಯೇ ತೇ ಮಹಾಕಾರಾಃ ಪುರುಷಾಃ ಪ್ರಭ್ರಮನ್ತಿ ಹಿ |
ಮನಾಂಸಿ ತಾನಿ ವಿದ್ಧಿ ತ್ವಂ ದುಃಖೇ ನಿಪತಿತಾನ್ಯಲಮ್ ||೫||
ದೃಷ್ಟ್ವಾ ಯೋಽಯಮಹಂ ತೇಷಾಂ ಸ ವಿವೇಕೋ ಮಹಾಮತೇ |
ವಿವೇಕೇನ ಮಯಾ ತಾನಿ ದೃಷ್ಟಾನ್ಯನ್ಯೇನ ನಾನಘ ||೬||
ಮಯಾ ತಾನ್ಯೇವ ಬೋಧ್ಯನ್ತೇ ವಿವೇಕೇನ ಮನಾಂಸಿ ಹಿ |
ಸತತಂ ಸುಪ್ರಕಾಶೇನ ಕಮಲಾನೀವ ಭಾನುನಾ ||೭||
ಮತ್ಪ್ರಬೋಧಂ ಸಮಾಸಾದ್ಯ ಮತ್ಪ್ರಸಾದಾನ್ಮಹಾಮತೇ |
ಮನಾಂಸಿ ಕಾನಿಚಿತ್ ತಾನಿ ಗತಾನ್ಯುಪಶಮಾತ್ ಪರಮ್ ||೮||
ಕಾನಿಚಿನ್ನಾಭಿನನ್ದನ್ತಿ ಮಾಂ ವಿವೇಕಂ ವಿಮೋಹತಃ |
ಮತ್ತಿರಸ್ಕಾರವಶತಃ ಕೂಪೇಷ್ವೇವ ಪತನ್ತ್ಯಧಃ |
ಯೇ ತೇನ್ಧಕೂಪಗಹನಾಃ ನರಕಾಸ್ತೇ ರಘೂದ್ವಹ ||೯||
ಕದಳೀಕಾನನಂ ಯಾನಿ ಸಮ್ಪ್ರವಿಷ್ಟಾನಿ ತಾನಿ ತು |
ಸ್ವರ್ಗೈಕರಸಿಕಾನಿ ತ್ವಂ ಮನಾಂಸಿ ಜ್ಞಾತುಮರ್ಹಸಿ ||೧೦||
ಪ್ರವಿಷ್ಟಾನ್ಯನ್ಧಕೂಪಾನ್ತಃ ನಿರ್ಗತಾನಿ ನ ಯಾನಿ ತು |
ಮಹಾಪಾತಕಯುಕ್ತಾನಿ ತಾನಿ ಚಿತ್ತಾನಿ ರಾಘವ ||೧೧||

ಆ ಅರಣ್ಯದಲ್ಲಿ ಮಹಾಶರೀರರಾದ ಯಾವ ಪುರುಷರು ಸುತ್ತುತಿರುವರೆಂದು ನಾನು ಹೇಳಿದೆನೋ, ಅವುಗಳು ದುಃಖದಲ್ಲಿ ಮುಳುಗಿರುವ ಮನಸ್ಸುಗಳೆಂದು ತಿಳಿ ||೫||

ಎಲೈ ಮಹಾಮತಿಯಾದ ರಾಮನೆ! ಅವರುಗಳನ್ನು ನೋಡಿದ ನಾನೆಂಬ ಪದಾರ್ಥವಾವುದಿರುವುದೋ, ಅದು ವಿವೇಕವೆಂಬುದಾಗಿ ತಿಳಿ. ಎಲೈ ನಿರ್ದೋಷನೆ! ವಿವೇಕರೂಪನಾದ ನನ್ನಿಂದ ಆ ಮನಸ್ಸುಗಳೆಂಬ ಪುರುಷರು ನೋಡಲ್ಪಟ್ಟರಲ್ಲದೆ, ಮತ್ತೊಂದರಿಂದಲ್ಲ ||೬||

ಸರ್ವದಾ ಸುಪ್ರಕಾಶನಾಗಿರುವ ಸೂರ್ಯನಿಂದ ಕಮಲಗಳು ಪ್ರಬೋಧಗೊಳ್ಳಿಸಲ್ಪಡುವಂತೆ, ವಿವೇಕರೂಪವಾದ ನನ್ನಿಂದಲೇ ಆ ಮನಸ್ಸುಗಳು ಪ್ರಬೋಧಗೊಳ್ಳಿಸಲ್ಪಟ್ಟುವು ||೭||

ಅಯ್ಯಾ! ಮಹಾಮತಿಯೆ! ಅವುಗಳಲ್ಲಿ ಕೆಲವು ಮನಸ್ಸುಗಳು, ವಿವೇಕರೂಪನಾದ ನನ್ನ ಅನುಗ್ರಹಬಲದಿಂದ ನಾನು ಯಾರೆಂಬ ತಿಳಿವಳಿಕೆ(ತತ್ವಜ್ಞಾನ)ಯನ್ನು ಪಡೆದುವುಗಳಾಗಿ, ತಮ್ಮಲ್ಲಿದ್ದ ಮನೋಭಾವವು ಶಾಂತವಾದ ಬಳಿಕ ಮೋಕ್ಷವನ್ನು ಪಡೆದುಬಿಟ್ಟುವು ||೮||

ಇನ್ನು ಕೆಲವಾದರೋ, ವಿವೇಕರೂಪನಾದ ನನ್ನ ವಿಷಯದಲ್ಲಿ ಆದರವುಳ್ಳುವಾಗಲಿಲ್ಲ. ಹೀಗೆ ನನ್ನನ್ನು (ವಿಚಾರವನ್ನು) ತಿರಸ್ಕರಿಸಿದ ಕಾರಣದಿಂದ, ಅವುಗಳು ದೊಡ್ಡ ಹಾಳುಬಾವಿಯೊಳಗೇ ಬಿದ್ದುಬಿಟ್ಟುವು. ಅಯ್ಯಾ! ರಘುಶ್ರೇಷ್ಠ! ಆ ಆಳವಾದ ಹಾಳುಬಾವಿಗಳು ಯಾವುವುಂಟೋ, ಅವುಗಳೇ ನರಕಗಳೆಂದು ತಿಳಿ ||೯||

ಯಾವ ಕೆಲವು ಮನಸ್ಸುಗಳು ಬಾಳೆಯತೋಟವನ್ನು ಪ್ರವೇಶಿಸಿದುವೋ, ಅವುಗಳನು ಕೇವಲ ಸ್ವರ್ಗಸುಖಾಸಕ್ತಗಳಾದ ಮನಸ್ಸುಗಳೆಂದು ನೀನು ತಿಳಿಯಬೇಕು ||೧೦||

ಅಯ್ಯಾ! ರಾಘವ! ಹಾಳುಬಾವಿಯೊಳಗೆ ಪ್ರವೇಶಿಸಿ ಅಲ್ಲಿಂದ ಹೊರಡದೆಯೇ ನಿಂತುಬಿಟ್ಟುವು ಯಾವುವುಂಟೋ, ಅವು ಮಹಾಪಾಪಯುಕ್ತಗಳಾದ ಮನಸ್ಸುಗಳು ||೧೧||

ಕದಲೀಕಾನನಸ್ಥಾನಿ ನಿರ್ಗತಾನಿ ನ ಯಾನಿ ತು ।
ಪುಣ್ಯಸಮ್ಭಾರಯುಕ್ತಾನಿ ತಾನಿ ಚಿತ್ತಾನಿ ರಾಘವ ॥೧೨॥
ಕರಞ್ಜವನಯಾತಾನಿ ನಿರ್ಗತಾನಿ ನ ಯಾನಿ ತು ।
ತಾನಿ ಮಾನುಷ್ಯಜಾತಾನಿ ಚಿತ್ತಾನಿ ರಘುನನ್ದನ ॥೧೩॥
ಕಾನಿಚಿತ್ ಸಮ್ಪ್ರಬುದ್ಧಾನಿ ತತ್ರ ಮುಕ್ತಾನಿ ಬನ್ಧನಾತ್ ॥೧೪॥
ಕಾನಿಚಿದ್ಬಹುರೂಪಾಣಿ ಯೋನೇರ್ಯೋನಿಂ ವಿಶನ್ತಿ ಹಿ ।
ಮನಾಂಸಿ ತಾನಿ ತಿಷ್ಠನ್ತಿ ನಿಪತನ್ತ್ಯುತ್ಪತನ್ತಿ ಚ ॥೧೫॥
ಯತ್ ತತ್ ಕರಞ್ಜಗಹನಂ ತತ್ ಕಳತ್ರರಸಂ ವಿದುಃ ।
ದುಃಖಕಣ್ಟಕಸಮ್ಬಾಧಂ ಮಾನುಷ್ಯಂ ವಿವಿಧೈಷಣಮ್ ॥೧೬॥
ಕರಞ್ಜಗಹನಂ ಯಾನಿ ಪ್ರವಿಷ್ಟಾನಿ ಮನಾಂಸಿ ತು ।
ಮಾನುಷ್ಯೇ ತಾನಿ ಜಾತಾನಿ ತತ್ರೈವ ರಸಿಕಾನಿ ಚ ॥೧೭॥
ಕದಲೀಕಾನನಂ ಯತ್ ತತ್ ಶಶಾಙ್ಕಕರಶೀತಲಮ್ ।
ತನ್ಮನೋಹ್ಲಾದನಕರಂ ಸ್ವರ್ಗಂ ವಿದ್ಧಿ ರಘೂದ್ವಹ ॥೧೮॥
ಕಾನಿಚಿತ್ ಪುಣ್ಯಭೂತೇನ ತಪಸಾ ಧಾರಣಾತ್ಮನಾ ।

ವತ್ಸ! ರಾಮ! ಯಾವ ಕೆಲವು, ಬಾಳೆಯತೋಪಿನೊಳಗೆ ಹೊಕ್ಕು ಅಲ್ಲಿಂದ ಆಚೆಗೆ ಹೊರಡಲೇ ಇಲ್ಲವೋ, ಅವುಗಳು ಪುಣ್ಯಸಂಭಾರಯುಕ್ತಗಳಾದ ಚಿತ್ತಗಳು ॥೧೨॥

ಅಯ್ಯಾ! ರಘುನಂದನ! ಯಾವ ಕೆಲವು, ಮುಳ್ಳಿನ ಪೊದೆಯನ್ನು ಹೊಕ್ಕು ಅಲ್ಲಿಂದೀಚೆಗೆ ಹೊರಡದೆ ನಿಂತುಬಿಟ್ಟುವೋ, ಅವು ಮನುಷ್ಯಭಾವದಲ್ಲಿ ಪರಿಣತಗಳಾದ ಚಿತ್ತಗಳು ॥೧೩॥

ಅವುಗಳಲ್ಲಿ ಕೆಲವು, ಜ್ಞಾನಯುಕ್ತಗಳಾಗಿ, ಮನುಷ್ಯಭಾವದಲ್ಲಿ ವೈರಾಗ್ಯಹುಟ್ಟಿ, ಸಂಸಾರಬಂಧನದಿಂದ ಮುಕ್ತಗಳಾದುವು. ಮತ್ತೆ ಕೆಲವು, ಅನೇಕ ರೂಪಗಳನ್ನು ಪಡೆದು, ಒಂದು ಜನ್ಮದಿಂದ ಮತ್ತೊಂದು ಜನ್ಮವನ್ನು ಪಡೆಯುತಿರುವುವು. ಮತ್ತೆ ಕೆಲವು ಮನಸ್ಸುಗಳು, ಆ ಮನುಷ್ಯಜನ್ಮದಲ್ಲಿಯೇ ನಿಂತಿರುವುವು; ಕೆಲವು ನರಕಕ್ಕೆ ಬೀಳುತಲೂ, ಕೆಲವು ಸ್ವರ್ಗಕ್ಕೆ ಏರುತಲೂ ಇರುವುವು ॥೧೪—೧೫॥

ಅದರಲ್ಲಿ ಮುಳ್ಳುಪೊದೆ ಯಾವುದುಂಟೋ, ಅದು ಕುಟುಂಬ ಸ್ನೇಹವೆಂದು ಪ್ರಾಜ್ಞರು ತಿಳಿದಿರುವರು. ಹೀಗೆ ನಾನಾವಿಧ ಕಾಮನೆಗಳುಳ್ಳ ಮನುಷ್ಯಜನ್ಮವು, ದುಃಖಗಳೆಂಬ ಮುಳ್ಳುಗಳಿಂದ ಸಂಪೂರ್ಣವಾಗಿ ವ್ಯಾಪ್ತವಾಗಿರುವುದು ॥೧೬॥

ಯಾವ ಮನಸ್ಸುಗಳು ಮುಳ್ಳುಗಿಡಗಳ ತೋಪನ್ನು ಪ್ರವೇಶಿಸಿ ಅಲ್ಲಿಯೇ ನೆಲೆಸಿದುವೋ, ಅವು ಮನುಷ್ಯಭಾವದಲ್ಲಿ ಜನಿಸಿ ಅಲ್ಲಿಯೇ ಆಸಕ್ತಗಳಾದುವೆಂದು ತಿಳಿಯಬೇಕು ॥೧೭॥

ಅಯ್ಯಾ! ರಘೂದ್ವಹನೆ! ಚಂದ್ರಕಿರಣಶೀತಲವಾದ ಆ ಬಾಳೆಯತೋಟವಾವುದುಂಟೋ, ಅದನ್ನು—ಮನಸ್ಸಿಗಾಹ್ಲಾದವುಂಟುಮಾಡುವ ಸ್ವರ್ಗವೆಂದು ತಿಳಿ ॥೧೮॥

ಅದರಲ್ಲಿ ಯಾವ ಕೆಲವು ಚಿತ್ತಗಳು, ಶಾಸ್ತ್ರವಿಹಿತವಾಗಿ ಪುಣ್ಯಭೂತವಾಗಿರುವ ಧ್ಯಾನರೂ

ಧಾರಯನ್ತಿ ಶರೀರಾಣಿ ಸಂಸ್ಥಿತಾನ್ಯುದಿತಾನ್ಯಪಿ ॥೧೯॥
ಯೈರಹಂ ಪುಮ್ಭಿರಬುಧ್ಯೈಃ ಬುದ್ಧಿಚಿತ್ತತಿರಸ್ಕೃತಃ ।
ತೈರ್ಮನೋಭಿರನಾತ್ಮಜ್ಞೈಃ ಸ್ವವಿವೇಕಸ್ತಿರಸ್ಕೃತಃ ॥೨೦॥
ತ್ವಯಾ ದೃಷ್ಟೋ ವಿನಷ್ಟೋಽಸ್ಮಿ ತ್ವಂ ಮೇ ಶತ್ರುರಿತಿ ದ್ರುತಮ್ ।
ಯದುಕ್ತಂ ತದ್ಧಿ ಚಿತ್ತೇನ ಗಳತಾ ಪರಿದೇವಿತಮ್ ॥೨೧॥
ರುದಿತಂ ತನ್ಮಹಾಕ್ರನ್ದಂ ಪುಂಸಾ ಬಹ್ವಾಶು ರಾಘವ ।
ತದ್ಭೋಗಜಾಲಂ ತ್ಯಜತಾ ಮನಸಾ ರೋದನಂ ಕೃತಮ್ ॥೨೨॥
ಅರ್ಧಪ್ರಾಪ್ತವಿವೇಕಸ್ಯ ನಪ್ರಾಪ್ತಸ್ಯಾಮಲಂ ಪದಮ್ ।
ಚೇತಸಸ್ತ್ಯಜತೋ ಭೋಗಾನ್ ಪರಿತಾಪೋ ಭೃಶಂ ಭವೇತ್ ॥೨೩॥
ರುದತಾಙ್ಗಾನಿ ದೃಷ್ಟಾನಿ ಕಾರುಣ್ಯೇನಾವಬೋಧಿನಾ ।
ಕಷ್ಟಮೇತಾನಿ ಸನ್ತ್ಯಜ್ಯ ಕಿಂ ಪ್ರಯಾಮೀತಿ ಚೇತಸಾ ॥೨೪॥
ಅರ್ಧಪ್ರಾಪ್ತವಿವೇಕಸ್ಯ ನಪ್ರಾಪ್ತಸ್ಯಾಮಲಂ ಪದಮ್ ।
ಚೇತಸಸ್ತ್ಯಜತೋಙ್ಗಾನಿ ಪರಿತಾಪೋ ಹಿ ವರ್ಧತೇ ॥೨೫॥

ಪವಾದ ತಪಸ್ಸಿನಿಂದ ಶರೀರಗಳನ್ನು ಧರಿಸಿರುವುವೋ,—ಅವುಗಳು ಇತರಾಪೇಕ್ಷಯಾ ಅಭ್ಯುದಯ ಯುಕ್ತಗಳಾಗಿ ಬಹುಕಾಲ ನೆಲೆಸಿರುವುವು ॥೧೯॥

ಯಾವ ಪುರುಷರು ನನ್ನನ್ನು ಬುದ್ಧಿಯಿಂದಲೋ ಚಿತ್ತದಿಂದಲೋ ತಿರಸ್ಕರಿಸಿದರೋ, ಅವು ಆತ್ಮಜ್ಞಾನಶೂನ್ಯವಾದ ಮನಸ್ಸುಗಳು; ತಮ್ಮ ವಿವೇಕವನ್ನು ಅವು ತಿರಸ್ಕರಿಸಿದುವು ॥೨೦॥

'ನೀನು ನನ್ನನ್ನು ಕಂಡುದುದರಿಂದ ನಾನು ಹಾಳಾದೆನು; ನೀನು ನನಗೆ ಶತ್ರುವು' ಎಂದು ಹೇಳಲ್ಪಟ್ಟದಾವುದುಂಟೋ, ಅದು ಲಯಹೊಂದಿರುವ ಚಿತ್ತದಿಂದ ಮಾಡಲ್ಪಟ್ಟ ರೋದನವು ॥೨೧॥

ಅಯ್ಯಾ! ರಾಘವ! ಆಗ ಒಬ್ಬ ಪುರುಷನು ಬಲುಗಟ್ಟಿಯಾಗಿ ಬೇಗನೆ ಅತ್ತುದು ಯಾವುದುಂಟೋ, ಅದು—ಭೋಗಜಾಲವನ್ನು ಬಿಡುತಿರುವ ಮನಸ್ಸಿನಿಂದ ಮಾಡಲ್ಪಟ್ಟ ರೋದನವು॥

ಅರ್ಧವಾಗಿ ವಿವೇಕವನ್ನು ಪಡೆದು–ಪರಮಪದವನ್ನು ಇನ್ನೂ ಪಡೆಯದಿರುವ ಮನಸ್ಸಿಗೆ, ಭೋಗಗಳನ್ನು ಬಿಡುವ ಸಮಯದಲ್ಲಿ ಅತ್ಯಂತವಾಗಿ ಪರಿತಾಪವುಂಟಾಗುವುದು. ಅದುಕಾರಣವೇ ಆಗ ಮನಸ್ಸಿನಿಂದ ರೋದನಮಾಡಲ್ಪಟ್ಟಿತು ॥೨೩॥

ಹೀಗೆ ಅಳುತ ಸ್ವಲ್ಪ ವಿವೇಕವುಳ್ಳದಾದ ಚಿತ್ತವು, ಪತ್ನೀಪುತ್ರಾದಿ ಸ್ನೇಹದಿಂದ 'ಅಯ್ಯೋ! ಕಷ್ಟ! ಇವುಗಳನ್ನೆಲ್ಲ ಬಿಟ್ಟುಬಿಟ್ಟು ನಾನು ಹೇಗೆ ಹೋಗಲಿ!!' ಎಂದು ರೋದನಮಾಡುತ, ತನ್ನ ಅಂಗಗಳನ್ನು (ಸ್ನೇಹಲೋಭಾದಿಗಳನ್ನು) ನೋಡಿಕೊಂಡಿತು ॥೨೪॥

ಅರ್ಧವಾಗಿ ವಿವೇಕವನ್ನು ಪಡೆದು ಪರಮಪದವನ್ನು ಹೊಂದದಿರುವ ಚಿತ್ತಕ್ಕೆ, ತನ್ನ ಅಂಗಭೂತವಾದ ಸ್ನೇಹಲೋಭಾದಿಗಳನ್ನು ಬಿಡುವಾಗ, ಪರಿತಾಪವು ವಿಶೇಷವಾಗಿ ವೃದ್ಧಿಹೊಂದುವುದು ॥೨೫॥

ಹಸಿತಂ ತು ಯದಾಸನ್ನಿ ಪುಂಸಾ ಮದನಬೋಧತಃ ।
ಪರಿಪ್ರಾಪ್ತವಿವೇಕೇನ ತತ್ ತುಷ್ಟಂ ರಾಮ ಚೇತಸಾ ॥೧೬॥
ಪರಿಪ್ರಾಪ್ತವಿವೇಕಸ್ಯ ತ್ಯಕ್ತಸಂಸಾರಸಂಸ್ಥಿತೇಃ ।
ಚೇತಸಸ್ತ್ಯಜತೋ ರೂಪಂ ಆನನ್ದೋ ಹಿ ವಿವರ್ಧತೇ ॥೧೭॥
ಹಸತಾಙ್ಗಾನಿ ದೃಷ್ಟಾನಿ ಪುಂಸಾ ಯಾನ್ಯುಪಹಾಸತಃ ।
ತಾನಿ ದೃಷ್ಟಾನಿ ಮನಸಾ ವಿಪ್ರಲಮ್ಭಪದಾನಿ ಹ ॥೧೮॥
ಮಿಥ್ಯಾವಿಕಲ್ಪರಚಿತೈಃ ವಿಪ್ರಲಬ್ಧಮಹೋ ಚಿರಮ್ ।
ಇತ್ಯಙ್ಗಾನ್ಯುಪಹಾಸೇನ ದೃಷ್ಟಾನಿ ಸ್ವಾನಿ ಚೇತಸಾ ॥೧೯॥
ಮನಃ ಪ್ರಾಪ್ತವಿವೇಕಂ ಹಿ ವಿಶ್ರಾನ್ತಂ ವಿತತೇ ಪದೇ ।
ಪ್ರಾಕ್ತನಾದೀನತಾಧಾರಂ ಹಸತ್ ಪಶ್ಯತಿ ದೂರತಃ ॥೨೦॥
ಯದಸೌ ಸಮವಷ್ಟಭ್ಯ ಮಯಾ ಪೃಷ್ಟಃ ಪ್ರಯತ್ನತಃ ।
ತದ್ವಿವೇಕೋ ಬಲಾಚ್ಚಿತ್ತಂ ಆದತ್ತ ಇತಿ ದರ್ಶಿತಮ್ ॥೨೧॥

ಅಯ್ಯಾ! ರಾಮ! ಅಲ್ಲಿ ಒಬ್ಬ ಪುರುಷನು ನನ್ನನ್ನು ತಿಳಿದುಕೊಂಡವನಾಗಿ, ಸಂತೋಷದಿಂದ ನಕ್ಕನೆಂಬುದು ಯಾವುದುಂಟೋ, ಅದು—ಚೆನ್ನಾಗಿ ವಿವೇಕವನ್ನು ಪಡೆದ ಮನಸ್ಸಿನ ಆನಂದಾತಿಶಯವು ॥೧೬॥

ಚೆನ್ನಾಗಿ ವಿವೇಕವನ್ನು ಪಡೆದು ಸಂಸಾರಸ್ಥಿತಿಯನ್ನು ಸುತರಾಂ ಪರಿಹರಿಸಿರುವ ಚಿತ್ತಕ್ಕೆ, ತನ್ನ ಅಂಗಗಳಾದ ಲೋಭಮೋಹಾದಿಗಳನ್ನು ಬಿಡುವಾಗ ಆನಂದಾತಿಶಯವೇ ವೃದ್ಧಿಹೊಂದುವುದಲ್ಲವೆ! ॥೧೭॥

ಆಗ ನಗುತಿದ್ದ ಒಬ್ಬ ಪುರುಷನಿಂದ ಕೇವಲ ಪರಿಹಾಸಪೂರ್ವಕವಾಗಿ ತನ್ನ ಅಂಗಗಳು ನೋಡಲ್ಪಟ್ಟುವೆಂಬುದಾವುದುಂಟೋ, ಅದು ಮನಸ್ಸಿನಿಂದ ತನ್ನ ವಂಚನಾಸ್ಥಾನಗಳು ನೋಡಲ್ಪಟ್ಟುವೆಂದು ತಿಳಿಯಬೇಕು ॥೧೮॥

ಆಗ ಮನಸ್ಸು 'ಅಯ್ಯೋ! ಕೇವಲ ಮಿಥ್ಯಾಭೂತವಾದ ವಿಕಲ್ಪಗಳಿಂದ ಸೃಷ್ಟವಾದ ವಿಷಯಗಳು ಅತಿದೀರ್ಘಕಾಲ ಮೋಸಗೊಳಿಸಿಬಿಟ್ಟುವಲ್ಲ!' ಎಂದು ಕೇವಲ ಪರಿಹಾಸದಿಂದ ತನ್ನ ಅಂಗಗಳನ್ನು ನೋಡಿಕೊಂಡಿತು ॥೧೯॥

ವಿವೇಕವನ್ನು ಪಡೆದು ಪರಮಪದದಲ್ಲಿ ವಿಶ್ರಾಂತಿಹೊಂದಿರುವ ಮನಸ್ಸು, ಮೊದಲು ತನ್ನ ದೈನ್ಯಕ್ಕೆ ಅವಲಂಬನವಾಗಿದ್ದ ವಿಷಯಜಾತವನ್ನು, ಕೇವಲ ಪರಿಹಾಸಪೂರ್ವಕವಾಗಿ ತಾನು ಸ್ವಲ್ಪವೂ ಸ್ಪರ್ಶಮಾಡಿಕೊಳ್ಳದೆಯೇ ನೋಡುತಿರುವುದು ॥೨೦॥

ಆ ಪುರುಷನನ್ನು ಪ್ರಯತ್ನದಿಂದ ಹಿಡಿದು ನಿಲ್ಲಿಸಿಕೊಂಡು ನಾನು ಪ್ರಶ್ನೆಮಾಡಿದೆನೆಂಬುದಾವುದುಂಟೋ, ಅದರಿಂದ—ವಿವೇಕವು ಬಲಾತ್ಕಾರಪೂರ್ವಕವಾಗಿ ಚಿತ್ತವನ್ನು ತನ್ನ ವಶಪಡಿಸಿಕೊಳ್ಳುವುದೆಂಬ ವಿಷಯವು ತೋರಿಸಲ್ಪಟ್ಟಿತು ॥೨೧॥

ಯದಙ್ಗಾನಿ ವಿಶೀರ್ಣಾನಿ ಗತಾನ್ಯನ್ತರ್ಧಿಮಗ್ರತಃ |
ತಚ್ಚಿತ್ತೇನ ವಿನಾರ್ಥಾಶಾ ಶಾಮ್ಯತೀತಿ ಪ್ರದರ್ಶಿತಮ್ ||೩೨||
ಸಹಸ್ರನೇತ್ರಹಸ್ತತ್ವಂ ಯತ್ ಪುಂಸಃ ಪರಿವರ್ಣಿತಮ್ |
ತದನನ್ತಾಕೃತಿತ್ವಂ ಹಿ ಚೇತಸಃ ಪರಿದರ್ಶಿತಮ್ ||೩೩||
ಯದಾತ್ಮನಿ ಪ್ರಹಾರೌಘೈಃ ಪುಮಾನ್ ಪ್ರಹರತಿ ಸ್ವಯಮ್ |
ತತ್ ತತ್ ಕುಕಲ್ಪನಾಘಾತೈಃ ಪ್ರಹರತ್ಯಾತ್ಮನೋ ಮನಃ ||೩೪||
ಪಲಾಯತೇ ಯತ್ ಪುರುಷಃ ಸ್ವಾತ್ಮನಃ ಪ್ರಹರನ್ ಸ್ವಯಮ್ |
ಸ್ವವಾಸನಾಪ್ರಹಾರೇಭ್ಯಃ ತನ್ಮನಃ ಪ್ರಪಲಾಯತೇ ||೩೫||
ಸ್ವಯಂ ಪ್ರಹರತಿ ಸ್ವಾನ್ತಂ ಸ್ವಯಮೇವ ಸ್ವಯೇಚ್ಛಯಾ |
ಪಲಾಯತೇ ಸ್ವಯಂ ಚೈವ ಪಶ್ಯಾಜ್ಞಾನವಿಜೃಮ್ಭಿತಮ್ ||೩೬||
ಸ್ವವಾಸನೋಪತಪ್ತಾನಿ ಸರ್ವಾಣ್ಯೇವ ಮನಾಂಸಿ ಹಿ |
ಸ್ವಯಮೇವ ಪಲಾಯನ್ತೇ ಗನ್ತುಂ ಯುಕ್ತಾನಿ ತತ್ ಪದಮ್ ||೩೭||
ಯದಿದಂ ವಿತತಂ ದುಃಖಂ ತತ್ ತನೋತಿ ಸ್ವಯಂ ಮನಃ |
ಸ್ವಯಮೇವಾತಿಖಿನ್ನಂ ತು ಪುನಸ್ತಸ್ಮಾತ್ ಪಲಾಯತೇ ||೩೮||

ಆಗ ಆ ಪುರುಷನ ಅಂಗಗಳು ಜಜ್ಜಿಹೋಗಿ ಮುಂದುಗಡೆಯೇ ಅಂತರ್ಧಾನಹೊಂದಿದು ವೆಂಬುದಾವುದುಂಟೋ, ಅದರಿಂದ—ಮನಸ್ಸಿಲ್ಲದಿದ್ದರೆ ವಿಷಯೇಚ್ಛೆಯು ತನಗೆತಾನೇ ಶಾಂತಿ ಹೊಂದುವುದೆಂಬುದು ತೋರಿಸಲ್ಪಟ್ಟಿತು ||೩೨||

ಆಗ ಪುರುಷನಿಗೆ ಸಾವಿರಾರು ಕಣ್ಣುಗಳೂ ಕೈಗಳೂ ಇದ್ದುವೆಂದು ವರ್ಣಿಸಲ್ಪಟ್ಟುದಾವುದುಂಟೋ, ಅದರಿಂದ—ಚಿತ್ತಕ್ಕಿರುವ ಅನಂತವಾದ ಆಕಾಶಗಳು ತೋರಿಸಲ್ಪಟ್ಟಂತಾಯಿತು ||

ಪುರುಷನು ಪರಿಘಗಳಿಂದ ತನ್ನನ್ನು ತಾನೇ ಹೊಡೆದುಕೊಂಡನೆಂಬುದಾವುದುಂಟೋ, ಅದು—ನಾನಾವಿಧವಾದ ಕುತ್ಸಿತಕಲ್ಪನೆಗಳಿಂದ ಮನಸ್ಸು ತನ್ನನ್ನು ಹೊಡೆದುಕೊಳ್ಳುವಬಗೆಯನ್ನು ತೋರಿಸುವುದು ||೩೪||

ಪುರುಷನು ತನ್ನನ್ನು ತಾನೇ ಹೊಡೆದುಕೊಳ್ಳುತ ಓಡಿಹೋಗುವುದಾವುದುಂಟೋ, ಅದು-ವಾಸನಾಪ್ರಹಾರಗಳಿಂದ ಮನಸ್ಸು ನಾನಾದಿಕ್ಕಿಗೆ ಓಡಿಹೋಗುವ ರೀತಿಯು ||೩೫||

ಅಯ್ಯಾ! ರಾಮ! ಪುರುಷನು, ತಾನೇ ತನ್ನನ್ನು ತನ್ನ ಇಚ್ಛೆಯಿಂದಲೇ ಹೊಡೆದು ಕೊಳ್ಳುವನು; ಬಳಿಕ ತಾನೇ ಓಡಿಯೂ ಹೋಗುವನು. ಈ ಅಜ್ಞಾನದ ವಿಜೃಂಭಣೆಯನ್ನು ನೋಡು ||೩೬||

ತಮ್ಮ ವಾಸನೆಯಿಂದ ತಪ್ತವಾದ ಸಮಸ್ತ ಮನಸ್ಸುಗಳೂ, ಯೋಗನಿರುದ್ಧಗಳಾದಾಗ, ಆ ಪರಮಪದವನ್ನು ಹೊಂದುವುದಕ್ಕೋಸ್ಕರ ತಾವೇ ಓಡಿಹೋಗುವುವು ||೩೭||

ಈ ವಿಶಾಲವಾದ ಸಂಸಾರದುಃಖವಾವುದುಂಟೋ, ಅದನ್ನು ಮನಸ್ಸು ತಾನಾಗಿಯೇ ಉಂಟುಮಾಡಿಕೊಳ್ಳುವುದು. ಬಳಿಕ ತಾನಾಗಿಯೇ ಅತಿಖೇದಪಟ್ಟು, ಅದರದೆಸೆಯಿಂದ ದೂರ ವಾಗಿ ಓಡುವುದು ||೩೮||

ಸಙ್ಕಲ್ಪವಾಸನಾಜಾಲೈಃ ಸ್ವಯಮಾಯಾತಿ ಬನ್ಧನಮ್ ।
ಮನೋ ಲಾಲಾಮಯೈರ್ಜಾಲೈಃ ಕೋಶಕಾರಕೃಮಿರ್ಯಥಾ ॥೩೯॥

ಯಥಾನರ್ಥಮವಾಪ್ನೋತಿ ತಥಾ ಕ್ರೀಡತಿ ಚಞ್ಚಲಮ್ ।
ಭಾವಿದುಃಖಮಪಶ್ಯತ್ ಸ್ವಂ ದುರ್ಲೀಲಾಭಿರಿವಾರ್ಭಕಃ ॥೪೦॥

ಅಪಶ್ಯತ್ ಕಾಷ್ಠರನ್ಧ್ರಸ್ಥವೃಷಣಾಕ್ರಮಣಂ ಯಥಾ ।
ಕೀಲೋತ್ಪಾಟೇ ಕಪಿರ್ದುಃಖಂ ಏತೀದಂ ಹಿ ತಥಾ ಮನಃ ॥೪೧॥

ಚಿರಪಾಲನಯಾ ಚೈವ ಚಿರಭಾವನಯಾ ತಥಾ ।
ಅಭ್ಯಾಸಾತ್ ತುಚ್ಛತಾಮೇತ್ಯ ನ ಭೂಯಃ ಪರಿಶೋಚತಿ ॥೪೨॥

ಮನಃಪ್ರಮಾದಾದ್ವರ್ಧನ್ತೇ ದುಃಖಾನಿ ಗಿರಿಕೂಟವತ್ ।
ತದ್ವಶಾದೇವ ನಶ್ಯನ್ತಿ ಸೂರ್ಯಸ್ಯಾಗ್ರೇ ಹಿಮಂ ಯಥಾ ॥೪೩॥

ಯಾವಜ್ಜೀವಮುನಿನ್ದ್ಯಯಾ ಚ ರಮತೇ ಶಾಸ್ತ್ರಾರ್ಥಸಞ್ಜ್ಞತಯಾ

ರೇಶಿಮೆಯ ಹುಳುವು ತನ್ನ ಜೊಲ್ಲೆಂಬ ಬಲೆಯಿಂದ ತಾನಾಗಿಯೇ ತನಗೆ ಬಂಧನವನ್ನು ಕಲ್ಪಿಸಿಕೊಳ್ಳುವಂತೆ, ಮನಸ್ಸು ತನ್ನ ಸಂಕಲ್ಪವಾಸನಾಜಾಲಗಳಿಂದ ತಾನೇ ತನಗೆ ಬಂಧನವನ್ನುಂಟುಮಾಡಿಕೊಳ್ಳುವುದು ॥೩೯॥

ಒಬ್ಬ ಬಾಲಕನು ತನಗೆ ಮುಂದೆ ಉಂಟಾಗುವ ದುಃಖವನ್ನು ಕಾಣದೆ ಆಟವಾಡುತಿರುವಂತೆ, ಈ ಚಂಚಲವಾದ ಮನಸ್ಸು, ಎಷ್ಟೆಷ್ಟು ಅನರ್ಥವನ್ನು ಹೊಂದುತದೆಯೋ—ಅಷ್ಟಷ್ಟು ಹೆಚ್ಚಾಗಿ ನರ್ತಿಸುತಿರುವುದು ॥೪೦॥

ಅರ್ಧಕೊಯಿದಿರುವ ತೊಲೆಯಮೇಲೆ ಕುಳಿತುಕೊಂಡ ಒಂದು ಕಪಿಯು, ಆ ತೊಲೆಯ ಬಿರುಕಿನಲ್ಲಿ ತನ್ನ ಅಂಡವು ಸಿಕ್ಕಿಕೊಳ್ಳುವುದನ್ನರಿಯದೆ, ಆ ತೊಲೆಗೆ ಸಿಕ್ಕಿಸಿದ್ದ ಬೆಣೆಯನ್ನು ಕಿತ್ತುಹಾಕಿ ಹೇಗೆ ದುಃಖಕ್ಕೆ ಗುರಿಯಾಗುವುದೋ, ಹಾಗೆ ಈ ಮನಸ್ಸು ತನಗುಂಟಾಗುವ ದುಃಖವನ್ನು ಕಾಣದೆ ಅನಿಷ್ಟಾಚರಣೆಯನ್ನು ಮಾಡಿ ದುಃಖಭಾಜನವಾಗುವುದು ॥೪೧॥

ಈ ಮನಸ್ಸನ್ನು ಒಂದುಸಲ ನಿರೋಧಿಸಿದ ಮಾತ್ರದಿಂದಲೇ ಇಷ್ಟಪ್ರಾಪ್ತಿಯಾಗುವುದೆಂದು ನಂಬಕೂಡದು. ಇದನ್ನು ದುಷ್ಟಸಂಗಕ್ಕೆ ಹೋಗದಂತೆ ಬಹುಕಾಲ ಕಾಪಾಡಬೇಕು ; ಚಿರಕಾಲ ಆತ್ಮಭಾವನೆ ಮಾಡಬೇಕು. ಹೀಗೆ ಇವುಗಳ ಅಭ್ಯಾಸಬಲದಿಂದ ಈ ಮನಸ್ಸು ಜ್ಞಾನಕ್ಕೆ ಅಧೀನವಾಗಿ ಮತ್ತೆ ದುಃಖಭಾಜನವಾಗದಿರುವುದು ॥೪೨॥

ಈ ಮನಸ್ಸಿನ ಪ್ರಮಾದದಿಂದಲೇ ದುಃಖಗಳು ಪರ್ವತಶಿಖರದಂತೆ ವೃದ್ಧಿಹೊಂದುವುವು. ಆ ಮನಸ್ಸನ್ನು ವಶಮಾಡಿಕೊಂಡುಬಿಟ್ಟರೆ, ಸೂರ್ಯನ ಮುಂದೆ ಹಿಮವು ನಾಶಹೊಂದುವಂತೆ, ದುಃಖಗಳೆಲ್ಲವೂ ನಾಶಹೊಂದಿಬಿಡುವುವು ॥೪೩॥

ಅಯ್ಯಾ! ರಾಮ! ಈಗ ಮುಖ್ಯಾರ್ಥವನ್ನು ಕೇಳುವವನಾಗು :—ಈ ಮನಸ್ಸು ಮುನಿಗಳಂತೆ ರಾಗಾದಿಗಳಲ್ಲಿ ಮೌನವುಳ್ಳದಾಗಿ, ಶಾಸ್ತ್ರಾರ್ಥಜ್ಞಾನಜನ್ಯವಾದ ವಾಸನೆಯೊಡನೆ

ತುಲ್ಯಂ ವಾಸನಯಾ ಮನೋ ಹಿ ಮುನಿವನ್ಮೌನೇನ ರಾಗಾದಿಷು ।
ಪಶ್ಚಾತ್ ಪಾವನಪಾವನಂ ಪದಮಜಂ ತತ್ ಪ್ರಾಪ್ಯ ತಚ್ಛೀತಲಂ
ತತ್ಸಂಸ್ಥೇನ ನ ಶೋಚ್ಯತೇ ಪುನರಲಂ ಪುಂಸಾ ಮಹಾಪತ್ಸ್ವಪಿ ‖೪೪‖

ಇತಿ ಉತ್ಪತ್ತಿಪ್ರಕರಣೇ ಚಿತ್ರೋಪಾಖ್ಯಾನಂ ನಾಮ
ಏಕೋನಶತತಮಃ ಸರ್ಗಃ.

ಯಾವಜ್ಜೀವವೂ ವಿಹರಿಸುತಿರುವುದಾದರೆ, ಬಳಿಕ ಪುರುಷನು ಅತ್ಯಂತ ಪವಿತ್ರವಾದ ಶಾಂತವಾದ ಆ ಪರಮಪದವನ್ನು ಹೊಂದಿ—ಅದರಲ್ಲಿ ಸ್ಥಿರವಾಗಿ ನೆಲೆಸಿ—ಎಷ್ಟು ದೊಡ್ಡ ಆಪತ್ತುಗಳು ಬಂದರೂ ಶೋಕಕ್ಕೆ ಗುರಿಯಾಗದಿರುವನು ‖೪೪‖

ಇದು ಉತ್ಪತ್ತಿಪ್ರಕರಣದಲ್ಲಿ ಚಿತ್ರೋಪಾಖ್ಯಾನವೆಂಬ
ತೊಂಬತ್ತೊಂಬತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಶತತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಚಿತ್ತಮೇತದುಪಾಯಾತಂ ಬ್ರಹ್ಮಣಃ ಪರಮಾತ್ ಪದಾತ್ ।
ಅತನ್ಮಯಂ ತನ್ಮಯಂ ಚ ತರಙ್ಗಃ ಸಾಗರಾದಿವ ॥೧॥
ಪ್ರಬುದ್ಧಾನಾಂ ಮನೋ ರಾಮ ಬ್ರಹ್ಮೈವೇಹ ಹಿ ನೇತರತ್ ।
ಜಲಸಾಮಾನ್ಯಬುದ್ಧೀನಾಂ ಅಬ್ಧೇರ್ನಾನ್ಯಸ್ತರಙ್ಗಕಃ ॥೨॥
ಮನೋ ರಾಮಾಪ್ರಬುದ್ಧಾನಾಂ ಸಂಸಾರಭ್ರಮಕಾರಣಮ್ ।
ಅಪಶ್ಯತೋಮ್ಬುಸಾಮಾನ್ಯಂ ಅನ್ಯತಾಮ್ಬುತರಙ್ಗಯೋಃ ॥೩॥
ಅಪ್ರಬುದ್ಧದೃಶಾಂ ಪಕ್ಷೇ ತತ್ಪ್ರಬೋಧಾಯ ಕೇವಲಮ್ ।
ವಾಚ್ಯವಾಚಕಸಮ್ಬನ್ಧಕೃತೋ ಭೇದಃ ಪ್ರಕಲ್ಪ್ಯತೇ ॥೪॥

ಉತ್ಪತ್ತಿಪ್ರಕರಣದಲ್ಲಿ ನೂರನೆಯ ಸರ್ಗವು.

ವರ್ಣ್ಯತೇತ್ರ ಮನಶ್ಶಕ್ತ್ಯಾ ಬ್ರಹ್ಮಣಃ ಸರ್ವಶಕ್ತಿತಾ ।
ಅಜ್ಞಾನಮಾತ್ರಾದದ್ವೈತೇ ಬನ್ಧಮೋಕ್ಷಾದಿಕಲ್ಪನಾ ॥

ಮನಶ್ಶಕ್ತಿಯೊಡನೆ, ಬ್ರಹ್ಮನಿಗಿರುವ ಸರ್ವಶಕ್ತತ್ವವೂ, ಅದ್ವಿತೀಯವಾದ ವಸ್ತುವಿನಲ್ಲಿ ಅಜ್ಞಾನಮಾತ್ರದಿಂದ ಬಂಧಮೋಕ್ಷಾದಿಗಳನ್ನು ಕಲ್ಪಿಸುವಿಕೆಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು :—

ವತ್ಸ ! ರಾಮ ! ನಾನು ಇದುವರೆಗೂ ಹೇಳಿದ ಈ ಚಿತ್ತವು, ಸಮುದ್ರದ ದೆಸೆಯಿಂದ ತರಂಗವುದಯಿಸುವಂತೆ, ಸರ್ವೋತ್ಕೃಷ್ಟವಾದ ಬ್ರಹ್ಮಪದದದೆಸೆಯಿಂದ ಉದಯಿಸಿರುವುದು. ಇದು, ಅಜ್ಞಾನವಿಕಾರವಾಗಿರುವುದರಿಂದ ಬ್ರಹ್ಮಮಯವಲ್ಲದೆಯೂ, ಶುದ್ಧಬ್ರಹ್ಮವಿವರ್ತವಾಗಿರುವುದರಿಂದ ಬ್ರಹ್ಮಮಯವಾಗಿಯೂ ಇರುವುದು ॥೧॥

ಅಯ್ಯಾ ! ರಾಮ ! ಪ್ರಬುದ್ಧರಾದವರಿಗೆ ಈ ಮನಸ್ಸು ಬ್ರಹ್ಮವೇ ಹೊರತು ಬೇರೆಯಲ್ಲ. ಜಲಸಾಮಾನ್ಯವೆಲ್ಲವೂ ಒಂದೇಯೆಂದು ತಿಳಿದಿರತಕ್ಕವರಿಗೆ, ತರಂಗವು ಸಮುದ್ರಕ್ಕಿಂತ ಬೇರೆಯಾದ ಪದಾರ್ಥವಲ್ಲವಷ್ಟೆ ! ॥೨॥

ವತ್ಸ ! ರಾಮ ! ಅಪ್ರಬುದ್ಧರಾದವರಿಗಾದರೋ, ಮನಸ್ಸು ಸಂಸಾರವೆಂಬ ಭ್ರಮೆಗೆ ಕಾರಣವಾಗುವುದು. ಜಲಸಾಮಾನ್ಯ ಜ್ಞಾನವಿಲ್ಲದವರಿಗೆ, ತರಂಗವೂ ಸಮುದ್ರವೂ ಬೇರೆಬೇರೆಯಾಗಿ ಕಾಣುವುವು ॥೩॥

ಅಪ್ರಬುದ್ಧರಾದವರ ಪಕ್ಷದಲ್ಲಿ, ಆ ತತ್ವಜ್ಞಾನವುಂಟಾಗುವುದಕ್ಕೋಸ್ಕರಮಾತ್ರವೇ, ಶಬ್ದಾರ್ಥಾದಿಗಳಿಂದ ಉಂಟಾಗುವ ಭೇದವು ಕಲ್ಪಿಸಲ್ಪಡುವುದು ॥೪॥

ಸರ್ವಶಕ್ತಿ ಪರಂ ಬ್ರಹ್ಮ ನಿತ್ಯಮಾಪೂರ್ಣಮವ್ಯಯಮ್ ।
ನ ತದಸ್ತಿ ನ ತಸ್ಮಿನ್ ಯತ್ ವಿದ್ಯತೇ ವಿತತಾತ್ಮನಿ ॥೫॥
ಸರ್ವಶಕ್ತಿರ್ಹಿ ಭಗವಾನ್ ಯೈವ ತಸ್ಮೈ ಹಿ ರೋಚತೇ ।
ಶಕ್ತಿಂ ತಾಮೇವ ವಿತತಾಂ ಪ್ರಕಾಶಯತಿ ಸರ್ವಗಃ ॥೬॥
ಚಿಚ್ಛಕ್ತಿರ್ಬ್ರಹ್ಮಣೋ ರಾಮ ಶರೀರೇಷ್ವಭಿದೃಶ್ಯತೇ ।
ಸ್ಪನ್ದಶಕ್ತಿಶ್ಚ ವಾತೇಷು ಜಡಶಕ್ತಿಸ್ತಥೋಪಲೇ ॥೭॥
ದ್ರವಶಕ್ತಿಸ್ತಥಾಮ್ಭಸ್ಸು ತೇಜಶ್ಶಕ್ತಿಸ್ತಥಾನಲೇ ।
ಶೂನ್ಯಶಕ್ತಿಸ್ತಥಾಕಾಶೇ ಭಾವಶಕ್ತಿರ್ಭವಸ್ಥಿತೌ ॥೮॥
ಬ್ರಹ್ಮಣಃ ಸರ್ವಶಕ್ತಿರ್ಹಿ ದೃಶ್ಯತೇ ದಶದಿಗ್ಗತಾ ।
ನಾಶಶಕ್ತಿರ್ವಿನಾಶೇಷು ಶೋಕಶಕ್ತಿಶ್ಚ ಶೋಕಿಷು ॥೯॥
ಆನನ್ದಶಕ್ತಿರ್ಮುದಿತೇ ವೀರ್ಯಶಕ್ತಿಸ್ತಥಾ ಭಟೇ ।
ಸರ್ಗೇಷು ಸರ್ಗಶಕ್ತಿಶ್ಚ ಕಲ್ಪಾನ್ತೇ ಶರ್ವಶಕ್ತಿತಾ ॥೧೦॥
ಫಲಪುಷ್ಪಲತಾಪತ್ರಶಾಖಾವಿಟಪಮೂಲವಾನ್ ।
ವೃಕ್ಷಬೀಜೇ ಯಥಾವೃಕ್ಷಃ ತಥೇದಂ ಬ್ರಹ್ಮಣಿ ಸ್ಥಿತಮ್ ॥೧೧॥

ಬ್ರಹ್ಮಪದಾರ್ಥವು ಸರ್ವಜಗತ್ತಿಗೂ ಕಾರಣವಾಗಿರುವುದೆಂಬ ವ್ಯವಹಾರವೂ ಕೂಡ ಕೇವಲ ಕಲ್ಪಿತವಾದುದೇಯೆ. ವಸ್ತುತಃ ಪರಬ್ರಹ್ಮವು ಸರ್ವಶಕ್ತಿಯುಳ್ಳುದು; ಅದು ನಿತ್ಯವಾಗಿಯೂ ಪರಿಪೂರ್ಣವಾಗಿಯೂ ಅವ್ಯಯವಾಗಿಯೂ ಇರುವುದು. ವಿಸ್ತಾರವಾದ ಆಕಾರವುಳ್ಳ ಆ ಪರಬ್ರಹ್ಮನೊಳಗೆ ಇಲ್ಲದಿರುವ ಪದಾರ್ಥವೊಂದೂ ಇಲ್ಲವೇ ಇಲ್ಲ ॥೫॥

ಆ ಭಗವಂತನು ಸಕಲವಿಧಶಕ್ತಿಗಳೂ ಉಳ್ಳವನಾಗಿರುವನು. ಹೀಗಿರುವುದರಿಂದ, ಅವನಿಗೆ ಯಾವ ಶಕ್ತಿಯು ರುಚಿಸುತ್ತದೆಯೋ—ಅದನ್ನೇ ಅವನು ಹೊರಗೆ ವಿಸ್ತಾರವಾಗಿ ಪ್ರಕಾಶಪಡಿಸುವನು ॥೬॥

ಅಯ್ಯಾ! ರಾಮ! ಆ ಪರಬ್ರಹ್ಮನ ಚಿಚ್ಛಕ್ತಿಯು ಚತುರ್ವಿಧಭೂತಗ್ರಾಮಗಳಲ್ಲಿ ಕಾಣುವುದು. ಹೀಗೆಯೇ, ವಾಯುವಿನಲ್ಲಿ ಆ ಪರಮಾತ್ಮನ ಸ್ಪಂದಶಕ್ತಿಯೂ, ಕಲ್ಲಿನಲ್ಲಿ ಜಡಶಕ್ತಿಯೂ, ನೀರಿನಲ್ಲಿ ದ್ರವಶಕ್ತಿಯೂ, ಅಗ್ನಿಯಲ್ಲಿ ತೇಜಶ್ಶಕ್ತಿಯೂ, ಆಕಾಶದಲ್ಲಿ ಶೂನ್ಯಶಕ್ತಿಯೂ, ಸಂಸಾರಸ್ಥಿತಿಯಲ್ಲಿ ಭಾವಶಕ್ತಿಯೂ (ಇದೆಯೆಂಬ ವ್ಯವಹಾರಕ್ಕೆ ಯೋಗ್ಯವಾಗಿರುವಿಕೆ) ಕಾಣುವುವು. ಹೀಗೆ ಆ ಪರಬ್ರಹ್ಮನಲ್ಲಿರುವ ಸರ್ವವಿಧವಾದ ಶಕ್ತಿಯು ದಶದಿಕ್ಕುಗಳಲ್ಲಿಯೂ ವ್ಯಾಪಿಸಿಕೊಂಡಿರುವುದು ನಮಗೆ ಗೋಚರವಾಗುತಿರುವುದು. ವಿನಾಶಕಾಲದಲ್ಲಿ ಆ ಬ್ರಹ್ಮನ ನಾಶಶಕ್ತಿಯೂ, ಶೋಕಪಡುತಿರುವವರಲ್ಲಿ ಶೋಕಶಕ್ತಿಯೂ, ಸಂತೋಷಪಡುತಿರುವವರಲ್ಲಿ ಆನಂದಶಕ್ತಿಯೂ, ಉತ್ತಮಭಟನಲ್ಲಿ ವೀರ್ಯಶಕ್ತಿಯೂ, ಸೃಷ್ಟಿಕಾಲದಲ್ಲಿ ಸೃಷ್ಟಿಶಕ್ತಿಯೂ, ಪ್ರಳಯಕಾಲದಲ್ಲಿ ಸಂಹಾರಶಕ್ತಿಯೂ ಕಾಣಿಸಿಕೊಳ್ಳುವುದು ॥೭—೧೦॥

ಫಲ ಪುಷ್ಪ ಲತೆ ಪತ್ರ ಶಾಖೆ ವಿಟಪ ಮೂಲ—ಇವುಗಳೆಲ್ಲವೂ ಉಳ್ಳುದಾಗಿರುವ ವೃಕ್ಷವು ವೃಕ್ಷದ ಬೀಜದಲ್ಲಿ ಹೇಗಿರುವುದೋ, ಹಾಗೆ ವಿವಿಧವಿಸ್ತಾರವುಳ್ಳ ಈ ಜಗತ್ತು ಬ್ರಹ್ಮನೊಳಗಿರುವುದು ॥೧೧॥

ಪ್ರತಿಭಾಸವಶಾದೇವ ಮಧ್ಯಸ್ಥಂ ಚಿತ್ತ್ವಜಾಡ್ಯಯೋಃ ।
ಜೀವೇತರಾಭಿಧಂ ಚಿತ್ತಂ ಅನ್ತರ್ಬ್ರಹ್ಮಣಿ ದೃಶ್ಯತೇ ॥೧೨॥
ನಾನಾ ತರುಲತಾಗುಲ್ಮಜಾಲಪಲ್ಲವಶಾಲಯಃ ।
ನಿರ್ವಿಕಲ್ಪಕಚಿನ್ಮಾತ್ರಂ ನಾನಾಽನಿಜ್ಞಾತಕಲ್ಪನಾ ॥೧೩॥
ಬ್ರಹ್ಮೈವೇದಮಹಂ ತತ್ತ್ವಂ ಜಗತ್ ಪಶ್ಯಾದ್ಯ ರಾಘವ ॥೧೪॥
ಸ ಆತ್ಮಾ ಸರ್ವಗೋ ರಾಮ ನಿತ್ಯೋದಿತಮಹಾವಪುಃ ।
ಯನ್ಮನಾಙ್ಮನನೀಂ ಶಕ್ತಿಂ ಧತ್ತೇ ತನ್ಮನ ಉಚ್ಯತೇ ॥೧೫॥
ಪಿಚ್ಛಭ್ರಾನ್ತಿರ್ಯಥಾ ವ್ಯೋಮ್ನಿ ಪಯಸ್ಯಾವರ್ತಧೀರ್ಯಥಾ ।
ಪ್ರತಿಭಾಸಕಲಾಮಾತ್ರಂ ಮನೋ ಜೀವಸ್ತಥಾತ್ಮನಿ ॥೧೬॥
ಯದೇತನ್ಮನಸೋ ರೂಪಂ ಉದಿತಂ ಮನನಾತ್ಮಕಮ್ ।
ಬ್ರಾಹ್ಮೀ ಶಕ್ತಿರಸೌ ತಸ್ಮಾತ್ ಬ್ರಹ್ಮೈವ ತದರಿನ್ದಮ ॥೧೭॥
ಇದಂತದಹಮಿತ್ಯೇವ ವಿಭಾಗಃ ಪ್ರತಿಭಾಸಜಃ ।
ಮನಸೋ ಬ್ರಹ್ಮಣೋಽನ್ಯಚ್ಚ ಮೋಹೇ ಪರಮಕಾರಣಮ್ ॥೧೮॥

ಚಿತ್ತ್ವಕ್ಕೂ ಜಡತ್ವಕ್ಕೂ ಮಧ್ಯದಲ್ಲಿರುವುದಾಗಿ ಜೀವನೆಂಬ ನಾಮಾಂತರವುಳ್ಳ ಈ ಚಿತ್ತವು, ಕೇವಲ ಪ್ರತಿಭಾಸವಶದಿಂದಲೇ, ಬ್ರಹ್ಮನಲ್ಲಿರುವಂತೆ ಕಾಣುವುದು ॥೧೨॥

ವೃಕ್ಷ ಲತೆ ಗುಲ್ಮ (ಪೊದರು) ಪಲ್ಲವ ಶಾಲಿ—ಇತ್ಯಾದಿರೂಪವಾದ ಈ ನಾನಾವಿಧ ದೃಶ್ಯ ಪ್ರಪಂಚವು, ತತ್ವ ತಿಳಿಯದೆ ನಾನಾವಿಧವಾಗಿ ಕಲ್ಪನೆಗಳು ಮಾಡಲ್ಪಡುವಕಾರಣ, ನಿರ್ವಿಕಲ್ಪಕ ಚಿನ್ಮಾತ್ರರೂಪವಾದುದೇಯೆಂದು ತಿಳಿಯಬೇಕು ॥೧೩॥

ಅಯ್ಯಾ! ರಾಮ! 'ಅಹಂ' ಎಂದು ಭಾಸಿಸುತಿರುವ ಈ ಜಗತ್ತನ್ನು, ಸಾಕ್ಷಾತ್ ಪರಬ್ರಹ್ಮವೇಯೆಂದು ನೀನು ಈಗ ತಿಳಿಯುವನಾಗು. ಪರಮಾತ್ಮನು, ಸರ್ವಗನಾಗಿಯೂ ಸರ್ವದಾ ಈ ದೊಡ್ಡಪ್ರಪಂಚರೂಪವಾದ ಆಕಾರವುದಯಿಸತಕ್ಕವನಾಗಿಯೂ ಇರುವನು. ಇಂತಹ ಈ ಪರಬ್ರಹ್ಮವೇ, ಆಯಾಶಕ್ತಿಗಳನ್ನು ಪುರಸ್ಕರಿಸಿದಾಗ ಆಯಾನಾಮಧೇಯಗಳುಳ್ಳದಾಗುವುದು. ಅದು, ಸ್ವಲ್ಪವಾಗಿ ಮನನಶಕ್ತಿಯನ್ನು ಪುರಸ್ಕರಿಸಿದಾಗ ಮನಸ್ಸೆಂದು ಹೇಳಲ್ಪಡುವುದು ॥೧೪–೧೫॥

ಆಕಾಶದಲ್ಲಿ ನವಿಲುಗರಿಯಿರುವುದೆಂದು ಹೇಗೆ ಭ್ರಾಂತಿಯುಂಟಾಗುವದೋ, ಜಲದಲ್ಲಿ ಸುಳಿಯಿರುವುದೆಂಬ ಭ್ರಾಂತಿ ಹೇಗೆ ಹುಟ್ಟುವುದೋ, ಹಾಗೆ ಆತ್ಮನಲ್ಲಿ ಮನಸ್ಸೆಂದೂ ಜೀವನೆಂದೂ ಉಂಟಾಗುವ ಭ್ರಾಂತಿಯು ಕೇವಲ ಪ್ರತಿಭಾಸಜನ್ಯವಾದುದೆಂದು ತಿಳಿಯಬೇಕು ॥೧೬॥

ಅಯ್ಯಾ ಶತ್ರುವಿನಾಶಕನಾದ ರಾಮನೆ! ಮನಸ್ಸಿಗೆ ಮನನರೂಪವಾದ ಯಾವುದೊಂದು ಆಕಾರವುಂಟಾಗಿರುವುದೋ, ಅದು ಆ ಪರಬ್ರಹ್ಮನ ಶಕ್ತಿಯೇಯೆ. ಅದುಕಾರಣ ಅದು ಆ ಪರಬ್ರಹ್ಮವೇ ಆದಂತಾಯ್ತು ॥೧೭॥

'ಇದು ಅದು ನಾನು' ಇತ್ಯಾದಿರೂಪವಾದ ವಿಭಾಗವು, ಕೇವಲ ಪ್ರತಿಭಾಸಜನ್ಯವಾದುದೇಯೆ. ಮನಸ್ಸಿಗೂ ಬ್ರಹ್ಮನಿಗೂ ಭೇದವಿರುವುದೆಂಬ ಅಜ್ಞಾನದಲ್ಲಿ, ಇನ್ನೂ ಕಾಮಾದಿಗಳೂ ಮುಖ್ಯಕಾರಣವಾಗಿರುವುವು ॥೧೮॥

ಯದ್ಯಚ್ಛೈತನ್ಮನಸ್യೇವ ಕಿಞ್ಚಿತ್ ಸದಸದಾತ್ಮಕಮ್ ।
ವ್ಯಾಕಬ್ದಿತಂ ಸರ್ವಶಕ್ತೇಃ ತಾಂ ಶಕ್ತಿಂ ಬ್ರಹ್ಮತಾಂ ವಿದುಃ ॥೧೯॥
ಮನಸ್ಸತ್ತಾತ್ಮಕಂ ನಾಮ ಯಥೈತನ್ಮನಸಿ ಸ್ಥಿತಮ್ ।
ಯಥರ್ತೋಃ ಶಕ್ತಯಸ್ತದ್ವತ್ ಜೀವೇಹಾಬ್ರಹ್ಮಣಿ ಸ್ಥಿತಾಃ ॥೨೦॥
ವ್ಯಾಪ್ತಸರ್ವರ್ತುಕುಸುಮಾ ಕ್ಷ್ಮಾ ದೇಶವಿಧಿಭೇದತಃ ।
ಯಥಾ ದಧಾತಿ ಪುಷ್ಪಾಣಿ ತಥಾ ಚಿತ್ತಾನಿ ಲೋಕಕೃತ್ ॥೨೧॥
ಕ್ವಚಿತ್ಕ್ವಚಿತ್ ಕದಾಚಿದ್ಧಿ ತಸ್ಮಾದಾಯಾನ್ತಿ ಶಕ್ತಯಃ ।
ದೇಶಕಾಲಾದಿವೈಚಿತ್ರ್ಯಾತ್ ಕ್ಷ್ಮಾತಲಾದಿವ ಶಾಲಯಃ ॥೨೨॥
ನ ಜಾತಂ ಪ್ರತಿಭಾಸೇನ ಕೇನ್ಯೈವಾನ್ಯೇನ ಪಶ್ಯತಿ ।
ಪ್ರತಿಯೋಗಿವ್ಯವಚ್ಛೇದಸಙ್ಖ್ಯಾರೂಪಾದಯಶ್ಚ ಯೇ ।
ಮನಶ್ಶಬ್ದೈಃ ಪ್ರಕಲ್ಪ್ಯನ್ತೇ ಬ್ರಹ್ಮಜಾನ್ ಬ್ರಹ್ಮ ವಿದ್ಧಿ ತಾನ್ ॥೨೩॥

ಮನಸ್ಸಿನೊಳಗೆಯೇ ಆವಿರ್ಭಾವತಿರೋಭಾವಗಳಿಂದ ಸದಸದ್ರೂಪವಾಗಿ ಕಾಣುವ ಯಾವ ಯಾವ ಈ ದೃಶ್ಯಜಾತವು ಶಬ್ದವಿಷಯವಾಗಿರುವುದೋ, ಅದು ಬ್ರಹ್ಮರೂಪವಾದ ಶಕ್ತಿಯೆಂದು ಪ್ರಾಜ್ಞರ ಅಭಿಪ್ರಾಯವು ॥೧೯॥

'ಮನಸ್ಸಿಗೆ ಕಾಮಾದಿಗಳು ಧರ್ಮವಾಗಿರುವುವು. ಇವು ಬ್ರಹ್ಮನಲ್ಲಿರುವ ಬಗೆ ಹೇಗೆ? ಇವು ಆ ಬ್ರಹ್ಮನಲ್ಲಿದ್ದರಲ್ಲವೆ ಅವನ ಶಕ್ತಿಗಳೆನ್ನಿಸಿಕೊಳ್ಳುವುವು!' ಎಂದು ಶಂಕಿಸಬಹುದಲ್ಲವೆ! ಮನಸ್ಸಿನ ಸದ್ಭಾವವೆಂಬುದೂ ಬ್ರಹ್ಮರೂಪವೇ ಅಷ್ಟೆ! ಈ ಬ್ರಹ್ಮರೂಪವು ಮನಸ್ಸಿನಲ್ಲಿ ಹೇಗಿರುವುದೋ, ವಸಂತಾದಿ ಋತುಗಳ ಶಕ್ತಿಯು ವೃಕ್ಷಲತಾದಿಗಳಲ್ಲಿ ಹೇಗಿರುವುದೋ, ಹಾಗೆ ಈ ಜೀವನ(ಮನಸ್ಸಿನ) ಧರ್ಮಗಳು ಬ್ರಹ್ಮನಲ್ಲಿರುವುವು ॥೨೦॥

'ಹೀಗೆ ಸಮಸ್ತ ಜೀವಧರ್ಮಗಳೂ ಬ್ರಹ್ಮಶಕ್ತಿಯೇ ಆಗಿದ್ದಪಕ್ಷದಲ್ಲಿ, ಎಲ್ಲಾ ಧರ್ಮಗಳೂ ಎಲ್ಲಾ ಜೀವಗಳಲ್ಲಿಯೂ ಸಂಕೀರ್ಣವಾಗಿ ಏಕೆ ವ್ಯಾಪಿಸಿರಬಾರದು?' ಎಂದು ಕೇಳಿದರೆ,—ಭೂಮಿಯು, ತಾನು ಸರ್ವಋತುವಿನ ಕುಸುಮಗಳನ್ನೂ ಸ್ವಭಾವತಃ ಒಳಗೊಂಡಿದ್ದರೂ, ಆಯಾದೇಶಗಳಲ್ಲಿರುವ ಬೀಜಸಂಸ್ಕಾರಾದಿಗಳ ಭೇದದಿಂದ ಒಂದೊಂದುಕಡೆ ಒಂದೊಂದುವಿಧವಾದ ಪುಷ್ಪಗಳನ್ನು ಹೇಗೆ ಧರಿಸುವುದೋ, ಹಾಗೆ ಬ್ರಹ್ಮನೂ ಚಿತ್ತಶಕ್ತಿಗಳನ್ನು ಆಯಾವ್ಯವಸ್ಥಾನುಗುಣವಾಗಿ ಧರಿಸುವನು ॥೨೧॥

ಹೀಗಿರುವಕಾರಣ, ದೇಶಕಾಲಾದಿ ಭೇದಾನುಗುಣವಾಗಿ ಭೂಮಿಯಲ್ಲಿ ಬಿತ್ತಗಳು ನಾನಾವಿಧವಾಗಿ ಹುಟ್ಟುವಂತೆ, ಆ ಪರಬ್ರಹ್ಮನ ದೆಸೆಯಿಂದ ಒಂದೊಂದುಕಡೆ ಒಂದೊಂದುಸಲ ಒಂದೊಂದುವಿಧವಾದ ಶಕ್ತಿಗಳು ವ್ಯವಸ್ಥಿತವಾಗಿ ಫಲಿಸುವುವು ॥೨೨॥

ಅಯ್ಯಾ! ರಾಮ! ಹೀಗೆ ಪರಮಾರ್ಥದಶೆಯಲ್ಲಿ ಜಗತ್ತು ಸಂಕೀರ್ಣವಾಗಿರುವ ಬಗೆಯನ್ನು ಹೇಳಿದೆನಷ್ಟೆ! ಈಗ ಪ್ರಾತಿಭಾಸಿಕದಶೆಯಲ್ಲಿ ಜಗತ್ತಿನ ವಿಚಾರವನ್ನು ಹೇಳುವೆನು. ವಸ್ತುತಃ ಈ ಪ್ರತಿಭಾಸವೆಂಬುದೇ ಎಲ್ಲಿಯೂ ಜನಿಸಿಲ್ಲ; ಹೀಗಾದಮೇಲೆ ಯಾವುದನ್ನು ಯಾವುದು ಯಾವುದರಿಂದ ನೋಡುವುದು? ಪ್ರತಿಯೋಗಿವ್ಯವಚ್ಛೇದ ಸಂಖ್ಯಾ ರೂಪ ಮುಂತಾದ ಯಾವ ಪದಾರ್ಥಗಳು ಮನಶ್ಶಬ್ದದಿಂದ ಕಲ್ಪಿತವಾಗುವುವೋ, ಅವುಗಳೆಲ್ಲವೂ ಬ್ರಹ್ಮನಿಂದಲೇ ಹುಟ್ಟಿದುವುಗಳೆಂದೂ—ಅತಏವ ಅವುಗಳೆಲ್ಲವೂ ಬ್ರಹ್ಮವೇಯೆಂದೂ ನೀನು ತಿಳಿಯುವನಾಗು ॥೨೩॥

ಯಥಾಯಥಾಸ್ಯ ಮನಸಃ ಪ್ರತಿಭಾಸಃ ಪ್ರವರ್ತತೇ ।
ತಥಾತಥೈವ ಭವತಿ ದೃಷ್ಟಾನ್ತೋತ್ರ ಕಿಲೈನ್ದವಾಃ ॥೨೪॥
ಸ್ವಯಮಕ್ಷುಬ್ಧವಿಮಲೇ ಯಥಾ ಸ್ಪನ್ದೋ ಮಹಾಮ್ಭಸಿ ।
ಸಂಸಾರಕಾರಣಂ ಜೀವಃ ತಥಾಯಂ ಪರಮಾತ್ಮನಿ ॥೨೫॥
ಜ್ಞಸ್ಯ ಸರ್ವಂ ಚಿತಂ ರಾಮ ಬ್ರಹ್ಮೈವಾವರ್ತತೇ ಸದಾ ।
ಕಲ್ಲೋಲೋರ್ಮಿತರಙ್ಗಾಢ್ಯೈಃ ಅಬ್ಧೇರ್ಜಲಮಿವಾತ್ಮನಿ ॥೨೬॥
ದ್ವಿತೀಯಾ ನಾಸ್ತಿ ಸತ್ತೈಕಾ ನಾಮರೂಪಕ್ರಿಯಾತ್ಮಿಕಾ ।
ಪರೇ ನಾನಾತರಙ್ಗೇಬ್ಧೌ ಕಲ್ಪನೇವ ಜಲೇತರಾ ॥೨೭॥
ಜಾಯತೇ ನಶ್ಯತಿ ತಥಾ ಯದಿದಂ ಯಾತಿ ತಿಷ್ಠತಿ ।
ತದಿದಂ ಬ್ರಹ್ಮಣಿ ಬ್ರಹ್ಮ ಬ್ರಹ್ಮಣಾ ಚ ವಿವರ್ತತೇ ॥೨೮॥
ಸ್ವಾತ್ಮನ್ಯೇವಾತಪಸ್ತೀವ್ರೋ ಮೃಗತೃಷ್ಣಿಕಯಾ ಯಥಾ ।
ವಿಚಿತ್ರೇಣ ವಿಚಿತ್ರೋಽಪಿ ಪ್ರಸ್ಫುರತ್ಯಾತ್ಮನಾ ತಥಾ ॥೨೯॥
ಕರಣಂ ಕರ್ಮ ಕರ್ತಾ ಚ ಜನನಂ ಮರಣಂ ಸ್ಥಿತಿಃ ।
ಸರ್ವಂ ಬ್ರಹ್ಮೈವ ನ ಹ್ಯಸ್ತಿ ತದ್ವಿನಾ ಕಲ್ಪನೇತರಾ ॥೩೦॥

ಈ ಮನಸ್ಸಿಗೆ ಹೇಗೆಹೇಗೆ ಪ್ರತಿಭಾಸವುಂಟಾಗುವುದೋ, ಅದು ಹಾಗೆಹಾಗೆಯೇ ಆಗುವುದು. ಈ ವಿಷಯದಲ್ಲಿ, ನಾನು ಹಿಂದೆ ಹೇಳಿದ ಐಂದವರೇ ದೃಷ್ಟಾಂತವಲ್ಲವೆ! ॥೨೪॥

ಸ್ವಭಾವತಃ ತಾನು ಚಂಚಲವಾಗದೆ ನಿರ್ಮಲವಾಗಿರುವ ನೀರಿನಲ್ಲಿ ಸ್ಪಂದವು ಹೇಗೆ ತೋರುವುದೋ, ಹಾಗೆ ಸಂಸಾರಹೇತುವಾದ ಈ ಜೀವನು, ಸ್ವಭಾವತಃ ನಿಶ್ಚಲನಾಗಿ ನಿರ್ಮಲನಾಗಿರುವ ಪರಮಾತ್ಮನೊಳಗೆ ತೋರುವನು ॥೨೫॥

ಅಯ್ಯಾ! ರಾಮ! ಸಮುದ್ರದ ಜಲವು ತನ್ನೊಳಗೆಯೇ ಕಲ್ಲೋಲ ಊರ್ಮಿ ತರಂಗ ಇತ್ಯಾದಿರೂಪವಾಗಿ ಸರ್ವತ್ರ ತೋರುವಂತೆ, ಪ್ರಾಜ್ಞನಾದವನಿಗೆ ಈ ಸಮಸ್ತವೂ ಸರ್ವತ್ರ ಸರ್ವದಾ ಪರಿಪೂರ್ಣವಾದ ಬ್ರಹ್ಮವಾಗಿಯೇ ಇರುವುದು ॥೨೬॥

ಬಹುವಿಧತರಂಗಭರಿತವಾದ ಸಮುದ್ರದೊಳಗೆ ನೀರನ್ನು ಬಿಟ್ಟು ಬೇರೆಯಾದ ಕಲ್ಪನೆಯೊಂದೂ ಇಲ್ಲದಿರುವಂತೆ, ಪರಮಾತ್ಮನೊಳಗೆ ನಾಮ ರೂಪ ಕ್ರಿಯಾತ್ಮಕವಾದ ಬೇರೆಯಾದ ಯಾವುದೊಂದುಸತ್ತೆಯೂ ವಾಸ್ತವ್ಯವಾಗಿಲ್ಲ ॥೨೭॥

ಯಾವ ಈದೃಶ್ಯವು ಹುಟ್ಟುತಲೂ ಸಾಯುತಲೂ ಹೋಗುತಲೂ ನಿಲ್ಲುತಲೂ ಇರುವುದೋ, ಅದೆಲ್ಲವೂ ಬ್ರಹ್ಮವೇ ಬ್ರಹ್ಮನಲ್ಲಿಯೇ ಬ್ರಹ್ಮನಿಂದಲೇ ಪ್ರತಿಭಾಸಹೊಂದುತಿರುವುದೆಂದು ತಿಳಿಯಬೇಕು ॥೨೮॥

ತೀವ್ರವಾದ ಬಿಸಿಲನ್ನು ನೋಡಿ ನೀರಿರುವುದೆಂದು ಭ್ರಾಂತಿಹುಟ್ಟುವುದಲ್ಲವೆ! ಆಗ ಆ ಬಿಸಿಲೇ ನಮ್ಮ ಮನಸ್ಸಿನೊಳಗೆ ಮೃಗತೃಷ್ಣಿಕಾ ನದೀಪ್ರವಾಹರೂಪವಾಗಿ ಹೇಗೆ ತೋರುವುದೋ, ಹಾಗೆ ಪರಮಾತ್ಮನು ಸ್ವಯಂ ನಾಮರೂಪಶೂನ್ಯನಾಗಿದ್ದರೂ ವಿಚಿತ್ರವಾದ ರೂಪದಿಂದ ಸ್ಫುರಿಸುತಿರುವನು ॥೨೯॥

ಕರಣ ಕರ್ಮ ಕರ್ತೃ ಜನನ ಮರಣ ಸ್ಥಿತಿ—ಇತ್ಯಾದಿಗಳೆಲ್ಲವೂ ಆ ಪರಬ್ರಹ್ಮವೇಯೆ. ಅದನ್ನು ಬಿಟ್ಟು ಇತರವಾದ ಕಲ್ಪನೆಯಾವುದೊಂದೂ ಇಲ್ಲವೇ ಇಲ್ಲ ॥೩೦॥

ನ ಲೋಭೋಽಸ್ತಿ ನ ಮೋಹೋಽಸ್ತಿ ನ ತೃಷ್ಣಾಸ್ತಿ ನ ರಞ್ಜನಾ ।
ಕ ಆತ್ಮನ್ಯಾತ್ಮನೋ ಲೋಭಃ ತೃಷ್ಣಾ ಮೋಹೋಽಥವಾ ಕುತಃ ॥೨೧॥
ಆತ್ಮೈವೇದಂ ಜಗತ್ ಸರ್ವಂ ಆತ್ಮೈವ ಕಲನಾಕ್ರಮಃ ।
ಹೇಮಾಙ್ಗದತಯೇವಾಯಂ ಆತ್ಮೋದೇತಿ ಮನಸ್ತಯಾ ॥೨೦॥
ಅಬುದ್ಧಂ ಯತ್ ಪರಂ ಧಾಮ ತಚ್ಚಿತ್ತಂ ಜೀವ ಉಚ್ಯತೇ ।
ಅಪರಿಜ್ಞಾತ ಏವಾಶು ಬನ್ಧುರಾಯಾತ್ಯಬನ್ಧುತಾಮ್ ॥೨೨॥
ಚಿನ್ಮಯೇನಾತ್ಮನಾಜ್ಞೇನ ಸ್ವಸಙ್ಕಲ್ಪನಯಾ ಸ್ವಯಮ್ ।
ಶೂನ್ಯತಾ ಗಗನೇನೇವ ಜೀವತಾ ಪ್ರಕಟೀಕೃತಾ ॥೨೪॥
ಆತ್ಮೈವಾನಾತ್ಮವದಿಹ ಜೀವೋ ಜಗತಿ ರಾಜತೇ ।
ದ್ವೀನ್ದುತ್ವಮಿವ ದುರ್ದೃಷ್ಟೇಃ ಸಚ್ಚಾಸಚ್ಚ ಸಮುತ್ಥಿತಮ್ ॥೨೫॥
ಮೋಹಾರ್ಥಶಬ್ದಾರ್ಥದೃಶೋಃ ಏತಯೋರತ್ಯಸಮ್ಭವಾತ್ ।
ಸತ್ಯತ್ವಾದಾತ್ಮನಶ್ಚೈವ ಕ್ವಾತ್ಮಾ ಬದ್ಧಃ ಕ್ವ ಮುಚ್ಯತೇ ॥೨೬॥

ಈರೀತಿಯಾಗಿ ದ್ವಿತೀಯವಾದೊಂದು ವಸ್ತುವೇ ಇಲ್ಲದಿರುವುದರಿಂದ, ಪ್ರಪಂಚದಲ್ಲಿ ನಾವು ಈಗ ವ್ಯವಹರಿಸುತಿರುವ ಮೋಹವೆಂಬುದೂ ಇಲ್ಲ; ಲೋಭವೂ ಇಲ್ಲ; ಕಾಮವೂ ಇಲ್ಲ; ಆಸಕ್ತಿಯೂ ಇಲ್ಲ. ಆತ್ಮನಲ್ಲಿ ಆತ್ಮನಿಗೇ ಲೋಭವೆಂಬುದಾವುದು? ಅಥವಾ ತೃಷ್ಣೆಯಾಗಲಿ ಮೋಹವಾಗಲಿ ಎಲ್ಲಿರುವುವು? ॥೨೧॥

ಈ ಸಮಸ್ತಜಗತ್ತೂ ಆತ್ಮವೇಯೆ. ಸುವರ್ಣವು ಅಂಗದರೂಪವಾಗಿ ತೋರುವಂತೆ, ಈ ಆತ್ಮನೇ ಮನೋರೂಪನಾಗಿ ತೋರುವನು ॥೨೦॥

ಪರಮಾರ್ಥವಾಗಿ ತಿಳಿಯಲ್ಪಡದಿರುವ ಯಾವ ಪರಬ್ರಹ್ಮವಸ್ತುವುಂಟೋ, ಅದೇ ಚಿತ್ತವೆಂದೂ ಜೀವನೆಂದೂ ಹೇಳಲ್ಪಡುವುದು. ನಮ್ಮ ಒಬ್ಬ ಬಂಧುವು ಹೊಸದಾಗಿ ಬಂದಾಗ, ಅವನು ಬಂಧುವೆಂದು ನಾವು ತಿಳಿಯಲಾರೆವಲ್ಲವೆ! ಆಗ ಅವನು ವಸ್ತುತಃ ಬಂಧುವಾಗಿದ್ದರೂ ನಮಗೆ ಬಂಧುವಲ್ಲದೆಯೇ ಇರುವನಷ್ಟೆ! ॥೨೨॥

ಆಕಾಶವು ಶೂನ್ಯತ್ವವನ್ನು ಪ್ರಕಟಪಡಿಸುವಂತೆ, ಶುದ್ಧಚಿನ್ಮಯನಾದ ಆತ್ಮನು, ಸ್ವಯಂ ಅಜ್ಞಾನವಿಷಯನಾಗಿ, ಸ್ವಕೀಯಸಂಕಲ್ಪವಶದಿಂದ ಜೀವತ್ವವನ್ನು ಪ್ರಕಟಪಡಿಸಿಕೊಳ್ಳುವನು ॥

ಹೀಗೆ ಸ್ವಯಂ ಆತ್ಮನೇ ಆಗಿರುವ ಜೀವನು, ಈ ಪ್ರಪಂಚದಲ್ಲಿ ಆತ್ಮನಲ್ಲದಿರುವನಂತೆ ಭಾಸಿಸುತಿರುವನು. ಕಣ್ಣುಕೆಟ್ಟರತಕ್ಕವನಿಗೆ ಆಕಾಶದಲ್ಲಿ ಎರಡು ಚಂದ್ರಮಂಡಲಗಳಿರುವಂತೆ ತೋರುವುದಲ್ಲವೆ! ಹೀಗೆ ದ್ವಿತೀಯರೂಪವಿರುವುದೆಂದು ತೋರುವಾಗ ಅಸತ್ತಾಗಿಯೂ, ಪರಮಾರ್ಥರೂಪದಶೆಯಲ್ಲಿ ಸತ್ತಾಗಿಯೂ ಇರುವುದು ॥೨೫॥

ಈರೀತಿಯಾಗಿ ಈ ಪ್ರಪಂಚದಲ್ಲಿರುವ ಶಬ್ದಾರ್ಥಜ್ಞಾನಗಳೆಲ್ಲವೂ ಕೇವಲ ಮೋಹನಿಮಿತ್ತಗಳಾಗಿರುವುವು. ಇವು ಸುತರಾಂ ಅಸಂಭವಗಳು; ಬ್ರಹ್ಮನು ಪರಮಾರ್ಥ ಸತ್ಯಭೂತನು. ಹೀಗಿರುವುದರಿಂದ, ಈ ಪರಮಾತ್ಮನು ಬದ್ಧನಾಗಿರುವುದೆಲ್ಲಿ? ಇವನಿಗೆ ಮೋಕ್ಷವೆಂಬುದೆಲ್ಲಿ? ॥

ನಿತ್ಯಾಸಮ್ಭವಬನ್ಧಸ್ಯ ಬದ್ಧೋಽಸ್ಮೀತಿ ಕುಕಲ್ಪನಾ |
ಯಸ್ಯ ಕಾಲ್ಪನಿಕೀ ತಸ್ಯ ಮೋಕ್ಷೋ ಮಿಥ್ಯಾ ನ ತತ್ತ್ವತಃ ||೩೭||

ಶ್ರೀರಾಮ ಉವಾಚ.

ಮನೋ ಯಂ ನಿಶ್ಚಯಂ ಯಾತಿ ತತ್ತದ್ಭವತಿ ನಾನ್ಯಥಾ |
ತೇನ ಕಾಲ್ಪನಿಕೋ ನಾಸ್ತಿ ಬನ್ಧಃ ಕಥಮಿಹ ಪ್ರಭೋ ||೩೮||

ಶ್ರೀ ವಸಿಷ್ಠ ಉವಾಚ.

ಮಿಥ್ಯಾ ಕಾಲ್ಪನಿಕೀವೇಯಂ ಮೂರ್ಖಾಣಾಂ ಬನ್ಧಕಲ್ಪನಾ |
ಮಿಥ್ಯೈವಾಭ್ಯುದಿತಾ ತೇಷಾಂ ಇತರಾ ಮೋಕ್ಷಕಲ್ಪನಾ ||೩೯||
ಏವಮಜ್ಞಾನಕಾದೇವ ಬನ್ಧಮೋಕ್ಷದೃಶೋಽಸ್ಮೃತೇಃ |
ವಸ್ತುತಸ್ತು ನ ಬನ್ಧೋಽಸ್ತಿ ನ ಮೋಕ್ಷೋಽಸ್ತಿ ಮಹಾಮತೇ ||೪೦||

ಹೀಗೆ ಎಂದಿಗೂ ಬಂಧವೇ ಅಸಂಭವವಾಗಿರುವ ಯಾವ ಪರಮಾತ್ಮನಿಗೆ, ತಾನು ಬದ್ಧನಾಗಿರುವೆನೆಂಬ ಈ ತುಚ್ಛವಾದ ಕಲ್ಪನೆಯು ಕೇವಲ ಕಲ್ಪನಾಜನ್ಯವಾದುದೋ, ಅವನಿಗೆ ಮೋಕ್ಷವೆಂಬುದೂ ಕೇವಲ ಮಿಥ್ಯಾಭೂತವಲ್ಲದೆ–ತಾತ್ವಿಕವಲ್ಲ ||೩೭||

ಹೀಗೆ ಶ್ರೀ ವಸಿಷ್ಠರು ಹೇಳಿದ ಮಾತನ್ನು ಕೇಳಿದ ಶ್ರೀರಾಮನು, ಹಿಂದೆ ಯುಕ್ತಿಯಾಗಿ ಬಂಧವೆಲ್ಲವೂ ಕಲ್ಪನಾಜನ್ಯವೆಂದು ವಸಿಷ್ಠರು ವಿಸ್ತರಿಸಿ ಹೇಳಿದ್ದ ಮಾತನ್ನು ನೆನೆಸಿಕೊಂಡು, ಈಗ ಪರಸ್ಪರ ವಿರೋಧವನ್ನು ತೋರಿಸಲು ಪ್ರಶ್ನೆಮಾಡುವನು :—

ಸರ್ವಜ್ಞರಾದ ವಸಿಷ್ಠರೆ! ಮನಸ್ಸು ಯಾವವಿಧವಾದ ನಿಶ್ಚಯವನ್ನು ಪಡೆಯುವುದೋ, ಅದು ಹಾಗೆಹಾಗೆಯೇ ತಾನು ಆಗಿಬಿಡುವುದು; ಇತರವಿಧವಾಗಿ ಎಂದಿಗೂ ಆಗಲಾರದು. ಈ ವಿಷಯವನ್ನು ತಾವು ಹಿಂದೆ ವಿಸ್ತಾರವಾಗಿ ಅಪ್ಪಣೆ ಕೊಡಿಸಿರುವಿರಲ್ಲವೆ! ಹೀಗಾದಮೇಲೆ, ಮನಸ್ಸು ಬಂಧವನ್ನೂ ಕಲ್ಪಿಸಿಕೊಂಡರೆ ಬಂಧರೂಪವಾಗಿಯೂ ಆಗಬಹುದಷ್ಟೆ! ಹೀಗಿರುವುದರಿಂದ, ಕಾಲ್ಪನಿಕವಾದ ಬಂಧವೂ ಇಲ್ಲವೆಂದು ತಾವು ಈಗ ಹೇಳುವುದು ಹೇಗೆ? ಇದು ಪೂರ್ವೋತ್ತರವಿರೋಧವಲ್ಲವೆ! ||೩೮||

ಶ್ರೀ ವಸಿಷ್ಠರು ಉತ್ತರಹೇಳುವರು :—

ಅಯ್ಯಾ! ರಾಮ! ನಿನ್ನ ಅಭಿಪ್ರಾಯವು ಗೊತ್ತಾಯಿತು. ಆದರೆ, ನಾನು ಹಿಂದೆ ಹೇಳಿದ ಮಾತಿನ ಅಭಿಪ್ರಾಯವನ್ನು ನೀನು ಚೆನ್ನಾಗಿ ಗ್ರಹಿಸಲಿಲ್ಲವೆಂದು ತೋರುತ್ತದೆ. ನಾನು ಹಿಂದೆ ಹೇಳಿದ ಯುಕ್ತಿವಾದವೆಲ್ಲವೂ ಲೌಕಿಕದೃಷ್ಟಿ ತಪ್ಪಿಹೋಗಿ ಪರಮಾರ್ಥದೃಷ್ಟಿಗೆ ದ್ವಾರವುಂಟಾಗುವುದಕ್ಕಾಗಿ ಮಾತ್ರವೇ ಹೊರತು, ವಸ್ತುತತ್ವಕಥನವಲ್ಲವೆಂದು ತಿಳಿ. ಮೂರ್ಖರಾದವರು ಕಲ್ಪಿಸಿಕೊಂಡಿರುವ ಈ ಬಂಧಕಲ್ಪನೆಯು ಕೇವಲ ಮಿಥ್ಯಾಭೂತವಾದುದೇಯೆ. ಹೀಗಿರುವುದರಿಂದ, ಬಂಧಕಲ್ಪನೆಯುಂಟಾಗಿರುವಂತೆಯೇ ಮೋಕ್ಷವೆಂಬ ಮತ್ತೊಂದುಕಲ್ಪನೆಯೂ ಅವರಿಗುಂಟಾಗಿರುವದು ||೩೯||

ಅಯ್ಯಾ ಮಹಾಮತಿಯೆ! ಹೀಗೆ ಬಂಧಮೋಕ್ಷಗಳು ಸತ್ಯಗಳೆಂಬುದಕ್ಕೆ ಸರಿಯಾದ ಪ್ರಮಾಣವೇ ಇಲ್ಲದಿರುವುದರಿಂದ, ಬಂಧಮೋಕ್ಷಜ್ಞಾನವೆಲ್ಲವೂ ಅಜ್ಞಾನಜನ್ಯವೇಯೆಂದು ತಿಳಿಯಬೇಕು. ವಸ್ತುತತ್ವವನ್ನು ವಿಚಾರಮಾಡಿದರೋ,—ಬಂಧವೂ ಇಲ್ಲ; ಮೋಕ್ಷವೂ ಇಲ್ಲ ||೪೦||

ಕಲ್ಪನಾಯಾ ಅವಸ್ತುತ್ವಂ ಸಮ್ಪ್ರಬುದ್ಧಮತಿಂ ಪ್ರತಿ ।
ರಜ್ಜ್ವಹೇರಿವ ಹೇಪ್ರಾಜ್ಞ ನ ತ್ವಬುದ್ಧಮತಿಂ ಪ್ರತಿ ॥೪೧॥
ಬನ್ಧಮೋಕ್ಷಾದಿಸಮ್ಮೋಹೋ ನ ಪ್ರಾಜ್ಞಸ್ಯಾಸ್ತಿ ಕಶ್ಚನ ।
ಸಮ್ಮೋಹಬನ್ಧಮೋಕ್ಷಾದಿ ಹ್ಯಜ್ಞಸ್ಯೈವಾಸ್ತಿ ರಾಘವ ॥೪೨॥
ಆದೌ ಮನಸ್ತದನು ಬನ್ಧವಿಮೋಕ್ಷದೃಷ್ಟೀ
ಪಶ್ಚಾತ್ ಪ್ರಪಞ್ಚರಚನಾ ಭುವನಾಭಿಧಾನಾ ।
ಇತ್ಯಾದಿಕಾ ಸ್ಥಿತಿರಿಯಂ ಹಿ ಗತಾ ಪ್ರತಿಷ್ಠಾಂ
ಆಖ್ಯಾಯಿಕಾ ಸುಭಗ ಬಾಲಜನೋದಿತೇವ ॥೪೩॥

ಇತಿ ಉತ್ಪತ್ತಿಪ್ರಕರಣೇ ಚಿತ್ತಚಿಕಿತ್ಸಾಪೂರ್ವಕಂ ಚಿತ್ತೋತ್ಪತ್ತಿ
ವರ್ಣನಂ ನಾಮ ಶತತಮಃ ಸರ್ಗಃ.

ಅಯ್ಯಾ! ಪ್ರಾಜ್ಞನೆ! ಯಾವನ ಬುದ್ಧಿಯು ಪ್ರಬುದ್ಧವಾಗಿದೆಯೋ, ಅಂಥವನನ್ನು ಕುರಿತು ಬಂಧಮೋಕ್ಷಾದಿಕಲ್ಪನೆಯೆಲ್ಲವೂ ಅವಾಸ್ತವ್ಯವೆಂಬ ಉಪದೇಶವು ಹುಟ್ಟಿರುವುದು. ನಾನು ಹಿಂದೆ ಇದು ಅನಿರ್ವಚನೀಯವೆಂದೂ ಕಲ್ಪನೆಯು ಸತ್ಯವೆಂದೂ ಹೇಳಿರುವಮಾತು ಯಾವುದುಂಟೋ, ಅದು ರಜ್ಜುಸರ್ಪಜ್ಞಾನದಂತೆ ಅಸತ್ಯವಾದುದು. ಆದರೆ, ಅಪ್ರಬುದ್ಧಬುದ್ಧಿಯಾದವನ ಉಪದೇಶಾರ್ಥವಾಗಿ ಹೇಳಲ್ಪಟ್ಟಿರುವುದು ॥೪೧॥

ಅಯ್ಯಾ! ರಾಘವ! ಬಂಧಮೋಕ್ಷಾದಿ ಭ್ರಾಂತಿಯು ಪ್ರಾಜ್ಞನಾದವನಿಗಿಲ್ಲವೇ ಇಲ್ಲ; ಅಜ್ಞಾನಜನ್ಯವಾದ ಈ ಬಂಧಮೋಕ್ಷಾದಿಗಳೆಲ್ಲವೂ ಅಜ್ಞನಾದವನ ಪಾಲಿಗೇ ಉಂಟಾಗಿರುವುವು ॥

ಎಲೈ ಮಂಗಳಾತ್ಮನೆ! ಪ್ರಥಮತಃ ಮನಸ್ಸು; ಬಳಿಕ ಬಂಧಮೋಕ್ಷಜ್ಞಾನಗಳು; ಅನಂತರ ಈ ಬ್ರಹ್ಮಾಂಡವೆಂಬ ದೊಡ್ಡ ರಚನೆಯು. ಇದೇ ಮೊದಲಾದ ಈ ಸ್ಥಿತಿಯೆಲ್ಲವೂ, ಬಾಲಕರಿಗೆ ಹೇಳಲ್ಪಡುವ ಕಥೆಯಂತೆ ಬೇರುಬಿಟ್ಟುಕೊಂಡಿರುವುದು ॥೪೩॥

ಇದು ಉತ್ಪತ್ತಿಪ್ರಕರಣದಲ್ಲಿ ಚಿತ್ತಚಿಕಿತ್ಸಾಪೂರ್ವಕವಾಗಿ ಚಿತ್ತೋತ್ಪತ್ತಿವರ್ಣನವೆಂಬ
ನೂರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕಾಧಿಕಶತತಮಃ ಸರ್ಗಃ.

ಶ್ರೀರಾಮ ಉವಾಚ.

ಕಿಮುಚ್ಯತೇ ಮುನಿಶ್ರೇಷ್ಠ ಬಾಲಕಾಖ್ಯಾಯಿಕಾಕ್ರಮಃ ।
ಕ್ರಮೇಣ ಕಥಯೈತನ್ಮೇ ಮನೋವಿನೋದಕಾರಣಮ್ ॥೧॥

ಶ್ರೀ ವಸಿಷ್ಠ ಉವಾಚ.

ಕೋಽಪಿ ಮುಗ್ಧಮತಿರ್ಬಾಲೋ ಧಾತ್ರೀಂ ಪೃಚ್ಛತಿ ರಾಘವ ।
ಕಾಞ್ಚಿದ್ವಿನೋದಿನೀಂ ಧಾತ್ರಿ ವರ್ಣಯಾಖ್ಯಾಯಿಕಾಮಿತಿ ॥೨॥
ಸಾ ಬಾಲಸ್ಯ ವಿನೋದಾಯ ಧಾತ್ರೀ ತಸ್ಯ ಮಹಾಮತೇ ।
ಆಖ್ಯಾಯಿಕಾಂ ಕಥಯತಿ ಪ್ರಸನ್ನಮಧುರಾಕ್ಷರಾಮ್ ॥೩॥
ಕ್ವಚಿತ್ ಸನ್ತಿ ಮಹಾತ್ಮಾನೋ ರಾಜಪುತ್ರಾಸ್ತ್ರಯಃ ಶುಭಾಃ ।
ಧಾರ್ಮಿಕಾಃ ಶೌರ್ಯಮುದಿತಾಃ ಅತ್ಯನ್ತಾಸತಿ ಪತ್ತನೇ ॥೪॥

ಉತ್ಪತ್ತಿಪ್ರಕರಣದಲ್ಲಿ ನೂರೊಂದನೆಯ ಸರ್ಗವು.

ಸಙ್ಕಲ್ಪಾದರ್ಥಶೂನ್ಯಾಯಾಃ ವಿಕಲ್ಪಶತಸಂಸೃತೇಃ ।
ದೃಷ್ಟಾನ್ತೋ ವರ್ಣ್ಯತೇತ್ರೈವ ಬಾಲಕಾಖ್ಯಾಯಿಕಾಕ್ರಮಃ ॥

ನಾನಾವಿಧಸಂಕಲ್ಪದಿಂದ ನಿರರ್ಥಕವಾಗಿರುವ ವಿಕಲ್ಪಶತಗಳ ಪ್ರಸರಣಕ್ಕೆ ಉದಾಹರಣೆಯಾಗಿ ಬಾಲಕಾಖ್ಯಾಯಿಕಾಪ್ರಕ್ರಮವು ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಶ್ರೀರಾಮನು ಪ್ರಶ್ನೆಮಾಡುವನು:-

ಎಲೈ ಮುನಿಶ್ರೇಷ್ಠರೆ! ತಾವು ಅಪ್ಪಣೆಕೊಟ್ಟ ಬಾಲಕಾಖ್ಯಾಯಿಕಾಕ್ರಮವಾವುದು? ನನ್ನ ಮನಸ್ಸಿಗೆ ವಿನೋದಹೇತುವಾಗಿರುವ ಈ ವಿಷಯವನ್ನು ತಾವು ಕ್ರಮವಾಗಿ ನನಗೆ ಅಪ್ಪಣೆ ಕೊಡಿಸಬೇಕು ॥೧॥

ಶ್ರೀವಸಿಷ್ಠರು ಉತ್ತರಹೇಳುವರು:—

ಅಯ್ಯಾ! ರಾಘವ! ಯುಕ್ತಾಯುಕ್ತವಿವೇಕಶೂನ್ಯನಾದ ಯಾವನೋ ಒಬ್ಬ ಬಾಲಕನು, ತನ್ನ ಧಾತ್ರಿ (ಸಾಕುವತಾಯಿ)ಯನ್ನು ಕುರಿತು 'ಹೇಧಾತ್ರಿ! ಮನಸ್ಸಿಗೆ ವಿನೋದಕರವಾಗಿ ಯಾವುದಾದರೊಂದು ಕಥೆಯನ್ನು ಹೇಳು' ಎಂದು ಕೇಳುವನಲ್ಲವೆ! ॥೨॥

ಅಯ್ಯಾ ಮಹಾಬುದ್ಧಿಯಾದ ರಾಮನೆ! ಆ ಧಾತ್ರಿಯು, ಆ ಬಾಲನ ವಿನೋದಾರ್ಥವಾಗಿ, ಪರಿಶುದ್ಧವಾಗಿಯೂ ಮಧುರವಾಗಿಯೂ ಇರುವ ಮಾತನ್ನು ಆಡುತ, ಬಂದಾನೊಂದು ಕಥೆಯನ್ನು ಹೇಳುವಳು ॥೩॥

ಅವಳು ಹೇಳುವ ಕಥೆ ಹೇಗಿರುವುದೆಂದರೆ:—ಅತ್ಯಂತಿಕವಾಗಿ ಅನಿತ್ಯವಾದ ಒಂದು ಪಟ್ಟಣದೊಳಗೆ, ಮಹಾತ್ಮರಾಗಿಯೂ ಧಾರ್ಮಿಕರಾಗಿಯೂ ಶೌರ್ಯವಂತರಾಗಿಯೂ ಇರುವ ಮೂರು ಮಂದಿ ರಾಜಪುತ್ರರಿರುವರು ॥೪॥

ವಿಸ್ತೀರ್ಣೇ ಶೂನ್ಯನಗರೇ ವ್ಯೋಮ್ನೀವ ಜಲತಾರಕಾಃ |
ದ್ವೌ ನ ಜಾತೌ ತಥೈಕಸ್ತು ಗರ್ಭ ಏವ ನ ಸಂಸ್ಥಿತಃ ||೫||
ಅಥಾತ್ಯುತ್ತಮಲಾಭಾರ್ಥಂ ಕದಾಚಿತ್ ಸಮವಾಯತಃ |
ವಿಬನ್ಧವಃ ಖಿನ್ನಮುಖಾಃ ಶೋಕೋಪಹತಚೇತಸಃ ||೬||
ತೇ ತಸ್ಮಾಚ್ಛೂನ್ಯನಗರಾತ್ ನಿರ್ಗತಾ ವಿತತಾನನಾಃ |
ಗಗನಾದಿವ ಸಂಶ್ಲಿಷ್ಟಾಃ ಬುಧಶುಕ್ರಶನೈಶ್ಚರಾಃ ||೭||
ಶಿರೀಷಸುಕುಮಾರಾಙ್ಗಾಃ ಪೃಷ್ಠತೋರ್ಕೇಣ ತಾಪಿತಾಃ |
ಮಾರ್ಗೇಽಹನಿ ಗತಾಗ್ರೀಷ್ಮತಾಪಾರ್ತಾಃ ಪಲ್ಲವಾ ಇವ ||೮||
ಸನ್ತಪ್ತಮಾರ್ಗಸಿಕತಾದಗ್ಧಪಾದಸರೋರುಹಾಃ |
ಹಾ ತಾತ ಚೇತಿ ಶೋಚನ್ತೋ ಮೃಗಾ ಯೂಥಚ್ಯುತಾ ಇವ ||೯||
ದರ್ಭಾಗ್ರಭಿನ್ನಚರಣಾಃ ತಾಪಖಿನ್ನಾಙ್ಗಸನ್ಧಯಃ |
ಉಲ್ಲಙ್ಘ್ಯ ದೂರಮಧ್ವಾನಂ ಧೂಳಿಧೂಸರಮೂರ್ತಯಃ ||೧೦||
ಮಞ್ಜರೀಜಾಲಜಟಿಲಂ ಫಲಪಲ್ಲವಮಾಲಿತಮ್ |
ಮೃಗಪಕ್ಷಿಗಣಾಧಾರಂ ಪ್ರಾಪುರ್ಮಾರ್ಗೇ ತರುತ್ರಯಮ್ ||೧೧||

ವಿಸ್ತೀರ್ಣವಾಗಿರುವ ಆ ಹಾಳುಪಟ್ಟಣದೊಳಗೆ, ಅಂತರಿಕ್ಷದಲ್ಲಿ ಜಲಮಯವಾದ ನಕ್ಷತ್ರಗಳಂತೆ, ಆ ಮೂರುಮಂದಿಯೊಳಗೆ ಇಬ್ಬರು ಹುಟ್ಟಿಯೇ ಇಲ್ಲ; ಒಬ್ಬನು ಗರ್ಭದೊಳಗೇ ಇರಲಿಲ್ಲ ||೫||

ಬಳಿಕ, ದುರದೃಷ್ಟಯೋಗದಿಂದ ಬಂಧುಗಳನ್ನು ಕಳೆದುಕೊಂಡು ಶೋಕಾಕ್ರಾಂತಹೃದಯರಾಗಿರುವ ಅವರುಗಳು, ಮುಖವನ್ನು ಜೋಲುಹಾಕಿಕೊಂಡು, ಉತ್ತಮವಾದ ಮತ್ತೊಂದು ಪಟ್ಟಣವನ್ನು ಹೊಂದುವುದಕ್ಕೋಸ್ಕರ, ಒಟ್ಟಾಗಿ ಆ ಪಟ್ಟಣದಿಂದ ಹೊರಟರು ||೬||

ಬುಧ ಶುಕ್ರ ಶನೈಶ್ಚರರುಗಳು ಒಟ್ಟಾಗಿ ಅಂತರಿಕ್ಷಪ್ರದೇಶದಿಂದ ಚಲಿಸುವಂತೆ, ಅವರುಗಳು ಆ ಶೂನ್ಯನಗರದದೆಸೆಯಿಂದ ಹರ್ಷವಿಕಸಿತಮುಖರಾಗಿ ಹೊರಟರು ||೭||

ಶಿರೀಷಪುಷ್ಪದಂತೆ ಸುಕುಮಾರಶರೀರರಾಗಿರುವ ಆ ರಾಜಪುತ್ರರು, ಬೇಸಿಗೆಯ ಬಿಸಿಲಿನಿಂದ ಬಾಡಿಹೋದ ಚಿಗುರುಗಳಂತೆ ಕಳೆಗುಂದಿದವರಾಗಿ, ಹಗಲಿನಲ್ಲಿ ಬಿಸಿಲಿನಿಂದ ತಲೆಯ ಮೇಲೆ ಸಂತಪ್ತರಾಗಿ ದಾರಿಯಲ್ಲಿ ಹೊರಟರು ||೮||

ಮಾರ್ಗದಲ್ಲಿರುವ ಮಳಲು ಕಾಯ್ದು, ಇವರ ಕಾಲನ್ನು ಸುಡುತಿದ್ದಿತು; ತಮ್ಮ ಗುಂಪನ್ನು ತಪ್ಪಿಸಿಕೊಂಡು ಬಂದಿರುವ ಮೃಗಗಳಂತೆ ಕಳವಳಪಡುತ 'ಅಯ್ಯೋ! ಅಪ್ಪ!' ಎಂದು ಅಳುತಿದ್ದರು ||೯||

ಕಾಡಿನಲ್ಲಿ ಬೆಳೆದಿರುವ ದರ್ಭೆಯ ತುದಿಗೆ ತಗುಲಿ ಅವರ ಕಾಲುಗಳು ಸೀಳಿಹೋದುವು; ಅವರ ಶರೀರಸಂಧಿಗಳೆಲ್ಲವೂ ಸಂತಾಪದಿಂದ ಬಳಲಿಹೋದುವು; ಧೂಳಿನಿಂದ ಮೈಯೆಲ್ಲ ಮಲಿನವಾಯ್ತು. ಇಂತಹ ಆ ರಾಜಪುತ್ರರು, ಬಹುದೂರಮಾರ್ಗವನ್ನು ದಾಟಿ, ಕುಸುಮಗುಚ್ಛಪರಿಪೂರ್ಣವಾಗಿ ಫಲಪಲ್ಲವಶೋಭಿತವಾಗಿ ಮೃಗಪಕ್ಷಿಸಮೂಹಗಳಿಗಾಶ್ರಯವಾಗಿ ಮಾರ್ಗದಲ್ಲಿರುವ ಮೂರು ಮರಗಳನ್ನು ಹೊಂದಿದರು ||೧೦—೧೧||

ಯಸ್ಮಿನ್ ವೃಕ್ಷತ್ರಯೇ ವೃಕ್ಷೌ ದ್ವೌ ನ ಜಾತೌ ಮನಾಗಪಿ ।
ಬೀಜಮೇವ ತೃತೀಯಸ್ಯ ಸ್ವಾರೋಹಸ್ಯ ನ ವಿದ್ಯತೇ ॥೧೨॥
ವಿಶ್ರಾನ್ತಾಸ್ತೇ ಪರಿಶ್ರಾನ್ತಾಃ ತತ್ರೈಕಸ್ಯ ತರೋರಧಃ ।
ಪಾರಿಜಾತತಲೇ ಸ್ವರ್ಗೇ ಶಕ್ರಾನಿಲಯಮಾ ಇವ ॥೧೩॥
ಫಲಾನ್ಯಮೃತಕಲ್ಪಾನಿ ಭುಕ್ತ್ವಾ ಪೀತ್ವಾ ಚ ತದ್ರಸಮ್ ।
ಕೃತ್ವಾ ಗುಳುಚ್ಛಕೈರ್ಮಾಲಾಂ ಚಿರಂ ವಿಶ್ರಮ್ಯ ತೇ ಯಯುಃ ॥೧೪॥
ಪುನರ್ದೂರತರಂ ಗತ್ವಾ ಮಧ್ಯಾಹ್ನೇ ಸಮುಪಸ್ಥಿತೇ ।
ಸರಿತ್ತ್ರಯಮಾಸೇದುಃ ತರಜ್ಗತರಳಾರವಮ್ ॥೧೫॥
ತತ್ರೈಕಾ ಪರಿಶುಷ್ಕೈವ ಮನಾಗಪ್ಯಮ್ಬು ನ ದ್ವಯೋಃ ।
ವಿದ್ಯತೇ ಸರಿತೋರ್ದೃಷ್ಟಿಃ ಅನ್ಧಲೋಚನಯೋರಿವ ॥೧೬॥
ಪರಿಶುಷ್ಕಾ ಭೃಶಂ ಯಾಸೌ ತಸ್ಯಾಂ ತೇ ಸಸ್ನುರಾದೃತಾಃ ।
ಘರ್ಮಾರ್ತಾ ಇವ ಗಙ್ಗಾಯಾಂ ಬ್ರಹ್ಮವಿಷ್ಣುಹರಾ ಇವ ॥೧೭॥
ಚಿರಂ ಕೃತ್ವಾ ಜಲಕ್ರೀಡಾಂ ಪೀತ್ವಾ ಕ್ಷೀರೋಪಮಂ ಪಯಃ ।
ಜಗ್ಮುಸ್ತೇ ರಾಜತನಯಾಃ ಪ್ರಹೃಷ್ಟಮನಸಃ ಸ್ವಯಮ್ ॥೧೮॥

ಆ ಮೂರುವೃಕ್ಷಗಳೊಳಗೆ ಎರಡು ವೃಕ್ಷಗಳು ಹುಟ್ಟಿಯೇ ಇರಲಿಲ್ಲ; ಅತ್ಯುನ್ನತವಾಗಿ ಬೆಳೆದಿರುವ ಮತ್ತೊಂದು ಮರಕ್ಕೆ ಬೀಜವೇ ಇಲ್ಲ ॥೧೨॥

ಮಾರ್ಗಾಯಾಸಶ್ರಾಂತರಾಗಿರುವ ಆ ಮೂರುಮಂದಿಯೂ, ಸ್ವರ್ಗದಲ್ಲಿ ಪಾರಿಜಾತವೃಕ್ಷದ ಕೆಳಗೆ ಇಂದ್ರ ವಾಯು ಯಮರು ವಿಶ್ರಮಿಸಿಕೊಳ್ಳುವಂತೆ, ಆ ಮೂರು ಮರಗಳೊಳಗೆ ಒಂದರ ಬುಡದಲ್ಲಿ ವಿಶ್ರಮಿಸಿಕೊಂಡರು ॥೧೩॥

ಅಲ್ಲಿ ಅವರು ಅಮೃತತುಲ್ಯಗಳಾದ ಆ ಮರದ ಫಲಗಳನ್ನು ಕಂಡು, ಮಧುರವಾದ ಆದರ ರಸಗಳನ್ನು ಪಾನಮಾಡಿ, ಅದಕ್ಕೆ ಹಬ್ಬಿಕೊಂಡಿದ್ದ ಲತೆಯ ಗೊಂಚಲುಗಳಿಂದ ಹಾರವನ್ನು ಮಾಡಿ ಧರಿಸಿಕೊಂಡು, ಬಹಳಹೊತ್ತು ವಿಶ್ರಾಂತಿಪಡೆದನಂತರ ಅಲ್ಲಿಂದ ಹೊರಟುಬಿಟ್ಟರು ॥೧೪॥

ಮತ್ತೆ ಬಹುದೂರ ಹೋಗಿ, ಮಧ್ಯಾಹ್ನಕಾಲ ಸಮೀಪಿಸಿದಾಗ, ಅತಿಚಂಚಲವಾದ ತರಂಗಧ್ವನಿಯುಳ್ಳದಾಗಿರುವ ನದೀತ್ರಯವನ್ನು ಹೊಂದಿದರು ॥೧೫॥

ಆ ಮೂರು ನದಿಗಳೊಳಗೆ, ಒಂದು ಒಣಗಿಯೇ ಹೋಗಿದ್ದಿತು; ಮತ್ತೆರಡರಲ್ಲಿಯಾದರೋ, ಕುರುಡನ ಕಣ್ಣುಗಳಲ್ಲಿ ದರ್ಶನಶಕ್ತಿಯಿಲ್ಲದಿರುವಂತೆ, ಎಂದಿಗೂ ಸ್ವಲ್ಪವೂ ನೀರೇ ಇಲ್ಲ ॥೧೬॥

ಆ ನದೀತ್ರಯದೊಳಗೆ ಯಾವುದು ಅತ್ಯಂತವಾಗಿ ಒಣಗಿಹೋಗಿದ್ದಿತೋ, ಅದರಲ್ಲಿ— ಬ್ರಹ್ಮ ವಿಷ್ಣು ಮಹೇಶ್ವರಸದೃಶರಾದ ಈ ರಾಜಪುತ್ರರು, ಬೇಸಿಗೆಯಿಂದ ಬಳಲಿದವರು ಸ್ನಾನಮಾಡುವಂತೆ, ಅತ್ಯಾದರಪೂರ್ವಕವಾಗಿ ಸ್ನಾನಮಾಡಿದರು ॥೧೭॥

ಅಲ್ಲಿ ಆ ರಾಜಪುತ್ರರು ಬಹಳಹೊತ್ತು ಜಲಕ್ರೀಡೆ ಮಾಡಿ, ಹಾಲಿನಂತೆ ಮಧುರವಾಗಿದ್ದ ಆದರ ನೀರನ್ನು ಪಾನಮಾಡಿ, ಸ್ವಯಂ ಸಂತುಷ್ಟಚಿತ್ತರಾಗಿ ಹೊರಟರು ॥೧೮॥

ಅಥಾಸೇದುರ್ದಿನಸ್ಯಾನ್ತೇ ಲಮ್ಬಮಾನೇ ದಿವಾಕರೇ ।
ಭವಿಷ್ಯನ್ನವನಿರ್ಮಾಣಂ ನಗರಂ ನಗಸನ್ನಿಭಮ್ ॥೧೯॥
ಪತಾಕಾಪದ್ಮಿನೀವ್ಯಾಪ್ತಂ ನೀಲಾಕಾಶಜಲಾಶಯಮ್ ।
ದೂರಶ್ರುತಸಮುಲ್ಲಾಪಗಾಯನ್ನಾಗರಮಣ್ಡಲಮ್ ॥೨೦॥
ದದೃಶುಸ್ತತ್ರ ರಮ್ಯಾಣಿ ತ್ರೀಣಿ ಸದ್ಮವನಾನಿ ತೇ ।
ಮಣಿಕಾಞ್ಚನಗೇಹಾನಿ ಶೃಙ್ಗಾಣೀವ ಮಹಾಗಿರೇಃ ॥೨೧॥
ಅನಿರ್ಮಿತೇ ದ್ವೇ ಸದನೇ ಏಕಂ ನಿರ್ಭಿತ್ತಿ ತತ್ರ ವೈ।
ಅಭಿತ್ತಿ ಮನ್ದಿರಂ ಚಾರು ಪ್ರವಿಷ್ಟಾಸ್ತೇ ನರಾಸ್ತ್ರಯಃ ॥೨೨॥
ಸಮ್ಪ್ರವಿಶ್ಯೋಪವಿಶ್ಯಾಶು ವಿಹರನ್ತೋ ವರಾನನಾಃ ।
ಪ್ರಾಪುಃ ಸ್ಥಾಲೀತ್ರಯಂ ತತ್ರ ತಪ್ತಕಾಞ್ಚನಕಲ್ಪಿತಮ್ ॥೨೩॥
ತತ್ರ ಕರ್ಪರತಾಂ ಯಾತೇ ದ್ವೇ ಏಕಾ ಚೂರ್ಣತಾಂ ಗತಾ ।
ಜಗೃಹುಶ್ಚೂರ್ಣರೂಪಾಂ ತಾಂ ಸ್ಥಾಲೀಂ ತೇ ದೀರ್ಘಬುದ್ಧಯಃ ॥೨೪॥

ಬಳಿಕ ಅವರು ಸಂಧ್ಯಾಕಾಲದಲ್ಲಿ ಸೂರ್ಯನು ಅಸ್ತೋನ್ಮುಖನಾಗುತಿರುವಾಗ, ಮುಂದೆ ಹೊಸದಾಗಿ ಕಟ್ಟಬೇಕಾಗಿರುವ ಪರ್ವತಸದೃಶವಾದ ಒಂದು ಪಟ್ಟಣವನ್ನು ಹೊಂದಿದರು ॥೧೯॥

ಆ ಪಟ್ಟಣವು, ಧ್ವಜಪಟಗಳಿಂದಲೂ ಕಮಲಸರಸ್ಸುಗಳಿಂದಲೂ ವ್ಯಾಪ್ತವಾಗಿದ್ದಿತು; ನೀಲವಾದ ಆಕಾಶದಂತೆ ಸುಂದರವಾಗಿರುವ ಜಲಾಶಯಗಳು ಅಲ್ಲಿ ಯಥೇಚ್ಛವಾಗಿದ್ದುವು; ಆ ಪಟ್ಟಣದಲ್ಲಿರುವ ಜನಗಳು ಗಾನಮಾಡುತಿರುವುದರಿಂದ, ಅವರ ಗಾನಧ್ವನಿಯು ಬಹುದೂರಕ್ಕೆ ಕೇಳಿಬರುತಿದ್ದಿತು ॥೨೦॥

ಅದರೊಳಗೆ ಅವರು ಸುಂದರವಾಗಿರುವ ಮೂರು ಉತ್ತಮಗೃಹಗಳನ್ನು ಕಂಡರು, ಆ ಮನೆಗಳು ತೊಡ್ಡ ಪರ್ವತದ ಶಿಖರದಂತೆ ಪ್ರಕಾಶಿಸುತಿದ್ದುವು. ಅವುಗಳೊಳಗೆ, ಸುವರ್ಣದಿಂದಲೂ ರತ್ನದಿಂದಲೂ ನಿರ್ಮಿತವಾದ ಕಿರುಮನೆಗಳು ಅನೇಕವಾಗಿದ್ದುವು ॥೨೧॥

ಆ ಮೂರುಮನೆಗಳೊಳಗೆ, ಎರಡು ಮನೆಗಳು ನಿರ್ಮಾಣಮಾಡಲ್ಪಟ್ಟೇ ಇರಲಿಲ್ಲ; ಮತ್ತೊಂದಕ್ಕೆ ಗೋಡೆಯೇ ಇಲ್ಲ. ಗೋಡೆಯಿಲ್ಲದ ಅತಿಮನೋಹರವಾದ ಆ ಮನೆಯೊಳಗೆ ಈ ಮೂರು ಮಂದಿಯೂ ಪ್ರವೇಶಿಸಿದರು ॥೨೨॥

ಆ ಮನೆಯೊಳಗೆ ಪ್ರವೇಶಿಸಿ ಬೇಗನೆ ಅಲ್ಲಿ ಕುಳಿತುಕೊಂಡು ವಿಹರಿಸುತಿರುವ ಆ ರಾಜಪುತ್ರರಿಗೆ, ಅಲ್ಲಿ—ಪುಟಹಾಕಿ ಶುದ್ಧವಾದ ಚಿನ್ನದಿಂದ ನಿರ್ಮಿತವಾಗಿರುವ ಮೂರು ಸ್ಥಾಲಿಗಳು ದೊರಕಿದುವು ॥೨೩॥

ಆ ಮೂರುಸ್ಥಾಲಿಗಳೊಳಗೆ, ಎರಡು ಸ್ಥಾಲಿಗಳು ಒಡೆದು ಎರಡುಪಾಲಾಗಿದ್ದುವು; ಮತ್ತೊಂದು, ಸಂಪೂರ್ಣವಾಗಿ ಚೂರ್ಣವಾಗಿದ್ದಿತು. ಅದರಲ್ಲಿ ಚೂರ್ಣವಾಗಿದ್ದ ಸ್ಥಾಲಿಯನ್ನು ಆ ದೀರ್ಘಬುದಿಗಳಾದ ರಾಜಪುತ್ರರು ತೆಗೆದುಕೊಂಡರು ॥೨೪॥

ದ್ರೋಣೈರ್ನವನವತ್ಯಾ ತ್ವೈಃ ತಸ್ಯಾಂ ದ್ರೋಣೇನ ಚಾನ್ಧಸಃ ।
ತತ್ರ ದ್ರೋಣಶತಂ ಹೀನಂ ರನ್ಧಿತಂ ಬಹುಭೋಜಿಭಿಃ ॥೨೫॥
ನಿಮನ್ತ್ರಿತಾಸ್ತ್ರಯಸ್ತೈಸ್ತು ಬ್ರಾಹ್ಮಣಾ ರಾಜಸೂನುಭಿಃ ।
ದ್ವೌ ನಿರ್ದೇಹಾವಥೈಕಸ್ಯ ಮುಖಮೇವ ನ ವಿದ್ಯತೇ ॥೨೬॥
ನಿರ್ಮುಖೇನಾನ್ಧಸಸ್ತತ್ರ ಭುಕ್ತಂ ದ್ರೋಣಶತಂ ಸುತ ।
ವಿಪ್ರಭುಕ್ತಾವಶೇಷಂತು ಭುಕ್ತಮನ್ಧೋ ನೃಪಾತ್ಮಜೈಃ ।
ತ್ರಿಭಿಸ್ತೇ ರಾಜಪುತ್ರಾಶ್ಚ ಪರಾಂ ನಿರ್ವೃತಿಮಾಗತಾಃ ॥೨೭॥
ಭವಿಷ್ಯನ್ನಗರೇ ತಸ್ಮಿನ್ ರಾಜಪುತ್ರಾಸ್ತ್ರಯೋ ಹಿ ತೇ ।
ಸುಖಮದ್ಯ ಸ್ಥಿತಾಃ ಪುತ್ರ ಮೃಗಯಾವ್ಯವಹಾರಿಣಃ ॥೨೮॥
ಆಖ್ಯಾಯಿಕೈಷಾ ಕಥಿತಾ ಮಯಾ ರಮ್ಯಾ ತವಾನಘ ।
ಏತಾಂ ಹೃದಿ ಕುರು ಪ್ರಾಜ್ಞ ವಿದಗ್ಧಸ್ತ್ವಂ ಭವಿಷ್ಯಸಿ ॥೨೯॥
ಧಾತ್ರ್ಯೇತಿ ಕಥಿತಾ ರಾಮ ಬಾಲಕಾಖ್ಯಾಯಿಕಾ ಶುಭಾ ।
ತುಷ್ಟಿಂ ಜಗಾಮ ಬಾಲಶ್ಚ ಶುಭಾಖ್ಯಾಯಿಕಯಾನಯಾ ॥೩೦॥
ಏಷಾ ಹಿ ಕಥಿತಾ ರಾಮ ಚಿತ್ತಾಖ್ಯಾನಕಥಾಂ ಪ್ರತಿ ।
ಬಾಲಕಾಖ್ಯಾಯಿಕಾ ತುಭ್ಯಂ ಮಯಾ ಕಮಲಲೋಚನ ॥೩೧॥

ಆ ಚೂರ್ಣಭೂತವಾಗಿದ್ದ ಸ್ಥಾಲಿಯೊಳಗೆ, ಹೆಚ್ಚಾಗಿ ಊಟಮಾಡತಕ್ಕವರಾದ ಅವರು, ನೂರುಖಂಡುಗ ಅಕ್ಕಿಯನ್ನು ಬೇಯಿಸಿದರು. ಆ ನೂರುಖಂಡುಗದೊಳಗೆ, ತೊಂಬತ್ತೊಂಬತ್ತು ಖಂಡುಗವೂ ಆಮೇಲೆ ಮತ್ತೊಂದು ಖಂಡುಗವೂ ಕಡಮೆಯಾಗಿದ್ದಿತು ॥೨೫॥

ಆಮೇಲೆ ಆ ರಾಜಪುತ್ರರು ಅಲ್ಲಿ ಮೂರುಮಂದಿ ಬ್ರಾಹ್ಮಣರನ್ನು ಊಟಕ್ಕೆ ಕರೆದರು, ಆ ಬ್ರಾಹ್ಮಣರೊಳಗೆ, ಇಬ್ಬರಿಗೆ ದೇಹವೇ ಇಲ್ಲ; ಮತ್ತೊಬ್ಬನಿಗೆ ಮುಖವೇ ಇಲ್ಲ ॥೨೬॥

ವತ್ಸ! ಅವರಲ್ಲಿ ಮುಖರಹಿತನಾದವನು ನೂರುಖಂಡುಗ ಅಕ್ಕಿಯ ಅನ್ನವನ್ನೂ ತಿಂದನು. ಬ್ರಾಹ್ಮಣರು ಭೋಜನಮಾಡಿ ಉಳಿದ ಅನ್ನವನ್ನು ಆ ಮೂರುಮಂದಿ ರಾಜಪುತ್ರರೂ ಭೋಜನಮಾಡಿದರು. ಬಳಿಕ ಅವರು ಅಲ್ಲಿ ಅತಿಯಾಗಿ ತೃಪ್ತಿಹೊಂದಿದರು ॥೨೭॥

ಮಗು! ಭವಿಷ್ಯತ್ತಾದ ಆ ನಗರದಲ್ಲಿ, ಆ ಮೂರುಮಂದಿ ರಾಜಪುತ್ರರೂ, ಮೃಗಯಾವಿಹಾರಮಾಡುತ ಈಗಲೂ ಸುಖವಾಗಿ ವಾಸಮಾಡಿಕೊಂಡಿರುವರು ॥೨೮॥

ಮಗು! ಹೀಗೆ ಅತಿರಮಣೀಯವಾಗಿರುವ ಈ ಬಾಲಕಾಖ್ಯಾಯಿಕೆಯನ್ನು ನಾನು ನಿನಗೆ ಹೇಳಿರುವೆನು. ಇದನ್ನು ನೀನು ಸರ್ವದಾ ಮನಸ್ಸಿನಲ್ಲಿ ಮನನಮಾಡುತಿರು; ಹೀಗೆ ಮಾಡಿದರೆ ನೀನು ಪ್ರಾಜ್ಞನಾಗುವೆ ॥೨೯॥

ಅಯ್ಯಾ! ರಾಮ! ಹೀಗೆಂದು ಆ ಧಾತ್ರಿಯು ಶುಭವಾದ ಈ ಬಾಲಕಾಖ್ಯಾಯಿಕೆಯನ್ನು ಬಾಲಕನಿಗೆ ಹೇಳಿದಳು. ಈ ಕಥೆಯನ್ನು ಕೇಳಿ, ಆ ಬಾಲಕನೂ ಕೇವಲ ಸಂತೋಷಭರಿತನಾದನು ।

ಅಯ್ಯಾ! ಕಮಲನೇತ್ರನಾದ ರಾಮನೆ! ಚಿತ್ತೋಪಾಖ್ಯಾನವನ್ನು ಹೇಳಿದ ಬಳಿಕ ಉದಾಹರಣಾರ್ಥವಾಗಿ ಈ ಬಾಲಕೋಪಾಖ್ಯಾನವನ್ನು ನಿನಗೆ ಹೇಳಿರುವೆನು ॥೩೧॥

ಇಯಂ ಸಂಸಾರರಚನಾ ಸ್ಥಿತಿಮೇವಮುಪಾಗತಾ |
ಬಾಲಕಾಖ್ಯಾಯಿಕೇವೋಗ್ರೈಃ ಸಙ್ಕಲ್ಪೈರ್ದೃಢಕಲ್ಪಿತೈಃ ||೩೧||
ವಿಕಲ್ಪಜಾಲಕೈವೇಯಂ ಪ್ರತಿಭಾಸಾತ್ಮಿಕಾನಘ |
ಬನ್ಧಮೋಕ್ಷಾದಿಕಲನಾರೂಪೇಣ ಪರಿಜೃಮ್ಭತೇ ||೩೩||
ಸಙ್ಕಲ್ಪಮಾತ್ರಾದಿತರತ್ ವಿದ್ಯತೇ ನೇಹ ಕಿಞ್ಚನ |
ಸಙ್ಕಲ್ಪವಶತಃ ಕಿಞ್ಚಿತ್ ನಕಿಞ್ಚಿತ್ ಕಿಞ್ಚಿದೇವ ವಾ ||೩೪||
ದ್ಯೌಃ ಕ್ಷಮಾ ವಾಯುರಾಕಾಶಂ ಪರ್ವತಾಃ ಸರಿತೋ ದಿಶಃ |
ಸಙ್ಕಲ್ಪಕಚಿತಂ ಸರ್ವಂ ಏವಂ ಸ್ವಪ್ನವದಾತ್ಮನಃ ||೩೫||
ರಾಜಪುತ್ರಾಸ್ತ್ರಯೋ ನದ್ಯೋ ಭವಿಷ್ಯನ್ನಗರೇ ಯಥಾ |
ಯಥಾ ಸಙ್ಕಲ್ಪರಚನಾ ತಥೇಯಂ ಹಿ ಜಗತ್ಸ್ಥಿತಿಃ ||೩೬||
ಸಙ್ಕಲ್ಪಮಾತ್ರಮಭಿತಃ ಪರಿಸ್ಫುರತಿ ಚಞ್ಚಲಃ |
ಪಯೋಮಾತ್ರಾತ್ಮಕೋಮ್ಭೋಧಿಃ ಅಮ್ಭಸೀವಾತ್ಮನಾತ್ಮನಿ ||೩೭||
ಸಙ್ಕಲ್ಪಮಾತ್ರಂ ಪ್ರಥಮಂ ಉತ್ಥಿತಂ ಪರಮಾತ್ಮನಃ |
ತದಿದಂ ಸ್ಫಾರತಾಂ ಯಾತಂ ವ್ಯಾಪಾರೈರ್ದಿವಸಂ ಯಥಾ ||೩೮||

ಹೀಗೆ ಈ ಸಂಸಾರರಚನೆಯು, ಈ ಬಾಲಕಾಖ್ಯಾಯಿಕೆಯಂತೆ, ದೃಢವಾಗಿ ಕಲ್ಪಿತವಾದ ಸಂಕಲ್ಪಗಳಿಂದ ನೆಲೆಗೊಂಡಿರುವುದು ||೩೧||

ಎಲೈ ನಿರ್ದೋಷನಾದ ರಾಮನೇ! ಹೀಗೆ ಪ್ರತಿಭಾಸರೂಪವಾದ ಈ ವಿಕಲ್ಪಜಾಲವೇ, ಬಂಧಮೋಕ್ಷಾದಿ ಕಲ್ಪನಾರೂಪವಾಗಿ ವಿಜೃಂಭಿಸುತ್ತಿರುವುದು ||೩೩||

ಸಂಕಲ್ಪವನ್ನು ಬಿಟ್ಟು ಮತ್ತಾವುದೂ ಇಲ್ಲವೇ ಇಲ್ಲ. ನಮ್ಮ ಅನುಭವಕ್ಕೆ ಬರುವ ಯಾವುದೊಂದು ವಸ್ತುವಾಗಲಿ, ಸಂಕಲ್ಪವಶದಿಂದಲೇ ಉಂಟಾಗಿರುವುದು. ವಸ್ತುತಃ ಅದೊಂದೂ ಯಾವ ಪದಾರ್ಥವೂ ಅಲ್ಲ ||೩೪||

ಹೀಗೆ ಅಂತರಿಕ್ಷ ಭೂಮಿ ವಾಯು ಆಕಾಶ ಪರ್ವತ ನದಿ ದಿಕ್ಕು—ಇತ್ಯಾದಿ ಸಮಸ್ತವಸ್ತುವೂ, ಸ್ವಪ್ನದಂತೆ ಕೇವಲ ಸಂಕಲ್ಪಕಲ್ಪಿತವಾದುದು ||೩೫||

ಈಗ ನಾನು ಹೇಳಿದ ಬಾಲಕಾಖ್ಯಾಯಿಕೆಯಲ್ಲಿನ ಮೂರುಮಂದಿ ರಾಜಪುತ್ರರೂ ಮೂರು ನದಿಗಳೂ ಅವರು ಭವಿಷ್ಯನ್ನಗರದಲ್ಲಿದ್ದುದೂ ಹೇಗೆ ಸಂಕಲ್ಪರಚನಾರೂಪವಾದುವೋ, ಹಾಗೆ ಈ ಜಗತ್ತಿನ ಸ್ಥಿತಿಯೂ ಸಂಕಲ್ಪರಚನೆಯೆಂದು ತಿಳಿಯಬೇಕು ||೩೬||

ಕೇವಲ ಜಲಮಾತ್ರರೂಪವಾದ ಸಮುದ್ರವು ಚಂಚಲವಾಗಿ ಸ್ಫುರಿಸುವಂತೆ, ಆತ್ಮನ ಸಂಕಲ್ಪ ಮಾತ್ರವೇ ಆತ್ಮನಲ್ಲಿಯೇ ಸ್ಫುರಿಸುತಿರುವುದು ||೩೭||

ಪ್ರಥಮತಃ ಪರಮಾತ್ಮನದೆಸೆಯಿಂದ ಸಂಕಲ್ಪವೊಂದೇ ಉದಯಿಸುವುದು; ಬಳಿಕ, ಸೂರ್ಯನ ವ್ಯಾಪಾರಗಳಿಂದ ಹಗಲು ಅಭಿವ್ಯಕ್ತವಾಗುವಂತೆ, ಜನಗಳ ವ್ಯಾಪಾರಗಳಿಂದ ಇದು ಅಭಿವ್ಯಕ್ತವಾಗುವುದು ||೩೮||

ಸಙ್ಕಲ್ಪಜಾಲಕಲನೈವ ಜಗತ್ ಸಮಗ್ರಂ
ಸಙ್ಕಲ್ಪಮೇವ ನನು ವಿದ್ಧಿ ವಿಲಾಸಚೇತ್ಯಮ್ ।
ಸಙ್ಕಲ್ಪಮಾತ್ರಮಲಮುತ್ಸೃಜ ನಿರ್ವಿಕಲ್ಪಂ
ಆಶ್ರಿತ್ಯ ನಿಶ್ಚಯಮವಾಪ್ನುಹಿ ರಾಮ ಶಾನ್ತಿಮ್ ॥೩೯॥

ಇತಿ ಉತ್ಪತ್ತಿಪ್ರಕರಣೇ ಬಾಲಕಾಖ್ಯಾಯಿಕಾ ನಾಮ
ಏಕಾಧಿಕಶತತಮಃ ಸರ್ಗಃ.

ಅಯ್ಯಾ! ರಾಮ! ಈ ಸಮಸ್ತಜಗತ್ತೂ ಸಂಕಲ್ಪಮಾತ್ರ ರೂಪವೇಯೆ. ಈ ಮನೋವಿಲಾಸಗಳೂ ಅದರಿಂದ ಚೇತನೀಯವಾದ ವಸ್ತುಗಳೂ ಸಂಕಲ್ಪಮಾತ್ರವೇಯೆಂದು ತಿಳಿ. ಅದುಕಾರಣ, ನೀನು ಈ ಸಂಕಲ್ಪವೊಂದನ್ನು ಮಾತ್ರ ಅತ್ಯಂತಿಕವಾಗಿ ಬಿಟ್ಟುಬಿಡು. ನಿರ್ವಿಕಲ್ಪವಾದ ನಿಶ್ಚಯವನ್ನು ಆಶ್ರಯಿಸಿ, ಚಿರತರವಾದ ಶಾಂತಿಯನ್ನು ಹೊಂದುವನಾಗು ॥೩೯॥

ಇದು ಉತ್ಪತ್ತಿಪ್ರಕರಣದಲ್ಲಿ ಬಾಲಕಾಖ್ಯಾಯಿಕೆಯೆಂಬ
ನೂರೊಂದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವ್ಯುತ್ತರಶತತಮಃ ಸರ್ಗಃ.

ಶ್ರೀವಸಿಷ್ಠಉವಾಚ.

ಸ್ವಸಙ್ಕಲ್ಪವಶಾನ್ಮೂಢೋ ಮೋಹಮೇತಿ ನ ಪಣ್ಡಿತಃ ।
ಅಕ್ಷಯೇ ಕ್ಷಯಸಙ್ಕಲ್ಪಾತ್ ಮುಹ್ಯತೇ ಶಿಶುರೇವ ಹಿ ॥೧॥

ಶ್ರೀರಾಮಉವಾಚ.

ಕೋಽಸೌ ಸಙ್ಕಲ್ಪಿತಃ ಕೇನ ಕ್ಷಯೋ ಬ್ರಹ್ಮವಿದಾಂ ವರ !

ಉತ್ಪತ್ತಿಪ್ರಕರಣದಲ್ಲಿ ನೂರೆರಡನೆಯ ಸರ್ಗವು.

ಇಹಾಹಙ್ಕಾರಸಙ್ಕಲ್ಪಕ್ಷಯೋಪಾಯೋ ನಿರೂಪ್ಯತೇ ।
ವಿವೇಕೋಽನಾತ್ಮವರ್ಗಸ್ಯ ನಿತ್ಯತಾ ಚ ಪರಾತ್ಮನಃ ॥

ಅಹಂಕಾರಸಂಕಲ್ಪಗಳು ಕ್ಷಯಹೊಂದುವುದಕ್ಕೆ ತಕ್ಕ ಉಪಾಯವೂ, ಆತ್ಮನಲ್ಲದ ವಸ್ತುವರ್ಗದ ವಿವೇಚನೆಯೂ, ಪರಮಾತ್ಮನು ನಿತ್ಯನೆಂಬ ವಿಷಯವೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು :—

ಅಯ್ಯಾ! ರಾಮ! ತಾನು ನಾನಾವಿಧವಾಗಿ ಸಂಕಲ್ಪಮಾಡಿಕೊಂಡು ತನ್ಮೂಲಕವಾಗಿ ಮೂಢನು ಮೋಹಪಡುವನೇ ಹೊರತು, ಪಂಡಿತನಾದವನೆಂದಿಗೂ ಮೋಹಪಡುವುದಿಲ್ಲ. ಅಕ್ಷಯನಾದ ಪರಮಾತ್ಮನಲ್ಲ ಕ್ಷಯವನ್ನು ಕಲ್ಪಿಸಿಕೊಂಡು ಮೋಹಪಡತಕ್ಕವನು ಬಾಲನೇ ಸರಿ ॥೧॥

ಶ್ರೀರಾಮನು ಪ್ರಶ್ನೆಮಾಡುವನು :—

ಎಲೈ ಬ್ರಹ್ಮಜ್ಞವರ್ಯರೆ! ತಾವು 'ಕ್ಷಯಸಙ್ಕಲ್ಪಾತ್' ಎಂದು ಅಪ್ಪಣೆಕೊಟ್ಟಿರಲ್ಲವೆ! ಆ ಕ್ಷಯವೆಂಬುದು ಯಾವುದು? ಅದನ್ನು ಸಂಕಲ್ಪಿಸುವನು ಯಾವನು? ವಸ್ತುತಃ ಅಸತ್ಯವಾಗಿರುವ ವಸ್ತುವಿನಿಂದಲೇ, ಪರಮಾತ್ಮನು ಸಂಸಾರಭ್ರಮೆಯನ್ನು ಸ್ವೀಕರಿಸಿಕೊಂಡಿರುವನೆಂದು ತಾವು ಅಪ್ಪಣೆಕೊಟ್ಟಿರುವಿರಲ್ಲವೆ! ಈಗ ನನಗೆ ಹೀಗೆ ಶಂಕೆಯುಂಟಾಗುತಿರುವುದು,—ನಿತ್ಯನಾಗಿರಕ್ಕ ಆತ್ಮನು ನಶ್ವರನಾದ ಆತ್ಮನನ್ನು ಸಂಕಲ್ಪಿಸಿಕೊಳ್ಳುವನೆ? ಅಥವಾ ನಶ್ವರಾತ್ಮನೇ ನಶ್ವರಾತ್ಮನನ್ನು ಸಂಕಲ್ಪಿಸಿಕೊಳ್ಳುವನೆ? ನಿತ್ಯಾತ್ಮನು ತನ್ನ ಸ್ವಭಾವಕ್ಕೆ ವಿರುದ್ಧನಾದ ನಶ್ವರಾತ್ಮನನ್ನು ಸಂಕಲ್ಪಿಸಿಕೊಳ್ಳುವುದು ಅಸಂಭವವಾದಕಾರಣ, ಮೊದಲನೆಯ ಪಕ್ಷವು ಯುಕ್ತವಲ್ಲ. ನಶ್ವರಾತ್ಮನೇ ನಶ್ವರಾತ್ಮನನ್ನು ಸಂಕಲ್ಪಿಸುವನೆಂದರೆ,– ಆಗ (೧) ಆತ್ಮಾಶ್ರಯವೆಂಬ ದೋಷವುಂಟಾಗು

(೧) ಆತ್ಮಾಶ್ರಯದೋಷವೆಂದರೆ,—ಯಾವ ಪದಾರ್ಥಸ್ವರೂಪವನ್ನು ನಿಷ್ಕರ್ಷಿಸುವುದಕ್ಕೆ ಪ್ರಯತ್ನಪಡುವೆನೋ, ಅದರ ಸ್ವರೂಪಜ್ಞಾನವೇ ಅದರ ತಿಳುವಳಿಕೆಗೆ ಕಾರಣವಾಗಿದ್ದರೆ, ಆಗ ಆತ್ಮಾಶ್ರಯದೋಷವೆಂದು ಶಾಸ್ತ್ರಜ್ಞರು ಹೇಳುವರು. 'ಮಾವಿನಹಣ್ಣು ಸಿಹಿಯಾಗಿರುವುದು' ಎಂಬುದೊಂದು ವಿಷಯವನ್ನು ನಿಷ್ಕರ್ಷಿಸುವುದಕ್ಕೆ ನಾವು ಹೊರಟರೆ, ಆಗ ಮಾವಿನಹಣ್ಣಿನ ಮೂಲಕವಾಗಿಯೇ ಅದನ್ನು ನಿಷ್ಕರ್ಷಿಸಬೇಕಾಗಿಬರುವ ಪಕ್ಷದಲ್ಲಿ, ಅದು ದುಷ್ಟವಾದ ವಾಕ್ಯವಾಗುವುದಲ್ಲವೆ! ಹೀಗೆಯೇ ಇಲ್ಲಿಯೂ ನಶ್ವರಾತ್ಮನು ನಶ್ವರಾತ್ಮನನ್ನು ಸಂಕಲ್ಪಿಸುವನೆಂದರೆ ಆತ್ಮಾಶ್ರಯದೋಷವುಂಟಾಗುವುದೆಂದು ಭಾವವು.

ಅಸತ್ಯೈವ ಮಹಾಮೋಹಂ ಯೇನಾದಾತ್ ತತ್ ಸದ್ಯೈವ ಹಿ ||೧||

ಶ್ರೀವಸಿಷ್ಠಉವಾಚ.

ಅಸತಾ ಭೂತಸಙ್ಘೇನ ಕ್ಷಯೋಽಹಙ್ಕಾರನಾಮಧೃಕ್ |
ವೇತಾಲಃ ಶಿಶುನೇವೇಹ ಮಿಥ್ಯೈವ ಪರಿಕಲ್ಪಿತಃ ||೩||

ಏಕಸ್ಮಿನ್ನೇವ ಸರ್ವಸ್ಮಿನ್ ಸ್ಥಿತೇ ಪರಮವಸ್ತುನಿ |
ಕುತಃ ಕೋಽಯಮಹಂ ನಾಮ ಕಥಂ ನಾಮ ಕಿಲೋದಿತಃ ||೪||

ವಸ್ತುತೋ ನಾಸ್ತ್ಯಹಙ್ಕಾರಃ ಪರಮಾತ್ಮನ್ಯಭೇದಿನಿ |
ಅಸಮ್ಯಗ್ದರ್ಶನಾನ್ಮಾರ್ಗೀ ಸರಿತ್ ತೀವ್ರಾತಪೇ ಯಥಾ ||೫||

ಮನೋಮಣಿಮಹಾರಮ್ಭಃ ಸಂಸಾರಇತಿ ಲಕ್ಷ್ಯತೇ |
ಆತ್ಮನಾತ್ಮಾನಮಾಶ್ರಿತ್ಯ ಸ್ಫುರತ್ಯನ್ತರ್ಯಥಾಮ್ಭಸಾ ||೬||

ವುದು. ಇದಿರಲಿ; ಸಂಕಲ್ಪಿತನಾದ ನಶ್ವರಾತ್ಮನು, ಜಡರೂಪನೆ? ಅಥವಾ ಚಿದ್ರೂಪನೆ? ಜಡನೆನ್ನುವಪಕ್ಷದಲ್ಲಿ, ಇವನು ಶುದ್ಧಚಿದ್ರೂಪನಾದ ಪರಮಾತ್ಮನ ತಾದಾತ್ಮ್ಯವನ್ನು ಹೊಂದುವುದು ಅಸಂಭವವಾಗುವುದು. ಚಿದ್ರೂಪನೆನ್ನುವಪಕ್ಷದಲ್ಲಿ, ಸ್ವಯಂ ಚೈತನ್ಯವಾಗಿರುವ ಪದಾರ್ಥವು ಮತ್ತೊಬ್ಬರ ಸಂಕಲ್ಪಕ್ಕೆ ವಿಷಯವಾಗುವುದೆಂಬುದು ಅನುಪಪನ್ನವಲ್ಲವೆ! ಪೂಜ್ಯರೆ! ಹೀಗೆಲ್ಲ ನನಗೆ ಸಂಶಯವುಂಟಾಗಿರುವುದರಿಂದ, ತಾವು ಇದನ್ನು ಸರಿಯಾಗಿ ಪರಿಹರಿಸಬೇಕು ||೧||

ಶ್ರೀವಸಿಷ್ಠರು ಸಮಾಧಾನ ಹೇಳುವರು:—

ವತ್ಸ! ರಾಮ! ಆತ್ಮನು ಅವಿದ್ಯೆಯಿಂದ ಉಪಾಧಿಯುಕ್ತನಾಗುವನೆಂಬುದು ಮೊದಲೇ ಗೊತ್ತಿದೆಯಷ್ಟೆ! ಈ ಅವಿದ್ಯೋಪಾಧಿಯುಕ್ತನಾದ ಆತ್ಮನೇ, ಇಲ್ಲಿ ಅಸತ್ತೆಂಬ ಶಬ್ದದಿಂದ ಹೇಳಲ್ಪಡುವನು. ಇವನು, ಸಿಂಹವ್ಯಾಘ್ರಾದಿ ಪ್ರಾಣಿಗಳ ಅಹಂಭಾವವಾಸನಾವಾಸಿತನಾಗಿ, ಆಯಾಅಹಂಕಾರನಾಮಧಾರಿಯಾದ ನಶ್ವರಾತ್ಮನನ್ನು, ಬಾಲಕನು ಬೇತಾಳವನ್ನು ಸಂಕಲ್ಪಿಸುವಂತೆ, ಅಸತ್ಯವಾಗಿಯೇ ಪರಿಕಲ್ಪಿಸಿಕೊಳ್ಳುವನು. ವಸ್ತುತತ್ವವೀರೀತಿಯಾಗಿರುವುದರಿಂದ, ನೀನು ಹೇಳಿದ ದೋಷಕ್ಕೆ ಇಲ್ಲಿ ಪ್ರಸಕ್ತಿಯೇ ಇಲ್ಲವೆಂದು ತಿಳಿಯಬೇಕು ||೩||

ಪರಾತ್ಪರವಾದ ಒಂದೇಒಂದು ವಸ್ತುವು ಸರ್ವತ್ರ ಪರಿಪೂರ್ಣವಾಗಿರುವಾಗ, ಅಹಂಕಾರವೆಂಬುದು ಎಲ್ಲಿಂದ ಬಂದಿತು? ಅದಾವುದು? ಅದು ಹೇಗೆ ಹುಟ್ಟಿತು? ||೪||

ಸರಿಯಾಗಿ ನೋಡದಿರುವುದರಿಂದ ಚಂಡಾತಪದಲ್ಲಿ ಮೃಗತೃಷ್ಣಿಕಾಭ್ರಮ ಹುಟ್ಟುವಂತೆ, ಪರಮಾತ್ಮನಲ್ಲಿಯೂ ಅಜ್ಞಾನದಿಂದ ಅಹಂಕಾರಭ್ರಮೆ ಹುಟ್ಟುವುದೇ ಹೊರತು, ವಸ್ತುತ: ಯಾವವಿಧವಾದ ಭೇದವೂ ಇಲ್ಲದಿರುವ ಪರಮಾತ್ಮನಲ್ಲಿ ಅಹಂಕಾರವಿಲ್ಲವೇ ಇಲ್ಲ ||೫||

ಮನಸ್ಸೆಂಬುದೇ ಒಂದು ಚಿಂತಾಮಣಿಯು. ಇದರ ಮಹಾ ಕಾರ್ಯಾರಂಭ ವೈಚಿತ್ರ್ಯವೇ ಸಂಸಾರವೆಂದು ಹೇಳಲ್ಪಡುವುದು. ತಾವನ್ಮಾತ್ರೇಣ ಈ ಮನಸ್ಸು ಸ್ವತಂತ್ರವಾಗಿ ವ್ಯಹರಿಸುವುದೆಂದು ತಿಳಿಯಕೂಡದು; ಒಂದು ನೀರು ಮತ್ತೊಂದು ನೀರಿನೊಡನೆ ಸೇರಿಕೊಳ್ಳುವಂತೆ, ಈ ಮನಸ್ಸೂ ಆತ್ಮನೊಳಗೆ ಎಡೆಬಿಡದೆ ಸೇರಿಕೊಂಡು, ನಾನಾವಿಧವಾಗಿ ಸ್ಫುರಣೆಹೊಂದುತಿರುವುದು||

ಅಸಮ್ಯಗ್ದರ್ಶನಂ ತೇನ ತ್ಯಜ ರಾಮ ನಿರಾಶ್ರಯಮ್ ।
ಸಾಶ್ರಯಂ ಸತ್ಯಮಾನನ್ದಿ ಸಮ್ಯಗ್ದರ್ಶನಮಾಶ್ರಯ ॥೭॥
ಧಿಯಾ ವಿಚಾರಧರ್ಮಿಣ್ಯಾ ಮೋಹಸಂರಮ್ಭಹೀನಯಾ ।
ವಿಚಾರಯಾಧುನಾ ಸತ್ಯಂ ಅಸತ್ಯಂ ಸಮ್ಪರಿತ್ಯಜ ॥೮॥
ಅಬದ್ಧೋ ಬದ್ಧ ಇತ್ಯುಕ್ತ್ವಾ ಕಿಂ ಶೋಚಸಿ ಮುಧೈವ ಹಿ ।
ಅನನ್ತಸ್ಯಾತ್ಮತತ್ತ್ವಸ್ಯ ಕಿಂ ಕಥಂ ಕೇನ ಬಧ್ಯತೇ ॥೯॥
ನಾನಾನಾನಾತ್ವಕಲನಾತ್ವವಿಭಿನ್ನಮಹಾತ್ಮನಿ ।
ಸರ್ವಸ್ಮಿನ್ ಬ್ರಹ್ಮತತ್ತ್ವೇಽಸ್ಮಿನ್ ಕಿಂ ಬದ್ಧಂ ಕಿಂ ವಿಮುಚ್ಯತೇ ॥೧೦॥
ಅನಾರ್ತೋಽಪ್ಯಾರ್ತಿಮಾನ್ ಭಾತಿ ಛಿನ್ನೇಽಙ್ಗೇ ಕಿಞ್ಚ ತಾಮ್ಯತಿ ।
ಭೇದಾಭೇದವಿಕಾರಾರ್ತಿಃ ಕಾಚಿನ್ನಾತ್ಮನಿ ವಿದ್ಯತೇ ॥೧೧॥
ದೇಹೇ ನಷ್ಟೇ ಕ್ಷತೇ ಕ್ಷೀಣೇ ಕಾತ್ಮನಃ ಕ್ಷತಿರಾಗತಾ ।
ಭಸ್ತ್ರಾಯಾಂ ಪರಿದಗ್ಧಾಯಾಂ ಭಸ್ತ್ರಾಪೂರೋ ನ ನಶ್ಯತಿ ॥೧೨॥
ದೇಹಃ ಪತತು ಮೋದೇತು ಕಾ ನಃ ಕ್ಷತಿರುಪಸ್ಥಿತಾ ।

ಆದುಕಾರಣ, ಅಯ್ಯಾರಾಮ! ಅಸದ್ವಿಷಯವಾದ ಈ ಭ್ರಮೆಯನ್ನು ಬಿಟ್ಟುಬಿಡು; ಸತ್ಯವಾದ ವಿಷಯವುಳ್ಳುದಾಗಿ ಸ್ವಯಂ ಸತ್ಯವಾಗಿ ಆನಂದಮಯವಾಗಿರುವ ಉತ್ತಮವಾದ ಜ್ಞಾನವನ್ನು ಆಶ್ರಯಿಸು ॥೭॥

ವಿಚಾರಯುಕ್ತವಾಗಿ ಅಜ್ಞಾನಸಂಭ್ರಮವಿಯುಕ್ತವಾಗಿರುವ ಬುದ್ಧಿಯಿಂದ, ಈಗ ಸತ್ಯವಾದ ವಸ್ತುವನ್ನು ವಿಚಾರಮಾಡು; ಅಸತ್ಯವಾದುದನ್ನು ಸುತರಾಂ ಪರಿಹರಿಸು ॥೮॥

ನೀನು ಸ್ವರೂಪತಃ ಬದ್ಧನಲ್ಲದಿದ್ದರೂ, ಬದ್ಧನಾಗಿರುವೆನೆಂದು ಹೇಳಿಕೊಂಡು ಏತಕ್ಕೆ ವ್ಯರ್ಥವಾಗಿ ಶೋಕಿಸುವೆ? ಅನಂತವಾಗಿರುವ ಆತ್ಮಪದಾರ್ಥದ ಯಾವ ಭಾಗವು ಯಾವುದರಿಂದ ಹೇಗೆ ಬಂಧಿಸಲ್ಪಡುವುದು ?॥೯॥

ಭೇದಾಭೇದಜ್ಞಾನಗಳೆಲ್ಲವೂ ಬಾಧಿತಗಳಾಗಿ ಬ್ರಹ್ಮತತ್ವವೊಂದೇ ಅವಶಿಷ್ಟವಾಗಿರುವಾಗ, ಬದ್ಧವಾದುದುದಾವುದು ?— ಮುಕ್ತವಾಗುವುದಾವುದು ॥೧೦॥

ದೇಹವು, ವಸ್ತುತಃ ಆರ್ತಿಶೂನ್ಯವಾಗಿದ್ದರೂ ಆರ್ತಿಯುಳ್ಳುದರಂತೆ ತೋರುವುದು; ತನ್ನ ಅವಯವಗಳನ್ನು ಕತ್ತರಿಸಿದರೆ, ಆಗ ತಾನು ಸಂಕಟಪಡುವಂತೆ ತೋರುವುದು. ಇದೂ ಕೇವಲ ಮಿಥ್ಯಾಜ್ಞಾನವೇ ಹೊರತು, ತತ್ವವಲ್ಲ. ಹೀಗಿರುವುದರಿಂದ, ಸಮಸ್ತಭೇದಾಭೇದವಿಕಲ್ಪರಹಿತನಾಗಿರುವ ಆತ್ಮನಲ್ಲಿ, ಯಾವವಿಧವಾದ ಆರ್ತಿಯೂ ಎಂದಿಗೂ ಸ್ವಲ್ಪವೂ ಇಲ್ಲವೆಂದು ತಿಳಿಯಬೇಕು ॥೧೧॥

ಈ ದೇಹವು ನಷ್ಟವಾದರೂ, ಅಥವಾ ಗಾಯವಡೆದರೂ, ಅಥವಾ ಕ್ಷಯಹೊಂದಿಬಿಟ್ಟರೂ, ಆತ್ಮನಿಗುಂಟಾದ ಹಾನಿಯಾವುದು? ಒಂದು ಚೀಲವು ಸುಡಲ್ಪಟ್ಟರೆ, ಅದನ್ನು ತುಂಬಿಕೊಂಡಿದ್ದ ವಾಯುವೆಂದಿಗೂ ನಾಶವಾಗುವುದಿಲ್ಲವಷ್ಟೆ! ॥೧೨॥

ಈ ದೇಹವು ಹಾಳಾಗಿಹೋಗಲಿ; ಅಥವಾ ಉದಯಿಸಲಿ. ತಾವನ್ಮಾತ್ರೇಣ ನಮಗುಂ

ಕೋ ನಷ್ಟಃ ಪ್ರಕ್ಷತೇ ಪುಷ್ಪೇ ಆಮೋದೋ ವ್ಯೋಮಸಂಶ್ರಯಃ ॥೧೩॥
ಆಪತನ್ತು ವಪುಃಪದ್ಮೇ ಸುಖದುಃಖಹಿಮಶ್ರಿಯಃ ।
ಆಕಾಶೋಡ್ಡಯನಾಳೀನಾಂ ಕಾ ನಃ ಕ್ಷತಿರುಪಸ್ಥಿತಾ ॥೧೪॥
ದೇಹಃ ಪತತು ಮೋದೇತು ಯಾತು ವಾ ಗಗನಾನ್ತರಮ್ ।
ತದ್ವಿಲಕ್ಷಣರೂಪಸ್ಯ ಕಾಸೌ ಭವತಿ ಮೇ ಕ್ಷತಿಃ ॥೧೫॥
ಯಥಾ ಪಯೋದಮರುತೋಃ ಯಥಾ ಷಟ್ಪದಪದ್ಮಯೋಃ ।
ತಥಾ ರಾಘವ ಸಮ್ಬನ್ಧಃ ತ್ವಚ್ಛರೀರತ್ವದಾತ್ಮನೋಃ ॥೧೬॥
ಮನೋ ರಾಮ ಶರೀರಂ ಹಿ ಜಗತಃ ಸಕಲಸ್ಯ ಚ ।
ಆದ್ಯಾ ಶಕ್ತಿಶ್ಚಿದಧ್ಯಾತ್ಮಾ ನ ನಶ್ಯತಿ ಕದಾಚನ ॥೧೭॥
ಯೋಽಸಾವಾತ್ಮಾ ಮಹಾಪ್ರಾಜ್ಞ ನ ನಶ್ಯತಿ ನ ಗಚ್ಛತಿ ।
ನ ನಶ್ಯತಿ ಕದಾಚಿಚ್ಚ ಕಿಂ ಮುಧಾ ಪರಿತಪ್ಯಸೇ ॥೧೮॥
ವಿಶೀರ್ಣೇಽಭ್ರೇ ಯಥಾ ವಾತಃ ಶುಷ್ಕೇಽಬ್ಜೇ ಷಟ್ಪದೋ ಯಥಾ ।

ಟಾದ ಹಾನಿಯೇನು? ಹೂವು ಹೋದಮಾತ್ರದಿಂದಲೇ, ಆಕಾಶದಲ್ಲಿ ವ್ಯಾಪಿಸಿಕೊಂಡಿದ್ದ ಅದರ ಮರಿಮಳವು ನಷ್ಟವಾಗುವುದೆ? ॥೧೩॥

ಈ ದೇಹವೆಂಬ ಕಮಲದಮೇಲೆ, ಸುಖದುಃಖಗಳೆಂಬ ಹಿಮಸಂತತಿಗಳು ಯಥೇಚ್ಛವಾಗಿ ಬೀಳಲಿ. ಆಕಾಶದಲ್ಲಿ ಹಾರಿಹೋತಕ್ಕ ಭ್ರಮರಗಳಾಗಿರುವ ನಮಗೆ ಯಾವ ಹಾನಿಯುಂಟಾಗುವುದು? ॥೧೪॥

ಈ ದೇಹವು ಪಾತಾಳಕ್ಕೆ ಬೇಕಾದರೂ ಬೀಳಲಿ; ಅಥವಾ ಅಲ್ಲಿಂದ ಏಳಲಿ; ಇಲ್ಲದಿದ್ದರೆ ಆಕಾಶಮಧ್ಯಕ್ಕೆ ಬೇಕಾದರೂ ಹೋಗಲಿ. ಈ ದೇಹವಿಲಕ್ಷಣರೂಪನಾಗಿರುವ ನನಗೆ ಉಂಟಾಗುವ ಹಾನಿಯಾವುದು? ॥೧೫॥

ಅಯ್ಯಾ! ರಾಮ! ಹೀಗೆ ಶರೀರಕ್ಕೂ ಆತ್ಮನಿಗೂ ಯಾವ ಸಂಬಂಧವೂ ಇಲ್ಲವೇ ಇಲ್ಲ; ಒಂದುವೇಳೆ ಯಾವುದೋ ಒಂದು ಸಂಬಂಧವಿರುವುದೆಂದು ನೀನು ಹೇಳಿದರೂ, ಅದು ಕಾರು ಕಾರಿಯಲ್ಲ. ಮೇಘಕ್ಕೂ ವಾಯುವಿಗೂ ಹೇಗೆ ಸಂಬಂಧವಿರುವುದೋ, ಭ್ರಮರಕ್ಕೂ ಕಮಲಕ್ಕೂ ಹೇಗೆ ಸಂಬಂಧವಿರುವುದೋ, ಹಾಗೆ ನಿನ್ನ ಶರೀರಕ್ಕೂ ನಿನ್ನ ಆತ್ಮನಿಗೂ ಸುತರಾಂ ಲೇಪಶೂನ್ಯವಾಗಿರುವ ಸಂಬಂಧವಿರುವುದೆಂದು ತಿಳಿ ॥೧೬॥

ಅಯ್ಯಾ! ರಾಮ! ಸಕಲ ಜಗತ್ತಿಗೂ ಮನಸ್ಸೇ ಶರೀರವಾಗಿರುವುದು. ಹೀಗಿರುವುದರಿಂದ, ಶರೀರಾದಿಗಳಿಗೆ ನಾಶವಾದಾಗಲೂ ಮನಸ್ಸು ಇದ್ದೇ ಇರುವಕಾರಣ, ಶರೀರಾದಿಗಳಿಗೆ ನಾಶವುಂಟಾದಮಾತ್ರದಿಂದಲೇ ಶೋಕಪಡುವುದು ಯುಕ್ತವಾಗಲಾರದು. ಈ ಮನಸ್ಸು ಜಗತ್ತಿಗೆ ಆದಿಕಾರಣಶಕ್ತಿಭೂತವಾದುದು. ಚಿದಾತ್ಮನಾದರೋ, ಆ ಮನಸ್ಸಿಗಿಂತಲೂ ಮೇಲಿರತಕ್ಕವನು. ಇಂಥವನು ಎಂದಿಗೂ ನಾಶಹೊಂದುವ ಸಂಭವವೇ ಇಲ್ಲವಷ್ಟೆ! ॥೧೭॥

ಎಲೈ ಮಹಾಪ್ರಾಜ್ಞನೆ! ಈ ಆತ್ಮವಾವುದುಂಟೋ, ಅದು—ಎಂದಿಗೂ ನಾಶಹೊಂದುವುದೂ ಇಲ್ಲ; ಎಲ್ಲಿಗೂ ಹೋಗುವುದೂ ಇಲ್ಲ. ನೀನು ವೃಥಾ ಏತಕ್ಕೆ ಪರಿತಾಪಪಡುವೆ? ॥೧೮॥

ಮೇಘವು ಚದರಿಹೋದಾಗ ವಾಯು ಹೇಗೆ ಅಖಂಡವಾದ ಆಕಾಶದಲ್ಲಿ ಸೇರಿಬಿಡುವುದೊ,

ಯಾತ್ಯನನ್ತಪದಂ ವ್ಯೋಮ ತಥಾತ್ಮಾ ದೇಹಸಂಕ್ಷಯೇ ‖೧೯‖
ಸಂಸಾರೇಸ್ಮಿನ್ ವಿಹರತೋ ಮನೋಪಿ ಹಿ ನ ನಶ್ಯತಿ ।
ಜ್ಞಾನಾಗ್ನಿನಾ ವಿನಾ ಜನ್ತೋಃ ಆತ್ಮನಾಶೇ ತು ಕಾ ಕಥಾ ‖೨೦‖
ಯಃ ಕುಣ್ಡಬದರನ್ಯಾಯೋ ಯೋ ಘಟಾಕಾಶಯೋಃ ಕ್ರಮಃ ।
ಸ್ಥಿತಿರ್ದೇಹಾತ್ಮನೋಃ ಸೈವ ಸವಿನಾಶಾವಿನಾಶಯೋಃ ‖೨೧‖
ಬದರಂ ಹಸ್ತಮಾಯಾತಿ ಯಥಾ ಸ್ಫುಟತಿ ಕುಣ್ಡಕೇ ।
ಆತ್ಮಾ ಗಗನಮಾಯಾತಿ ತಥಾ ಚಲತಿ ದೇಹಕೇ ‖೨೨‖
ಕುಮ್ಭೇ ಗಚ್ಛತ್ಯಕುಮ್ಭತ್ವಂ ಕುಮ್ಭಾಕಾಶೋ ಯಥಾಮ್ಬರೇ ।
ತಿಷ್ಠತ್ಯೇವಮಯಂ ಕ್ಷೀಣೇ ದೇಹೇ ದೇಹೀ ನಿರಾಮಯಃ ‖೨೩‖
ಮನೋದೇಹೋ ಹಿ ಜನ್ತೂನಾಂ ದೇಶಕಾಲತಿರೋಹಿತಃ ।
ಮುಹುರ್ಮೃತಿಪಟಾಚ್ಛನ್ನಃ ಶಠೇ ಕಿಂ ಪರಿದೇವನಾ ‖೨೪‖
ದೇಶಕಾಲತಿರೋಧಾನೇ ಮೂಢೋಪಿ ಮರಣೇ ನರಃ ।

ಕಮಲವು ಒಣಗಿಹೋದಾಗ ಭ್ರಮರವು ಹೇಗೆ ವಿಶಾಲವಾದ ಆಕಾಶಕ್ಕೆ ಹೋಗಿಬಿಡುವುದೋ, ಹಾಗೆ ದೇಹಕ್ಷಯವಾದಾಗ ಆತ್ಮನೂ ಅಖಂಡಚಿದಾಕಾಶದಲ್ಲಿ ಲೀನನಾಗುವನು ‖೧೯‖

ಆದರೆ, ಎಲ್ಲಕ್ಕೂ ಜ್ಞಾನವವಶ್ಯವಾಗಿ ಬೇಕಾಗಿರುವುದು. ಈ ಸಂಸಾರಮಾರ್ಗದಲ್ಲಿ ಸಂಚರಿಸುವ ಜಂತುವಿಗೆ, ಜ್ಞಾನರೂಪವಾದ ಅಗ್ನಿಯಿಲ್ಲದಿದ್ದಗೆ, ಮನಸ್ಸೂ ಕೂಡ ನಾಶಹೊಂದುವುದಿಲ್ಲ. ಹೀಗಿರುವಾಗ, ಜೀವಾತ್ಮಭೇದಜ್ಞಾನ ನಾಶವಾಗುವವಿಷಯದಲ್ಲಿ ಹೇಳುವುದೇನು? ‖೨೦‖

ಒಂದು ಸಣ್ಣ ಕುಡಿಕೆಯಲ್ಲಿ ಒಂದು ಎಲಚಿಯ ಹಣ್ಣನ್ನಿಟ್ಟು ಆ ಕುಡಿಕೆಯನ್ನು ಒಡೆದುಹಾಕಿದರೆ ಅದರೊಳಗಿರುವ ಎಲಚಿಯ ಹಣ್ಣು ಹೇಗೆ ಇದ್ದೇ ಇರುವುದೋ, ಒಂದು ಗಡಿಗೆಯನ್ನು ಒಡೆದುಹಾಕಿದರೆ ಅದರೊಳಗಿದ್ದ ಆಕಾಶವು ನಷ್ಟವಾಗದೆ ಹೇಗೆ ಇರುವುದೋ, ಹಾಗೆ ವಿನಾಶಕ್ಕಧೀನವಾದ ದೇಹವು ನಷ್ಟವಾದರೂ ನಾಶಶೂನ್ಯನಾದ ಆತ್ಮನು ಇದ್ದೇ ಇರುವನೆಂದು ತಿಳಿಯಬೇಕು ‖೨೧‖

ಕುಡಿಕೆಯೊಡೆದುಹೋದಾಗ ಎಲಚಿಯ ಹಣ್ಣು ಹೇಗೆ ಕೈಯನ್ನು ಸೇರುವುದೋ, ಹಾಗೆ–ದೇಹವು ನಷ್ಟವಾದಾಗ ಆತ್ಮನು ವಾಸನಾಕಾಶದಲ್ಲಿ ಸೇರಿಬಿಡುವನು ‖೨೨‖

ಘಟವು (ಗಡಿಗೆ) ನಾಶಹೊಂದಲಾಗಿ ಅದರೊಳಗಿದ್ದ ಆಕಾಶವು ನಾಶವಿಲ್ಲದೆ ಹೇಗೆ ಮಹಾಕಾಶದಲ್ಲಿ ಸೇರಿಹೋಗುವುದೋ, ಹಾಗೆ—ಈ ದೇಹವು ಕ್ಷೀಣವಾದಾಗ ಆತ್ಮನು ನಾಶರಹಿತರಾಗಿಯೇ ಇರುವನು ‖೨೩‖

ಪ್ರಾಣಿಗಳ ಈ ಮನೋರೂಪದೇಹವು, ಪದೇಪದೇ ದೇಶಕಾಲಗಳಿಂದ ಅಂತರ್ಹಿತವಾಗಿ, ಮರಣವೆಂಬ ವಸ್ತ್ರದಿಂದ ಆಚ್ಛಾದಿತವಾಗಿ ಬಿಡುವುದು. ಇಂತಹ ವಂಚಕನಾದ ಈ ದೇಹದಲ್ಲಿ ಶೋಕವೇನು? ‖೨೪‖

ಹೀಗೆ ದೇಶಕಾಲಾನುಗುಣವಾಗಿ ಮರೆಯಾಗುವುದೇ ಮರಣವೆನ್ನಿಸಿಕೊಳ್ಳುವುದು. ಅಯ್ಯಾ! ಮಹಾಬಾಹುವಾದ ರಾಮನೆ! ಇಂತಹ ಮರಣವಿಷಯದಲ್ಲಿ, ಮೂಢನಾದ ಮನು

ಕಿಂ ಬಿಭೇತಿ ಮಹಾಬಾಹೋ ನೇಹ ಪಶ್ಯತಿ ಕಶ್ಚನ ॥೨೫॥
ಅತಸ್ತ್ವಂ ವಾಸನಾಂ ರಾಮ ಮಿಥ್ಯೈವಾಹಮಿತಿ ಸ್ಥಿತಾಮ್ ।
ತ್ಯಜ ಪಕ್ಷೀಶ್ವರೋ ವ್ಯೋಮಗಮನೋತ್ಕ ಇವಾಣ್ಡಕಮ್ ॥೨೬॥
ಏಷಾ ಹಿ ಮಾನಸೀ ಶಕ್ತಿಃ ಇಷ್ಟಾನಿಷ್ಟನಿಬನ್ಧನೀ ।
ಅನಯೈವ ಮುಧಾ ಭ್ರಾನ್ತ್ಯಾ ಸ್ವಪ್ನವತ್ ಪರಿಕಲ್ಪನಾ ॥೨೭॥
ಅವಿದ್ಯೈಷಾ ದುರನ್ತೈಷಾ ದುಃಖಾಯೈಷಾ ವಿವರ್ಧತೇ ।
ಅಪರಿಜ್ಞಾಯಮಾನೈಷಾ ತನೋತೀದಮಸನ್ಮಯಮ್ ॥೨೮॥
ಏಷಾ ತುಚ್ಛವದಾಕಾಶಂ ತುಷಾರಮಲಿನಂ ಯಥಾ ।
ಪರಿಪಶ್ಯತಿ ವಿಭ್ರಾನ್ತಾ ಸ್ವರೂಪಸ್ಯ ಸ್ವಭಾವತಃ ॥೨೯॥
ಅಸದೇವೇದಮಾರಬ್ಧಮನ್ಥರಂ ಸದಿವೋತ್ಥಿತಮ್ ।
ಕಲ್ಪಿತಂ ಜಗದಾಭೋಗಿ ದೀರ್ಘಸ್ವಪ್ನ ಇವೈತಯಾ ॥೩೦॥
ಭಾವನಾಮಾತ್ರ ಏವಾಸ್ಯಾಃ ಸ್ವರೂಪಂ ಕರ್ತೃತಾಂ ಗತಮ್ ।

ಷ್ಯನೂ ಹೆದರುವುದಿಲ್ಲ. ಆತ್ಮನಿಗಾದರೋ, ನಾಶವನ್ನು ಕಂಡವನಾರೂ ಈ ಪ್ರಪಂಚದಲ್ಲಿಲ್ಲ ॥

ಅದುಕಾರಣ, ಅಯ್ಯಾ! ರಾಮ! ಮೊಟ್ಟೆಯೊಳಗೆ ಬೆಳೆಯುತಿದ್ದ ಪಕ್ಷಿಯು ರಕ್ಕೆಬಲಿತು ಹಾರಿಹೋಗಬೇಕೆಂದು ಕುತೂಹಲ ಹುಟ್ಟಿದಾಗ ಆ ಮೊಟ್ಟೆಯನ್ನು ಬಿಟ್ಟುಬಿಡುವಂತೆ, ನೀನು ಬಹುಕಾಲರೂಢವಾಗಿರುವ 'ಅಹಂ' ಎಂಬ ವಾಸನೆಯನ್ನು ಬಿಟ್ಟುಬಿಡು ॥೨೬॥

ಈ ಮನಶ್ಶಕ್ತಿಯೇ ಇಷ್ಟದಲ್ಲಿಯೂ ಅನಿಷ್ಟದಲ್ಲಿಯೂ ನಮ್ಮನ್ನು ಕಟ್ಟಿಹಾಕುವುದು. ಈ ವ್ಯರ್ಥವಾದ ಭ್ರಾಂತಿಯಿಂದಲೇ ಸ್ವಪ್ನದಂತೆ ನಾನಾವಿಧ ಕಲ್ಪನೆಗಳುಂಟಾಗುವುವು ॥೨೭॥

ಈ ಮಾನಸಶಕ್ತಿಯು—ಅವಿದ್ಯಾವಿಲಾಸರೂಪವಾಗಿರುವುದರಿಂದ ಅವಿದ್ಯೆಯೆಂದೇ ಹೇಳಲ್ಪಡುವುದು; ಇದು ಪರಿಣಾಮದಲ್ಲಿ ಕೇವಲ ದುಷ್ಟವಾದುದು; ಇದು ದುಃಖವನ್ನುಂಟುಮಾಡುವುದಕ್ಕಾಗಿಯೇ ಅಭಿವರ್ಧಿಸುವುದು. ಇದು ತತ್ವತಃ ತಿಳಿಯಲ್ಪಡದಿರುವಕಾರಣ ಈ ಅಸತ್ಯಭೂತವಾದ ಪ್ರಪಂಚಭ್ರಾಂತಿಯನ್ನುಂಟುಮಾಡುವುದು ॥೨೮॥

ಈ ಮನಶ್ಶಕ್ತಿಯು, ನಿರ್ಮಲವಾದ ಆಕಾಶವನ್ನು ನೋಡಿ, ಅದು ಮಂಜಿನಿಂದ ಮಲಿನವಾಗಿ ಕೆಟ್ಟುಹೋಗುವಂತೆ ತಿಳಿದುಕೊಳ್ಳುವುದು. (ನಿಷ್ಕಳಂಕನಾದ ಆತ್ಮನನ್ನು ಸಕಳಂಕನೆಂದು ತಿಳಿಯುವುದು.) ಇದು ಈ ಮನಶ್ಶಕ್ತಿಯ ಸ್ವಭಾವವಾಗಿರುವುದು ॥೨೯॥

ವಸ್ತುತಃ ಈ ವಿಶಾಲವಾದ ಜಗತ್ತು ಅಸತ್ಯವಾದುದೇಯೆ. ಇದು ನಾನಾವಿಧ ಕಾರ್ಯಗಳಿಂದ ಪರಿಪೂರ್ಣವಾಗಿರುವುದು. ಇದು ಅಸತ್ಯವಾಗಿದ್ದರೂ ಸತ್ಯದಂತೆ ಭಾಸಿಸುತ್ತಿರುವುದು. ಇಂತಹ ದೀರ್ಘಸ್ವಪ್ನಸದೃಶವಾದ ಜಗತ್ತು, ಈ ಮನಶ್ಶಕ್ತಿಯಿಂದ ಕಲ್ಪಿಸಲ್ಪಟ್ಟಿರುವುದು ॥೩೦॥

'ಮನೋವ್ಯಾಪಾರಗಳು ಸರ್ವರಿಗೂ ಪ್ರತ್ಯಕ್ಷವಾಗುತಿರುವುದರಿಂದ, ಈ ಮನಸ್ಸು ಮಾಡುವ ಜಗನ್ನಿರ್ಮಾಣವೂ ಏತಕ್ಕಾಗಿ ಸರ್ವರಿಗೂ ಅನುಭವಗೋಚರವಾಗಬಾರದು?' ಎಂದು ಕೇಳಿದರೆ,—ಈ ಮನಸ್ಸಿನ ಸ್ವರೂಪವು, ಜಗತ್ತಿನ ಆಕಾರವನ್ನು ಭಾವಿಸುವುದರಲ್ಲಿ ಮಾತ್ರವೇ ಕರ್ತೃವಲ್ಲದೆ, ನಿರ್ಮಾಣಾದಿಗಳಲ್ಲಿ ಕರ್ತೃವಲ್ಲ. ಮಿಥ್ಯಾಪದಾರ್ಥಗಳಿಗೆ ದರ್ಶನವ್ಯತಿರಿಕ್ತವಾದ ನಿರ್ಮಾಣವೇ ಅಪ್ರಸಿದ್ಧವಲ್ಲವೆ! ವ್ಯಾಧಿಪೀಡಿತವಾದ ನೇತ್ರವು, ಆಕಾಶದಲ್ಲಿ ಸೂರ್ಯ

ಜಗನ್ನಾವಮಾವಿಲಂ ಚಕ್ಷುಃ ವ್ಯೋಮ್ನಿ ಬಿಮ್ಬರುಚಾಮಿವ ॥೨೧॥
ಲಯಮಸ್ಯಾಃ ಸ್ವರೂಪಂ ತ್ವಂ ನಯ ರಾಮ ವಿಚಾರಣಾತ್ ।
ಯಥಾ ಹಿಮಶಿಲಾಯಾಸ್ತು ತಪನಾದ್ದಿವಸಾಧಿಪಃ ॥೨೨॥
ಹಿಮಾಭಾವಾರ್ಥಿನೋಽರ್ಕಸ್ಯ ಸ್ವೋದಯೇನೇಪ್ಸಿತಂ ಯಥಾ ।
ಸಿಧ್ಯತ್ಯೇವಂ ವಿಚಾರೇಣ ಮನೋನಾಶಾರ್ಥಿನೋಽರ್ಥಿತಮ್ ॥೨೩॥
ಅವಿದ್ಯಾಽಸಮ್ಪ್ರಬುದ್ಧಾ ಹಿ ವಿತತಾನರ್ಥದುರ್ಗಮಾ ।
ನಾನೇದ್ರಜಾಲಕಲನಾಂ ಶಾಮ್ಬರೋ ಹೇಮ ವರ್ಷತಿ ॥೨೪॥
ಸ್ವವಿನಾಶಕ್ರಿಯಾಂ ಚೈತಾಂ ಮನಏವ ಕರೋತ್ಯಲಮ್ ।
ಮನೋ ಹ್ಯಾತ್ಮವಧಂ ನಾಮ ನಾಟಕಂ ಪರಿನೃತ್ಯತಿ ॥೨೫॥
ಆತ್ಮಾನಮೀಕ್ಷತೇ ಚೇತಃ ಸ್ವವಿನಾಶಾಯ ಕೇವಲಮ್ ।
ನ ಹಿ ಜಾನಾತಿ ದುರ್ಬುದ್ಧಿಃ ವಿನಾಶಂ ಪ್ರತ್ಯುಪಸ್ಥಿತಮ್ ॥೨೬॥
ಸ್ವಯಂ ಸಙ್ಕಲ್ಪಮಾತ್ರೇಣ ಸ್ವವಿನಾಶದೃಶಾಮಿದಮ್ ।

ಚಂದ್ರಾದಿಕಿರಣಗಳನ್ನು ನೋಡಿ, ಕೇಶೋಂಡ್ರಕಾದಿಗಳಿರುವಂತೆ ತಿಳಿದುಕೊಳ್ಳುವುದಲ್ಲವೆ! ಆಗ ನೇತ್ರವು ಕೇಶೋಂಡ್ರಕಾದಿಗಳನ್ನು ವಸ್ತುತಃ ನಿರ್ಮಾಣಮಾಡುವುದಿಲ್ಲವಷ್ಟೆ! ಆ ವಿಧವಾದ ಭಾವನೆಯನ್ನು ಮಾತ್ರ ಮಾಡುವುದಲ್ಲವೆ! ಈರೀತಿಯಾಗಿಯೇ, ಮನಸ್ಸು ಪ್ರಪಂಚಭಾವನಾ ಮಾತ್ರ ಕರ್ತೃವಲ್ಲದೆ, ಪ್ರಪಂಚನಿರ್ಮಾಣಕರ್ತೃವಲ್ಲವೆಂದು ತಿಳಿಯಬೇಕು ॥೨೧॥

ವತ್ಸ! ರಾಮ! ಸೂರ್ಯನು ಕಲ್ಲಿನಂತೆ ಗಟ್ಟಿಯಾಗಿರುವ ಹಿಮಕ್ಕೆ ತನ್ನ ಸಂತಾಪದಿಂದ ಲಯವನ್ನುಂಟುಮಾಡುವಂತೆ, ಅವಿಚಾರದಿಂದ ಉಂಟಾಗಿರುವ ಈ ಪ್ರಪಂಚಜ್ಞಾನಕ್ಕೆ, ವಿಚಾರದಿಂದ ಲಯವನ್ನುಂಟುಮಾಡು ॥೨೨॥

ಹಿಮವೆಲ್ಲ ಕಳೆದುಹೋಗಬೇಕೆಂದು ಅಪೇಕ್ಷಿಸುವ ಸೂರ್ಯನ ಇಷ್ಟಾರ್ಥವು ತನ್ನ ಉದಯದಿಂದ ಹೇಗೆ ಸಿದ್ಧಿಸುವುದೋ, ಹಾಗೆ ಮನೋನಾಶವನ್ನಪೇಕ್ಷಿಸತಕ್ಕವನ ಇಷ್ಟಾರ್ಥವೂ ವಿಚಾರದಿಂದ ಸಿದ್ಧಿವುದು ॥೨೩॥

'ವಿಶೇಷವಾಗಿ ಪ್ರಯತ್ನಪಟ್ಟು ವಿಚಾರಮೂಲಕವಾಗಿ ಒಂದು ಮನಸ್ಸನ್ನು ನಾಶಪಡಿಸಿದರೂ, ಅಮೇಲೆ ಮತ್ತೊಂದು ಮನಸ್ಸೂ ಅದರಿಂದ ಬಂಧಾದಿಗಳೂ ಹುಟ್ಟಬಹುದಲ್ಲವೆ!' ಎಂದು ಕೇಳಿದರೆ,—ಶಂಬರನೆಂಬ ರಾಕ್ಷಸನಿಂದ ಅಭಿವೃದ್ಧಿಹೊಂದಿದ ಇಂದ್ರಜಾಲವು ಅಂತರಿಕ್ಷದಲ್ಲಿ ಸುವರ್ಣವನ್ನು ಮಳೆಗರೆಯುವಂತೆ, ಆತ್ಮತತ್ವಜ್ಞಾನವಿಲ್ಲದಾಗ ಅವಿದ್ಯೆಯು ಅತಿವಿಸ್ತೃತವಾದ ಪ್ರಪಂಚವೆಂಬ ಅನರ್ಥದಿಂದ ವ್ಯಾಪ್ತವಾಗಿರುವುದಲ್ಲದೆ, ತತ್ವಜ್ಞಾನವಾದಾಗ ಇದು ಯಾವ ಕೆಲಸವನ್ನೂ ಮಾಡಲಾರದು ॥೨೪॥

ಅಂತು, ಮನಸ್ಸೇ ತನ್ನ ವಿನಾಶರೂಪವಾದ ಕರ್ಮವನ್ನೂ ಚೆನ್ನಾಗಿಮಾಡಿಕೊಳ್ಳುವುದು. ಈ ಮನಸ್ಸು, ಆತ್ಮವಧವೆಂಬ ನಾಟಕವನ್ನು ಅಭಿನಯಿಸುವುದು ॥೨೫॥

ಚೇತಸ್ಸು, ತನ್ನ ವಿನಾಶಕ್ಕಾಗಿಮಾತ್ರವೇ ಸ್ವಸ್ವರೂಪ ವಿಚಾರಮಾಡಿಕೊಳ್ಳುವುದು. ಪ್ರಪಂಚದಲ್ಲಿ, ದುರ್ಬುದ್ಧಿಯಾದವನು ತನಗೆ ಸಮೀಪಿಸಿರುವ ಕೇಡನ್ನೂ ಅರಿಯಲಾರನಲ್ಲವೆ? ॥೨೬॥

ಯಾರು ಮನೋನಾಶವಾಗಬೇಕೆಂದು ಅಪೇಕ್ಷಿಸುವರೋ, ಅವರಿಗೆ ಈ ಮನಸ್ಸು ಸ್ವಯಂ

ಮನಃ ಸಂಸಾಧಯತ್ಯಾಶು ಕ್ಲೇಶೋ ನಾತ್ರೋಽಪಯುಜ್ಯತೇ ॥೩೭॥
ಸ್ವಸಙ್ಕಲ್ಪವಿಕಲ್ಪಾಂಶಂ ವಿವೇಕೋಪಹಿತಂ ಮನಃ ।
ಸನ್ತ್ಯಜ್ಯ ರೂಪಮಾಭೋಗಿ ಕರೋತ್ಯಾತ್ಮಾವಬೋಧನಮ್ ॥೩೮॥
ಮಹೋದಯೋ ಮನೋನಾಶೋ ಮಹೋಚ್ಛೇದೋಽಸ್ಯ ತೂದಯಃ ।
ಮನೋನಾಶೇ ಪ್ರಯತ್ನಂ ತ್ವಂ ಕುರು ಮಾ ಮನಸೋ ಜವೇ ॥೩೯॥
ಅವಿರಳಸುಖದುಃಖವೃಕ್ಷಷಣ್ಡೇ ವಿಷಮಕೃತಾನ್ತಮಹೋರಗೇ ವನೇಽಸ್ಮಿನ್ ।
ಪ್ರಭುರಿದಮಖಿಲೇ ವಿವೇಕಹೀನಂ ಸುಭಗ ಮನೋ ಮಹದಾಪದೇಕಹೇತುಃ ॥
ಇತ್ಯುಕ್ತವತ್ಯಥ ಮುನೌ ದಿವಸೋ ಜಗಾಮ
ಸಾಯನ್ತನಾಯ ವಿಧಯೇಽಸ್ತಮಿನೋ ಜಗಾಮ ।
ಸ್ನಾತುಂ ಸಭಾ ಕೃತನಮಸ್ಕರಣಾ ಜಗಾಮ
ಶ್ಯಾಮಾಕ್ಷಯೇ ರವಿಕರೈಶ್ಚ ಸಹಾಜಗಾಮ ॥೪೧॥

ಇತಿ ಉತ್ಪತ್ತಿಪ್ರಕರಣೇ ಉಪದೇಶಕರಣಂ ನಾಮ ದ್ವ್ಯುತ್ತರಶತತಮಃ ಸರ್ಗಃ.

ಅಷ್ಟಮೋದಿವಸಃ.

ಸಂಕಲ್ಪಮಾತ್ರದಿಂದಲೇ ಆ ಇಷ್ಟಾರ್ಥವನ್ನು ಸಾಧಿಸಿಕೊಡುವುದು. ಈ ವಿಷಯದಲ್ಲಿ ವಿಶೇಷವಾದ ಕ್ಲೇಶವು ಉಪಯೋಗಿಸಲ್ಪಡಬೇಕಾಗುವುದಿಲ್ಲ ॥೩೭॥

ವಿವೇಕಯುಕ್ತವಾದ ಮನಸ್ಸು, ತನ್ನ ಪೂರ್ವದ ಸಂಕಲ್ಪವಿಕಲ್ಪಗಳನ್ನು ಬಿಟ್ಟುಬಿಟ್ಟು, ವಿಶಾಲವಾದ ಆತ್ಮಜ್ಞಾನರೂಪವಾಗಿರುವ ಆಕಾರವನ್ನು ಹೊಂದಿಬಿಡುವುದು ॥೩೮॥

ಆದುಕಾರಣ, ಈ ಮನಸ್ಸಿನ ನಾಶವೇ ದೊಡ್ಡ ಅಭ್ಯುದಯವು; ಇದರ ಉದಯವಾದರೋ, ದೊಡ್ಡ ಕೇಡೆನಿಸಲ್ಪಡುವುದು. ಹೀಗಿರುವುದರಿಂದ, ಅಯ್ಯಾ! ರಾಮ! ನೀನು ಆ ಮನಸ್ಸಿನ ನಾಶಾರ್ಥವಾಗಿಯೇ ಪ್ರಯತ್ನಮಾಡು; ಇದು ವೇಗದಿಂದ ಬಹಿರ್ವ್ಯಾಪಾರದಲ್ಲಿ ಸಿಕ್ಕುವಂತೆ ಮಾಡಬೇಡ ॥೩೯॥

ಅಯ್ಯಾ! ರಾಮ! ಆ ಸಂಸಾರವೆಂಬುದೇ ಒಂದು ದೊಡ್ಡ ಕಾಡು. ಇದರೊಳಗೆ ಸುಖದುಃಖಗಳೆಂಬ ವೃಕ್ಷಸಮೂಹಗಳು ಸಾಂದ್ರವಾಗಿ ಬೆಳೆದಿರುವುವು; ಮೃತ್ಯುವೆಂಬ ಮಹಾಸರ್ಪವು ಕ್ರೂರವಾಗಿ ಇದರೊಳಗೆ ಭಯವುಂಟುಮಾಡುತಿರುವುದು. ಇದು ಸಾಮಾನ್ಯವಾಗಿ ಕತ್ತರಿಸಲಸಾಧ್ಯವಾದುದು. ಇಂತಹ ಈ ಸಂಸಾರವನಕ್ಕೆ, ವಿವೇಕಹೀನವಾದ ಮನಸ್ಸೇ ರಾಜನಾಗಿರುವನು. ಈ ರಾಜನು, ಸಕಲವಿಧ ವಿಪತ್ತುಗಳಿಗೂ ಮುಖ್ಯಕಾರಣನಾಗಿರುವನು.—ಎಂದು ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಿದರು ॥೪೦॥

ಹೀಗೆ ಶ್ರೀ ವಸಿಷ್ಠರು ಹೇಳುತಿರುವಾಗ, ಆ ಹಗಲು ಕಳೆದುಹೋಯ್ತು. ಸಂಧ್ಯಾಕಾಲಿಕವಾದ ಕರ್ಮಗಳನ್ನು ನೆರವೇರಿಸುವುದಕ್ಕಾಗಿ ಸೂರ್ಯನು ಅಸ್ತಹೊಂದಿದನು. ಆ ಸಭೆಯೆಲ್ಲವೂ ವಸಿಷ್ಠರಿಗೆ ನಮಸ್ಕರಿಸಿ ಸಾ ನಾರ್ಥವಾಗಿ ಹೊರಟುಹೋಯ್ತು; ಆ ರಾತ್ರಿ ಕಳೆಯಲಾಗಿ, ಸೂರ್ಯಕಿರಣಗಳೊಡನೆ ಪುನಃ ಬಂದು ಸೇರಿತು ॥೪೧॥

ಇದು ಉತ್ಪತ್ತಿಪ್ರಕರಣದಲ್ಲಿ ಉಪದೇಶಕರಣವೆಂಬ ನೂರೆರಡನೆಯ ಸರ್ಗವು.

ಇಲ್ಲಿಗೆ ಎಂಟನೆಯ ದಿವಸವು

ಅಥ ಉತ್ಪತ್ತಿಪ್ರಕರಣೇ ತ್ರ್ಯುತ್ತರಶತತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಪರಸ್ಮಾದುತ್ಥಿತಂ ಚೇತಃ ತತ್ ಕಲ್ಲೋಲಇವಾರ್ಣವಾತ್ |
ಸ್ಫುರತಾಮೇತ್ಯ ಭುವನಂ ತನೋತೀದಮಿತಸ್ತತಃ ||೧||
ಹ್ರಸ್ವಂ ದೀರ್ಘಂ ಕರೋತ್ಯಾಶು ದೀರ್ಘಂ ನಯತಿ ಖರ್ವತಾಮ್ |
ಸ್ವತಾಂ ನಯತ್ಯನ್ಯದಲಂ ಸ್ವಂ ತಥೈವಾನ್ಯತಾಮಪಿ ||೨||
ಪ್ರಾದೇಶಮಾತ್ರಮಪಿ ಯತ್ ವಸ್ತು ಭಾವನಯೈವ ತತ್ |
ಸ್ವಯಂ ಸಮ್ಪನ್ನಯೇವಾಶು ಕರೋತ್ಯದ್ರೀನ್ದ್ರಭಾಸುರಮ್ ||೩||
ಲಬ್ಧಪ್ರತಿಷ್ಠಂ ಪರಮಾತ್ ಪದಾದುಲ್ಲಸಿತಂ ಮನಃ |
ನಿಮೇಷೇಣೈವ ಸಂಸಾರಂ ಕರೋತಿ ನ ಕರೋತಿ ಚ ||೪||

ಉತ್ಪತ್ತಿಪ್ರಕರಣದಲ್ಲಿ ನೂರಮೂರನೆಯ ಸರ್ಗವು.

ಅವಿವೇಕಸ್ಯ ಮನಸೋ ಯಾಯಾತ್ರಾನರ್ಥಕಾರಿತಾ |
ಮುಮುಕ್ಷೂಣಾಂ ವಿವೇಕಾಯ ಸಾ ಸರ್ವಾತ್ರ ಪ್ರಪಞ್ಚ್ಯತೇ ||

ವಿವೇಕಹೀನವಾದ ಮನಸ್ಸು ಇಲ್ಲಿ ಯಾವಯಾವ ಅನರ್ಥವನ್ನು ಮಾಡುವುದೋ, ಅದೆಲ್ಲವೂ-ಮುಮುಕ್ಷುಗಳಿಗೆ ವಿವೇಕವುಂಟಾಗುವುದಕ್ಕಾಗಿ— ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಪುನಃ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಇದುವರೆಗೂ ನಾನು ಹೇಳಿರುವಂತೆ, ಈ ಮನಸ್ಸು, ಸಮುದ್ರದದೆಸೆಯಿಂದ ಅಲೆಹುಟ್ಟುವಹಾಗೆ, ಪರಮಾತ್ಮನದೆಸೆಯಿಂದ ಉದಯಿಸಿ, ಹಾಗೆಯೇ ವಿಸ್ತಾರವನ್ನು ಪಡೆದು, ಈ ನಾನಾವಿಧ ಪ್ರಪಂಚಭ್ರಮೆಯನ್ನುಂಟುಮಾಡುವುದು ||೧||

ಈ ಮನಸ್ಸು ಹ್ರಸ್ವವಾದ ವಸ್ತುವನ್ನು ಒಂದು ಕ್ಷಣದೊಳಗಾಗಿ ದೀರ್ಘವನ್ನಾಗಿ ಮಾಡುವುದು; ದೀರ್ಘವಾದುದನ್ನು ಹ್ರಸ್ವವನ್ನಾಗಿಯೂ ಮಾಡುವುದು. ತನ್ನದಲ್ಲದುದನ್ನು ಸಂಪೂರ್ಣವಾಗಿ ತನ್ನದನ್ನಾಗಿ ಮಾಡುವುದು; ಹಾಗೆಯೇ ತನ್ನದನ್ನು ತನ್ನದಲ್ಲವನ್ನಾಗಿಯೂ ಮಾಡಿಬಿಡುವುದು ||೨||

ಯಾವುದೊಂದು ವಸ್ತುವು ಒಂದು ಪ್ರಾದೇಶಮಾತ್ರ (ಗೇಣುದ್ದ)ವಿರುವುದೋ, ಅದನು ಸ್ವಯಂಸಂಪನ್ನವಾದ ಭಾವನೆಯಿಂದಲೇ ದೊಡ್ಡ ಬೆಟ್ಟದಷ್ಟು ಮಹತ್ತನ್ನಾಗಿ ಮಾಡುವುದು ||೩||

ಆ ಪರಮಪದದದೆಸೆಯಿಂದ ಉದಯಿಸಿ ಬೇರೂರಿಕೊಂಡಿರುವ ಈ ಮನಸ್ಸು, ಒಂದು ನಿಮಿಷದೊಳಗಾಗಿ ಸಂಸಾರವನ್ನುಂಟುಮಾಡಿಬಿಡುವುದು. ಹಾಗೆಯೇ ಒಂದು ಕ್ಷಣದೊಳಗಾಗಿ (ವಿಚಾರಮಾಡಿದಾಗ) ಈ ಸಂಸಾರವನ್ನಿಲ್ಲವಾಗಿಯೂ ಮಾಡುವುದು ||೪||

ಯದಿದಂ ದೃಶ್ಯತೇ ಕಿಞ್ಚಿತ್ ಜಗತ್ ಸ್ಥಾಸ್ನು ಚರಿಷ್ಣು ಚ |
ಸರ್ವಂ ಸರ್ವಪ್ರಕಾರಾಢ್ಯಂ ಚಿತ್ತಾದೇತದುಪಾಗತಮ್ ||೫||
ದೇಶಕಾಲಕ್ರಿಯಾದ್ರವ್ಯಶಕ್ತಿಪರ್ಯಾಕುಲೀಕೃತಮ್ |
ಭಾವಾದ್ಭಾವಾನ್ತರಂ ಯಾತಿ ಲೋಲತ್ವಾನ್ನಟವನ್ಮನಃ ||೬||
ಸದಸತ್ತಾಂ ನಯತ್ಯಾಶು ಸತ್ತಾಂ ವಾಽಸನ್ನಯತ್ಯಲಮ್ |
ತಾದೃಶಾನ್ಯೇವ ಚಾದತ್ತೇ ಸುಖದುಃಖಾನಿ ಭಾವಿತಮ್ ||೭||
ಯದಾಪ್ತಂ ಸ್ವಯಮಾದತ್ತೇ ಯಥೈವ ಚಞ್ಚಲಂ ಮನಃ |
ಹಸ್ತಪಾದಾದಿಸಞ್ಘಾತಃ ತದಾ ಪ್ರಯತತೇ ತಥಾ ||೮||
ತತಃ ಸೈವ ಕ್ರಿಯಾ ಚಿತ್ತಸಮಾಹಿತಫಲಾಫಲಮ್ |
ಕ್ಷಣಾತ್ ಪ್ರಯಚ್ಛತಿ ಲತಾ ಕಾಲಸಿಕ್ತೇವ ತಾದೃಶಮ್ ||೯||
ಚಿತ್ರಾಂ ಕ್ರೀಡನಕಶ್ರೇಣೀಂ ಯಥಾ ಪಙ್ಕಾದ್ಗೃಹೇ ಶಿಶುಃ |
ಕರೋತ್ಯೇವಂ ಮನೋ ರಾಮ ವಿಕಲ್ಪಂ ಕುರುತೇ ಜಗತ್ ||೧೦||
ಮನಸ್ಸರ್ವಜನಕ್ರೀಡಾನ್ಯಜಮಾಲಬ್ಧವೇಷ್ವತಃ |

———— ————

ಸ್ಥಾವರಜಂಗಮಾತ್ಮಕವಾಗಿ ಕಾಣುತಿರುವ ಈ ಜಗತ್ತು ಯಾವುದಿರುವುದೋ, ಅದೆಲ್ಲವೂ ಸರ್ವಪ್ರಕಾರವಾಗಿಯೂ ಚಿತ್ತದಿಂದಲೇ ಉದಯಿಸಿರುವುದು ||೫||

ಈ ಮನಸ್ಸು, ಸ್ವಭಾವತಃ ಅತಿ ಚಂಚಲವಾಗಿರುವಕಾರಣ, ನಾಟ್ಯಗಾರನು ಒಂದು ವೇಷ ವನ್ನು ಬಿಟ್ಟು ಮತ್ತೊಂದು ವೇಷವನ್ನು ಸ್ವೀಕರಿಸುತಿರುವಂತೆ, ದೇಶ ಕಾಲ ಕ್ರಿಯೆ ದ್ರವ್ಯ—ಇವುಗಳ ಶಕ್ತಿಗನುಸಾರವಾಗಿ, ಒಂದುಸ್ಥಿತಿಯಿಂದ ಮತ್ತೊಂದು ಸ್ಥಿತಿಯನ್ನು ಹೊಂದು ತಿರುವುದು ||೬||

ಈ ಮನಸ್ಸು, ಸತ್ತನ್ನು ಅಸತ್ತನ್ನಾಗಿಯೂ, ಅಸತ್ತನ್ನು ಸತ್ತನ್ನಾಗಿಯೂ ಮಾಡು ವುದು. ನಮ್ಮಿಂದ ಯಾವವಿಧವಾಗಿ ಭಾವನೆಮಾಡಲ್ಪಡುವುದೋ, ಅಂತಹ ಸುಖದುಃಖಗಳನ್ನೇ ಇದು ಸ್ವೀಕರಿಸುತಿರುವುದು ||೭||

ಚಂಚಲವಾಗಿರುವ ಈ ಮನಸ್ಸು, ಕರ್ಮವಾಸನಾವಶದಿಂದ ಪ್ರಾಪ್ತವಾಗಿರುವ ಭೋಗ್ಯ ವನ್ನು ಯಾವಾಗ ಯಾವರೀತಿಯಾಗಿ ಸ್ವೀಕರಿಸುತಿರುವುದೋ, ಹಸ್ತಪಾದಾದ್ಯವಯವ ಸಮು ದಾಯವೂ—ಅದನ್ನನುಸರಿಸಿ-ಆಗ ಆರೀತಿಯಾಗಿ ಪ್ರಯತ್ನಮಾಡುವುದು ||೮||

ಅನಂತರ, ಸರಿಯಾದ ಕಾಲದಲ್ಲಿ ನೀರುಹೊಯ್ದು ಸಾಕಲ್ಪಟ್ಟ ಲತೆಯು ಫಲವನ್ನು ಕೊಡು ವಂತೆ, ಆ ಅವಯವವ್ಯಾಪಾರವೇ ಮನಸ್ಸಿನಲ್ಲಿ ಕಲ್ಪಿತವಾಗಿದ್ದ ಉಚ್ಚನೀಚ ಫಲಗಳನ್ನು ಕೊಡುವುದು ||೯||

ಅಯ್ಯಾ! ರಾಮ! ಬಾಲಕನು ಮನೆಯಲ್ಲಿರುವ ಕಲಸಿದ ಮಣ್ಣನ್ನು ತೆಗೆದುಕೊಂಡು ನಾನಾ ವಿಧವಾದ ಆಟದ ಬೊಂಬೆಗಳನ್ನು ಹೇಗೆ ಮಾಡುವನೋ, ಹಾಗೆ ಈ ಮನಸ್ಸು ನಾನಾವಿಧ ವಿಕ ಲ್ಪಬಹುಳವಾದ ಜಗತ್ತನ್ನು ಮಾಡುತಿರುವುದು ||೧೦||

ಅದುಕಾರಣ, ಸರ್ವಜನರೂಪವಾಗಿಯೂ ಮನಸ್ಸು ಕ್ರೀಡಿಸುತಿರುವಾಗ, ಮನುಷ್ಯಾದಿ

ಕಿಮೇತದ್ಧಿ ಪದಾರ್ಥೇಷು ರೂಢಂ ಜಗತಿ ಕಲ್ಪ್ಯತೇ ‖೧೧‖
ಕರೋತ್ಯೃತುಕರಃ ಕಾಲೋ ಯಥಾ ರೂಪೋನ್ಯಥಾ ತರೋಃ ।
ಚಿತ್ತಮೇವಂ ಪದಾರ್ಥಾನಾಂ ಏಷಾಮೇವಾನ್ಯತಾಮಿವ ‖೧೨‖
ಮನೋರಥೇ ತಥಾ ಸ್ವಪ್ನೇ ಸಙ್ಕಲ್ಪಕಲನಾಸು ಚ ।
ಗೋಷ್ಪದಂ ಯೋಜನವ್ಯೂಹಃ ಸ್ವಾಸು ಲೀಲಾಸು ಚೇತಸಃ ‖೧೩‖
ಕಲ್ಪಂ ಕ್ಷಣೀಕರೋತ್ಯನ್ತಃ ಕ್ಷಣಂ ನಯತಿ ಕಲ್ಪತಾಮ್ ।
ಮನಸ್ತದಾಯತ್ತಮತೋ ದೇಶಕಾಲಕ್ರಮಂ ವಿದುಃ ‖೧೪‖
ತೀವ್ರಮನ್ದತ್ವಸಂವೇಗಾತ್ ಬಹುತ್ವಾಲ್ಪತ್ವಭೇದತಃ ।
ವಿಲಮ್ಬನೇನ ಚ ಚಿರಂ ನ ತು ಶಕ್ತಿಮಶಕ್ತಿತಃ ‖೧೫‖
ವ್ಯಾಮೋಹಸಮ್ಭ್ರಮಾನರ್ಥದೇಶಕಾಲಗಮಾಗಮಾಃ ।
ಚೇತಸಃ ಪ್ರಭವನ್ತ್ಯೇತೇ ಪಾದಪಾದಿವ ಪಲ್ಲವಾಃ ‖೧೬‖

ದೇಹಗಳು ಆದರ ಆಟಕ್ಕನುಕೂಲವಾದ ಕೆಸರಿನಂತಿರುವುವು. ಇವುಗಳಲ್ಲಿ ರೂಢವಾಗಿ ಕಲ್ಪಿತವಾಗಿರುವ ಪದಾರ್ಥವಾವುದು? ॥೧೧॥

ವಸಂತ ಮುಂತಾದ ಋತುಕಾಲವು ವೃಕ್ಷಕ್ಕೆ ಹೇಗೆ ರೂಪಾಂತರವನ್ನುಂಟುಮಾಡುವುದೋ, ಹಾಗೆ ಚಿತ್ತವು ಈ ಪದಾರ್ಥಗಳನ್ನೇ ಬೇರೆಬೇರೆಯನ್ನಾಗಿ ಮಾಡಿಬಿಡುವುದು ॥೧೨॥

ಮನೋರಥವನ್ನು ಮಾಡಿಕೊಳ್ಳುವಾಗಲೂ, ಸ್ವಪ್ನಕಾಲದಲ್ಲಿಯೂ, ಸಂಕಲ್ಪಕಾಲದಲ್ಲಿಯೂ, ಹೀಗೆಯೇ ಈ ಚಿತ್ತವು ಲೀಲೆಪಡುತಿರುವಾಗಲೆಲ್ಲ, ನೂರಾರುಗಾವುದಗಳು ಒಂದು ಗೋಷ್ಪದವಾಗಿಯೂ—ಒಂದು ಗೋಷ್ಪದವು ನೂರಾರು ಗಾವುದವಾಗಿಯೂ ಆಗಬಹುದಲ್ಲವೆ! ಇದರಿಂದಲೇ, ಮನಸ್ಸು ಅಘಟಿತಘಟನಾಕುಶಲವೆಂದು ಸ್ಪಷ್ಟವಾಗುವುದು ॥೧೩॥

ಈ ಮನಸ್ಸು, ಕಲ್ಪವನ್ನು ಕ್ಷಣವನ್ನಾಗಿಯೂ, ಕ್ಷಣವನ್ನು ಕಲ್ಪವನ್ನಾಗಿಯೂ ಮಾಡುವುದು. ಅದುಕಾರಣ, ದೇಶಕಾಲವ್ಯವಸ್ಥೆಯೆಲ್ಲವೂ ಮನಸ್ಸಿಗೇ ಅಧೀನವಾಗಿರುವುದೆಂದು ಪ್ರಾಜ್ಞರು ತಿಳಿಯುವರು ॥೧೪॥

'ಮನಸ್ಸು ಸರ್ವಸೃಷ್ಟಿಕರಣ ಶಕ್ತವಾಗಿದ್ದಪಕ್ಷದಲ್ಲಿ, ನಾವೇಕೆ ಸರ್ವವಿಧಸೃಷ್ಟಿಯಲ್ಲಿಯೂ ಶಕ್ತರಾಗಿಲ್ಲ?' ಎಂದು ಶಂಕಿಸಿದರೆ,—ರಜೋಗುಣಾಧಿಕ್ಯವಾದಾಗ ಮನಸ್ಸು ತೀವ್ರವಾಗುವುದು; ತಮೋಗುಣಾಧಿಕ್ಯವಾದಾಗ ಮನಸ್ಸು ಮಂದವಾಗುವುದು. ಹೀಗೆಯೇ, ಅದು ಒಂದುವೇಳೆ ಬಹುಳವಾಗಿಯೂ, ಒಂದುವೇಳೆ ಅಲ್ಪವಾಗಿಯೂ ಆಗುವುದು; ಮತ್ತು, ಒಂದುಸಲ ವಿಲಂಬವಾಗಿ ಕಾರ್ಯಮಾಡತಕ್ಕುದಾಗಿಯೂ, ಮತ್ತೊಂದುಸಲ ಬೇಗನೆ ಮಾಡತಕ್ಕುದಾಗಿಯೂ, ಇರುವುದು. ಹೀಗೆ ಆಯಾ ಉಪಾಧಿಭೇದದಿಂದ ನಮಗೆ ಸರ್ವವಿಧಸೃಷ್ಟಿಯಲ್ಲಿ ಶಕ್ತಿಯಿಲ್ಲವಾಗಿದೆಯೇ ಹೊರತು, ವಸ್ತುತಃ ಮನಸ್ಸಿನ ಸರ್ವಶಕ್ತತ್ವವನ್ನು ನಾವು ಬಿಡಲಾರೆವು ॥೧೫॥

ಒಂದು ವೃಕ್ಷದದೆಸೆಯಿಂದ ಅನೇಕವಾಗಿ ಚಿಗುರುಗಳು ಉದಯಿಸುವಂತೆ, ಅಜ್ಞಾನ ಸಂಭ್ರಮ ಅನರ್ಥ ದೇಶಕಾಲವ್ಯವಸ್ಥೆ ಗಮನಾಗಮನ ಮುಂತಾದುವುಗಳೆಲ್ಲವೂ ಈ ಚಿತ್ತದದೆಸೆಯಿಂದ ಉದಯಿಸುವುವು ॥೧೬॥

ಜಲಮೇವ ಯಥಾಮ್ಭೋಧಿಃ ಔಷ್ಣ್ಯಮೇವ ಯಥಾನಲಃ |
ತಥಾ ವಿವಿಧಸಂರಮ್ಭಃ ಸಂಸಾರಶ್ಚಿತ್ತಮೇವ ವಾ ||೧೨||
ಸಕರ್ತೃಕರ್ಮಕರಣಂ ಯದಿದಂ ಚೇತ್ಯಮಾಗತಮ್ |
ದ್ರಷ್ಟೃದರ್ಶನದೃಶ್ಯಾಢ್ಯಂ ತತ್ ಸರ್ವಂ ಚಿತ್ತಮೇವ ಚ ||೧೮||
ಚಿತ್ತಂ ಜಗನ್ತಿ ಭುವನಾನಿ ವನಾನ್ತರಾಣಿ
ಸಂಲಕ್ಷ್ಯತೇ ಸ್ವಯಮುಪಾಗತಮಾತ್ಮಭೇದೈಃ |
ಕೇಯೂರಮೌಳಿಕಟಕೈಶ್ಚ ಲಸತ್ಸ್ವರೂಪಂ
ತ್ಯಕ್ತ್ವೈವ ಕಾಞ್ಚನಧಿಯೇವ ಜನೇನ ಹೇಮ ||೧೯||

ಇತಿ ಉತ್ಪತ್ತಿಪ್ರಕರಣೇ ಚಿತ್ತಮಾಹಾತ್ಮ್ಯಂ ನಾಮ
ತ್ರ್ಯುತ್ತರಶತತಮಃ ಸರ್ಗಃ.

ಸಮುದ್ರವೆಂಬುದು ಹೇಗೆ ಕೇವಲ ಜಲಮಾತ್ರವೇ ಆಗಿರುವುದೋ, ಅಗ್ನಿಯೆಂಬುದು ಹೇಗೆ ಉಷ್ಣತ್ವಮಾತ್ರವಾಗಿರುವುದೋ, ಹಾಗೆ ನಾನಾವಿಧಸಂರಂಭವುಳ್ಳ ಈ ಸಂಸಾರವು ಕೇವಲ ಚಿತ್ತಮಾತ್ರವೇ ಆಗಿರುವುದು ||೧೭||

ಕರ್ತ ಕರ್ಮ ಕರಣಗಳೊಡನೆಯೂ ದ್ರಷ್ಟೃ ದರ್ಶನ ದೃಶ್ಯಭೇದಗಳೊಡನೆಯೂ ಯುಕ್ತವಾದ ಯಾವ ಈ ಚೇತ್ಯವುಂಟೋ, ಅದೆಲ್ಲವೂ ಚಿತ್ತವೇಯೆ ||೧೮||

ಅಯ್ಯಾ! ರಾಮ! ಜನರು, ಕೇಯೂರ ಕಿರೀಟ ಕಟಕಾದಿರೂಪವಾಗಿರುವ ಸುವರ್ಣವನ್ನು ನೋಡಿ—ಅದನ್ನು ಸುವರ್ಣವೆಂದು ವ್ಯವಹರಿಸದೆ—ಕೇಯೂರಾದಿ ನಾಮಗಳಿಂದ ವ್ಯವಹರಿಸುವರಲ್ಲವೆ! ಹಾಗೆ, ಚಿತ್ತವೂ—ಜಗತ್ತೆಂದೂ ಭುವನಾಂತರಗಳೆಂದೂ ವನಾಂತರಗಳೆಂದೂ ನಾನಾವಿಧಭೇದಗಳಿಂದ ಕಾಣಲ್ಪಡುತಿರುವುದು ||೧೯||

ಇದು ಉತ್ಪತ್ತಿಪ್ರಕರಣದಲ್ಲಿ ಚಿತ್ತಮಾಹಾತ್ಮ್ಯವೆಂಬ
ನೂರಮೂರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಚತುರಧಿಕಶತತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಅತ್ರ ತೇ ಶೃಣು ವಕ್ಷ್ಯಾಮಿ ವೃತ್ತಾನ್ತಮಿಮಮುತ್ತಮಮ್ ।
ಜಾಗತೀಹೇನ್ದ್ರಜಾಲಶ್ರೀಃ ಚಿತ್ತಾಯತ್ತಾ ಯಥಾ ಸ್ಥಿತಾ ॥೧॥
ಅಸ್ತ್ಯಸ್ಮಿನ್ ವಸುಧಾಪೀಠೇ ನಾನಾವನಸಮಾಕುಲಃ ।
ಉತ್ತರಾಪಾಣ್ಡವೋ ನಾಮ ಸ್ಫೀತೋ ಜನಪದೋ ಮಹಾನ್ ॥೨॥
ನೀರನ್ಧ್ರಘನಘವಿಭ್ರಾರವನವಿಶ್ರಾನ್ತತಾಪಸಃ ।
ವಿದ್ಯಾಧರೀಕೃತಲತಾದೋಲೋಪವನಪತ್ತನಃ ॥೩॥
ವಾತೋದ್ಧೂತಾಬ್ಜಕಿಞ್ಜಲ್ಕಪುಞ್ಜಪಿಞ್ಜರಪರ್ವತಃ ।
ಲಸತ್ಕುಸುಮಸಮ್ಭಾರವನಸಮಾಲಾವತಂಸಕಃ ॥೪॥
ಕರಞ್ಜಮಞ್ಜರೀಕುಞ್ಜಗುಚ್ಛಪರ್ಯನ್ತಜಙ್ಗಲಃ ।

ಉತ್ಪತ್ತಿಪ್ರಕರಣದಲ್ಲಿ ನೂರನಾಲ್ಕನೆಯ ಸರ್ಗವು.

ಅತ್ರಾದೌ ಲವಣಾಖ್ಯಾನೇ ದೇಶರಾಜಸಭಾಸ್ಥಿತಿಃ ।
ತತ್ರೈನ್ದ್ರಜಾಲಿಕಾಶ್ವೇಕ್ಷಾವಿಸ್ಮಯಸ್ಥಿತಿರುಚ್ಯತೇ ॥

ಲವಣೋಪಾಖ್ಯಾನದ ಪ್ರಾರಂಭದಲ್ಲಿ—ದೇಶವರ್ಣನೆಯೂ, ರಾಜವರ್ಣನೆಯೂ, ಸಭಾವರ್ಣನೆಯೂ, ಐಂದ್ರಜಾಲಿಕನ ಅಶ್ವವನ್ನು ನೋಡಿದುದರಿಂದ ಸರ್ವರೂ ಆಶ್ಚರ್ಯದಿಂದಿರುವಿಕೆಯೂ ಕೂಡ, ಈ ಸರ್ಗದಲ್ಲಿ ವಿಸ್ತರಿಸಲ್ಪಡುವುವು.

ಶ್ರೀವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳುವರು :—

ಅಯ್ಯಾ! ರಾಮ! ಈ ಪ್ರಪಂಚರೂಪವಾದ ಇಂದ್ರಜಾಲವು ಚಿತ್ತಾಧೀನವಾಗಿರುವುದೆಂಬ ವಿಷಯದಲ್ಲಿ, ನಿನಗೊಂದುತ್ತಮವಾದುಪಾಖ್ಯಾನವನ್ನು ಹೇಳುವೆನು, ಕೇಳು ॥೧॥

ಈ ಭೂಮಂಡಲದೊಳಗೆ, ನಾನಾವಿಧವೃಕ್ಷಷಂಡಪರಿವೃತವಾಗಿಯೂ ಅತಿಸಮೃದ್ಧವಾಗಿಯೂ ಇರುವ ಉತ್ತರಾಪಾಂಡವವೆಂಬ ದೊಡ್ಡದೊಂದು ದೇಶವಿರುವುದು ॥೨॥

ಆ ದೇಶದೊಳಗೆ, ದಟ್ಟವಾದ ಅನೇಕ ವನಗಳಲ್ಲಿ ತಪಸ್ವಿಗಳು ವಿಶ್ರಮಿಸಿಕೊಳ್ಳುತಿರುವರು; ಆ ದೇಶದೊಳಗಿರುವ ಪಟ್ಟಣಗಳ ಉಪವನಗಳಲ್ಲಿ, ವಿದ್ಯಾಧರಸ್ತ್ರೀಯರು ವಿಹಾರಾರ್ಥವಾಗಿ ಲತೆಗಳಲ್ಲಿ ಡೋಲೆಗಳನ್ನು ಮಾಡಿಕೊಂಡಿರುವರು ॥೩॥

ಆ ದೇಶದ ಸರಸ್ಸಿನಲ್ಲಿರುವ ಕಮಲಕೇಸರಸಮುದಾಯಗಳು, ವಾಯುವಿನಿಂದ ಮೇಲಕ್ಕೆ ಎರಚಲ್ಪಟ್ಟು, ಅಲ್ಲಿರುವ ಪರ್ವತಗಳನ್ನೆಲ್ಲ ಪಿಂಜರವರ್ಣವಾಗಿ ಮಾಡುತಿರುವುವು ॥೪॥

ಆ ದೇಶದ ಗ್ರಾಮಗಳ ಸುತ್ತಲೂ ಇರುವ ವನಗಳಲ್ಲಿ, ಕರಂಜಮಂಜರಿಗಳು ಪರಿಪೂರ್ಣವಾಗಿರುವುವು; ಖರ್ಜೂರವೃಕ್ಷಗಳು ಯಥೇಚ್ಛವಾಗಿ ಬೆಳೆದು ಅಲ್ಲಿನ ಗ್ರಾಮಗಳನ್ನೆಲ್ಲ

ಖರ್ಜೂರಾನ್ತರಿತಗ್ರಾಮೋ ಘುಙ್ಘುಮಧ್ವನಿತಾಮ್ಬರಃ ॥೫॥
ಏಕಪಿಙ್ಗಶಿಲಾಶ್ರೇಣೀಶಾಲಿಕೇದಾರಪಿಙ್ಗಳಃ ।
ನೀಲಕಣ್ಠಾರವೋದ್ದಾಮವನಜಙ್ಗಲಮಣ್ಡಿತಃ ॥೬॥
ಸಾರಸಾರವಸಂರಮ್ಭರಣತ್ಕನಕಕಾನನಃ ।
ತಮಾಲಪಟಲೀನೀಲಗಿರಿಗ್ರಾಮಕಕುಣ್ಡಲಃ ॥೭॥
ವಿಚಿತ್ರವಿಹಗವ್ಯೂಹವಿರಾವಕೃತಕಾಕಲಿಃ ।
ನದೀಪರಿಸರೋನ್ನಿದ್ರಪಾರಿಭದ್ರದ್ರುಮಾರುಣಃ ॥೮॥
ಗಾಯತ್ಕಲಮಕೇದಾರದಾರಿಕಾಹೃತಮನ್ಮಥಃ ।
ಪುಷ್ಪಫಲಚಲದ್ವಾತವ್ಯಾಧೂತಕುಸುಮಾಮ್ಬುದಃ ॥೯॥
ದರೀಗೃಹವಿನಿಷ್ಕ್ರಾನ್ತಸಿದ್ಧಚಾರಣವನ್ದಿಕಃ ।
ಸ್ವರ್ಗಾದಿವ ಸಮಾನೀಯ ಲಾವಣ್ಯಮಭಿನಿರ್ಮಿತಃ ॥೧೦॥
ಗಾಯತ್ಕಿನ್ನರಗನ್ಧರ್ವಕದಳೀಷಣ್ಡಮಣ್ಟಪಃ ।
ಮನ್ದಾನಿಲರವೋದ್ಭೂತಃ ಪುಷ್ಪೋಪವನಪಾಣ್ಡುರಃ ॥೧೧॥

ಆಚ್ಛಾದಿಸಿಕೊಂಡಿರುವುವು; ಘುಮಘುಮಶಬ್ದದಿಂದ ಅಲ್ಲಿನ ಅಂತರಿಕ್ಷವೆಲ್ಲವೂ ಧ್ವನಿಮಾಡುತಿರುವುದು ॥೫॥

ಅಲ್ಲಿ ಫಲಿಸಿರುವ ಬತ್ತದ ಪೈರುಗಳು, ಕೇವಲ ಪಿಂಗಳವರ್ಣವಾದ ರತ್ನಪಂಕ್ತಿಗಳಂತೆ ಹೊಳೆಯುತಿರುವುವು. ನವಿಲುಗಳ ಕೂಗಿನಿಂದ ಅಲ್ಲಿನ ವನಗಳೆಲ್ಲವೂ ಅಲಂಕೃತವಾಗಿರುವುವು॥

ಸಾರಸಪಕ್ಷಿಗಳ ಸಂರಂಭದಿಂದ, ಅಲ್ಲಿನ ಉತ್ತಮವಾದ ಅರಣ್ಯವೆಲ್ಲವೂ ಧ್ವನಿಮಾಡುತಿರುವುದು. ಹೊಂಗೆಯತೋಪುಗಳು, ಅಲ್ಲಿ ಬೆಟ್ಟದ ಸುತ್ತಲೂ ಇರುವ ಗ್ರಾಮಗಳನ್ನೆಲ್ಲ ಕಪ್ಪಾಗಿ ಮಾಡಿರುವುವು ॥೭॥

ನಾನಾವಿಧ ಪಕ್ಷಿಸಮುದಾಯಗಳ ಧ್ವನಿಗಳು, ಅಲ್ಲಿ ಮಧುರವಾಗಿ ತುಂಬಿರುವುವು. ನದೀತೀರದಲ್ಲಿ ಚಿಗುರಿರುವ ಪಾರಿಭದ್ರ(ಬೇವು)ವೃಕ್ಷಗಳಿಂದ, ಆ ದೇಶವೆಲ್ಲವೂ ಕೆಂಪಗೆ ಕಾಣಿಸುತಿರುವುದು ॥೮॥

ಬತ್ತದ ಗದ್ದೆಯನ್ನು ಕಾಯುತಿರುವ ಯುವತಿಯರು, ಗಾನಮಾಡುತ, ಆದೇಶದಲ್ಲಿ ಜನರಿಗೆ ಮನ್ಮಥೋದ್ರೇಕ ಮಾಡುತಿರುವರು. ಅರಣ್ಯಗಳಲ್ಲಿ ಪುಷ್ಪಗಳಮೇಲೂ ಫಲಗಳಮೇಲೂ ಬೀಸುವ ಗಾಳಿಯು, ಹೂವುಗಳನ್ನು ಮೇಘದಂತೆ ರಾಶಿರಾಶಿಯಾಗಿ ಸುರಿಯಿಸುತಿರುವುದು ॥೯॥

ಆ ದೇಶದ ಪರ್ವತಗಳಲ್ಲಿರುವ ಗುಹಾಗೃಹಗಳೊಳಗೆ, ಸಿದ್ಧಚಾರಣಾದಿಗಳು, ಹೊಗಳುಬಂಟರಂತೆ ಗಾನಮಾಡುತ ಸಂಚರಿಸುವರು. ಸ್ವರ್ಗಲೋಕದ ದೆಸೆಯಿಂದ ಲಾವಣ್ಯವನ್ನು ತೆಗೆದುಕೊಂಡು ಬಂದು ನಿರ್ಮಿಸಲ್ಪಟ್ಟಿದೆಯೋ ಎಂಬಂತೆ, ಆ ದೇಶವು ವಿರಾಜಿಸುತಿರುವುದು ॥೧೦॥

ಆ ದೇಶದಲ್ಲಿ, ಬಾಳೆಯತೋಟಗಳ ಮಧ್ಯದೊಳಗಣ ಮಂಟಪಗಳಲ್ಲಿ, ಕಿನ್ನರರೂ ಗಂಧರ್ವರೂ ಗಾನಮಾಡುತಿರುವರು. ಮಂದಮಾರುತವು ಬೀಸುತ ಆ ದೇಶಕ್ಕೆ ಪ್ರಾಶಸ್ತ್ಯವನ್ನುಂಟುಮಾಡಿರುವುದು. ವಿಶೇಷವಾಗಿ ಪುಷ್ಪಭರಿತವಾಗಿರುವ ಉಪವನಗಳಿಂದ, ಆ ದೇಶವೆಲ್ಲವೂ ಶುಭ್ರವರ್ಣವಾಗಿ ಪ್ರಕಾಶಿಸುತಿರುವುದು ॥೧೧॥

ತತ್ರಾಸ್ತಿ ಲವಣೋ ನಾಮ ರಾಜಾ ಪರಮಧಾರ್ಮಿಕಃ ।
ಹರಿಶ್ಚನ್ದ್ರಕುಲೋದ್ಭೂತೋ ಭೂಮಾವಿವ ದಿವಾಕರಃ ॥೧೨॥
ಯದ್ಯಶಃಕುಸುಮೋತ್ತಂಸಪಾಣ್ಡುರಸ್ಕನ್ಧಮಣ್ಡಲಾಃ ।
ತತ್ರ ಶೈಲಾವಿರಾಜನ್ತೇ ಹರಾಃ ಪ್ರೋದ್ಧೂಳಿತಾ ಇವ ॥೧೩॥
ಕೃಪಾಣಶಕಲೋತ್ಕೃತ್ತನಿಶ್ಶೇಷಾರಾತಿಮಣ್ಡಲಃ ।
ಅರಾತಿಲೋಕಃ ಪ್ರಾಪ್ನೋತಿ ಯದನುಸ್ಮರಣಾಜ್ಜ್ವರಮ್ ॥೧೪॥
ಯಸ್ಯೋದಾರಸಮಾರಮ್ಭಂ ಆರ್ಯಲೋಕಾನುಪಾಲನಮ್ ।
ಚರಿತಂ ಸಂಸ್ಮರಿಷ್ಯನ್ತಿ ಹರೇರಿವ ಚಿರಂ ಜನಾಃ ॥೧೫॥
ಯಸ್ಯಾಪ್ಸರೋಭಿರದ್ರೀನ್ದ್ರಮೂರ್ಧಸ್ವಮರಸದ್ಮಸು ।
ವಿಕಾಸಿಪುಲಕೋಲ್ಲಾಸಂ ಗೀಯನ್ತೇ ಗುಣಗೀತಯಃ ॥೧೬॥
ಯಸ್ಯ ಸ್ವಸ್ಸುನ್ದರೀಗೀತಾಃ ಲೋಕಪಾಲಚಿರಶ್ರುತಾಃ ।
ವಿರಿಞ್ಚಿಹಂಸೈರ್ಧ್ವನ್ಯನ್ತೇ ಸ್ವಭ್ಯಾಸಾದ್ಗುಣಗೀತಯಃ ॥೧೭॥
ಸ್ವಪ್ನೇಷ್ವಪಿ ನ ಸಾಮಾನ್ಯಾ ಯಸ್ಯೋದಾರಚಮತ್ಕೃತಿಃ ।
ರಾಮ ದೃಷ್ಟಾ ಶ್ರುತಾ ವಾಪಿ ದೈನ್ಯದೋಷಮಯೀ ಕ್ರಿಯಾ ॥೧೮॥

ಅಂತಹ ದೇಶದೊಳಗೆ, ಮಹಾ ಧರ್ಮಿಷ್ಠನಾಗಿಯೂ ಹರಿಶ್ಚಂದ್ರನ ವಂಶದಲ್ಲಿ ಉದ್ಭವಿಸಿದವನಾಗಿಯೂ ಇರುವ ಲವಣನೆಂಬ ರಾಜನು, ಭೂಮಿಯಲ್ಲವತರಿಸಿದ ಸೂರ್ಯನೋ ಎಂಬಂತೆ ವಾಸಮಾಡಿಕೊಂಡಿದ್ದನು ॥೧೨॥

ಆ ಲವಣನೆಂಬ ರಾಜನ ಯಶಸ್ಸೆಂಬ ಪುಷ್ಪಮಾಲಿಕೆಗಳಿಂದ ಶುಭ್ರವಾದ ಸಾನುಪ್ರದೇಶವುಳ್ಳ ಆ ದೇಶದಲ್ಲಿನ ಪರ್ವತಗಳೆಲ್ಲವೂ, ಭಸ್ಮಲೇಪನ ಮಾಡಿಕೊಂಡಿರುವ ಸಾಕ್ಷಾತ್ ಪರಮೇಶ್ವರಮೂರ್ತಿಗಳಂತೆ ವಿರಾಜಿಸುವುವು ॥೧೩॥

ತಮ್ಮ ಕತ್ತಿಯಿಂದ ಶತ್ರುಗಳನ್ನೆಲ್ಲ ಚೂರುಚೂರಾಗಿ ಕತ್ತರಿಸಿದ್ದವರಾದರೂ, ಇವನ ಶತ್ರುಗಳೆಲ್ಲರೂ ಇವನ ಸ್ಮರಣಮಾತ್ರದಿಂದಲೇ ಸಂತಾಪಪಡುತಿದ್ದರು ॥೧೪॥

ಉದಾರವಾದ ಕಾರ್ಯಾರಂಭವುಳ್ಳದಾಗಿ-ಧರ್ಮಿಷ್ಠರಾದ ಜನರನ್ನು ಕಾಪಾಡತಕ್ಕುದಾಗಿರುವ ಅವನ ಚರಿತ್ರೆಯನ್ನು, ಶ್ರೀಮಹಾವಿಷ್ಣುವಿನ ಚರಿತ್ರೆಯನ್ನು ಸ್ಮರಿಸುವಂತೆ, ಜನರು ಸರ್ವದಾ ಸ್ಮರಿಸುತ್ತಿರುವರು ॥೧೫॥

ಅವನ ಸದ್ಗುಣಗಳನ್ನು ಪದ್ಯರೂಪವಾಗಿ ಮಾಡಿಕೊಂಡು, ಅಪ್ಸರಸ್ತ್ರೀಯರು, ಪರ್ವತಗಳ ಮೇಲೆಯೂ ದೇವಲೋಕಗಳಲ್ಲಿಯೂ ರೋಮಾಂಚವುಳ್ಳವರಾಗಿ ಗಾನಮಾಡುವರು ॥೧೬॥

ಅವನ ಗುಣನೀತಿಗಳು, ಅಪ್ಸರಸ್ತ್ರೀಯರಿಂದ ಗಾನಮಾಡಲ್ಪಟ್ಟು, ಲೋಕಪಾಲಕರಿಂದ ಬಹುಕಾಲ ಕೇಳಲ್ಪಟ್ಟು, ಬ್ರಹ್ಮನ ವಾಹನಭೂತವಾದ ಹಂಸಗಳಿಂದ ಅಭ್ಯಾಸಮಾಡಿ ಅನುಕರಿಸಲ್ಪಡುತಿರುವುವು ॥೧೭॥

ಅಯ್ಯಾ! ರಾಮ! ಆ ಲವಣರಾಜನು, ಕೇವಲ ಪ್ರಶಸ್ತವಾದ ಕರ್ಮವುಳ್ಳವನಾಗಿದ್ದನೇ ಹೊರತು, ಇತರರಾಜಸಾಮಾನ್ಯವಾದ ದೈನ್ಯದೋಷಮಯವಾಗಿರುವ ವ್ಯಾಪಾರವನ್ನು ಸ್ವಪ್ನದಲ್ಲಿಕೂಡ ಕಣ್ಣಿನಿಂದಲೂ ನೋಡುತಿರಲಿಲ್ಲ; ಕೊನೆಗೆ ಕಿವಿಯಿಂದ ಕೇಳುತಲೂ ಇರಲಿಲ್ಲ॥೧೮॥

ಜೆಂಹತಾಂ ಯೋ ನ ಜಾನಾತಿ ನ ದೃಷ್ಟಾ ಯೇನ ಧೃಷ್ಣುತಾ ।
ಉದಾರತಾ ಯೇನ ಧೃತಾ ಬ್ರಹ್ಮಣೇವಾಕ್ಷಮಾಲಿಕಾ ॥೧೯॥

ದಿನಾಷ್ಟಭಾಗಮಾಕಾಶಂ ಆಗತೇ ದಿವಸಾಧಿಪೇ ।
ಸ ಕದಾಚಿತ್ ಸಭಾಸ್ಥಾನೇ ಸಿಂಹಾಸನಗತೋಽಭವತ್ ॥೨೦॥

ಸುಖೋಪವಿಷ್ಟೇ ತತ್ರಾಸ್ಮಿನ್ ರಾಜನೀನ್ದಾವಿವಾಮ್ಬರೇ ।
ಪ್ರವಿಶನ್ತೀಷು ಸಾಮನ್ತಸೇನಾಸು ಚ ಸಸಮ್ಭ್ರಮಮ್ ॥೨೧॥

ಗಾಯನ್ತೀಷ್ವಥ ಕಾನ್ತಾಸು ಸೂಪವಿಷ್ಟೇಷು ರಾಜಸು ।
ಮನೋ ಹರತಿ ಸಾಹ್ಲಾದೇ ವೀಣಾವಂಶಕಲಾರವೇ ॥೨೨॥

ಚಾರುಚಾಮರಹಸ್ತಾಸು ಸವಿಲಾಸಾಸು ರಾಜನಿ ।
ದೇವಾಸುರಗುರುಪ್ರಖ್ಯೇ ವಿಶ್ರಾನ್ತೇ ಮನ್ತ್ರಿಮಣ್ಡಲೇ ॥೨೩॥

ಪ್ರಸ್ತುತೇಷು ಪ್ರವಿಷ್ಟೇಷು ರಾಜಕಾರ್ಯೇಷು ಮನ್ತ್ರಿಭಿಃ ।
ಪ್ರೋಕ್ತಾಸು ದೇಶವಾರ್ತಾಸು ನಿಪುಣೈಶ್ಚಾರುಮನ್ತ್ರಿಭಿಃ ॥೨೪॥

ಇತಿಹಾಸಮಯೇ ಪುಣ್ಯೇ ವಾಚ್ಯಮಾನೇ ಚ ಪುಸ್ತಕೇ ।
ಪಠತ್ಸು ಚ ಸ್ತುತೀಃ ಪುಣ್ಯಾಃ ಪುರಃ ಪ್ರಹ್ವೇಷು ವನ್ದಿಷು ॥೨೫॥

ಅವನು, ವಕ್ರತೆಯನ್ನು ಸುತರಾಂ ಅರಿತವನೇ ಅಲ್ಲ; ಅವಿನಯವೆಂಬುದನ್ನು ಕಣ್ಣಿನಲ್ಲಿಯೂ ಕಂಡವನಲ್ಲ; ಬ್ರಹ್ಮನು ಅಕ್ಷಮಾಲಿಕೆಯನ್ನು ಧರಿಸಿರುವಂತೆ, ಉದಾರತ್ವವೊಂದನ್ನೇ ಸರ್ವದಾ ಧರಿಸಿದ್ದನು ॥೧೯॥

ಇಂತಹ ಗುಣಪರಿಪೂರ್ಣನಾದ ಆ ಲವಣರಾಜನು, ಒಂದಾನೊಂದು ಸಮಯದಲ್ಲಿ, ಸೂರ್ಯನು ಹಗಲಿನ ಎಂಟನೆಯ ಭಾಗದಷ್ಟು ಹೊತ್ತನ್ನು ಕಳೆದಿರಲಾಗಿ, ಸಭಾಸ್ಥಾನದಲ್ಲಿ ಸಿಂಹಾಸನದಮೇಲೆ ಕುಳಿತುಕೊಂಡಿದ್ದನು ॥೨೦॥

ಅಂತರಿಕ್ಷಪ್ರದೇಶದಲ್ಲಿ ಚಂದ್ರನಿರುವಂತೆ, ಆ ರಾಜನು ಅಲ್ಲಿ ಸುಖವಾಗಿ ಕುಳಿತುಕೊಂಡಿರುವಾಗ, ಸಾಮಂತರಾಜರ ಸೇನೆಗಳು ಸಂಭ್ರಮದಿಂದ ಪ್ರವೇಶಮಾಡುತಿದ್ದುವು ॥೨೧॥

ಬಳಿಕ, ನಾಟ್ಯಗಾತಿಯರು ಗಾನಮಾಡುತಿದ್ದರು; ಸಮಸ್ತ ಸಾಮಂತರಾಜರೂ ತಮತಮಗುಚಿತವಾದ ಆಸನದಲ್ಲಿ ಕುಳಿತುಕೊಂಡರು. ವೀಣಾವೇಣುಪ್ರಮುಖವಾದ ವಾದ್ಯಗಳ ಧ್ವನಿಯು, ಅತ್ಯಾನಂದದೊಡನೆ ಸಕಲರ ಮನಸ್ಸನ್ನೂ ಅಪಹರಿಸುತಿದ್ದಿತು ॥೨೨॥

ಕೈಯಲ್ಲಿ ಉತ್ತಮವಾದ ಚಾಮರವನ್ನು ಹಿಡಿದಿರುವ ಸ್ತ್ರೀಯರು, ರಾಜನನ್ನು ವಿಭ್ರಮದೊಡನೆ ಬೀಸುತಿದ್ದರು; ಬೃಹಸ್ಪತಿಗೂ ಶುಕ್ರನಿಗೂ ಸಮಾನವಾದ ಬುದ್ಧಿಯುಳ್ಳ ಮಂತ್ರಿಸಮೂಹವು ಅಲ್ಲಿ ವಿಶ್ರಮಿಸಿಕೊಳ್ಳುತಿದ್ದಿತು ॥೨೩॥

ಮತ್ತೆ ಕೆಲವುಮಂದಿ ಮಂತ್ರಿಗಳು, ರಾಜಕೀಯ ಕಾರ್ಯಾರ್ಥವಾಗಿ ಅಲ್ಲಿ ಪ್ರವೇಶಿಸುವ ಜನರ ಪರಿಚಯವನ್ನು ಹೇಳುತಿದ್ದರು; ಕುಶಲರಾದ ಇನ್ನು ಕೆಲವು ಮಂದಿ ಮಂತ್ರಿಗಳು, ಆಯಾ ದೇಶವಾರ್ತೆಗಳನ್ನು ಅತಿ ಮನೋಹರವಾಗಿರುವಂತೆ ಹೇಳುತಿದ್ದರು ॥೨೪॥

ಒಂದುಕಡೆ, ಪುರಾತನವಾದ ಇತಿಹಾಸಗಳನ್ನು ಬೋಧಿಸುವ ಪುಸ್ತಕವೋದಲ್ಪಡುತಿದ್ದಿತು; ಮುಂದುಗಡೆ, ಸ್ತುತಿಪಾಠಕರು ನಮ್ರರಾಗಿ ನಿಂತುಕೊಂಡು, ಅತಿಪವಿತ್ರವಾದ ಸ್ತುತಿಗಳನ್ನು ಪಠಿಸುತಿದ್ದರು ॥೨೫॥

ಸಭಾಂ ವಿವೇಶ ಸಾಟೋಪಃ ಕಶ್ಚಿತ್ ಶಾಮ್ಬರೇನ್ದ್ರಜಾಲಿಕಃ ।
ವರ್ಷೇಣಾಹಿತಸಂರಮ್ಭೋ ವಸುಧಾಮಿವ ವಾರಿದಃ ॥೨೬॥
ಸ ನನಾಮ ಮಹೀಪಾಲಂ ಶಿಖರೋದಾರಕನ್ಧರಮ್ ।
ಪಾದೋಪಾನ್ತಗತಃ ಕಾನ್ತಂ ಶೈಲಂ ಫಲತರುರ್ಯಥಾ ॥೨೭॥
ಸಚ್ಛಾಯಸ್ಯೋನ್ನತಾಂಸಸ್ಯ ಫಲಿನಃ ಪುಷ್ಪಭಾಸಿನಃ ।
ಸ ವಿವೇಶ ಪುರೋ ರಾಜ್ಞಃ ತರೋರಗ್ರೇ ಕಪಿರ್ಯಥಾ ॥೨೮॥
ಚಪಲೋ ಲಮ್ಪಟೋರ್ಥಾನಾಂ ಆಮೋದಸುಖಮಾರುತಮ್ ।
ಉವಾಚೋತ್ಕನ್ಧರಂ ಭೂಪಂ ಸಪದ್ಮಮಿವ ಷಟ್ಪದಃ ॥೨೯॥
ವಿಲೋಕಯ ವಿಭೋ ತಾವತ್ ಏಕಾಮಿಹ ಖರೋಳಿಕಾಮ್ ।
ಪೀಠಸ್ಥ ಏವ ಸಾಶ್ಚರ್ಯಾಂ ವ್ಯೋಮ್ನಿ ಚನ್ದ್ರ ಇವಾವನಿಮ್ ॥೩೦॥
ಇತ್ಯುಕ್ತ್ವಾ ಪಿಞ್ಛಿಕಾ ತೇನ ಭ್ರಾಮಿತಾ ಭ್ರಮದಾಯಿನೀ ।
ನಾನಾವಿರಚನಾಬೀಜಂ ಮಾಯೇವ ಪರಮಾತ್ಮನಃ ॥೩೧॥

ಹೀಗಿರುವ ಸಮಯದಲ್ಲಿ, ಮಳೆಗರೆಯುವುದಕ್ಕೆ ಪೂರ್ವಭಾವಿಯಾಗಿ ಮಹಾಡಂಬರಯುಕ್ತವಾಗಿರುವ ಮೇಘವು ಭೂಮಿಗೆ ಬಂದಂತೆ, ಅತಿಯಾಗಿ ಆಟೋಪಯುಕ್ತನಾದ ಒಬ್ಬ ಐಂದ್ರಜಾಲಿಕನು ಆ ಸಭೆಯನ್ನು ಪ್ರವೇಶಿಸಿದನು ॥೨೬॥

ಆ ಐಂದ್ರಜಾಲಿಕನು, ಅನೇಕ ಶಿಖರಯುಕ್ತವಾದ ಪರ್ವತವನ್ನು ತಪ್ಪಲಿನಲ್ಲಿ ಫಲಭರಿತವಾದ ವೃಕ್ಷವು ಬೊಗ್ಗಿ ವಂದಿಸುವಂತೆ, ಕಿರೀಟವನ್ನು ಧರಿಸಿಕೊಂಡಿರುವ ಆ ರಾಜನನ್ನು ಪಾದಸಮೀಪಕ್ಕೆ ಬಂದು ಬೊಗ್ಗಿ ನಮಸ್ಕರಿಸಿದನು ॥೨೭॥

ಛಾಯಾಯುಕ್ತವಾಗಿಯೂ—ಎತ್ತರವಾದ ಕವಲುಳ್ಳದಾಗಿಯೂ—ಫಲಪುಷ್ಪಭರಿತವಾಗಿಯೂ ಇರುವ ವೃಕ್ಷದ ಮುಂದುಗಡೆ ಕಪಿಯು ಪ್ರವೇಶಿಸುವಂತೆ, ತನ್ನ ನೆಳಲಿನಲ್ಲಿ ಆನೇಕರನ್ನು ಕಾಪಾಡುವವನಾಗಿಯೂ—ಎತ್ತರವಾದ ಹೆಗಲುಳ್ಳವನಾಗಿಯೂ—ಉತ್ತಮವಾದ ಕಾರ್ಯಫಲವುಳ್ಳವನಾಗಿಯೂ—ಪುಷ್ಪಮಾಲಿಕೆಯಿಂದ ಪ್ರಕಾಶಿಸುತಿರುವನಾಗಿಯೂ ಇದ್ದ ಆ ರಾಜನ ಮುಂದುಗಡೆ ಬಂದುನಿಂತನು ॥೨೮॥

ಅತಿ ಚಪಲನಾಗಿಯೂ, ಅರ್ಥಾಸಕ್ತನಾಗಿಯೂ ಇರುವ ಆ ಐಂದ್ರಜಾಲಿಕನು, ಪದ್ಮವನ್ನು ಭ್ರಮರವು ಮಾತನಾಡಿಸುವಂತೆ, ಅತ್ಯಾನಂದಭರಿತನಾಗಿ ಕತ್ತೆತ್ತಿಕೊಂಡು ಕುಳಿತಿರುವ ಆ ರಾಜನನ್ನು ಕುರಿತು ಹೀಗೆ ಮಾತನಾಡಿದನು ॥೨೯॥

ಹೇ ವಿಭೋ! ಚಂದ್ರಮಂಡಲದಲ್ಲಿ ಭೂಮಿಯನ್ನು ನೋಡುವಂತೆ, ಅತ್ಯಾಶ್ಚರ್ಯಕರವಾಗಿ ನಾನು ತೋರಿಸುವ ಈ ಒಂದು ವಿನೋದಕರವಾದ ಆಟವನ್ನು ತಾವು ಸಿಂಹಾಸನದಲ್ಲಿಯೇ ಕುಳಿತುಕೊಂಡು ಪರಾಮರ್ಶಿಸಬೇಕು ॥೩೦॥

ಹೀಗೆಂದು ಹೇಳಿ, ಅವನು, ಪರಮಾತ್ಮನ ಮಾಯೆಯಂತೆ ನಾನಾವಿಧರಚನೆಗೆ ಬೀಜಭೂತವಾಗಿಯೂ ಭ್ರಾಂತಿಪ್ರದವಾಗಿಯೂ ಇರುವ ತನ್ನ ನವಿಲುಗರಿಯನ್ನು ತಿರುಗಿಸಲುಪಕ್ರಮಿಸಿದನು ॥೩೧॥

ತಾಂ ದದರ್ಶ ಮಹೀಪಾಲಃ ತೇಜೋರೇಣುವಿರಾಜಿತಾಮ್ ।
ಶಕ್ರಃ ಸುರವಿಮಾನಸ್ಥಃ ಸ್ವಕಾರ್ಮುಕಲತಾಮಿವ ॥೩೦॥
ಸಭಾಂ ಸೈನ್ಧವಸಾಮನ್ತೋ ವಿವೇಶಾಸ್ಮಿನ್ ಕ್ಷಣೇ ತದಾ ।
ತಾರಾಪರಿಕರಾಪೂರ್ಣಾಂ ವ್ಯೋಮವೀಥೀಮಿವಾಮ್ಬುದಃ ॥೩೨॥
ತಂ ಚೈವಾನುಜಗಾಮಾಶ್ವಃ ಸೌಮ್ಯಃ ಪರಮವೇಗವಾನ್ ।
ದೇವಲೋಕೋನ್ಮುಖಂ ತುಷ್ಟಂ ಶಕ್ರಮುಚ್ಚೈಶ್ಶ್ರವಾ ಇವ ॥೩೪॥
ಸ ತಮಶ್ವಮುಪಾದಾಯ ಪಾರ್ಥಿವಂ ಸಮುವಾಚ ಹ ।
ಸೋಚ್ಚೈಶ್ಶ್ರವಾ ಇವ ಕ್ಷೀರಸಾಗರೋ ಮರುತಾಂ ಪತಿಮ್ ॥೩೫॥
ಇದಮುಚ್ಚೈಶ್ಶ್ರವಃಪ್ರಖ್ಯಂ ಹಯರತ್ನಂ ಮಹೀಪತೇ ।
ಜವೋಡ್ಡಯನಶೀಲೇನ ಮೂರ್ತಿಮಾನಿವ ಮಾರುತಃ ॥೩೬॥
ಅಶ್ವೋಯಮಸ್ಮತ್ಪ್ರಭುಣಾ ಪ್ರಭೋ ಸಮ್ಪ್ರಹಿತಸ್ತ್ವಯಿ ।
ರಾಜತೇ ಹಿ ಪದಾರ್ಥಶ್ರೀಃ ಮಹತಾಮರ್ಪಣಾಚ್ಛುಭಾ ॥೩೭॥
ಇತ್ಯುಕ್ತವತಿ ತಸ್ಮಿಂಸ್ತು ಪ್ರತ್ಯುವಾಚೈನ್ದ್ರಜಾಲಿಕಃ ।
ಜಲದಸ್ತನಿತೇ ಶಾನ್ತೇ ಚಾತಕೋಮ್ಬುಧರಂ ಯಥಾ ॥೩೮॥

ಹೀಗೆ ಅವನಿಂದ ತಿರುಗಿಸಲ್ಪಡುತ ತೇಜಃಕಣಗಳಿಂದ ವಿರಾಜಿಸುತಿರುವ ಆ ಪಿಂಛಿಕೆ (ನವಿಲುಗರಿಯಬೊಂತೆ) ಯನ್ನು, ಪುಷ್ಪಕವಿಮಾನಗತನಾದ ಮಹೇಂದ್ರನು ಕಾಮನಬಿಲ್ಲನ್ನು ನೋಡುವಂತೆ, ಆ ಲವಣಭೂಪಾಲಕನು ನೋಡುತಿದ್ದನು ॥೩೨॥

ಆಗ, ಅಕ್ಷಣವೇ, ನಕ್ಷತ್ರಬೃಂದಪರಿವೃತವಾದ ಅಂತರಿಕ್ಷಮಾರ್ಗವನ್ನು ಮೇಘವು ಪ್ರವೇಶಿಸುವಂತೆ, ಸಿಂಧುರಾಜನ ಕಡೆಯವನೊಬ್ಬನು ಆ ಸಭೆಯನ್ನು ಪ್ರವೇಶಿಸಿದನು ॥೩೩॥

ದೇವಲೋಕಕ್ಕೆ ಅಭಿಮುಖನಾಗಿ ಸಂತೋಷದಿಂದ ಹೋಗುತಿರುವ ಇಂದ್ರನನ್ನು ಉಚ್ಚೈಶ್ರವಸ್ಸು ಅನುಸರಿಸಿ ಬರುವಂತೆ, ಸೌಮ್ಯವಾಗಿಯೂ ಮಹಾವೇಗಶಾಲಿಯಾಗಿಯೂ ಇರುವ ಒಂದು ಉತ್ತಮಾಶ್ವವು ಅವನನ್ನನುಸರಿಸಿ ಬಂದಿತು ॥೩೪॥

ಉಚ್ಚೈಶ್ರವಸ್ಸನ್ನು ಮುಂದಿಟ್ಟುಕೊಂಡಿರುವ ಸಾಗರವು ಇಂದ್ರನಿಗೆ ವಿಜ್ಞಾಪನೆ ಮಾಡಿಕೊಂಡಂತೆ, ಆ ಕುದುರೆಯನ್ನು ಮುಂದಿಟ್ಟುಕೊಂಡು ಆ ಅಶ್ವಪಾಲಕನು ರಾಜನಿಗೆ ವಿಜ್ಞಾಪನೆ ಮಾಡಿಕೊಂಡನು ॥೩೫॥

ಎಲೈ ಮಹೀಪತಿಯೇ! ಉಚ್ಚೈಶ್ರವಸ್ಸಿಗೆ ಸಮಾನವಾದ ಈ ಅಶ್ವರತ್ನವು ವೇಗದಲ್ಲಿಯೂ ಹಾರುವುದರಲ್ಲಿಯೂ ಮೂರ್ತಿಮತ್ತಾದ ವಾಯುವಿನಂತಿರುವುದು ॥೩೬॥

ಹೇ ಪ್ರಭೋ! ನಮ್ಮ ಪ್ರಭುವು ಈ ಅಶ್ವರತ್ನವನನ್ನು ತಮ್ಮಲ್ಲಿಗೆ ಕಳುಹಿಸಿರುವರು. ಪ್ರಪಂಚದಲ್ಲಿ ಉತ್ತಮವಾದ ಪದಾರ್ಥವು ದೊಡ್ಡವರಿಗೆ ಸಮರ್ಪಿಸಲ್ಪಡುವುದರಿಂದಲೇ ವಿಶೇಷವಾಗಿ ಶೋಭಿಸುವುದಲ್ಲವೆ! ॥೩೭॥

ಹೀಗೆ ಅವನು ಹೇಳಿ ನಿಲ್ಲಿಸಿದ ಬಳಿಕ, ಮೇಘಧ್ವನಿಯೆಲ್ಲವೂ ಶಾಂತವಾದಮೇಲೆ ಚಾತಕಪಕ್ಷಿಯು ಮೇಘವನ್ನು ಪ್ರಾರ್ಥಿಸುವಂತೆ, ಆ ಐಂದ್ರಜಾಲಿಕನು ಲವಣರಾಜನನ್ನು ಕುರಿತು ಹೀಗೆ ವಿಜ್ಞಾಪಿಸಿಕೊಂಡನು ॥೩೮॥

ಸದಶ್ವಮೇನಮಾರುಹ್ಯ ಭುವನಂ ವಿಹರ ಪ್ರಭೋ ।
ಸ್ವಪ್ರತಾಪಾಹಿತಾನಲ್ಪಶೋಭಾಮುರ್ವೀಂ ರವಿರ್ಯಥಾ ॥೩೯॥
ಅಶ್ವಮಾಲೋಕಯಾಮಾಸ ತೇನೋಕ್ತ ಇತಿ ಪಾರ್ಥಿವಃ ।
ನಿರ್ಘೋಷತಸ್ತನಿತಂ ಮೇಘಂ ಮಯೂರ ಇವ ಸೋತ್ಕರಃ ॥೪೦॥
ಅಥಾನಿಮೇಷಯಾ ದೃಷ್ಟ್ಯಾ ರಾಜಾ ಚಿತ್ರೋಪಮಾಕೃತಿಃ ।
ಬಭೂವಾಲೋಕಯನ್ನಶ್ವಂ ಲಿಪಿಕರ್ಮಾರ್ಪಿತೋಪಮಃ ॥೪೧॥
ಕ್ಷಣಮಾಲೋಕ್ಯ ಪೀಠಸ್ಥಃ ತಸ್ಥೌ ಸಂಸ್ಥಗಿತೇಕ್ಷಣಃ ।
ದೃಷ್ಟ್ಯಾ ಕ್ಷುಬ್ಧಃ ಸಮುದ್ರೋಽದ್ರಿಮೀನಕ್ಕೈಃ ಕರಮೋ ಯಥಾ ॥೪೨॥
ತಸ್ಥೌ ಮುಹೂರ್ತಯುಗ್ಮಂ ಸಃ ಧ್ಯಾನಾಸಕ್ತ ಇವಾತ್ಮನಿ ।
ವೀತರಾಗೋ ಮುನಿಃ ಕ್ಷುಬ್ಧಃ ಪರಾನನ್ದ ಇವ ಸ್ಥಿತಃ ॥೪೩॥
ಬೋಧಿತಃ ಕೇನಚಿನ್ನಾಸೌ ಸ್ವಪ್ರತಾಪಜಿತೋರ್ಜಿತಃ ।
ಧಿಯಾ ಕಾಮಪ್ಯಯಂ ಭೂಯಃ ಚಿನ್ತಾಂ ಚಿನ್ತಯತೀತಿ ಚ ॥೪೪॥
ಬಭೂವುಃ ಕೇವಲಂ ತತ್ರ ನಿಸ್ಸ್ಪನ್ದಸಿತಚಾಮರಾಃ ।

ಹೇ ಪ್ರಭೋ! ಸೂರ್ಯನು ತನ್ನ ಪ್ರತಾಪದಿಂದ ವಿಶೇಷವಾಗಿ ಕಾಂತಿಯುಂಟುಮಾಡಲ್ಪಟ್ಟ ಭೂಮಿಯಲ್ಲಿ ಸಂಚರಿಸುವಂತೆ, ತಾವು ಈ ಉತ್ತಮಾಶ್ವವನ್ನು ಹತ್ತಿಕೊಂಡು ಭುವನದಲ್ಲೆಲ್ಲ ವಿಹರಿಸಬೇಕು ॥೩೯॥

ಹೀಗೆ ಐಂದ್ರಜಾಲಿಕನಿಂದ ಹೇಳಲ್ಪಟ್ಟ ಲವಣಭೂಪಾಲಕನು, ಸಿಡಿಲು ಗುಡುಗುಗಳೊಡಗೂಡಿದ ಮೇಘವನ್ನು ನವಿಲು ಕತ್ತೆತ್ತಿಕೊಂಡು ನೋಡುವಂತೆ, ಆ ಹಯರತ್ನವನ್ನು ನೋಡಿದವನಾದನು ॥೪೦॥

ಬಳಿಕ, ಸ್ತಬ್ಧನಾಗಿ ರಪ್ಪೆಹಾಕದಿರುವ ಕಣ್ಣಿನಿಂದ ಆ ಕುದುರೆಯನ್ನು ನೋಡುತಿರುವ ಲವಣಭೂಮಿಪಾಲಕನು, ಚಿತ್ರದಲ್ಲಿ ಬರೆಯಲ್ಪಟ್ಟಂತವನಾಗಿದ್ದನು ॥೪೧॥

ಹೀಗೆ ಒಂದು ಕ್ಷಣಕಾಲ ನೋಡಿದವನಾಗಿ, ಪೂರ್ವದಲ್ಲಿ ಅಗಸ್ತ್ಯಮುನಿಯ ದೃಷ್ಟಿಯಿಂದ ಕ್ಷೋಭಿಪಟ್ಟು ಜಲತರಂಗಧ್ವನಿಮಾಡುತ ಪರ್ವತಗಳೆಂಬ ಮೀನುಗಳೊಡನೆ ಕಳವಳಪಡುತಿರುವ ಸಮುದ್ರದಂತೆ ಖೇದಯುಕ್ತನಾಗಿ, ಆ ಸಿಂಹಾಸನದಲ್ಲಿಯೇ ಕಣ್ಣುಮುಚ್ಚಿಕೊಂಡು ಕುಳಿತಿದ್ದನು ॥೪೨॥

ಆಗ ಒಂದು ಕ್ಷಣಕಾಲ ಅವನು, ವಿರಕ್ತನಾಗಿ ಪರಮಾನಂದದಲ್ಲಿದ್ದು ಬಾಹ್ಯದೃಷ್ಟಿಗೆ ಪ್ರವೇಶಿಸಿದ್ದ ಮುನಿಯು ಪುನಃ ಆತ್ಮಧ್ಯಾನನಿಷ್ಠನಾಗುವಂತೆ, ಕೇವಲ ಧ್ಯಾನಾಸಕ್ತನಾಗಿಬಿಟ್ಟನು ॥೪೩॥

ತನ್ನ ಪ್ರತಾಪದಿಂದ ಸಮಸ್ತ ಬಲಿಷ್ಠರನ್ನೂ ಗೆದ್ದಿರುವ ಆ ಲವಣರಾಜನನ್ನು, ಇವನು ಮನಸ್ಸಿನಲ್ಲಿ ಯಾವುದೋ ಒಂದು ದೊಡ್ಡ ಚಿಂತೆಯಲ್ಲಿ ಮಗ್ನನಾಗಿರುವನೆಂದು ತಿಳಿದು, ಯಾರೂ ಎಚ್ಚರಪಡಿಸಲಿಲ್ಲ ॥೪೪॥

ಆಗ, ಚಾಮರ ಹಿಡಿದಿದ್ದ ಸ್ತ್ರೀಯರು, ತಮ್ಮ ಕೈಲಿದ್ದ ಚಾಮರಗಳನ್ನು ಸ್ವಲ್ಪವೂ ಅಲುಗ

ಚಾಮರಿಣ್ಯೋ ಹಿ ಶರ್ವರ್ಯಃ ಸ್ತಿಮಿತೇನ್ದುಕರಾ ಇವ ||೪೫||
ವಿರೇಜುರ್ವಿಸ್ಮಯಾಪೂರ್ಣಾಃ ನಿಸ್ಸ್ಪನ್ದಾಸ್ತೇ ಸಭಾಸದಃ |
ನಿಸ್ಸ್ಪನ್ದಕಿಞ್ಜಲ್ಕದಳಾಃ ಪದ್ಮಾಃ ಪಙ್ಕಕೃತಾ ಇವ ||೪೬||
ಪ್ರಶಶಾಮ ಸಭಾಸ್ಥಾನೇ ಜನಕೋಲಾಹಲಃ ಶನೈಃ |
ಪ್ರಶಾನ್ತಪ್ರಾವೃಷಿ ವ್ಯೋಮನ್ಯಾಮ್ಭೋದಮಿವ ಗರ್ಜಿತಮ್ ||೪೭||
ಸನ್ದೇಹಸಾಗರೇ ಮಗ್ನಾಃ ಜಗ್ಮುಃ ಶ್ರಿನ್ತಾಂ ಸುಮನ್ತ್ರಿಣಃ |
ವಿಷೀದತಿ ಗದಾಪಾಣೌ ಅಸುರಾಜಾವಿವಾಮರಾಃ ||೪೮||
ವಿತತವಿಸ್ಮಿತಜೃಂಹಿತಯಾ ತಯಾ ಜನತಯಾ ಭಯಮೋಹವಿಷಣ್ಣಯಾ |
ಸ್ತಿಮಿತಚಕ್ಷುಷಿ ಭೂಮಿಪತೌ ಸ್ಥಿತೇ ಮುಕುಳಿತಾಬ್ಜವನಸ್ಯ ಧೃತಾ ದ್ಯುತಿಃ ||೪೯||

ಇತಿ ಉತ್ಪತ್ತಿಪ್ರಕರಣೇ ಇನ್ದ್ರಜಾಲೋಪಾಖ್ಯಾನೇ ನೃಪವ್ಯಾಮೋಹೋ ನಾಮ ಚತುರಧಿಕಶತತಮಃ ಸರ್ಗಃ.

ದಂತೆ ಹಿಡಿದುಕೊಂಡು, ನಿಶ್ಚಲವಾದ ಚಂದ್ರಕಿರಣಗಳುಳ್ಳ ಶುಕ್ಲಪಕ್ಷರಾತ್ರಿಗಳಂತೆ ವಿರಾಜಿಸುತಿದ್ದರು ||೪೫||

ಆ ಸಮಯದಲ್ಲಿ ಆ ಸಭೆಯಲ್ಲಿದ್ದವರೆಲ್ಲರೂ, ಆಶ್ಚರ್ಯಪರಿಪೂರ್ಣರಾಗಿ, ನಿಶ್ಚಲರಾಗಿ, ಮಣ್ಣಿನಲ್ಲಿ ಮಾಡಲ್ಪಟ್ಟ ಕೇಸರಗಳೂ ಎಲೆಗಳೂ ಅಲ್ಲಾಡದಿರುವ ಕಮಲದಂತೆ ಪ್ರಕಾಶಿಸುತಿದ್ದರು ||೪೬||

ಬಳಿಕ, ವರ್ಷಾಕಾಲವೆಲ್ಲವೂ ಮುಗಿದುಹೋಗಿರುವ ಆಕಾಶದಲ್ಲಿ ಮೇಘಧ್ವನಿಯು ಶಾಂತವಾಗುವಂತೆ, ಆ ಸಭಾಸ್ಥಾನದಲ್ಲಿ ಜನಗಳ ಕೋಲಾಹಲವೆಲ್ಲವೂ ಮೆಲ್ಲಗೆ ಶಾಂತವಾಗಿಬಿಟ್ಟಿತು ||

ಅನಂತರ, ರಾಕ್ಷಸರ ಯುದ್ಧದಲ್ಲಿ ಶ್ರೀಮನ್ನಾರಾಯಣನು ಖೇದಪಡುವಾಗ ದೇವತೆಗಳೆಲ್ಲರೂ ಸಂಶಯಗ್ರಸ್ತರಾಗುವಂತೆ, ಸಮಸ್ತರಾದ ಮಂತ್ರಿವರ್ಯರೂ ಸಂದೇಹವೆಂಬ ಸಮುದ್ರದಲ್ಲಿ ಮುಣುಗಿಬಿಟ್ಟರು ||೪೮||

ಆಗ ಆ ರಾಜನು ಕಣ್ಣುಮುಚ್ಚಿಕೊಂಡು ಕುಳಿತಿರಲಾಗಿ, ಅತ್ಯಧಿಕವಾದ ಆಶ್ಚರ್ಯಕ್ಕೆ ಪರವಶರಾಗಿಯೂ ಭಯಮೋಹವಿಷಾದಗಳಿಂದೊಡಗೂಡಿಯೂ ಇರುವ ಆ ಸಭಾಜನರು, ಮುಕುಳಿತವಾದ ಕಮಲವನದ ಕಾಂತಿಯನ್ನು ಧರಿಸಿಬಿಟ್ಟಿದ್ದರು ||೪೯||

ಇದು ಉತ್ಪತ್ತಿಪ್ರಕರಣದಲ್ಲಿ ಐಂದ್ರಜಾಲಿಕೋಪಾಖ್ಯಾನದೊಳಗೆ ನೃಪವ್ಯಾಮೋಹವೆಂಬ ನೂರನಾಲ್ಕನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚೋತ್ತರಶತತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಮುಹೂರ್ತದ್ವಿತಯೇನಾಥ ಬೋಧಮಾಪ ಮಹೀಪತಿಃ ।
ಪ್ರಾವೃಷೇಣ್ಯಾಮ್ಬುನಿರ್ಮುಕ್ತಂ ಅಮ್ಭೋರುಹಮಿವೋತ್ತಮಮ್ ॥೧॥
ಆಸನಾತ್ ಸಾಙ್ಗದೋತ್ತಂಸಃ ಪ್ರಬುದ್ಧೋ ಸಾವಕಮ್ಪಯತ್ ।
ಸವನಾಭೋಗಶೃಙ್ಗೌಘೋ ಭೂಕಮ್ಪ ಇವ ಪರ್ವತಃ ॥೨॥
ಬಭೂವಾಥ ಪ್ರಬುದ್ಧೋಽಸೌ ಆಸನೋಪರಿ ಕಮ್ಪಿತಃ ।
ವಿಕ್ಷುಬ್ಧ ಇವ ಪಾತಾಳವಾರಣೇ ಶಙ್ಕರಾಚಲಃ ॥೩॥
ಪತನ್ತಂ ಧಾರಯಾಮಾಸುಃ ತಂ ಪುರೋಗಾನೃಪಂ ಭುಜೈಃ ।
ಮೇರುಂ ಪ್ರಳಯವಿಕ್ಷುಬ್ಧಂ ಕುಲಶೈಲಾಸ್ತಟೈರಿವ ॥೪॥
ಪುರೋಗೈರ್ಧಾರ್ಯಮಾಣೋಽಸೌ ಪರ್ಯಾಕುಲಮತಿರ್ನೃಪಃ ।
ವೀಚಿವಿಕ್ಷೋಭಿತಸ್ಯೇನ್ದೋಃ ಬಭಾರ ವಪುಷಃ ಶ್ರಿಯಃ ॥೫॥

ಉತ್ಪತ್ತಿಪ್ರಕರಣದಲ್ಲಿ ನೂರಯ್ದನೆಯ ಸರ್ಗವು.

ವಿಮೋಹಂ ಸ್ವಸ್ಥಹೃದಯಂ ನೃಪಂಪ್ರತಿ ಸಭಾಸದಾಮ್ ।
ಮೋಹಹೇತೋಃ ಪರಿಪ್ರಶ್ನಾತ್ ತದುಕ್ತ್ಯಾರಮ್ಭ ಈರ್ಯತೇ ॥

ಆ ಲವಣರಾಜನು ಮೋಹರಹಿತನಾಗಿ ಸ್ವಸ್ಥಚಿತ್ತನಾದಬಳಿಕ, ಹೀಗೆ ಮೊಹಕ್ಕೆ ಕಾರಣವೇನೆಂದು ಸಭಾಸದರು ಕೇಳಲಾಗಿ, ಅದಕ್ಕೆ ಅವನು ಉತ್ತರಹೇಳಲುಪಕ್ರಮಿಸುವನೆಂಬ ವಿಷಯವು ಈ ಸರ್ಗದಲ್ಲಿ ಹೆಳಲ್ಪಡುವುದು.

ಶ್ರೀವಸಿಷ್ಠರು ಯಥಾಪ್ರಕಾರವಾಗಿ ರಾಮನನ್ನು ಕುರಿತು ಹೇಳಲುಪಕ್ರಮಿಸುವರು:—

ವತ್ಸ! ರಾಮ! ನಾನು ಹಿಂದೆ ಹೇಳಿದಂತೆ ಆ ಲವಣಭೂಮಿಪತಿಯು ಮೋಹದಿಂದ ಸ್ತಬ್ಧನಾದಬಳಿಕ, ಎರಡು ಮುಹೂರ್ತ ಕಳೆಯಲಾಗಿ, ವರ್ಷಾಕಾಲಿಕವಾದ ಜಲವೇಗದಿಂದ ಮುಕ್ತವಾದ ಕಮಲದಂತೆ ಎಚ್ಚರಗೊಂಡನು ॥೧॥

ಅನಂತರ, ಭೂಕಂಪವಾದಾಗ ವನದೊಡನೆಯೂ ಶಿಖರಗಳೊಡನೆಯೂ ಪರ್ವತವು ಕಂಪಿಸುವಂತೆ, ತನ್ನ ಆಸನದಮೇಲಿನಿಂದ, ಅಂಗದ ಕಿರೀಟಗಳೊಡನೆ ಕಂಪಿಸಿದನು ॥೨॥

ಪಾತಾಳದಲ್ಲಿರುವ ದಿಗ್ಗಜವು ಚಲಿಸಲಾಗಿ ಕೈಲಾಸಪರ್ವತವು ಸಂಚಲಿತವಾಗುವಂತೆ, ಈ ಲವಣರಾಜನು ತನ್ನ ಆಸನದಮೇಲೆಯೇ ಸಂಚಲಿಸಿದನು ॥೩॥

ಬಳಿಕ, ಪ್ರಳಯಕಾಲದಲ್ಲಿ ಸಂಕ್ಷುಭಿತವಾದ ಮೇರುಪರ್ವತವನ್ನು ಕುಲಪರ್ವತಗಳು ತಟಭೂಮಿಗಳಿಂದ ತಡೆದುಕೊಳ್ಳುವಂತೆ, ಸಿಂಹಾಸನದದೆಸೆಯಿಂದ ಬೀಳುತಿರುವ ರಾಜನನ್ನು ಅವನ ಮುಂದುಗಡೆ ಇದ್ದವರು ತಮ್ಮ ಭುಜಗಳಿಂದ ತಡೆದುಕೊಂಡರು ॥೪॥

ಹೀಗೆ ಮುಂದುಗಡೆ ಇದ್ದವರಿಂದ ಧರಿಸಲ್ಪಟ್ಟು ವ್ಯಾಕುಲಚಿತ್ತನಾಗಿರುವ ಆ ರಾಜನು, ಸಮುದ್ರದಲ್ಲಿ ಅಲೆಗಳಿಂದ ಸಂಕ್ಷೋಭಿತವಾಗಿರುವ ಚಂದ್ರಮಂಡಲಪ್ರತಿಬಿಂಬದ ಕಾಂತಿಯನ್ನು ವಹಿಸಿದ್ದನು ॥೫॥

ಕೋಯಂ ಪ್ರದೇಶಃ ಕಸ್ಯೇಯಂ ಸಭೇತಿ ಸ ನೃಪಃ ಶನೈಃ |
ದಧ್ವಾನ ಮಜ್ಜದಮ್ಭೋಜಕೋಶಸ್ಥ ಇವ ಷಟ್ಪದಃ ||೬||
ಅಥೋವಾಚ ಸಭಾ ದೇವ ಕಿಮೇತದಿತಿ ಸಾದರಮ್ |
ರಣನ್ಮಧುಕರೀ ಭಾನುಂ ದೃಷ್ಟರಾಹುಮಿವಾಬ್ಜಿನೀ ||೭||
ಅಥೈನಂ ಪರಿಪಪ್ರಚ್ಛುಃ ಪುರೋಗಾಮನ್ತ್ರಿಣಸ್ತಥಾ |
ಪ್ರಳಯೋಲ್ಲಾಸಸನ್ತ್ರಸ್ತಂ ಮಾರ್ಕಣ್ಡೇಯಮಿವಾಮರಾಃ ||೮||
ತ್ವಯಿತ್ಥಂ ಸಂಸ್ಥಿತೇ ದೇವ ವಯಮತ್ಯನ್ತಮಾಕುಲಾಃ |
ಅಭೇದ್ಯಮಪಿ ಭಿನ್ದನ್ತಿ ನಿರ್ನಿಮಿತ್ತಂ ಭ್ರಮಾಮನಃ ||೯||
ಆಪಾತರಮಣೀಯೇಷು ಪರ್ಯನ್ತವಿರಸೇಷು ಚ |
ಭೋಗೇಷ್ವಿವ ವಿಕಲ್ಪೇಷು ಕೇಷು ತೇ ಲುಲಿತಂ ಮನಃ ||೧೦||
ಸತತೋದಾರವೃತ್ತಾಸು ಕಥಾಸು ಪರಿಶೀತಲಮ್ |
ಮನಸ್ತೇ ನಿರ್ಮಲಂ ಕಸ್ಮಾತ್ ಸಮ್ಭ್ರಮೇಷು ನಿಮಜ್ಜತಿ ||೧೧||
ತುಚ್ಛಾಲಮ್ಬನಮಾಲಾನವಿಶೀರ್ಣಂ ಲೋಕವೃತ್ತಿಷು |
ಮನೋ ಮೋಹಮುಪಾದತ್ತೇ ನ ಮಹತ್ತ್ವವಿಜೃಮ್ಭಿತಮ್ ||೧೨||

ಆಗ ಆ ರಾಜನು, ನೀರೊಳಗೆ ಮುಣುಗಿಹೋಗುತಿರುವ ಕಮಲದಲ್ಲಿ ಸಿಕ್ಕಿಕೊಂಡ ಭ್ರಮರದಂತೆ ಅವ್ಯಕ್ತವಾಗಿ ಧ್ವನಿಮಾಡುತ, 'ಈ ಪ್ರದೇಶವಾವುದು? ಈ ಸಭೆಯಾವುದು?' ಎಂದು ಕೇಳಿದನು ||೬||

ಬಳಿಕ ರಾಹುದರ್ಶನವಾಗಿರುವ ಸೂರ್ಯನನ್ನು ಭ್ರಮರಧ್ವನಿಯುಕ್ತವಾದ ಕಮಲಲತೆಯು ಆಶ್ವಾಸನಪಡಿಸುವಂತೆ, ಆ ಸಭೆಯು ಅತ್ಯಾದರದೊಡನೆ 'ಪ್ರಭೋ! ಇದೇನು ಹೀಗೆ ಕೇಳುವೆ?' ಎಂದು ಕೇಳಿತು ||೭||

ಅನಂತರ, ಪೂರ್ವದಲ್ಲಿ ಪ್ರಳಯಸಂರಂಭದಿಂದ ಹೆದರಿದ ಮಾರ್ಕಂಡೇಯನನ್ನು ದೇವತೆಗಳು ಮಾತನಾಡಿಸಿದಂತೆ, ಆ ರಾಜನನ್ನು, ಅವನ ಮುಂದುಗಡೆಯಿದ್ದವರೂ ಮಂತ್ರಿಗಳೂ ಹೀಗೆ ಪ್ರಶ್ನೆಮಾಡಲುಪಕ್ರಮಿಸಿದರು ||೮||

ಹೇದೇವ! ನೀನು ಈರೀತಿಯಾಗಿ ಕಳವಳಪಡುತಿದ್ದರೆ, ನಾವೆಲ್ಲರೂ ಅತ್ಯಂತ ವ್ಯಾಕುಲರಾಗಿಬಿಡುವೆವು. ಪ್ರಪಂಚದಲ್ಲಿ, ಎಷ್ಟು ಅಭೇದ್ಯವಾದ ಮನಸ್ಸನ್ನಾದರೂ ಭ್ರಾಂತಿಯು ಬೆದರಿಸಿಬಿಡುವುದು ||೯||

ಲೋಕದಲ್ಲಿ, ಭೋಗಗಳಂತೆ ವಿಕಲ್ಪಜ್ಞಾನಗಳೂ ಕೂಡ ಆಪಾತರಮಣೀಯಗಳಾಗಿಯೂ ಪರ್ಯಂತದಲ್ಲಿ ವಿರಸಗಳಾಗಿಯೂ ಇರುವುವು. ಇಂತಹ ಯಾವವಿಧವಾದ ವಿಕಲ್ಪಗಳಲ್ಲಿ ನಿನ್ನ ಮನಸ್ಸು ಬಿದ್ದು ಹೊರಳುತಿರುವುದು? ||೧೦||

ಸರ್ವದಾ ಉದಾರಚರಿತರಾದವರ ಕಥೆಗಳ ಪರಿಶೀಲನದಿಂದ ಶೀತಲವಾಗಿದ್ದ ನಿರ್ಮಲವಾದ ನಿನ್ನ ಮನಸ್ಸು, ಈಗ ಯಾವ ಕಾರಣದಿಂದ ಈರೀತಿಯಾಗಿ ಭಯದಲ್ಲಿ ಮುಳುಗುತಿರುವುದು? ||

ಮನಸ್ಸೆಂಬುದು, ತುಚ್ಛವಾದ ಪದಾರ್ಥವನ್ನವಲಂಬಿಸಿದರೆ, ಆಗ ಪ್ರಪಂಚವ್ಯಾಪಾರಗಳಲ್ಲಿ ನಾನಾವಿಧವಾದ ಸಂಕಟಗಳಿಗೆ ಗುರಿಯಾಗುತ, ಮೋಹವನ್ನು ಹೊಂದುವುದು; ಇಷ್ಟೇಹೊರತು, ವಿವೇಕಸಂಸ್ಕೃತವಾದ ಮನಸ್ಸು ಎಂದಿಗೂ ಮೋಹವಶವಾಗುವುದಿಲ್ಲ ||೧೨||

ಸೌತತ್ಯೇಸ ಹಿ ಯೈವಾಸ್ಯ ಮನಸೋ ವೃತ್ತಿರುತ್ಥಿತಾ ।
ಶರೀರಮುದಮುತ್ತಾಸು ತಾಮೇವೈತದ್ವಿಧಾವತಿ ॥೧೩॥
ಅತುಚ್ಛಾಲಮ್ಬನಂ ಧೀರಂ ಪ್ರಬುದ್ಧಂ ಗುಣಹಾರಿ ಚ ।
ತವಾಪಿ ಹಿ ಮನಶ್ಚಿತ್ರಂ ಆಲೂನಮಿವ ಲಕ್ಷ್ಯತೇ ॥೧೪॥
ಅನಭ್ಯಸ್ತವಿವೇಕಂ ಹಿ ದೇಶಕಾಲವಶಾನುಗಮ್ ।
ಮನ್ತ್ರೌಷಧಿವಶಂ ಯಾತಿ ಮನೋ ನೋದಾರವೃತ್ತಿಮತ್ ॥೧೫॥
ನಿತ್ಯಮಾತ್ತವಿವೇಕಸ್ಯ ಕಥಮಾಲೂನಶೀರ್ಣತಾ ।
ಧುನೋತಿ ವಿತತಂ ಚೇತೋ ವಾತ್ಯೇವ ವಿಬುಧಾಚಲಮ್ ॥೧೬॥
ಇತಿ ಜಾತಾನುಗೀರ್ಣಸ್ಯ ಭೂಪತೇಃ ಕಾನ್ತಿರಾನನಮ್ ।
ಭೂಷಯಾಮಾಸ ಶೀತಾಂಶುಂ ಮಾಸಾನ್ತ ಇವ ಪೂರ್ಣತಾ ॥೧೭॥
ರರಾಜ ರಾಜಾ ಸೌಮ್ಯಾಸ್ಯಂ ಉನ್ಮೀಲಿತವಿಲೋಚನಃ ।
ಗತೇ ಹಿಮರ್ತಾವುಲ್ಲಾಸಿ ಪುಷ್ಪೌಘ ಇವ ಮಾಧವಃ ॥೧೮॥
ಅಥಾತಿಸಮ್ಭ್ರಮಾಶ್ಚರ್ಯಖಿನ್ನಾಸ್ಮೃತಿಮುಖೋ ಬಭೌ ।

ದೇಹಾಭಿಮಾನದಿಂದ ವಿವೇಕಶೂನ್ಯವಾಗಿರುವ ಪ್ರಾಪಂಚಿಕವೃತ್ತಿಗಳ ಮಧ್ಯದಲ್ಲಿ, ಈ ಮನಸ್ಸಿಗೆ ಯಾವ ವೃತ್ತಿಯು ನಿರಂತರವಾಗಿ ಉದಯಿಸುವುದೋ, ಅದನ್ನೇ ಇದು ಅನುಸರಿಸಿ ಕೊಂಡು ಓಡುತಿರುವುದು ॥೧೩॥

ಆದರೆ, ತುಚ್ಛವಾದ ಆಶ್ರಯವನ್ನು ಅವಲಂಬಿಸದೆಯೂ ಧೀರವಾಗಿಯೂ ಪ್ರಬುದ್ಧವಾಗಿಯೂ ಸಕಲ ಸದ್ಗುಣಪೂರ್ಣವಾಗಿಯೂ ಇರುವ ನಿನ್ನ ಮನಸ್ಸೂ ಕೂಡ, ಹೀಗೆ ವಿಭಿನ್ನವಾಗಿರುವಂತೆ ಕಾಣಿಸುತ್ತಿರುವುದಲ್ಲ! ಇದು ದೊಡ್ಡ ವಿಚಿತ್ರವು!! ॥೧೪॥

ಅಥವಾ, ಯಾರಾದರೂ ನಿನ್ನಲ್ಲಿ ಮಂತ್ರೌಷಧಾದಿಗಳನ್ನು ಪ್ರಯೋಗಿಸಿರಬಹುದೆಂದು ಯೋಚಿಸಿದರೆ,—ಅದೂ ಸಂಗತವಾಗಿ ಕಾಣುವುದಿಲ್ಲ. ವಿವೇಕವನ್ನು ಸುತರಾಂ ಅಭ್ಯಸಿಸದಿರುವ ಮನಸ್ಸು, ದೇಶಕಾಲಗಳಿಗಧೀನವಾಗಿ, ಮಂತ್ರೌಷಧಾದಿಗಳಿಗೆ ವಶವಾಗುವುದು; ಉದಾರವಾದ ವೃತ್ತಿಯುಳ್ಳ ಮನಸ್ಸೆಂದಿಗೂ ಇವುಗಳಿಗೆ ವಶವಾಗುವುದಿಲ್ಲ ॥೧೫॥

ನಿತ್ಯವೂ ವಿವೇಕವನ್ನು ಅಭ್ಯಸಿಸಿರುವ ಮನಸ್ಸಿಗೆ ಈರೀತಿಯಾಗಿ ಕಳವಳವೆಲ್ಲಿ ಬಂದೀತು ? ಪ್ರಳಯಮಾರುತವು ಮಹಾಮೇರುವನ್ನೂ ಅಳ್ಳಾಡಿಸಿಬಿಡುವಂತೆ, ವಿವೇಕವಿಸ್ತೃತವಾದ ಮನಸ್ಸು ಎಂತಹ ಸಂಕಟವನ್ನಾದರೂ ದೂರವಾಗಿ ಓಡಿಸಿಬಿಡುವುದು ॥೧೬॥

ಈರೀತಿಯಾಗಿ ಸ್ವಜನಸಮೂಹದಿಂದ ಸಮಾಶ್ವಾಸನಮಾಡಲ್ಪಟ್ಟ ಆ ರಾಜನ ಮುಖವನ್ನು, ಪೂರ್ಣಿಮೆಯಲ್ಲಿ ಚಂದ್ರನನ್ನು ಪೂರ್ಣತೆಯು ಅಲಂಕರಿಸುವಂತೆ, ದಿವ್ಯವಾದ ಕಾಂತಿಯು ಅಲಂಕರಿಸಿತು ॥೧೭॥

ಅನಂತರ, ಪ್ರಸನ್ನವದನನಾಗಿ ಕಣ್ಣುತೆರೆದುಕೊಂಡು ಕುಳಿತಿರುವ ರಾಜನು, ಹಿಮಗಾಲಕಳೆದಬಳಿಕ ವಿಕಸಿತವಾದ ಪುಷ್ಪಸಮೃದ್ಧಿಯುಳ್ಳ ವಸಂತಋತುವಿನಂತೆ, ವಿರಾಜಿಸುತ್ತಿದ್ದನು॥

ಬಳಿಕ, ಲವಣನು, ಮುಂದುಗಡೆಯಿರುವ ಐಂದ್ರಜಾಲಿಕನ್ನು ನೋಡಿ, ಅತ್ಯಂತವಾಗಿ ಭಯದಿಂದಲೂ ಆಶ್ಚರ್ಯದಿಂದಲೂ ಖೇದದಿಂದಲೂ ಆಲೋಚನೆಯಿಂದಲೂ ಕೂಡಿದ ಮುಖವು

ಆಸನ್ನಮೃತ್ಯುರಾಲೋಕ್ಯ ರಾಹುಮಿನ್ದುರಿವಾಮ್ಬರೇ ॥೧೯॥
ಐನ್ದ್ರಜಾಲಿಕಮಾಲೋಕ್ಯ ಪ್ರೋವಾಚಾಥ ಹಸನ್ನಿವ ।
ಬಭ್ರುಂ ಹಿಂಸಾತ್ಮಕಂ ದೃಷ್ಟ್ವಾ ಸರ್ಪರೂಪೀವ ತಕ್ಷಕಃ ॥೨೦॥
ಜಾಲ್ಮ ಜಾಲಜಟಾಲೇನ ಕಿಮೇತದ್ಭವತಾ ಕೃತಮ್ ।
ಯೇನಾಸ್ಪನ್ದಪ್ರಸನ್ನೋಽಬ್ಧಿಃ ಕ್ಷಣಾದೇತ್ಯಪ್ರಸನ್ನತಾಮ್ ॥೨೧॥
ಚಿತ್ರಂ ಚಿತ್ರಾಹಿ ದೇವಸ್ಯ ಪದಾರ್ಥಶತಶಕ್ತಯಃ ।
ಸುಶಕ್ತಮಪಿ ಮೇ ಚಿತ್ತಂ ಯಾಭಿರ್ಮೋಹೇ ನಿವೇಶಿತಮ್ ॥೨೨॥
ಕ್ವ ವಯಂ ಲೋಕಪರ್ಯಾಯಕೃತಾನ್ತಪದವೇದಿನಃ ।
ಕ್ವ ಮನೋಮೋಹದಾಯಿನ್ಯೋ ವಿತತಾಃ ಪ್ರಕೃತಾಪದಃ ॥೨೩॥
ಅಪ್ಯಭ್ಯಸ್ತಮಹಾಜ್ಞಾನಂ ಮನಸಿ ಸ್ಥಿತಿ ದೇಹಕೇ ।
ಕದಾಚಿನ್ಮೋಹಮಾದತ್ತೇ ಕ್ಷಣಂ ಮತಿಮತಾಮಪಿ ॥೨೪॥
ಇದಮಾಶ್ಚರ್ಯಮಾಖ್ಯಾನಂ ಶ್ರೂಯತಾಂ ರೇ ಸಭಾಸದಃ ।
ಮಮ ಶಾಮ್ಬರಿಕೇಣೇಹ ಯನ್ಮುಹೂರ್ತಂ ಪ್ರದರ್ಶಿತಮ್ ॥೨೫॥

ಳ್ಳವನಾಗಿ, ಅಂತರಿಕ್ಷದಲ್ಲಿ ರಾಹುವನ್ನು ಕಂಡು ಅಸ್ತೋನ್ಮುಖನಾದ ಚಂದ್ರನಂತೆ, ಕಳೆಗುಂದಿದವನಾಗಿ ಕಾಣಿಸುತಿದ್ದನು ॥೧೯॥

ಆಮೇಲೆ, ಕ್ಷುದ್ರಸರ್ಪವೇಷದಿಂದ ಪ್ರಚ್ಛನ್ನನಾಗಿರುವ ತಕ್ಷಕನು ಸಾಮಾನ್ಯಸರ್ಪಗಳಿಗೆ ಹಿಂಸಾಪ್ರದವಾದ ಮುಂಗುಸಿಯನ್ನು ಕಂಡು ಪರಿಹಸಿಸುವಂತೆ, ಈ ರಾಜನು ಆ ಐಂದ್ರಜಾಲಿಕನನ್ನು ನೋಡಿ ಪರಿಹಸಿಸುತ, ಈರೀತಿಯಾಗಿ ಮಾತನಾಡಿದನು ॥೨೦॥

ಎಲೈ ಅವಿವೇಕಿಯೇ! ಕೇವಲ ಮಾಯಾಜಟಿಲನಾದ ನೀನು ಇದೇನುಮಾಡಿದೆ? ಸ್ವಲ್ಪವೂ ಚಲಿಸದೆ ನಿರ್ಮಲವಾಗಿರುವ ಸಮುದ್ರದಂತೆ ಗಂಭೀರವಾಗಿಯೂ ನಿಶ್ಚಲವಾಗಿಯೂ ಇರುವ ನನ್ನ ಮನಸ್ಸು, ಒಂದು ಕ್ಷಣದೊಳಗಾಗಿ ಕಳವಳಗೊಂಡುಬಿಟ್ಟಿರುವುದಲ್ಲ! ॥೨೧॥

ಆ ಪರಮಾತ್ಮನು ಸೃಷ್ಟಿಮಾಡಿರುವ ಅಸಂಖ್ಯಾಕವಾದ ಪದಾರ್ಥಗಳ ಶಕ್ತಿಗಳು ಅತಿವಿಚಿತ್ರಗಳಾಗಿರುವುವು. ಏಕೆಂದರೆ,—ಅತಿಸಮರ್ಥವಾಗಿದ್ದರೂ ನನ್ನ ಮನಸ್ಸು ಈ ಶಕ್ತಿಯಿಂದ ಅಜ್ಞಾನಕ್ಕಧೀನವಾಗಿ ಮಾಡಲ್ಪಟ್ಟಿರುವುದಲ್ಲ! ॥೨೨॥

ಅಹಹ! ಲೋಕದಲ್ಲಿ ವ್ಯವಹಾರಸಿದ್ಧವಾದ ಸಮಸ್ತ ಪದಾರ್ಥಗಳ ತತ್ವವನ್ನೂ ತಿಳಿದವರಾಗಿರುವ ನಾವೆಲ್ಲಿ!—ಮನಸ್ಸಿಗೆ ಮೋಹವುಂಟುಮಾಡತಕ್ಕುದಾಗಿ ಈಗ ನಾವು ಅನುಭವಿಸಿದ ಈ ವಿಪತ್ತುಗಳೆಲ್ಲಿ!! ॥೨೩॥

ಎಂತಹ ಬುದ್ಧಿಶಾಲಿಗಳಿಗಾದರೂ, ಅವರ ಮನಸ್ಸು ಎಷ್ಟುಮಟ್ಟಿಗೆ ಜ್ಞಾನಾಭ್ಯಾಸಮಾಡಿದ್ದುದಾದರೂ, ಪ್ರತ್ಯಕ್ಷವಾಗಿರುವ ದೇಹಾದಿಗಳಲ್ಲಿ ಯಾವಾಗಲಾದರೂ ಒಂದು ಸಮಯದಲ್ಲಿ ಒಂದು ಕ್ಷಣಕಾಲವಾದರೂ ಮೋಹವನ್ನು ಸ್ವೀಕರಿಸಿಯೇ ಬಿಡುವುದು ॥೨೪॥

ಎಲೈ ಸಭಾಸದರೆ! ಈ ಐಂದ್ರಜಾಲಿಕನು ನನಗೆ ಒಂದು ಮುಹೂರ್ತದೊಳಗಾಗಿ ಯಾವುದನ್ನು ತೋರಿಸಿದನೋ, ಆ ಆಶ್ಚರ್ಯವಾದ ವೃತ್ತಾಂತವನ್ನು ನೀವು ಕೇಳಿರಿ ॥೨೫॥

ದೃಷ್ಟವಾನಹಮ್ಮೋತಸ್ಮಿನ್ ಬಹ್ವೀಃ ಕಾರ್ಯದಶಾಶ್ಚಲಾಃ ।
ಮುಹೂರ್ತಂ ಪ್ರಾರ್ಥಿತೋಽಧ್ವಸ್ತಶಕ್ರಸೃಷ್ಟಿರಿವಾಬ್ಜಜಃ ॥೨೬॥
ಇತ್ಯುಕ್ತ್ವೋನ್ಮುಖನೇತ್ರೇಷು ಸಭ್ಯೇಷು ಸ ಹಸನ್ನಿವ ।
ರಾಜಾ ವರ್ಣಯಿತುಂ ಚಿತ್ರಂ ವೃತ್ತಾನ್ತಮುಪಚಕ್ರಮೇ ॥೨೭॥

ರಾಜೋವಾಚ.

ಇಹ ವಿವಿಧಪದಾರ್ಥಸಙ್ಕುಲಾಯಾಂ ಹ್ರದನದಪತ್ತನಪರ್ವತಾಕುಲಾಯಾಮ್ ।
ಕುಲಶಿಖರಿಸಮುದ್ರಸಙ್ಕುಲಾಯಾಂ ಭುವಿ ವಿಭವಾವಲಿತೋಽಸ್ತ್ಯಯಂ ಪ್ರದೇಶಃ ॥೨೮॥

ಇತಿ ಉತ್ಪತ್ತಿಪ್ರಕರಣೇ ಇನ್ದ್ರಜಾಲೋಪಾಖ್ಯಾನೇ ರಾಜಾವಬೋಧೋನಾಮ
ಪಞ್ಚೋತ್ತರಶತತಮಃ ಸರ್ಗಃ.

---

(೧) ಪೂರ್ವದಲ್ಲಿ ಇಂದ್ರನಿಂದ ಪ್ರಾರ್ಥಿತನಾಗಿ ಅವನ ಮಾಯಾಸೃಷ್ಟಿಯನ್ನು ಧ್ವಂಸ ಮಾಡದೆ ಬಿಟ್ಟುಬಿಟ್ಟು ಆಶ್ಚರ್ಯಯುಕ್ತನಾಗಿ ನೋಡುತ ನಿಂತುಕೊಂಡ ಚತುರ್ಮುಖನಂತೆ, ನಾನು ಇವನಲ್ಲಿ ಒಂದುಕ್ಷಣದೊಳಗೆ ಅತಿಚಪಲವಾಗಿ ನಡೆದ ಅನೇಕ ಕಾರ್ಯವೈಚಿತ್ರ್ಯಗಳನ್ನು ನೋಡಿದೆನು ॥೨೬॥

ಹೀಗೆಂದು ಹೇಳಿ ಆ ರಾಜನು, ಸಭಾಸದರೆಲ್ಲರೂ ಮೇಲಕ್ಕೆ ಕಣ್ಣೆತ್ತಿ ನೋಡುತಿರಲಾಗಿ, ಸ್ವಲ್ಪ ಮಂದಹಾಸ ಮಾಡುತ, ವಿಚಿತ್ರವಾದ ತನ್ನ ವೃತ್ತಾಂತವನ್ನು ಹೇಳುವುದಕ್ಕುಪಕ್ರಮಿಸಿದನು ॥೨೭॥

ಆ ರಾಜನು ಹೇಳಿದುದೇನೆಂದರೆ:—

ಎಲೈ ಸಭಾಸದರೆ ! ನಾನಾವಿಧಪದಾರ್ಥಗಳಿಂದ ವ್ಯಾಪ್ತವಾಗಿಯೂ, ಹ್ರದ ನದ ಪಟ್ಟಣ ಪರ್ವತಗಳಿಂದ ಪರಿವೃತವಾಗಿಯೂ ಸಪ್ತಕುಲಾಚಲಗಳಿಂದಲೂ ಸಪ್ತಪರ್ವತಗಳಿಂದಲೂ ಸಂಕೀರ್ಣವಾಗಿಯೂ ಇರುವ ಈ ಭೂಮಂಡಲದೊಳಗೆ, ನಾವಿರುವ ಈ ಪ್ರದೇಶವು, ಅತಿಯಾಗಿ ವಿಭವಪರಿಪೂರ್ಣವಾದುದಾಗಿರುವುದು ॥೨೮॥

ಇದು ಉತ್ಪತ್ತಿಪ್ರಕರಣದಲ್ಲಿ ಇಂದ್ರಜಾಲೋಪಾಖ್ಯಾನದೊಳಗೆ
ರಾಜಾವಬೋಧನವೆಂಬ ನೂರಯ್ದನೆಯ ಸರ್ಗವು.

---

೧. ಪೂರ್ವದಲ್ಲಿ ಸಹಾಯಶೂನ್ಯನಾಗಿ ಒಬ್ಬನೇ ಸಿಕ್ಕಿದ ಇಂದ್ರನನ್ನು, ತನ್ನ ಸೈನ್ಯದಿಂದ ಅಪಹರಿಸಿಬಿಡಬೇಕೆಂದು ಬಲಿಚಕ್ರವರ್ತಿಯು ಪ್ರಯತ್ನಪಟ್ಟನು. ಆಗ ಇಂದ್ರನು ಮಾಯೆಯಿಂದ ಅನೇಕವಾಗಿ ಸೈನ್ಯವನ್ನು ಸೃಷ್ಟಿಮಾಡಿ, ಬಲಿಯನ್ನು ಮಾಯಾಶಕ್ತಿಯಿಂದಲೇ ಕಟ್ಟಿಹಾಕಿದನು. ಆಗ ಬಲಿಯು ತನ್ನ ಬಂಧನವನ್ನು ಬಿಡಿಸಿಕೊಳ್ಳುವುದಕ್ಕಾಗಿ, ಬ್ರಹ್ಮನನ್ನು ಕುರಿತು ಸ್ತೋತ್ರಮಾಡಿದನು. ಇವನ ಸ್ತೋತ್ರದಿಂದ ಪ್ರಸನ್ನನಾಗಿ ಬಂದು ಬ್ರಹ್ಮನು, ಇಂದ್ರನ ಮಾಯಾಸೃಷ್ಟಿಯನ್ನೆಲ್ಲ ಧ್ವಂಸಮಾಡಲುಪಕ್ರಮಿಸಿದನು. ಆಮೇಲೆ ಇಂದ್ರನು ಬಹಳವಾಗಿ ಪ್ರಾರ್ಥಿಸಿಕೊಳ್ಳಲು, ಬ್ರಹ್ಮನು ಅವನ ಸೃಷ್ಟಿಯನ್ನು ಧ್ವಂಸಮಾಡದೆ, ಸ್ವಲ್ಪಹೊತ್ತು ಅದರ ವೈಚಿತ್ರ್ಯವನ್ನು ನೋಡುತ ನಿಂತಿದ್ದನು.

ಅಥ ಉತ್ಪತ್ತಿಪ್ರಕರಣೇ ಷಡುತ್ತರಶತತಮಃ ಸರ್ಗಃ.

ರಾಜೋವಾಚ.

ಅಸ್ತಿ ತಾವದಯಂ ದೇಶೋ ನಾನಾವನನದೀಯುತಃ ।
ವಸುಧಾಮಣ್ಡಲಸ್ಯಾಸ್ಯ ಸಹೋದರಇವಾನುಜಃ ॥೧॥
ಅಸ್ಮಿಂಶ್ಚಾಯಮಹಂ ರಾಜಾ ಪೌರಾಭಿಮತವೃತ್ತಿರ್ಮಾ ।
ಇನ್ದ್ರಃ ಸ್ವರ್ಗಇವಾಸ್ಯಾಂ ತು ಸಭಾಯಾಂ ಮಧ್ಯಸಂಸ್ಥಿತಃ ॥೨॥
ಯಾವದಭ್ಯಾಗತೋ ದೂರಾತ್ ಕಶ್ಚಿಚ್ಛಾಮ್ಬರಿಕಸ್ತ್ವಯಮ್ ।
ರಸಾತಲಾದಭ್ಯುದಿತೋ ಮಾಯೀ ಮಯಇವ ಸ್ವಯಮ್ ॥೩॥
ಅನೇನ ಭ್ರಮಿತಾದ್ಯೇಹ ಪಿಞ್ಛಿಕಾ ತೇಜಸೋರ್ಜಿತಾ ।
ಕಲ್ಪಾನ್ತಪವನಾಭ್ರೇಣ ಶಕ್ರಚಾಪಲತಾ ಯಥಾ ॥೪॥

ಉತ್ಪತ್ತಿಪ್ರಕರಣದಲ್ಲಿ ನೂರಾರನೆಯ ಸರ್ಗವು.

ಇಹಾಶ್ವೇನಾಪನೀತಸ್ಯ ವನೇ ಚಣ್ಡಾಲಕನ್ಯಯಾ ।
ಸಮಾಯಾತ್ ಪಕ್ವಣಂ ನೀತ್ವಾ ವಿವಾಹಃ ಸ್ಯಸ್ಯ ವರ್ಣ್ಯತೇ ॥

ಲವಣರಾಜನನ್ನು ಕುದುರೆ ದೂರವಾಗಿ ಹೊತ್ತುಕೊಂಡು ಹೋಗುವಿಕೆಯೂ, ಅರಣ್ಯದಲ್ಲಿ ಒಬ್ಬ ಚಂಡಾಲಕನ್ಯಕೆಯು ಸಮಯಬಂಧಮಾಡಿಕೊಂಡು ಇವನನ್ನು ಬೇಡರಕೇರಿಗೆ ಕರೆದುಕೊಂಡು ಹೋಗಿ ಅಲ್ಲಿ ಇವನನ್ನು ಮದುವೆಮಾಡಿಕೊಳ್ಳುವಿಕೆಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಆ ಲವಣರಾಜನು ಸಭಾಸದರನ್ನು ಕುರಿತು ಪುನಃ ಹೇಳಲುಪಕ್ರಮಿಸಿದನು:—

ಅಯ್ಯಾ ಸಭಾಸದರೆ! ನಾನಾವಿಧವಾದ ವನಗಳಿಂದಲೂ ನದಿಗಳಿಂದಲೂ ಯುಕ್ತವಾಗಿ, ಈ ಭೂಮಂಡಲಕ್ಕೆ ಒಡಹುಟ್ಟಿದ ತಮ್ಮನೋ ಎಂಬಂತಿರುವ ಈ ದೇಶವಿರುವುದಷ್ಟೆ! ॥೧॥

ಈ ದೇಶದಲ್ಲಿ, ಈ ನಾನು, ಪಟ್ಟಣಿಗರಿಗಭಿಮತವಾದ ವೃತ್ತಿಯುಳ್ಳವನಾಗಿ ರಾಜ್ಯಪರಿಪಾಲನೆಮಾಡುತ, ಇಂದ್ರನು ಸ್ವರ್ಗದಲ್ಲಿರುವಂತೆ, ಈ ಸಭೆಯ ಮಧ್ಯದಲ್ಲಿರುವುದೂ ನಿಮಗೆ ವಿದಿತವೇಅಷ್ಟೆ! ॥೨॥

ಹೀಗಿರುವ ಸಮಯದಲ್ಲಿ, ಮಹಾಮಾಯಾವಿಯಾದ ಮಾಯಾಸುರನು ಪಾತಾಳದಿಂದ ಮೇಲಕ್ಕೆ ಬಂದಿರುವನೋ ಎಂಬಂತೆ, ಈ ಯಾವನೋ ಒಬ್ಬ ಐಂದ್ರಜಾಲಿಕನು ಎಲ್ಲಿಂದಲೋ ದೂರದಿಂದ ಬಂದನಷ್ಟೆ! ॥೩॥

ಇವನು, ಪ್ರಳಯಕಾಲದಲ್ಲಿ ಗಾಳಿಯೊಡಗೂಡಿದ ಮೇಘವು ದೊಡ್ಡದಾಗಿ ಕಾಮನಬಿಲ್ಲನ್ನು ತಿರುಗಿಸುವಂತೆ, ತೇಜಃಪುಂಜಪರಿವೃತವಾಗಿರುವ ಒಂದು ನವಿಲುಗರಿಯ ಬೊಂತೆಯನ್ನು ಇಲ್ಲಿ ತಿರುಗಿಸಿದನಲ್ಲವೆ! ॥೪॥

ಆಲೋಕ್ಯೈತಾಮಹಂ ಲೋಲಾಂ ಅಸ್ಯಾಶ್ವಸ್ಯ ಪುರಃ ಸ್ಥಿತಃ ।
ಪೃಷ್ಠಮಾರೂಢವಾನೇಕಃ ಆತ್ಮನಾ ಭ್ರಾನ್ತಮಾನಸಃ ॥೫॥
ತತೋದ್ರಿಂ ಪ್ರಳಯಕ್ಷುಬ್ಧಂ ಪುಷ್ಕರಾವರ್ತಕೋ ಯಥಾ ।
ತಥಾ ಚಲನ್ತಂ ಚಲಿತಃ ಸ್ವಾಶ್ವಮಾರೂಢವಾನಹಮ್ ॥೬॥
ಗನ್ತುಂ ಪ್ರವೃತ್ತೋ ಮೃಗಯಾಂ ಏಕೋಹಮತಿರಂಹಸಾ ।
ಉರ್ವರಾಮಿವ ನಿರ್ಘರ್ತುಃ ಕಲ್ಲೋಲಃ ಪ್ರಳಯಾಮ್ಬುಧೇಃ ॥೭॥
ತೇನಾನಿಲವಿಲೋಲೇನ ದೂರಂ ನೀತೋಸ್ಮಿ ವಾಜಿನಾ ।
ಭೋಗಾಭ್ಯಾಸಜಡೇನಾಜ್ಞೋ ಮುಗ್ಧಃ ಸ್ವಮನಸಾ ಯಥಾ ॥೮॥
ಅಕಿಞ್ಚನಮನಶ್ಶೂನ್ಯಂ ಸ್ತ್ರೀಚಿತ್ತಮಿವ ನಿರ್ಘರಮ್ ।
ತತಃ ಪ್ರಳಯನಿರ್ದಗ್ಧಜಗದಾಸ್ಪದಭೀಷಣಮ್ ॥೯॥
ನಿಷ್ಪಕ್ಷಿ ಕ್ಷಾರನೀಹಾರಂ ನಿರ್ವೃಕ್ಷಮಜಲಂ ಮಹತ್ ।
ಸಮ್ಪ್ರಾಪ್ತೋಹಮಪರ್ಯನ್ತಂ ಅರಣ್ಯಂ ಶ್ರಾನ್ತವಾಹನಃ ॥೧೦॥
ತದ್ದ್ವಿತೀಯಮಿವಾಕಾಶಂ ತಥಾಷ್ಟಮಮಿವಾಮ್ಬುಧಿಮ್ ।
ಪಞ್ಚಮಂ ಸಾಗರಮಿವ ಸಂಶುಷ್ಕಂ ಶೂನ್ಯಕೋಟರಮ್ ॥೧೧॥

ಹೀಗೆ ತಿರುಗುತಿರುವ ಈ ನವಿಲುಗರಿಯನ್ನು ನೋಡಿ, ಈ ಕುದುರೆಯ ಮುಂದೆ ನಿಂತಿದ್ದ ನಾನು, ಚಂಚಲಹೃದಯನಾಗಿ, ಇದರ ಬೆನ್ನುಮೇಲೆ ಕುಳಿತುಕೊಂಡೆನು ॥೫॥

ಆಬಳಿಕ, ಪ್ರಳಯಕಾಲದಲ್ಲಿ ಸಂಕ್ಷುಭಿತವಾದ ಪರ್ವತದಮೇಲೆ ಕುಳಿತುಕೊಂಡಿರುವ ಪುಷ್ಕರಾವರ್ತಕವೆಂಬ ಮೇಘವು ಹೇಗೆ ಭೂಮಿಯಲ್ಲೆಲ್ಲ ಸುತ್ತುವುದೋ, ಹಾಗೆ ಈ ಉತ್ತಮಾಶ್ವವನ್ನು ಹತ್ತಿಕೊಂಡು ನಾನು ಭೂಮಿಯನ್ನೆಲ್ಲ ಸುತ್ತಿದೆನು ॥೬॥

ಆಮೇಲೆ, ಪ್ರಳಯಕಾಲದಲ್ಲಿ ಅಭಿವರ್ಧಿಸಿರುವ ಸಮುದ್ರದ ತರಂಗವು ಸಸ್ಯಪರಿಪೂರ್ಣವಾದ ಭೂಮಿಗೆ ಹೋಗುವಂತೆ, ನಾನು ಅತಿ ವೇಗದಿಂದ ಆ ಕುದುರೆಯನ್ನು ಹತ್ತಿಕೊಂಡು ಒಬ್ಬೊಂಟಿಗನಾಗಿ ಬೇಟೆಗೆ ಹೋಗಲು ಪ್ರವರ್ತಿಸಿದೆನು ॥೭॥

ಹೀಗೆ ಬೇಟೆಗೆ ಹೋದ ನನ್ನನ್ನು, ಭೋಗಾಭ್ಯಾಸದಿಂದ ಜಡವಾದ ಮನಸ್ಸು ಮೂಢನಾದ ಅಜ್ಞಾನಿಯನ್ನು ಹೊತ್ತುಕೊಂಡು ಹೋಗುವಂತೆ, ವಾಯುವಿನಂತೆ ಹಾರುತಿರುವ ಆ ಕುದುರೆಯು ಬಹುದೂರವಾಗಿ ತೆಗೆದುಕೊಂಡು ಹೋಗಿಬಿಟ್ಟಿತು ॥೮॥

ಅನಂತರ ಬಹುದೂರ ಹೋಗಿ ಕುದುರೆಯು ಬಳಲಿಹೋಗಲಾಗಿ, ನಾನು, ಹುಟ್ಟುಬಡವನ (ಅಥವಾ ಯತಿಯ) ಮನಸ್ಸಿನಂತೆ ಶೂನ್ಯವಾಗಿಯೂ, ಸ್ತ್ರೀಯರ ಚಿತ್ತದಂತೆ ವಿಷಮವಾಗಿಯೂ, ಪ್ರಳಯಾಗ್ನಿಯಿಂದ ಸುಟ್ಟುಹೋದ ಬ್ರಹ್ಮಾಂಡಮಧ್ಯದಂತೆ ಅತಿ ಭಯಂಕರವಾಗಿಯೂ, ಮೃಗಪಕ್ಷಿಶೂನ್ಯವಾಗಿಯೂ, ತಡೆಯಲಾಗದ ಚಳಿಯುಳ್ಳದಾಗಿಯೂ, ಕೊನೆಯೇ ಇಲ್ಲದುದಾಗಿಯೂ ಇರುವ, ಒಂದು ದೊಡ್ಡಕಾಡನ್ನು ಸೇರಿದೆನು ॥೯-೧೦॥

ಆ ಅರಣ್ಯವು, ಎರಡನೆಯ ಆಕಾಶವೋ ಎಂಬಂತೆಯೂ, ಲವಣಾದಿ ಸಪ್ತಸಮುದ್ರಗಳಿಗೆ ಎಂಟನೆಯದಾಗಿ ಬಣಗಿರುವ ಮತ್ತೊಂದು ಸಮುದ್ರವೋ ಎಂಬಂತೆಯೂ, ಭೂಮಿಯ ನಾಲ್ಕು ದಿಕ್ಕಿನಲ್ಲಿಯೂ ಇರುವ ನಾಲ್ಕು ಸಮುದ್ರಗಳ ಜೊತೆಗೆ ಐದನೆಯದಾಗಿ ಉದಯಿಸಿ ಬಣಗಿಹೋಗಿರುವ ಬೇರೊಂದು ಸಾಗರವೋ ಎಂಬಂತೆಯೂ, ಅತಿವಿಶಾಲವಾಗಿ ಶೂನ್ಯತರವಾಗಿದ್ದಿತು ॥೧೧॥

ಜ್ಞಸ್ಯೇವ ವಿತತಂ ಚೇತೋ ಮೂರ್ಖಸ್ಯೇವ ರುಷಾಽಜವಮ್ |
ಅದೃಷ್ಟಜನಸಂಸರ್ಗಂ ಅಜಾತತೃಣಪಲ್ಲವಮ್ ||೧೨||
ಅರಣ್ಯಮಿದಮಾಸಾದ್ಯ ಮತಿರ್ಮೇ ಖೇದಮಾಗತಾ |
ಲಲನೇವೈತ್ಯ ದಾರಿದ್ರ್ಯಂ ನಿರನ್ನಫಲಬಾನ್ಧವಮ್ ||೧೩||
ಕಚನ್ಮರುಮರೀಚ್ಯಮ್ಬು ಪುರಃಪ್ಲುತಕಕುಮ್ಮುಖಮ್ |
ಆಸೂರ್ಯಾಸ್ತಂ ದಿನಂ ತತ್ರ ಪ್ರಕ್ರಾನ್ತಂ ಸೀದತಾ ಮಯಾ ||೧೪||
ತದರಣ್ಯಂ ಮಯಾತೀತಂ ಅತಿಕೃಚ್ಛ್ರೇಣ ಖೇದಿನಾ |
ವಿವೇಕಿನೇವ ಸಂಸಾರೋ ಮಧ್ಯಶೂನ್ಯತತಾಕೃತಿ ||೧೫||
ಯದೇತೇನಾತಿವಾಹ್ಯಾಹಂ ಪ್ರಾಪ್ತವಾನ್ ಜಙ್ಗಲಂ ಕ್ರಮಾತ್ |
ಅಸ್ತಾದ್ರಿಸಾನುಂ ಖಿನ್ನಾಶ್ವಃ ಶೂನ್ಯಭ್ರಾನ್ತ್ಯೇವ ಭಾಸ್ಕರಃ ||೧೬||
ಜಮ್ಬೂಕದಮ್ಬಪ್ರಾಯೇಷು ಕಲಾಲಾಪಾಃ ಪತತ್ರಿಣಃ |
ಯತ್ರ ಸ್ಫುರನ್ತಿ ಖಣ್ಡೇಷು ಪಾನ್ಥಾನಾಮಿವ ಬಾನ್ಧವಾಃ ||೧೭||
ಯತ್ರ ಶಷ್ಪಶಿಖಾಶ್ರೇಣ್ಯೋ ದೃಶ್ಯನ್ತೇ ವಿರಳಾಃ ಸ್ಥಲೇ |
ಕದರ್ಥಲಕ್ಷ್ಮ್ಯಾ ಕೃಪಣಸ್ಯ ಹೃದೀವಾನನ್ದವೃತ್ತಯಃ ||೧೮||

ಮತ್ತು, ಆ ಅರಣ್ಯವು, ಪ್ರಾಜ್ಞನ ಚಿತ್ತದಂತೆ ವಿಶಾಲವಾಗಿಯೂ, ಮೂರ್ಖನ ಕೋಪದಂತೆ ದುರ್ಗಮವಾಗಿಯೂ ಇದ್ದಿತು. ಅಲ್ಲಿ, ಜನರ ಸಹವಾಸವೇ ಕಾಣುತಿರಲಿಲ್ಲ; ಹುಲ್ಲುಗರಿಕೆಯೂ ಕೂಡ ಹುಟ್ಟಿರಲಿಲ್ಲ ||೧೨||

ಇಂತಹ ಅರಣ್ಯವನ್ನು ಹೊಂದಿ ನನ್ನ ಮನಸ್ಸು, ಅನ್ನವೂ ಹಣ್ಣುಹಂಪಲುಗಳೂ ಬಂಧುಬಳಗಗಳೂ ಇಲ್ಲದಂತೆ ದಾರಿದ್ರ್ಯವನ್ನು ಹೊಂದಿರುವ ಹೆಂಗಸಿನಹಾಗೆ, ದೈನ್ಯವನ್ನು ಪಡೆದು ಬಿಟ್ಟಿತು ||೧೩||

ಬಿಸಿಲ್ಗುದುರೆಗಳು ಹೊಳೆಯುತಲೂ ದಿಙ್ಮುಖಗಳು ಮುಂದುಗಡೆಯೇ ಕಾಣಿಸುತಲೂ ಇರುವ ಆ ಅರಣ್ಯದೊಳಗೆ, ನಾನು ಸಂಧ್ಯಾಕಾಲವಾಗುವವರೆಗೆ ಹಗಲೆಲ್ಲ ಖೇದವನ್ನು ಅನುಭವಿಸುತಿದ್ದೆನು ||೧೪||

ಅಲ್ಲಿ ಅತಿಯಾಗಿ ಖೇದಪಟ್ಟ ನಾನು, ವಿವೇಕಿಯಾದವನು ಸಂಸಾರವನ್ನು ದಾಟುವಂತೆ, ಶೂನ್ಯಮಧ್ಯವಾಗಿಯೂ ವಿಸ್ತಾರವಾಗಿಯೂ ಇರುವ ಆ ಅರಣ್ಯವನ್ನು ಅತಿಕಷ್ಟದಿಂದ ದಾಟಿಕೊಂಡು ಹೋದೆನು ||೧೫||

ಯಾವಾಗ ಈ ಕುದುರೆಯಿಂದ ಅದನ್ನೆಲ್ಲ ದಾಟಿಕೊಂಡು ಮುಂದಕ್ಕೆ ಹೋದೆನೋ, ಆಗ–ಆಕಾಶಮಾರ್ಗದಿಂದ ಹೋಗುತ ಕುದುರೆಗಳು ಆಯಾಸಪಟ್ಟಿರುವ ಸೂರ್ಯನು ಅಸ್ತಪರ್ವತವನ್ನು ಹೊಂದುವಂತೆ—ಅಲ್ಲಿ ದೊಡ್ಡದಾದ ಮತ್ತೊಂದು ಕಾಡನ್ನು ಹೊಂದಿದೆನು ||೧೬||

ಆ ಕಾಡಿನ ಮಧ್ಯಮಧ್ಯದಲ್ಲಿ, ಜಂಬೂ (ನೇರಳೆ) ಕದಂಬ (ಒಂದು ಬಗೆಯ ಈಚಲು) ಮುಂತಾದ ಮರಗಳಮೇಲೆ, ಅತಿ ಮಧುರವಾಗಿ ಧ್ವನಿಮಾಡುತಿರುವ ಪಕ್ಷಿಗಳು, ದಾರಿನಡೆದು ದಣಿದುಬಂದವರಿಗೆ ಬಂಧುಗಳೋಪಾದಿಯಲ್ಲಿ ವಿರಾಜಿಸುತಿದ್ದುವು ||೧೭||

ಆ ಅರಣ್ಯದಲ್ಲಿ, ಅಧರ್ಮದಿಂದ ಸಂಪಾದಿಸಲ್ಪಟ್ಟ ಧನದಿಂದ ವಕ್ರನಾದವನ ಮನಸ್ಸಿನಲ್ಲಿ ಆನಂದವುದಯಿಸುವಂತೆ, ಅಲ್ಲಲ್ಲಿ ದೂರ್ವಾಂಕುರಪಂಕ್ತಿಗಳು ವಿರಳವಿರಳವಾಗಿ ಉದಯಿಸಿದ್ದುವು ||

ಪೂರ್ವಾದರಣ್ಯಾದರಸಾತ್ ತದ್ಧಿ ಕಿಞ್ಚಿತ್ ಸುಖಾನಹಮ್ ।
ಅತ್ಯನ್ತದುಃಖಾನ್ಮರಣಾತ್ ವರಂ ವ್ಯಾಧಿರ್ಹಿ ಜನ್ತುಷು ॥೧೯॥
ತತ್ರ ಜಮ್ಬೀರಖಣ್ಡಸ್ಯ ತಲಂ ಸಂಪ್ರಾಪ್ತವಾನಹಮ್ ।
ಮಾರ್ಕಣ್ಡೇಯಇವಾಗೇನ್ದ್ರಂ ಏಕಾರ್ಣವವಿಹಾರತಃ ॥೨೦॥
ಆಲಮ್ಬಿತಾ ಮಯಾ ತತ್ರ ಸ್ಕನ್ಧಸಂಸರ್ಗಿಣೀ ಲತಾ ।
ನೀಲಾ ಜಲದಮಾಲೇವ ತಾಪತಪ್ತೇನ ಭೂಭೃತಾ ॥೨೧॥
ಮಯಿ ಪ್ರಲಮ್ಬಮಾನೇಸ್ಯಾಂ ಪ್ರಯಾತಃ ಸ ತುರಙ್ಗಮಃ ।
ಗಙ್ಗಾವಲಮ್ಬಿನಿ ನರೇ ಯಥಾ ದುಷ್ಕೃತಸಞ್ಚಯಃ ॥೨೨॥
ಚಿರಂ ದೀರ್ಘಾಧ್ವಗಃ ಖಿನ್ನಃ ತತ್ರ ವಿಶ್ರಾನ್ತವಾನಹಮ್ ।
ಭಾನುರಸ್ತಾಚಲೋತ್ಸಙ್ಗೇ ತಲೇ ಕಲ್ಪತರೋರಿವ ॥೨೩॥
ಯಾವತ್ ಸಮಸ್ತಸಂಸಾರವ್ಯವಹಾರಭರೈಃ ಸಮಮ್ ।
ರವಿರ್ವಿಶ್ರಮಣಾಯೇವ ನಿವಿಷ್ಟೋಸ್ತಾಚಲಾಙ್ಗಣೇ ॥೨೪॥
ಶನೈಃ ಶ್ಯಾಮಿಕಯಾ ಗ್ರಸ್ತೇ ಸಮಸ್ತೇ ಭುವನೋದರೇ ।
ರಾತ್ರಿಸಂವ್ಯವಹಾರೇಷು ಸಂಪ್ರವೃತ್ತೇಷು ಜಙ್ಗಲೇ ॥೨೫॥

ಆದರೆ, ಕೇವಲ ವಿರಸವಾಗಿದ್ದ ಮೊದಲನೆಯ ಅರಣ್ಯಕ್ಕಿಂತಲೂ ಅದು ನನಗೆ ಸುಖಕರವಾಗಿದ್ದಿತು. ಆತ್ಯಂತಿಕವಾಗಿ ದುಃಖವುಂಟುಮಾಡುವ ಮರಣಕ್ಕಿಂತಲೂ ಪ್ರಾಣಿಗಳಿಗೆ ರೋಗಾನುಭವವು ಸ್ವಲ್ಪ ವಾಸಿಯಾಗಿ ಕಾಣುವುದಲ್ಲವೆ! ॥೧೯॥

ಪೂರ್ವದಲ್ಲಿ ಮಾರ್ಕಂಡೇಯ ಮುನಿಯು ಏಕಾರ್ಣವವಾಗಿದ್ದ ಬ್ರಹ್ಮಾಂಡದಲ್ಲಿ ಸುತ್ತಿ— ಕೊನೆಗೆ ಮಹಾವಿಷ್ಣುವಿನಿಂದ ಆಶ್ರಯಿಸಲ್ಪಟ್ಟಿದ್ದ ವಟವೃಕ್ಷವನ್ನು ಹೊಂದಿದಂತೆ, ನಾನು ಅಲ್ಲಿಯೊಂದು ನಿಂಬೆಯ ತೋಪಿನ ತಳವನ್ನು ಆಶ್ರಯಿಸಿದೆನು ॥೨೦॥

ಆಗ ನಾನು, ಸೂರ್ಯಕಿರಣಸಂತಪ್ತವಾದ ಪರ್ವತವು ನೀಲವಾದ ಮೇಘಪಂಕ್ತಿಯನ್ನವಲಂಬಿಸುವಂತೆ, ಈ ಕುದುರೆಯನ್ನು ಬಿಟ್ಟು ಇಳಿಯುವುದಕ್ಕಾಗಿ, ಆ ನಿಂಬೆಯ ಗಿಡದ ಕೊಂಬೆಗೆ ಹಬ್ಬಿದ್ದ ಒಂದು ಲತೆಯನ್ನು ಹಿಡಿದುಕೊಂಡೆನು ॥೨೧॥

ನಾನು ಆ ಲತೆಯನ್ನು ಅವಲಂಬಿಸಿದಕೂಡಲೇ, ಪುರುಷರು ಗಂಗೆಯನ್ನು ಆಶ್ರಯಿಸಿದೊಡನೆಯೇ ಅವರ ಪಾಪಸಮುದಾಯವೆಲ್ಲವೂ ಹೊರಟುಹೋಗುವಂತೆ, ಈ ಕುದುರೆ ಯೆಲ್ಲಿಯೋ ಹೊರಟುಹೋಯಿತು ॥೨೨॥

ಆ ಬಳಿಕ, ದೀರ್ಘವಾಗಿ ದಾರಿನಡೆದು ಆಯಾಸಪಟ್ಟಿರುವ ನಾನು, ಅಸ್ತಪರ್ವತದ ಹತ್ತಿರ ಕಲ್ಪವೃಕ್ಷದ ತಳದಲ್ಲಿ ಸೂರ್ಯನು ವಿಶ್ರಮಿಸಿಕೊಳ್ಳುವಂತೆ, ಅಲ್ಲಿ ಬಹಳಹೊತ್ತು ವಿಶ್ರಮಿಸಿಕೊಂಡಿದ್ದೆನು ॥೨೩॥

ನಾನು ಅಲ್ಲಿ ವಿಶ್ರಾಂತಿಪಡೆಯುತಿರುವಾಗಲೇ, ಸೂರ್ಯನು, ತಾನೂ ವಿಶ್ರಾಂತಿಪಡೆಯುವುದಕ್ಕೋ ಎಂಬಂತೆ, ಸಮಸ್ತವಾದ ಪ್ರಪಂಚವ್ಯಾಪಾರಗಳೊಡನೆ, ಅಸ್ತಪರ್ವತದ ತಪ್ಪಲಿನಲ್ಲಿ ಸೇರಿಕೊಂಡನು ॥೨೪॥

ಆಗ, ಸಮಸ್ತವಾದ ಭುವನಮಧ್ಯಪ್ರದೇಶವೂ ಅಂಧಕಾರದಿಂದ ಆಕ್ರಮಿಸಲ್ಪಡಲಾಗಿ,

ಅಹಂ ತರುತೃಣೇ ತಸ್ಮಿನ್ ಪೇಲವೇ ಖಣ್ಡಕೋಟರೇ ।
ನಿಲೀನಶ್ಛಿಲಲೀನಾಸ್ಯಃ ಸ್ವನೀಡೇ ವಿಹಗೋ ಯಥಾ ॥೨೬॥
ವಿಪದಷ್ಟವಿವೇಕಸ್ಯ ಕೀನಾಶಸ್ಯ ಗಳತ್ಸ್ಮೃತೇಃ ।
ವಿಕ್ರೀತಸ್ಯೇವ ದೀನಸ್ಯ ಮಗ್ನಸ್ಯೇವಾನ್ಧಕೂಪಕೇ ॥೨೭॥
ತತ್ರ ಕಲ್ಪಸಮಾ ರಾತ್ರಿಃ ಮೋಹಮಗ್ನಸ್ಯ ಮೇ ಗತಾ ।
ಏಕಾರ್ಣವೋಹ್ಯಮಾನಸ್ಯ ಮಾರ್ಕಣ್ಡೇಯಮುನೇರಿವ ॥೨೮॥
ನ ಸ್ನಾತವಾನ್ ನಾರ್ಚಿತವಾನ್ ನ ತದಾ ಭುಕ್ತವಾನಹಮ್ ।
ಕೇವಲಂ ಮೇ ಗತಾ ರಾತ್ರಿಃ ಸಾಪದಾಂ ಧುರಿ ತಿಷ್ಠತಃ ॥೨೯॥
ವಿನಿದ್ರಸ್ಯ ವಿಧೈರ್ಯಸ್ಯ ಸ್ಫುರತಃ ಸಹ ಪಲ್ಲವೈಃ ।
ಸಮಂ ದುಷ್ಟಾತಿದೈರ್ಘ್ಯೇಣ ಸಾ ವ್ಯತೀಯಾಯ ಶರ್ವರೀ ॥೩೦॥
ತತಸ್ತಿಮಿರಲೇಖಾಸು ಸಹತಾರೇನ್ದುಕೈರವೈಃ ।
ಮಯೀವಾಪಾದ್ಯಮಾನಾಸು ಮ್ಲಾನತಾಮುಲಮಾನನೇ ॥೩೧॥
ಶಾಮ್ಯನ್ತೀಷು ಚ ವೇತಾಳಕ್ಷ್ವೇಳಾಸು ಜಿವಜಙ್ಗಲೇ ।
ಸಹ ಶೀತಾರ್ತಿಮದ್ದನ್ತಪಙ್ಕ್ತಿಟಾಙ್ಕಾರಸೀತ್ಕೃತೈಃ ॥೩೨॥

ಆ ಅರಣ್ಯದೊಳಗೆ ರಾತ್ರಿಯಲ್ಲಿ ನಡೆಯುವ ನಡತೆಗಳು ಪ್ರವರ್ತಿಸುತ್ತಿರಲು, ಒಂದು ಹಕ್ಕಿಯು ತನ್ನ ಗೂಡಿನಲ್ಲಡಗಿಕೊಳ್ಳುವಂತೆ, ನಾನು ಆ ಮರದ ಪೊದೆಯೊಳಗೆ ಕಸಕಡ್ಡಿಗಳನ್ನು ಮರೆಮಾಡಿಕೊಂಡು ಸೇರಿಕೊಂಡಿದ್ದೆನು ॥೨೫—೨೬॥

ಹಾವಿನಿಂದ ಕಚ್ಚಲ್ಪಟ್ಟು ವಿವೇಕಶೂನ್ಯನಾಗಿ ಸ್ಮೃತಿತಪ್ಪುತಿರುವ ಮರಣೋನ್ಮುಖನಾದ ಮನುಷ್ಯನಂತೆಯೂ, ಕ್ರಯಕ್ಕೆ ಕೊಡಲ್ಪಟ್ಟ ದೀನಪುರುಷನಂತೆಯೂ, ಹಾಳುಬಾವಿಯಲ್ಲಿ ಮುಣುಗಿದವನಂತೆಯೂ, ಮೋಹಮಗ್ನನಾಗಿರುವ ನನಗೆ, ಪೂರ್ವದಲ್ಲಿ ಏಕಾರ್ಣವದೊಳಗೆ ತೇಲಿಕೊಂಡುಹೋಗುತಿರುವ ಮಾರ್ಕಂಡೇಯಮುನಿಗೋಪಾದಿಯಲ್ಲಿ, ಆ ವನದೊಳಗೆ ಆವೊಂದು ರಾತ್ರಿಯು ಒಂದು ಕಲ್ಪಕ್ಕೆ ಸಮಾನವಾಗಿ ಕಳೆಯಿತು ॥೨೭—೨೮॥

ಆ ರಾತ್ರಿಯಲ್ಲಿ ನಾನು ಸ್ನಾನಮಾಡಲಿಲ್ಲ; ದೇವತಾರ್ಚನೆಯನ್ನೂ ಮಾಡಲಿಲ್ಲ; ಭೋಜನವನ್ನೂ ಮಾಡಲಿಲ್ಲ. ಆಪತ್ತುಗಳಿಗೆಲ್ಲ ಮುಂದೆ ಹೋಗಿ ನಿಂತಿರುವ ನನಗೆ, ಆ ರಾತ್ರಿಯು ವಿಪತ್ತುಗಳ ಚಿಂತೆಯಲ್ಲಿಯೇ ಕಳೆದುಹೋಯ್ತು ॥೨೯॥

ಆ ರಾತ್ರಿಯಲ್ಲಿ ನಾನು ನಿದ್ರೆ ಮಾಡಲಿಲ್ಲ; ನನಗೆ ಧೈರ್ಯವಂತು ಸುತರಾಂ ಇರಲಿಲ್ಲ. ಒಂದು ಸಣ್ಣ ಚಿಗುರು ಅಳ್ಳಾಡಿದರೂ, ಅದರ ಜತೆಯಲ್ಲಿ ನಾನೂ ಗಾಬರಿಯಿಂದ ಅಳ್ಳಾಡುತಿದ್ದೆನು. ಹೀಗಿರುವ ನನಗೆ, ಕಳೆಯಲಸಾಧ್ಯವಾಗಿದ್ದ ಅತಿದೀರ್ಘತ್ವದೊಡನೆ ಆ ರಾತ್ರಿಯು ಮುಗಿದುಹೋಯ್ತು ॥೩೦॥

ಆ ಬಳಿಕ, ಅಂಧಕಾರಪಂಕ್ತಿಗಳು ನಕ್ಷತ್ರ ಚಂದ್ರ ಕುಮುದಗಳೊಡನೆ ನನ್ನಂತೆ ಮುಖದಲ್ಲಿ ಮ್ಲಾನತೆಯನ್ನು ಹೊಂದುತಿರಲಾಗಿ, ಆ ಅರಣ್ಯದಲ್ಲಿದ್ದ ಬೇತಾಳಗಳ ಕೂಗುಗಳು ಚಳಿಯಿಂದ ನಡುಗುತಿರುವ ಹಲ್ಲುಗಳ ಸೀತ್ಕಾರಧ್ವನಿಗಳೊಡನೆ ಶಾಂತಿಹೊಂದುತಿರಲಾಗಿ, ಪೂರ್ವ

ಮಾಮೇವಾರ್ತಿವಿನಿರ್ಮಗ್ನಂ ಹಸನ್ತೀಮಿವ ದೃಷ್ಟವಾನ್ |
ಅಹಂ ಪೂರ್ವಾಂ ದಿಶಂ ಪ್ರಾಪ್ತಮಧುಪಾನಾರುಣಾಮಿವ ||೩೩||
ಕ್ಷಣಾದಜ್ಞ ಇವ ಜ್ಞಾನಂ ದರಿದ್ರ ಇವ ಕಾಞ್ಚನಮ್ |
ದೃಷ್ಟವಾನಹಮರ್ಕಂ ಖೇ ವಾರಣಾರೋಹಣೋನ್ಮುಖಮ್ ||೩೪||
ಉತ್ಥಾಯಾಸ್ತರಣಂ ವಸ್ತ್ರಂ ತತ್ ತದಾ ಸ್ಫೋಟಿತಂ ಮಯಾ |
ಹಸ್ತಿಚರ್ಮ ಹರೇಣೇವ ಸನ್ಧ್ಯಾನೃತ್ಯಾನುರಾಗಿಣಾ ||೩೫||
ಪ್ರವೃತ್ತಸ್ತಮಹಂ ಸ್ಫಾರಾಂ ವಿಹರ್ತುಂ ಜಙ್ಗಲಸ್ಥಲೀಮ್ |
ಕಾಲೋ ಜಗತ್ಕುಟೀಂ ಕಲ್ಪದಗ್ಧಭೂತಗಣಾಮಿವ ||೩೬||
ನ ಕಿಞ್ಚಿದ್ದೃಶ್ಯತೇ ತತ್ರ ಭೂತಂ ಜರಠಜಙ್ಗಲೇ |
ಅಭಿಜಾತೋ ಗುಣಲವೋ ಯಥಾ ಮೂರ್ಖಶರೀರಕೇ ||೩೭||
ಕೇವಲಂ ವಿಗತಾಶಙ್ಕಂ ಖಣ್ಡಭ್ರಮಣಚಞ್ಚಲಮ್ |
ಚೀಚೀಕೂಚೀತಿವಚನಾಃ ವಿಹರನ್ತಿ ವಿಹಙ್ಗಮಾಃ ||೩೮||
ಅಥಾಷ್ಟಭಾಗಮಾಪನ್ನೇ ವ್ಯೋಮ್ನೋ ದಿವಸನಾಯಕೇ |
ಶುಷ್ಕಾವಶ್ಯಾಯಲೇಶಾಸು ಸ್ನಾತಾಸ್ವಿವ ಲತಾಸು ಚ ||೩೯||

ದಿಕ್ಕು—ಮಧುಪಾನದಿಂದ ಅರುಣವಾದಂತೆಯೂ—ವಿಪತ್ತಿನಲ್ಲಿ ಮಗ್ನನಾದ ನನ್ನನ್ನೇ ಅಪಹಸಿಸುವಂತೆಯೂ ಬಿಳುಪೇರಿದುದನ್ನು ನಾನು ಕಂಡೆನು ||೩೧—೩೩||

ಆಮೇಲೆ ಒಂದುಕ್ಷಣದೊಳಗಾಗಿ, ಅಜ್ಞನು ಜ್ಞಾನವನ್ನು ಕಂಡಂತೆಯೂ, ದರಿದ್ರನು ಸುವರ್ಣವನ್ನು ಕಂಡಂತೆಯೂ, ನಾನು ಪೂರ್ವದಿಕ್ಕಿನಲ್ಲಿ ಅಂತರಿಕ್ಷದೊಳಗೆ ಐರಾವತವೆಂಬ ದಿಗ್ಗಜದಮೇಲೆ ಕುಳಿತಿರುವನಂತೆ ಕಾಣಿಸುತಿರುವ ಸೂರ್ಯನನ್ನು ನೋಡಿದೆನು ||೩೪||

ಆಕ್ಷಣವೇ ನಾನು ಎದ್ದವನಾಗಿ, ಸಂಧ್ಯಾತಾಂಡವ ಮಾಡುತಿರುವ ಪರಮೇಶ್ವರನು ತನ್ನ ಹೊದ್ದಿಕೆಯಾದ ಗಜಚರ್ಮವನ್ನು ಕೊಡವುವಂತೆ, ನಾನು ಹೊದ್ದುಕೊಂಡಿದ್ದ ವಸ್ತ್ರವನ್ನು ಕೊಡವಿದೆನು ||೩೫||

ಹೀಗೆ ಬಟ್ಟೆಯನ್ನು ಕೊಡವಿಕೊಂಡು ಎದ್ದ ನಾನು, ಪ್ರಳಯಾಗ್ನಿಯಿಂದ ಭೂತಗಣವೆಲ್ಲವೂ ಸುಟ್ಟುಹೋಗಿರುವ ಬ್ರಹ್ಮಾಂಡಮಂಡಲದೊಳಗೆ ಕಾಲವು ಸಂಚರಿಸುವಂತೆ, ಆ ವಿಶಾಲವಾದ ಕಾಡಿನಲ್ಲಿ ಸಂಚರಿಸುವುದಕ್ಕುಪಕ್ರಮಿಸಿದೆನು ||೩೬||

ಮೂರ್ಖನ ಶರೀರದಲ್ಲೆಲ್ಲ ಹುಡುಕಿದರೂ ಮನೋಹರವಾದ ಸುಗುಣಲೇಶವೂ ಸಿಕ್ಕದಿರುವಂತೆ, ಆ ಹಳೆಯಕಾಡಿನಲ್ಲೆಲ್ಲ ಸಂಚರಿಸಿದರೂ ಒಂದು ಪ್ರಾಣಿಯೂ ಕಾಣಿಸಲಿಲ್ಲ ||೩೭||

ಕೆಲವು ಪಕ್ಷಿಗಳು ಮಾತ್ರ, ಆ ಅರಣ್ಯದಲ್ಲೆಲ್ಲ ಸುತ್ತಿ ತಮ್ಮ ಚಾಪಲ್ಯಾನುಗುಣವಾಗಿ 'ಚೀಚೀ ಕೂಚೀ' ಎಂದು ಧ್ವನಿಮಾಡುತ, ಅಲ್ಲಿ ನಿರ್ಭಯವಾಗಿ ವಿಹರಿಸುತಿದ್ದುವು ||೩೮||

ಹೀಗೆ ನಾನು ಅಲ್ಲಲ್ಲಿ ಸಂಚರಿಸಿದ ಬಳಿಕ, ಸೂರ್ಯನು ಅಂತರಿಕ್ಷದಲ್ಲಿ ಎಂಟನೆಯೊಂದು ಭಾಗದಷ್ಟು ಎತ್ತರಕ್ಕೆ ಬಂದಿರಲಾಗಿ, ಮಂಜು ಸುರಿದು ಸ್ನಾನಮಾಡಿದ್ದಂತೆ ಕಾಣುತಿದ್ದ ಲತೆಗಳಲ್ಲಿ—ಆ ಮಂಜೆಲ್ಲ ಆರಿಹೋಗುತಿರಲಾಗಿ, ಅಮೃತಕುಂಭವನ್ನು ಕೈಯಲ್ಲಿ ಧರಿಸಿದ್ದ ಮೋಹಿನೀ

ದೃಷ್ಟಾ ಮಯಾ ಪ್ರಭ್ರಮತಾ ದಾರಿಕೌದನಧಾರಿಣೀ |
ಗೃಹೀತಾಮೃತಸತ್ಕುಮ್ಭಾ ದಾನವೇನೇವ ಮಾಧವೀ ||೪೦||
ತರತ್ತಾರಕನೇತ್ರಾನ್ತಾಂ ಶ್ಯಾಮಾಮಧವಳಾಮ್ಬರಾಮ್ |
ಅಹಮಭ್ಯಾಗತಸ್ತತ್ರ ಶರ್ವರೀಮಿವ ಚನ್ದ್ರಮಾಃ ||೪೧||
ಮಹ್ಯಮೋದನಮಾಶ್ವೇತತ್ ಬಾಲೇ ಬಲವದಾಪದಿ |
ದೇಹಿ ದೀನಾರ್ತಿಹರಣಾತ್ ಸ್ಫಾರತಾಂ ಯಾನ್ತಿ ಸಮ್ಪದಃ ||೪೨||
ಕ್ಷುದನ್ತರ್ಮಾಹತೀಯಂ ಮೇ ಬಾಲೇ ವೃದ್ಧಿಮುಪೇಯುಷೀ |
ಕೃಷ್ಣಸರ್ಪೀ ಪ್ರಸೂತೇವ ಕೋಟರಸ್ಥಾ ಜರದ್ದ್ರುಮೇ ||೪೩||
ಯಾಚ್ಞಯಾಪಿ ತಯಾ ಮಹ್ಯಂ ಇತ್ಥಂ ದತ್ತಂ ನ ಕಿಞ್ಚನ |
ಯತ್ನಪ್ರಾರ್ಥನಯಾ ಲಕ್ಷ್ಮ್ಯಾ ಯಥಾ ದುಷ್ಕೃತಿನೇ ಧನಮ್ ||೪೪||
ಕೇವಲಂ ಚಿರಕಾಲೇನ ಮಯಾತ್ಯನ್ತಾನುಗಾಮಿನಾ |
ಖಣ್ಡಾತ್ ಖಣ್ಡಂ ನಿಪತತಿ ಛಾಯಾಭೂತೇ ಪುರಃ ಸ್ಥಿತೇ ||೪೫||
ತಯೋಕ್ತಂ ಹಾರಕೇಯೂರಿಣ್ ಚಣ್ಡಾಲೀಂ ವಿದ್ಧಿ ಮಾಮಿತಿ |
ರಾಕ್ಷಸೀಮಿವ ಸುಕ್ರೂರಾಂ ಪುರುಷಾಶ್ವಗಜಾಶನಾಮ್ ||೪೬||

ವೇಷಧರನಾದ ಶ್ರೀಮಹಾವಿಷ್ಣುವು ರಾಕ್ಷಸರ ದೃಷ್ಟಿಪಥಕ್ಕೆ ಬಿದ್ದಂತೆ, ಕೈಯಲ್ಲಿ ಅನ್ನವನ್ನು ಹಿಡಿದುಕೊಂಡಿರುವ ಒಬ್ಬ ಬಾಲಿಕೆಯು, ಅಲ್ಲಲ್ಲಿ ಸಂಚರಿಸುತಿರುವ ನನ್ನ ದೃಷ್ಟಿಪಥಕ್ಕೆ ಬಿದ್ದಳು ||೩೯—೪೦||

ಆಗ, ರಾತ್ರಿಯ ಸಮೀಪಕ್ಕೆ ಚಂದ್ರನು ಸೇರುವಂತೆ, ಚಂಚಲವಾದ ಕಣ್ಣುಗುಡ್ಡೆಯುಳ್ಳವಳಾಗಿಯೂ ಕಪ್ಪುಬಣ್ಣದವಳಾಗಿಯೂ ಮಲಿನವಸ್ತ್ರಧರಳಾಗಿಯೂ ಇದ್ದ ಆ ಬಾಲಿಕೆಯ ಸಮೀಪಕ್ಕೆ ನಾನು ಹೋದೆನು ||೪೧||

ಆಮೇಲೆ ನಾನು ಅವಳನ್ನು ಹೀಗೆ ಪ್ರಾರ್ಥಿಸಿಕೊಂಡೆನು:—ಎಲೌ ಬಾಲಿಕೆ! ನನಗೆ ಈಗ ಪ್ರಬಲವಾದ ಪ್ರಾಣಸಂಕಟವುಂಟಾಗಿರುವಕಾರಣ, ನಿನ್ನಲ್ಲಿರುವ ಈ ಅನ್ನವನ್ನು ನನಗೆ ಬೇಗನೆ ಕೊಡು. ದೀನರಾದವರ ಸಂಕಟವನ್ನು ಪರಿಹರಿಸಿದರೆ, ಸಂಪತ್ತು ವೃದ್ಧಿಹೊಂದುವುದು ||

ಎಲೌ ಬಾಲಿಕೆ! ಮುದಿಮರದ ಪೊಟ್ಟರೆಯೊಳಗೆ ಆಗತಾನೆ ಪ್ರಸವಿಸಿದ (ಮೊಟ್ಟೆಹಾಕಿದ) ಹೆಣ್ಣುಹಾವು ತನ್ನ ಮೊಟ್ಟೆಗಳನ್ನು ತಾನೇ ತಿಂದುಬಿಡುವಂತೆ, ನನ್ನ ಹೊಟ್ಟೆಯೊಳಗೆ ವೃದ್ಧಿಹೊಂದುತಿರುವ ಅತಿ ಮಹತ್ತಾದ ಈ ಕ್ಷುತ್ತು ನನ್ನನ್ನು ತಿಂದುಬಿಡುತಿರುವುದು ||೪೩||

ಈರೀತಿಯಾಗಿ ನಾನು ಬಹಳ ಪ್ರಾರ್ಥಿಸಿಕೊಂಡರೂ, ಎಷ್ಟು ಪ್ರಯತ್ನದಿಂದ ಪ್ರಾರ್ಥಿಸಿದರೂ ಲಕ್ಷ್ಮಿಯು ಪಾಪಾತ್ಮನಿಗೆ ಧನವನ್ನು ಕೊಡದಿರುವಂತೆ, ಆ ಕನ್ಯಕೆಯು ನನಗೆ ಅನ್ನವನ್ನು ಸ್ವಲ್ಪವೂ ಕೊಡಲಿಲ್ಲ ||೪೪||

ಬಳಿಕ ಬಹಳಹೊತ್ತಿನವರೆಗೂ ಅವಳು ಹೋದಕಡೆಯಲ್ಲೆಲ್ಲ ನಾನು ಅವಳನ್ನನುಸರಿಸಿಕೊಂಡು ಹೋಗುತಿದ್ದೆನು. ಹೀಗೆ ಹೋಗುತಿರುವಾಗ, ಮುಂದೆ ಕೇವಲ ನೆಳಲಿನಂತೆ ಕಾಣುತಿರುವ ವೃಕ್ಷಷಂಡಗಳು ಒಂದಾದ ಮೇಲೊಂದರಂತೆ ಅನೇಕವಾಗಿ ಸಿಕ್ಕುತ ಬಂದುವು ||೪೫||

ಹೀಗೆ ಬಹುದೂರ ಹೋದಮೇಲೆ, ಆ ಕನ್ಯಕೆಯು ನನ್ನನ್ನು ಕುರಿತು ಹೀಗೆ ಹೇಳಿದಳು:-

ರಾಜನ್ ಯಾಚನಮಾತ್ರೇಣ ಮತ್ತೋ ನಾಪ್ನೋಷಿ ಭೋಜನಮ್ ।
ಗ್ರಾಮ್ಯಾದನಭಿಜಾತೇಹಾತ್ ಸೌಜನ್ಯಮಿವ ಸುನ್ದರಮ್ ‖೪೭‖
ಇತ್ಯುಕ್ತ್ವಾ ಗಚ್ಛನ್ತ್ಯಾ ಖೇಲಯಾ ಚ ಪದೇಪದೇ ।
ಕುಞ್ಜಕೇಷು ನಿಮಜ್ಜನ್ತ್ಯಾ ಲೀಲಾವನತಯೋದಿತಮ್ ‖೪೮‖
ದದಾಮಿ ಭೋಜನಮಿದಂ ಭರ್ತಾ ಭವಸಿ ಚೇನ್ಮಮ ।
ಲೋಕೋ ನೋಪಕರೋತ್ಯರ್ಥೈಃ ಸಾಮಾನ್ಯಃ ಸ್ನಿಗ್ಧತಾಂ ವಿನಾ ‖೪೯‖
ವಾಹಯತ್ಯತ್ರ ಮೇ ದಾನ್ತಾನ್ ಕೇದಾರೇ ಪುಲ್ಕಸಃ ಪಿತಾ ।
ಸ್ಮಶಾನಇವ ವೇತಾಳಃ ಕ್ಷುಧಿತೋ ಧೂಳಿಧೂಸರಃ ‖೫೦‖
ತಸ್ಯೇದಮನ್ನಂ ಭವತಿ ಭರ್ತೃತ್ವೇ ದೀಯತೇ ಸ್ಥಿತೇ ।
ಪ್ರಾಣೈರಪಿ ಹಿ ಸಂಪೂಜ್ಯಾಃ ವಲ್ಲಭಾಃ ಪುರುಷಾಯತಃ ‖೫೧‖
ಅಥೋಕ್ತಾ ಸಾ ಮಯಾ ಭರ್ತಾ ಭವಾಮಿ ತವ ಸುವ್ರತೇ ।
ಕೇನಾಪದಿ ವಿಚಾರ್ಯನ್ತೇ ವರ್ಣಧರ್ಮಕುಲಕ್ರಮಾಃ ‖೫೨‖

ಹಾರ ಅಂಗದ ಮುಂತಾದ ಆಭರಣಗಳನ್ನು ಧರಿಸಿರುವ ಎಲೈ ರಾಜನೆ! ನಾನು ಚಂಡಾಲಸ್ತ್ರೀಯೆಂದು ತಿಳಿ. ನಾನು, ರಾಕ್ಷಸಿಯಂತೆ ಮಹಾಕ್ರೂರಳಾಗಿ, ಮನುಷ್ಯ ಅಶ್ವ ಗಜ ಮುಂತಾದುವುಗಳನ್ನೆಲ್ಲ ಆಹಾರಮಾಡತಕ್ಕವಳಾಗಿರುವೆನು ॥೪೬॥

ಎಲೈ ರಾಜನೆ! ನೀನು ಹೀಗೆ ಯಾಚಿಸಿದ ಮಾತ್ರದಿಂದಲೇ ನನ್ನ ದೆಸೆಯಿಂದ ಆಹಾರವನ್ನು ಪಡೆಯಲಾರೆ. ತಾನಾಗಿ ಅಪೇಕ್ಷಿಸದಿರತಕ್ಕ ಗ್ರಾಮೀಣಪುರುಷನ ದೆಸೆಯಿಂದ ಉತ್ತಮವಾದ ಸೌಹಾರ್ದವನ್ನು ಪಡೆಯುವುದು ಅಸಾಧ್ಯವಾದುದಲ್ಲವೆ! ॥೪೭॥

ಹೀಗೆ ಹೇಳಿಬಿಟ್ಟು, ಆ ಚಂಡಾಲ ಕನ್ಯಕೆಯು, ಮತ್ತೆ ಸವಿಲಾಸವಾಗಿ ಹೋಗುತ, ಪದೇಪದೇ ಲತಾಗೃಹಗಳಲ್ಲಿ ಮರೆಯಾಗುತ, ಕಟಾಕ್ಷಾದಿ ವಿಲಾಸಗಳನ್ನು ತೋರಿಸುತ, ಪುನಃ ನಮ್ರಳಾಗಿ ಹೀಗೆ ಹೇಳಿದಳು ॥೪೮॥

ಎಲೈ ದೊರೆಯೆ! ನೀನು ನನಗೆ ಪತಿಯಾಗುವಪಕ್ಷದಲ್ಲಿ, ನಾನು ನಿನಗೆ ಈ ಅನ್ನವನ್ನು ಕೊಡುವೆನು. ಪ್ರಪಂಚದಲ್ಲಿ, ಸಾಮಾನ್ಯಜನರು ಸ್ನೇಹವಿದ್ದಹೊರತು ತಮ್ಮ ಅರ್ಥವನ್ನು ಇತರರಿಗೆ ಕೊಟ್ಟು ಉಪಕಾರಮಾಡುವುದಿಲ್ಲವಲ್ಲವೆ! ॥೪೯॥

ಇಲ್ಲಿಯೇ ಹತ್ತಿರದಲ್ಲಿ, ಸ್ಮಶಾನದಲ್ಲಿ ಬೇತಾಳನಿರುವಂತೆ, ಗದ್ದೆಯಲ್ಲಿರುವ ಚಂಡಾಲಜಾತಿಯವನಾದ ನಮ್ಮ ತಂದೆಯು, ಹಸಿದು, ಧೂಳಿವ್ಯಾಪ್ತನಾಗಿ, ಆಯಾಸಪಟ್ಟಿರುವ ಎತ್ತುಗಳನ್ನು ಕಟ್ಟಿಕೊಂಡು ಉಳುತಿರುವನು ॥೫೦॥

ಈ ಅನ್ನವು ಅವನದಾಗಿರುವುದು. ನೀನು ನನಗೆ ಪತಿಯಾಗುವುದಕ್ಕೊಪ್ಪಿಕೊಂಡರೆ, ಇದನ್ನು ನಿನಗೆ ಕೊಡುವೆನು. ಲೋಕದಲ್ಲಿ, ಪತಿಯನ್ನು ತನ್ನ ಪ್ರಾಣಗಳಿಂದಲಾದರೂ ತೃಪ್ತಿಪಡಿಸಬೇಕಾಗಿರುವುದು ॥೫೧॥

ಎಲೈ ಸಭಾಸದರೆ! ಹೀಗೆಂದು ಹೇಳಿದ ಆ ಚಂಡಾಲಕನ್ಯಕೆಯನ್ನು ಕುರಿತು—'ಎಲೌ ಉತ್ತಮವ್ರತಳೆ! ನಿನ್ನ ಮಾತಿನಂತೆಯೇ ನಾನು ನಿನಗೆ ಭರ್ತನಾಗುವೆನು. ಆಪತ್ಕಾಲವೊದಗಿಬಿಟ್ಟಿರುವಾಗ, ವರ್ಣಧರ್ಮಗಳನ್ನೂ ಕುಲಕ್ರಮಗಳನ್ನೂ ಯಾರು ವಿಚಾರಮಾಡುವರು?' ಎಂದು ನಾನು ಹೇಳಿದೆನು ॥೫೨॥

ತತಸ್ತಯೌದನಾದರ್ಧಂ ಮಹ್ಯಮೇಕಂ ಸಮರ್ಪಿತಮ್ |
ಮಾಧವ್ಯೇವಾಮೃತಾದರ್ಧಂ ಇನ್ದ್ರಾಯಾರ್ತಿಮಹತ್ ಪುರಾ ||೫೩||
ಜಮ್ಬೂಫಲರಸಃ ಪೀತಃ ಸ ಭುಕ್ತಃ ಪಕ್ವಣೌದನಃ |
ವಿಶ್ರಾನ್ತಂ ಚ ಮಯಾ ತತ್ರ ಮೋಹಾಪಹೃತಚೇತಸಾ ||೫೪||
ಮಾಂ ತತ್ರಾರ್ಕಮಿವಾಪೂರ್ಯ ಸಾ ಪ್ರಾವೃಟ್ಛ್ಯಾಮಲಾ ಗತಾ |
ಹಸ್ತೇನ ಸಮುಪಾದಾಯ ಪ್ರಾಣಂ ಬಹಿರಿವ ಸ್ಥಿತಮ್ ||೫೫||
ದುರಾಕೃತಿಂ ದುರಾರಮ್ಭಂ ಆಜಸಾದ ಭಯಪ್ರದಮ್ |
ಪಿತರಂ ಪೀವರಾಕಾರಂ ಅವೀಚಿಮಿವ ಯಾತನಾ ||೫೬||
ತಯಾ ಮದನುಷಙ್ಗಿಣ್ಯಾ ಸ್ವಾರ್ಥಸ್ತಸ್ಮೈ ನಿವೇದಿತಃ |
ಮಾತಙ್ಗ್ಯಾ ಭ್ರಮರ್ಯೇವ ನಿಸ್ವನೇನಾಳಿಲಗ್ನಯಾ |
ಅಯಂ ಮಮ ಭವೇದ್ಭರ್ತಾ ತಾತ ಹೇ ತವ ರೋಚತಾಮ್ ||೫೭||
ಸ ತಸ್ಯಾ ಬಾಢಮಿತ್ಯುಕ್ತ್ವಾ ದಿನಾನ್ತೇ ಸಮುಪಸ್ಥಿತೇ |
ಮುಮೋಚ ದಾನ್ತಾವಾಬದ್ಧೌ ಕೃತಾನ್ತಃ ಕಿಙ್ಕರಾವಿವ ||೫೮||
ನೀಹಾರಾಭ್ರಕಡಾರಾಸು ದಿಕ್ಷು ಪ್ರೋದ್ಧೂಳಿತಾಸು ಚ |
ವೇತಾಳ ಬನ್ಧನಾತ್ ತಸ್ಮಾತ್ ದಿನಾನ್ತೇ ಚಲಿತಾವಯಮ್ ||೫೯||

ಅನಂತರ, ಪೂರ್ವದಲ್ಲಿ ಮೋಹಿನಿಯು ಆರ್ತನಾದ ಇಂದ್ರನಿಗೆ ಪ್ರಶಸ್ತವಾದ ಅಮೃತದಲ್ಲಿ ಅರ್ಧಭಾಗವನ್ನು ಕೊಟ್ಟಂತೆ, ಆ ಚಂಡಾಲಕನ್ಯಕೆಯು ತಾನು ತಂದಿದ್ದ ಅನ್ನದಲ್ಲಿ ಅರ್ಧಭಾಗವನ್ನು ನನಗೆ ಕೊಟ್ಟುಬಿಟ್ಟಳು ॥೫೩॥

ಆಗ ನಾನು ಯಥೇಚ್ಛವಾಗಿ ಜಂಬೂಫಲದ ರಸವನ್ನು ಪಾನಮಾಡಿದೆನು; ಆ ಬೇಡರ ಕೇರಿಯಲ್ಲಿ ಪಕ್ವವಾದ ಅನ್ನವನ್ನು ಭುಜಿಸಿದೆನು. ಆಮೇಲೆ, ಮೋಹಾಪಹೃತಚಿತ್ತನಾಗಿ, ಅಲ್ಲಿಯೇ ವಿಶ್ರಾಂತಿಪಡೆಯುತ ಮಲಗಿದೆನು ॥೫೪॥

ಆಗ ಅವಳು, ವರ್ಷಾಕಾಲವು ಸೂರ್ಯನನ್ನು ಮರೆಯಾಗಿಸುವಂತೆ ನನ್ನನ್ನು ಮರೆಮಾಡಿಕೊಂಡು, ಬಹಿಃಸ್ಥಿತವಾದ ಪ್ರಾಣದಂತೆ ನನ್ನನ್ನು ಕೈಯಲ್ಲಿ ಹಿಡಿದುಕೊಂಡು ಹೊರಟಳು॥೫೫॥

ಹೀಗೆ ಸ್ವಲ್ಪದೂರ ಮಾತ್ರ ಹೋದವಳಾಗಿ, ಅವೀಚಿಯೆಂಬ ನರಕವನ್ನು ಯಾತನೆಯು ಸಮೀಪಿಸುವಂತೆ, ದುಷ್ಟವಾದ ಆಕಾರವುಳ್ಳವನಾಗಿಯೂ ದುಷ್ಟಕಾರ್ಯಾಸಕ್ತನಾಗಿಯೂ ಅತಿ ಭಯಂಕರನಾಗಿಯೂ ಮಹಾಸ್ಥೂಲನಾಗಿಯೂ ಇರುವ ತನ್ನ ತಂದೆಯನ್ನು ಸಮೀಪಿಸಿದಳು॥೫೬

ಆ ಬಳಿಕ, ಒಂದು ಗಂಡುದುಂಬಿಯೊಡಗೂಡಿದ ಹೆಣ್ಣುದುಂಬಿಯು ತನ್ನ ಧ್ವನಿಯಿಂದಲೇ ಹೃದಯಾಭಿಪ್ರಾಯವನ್ನು ಸೂಚಿಸುವಂತೆ, ನನ್ನೊಡಗೂಡಿರುವ ಆ ಚಂಡಾಲಬಾಲಿಕೆಯು ತನ್ನ ತಂದೆಯ ಕಿವಿಯಲ್ಲಿ 'ಹೇ ತಾತ! ಇವನು ನನಗೆ ಭರ್ತನಾಗಿರುವನು. ನೀನೂ ಇದನ್ನು ಸಮ್ಮತಿಸಬೇಕು' ಎಂದು ತನ್ನ ಹೃದಯಾಭಿಪ್ರಾಯವನ್ನು ತಿಳಿಯಿಸಿದಳು ॥೫೭॥

ಅವನು 'ಹಾಗೆಯೇ ಆಗಲೆಂದು ಅವಳಿಗೆ ಹೇಳಿಬಿಟ್ಟು, ಸಂಧ್ಯಾಕಾಲಪ್ರಾಪ್ತವಾಗಲಾಗಿ, ಯಮನು ಕಿಂಕರರನ್ನು ಬಿಡುವಂತೆ, ಉಳುತಿದ್ದ ಎತ್ತುಗಳನ್ನು ಬಿಚ್ಚಿಬಿಟ್ಟನು ॥೫೮॥

ಬಳಿಕ ಸಂಧ್ಯಾಕಾಲದಲ್ಲಿ ಧೂಳಿಧೂಸರಗಳಾದ ದಿಕ್ಕುಗಳು ಪಿಂಗಳ ವರ್ಣಗಳಾಗಲಾಗಿ, ಪಿಶಾಚಗಳಿಗಾವಾಸವಾದ ಆ ಅರಣ್ಯದದೆಸೆಯಿಂದ ನಾವುಗಳೆಲ್ಲರೂ ಹೊರಟುಬಿಟ್ಟೆವು ॥೫೯॥

ಕ್ಷಣೇನ ಪಕ್ವಣಂ ಪ್ರಾಪ್ತಾಃ ಸನ್ಧ್ಯಾಯಾಂ ದೀರ್ಘಜಙ್ಗಲಾತ್ ।
ಸ್ಮಶಾನಾದಿವ ವೇತಾಳಾಃ ಸ್ಮಶಾನಮಿತರನ್ಮಹತ್ ॥೬೦॥
ವಿಕರ್ತಿತವಿಭಾಗಸ್ಥಕಪಿಕುಕ್ಕುಟವಾಯಸಮ್ ।
ರಕ್ತಸಿಕ್ತೋರ್ವರಾಭಾಗಪ್ರಭ್ರಮನ್ಮಕ್ಷಿಕಾಗಣಮ್ ॥೬೧॥
ಶೋಷಾರ್ಥಂ ಪ್ರಸೃತಾದ್ರಾನ್ತ್ರತನ್ತ್ರೀಜಾಲಪತತ್ಖಗಮ್ ।
ನಿಷ್ಕುಟಸ್ಥಿತಜಮ್ಬೀರಖಣ್ಡಲಗ್ನಖಗಧ್ವನಿ ॥೬೨॥
ಶುಷ್ಯದ್ದುರುವಸಾಪಿಣ್ಡಪೂರ್ಣಾಳಿನ್ದಲಸತ್ಖಗಮ್ ।
ದೃಷ್ಟಿಪ್ರಸೃತರಕ್ತಾಕ್ತಚರ್ಮಸ್ರವದಸೃಗ್ಘನಮ್ ॥೬೩॥
ಬಾಲಹಸ್ತಸ್ಥಿತಕ್ರವ್ಯಪಿಣ್ಡಕ್ವಣಿತಮಕ್ಷಿಕಮ್ ।
ಜರ್ಜರಾಧಿಷ್ಠಚಣ್ಡಾಲತರ್ಜಿತಾರಟಿತಾರ್ಭಕಮ್ ॥೬೪॥
ತತ್ ಪ್ರವಿಷ್ಟಾವಯಂ ಕೀರ್ಣಸಿರಾನ್ತ್ರಂ ಭೀಮಪಕ್ವಣಮ್ ।
ಮೃತಭೂತಂ ಜಗತ್ ಕಲ್ಪೇ ಕೃತಾನ್ತಾನುಚರಾಇವ ॥೬೫॥
ಸಮ್ಭ್ರಮೋಪಹಿತಾನಲ್ಪಕದಳೀದಳಪೀಠಕೇ ।
ಅಹಮಾಸ್ಥಿತವಾಂಸ್ತತ್ರ ನವೇ ಶ್ವಶುರಮನ್ದಿರೇ ॥೬೬॥

ಆಮೇಲೆ ಒಂದುಕ್ಷಣದೊಳಗಾಗಿ, ಪಿಶಾಚಗಳು ಒಂದು ಸ್ಮಶಾನವನ್ನು ಬಿಟ್ಟು ಮತ್ತೊಂದು ಸ್ಮಶಾನಕ್ಕೆ ಹೋಗುವಂತೆ, ನಾವು ಸಂಧ್ಯಾಕಾಲದಲ್ಲಿ ಆ ದೊಡ್ಡಕಾಡನ್ನು ಬಿಟ್ಟು ಬೇಡರ (ಕಟುಗರ) ಕೇರಿಗೆ ಬಂದು ಸೇರಿದೆವು ॥೬೦॥

ಆ ಬೇಡರ ಬೀದಿಯಲ್ಲಿ, ಕೋತಿ ಕೋಳಿ ಕಾಗೆ ಮುಂತಾದುವುಗಳನ್ನು ಕತ್ತರಿಸಿ ಬೇರೆ ಬೇರೆಯಾಗಿ ಇಟ್ಟಿದ್ದರು. ರಕ್ತದಿಂದ ನೆನೆದಿರುವ ಪ್ರದೇಶದಲ್ಲಿ ನೊಣಗಳು ಗುಂಪುಗುಂಪಾಗಿ ಹಾರಾಡುತಿದ್ದುವು ॥೬೧॥

ಒಣಗಿಸುವುದಕ್ಕೋಸ್ಕರ ನೇತುಹಾಕಿದ್ದ ನರಗಳಮೇಲೆ ಹಕ್ಕಿಗಳು ಬಂದು ಕುಳಿತುಕೊಳ್ಳುತಿದ್ದುವು. ಮನೆಯ ಅಂಗಳದಲ್ಲಿ ಬೆಳೆದಿದ್ದ ನಿಂಬೆಯ ಗಿಡಗಳಮೇಲೆ ಹಕ್ಕಿಗಳು ಕುಳಿತು ಕೊಂಡು ಧ್ವನಿಮಾಡುತಿದ್ದುವು ॥೬೨॥

ಪ್ರಾಣಿಗಳ ಕೊಬ್ಬನ್ನು ಉಂಡೆಮಾಡಿ ಒಣಗಹಾಕಿರುವುದರಿಂದ, ಅವುಗಳಲ್ಲಿ ಆಸೆಪಟ್ಟು ಬರುತಿರುವ ಹಕ್ಕಿಗಳು ದ್ವಾರದೇಶವನ್ನೆಲ್ಲ ತುಂಬಿಬಿಟ್ಟಿದ್ದುವು. ನೇತ್ರಪ್ರದೇಶದಿಂದ ಹೊರಟ ರಕ್ತವು, ಚರ್ಮವನ್ನೆಲ್ಲ ನೆನೆಯಿಸಿ, ಅದರ ದೆಸೆಯಿಂದ ಹನಿಹನಿಯಾಗಿ ಬೀಳುತಿದ್ದಿತು ॥೬೩॥

ಬಾಲಕರ ಕೈಯಲ್ಲಿರುವ ಮಾಂಸದುಂಡೆಗಳಮೇಲೆ ನೊಣಗಳು ಧ್ವನಿಮಾಡುತಿದ್ದುವು. ಅಲ್ಲಿಗೆ ಮುಖ್ಯಭೂತರಾಗಿರುವ ವೃದ್ಧಚಂಡಾಲರು, ಅಳುತಿರುವ ಮಕ್ಕಳನ್ನು ಹೆದರಿಸುತಿದ್ದರು ॥೬೪॥

ಅಲ್ಲಲ್ಲಿ ಸಣ್ಣ ದೊಡ್ಡ ನರಗಳು ಯಥೇಚ್ಛವಾಗಿ ತುಂಬಿದ್ದುವು. ಇಂತಹ ಅತಿ ಭಯಂಕರ ವಾದ ಆ ಕಟುಗರ ಬೀದಿಯನ್ನು, ಪ್ರಳಯಕಾಲದಲ್ಲಿ ಪ್ರಾಣಿಗಳೆಲ್ಲವೂ ಮೃತವಾಗಿರುವ ಜಗತ್ತನ್ನು ಯಮಭಟರು ಪ್ರವೇಶಿಸುವಂತೆ, ನಾವುಗಳೆಲ್ಲರೂ ಪ್ರವೇಶಿಸಿದೆವು ॥೬೫॥

ಹೀಗೆ ಪ್ರವೇಶಿಸಿದನಂತರ, ಆ ಹೊಸಮಾವನ ಮನೆಯಲ್ಲಿ, ಸಡಗರದಿಂದ ತಂದುಹಾಕಿದ ಒಂದು ಬಾಳೆಲೆಯೆಂಬ ಆಸನದಮೇಲೆ ನಾನು ಕುಳಿತುಕೊಂಡೆನು ॥೬೬॥

ಶ್ವಶ್ರ್ವಾ ಮೇ ಕೋಕರಾಕ್ಷ್ಯಾ ತು ತೇನಾಸೃಗ್ಲವಚಕ್ಷುಷಾ ।
ಜಾಮಾತಾಯಮಿತಿ ಪ್ರೋಕ್ತಂ ತಯಾ ತದಭಿನನ್ದಿತಮ್ ॥೬೭॥
ಅಥ ವಿಶ್ರಮ್ಯ ಚಣ್ಡಾಲಭೋಜನಾನ್ಯಜಿನಾಸನೇ ।
ಸಞ್ಛಿತಾನ್ಯುಪಭುಕ್ತಾನಿ ದುಷ್ಕೃತಾನೀವ ಭೂರಿಶಃ ॥೬೮॥
ಅನನ್ತದುಃಖಬೀಜಾನಿ ಸಮನೋಜ್ಞತರಾಣ್ಯಪಿ ।
ತಾನಿ ಪ್ರಣಯವಾಕ್ಯಾನಿ ಶ್ರುತಾನ್ಯಸುಭಗಾನ್ಯಲಮ್ ॥೬೯॥
ನಿರಭ್ರಾಮ್ಬರನಕ್ಷತ್ರೇ ಕಸ್ಮಿಂಶ್ಚಿದ್ದಿವಸೇ ತತಃ ।
ತೈಸ್ತೈರಾರಮ್ಭಸಂರಮ್ಭೈಃ ತೈರ್ವಸ್ತ್ರವಿಭವಾರ್ಪಣೈಃ ॥೭೦॥
ದತ್ತಾಪ್ಯನೇನ ಸಾ ಮಹ್ಯಂ ಕುಮಾರೀ ಭಯದಾಯಿನೀ ।
ಸುಕೃಷ್ಣಾ ಕೃಷ್ಣವರ್ಣೇನ ದುಷ್ಕೃತೇನೇವ ಯಾತನಾ ॥೭೧॥
ಸರಭಸಮಭಿತೋ ವಿನೇದುರತ್ರ ಪ್ರಸೃತಮಹಾಮದಿರಾಸವಾಃ ಶ್ವಪಾಕಾಃ ।
ಹತಪಟುಪಟಹಾವಿಲಾಸವನ್ತಃ ಸ್ವಯಮಿವ ದುಷ್ಕೃತರಾಶಯೋ ಮಹಾನ್ತಃ ॥೭೨॥

ಇತಿ ಉತ್ಪತ್ತಿಪ್ರಕರಣೇ ಇನ್ದ್ರಜಾಲೋಪಾಖ್ಯಾನೇ
ಚಾಣ್ಡಾಲೀವಿವಾಹೋ ನಾಮ ಷಡುತ್ತರಶತತಮಃ ಸರ್ಗಃ.

ಆಗ, ರಕ್ತದಂತೆ ಕೆಂಪಾದ ಕಣ್ಣುಳ್ಳ ನಮ್ಮ ಮಾವನು, ಅತ್ತೆಯನ್ನು ಕುರಿತು 'ಇವನು ನಮ್ಮ ಅಳಿಯನು' ಎಂದು ಹೇಳಿದನು. ಮಹಾವಕ ನೇತ್ರೆಯಾದ ಅವಳು, ಆ ಮಾತನ್ನು ಬಹಳವಾಗಿ ಶ್ಲಾಘಿಸಿದಳು ॥೬೭॥

ಆ ಬಳಿಕ, ಚರ್ಮಮಯವಾದ ಆಸನದಮೇಲೆ ವಿಶ್ರಾಂತಿ ತೆಗೆದುಕೊಂಡು, ಪುರಾತನ ದುಷ್ಕರ್ಮಫಲಗಳನ್ನನುಭವಿಸುವಂತೆ, ಕೂಡಿಸಿಟ್ಟಿದ್ದ ಚಂಡಾಲಯೋಗ್ಯವಾದ ಆಹಾರವನ್ನು ನಾನು ಊಟಮಾಡಿದೆನು ॥೬೮॥

ಅಪಾರದುಃಖ ಹೇತುವಾಗಿ ಕೇವಲ ತುಚ್ಛವಾಗಿ ಬಹುಕ್ರೂರವಾಗಿ ಅವರು ಆಡುತಿರುವ ಉಪಚಾರೋಕ್ತಿಗಳನ್ನೂ ಯಥೇಚ್ಛವಾಗಿ ನಾನು ಕೇಳಿದೆನು ॥೬೯॥

ಹೀಗೆಲ್ಲ ಆದಮೇಲೆ, ಮೇಘನಕ್ಷತ್ರಾದಿ ರಹಿತವಾಗಿರುವ ಒಂದಾನೊಂದು ದಿವಸ, ಚಂಡಾಲೋಚಿತವಾದ ಆಯಾ ಮದ್ಯಮಾಂಸಾದಿ ಸಾಮಗ್ರಿಗಳನ್ನೂ ಅದಕ್ಕನುಗುಣವಾದ ವಸ್ತ್ರಾಭರಣಾದಿಗಳನ್ನೂ ಸಿದ್ಧಪಡಿಸಿಕೊಂಡು, ಅತಿ ಕೃಷ್ಣವರ್ಣನಾಗಿರುವ ಆ ಚಂಡಾಲನು, ಪಾಪಕರ್ಮವು ದುಃಖವನ್ನು ಕೊಡುವಂತೆ, ಆ ಭಯಂಕರಳಾದ ತನ್ನ ಮಗಳನ್ನು ನನಗೆ ಕೊಟ್ಟನು॥

ಹೀಗೆ ನನಗೆ ಅಲ್ಲಿ ನಡೆದ ಆ ವಿವಾಹೋತ್ಸವಕಾಲದಲ್ಲಿ, ಆ ಊರಿನ ಶ್ವಪಾಕರೆಲ್ಲರೂ, ಮದ್ಯಪಾನದ ಮದವೇರಿದವರಾಗಿ, ಬಹು ಸಂಭ್ರಮಯುಕ್ತರಾಗಿ, ದೊಡ್ಡದೊಡ್ಡ ತಮಟೆಗಳನ್ನು ಹೊಡೆಯುತ, ಮಹಾಪಾತಕರಾಶಿಗಳೇ ಬಂದಿವೆಯೋ ಎಂಬಂತೆ, ನನ್ನ ಸುತ್ತಲೂ ಕುಣಿಯುತ ಕೂಗಿಕೊಳ್ಳುತಿದ್ದರು ॥೭೨॥

ಇದು ಉತ್ಪತ್ತಿಪ್ರಕರಣದಲ್ಲಿ ಇಂದ್ರಜಾಲೋಪಾಖ್ಯಾನದೊಳಗೆ
ಚಾಂಡಾಲೀವಿವಾಹವೆಂಬ ನೂರಾರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಸಪ್ತೋತ್ತರಶತತಮಃ ಸರ್ಗಃ.

ರಾಜೋವಾಚ.

ಬಹುನಾತ್ರ ಕಿಮುಕ್ತೇನ ಸೋತ್ಸವಾವರ್ಜಿತಾಶಯಃ ।
ತದಾಪ್ರಭೃತಿ ತತ್ರಾಹಂ ಸಮ್ಪನ್ನಃ ಪುಷ್ಟಪುಲ್ಕಸಃ ॥೧॥
ಸಪ್ತರಾತ್ರೋತ್ಸವಸ್ಯಾನ್ತೇ ಕ್ರಮಾನ್ಮಾಸಾಷ್ಟಕೇ ಗತೇ ।
ಪುಷ್ಪಿತಾ ಸಾಸ್ಯ ಸಮ್ಪನ್ನಾ ಸ್ಥಿತಾ ಗರ್ಭವತೀ ತತಃ ॥೨॥
ಪ್ರಸೂತಾ ದುಃಖದಾಂ ಕನ್ಯಾಂ ವಿಪದ್ದುಃಖಕ್ರಿಯಾಮಿವ ।
ಸಾ ಕನ್ಯಾ ವವೃಧೇ ಶೀಘ್ರಂ ಮೂರ್ಖಚಿನ್ತೇವ ಪೀವರೀ ॥೩॥
ಪುನಃ ಪ್ರಸೂತಾ ಸಾ ವರ್ಷೈಃ ತ್ರಿಭಿಃ ಪುತ್ರಮಶೋಭನಮ್ ।
ಅನರ್ಥಮಿವ ದುರ್ಬುದ್ಧಿಃ ಆಶಾಪಾಶವಿಧಾಯಕಮ್ ॥೪॥
ಪುನಃ ಸುತಾಂ ದುಹಿತರಂ ಪುನರಪ್ಯರ್ಭಕಂ ತತಃ ।

ಉತ್ಪತ್ತಿಪ್ರಕರಣದಲ್ಲಿ ನೂರೇಳನೆಯ ಸರ್ಗವು.

ಅತ್ರ ಸ್ವಸ್ಯ ಚಿರಂ ತತ್ರ ವಸತಃ ಷಷ್ಟಿಹಾಯನಾ(ನ್) ।
ಚಣ್ಡಾಲೋಚಿತಕೃತ್ಯೇನ ಜೀವನಂ ಯತ್ ತದುಚ್ಯತೇ ॥

ಆ ಲವಣರಾಜನು—ತಾನು ಬೇಡರಹಳ್ಳಿಯಲ್ಲಿ ಬಹುಕಾಲ ವಾಸಮಾಡಿಕೊಂಡಿದ್ದು ಅರವತ್ತುವರ್ಷಕಾಲ ಚಂಡಾಲೋಚಿತ ವ್ಯಾಪಾರದಿಂದ ಜೀವಿಸಿಕೊಂಡಿದ್ದೆನೆಂದು ಹೇಳಿದನೆಂಬುದಾಗಿ, ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಪುನಃ ಆ ಲವಣರಾಜನು ತನ್ನ ಸಭಾಸದರನ್ನು ಕುರಿತು ಹೇಳಲುಪಕ್ರಮಿಸಿದನು :—

ಎಲೈ ಸಭಾಸದರಾ! ಈ ವಿಷಯವನ್ನು ಕುರಿತು ಬಹಳ ಹೇಳುವುದರಿಂದ ಪ್ರಯೋಜನವೇನು? ಆಗ ಅಲ್ಲಿ ನಡೆದ ಉತ್ಸವದಿಂದ ನನ್ನ ಮನಸ್ಸು ಪರವಶವಾಗಿಬಿಟ್ಟಿತು. ಅದುಮೊದಲುಗೊಂಡು ನಾನು ಅಲ್ಲಿ ಚೆನ್ನಾಗಿ ಬಲಿತ ಹೊಲೆಯನಾಗಿಬಿಟ್ಟೆನು ॥೧॥

ಹೀಗೆ ಏಳುದಿವಸ ಕ್ರಮವಾಗಿ ಉತ್ಸವವಾದಮೇಲೆ, ಎಂಟುತಿಂಗಳು ಕಳೆಯಲಾಗಿ, ಆ ಚಂಡಾಲನ ಪುತ್ರಿಯು ಋತುಮತಿಯಾದಳು; ಆಮೇಲೆ ಗರ್ಭವತಿಯೂ ಆದಳು ॥೨॥

ಅನಂತರ, ವಿಪತ್ತು ದುಃಖಕರ್ಮವನ್ನು ಪ್ರಸವಿಸುವಂತೆ, ಆ ನನ್ನ ಹೆಂಡತಿಯು ದುಃಖಜನಕಳಾದ ಮಗಳನ್ನು ಪ್ರಸವಿಸಿದಳು. ಮೂರ್ಖಮನುಜರ ಚಿಂತೆಯು ಬೆಳೆಯುವಂತೆ, ಆ ಕನ್ಯೆಯು ಬೇಗನೆ ಸ್ಥೂಲದೇಹಳಾಗಿ ಬೆಳೆದಳು ॥೩॥

ಪುನಃ ಮೂರುವರ್ಷ ಕಳೆದನಂತರ, ಕೆಟ್ಟಬುದ್ಧಿಯು ಆಶಾಪಾಶಜನಕವಾದ ಅನರ್ಥವನ್ನು ಸೃಜಿಸುವಂತೆ, ಆ ಚಂಡಾಲಿಯು ಅಮಂಗಳಕರನಾದ ಒಬ್ಬ ಪುತ್ರನನ್ನು ಹೆತ್ತಳು ॥೪॥

ಪುನಃ ಒಬ್ಬಳು ಮಗಳನ್ನೂ, ಆಮೇಲೆ ಮತ್ತೊಬ್ಬ ಮಗನನ್ನೂ, ಈರೀತಿಯಾಗಿ

ಕಳತ್ರವಾನಹಂ ಜಾತೋ ವನೇ ಜರಠಪುಲ್ಕಸಃ ‖೫‖
ತಯಾ ಸಹ ಸಮಾಸ್ತತ್ರ ಮಯಾ ಬಹ್ವ್ಯೋತಿವಾಹಿತಾಃ ।
ನಾರಕೇ ಚಿನ್ತಯಾ ಸಾರ್ಧಂ ಬ್ರಹ್ಮಘ್ನೇನೇವ ಯಾತನಾಃ ‖೬‖
ಶೀತವಾತಾತಪಕ್ಲೇಶವಿವಶೇನ ವನಾನ್ತರೇ ।
ಚಿರಂ ವಿಲುಲಿತಂ ವೃದ್ಧಕಚ್ಛಪೇನೇವ ಪಲ್ವಲೇ ‖೭‖
ಕಳತ್ರಚಿನ್ತಾಹತಯಾ ಧಿಯಾ ಸನ್ದಹ್ಯಮಾನಯಾ ।
ದೃಷ್ಟಾಃ ಕಷ್ಟಸಮಾರಮ್ಭಾಃ ದಿಶಃ ಪ್ರಜ್ವಲಿತಾ ಇವ ‖೮‖
ಕ್ಷೌಮಾನೇಕಸಮಾಕ್ಷೀಣಪಟಚೀರ್ಣ್ಣಕಧಾರಿಣಾ ।
ಕಾಷ್ಠಭಾರೋ ವನೇ ವ್ಯೂಢೋ ಯೋ ಮೂರ್ತಮಿವ ದುಷ್ಕೃತಮ್ ‖
ಯೌಕಾಕೀರ್ಣಜರಚ್ಛಿನ್ನಗನ್ಧಿಕೌಪೀನವಾಸಸಾ ।
ಆಶ್ವಸ್ಯ ಧವಳೀಕಾನಾಂ ತಲೇ ನೀತಾ ಘನಾಃ ಸಮಾಃ ‖೧೦‖
ಕಳತ್ರಪೂರಣೋತ್ಕೇನ ಜರ್ಜರೇಣ ಹಿಮಾನಿಲೈಃ ।
ಹೇಮನ್ತೇ ದರ್ದುರೇಣೇವ ವಿಲೀನಂ ವನಕುಕ್ಷಿಷು ‖೧೧‖

ಅವಳು ಬಹಳ ಮಕ್ಕಳನ್ನು ಪಡೆದಳು. ಹೀಗೆ ನಾನು ಆ ಅರಣ್ಯದಲ್ಲಿ ಮುದುಕನಾದ ಹೊಲೆಯನಾಗಿ, ದೊಡ್ಡ ಸಂಸಾರವುಳ್ಳವನಾಗಿಬಿಟ್ಟೆನು ‖೫‖

ಬ್ರಹ್ಮಹತ್ಯೆಮಾಡಿದವನು ನರಕದಲ್ಲಿ ಚಿಂತೆಯೊಡನೆ ಯಾತನೆಗಳನ್ನು ಕಳೆಯುವಂತೆ, ನಾನು ಅವಳೊಡನೆ ಅರಣ್ಯದಲ್ಲಿ ಅನೇಕವಾದ ವರ್ಷಗಳನ್ನು ಕಳೆದೆನು ‖೬‖

ಮುದಿಯಾದ ಆಮೆಯು ಸಣ್ಣ ಕುಂಟೆಯಲ್ಲಿರುವಂತೆ, ನಾನು ಆ ವನಮಧ್ಯದಲ್ಲಿ ಚಳಿ ಗಾಳಿ ಬಿಸಿಲುಗಳ ಕ್ಲೇಶಕ್ಕೆ ಪರವಶನಾಗಿ ಬಹಳಕಾಲ ಒದ್ದಾಡಿಕೊಂಡಿದ್ದೆನು ‖೭‖

ಸರ್ವದಾ ಸಂಸಾರಚಿಂತಾಪರವಶವಾಗಿ ಸುಡುತ್ತಿರುವ ನನ್ನ ಬುದ್ಧಿಗೆ, ಮಹಾ ಕಷ್ಟತರ ವ್ಯಾಪಾರವುಳ್ಳುವಾಗಿ ದಿಕ್ಕುಗಳೆಲ್ಲವೂ ಉರಿಯುತ್ತಿರುವಂತೆ ಕಾಣುತಿದ್ದುವು ‖೮‖

ಅಗಸೆಯುಗಿಡದ ನಾರಿನಲ್ಲಿ ಮಾಡಿದ ಒಂದು ಬಟ್ಟೆಯನ್ನು ಹೊದ್ದುಕೊಂಡಿದ್ದೆನು; ಅದು, ಅನೇಕವರ್ಷ ಕಳೆದು ಜೀರ್ಣವಾಗಿಹೋಯಿತು. ಇದನ್ನು ತಲೆಯುಮೇಲೆ ಸಿಂಬಿಮಾಡಿಟ್ಟುಕೊಂಡು, ಅದರಮೇಲೆ—ಮೂರ್ತಿಮತ್ತಾದ ಪಾಪಸಮೂಹವೋ ಎಂಬಂತಿರುವ—ಸೌದೆಯ ಹೊರೆಯನ್ನು ಹೊತ್ತುತರುತಿದ್ದೆನು ‖೯‖

ಹೀಗೆ ಬರುವಾಗ, ನೂರಾರು ಕೂರೆಹತ್ತಿಕೊಂಡು ಜೀರ್ಣವಾಗಿ ದುರ್ಗಂಧಮಯುವಾಗಿರುವ ಒಂದು ಕೌಪೀನಮಾತ್ರ ವಸ್ತ್ರವುಳ್ಳವನಾಗಿ, ಧವಳೀಕವೆಂಬ ಮರದಕೆಳಗೆ ವಿಶ್ರಮಿಸಿಕೊಳ್ಳುತಿದ್ದೆನು. ಹೀಗೂ ಅನೇಕವರ್ಷಗಳನ್ನು ಕಳೆದೆನು ‖೧೦‖

ಸರ್ವದಾ ಕುಟುಂಬಭರಣದಲ್ಲಿ ಉತ್ಕಂಠಿತನಾಗಿರುವ ನಾನು, ಹಿಮಗಾಲದಲ್ಲಿ ಹಿಮದಿಂದಲೂ ಗಾಳಿಯಿಂದಲೂ ಜರ್ಜರನಾಗಿ, ಅರಣ್ಯಾಮಧ್ಯಭಾಗಗಳಲ್ಲಿ ಕಪ್ಪೆಯಂತೆ ಅಡಗಿಕೊಂಡಿದ್ದೆನು ‖೧೧‖

ನಾನಾಕಲಹಕಲ್ಲೋಲತಾಪಪ್ರಸರವಿದ್ರುತಾಃ ।
ಬಾಷ್ಪವ್ಯಾಜೇನ ನಿರ್ಮುಕ್ತಾಃ ನೇತ್ರಾಭ್ಯಾಂ ರಕ್ತಬಿನ್ದವಃ ॥೧೦॥
ಯಾಮಿನ್ಯೋ ವಿಪಿನೇ ಕ್ಲಿನ್ನೇ ವರಾಹಾಮಿಷಭೋಜನಾಃ ।
ಶಿಲಾತಲಕುಟೀಕೋಶೇ ನೀತಾಜಲದವಿಕ್ಲಬಾಃ ॥೧೩॥
ಕಾಲೇ ಕ್ಷಯಂ ಗತೇ ರೋಹೇ ಕಾಲಾಭ್ರಘನತಾಂ ಗತೇ ।
ಅಸೌಹಾರ್ದೇನ ಬನ್ಧೂನಾಂ ಕಲಹೈಶ್ಚಾಪಿ ಸನ್ತತೈಃ ॥೧೪॥
ಸರ್ವತ್ರ ಜಾತಶಙ್ಕೇನ ಕಲಾಭಿಮುಖರಾರ್ಭಕೈಃ ।
ಮಯಾ ಕೃಪಣಚಿತ್ತೇನ ನೀತಾಃ ಪರಗೃಹೇ ಸಮಾಃ ॥೧೫॥
ಚಣ್ಡಾಲೀಕಲಹೋದ್ವಿಗ್ನಚಣ್ಡಚಣ್ಡಾಲತರ್ಜನೈಃ ।
ಮುಖಂ ಜರ್ಜರತಾಂ ಯಾತಂ ಇನ್ದೂ ರಾಹುರದೈರಿವ ॥೧೬॥
ಚರ್ವಿತಾಃ ಖರ್ವಿತೋಷ್ಠೇನ ದ್ವೀಪಿಪಿಶಿತಪೇಶಯಃ ।
ನಾರಕಾಹೃತವಿಕ್ರೀತಾಃ ನಾರಕ್ಯೋ ರಶನಾ ಇವ ॥೧೭॥
ಹಿಮವತ್ಕನ್ದರೋದ್ಗೀರ್ಣಾಃ ಚಣ್ಡಾಹೇಮನ್ತವೀಚಯಃ ।
ಶಿಶಿರೇ ಸೀಕರಾಸಾರತುಷಾರನಿಚಯಾಶ್ಚಿರಮ್ ।
ಅಙ್ಗೇ ನಿರಮ್ಬರೇ ಸೋಢಾಃ ಮೃತ್ಯುಮುಕ್ತಾ ಇವೇಷವಃ ॥೧೮॥

ಅಲ್ಲಿ ನಾನಾವಿಧವಾದ ಕಲಹಗಳಿಂದ, ತೆರೆತೆರೆಯಾಗಿ ಕಣ್ಣೀರು ಸುರಿಯುತಿದ್ದಿತು; ಇದು, ಹೃದಯತಾಪದಿಂದ ಕರಗಿರುವ ರಕ್ತವು ಈ ವ್ಯಾಜದಿಂದ ಸುರಿಯುತ್ತಿರುವಂತೆ ತೋರುತಿದ್ದಿತು।

ಮೋಡಮುಸುಕಿದ ರಾತ್ರಿಗಳಲ್ಲಿ, ವಿಶೇಷವಾಗಿ ನೆನೆದಿರುವ ಆ ಅರಣ್ಯದೊಳಗೆ, ದೊಡ್ಡ ಬಂಡೆಗಳ ತಳಗಡೆಯಲ್ಲಿ ಮರೆಯಾಗಿದ್ದುಗೊಂಡು, ಹಂದಿಯಮಾಂಸವನ್ನು ತಿನ್ನುತ ಕೆಲವು ಕಾಲ ಕಳೆದೆನು ॥೧೩॥

ಕೃಷ್ಣಮೇಘಗಳಿಂದ ಸಾಂದ್ರವಾಗಿಯೂ ಸರ್ವಬೀಜಪ್ರರೋಹಹೇತುಭೂತವಾಗಿಯೂ ಇರುವ ವರ್ಷಾಕಾಲವೀರೀತಿಯಾಗಿ ಕಳೆಯಲಾಗಿ, ನಮ್ಮ ಮಾವನಮನೆಯಲ್ಲಿ ಸಮಸ್ತ ಬಂಧುಗಳೊಡನೆಯೂ ದ್ವೇಷವೂ ನಿರಂತರವಾದ ಕಲಹವೂ ಪ್ರಾಪ್ತವಾಯಿತು. ಆಮೇಲೆ ನನಗೆ ಎಲ್ಲೆಲ್ಲಿಯೂ ಶಂಕೆಯುಂಟಾಗಿಬಿಟ್ಟಿತು. ಅನಂತರ, ಮಹಾದೀನಹೃದಯನಾಗಿರುವ ನಾನು, ಆಯಾ ಆಟಗಳನ್ನು ಆಡುತ ಕೂಗಿಕೊಳ್ಳುತಿರುವ ಮಕ್ಕಳೊಡನೆ, ಪರಗೃಹದಲ್ಲಿ ಕೆಲವುವರ್ಷಗಳನ್ನು ಕಳೆದೆನು ॥೧೪—೧೫॥

ಅಲ್ಲಿರುವ ಕ್ರೂರರಾದ ಚಾಂಡಾಲರು, ತಮ್ಮ ಹೆಂಡರೊಡನೆ ಜಗಳವಾಗಿ ಸಂಕಟಪಡುತಿರುವಾಗ, ಅವರನ್ನು ತರ್ಜನಮಾಡಿ, ನನ್ನ ಮುಖವು, ರಾಹುವಿನಿಂದ ಚಂದ್ರಮಂಡಲವು ಜರ್ಜರವಾಗುವಂತೆ–ಜರ್ಜರವಾಗಿಬಿಟ್ಟಿತು ॥೧೬॥

ಆಮೇಲೆ, ನರಕದಲ್ಲಿರುವವರು ತಂದು ಮಾರಿದ ಅಂತ್ರ(ನರ)ರಜ್ಜುಗಳೋ ಎಂಬಂತಿರುವ ವ್ಯಾಘ್ರಮಾಂಸಕೋಶಗಳನ್ನು, ನಾನು ತುಟಿಯನ್ನು ಬೊಗ್ಗಿಸಿಕೊಂಡು ತಿನ್ನುತಿದ್ದೆನು ॥

ಹಿಮಗಾಲದಲ್ಲಿ, ಹಿಮವತ್ಪರ್ವತದ ಗುಹೆಯಿಂದ ಬೀಸುತಿರುವ ಉಗ್ರವಾದ ಶೀತವಾಯು ತರಂಗಗಳು, ಮೃತ್ಯುದೇವನಿಂದ ಬಿಡಲ್ಪಟ್ಟ ಬಾಣಗಳೋ ಎಂಬಂತೆ, ವಸ್ತ್ರಹೀನವಾಗಿರುವ ನನ್ನ ದೇಹದಮೇಲೆ ಬೀಳುತಿದ್ದುವು. ಇವುಗಳನ್ನೆಲ್ಲ ನಾನು ಸಹಿಸಿಕೊಂಡಿದ್ದೆನು ॥೧೮॥

ಜರಾಜರಠಮೂಢೇನ ಮೂಲಾನಿ ಕ್ಷೀಣಭೂರುಹಾಮ್ |
ಸುಕೃತಾನಾಮಿವೈಕೇನ ಸಮುತ್ಖಾತಾನಿ ಭೂರಿಶಃ ||೧೯||
ಶರಾವಕೇಷ್ವಟವ್ಯಾಂ ಚ ಪಲಲಂ ಪಕ್ವಮಾದರಾತ್ |
ಅಸ್ಪೃಷ್ಟೇನ ಜನೈರ್ಭುಕ್ತಂ ಕುಕಳತ್ರವತಾ ಮಯಾ ||೨೦||
ಗೃಹೀತತೇಜಃಕ್ಷತಯೇ ಬಹುವಕ್ತ್ರವಿಕಾರಿಣಾ |
ಮಾರ್ಗಾವಿಕಮಿವಾತ್ಮೀಯಂ ವಿಕ್ರೀತಂ ಪಣ್ಯಮನ್ಯತಃ ||೨೧||
ಪ್ರಾಣ್ಯಙ್ಗವಪುಷಸ್ತತ್ರ ಪ್ರೋತ್ಕೃತ್ಯೋತ್ಕೃತ್ಯ ಪೇಶಲಾಃ |
ಆಯಸಂ ಪರಿ ವಿಕ್ರೀತಾಃ ವಿನ್ಧ್ಯಪಕ್ಕಣಭೂಮಿಷು ||೨೨||
ಜನ್ಮಾನ್ತರಸಹಸ್ರೋತ್ಥಂ ಸ್ವಪಾಪಮಿವ ವೃದ್ಧಯೇ |
ಅವಕೀರ್ಣಮಸತ್ಕೀರ್ಣಂ ಚಣ್ಡಾಲಾರಾಮಭೂಮಿಷು ||೨೩||
ದೃಷ್ಟಿಃ ಕುದ್ದಾಲಕೇ ದೃಷ್ಟ್ಯಾ ಸನ್ಧ್ಯಾಸ್ನೇಹವಿಮುಕ್ತಯಾ |
ರೌರವಾಪತಿತೇನೇವ ತತ್ಕಾಲಸ್ನಿಗ್ಧತಾಂ ಗತಃ ||೨೪||
ವಿನ್ಧ್ಯಕನ್ದರಗುಲ್ಮಾನಾಂ ಬನ್ಧುತ್ವಮಿವ ಗಚ್ಛತಾ |

ಜರೆಯಿಂದ ಜರ್ಜರನಾಗಿರುವ ಮೂಢನಾದ ನಾನು, ಆ ಅರಣ್ಯದಲ್ಲಿ ಒಬ್ಬನೇ ಇರುವಾಗ, ಪುಣ್ಯಗಳ ಮೂಲವನ್ನು ಕಿತ್ತಂತೆ, ಮುದಿಮರಗಳ ಬೇರುಗಳನ್ನು ಅನೇಕವಾಗಿ ಕೀಳುತಿದ್ದೆನು ||೧೯||

ಆ ನೀಚವಾದ ಕುಟುಂಬದೊಡನೆ ಕೂಡಿಕೊಂಡಿರುವ ನಾನು, ಇತರ ಜನರು ನನ್ನನ್ನು ಮುಟ್ಟಲೊಲ್ಲದಿರುವ ಸ್ಥಿತಿಯಲ್ಲಿರುತ, ಆ ಅರಣ್ಯದೊಳಗೆ ಶ್ರಾವೆಯಲ್ಲಿ ಬೇಯಿಸಿದ ಮಾಂಸವನ್ನು ಅತ್ಯಾದರದಿಂದ ತಿನ್ನುತಿದ್ದೆನು ||೨೦||

ಅದುವರೆಗೆ ನಾನು ಸಂಪಾದಿಸಿದ್ದ ತೇಜಸ್ಸನ್ನು ಹಾಳುಮಾಡುವುದಕ್ಕೋಸ್ಕರವೇ, ನಾನು ನಾನಾವಿಧ ಮುಖವಿಕಾರಮಾಡುತ, ನನ್ನ ದೇಹಮಾಂಸವನ್ನು ಮಾರುವಂತೆ, ಜಿಂಕೆಯ ಮಾಂಸವನ್ನೂ ಕುರಿಯಮಾಂಸವನ್ನೂ ಇತರರಿಗೆ ಮಾರುತಿದ್ದೆನು ||೨೧||

ಆ ವಿಂಧ್ಯಪರ್ವತದ ತಪ್ಪಲಿನಲ್ಲಿದ್ದ ಬೇಡಗೇರಿಯೊಳಗೆ, ಮೃದುವಾದ ಪ್ರಾಣಿಶರೀರಗಳನ್ನು ಕತ್ತರಿಸಿಕತ್ತರಿಸಿ, ಕಬ್ಬಿಣದ ಪಾತ್ರೆಯೊಳಗಿಟ್ಟುಕೊಂಡು ಮಾರುತ್ತಿದ್ದೆನು ||೨೨||

ಆ ಚಂಡಾಲರ ಆರಾಮಭೂಮಿಗಳಲ್ಲಿ, ಜನ್ಮಾಂತರ ಸಹಸ್ರಜನಿತವಾದ ಪಾಪಕರ್ಮವೋ ಎಂಬಂತೆ, ಹೆಚ್ಚಾಗಿ ಬೆಳೆಯಲೆಂಬ ಆಸೆಯಿಂದ ಮಲಮೂತ್ರಾದಿಗಳಲ್ಲಿ ಬೆರೆಯಿಸಿದ ಬೀಜಗಳನ್ನು ಬಿತ್ತುತಿದ್ದೆನು ||೨೩||

ರೌರವನರಕದಿಂದ ಎದ್ದವನು ಆಗ ತನಗೆ ಸ್ನೇಹಿತನಾಗಿ ಸಿಕ್ಕಿದವನನ್ನು ನೋಡುವಂತೆ, ನಾನು ಸಂಧ್ಯಾರಾಗರಕ್ತವಾದ ದೃಷ್ಟಿಯಿಂದ ಗುದ್ದಲಿಯನ್ನು ನೋಡುತಿದ್ದೆನು ||೨೪||

ಅಯ್ಯಾ ಸಭಾಸದರಾ! ನಾನು ಅನುಭವಿಸಿದ ಚಂಡಾಲಜನ್ಮದಲ್ಲಿ, ನನ್ನ ಆ ದೇಹವು, ವಿಂಧ್ಯಪರ್ವತದ ಗುಹೆಯಲ್ಲಿ ಬೆಳೆದಿರುವ ಲತಾಗೃಹಗಳಿಗೆ ಬಂಧುತ್ವವನ್ನು ಹೊಂದಿರುವಂತಿದ್ದಿತು. (ಅಲ್ಲಿಯೇ ಸರ್ವದಾ ಇರುತಿದ್ದಿತು) ಇಂತಹ ಸಿತಿಯಲ್ಲಿ, ಪರಂಪರಾಸಂಬಂಧದಿಂದ ನನಗೆ ದೈವ

ಪುಳಿನ್ದವಪುಷಾ ಯತ್ರ ಯುಕ್ತಯೋಗ್ಯೈಃ ಸಮರ್ಪಿತಾಃ ||೨೫||
ತರ್ಪಿತಾಲಗುಡಾಘಾತಜಿತಕೌಲೇಯರಂಹಸಾ |
ಪುತ್ರದಾರಾಃ ಕದನ್ನೇನ ಗ್ರಾಮಕಾನ್ಧೋಚಿತೇನ ಚ ||೨೬||
ಧಾರಾಸಾರರಣತ್ಪತ್ರಶುಷ್ಕತಾಲತಲೇ ನಿಶಾಃ |
ನೀತಾರಣಿತದನ್ತೇನ ಸಾರ್ಧಂ ವಿಪಿನವಾನರೈಃ ||೨೭||
ರೋಮಭಿಃ ಕೋಟಿಮುದ್ರೋದ್ಯೈಃ ಶೀತೇನಾಧ್ಯುಷಿತಸ್ಯ ಮೇ |
ವರ್ಷಾಸು ಮುಕ್ತಾಕಣವತ್ ಧೃತಾವಾನಲಬಿನ್ದವಃ ||೨೮||
ಅಜಾಜೇಮಾಂಸಖಣ್ಡಾರ್ಥಂ ಕ್ಷುತ್ಕ್ಷುಣ್ಣಕ್ಷೀಣಕುಕ್ಷಿಣಾ |
ಕಳತ್ರೇಣ ಸಹಾಟವ್ಯಾಂ ಕೃತಃ ಕಲಹಆಕುಲಃ ||೨೯||
ವನೇ ರಣಿತದನ್ತೇನ ಶೀತಕೇಕರಚಕ್ಷುಷಾ |
ಮಷೀಮಲಿನಗಾತ್ರೇಣ ವೇತಾಳಸ್ವಜನಾಯಿತಮ್ ||೩೦||
ಸರಿತ್ತೀರೇಷು ಮತ್ಸ್ಯಾರ್ಥಂ ಭ್ರಾನ್ತಂ ಬಡಿಶಧಾರಿಣಾ |
ಕಲ್ಪೇ ಜಗತ್ಸು ನಾಶಾರ್ಥಂ ಕೃತಾನ್ತೇನೇವ ಪಾಶಿನಾ ||೩೧||
ಪೀತಂ ಬಹೂಪವಾಸೇನ ಸದ್ಯಃಕೃತ್ತಮೃಗೋರಸಃ |

ವಿಲಾಸವಶಾತ್ ಹೆಂಡರುಮಕ್ಕಳು, ಅನೇಕವಾಗಿ ಆಗಿಬಿಟ್ಟರು. ಅವರಿಗೆ ನಾನು ಹಳ್ಳಿಯಲ್ಲಿರುವ ಕುರುಡರಿಗೆ ಯೋಗ್ಯವಾದ ಹಿಟ್ಟು ಮುಂತಾದ ಕದನ್ನವನ್ನು ಕೊಡುತ ತೃಪ್ತಿಯುಂಟುಮಾಡುತಿದ್ದೆನು. ಆಗ ಮಧ್ಯದಲ್ಲಿ ನಾಯಿಗಳು ಆ ಆಹಾರವನ್ನು ತಿನ್ನಲು ಬಂದರೆ, ದೊಣ್ಣೆಯಪೆಟ್ಟಿನಿಂದ ಅವುಗಳ ಕಾಟವನ್ನು ತಪ್ಪಿಸುತಿದ್ದೆನು ॥೨೫—೨೬॥

ಮಳೆಗಾಲದಲ್ಲಿ, ವೃಷ್ಟಿಧಾರಾಪಾತದಿಂದ ಮರಮರ ಶಬ್ದಮಾಡುವ ಗರಿಗಳುಳ್ಳ, ತಾಳೆಯ ಗಿಡಗಳ ಕೆಳಗೆ, ಕಾಡುಕೋತಿಗಳೊಡನೆ ಅನೇಕ ರಾತ್ರಿಗಳನ್ನು ಕಳೆದೆನು ॥೨೭॥

ಆಗ ಚಳಿಯಿಂದ ಅಲ್ಲಿ ವಾಸಮಾಡುತಿರುವ ನನ್ನ ಶರೀರದೊಳಗಣ ಸೂಜಿಯ ತುದಿಯಂತಿರುವ ರೋಮಗಳು, ಸೂಜಿಗಳು ತಮ್ಮ ಅಗ್ರಭಾಗದಲ್ಲಿ ಮುತ್ತುಗಳನ್ನು ಧರಿಸುವಂತೆ, ಜಲಬಿಂದುಗಳನ್ನು ಧರಿಸಿಕೊಂಡಿದ್ದುವು ॥೨೮॥

ಆ ಅರಣ್ಯದೊಳಗೆ, ಹಸಿವಿನಿಂದ ಬಳಲಿದ ಹೊಟ್ಟೆಯುಳ್ಳ ನಾನು, ಸಣ್ಣದಾದ ಒಂದು ಕುರಿಯ ಮಾಂಸದ ತುಂಡಿಗೋಸ್ಕರವಾಗಿ, ನನ್ನ ಹೆಂಡತಿಯೊಡನೆ ಅತಿಯಾಗಿ ಕಲಹಮಾಡಿದೆನು ॥೨೯॥

ಮತ್ತು, ಆ ವನದಲ್ಲಿ, ಮಸಿಯಂತೆ ಕಪ್ಪಗಿರುವ ನಾನು, ಚಳಿಯಿಂದ ಹಲ್ಲುಗಳನ್ನು ಕಚ್ಚುತ, ಕಣ್ಣುಗಳನ್ನು ವಕ್ರಮಾಡಿಕೊಂಡು, ಅಲ್ಲಿರುವ ಪಿಶಾಚಗಳಿಗೆ ಬಂಧುವಾದವನಂತಿದ್ದೆನು ॥೩೦॥

ಪ್ರಳಯಕಾಲದಲ್ಲಿ ಸಮಸ್ತಪ್ರಾಣಿನಾಶಾರ್ಥವಾಗಿ ಯಮನು ಪಾಶವನ್ನು ಹಿಡಿದುಕೊಂಡು ಲೋಕಗಳಲ್ಲಿ ಸಂಚರಿಸುವಂತೆ, ನಾನು ಮೀನುಹಿಡಿಯುವುದಕ್ಕೋಸ್ಕರ ಬಲೆಯನ್ನು ಹಿಡಿದುಕೊಂಡು ನದೀತೀರಗಳಲ್ಲಿ ಸಂಚರಿಸುತಿದ್ದೆನು ॥೩೧॥

ಬಹುಕಾಲ ಉಪವಾಸಮಾಡಿ ಶ್ರಾಂತನಾಗಿರುವ ನಾನು, ಆಗತಾನೆ ಕತ್ತರಿಸಲ್ಪಟ್ಟ ಜಿಂಕೆ

ತತ್ಕಾಲಕೋಷ್ಣಂ ರುಧಿರಂ ಮಾತುಃ ಸ್ತನಪಯೋ ಯಥಾ ॥೩೨॥
ಸ್ಮಶಾನಸಂಸ್ಥಿತಾನ್ ಮತ್ತೋ ರಕ್ತರಕ್ತಾನ್ ಮಲಾಶಿನಃ ।
ವಿದ್ರುತಾವನವೇತಾಳಾಃ ಚಣ್ಡಿಕಾಭಿದ್ರುತಾಇವ ॥೩೩॥
ವಾಗುರಾವಿಪಿನೇ ವ್ಯಪ್ತಾಃ ಬನ್ಧಾರ್ಥಂ ಮೃಗಪಕ್ಷಿಣಾಮ್ ।
ಆಶಾಇವ ವಿವೃದ್ಧ್ಯರ್ಥಂ ಪುತ್ರದಾರಕಳತ್ರಜಾಃ ॥೩೪॥
ಮಯಾ ಮಾಯಾಮಯೈರ್ಲೋಕಾಃ ಸೂತ್ರಜಾಲಮಯೈಃ ಖಗಾಃ ।
ಜಾಲೈರ್ಜರ್ಜರತಾಂ ನೀತಾಃ ದಿಶಶ್ಚಾ ಸುಕೃತಾಯುಷಾ ॥೩೫॥
ತತ್ರಾಪಿ ದತ್ತಃ ಪ್ರಸರೋ ಮನಸೋ ದುಷ್ಕೃತೋದಯೇ ।
ಆಶಾ ಪ್ರಸಾರಿತಾ ದೂರಂ ಪ್ರಾವೃಷೀವ ತರಙ್ಗಿಣೀ ॥೩೬॥
ಕರಭ್ಯಾಇವ ಸರ್ಪೇಣ ವಿದ್ರುತಂ ದೂರತೋ ಧಿಯಾ ।
ದೂರೇ ತ್ಯಕ್ತಾ ದಯಾ ದೇಹೇ ಭುಜಙ್ಗೇನೇವ ಕಞ್ಚುಕಮ್ ॥೩೭॥
ಕ್ರೌರ್ಯಂ ಸುಖೇನ ಸಂರಮ್ಭಶರವರ್ಷಿ ನಿನಾದಿ ಚ ।
ಅಙ್ಗೀಕೃತಂ ನಿದಾಘಾನ್ತೇ ನಭಸೇವಾಸಿತಾಮ್ಬುದಃ ॥೩೮॥

ಯ ಎದೆಯಿಂದ ಬಿಸಿಬಿಸಿಯಾಗಿ ಸುರಿಯುತಿರುವ ರಕ್ತವನ್ನು, ತಾಯಿಯ ಸ್ತನ್ಯವನ್ನೋಪಾದಿಯಲ್ಲಿ ಅತ್ಯಾದರದಿಂದ ಪಾನಮಾಡಿದೆನು ॥೩೨॥

ಮತ್ತು ಸ್ಮಶಾನದಲ್ಲಿ ವಾಸಮಾಡಿಕೊಂಡು ರಕ್ತದಲ್ಲಿ ಆಸಕ್ತಗಳಾಗಿ ಮಲಭಕ್ಷಕಗಳಾಗಿರುವ ದುಷ್ಟಪ್ರಾಣಿಗಳನ್ನೂ ನಾನು ಭಕ್ಷಿಸುತಿದ್ದೆನು. ಕಾಡಿನಲ್ಲಿರುವ ಬೇತಾಳಗಳು, ಚಂಡಿಕೆಯಿಂದ ಓಡಿಸಲ್ಪಟ್ಟವುಗಳಂತೆ, ನನ್ನಿಂದ ಹೆದರಿಕೊಂಡೋಡುತಿದ್ದುವು ॥೩೩॥

ಮೃಗಗಳನ್ನೂ ಪಕ್ಷಿಗಳನ್ನೂ ಬಂಧಿಸುವುದಕ್ಕಾಗಿ, ಪತ್ನೀಪುತ್ರಾದಿ ಕುಟುಂಬಜನ್ಯವಾದ ಆಸೆಯಂತೆ, ಬಲೆಗಳನ್ನು ಪದೇಪದೇ ಪ್ರಸರಣಮಾಡಿಸುತಿದ್ದೆನು ॥೩೪॥

ಕೇವಲ ಪಾಪಮಯಜೀವನನಾಡ ನಾನು, ಮಾಯಾಮಯವಾದ ಜಾಲಗಳಿಂದ ಜನಗಳನ್ನೂ, ಸೂತ್ರ(ದಾರ)ಮಯವಾದ ಜಾಲಗಳಿಂದ ಪಕ್ಷಿಗಳನ್ನೂ ದಿಕ್ಕುಗಳನ್ನೂ ಜರ್ಜರಪಡಿಸುತಿದ್ದೆನು ॥೩೫॥

ಇಷ್ಟುಮಟ್ಟಿಗೆ ಪಾಪಫಲವನ್ನನುಭವಿಸುತಿದ್ದ ಆ ಚಂಡಾಲಜನ್ಮದಲ್ಲಿಯೂ ಕೂಡ, ನಾನು ಇನ್ನೂ ಹೆಚ್ಚಾಗಿ ಪಾಪಸಂಘಟನೆಯಾಗುವುದಕ್ಕೋಸ್ಕರ, ಮನಸ್ಸಿಗೆ ವಿಶೇಷವಾಗಿ ಸ್ವೇಚ್ಛಾಗಮನಕ್ಕೆ ಅವಕಾಶವನ್ನು ಕೊಟ್ಟೆನು ॥೩೬॥

ಕರಡಿಯನ್ನು ಕಂಡು ಹೆದರಿದ ಸರ್ಪದಂತೆ, ನನಗೆ ಸದ್ಬುದ್ಧಿಯು ದೂರವಾಗಿ ಓಡಿಹೋಯ್ತು. ಹಾವು ಪೊರೆಯನ್ನು ಬಿಡುವಂತೆ, ಇತರ ಪ್ರಾಣಿಗಳ ಶರೀರನನ್ನು ನಾಶಪಡಿಸುವ ವಿಷಯದಲ್ಲಿ ದಯೆಯು ಸುತರಾಂ ಬಿಡಲ್ಪಟ್ಟಿತು ॥೩೭॥

ಬೇಸಿಗೆ ಕಳೆದ ಬಳಿಕ ಅಂತರಿಕ್ಷವು ಜಲವನ್ನು ವರ್ಷಿಸುತ ಗರ್ಜನೆಮಾಡುವ ನೀಲಮೇಘವನ್ನು ಸ್ವೀಕರಿಸುವಂತೆ, ಸುಖವಾಗಿ ಸಂಭ್ರಮದಿಂದ ಬಾಣವರ್ಷ ಮಾಡುತ ಆರ್ಭಟಿಸುತಿರುವ ಕ್ರೌರ್ಯವನ್ನು ನಾನು ಸ್ವೀಕರಿಸಿದ್ದೆನು ॥೩೮॥

ವಿಕಾಸಿನ್ಯೋಽಕ್ಷತಾಃ ಕ್ಷಾರಾಃ ದೂರಂ ಪರಿಹೃತಾಜನೈಃ ।
ಶ್ವಭ್ರೇಣೇವ ಕುಮಞ್ಜರ್ಯಃ ಚಿರಮೂಢಾಮಯಾಪದಃ ॥೩೯॥
ಸ್ವಕಾಲಕುಲಕೋಣಾಸು ನರಕೋದ್ದಾಮಭೂಮಿಷು ।
ಉಪ್ತಾ ದುಷ್ಕೃತಬೀಜಾನಾಂ ಮುಷ್ಟಯೋ ಮೋಹವೃಷ್ಟಯಃ ॥೪೦॥
ವಾಗುರಾಭಿರ್ನಯಾ ವಿನ್ಧ್ಯಕನ್ಧರಸ್ಥೇನ ನಿರ್ದಯಮ್ ।
ಭೂತೇಷ್ವಿವ ಕೃತಾನ್ತೇನ ಮೃಗೇಷು ಪರಿವಲ್ಗಿತಮ್ ॥೪೧॥
ಚಾಮರೀಕಣ್ಠಕುಡ್ಯೇಷು ವಿಶ್ರಾನ್ತಶಿರಸಾ ಮಯಾ ।
ಸುಪ್ತಮಸ್ತವಿವೇಕೇನ ಶೇಷಾಙ್ಗೇಷ್ವಿವ ಶೌರಿಣಾ ॥೪೨॥
ವಿಲೋಲಚರಣಾಮ್ಬರಯಾ ಸರಾವೋಲ್ಲಾಸಿಧೂಮ್ರಯಾ ।
ಮಮ ತನ್ವಾ ಸನೀಹಾರವಿನ್ಧ್ಯಕಚ್ಛಗುಹಾಯಿತಮ್ ॥೪೩॥

ದೊಡ್ಡದಾದ ಒಂದು ಹಳ್ಳವು—ವಿಕಸಿತವಾಗಿಯೂ ದುರ್ಗಂಧಮಯವಾಗಿಯೂ ಜನರಿಂದ ದೂರದಲ್ಲಿ ಪರಿಹೃತವಾಗಿಯೂ ಇರುವ ನಿಂದ್ಯವಾದ ಕುಸುಮಮಂಜರಿಯನ್ನು ವಹಿಸುವಂತೆ, ನಾನು—ಪದೇಪದೇ ವಿಕಾಸಹೊಂದತಕ್ಕುವಾಗಿಯೂ ಅತಿಸಾಂದ್ರವಾಗಿಯೂ ದುಸ್ಸಹವಾಗಿಯೂ ಇತರ ಜನರಿಂದ ದೂರವಾಗಿ ಬಿಡಲ್ಪಟ್ಟುದಾಗಿಯೂ ಇರುವ ವಿಪತ್ಸಮೂಹವನ್ನು ಬಹುಕಾಲ ಆಶ್ರಯಿಸಿದ್ದೆನು ॥೩೯॥

ಆಗ ನಾನು ನರಕವೆಂಬ ಉತ್ತಮಭೂಮಿಯಲ್ಲಿ, ಪಾಪವೆಂಬ ಬೀಜಗಳನ್ನು ಹಿಡಿಯಿಂದ ಹಿಡಿದುಕೊಂಡು ಬಿತ್ತಿದೆನು. ಈ ನರಕವೆಂಬ ಭೂಮಿಗಳಿಗೆ, ಕಾಲನಿಯಮವೆಂಬುದೇ ದೊಡ್ಡದೊಡ್ಡ ಪಾತಿಗಳ ಎಲ್ಲೆ ಕಟ್ಟಾಗಿದ್ದಿತು. ಇಂತಹ ದುಷ್ಕೃತ ಬೀಜಗಳು, ಮೋಹವೆಂಬ ಮಳೆಯಿಂದ ಬೆಳೆಯುತಿದ್ದುವು ॥೪೦॥

ವಿಂಧ್ಯಪರ್ವತದ ಮಹಾಪ್ರದೇಶದಲ್ಲಿರುವ ನಾನು, ಯಮನು ಪ್ರಾಣಿಗಳಮೇಲೆ ಲಕ್ಷ್ಯವಿಟ್ಟು ಕುಣಿದಾಡುವಂತೆ, ಮೃಗಗಳಲ್ಲಿ ಲಕ್ಷ್ಯವಿಟ್ಟು ಬಲೆಯನ್ನು ಬೀಸಿ ಕುಣಿದಾಡುತಿದ್ದೆನು ॥

ಲುಪ್ತವಿವೇಕನಾದ ನಾನು, ಆದಿಶೇಷನ ದೇಹದಮೇಲೆ ಮಹಾವಿಷ್ಣುವು ಮಲಗುವಂತೆ, ಚಮರಮೃಗಗಳ ಕುತ್ತಿಗೆಯಮೇಲೆ ತಲೆಯನ್ನು ಹಾಕಿಕೊಂಡು ಮಲಗುತಿದ್ದೆನು ॥೪೨॥

(೧) ವಿಲೋಲಪಾದಾಂಬರವಾಗಿಯೂ (೨) ಸದಾವೋಲ್ಲಾಸಿಧೂಮ್ರವಾಗಿಯೂ ಇರುವ ನನ್ನ ದೇಹವು, ತುಷಾರಯುಕ್ತವಾದ ವಿಂಧ್ಯಪರ್ವತಗುಹೆಯಂತೆ ಕಾಣಿಸಿಕೊಂಡಿತು ॥೪೩॥

---

(೧) ಇಲ್ಲಿ, ವಿಂಧ್ಯಗುಹಾಪರವಾಗಿಯೂ, ಚಂಡಾಲದೇಹಪರವಾಗಿಯೂ ಎರಡರ್ಥಗಳಿರುವುವು. ವಿ—ಪಕ್ಷಿಗಳಿಂದ, ಲೋಲ—ಚಂಚಲವಾದ, ಪಾದ—ಸಮೀಪದಲ್ಲಿರುವ ಗುಡ್ಡಗಳೇನು, ಅಮ್ಬರಯಾ—ಆಕಾಶದೇನು ಇವುಗಳುಳ್ಳ. (ಇದು ಗುಹಾಪರವಾದ ಅರ್ಥ) ವಿಲೋಲ—ಚಂಚಲವಾದ, ಪಾದ—ಕಾಲುಗಳೇನು, ಅಮ್ಬರಯಾ—ವಸ್ತ್ರವೇನು ಇವುಗಳುಳ್ಳ. (ಇದು ದೇಹಪರವಾದ ಅರ್ಥ)

(೨) ಸರಾವ—ಧ್ವನಿಯುಕ್ತವಾದ ವ್ಯಾಘ್ರ ಮುಂತಾದುವುಗಳಿಂದ, ಉಲ್ಲಾಸಿ—ವಿರಾಜಿಸುವ, ಧೂಮ್ರಯಾ—ಧೂಮ್ರವಾದ ಆಕಾರವುಳ್ಳ. (ಇದು ಗುಹಾಪರವಾದ ಅರ್ಥ) ಸರಾವ—ಧ್ವನಿಯುಳ್ಳುದಾಗಿಯೂ, ಉಲ್ಲಾಸಿ—ವಿರಾಜಿಸುತಿರುವುದಾಗಿಯೂ, ಧೂಮ್ರಯಾ—ಧೂಮವರ್ಣವಾಗಿಯೂ ಇರುವ. (ಇದು ದೇಹಪರವಾದ ಅರ್ಥ)

ಕೃಷ್ಣದೇಹೇನ ಯೌಕಾಢ್ಯಾ ಕನ್ಥಾ ಸ್ಕನ್ಧೇ ಮಯಾ ಚಿರಮ್ ।
ಗ್ರೀಷ್ಮೇ ಸೋಢಾ ಚಲದ್ಭೂತಾ ವರಾಹೇಣ ಯಥೋರ್ವರಾ ॥೪೪॥
ಬಹುಶೋಽಹಂ ವನೋತ್ಥಾಗ್ನಿನಿರ್ದಗ್ಧಪ್ರಾಣಿಮಣ್ಡಲಃ ।
ಕಲ್ಪಾಗ್ನಿಭುಕ್ತಜಗತಃ ಕಾಲಸ್ಯಾನುಗತಿಂ ಗತಃ ॥೪೫॥
ಲೋಭಿಲಿಜಿಗ್ಗೇ ಯಥಾ ರೋಗಂ ಅನರ್ಥಾಸಿವ ದುರ್ಗ್ರಹಃ ।
ಪ್ರಸೂತಾಸ್ತತ್ರ ಮೇ ದಾರಾಃ ದುಃಖಾನ್ಯಥ ಸುಖಾನ್ಯಪಿ ॥೪೬॥
ನೃಪಾಲಪುತ್ರಕೇಣೈಕತನಯೇನ ತದಾ ಮಯಾ ।
ನೀತಾನೀರನ್ಧ್ರದೋಷೇಣ ಷಷ್ಟಿಃ ಕಲ್ಪಸಮಾಃ ಸಮಾಃ ॥೪೭॥

ಆಕ್ರುಷ್ಟಮುದ್ಧುರತರಂ ರುದಿತಂ ವಿಪತ್ಸು
ಭುಕ್ತಂ ಕದನ್ನಮುಷಿತಂ ಹತಪಕ್ಕಣೇಷು ।
ಕಾಲಾನ್ತರಂ ಬಹು ಮಯೋಪಹತೇನ ತತ್ರ
ದುರ್ವಾಸನಾನಿಗಡಬನ್ಧಗತೇನ ಸಭ್ಯಾಃ ॥೪೮॥

ಇತಿ ಉತ್ಪತ್ತಿಪ್ರಕರಣೇ ಇನ್ದ್ರಜಾಲೋಪಾಖ್ಯಾನೇ ಆಪದ್ವರ್ಣನಂ ನಾಮ
ಸಪ್ತೋತ್ತರ ಶತತಮಃ ಸರ್ಗಃ.

ಪೂರ್ವದಲ್ಲಿ ವರಾಹಮೂರ್ತಿಯು ಅನೇಕ ಭೂತಪರಿವೃತವಾದ ಭೂಮಿಯನ್ನು ವಹಿಸಿದಂತೆ, ನಾನು ಗ್ರೀಷ್ಮಕಾಲದಲ್ಲಿ ಕೂರೆಹತ್ತಿಕೊಂಡು ಕೊಳೆತುಹೋಗುತಿರುವ ಕಂಥೆಯನ್ನು ಕತ್ತಿನಲ್ಲಿ ವಹಿಸಿಕೊಂಡಿದ್ದೆನು ॥೪೪॥

ಅನೇಕ ಸಮಯಗಳಲ್ಲಿ ಆರಣ್ಯಕಪ್ರಾಣಿಗಳನ್ನು ಕಾಡುಗಿಚ್ಚಿನೊಳಗೆ ಸುಡುತಿದ್ದ ನಾನು, ಪ್ರಳಯಾಗ್ನಿಯಲ್ಲಿ ಪ್ರಪಂಚವನ್ನೆಲ್ಲ ಸುಟ್ಟುಬಿಡುವ ಯಮನ ಸಾದೃಶ್ಯವನ್ನು ಹೊಂದಿದ್ದೆನು ॥

ಕೇವಲ ವಿಷಯಾಸಕ್ತಿಯು ರೋಗಗಳನ್ನು ಹೇಗೆ ಪ್ರಸವಿಸುವುದೋ, ದುರಾಗ್ರಹವು ಅನರ್ಥಗಳನ್ನು ಹೇಗೆ ಜನಿಯಿಸುವುದೋ, ಹಾಗೆ—ಅಲ್ಲಿ ನನ್ನ ಹೆಂಡತಿಯು ದುಃಖವನ್ನೂ ಸುಖವನ್ನೂ ಪ್ರಸವಿಸುತಿದ್ದಳು ॥೪೬॥

ಮಹಾರಾಜಾಧಿರಾಜನಿಗೆ ಏಕಮಾತ್ರ ಪುತ್ರನಾಗಿರುವ ನಾನು, ಆ ಚಂಡಾಲಜನ್ಮದಲ್ಲಿ, ಕೇವಲ ದೋಷಮಯನಾಗಿ, ಅರವತ್ತು ವರ್ಷಗಳನ್ನು ಅರವತ್ತು ಕಲ್ಪಗಳಂತೆ ಕಳೆದೆನು ॥

ಅಯ್ಯಾ ಸಭಾಸದರಾ! ಆಗ ನಾನು ಅತಿ ಪ್ರಬಲವಾಗಿ ಕೂಗಿಕೊಳ್ಳುತಿದ್ದೆನು; ವಿಪತ್ತು ಬಂದಾಗ ಅಳುತಿದ್ದೆನು; ಅತಿಕದನ್ನವನ್ನು ತಿನ್ನುತಿದ್ದೆನು; ಅಧಿಕವಾಗಿ ದುಷ್ಕರ್ಮವಾಸನೆಯೆಂಬ ನಿಗಳಬಂಧಕ್ಕೊಳಪಟ್ಟಿರುವನಾಗಿ, ಬಹುಕಾಲಪರ್ಯಂತ, ಆ ಹಾಳು ಬೇಡರ ಕೇರಿಗಳಲ್ಲಿ ವಾಸಮಾಡಿಕೊಂಡಿದ್ದೆನು ॥೪೮॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ
ಆಪದ್ವರ್ಣನವೆಂಬ ನೂರೇಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟೋತ್ತರಶತತಮಃ ಸರ್ಗಃ.

ರಾಜೋವಾಚ.

ಅಥ ಗಚ್ಛತಿ ಕಾಲೇತ್ರ ಜರಾಜರ್ಜರಿತಾಯುಷಿ ।
ತುಷಾರಪೂರ್ಣಶಷ್ಪಾಭಸಮಶ್ಮಶ್ರುಭೃತೇ ಮಯಿ ॥೧॥
ಕರ್ಮವಾತಾಪನುನ್ನೇಷು ಸರಸೇಷ್ವರಸೇಷ್ವಪಿ ।
ಪತತ್ಸು ವಾಸರೌಘೇಷು ಶೀರ್ಣಪರ್ಣಗಣೇಷ್ವಿವ ॥೨॥
ಆಜಾವಿವ ಶರೌಘೇಷು ಸುಖದುಃಖೇಷ್ವನಾರತಮ್ ।
ಕಲಹೇಷ್ವಪ್ಯಕಾರ್ಯೇಷು ಚಾಗಚ್ಛತ್ಸು ಪತತ್ಸು ಚ ॥೩॥
ವಿಕಲ್ಪಕಲ್ಪನಾವರ್ತವರ್ತಿನಿ ದ್ವಿಜಗೇ ಜಡೇ ।
ಸಮುದ್ರಇವ ಕಲ್ಲೋಲಭರೇ ಭ್ರಮಿತಚೇತಸಿ ॥೪॥

ಉತ್ಪತ್ತಿಪ್ರಕರಣದಲ್ಲಿ ನೂರೆಂಟನೆಯ ಸರ್ಗವು.

ಇಹ ತಸ್ಮಿನ್ ನಿವಸತಃ ಚಿರಂ ಚಣ್ಡಾಲಪಕ್ಕಣೇ ।
ಅನಾವೃಷ್ಟ್ಯುತ್ಥದುರ್ಭಿಕ್ಷಾತ್ ವರ್ಣ್ಯತೇ ದೇಶದುರ್ದಶಾ ॥

ಆ ಲವಣರಾಜನು ಚಂಡಾಲರ ಊರಿನಲ್ಲಿ ಬಹುಕಾಲ ವಾಸಮಾಡಿಕೊಂಡಿರುವಾಗ, ಅನಾವೃಷ್ಟಿಯಿಂದ ಉತ್ಪನ್ನವಾದ ದುರ್ಭಿಕ್ಷದ ದೆಸೆಯಿಂದ ಆ ದೇಶದಲ್ಲಿ ಉಂಟಾದ ದುರವಸ್ಥೆಯು, ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಪುನಃ ಆ ರಾಜನು ಸಭಾಸದರನ್ನು ಕುರಿತು ಹೇಳಲುಪಕ್ರಮಿಸಿದನು :—

ಅಯ್ಯಾ ಸಭಾಸ್ತಾರರಾ! ಬಳಿಕ ಆ ವನದಲ್ಲಿಯೇ ಕೆಲವುಕಾಲ ಕಳೆಯಲಾಗಿ, ನಾನು ಜರೆಯಿಂದ ಜರ್ಜರವಾದ ಆಯುಸ್ಸುಳ್ಳವನಾಗಿರುವಾಗ, ಮಂಜಿನಿಂದ ವ್ಯಾಪ್ತವಾದ ಹುಲ್ಲಿನಂತೆ ಕಾಣಿಸುತಿರುವ ಮೀಸೆಗಳು ನನ್ನ ಮುಖದಲ್ಲೆಲ್ಲ ತುಂಬಿದ್ದುವು ॥೧॥

ಕಾಡಿನಲ್ಲಿ ಹಸಿಯಾಗಿಯೂ ಒಣಗಿಯೂ ಇರುವ ಎಲೆಗಳನ್ನು ವಾಯುವು ದೂರವಾಗಿ ಹಾರಿಸುವಂತೆ, ಸುಖದುಃಖಮಿಶ್ರಗಳಾದ ದಿನಗಳು ಕರ್ಮವಾಸನಾಬಲದಿಂದ ಕಳೆದುಹೋದುವು॥

ಯುದ್ಧದಲ್ಲಿ ಬಾಣಸಮುದಾಯಗಳು ಹೋಗಿ ಬರುತಲಿರುವಂತೆ, ಸುಖದುಃಖಗಳೂ ಅನೇಕ ಕಲಹಗಳೂ ನಾನಾವಿಧ ದುಷ್ಕಾರ್ಯಗಳೂ—ಬರುತಲೂ ಹೋಗುತಲೂ ಇದ್ದುವು ॥೩॥

ನಾನು, ನಾನಾವಿಧ ವಿಕಲ್ಪ ಕಲ್ಪನೆಗಳೆಂಬ ಸುಳಿಯಲ್ಲಿ ಸಿಕ್ಕಿ, ಹಕ್ಕಿಗಳು ಹಾರಾಡುವಂತೆ ನಿರವಲಂಬನವಾಗಿ ಓಡಾಡುತ, ಕೇವಲ ಜಡನಾಗಿಬಿಟ್ಟೆನು. ಅಸಂಖ್ಯಾಕವಾದ ಕಲ್ಲೋಲಗಳಿಂದ ಭರಿತವಾದ ಸಮುದ್ರದಂತೆ ನನ್ನ ಮನಸ್ಸು ಭ್ರಮಿಸುತಿದ್ದಿತು ॥೪।

ಚಲಚ್ಚಿನ್ತಾಚಿತಂ ಚಕ್ರಮಾರೂಢೇ ಭ್ರಾನ್ತ ಆತ್ಮನಿ ।
ಪ್ರೋಹ್ಯಮಾನೇ ತೃಣಇವ ಸಾವರ್ತಂ ಕಾಲಸಾಗರೇ ॥೫॥
ವಿನ್ಧ್ಯೈರ್ವಿಲೀವನಕೀಟಸ್ಯ ಗ್ರಾಸೈಕಶರಣಸ್ಯ ಮೇ ।
ದ್ವಿಬಾಹೋರ್ಗರ್ದಭಸ್ಯಾತ್ರ ಕ್ಷೀಣಇತ್ಥಂ ಸಮಾಗಣೇ ॥೬॥
ವಿಸ್ಮೃತೇ ಮಮ ಭೂಪತ್ವೇ ಶವಸ್ಯೇವ ಮಹಾಜವೇ ।
ಚಣ್ಡಾಲತ್ವೇ ಸ್ಥಿರೀಭೂತೇ ಪಕ್ಷಚ್ಛಿನ್ನಇವಾಚಲೇ ॥೭॥
ಸಂಸಾರಮಿವ ಕಲ್ಪಾನ್ತೋ ದಾವಾಗ್ನಿರಿವ ಕಾನನಮ್ ।
ಸಾಗರೋರ್ಮಿಸ್ತಟಮಿವ ಶುಷ್ಕವೃಕ್ಷಮಿವಾಶನಿಃ ॥೮॥
ಅಕಾಣ್ಡೇ ಮರಣೋದ್ದೀನಂ ಚಣ್ಡಚಣ್ಡಾಲಮಣ್ಡಲಮ್ ।
ನಿರನ್ನತೃಣಪತ್ರಾಮ್ಬು ವಿನ್ಧ್ಯಕಚ್ಛಂ ತದಾ ಯಯೌ ॥೯॥
ನವರ್ಷತಿ ಘನವ್ರಾತೇ ದೃಷ್ಟನಷ್ಟೇ ಕ್ವಚಿತ್ ಸ್ಥಿತೇ ।
ಪೂತಾಙ್ಗಾರಕಣೋನ್ಮಿಶ್ರಗತೌ ವಹತಿ ಮಾರುತೇ ॥೧೦॥
ಶೀರ್ಣಮರ್ಮರಪರ್ಣಾಸು ದಾವಾಗ್ನಿವಲಿತಾಸು ಚ ।
ವನಸ್ಥಲೀಷು ಶೂನ್ಯಾಸು ಚಿರಪ್ರವ್ರಜಿತಾಸ್ವಿವ ॥೧೧॥

ಚಂಚಲವಾದ ಚಿಂತಾಚಕ್ರವನ್ನು ಹತ್ತಿಕೊಂಡು ಸುತ್ತುತಿರುವ ನನ್ನ ಆತ್ಮವು, ಕಾಲವೆಂಬ ಸಮುದ್ರದಲ್ಲಿ ಹುಲ್ಲಿನಂತೆ ಹೊತ್ತುಕೊಂಡು ಹೋಗಲ್ಪಡುತಿದ್ದಿತು ॥೫॥

ವಿಂಧ್ಯಪರ್ವತದ ತಪ್ಪಲಿನಲ್ಲಿರುವ ಕಾಡಿನೊಳಗೆ ಬಂದು ಸಣ್ಣ ಹುಳುವಿನಂತೆ ಸಂಚರಿಸುತ ಆಹಾರಮಾತ್ರ ತತ್ಪರನಾಗಿ ಎರಡು ಬಾಹುವುಳ್ಳ ಗರ್ದಭ(ಕತ್ತೆ)ನಾದ ನನಗೆ, ಈರೀತಿಯಾಗಿಯೇ ಅನೇಕ ವರ್ಷಸಮುದಾಯವು ಕಳೆದುಹೋಯ್ತು ॥೬॥

ಮಹಾಸಂಭ್ರಮಯುಕ್ತವಾಗಿದ್ದ ದೊರೆತನವನ್ನು, ನಾನು ಶವದಂತೆ ಮರೆತುಬಿಟ್ಟೆನು. ಪೂರ್ವದಲ್ಲಿ ರಕ್ಕೆ ಕತ್ತರಿಸಿದ ಪರ್ವತಗಳಂತೆ, ನನ್ನ ಚಂಡಾಲತನವು ಅಳ್ಳಾಡದೆ ಸ್ಥಿರವಾಗಿ ನೆಲೆಸಿತು ॥೭॥

ಹೀಗಿರುವಾಗ ಒಂದು ಸಮಯದಲ್ಲಿ, ಅತಿ ಪ್ರಚಂಡವಾದ ಚಂಡಾಲಮಂಡಲವುಳ್ಳ ಆ ವಿಂಧ್ಯಪರ್ವತ ಪ್ರದೇಶಕ್ಕೆ ದುರ್ಭಿಕ್ಷಪ್ರಾಪ್ತವಾಯ್ತು. ಈ ದುರ್ಭಿಕ್ಷವು, ಪ್ರಪಂಚಕ್ಕೆ ಪ್ರಳಯಕಾಲ ಬಂದಂತೆಯೂ, ಕಾಡಿಗೆ ಕಾಡುಗಿಚ್ಚು ಬಂದಂತೆಯೂ, ಸಮುದ್ರದ ದಡಕ್ಕೆ ಅಲೆಗಳು ಬಂದಂತೆಯೂ, ಒಣಗಿದ ಮರಕ್ಕೆ ಸಿಡಿಲು ಬಂದಂತೆಯೂ, ಆ ವಿಂಧ್ಯತಟಪ್ರದೇಶಕ್ಕೆ ಬಂದು, ಅಲ್ಲಿನವರಿಗೆ ಅನ್ನ ತೃಣ ಪತ್ರ ಜಲ ಮುಂತಾದುದೂ ಇಲ್ಲದಂತೆ ಮಾಡಿ, ಆ ಕಾಲದಲ್ಲಿ ಜನರು ಸತ್ತು ಪರಲೋಕಕ್ಕೆ ಹೋಗುವಂತೆ ಮಾಡಿಬಿಟ್ಟಿತು ॥೮-೯॥

ಆಗ ಮೇಘಬೃಂದವು, ಕಣ್ಣಿಗೆ ಕಾಣಿಸಿಕೊಂಡು ತಟ್ಟನೆ ಮರೆಯಾಗುತ, ಸುತರಾಂ ಮಳೆಯನ್ನು ಸುರಿಸಲಿಲ್ಲ. ಗಾಳಿಯು, ಸೂಕ್ಷ್ಮವಾದ ಬೆಂಕಿಕಿಡಿಗಳೊಡನೆ ಬೀಸಲಾರಂಭಿಸಿತು ॥೧೦॥

ವನಭೂಮಿಗಳು, ಉದುರಿರುವ ಒಣಗಿದೆಲೆಗಳ ಮರಮರ ಧ್ವನಿಯುಳ್ಳುವಾಗಿಯೂ, ಕಾಡುಗಿಚ್ಚಿನಿಂದ ಸುತ್ತಲ್ಪಟ್ಟುವಾಗಿಯೂ, ಚಿರಕಾಲದಿಂದ ಸನ್ಯಾಸಮಾಡಿರುವಂತೆ ಶೂನ್ಯಗಳಾಗಿಯೂ ಆದುವು ॥೧೧॥

ಅಕಾಣ್ಡಮಭವದ್ಭೀಮಂ ಉದ್ದಾಮದವಪಾವಕಮ್ ।
ಶೋಷಿತಾಶೇಷಗಹನಂ ಭಸ್ಮಶೇಷತೃಣೋಲುಪಮ್ ॥೧೨॥
ಪಾಂಸುಧೂಸರಸರ್ವಾಙ್ಗಂ ಕ್ಷುಧಿತಾಶೇಷಮಾನವಮ್ ।
ನಿರನ್ನತೃಣಪಾನೀಯಂ ದೇಶಾದ್ಯುದ್ದಾವಮಣ್ಡಲಮ್ ॥೧೩॥
ಕಚನ್ಮರುಮರೀಚ್ಯಮ್ಬುಮಜ್ಜನ್ಮಹಿಷಮಣ್ಡಲಮ್ ।
ವಾತೋತ್ಥಸೀಕರವ್ಯೂಹಾಪರಿವಾಹವನಾಮ್ಬರಮ್ ॥೧೪॥
ಪಾನೀಯಶಬ್ದಮಾತ್ರೈಕಶ್ರವಣೋತ್ಕನರವ್ರಜಮ್ ।
ಆತಪಾತತಿಸಂಶೋಷಸೀದತ್ಸಕಲಮಾನವಮ್ ॥೧೫॥
ಪತ್ರಗ್ರಸನಸಂರಬ್ಧಕ್ಷುಧಿತೋತ್ಥಿತಜೀವಿತಮ್ ।
ಸ್ವಾಙ್ಗಚರ್ವಣಸಂರಮ್ಭಲುಠದ್ದಶನಮಣ್ಡಲಮ್ ॥೧೬॥
ಮಾಂಸಶಙ್ಕಿನಿಗೀರ್ಣೋಗ್ರಖದಿರಾಗ್ನಿಕಣೋತ್ಕರಮ್ ।
ಮಣ್ಡಕಾಸಾರಸಂಗ್ರಸ್ತವನಪಾಷಾಣಖಣ್ಡಕಮ್ ॥೧೭॥

ಇಂತಹ ಸ್ಥಿತಿಯಲ್ಲಿ, ಅತಿ ಭಯಂಕರವಾದ ದುರ್ಭಿಕ್ಷವುಂಟಾಯಿತು. ಆಗ, ಅತಿ ಪ್ರೌಢವಾದ ದಾವಾಗ್ನಿಯುರಿಯಲಾರಂಭಿಸಿತು; ಸಮಸ್ತವಾದ ವನವೂ ಶೋಷಿಸಿಹೋಯಿತು; ಹುಲ್ಲೂ ಕಸಕಡ್ಡಿಯೂ ಕೇವಲ ಭಸ್ಮಾವಶೇಷವಾಗಿಬಿಟ್ಟುವು ॥೧೨॥

ಆಗ, ದೇಶಗಳೂ ಪಟ್ಟಣಗಳೂ ಗ್ರಾಮಗಳೂಕೂಡ, ಸಕಲಭಾಗಗಳಲ್ಲಿಯೂ ಧೂಳು ಕವಿದುಕೊಂಡಿದ್ದುವು; ಸಮಸ್ತಮನುಷ್ಯರೂ ಹಸಿವಿನಿಂದ ಬಳಲುತಿದ್ದರು; ಅನ್ನ ನೀರು ಹುಲ್ಲು ಮುಂತಾದುದೊಂದೂ ದೊರೆಯುತಿರಲಿಲ್ಲ; ಎಲ್ಲೆಲ್ಲಿ ನೋಡಿದರೂ ಕಾಡುಗಿಚ್ಚುಮಾತ್ರ ವಿಶೇಷವಾಗಿ ಕಾಣಿಸುತಿದ್ದಿತು ॥೧೩॥

ತಣತಣನೆ ಹೊಳೆಯುವ ಮರುಮರೀಚಿಕಾ ಜಲದಲ್ಲಿ, ಮಹಿಷಸಮೂಹಗಳು ಬಿದ್ದು ಹೊರಳಾಡುತಿದ್ದುವು; ಆ ಕಾಡಿನ ಆಕಾಶದೊಳಗಾಗಿ, ವಾಯುವಿನಿಂದ ಉತ್ಪನ್ನವಾದ ತುಂತುರುಗಳೂಕೂಡ ಬೀಸುತಿರಲಿಲ್ಲ ॥೧೪॥

ಮನುಷ್ಯರೆಲ್ಲರೂ, ಜಲವೆಂಬ ಶಬ್ದವನ್ನಾದರೂ ಕೇಳಿದರೆ ಸಾಕೆಂದು ತವಕಪಡುತಿದ್ದರು; ಬಿಸಿಲು ವಿಸ್ತಾರವಾಗಿ ವ್ಯಾಪಿಸಿರುವುದರಿಂದ, ಸಕಲ ಮನುಜರೂ ಸಂಕಟಪಡುತಿದ್ದರು ॥೧೫॥

ಹೊಟ್ಟೆಗಿಲ್ಲದ ಜನರು ಮರಗಳ ಸೊಪ್ಪನ್ನಾದರೂ ತಿಂದು ಬದುಕೋಣವೆಂದು ಆ ಸೊಪ್ಪನ್ನು ಅಗಿಯಲು ಹೊರಟಾಗ, ಅಷ್ಟಕ್ಕೂ ಶಕ್ತಿಯಿಲ್ಲದೆ, ಅವರ ಪ್ರಾಣಗಳು ಹೊರಟು ಹೋಗುತಿದ್ದುವು. ಕೊನೆಗೆ ಅವರ ದಂತಸಮೂಹಗಳು ತಮ್ಮ ಶರೀರವನ್ನೇ ತಿನ್ನುವುದಕ್ಕಾಗಿ ಪ್ರಯತ್ನಪಟ್ಟು ಹಾರಾಡುತಿದ್ದುವು ॥೧೬॥

ಆ ಕಾಡಿನಲ್ಲಿ, ಕಾಡುಗಿಚ್ಚಿನಿಂದ ಸುಟ್ಟುಹೋದ ಕಗ್ಗಲೀಮರದ ಕೆಂಡಗಳನ್ನು, ಮಾಂಸಖಂಡಗಳೆಂಬ ಭ್ರಾಂತಿಯಿಂದ ನುಂಗಿಬಿಡುತಿದ್ದರು. ಕಾಡಿನಲ್ಲಿ ಬಿದ್ದಿರುವ ಬೆಣಚು ಕಲ್ಲುಗಳನ್ನು ನೋಡಿ, ಹಾಲು ಮೊಸರುಗಳ ಕೆನೆಯೆಂಬ ಶಂಕೆಯಿಂದ ನುಂಗಿಬಿಡುತಿದ್ದರು ॥೧೭॥

ಅನ್ಯೋನ್ಯಭೂತಸಂಸಕ್ತಮಾತೃಪುತ್ರಪಿತೃವ್ರಜಮ್ ।
ಗೃಧ್ರೋದರರಟತ್ಸಾರನಿಗೀರ್ಣವರಸಾರಿಕಮ್ ॥೧೮॥
ಪರಸ್ಪರಾಙ್ಗವಿಚ್ಛೇದರಕ್ತಸಿಕ್ತಧರಾತಲಮ್ ।
ಹರಿಗ್ರಸನಸಂರಬ್ಧಮತ್ತಕ್ಷುಧಿತವಾರಣಮ್ ॥೧೯॥
ದರೀನಿಗರಣೈಕೈಕಸಿಂಹಭ್ರಮಣಭೀಷಣಮ್ ।
ಅನ್ಯೋನ್ಯಗ್ರಸನೋದ್ಯುಕ್ತಲೋಕಮಲ್ಲಕೃತಂ ವಹತ್ ॥೨೦॥
ನಿಷ್ಪತ್ರಪಾದಪೋಡ್ಡೀನಪ್ರೌಢಾಙ್ಗಾರಮಯಾನಿಲಮ್ ।
ರಕ್ತಪಾನೋತ್ಕಮಾರ್ಜಾರಲೀಢಧಾತುತಟಾವನಿ ॥೨೧॥
ಜ್ವಾಲಾಘನಘಟಾಟೋಪಸಾವರ್ತಸವನಾನಿಲಮ್ ।
ಸರ್ವಸ್ಥಲರಸದ್ವಹ್ನಿಪುಞ್ಜಪಿಞ್ಜರಜಙ್ಗಲಮ್ ॥೨೨॥
ದಗ್ಧಾಜಗರಕುಞ್ಜೋತ್ಥಧೂಮಮಾಂಸಲಗುಲ್ಮಕಮ್ ।
ಮಾರುತಾವಲಿತಜ್ವಾಲಾಸನ್ಧ್ಯಾಭ್ರವಲಿತಾಮ್ಬರಮ್ ॥೨೩॥

ತಾಯಿ ತಂದೆ ಮಕ್ಕಳು ಮುಂತಾದವರೆಲ್ಲರೂ, ಒಬ್ಬರನ್ನೊಬ್ಬರು ತಬ್ಬಿಕೊಂಡು ವ್ಯಸನಪಡುತಿದ್ದರು. ಸಾರಿಕೆ(ಮೈನಾ)ಯೆಂಬ ಪಕ್ಷಿಯು, ಗೃಧ್ರದಿಂದ ಸಂಪೂರ್ಣವಾಗಿ ನುಂಗಲ್ಪಟ್ಟುದಾಗಿ, ಅದರ ಹೊಟ್ಟೆಯೊಳಗೆ ಕೂಗುತಿದ್ದಿತು ॥೧೮॥

ಒಬ್ಬರ ಮೈಯಿ ಒಬ್ಬರಿಗೆ ತಗುಲಿ, ಅದರಿಂದ ಉಂಟಾದ ರಕ್ತವು ಭೂಮಿಯನ್ನೆಲ್ಲ ನೆನೆಯಿಸಿತು. ಹಸಿದಿದ್ದ ಮದ್ದಾನೆಯು, ಸಿಂಹದಿಂದ ಆಕ್ರಮಿಸಲ್ಪಟ್ಟು ಕಳವಳಪಡುತಿದ್ದಿತು ॥

ಗುಹೆಗಳೊಳಗೆ, ಒಂದು ಸಿಂಹವನ್ನು ಮತ್ತೊಂದು ಸಿಂಹವು ಹಿಡಿದುಕೊಂಡೀತೆಂಬ ಭಯದಿಂದ, ಸಿಂಹಗಳೆಲ್ಲವೂ ಸುತ್ತಾಡುತಿದ್ದುವು. ಮನುಷ್ಯರು ಒಬ್ಬರನ್ನೊಬ್ಬರು ತಿನ್ನಬೇಕೆಂದು ಉದ್ಯುಕ್ತರಾಗಿ, ಜಟ್ಟಿಗಳಂತೆ ಕಾದುತಿದ್ದರು ॥೨೦॥

ಎಲೆಯೆಲ್ಲ ಉದುರಿಹೋಗಿರುವ ಮರದದೆಸೆಯಿಂದ, ದಪ್ಪದಪ್ಪ ಕಿಡಿಗಳನ್ನು ಹೊತ್ತುಕೊಂಡು, ಗಾಳಿಗಳು ಬೀಸುತಿದ್ದುವು. ರಕ್ತವನ್ನು ಕುಡಿಯಬೇಕೆಂಬ ಉತ್ಕಂಠೆಯುಳ್ಳುವಾಗಿರುವ ಮಾರ್ಜಾರಗಳು, ಧಾತು (ಕಾವಿಗಲ್ಲು) ಮಯವಾದ ಪರ್ವತ ತಟಭೂಮಿಗಳನ್ನು ನೆಕ್ಕುತಿದ್ದುವು ॥೨೧॥

ಜ್ವಾಲಾಮಯವಾದ ಮೇಘಸಮೂಹಗಳ ಆಡಂಬರದೊಡನೆ ಕೂಡಿಕೊಂಡಿರುವ ಸುಂಟರಗಾಳಿಯು ಆ ಕಾಡಿನೊಳಗೆ ಬೀಸಿತು. ಎಲ್ಲಾ ಕಡೆಯಲ್ಲಿಯೂ ವ್ಯಾಪಿಸುತಿರುವ ಅಗ್ನಿಸಮೂಹದಿಂದ, ಆ ವನವೆಲ್ಲವೂ ಹೊಂಬಣ್ಣವಾಗಿಬಿಟ್ಟಿತು ॥೨೨॥

ಲತಾಗೃಹಗಳೊಳಗೆ ಮಲಗಿದ್ದ ಹೆಬ್ಬಾವುಗಳು ಅಗ್ನಿಜ್ವಾಲೆಯಿಂದ ಸುಟ್ಟುಹೋಗಲಾಗಿ, ಅದರ ಧೂಮವು ಅಲ್ಲಿನ ಪೊದೆಗಳಲ್ಲೆಲ್ಲಾ ವ್ಯಾಪಿಸಿಕೊಂಡಿತು. ವಾಯುವು ಅಗ್ನಿಜ್ವಾಲೆಯನ್ನು ಸಂಧ್ಯಾಕಾಲಿಕವಾದ ಮೇಘಗಳಿಗೆಲ್ಲ ಸೇರಿಸಿಬಿಟ್ಟಿತು; ಇಂತಹ ಮೇಘಗಳು ಆಕಾಶದಲ್ಲೆಲ್ಲ ಹರಡಿಕೊಂಡಿದ್ದುವು ॥೨೩॥

ಉದ್ದಾಮರವವದ್ಭ್ರಾನ್ತಭಸ್ಮನಾಽಸ್ತಮ್ಭಮಣ್ಡಲಮ್ ।
ಸಾಕ್ರನ್ದನರದಾರಾಗ್ರದೀನಾರ್ಭಕಕೃತಾರವಮ್ ॥೨೪॥
ಸಂಭ್ರಾನ್ತಪುರುಷವ್ಯೂಹದನ್ತಕೃತ್ತಮಹಾಶವಮ್ ।
ಮಾಂಸಗನ್ಧಜವಗ್ರಸ್ತರಕ್ತಾರಕ್ತನಿಜಾಙ್ಗುಳಿ ॥೨೫॥
ನೀಲಪತ್ರಲತಾಶಙ್ಕಾಪೀತಧೂಮಘನಚ್ಛವಿ ।
ಭ್ರಮದ್ಗೃಧ್ರಸಿಗೀರ್ಣೋಗ್ರನಭೋಭ್ರಾನ್ತೋಲ್ಮುಕಾಮಿಷಮ್ ॥೨೬॥
ಇತರೇತರಭಿನ್ನಾಙ್ಗಲೋಕವಿದ್ರವಣಾಕುಲಮ್ ।
ಜ್ವಲಿತಾಗ್ನಿಟಣತ್ಕಾರವಿದೀರ್ಣಹೃದಯೋದರಮ್ ॥೨೭॥
ಗರ್ತಮಾರುತಕಾಙ್ಕಾರಭೀಮದಾವಾಗ್ನಿವಲ್ಗನಮ್ ।
ಭೀತಾಜಗರಫೂತ್ಕಾರಪತದಙ್ಗಾರಪಾದಪಮ್ ॥೨೮॥
ಸದಕಾಣ್ಡಸ್ಫುಟದ್ದೇಶಂ ಪ್ರಾಪ್ಯ ತಚ್ಛುಷ್ಕಕೋಟರಮ್ ।
ದ್ವಾದಶಾರ್ಕಾಗ್ನಿದಗ್ಧಸ್ಯ ಜಗತೋಽನುಕೃತಿಂ ಯಯೌ ॥೨೯॥

ಆಗ ವಿಶೇಷವಾಗಿ ಜನಗಳು ಕೋಲಾಹಲ ಮಾಡುತಿದ್ದರು. ಮೇಲಕ್ಕೆ ಹಾರಿಹೋದ ಭಸ್ಮಸಮೂಹವು, ದಂಡಿಯಿಲ್ಲದ ಛತ್ರಿಯಂತೆ ಕಾಣುತಿದ್ದಿತು. ಪುರುಷರೂ ಸ್ತ್ರೀಯರೂ ಅಳುತ ಹೋಗುತಿದ್ದರು ; ಅವರ ಮುಂದುಗಡೆ, ಮಕ್ಕಳುಗಳು ದೀನವಾಗಿ ಅಳುತಿದ್ದುವು ॥೨೪॥

ಸಂಭ್ರಾಂತರಾದ ಪುರುಷರು, ತಮ್ಮ ಹಲ್ಲುಗಳಿಂದ ಶವಗಳನ್ನು ಕಡಿಯುತಿದ್ದರು. ಮಾಂಸದ ಗಂಧವನ್ನು ಆಘ್ರಾಣಿಸಿ, ರಕ್ತಮಯವಾದ ಬೆರಳುಗಳನ್ನು ಬೇಗನೆ ಅಗಿಯುತಿದ್ದರು ।

ಸಾಂದ್ರವಾದ ಧೂಮಕಾಂತಿಯನ್ನು, ನೀಲವಾದ ಪತ್ರವುಳ್ಳ ಲತೆಗಳು ನಿಶ್ಶಂಕವಾಗಿ ಪಾನಮಾಡುತಿದ್ದುವು (ಧೂಮಕಾಂತಿಯು ಪತ್ರಕಾಂತಿಯೊಡನೆ ಸೇರಿಹೋಯ್ತು). ಆಕಾಶದಲ್ಲಿ ಹಾರುತಿರುವ ಕೊಳ್ಳಿಗಳನ್ನು, ಅಲ್ಲಿದ್ದ ಹದ್ದುಗಳು, ಮಾಂಸಭ್ರಾಂತಿಯಿಂದ ನುಂಗುತಿದ್ದುವು॥

ಒಬ್ಬರಿಗೊಬ್ಬರು ತಿಕ್ಕಾಡುವುದರಿಂದ, ಜರ್ಜರದೇಹರಾದ ಮನುಷ್ಯರು, ಅಲ್ಲಿ ಓಡಾಡುತಿದ್ದರು. ಮನುಷ್ಯರ ಜಠರಾಗ್ನಿಯು ಉರಿಯಹತ್ತಿದಕಾರಣ, ಅವರ ಹೊಟ್ಟೆಯೂ ಎದೆಯೂ ಟಣ್ಣೆಂದು ಒಡೆಯುತಿದ್ದುವು ॥೨೭॥

ಕಾಡುಗಿಚ್ಚು ಹತ್ತಿಕೊಂಡು ಉರಿಯುವ ಶಬ್ದವು, ಸಣ್ಣಪೊಟ್ಟರೆಯಿಂದ ಹೊರಡುವ ಗಾಳಿಯಂತೆ ಕೇಳಿಸುತಿದ್ದಿತು. ಭಯಪಟ್ಟ ಹೆಬ್ಬಾವುಗಳು ಫೂತ್ಕಾರಮಾಡುತಿರುವ ಕಾರಣ, ಅದರಿಂದ ಉದಯಿಸಿದ ಕಿಡಿಗಳು ಮರದಮೇಲೆಲ್ಲ ಬೀಳುತಿದ್ದುವು ॥೨೮॥

ಹೀಗೆ ಆಕಸ್ಮಿಕವಾಗಿ ಸಂಭವಿಸಿದ ಆ ದುರ್ಭಿಕ್ಷವು, ಆ ವಿಂಧ್ಯಭೂಮಿಯನ್ನೆಲ್ಲ ವ್ಯಾಪಿಸಿಕೊಂಡು, ಏಕಕಾಲದಲ್ಲಿ ದ್ವಾದಶಸೂರ್ಯರಿಂದಲೂ ಅಗ್ನಿಯಿಂದಲೂ ಸುಡಲ್ಪಟ್ಟ ಜಗತ್ತಿನ ಸಾದೃಶ್ಯವನ್ನುಂಟುಮಾಡಿತು ॥೨೯॥

ಜ್ವಲದನಲಜಟಾಲವೃಕ್ಷಷಣ್ಡ

ಪ್ರಸರಮರುತ್ಪ್ರಸರಾವನುನ್ನಲೋಕಃ ।

ಜ್ವಲನತಪನಭಾಸ್ಕರಾತ್ಮಜಾನಾಂ

ರಮಣಗೃಹಾನುಕೃತಿಂ ಜಗಾಮ ದೇಶಃ ॥೩೦॥

ಇತಿ ಉತ್ಪತ್ತಿಪ್ರಕರಣೇ ಇನ್ದ್ರಜಾಲೋಪಾಖ್ಯಾನೇ ಅಕಾಣ್ಡವರ್ಣನಂ ನಾಮ ಅಷ್ಟೋತ್ತರಶತತಮಃ ಸರ್ಗಃ.

ಜ್ವಲಿಸುತಿರುವ ಅಗ್ನಿಯಜ್ವಾಲೆಯಿಂದ ಪರಿವೃತವಾದ ವೃಕ್ಷಸಮೂಹದ ಮೇಲಿನಿಂದ ಬೀಸುತಿರುವ ವಾಯುವು, ಅಲ್ಲಿನ ಜನಗಳನ್ನೆಲ್ಲ ನಾಶಮಾಡಿಬಿಟ್ಟಿತು. ಇಂತಹ ಆ ಪ್ರದೇಶವು, ಅಗ್ನಿ ಸೂರ್ಯ ಶನೈಶ್ಚರರುಗಳ ವಿಲಾಸಗೃಹವೋ ಎಂಬಂತೆ ವಿರಾಜಿಸುತಿದ್ದಿತು ॥೩೦॥

ಇದು ಉತ್ಪತ್ತಿಪ್ರಕರಣದಲ್ಲಿ ಇಂದ್ರಜಾಲೋಪಾಖ್ಯಾನದೊಳಗೆ

ಅಕಾಂಡವರ್ಣನೆಯೆಂಬ ನೂರೆಂಟನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ನವಾಧಿಕಶತತಮಃ ಸರ್ಗಃ.

ರಾಜೋವಾಚ.

ತಸ್ಮಿಂಸ್ತದಾ ವರ್ತಮಾನೇ ಕಷ್ಟೇ ವಿಧಿವಿಸರ್ಯಯೇ ।
ಅಕಾಲೇಽಲ್ಪ ಇವ ಕಲ್ಪಾನ್ತೇ ನಿತಾನ್ತಂ ತಾಪದಾಯಿನಿ ॥೧॥
ಜನಾಃ ಕೇಚನ ನಿಷ್ಕ್ರಮ್ಯ ಸಕಳತ್ರಸುಹೃಜ್ಜನಾಃ ।
ಗತಾದೇಶಾನ್ತರಂ ವ್ಯೋಮ್ನಃ ಶರದೀವ ಪಯೋಧರಾಃ ॥೨॥
ದೇಹಾವಮವಸಂಲೀನಪುತ್ರದಾರಾಗ್ರ್ಯಬನ್ಧವಃ ।
ಶೀರ್ಣಾಃ ಕೇಚನ ತತ್ರೈವ ಚ್ಛಿನ್ನಾ ಇವ ವನೇ ದ್ರುಮಾಃ ॥೩॥
ಭುಕ್ತಾಃ ಕೇಚನ ಚ ವ್ಯಾಘ್ರೈಃ ನಿರ್ಗತಾಸ್ತು ಸ್ವಮನ್ದಿರಾತ್ ।
ಅಜಾತಪಕ್ಷಕಾಃ ಶ್ಯೇನೈಃ ಖಗಾನೀಡೋದ್ಗತಾ ಇವ ॥೪॥
ಪ್ರವಿಷ್ಟಾಃ ಕೇಚಿದನಲಂ ಜ್ವಲಿತಂ ಶಲಭಾ ಇವ ।
ಕೇಚಿಚ್ಛ್ವಭ್ರೇಷು ಪತಿತಾಃ ಶಿಲಾಃ ಶೈಲಚ್ಯುತಾ ಇವ ॥೫॥

ಉತ್ಪತ್ತಿಪ್ರಕರಣದಲ್ಲಿ ನೂರೊಂಬತ್ತನೆಯ ಸರ್ಗವು.

ನಿರ್ಗತಸ್ಯ ಸದಾರಸ್ಯ ದೃಷ್ಟ್ವಾ ಪುತ್ರಾಸದಂ ಚಿತಾಮ್ ।
ವಿವಿಕ್ತೋಃ ಪ್ರತಿಬುದ್ಧಸ್ಯ ಸಭ್ಯಸಂವಾದಈರ್ಯತೇ ॥

ಲವಣರಾಜನು ಚಂಡಾಲಜನ್ಮದಲ್ಲಿದ್ದಾಗ, ಹೆಂಡತಿಯೊಡನೆ ಆ ಜೀದಿಯಿಂದ ಈಚೆಗೆ ಹೊರಟು, ತನ್ನ ಮಗನಿಗೆ ಬಂದ ವಿಪತ್ತನ್ನು ನೋಡಿ, ಚಿತಿಯನ್ನು ಪ್ರವೇಶಿಸಬೇಕೆಂದು ಪ್ರಯತ್ನಪಟ್ಟು, ಹಾಗೆಯೇ ಎಚ್ಚರಗೊಂಡು ಸಭಿಕರನ್ನು ಕಂಡು, ಅವರೊಡನೆ ಮಾತನಾಡುವನೆಂಬ ವರ್ಣನೆಯು, ಈ ಸರ್ಗದಲ್ಲಿ ಹೇಳಲ್ಪಡುವುದು.

ಅಯ್ಯಾ ಸಭಿಕರಾ! ಈರೀತಿಯಾಗಿ ಅತಿ ಕಷ್ಟವಾದ ಆ ದೈವದುರ್ವಿಲಾಸವು, ಅಕಾಲದಲ್ಲಿ ಮಹಾಪ್ರಳಯವುಂಟಾದಂತೆ, ವಿಶೇಷವಾದ ತಾಪವನ್ನುಂಟುಮಾಡುತಿರಲಾಗಿ, ಶರತ್ಕಾಲದಲ್ಲಿ ಅಂತರಿಕ್ಷಪ್ರದೇಶದಿಂದ ಮೇಘಗಳು ಹೊರಟುಹೋಗುವಂತೆ, ಕೆಲವು ಜನಗಳು ಪತ್ನೀಪುತ್ರ ಮಿತ್ರರೊಡನೆ ಕೂಡಿಕೊಂಡು ಆ ಪ್ರದೇಶದಿಂದ ಹೊರಟು, ಮತ್ತೊಂದು ದೇಶಕ್ಕೆ ಹೋದರು ॥೧—೨॥

ಮತ್ತೆ ಕೆಲವರು, ಅರಣ್ಯದಲ್ಲಿ ಕತ್ತರಿಸಲ್ಪಟ್ಟ ಮರಗಳಂತೆ, ತಮ್ಮ ಶರೀರದೊಳಗೆ ಹೆಂಡತಿ ಮಕ್ಕಳು ನೆಂಟರುಗಳನ್ನು ಅಡಗಿಸಿಕೊಂಡು, ಅಲ್ಲಿಯೇ ಜೀರ್ಣವಾಗಿ ಹೋದರು ॥೩॥

ಮತ್ತೆ ಕೆಲವರು, ರಕ್ಕೆ ಹುಟ್ಟದಿರುವ ಪಕ್ಷಿಗಳು ತಮ್ಮ ಗೂಡಿನಿಂದ ಹೊರಕ್ಕೆ ಹೊರಟೊಡನೆಯೇ ಗಿಡಗಗಳಿಂದ ತಿನ್ನಲ್ಪಡುವಂತೆ, ತಮ್ಮ ಮನೆಯಿಂದ ಹೊರಕ್ಕೆ ಹೊರಟೊಡನೆಯೇ ಹುಲಿಗಳಿಂದ ತಿನ್ನಲ್ಪಟ್ಟರು ॥೪॥

ಕೆಲವರು, ಶಲಭಗಳಂತೆ ಉರಿಯುವ ಬೆಂಕಿಯನ್ನು ಪ್ರವೇಶಿಸಿದರು. ಕೆಲವರು ಪರ್ವತದಿಂದ ಜಾರಿಬಿದ್ದ ಬಂಡೆಗಳಂತೆ ಗುಂಡಿಗಳಲ್ಲಿ ಬಿದ್ದರು ॥೫॥

ಅಹಂ ತು ತಾನ್ ಪರಿತ್ಯಜ್ಯ ಶ್ವಶುರಾದೀನ್ ಸ್ವಕಂ ಕ್ಷಮಮ್ ।
ಕಳತ್ರಮಾತ್ರಮಾದಾಯ ಕೃಚ್ಛ್ರಾದ್ದೇಶಾದ್ವಿನಿರ್ಗತಃ ॥೬॥
ಅನಲಾನನಿಲಾಂಶ್ಚೈವ ಭಕ್ಷಕಾಂಸ್ತಕ್ಷಕಾನಪಿ ।
ವಞ್ಚಯಿತ್ವಾ ಭಯಾನ್ಮೃತ್ಯೋಃ ಸದಾರೋಽಹಂ ವಿನಿರ್ಗತಃ ॥೭॥
ಪ್ರಾಪ್ಯ ತದ್ದೇಶಪರ್ಯನ್ತಂ ತತ್ರ ತಾಳತರೋಸ್ತಲೇ ।
ಅವರೋಪ್ಯ ಸುತಾನ್ ಸ್ಕನ್ಧಾತ್ ನಾನಾನರ್ಥಾನಿವೋಲ್ಬಣಾನ್ ॥೮॥
ವಿಶ್ರಾನ್ತೋಽಸ್ಮಿ ಚಿರಂ ಶ್ರಾನ್ತೋ ರೌರವಾದಿವ ನಿರ್ಗತಃ ।
ದೀರ್ಘದಾವನಿದಾಘಾರ್ತೋ ಗ್ರೀಷ್ಮೇ ಪದ್ಮ ಇವಾಜಲಃ ॥೯॥
ಅಥ ಚಣ್ಡಾಲಕನ್ಯಾಯಾಂ ವಿಶ್ರಾನ್ತಾಯಾಂ ತರೋಸ್ತಲೇ ।
ಸುಪ್ತಾಯಾಂ ಶೀತಲಚ್ಛಾಯೇ ದ್ವೌ ಸಮಾಲಿಙ್ಗ್ಯ ದಾರಕೌ ॥೧೦॥
ಪೃಚ್ಛಕೋ ನಾಮ ತನಯೋ ಮಮೈಕಃ ಪುರತಃ ಸ್ಥಿತಃ ।
ಅತ್ಯನ್ತವಲ್ಲಭೋಽಸ್ಮಾಕಂ ಕನೀಯಾನ್ ಮೌಗ್ಧ್ಯವಾನಿತಿ ॥೧೧॥
ಸ ಮಾಮುವಾಚ ದೀನಾತ್ಮಾ ಬಾಷ್ಪಪೂರ್ಣವಿಲೋಚನಃ ।
ತಾತ ದೇಹ್ಯಾಶು ಮೇ ಮಾಂಸಂ ಪಾತುಂ ಚ ರುಧಿರಂ ಕ್ಷಣಾತ್ ॥೧೨॥

ನಾನಾದರೋ, ಆ ನಮ್ಮ ಮಾವ ಮುಂತಾದವರನ್ನೆಲ್ಲ ಬಿಟ್ಟುಬಿಟ್ಟು, ನನ್ನನ್ನು ಹಿಂಬಾಲಿಸಿ ಬರುವಮಟ್ಟಿಗೆ ಸಮರ್ಥರಾಗಿದ್ದ ನನ್ನ ಕುಟುಂಬದವರನ್ನು ಮಾತ್ರ ಕರೆದುಕೊಂಡು, ಅತಿಕಷ್ಟದಿಂದ ಆ ಪ್ರದೇಶವನ್ನು ಬಿಟ್ಟು ಹೊರಟುಬಂದೆನು ॥೬॥

ಆಗ ನಾನು ಮರಣಕ್ಕೆ ಹೆದರಿ, ಅಗ್ನಿಯನ್ನೂ ವಾಯುವನ್ನೂ ದುಷ್ಟಮೃಗಗಳನ್ನೂ ಸರ್ಪಗಳನ್ನೂ ವಂಚಿಸಿ (ಇವುಗಳ ಬಾಧೆಯನ್ನು ತಪ್ಪಿಸಿಕೊಂಡು), ಸಂಸಾರದೊಡನೆ ಹೊರಟುಬಂದೆನು ॥೭॥

ಹೀಗೆ ಹೊರಟು, ಆ ಪ್ರದೇಶದ ಎಲ್ಲೆಕಟ್ಟೆಗೆ ಬಂದು, ಅಲ್ಲಿ ಒಂದು ತಾಳವೃಕ್ಷದ ಕೆಳಗಡೆ, ನಾನಾವಿಧವಾದ ಅನರ್ಥಗಳಂತಿರುವ ಅವರನ್ನೆಲ್ಲ ಹೆಗಲಿನಿಂದ ಇಳುಹಿಸಿ, ರೌರವನರಕದಿಂದ ತಪ್ಪಿಸಿಕೊಂಡು ಬಂದೆನೆಂದು ತಿಳಿದುಕೊಂಡು, ಗ್ರೀಷ್ಮಕಾಲದಲ್ಲಿ ನೀರಿಲ್ಲದೆ ಕಾಡುಗಿಚ್ಚಿನೊಳಗೆ ಸಿಕ್ಕಿಕೊಂಡಿರುವ ಪದ್ಮದಂತೆ ಕಳೆಗುಂದಿದವನಾಗಿ, ಅಲ್ಲಿಯೇ ಬಹಳಹೊತ್ತು ವಿಶ್ರಮಿಸಿಕೊಂಡಿದ್ದೆನು ॥೮—೯॥

ಬಳಿಕ, ಆ ಚಂಡಾಲಕನ್ಯಕೆಯು ನೆಳಲಿನಿಂದ ತಣ್ಣಗಿರುವ ಆ ಮರದ ಕೆಳಗೆ ಇಬ್ಬರು ಗಂಡುಮಕ್ಕಳನ್ನೂ ತಬ್ಬಿಕೊಂಡು ವಿಶ್ರಮಿಸಿಕೊಳ್ಳುತ ಮಲಗಿರಲಾಗಿ, ನನ್ನ ಮುಂದುಗಡೆ 'ಪೃಚ್ಛಕ' ಎಂಬ ಒಬ್ಬ ಮಗನು ಕುಳಿತಿದ್ದನು; ಅವನು ಕಿರಿಯುವನೆಂದೂ, ಸುಂದರನೆಂದೂ, ನಮಗೆ ಬಲುಪ್ರೀತಿಪಾತ್ರನಾಗಿದ್ದನು ॥೧೦—೧೧॥

ಅವನು, ಅತಿಯಾಗಿ ಬಳಲಿದವನಾಗಿ, ಕಣ್ಣು ತುಂಬ ನೀರು ತುಂಬಿಕೊಂಡು, ನನ್ನನ್ನು ಕುರಿತು 'ಅಪ್ಪಾ! ನನಗೆ ಬೇಗನೆ ಮಾಂಸವನ್ನು ಕೊಡು; ಕುಡಿಯುವುದಕ್ಕೆ ಸ್ವಲ್ಪ ರಕ್ತವನ್ನೂ ಈಕ್ಷಣವೇ ಕೊಡು' ಎಂದು ಹೇಳಿದನು ॥೧೨॥

ಪುನಃಪುನರ್ವದನ್ನೇವಂ ಸ ಬಾಲಸ್ತನಯೋ ಮಮ ।
ಪ್ರಾಣಾನ್ತಿಕೀಂ ದಶಾಂ ಪ್ರಾಪ್ತಃ ಸಾಕ್ರನ್ದೋ ಹಿ ಪುನಃ ಕ್ಷುಧಾ ॥೧೩॥
ತಸ್ಯೋಕ್ತಂತು ಮಯಾ ಪುತ್ರ ಮಾಂಸಂ ನಾಸ್ತೀತಿ ಭೂರಿಶಃ ।
ತಥಾಪಿ ಮಾಂಸಂ ದೇಹೀತಿ ವದತ್ಯೇವ ಸುದುರ್ಮತಿಃ ॥೧೪॥
ಅಥ ವಾತ್ಸಲ್ಯಮೂಢೇನ ಮಯಾ ದುಃಖಾತಿಭಾರಿಣಾ ।
ತಸ್ಯೋಕ್ತಂ ಪುತ್ರ ಮನ್ಮಾಂಸಂ ಪಕ್ವಂ ಸಂಭುಜ್ಯತಾಮಿತಿ ॥೧೫॥
ತದಪ್ಯಙ್ಗೀಕೃತಂ ತೇನ ದೇಹೀತಿ ವದತಾ ಪುನಃ ।
ಮನ್ಮಾಂಸಭಕ್ಷಣಂಕ್ಷೀಣವೃತ್ತಿನಾಽಽಶ್ಲೇಷವೃತ್ತಿನಾ ॥೧೬॥
ಸರ್ವದುಃಖಾಪನೋದಾಯ ಸ್ನೇಹಕಾರುಣ್ಯಮೋಹಿನಾ ।
ತಸ್ಯ ತಾಮಾರ್ತಿಮಾಲೋಕ್ಯ ಮಯಾ ದುಃಖಾತಿಭಾರಿಣಾ ॥೧೭॥
ಸೋಢುಂ ತಾಮಾಪದಂ ತೀವ್ರಾಂ ಅಶಕ್ತೇನ ಹತಾತ್ಮನಾ ।
ಮರಣಾಯಾತಿಮಿತ್ರಾಯ ಕೃತೋನ್ತರ್ನಿಶ್ಚಯೋ ಮಯಾ ॥೧೮॥
ತತ್ರ ಕಾಷ್ಠಾನಿ ಸಞ್ಚಿತ್ಯ ಚಿತಾಂ ರಚಿತವಾನಹಮ್ ।
ಚಿತಾ ಚಟಚಟಾಸ್ಫೋಟೈಃ ಸ್ಥಿತಾ ಮದಭಿಕಾಙ್ಕ್ಷಿಣೀ ॥೧೯॥
ತಸ್ಯಾಂ ತು ಯಾವದಾತ್ಮಾನಂ ಚಿತಾಯಾಂ ನಿಕ್ಷಿಪಾಮ್ಯಹಮ್ ।
ಚಲಿತೋಸ್ಮಿ ಜವಾತ್ ತಾವತ್ ಅಸ್ಮಾತ್ ಸಿಂಹಾಸನಾನ್ನೃಪಃ ।

ಇನ್ನೂ ಬಾಲಕನಾಗಿದ್ದ ಆ ನನ್ನ ಮಗನು, ಮತ್ತೆಮತ್ತೆ ಹೀಗೆ ಹೇಳುತ, ಪ್ರಾಣಹೋಗತಕ್ಕ ಸ್ಥಿತಿಗೆ ಬಂದುಬಿಟ್ಟು, ಹಸಿವಿನಿಂದ ಮತ್ತೆಮತ್ತೆ ಅತ್ತನು ॥೧೩॥

ಆಗ ನಾನು 'ಮಗು! ಮಾಂಸವಿಲ್ಲ!' ಎಂದು ಅನೇಕವೇಳೆ ಹೇಳಿದೆನು. ಆದರೂ, ದುಷ್ಟಬುದ್ಧಿಯಾದ ಆ ಬಾಲಕನು 'ಮಾಂಸವನ್ನು ಕೊಡು' ಎಂದೇ ಪದೇಪದೇ ಹೇಳುತ ಬಂದನು ॥೧೪॥

ಅನಂತರ, ಕೇವಲ ಪುತ್ರವಾತ್ಸಲ್ಯಮೂಢನಾಗಿ ದುಃಖಾತಿರೇಕಯುಕ್ತನಾದ ನಾನು, ಅವನನ್ನು ಕುರಿತು 'ಮಗು! ನನ್ನ ಮಾಂಸವನ್ನು ಬೇಯಿಸಿ ತಿನ್ನು' ಎಂದು ಹೇಳಿದೆನು ॥೧೫॥

ಆ ಹುಡುಗನು, ಅದನ್ನೂ—ನನ್ನ ಮಾಂಸವನ್ನು ತಿನ್ನುವಿಕೆಯನ್ನೂ—ಒಪ್ಪಿಕೊಂಡು, ಕೊಡು ಕೊಡು ಎಂದು ಪುನಃಪುನಃ ಹೇಳುತ, ಇತರವಾದ ವ್ಯಾಪಾರವೊಂದೂ ತಿಳಿಯದವನಾಗಿ, ನನ್ನನ್ನು ಆಲಿಂಗಿಸಿಕೊಳ್ಳುತಿದ್ದನು ॥೧೬॥

ನಾನು ಅವನ ಆ ಸಂಕಟವನ್ನು ಕಂಡು, ಮಹಾದುಃಖಯುಕ್ತನಾಗಿ, ಸ್ನೇಹದಿಂದಲೂ ದಯೆಯಿಂದಲೂ ವಿಮೋಹಿತನಾಗಿ, ಅತಿತೀವ್ರವಾದ ಆ ವಿಪತ್ತನ್ನು ಸಹಿಸುವುದಕ್ಕೆ ಅಸಮರ್ಥನಾಗಿ, ಸರ್ವದುಃಖಗಳನ್ನೂ ಒಂದೇತಡವೆ ಕಳೆದುಕೊಳ್ಳುವುದಕ್ಕೋಸ್ಕರ, ಆ ಸಮಯದಲ್ಲಿ ಪರಮಮಿತ್ರನಾಗಿ ಕಂಡುಬಂದ ಮರಣವನ್ನು ಆಶ್ರಯಿಸುವುದಕ್ಕೆ ಒಳಗೇ ನಿಶ್ಚಯಮಾಡಿಕೊಂಡುಬಿಟ್ಟೆನು ॥೧೭—೧೮॥

ಆಗ ಅಲ್ಲಿ ನಾನು ಸೌದೆಗಳನ್ನು ಕೂಡಿಹಾಕಿ ಚಿತೆಯನ್ನು ಮಾಡಿದೆನು. ಆ ಚಿತೆಯು, ಚಟಚಟ ಶಬ್ದಮಾಡುತ, ನನ್ನನ್ನು ಎದುರು ನೋಡುತಿದಿತು ॥೧೯॥

ತತಸ್ತೂರ್ಯನಿನಾದೇನ ಜಯಶಬ್ದೇನ ಬೋಧಿತಃ ||೨೦||
ಇತಿ ಶಾಮ್ಬರಿಕೇಣಾಯಂ ಮೋಹಉತ್ಪಾದಿತೋ ಮಮ |
ಅಜ್ಞಾನೇನೇವ ಜೀವಸ್ಯ ದಶಾಶತಸಮನ್ವಿತಃ ||೨೧||
ಇತ್ಯುಕ್ತವತಿ ರಾಜೇನ್ದ್ರೇ ಲವಣೇ ಭೂರಿತೇಜಸಿ ||೨೨||
ಅಂತರ್ಧಾನಂ ಜಗಾಮಾಶು ತತ್ರ ಶಾಮ್ಬರಿಕಃ ಕ್ಷಣಾತ್ |
ಅಥೇದಮೂಚುಸ್ತೇ ಸಭ್ಯಾಃ ವಿಸ್ಮಯೋತ್ಫುಲ್ಲಲೋಚನಾಃ ||೨೩||
ನಾಯಂ ಶಾಮ್ಬರಿಕೋ ದೇವ ಯಸ್ಯ ನಾಸ್ತಿ ಧನೈಷಣಾ |
ದೈವೀ ಕಾಚನಮಾಯೇಯಂ ಸಂಸಾರಸ್ಥಿತಿಬೋಧಿನೀ ||೨೪||
ಮನೋವಿಲಾಸಃ ಸಂಸಾರಃ ಇತಿ ಯಸ್ಯಾಂ ಪ್ರತೀಯತೇ |
ಸರ್ವಶಕ್ತೇರನನ್ತಸ್ಯ ವಿಲಾಸೋ ಹಿ ಮನೋ ಜಗತ್ ||೨೫||
ಸರ್ವಶಕ್ತೇರ್ವಿಚಿತ್ರಾ ಹಿ ಶಕ್ತಯಃ ಶತಶೋ ವಿಧೇಃ |
ಯದ್ವಿವೇಕಿಮನೋಪ್ಯೇಷಃ ವಿಮೋಹಯತಿ ಮಾಯಯಾ ||೨೬||
ವಿಜ್ಞಾತಲೋಕವೃತ್ತಾನ್ತಃ ಕ್ವ ನಾಮಾಯಂ ಮಹೀಪತಿಃ |
ಕ್ವ ಸಾಮಾನ್ಯಮನೋವೃತ್ತಿಯೋಗ್ಯೋ ವಿಪುಲಸಮ್ಭ್ರಮಃ ||೨೭||

ಆ ಚಿತೆಯಲ್ಲಿ ನಾನು ನನ್ನ ದೇಹವನ್ನು ಯಾವಾಗ ಇಟ್ಟೆನೋ, ಆಗ ತಟ್ಟನೆ ಈ ಸಿಂಹಾಸನದಿಂದ ಕೆಳಕ್ಕೆ ಬಿದ್ದಹಾಗಾಯ್ತು. ಬಳಿಕ, ತೂರ್ಯಧ್ವನಿಯಿಂದಲೂ ಜಯಶಬ್ದಗಳಿಂದಲೂ ನಾನು ಎಚ್ಚರಗೊಂಡೆನು ||೨೦||

ಎಲೈ ಸಭಾಸದರಾ! ಈರೀತಿಯಾಗಿ, ಅಜ್ಞಾನವು ಜೀವಾತ್ಮನಿಗೆ ಮೋಹವುಂಟುಮಾಡುವಂತೆ, ಈ ಐಂದ್ರಜಾಲಿಕನು ನನಗೆ ನೂರಾರು ಅವಸ್ಥೆಗಳೊಡಗೂಡಿದ ಮೋಹವನ್ನುಂಟುಮಾಡಿಬಿಟ್ಟನು ||೨೧||

ಅಯ್ಯಾ! ರಾಮ! ಈ ಮೇಲೆ ಹೇಳಿದಂತೆ ಮಹಾತೇಜಸ್ವಿಯಾದ ಲವಣರಾಜನು ಹೇಳುತಿರಲಾಗಿ, ಆ ಐಂದ್ರಜಾಲಿಕನು ಅಲ್ಲಿಯೇ ಒಂದುಕ್ಷಣದೊಳಗಾಗಿ ಅಂತರ್ಧಾನ ಹೊಂದಿಬಿಟ್ಟನು. ಅನಂತರ ಆ ಸಭಾಸದರು ಆಶ್ಚರ್ಯದಿಂದಕಣ್ಣರಳಿದವರಾಗಿ, ಹೀಗೆ ಹೇಳಿದರು ||೨೨-೨೩||

ಸ್ವಾಮಿ! ಈ ಪುರುಷನು ಇಂದ್ರಜಾಲದವನಲ್ಲ. ಇವನಿಗೆ ದ್ರವ್ಯಾಶೆಯಿಲ್ಲವಲ್ಲವೆ! ಇದು ಸಂಸಾರದ ಸ್ಥಿತಿಯನ್ನು ಬೋಧಿಸುವ ದೈವಿಕವಾದ ಯಾವುದೋ ಒಂದು ಮಾಯೆಯೆಂದು ನಮಗೆ ತೋರುವುದು ||೨೪||

ಈ ದೇವಮಾಯೆಯಲ್ಲಿ, ಸಂಸಾರವೆಂಬುದು ಮನೋವಿಲಾಸರೂಪವಾದುದೆಂದು ಸ್ಪಷ್ಟವಾಗಿ ತೋರುತಿರುವುದು. ಸರ್ವಶಕ್ತಿಯುಕ್ತನಾದ ಮಹಾವಿಷ್ಣುವಿಗೆ, ಈ ಮನೋರೂಪವಾದ ಜಗತ್ತು, ಕೇವಲ ವಿಲಾಸರೂಪವಾದುದಲ್ಲವೆ! ||೨೫||

ಸರ್ವಶಕ್ತನಾದ ವಿಧಿಯ ಶತವಿಧವಾದ ಶಕ್ತಿಗಳು ಬಹುವಿಚಿತ್ರವಾದುವು. ಈ ವಿಧಿಯು, ವಿವೇಕಿಗಳ ಮನಸ್ಸನ್ನೂ ತನ್ನ ಮಾಯೆಯಿಂದ ಮೋಹಪಡಿಸುವನು ||೨೬||

ಅಹಹ! ಏನುಹೇಳೋಣ!! ಸಮಸ್ತವಾದ ಪ್ರಪಂಚವ್ಯವಹಾರವನ್ನೂ ತಿಳಿದಿರುವ ಈರಾಜನೆಲ್ಲಿ?—ಕೇವಲ ಪ್ರಾಕೃತಮನುಷ್ಯರ ಮನಸ್ಸಿಗೆ ಯೋಗ್ಯವಾದ ಈ ಮಹಾಸಂಭ್ರಮವೆಲ್ಲಿ?||೨೭||

ನ ಚ ಶಾಮ್ಬರಿಕೇಚ್ಛೇಯಂ ಮಾಯಾ ಮನಸಿ ಮೋಹಿನೀ |
ಅರ್ಥಸ್ಯ ಸಿದ್ಧ್ಯೈ ಚೇಹನ್ತೇ ನಿತ್ಯಂ ಶಾಮ್ಬರಿಕಾಃ ಕಿಲ ||೨೮||
ಯತ್ನೇನ ಪ್ರಾರ್ಥಯನ್ತೇರ್ಥಂ ನಾನ್ತರ್ಧಾನಂ ವ್ರಜನ್ತಿ ಭೋಃ |
ಇತಿ ಸನ್ದೇಹವೇಲಾಯಾಂ ಸಂಸ್ಥಿತಾಲುಲಿತಾವಯಮ್ ||೨೯||

ಶ್ರೀವಸಿಷ್ಠ ಉವಾಚ.

ಸಭಾಯಾಮವಸಂ ತಸ್ಯಾಂ ಅಹಂ ರಾಮ ತದಾ ಕಿಲ |
ತೇನ ಪ್ರತ್ಯಕ್ಷತೋ ದೃಷ್ಟಂ ಮಯೈತನ್ನಾನ್ಯತಃ ಶ್ರುತಮ್ ||೩೦||
ಇತಿ ಬಹುಕಲನಾವಿವರ್ಧಿತಾಙ್ಗಂ ಜಯತಿ ಚಿರಂ ವಿತತಂ ಮನೋ ಮಹಾತ್ಮನ್ |
ಶಮಮುಪಗಮಿತೇ ಪರಸ್ವಭಾವೇ ಪರಮಮುಪೈಷ್ಯಸಿ ಪಾವನಂ ಪದಂ ಯತ್ ||೩೧||

ಇತಿ ಉತ್ಪತ್ತಿಪ್ರಕರಣೇ ಇನ್ದ್ರಜಾಲೋಪಾಖ್ಯಾನೇ ಚಣ್ಡಾಲತ್ವ
ವ್ಯಪಗಮೋ ನಾಮ ನವಾಧಿಕಶತತಮಃ ಸರ್ಗಃ.

ಇದು ಶಾಂಬರಿಕನ ಇಚ್ಛೆಯಿಂದಿಗೂ ಅಲ್ಲ; ಮನಸ್ಸಿನಲ್ಲಿ ಮೋಹವುಂಟುಮಾಡುವ ಮಾಯೆಯೇ ಇದು. ಶಾಂಬರಿಕರಾದವರು, ನಿತ್ಯವೂ ಧನಪ್ರಾಪ್ತಿಗಾಗಿಯೇ ಒದ್ದಾಡುತಿರುವರಲ್ಲವೆ! ॥೨೮॥

ಅಯ್ಯಾ! ರಾಜ! ಶಾಂಬರಿಕರು, ಪ್ರಯತ್ನಪೂರ್ವಕವಾಗಿ ಧನವನ್ನು ಪ್ರಾರ್ಥಿಸುವರು. ಅವರೆಂದಿಗೂ ಅಂತರ್ಧಾನಹೊಂದುವುದಿಲ್ಲ. ಈರೀತಿಯಾಗಿ ನಾವು ಸಂಶಯವೆಂಬ ಡೋಲೆಯಲ್ಲಿ ಕುಳಿತುಕೊಂಡು ಒದ್ದಾಡುತಿರುವೆವು. ಹೀಗೆಂದು ಆ ಸಭಾಸದರು ಲವಣರಾಜನನ್ನು ಕುರಿತು ಹೇಳಿದರು ॥೨೯॥

ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಈ ವೃತ್ತಾಂತ ನಡೆದಾಗ ನಾನೂ ಆ ಸಭೆಯುಲ್ಲಿದ್ದೆನು. ಅದುಕಾರಣ, ಅದೆಲ್ಲವನ್ನೂ ನಾನು ಪ್ರತ್ಯಕ್ಷವಾಗಿ ನೋಡಿರುವೆನು, ಮತ್ತೊಬ್ಬರ ಮುಖದಿಂದ ಕೇಳಿದ ವಿಷಯವನ್ನು ನಿನಗೆ ಹೇಳಿದೆನೆಂದು ತಿಳಿಯಬೇಡ ॥೩೦॥

ಅಯ್ಯಾ ಮಹಾತ್ಮನಾದ ರಾಮನೆ! ಹೀಗೆ ಈ ಮನಸ್ಸು, ನಾನಾವಿಧ ಕಲ್ಪನೆಗಳಿಂದ ಅಭಿವೃದ್ಧಿಹೊಂದಿ, ಬಹುವಿಸ್ತಾರವಾಗಿ ಹರಡಿಕೊಂಡು. ಎಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡಿರುವುದು. ಈ ಮನಸ್ಸನ್ನು ಶಾಂತಿಗೊಳಿಸಿಬಿಟ್ಟು, ಸರ್ವವೂ ಪರಮಾತ್ಮವಸ್ತುಸ್ಥಿತಿಯಲ್ಲಿ ನಿಂತುಬಿಟ್ಟರೆ, ಆಗ ನೀನು ಪಾವನವಾದ ಆ ಪರಮಪದವನ್ನು ಹೊಂದುವೆ. ಅದುಕಾರಣ, ಈ ಮನೋಜಯಕ್ಕಾಗಿ ನಾನು ಮುಂದೆ ಹೇಳುವಂತೆ ಪ್ರಯತ್ನಪಡುವನಾಗು ॥೩೧॥

ಇದು ಉತ್ಪತ್ತಿಪ್ರಕರಣದಲ್ಲಿ ಇಂದ್ರಜಾಲೋಪಾಖ್ಯಾನದೊಳಗೆ ಚಂಡಾಲತ
ನಿವೃತ್ತಿಯೆಂಬ ನೂರೊಂಬತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದಶೋತ್ತರ ಶತತಮಃ ಸರ್ಗಃ.

ಶ್ರೀ ವಸಿಷ್ಠಉವಾಚ.

ಪರಮಾತ್ ಕಾರಣಾದಾದೌ ಚಿಚ್ಚೇತ್ಯಪದಪಾತಿನೀ |
ಕಲನಾಪದಮಾಸಾದ್ಯ ಕಲಾಕಲಿಲತಾಂ ಗತಾ ||೧||
ಅಸತ್ಸ್ವೇವ ವಿಮೋಹೇಷು ರಮ್ಯೈವಂಪ್ರಾಯವೃತ್ತಿಷು |
ಘನೇಷು ತುಚ್ಛತಾಮೇತ್ಯ ಚಿರಾಯ ಪರಿಮೂರ್ಛತಿ ||೨||
ಅಸದೇವ ಮನೋವೃತ್ತಿಃ ಮ್ಲಾನಾ ವಿಸ್ತಾರಯತ್ಯಲಮ್ |
ದುಃಖಂ ದೋಷಸಹಸ್ರೇಣ ವೇತಾಳಾನಿವ ಬಾಲಿಕಾ ||೩||

ಉತ್ಪತ್ತಿಪ್ರಕರಣದಲ್ಲಿ ನೂರಹತ್ತನೆಯ ಸರ್ಗವು.

ಮನಃಪ್ರಶಮನೋಪಾಯೋ ಮನೋವೈಭವವರ್ಣನೈಃ |
ಪ್ರಕ್ರಮ್ಯತೇತ್ರ ಗದಿತುಂ ರಾಮಾಯ ಬ್ರಹ್ಮಸೂನುನಾ ||

ಈ ಸರ್ಗದಲ್ಲಿ, ಮನಸ್ಸಿನ ಸಾಮರ್ಥ್ಯವನ್ನು ವರ್ಣಿಸುತ, ಮನಶ್ಶಾಂತಿಗೆ ತಕ್ಕ ಉಪಾಯವನ್ನು ಬ್ರಹ್ಮಮಾನಸಪುತ್ರರಾದ ಶ್ರೀ ವಸಿಷ್ಠರು, ಶ್ರೀರಾಮನಿಗೆ ಹೇಳಲುಪಕ್ರಮಿಸುವರು.

ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಿದುದೇನೆಂದರೆ:—

ವತ್ಸ! ರಾಮ! ಮನಸ್ಸೆಂಬುದು ಕೇವಲ ವಾಸನಾಮಯವಾಗಿರುವುದು; ಅದುಕಾರಣ, ಆತ್ಯಂತಿಕವಾಗಿ ದೃಶ್ಯವಾಸನೆಯನ್ನು ಪರಿಹರಿಸುವುದೇ ಮನಶ್ಶಾಂತಿಗೆ ಉಪಾಯವು. ಈ ಮನಶ್ಶಾಂತಿಗೆ, ಶಾಸ್ತ್ರಮೂಲಕವಾಗಿಯೂ, ಗುರುಮುಖದಿಂದಲೂ, ತನ್ನ ಅನುಭವದಿಂದಲೂ ಕೂಡ, ಈ ದೃಶ್ಯಜಾತವು ಕೇವಲ ಭ್ರಮಮಾತ್ರರೂಪವೆಂದು ನಿಶ್ಚಯಿಸಿಕೊಂಡು, ಮನೋನಿರೋಧಾರ್ಥವಾಗಿ ಪ್ರಯತ್ನಪಡುವುದೇ ಮುಖ್ಯೋಪಾಯವಾಗಿರುವುದು. ಹೀಗಿರುವುದರಿಂದ ಮನಸ್ಸಿನ ಸ್ವರೂಪವನ್ನು ಇನ್ನೂ ವಿಸ್ತರಿಸಿ ನಿನಗೆ ಹೇಳುವೆನು. ಪ್ರಥಮತಃ ಅಜ್ಞಾನದದೆಸೆಯಿಂದ ಚಿತ್ತು ಚೇತ್ಯವೆಂಬ ಅವಸ್ಥೆಯನ್ನು ಪಡೆಯುವುದು; ಅನಂತರ ನಾಮರೂಪಗಳನ್ನು ಹೊಂದುವುದು. ಹೀಗೆ ಇದೆಲ್ಲವೂ ಅಜ್ಞಾನಕಾರ್ಯವೇ ಹೊರತು, ವಾಸ್ತವಿಕವಲ್ಲ. ಪ್ರಥಮತಃ ಚೇತನೀಯಸ್ಥಿತಿಪ್ರಾಪ್ತಿಯೇ ಅಜ್ಞಾನಜನ್ಯವಾಗಿರುವಾಗ, ತನ್ಮೂಲಕವಾದ ದ್ವೈತಭ್ರಾಂತಿಯೆಲ್ಲವೂ ಸುತರಾಂ ಅಜ್ಞಾನಮೂಲಕವೆಂದು ಸ್ಪಷ್ಟವಾಗಿರುವುದಲ್ಲವೆ! ||೧||

ಅಯ್ಯಾ ರಾಮ! ಈ ವಿಧವಾದ ಅಸತ್ಯಭ್ರಮಗಳು ಕ್ರಮೇಣ ಸಾಂದ್ರವಾಗಲಾಗಿ, ಈ ಚಿತ್ತು, ತನ್ನ ಪರಿಪೂರ್ಣರೂಪವನ್ನು ಮರೆತುಬಿಟ್ಟು, ಅನಾದಿಕಾಲದಿಂದಲೂ, ಜನ್ಮಮರಣಾದಿ ಭ್ರಮೆಗಳಿಂದ ಮೋಹಪಡುತಿರುವುದು ||೨||

ಹೀಗೆ ತುಚ್ಛ(ಜನನ ಮರಣಪ್ರವಾಹ) ಭಾವನಾರೂಪವಾದ ದೋಷಸಹಸ್ರದಿಂದ ದೂಷಿತವಾಗಿ ಮನೋರೂಪದಿಂದ ಅವಸ್ಥಿತವಾಗಿರುವ ಈ ಚಿತ್ತು, ಬಾಲಿಕೆಯು ಬೇತಾಳಗಳನ್ನು ಪ್ರಕಟಪಡಿಸುವಂತೆ, ಸುತರಾಂ ಅಸತ್ತಾದ ದುಃಖವನ್ನು ವಿಸ್ತಾರಪಡಿಸುವುದು ||೩||

ಸದೇವ ಹಿ ಮಹಾದುಃಖಂ ಅಸತ್ತಾಂ ನಯತಿ ಕ್ಷಣಾತ್ ।
ನಿಷ್ಕಳಙ್ಕಾ ಮನೋವೃತ್ತಿಃ ಅನ್ಧಕಾರಮಿವಾರ್ಕರುಕ್ ॥೪॥
ನಯತ್ಯಭ್ಯಾಶತಾಂ ದೂರಂ ಅಭ್ಯಾಶಂ ದೂರತಾಂ ನಯೇತ್ ।
ಮನೋ ವಲ್ಗತಿ ಭೂತೇಷು ಬಾಲೋ ಬಾಲಖಗೇಷ್ವಿವ ॥೫॥
ಅಭಯಂ ಭಯಮಜ್ಞಸ್ಯ ಚೇತಸೋ ವಾಸನಾವತಃ ।
ದೂರತೋ ಮುಗ್ಧಪಾನ್ಥಸ್ಯ ಸ್ಥಾಣುರ್ಯಾತಿ ಪಿಶಾಚತಾಮ್ ॥೬॥
ಶತ್ರುತ್ವಂ ಶಙ್ಕತೇ ಮಿತ್ರೇ ಕಳಙ್ಕಮಲಿನಂ ಮನಃ ।
ಮದಾವಿಷ್ಟಮತಿರ್ಜನ್ತುಃ ಭ್ರಮತ್ ಪಶ್ಯತಿ ಭೂತಲಮ್ ॥೭॥
ಪರ್ಯಾಕುಲೇ ಹಿ ಮನಸಿ ಶಶಿನೋ ಜಾಯತೇಽಶನಿಃ ।
ಅಮೃತಂ ವಿಷಭಾವೇನ ಭುಕ್ತಂ ಯಾತಿ ವಿಷಕ್ರಿಯಾಮ್ ॥೮॥
ಸುರಪತ್ತನನಿರ್ಮಾಣಮಸತ್ ಸದಿವ ಪಶ್ಯತಿ ।
ವಾಸನಾವಲಿತಂ ಚೇತಃ ಸ್ವಪ್ನವಜ್ಜಾಗ್ರದೇವ ಹಿ ॥೯॥
ಮೊಹೈಕಕಾರಣಂ ಜನ್ತೋಃ ಮನಸೋ ವಾಸನೋಲ್ಬಣಾ ।
ಉತ್ಖಾತವ್ಯಾ ಪ್ರಯತ್ನೇನ ಮೂಲೋಚ್ಛೇದೇನ ಸೈವ ಚ ॥೧೦॥

ಹೀಗೆಯೇ, ವಾಸನಾಕ್ಷಯಹೊಂದಿದ ಈ ಮನೋವೃತ್ತಿಯು, ಸೂರ್ಯಕಿರಣವು ಅಂಧಕಾರವನ್ನು ಅಭಾವಗೊಳ್ಳಿಸುವಂತೆ, ಸತ್ತಾಗಿಯೇ ಕಾಣುತಿರುವ ಮಹಾದುಃಖ(ಜನನಮರಣಪ್ರವಾಹ)ವನ್ನೂ ಕ್ಷಣದೊಳಗಾಗಿ ಇಲ್ಲದಂತೆ ಮಾಡಿಬಿಡುವುದು ॥೪॥

ಮತ್ತು, ಈ ಮನೋವೃತ್ತಿಯು, ದೂರವಾದುದನ್ನು ಹತ್ತಿರವನ್ನಾಗಿಯೂ, ಹತ್ತಿರವನ್ನು ದೂರವನ್ನಾಗಿಯೂ ಮಾಡುವುದು. ಬಾಲಕನು ಹಕ್ಕಿಯುಮರಿಗಳಲ್ಲಿ ಆಟವಾಡುತಿರುವಂತೆ, ಈ ಮನಸ್ಸು ಭೂತಗಳಲ್ಲಿ ಆಟವಾಡುತಿರುವುದು ॥೫॥

ಅಜ್ಞಾನವಶವಾಗಿ ವಾಸನಾಯುಕ್ತವಾದ ಮನಸ್ಸಿಗೆ, ಭಯವಲ್ಲದುದೇ ಭಯವಾಗುವುದು. ಮುಗ್ಧನಾಗಿರುವ ಪಥಿಕನಿಗೆ, ದೂರದಲ್ಲಿ ಕಾಣುವ ಮೋಟುಮರವು ಪಿಶಾಚವಾಗುವುದಲ್ಲವೆ! ॥೬॥

ಸ್ವಯಂಕಳಂಕಮಲಿನವಾದ ಮನಸ್ಸು, ಮಿತ್ರನಲ್ಲಿಯೂ ಶತ್ರುತ್ವವನ್ನು ಶಂಕಿಸುವುದು. ಮದದಿಂದ ಆವೃತವಾದ ಬುದ್ಧಿಯುಳ್ಳ ಜಂತುವು, ಭೂಮಿಯು ಸುತ್ತುತಿರುವಂತೆ ನೋಡುವುದಲ್ಲವೆ! ॥೭॥

ಮನಸ್ಸು ಪರ್ಯಾಕುಲವಾಗಿರಲಾಗಿ, ಚಂದ್ರನದೆಸೆಯಿಂದಲೂ ಸಿಡಿಲು ಹುಟ್ಟುವುದು. ವಿಷವೆಂದು ತಿಳಿದುಕೊಂಡು ಸೇವಿಸಲ್ಪಟ್ಟರೆ, ಅಮೃತವೂ ವಿಷದ ಕೆಲವನ್ನು ಮಾಡಿಯೇ ಬಿಡುವುದು॥

ವಾಸನಾವಿಶಿಷ್ಟವಾದ ಮನಸ್ಸು, ಜಾಗ್ರದವಸ್ಥೆಯಲ್ಲಿದ್ದರೂ ಸ್ವಪ್ನದಲ್ಲಿರುವಂತೆ, ಅಸತ್ಯವಾಗಿರುವ ಗಂಧರ್ವನಗರ ನಿರ್ಮಾಣವನ್ನೂ ಸತ್ಯದಂತೆ ತಿಳಿಯುತಿರುವುದು ॥೯॥

ಅತ್ಯುಲ್ಬಣವಾದ ಮನಸ್ಸಿನ ವಾಸನೆಯೇ, ಪ್ರಾಣಿಗಳಿಗೆ ಮೋಹಕ್ಕೆ ಮುಖ್ಯಕಾರಣವೆನ್ನಿಸುವುದು. ಅದುಕಾರಣ, ಪ್ರಯತ್ನಪೂರ್ವಕವಾಗಿ ಅದನ್ನೇ ಮೂಲಸಹಿತವಾಗಿ ಕಿತ್ತುಬಿಡಬೇಕು ॥೧೦॥

ವಾಸನಾವಾಗುರಾಕೃಷ್ಟೋ ಮನೋಹರಿಣಕೋ ನೃಣಾಮ್ ।
ಪರಾಂ ವಿವಶತಾಮೇತಿ ಸಂಸಾರವನಗುಲ್ಮಕೇ ॥೧೧॥
ಯೇನ ಛಿನ್ನಾ ವಿಚಾರೇಣ ಜೀವಸ್ಯ ಜ್ಞೇಯವಾಸನಾ ।
ನಿರಭ್ರಸ್ಯೇವ ಸೂರ್ಯಸ್ಯ ತಸ್ಯಾಲೋಕೋ ವಿರಾಜತೇ ॥೧೨॥
ಅತಸ್ತ್ವಂ ಮನಏವೇದಂ ನರಂ ವಿದ್ಧಿ ನ ದೇಹಕಮ್ ।
ಜಡೋ ದೇಹೋ ಮನಶ್ಚಾತ್ರ ನಜಡಂ ನಾಜಡಂ ವಿದುಃ ॥೧೩॥
ಯತ್ ಕೃತಂ ಮನಸಾ ತಾತ ತತ್ ಕೃತಂ ವಿದ್ಧಿ ರಾಘವ ।
ಯತ್ ತ್ಯಕ್ತಂ ಮನಸಾ ತಾವತ್ ತತ್ ತ್ಯಕ್ತಂ ವಿದ್ಧಿ ಚಾನಘ ॥೧೪॥
ಮನೋಮಾತ್ರಂ ಜಗತ್ ಕೃತ್ಸ್ನಂ ಮನಃ ಪರ್ಯನ್ತಮಣ್ಡಲಮ್ ।
ಮನೋವ್ಯೋಮ ಮನೋಭೂಮಿಃ ಮನೋ ವಾಯುರ್ಮನೋಮಹತ್ ॥
ಮನೋ ಯದಿ ಪದಾರ್ಥೇ ತು ತದ್ಭಾವೇನ ನ ಯೋಜಯೇತ್ ।
ತತಃ ಸೂರ್ಯಾದಯೋಪ್ಯೇತೇ ನ ಪ್ರಕಾಶಾಃ ಕದಾಚನ ॥೧೬॥
ಮನೋ ಮೋಹಮುಪಾದತ್ತೇ ಯಸ್ಯಾಸೌ ಮೂಢಉಚ್ಯತೇ ।
ಶರೀರೇ ಮೋಹಮಾಪನ್ನೇ ನ ಶವೋ ಮೂಢಉಚ್ಯತೇ ॥೧೭॥

ಮನುಷ್ಯರ ಮನಸ್ಸೆಂಬ ಜಿಂಕೆಯ ಮರಿಯು, ವಾಸನೆಯೆಂಬ ಬಲೆಯಿಂದ ಸೆಳೆಯಲ್ಪಟ್ಟು ದಾಗಿ, ಸಂಸಾರವೆಂಬ ವನಭಾಗದಲ್ಲಿ ಅತಿಯಾಗಿ ಒದ್ದಾಡುತಿರುವುದು ॥೧೧॥

ಯಾವ ಮನಸ್ಸು, ಜೀವನಿಗೆ ಜ್ಞೇಯವಾಸನೆಯನ್ನು ವಿಚಾರದಿಂದ ಕತ್ತರಿಸಿಬಿಡುವು ದೋ, ಅದು—ಮೇಘಾವರಣವಿಮುಕ್ತನಾದ ಸೂರ್ಯನಂತೆ ಮಹಾಪ್ರಕಾಶದಿಂದ ವಿರಾಜಿಸು ವುದು ॥೧೨॥

ಅದುಕಾರಣ, ಅಯ್ಯಾ! ರಾಮ! ಮನಸ್ಸನ್ನೇ ಜೀವನೆಂದು ತಿಳಿಯುವನಾಗು; ದೇಹ ವನ್ನು ಜೀವನೆಂಬುದಾಗಿ ತಿಳಿಯಬೇಡ. ದೇಹವು ಶುದ್ಧ ಜಡವಾದುದು; ಮನಸ್ಸಾದರೋ, ಜಡವೆಂದೂ ಜಡವಲ್ಲವೆಂದೂ (ಜಡಾಜಡಾತ್ಮಕ) ಪ್ರಾಜ್ಞರು ತಿಳಿದಿರುವರು ॥೧೩॥

ಅಯ್ಯಾ! ರಾಮ! ಮನಸ್ಸಿನಿಂದ ಯಾವುದು ಮಾಡಲ್ಪಟ್ಟಿತೋ, ಅದೇ ಮಾಡಲ್ಪಟ್ಟು ದೆಂದು ತಿಳಿ. ಮತ್ತು, ಎಲೈ ನಿರ್ದೋಷನೆ! ಯಾವುದು ಮನಸ್ಸಿನಿಂದ ಬಿಡಲ್ಪಟ್ಟಿತೋ, ಅದೇ ಬಿಡಲ್ಪಟ್ಟುದೆಂದೂ ತಿಳಿ ॥೧೪॥

ಈ ಸಮಸ್ತ ಜಗತ್ತೂ ಮನೋಮಾತ್ರವಾದುದೇಯೆ; ಮನಸ್ಸೇ ಭೂಮಿಯ ಎಲ್ಲೆಯಾ ದುದು; ಮನಸ್ಸೇ ಆಕಾಶವು; ಮನಸ್ಸೇ ಭೂಮಿಯು; ವಾಯುವೂ ಮನಸ್ಸೇ; ಮಹತ್ತತ್ವವೂ ಮನಸ್ಸೇಯೆ ॥೧೫॥

ಈ ಮನಸ್ಸನ್ನು ಆಯಾಪದಾರ್ಥಗಳಲ್ಲಿ ಆಯಾಭಾವನೆಯಿಂದ ಸೇರಿಸದಿದ್ದರೆ, ಈ ಸೂರ್ಯಾ ದಿಗಳೂ ಕೂಡ ಎಂದಿಗೂ ಪ್ರಕಾಶವಂತರಾಗಿ ಕಾಣುವುದಿಲ್ಲ ॥೧೬॥

ಯಾವನ ಮನಸ್ಸು ಮೋಹಹೊಂದುವುದೋ, ಅವನೇ ಮೂಢ (ಮೋಹವುಳ್ಳವನು) ನೆಂದು ಹೇಳಲ್ಪಡುವನು; ಶರೀರವು ಮೋಹಹೊಂದಿರುವಾಗ, ಆ ಶವವನ್ನು ಮೂಢವೆಂದು ಯಾರೂ ಹೇಳುವುದಿಲ್ಲವಲ್ಲವೆ! ॥೧೭॥

ಮನಃ ಪಶ್ಯದ್ಭವತ್ಯಕ್ಷಿ ಶೃಣ್ವಚ್ಛ್ರವಣತಾಂ ಗತಮ್ ।
ತ್ವಗ್ಭಾವಂ ಸ್ಪರ್ಶನಾದೇತಿ ಘ್ರಾಣತಾಮೇತಿ ಜಿಘ್ರಣಾತ್ ॥೧೮॥
ರಸನಾದ್ರಸತಾಮೇತಿ ವಿಚಿತ್ರಾಸ್ತತ್ರ ವೃತ್ತಿಷು ।
ನಾಟಕೇ ನಟವದ್ದೇಹೇ ಮನಏವಾನುವರ್ತತೇ ॥೧೯॥
ಲಘು ದೀರ್ಘಂ ಕರೋತ್ಯೇವ ಸತ್ಯೇಽಸತ್ತಾಂ ಪ್ರಯಚ್ಛತಿ ।
ಕಟುತಾಂ ನಯತಿ ಸ್ವಾದು ರಿಪುಂ ನಯತಿ ಮಿತ್ರತಾಮ್ ॥೨೦॥
ಯಏವ ಪ್ರತಿಭಾಸೋಽಸ್ಯ ಚೇತಸೋ ವೃತ್ತಿವರ್ತಿನಃ ।
ತತಸ್ತದೇವ ಪ್ರತ್ಯಕ್ಷಂ ತಥಾತ್ರಾನುಭವಾದಿಹ ॥೨೧॥
ಪ್ರತಿಭಾಸನವಶಾದೇವ ಸ್ವಪ್ನಾಕುಲಿತಚೇತಸಃ ।
ಹರಿಶ್ಚನ್ದ್ರಸ್ಯ ಸಮ್ಪನ್ನಾ ರಾತ್ರಿರ್ದ್ವಾದಶವಾರ್ಷಿಕೀ ॥೨೨॥
ಚಿತ್ತಾನುಭಾವವಶತೋ ಮುಹೂರ್ತತ್ವೇ ಗತಂ ಯುಗಮ್ ।
ಇನ್ದ್ರದ್ಯುಮ್ನಸ್ಯ ವೈರಿಞ್ಚಪುರಾಭ್ಯನ್ತರವರ್ತಿನಃ ॥೨೩॥
ಮನೋಜ್ಞಯಾ ಮನೋವೃತ್ತ್ಯಾ ಸುಖತಾಂ ಯಾತಿ ರೌರವಮ್ ।
ಪ್ರಾತಃಪ್ರಾಪ್ತವ್ಯರಾಜ್ಯಸ್ಯ ಸುಬದ್ಧಸ್ಯೇವ ಬನ್ಧನಮ್ ॥೨೪॥

ಈ ಮನಸ್ಸು, ದರ್ಶನಕ್ರಿಯೆಯನ್ನು ಮಾಡುವಾಗ ನೇತ್ರವಾಗಿಯೂ, ಶ್ರವಣಕ್ರಿಯೆಯನ್ನು ಮಾಡುವಾಗ ಶ್ರೋತ್ರವಾಗಿಯೂ, ಸ್ಪರ್ಶನಕ್ರಿಯೆಯನ್ನು ಮಾಡುವಾಗ ತ್ವಗಿಂದ್ರಿಯವಾಗಿಯೂ, ಆಘ್ರಾಣಿಸುವಾಗ ಘ್ರಾಣೇಂದ್ರಿಯವಾಗಿಯೂ, ರುಚಿಯನ್ನು ಹಿಡಿಯುವಾಗ ರಸನೇಂದ್ರಿಯವಾಗಿಯೂ ಆಗುವುದು. ಈರೀತಿಯಾಗಿ, ನಾಟಕದಲ್ಲಿ ನಟನು ಬೇಕಾದ ವೇಷಗಳನ್ನು ಸ್ವೀಕರಿಸುವಂತೆ, ಈ ಮನಸ್ಸು ಆಯಾ ಇಂದ್ರಿಯ ವೃತ್ತಿಗಳಲ್ಲಿ ತನಗಿಷ್ಟವಾದ ವಿಚಿತ್ರತರ ವೃತ್ತಿಗಳನ್ನು ಸ್ವೀಕರಿಸುತಿರುವುದು.॥೧೮—೧೯॥

ಈ ಮನಸ್ಸು, ಹ್ರಸ್ವವಾದುದನ್ನು ದೀರ್ಘವನ್ನಾಗಿಯೂ, ಸತ್ಯವನ್ನು ಅಸತ್ಯವನ್ನಾಗಿಯೂ, ಮಧುರವನ್ನು ಕಟುವನ್ನಾಗಿಯೂ, ಶತ್ರುವನ್ನು ಮಿತ್ರನನ್ನಾಗಿಯೂ ಮಾಡುವುದು॥

ಹೀಗೆ ವೃತ್ತಿಯುಕ್ತವಾದ ಮನಸ್ಸಿಗೆ ಯಾವುದು ಪ್ರತಿಭಾಸಿಸುವುದೋ, ಬಳಿಕ ಅದೇ ಪ್ರತ್ಯಕ್ಷವಾಗುವುದು. ಹೀಗೆಯೇ ಪ್ರಪಂಚದಲ್ಲಿ ಸರ್ವಾನುಭವಸಿದ್ಧವಾಗಿರುವುದು ॥೨೧॥

ಸ್ವಪ್ನಾವಿಷ್ಟಹೃದಯನಾಗಿದ್ದ ಹರಿಶ್ಚಂದ್ರನೆಂಬ ಭೂಪತಿಗೆ, ಪ್ರತಿಭಾಸಮಹಿಮೆಯಿಂದಲೇ, ಒಂದು ರಾತ್ರಿಯು ಹನ್ನೆರಡುವರ್ಷವಾಗಲಿಲ್ಲವೆ! ॥೨೨॥

ಹೀಗೆಯೇ, ವೈರಿಂಚಪುರದೊಳಗಿದ್ದ ಇಂದ್ರದ್ಯುಮ್ನನೆಂಬ ರಾಜನಿಗೆ, ಮನೋವಿಭವದದೆಸೆಯಿಂದ, ಒಂದು ಯುಗವೂ ಒಂದು ಮುಹೂರ್ತವಾಗಿ ಕಳೆದುಹೋಯ್ತು ॥೨೩॥

ಬೆಳಗಾದರೆ ದೊರೆತನ ಸಿಕ್ಕತಕ್ಕವನಾಗಿದ್ದು ರಾತ್ರಿಯಲ್ಲಿ ಬಂಧವನ್ನನುಭವಿಸುತ್ತಿರುವನಿಗೆ ಆ ಬಂಧನವು ಕೇವಲ ಸುಖಕರವಾಗಿಯೇ ಇರುವಂತೆ, ನಮ್ಮ ಮನಸ್ಸು ಸಂತೋಷಸ್ಥಿತಿಯಲ್ಲಿದ್ದರೆ, ರೌರವನರಕವೂ ಸುಖವಾಗಿಯೇ ಇರುವುದು ॥೨೪॥

ಜಿತೇ ಮನಸಿ ಸರ್ವೈವ ವಿಜಿತಾ ಚೇನ್ದ್ರಿಯಾವಳಿಃ |
ಶೀರ್ಯತೇ ಚ ಯಥಾ ತನ್ತೌ ದಗ್ಧೇ ಮೌಕ್ತಿಕಮಾಲಿಕಾ ||೨೫||
ಸರ್ವತ್ರ ಸ್ಥಿತಯಾ ಸ್ವಚ್ಛರೂಪಯಾ ನಿರ್ವಿಕಾರಯಾ |
ಸಮಯಾ ಸೂಕ್ಷ್ಮಯಾ ನಿತ್ಯಂ ಚಿಚ್ಛಕ್ತ್ಯಾ ಸಾಕ್ಷಿಭೂತಯಾ ||೨೬||
ಸರ್ವಭಾವಾನುಗತಯಾ ನಚೇತ್ಯಾರ್ಥವಿಭಿನ್ನಯಾ |
ರಾಮಾತ್ಮಸತ್ತಯಾ ಮೂಕಮಪಿ ದೇಹಸಮಂ ಜಡಮ್ ||೨೭||
ಮನೋನ್ತಶ್ಛಲತಿ ವ್ಯರ್ಥಂ ಮನನೈಷಣಮುಹ್ಯಯಾ |
ಬಹಿರ್ಗಿರಿಸರಿದ್ವ್ಯೋಮಸಮುದ್ರಪುರಲೀಲಯಾ ||೨೮||
ಜಾಗ್ರಚ್ಛಾಭಿಮತಂ ವಸ್ತು ನಯತ್ಯಮೃತಮೃಷ್ಟತಾಮ್ |
ಅನೀಹಿತಂ ಚ ವಿಷತಾಂ ನಯತ್ಯಮೃತಮಪ್ಯಲಮ್ ||೨೯||
ಅಮೃಷ್ಟಸರ್ವಭಾವಾನಾಂ ಅಲಮಾತ್ಮಚಮತ್ಕೃತಿಮ್ |
ಮನಃ ಸ್ವಾಭಿಮತಾಕಾರಂ ರೂಪಂ ಸೃಜತಿ ವಸ್ತುಷು ||೩೦||
ಸ್ಪನ್ದೇಷು ವಾಯುತಾಮೇತಿ ಪ್ರಕಾಶೇಷು ಪ್ರಕಾಶತಾಮ್ |
ದ್ರವೇಷು ದ್ರವತಾಮೇತಿ ಚಿಚ್ಛಕ್ತಿಸ್ಫುರಿತಂ ಮನಃ ||೩೧||

ಮನಸೊಂದು ಗೆಲ್ಲಲ್ಪಟ್ಟರೆ, ಸಮಸ್ತವಾದ ಇಂದ್ರಿಯಗ್ರಾಮವೂ ಗೆಲ್ಲಲ್ಪಟ್ಟಂತೆಯೇ ಆಗುವುದು. ಮುಕ್ತಾಸರದ ದಾರವು ಸುಡಲ್ಪಟ್ಟರೆ, ಆ ಹಾರವೆಲ್ಲವೂ ಕಿತ್ತುಹೋಗುವುದಲ್ಲವೆ! ||

ಅಯ್ಯಾ! ರಾಮ! ಚಿಚ್ಛಕ್ತಿಯೆಂಬುದು, ಸರ್ವತ್ರ ಸ್ಥಿತವಾಗಿರುವುದು; ಇದು ಸ್ವಚ್ಛರೂಪವಾದುದು; ನಿರ್ವಿಕಾರವಾದುದು; ಸರ್ವತ್ರ ಸಮವಾದುದು; ನಿತ್ಯವೂ ಸೂಕ್ಷ್ಮವಾದುದು; ಸರ್ವಸಾಕ್ಷಿಭೂತವಾದುದು; ಸರ್ವಪದಾರ್ಥಗಳಲ್ಲಿಯೂ ಅನುಗತವಾಗಿರುವುದು. ಹೀಗಿದ್ದರೂ ಇದು ಚೇತ್ಯಕ್ಕಿಂತ ಪೃಥಕ್ಕಾದುದಲ್ಲ; ಇದು ಸ್ವಯಂ ಸತ್ಯಭೂತವಾದುದು. ಇಂತಹ ಚಿಚ್ಛಕ್ತಿಯ ಮಹಿಮೆಯಿಂದಲೇ, ಮನಸ್ಸು, ಒಳಗೆ ನಾನಾವಿಧವಾದ ಇಚ್ಛಾರೂಪವಾಗಿಯೂ, ಹೊರಗೆ ಪರ್ವತ ನದೀ ಸಮುದ್ರಾಕಾಶಾದಿರೂಪವಾಗಿಯೂ, ನಿರರ್ಥಕವಾಗಿ ಚಲಿಸುತ್ತಿರುವುದು ||೨೬—೨೮||

ಈ ಮನಸ್ಸು, ಜಾಗ್ರದವಸ್ಥೆಯಲ್ಲಿರತಕ್ಕುದಾಗಿದ್ದರೂ, ತನಗಭಿಮತವಾದ ವಸ್ತುವನು ಅಮೃತದಲ್ಲಿ ಮುಣುಗಿರುವಂತೆ ಮಾಡಿಬಿಡುವುದು; ತನಗನಭಿಮತವಾದುದು ಅಮೃತವೇ ಆಗಿದ್ದರೂ, ಅದನ್ನು ವಿಷವನ್ನಾಗಿ ಮಾಡಿಬಿಡುವುದು ||೨೯||

ಈ ಮನಸ್ಸು, ಅಖಂಡಬ್ರಹ್ಮಾಕಾರಜ್ಞಾನರಹಿತರಾದವರಿಗೆ ಮಾತ್ರವೇ, ಪದಾರ್ಥಗಳಲ್ಲಿ ತನಗಭಿಮತವಾದ ಆಕಾರವುಳ್ಳುದಾಗಿ ಮಹಾಚಮತ್ಕಾರವಾಗಿರುವ ರೂಪವನ್ನು ತೋರ್ಪಡಿಸುವುದು; ತತ್ವಜ್ಞಾನಿಗಳಿಗಾದರೋ, ಈ ವಿಧವಾದ ರೂಪವೊಂದೂ ತೋರುವುದೇ ಇಲ್ಲ ||೩೦||

ಚಿಚ್ಛಕ್ತಿಯಿಂದ ಸ್ಫುರಣೆಹೊಂದಿರುವ ಮನಸ್ಸು, ಚಲವಾದ ಪದಾರ್ಥಗಳಲ್ಲಿ ವಾಯುರೂಪವನ್ನೂ, ಪ್ರಕಾಶವಾದುವುಗಳಲ್ಲಿ ಪ್ರಕಾಶತ್ವವನ್ನೂ, ದ್ರವಪದಾರ್ಥಗಳಲ್ಲಿ ದ್ರವತ್ವವನ್ನೂ ಹೊಂದುವುದು ||೩೧||

ಪೃಥ್ವ್ಯಾಂ ಕಠಿನತಾಮೇತಿ ಶೂನ್ಯತಾಂ ಶೂನ್ಯದೃಷ್ಟಿಷು |
ಸರ್ವತ್ರೇಚ್ಛಾಸ್ಥಿತಿಂ ಯಾತಿ ಚಿಚ್ಛಕ್ತಿಸ್ಫುರಿತಂ ಮನಃ ||೩೧||
ಶುಕ್ಲಂ ಕೃಷ್ಣೀಕರೋತ್ಯೇವ ಕೃಷ್ಣಂ ನಯತಿ ಶುಕ್ಲತಾಮ್ |
ವಿಸ್ತೈವ ದೇಶಕಾಲಾಭ್ಯಾಂ ಶಕ್ತಿಂ ಪಶ್ಯಾಸ್ಯ ಚೇತಸಃ ||೩೩||
ಮನಸ್ಯನ್ಯತ್ರ ಸಂಸಕ್ತೇ ಚರ್ವಿತಸ್ಯಾಪಿ ಜಿಹ್ವಯಾ |
ಭೋಜನಸ್ಯಾಪಿ ಮೃಷ್ಟಸ್ಯ ನ ಸ್ವಾದೋಸ್ಯಾನುಭೂಯತೇ ||೩೪||
ಯಚ್ಚಿತ್ತದೃಷ್ಟಂ ತದ್ದೃಷ್ಟಂ ನ ದೃಷ್ಟಂ ತದಲೋಕಿತಮ್ |
ಅನ್ಧಕಾರೇ ಯಥಾ ರೂಪಂ ಇನ್ದ್ರಿಯಂ ನಿರ್ಮಿತಂ ತಥಾ ||೩೫||
ಇನ್ದ್ರಿಯೇಣ ಮನೋ ದೇಹಿ ಮನಸೇನ್ದ್ರಿಯಮುನ್ಮನಃ |
ಇನ್ದ್ರಿಯಾಣಿ ಪ್ರಸೂತಾನಿ ಮನಸೋ ನೇನ್ದ್ರಿಯಾನ್ಮನಃ ||೩೬||
ಅತ್ಯನ್ತಭಿನ್ನಯೋರೈಕ್ಯಂ ಯೇಷಾಂ ಚಿತ್ತಶರೀರಯೋಃ |
ಜ್ಞಾತಜ್ಞೇಯಾಮಹಾತ್ಮಾನೋ ನಮಸ್ಯಾಸ್ತೇ ಸುಪಣ್ಡಿತಾಃ ||೩೭||

ಮತ್ತು, ಚಿಚ್ಛಕ್ತಿಯಿಂದ ಸ್ಫುರಣೆಹೊಂದಿದ ಈ ಮನಸ್ಸು, ಪೃಥಿವಿಯಲ್ಲಿ ಕಠಿನತ್ವವನ್ನೂ, ಶೂನ್ಯಪದಾರ್ಥಗಳಲ್ಲಿ ಶೂನ್ಯತ್ವವನ್ನೂ ಪಡೆಯುವುದು; ಮುಖ್ಯವಾಗಿ, ಇದು ಸರ್ವತ್ರ ಅಪ್ರತಿಹತವಾದ ರೂಪವನ್ನು ಹೊಂದುವುದು ||೩೧||

ಈ ಚಿತ್ತವು, ದೇಶಕಾಲವ್ಯವಸ್ಥೆಯನ್ನು ಕೂಡ ಬಿಟ್ಟುಬಿಟ್ಟು, ಬಿಳುಪಾದುದನ್ನು ಕಪ್ಪಾಗಿಯೂ, ಕಪ್ಪಾದುದನ್ನು ಬಿಳುಪಾಗಿಯೂ ಮಾಡುವುದು. ಅಯ್ಯಾ ರಾಮ! ಈ ಮನಸ್ಸಿನ ಶಕ್ತಿಯನ್ನು ನೋಡು!! ||೩೩||

ಮನಸ್ಸು ಬೇರೆಕಡೆಯಲ್ಲಿ ಆಸಕ್ತವಾಗಿರಲಾಗಿ, ನಮ್ಮ ನಾಲಿಗೆಯಿಂದ ಚೆನ್ನಾಗಿ ತಿನ್ನಲ್ಪಟ್ಟಿದ್ದರೂ, ಭೋಜನವು ಅತಿಮಧುರವಾಗಿದ್ದರೂ, ಅದರ ರುಚಿಯು ನಮ್ಮ ಅನುಭವಕ್ಕೆ ಬರುವುದೇ ಇಲ್ಲ ||೩೪||

ನಮ್ಮ ಚಿತ್ತದಿಂದ ಯಾವುದು ನೋಡಲ್ಪಡುವುದೋ, ಅದೇ ನೋಡಲ್ಪಟ್ಟಂತಾಗುವುದು; ಇಂದ್ರಿಯದಿಂದ ನೋಡಲ್ಪಡದ ಪದಾರ್ಥವು ನೋಡಲ್ಪಟ್ಟಂತೆಯೇ ಅಲ್ಲ. ಕಗ್ಗತ್ತಲೆಯಲ್ಲಿಯೂ ಕೂಡ, ಮನಸ್ಸು ಯಾವ ರೂಪವನ್ನು ನಿರ್ಮಿಸುವುದೋ—ಇಂದ್ರಿಯವೂ ಆರೂಪವನ್ನು ನೋಡಿಬಿಡುವುದಲ್ಲವೆ! ||೩೫||

ಅಯ್ಯಾ! ರಾಮ! ಇಂದ್ರಿಯದಿಂದ ಮನಸ್ಸು ದೇಹವುಳ್ಳ (ಸಾಕಾರ)ದಾಗುವುದು; ಮನಸ್ಸಿನಿಂದ ಇಂದ್ರಿಯವೂ ದೇಹವುಳ್ಳದಾಗುವುದು. ಹೀಗಿದ್ದರೂ, ಮನಸ್ಸೇ ಮೇಲಾದುದು. ಏಕೆಂದರೆ:—ಮನಸ್ಸಿನಿಂದ ಇಂದ್ರಿಯಗಳು ಜನಿಸಿರುವುವೇ ಹೊರತು, ಇಂದ್ರಿಯದಿಂದ ಮನಸ್ಸು ಜನಿಸಿದುದಲ್ಲ ||೩೬||

ಈರೀತಿಯಾಗಿ ಸುತರಾಂ ಭೇದವಿಲ್ಲದಿರುವ ಚಿತ್ತಕ್ಕೂ ಶರೀರಕ್ಕೂ ಐಕ್ಯಜ್ಞಾನವನ್ನು ಯಾರು ಪಡೆದಿರುವರೋ,—ಅಂತಹ ಜ್ಞಾತತತ್ವರಾದ ಮಹಾತ್ಮರಾದ ಜ್ಞಾನಿಗಳು, ಸರ್ವರಿಗೂ ನಮಸ್ಕಾರಪಾತ್ರರಾಗುವರು ||೩೭||

ಕುಸುಮೋಲ್ಲಾಸಿಧಮ್ಮಿಲ್ಲಾ ಹೇಲಾಚಲಿತಲೋಚನಾ ।
ಕಾಷ್ಠಕುಡ್ಯೋಪಮಾಙ್ಗೇಷು ಲಗ್ನಾಪ್ಯಮನಸೋಙ್ಗನಾ ‖೩೮‖
ಮನಸ್ಯನ್ಯತ್ರ ಸಂಸಕ್ತೇ ವೀತರಾಗೇಣ ಕಾನನೇ ।
ಕ್ರವ್ಯಾದಚರ್ವಿತೋಙ್ಕಸ್ಥಃ ಸ್ವಕರೋಪಿ ನ ಲಕ್ಷಿತಃ ‖೩೯‖
ಸುಖೀಕರ್ತುಂ ಸುದುಃಖಾನಿ ದುಃಖೀಕರ್ತುಂ ಸುಖಾನಿ ಚ ।
ಸುಖೇನೈವಾಶು ಯುಜ್ಯನ್ತೇ ಮನಸೋತಿಶಯಾಮುನೇಃ‖೪೦‖
ಮನಸ್ಯನ್ಯತ್ರ ಸಂಸಕ್ತೇ ಕಥ್ಯಮಾನಾಪಿ ಯತ್ನತಃ ।
ಲತಾ ಪರಶುಕೃತ್ತೇವ ಕಥಾ ವಿಚ್ಛಿದ್ಯತೇ ಬತ ‖೪೧‖
ಮನಸ್ಯದ್ರಿತಟಾರೂಢೇ ಗೃಹಸ್ಥೇನಾಪಿ ಜನ್ತುನಾ ।
ಶ್ವಭ್ರಾಭ್ರಕನ್ದರಭ್ರಾನ್ತಿದುಃಖಂ ಸಮನುಭೂಯತೇ ‖೪೨‖
ಮನಸ್ಯುಲ್ಲಸಿತೇ ಸ್ವಪ್ನೇ ಹೃದ್ಯೇವ ಪುರಪರ್ವತಾಃ ।
ಆಕಾಶಇವ ವಿಸ್ತೀರ್ಣೇ ದೃಶ್ಯನ್ತೇ ನಿರ್ಮಿತಾಃ ಕ್ಷಣಾಃ ‖೪೩‖

ಮನಸ್ಸಿಲ್ಲದವನಿಗೆ, ತಲೆಯಲ್ಲಿ ದಿವ್ಯವಾದ ಪುಷ್ಪಮಾಲೆಯನ್ನು ಧರಿಸಿ ವಿಲಾಸದಿಂದ ಕಟಾಕ್ಷಗಳನ್ನು ಬೀರುತಿರುವ ಯುವತಿಯು ತಾನಾಗಿ ಬಂದು ಆಲಿಂಗಿದರೂ, ಕಟ್ಟಿಗೆಯಂತೆಯೂ ಗೋಡೆಯಂತೆಯೂ ತೋರುವಳು ‖೩೮‖

ಮನಸ್ಸು ಬೇರೆಕಡೆಯಲ್ಲಿ ಆಸಕ್ತವಾಗಿರುವಾಗ, ಅರಣ್ಯದಲ್ಲಿ ತನ್ನ ತೊಡೆಯಮೇಲಿಟ್ಟುಕೊಂಡಿರುವ ಕೈಯನ್ನು ಹುಲಿಬಂದು ತಿಂದುಬಿಟ್ಟರೂ, ವಿರಕ್ತನಾದವನು ಅದನ್ನು ತಿಳಿಯದೆಯೇ ಇದ್ದುಬಿಡುವನು ‖೩೯‖

ಮುನಿಯಾದವನ ಮನಸ್ಸಿನ ಭಾವನಾವಿಶೇಷಗಳು, ಅತ್ಯಂತ ದುಃಖವನ್ನು ಸುಖವನ್ನಾಗಿಯೂ, ಸುಖವನ್ನು ದುಃಖವನ್ನಾಗಿಯೂ, ಅನಾಯಾಸವಾಗಿಯೇ ಮಾಡುವುದರಲ್ಲಿ ಸಮರ್ಥಗಳಾಗಿರುವುವು ‖೪೦‖

ಮನಸ್ಸು ಬೇರೆಕಡೆಯಲ್ಲಿ ಆಸಕ್ತವಾಗಿರುವಾಗ, ಅತಿಪ್ರಯತ್ನಪೂರ್ವಕವಾಗಿ ಹೇಳಲ್ಪಡುತಿರುವ ಕಥೆಯೂ ಕೂಡ, ಕೊಡಲಿಯಿಂದ ಕತ್ತರಿಸಲ್ಪಟ್ಟ ಲತೆಯಂತೆ ಅರ್ಧದಲ್ಲಿಯೇ ವಿಚ್ಛೇದಹೊಂದಿಬಿಡುವುದು ‖೪೧‖

ಮನಸ್ಸು ಪರ್ವತಶಿಖರವನ್ನು ಹತ್ತಿರಲಾಗಿ, ಮನೆಯೊಳಗಿರುವ ಪ್ರಾಣಿಯೂ ಕೂಡ, ಪರ್ವತದಿಂದ ಕೆಳಗೆ ಕಮರಿಯಲ್ಲಿ ಬಿದ್ದಂತೆಯೂ, ಮೇಘಮಂಡಲಮಧ್ಯದಲ್ಲಿ ಸಂಚರಿಸಿದಂತೆಯೂ, ಪರ್ವತಗುಹೆಗಳೊಳಗೆ ಭ್ರಮಿಸದಂತೆಯೂ ದುಃಖವನ್ನು ಅನುಭವಿಸುವನು ‖೪೨‖

ಮನಸ್ಸು ಸ್ವಪ್ನದಲ್ಲಿ ವಿಕಾಸಪಡೆದಿರಲಾಗಿ, ಆಕಾಶದಂತೆ ವಿಸ್ತಾರವಾದ ಹೃದಯದೊಳಗೆಯೇ, ಅನೇಕ ಪುರಪಟ್ಟಣಗಳು ನಿರ್ಮಿತಗಳಾಗಿ ತಮ್ಮತಮ್ಮ ಕಾರ್ಯಗಳನ್ನು ನೆರವೇರಿಸುತಿರುವುದು ಗೋಚರವಾಗುವುದು ‖೪೩‖

ಮನೋ ವಿಲುಳಿತೇ ಸ್ವಪ್ನೇ ಹೃದ್ಯೇವಾದ್ರಿಪುರಾವಳಿಮ್ |
ತನೋತಿ ಚಲಿತಾಮ್ಬೋಧಿಃ ವೀಚೀಚಯಮಿವಾತ್ಮನಿ ||೪೪||
ಅನ್ತರಬ್ಧಿ ಜಲಾದ್ಯದ್ವತ್ ತರಙ್ಗಪೀಡವೀಚಯಃ |
ದೇಹಾನ್ತರ್ಮನಸಸ್ತದ್ವತ್ ಸ್ವಪ್ನಾದ್ರಿಪುರರಾಜಯಃ ||೪೫||
ಅಙ್ಕುರಸ್ಯ ಯಥಾ ಪತ್ರಲತಾಪುಷ್ಪಫಲಶ್ರಿಯಃ |
ಮನಸೋಸ್ಯ ತಥಾ ಹೇಮ್ನೋ ನ ಹೇಮವನಿತಾ ತಥಾ ||೪೬||
ಜಾಗ್ರತ್ಸ್ವಪ್ನಕ್ರಿಯಾಲಕ್ಷ್ಮ್ಯಃ ವ್ಯತಿರಿಕ್ತಾ ನ ಚೇತಸಃ ||೪೭||
ಧಾರಾಕಣೋರ್ಮಿಫೇನಶ್ರೀಃ ಯಥಾ ಸಂಲಕ್ಷ್ಯತೇಮ್ಭಸಃ |
ತಥಾ ವಿಚಿತ್ರವಿಭವಾ ನಾನಾತೇಯಂ ಹಿ ಚೇತಸಃ ||೪೮||
ಸ್ವಚಿತ್ತವೃತ್ತಿರೇವೇಹ ಜಾಗ್ರತ್ಸ್ವಪ್ನದೃಶೋದಿತಮ್ |
ರಸಾವೇಶಾದುಪಾದತ್ತೇ ಶೈಲೂಷಇವ ಭೂಮಿಕಾಮ್ ||೪೯||
ಚಣ್ಡಾಲತ್ವಂ ಹಿ ಲವಣೇ ಪ್ರತಿಭಾಸವಶಾದ್ಯಥಾ |
ತಥೇದಂ ಜಗದಾಭೋಗಿ ಮನೋಮನನಮಾತ್ರಕಮ್ ||೫೦||

ಚಂಚಲವಾದ ಸಮುದ್ರವು ತನ್ನಲ್ಲಿಯೇ ಅನೇಕ ತರಂಗ ಸಮುದಾಯಗಳನ್ನು ಮಾಡಿಕೊಳ್ಳುವಂತೆ, ಸ್ವಪ್ನವು ವಿಸ್ತರಿಸಿಕೊಂಡಿರುವಾಗ, ಈ ಮನಸ್ಸು, ತನ್ನಲ್ಲಿಯೇ ಅನೇಕ ಗಿರಿನಗರ ಸಮುದಾಯಗಳನ್ನು ಸೃಷ್ಟಿಮಾಡಿಕೊಳ್ಳುವುದು ॥೪೪॥

ಸಮುದ್ರದೊಳಗೆ, ನೀರಿನ ದೆಸೆಯಿಂದ ತರಂಗವೀಚಿಗಳು ಹೇಗೆ ಉಂಟಾಗುವುವೋ, ಹಾಗೆ ದೇಹದೊಳಗೆ ಮನಸ್ಸಿನ ದೆಸೆಯಿಂದ ಸ್ವಪ್ನಕಾಲಿಕವಾದ ಗಿರಿಪರ್ವತಸಮುದಾಯುಗಳುಂಟಾಗುವುವು ॥೪೫॥

ಒಂದು ಮೊಳಕೆಗೆ ಪತ್ರ ಲತಾ ಪುಷ್ಪ ಫಲಗಳ ಸೊಬಗು ಹೇಗಿರುವುದೋ, ಹಾಗೆ ಈ ಮನಸ್ಸಿಗೂ ಜಾಗ್ರತ್ ಸ್ವಪ್ನ ಮುಂತಾದ ವಿಲಾಸಭೂಮಿಕೆಗಳಿರುವುವು. ಸುವರ್ಣಮಯವಾದ ಪುತ್ಥಳಿಯು ಸುವರ್ಣಕ್ಕಿಂತ ಹೇಗೆ ಪೃಥಕ್ಕಲ್ಲದಿರುವುದೋ, ಹಾಗೆ ಜಾಗ್ರತ್ ಸ್ವಪ್ನ ಮುಂತಾದ ಕಾರ್ಯಸಮುದಾಯವೂ ಚಿತ್ತಕ್ಕಿಂತ ಪೃಥಕ್ಕಲ್ಲದಿರುವುದು ॥೪೬-೪೭॥

ಧಾರೆಯೆಂದೂ, ಕಣವೆಂದೂ, ತರಂಗವೆಂದೂ, ಫೇನ(ನೊರೆ)ವೆಂದೂ, ಜಲವು ಹೇಗೆ ನಾನಾ ರೂಪವಾಗಿ ಕಾಣುವುದೋ, ಹಾಗೆ ಈ ಮನಸ್ಸು ನಾನಾವಿಧ ವಿಚಿತ್ರರೂಪವುಳ್ಳದಾಗಿ ಕಾಣಿಸುವುದು ॥೪೮॥

ನಟನು ತನಗೆ ಬೇಕಾದ ವೇಷವನ್ನು ಕ್ಷಣಕ್ಕೊಂದುವಿಧವಾಗಿ ಧರಿಸುವಂತೆ, ಚಿತ್ತವೃತ್ತಿಯೇ ಸ್ವರಸಪೂರ್ವಕವಾಗಿ ಜಾಗ್ರದ್ರೂಪವಾಗಿಯೂ ಸ್ವಪ್ನರೂಪವಾಗಿಯೂ ಉದಯವನ್ನು ಸ್ವೀಕರಿಸುವುದು ॥೪೯॥

ಅಯ್ಯಾ ! ರಾಮ ! ನಾನು ಈಗ ನಿನಗೆ ಹೇಳಿದ ಲವಣನಲ್ಲಿ ಚಂಡಾಲತ್ವವು ಹೇಗೆ ಕೇವಲ ಪ್ರತಿಭಾಸವಶದಿಂದುಂಟಾಗಿದ್ದಿತೋ, ಹಾಗೆ ಈ ವಿಶಾಲವಾದ ಸಮಸ್ತ ಜಗತ್ತೂ ಮನಸ್ಸಿನ ಮನನಮಾತ್ರವಾದುದೆಂದು ತಿಳಿಯಬೇಕು ॥೫೦॥

ಯದ್ಯತ್ ಸಂವೇದ್ಯತೇ ಕಿಞ್ಚಿತ್ ತೇನತೇನಾಶು ಭೂಯತೇ |
ಮನೋಮನನನಿರ್ವಾಣಂ ಯಥೇಚ್ಛಸಿ ತಥಾ ಕುರು ||೫೧||
ನಾನಾಪುರಸರಿಚ್ಛೈಲರೂಪತಾಮೇತ್ಯ ದೇಹಿನಾಮ್ |
ತನೋತ್ಯನ್ತಸ್ಸ್ಥಮೇವೇದಂ ಜಾಗ್ರತ್ಸ್ವಪ್ನಮಯಂ ಮನಃ ||೫೨||
ಸುರತ್ವಾದ್ದೈತ್ಯತಾಮೇತ್ಯ ನಾಗತ್ವಾನ್ನಗತಾಮಪಿ |
ಪ್ರತಿಭಾಸವಶಾಚ್ಚಿತ್ತಂ ಆಪನ್ನಂ ಲವಣೋ ಯಥಾ ||೫೩||
ನರತ್ವಾದೇತಿ ನಾರೀತ್ವಂ ಪಿತೃತ್ವಾತ್ ಪುತ್ರತಾಂ ಗತಃ |
ಯಥಾ ಕ್ಷಿಪ್ರಂ ಪ್ರತಿ ಸರಃ ಸ್ವಸಙ್ಕಲ್ಪಾತ್ ತಥಾ ಮನಃ ||೫೪||
ಸಙ್ಕಲ್ಪತಃ ಪ್ರಮ್ರಿಯತೇ ಸಙ್ಕಲ್ಪಾಜ್ಜಾಯತೇ ಪುನಃ |
ಮನಶ್ಚಿರನ್ತನಾಭ್ಯಸ್ತಾತ್ ಜೀವತಾಮೇತ್ಯನಾಕೃತಿ ||೫೫||
ಮನೋ ಮನನಸಂಮೂಢಂ ಊಢವಾಸನವಾತತಮ್ !
ಸಙ್ಕಲ್ಪಾದ್ಯೋನಿಮಾಯಾತಿ ಸುಖದುಃಖೇ ಭಯಾಭಯೇ ||೫೬||

ಯಾವುದಾದರೊಂದು ವಸ್ತುವು ಯಾವರೀತಿಯಾಗಿ ತಿಳಿಯಲ್ಪಡುವುದೋ, ಅದು ಆರೀತಿಯಾಗಿಯೇ ತಟ್ಟನೆ ಆಗಿಬಿಡುವುದು. ಆದುಕಾರಣ, ಅಯ್ಯಾ ರಾಮ! ನಿನಗೆ ಹೇಗೆ ಇಚ್ಛೆ ಹುಟ್ಟುವುದೋ, ಹಾಗೆ ಮನಸ್ಸಿನ ಮನನವನ್ನು ಮಾಡುವನಾಗು ||೫೧||

ಈ ಮನಸ್ಸು, ಸಮಸ್ತ ಪ್ರಾಣಿಗಳಿಗೂ ಅಂತರ್ಗತವಾಗಿಯೇ ಇದ್ದುಗೊಂಡು, ನಾನಾವಿಧವಾದ ನದೀ ಗಿರಿ ನಗರಾದಿರೂಪವನ್ನು ಹೊಂದಿ, ಜಾಗ್ರತ್ಸ್ವಪ್ನಮಯವಾದ ಈ ಪ್ರಪಂಚವನ್ನು ವಿಸ್ತರಿಸುತಿರುವುದು ||೫೨||

ಈ ಚಿತ್ತವು, ಲವಣರಾಜನು ಕ್ಷತ್ರಿಯತ್ವದಿಂದ ಚಂಡಾಲತ್ವವನ್ನನುಭವಿಸಿದಂತೆ, ಕೇವಲ ಪ್ರತಿಭಾಸಶಕ್ತಿಯಿಂದಲೇ, ದೇವತ್ವವನ್ನು ಬಿಟ್ಟು ರಾಕ್ಷಸತ್ವವನ್ನೂ, ನಾಗತ್ವವನ್ನು ಬಿಟ್ಟು ನಗತ್ವವನ್ನೂ ಹೊಂದಿಬಿಡುವುದು ||೫೩||

ಮನುಷ್ಯನು, ಪುರುಷತ್ವವನ್ನು ಬಿಟ್ಟು ಸ್ತ್ರೀತ್ವವನ್ನು ಹೇಗೆ ಹೊಂದುವನೋ, ಪಿತೃತ್ವದಿಂದ ಪುತ್ರತ್ವವನ್ನು ಹೇಗೆ ಹೊಂದುವನೋ, ಹಾಗೆ ಮನಸ್ಸೂ ತನ್ನ ಸಂಕಲ್ಪದಿಂದ ತಟ್ಟನೆ ಬೇಕಾದ ಅವಸ್ಥೆಯನ್ನು ಪಡೆಯುವುದು ||೫೪||

ಈ ಮನಸ್ಸು, ಚಿರಕಾಲ ಅಭ್ಯಸಿಸಲ್ಪಟ್ಟ ಸಂಕಲ್ಪದಿಂದಲೇ ಸಾಯುವುದು; ಸಂಕಲ್ಪದಿಂದಲೇ ಹುಟ್ಟುವುದು. ಸ್ವಯಂ ನಿರಾಕಾರವಾಗಿದ್ದರೂ, ಜೀವಸ್ವರೂಪವನ್ನು ಹೊಂದುವುದು ||

ವಾಸನಾಯುಕ್ತವಾಗಿರುವ ಮನಸ್ಸು, ಮನನದಿಂದ ಮೂಢವಾದುದಾಗಿ, ವಿಸ್ತಾರವಾಗಿ ಹರಡಿಕೊಂಡು, ಸುಖದುಃಖಗಳನ್ನೂ ಭಯಾಭಯಗಳನ್ನೂ ಜನ್ಮಸ್ಥಾನವನ್ನಾಗಿ ಮಾಡಿಕೊಳ್ಳುವುದು ||೫೬||

ಸುಖಂ ದುಃಖಂ ಚ ಮನಸಿ ತಿಲೇ ತೈಲಮಿವ ಸ್ಥಿತಮ್ ।
ತದ್ದೇಶಕಾಲವಶತೋ ಘನಂ ವಾ ತನು ವಾ ಭವೇತ್ ॥೫೭॥
ತೈಲಂ ತಿಲಸ್ಯ ಚಾಕ್ರಾನ್ತ್ಯಾ ಸ್ಫುಟತಾಮೇತಿ ಶಾಶ್ವತೀಮ್ ।
ಚೇತಸೋ ಮನನಾಸಙ್ಗಾತ್ ಘನೀಭೂತೇ ಸುಖಾಸುಖೇ ॥೫೮॥
ದೇಶಕಾಲಾಭಿಧಾನೇನ ರಾಮ ಸಙ್ಕಲ್ಪಮಿವ ಹಿ ।
ಕಥ್ಯತೇ ತದ್ವಶಾದ್ಯಸ್ಮಾತ್ ದೇಶಕಾಲೌ ಸ್ಥಿತಿಂ ಗತೌ ॥೫೯॥
ಪ್ರಶಾಮ್ಯತ್ಯುಲ್ಲಸತ್ಯೇತಿ ಯಾತಿ ನನ್ದತಿ ವಲ್ಗತಿ ।
ಮನಶ್ಶರೀರಸಙ್ಕಲ್ಪೇ ಫಲಿತೇ ನ ಶರೀರಕಮ್ ॥೬೦॥
ನಾನಾಸ್ಫುರಸಮುಲ್ಲಾಸೈಃ ಸ್ವಸಙ್ಕಲ್ಪೋಪಕಲ್ಪಿತೈಃ ।
ಮನೋ ವಲ್ಗತಿ ದೇಹೇಸ್ಮಿನ್ ಸಾಧ್ವೀವಾನ್ತಃಪುರಾಜಿರೇ ॥೬೧॥
ಚಾಪಲೇ ಪ್ರಸರಸ್ತಸ್ಮಾತ್ ಅನ್ತರ್ಯೇನ ನ ದೀಯತೇ ।
ಮನೋ ವಿಲಯಮಾದತ್ತೇ ತಸ್ಯಾಲಾನಇವ ದ್ವಿಪಃ ॥೬೨॥

ಅಯ್ಯಾ! ರಾಮ! ಎಳ್ಳಿನಲ್ಲಿ ಎಣ್ಣೆಯಿರುವಂತೆ, ಸುಖದುಃಖಗಳು ಮನಸ್ಸಿನೊಳಗೆ ಇದ್ದೇಯಿರುವುವು. ಇವುಗಳು, ದೇಶಕಾಲಭೇದವನ್ನನುಸರಿಸಿ ಅಧಿಕವಾಗಿಯಾಗಲಿ ಅಲ್ಪವಾಗಿಯಾಗಲಿ ಆಗುವುವು ॥೫೭॥

ಎಳ್ಳನ್ನು ಗಾಣಕ್ಕೆ ಹಾಕಿ ಚೆನ್ನಾಗಿ ಹಿಂಡುವುದರಿಂದ ಎಣ್ಣೆ ಹೊರಕ್ಕೆ ಹೊರಡುವುದು. ಹಾಗೆಯೇ, ಮನಸ್ಸಿನೊಳಗೆ ಘನವಾಗಿರುವ ಸುಖದುಃಖಗಳು ಮನನದಿಂದ ಹೊರಹೊರಡುವುವು ॥೫೮॥

ಅಯ್ಯಾ! ರಾಮ! ಹೀಗೆ ಹೇಳಿದ ಮಾತ್ರದಿಂದಲೇ, ದೇಶಕಾಲಶಕ್ತಿಯಿಂದ ಸುಖದುಃಖಪ್ರಾದುರ್ಭಾವವಾಗುವುದೆಂದು ತಿಳಿಯಕೂಡದು. ಸಂಕಲ್ಪವೇ ದೇಶಕಾಲಗಳೆಂಬ ಶಬ್ದಗಳಿಂದಲೂ ಹೇಳಲ್ಪಡುವುದು. ಏಕೆಂದರೆ,—ಈ ಸಂಕಲ್ಪದಿಂದಲೇ ದೇಶಕಾಲಗಳ ಸ್ಥಿತಿಯೂ ಇರುವುದು ॥೫೯॥

ಹೀಗೆಯೇ, ಮನೋರೂಪವಾದ ದೇಹದ ಸಂಕಲ್ಪವು ಫಲಿಸಿದಾಗಲೇ, ಈ ಸ್ಥೂಲದೇಹವು, ಶಾಂತಿಯನ್ನೂ ಉಲ್ಲಾಸವನ್ನೂ ಗಮನಾಗಮನಗಳನ್ನೂ ಆನಂದವನ್ನೂ ನರ್ತನವನ್ನೂ ಹೊಂದುವುದಲ್ಲದೆ, ಸ್ವತಂತ್ರವಾಗಿ ಇವುಗಳನ್ನು ಹೊಂದಲಾರದು ॥೬೦॥

ಪತಿವ್ರತೆಯು ತನ್ನ ಅಂತಃಪುರಾಂಕಣದೊಳಗೇ ವಿಹರಿಸುತಿರುವಂತೆ, ಈ ಮನಸ್ಸು, ತನ್ನ ಸಂಕಲ್ಪಕಲ್ಪಿತವಾದ ನಾನಾವಿಧವಿಲಾಸಗಳಿಂದ ಈ ದೇಹದೊಳಗೆ ನರ್ತಿಸುತಿರುವುದು॥

ಹೀಗಿರುವುದರಿಂದ, ಯಾವನು ಮನಸ್ಸಿಗೆ ಒಳಗಡೆ ಚಾಪಲ್ಯಕ್ಕೆ ಅವಕಾಶವನ್ನು ಕೊಡುವುದಿಲ್ಲವೋ, ಅವನ ಮನಸ್ಸು—ಆನೆಯು ಬಂಧನಸ್ತಂಭದಲ್ಲಿ ಸಿಕ್ಕಿಬಿದ್ದಿರುವಂತೆ—ಒಳಗೆಯೇ ಲಯಹೊಂದುವುದು ॥೬೨॥

ನ ಸ್ಪನ್ದತೇ ಮನೋ ಯಸ್ಯ ಶಸ್ತ್ರಾಸ್ತ್ರಮ್ಭ ಇವೋತ್ತಮಃ ।
ಸದ್ವಸ್ತುತೋಽಸೌ ಪುರುಷಃ ಶಿಷ್ಟಾಃ ಕರ್ದಮಕೀಟಕಾಃ ॥೬೩॥
ಯಸ್ಯಾಚಪಲತಾಂ ಯಾತಂ ಮನಏಕತ್ರ ಸಂಸ್ಥಿತಮ್ ।
ಅನುತ್ತಮಪದೇನಾಸೌ ಧ್ಯಾನೇನಾನುಗತೋಽನಘ ॥೬೪॥
ಸಂಯಮಾನ್ಮನಸಃ ಶಾನ್ತಿಂ ಏತಿ ಸಂಸಾರವಿಭ್ರಮಃ ।
ಮನ್ದರೇಽಸ್ಪನ್ದತಾಂ ಯಾತೇ ಯಥಾ ಕ್ಷೀರಮಹಾರ್ಣವಃ ॥೬೫॥
ಮಾನಸ್ಯೋ ವೃತ್ತಯೋ ಯಾಯಾಃ ಭೋಗಸಙ್ಕಲ್ಪವಿಭ್ರಮೈಃ ।
ಸಂಸಾರವಿಷವೃಕ್ಷಸ್ಯ ತಾಏವಾಙ್ಕುರಯೋನಯಃ ॥೬೬॥

ಚಿತ್ತಂ ಚಲತ್ ಕುವಲಯಂ ಕಲಯನ್ತ ಏತೇ
ಮೂಢಾ ಮಹಾಜಡಜವೇ ಮದಮೋಹಮನ್ದಾಃ ।
ಆವರ್ತವರ್ತಿನಿ ವಿಲೂನವಿಶೀರ್ಣಚಿನ್ತಾ
ಚಕ್ರಭ್ರಮೇ ಪುರುಷದುರ್ಭ್ರಮರಾಃ ಪತನ್ತಿ ॥೬೭॥

ಇತಿ ಉತ್ಪತ್ತಿಪ್ರಕರಣೇ ಚಿತ್ತವರ್ಣನಂ ನಾಮ
ದಶೋತ್ತರ ಶತತಮಃ ಸರ್ಗಃ.

ಸ್ತಂಭನಾಸ್ತ್ರವನ್ನು ಬಿಟ್ಟು ಅದರಿಂದ ಸ್ತಬ್ಧತೆಯುಂಟಾಗಿರುವಾಗ ಯೋಧರು ನಿಶ್ಚಲರಾಗಿರುವಂತೆ, ಯಾವನ ಮನಸ್ಸು ಸ್ತಬ್ಧವಾಗಿರುವುದೋ, ಅವನೇ—ಪರಮಾರ್ಥತಃ ಉತ್ತಮಪುರುಷನೆನ್ನಲ್ಪಡುವನು. ಇತರರು, ಕೆಸರಿನಲ್ಲಿ ಹುಟ್ಟುವ ಹುಳುಗಳೇಸರಿ ॥೬೩॥

ಅಯ್ಯಾ! ನಿರ್ದೋಷನಾದ ರಾಮನೇ! ಯಾವನ ಮನಸ್ಸು, ಚಾಪಲ್ಯಹೊಂದದೆ ಒಂದೇಕಡೆಯಲ್ಲಿ ನಿಂತಿರುವುದೋ, ಇವನು—ಧ್ಯಾನದ್ವಾರದಿಂದ ಪರಮಪದದಲ್ಲಿ ಸೇರಿಕೊಳ್ಳುವನು ॥೬೪॥

ಪೂರ್ವದಲ್ಲಿ ಮಂದರಪರ್ವತವು ನಿಶ್ಚಲವಾದಕೂಡಲೆ ಕ್ಷೀರಸಮುದ್ರವೂ ನಿಶ್ಚಲವಾದಂತೆ, ಮನಸ್ಸಿನ ಸಂಯಮದಿಂದ ಸಂಸಾರವೃತ್ತಿಗಳೂ ಶಾಂತಿಹೊಂದಿಬಿಡುವುವು ॥೬೫॥

ಭೋಗಸಂಕಲ್ಪವಿಲಾಸಗಳಿಂದ ಯಾವಯಾವ ಮನೋವೃತ್ತಿಗಳುದಯಿಸುವುವೋ, ಅವುಗಳೇ--ಸಂಸಾರವೆಂಬ ವಿಷವೃಕ್ಷಕ್ಕೆ ಅಂಕುರಗಳಾಗುವುವು ॥೬೬॥

ಅಯ್ಯಾ! ರಾಮ! ಮದಮೋಹಗಳಿಂದ ಮಂದರಾದ ಪುರುಷರೇ ಭ್ರಮರಗಳೆಂದು ತಿಳಿಯುವನಾಗು. ಈ ಪುರುಷರೆಂಬ ಭ್ರಮರಗಳು, ಚಿತ್ತವೆಂಬ ಚಂಚಲವಾದ ಕುವಲಯವನ್ನು ಬಳಸುತ, ಜಾಡ್ಯವೆಂಬ ಜಲದವೇಗದಿಂದ, ಗುಂಡಾಗಿ ಭ್ರಮಿಸುತಿರುವ ಚಿಂತೆಯೆಂಬ ಆವರ್ತಚಕ್ರದಲ್ಲಿ ಬಿದ್ದುಬಿಡುವುವು ॥೬೭॥

ಇದು ಉತ್ಪತ್ತಿಪ್ರಕರಣದಲ್ಲಿ ಚಿತ್ತವರ್ಣನೆಯೆಂಬ
ನೂರಹತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕಾದಶೋತ್ತರಶತತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಅಸ್ಯ ಚಿತ್ತಮಹಾವ್ಯಾಧೇಃ ಚಿಕಿತ್ಸಾಯಾಮಹೌಷಧಮ್ |
ಸ್ವಾಯತ್ತಂ ಶೃಣು ವಕ್ಷ್ಯಾಮಿ ಸಾಧು ಸುಸ್ವಾದು ನಿಶ್ಚಿತಮ್ ||೧||
ಸ್ವೇನೈವ ಪೌರುಷೇಣಾಶು ಸ್ವಸಂವೇದನರೂಪಿಣಾ |
ಯತ್ನೇನ ಚಿತ್ತವೇತಾಳಃ ತ್ಯಕ್ತ್ವೇಷ್ಟಂ ವಸ್ತು ಜೀಯತೇ ||೨||
ತ್ಯಜನ್ನಭಿಮತಂ ವಸ್ತು ಯಸ್ತಿಷ್ಠತಿ ನಿರಾಮಯಃ |
ಜಿತಮೇವ ಮನಸ್ತೇನ ಕುದನ್ತ ಇವ ದನ್ತಿನಾ ||೩||
ಸ್ವಸಂವೇದನಯತ್ನೇನ ಪಾಲ್ಯತೇ ಚಿತ್ತಬಾಲಕಃ |
ಅವಸ್ತುತೋ ವಸ್ತುನಿ ಚ ಯೋಜ್ಯತೇ ಬೋಧ್ಯತೇಽಪಿ ಚ ||೪||

ಉತ್ಪತ್ತಿಪ್ರಕರಣದಲ್ಲಿ ನೂರಹನ್ನೊಂದನೆಯ ಸರ್ಗವು.

ಯತ್ನಾದಭಿಮತತ್ಯಾಗಃ ತ್ಯಾಗೋಽಹನ್ತಾಮಮತ್ವಯೋಃ |
ಅತ್ರ ಚಿತ್ತಜಯೋಪಾಯಃ ಚಿದೈಕಾಗ್ರ್ಯಂ ಚ ವರ್ಣ್ಯತೇ ||

ಚಿತ್ತಜಯಕ್ಕೆ ಉಪಾಯಭೂತಗಳಾದ–ಇಷ್ಟಪರಿತ್ಯಾಗವೂ, ಅಹಂಕಾರಮಮಕಾರತ್ಯಾಗವೂ, ಚಿತ್ತಿನಲ್ಲಿ ಚಿತ್ತವನ್ನು ಏಕಾಗ್ರವಾಗಿ ನಿಲ್ಲಿಸುವ ಪ್ರಕ್ರಮವೂಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳುವುದಕ್ಕುಪಕ್ರಮಿಸಿದರು:—

ಅಯ್ಯಾ! ರಾಮ! ಈ ಚಿತ್ತವೆಂಬುದೇ ಒಂದು ಮಹಾರೋಗವು. ಇದರ ಚಿಕಿತ್ಸೆಗೆ ತಕ್ಕ ಮಹೌಷಧಿಯನ್ನು ನಿನಗೆ ಹೇಳುವೆನು, ಕೇಳು. ಈ ಔಷಧಿಯು ಮತ್ತೊಬ್ಬರ ಉಪಾಶ್ರಯದಿಂದ ಹೊಂದಲ್ಪಡಬೇಕಾಗಿಲ್ಲ; ಸರ್ವದಾ ನಮಗಧೀನವಾಗಿಯೇ ಇರುವುದು. ಇದು ಬಹು ಸಾಧುವಾದುದು; ಬಹು ಮಧುರವಾಗಿರುವುದು; ಇದನ್ನು ಸೇವಿಸಿದವರಿಗೆ ವ್ಯಾಧಿನಿವಾರಣೆ ನಿಶ್ಚಿತವಾಗಿರುವುದು ||೧||

ಸ್ವಾತ್ಮಜ್ಞಾನರೂಪವಾದ ಸ್ವಪೌರುಷ ಪ್ರಯತ್ನದಿಂದಲೇ, ನಮಗಭಿಮತವಾದ ವಸ್ತುವನ್ನು ಬಿಟ್ಟುಬಿಟ್ಟರೆ, ಆಗ ಈ ಚಿತ್ತವೆಂಬ ಬೇತಾಳನು ಗೆಲ್ಲಲ್ಪಡುವನು ||೨||

ಯಾವ ಪುರುಷನು, ತನಗಭಿಮತವಾದ ವಸ್ತುವನ್ನು ಪರಿತ್ಯಜಿಸಿ ರಾಗಾದಿರೋಗಶೂನ್ಯನಾಗಿರುವನೋ, ಅವನು—ಮೋಟುಕೊಂಬುಳ್ಳ ಆನೆಯನ್ನು ದೊಡ್ಡಕೊಂಬಿನ ಆನೆಯು ಗೆಲ್ಲುವಂತೆ, ತನ್ನ ಮನಸ್ಸನ್ನು ಗೆದ್ದವನೇ ಆಗುವನು ||೩||

ಸ್ವಾತ್ಮಜ್ಞಾನಯತ್ನವು, ಚಿತ್ತವೆಂಬ ಬಾಲಕನನ್ನು, ಅನರ್ಥದದೆಸೆಯಿಂದ ತಪ್ಪಿಸಿ ಕಾಪಾಡುವುದು; ಪರಮಾರ್ಥದಲ್ಲಿ ಸೇರಿಸುವುದು; ಇವನಿಗೆ ಉತ್ತಮವಾದ ಜ್ಞಾನವನ್ನೂ ಉಂಟುಮಾಡುವುದು ||೪||

ಶಾಸ್ತ್ರಸತ್ಸಙ್ಗಧೀರೇಣ ಚಿನ್ತಾತಪ್ತಮತಾಪಿನಾ |
ಛಿನ್ಧಿ ತ್ವಮಾಯಸೇನಾಯೋ ಮನಸೈವ ಮನೋ ಮುನೇ ||೫||
ಅಯತ್ನೇನ ಯಥಾ ಬಾಲಃ ಇತಶ್ಚೇತಶ್ಚ ಯೋಜ್ಯತೇ |
ಭಾವ್ಯೈಸ್ತಥೈವ ಚೇತೋನ್ತಃ ಕಿಮಿವಾತ್ರಾಸ್ತಿ ದುಷ್ಕರಮ್ ||೬||
ಸತ್ಕರ್ಮಣಿ ಸಮಾಕ್ರಾನ್ತಂ ಉದರ್ಕೋದಯದಾಯಿನಿ |
ಸ್ವಪೌರುಷೇಣೈವ ಮನಃ ಚೇತನೇನ ನಿಯೋಜಯೇತ್ ||೭||
ಸ್ವಾಯತ್ತಮೇಕಾನ್ತಹಿತಂ ಸ್ವೇಪ್ಸಿತತ್ಯಾಗವೇದನಮ್ |
ಯಸ್ಯ ದುಷ್ಕರತಾಂ ಯಾತಂ ಧಿಕ್ ತಂ ಪುರುಷಕೀಟಕಮ್ ||೮||
ಅರಮ್ಯಂ ರಮ್ಯರೂಪೇಣ ಭಾವಯಿತ್ವಾ ಸ್ವಸಂವಿದಾ |
ಮಲ್ಲೇನೇವ ಶಿಶುಶ್ಚಿತ್ತಂ ಅಯತ್ನೇನೈವ ಜೀಯತೇ ||೯||
ಪೌರುಷೇಣ ಪ್ರಯತ್ನೇನ ಚಿತ್ತಮಾಶ್ವೇವ ಜೀಯತೇ |
ಅಚಿತ್ತೇನಾಪ್ರಯತ್ನೇನ ಪದಂ ಬ್ರಹ್ಮಣಿ ದೀಯತೇ ||೧೦||

ಎಲೈ ಮನನಶೀಲನಾದ ರಾಮನೆ! ಪ್ರಪಂಚದಲ್ಲಿ ಕಬ್ಬಿಣವನ್ನು ಕತ್ತರಿಸುವುದಕ್ಕೆ ಕಬ್ಬಿಣವೇ ಆಗಬೇಕಲ್ಲವೆ! ಹೀಗೆ ಮನಸ್ಸೆಂಬ ಕಬ್ಬಿಣವನ್ನು ಮನಸ್ಸೆಂಬ ಕಬ್ಬಿಣದಿಂದಲೇ ನೀನು ಕತ್ತರಿಸುವನಾಗು. ಈ ಮನಸ್ಸು, ಶಾಸ್ತ್ರದಿಂದಲೂ ಸತ್ಸಂಗದಿಂದಲೂ ಧೀರವಾಗಿರಬೇಕು; ಇದು ಶಾಂತವಾಗಿರಬೇಕು. ಇಂತಹ ಮನಸ್ಸೆಂಬ ಕಬ್ಬಿಣದಿಂದ, ಚಿಂತೆಯೆಂಬ ಅಗ್ನಿಯಲ್ಲಿ ಚೆನ್ನಾಗಿ ಕಾದಿರುವ ಮನಸ್ಸೆಂಬ ಕಬ್ಬಿಣವನ್ನು ನೀನು ಕತ್ತರಿಸುವನಾಗು ||೫||

ಒಬ್ಬ ಬಾಲಕನು ಯತ್ನವಿಲ್ಲದೆಯೇ ಲಾಲನಾದಿಗಳಿಂದ ಅತ್ತಿತ್ತ ಬೇಕಾದಕಡೆ ಹೇಗೆ ಸೇರಿಸಲ್ಪಡುವನೋ, ಹಾಗೆ ಈ ಚಿತ್ತವೂ ಪ್ರಯತ್ನವಿಲ್ಲದೆಯೇ ಆತ್ಮನಲ್ಲಿ ನಿಲ್ಲಿಸಲ್ಪಡುವುದು. ಇದರಲ್ಲಿ ಅಸಾಧ್ಯವಾದುದಾವುದಿರುವುದು? ||೬||

ಉತ್ತರತ್ರ ಅಸಾಧಾರಣವಾದ ಶ್ರೇಯಸ್ಸನ್ನು ಕೊಡತಕ್ಕ ಸತ್ಕರ್ಮದಲ್ಲಿ ಆಸಕ್ತವಾಗಿರುವ ಮನಸ್ಸನ್ನು, ತನ್ನ ಪೌರುಷದಿಂದಲೇ ಪರಮಾತ್ಮನಲ್ಲಿ ನಿಲ್ಲಿಸಬೇಕು ||೭||

ಇದಕ್ಕೆ ಆವಶ್ಯಕವಾದುದು ವಿರಕ್ತಿಯು; ತನಗೆ ಇಷ್ಟವಾದುದನ್ನು ಬಿಡುವುದೇ ವಿರಕ್ತಿಯೆನ್ನಿಸುವುದು. ಇದು ಸರ್ವರಿಗೂ ಸ್ವಾಧೀನವಾಗಿಯೂ ಅತ್ಯಂತ ಹಿತವಾಗಿಯೂ ಇರುವುದು. ಇಷ್ಟು ಸುಕರವಾಗಿರುವ ಈ ಸಾಧನವೂ ಯಾವನಿಗೆ ದುಷ್ಕರವಾಗುವುದೋ, ಅಂತಹ ಪುರುಷಕೀಟಕ(ಹುಳು)ನ ಜನ್ಮವನ್ನು ಸುಡಬೇಕು ||೮||

ರಮಣೀಯವಲ್ಲದ ಈ ಪ್ರಪಂಚಜಾತವನ್ನು ರಮ್ಯವಾದ ಬ್ರಹ್ಮರೂಪವಾಗಿ ಭಾವನೆ ಮಾಡಿದರೆ, ಮಲ್ಲ(ಜಟ್ಟಿ)ನಿಂದ ಬಾಲಕನು ಗೆಲ್ಲಲ್ಪಡುವಂತೆ, ಚಿತ್ತವು ಪ್ರಯತ್ನವಿಲ್ಲದೆಯೇ ಗೆಲ್ಲಲ್ಪಡುವುದು ||೯||

ಕೇವಲ ಪುರುಷಪ್ರಯತ್ನದಿಂದಲೇ ಚಿತ್ತವು ಬೇಗನೆ ಗೆಲ್ಲಲ್ಪಡುವುದು. ಬಳಿಕ, ಚಿತ್ತರಹಿತನಾದ ಪುರುಷನು ಬ್ರಹ್ಮದಲ್ಲಿ ಸ್ಥಾನವನ್ನು ಪಡೆಯುವನು ||೧೦||

ಸ್ವಾಯತ್ತಂ ಚ ಸುಸಾಧ್ಯಂ ಚ ಸ್ವಚಿತ್ತಾಕ್ರಾನ್ತಿಮಾತ್ರಕಮ್ |
ಶಕ್ನುವನ್ತಿ ನ ಯೇ ಕರ್ತುಂ ಧಿಕ್ ತಾನ್ ಪುರುಷಜಮ್ಬುಕಾನ್ ||೧೧||
ಸ್ವಪೌರುಷೈಕಸಾಧ್ಯೇನ ಸ್ವೇಪ್ಸಿತತ್ಯಾಗರೂಪಿಣಾ |
ಮನಃಪ್ರಶಮಮಾತ್ರೇಣ ವಿನಾ ನಾಸ್ತಿ ಶುಭಾ ಗತಿಃ ||೧೨||
ಮನೋಮಾರಣಮಾತ್ರೇಣ ಸಾಧ್ಯೇನ ಸ್ವಾತ್ಮಸಂವಿದಾ |
ನಿಸ್ಸಪತ್ನಮನಾದ್ಯನ್ತಂ ಅನಿಙ್ಗನಮಿಹೋಚ್ಯತಾಮ್ ||೧೩||
ಈಪ್ಸಿತಾವೇದನಾಖ್ಯಾತ್ ತು ಮನಃಪ್ರಶಮನಾದೃತೇ |
ಗುರೂಪದೇಶಶಾಸ್ತ್ರಾರ್ಥಮನ್ತ್ರಾದ್ಯಾಯುಕ್ತಯಸ್ತೃಣಮ್ ||೧೪||
ಸರ್ವಂ ಸರ್ವಗತಂ ಶಾನ್ತಂ ಬ್ರಹ್ಮ ಸಮ್ಪದ್ಯತೇ ತದಾ |
ಅಸಙ್ಕಲ್ಪನಶಸ್ತ್ರೇಣ ಛಿನ್ನಂ ಚಿತ್ತಂ ಗತಂ ಯದಾ ||೧೫||
ಸ್ವಸಂವೇದನಸಾಧ್ಯೇಽಸ್ಮಿನ್ ಸಙ್ಕಲ್ಪಾನರ್ಥಶಾಸನೇ |
ಶಾನ್ತಾಯಾಮತ್ರ ವಪುಷಿ ಪುಂಸಃ ಕೈವ ಕದರ್ಥನಾ ||೧೬||
ನೂನಂ ದೈವಮನಾದೃತ್ಯ ಮೂಢಸಙ್ಕಲ್ಪಕಲ್ಪಿತಮ್ |
ಪುರುಷಾರ್ಥೇನ ಸಂವಿತ್ತ್ಯಾ ನಯ ಚಿತ್ತಮಚಿತ್ತತಾಮ್ ||೧೭||

ಸ್ವಾಧೀನವಾಗಿಯೂ ಸುಸಾಧ್ಯವಾಗಿಯೂ ಇರುವ ಅತ್ಯಲ್ಪವಾದ ಈ ಚಿತ್ತಜಯವನ್ನೂ ಕೂಡ ಯಾರು ಮಾಡಲಸಮರ್ಥರಾಗುವರೋ, ಅಂತಹ ಮನುಷ್ಯದೇಹಧಾರಿಗಳಾದ ಜಂಬುಕಗಳನ್ನು ಸುಡಬೇಕಲ್ಲವೆ! ||೧೧||

ಹೀಗೆ ಸ್ವಪೌರುಷಮಾತ್ರದಿಂದ ಸಾಧ್ಯವಾಗಿರುವ ಇಷ್ಟತ್ಯಾಗರೂಪವಾದ ಮನಶ್ಶಾಂತಿಯೊಂದಿದ್ದಹೊರತು, ಮನುಷ್ಯರಿಗೆ ಸದ್ಗತಿಯಿಲ್ಲವೇ ಇಲ್ಲ ||೧೨||

ಸ್ವಸ್ವರೂಪಜ್ಞಾನದಿಂದ ಸಾಧ್ಯವಾಗಿರುವ ಮನೋಲಯವೊಂದಿದ್ದರೆ, ನಿಷ್ಕಂಟಕವಾಗಿ ಅನಾದ್ಯಂತವಾಗಿ ಶಾಶ್ವತವಾಗಿರುವ ಸ್ವಾರಾಜ್ಯಸುಖವು ಇಲ್ಲಿಯೇ ಲಭಿಸಿದಂತಾಗುವುದೆಂದು ತಿಳಿಯಬೇಕು ||೧೩||

ಬಾಹ್ಯವಿಷಯಗಳ ಅಪರಿಜ್ಞಾನರೂಪವಾದ ಮನಶ್ಶಾಂತಿಯುಂಟಾಗದಿದ್ದರೆ, ಗುರೂಪದೇಶ ಶಾಸ್ತ್ರಾರ್ಥವಿಚಾರ ಮಂತ್ರಪುರಶ್ಚರಣ ಮುಂತಾದ ಸಾಧನಗಳೆಲ್ಲವೂ ತೃಣಪ್ರಾಯಗಳೇ ಸರಿ ||೧೪||

ಸಂಕಲ್ಪರಾಹಿತ್ಯವೆಂಬ ಶಸ್ತ್ರದಿಂದ ಛಿನ್ನವಾಗಿ ಚಿತ್ತವು ಯಾವಾಗ ಲಯಹೊಂದುವುದೋ, ಆಗ—ಸರ್ವಸ್ವರೂಪವಾಗಿಯೂ ಸರ್ವಗತವಾಗಿಯೂ ಶಾಂತವಾಗಿಯೂ ಇರುವ ಬ್ರಹ್ಮಪದವು ಸಾಕ್ಷಾತ್ಕಾರವಿಷಯವಾಗುವುದು ||೧೫||

ಸಂಕಲ್ಪರೂಪವಾದ ಅನರ್ಥದ ನಿಗ್ರಹವು ಸ್ವಸ್ವರೂಪಜ್ಞಾನಮಾತ್ರದಿಂದ ಸಾಧ್ಯವಾಗಿರುವಾಗ, ಈ ಶರೀರಕ್ಕೆ ಜೀವನ್ಮುಕ್ತಸ್ಥಿತಿಯುಂಟಾಗುವ ವಿಷಯದಲ್ಲಿ ಪುರುಷನಿಗೆ ಕ್ಲೇಶವೇನಿರುವುದು? ||೧೬||

ಅಯ್ಯಾ! ರಾಮ! ಅದುಕಾರಣ, ನೀನು ಮೂಢರ ಸಂಕಲ್ಪದಿಂದ ಕಲ್ಪಿತವಾಗಿರುವ ದೈವವನ್ನು ಅನಾದರಿಸಿ, ನಿನ್ನ ಜ್ಞಾನರೂಪವಾದ ಪುರುಷಕಾರದಿಂದ, ಚಿತ್ತವನ್ನು ಶೂನ್ಯಪಡಿಸು ||

ತಾಂ ಮಹಾಪದವೀಮೇತಾಂ ಕಾಮಪ್ಯಧಿಗತಂ ಚಿರಮ್ ।
ಚಿತ್ತಂ ಚಿದ್ಭಕ್ಷಿತಂ ಕೃತ್ವಾ ಚಿತಾ್ತದಪಿ ಪರೋ ಭವ ॥೧೮॥
ಭವ ಭಾವನಯಾ ಯುಕ್ತೋ ಯುಕ್ತಃ ಪರಮಯಾ ಧಿಯಾ ।
ಧಾರಯಾತ್ಮಾನಮವ್ಯಗ್ರೋ ಗ್ರಸ್ತಚಿತ್ತಂ ತತಃಪರಮ್ ॥೧೯॥
ಪರಂ ಪೌರುಷಮಾಶ್ರಿತ್ಯ ನೀತ್ವಾ ಚಿತ್ತಮಚಿತ್ತತಾಮ್ ।
ತಾಂ ಮಹಾಪದವೀಮೇಹಿ ಯತ್ರ ನಾಶೋ ನ ವಿದ್ಯತೇ ॥೨೦॥
ಸಂವೇದನವಿಪರ್ಯಾಸರೂಪಿಣೀ ಧೀರಿವಾಚಲಾ ।
ಜೇತುಮಾಶು ಮನೋ ರಾಮ ಪೌರುಷೇಣೈವ ಶಕ್ಯತೇ ॥೨೧॥
ಅನುದ್ವೇಗಃ ಶ್ರಿಯೋ ಮೂಲಂ ಅನುದ್ವೇಗಾತ್ ಪ್ರವರ್ತತೇ ।
ಜನೋ ವರ್ಮನೋಜಯೋ ಯೇನ ತ್ರಿಲೋಕವಿಜಯಸ್ತೃಣಮ್ ॥೨೨॥
ನ ಶಸ್ತ್ರದಳನೋತ್ಪಾತಪಾತಾಯಸ್ಯಾಂ ಮನಾಗಪಿ ।

ಪ್ರಥಮತಃ ಚಿತ್ತವನ್ನು ಆ ಪರಮಪದದಲ್ಲಿ ಲಯಗೊಳ್ಳಿಸಿ, ಬಳಿಕ ಆ ಚಿತ್ತವನ್ನು ಚಿತ್ತಿನಿಂದ ಬಾಧೆಪಡಿಸಿ (ಇಲ್ಲನಾಗಿಮಾಡಿ), ಅನಂತರ ಆ ಚಿತ್ತಕ್ಕಿಂತ ಪರತರನಾಗಿ ಪರಿಪೂರ್ಣರೂಪನಾಗಿರು ॥೧೮॥

ಅಯ್ಯಾ! ರಾಮ! ಪ್ರಥಮತಃ ನೀನು ಚಿನ್ಮಾತ್ರಭಾವನೆಯಿಂದ ಯುಕ್ತನಾದವನಾಗು; ಈ ಭಾವನೆ ಸ್ಥಿರವಾಗುವುದಕ್ಕಾಗಿ, ಸಾವಧಾನವಾದ ಬುದ್ಧಿಯೊಡಗೂಡಿದವನಾಗಿರು. ಅಲ್ಲಿಂದ ಮುಂದಕ್ಕೆ, ಚಿತ್ತಶೂನ್ಯವಾಗಿ ಆತ್ಮಧಾರಣೆ ಮಾಡುವವನಾಗು ॥೧೯॥

ನೀನು, ಸರ್ವೋತ್ತಮವಾದ ಪುರುಷಕಾರವನ್ನವಲಂಬಿಸಿ, ಚಿತ್ತವನ್ನು ನಾಶಹೊಂದಿಸಿ, ಕಾಲತ್ರಯದಲ್ಲಿಯೂ ನಾಶವಿಲ್ಲದ ಆ ಪರಮಪದವನ್ನು ಹೊಂದುವನಾಗು ॥೨೦॥

ದಿಗ್ಭ್ರಮೆಯುಂಟಾಗಿರುವ ಪುರುಷನು, ಪೂರ್ವದಿಕ್ಕನ್ನು ನೋಡಿ, ಇದು ಪಶ್ಚಿಮದಿಕ್ಕೆಂದು ತಿಳಿದುಕೊಳ್ಳುವನು. ಬಳಿಕ, ವಿವೇಕವುಂಟಾದವನಾಗಿ, ಪೂರ್ವದಿಕ್ಕನ್ನು ಪೂರ್ವದಿಕ್ಕೆಂದೇ ತಿಳಿದುಕೊಳ್ಳುವನು. ಇದು ಸರ್ವರಿಗೂ ಗೊತ್ತೇಇರುವುದಷ್ಟೆ! ಈ ಸಂದರ್ಭದಲ್ಲಿ, ಪ್ರಥಮತಃ ಉಂಟಾಗಿದ್ದ ವಿಪರ್ಯಾಸಜ್ಞಾನವು ವಿವೇಕಜ್ಞಾನರೂಪವಾದ ಪುರುಷಕಾರದಿಂದ ಗೆಲ್ಲಲ್ಪಡುವಂತೆ, ಪುರುಷರ ಮನಸ್ಸೂ ಪುರುಷಕಾರದಿಂದ ಸ್ವಾಧೀನಪಡಿಸಿಕೊಳ್ಳಲ್ಪಡುವುದು ॥೨೧॥

ಆದರೆ, ಈ ಮನೋನಿಗ್ರಹವು ಅತ್ಯಲ್ಪಕಾಲದಲ್ಲಿ ಆಗುವುದೆಂದು ತಿಳಿಯಬಾರದು; ಇದಕ್ಕೆ ಬಹುಕಾಲ ಬೇಕಾಗುವುದು. ಹಾಗೆ ಬಹುಕಾಲ ಪ್ರಯತ್ನಮಾಡುತಿರುವಾಗ, ಮಧ್ಯದಲ್ಲಿ ಸ್ವಲ್ಪ ಉದ್ವೇಗವುಂಟಾಗಬಹುದು. ಅಂತಹ ಉದ್ವೇಗಕ್ಕೆ ಮಾತ್ರ ಎಂದಿಗೂ ಅವಕಾಶಕೊಡಬಾರದು. ಈ ಲೋಕದಲ್ಲಿ, ಅನುದ್ವೇಗವೇ ಶ್ರೇಯಸ್ಸಿಗೆ ಮೂಲವು. ಅನುದ್ವೇಗದಿಂದಲೇ ಪುರುಷರಿಗೆ ಮನೋಜಯವುಂಟಾಗುವುದು. ಈ ಮನೋಜಯವೊಂದು ಉಂಟಾಗಿಬಿಟ್ಟರೆ, ಆಮೇಲೆ ಲೋಕತ್ರಯವನ್ನು ಗೆಲ್ಲುವುದೂಕೂಡ ತೃಣಕ್ಕೆ ಸಮಾನವಾಗುವುದು ॥೨೨॥

ಆದರೆ, ಲೌಕಿಕಸಂಪತ್ತಿಗೋಸ್ಕರ ಮಾಡುವ ಯುದ್ಧಕ್ಕೂ, ಮನೋನಿಗ್ರಹಾರ್ಥವಾದ ಯುದ್ಧಕ್ಕೂ ಬಹಳ ತಾರತಮ್ಯವುಂಟು. ಲೌಕಿಕಯುದ್ಧದಲ್ಲಿ, ಶಸ್ತ್ರಚ್ಛೇದನವೂ ಮೇಲಕ್ಕೆ ಹಾರುವುದೂ ಕೆಳಕ್ಕೆ ಬೀಳುವುದೂ ಇತ್ಯಾದಿಗಳೆಲ್ಲ ನಡೆಯಬೇಕಾಗಿರುವುವು. ಈ ಮನೋವಿ

ಸ್ವಭಾವಮಾತ್ರವ್ಯಾವೃತ್ತೌ ತಸ್ಯಾಂ ಕೈವ ಕದರ್ಥನಾ ॥೨೩॥
ಅಪಿ ಸ್ವವೇದನಾಕ್ರಾನ್ತೌ ನ ಶಕ್ತಾ ಯೇ ನರಾಧಮಾಃ ।
ಕಥಂ ವ್ಯವಹರಿಷ್ಯನ್ತಿ ವ್ಯವಹಾರದಶಾಸು ತೇ ॥೨೪॥
ಪುಮಾನ್ ಮೃತೋಽಸ್ಮಿ ಜಾತೋಽಸ್ಮಿ ಜೀವಾಮೀತಿ ಕುದೃಷ್ಟಯಃ ।
ಚೇತಸೋ ವೃತ್ತಯೋ ಭಾನ್ತಿ ಚಪಲಸ್ಯಾಸದುತ್ಥಿತಾಃ ॥೨೫॥
ನ ಕಶ್ಚನೇಹ ಮ್ರಿಯತೇ ಜಾಯತೇ ನ ಚ ಕಶ್ಚನ ।
ಸ್ವಯಂ ವೇತ್ತಿ ಮೃತಂ ಸ್ವಸ್ಯ ಲೋಕಮನ್ಯಂ ಸ್ವಕಂ ಮನಃ ॥೨೬॥
ಇತೋ ಯಾತಿ ಪರಂ ಲೋಕಂ ಸ್ಫುರತ್ಯನ್ಯತಯಾ ಮನಃ ।
ತತ್ ತಸ್ಯೈತ್ಯೇತದಾಮೋಕ್ಷಂ ಅತೋ ಮೃತಿಭಯಂ ಕುತಃ ॥೨೭॥
ಇಹಲೋಕೇನ ವಿಚರತ್ವಿಹಲೋಕೇ ಪರತ್ರ ಚ ।
ಚಿತ್ತಮಾಮೋಕ್ಷಮಾಸ್ತೇಽಸ್ಯ ರೂಪಮನ್ಯನ್ನ ವಿದ್ಯತೇ ।
ಮೃತೇ ಭ್ರಾತರಿ ಭೃತ್ಯಾದೌ ಕ್ಲೇಶಆಕ್ರಿಯತೇನೃತಃ ॥೨೮॥

ಜಯ ಯುದ್ಧದಲ್ಲಿಯಾದರೋ, ಇದೊಂದೂ ಬೇಕಾಗಿರುವುದಿಲ್ಲ. ಅದರ (ಮನಸ್ಸಿನ) ಸ್ವಭಾವವನ್ನು ಮಾತ್ರ ಬದಲುಮಾಡಿಬಿಟ್ಟರೆ ಸಾಕಾಗಿರುವುದು. ಇಂತಹ ಅಲ್ಪಕೆಲಸದಲ್ಲಿ ಏನು ತಾನೆ ಕ್ಲೇಶವಿರುವುದು? ॥೨೩॥

ಯಾವ ಪುರುಷಾಧಮರು, ತಮ್ಮ ಮನಸ್ಸನ್ನು ನಾಶಪಡಿಸಿಕೊಳ್ಳುವುದರಲ್ಲಿಯೂ ಸಮರ್ಥರಾಗದಿರುವರೋ, ಅವರು ಪ್ರಾಪಂಚಿಕವ್ಯವಹಾರಗಳಲ್ಲಿ ಹೇಗೆ ಸಮರ್ಥರಾಗುವರು? ॥೨೪॥

ನಾನು ಪುರುಷನೆಂದೂ, ನಾನು ಸಾಯುವೆನೆಂದೂ, ನಾನು ಹುಟ್ಟುವೆನೆಂದೂ, ಇತ್ಯಾದಿ ರೀತಿಯಾಗಿ ತುಚ್ಛಜ್ಞಾನರೂಪವಾದ ವೃತ್ತಿಗಳು, ಅಸತ್ಯಭೂತಗಳಾಗಿದ್ದರೂ ಹುಟ್ಟಿದುವುಗಳಂತೆ, ಚಂಚಲವಾದ ಈ ಚಿತ್ತಕ್ಕೆ ತೋರುತಿರುವುವು ॥೨೫॥

ಈ ಪ್ರಪಂಚದಲ್ಲಿ ಯಾರೊಬ್ಬನೂ ಸಾಯುವುದೂ ಇಲ್ಲ; ಯಾರೊಬ್ಬನೂ ಹುಟ್ಟುವುದೂ ಇಲ್ಲ. ಈ ಮನಸ್ಸು, ತಮ್ಮವನು ಸತ್ತನೆಂಬುದಾಗಿಯೂ, ತನ್ನದಲ್ಲದುದನ್ನು ತನ್ನದೆಂಬುದಾಗಿಯೂ ತಿಳಿದುಕೊಳ್ಳುವುದು ॥೨೬॥

ಇದಿರಲಿ; ವ್ಯವಹಾರದಶೆಯಲ್ಲಿ ವಿಚಾರಮಾಡೋಣ. ಜೀವನು ಈ ಲೋಕದಿಂದ ಮತ್ತೊಂದು ಲೋಕಕ್ಕೆ ಹೋಗುವನು. ಮನಸ್ಸು ಆಗ ಬೇರೆಯಾಗಿರುವಂತೆ ಸ್ಫುರಿಸುತಿರುವುದು. ಆದರೆ, ಅದೇ ಅವನನ್ನು ಮೋಕ್ಷದವರೆಗೂ ಅನುಸರಿಸಿಯೇ ಇರುವುದು. ಹೀಗಿರುವಾಗ, ಪ್ರಾಣಿಗಳಿಗೆ ಮರಣಭಯವೆಲ್ಲಿಯದು? ॥೨೭॥

ಈ ಜೀವನು, ಇಹಲೋಕದಲ್ಲಿ ಇಹಲೋಕವೆಂಬ ಭಾವನೆಯಿಂದಲೂ, ಪರಲೋಕದಲ್ಲಿ ಪರಲೋಕವೆಂಬ ಭಾವನೆಯಿಂದಲೂ ಚರಿಸಿಕೊಂಡಿರಲಿ. ಚಿತ್ತವಾದರೋ, ಮೋಕ್ಷಪರ್ಯಂತವೂ ಏಕವಿಧವಾಗಿಯೇ ಇರುವುದು. ಇದಕ್ಕೆ ಬೇರೆ ಮತ್ತೊಂದು ರೂಪವೆಲ್ಲಿಯೂ ಇಲ್ಲ. ಆದರೆ, ಸಹೋದರರಾಗಲಿ- ಆಳುಮೊದಲಾದವರಾಗಲಿ ಸತ್ತಾಗ—ಜನರು ಮಾಡುವ ಶೋಕವೆಲ್ಲವೂ ಕೇವಲ ಮಿಥ್ಯಾಭೂತವೇ ಸರಿ ॥೨೮॥

ತತ್ ಸ್ವಚಿತ್ತಂ ಸ್ವಚೈತನ್ಯವ್ಯಾವೃತ್ತಾತ್ಮೇತಿ ಮೇ ಮತಿಃ |
ಸತಿ ಪಥ್ಯೇ ತತೇ ಶುಭ್ರೇ ಚಿತ್ತೋಪಶಮನಾದೃತೇ ||೨೯||
ತಿರ್ಯಗೂರ್ಧ್ವಮಧಸ್ತಾಚ್ಚ ಭೂಯೋಭೂಯೋ ವಿಚಾರಿತಮ್ |
ಯಾವನ್ನಾಸ್ತಿ ಕಿಲೋಪಾಯಃ ಚಿತ್ತೋಪಶಮನಾದೃತೇ ||೩೦||
ಋತೇ ತಥ್ಯೇ ತತೇ ಶುಭ್ರೇ ಬೋಧೇ ಹೃದ್ಯುದಿತೇ ಸತಿ |
ಮನೋವಿಲಯಮಾತ್ರೇಣ ವಿಶ್ರಾನ್ತಿರುಪಜಾಯತೇ ||೩೧||
ವ್ಯಾಯತೇ ಹೃದಯಾಕಾಶೇ ಚಿತಿ ಚಿಚ್ಚಕ್ರಧಾರಯಾ |
ಮನೋ ಮಾರಯ ನಿಶ್ಶಙ್ಕಂ ತ್ವಾಂ ಪ್ರಬಧ್ನನ್ತಿ ನಾಧಯಃ ||೩೨||
ಯದಿ ರಮ್ಯಮರಮ್ಯತ್ವೇ ತ್ವಯಾ ಸಂವಿದಿತಂ ವಿದಾ |
ಛಿನ್ನಾನ್ಯೇವ ತದಙ್ಗಾನಿ ಚಿತ್ತಸ್ಯೇತಿ ಮತಿರ್ಮಮ ||೩೩||
ಅಯಂ ಸೋಽಹಮಿದಂ ತನ್ಮೇ ಏತಾವನ್ಮಾತ್ರಕಂ ಮನಃ |
ತದಭಾವನಮಾತ್ರೇಣ ದಾತ್ರೇಣೇವ ವಿಲೂಯತೇ ||೩೪||

ಸ್ವಯಂ ಸತ್ಯಭೂತವಾಗಿಯೂ ಸರ್ವಹಿತವಾಗಿಯೂ ಮಾಯಾಮಾಲಿನ್ಯಶೂನ್ಯವಾಗಿಯೂ ಶ್ರುತಿಪ್ರಮಾಣಬೋಧಿತವಾಗಿಯೂ ಇರುವ ಪರಮಾತ್ಮನಲ್ಲಿ, ಕೇವಲ ಚಿನ್ಮಾತ್ರಸ್ವರೂಪವೇ ಪರಿಶೇಷವಾಗುವುದರಿಂದ, ಶೋಕಾದಿವಿಶಿಷ್ಟವಾದ ಚಿತ್ತವು ಚೈತನ್ಯವಿಭಕ್ತರೂಪವಾದುದೆಂದು ನನಗೆ ತೋರುವುದು ||೨೯||

ಹೀಗಿರುವುದರಿಂದ, ತಿರ್ಯಕ್ಕಾ(ಅಡ್ಡಲು)ಗಿಯೂ ಊರ್ಧ್ವಲೋಕಗಳಲ್ಲಿಯೂ ಅಧೋಲೋಕಗಳಲ್ಲಿಯೂ ಮತ್ತೆಮತ್ತೆ ಹುಡುಕಿ ಎಷ್ಟು ವಿಚಾರಮಾಡಿನೋಡಿದರೂ, ಚಿತ್ತಶಾಂತಿಯಿಲ್ಲದಿದ್ದರೆ ಯಾವುದೊಂದುಪಾಯವೂ ಸುತರಾಂ ಇಲ್ಲ ||೩೦||

ಶಾಶ್ವತವಾಗಿಯೂ ಸತ್ಯವಾಗಿಯೂ ನಿರ್ಮಲವಾಗಿಯೂ ವಿಸ್ತಾರವಾಗಿಯೂ ಇರುವ ಜ್ಞಾನವು ಹೃದಯದಲ್ಲಂಕುರಿಸಲಾಗಿ, ಮನೋಲಯಮಾತ್ರದಿಂದಲೇ ಕೈವಲ್ಯವುಂಟಾಗುವುದು ||೩೧||

ಅಯ್ಯಾ! ರಾಮ! ಅತ್ಯಂತ ವಿಸ್ತೀರ್ಣವಾಗಿರುವ ಹೃದಯಾಕಾಶದಲ್ಲಿ, ಬ್ರಹ್ಮಚೈತನ್ಯದೊಳಗೆ, ಚಿಚ್ಚಕ್ರದಿಂದ ಮನಸ್ಸನ್ನು ಲಯಹೊಂದಿಸು. ಹೀಗೆ ಮಾಡಿದರೆ, ನಿನಗೆ ದುಃಖಬಂಧನವುಂಟಾಗುವುದಿಲ್ಲ ||೩೨||

ಆಪಾತತಃ ರಮಣೀಯವಾಗಿರುವ ಈ ಭೋಗ್ಯಜಾತವನ್ನು ನೀನು ವಿವೇಕದಿಂದ ಅರಮ್ಯವೆಂದು ತಿಳಿದಪಕ್ಷದಲ್ಲಿ, ಆಗ ಈ ಚಿತ್ತದ ಅಂಗಗಳೆಲ್ಲವೂ ಕತ್ತರಿಸಲ್ಪಟ್ಟಂತೆಯೇ ಆದುವೆಂದು ನಾನು ತಿಳಿಯುವೆನು ||೩೩||

'ಇವನು, ಅವನು, ನಾನು,—ಇದು, ಅದು, ನನ್ನದು' ಇತ್ಯಾದಿರೂಪವಾದ ಜ್ಞಾನವೇ ಮನಸ್ಸೆನ್ನಿಸುವುದು. ಈರೀತಿಯಾಗಿ ಭಾವನೆ ಮಾಡುವುದನ್ನು ಬಿಟ್ಟುಬಿಟ್ಟರೆ, ಆಗ ಈ ಮನಸ್ಸು ಆಯುಧದಿಂದ ಕತ್ತರಿಸಲ್ಪಟ್ಟಂತಾಗುವುದು ||೩೪||

ಛಿನ್ನಾಭ್ರಮಣ್ಡಲಂ ವ್ಯೋಮ ಯಥಾ ಶರದಿ ಧೂಯತೇ ।
ವಾತೇನಾಕಲ್ಪನೇನೈವಂ ತಥಾ ತದ್ಧೂಯತೇ ಮನಃ ॥೩೫॥
ಭವನ್ತಿ ಯತ್ರ ಶಸ್ತ್ರಾಗ್ನಿಪವನಾಸ್ತತ್ರ ಭೀರ್ಭವೇತ್ ।
ಸ್ವಾಯತ್ತೇ ಮೃದುನಿ ಸ್ವಚ್ಛೇ ಕಿಮಸಙ್ಕಲ್ಪನೇ ಭಯಮ್ ॥೩೬॥
ಇದಂ ಶ್ರೇಯ ಇದಂ ನೇತಿ ಸಿದ್ಧಮಾಬಾಲಮಕ್ಷತಮ್ ।
ಬಾಲಂ ಪುತ್ರಮಿವೋದಾರೇ ಮನಃ ಶ್ರೇಯಸಿ ಯೋಜಯೇತ್ ॥೩೭॥
ಅಕ್ಷಯ್ಯಂ ಚಾನಘಂ ಚೇತಸ್ಸಿಂಹಂ ಸಂಸೃತಿಬೃಂಹಣಮ್ ।
ಘ್ನನ್ತಿ ಯೇ ತೇ ಜಯನ್ತೀಹ ನಿರ್ವಾಣಪದದಾಯಿನಃ ॥೩೮॥
ಭೀಮಾಃ ಸಮ್ಭ್ರಮದಾಯಿನ್ಯಃ ಸಙ್ಕಲ್ಪಕಲನಾದಿಮಾಃ ।
ವಿಪದಃ ಸಮ್ಪ್ರಸೂಯನ್ತೇ ಮೃಗತೃಷ್ಣಾ ಮರಾವಿವ ॥೩೯॥
ಕಲ್ಪಾನ್ತಪವನಾವಾನ್ತು ಯಾನ್ತು ಚೈಕತ್ವಮರ್ಣವಾಃ ।
ತಪನ್ತು ದ್ವಾದಶಾದಿತ್ಯಾಃ ನಾಸ್ತಿ ನಿರ್ಮನಸಃ ಕ್ಷತಿಃ ॥೪೦॥

ಶರತ್ಕಾಲದಲ್ಲಿ ಮೋಡ ಚದರಿಹೋಗಿರುವ ಆಕಾಶವನ್ನು ವಾಯುವು ಬಿಟ್ಟುಬಿಡುವಂತೆ, ಪೂರ್ವೋಕ್ತರೀತಿಯಾಗಿ 'ಅಹಂ ಮಮ' ಇತ್ಯಾದಿ ಕಲ್ಪನಾರಾಹಿತ್ಯವು ಮನಸ್ಸನ್ನು ಬಿಟ್ಟುಬಿಡುವುದು ॥೩೫॥

ಪ್ರಪಂಚದಲ್ಲಿ, ಶಸ್ತ್ರ ಅಗ್ನಿ ವಾಯು ಮುಂತಾದುವುಗಳು ಎಲ್ಲಿರುವುವೋ, ಅಲ್ಲಿ ಭಯವುಂಟಾಗಬಹುದು ; ಸ್ವಾಧೀನವಾಗಿಯೂ ಮೃದುವಾಗಿಯೂ ನಿರ್ಮಲವಾಗಿಯೂ ಇರುವ ಅಸಂಕಲ್ಪನ (ಸಂಕಲ್ಪಮಾಡಿಕೊಳ್ಳದಿರುವಿಕೆ) ದಲ್ಲಿ ಭಯವೇನು ? ॥೩೬॥

'ಇದು ಶ್ರೇಯಸ್ಕರವು, ಇದು ಶ್ರೇಯಸ್ಕರವಲ್ಲ' ಎಂಬ ವಿಷಯವು, ಬಬ್ಬ ಬಾಲಕನವರೆಗೂ ನಿರಾಬಾಧವಾಗಿ ಪ್ರಸಿದ್ಧವಾಗಿರುವುದು. ಹೀಗಿರುವುದರಿಂದ, ಬಾಲಕನಾದ ಮಗನನ್ನೋಪಾದಿಯಲ್ಲಿ, ನಮ್ಮ ಚಿತ್ತವನ್ನು ಶ್ರೇಯಸ್ಸಿನಲ್ಲಿ ಸೇರಿಸಬೇಕು ॥೩೭॥

ಅಯ್ಯಾ ! ರಾಮ ! ಸಂಸಾರವನ್ನು ಹೆಚ್ಚಿಸುವ ಈ ಚಿತ್ತವೆಂಬುದೇ ಒಂದು ಸಿಂಹವೆಂದು ತಿಳಿ. ಇದು ಯಾರಿಂದಲೂ ನಾಶಹೊಂದಿಸಲು ಸುಖಸಾಧ್ಯವಲ್ಲ ; ಇದು ಕೇವಲ ಪ್ರೌಢವಾಗಿರುವುದು. ಇಂತಹ ಚಿತ್ತಸಿಂಹವನ್ನು ಯಾರು ಹೊಡೆಯುವರೋ, ಅವರೇ ಈ ಲೋಕದಲ್ಲಿ ಸರ್ವೋತ್ಕೃಷ್ಟರಾಗಿರುವರು ; ಅವರು ಇತರರಿಗೂ ಮೋಕ್ಷಮಾರ್ಗಪ್ರದರಾಗುವರು ॥೩೮॥

ಅತಿ ಭಯಂಕರವಾಗಿಯೂ ಮಹಾ ಸಂಭ್ರಮಪ್ರದವಾಗಿಯೂ ಇರುವ ಈ ವಿಪತ್ತುಗಳೆಲ್ಲವೂ, ಮರುಭೂಮಿಯಲ್ಲಿ ಮೃಗತೃಷ್ಣಿಕೆ ಹುಟ್ಟುವಂತೆ, ಸಂಕಲ್ಪಕಲ್ಪನೆಯಿಂದ ಹುಟ್ಟುವುವು ॥

ಆದರೆ, ಪ್ರಳಯಮಾರುತಗಳು ಯಥೇಚ್ಛವಾಗಿ ಬೀಸಲಿ ; ಸಪ್ತಸಮುದ್ರಗಳು ಏಕವಾಗಲಿ ; ದ್ವಾದಶಾದಿತ್ಯರೂ ಒಟ್ಟಾಗಿ ಜ್ವಲಿಸಲಿ. ಇಷ್ಟಾದರೂ, ನಿರ್ಮನಸ್ಕನಾಗಿರತಕ್ಕವನಿಗೆ ಯಾವ ಹಾನಿಯೂ ಇಲ್ಲ ॥೪೦॥

ಮನೋಬೀಜಾತ್ ಸಮುದ್ಯನ್ತಿ ಸುಖದುಃಖೇ ಶುಭಾಶುಭೇ ।
ಸಂಸಾರಖಣ್ಡಕಾಫಿತೇ ಲೋಕಸಪ್ತಕಪಲ್ಲವಾಃ ॥೪೧॥
ಅಸಙ್ಕಲ್ಪನಮಾತ್ರೈಕಸಾಧ್ಯೇ ಸಕಲಸಿದ್ಧಿದೇ ।
ಅಸಙ್ಕಲ್ಪನಸಾಮ್ರಾಜ್ಯೇ ತಿಷ್ಠಾವಷ್ಟಬ್ಧತತ್ಪದಃ ॥೪೨॥
ಪ್ರಯಚ್ಛತ್ಯುತ್ತಮಾನನ್ದಂ ಕ್ಷೀಯಮಾಣಂ ಮನಃ ಕ್ರಮಾತ್ ।
ಕಾಷ್ಠಕ್ಷೀಣಾಙ್ಗಕಾಙ್ಗಾರೋ ಯಥಾಙ್ಗಾರಕ್ಷಯಾರ್ಥಿನಃ ॥೪೩॥
ಅಪಿ ಬ್ರಹ್ಮಕುಟೀಲಕ್ಷಂ ಮನಸಶ್ಚೇತ್ ಸಮಾಹಿತಮ್ ।
ತದಣೋರನ್ತರೇ ವ್ಯಕ್ತಂ ವಿಭಕ್ತಂ ಪರಿದೃಶ್ಯತೇ ॥೪೪॥
ಸಙ್ಕಲ್ಪಮಾತ್ರವಿಭವೇನ ಕೃತಾತ್ಯನರ್ಥಂ
ಸಙ್ಕಲ್ಪಮಾತ್ರವಿಭವೇನ ಸುಸಾಧಿತಾರ್ಥಮ್ ।
ಸನ್ತೋಷಮಾತ್ರವಿಭವೇನ ಮನೋ ವಿಜಿತ್ಯ
ನಿತ್ಯೋದಿತೇನ ಜಯಮೇಹಿ ನಿರೀಪ್ಸಿತೇನ ॥೪೫॥

ಮನಸ್ಸೆಂಬ ಬೀಜದ ದೆಸೆಯಿಂದ ಈ ಸಂಸಾರವೆಂಬ ಅರಣ್ಯಭಾಗಗಳು ಉದಯಿಸುವುವು. ಈ ಅರಣ್ಯಗಳಿಗೆ, ಸಪ್ತಲೋಕಗಳು ಪಲ್ಲವಗಳಾಗಿಯೂ, ಸುಖದುಃಖಗಳೂ ಶುಭಾಶುಭಗಳೂ ಫಲಗಳಾಗಿಯೂ ಇರುವುವು ॥೪೧॥

ಅಯ್ಯಾ! ರಾಮ! ಮನಸ್ಸಿನಲ್ಲಿ ಸಂಕಲ್ಪಿಸಿಕೊಳ್ಳದಿರುವಿಕೆಯೇ ಒಂದು ಸಾಮ್ರಾಜ್ಯಪದವಿಯು. ಇದು ಸಂಕಲ್ಪರಾಹಿತ್ಯ ಮಾತ್ರದಿಂದಲೇ ಸಾಧ್ಯವಾದುದು; ಇದರಿಂದ ಸಕಲ ಸಿದ್ಧಿಗಳೂ ಉಂಟಾಗುವುವು. ಇಂತಹ ಸಾಮ್ರಾಜ್ಯಪದವಿಯಲ್ಲಿ, ನೀನು ಚೆನ್ನಾಗಿ ಕಾಲೂರಿ ನಿಲ್ಲುವವನಾಗು ॥೪೨॥

ಅಸಂಕಲ್ಪನಮಾತ್ರದಿಂದಲೇ ಆನಂದಾವಿರ್ಭಾವವಾಗುವುದು ಹೇಗೆಂದರೆ,—ಬೆಂಕಿಯ ಸೆಕೆಯನ್ನು ತಡೆಯಲಾರದ ಒಬ್ಬ ಪುರುಷನು, ಆ ಬೆಂಕಿಯ ಕೆಂಡದ ಹತ್ತಿರವಿರುವ ಸೌದೆಯನ್ನು ಮೆಲ್ಲಗೆ ತೆಗೆದುಬಿಡುವನಲ್ಲವೆ! ಆಗ, ಆ ಕೆಂಡವು ತನಗಾಹಾರವಿಲ್ಲದೆ ಆರಿಹೋಗುವುದಲ್ಲವೆ! ಇದರಿಂದ ಆ ಪುರುಷನಿಗೆ ಆನಂದವುಂಟಾಗುವುದಷ್ಟೆ! ಹೀಗೆ, ಅಸಂಕಲ್ಪನದಿಂದ ಮನಸ್ಸಿಗೆ ಕ್ರಮವಾಗಿ ಕ್ಷಯವುಂಟಾಗಿಬಿಡುವುದು; ಅನಂತರ ಅದೇ ಮನಸ್ಸು ಉತ್ತಮವಾದ ಆನಂದವನ್ನು ಕೊಡುವುದು ॥೪೩॥

ಈ ಮನಸ್ಸಿನ ಶಕ್ತಿಯನ್ನು ಎಷ್ಟು ಹೇಳಲಿ! ಇದಕ್ಕೆ ಒಂದುಲಕ್ಷ ಬ್ರಹ್ಮಾಂಡಗಳು ಇಷ್ಟವಾದಪಕ್ಷದಲ್ಲಿ, ಅದೆಲ್ಲವೂ—ಅಣುರೂಪವಾದ ಇದರೊಳಗೆ ಪೃಥಕ್ಪೃಥಕ್ಕಾಗಿ ಕಾಣಿಸುವುದು. ಇದು ಸ್ಪಷ್ಟವಾಗಿರುವುದು ॥೪೪॥

ಅಯ್ಯಾ! ರಾಮ! ಸಂಕಲ್ಪಮಾತ್ರವಿಭವದಿಂದಲೇ ಈ ಮನಸ್ಸು ಅನೇಕವಾದ ಅನರ್ಥಗಳನ್ನುಂಟುಮಾಡುತಿರುವುದು; ಸಂಕಲ್ಪಮಾತ್ರದಿಂದಲೇ ಸಮಸ್ತ ಇಷ್ಟಾರ್ಥಗಳನ್ನೂ ಇದು ಸಾಧಿಸುವುದು. ಇಂತಹ ಮನಸ್ಸನ್ನು, ಸಂತೋಷಮಾತ್ರ ವಿಭವದಿಂದ ಗೆದ್ದು, ನಿತ್ಯವಾಗಿ ಉದಿತವಾಗಿರುವ ನಿರಪೇಕ್ಷೆಯಿಂದ ಪ್ರಪಂಚವನ್ನೆಲ್ಲ ನೀನು ವಶಪಡಿಸಿಕೊ ॥೪೫॥

ಪರಮಪಾವನಯಾ ವಿಮನಸ್ತಯಾ
ಸಮತಯಾ ಮತಯಾತ್ಮವಿದಾಮಪಿ ।
ಶಮಿತಯಾಽಮಿತಯಾನ್ತರಹನ್ತಯಾ
ಯದವಶಿಷ್ಟಮಜಂ ಪದಮಸ್ತು ತತ್ ॥೪೬॥

ಇತಿ ಉತ್ಪತ್ತಿಪ್ರಕರಣೇ ಚಿತ್ತಚಿಕಿತ್ಸಾನಾಮ ಏಕಾದಶೋತ್ತರ
ಶತತಮಃ ಸರ್ಗಃ.

ವತ್ಸ ! ರಾಮ ! ಪ್ರಪಂಚದಲ್ಲೆಲ್ಲ ಪರಮಪಾವನವಾದುದು ಅಮನಸ್ಕಸ್ಥಿತಿಯು. ಸರ್ವತ್ರ ಸಮದೃಷ್ಟಿಯೆಂಬುದು ಸಮಸ್ತರಾದ ತತ್ವಜ್ಞಾನಿಗಳಿಗೂ ಸಮ್ಮತವಾದುದು. ಇವೆರಡೂಕೂಡ, ಅಂತರ್ಗತವಾದ ಅಪರಿಮಿತವಾಗಿರುವ ಅಹಂತೆಯನ್ನು ಶಾಂತಿಗೊಳ್ಳಿಸುವವು. ಇಂತಹ ಅಹಂತೆ ಕಳೆದನಂತರ ಯಾವ ಪರಮಪದವು ಅವಶಿಷ್ಟವಾಗುವುದೋ, ಅದು ನಿನಗೆ ಸುಖಲಭ್ಯವಾಗಲಿ॥

ಇದು ಉತ್ಪತ್ತಿಪ್ರಕರಣದಲ್ಲಿ ಚಿತ್ತಚಿಕಿತ್ಸೆಯೆಂಬ
ನೂರ ಹನ್ನೊಂದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವಾದಶೋತ್ತರ ಶತತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಯಸ್ಮಿಂಸ್ತಸ್ಮಿನ್ ಪದಾರ್ಥೇ ಹಿ ಯೇನತೇನ ಯಥಾತಥಾ ।
ತೀವ್ರಸಂವೇಗಸಮ್ಪನ್ನಂ ಮನಃ ಪಶ್ಯತಿ ವಾಞ್ಛಿತಮ್ ॥೧॥
ಜಾಯತೇ ಮ್ರಿಯತೇ ಚೈಷಾ ಮನಸಸ್ತೀವ್ರವೇಗತಾ ।
ಸೌಮ್ಯಾಮ್ಬು ಬುದ್ಬುದಾಳೀವ ನಿರ್ನಿಮಿತ್ತಾ ಸ್ವಭಾವತಃ ॥೨॥
ಶೀತತಾ ತುಹಿನಸ್ಯೇವ ಕಜ್ಜಲಸ್ಯೇವ ಕೃಷ್ಣತಾ ।
ಲೋಲತಾ ಮನಸೋ ರೂಪಂ ತೀವ್ರಾತೀವ್ರೈಕರೂಪಿಣೀ ॥೩॥

ಉತ್ಪತ್ತಿಪ್ರಕರಣದಲ್ಲಿ ನೂರಹನ್ನೆರಡನೆಯ ಸರ್ಗವು.

ಅತ್ರ ಚಿತ್ತಕ್ಷಯೋಪಾಯೋ ವಾಸನಾತ್ಯಾಗಈರ್ಯತೇ ।
ಚಿನ್ಮಾತ್ರವಾಸನಾಭ್ಯಾಸಾತ್ ತದೇಕದೃಢನಿಶ್ಚಯಾತ್ ॥

ಚಿನ್ಮಾತ್ರವಾಸನೆಯ ಅಭ್ಯಾಸದಿಂದ—ಅದೊಂದೇ ದೃಢನಿಶ್ಚಯಹೊಂದುವುದರದ್ವಾರಾ-ಪ್ರಪಂಚವಾಸನಾಪರಿತ್ಯಾಗವೇ ಚಿತ್ತಕ್ಷಯಕ್ಕೆ ಉಪಾಯವೆಂಬ ವಿಷಯವು ಈ ಸರ್ಗದಲ್ಲಿ ಹೇಳಲ್ಪಡುವುದು.

ಪುನಃ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಈ ಮನಸ್ಸು, ಯಾವ ಪದಾರ್ಥದಲ್ಲಿ ಯಾವ ಅಭಿಲಾಷೆಯಿಂದ ಯಾವ ರೀತಿಯಾಗಿ ತೀವ್ರವೇಗಸಂಪನ್ನವಾಗುವುದೋ, ಅಲ್ಲಿ ಆ ರೀತಿಯಾಗಿ ತನ್ನ ಇಷ್ಟಾರ್ಥವನ್ನು ಕಾಣುವುದು ॥೧॥

ಎಲೈ ಸೌಮ್ಯನೆ! ನೀರಿನಲ್ಲಿ ಗುಳ್ಳೆಗಳಂತೆ, ಈ ಮನಸ್ಸಿನ ತೀವ್ರವೇಗವೆಂಬುದು, ನಿರ್ನಿಮಿತ್ತವಾಗಿ ಸ್ವಭಾವತಃ ಇರುವುದು; ಇದು, ನಾವು ಉಪೇಕ್ಷಿಸಿದಾಗ ಜನಿಸುತಲೂ, ನಿರೋಧಪ್ರಯತ್ನ ಮಾಡಿದಾಗ ಶಾಂತಿಹೊಂದುತಲೂ ಇರುವುದು ॥೨॥

ಮಂಜಿಗೆ ಶೈತ್ಯವು ಹೇಗೆ ಸ್ವಭಾವಸಿದ್ಧರೂಪವಾಗಿರುವುದೋ, ಕಾಡಿಗೆಗೆ ನೈಲ್ಯವು ಹೇಗೆ ಸ್ವಭಾವಸಿದ್ಧರೂಪವಾಗಿರುವುದೋ, ಹಾಗೆ ಮನಸ್ಸಿಗೆ ಚಂಚಲತ್ವವೆಂಬುದು ಸ್ವಭಾವಸಿದ್ಧರೂಪವಾಗಿರುವುದು. ಇದು, ಒಂದು ಸಮಯದಲ್ಲಿ ತೀವ್ರವಾಗಿಯೂ, ಒಂದು ಸಮಯದಲ್ಲಿ ತೀವ್ರವಲ್ಲದೆಯೂ ಇರುವುದು ॥೩॥

ಶ್ರೀರಾಮ ಉವಾಚ.

ಕಥಮಸ್ಯಾತಿಲೋಲಸ್ಯ ವೇಗೋ ವೇಗೈಕಕಾರಣಮ್ ।
ಚಲತಾ ಮನಸೋ ಬ್ರಹ್ಮನ್ ಬಲತೋ ವಿನಿವಾರ್ಯತೇ ॥೪॥

ಶ್ರೀ ವಸಿಷ್ಠ ಉವಾಚ.

ನೇಹ ಚಞ್ಚಲತಾಹೀನಂ ಮನಃ ಕ್ವಚನ ದೃಶ್ಯತೇ ।
ಚಞ್ಚಲತ್ವಂ ಮನೋಧರ್ಮೋ ವಹ್ನೇರ್ಧರ್ಮೋ ಯಥೋಷ್ಣತಾ ॥೫॥
ಯೈಷಾ ಹಿ ಚಞ್ಚಲಾ ಸ್ಪನ್ದಶಕ್ತಿಶ್ಚಿತ್ತತ್ವಸಂಸ್ಥಿತಾ ।
ತಾಂ ವಿದ್ಧಿ ಮಾನಸೀಂ ಶಕ್ತಿಂ ಜಗದಾಡಮ್ಬರಾತ್ಮಿಕಾಮ್ ॥೬॥
ಸ್ಪನ್ದಾಸ್ಪನ್ದಾದೃತೇ ವಾಯೋಃ ಯಥಾ ಸತ್ತೈವ ನೋಹ್ಯತೇ ।
ತಥಾ ನ ಚಿತ್ತಸತ್ತಾಸ್ತಿ ಚಞ್ಚಲಾ ಸ್ಪನ್ದನಾದೃತೇ ॥೭॥
ಯತ್ ತು ಚಞ್ಚಲತಾಹೀನಂ ತನ್ಮನೋ ಮೃತಮುಚ್ಯತೇ ।
ತದೇವ ಚ ತಪಃ ಶಾಸ್ತ್ರಸಿದ್ಧಾನ್ತೋ ಮೋಕ್ಷ ಉಚ್ಯತೇ ॥೮॥
ಮನೋವಿಲಯಮಾತ್ರೇಣ ದುಃಖಶಾನ್ತಿರವಾಪ್ಯತೇ ।
ಮನೋಮನನಮಾತ್ರೇಣ ದುಃಖಂ ಪರಮವಾಪ್ಯತೇ ॥೯॥

ಶ್ರೀರಾಮನು ಪ್ರಶ್ನೆಮಾಡುವನು :—

ಎಲೈ ಬ್ರಹ್ಮರ್ಷಿವರ್ಯರೆ! ಅತಿ ಚಂಚಲವಾಗಿರುವ ಈ ಮನಸ್ಸಿನ ತೀವ್ರವೇಗಕ್ಕೆ ಮುಖ್ಯ ಕಾರಣವಾಗಿರುವ ಚಾಂಚಲ್ಯರೂಪವಾದ ವೇಗವು, ನಮ್ಮ ಪುರುಷಕಾರದಿಂದ ಹೇಗೆ ತಡೆಯಲ್ಪಡಲು ಸಾಧ್ಯವು? ॥೪॥

ಶ್ರೀ ವಸಿಷ್ಠರು ಉತ್ತರ ಹೇಳುವರು :—

ವತ್ಸ! ರಾಮ! ಈ ಪ್ರಪಂಚದಲ್ಲಿ ಚಾಂಚಲ್ಯಹೀನವಾಗಿರುವ ಮನಸ್ಸು ಎಲ್ಲಿಯೂ ಸಿಕ್ಕುವುದಿಲ್ಲ. ಅಗ್ನಿಗೆ ಉಷ್ಣತೆಯು ಹೇಗೆ ಧರ್ಮವೋ, ಹಾಗೆ ಮನಸ್ಸಿಗೆ ಚಾಂಚಲ್ಯವು ಧರ್ಮವಾಗಿರುವುದು ॥೫॥

ಜಗತ್ಕಾರಣಮಾಯಾಶಬಳವಾದ ಚೈತನ್ಯದಲ್ಲಿ ಚಂಚಲವಾದ ಯಾವ ಸ್ಪಂದಶಕ್ತಿಯಿರುವುದೋ, ಅದೇ–ಈ ಜಗದಾಡಂಬರ ರೂಪವಾದ ಮನಸ್ಸಾಗಿ ಪರಿಣಮಿಸಿರುವುದೆಂದು ನೀನು ತಿಳಿ॥

ಸ್ಪಂದ ಅಸ್ಪಂದ—ಇವುಗಳನ್ನು ಬಿಟ್ಟರೆ, ವಾಯುವಿರುವುದೆಂದು ಊಹಿಸುವುದೇ ಹೇಗೆ ಅಸಾಧ್ಯವೋ, ಹಾಗೆ-ಸ್ಪಂದವನ್ನು ಬಿಟ್ಟರೆ–ಚಂಚಲವಾದ ಈ ಚಿತ್ತದ ಸದ್ಭಾವವೇ ಇಲ್ಲವಾಗುವುದು ॥೭॥

ಚಾಂಚಲ್ಯಹೀನವಾಗಿರುವ ಮನಸ್ಸು ಯಾವುದುಂಟೋ, ಅದು ಮೃತವಾದ ಮನಸ್ಸೆಂದು ಹೇಳಲ್ಪಡುವುದು. ತಪಸ್ಸೆಂಬುದೂ ಇದೇಯೆ; ಶಾಸ್ತ್ರಸಿದ್ಧಾಂತಗಮ್ಯವಾದುದೂ ಇದೇಯೆ; ಮೋಕ್ಷವೂ ಇದೇಯೆ ॥೮॥

ಹೀಗೆ, ಮನಸ್ಸಿನ ಲಯಮಾತ್ರದಿಂದಲೇ ದುಃಖಶಾಂತಿಯು ಲಭ್ಯವಾಗುವುದು; ಮನಸ್ಸಿನ ಮನನದಿಂದ ಅಧಿಕವಾದ ದುಃಖವು ಹೊಂದಲ್ಪಡುವುದು ॥೯॥

ದುಃಖಮುತ್ಪಾದಯತ್ಯುಚ್ಚೈಃ ಉತ್ಥಿತಶ್ಚಿತ್ತರಾಕ್ಷಸಃ |
ಸುಖಾಯಾನನ್ತಭೋಗಾಯ ತಂ ಪ್ರಯತ್ನೇನ ಪಾತಯ ||೧೦||
ತಸ್ಯ ಚಞ್ಚಲತಾ ಯೈಷಾ ತ್ವವಿದ್ಯಾ ರಾಮ ಸೋಚ್ಯತೇ |
ವಾಸನಾಪದನಾಮ್ನೀಂ ತಾಂ ವಿಚಾರೇಣ ವಿನಾಶಯ ||೧೧||
ಅವಿದ್ಯಯಾ ವಾಸನಯಾ ತಯಾನಶ್ಯತಿ ಚಿತ್ತಸತ್ತಯಾ |
ವಿಲೀನಯಾ ತ್ಯಾಗವಶಾತ್ ಪರಂ ಶ್ರೇಯೋಧಿಗಮ್ಯತೇ ||೧೨||
ಯತ್ ತತ್ ಸದಸತೋರ್ಮಧ್ಯಂ ಯನ್ಮಧ್ಯಂ ಚಿತ್ತ್ವಜಾಡ್ಯಯೋಃ |
ತನ್ಮನಃ ಪ್ರೋಚ್ಯತೇ ರಾಮ ದ್ವಯೋರ್ದೋಳಾಯಿತಾಕೃತಿ ||೧೩||
ಜಾಡ್ಯಾನುಸನ್ಧಾನಹತಂ ಜಾಡ್ಯಾತ್ಮಕತಯೋದ್ಧಯಾ |
ಚೇತೋ ಜಡತ್ವಮಾಯಾತಿ ದೃಢಾಭ್ಯಾಸವಶೇನ ಹಿ ||೧೪||
ವಿವೇಕೈಕಾನುಸನ್ಧಾನಾತ್ ಚಿದಂಶಾತ್ಮತಯಾ ಮನಃ |
ಚಿದೇಕತಾಮುಪಾಯಾತಿ ದೃಢಾಭ್ಯಾಸವಶಾದಿಹ ||೧೫||

ಅಯ್ಯಾ! ರಾಮ! ಈ ಚಿತ್ತವೆಂಬ ರಾಕ್ಷಸನು, ಸ್ವಯಂ ಉತ್ಥಿತನಾಗಿ (ಎದ್ದು-ವಿಕ್ಷಿಪ್ತವಾಗಿ) ಅಧಿಕವಾದ ದುಃಖವನ್ನುಂಟುಮಾಡುವನು. ಅದುಕಾರಣ, ಅಪರಿಮಿತವಾದ ಶಾಶ್ವತ ಸುಖವನ್ನು ಪಡೆಯುವುದಕ್ಕೋಸ್ಕರ, ಪ್ರಯತ್ನಪೂರ್ವಕವಾಗಿ ಆ ಚಿತ್ತವೆಂಬ ರಾಕ್ಷಸನನ್ನು ನೀನು ಕೊಂದುಬಿಡು ||೧೦||

ಅಯ್ಯಾ! ರಾಮ! ಈ ಮನಸ್ಸಿನ ಚಾಂಚಲ್ಯವಾವುದುಂಟೋ, ಅದೇ ಅವಿದ್ಯೆಯೆನ್ನಿಸಲ್ಪಡುವುದು; ಇದಕ್ಕೆ ವಾಸನೆಯೆಂದೂ ಹೆಸರು. ಇದನ್ನು ವಿಚಾರದಿಂದ ನೀನು ನಾಶಪಡಿಸು||೧೧||

ಹೀಗೆ ಅವಿದ್ಯೆಯೆಂದೂ ವಾಸನೆಯೆಂದೂ ಹೇಳಲ್ಪಡುವ ಚಿತ್ತಸತ್ತೆಯು, ಬಾಹ್ಯವಿಷಯಗಳನ್ನು ಅನುಸಂಧಾನಮಾಡಿಕೊಳ್ಳದಿದ್ದರೆ ಲಯಹೊಂದಿಬಿಡುವುದು. ಬಳಿಕ, ಇದರಿಂದಲೇ ಉತ್ತಮವಾದ ಶ್ರೇಯಸ್ಸು ಹೊಂದಲ್ಪಡುವುದು ||೧೨||

ಸತ್ತಿಗೂ ಅಸತ್ತಿಗೂ ಮಧ್ಯವಾಗಿರುವುದಾವುದುಂಟೋ, ಚಿತ್ತ್ವಕ್ಕೂ ಜಡತ್ವಕ್ಕೂ ಯಾವುದು ಮಧ್ಯವಾಗಿರುವುದೋ, ಇದಕ್ಕೇ ಮನಸ್ಸೆಂದು ಹೆಸರು. ಅಯ್ಯಾ! ರಾಮ! ಈ ಮನಸ್ಸು ಇವೆರಡಕ್ಕೂ ಮಧ್ಯದಲ್ಲಿ ಡೋಲಾಯಮಾನವಾಗಿರುವುದು. ಇದನ್ನು, ಸತ್ತೆಂದಾಗಲಿ-ಅಥವಾ ಅಸತ್ತೆಂದಾಗಲಿ ಹೇಳಲಾಗುವುದಿಲ್ಲ. ಹಾಗೆಯೇ ಚಿತ್ತೆಂದಾಗಲಿ-ಜಡವೆಂದಾಗಲಿ-ಹೇಳಲಾಗುವುದಿಲ್ಲ ||೧೩||

ಈ ಚೇತಸ್ಸು, ಯಾವಾಗ ಜಡತ್ವವನ್ನು ಅನುಸಂಧಾನಮಾಡಿಕೊಳ್ಳುವುದೋ, ಆಗ ಇದಕ್ಕೆ ಜಡಾತ್ಮಕತ್ವವೇ ಚೆನ್ನಾಗಿ ಉದ್ದೀಪ್ತವಾಗುವುದು. ಬಳಿಕ, ಈ ಜಡತ್ವದ ಅಭ್ಯಾಸಾತಿಶಯ ಬಲದಿಂದ, ಚಿತ್ತವು ಜಡವೇ ಆಗಿಬಿಡುವುದು ||೧೪||

ಅದಲ್ಲದೆ, ವಿವೇಕದಿಂದ ಚಿದ್ಭಾವವನ್ನು ಅನುಸಂಧಾನಮಾಡಿದರೆ, ಆಗ ಇದಕ್ಕೆ ಚಿತ್ವವೇ ಉದ್ದೀಪಿತವಾಗುವುದು. ಬಳಿಕ, ದೃಢತರಾಭ್ಯಾಸಬಲದಿಂದ ಮನಸ್ಸು ಚಿತ್ತಿನಲ್ಲಿಯೇ ಐಕ್ಯವನ್ನು ಹೊಂದುವುದು ||೧೫||

ಪೌರುಷೇಣ ಪ್ರಯತ್ನೇನ ಯಸ್ಮಿನ್ನೇವ ಪದೇ ಮನಃ ।
ಪಾತ್ಯತೇ ತತ್ ಪದಂ ಪ್ರಾಪ್ಯ ಭವತ್ಯಭ್ಯಾಸತೋ ಹಿ ತತ್ ॥೧೬॥
ಪುನಃ ಪೌರುಷಮಾಶ್ರಿತ್ಯ ಚಿತ್ತಮಾಕ್ರಮ್ಯ ಚೇತಸಾ ।
ವಿಶೋಕಂ ಪದಮಾಶ್ರಿತ್ಯ ನಿರಾಶಙ್ಕಃ ಸ್ಥಿರೋ ಭವ ॥೧೭॥
ಭವಭಾವನಯಾ ಮಗ್ನಂ ಮನಸೈವ ನ ಚೇನ್ಮನಃ ।
ಬಲಾದುತ್ತಾರ್ಯತೇ ರಾಮ ತದುಪಾಯೋಽಸ್ತಿ ನೇತರಃ ॥೧೮॥
ಮನ ಏವ ಸಮರ್ಥಂ ವೋ ಮನಸೋ ದೃಢನಿಗ್ರಹೇ ।
ಅರಾಜಾ ಕಃ ಸಮರ್ಥಃ ಸ್ಯಾತ್ ರಾಜ್ಞೋ ರಾಘವ ನಿಗ್ರಹೇ ॥೧೯॥
ತೃಷ್ಣಾಗ್ರಾಹಗೃಹೀತಾನಾಂ ಸಂಸಾರಾರ್ಣವರಂಹಸಿ ।
ಆವರ್ತೈರುಹ್ಯಮಾನಾನಾಂ ದೂರೇ ಸ್ವಂ ಮನ ಏವ ನೌಃ ॥೨೦॥
ಮನಸೈವ ಮನಶ್ಛಿತ್ತ್ವಾ ಪಾಶಂ ಪರಮಬನ್ಧನಮ್ ।
ಉನ್ಮೋಚಿತೋ ನ ಯೇನಾತ್ಮಾ ನಾಸಾವನ್ಯೇನ ಮೋಕ್ಷ್ಯತೇ ॥೨೧॥
ಯಾಯೋದೇತಿ ಮನೋನಾಮ್ನೀ ವಾಸನಾ ವಾಸಿತಾನ್ತರಾ ।
ತಾಂತಾಂ ಪರಿಹರೇತ್ ಪ್ರಾಜ್ಞಃ ತತೋಽವಿದ್ಯಾಕ್ಷಯೋ ಭವೇತ್ ॥೨೨॥

ಈ ಮನಸ್ಸು, ನಮ್ಮ ಪುರುಷಕಾರದಿಂದ ಯಾವ ಸ್ಥಳದಲ್ಲಿ ಕೆಡವಲ್ಪಡುತ್ತದೆಯೋ, ಆ ಸ್ಥಿತಿಯನ್ನು ಹೊಂದಿ, ಅಭ್ಯಾಸವಶದಿಂದ ಕೊನೆಗೆ ಅದೇ ಆಗಿಬಿಡುವುದು ॥೧೬॥

ಆದುಕಾರಣ, ಅಯ್ಯಾ ರಾಮ! ನೀನು ಮತ್ತೆ ಸಂಪೂರ್ಣವಾಗಿ ಪುರುಷಕಾರವನ್ನಾಶ್ರಯಿಸಿ, ಚಿತ್ತದಿಂದಲೇ ಚಿತ್ತವನ್ನಾಕ್ರಮಿಸಿಕೊಂಡು, ಶೋಕರಹಿತವಾದ ಪದವಿಯನ್ನಾಶ್ರಯಿಸಿ, ನಿರಾಶಂಕನಾಗಿ ಸ್ಥಿರನಾಗಿರು ॥೧೭॥

ಅಯ್ಯಾ! ರಾಮ! ಸಂಸಾರಭಾವನೆಯಿಂದ ಮುಣುಗಿಹೋಗಿರುವ ಮನಸ್ಸು, ಬಲಾತ್ಕಾರವಾಗಿ ಮನಸ್ಸಿನಿಂದಲೇ ಎತ್ತಲ್ಪಡದಿದ್ದರೆ, ಬಳಿಕ ಈ ಮನಸ್ಸನ್ನೆತ್ತುವುದಕ್ಕೆ ಬೇರೆಯಾದ ಉಪಾಯವೇ ಇಲ್ಲ ॥೧೮॥

ನಿಮ್ಮ ಮನಸ್ಸನ್ನು ದೃಢವಾಗಿ ನಿಗ್ರಹಿಸುವುದರಲ್ಲಿ, ನಿಮ್ಮ ಮನಸ್ಸೇ ಸಮರ್ಥವಲ್ಲದೆ, ಮತ್ತಾವುದೂ ಆಗಲಾರದು. ಅಯ್ಯಾ! ರಾಘವ! ದೊರೆಯನ್ನು ನಿಗ್ರಹಿಸುವುದರಲ್ಲಿ, ದೊರೆಯಲ್ಲದವನು ಯಾವನುತಾನೆ ಸಮರ್ಥನಾಗುವನು? ॥೧೯॥

ಸಂಸಾರವೆಂಬ ಸಮುದ್ರವೇಗದಲ್ಲಿ, ಪುತ್ರದಾರಾದಿಗಳೆಂಬ ಆವರ್ತ(ಸುಳಿ)ಗಳಿಂದ ದೂರವಾಗಿ ಹೊತ್ತುಕೊಂಡು ಹೋಗಲ್ಪಟ್ಟು, ಮಧ್ಯದಲ್ಲಿ ತೃಷ್ಣೆಯೆಂಬ ಮೊಸಳೆಯಿಂದ ಹಿಡಿಯಲ್ಪಟ್ಟವರಿಗೆ, ಸ್ವಕೀಯವಾದ ಮನಸ್ಸೇ ತೆಪ್ಪವಾಗಬೇಕು ॥೨೦॥

ಯಾವ ಪುರುಷನು, ತನ್ನನ್ನು ಚೆನ್ನಾಗಿ ಕಟ್ಟಿಹಾಕಿರುವ ಮನಸ್ಸೆಂಬ ಪಾಶವನ್ನು ಮನಸ್ಸೆಂಬ ಕತ್ತಿಯಿಂದಲೇ ಕತ್ತರಿಸಿ ತನ್ನನ್ನು ಬಿಡಿಸಿಕೊಳ್ಳುವುದಿಲ್ಲವೋ, ಅಂತವನನ್ನು ಬಿಡಿಸತಕ್ಕವರು ಮತ್ತಾರೂ ಇರುವುದಿಲ್ಲ ॥೨೧॥

ಅಂತರವನ್ನು ವಾಸನೆಪಡಿಸುತ-ಮನಸ್ಸೆಂಬ ಯಾವಯಾವ ವಾಸನೆಯುದಯಿಸುವುದೋ, ಅದದನ್ನು ಪ್ರಾಜ್ಞನಾದವನು ಪರಿಹರಿಸುತ ಬರಬೇಕು. ಹೀಗೆ ಮಾಡಿದರೆ, ಬಳಿಕ ಅವಿದ್ಯಾನಾಶವಾಗುವುದು ॥೨೨॥

ಭೋಗೌಘವಾಸನಾಂ ತ್ಯಕ್ತ್ವಾ ತ್ಯಜ ತ್ವಂ ಭೇದವಾಸನಾಮ್ |
ಭಾವಾಭಾವೌ ತತಸ್ತ್ಯಕ್ತ್ವಾ ನಿರ್ವಿಕಲ್ಪಃ ಸುಖೀ ಭವ ||೨೩||
ಅಭಾವನಂ ಭಾವನಾಯಾಸ್ತ್ವೇತಾವಾನ್ ವಾಸನಾಕ್ಷಯಃ |
ಏಷಏವ ಮನೋನಾಶಸ್ತ್ವವಿದ್ಯಾನಾಶಉಚ್ಯತೇ ||೨೪||
ಯದ್ಯತ್ ಸಂವೇದ್ಯತೇ ಕಿಞ್ಚಿತ್ ತತಾ೯ಸಂವೇದನಂ ಪರಮ್ |
ಅಸಂವಿತ್ತಿಸ್ತು ನಿರ್ವಾಣಂ ದುಃಖಂ ಸಂವೇದನಾದ್ಭವೇತ್ ||೨೫||
ಸ್ವೇನೈವ ತತ್ ಪ್ರಯತ್ನೇನ ಪುಂಸಃ ಸಂವೇದ್ಯತೇ ಕ್ಷಣಾತ್ |
ಭಾವಸ್ಯಾಭಾವನಂ ಭೂತ್ಯೈ ತತ್ ತಸ್ಮಾನ್ನಿತ್ಯಮಾಹರೇತ್ ||೨೬||
ರಾಗಾದಯೋ ಯೇ ಮನಸೀಪ್ಸಿತಾಸ್ತೇ
ಬುದ್ಧ್ವೇಹ ತಾಂಸ್ತಾಂಸ್ತ್ವಮವಸ್ತುಭೂತಾನ್ |
ತ್ಯಕ್ತ್ವಾ ತದಾಸ್ಯಾಙ್ಕುರಮಸ್ತಬೀಜಂ
ಮಾ ಹರ್ಷಶೋಕಂ ಸಮುಪೈಹಿ ತೃಪ್ತಃ ||೨೭||

ಇತಿ ಉತ್ಪತ್ತಿಪ್ರಕರಣೇ ಮುಖರವೇಣೋಪದೇಶಾಂಶಕಥನಂ ನಾಮ
ದ್ವಾದಶೋತ್ತರ ಶತತಮಃ ಸರ್ಗಃ.

ಅಯ್ಯಾ! ರಾಮ! ನೀನು, ಪ್ರಥಮತಃ ಈ ಪ್ರಾಪಂಚಿಕಭೋಗಗಳ ವಾಸನೆಯನ್ನು ಬಿಟ್ಟುಬಿಡು; ಬಳಿಕ, ಭೇದವಾಸನೆಯನ್ನು ಬಿಟ್ಟುಬಿಡು; ಅನಂತರ, ಚಿತ್ತಚೇತ್ಯವಾಸನೆಯನ್ನು ಬಿಟ್ಟುಬಿಡು. ಆಮೇಲೆ, ತತ್ವಸಾಕ್ಷಾತ್ಕಾರಕ್ಕೋಸ್ಕರವಾಗಿ, ಅವಿದ್ಯಾವರಣವನ್ನು ಬಿಟ್ಟುಬಿಟ್ಟು, ನಿರ್ವಿಕಲ್ಪನಾಗಿ ಸುಖಿಯಾಗಿರು. ಇದಿಷ್ಟೇ ವಾಸನಾಕ್ಷಯವೆಂಬುದು. ಈ ಮನೋನಾಶವೇ ಅವಿದ್ಯಾನಾಶವೆಂದೂ ಹೇಳಲ್ಪಡುವುದು ||೨೩-೨೪||

ಯಾವಯಾವುದು ನಮ್ಮ ಮನಸ್ಸಿಗೆ ಗೋಚರವಾಗುತ ಬರುತದೆಯೋ, ಅದದನ್ನು ತಿಳಿದುಕೊಳ್ಳದೆ ಬಿಟ್ಟುಬಿಡುವುದೇ ಉತ್ತಮವು. ಹೀಗೆ ಅಜ್ಞಾನವೇ ಮೋಕ್ಷವೆನ್ನಿಸುವುದು; ಜ್ಞಾನದಿಂದ ದುಃಖವುದಯಿಸುವುದು ||೨೫||

ಆದುಕಾರಣ, ಪುರುಷನಿಗೆ ಸ್ವಪ್ರಯತ್ನದಿಂದಲೇ ವೇದ್ಯಜ್ಞಾನವುಂಟಾಗುವುದು; ಈ ವೇದ್ಯವನ್ನು ಭಾವನೆಮಾಡದಿರುವಿಕೆಯೇ ನಿಶ್ರೇಯಸಪ್ರದವಾಗುವುದು. ಹೀಗಿರುವುದರಿಂದ, ನಿತ್ಯವೂ ಸ್ವಪ್ರಯತ್ನವನ್ನು ಅಭ್ಯಸಿಸಬೇಕು ||೨೬||

ಅಯ್ಯಾ! ರಾಮ! ನಿನ್ನ ಮನಸ್ಸಿಗೆ ಯಾವಯಾವ ರಾಗಾದಿಗಳು ಇಷ್ಟವಾಗುವುವೋ, ಅವುಗಳನ್ನೆಲ್ಲ ಅಸತ್ಯಭೂತಗಳೆಂದು ತಿಳಿಯುವನಾಗು; ಬಳಿಕ, ಈ ರಾಗಾದಿಗಳು ಅಂಕುರಿಸುವುದಕ್ಕೆ ಆಶ್ರಯಭೂತವಾದ ಮನಸ್ಸನ್ನೂ ಸಬೀಜವಾಗಿ ಪರಿಹರಿಸಿ ಸರ್ವದಾ ತೃಪ್ತನಾಗಿರುತ, ಹರ್ಷ ವಿಷಾದಗಳನ್ನು ಹೊಂದದವನಾಗಿರು ||೨೭||

ಇದು ಉತ್ಪತ್ತಿಪ್ರಕರಣದಲ್ಲಿ ಉಪದೇಶಾಂಶಕಥನವೆಂಬ
ನೂರಹನ್ನೆರಡನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ತ್ರಯೋದಶೋತ್ತರಶತತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಏಷಾ ಹಿ ವಾಸನಾ ನಿತ್ಯಂ ಅಸತ್ಯೈವ ಯದುತ್ಥಿತಾ |
ದ್ವಿಚನ್ದ್ರಭ್ರಾನ್ತಿವತ್ ತೇನ ತ್ಯಕ್ತುಂ ರಾಘವ ಯುಜ್ಯತೇ ||೧||
ಅವಿದ್ಯಾ ವಿದ್ಯಮಾನೇವ ನಷ್ಟಪ್ರಜ್ಞೇಷು ವಿದ್ಯತೇ |
ನಾಮ್ನೈವಾಙ್ಗೀಕೃತಾಽಭಾವಾತ್ ಸಮ್ಯಕ್ಪ್ರಜ್ಞೇಷು ಸಾ ಕುತಃ ||೨||
ಮಾ ಭವಾಜ್ಞೋ ಭವ ಪ್ರಾಜ್ಞಃ ಸಮ್ಯಗ್ರಾಮ ವಿಚಾರಯ |
ನಾಸ್ತ್ಯೇವೇನ್ದುರ್ದ್ವಿತೀಯಃ ಖೇ ಭ್ರಾನ್ತ್ಯಾ ಸಂಲಕ್ಷ್ಯತೇ ಮುಧಾ ||೩||
ನಾತ್ರ ತತ್ತ್ವಾದೃತೇ ಕಿಞ್ಚಿತ್ ವಿದ್ಯತೇ ವಸ್ತ್ವವಸ್ತು ಚ |
ಊರ್ಮಿಮಾಲಿನಿ ವಿಸ್ತೀರ್ಣೇ ವಾರಿಪೂರಾದೃತೇ ಯಥಾ ||೪||

ಉತ್ಪತ್ತಿಪ್ರಕರಣದಲ್ಲಿ ನೂರಹದಿಮೂರನೆಯ ಸರ್ಗನು.

ಸರ್ವದುರ್ವಾಸನೋಚ್ಛೇದೀ ವಿಚಾರೈರ್ವಿವಿಧೈರ್ಭೃತಃ |
ದ್ವೈತಮಿಥ್ಯಾತ್ವಧೀರೂಢಃ ತತ್ತ್ವಬೋಧೋತ್ರ ವರ್ಣ್ಯತೇ ||

ಸಮಸ್ತ ದುರ್ವಾಸನೆಗಳನ್ನೂ ಛೇದಿಸತಕ್ಕುದಾಗಿಯೂ, ನಾನಾವಿಧ ವಿಚಾರಗಳಿಂದ ಭರಿತವಾಗಿಯೂ ದ್ವೈತಮಿಥ್ಯಾತ್ವಜ್ಞಾನರೂಢವಾಗಿಯೂ ಇರುವ ತತ್ವಬೋಧವು, ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸುವರು :—

ಅಯ್ಯಾ ರಾಘವ! ಇನ್ನೂ ಕೇಳುವವನಾಗು,—ಈ ವಾಸನೆಯು, ಆಕಾಶದಲ್ಲಿ ಎರಡು ಚಂದ್ರಮಂಡಲಗಳಿರುವುವೆಂಬ ಭ್ರಾಂತಿಯುದಯಿಸುವಂತೆ, ಅಸತ್ಯವಾಗಿಯೇ ಉದಯಿಸುವುದು; ಆದುಕಾರಣ, ಇದರ ಪರಿತ್ಯಾಗವೂ ಕೇವಲ ಸುಕರವೆಂದು ತಿಳಿಯಬೇಕು ||೧||

ಈ ಅವಿದ್ಯೆಯು, ವಿವೇಕಹೀನರಾದವರಲ್ಲಿ ಪರಮಾರ್ಥ ಸತ್ಯಭೂತವಾಗಿರುವಂತೆ ತೋರುವುದು. ವಿವೇಕಯುಕ್ತರಾದವರಲ್ಲಿಯಾದರೋ, ಅದು ಸುತರಾಂ ಇಲ್ಲದಿರುವುದರಿಂದ ವಂಧ್ಯಾಪುತ್ರಾದಿಗಳಂತೆ ಕೇವಲ ಶಬ್ದಮಾತ್ರ ಗೋಚರವಾಗಿರುವುದು. ಹೀಗಿರುವಾಗ, ಅದು ಸತ್ಯವಾಗಿರುವ ಬಗೆಯಾವುದು? ||೨||

ಆದುಕಾರಣ, ಅಯ್ಯಾ! ರಾಮ! ನೀನೆಂದಿಗೂ ಅಜ್ಞನಾಗಬೇಡ; ಪ್ರಾಜ್ಞನಾಗಿರು. ಅಂತರಿಕ್ಷದಲ್ಲಿ, ಒಂದೇ ಚಂದ್ರಬಿಂಬವಿರುವುದಲ್ಲದೆ, ಎರಡನೆಯದೆಂದಿಗೂ ಇಲ್ಲವೇಇಲ್ಲವಷ್ಟೆ! ನಮ್ಮ ಭ್ರಾಂತಿಯಿಂದ ಆರೀತಿಯಾಗಿ ವೃಥಾ ಕಾಣಿಸುತ್ತಿರುವುದು ||೩||

ಅಪಾರವಾದ ಸಮುದ್ರದಲ್ಲಿ ಜಲಸಮುದಾಯವನ್ನು ಬಿಟ್ಟು ಇತರವಾದ ತರಂಗಾದಿಗಳೆಂಬ ಪೃಥಕ್ಪದಾರ್ಥವೊಂದೂ ಸತ್ಯವಾಗಿಲ್ಲದಿರುವಂತೆ, ಈ ಪ್ರಪಂಚದಲ್ಲಿ ಆ ಪರತತ್ವವನ್ನು ಬಿಟ್ಟು—ಸತ್ಯವಾಗಲಿ ಅಸತ್ಯವಾಗಲಿ ಪದಾರ್ಥಾಂತರವಾವುದೂ ಸತ್ಯವಾಗಿಲ್ಲ ||೪||

ಸ್ವವಿಕಲ್ಪಾದೃತೇ ನೈತಾನ್ ಭಾವಾಭಾವಾನಸನ್ಮಯಾನ್ ।
ನಿತ್ಯೇಽಸಿತೇ ತತೇ ಶುದ್ಧೇ ಮಾ ಸಮಾರೋಪಯಾತ್ಮನಿ ॥೫॥
ನಾಸಿ ಕರ್ತಾ ಕಿಮೇತಾಸು ಕ್ರಿಯಾಸು ಮಮತಾ ತವ ।
ಏಕಸ್ಮಿನ್ ವಿದ್ಯಮಾನೇ ಹಿ ಕಿಂ ಕೇನ ಕ್ರಿಯತೇ ಕಥಮ್ ॥೬॥
ಮಾಽಕರ್ತಾಭವ ಪ್ರಾಜ್ಞ ಕಿಮಕರ್ತೃತಯೇಹಿತೇ ।
ಸಾಧ್ಯಂ ಸಾಧ್ಯಮುಪಾದೇಯಂ ತಸ್ಮಾತ್ ಸ್ವಸ್ಥೋ ಭವಾನಘ ॥೭॥
ಕರ್ತಾ ಸಂಸ್ತ್ವಮಸಕ್ತತ್ವಾತ್ ಭಾವಾಭಾವೇ ರಘೂದ್ವಹ ।
ಅಸಕ್ತತ್ವಾದಕರ್ತಾಪಿ ಕರ್ತೃವತ್ ಸ್ಪನ್ದನಂ ಕುತಃ ॥೮॥
ಸತ್ಯಂ ಸ್ಯಾಚ್ಛೇದುಪಾದೇಯಂ ಮಿಥ್ಯಾಸ್ಯಾದ್ಧೇಯಮೇವಚೇತ್ ।
ಉಪಾದೇಯೈಕಸಕ್ತತ್ವಾತ್ ಯುಕ್ತಾ ಸಕ್ತಿರ್ಹಿ ಕರ್ಮಣಿ ॥೯॥

ಅದುಕಾರಣ, ನಿತ್ಯವಾಗಿಯೂ ದೇಹಾದಿಬಂಧಶೂನ್ಯವಾಗಿಯೂ ಸರ್ವವ್ಯಾಪಿಯಾಗಿಯೂ ಶುದ್ಧವಾಗಿಯೂ ಇರುವ ಪರಬ್ರಹ್ಮನಲ್ಲಿ ಸ್ವವಿಕಲ್ಪವನ್ನು ಬಿಟ್ಟು ಇತರವಾದ ಸತ್ಯಾಸತ್ಯಪದಾರ್ಥವಾವುದನ್ನೂ ನೀರು ಆರೋಪಿಸಬೇಡ ॥೫॥

ಬಂಧವೆಂಬುದು ಕರ್ತೃತ್ವಮೂಲಕವಾದುದಲ್ಲವೆ! ವಸ್ತುತಃ ನೀನು ಯಾವುದಕ್ಕೂ ಕರ್ತೃವೇ ಅಲ್ಲದಿರುವೆ. ಹೀಗಿರುವಾಗ, ಈ ಕ್ರಿಯೆಗಳಲ್ಲಿ ನಿನಗೆ ಮಮತ್ವವೇಕೆ? ಒಂದೇಒಂದು ಪದಾರ್ಥವಿರುವಾಗ, ಯಾವುದನ್ನು ಯಾವುದು ಹೇಗೆ ಮಾಡುವುದು? ಮಾಡುವುದೂ, ಮಾಡಲ್ಪಡುವುದೂ, ಇತ್ಯಾದಿ ವ್ಯವಹಾರಗಳೆಲ್ಲವೂ ಕೇವಲ ಕಲ್ಪಿತಗಳೇಸರಿ ॥೬॥

ಎಲೈ ಪ್ರಾಜ್ಞನಾದ ರಾಮನೆ! ನಾನು ಕರ್ತೃವಲ್ಲವೆಂಬ ಭಾವನೆಯನ್ನೂ ನೀನು ಬಿಟ್ಟುಬಿಡು. ಅಕರ್ತೃತ್ವದಿಂದ ಅಭಿಮಾನವನ್ನು ಮಾಡಿದಮಾತ್ರದಿಂದಲೇ, ನಮಗೆ ಪ್ರಾಪ್ಯವಾಗಿಯೂ ನಮ್ಮ ಯತ್ನದಿಂದ ಸಾಧ್ಯವಾಗಿಯೂ ಇರುವ ಯಾವ ಫಲವು ಲಭಿಸುವುದು? ॥೭॥

ಅಯ್ಯಾ ರಘುಶ್ರೇಷ್ಠ! ಯಾವಾಗ ಅಭಿಮಾನವಿಲ್ಲವಾಗುವುದೋ, ಆಗ ಅದರಲ್ಲಿ ಸಂಬಂಧವೂ ಇಲ್ಲವಾಗುವುದಲ್ಲವೆ! ಹೀಗೆ ಅಭಿಮಾನರಾಹಿತ್ಯವಾದನಂತರ ಕರ್ತೃತ್ವದಲ್ಲಿ ಆಸಕ್ತಿಶೂನ್ಯನಾದ ನೀನು ಕರ್ತೃವಲ್ಲದವನೇ ಆಗುವೆ. ಈರೀತಿಯಾಗಿ ಅಕರ್ತೃವಾಗಿದ್ದರೂ, ಅಕರ್ತೃತ್ವದಲ್ಲಿಯೂ ಅಭಿಮಾನಶೂನ್ಯನಾಗಿರುವಕಾರಣ, ಅದರಲ್ಲಿಯೂ ಸಂಬಂಧಶೂನ್ಯನಾಗಿ ಕರ್ತೃವಾಗುವೆ. ಆದರೆ, ನೀನು ಅಜ್ಞನಂತೆ ಕರ್ತೃವಾಗುವೆಯೆಂದು ತಿಳಿಯಬೇಡ. ಸ್ಪಂದಶೂನ್ಯವಾದ ಆತ್ಮತತ್ವವನ್ನು ತಿಳಿದಿರುವ ನಿನಗೆ, ದೇಹಾದಿಸ್ಪಂದವನ್ನು ನೋಡಿ ಆತ್ಮಸ್ಪಂದವೆಂದು ಭ್ರಮಿಸುವ ಅಜ್ಞಾನಿಯಾದವನಿಗಿರುವಂತಹ ಕರ್ತೃತ್ವವೆಲ್ಲಿ ಬಂದೀತು? ॥೮॥

ಅಯ್ಯಾ! ರಾಮ! ಈಗ ನಿನಗೆ ಇನ್ನೂ ಒಂದು ವಿಧವಾದ ನ್ಯಾಯವನ್ನು ತೋರಿಸುವೆನು. ಕರ್ಮಫಲವೆಂಬುದು ಸತ್ಯವಾಗಿದ್ದರಲ್ಲವೆ ಅದು ನಮಗೆ ಉಪಾದೇಯವಾಗುವುದು! ಅದು ಅಸತ್ಯವಾಗಿನ್ದುಬಿಟ್ಟರೆ, ಅದು ನಮಗೆ ಎಂದಿಗೂ ಪರಿತ್ಯಾಜ್ಯವೇ ಅಲ್ಲವೆ! ಉಪಾದೇಯವೊಂದರಲ್ಲಿಯೇ ಮುಖ್ಯದೃಷ್ಟಿಯಿರುವಾಗ, ಕರ್ಮದಲ್ಲಿ ಸಂಬಂಧವು ಯುಕ್ತವಾಗಬಹುದು. ಕರ್ಮಫಲವೇ ಅಸತ್ಯವಾಗಿರುವಾಗ, ಕರ್ಮದಲ್ಲಿ ಆಸಕ್ತಿ(ಸಂಬಂಧ)ಯೇ ಅಯುಕ್ತವಾಗಿ ತೋರುವುದಲ್ಲವೆ! ॥

ಯತ್ರೇನ್ದ್ರಜಾಲಮಖಿಲಂ ಮಾಯಾಮಯಮವಸ್ತುಕಮ್ |
ತತ್ರ ಕಾಸ್ಥಾ ಕಥಂ ನಾಮ ಹೇಯೋಪಾದೇಯದೃಷ್ಟಯಃ ||೧೦||
ಸಂಸಾರಬೀಜಕಣಿಕಾ ಯೈಷಾಽವಿದ್ಯಾ ರಘೂದ್ವಹ |
ಏಷಾ ಹ್ಯವಿದ್ಯಮಾನೈವ ಸತೀವ ಸ್ಫಾರತಾಂ ಗತಾ ||೧೧||
ಯೇಯಮಾಭೋಗಿನಿಸ್ಸಾರಾ ಸಂಸಾರಾರಮ್ಭಚಕ್ರಿಕಾ |
ವಿಜ್ಞೇಯಾ ವಾಸನೈಷಾ ಸಾ ಚೇತಸೋ ಮೋಹದಾಯಿನೀ ||೧೨||
ಚಾರುವಂಶಲತೇವಾನ್ತಶ್ಶೂನ್ಯಾ ನಿಸ್ಸಾರಕೋಟರಾ |
ಸರಿತ್ತರಙ್ಗಮಾಲೇವ ನ ವ್ಯುಚ್ಛಿನ್ನಾಪಿ ನಶ್ವರೀ ||೧೩||
ಗೃಹ್ಯಮಾಣಾಪಿ ಹಸ್ತೇನ ಗ್ರಹೀತುಂ ನೈವ ಯುಜ್ಯತೇ |
ಮೃದ್ವ್ಯಪ್ಯತ್ಯನ್ತತೀಕ್ಷ್ಣಾಗ್ರಾ ನಿರ್ಝರೋರ್ಮಿರಿವೋತ್ಥಿತಾ ||೧೪||
ದೃಶ್ಯತೇ ಪ್ರಕರಾಭಾಸಾ ಸದರ್ಥೇ ನೋಪಯುಜ್ಯತೇ |
ತರಙ್ಗಿಣ್ಯತರಙ್ಗಾಭಾ ಸ್ವಾಕಾರಪರಿನಿಷ್ಠಿತಾ ||೧೫||
ಕ್ವಚಿದ್ವಕ್ರಾಃ ಕ್ವಚಿತ್ ಸ್ಪಷ್ಟಾಃ ದೀರ್ಘಾಃ ಖರ್ವಾಃ ಸ್ಥಿರಾಶ್ಚಲಾಃ |

ಈ ಮಾಯಾಮಯವಾದ ಪ್ರಪಂಚವೆಲ್ಲವೂ ಯಾವಾಗ ಇಂದ್ರಜಾಲದಂತೆ ಅವಾಸ್ತವ್ಯವಾಯ್ತೋ, ಆಗ ಕರ್ಮದಲ್ಲಿ ಆಸ್ಥೆಯಾವುದು? ಹೇಯೋಪಾದೇಯವಿಚಾರಗಳೆಲ್ಲಿಯವು? ||೧೦||

ಅಯ್ಯಾ ರಘೂದ್ವಹನೆ! ಸಂಸಾರವೆಂಬ ವೃಕ್ಷಕ್ಕೆ ಸಣ್ಣ ಬೀಜವಾಗಿರುವ ಈ ಯಾವ ಅವಿದ್ಯೆಯುಂಟೋ,—ಅದು ವಸ್ತುತಃ ಅಸತ್ಯವೇ ಆಗಿದ್ದುಕೊಂಡು-ಸತ್ಯವಾಗಿರುವಂತೆ ವಿಶಾಲವಾಗಿ ಹರಡಿಕೊಂಡಿರುವುದು ||೧೧||

ಯಾವ ಈ ಸಂಸಾರಾರಂಭವೆಂಬ ಚಕ್ರವು ವಿಶಾಲವಾಗಿ ಹರಡಿಕೊಂಡಿರುವುದೋ, ಇದೇ ವಾಸನೆಯೆಂದು ತಿಳಿಯಲ್ಪಡಬೇಕು; ಇದೇ ಮನಸ್ಸಿಗೆ ಕೇವಲ ಮೋಹವುಂಟುಮಾಡತಕ್ಕದಾಗಿರುವುದು ||೧೨||

ಇನ್ನೂ ಈ ಅವಿದ್ಯೆಯ ಸ್ವರೂಪವನ್ನೇ ವಿವರಿಸಿ ಕೇಳುವವನಾಗು. ಇದು, ಬಿದಿರುಮೆಳೆಯಂತೆ ಒಳಗೆ ಶೂನ್ಯವಾಗಿಯೂ ನಿಸ್ಸಾರವಾಗಿಯೂ ಇರುವುದು. ನದೀತರಂಗಪರಂಪರೆಯಂತೆ, ಎಷ್ಟಾವೃತ್ತಿ ಕತ್ತರಿಸಲ್ಪಟ್ಟರೂ ನಾಶಹೊಂದತಕ್ಕದಲ್ಲ ||೧೩||

ಈ ಅವಿದ್ಯೆಯು, ದಡವನ್ನು ಕೆಡಹುವ ಗಿರಿನದೀತರಂಗದಂತೆ, ಮೃದುವಾಗಿ ಕಾಣಿಸಿಕೊಂಡರೂ ಅತಿತೀಕ್ಷ್ಣವಾಗಿರುತ, ಕೈಗೆ ಸಿಕ್ಕಿದರೂ ಹಿಡಿದುಕೊಳ್ಳಲಸಾಧ್ಯವಾಗಿರುವುದು ||೧೪

ಕಾರ್ಯಸಾಧಕವಾದ ಕಾರಣಸಮುದಾಯಗಳಂತೆ ಇದೇ ತೋರುತಿರುವುದು ; ಆದರೂ, ಸತ್ಯವಾದ ಪುರುಷಾರ್ಥವಿಷಯದಲ್ಲಿ ಇದು ಉಪಯೋಗಿಸುವುದಿಲ್ಲ. ಸತ್ಯವಾದ ತರಂಗಗಳಿಲ್ಲದ ಮೃಗತೃಷ್ಣಿಕಾನದಿಯು, ಕೇವಲಪ್ರತಿಭಾಸಮಾತ್ರದಲ್ಲಿ ಪರ್ಯವಸನ್ನವಾಗುವುದೇ ಹೊರತು, ಸ್ನಾನ ಮುಂತಾದ ಯಾವ ಕರ್ಮದಲ್ಲಿಯೂ ಉಪಯೋಗಿಸುವುದಿಲ್ಲವಷ್ಟೆ! ||೧೫||

ಮತ್ತು, ಈ ಅವಿದ್ಯೆಯ ಪ್ರಸಾದದಿಂದ ಉದಯಿಸುವ ಪದಾರ್ಥಗಳು, ಕೆಲವೆಡೆಯಲ್ಲಿ ಸ್ಪಷ್ಟಗಳಾಗಿಯೂ, ಕೆಲವೆಡೆಯಲ್ಲಿ ದೀರ್ಘಗಳಾಗಿಯೂ, ಕೆಲವೆಡೆಯಲ್ಲಿ ಹ್ರಸ್ವಗಳಾಗಿಯೂ,

ಯತ್ಪ್ರಸಾದೋದ್ಭವಾಸ್ತಸ್ಮಾತ್ ವ್ಯತಿರೇಕಮುಪಾಗತಾಃ ॥೧೬॥
ಅನ್ತಶ್ಶೂನ್ಯಾಪಿ ಸರ್ವತ್ರ ದೃಶ್ಯತೇ ಸಾರಸುನ್ದರೀ ।
ನ ಕ್ವಚಿತ್ ಸಂಸ್ಥಿತಾಪೀಹ ಸರ್ವತ್ರೈವೋಪಲಕ್ಷ್ಯತೇ ॥೧೭॥
ಜಡೈವ ಚಿನ್ಮಯೀವಾಸಾ ಅನ್ಯಸ್ಪನ್ದೋಪಜೀವಿನೀ ।
ನಿಮೇಷಮಪ್ಯತಿಷ್ಠನ್ತೀ ಸ್ಥೈರ್ಯಾಶಙ್ಕಾಂ ಪ್ರಯಚ್ಛತಿ ॥೧೮॥
ಜ್ವಾಲಾವಚ್ಛುದ್ಧವರ್ಣಾಪಿ ಮಷೀಮಲಿನಕೋಟರಾ ।
ವಲ್ಗತ್ಯನ್ಯಪ್ರಸಾದೇನ ದೀಯತೇ ತದವೇಕ್ಷಣಾತ್ ॥೧೯॥
ಆಲೋಕೇ ವಿಮಲೇ ಮ್ಲಾನಾ ತಮಸ್ಯಪಿ ವಿರಾಜತೇ ।
ಮೃಗತೃಷ್ಣೇವ ಶುಷ್ಕಾಭಾ ನಾನಾವರ್ಣವಿಲಾಸಿನೀ ॥೨೦॥
ವಕ್ರಾ ವಿಷಮಯೀ ತನ್ವೀ ಮೃದ್ವೀ ಸಙ್ಕಟಕರ್ಕಶಾ ।
ಲಲನಾಚಞ್ಚಲಾ ಲುಬ್ಧಾ ತೃಷ್ಣಾ ಕೃಷ್ಣೇವ ಭೋಗಿನೀ ॥೨೧॥

ಕೆಲವೆಡೆಯಲ್ಲಿ ಸ್ಥಿರವಾಗಿಯೂ, ಕೆಲವೆಡೆಯಲ್ಲಿ ಚಂಚಲವಾಗಿಯೂ ಇರುವುವು. ಇವುಗಳೆಲ್ಲವೂ, ಪರಸ್ಪರವಾಗಿ ವೈಲಕ್ಷಣ್ಯವುಳ್ಳುವಾಗಿಯೇ ಇರುವುವು ॥೧೬॥

ಈ ಅವಿದ್ಯೆಯ ಮಹಿಮೆಯನ್ನು ಎಷ್ಟು ಹೇಳೋಣ! ಇದು ಒಳಗೆ ಶೂನ್ಯವಾಗಿದ್ದರೂ, ಹೊರಗೆ ವಿಶೇಷ ಸುಂದರವಾಗಿ ಕಾಣಿಸುವುದು. ಇದು ವಸ್ತುತಃ ಯಾವುದೊಂದುಕಡೆಯೂ ಇಲ್ಲವಾಗಿದ್ದರೂ, ಸರ್ವಸ್ಥಳದಲ್ಲಿಯೂ ಇರುವಂತೆಯೇ ತೋರುವುದು ॥೧೭॥

ಈ ಅವಿದ್ಯೆಯು, ಸ್ವಯಂ ಜಡವಾಗಿದ್ದರೂ, ಚೈತನ್ಯದಂತೆ ತೋರುವುದು ; ಮನಸ್ಸಿನ ಚಾಂಚಲ್ಯವನ್ನು ಉಪಜೀವಿಸಿಕೊಂಡು ಬದುಕಿರುವುದು. ಒಂದು ನಿಮಿಷ ಒಂದುಕಡೆ ನಿಲ್ಲದಿದ್ದರೂ, ಸ್ಥಿರವಾಗಿರುವುದೆಂಬ ಶಂಕೆಯನ್ನುಂಟುಮಾಡುವುದು ॥೧೮॥

ಈ ಅವಿದ್ಯೆಯು, ಅಗ್ನಿಜ್ವಾಲೆಯಂತೆ, (೧) ಶುದ್ಧವರ್ಣವಾಗಿದ್ದರೂ ಮಷೀಮಲಿನವಾಗಿರುವುದು; (೨) ಇತರರ ಪ್ರಸಾದದಿಂದ ನರ್ತಿಸುತಲೂ, ಅವರ ದೃಷ್ಟಿಯಿಂದ ನಾಶಹೊಂದುತಲೂ ಇರುವುದು ॥೧೯॥

ಈ ಅವಿದ್ಯೆಯು, ಮೃಗತೃಷ್ಣಿಕೆಯಂತೆ, ನಾದಾವಿಧವಾಗಿ ಸ್ಫುರಿಸುತ, ನಿರ್ಮಲವಾದ ಪ್ರಕಾಶದಲ್ಲಿ ಮ್ಲಾನವಾಗಿ ಕಾಣುವುದು; ತಮಸ್ಸಿನಲ್ಲಿ ಹೆಚ್ಚಾಗಿ ವಿರಾಜಿಸುವುದು ॥೨೦॥

ಈ ಅವಿದ್ಯೆಯೇ ತೃಷ್ಣಾದಿರೂಪದಿಂದಲೂ ವಿರಾಜಿಸುವುದು. ತೃಷ್ಣಾರೂಪವನ್ನು ಸ್ವೀಕರಿಸಿರುವ ಈ ಅವಿದ್ಯೆಯು, ಕೃಷ್ಣಸರ್ಪದಂತೆ, ವಕ್ರವಾಗಿಯೂ ವಿಷಮಯವಾಗಿಯೂ ಸೂಕ್ಷ್ಮವಾಗಿಯೂ ಮೃದುವಾಗಿಯೂ ಇರುವುದು; ಅದರಂತೆಯೇ ಈ ತೃಷ್ಣೆಯು ಕೇವಲ ಕಾಠಿನ್ಯದಿಂದ ನಾನಾವಿಧಸಂಕಟವನ್ನುಂಟುಮಾಡುವುದು; ಸ್ತ್ರೀಪ್ರಕೃತಿಯಂತೆ ಚಂಚಲವಾಗಿಯೂ ಕಳವಳಪಡುತಲೂ ಇರುವುದು ॥೨೧॥

---

(೧) ಅಗ್ನಿಜ್ವಾಲೆಯು ಶುಭ್ರವಾಗಿದ್ದರೂ ಒಳಭಾಗವನ್ನೆಲ್ಲ ಮಸಿಯಿಂದ ಮಲಿನಮಾಡುವುದು. ಅವಿದ್ಯೆಯು, ಸತ್ವಪ್ರಧಾನವಾಗಿ ಕಂಡರೂ ತಮೋಮಲಿನವಾಗಿರುವುದು.

(೨) ಅವಿದ್ಯೆಯು, ಪರಬ್ರಹ್ಮನ ಸಾನ್ನಿಧ್ಯದಿಂದ ಜೀವಿಸಿಕೊಂಡು, ತದ್ದೃಷ್ಟಿಯಿಂದ ಲಯಹೊಂದುವುದು.

ಸ್ವಯಂ ದೀಪಶಿಖೇವಾಶು ಕ್ಷೀಯತೇ ಸ್ನೇಹಸಙ್ಕ್ಷಯೇ ।
ಸಿನ್ದೂರಧೂಳಿಲೇಖೇವ ವಿನಾ ರಾಗಂ ವಿರಾಜತೇ ॥೨೨॥
ಕ್ಷಣಪ್ರಕಾಶತರಳಾ ಕೃತಸಂಸ್ಥಾ ಜಡಾಶಯಾ ।
ಮುಗ್ಧಾನಾಂ ತ್ರಾಸಜನನೀ ವಕ್ರಾ ವಿದ್ಯುದಿವೋದಿತಾ ॥೨೩॥
ಯತ್ನಾದ್ಗೃಹೀತಾ ದಹತಿ ಭೂತ್ವಾಭೂತ್ವಾ ಪ್ರಲೀಯತೇ ।
ಲಭ್ಯತೇಽಪಿ ಹಿ ನಾನ್ವಿಷ್ಟಾ ವಿದ್ಯುದ್ವದತಿಭಙ್ಗುರಾ ॥೨೪॥
ಅಪ್ರಾರ್ಥಿತೈವೋಪನತಾ ರಮಣೀಯಾಪ್ಯನರ್ಥದಾ ।
ಅಕಾಲಪುಷ್ಪಮಾಲೇವ ಶ್ರೇಯಸೇ ನಾಭಿನನ್ದಿತಾ ॥೨೫॥
ಅತ್ಯನ್ತವಿಸ್ಮೃತೈವಾತಿಸುಖಾಯ ಭ್ರಮದಾಯಿನೀ ।
ದುಸ್ಸ್ವಪ್ನಕಲನೇವೇಯಂ ಅನರ್ಥಾಯೈವ ತರ್ಕಿತಾ ॥೨೬॥

ಈ ಅವಿದ್ಯೆಯು, ದೀಪಜ್ವಾಲೆಯಂತೆ (೧) ಸ್ನೇಹಕ್ಷಯವಾಗಲಾಗಿ ತನಗೆತಾನೇ ಕ್ಷೀಣವಾಗುವುದು. (೨)ಸಿಂದೂರಧೂಳಿಪಂಕ್ತಿಯಂತೆ, ರಾಗವಿಲ್ಲದೆಯೇ ವಿರಾಜಿಸುವುದು ॥೨೨॥

ಈ ಅವಿದ್ಯೆಯು, ಮಿಂಚಿನಂತೆ, ಒಂದುಕ್ಷಣಕಾಲ ಮಾತ್ರ ಪ್ರಕಾಶಿಸುತ ಬಹುಚಂಚಲವಾಗಿರುವುದು. ಮಿಂಚು ಜಲದ ಆಸೆಯಿಂದ ಮೇಘದಲ್ಲಿ ನೆಲೆಸಿರುವಂತೆ, ಅವಿದ್ಯೆಯು ಜಡವಾದ ಆಸೆಯಿಂದ ಪ್ರಪಂಚದಲ್ಲಿ ಬದುಕಿರುವುದು. ಮಿಂಚಿನಂತೆಯೇ, ವಕ್ರವಾಗಿರುವ ಈ ಅವಿದ್ಯೆಯು ಮುಗ್ಧರಿಗೆ ಭಯಹುಟ್ಟಿಸತಕ್ಕುದಾಗಿರುವುದು ॥೨೩॥

ಮತ್ತು, ಮಿಂಚಿನಂತೆಯೇ, ಈ ಅವಿದ್ಯೆಯು, ಪ್ರಯತ್ನದಿಂದ ಹಿಡಿಯಲ್ಪಟ್ಟರೆ, ಸುಟ್ಟುಬಿಡುವುದು ; ಪದೇಪದೇ ಉದಯಿಸುತಲೂ ಲಯಹೊಂದುತಲೂ ಇರುವುದು; ನಾವಾಗಿ ಇದನ್ನು ಎಷ್ಟು ಹುಡುಕಿದರೂ, ಇದು ನಮ್ಮ ಕಣ್ಣಿಗೆ ಬೀಳುವುದಿಲ್ಲ ॥೨೪॥

ಈ ಅವಿದ್ಯೆಯು, ಅಕಾಲಿಕಪುಷ್ಪಮಾಲೆಯಂತೆ, ನಮ್ಮ ಪ್ರಾರ್ಥನೆಯೇ ಇಲ್ಲದೆ ತಾನಾಗಿ ಬರುವುದು ; ನೋಡುವುದಕ್ಕೆ ರಮ್ಯವಾಗಿದ್ದರೂ, ವಿಶೇಷವಾಗಿ ಅನರ್ಥವನ್ನು ಕೊಡುವುದು. ಇದು ಶ್ರೇಯಃಪ್ರದವೆಂದು ಯಾರಿಂದಲೂ ಒಪ್ಪಲ್ಪಡುವುದಿಲ್ಲ ॥೨೫॥

ಈ ಅವಿದ್ಯೆಯು, ದುಸ್ಸ್ವಪ್ನಕಲ್ಪನೆಯಂತೆ, ನಾನಾವಿಧವಾದ ಭ್ರಮೆಯನ್ನುಂಟುಮಾಡುವುದು ; ಇದನ್ನು ಸಂಪೂರ್ಣವಾಗಿ ಮರೆತುಬಿಟ್ಟರೇ ಸುಖವುಂಟಾಗುವುದು ; ಪದೇಪದೇ ಆಲೋಚಿಸುತ್ತಿದ್ದರೋ, ಇದು ಅತ್ಯಂತವಾಗಿ ಅನರ್ಥಹೇತುವೇ ಆಗುವುದರಲ್ಲಿ ಸಂಶಯವಿಲ್ಲ ॥೨೬॥

---

(೧) ಅವಿದ್ಯೆಯು, ಸ್ನೇಹ (ಪುತ್ರಕಳತ್ರಾದ್ಯನುರಾಗ) ಕ್ಷಯವಾದಾಗ ತನಗೆತಾನೇ ಕ್ಷೀಣವಾಗುವುದು. ದೀಪಜ್ವಾಲೆಯು ಎಣ್ಣೆ ಮುಗಿದರೆ ತಾನೇ ಕ್ಷೀಣವಾಗುವುದು.

(೨) ಸಿಂದೂರ=ಸುವಾಸಿನಿಯರು ಹಣೆಗಿಟ್ಟುಕೊಳ್ಳುವ ಚಂದ್ರವೆಂಬ ಪದಾರ್ಥ. ಇದು, ಮತ್ತೊಂದು ಪದಾರ್ಥದ ಸಹಾಯದಿಂದ ಆರುಣ್ಯವನ್ನು ಪಡೆಯದೆ, ತನಗೆತಾನೇ ವಿರಾಜಿಸುವುದು ಸ್ವತಃ ತ್ರಿಗುಣಮಯವಾದ ಅವಿದ್ಯೆಯು, ಮತ್ತೊಂದರಿಂದ ರಜೋಗುಣವನ್ನು ಹೊಂದಬೇಕಾದುದಿಲ್ಲವೆಂದು ಭಾವವು,

ಪ್ರತಿಭಾಸವಶಾದೇಷಾ ತ್ರಿಜಗನ್ತಿ ಮಹಾನ್ತಿ ಚ ।
ಮುಹೂರ್ತಮಾತ್ರೇಣೋತ್ಪಾದ್ಯ ಧತ್ತೇ ಗ್ರಾಸೀಕರೋತಿ ಚ ॥೨೭॥
ಮುಹೂರ್ತೋ ವತ್ಸರಶ್ರೇಣೀ ಲವಣಸ್ಯಾನಯಾ ಕೃತಾ ।
ರಾತ್ರಿರ್ದ್ವಾದಶ ವರ್ಷಾಣಿ ಹರಿಶ್ಚನ್ದ್ರಸ್ಯ ನಿರ್ಮಿತಾ ॥೨೮॥
ವಿಯೋಗಿನಾಮಥಾನ್ಯೇಷಾಂ ಕಾನ್ತಾವಿಭವಶಾಲಿನಾಮ್ ।
ರಾತ್ರಿರ್ವತ್ಸರವದ್ದೀರ್ಘಾ ಭವೇತ್ ತಸ್ಯಾಃ ಪ್ರಸಾದತಃ ॥೨೯॥
ಸುಖಿತಸ್ಯಾಲ್ಪತಾಮೇತಿ ದುಃಖಿತಸ್ಯೈತಿ ದೀರ್ಘತಾಮ್ ।
ಕಾಲೋ ಯಸ್ಯಾಃ ಪ್ರಸಾದೇನ ವಿಪರ್ಯಾಸೈಕಶೀಲಿನಾಮ್ ॥೩೦॥
ಅಸ್ಯಾಃ ಸ್ವಸತ್ತಾಮಾತ್ರೇಣ ಕರ್ತೃತೈತಾಸು ವೃತ್ತಿಷು ।
ದೀಪಸ್ಯಾಲೋಕಕಾರ್ಯಾಣಾಂ ಯಥಾ ತದ್ವನ್ನ ವಸ್ತುತಃ ॥೩೧॥
ಸನಿತಮ್ಬಸ್ತನೀ ಚಿತ್ರೇ ನ ಸ್ತ್ರೀ ಸ್ತ್ರೀಧರ್ಮಿಣೀ ಯಥಾ ।
ತಥೈವಾಕಾರಚಿನ್ತೇಯಂ ಕರ್ತುಂ ಯೋಗ್ಯಾ ನ ಕಿಞ್ಚನ ॥೩೨॥
ಮನೋರಾಜ್ಯಮಿವಾಕಾರಭಾಸುರಾ ಸತ್ಯವರ್ಜಿತಾ ।
ಸಹಸ್ರಶತಶಾಖಾಪಿ ನ ಕಿಞ್ಚಿತ್ ಪರಮಾರ್ಥತಃ ॥೩೩॥

ಈ ಅವಿದ್ಯೆಯು, ಕೇವಲ ಪ್ರತಿಭಾಸಮಾತ್ರದಿಂದಲೇ, ಮಹತ್ತಾದ ಈ ಮೂರುಲೋಕಗಳನ್ನೂ ಒಂದು ಮುಹೂರ್ತಮಾತ್ರದಲ್ಲಿ ಸೃಜಿಸುತಲೂ, ಕಾಪಾಡುತಲೂ ಸಂಹರಿಸುತಲೂ ಇರುವುದು ॥೨೭॥

ಲವಣನೆಂಬ ರಾಜನಿಗೆ, ಒಂದು ಮುಹೂರ್ತದಲ್ಲಿ ಅನೇಕ ವರ್ಷಗಳು ಕಳೆದುದೂ ಇದರ ಪ್ರಭಾವದಿಂದಲೇ; ಹರಿಶ್ಚಂದ್ರನೆಂಬ ರಾಜನಿಗೆ, ಒಂದು ರಾತ್ರಿಯನ್ನು ಹನ್ನೆರಡು ವರ್ಷಗಳನ್ನಾಗಿ ಮಾಡಿದುದೂ ಈ ಅವಿದ್ಯೆಯೇ ॥೨೮॥

ವಿಯೋಗದುಃಖವನ್ನು ಅನುಭವಿಸತಕ್ಕವರಿಗೂ, ಇವರಂತೆಯೇ ಸ್ತ್ರೀವಿಭವದಲ್ಲಿರತಕ್ಕವರಿಗೂಕೂಡ, ಈ ಅವಿದ್ಯೆಯ ಮಹಿಮೆಯಿಂದಲೇ, ಒಂದು ರಾತ್ರಿಯು ಒಂದು ವರ್ಷದಂತೆ ದೀರ್ಘವಾಗುವುದು ॥೨೯॥

ಕೇವಲ ಭ್ರಮಶಾಲಿಗಳಾದ ಪುರುಷರಿಗೆ, ಈ ಅವಿದ್ಯೆಯ ಮಹಿಮೆಯಿಂದಲೇ, ಕಾಲವು, ಸುಖವುಂಟಾದಾಗ ಅಲ್ಪವಾಗಿಯೂ, ದುಃಖವುಂಟಾದಾಗ ದೀರ್ಘವಾಗಿಯೂ ಕಾಣುವುದು ॥೩೦

ದೀಪದ ಸಾನ್ನಿಧ್ಯಮಾತ್ರದಿಂದ ತೇಜಸ್ಸು ಹೇಗೆ ತನ್ನ ಕೆಲಸಗಳನ್ನು ಮಾಡುವುದೋ, ಹಾಗೆ ಈ ಅವಿದ್ಯೆಯೂ ಕೂಡ, ಬ್ರಹ್ಮನ ಸಾನ್ನಿಧ್ಯಮಾತ್ರದಿಂದ ಈ ನಾನಾವಿಧ ವೃತ್ತಿಗಳಲ್ಲಿ ಕರ್ತೃವಾಗಿರುವುದೇ ಹೊರತು, ಇದೇ ವಾಸ್ತವ್ಯವಲ್ಲ ॥೩೧॥

ಚಿತ್ರದಲ್ಲಿ ಸ್ತನನಿತಂಬಾದಿಗಳಿಂದೊಪ್ಪುತಿರುವ ಸ್ತ್ರೀ ಪ್ರತಿಮೆಯು ಹೇಗೆ ಸ್ತ್ರೀಯ ಗುಣವಿಲ್ಲದಿರುವುದೋ, ಹಾಗೆ—ಪ್ರಾಕ್ತನ ವಾಸನಾನುಗುಣವಾಗಿ ಮಾಡುವ ಚಿಂತಾರೂಪವಾದ ಈ ಅವಿದ್ಯೆಯು—ಯಾವ ಕೆಲಸವನ್ನೂ ಮಾಡಲು ಸಮರ್ಥವಾಗಿರುವುದಿಲ್ಲ ॥೩೨॥

ಮನಸ್ಸಿನಲ್ಲಿ ಕಲ್ಪಿತವಾದ ರಾಜ್ಯದಂತೆ, ಇದು ಕೇವಲವಾಗಿ ಭಾಸಮಾನವಾಗುವುದು; ವಸ್ತುತಃ ಇದರಲ್ಲಿ ಸ್ವಲ್ಪವೂ ಸತ್ಯಾಂಶವಿಲ್ಲ. ಇದು ಲಕ್ಷೋಪಲಕ್ಷಶಾಖಾರೂಪವಾಗಿ ಪ್ರಸರಿಸಿಕೊಂಡಿದರೂ, ಪರಮಾರ್ಥವಿಚಾರಮಾಡಿದಾಗ ಸ್ವಲ್ಪವೂ ಇರುವುದಿಲ್ಲ ॥೩೩॥

ಅರಣ್ಯೇ ಮೃಗತೃಷ್ಣೇವ ಮಿಥ್ಯೈವಾಡಮ್ಬರಾನ್ವಿತಾ ।
ವಿಡಮ್ಬಯತಿ ತಾನ್ ಮುಗ್ಧಮೃಗಾನೇವ ನ ಮಾನುಷಾನ್ ॥೩೪॥
ಫೇನಮಾಲೇವ ಸಞ್ಜಾತಧ್ವಸ್ತಾ ವಿಚ್ಛೇದವರ್ಜಿತಾ ।
ಜಡೇವ ಚಞ್ಚಲಾಕಾರಾ ಗೃಹ್ಯಮಾಣಾ ನ ಕಿಞ್ಚನ ॥೩೫॥
ಅಟತ್ಯುಡ್ಡಾಮರಾಕಾರಾ ರಜಃಪ್ರಸರಧೂಸರಾ ।
ಬಲಾತ್ ಕಲ್ಪಾನ್ತವಾತ್ಯೇವ ಸ್ವಾಕ್ರಾನ್ತಭುವನಾನ್ತರಾ ॥೩೬॥
ಧೂಮಾಳೀವಾಙ್ಗಸಂಲಗ್ನಾ ದಾಹಖೇದಪ್ರದಾಯಿನೀ ।
ಗರ್ಭೀಕೃತರಸಾಕ್ರಮ್ಯ ಜಗನ್ತಿ ಪರಿವರ್ತತೇ ॥೩೭॥
ಧಾರಾ ಜಲಧರಸ್ಯೇವ ಸುಧೀರ್ಘಾ ಜಲನಿರ್ಮಿತಾ ।
ಅಸಾರಸಂಸಾರದೃಢಾ ರಜ್ಜುಸ್ತೃಣಗಣೈರಿವ ॥೩೮॥
ತರಙ್ಗೋತ್ಪಲಮಾಲೇವ ಕಲ್ಪನಾಮಾತ್ರವರ್ಣಿತಾ ।
ಮೃಣಾಳೀವ ಬಹುಚ್ಛಿದ್ರಾ ಪಙ್ಕಪ್ರೌಢಾ ಜಲಾತ್ಮಿಕಾ ॥೩೯॥

ಅರಣ್ಯದಲ್ಲಿನ ಮೃಗತೃಷ್ಣಿಕೆಯಂತೆ ಕೇವಲ ಮಿಥ್ಯಾರೂಪವಾದ ಆಡಂಬರವುಳ್ಳ ಈ ಅವಿದ್ಯೆಯು, ಅಂತಹ ಮುಗ್ಧಮೃಗಗಳನ್ನೇ ವಂಚಿಸುವುದಲ್ಲದೆ, ಪುರುಷರಾದವರನ್ನೆಂದಿಗೂ ವಂಚಿಸಲಾರದು ॥೩೪॥

ನೊರೆಯ ಉಂಡೆಯಂತೆ, ಇದು ಹುಟ್ಟಿದೊಡನೆಯೇ ನಾಶಹೊಂದುವುದು; ಆದರಂತೆಯೇ ಇದು ಅವಿಚ್ಛಿನ್ನವಾಗಿರುವುದು. ಹಿಮಸಮೂಹದಂತೆ, ಅತಿ ಚಂಚಲವಾಗಿರುವುದು; ಆದರಂತೆಯೇ ಇದನ್ನೂ ಹಿಡಿದುಕೊಳ್ಳುವುದಕ್ಕೆ ಹೋದರೆ, ಏನೂ ಸಿಕ್ಕುವುದೇ ಇಲ್ಲ ॥೩೫॥

ಪ್ರಳಯಕಾಲಿಕ ವಾಯುಸಮೂಹದಂತೆ, ಈ ಅವಿದ್ಯೆಯು, ಸಮಸ್ತ ಭುವನಮಧ್ಯವನ್ನೂ ಚೆನ್ನಾಗಿ ಆಕ್ರಮಿಸಿಕೊಂಡು, ಅತ್ಯದ್ಭುತವಾದ (೧) ರಜಸ್ಸಿನ ಪ್ರಸರಣೆಯಿಂದ ಮಲಿನವಾಗಿ ಸಂಚರಿಸುವುದು ॥೩೬॥

ಈ ಅವಿದ್ಯೆಯು, ದೇಹದಲ್ಲಿ ವ್ಯಾಪಿಸಿದ ಧೂಮಸಮೂಹದಂತೆ, ಜನರಿಗೆ ದಾಹವನ್ನೂ ಖೇದವನ್ನೂ ಕೊಡುತ, ಆ ಪರಮಾತ್ಮನನ್ನು ಮರೆಯಾಗಿಸಿಕೊಂಡು, ಜಗತ್ತಿನಲ್ಲೆಲ್ಲ ಸುತ್ತುತಿರುವುದು॥

ಈ ಅವಿದ್ಯೆಯು, ಮೇಘಪಂಕ್ತಿಯಂತೆ, ದೀರ್ಘವಾಗಿಯೂ (೨) ಜಲನಿರ್ಮಿತವಾಗಿಯೂ ಇರುವುದು. ಮತ್ತು, ಸಣ್ಣಸಣ್ಣ ಹುಲ್ಲುಗಳನ್ನು ಸೇರಿಸಿ ಹೊಸೆದಿರುವ ಹಗ್ಗವು ದೃಢವಾಗುವಂತೆ, ನಿಸ್ಸಾರವಾದ ಸಂಸಾರವಾಸನಾಸಮೂಹದಿಂದ ದೃಢವಾಗುವುದು ॥೩೮॥

ಜಲತರಂಗಗಳಲ್ಲಿ ಆರೋಪಿತವಾದ ಉತ್ಪಲಪುಷ್ಪಮಾಲಿಕೆಯಂತೆ, ಇದು, ಕೇವಲ ಕಲ್ಪನಾಮಾತ್ರದಿಂದ ವರ್ಣಿಸಲ್ಪಟ್ಟದೇ ಹೊರತು, ಸತ್ಯವಾದುದಲ್ಲ. ಮತ್ತು, ತಾವರೆದಂಟಿನಂತೆ, (೩) ಬಹಳವಾಗಿ ಛಿದ್ರವುಳ್ಳುದೂ ಪಂಕದಲ್ಲಿ ರೂಢಮೂಲವಾದುದೂ ಕೇವಲ ಜಡರೂಪವಾದುದೂ ಆಗಿರುವುದು ॥೩೯॥

---

(೧) ರಜಸ್ಸು = (ವಾಯುಪರವಾಗಿ) ಧೂಳಿ, (ಅವಿದ್ಯಾಪರವಾಗಿ) ರಜೋಗುಣ.
(೨) ಜಲ = ನೀರು, ಅಜ್ಞಾನ.
(೩) ಛಿದ್ರ = ರಂಧ್ರ, ಸಂಕಟ. ಪಂಕ = ಕೆಸರು, ಪಾಪ.

ಜನೇನ ದೃಶ್ಯತೇ ವೃದ್ಧಿತತ್ಪರಾ ನ ಚ ವರ್ಧತೇ ।
ವಿಷಾಸ್ವಾದಇವಾಪಾತಮಧುರಾನ್ತೇ ಸುದಾರುಣಾ ॥೪೦॥
ನಷ್ಟಾ ದೀಪಶಿಖೇವೈಷಾ ನ ಜಾನೇ ಕ್ವೇವ ಗಚ್ಛತಿ ।
ಮಿಹಿಕೇವಾಗ್ರದೃಷ್ಟಾಪಿ ಗೃಹ್ಯಮಾಣಾ ನ ಕಿಞ್ಚನ ॥೪೧॥
ಪಾಂಸುಮುಷ್ಟಿರಿವಾಕೀರ್ಯ ಪ್ರೇಕ್ಷಿತಾ ಪಾರಮಾಣವೀ ।
ಆಕಾಶನೀಲಿಮೇವೈಷಾ ನಿರ್ನಿಮಿತ್ತೈವ ದೃಶ್ಯತೇ ॥೪೨॥
ದ್ವಿಚನ್ದ್ರಮೋಹವಜ್ಜಾತಾ ಸ್ವಪ್ನವದ್ವಿಹಿತಭ್ರಮಾ ।
ಯಥಾ ನೌಯಾಯಿನಃ ಸ್ಥಾಣುಸ್ಪನ್ದಸ್ತದ್ವದಿಹೋತ್ಥಿತಾ ॥೪೩॥
ಅನಯೋಪಹತೇ ಚಿತ್ತೇ ದೀರ್ಘಕಾಲಮಿವಾಕುಲೈಃ ।
ಜನೈರಾಕಲ್ಪ್ಯತೇ ದೀರ್ಘಸಂಸಾರಸ್ವಪ್ನವಿಭ್ರಮಃ ॥೪೪॥
ಅನಯೋಪಹತೇ ಸ್ವಸ್ಮಿನ್ ಚೇತಶ್ಚೇತಸಿ ವಿಭ್ರಮಾಃ ।
ಉತ್ಪದ್ಯನ್ತೇ ವಿನಶ್ಯನ್ತಿ ತರಙ್ಗಾಸ್ತೋಯಧೇರಿವ ॥೪೫॥
ಮನೋಜ್ಞಮಪಿ ಸತ್ಯಂ ಚ ದೃಶ್ಯತೇ ಸದಸತ್ತಯಾ ।
ಅಮನೋಜ್ಞಮಸತ್ಯಂ ಚ ದೃಶ್ಯತೇ ಸತ್ತಯಾಪ್ಯಸತ್ ॥೪೬॥

ಈ ಅವಿದ್ಯೆಯು, ಅಭಿವೃದ್ಧಿಹೊಂದತಕ್ಕುದರಂತೆ ಜನರಿಗೆ ಗೋಚರವಾಗುವುದು ; ಆದರೆ, ತತ್ವದೃಷ್ಟ್ಯಾ ಇದು ವೃದ್ಧಿಹೊಂದುವುದೇ ಇಲ್ಲ. ಮತ್ತು, ವಿಷಮಿಶ್ರವಾದ ಪದಾರ್ಥದಂತೆ, ಅನುಭವಕಾಲದಲ್ಲಿ ಮಾತ್ರ ಬಹುಮಧುರವಾಗಿ ಕಾಣುತ, ಪರಿಣಾಮದಲ್ಲಿ ಕೇವಲ ಕ್ರೂರವಾಗಿ ಬಿಡುವುದು ॥೪೦॥

ಈ ಅವಿದ್ಯೆಯು, ದೀಪಜ್ವಾಲೆಯಂತೆ, ನಾಶಹೊಂದಿದಾಗ ಎಲ್ಲಿಹೋಗುವುದೋ ಗೊತ್ತೇ ಆಗುವುದಿಲ್ಲ; ಮಂಜಿನಂತೆ, ಮುಂದೆಯೇ ಕಾಣುತಿದ್ದರೂ, ಹಿಡಿದುಕೊಳಲು ಹೋದಾಗ ಏನೂ ಇರುವುದೇ ಇಲ್ಲ ॥೪೧॥

ಈ ಅವಿದ್ಯೆಯು, ಧೂಳಿವೃಷ್ಟಿಯಂತೆ, ಕೇವಲ ಪರಮಾಣುರೂಪವಾಗಿ ಕಾಣುವುದು; ಆಕಾಶದಲ್ಲಿ ಕಾಣುವ ನೈಲ್ಯದಂತೆ, ನಿಷ್ಕಾರಣವಾಗಿಯೇ ಕಾಣಿಸಿಕೊಳ್ಳುವುದು ॥೪೨॥

ಈ ಅವಿದ್ಯೆಯು, ಅಂತರಿಕ್ಷದಲ್ಲಿ ಎರಡು ಚಂದ್ರಮಂಡಲಗಳಿರುವುವೆಂಬ ಭ್ರಮೆ ಹುಟ್ಟುವಂತೆಯೂ, ಸ್ವಪ್ನದಂತೆ ಭ್ರಮದಾಯಕವಾಗಿಯೂ, ಹಡಗಿನಲ್ಲಿ ಹೋಗತಕ್ಕವನಿಗೆ ತೀರದಲ್ಲಿರುವ ಮರಗಳು ಚಲಿಸುತಿರುವಹಾಗೆ ಕಾಣಿಸುವಂತೆಯೂ ಇರುವುದು ॥೪೩॥

ಅಯ್ಯಾ ! ರಾಮ ! ಇಂತಹ ಈ ಅವಿದ್ಯೆಯಿಂದ ಚಿತ್ತವು ಆಕ್ರಾಂತವಾಗಲಾಗಿ, ಜನರು ವ್ಯಾಕುಲರಾಗಿ, ದೀರ್ಘವಾದ ಸಂಸಾರವೆಂಬ ಸ್ವಪ್ನವಿಲಾಸವನ್ನು ಬಹುಕಾಲದಿಂದ ಅನುಸರಿಸಿ ಬಂದಿರುವಂತೆ ತಿಳಿದುಕೊಳ್ಳುವರು ॥೪೪॥

ಈ ಅವಿದ್ಯೆಯಿಂದ ಆಕ್ರಾಂತವಾದ ಮನಸ್ಸಿನಲ್ಲಿ, ಸಮುದ್ರದಲ್ಲಿ ಅಲೆಗಳಂತೆ, ನಾನಾವಿಧ ವಿಭ್ರಮಗಳು ಹುಟ್ಟುತಲೂ ಅಡಗುತಲೂ ಇರುವುವು ॥೪೫॥

ಈ ಅವಿದ್ಯೆಯ ಮಹಿಮೆಯಿಂದಲೇ, ಮನೋಹರವಾಗಿಯೂ ಸತ್ಯವಾಗಿಯೂ ಇರುವ ಪರಬ್ರಹ್ಮವಸ್ತುವೂ ಕೂಡ ಅಸತ್ಯವಾಗಿ ಕಾಣಿಸುವುದು ; ಅಮನೋಹರವಾಗಿಯೂ ಅಸತ್ಯವಾಗಿಯೂ ಇರುವ ಪ್ರಪಂಚವು ಸತ್ಯವಾಗಿ ಕಾಣಿಸುವುದೂ ಇದರ ಮಹಿಮೆಯಿಂದಲೇಯೆ॥೪೬॥

ಪದಾರ್ಥರಥಮಾರೂಢಾ ಭಾವನೈಷಾ ಬಲಾನ್ವಿತಾ |
ಆಕ್ರಾಮತಿ ಮನಃ ಕ್ಷಿಪ್ರಂ ವಿಹಙ್ಗಂ ವಾಗುರಾ ಯಥಾ ||೪೭||
ಕರುಣಾಸ್ಯನ್ದಮಾನಾಕ್ಷೀ ಸ್ರವತ್ಕ್ಷೀರಲವಸ್ತನೀ |
ಭವತ್ಯುಲ್ಲಸಿತಾನನ್ದಂ ಜನನೀ ಗೃಹಿಣೀ ಯಥಾ ||೪೮||
ವಿಷೀಕರೋತಿ ನಿಸ್ಯನ್ದಸನ್ತರ್ಪಿತಜಗತ್ತ್ರಯಮ್ |
ಸುಧಾದ್ರಾರ್ದ್ರಮಪಿ ಕ್ಷಿಪ್ರಂ ಪ್ರವೃದ್ಧಂ ಬಿಮ್ಬಮೈನ್ದವಮ್ ||೪೯||
ಉನ್ಮತ್ತರವವೇತಾಳನರ್ತನಾರಮ್ಭಸಮ್ಭ್ರಮಮ್ |
ಸ್ಥಾಣವಃ ಸಂಪ್ರಯಚ್ಛನ್ತಿ ಮೂಕಾಅಪ್ಯೇತಯಾನ್ಧಯಾ ||೫೦||
ಸನ್ಧ್ಯಾದಿಷು ಚ ಕಾಲೇಷು ಲೋಷ್ಟಪಾಷಾಣಭಿತ್ತಯಃ |
ಅಸ್ಯಾಃ ಪ್ರಸಾದಾದ್ದೃಶ್ಯನ್ತೇ ಸರ್ಪಾಜಗರದೃಷ್ಟಿಭಿಃ ||೫೧||
ಏಕೋಽಪಿ ದ್ವಿತಯೋದೇತಿ ಯಥಾ ದ್ವಿಶಶಿದರ್ಶನೇ |
ದೂರಮಭ್ಯಾಶತಾಂ ಯಾತಿ ಸ್ವಪ್ನೇ ಸ್ವಮರಣಂ ಯಥಾ ||೫೨||
ಅದೀರ್ಘಂ ಕ್ಷಣತಾಮೇತಿ ಕಾಲಸ್ಯೇಷ್ಟಾ ಯಥಾ ನಿಶಾ |
ಕ್ಷಣೋ ವರ್ಷಮಿವಾಭಾತಿ ಕಾನ್ತಾವಿರಹಿಣಾಮಿವ ||೫೩||

ಒಂದು ಹಕ್ಕಿಯಮೇಲೆ ಬಲೆಯನ್ನು ಬೀಸಿದಾಗ—ಆ ಹಕ್ಕಿಯು ಬಲೆಯನ್ನೂ ಹೊತ್ತುಕೊಂಡು ಹಾರಿಹೋದರೆ—ಆ ಬಲೆಯು ಹಕ್ಕಿ ಹೋದಕಡೆಯಲ್ಲೆಲ್ಲ ಹಾರಾಡುತಿರುವಂತೆ, ಭಾವನಾರೂಪವಾದ ಈ ಅವಿದ್ಯೆಯು, ನಾನಾವಿಧ ಪದಾರ್ಥಗಳೆಂಬ ರಥವನ್ನು ಹತ್ತಿಕೊಂಡು, ಮಹಾಪ್ರಬಲವಾಗಿ, ಬೇಗನೆ ಹಾರಾಡುತಿರುವುದು ||೪೭||

ಈ ಅವಿದ್ಯೆಯೇ, ತಾಯಿಯಂತೆಯೂ ಪತ್ನಿಯಂತೆಯೂ ರೂಪವನ್ನು ಧರಿಸಿ, ಕರುಣೆಯಿಂದ ಕಣ್ಣಿನಲ್ಲಿ ನೀರುಸುರಿಯಿಸುತ, ಸ್ತನದಲ್ಲಿ ಸ್ತನ್ಯವನ್ನು ಸ್ರವಿಸುತ, ಆನಂದನಿರ್ಭರವಾಗಿರುವುದು ||೪೮||

ಈ ಅವಿದ್ಯೆಯು, ಅಮೃತಪರಿಪೂರ್ಣವಾಗಿ—ತನ್ನ ಅಮೃತದ್ರವದಿಂದ ಮೂರುಲೋಕವನ್ನೂ ತೃಪ್ತಿಪಡಿಸುತಿರುವ—ಪೂರ್ಣಚಂದ್ರಬಿಂಬವನ್ನೂ ಕೂಡ ವಿಷವನ್ನಾಗಿ ಮಾಡುವುದು ||೪೯||

ಸಮಸ್ತ ಜನರನ್ನೂ ಕುರುಡರನ್ನಾಗಿ ಮಾಡುವ ಈ ಅವಿದ್ಯೆಯ ಮಹಿಮೆಯಿಂದಲೇ, ನಿಶ್ಶಬ್ದವಾಗಿರುವ ಮೋಟುಮರಗಳೂ ಕೂಡ, ಕತ್ತಲೆಯಲ್ಲಿ ನೋಡುತಿರುವ ಮೂಢರಿಗೆ, ಉನ್ಮತ್ತವಾದ ಬೇತಾಳಗಳು ನರ್ತನಮಾಡುತಿರುವುವೆಂಬ ಭ್ರಾಂತಿಯನ್ನುಂಟುಮಾಡುವುವು ||೫೦||

ಈ ಅವಿದ್ಯೆಯ ಪ್ರಸಾದದಿಂದಲೇ, ಸಂಜೆ ಮುಂತಾದ ಹೊತ್ತುಗಳಲ್ಲಿ, ಮಣ್ಣುಹೆಂಟೆ ಕಲ್ಲು ಗೋಡೆ ಮುಂತಾದುವುಗಳೂ ಕೂಡ, ಸರ್ಪ ಅಜಗರ ಮುಂತಾದ ರೂಪದಿಂದ ಕಾಣಿಸಿಕೊಳ್ಳುವುವು ||೫೧||

ಚಂದ್ರಮಂಡಲದ್ವಯವನ್ನು ನೋಡುತಿರುವಾಗ—ಒಬ್ಬನೇ ಚಂದ್ರನು ವ್ಯಕ್ತಿದ್ವಯ ರೂಪದಿಂದ ಹೇಗೆ ಉದಯಿಸುವನೋ, ಅತಿದೂರವಾಗಿರುವ ಸ್ವಮರಣವು—ಸ್ವಪ್ನಸಮಯದಲ್ಲಿ

ನ ತದಸ್ತೀಹ ಯನ್ನಾಮ ನ ಕರೋತೀಯಮುದ್ಧತಾ ।
ಅಸ್ಯಾಸ್ತ್ವಕಿಞ್ಚನಾಯಾಸ್ತು ಶಕ್ತತಾಂ ಪಶ್ಯ ರಾಘವ ॥೫೪॥
ಸಂರೋಧಯೇತ್ ಪ್ರಯತ್ನೇನ ಸಂವಿದ್ಯೈವಾಶು ಸಂವಿದಮ್ ।
ಸರಿತ್ಸ್ರೋತೋನಿರೋಧೇನ ಶುಷ್ಯತ್ಯೇಷಾ ಮಹಾನದೀ ॥೫೫॥

ಶ್ರೀರಾಮಉವಾಚ.

ಅವಿದ್ಯಮಾನಯೈವೇದಂ ಪೇಲವಾಙ್ಗ್ಯ ಸುತುಚ್ಛಯಾ ।
ಮಿಥ್ಯಾಭಾವನಯಾ ನಾಮ ಚಿತ್ರಮನ್ಧೀಕೃತಂ ಜಗತ್ ॥೫೬॥
ಅರೂಪಯಾ ನಿರಾಕೃತ್ಯಾ ಚಾರುಚೇತನಹೀನಯಾ ।
ಅಸತ್ಯೈವಾಪ್ಯನಶ್ಯನ್ತ್ಯಾ ಚಿತ್ರಮನ್ಧೀಕೃತಂ ಜಗತ್ ॥೫೭॥
ಆಲೋಕೇನ ವಿನಶ್ಯನ್ತ್ಯಾ ಸ್ಫುರನ್ತ್ಯಾ ತಮಸೋನ್ತರೇ ।
ಕೌಶಿಕೇಕ್ಷಣಧರ್ಮಿಣ್ಯಾ ಚಿತ್ರಮನ್ಧೀಕೃತಂ ಜಗತ್ ॥೫೮॥

ಹೇಗೆ ಕೇವಲ ಸಮೀಪವಾಗಿ ಕಾಣುವುದೋ, ಪ್ರಳಯಕಾಲರುದ್ರನಿಗಿಷ್ಟವಾದ ಸಂಹಾರರಾತ್ರಿಯು—ಹೇಗೆ ಒಂದುಕ್ಷಣಮಾತ್ರವಾಗಿ ಕಾಣುವುದೋ, ಕಾಂತಾವಿರಹವನ್ನು ಅನುಭವಿಸತಕ್ಕವರಿಗೆ—ಒಂದು ಕ್ಷಣವೂ ಒಂದು ವರ್ಷದಂತೆ ಹೇಗೆ ಕಾಣುವುದೋ, ಈರೀತಿಯಾಗೆಲ್ಲ ಈ ಅವಿದ್ಯೆಯು ನಾನಾವಿಧರೂಪಗಳನ್ನುಂಟುಮಾಡುವುದು. ಅಯ್ಯಾ ರಾಮ! ಅತ್ಯುದ್ಧತಳಾಗಿರುವ ಈ ಅವಿದ್ಯೆಯು ಈ ಪ್ರಪಂಚದಲ್ಲಿ ಮಾಡದಿರುವ ಕೆಲಸವೇ ಇಲ್ಲ. ವಸ್ತುತಃ ಕೇವಲ ಶೂನ್ಯಳಾಗಿದ್ದರೂ, ಇವಳ ಸಾಮರ್ಥ್ಯವನ್ನು ನೋಡುವವನಾಗು ॥೫೨—೫೪॥

ಅದುಕಾರಣ, ಪುರುಷನಾದವನು ಪ್ರಯತ್ನಪೂರ್ವಕವಾಗಿ ವಿವೇಕಬುದ್ಧಿಯಿಂದ ವಿಷಯಬುದ್ಧಿಯನ್ನು ನಿರೋಧಪಡಿಸಬೇಕು. ಮೇಲೆ ಬರತಕ್ಕ ಪ್ರವಾಹವನ್ನು ತಡೆದುಬಿಟ್ಟರೆ ನದಿಯು ಹೇಗೆ ಒಣಗುವುದೋ—ಹಾಗೆ ವಿಷಯಜ್ಞಾನವೆಂಬ ಪ್ರವಾಹವನ್ನು ತಡೆದುಬಿಟ್ಟರೆ ಈ ಮನಸ್ಸೆಂಬ ನದಿಯು ಒಣಗಿಹೋಗುವುದು ॥೫೫॥

ಇದನ್ನು ಕೇಳಿ ಕೇವಲ ವಿಸ್ಮಯಾವಿಷ್ಟಹೃದಯನಾದ ಶ್ರೀರಾಮನು ವಸಿಷ್ಠರನ್ನು ಕುರಿತು ಹೇಳುವನು :—

ಪೂಜ್ಯರೆ! ನನಗುಂಟಾಗಿರುವ ಆಶ್ಚರ್ಯವನ್ನು ಎಷ್ಟೆಂದು ಹೇಳಲಿ! ವಸ್ತುತಃ ಅತ್ಯಂತಾಸತ್ಯವಾಗಿ ಅತಿ ಸೂಕ್ಷ್ಮವಾಗಿ ಅತಿ ತುಚ್ಛವಾಗಿರುವ ಈ ಮಿಥ್ಯಾಭಾವನಾರೂಪವಾದ ಅವಿದ್ಯೆಯಿಂದ ಪ್ರಪಂಚವೆಲ್ಲ ಕುರುಡಾಗಿ ಮಾಡಲ್ಪಟ್ಟಿರುವುದಲ್ಲ!! ಇದೆಷ್ಟಾಶ್ಚರ್ಯವು!!! ॥೫೬॥

ಶುಕ್ಲನೀಲಾದಿ ವರ್ಣಗಳೂ ಕರಚರಣಾದ್ಯವಯವಗಳೂ ಇಲ್ಲದಿರುವ, ಪ್ರಜ್ಞಾಶೂನ್ಯವಾದ, ಸುತರಾಂ ಅಸತ್ಯವಾದರೂ ನಾಶರಹಿತವಾಗಿರುವಂತೆ ತೋರುವ ಈ ಅವಿದ್ಯೆಯಿಂದ, ಪ್ರಪಂಚವೆಲ್ಲವೂ ಕುರುಡಾಗಿ ಮಾಡಲ್ಪಟ್ಟಿರುವುದಲ್ಲ! ಏನಾಶ್ಚರ್ಯವು !! ॥೫೭ ॥

ಗೂಗೆಯ ಕಣ್ಣಿನಂತೆ—ಪ್ರಕಾಶವಾದಾಗ ನಾಶಹೊಂದುತಲೂ ತಮಸ್ಸಿನೊಳಗೆ ಪ್ರಕಾಶಿಸುತಲೂ ಇರುವ ಈ ಅವಿದ್ಯೆಯಿಂದ, ಪ್ರಪಂಚವೆಲ್ಲವೂ ಕುರುಡಾಗಿ ಮಾಡಲ್ಪಟ್ಟಿರುವುದು. ಇದು ಬಲು ಆಶ್ಚರ್ಯವು! ॥೫೮॥

ಕುಕರ್ಮೈಕಾನ್ತಕಾರಿಣ್ಯಾ ನಸಹನ್ತ್ಯಾ ವಿಲೋಕನಮ್ |
ದೇಹಮಪ್ಯವಿಜಾನನ್ತ್ಯಾ ಚಿತ್ರಮನ್ಧೀಕೃತಂ ಜಗತ್ ||೫೯||
ಸುದೀನಾಚಾರಧರ್ಮಿಣ್ಯಾ ನಿತ್ಯಂ ಪ್ರಾಕೃತಕಾನ್ತಯಾ |
ಅನಾರತಾಸ್ತಙ್ಗತಯಾ ಚಿತ್ರಮನ್ಧೀಕೃತಂ ಜಗತ್ ||೬೦||
ಅನನ್ತದುಃಖಾಕುಲಯಾ ಸದೈವ ಮೃತಯಾನಯಾ |
ಸವ್ಬೋಧಹೀನಯಾ ಯತ್ರ ಚಿತ್ರಮನ್ಧೀಕೃತಂ ಜಗತ್ ||೬೧||
ಕಾಮಕ್ರೋಧಘನಾಙ್ಗಿನ್ಯಾ ತಮಃಪ್ರಸರವಕ್ರಯಾ |
ಅಚಿರೇಣಾಶರೀರಿಣ್ಯಾ ಚಿತ್ರಮನ್ಧೀಕೃತಂ ಜಗತ್ ||೬೨||
ಸ್ವಾತ್ಮಾನ್ಧರೂಪಾಸ್ಪದಯಾ ಜಡಯಾ ಜಾಡ್ಯಜೀರ್ಣಯಾ |
ದುಃಖದೀರ್ಘಪ್ರಲಾಪಿನ್ಯಾ ಚಿತ್ರಮನ್ಧೀಕೃತಂ ಜಗತ್ ||೬೩||
ಪುರುಷಾಸಙ್ಗಸಙ್ಗಿನ್ಯಾ ರಾಗಿಣ್ಯಾ ಕ್ರಿಯಯಾನಯಾ |
ವಿದ್ರವನ್ತ್ಯಾ ವಿವಕ್ಷಾಸು ಚಿತ್ರಮನ್ಧೀಕೃತಃ ಪುಮಾನ್ ||೬೪||

ಕೇವಲ ದುಷ್ಕರ್ಮವನ್ನೇ ಸರ್ವದಾ ಮಾಡಿಸತಕ್ಕುದಾಗಿಯೂ, ಜ್ಞಾನಮಾರ್ಗವನ್ನು ಸ್ವಲ್ಪವೂ ಸಹಿಸದಿರತಕ್ಕುದಾಗಿಯೂ, ಜ್ಞಾನಶಕ್ತಿಯಿಲ್ಲದಕಾರಣ ದೇಹದ ಸ್ವರೂಪವನ್ನೂ ಕೂಡ ತಿಳಿಯಲಾರದಾಗಿಯೂ ಇರುವ ಈ ಅವಿದ್ಯೆಯು, ಪ್ರಪಂಚವನ್ನೆಲ್ಲ ಕುರುಡುಮಾಡಿಬಿಟ್ಟಿರುವುದು. ಬಲು ಅಚ್ಚರಿಯು! ||೫೯||

ಅತಿ ದೀನವಾದ ಆಚಾರವೇ ಸ್ವಭಾವವುಳ್ಳುದಾಗಿಯೂ, ಸರ್ವದಾಕೇವಲ ಪ್ರಾಕೃತಪುರುಷರಿಗೆ ಮಾತ್ರ ಮನೋಹರವಾಗಿಯೂ, ಅನವರತವಾಗಿ ಅಸ್ತಹೊಂದಿದುದಾಗಿಯೂ ಇರುವ ಈ ಅವಿದ್ಯೆಯಿಂದ, ಜಗತ್ತೆಲ್ಲವೂ ಅಂಧವಾಗಿಮಾಡಲ್ಪಟ್ಟಿರುವುದು. ಇದು ಆಶ್ಚರ್ಯವಲ್ಲವೆ! ||

ಅಪಾರವಾದ ದುಃಖದಿಂದ ಆಕುಲವಾಗಿಯೂ, ಸರ್ವದಾ ಮೃತಪ್ರಾಯವಾಗಿಯೂ, ಯಾವುದೊಂದುಕಡೆಯೂ ಸರಿಯಾದ ಜ್ಞಾನವಿಲ್ಲದುದಾಗಿಯೂ ಇರುವ ಈ ಅವಿದ್ಯೆಯು, ಪ್ರಪಂಚವನ್ನೆಲ್ಲ ಅಂಧವನ್ನಾಗಿ ಮಾಡಿಬಿಟ್ಟಿರುವುದು. ಇದೆಷ್ಟು ವಿಚಿತ್ರವು! ||೬೧||

ಕಾಮಕ್ರೋಧಗಳೆಂಬ ಘನವಾದ ದೇಹವುಳ್ಳುದಾಗಿಯೂ, ತಮಃಪ್ರಸರಣೆಯಿಂದ ವಿಶೇಷ ವಕ್ರವಾಗಿಯೂ, ಹಾಗೆಯೇ ಸ್ವಲ್ಪಹೊತ್ತಿನೊಳಗಾಗಿ ಯಾವ ಆಕಾರವೂ ಇಲ್ಲದೆಯೂ ಇರುವ ಈ ಅವಿದ್ಯೆಯಿಂದ, ಪ್ರಪಂಚವು ಅಂಧವಾಗಿ ಮಾಡಲ್ಪಟ್ಟಿರುವುದು. ಇದು ವಿಚಿತ್ರವೇಸರಿ! ||

ಆತ್ಮಜ್ಞಾನಶೂನ್ಯರಾದವರಿಗೆ ಮಾತ್ರವೇ ಗೋಚರವಾಗಿಯೂ, ಸರ್ವದಾ ಜಡವಾಗಿಯೂ, ಜಾಡ್ಯದಿಂದ ಜೀರ್ಣವಾಗಿಯೂ, ದುಃಖದಿಂದ ದೀರ್ಘವಾಗಿ ಪ್ರಲಾಪಮಾಡತಕ್ಕುದಾಗಿಯೂ ಇರುವ ಈ ಅವಿದ್ಯೆಯಿಂದ, ಜಗತ್ತು ಕುರುಡಾಗಿ ಮಾಡಲ್ಪಟ್ಟಿರುವುದು. ಇದು ಬಲುಅಚ್ಚರಿಯಲ್ಲವೆ! ||೬೩||

ಮತ್ತು, ಈ ಅವಿದ್ಯೆಯೆಂಬ ಯುವತಿಯು, ಪುರುಷಸಂಗದಲ್ಲಿ ಆಸಕ್ತಿಯುಳ್ಳವಳಾಗಿಯೂ, ಅನುರಾಗಿಣಿಯಾಗಿಯೂ ಇರುವಳು. ಇವಳು, ನಾನಾವಿಧ ವ್ಯಾಪಾರಯುಕ್ತಳಾಗಿರುವಳು. ಏನಾದರೂ ಸ್ವಲ್ಪ ವಿಚಾರರೂಪವಾದ ಮಾತನಾಡಬೇಕಾಗಿ ಬಂದರೆ, ಆಗ ಓಡಿಹೋಗುವಳು. ಇಂತಹ ಈ ಅವಿದ್ಯಾಂಗನೆಯು, ಪುರುಷನನ್ನು ಕುರುಡನನ್ನಾಗಿ ಮಾಡಿಬಿಟ್ಟಿರುವಳು. ಆಶ್ಚರ್ಯ ||

ಪುರುಷಸ್ಯ ನ ಯಯಾ ಶಕ್ತಾ ಸೋಢುಮೀಕ್ಷಿತಮಪ್ಯಲಮ್ ।
ತಯಾ ಸ್ತ್ರಿಯಾವರಣಯಾ ಚಿತ್ರಮನ್ಧೀಕೃತಃ ಪುಮಾನ್ ॥೬೫॥
ನ ಯಸ್ಯಾಶ್ಚೈತನ್ಯಮಸ್ತಿ ಯಾಪ್ಯನಷ್ಟೈವ ನಶ್ಯತಿ ।
ತಯಾ ಸ್ತ್ರಿಯಾ ಪರುಷಯಾ ಚಿತ್ರಮನ್ಧೀಕೃತಃ ಪುಮಾನ್ ॥೬೬॥
ಅನನ್ತದುಷ್ಪ್ರಸರವಿಲಾಸಕಾರಿಣೀ
ಕ್ಷಯೋದಯೋನ್ಮುಖಸುಖದುಃಖಭಾಗಿನೀ ।
ಇಯಂ ಪ್ರಭೋ ವಿಗಳತಿ ಕೇನವಾಽಸಮಾ
ಮನೋಗುಹಾನಿಲಯನಿಬದ್ಧವಾಸನಾ ॥೬೭॥

ಇತಿ ಉತ್ಪತ್ತಿಪ್ರಕರಣೇ ಅವಿದ್ಯಾವರ್ಣನಂ ನಾಮ
ತ್ರಯೋದಶೋತ್ತರ ಶತತಮಃ ಸರ್ಗಃ.

ಯಾವಳು, ಪುರುಷನ (ಆತ್ಮನ) ದರ್ಶನವನ್ನೂ ಸಹಿಸಲಾರದಿರುವಳೋ, ಅಂತಹ—ಆವರಣಕಾರಿಣಿಯಾದ ಅವಿದ್ಯೆಯೆಂಬ ಸ್ತ್ರೀಯಿಂದ, ಪುರುಷನೇ ಅಂಧನಾಗಿ ಮಾಡಲ್ಪಟ್ಟಿರುವನಲ್ಲ! ಇದೇನಾಶ್ಚರ್ಯ! ॥೬೫॥

ಯಾವಳಿಗೆ ಚೈತನ್ಯವೇ ಇಲ್ಲವೋ, ಯಾವಳು ನಾಶಹೊಂದದಿದ್ದರೂ ನಾಶಹೊಂದಿದವಳೇ ಆಗಿರುವಳೋ, ಅಂತಹ ಮಹಾಕ್ರೂರಳಾದ ಅವಿದ್ಯಾಯುವತಿಯಿಂದ, ಪುರುಷನು ಅಂಧನಾಗಿ ಮಾಡಲ್ಪಟ್ಟಿರುವನಲ್ಲವೆ! ಅಹಹ!! ಏನಾಶ್ಚರ್ಯ!!! ॥೬೬॥

ಹೇ! ಪ್ರಭೋ! ಗುರುವರ್ಯ! ಈ ಅವಿದ್ಯೆಯು, ಅಪರಿಮಿತವಾದ ದುಷ್ಟಪ್ರಸರಣೆಗಳಿಂದ ವಿಲಾಸಪಡುತಿರುವುದಲ್ಲವೆ! ಜನನಮರಣರೂಪವಾದ ಸುಖದುಃಖಶತಗಳನ್ನು ಪುರುಷನಿಗುಂಟುಮಾಡುವುದಲ್ಲವೆ! ಮನಸ್ಸೆಂಬ ಗುಹಾಗೃಹದಲ್ಲಿ ಇದು ನೆಲೆಸಿರುವುದಲ್ಲವೆ! ಹೀಗೆ ಅಸದೃಶವಾಗಿರುವ ಈ ಅವಿದ್ಯೆಯು, ಯಾವ ಉಪಾಯದಿಂದ ನಾಶಹೊಂದುವುದು? ಅಪ್ಪಣೆಯಾಗಬೇಕು ॥೬೭॥

ಇದು ಉತ್ಪತ್ತಿಪ್ರಕರಣದಲ್ಲಿ ಅವಿದ್ಯಾವರ್ಣನೆಯೆಂಬ
ನೂರಹದಿಮೂರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಚತುರ್ದಶೋತ್ತರಶತತಮಃ ಸರ್ಗಃ.

ಶ್ರೀರಾಮ ಉವಾಚ.

ಅವಿದ್ಯಾವಿಭವಪ್ರೋತ್ಥಂ ನಿಬಿಡಂ ಪುರುಷಸ್ಯ ಹಿ ।
ಮಹದಾನ್ಧ್ಯಮಿದಂ ಬ್ರಹ್ಮನ್ ಕಥಂನಾಮ ವಿನಶ್ಯತಿ ॥೧॥

ಶ್ರೀ ವಸಿಷ್ಠಉವಾಚ.

ಯಥಾ ತುಷಾರಕಣಿಕಾ ಭಾಸ್ಕರಾಲೋಕನಾತ್ ಕ್ಷಣಾತ್ ।
ನಶ್ಯತ್ಯೇವಮವಿದ್ಯೇಯಂ ರಾಘವಾತ್ಮಾವಲೋಕನಾತ್ ॥೨॥
ತಾವತ್ ಸಂಸಾರಭೃಗುಷು ಸ್ವಾತ್ಮನಾ ಸಹ ದೇಹಿನಾಮ್ ।
ಆನ್ದೋಳಯತಿ ನೀರನ್ಧ್ರದುಃಖಸಙ್ಕಟಶಾಲಿಷು ॥೩॥
ಅವಿದ್ಯಾ ಯಾವದಸ್ಯಾಸ್ತು ನೋತ್ಪನ್ನಾ ಕ್ಷಯಕಾರಿಣೀ ।
ಸ್ವಯಮಾತ್ಮಾವಲೋಕೇಚ್ಛಾ ಮೋಹಸಂಕ್ಷಯದಾಯಿನೀ ॥೪॥

ಉತ್ಪತ್ತಿಪ್ರಕರಣದಲ್ಲಿ ನೂರನಾಲ್ಕನೆಯ ಸರ್ಗವು.

ಇಹಾವಿದ್ಯಾಕ್ಷಯೋಪಾಯಃ ಸ್ವಾತ್ಮದರ್ಶನಮುಚ್ಯತೇ ।
ವಿಶುದ್ಧಾತ್ಮಸ್ವರೂಪಂ ಚಾಸಙ್ಕಲ್ಪಾದ್ವಾಸನಾಕ್ಷಯಃ ॥

ಅವಿದ್ಯಾಕ್ಷಯಕ್ಕೆ ಉಪಾಯಭೂತವಾದ–ಆತ್ಮಜ್ಞಾನವೂ, ವಿಶುದ್ಧವಾದ ಆತ್ಮಪದಾರ್ಥದ ಸ್ವರೂಪವೂ, ಸಂಕಲ್ಪತ್ಯಾಗದಿಂದ ವಾಸನಾಕ್ಷಯವುಂಟಾಗುವರೀತಿಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು ॥

ಶ್ರೀರಾಮನು, ಇನ್ನೂ ವಸಿಷ್ಠಮುನಿಯನ್ನು ಕುರಿತು ಪ್ರಶ್ನೆಮಾಡುವನು :—

ಎಲೈ ಬ್ರಹ್ಮರ್ಷಿವರ್ಯರೆ! ಪುರುಷನಿಗೆ, ಅವಿದ್ಯಾವಿಭವದಿಂದುಂಟಾಗುವ ಅಂಧತ್ವವೆಂಬುದು ಬಲುದೊಡ್ಡದಾಗಿರುವುದಲ್ಲವೆ! ಇದು ಯಾವರೀತಿಯಾಗಿ ನಾಶಹೊಂದುವುದು? ಅಪ್ಪಣೆಕೊಡಿಸಬೇಕು ॥೧॥

ಇದನ್ನು ಕೇಳಿ ವಸಿಷ್ಠರು ಉತ್ತರ ಹೇಳುವರು :—

ಅಯ್ಯಾ! ರಾಘವ! ಸೂರ್ಯಪ್ರಕಾಶದಿಂದ ಒಂದುಕ್ಷಣದೊಳಗಾಗಿ ಹಿಮಕಣವು ಹೇಗೆ ನಾಶಹೊಂದುವುದೋ, ಹೀಗೆ ಈ ಅವಿದ್ಯೆಯೂ ಆತ್ಮಜ್ಞಾನದಿಂದ ನಾಶಹೊಂದುವುದು ॥೨॥

ಈ ಅವಿದ್ಯೆಗೆ ಕ್ಷಯವುಂಟುಮಾಡುವ ಆತ್ಮಜ್ಞಾನೇಚ್ಛೆಯು ಪುರುಷನಿಗೆ ಎಲ್ಲಿಯವರೆಗೆ ಹುಟ್ಟುವುದಿಲ್ಲವೋ, ಅಲ್ಲಿಯವರೆಗೂ— ಈ ಅವಿದ್ಯೆಯು—ಆತ್ಮನೊಡನೆ ದೇಹಾಭಿಮಾನಿಯಾದ ಅಹಂಕಾರವನ್ನೂ—ದುಃಖಗಳೆಂಬ ಮುಳ್ಳುಗಳಿಂದ ನಿಬಿಡವಾಗಿರುವ ದೊಡ್ಡ ಸಂಸಾರಗರ್ತಗಳಲ್ಲಿ ಹಾಕಿ ಪೀಡಿಸುತ್ತಿರುವುದು ॥೩—೪॥

ಅಸ್ಯಾಃ ಪರಂ ಪ್ರಪಶ್ಯನ್ತ್ಯಾಃ ಸ್ವಾತ್ಮನಾಶಃ ಪ್ರಜಾಯತೇ |
ಆತಪಾನುಭವಾರ್ಥಿನ್ಯಾಃ ಛಾಯಾಯಾಇವ ರಾಘವ ||೫||
ದೃಷ್ಟೇ ಸರ್ವಗತೇ ಬೋಧೇ ಸ್ವಯಮೇವ ವಿಲೀಯತೇ |
ಸರ್ವಾಶಾಭ್ಯುದಿತೇ ಛಾಯಾ ದ್ವಾದಶಾರ್ಕಗಣೇ ಯಥಾ ||೬||
ಇಚ್ಛಾಮಾತ್ರಮವಿದ್ಯೇಹ ತನ್ನಾಶೋ ಮೋಕ್ಷ ಉಚ್ಯತೇ |
ಸ ಚಾಸಙ್ಕಲ್ಪಮಾತ್ರೇಣ ಸಿದ್ಧೋ ಭವತಿ ರಾಘವ ||೭||
ಮನಾಗಪಿ ಮನೋವ್ಯೋಮ್ನಿ ವಾಸನಾರಜನೀಕ್ಷಯೇ |
ಕಾಲಿಮಾ ತನುತಾಮೇತಿ ಚಿದಾದಿತ್ಯಮಹೋದಯಾತ್ ||೮||
ಯಥೋದಿತೇ ದಿನಕರೇ ಕ್ವಾಪಿ ಯಾತಿ ತಮಸ್ವಿನೀ |
ತಥಾ ವಿವೇಕೇಭ್ಯುದಿತೇ ಕ್ವಾಪ್ಯವಿದ್ಯಾ ವಿಲೀಯತೇ ||೯||
ದೃಢವಾಸನಯಾ ಬನ್ಧೋ ಘನತಾಮೇತಿ ಚೇತಸಃ |
ಬಲಾದ್ವೇತಾಳಸಙ್ಕಲ್ಪಃ ಸನ್ಧ್ಯಾಕಾಲೇ ಯಥಾ ಶಿಶೋಃ ||೧೦||

ಶ್ರೀರಾಮ ಉವಾಚ.

ಯಾವತ್ ಕಿಞ್ಚಿದಿದಂ ದೃಶ್ಯಂ ಸಾಽವಿದ್ಯಾ ಕ್ಷೀಯತೇ ಚ ಸಾ |
ಆತ್ಮಭಾವನಯಾ ಬ್ರಹ್ಮನ್ ಆತ್ಮಾಸೌ ಕೀದೃಶಃ ಸ್ಮೃತಃ ||೧೧||

ಅಯ್ಯಾ! ರಾಘವ! ಬಿಸಿಲನ್ನು ಅಪೇಕ್ಷಿಸಿದಕೂಡಲೇ ನೆಳಲಿಗೆ ನಾಶವುಂಟಾಗುವಂತೆ, ಪರಮಾತ್ಮನನ್ನು ಕಂಡಕೂಡಲೇ ಈ ಅವಿದ್ಯೆಗೆ ನಾಶವುಂಟಾಗುವುದು ||೫||

ದ್ವಾದಶಾದಿತ್ಯರೂ ಒಟ್ಟಾಗಿ ಸಮಸ್ತ ದಿಕ್ಕುಗಳಲ್ಲಿಯೂ ಉದಯಿಸಿದಾಗ ನೆಳಲು ತನಗೆ ತಾನೇ ಅಡಗಿಹೋಗುವಂತೆ, ಸರ್ವಗತನಾಗಿ ಜ್ಞಾನಸ್ವರೂಪನಾಗಿರುವ ಆತ್ಮನು ಪ್ರತ್ಯಕ್ಷವಾದಾಗ—ಈ ಅವಿದ್ಯೆಯು ತನಗೆತಾನೇ ಲಯಹೊಂದಿಬಿಡುವುದು ||೬||

ಅಯ್ಯಾ ರಾಘವ! ಇಚ್ಛಾಮಾತ್ರವೇ ಅವಿದ್ಯೆಯೆನ್ನಿಸುವುದು. ಆ ಇಚ್ಛೆಯ ನಾಶವೇ ಮೋಕ್ಷವೆನ್ನಿಸುವುದು. ಆಯಿಚ್ಛಾನಾಶವಾದರೋ, ಸಂಕಲ್ಪಪರಿತ್ಯಾಗಮಾತ್ರದಿಂದ ಸಿದ್ಧಿಸುವುದು||

ಮನಸ್ಸೆಂಬ ಆಕಾಶದಲ್ಲಿ, ಕಾಮವಾಸನೆಯೆಂಬ ರಾತ್ರಿಯು ಕ್ಷಯಹೊಂದಲಾಗಿ, ಚಿತ್ತೆಂಬ ಸೂರ್ಯನು ಸ್ವಲ್ಪಮಾತ್ರ ಉದಯಿಸುವುದರಿಂದಲೇ, ಅವಿದ್ಯಾವರಣವೆಂಬ ಅಂಧಕಾರವು ಕ್ಷಯಹೊಂದುವುದು ||೮||

ಸೂರ್ಯನು ಉದಯಿಸಲಾಗಿ ಒಬ್ಬರಿಗೂ ಗೊತ್ತೇ ಇಲ್ಲದಂತೆ ರಾತ್ರಿಯು ಹೇಗೆ ಎಲ್ಲಿಗೋ ಹೋಗಿಬಿಡುವುದೋ, ಹಾಗೆ ವಿವೇಕವುದಯಿಸಲಾಗಿ ಅವಿದ್ಯೆಯೆಲ್ಲಿಯೋ ಹೋಗಿಬಿಡುವುದು||

ರಾತ್ರಿಯಕಾಲದಲ್ಲಿ ದೃಢವಾದ ನಂಬುಗೆಯಿಂದ ಬಾಲಕನ ಮನಸ್ಸಿನಲ್ಲಿ ಬೇತಾಳವೆಂಬ ಸಂಕಲ್ಪವು ಹೇಗೆ ಸ್ಥಿರಪಡುವುದೋ, ಹಾಗೆ ದೃಢತರವಾದ ವಾಸನೆಯಿಂದ ಚಿತ್ತಕ್ಕೆ ಬಂಧವು ಸಾಂದ್ರವಾಗುವುದು ||೧೦||

ಶ್ರೀರಾಮನು ಪ್ರಶ್ನೆಮಾಡುವನು:—

ಎಲೈ ಬ್ರಹ್ಮರ್ಷಿವರ್ಯರೆ! ಯಾವ ಆತ್ಮನ ಭಾವನೆಯಿಂದ ಈ ಸಮಸ್ತವಾದ ದೃಶ್ಯವೂ ಅವಿದ್ಯೆಯೂ ಕ್ಷಯಹೊಂದುವುವೋ, ಆ ಆತ್ಮನು ಹೇಗಿರುವನು? ||೧೧||

ಶ್ರೀ ವಸಿಷ್ಠ ಉವಾಚ.

ಚೇತ್ಯಾನುಪಾತರಹಿತಂ ಸಾಮಾನ್ಯೇನ ಚ ಸರ್ವಗಮ್ ।
ಯಚ್ಚಿತ್ತತ್ತ್ವಮನಾಖ್ಯೇಯಂ ಸ ಆತ್ಮಾ ಪರಮೇಶ್ವರಃ ॥೧೨॥
ಆಬ್ರಹ್ಮಸ್ತಂಬಪರ್ಯನ್ತಂ ತೃಣಾದಿ ಯದಿದಂ ಜಗತ್ ।
ತತ್ ಸರ್ವಂ ಸರ್ವದಾತ್ಮೈವ ನಾವಿದ್ಯಾ ವಿದ್ಯತೇಽನಘ ॥೧೩॥
ಸರ್ವಂ ಚ ಖಲ್ವಿದಂ ಬ್ರಹ್ಮ ನಿತ್ಯಂ ಚಿದ್ಘನಮಕ್ಷತಮ್ ।
ಕಲ್ಪನಾನ್ಯಾ ಮನೋನಾಮ್ನೀ ವಿದ್ಯತೇ ನ ಹಿ ಕಾಚನ ॥೧೪॥
ನ ಜಾಯತೇ ನ ಮ್ರಿಯತೇ ಕಿಞ್ಚಿದತ್ರ ಜಗತ್ತ್ರಯೇ ।
ನ ಚ ಭಾವವಿಕಾರಾಣಾಂ ಸತ್ತಾ ಕ್ವಚನ ವಿದ್ಯತೇ ॥೧೫॥
ಕೇವಲಂ ಕೇವಲಾಭಾಸಂ ಸರ್ವಸಾಮಾನ್ಯಮಕ್ಷತಮ್ ।
ಚೇತ್ಯಾನುಪಾತರಹಿತಂ ಚಿನ್ಮಾತ್ರಮಿಹ ವಿದ್ಯತೇ ॥೧೬॥
ತಸ್ಮಿನ್ ನಿತ್ಯೇ ತತೇ ಶುದ್ಧೇ ಚಿನ್ಮಾತ್ರೇ ನಿರುಪದ್ರವೇ ।
ಶಾನ್ತೇ ಸಮಸಮಾಭೋಗೇ ನಿರ್ವಿಕಾರೋದಿತಾತ್ಮನಿ ॥೧೭॥
ಯೈಷಾ ಸ್ವಭಾವಾತಿಗತಂ ಸ್ವಯಂ ಸಙ್ಕಲ್ಪ್ಯ ಧಾವತಿ ।
ಚಿಚ್ಚೇತ್ಯಂ ಸ್ವಯಮಾಮ್ಲಾನಾ ಸಾಮ್ಲಾನಾ ತನ್ಮನಃ ಸ್ಮೃತಮ್ ॥೧೮॥

ಶ್ರೀ ವಸಿಷ್ಠರು ಉತ್ತರ ಹೇಳುವರು:—

ವತ್ಸ! ರಾಮ! ವಿಷಯವ್ಯಾಪಸೆಯಿಂದಲೂ ಅವಿದ್ಯಾಸಂಬಂಧದಿಂದಲೂ ರಹಿತವಾಗಿ ಸರ್ವವ್ಯಾಪಿಯಾಗಿ ಅನಿರ್ದೇಶ್ಯವಾಗಿರುವ ಯಾವ ಚಿತ್ಪದಾರ್ಥವಿರುವುದೋ, ಅದೇ ಆತ್ಮನೆಂದು ತಿಳಿಯುವನಾಗು ॥೧೨॥

ಎಲೈ ನಿರ್ದೋಷನೆ! ಅಜ್ಞಾನರಹಿತನಾದ ರಾಮನೆ! ಚತುರ್ಮುಖ ಮೊದಲುಗೊಂಡು ಒಂದು ಸಣ್ಣ ಹುಲ್ಲಿನವರೆಗಿರುವ ಈ ಜಗತ್ತಾವುದುಂಟೋ, ಅದೆಲ್ಲವೂ ಸರ್ವದಾ ಆತ್ಮಪದಾರ್ಥವಾಗಿಯೇ ಇರುವುದು. ಅವಿದ್ಯೆಯೆಂಬುದೆಂದಿಗೂ ಇಲ್ಲವೇ ಇಲ್ಲ ॥೧೩॥

ಈ ಸಮಸ್ತವಾದ ದೃಶ್ಯಜಾತವೂ, ನಿತ್ಯವಾದ ಚಿದ್ಘನವಾದ ಅಕ್ಷಯವಾದ ಪರಬ್ರಹ್ಮವೇಯೆ. ಮನಸ್ಸೆಂಬ ಬೇರೆಯಾದ ಕಲ್ಪನೆಯೊಂದೂ ಇಲ್ಲವೇ ಇಲ್ಲ ॥೧೪॥

ಈ ಮೂರು ಲೋಕದೊಳಗಾಗಿಯೂ, ಯಾವುದೂ ಹುಟ್ಟುವುದೂ ಇಲ್ಲ; ಸಾಯುವುದೂ ಇಲ್ಲ. ಜನನಮರಣಾದಿ ಷಡ್ಭಾವವಿಕಾರಗಳೊಂದೂ ವಾಸ್ತವಿಕವಾಗಿಲ್ಲ ॥೧೫॥

ಈ ಪ್ರಪಂಚದಲ್ಲಿ ಕೇವಲವಾದ ಚಿತ್ಪದಾರ್ಥವೊಂದೇ ಇರುವುದು. ಇದು, ಕೇವಲ ಪ್ರಕಾಶರೂಪವಾದುದು; ಚೇತ್ಯಸಂಬಂಧಶೂನ್ಯವಾದುದು ॥೧೬॥

ಹೀಗೆ ನಿತ್ಯವಾಗಿಯೂ ಸರ್ವತ್ರ ವ್ಯಾಪ್ತವಾಗಿಯೂ ಶುದ್ಧವಾಗಿಯೂ ನಿರ್ಬಾಧವಾಗಿಯೂ ಶಾಂತವಾಗಿಯೂ ಸರ್ವಸಮವಾಗಿಯೂ ಇರುವ ಆತ್ಮಪದಾರ್ಥವು—ನಿರ್ವಿಕಾರವಾಗಿ ಸರ್ವಕಾಲ ಸಮುದಿತವಾಗಿರುವಾಗ, ಮಾಯಾವರಣಯುಕ್ತವಾದ ಯಾವ ಈ ಚಿತ್ತು—ಚಿತ್ಸ್ವಭಾವವಿರುದ್ಧವಾಗಿ ಜಡತ್ವ ಮುಂತಾದ ಸಂಕಲ್ಪಗಳನ್ನು ಮಾಡಿಕೊಂಡು—ತದನುಸಾರವಾಗಿ ಓಡುತಿರುವುದೋ, ಅಂತಹ ವಿಕ್ಷೇಪಮಲಿನವಾದ ಚಿತ್ತು—ಮನಸ್ಸೆಂದು ಹೇಳಲ್ಪಡುವುದು ॥

ಏತಸ್ಮಾತ್ ಸರ್ವಗಾದ್ದೇವಾತ್ ಸರ್ವಶಕ್ತೇರ್ಮಹಾತ್ಮನಃ |
ವಿಭಾಗಕಲನಾಶಕ್ತಿಃ ಲಹರೀವೋತ್ಥಿತಾಮ್ಬುನಃ ||೧೯||
ಏಕಸ್ಮಿನ್ ವಿತತೇ ಶಾನ್ತೇ ಯಾ ನ ಕಿಞ್ಚನ ವಿದ್ಯತೇ |
ಸಙ್ಕಲ್ಪಮಾತ್ರೇಣ ಗತಾ ಸಾ ಸಿದ್ಧಿಂ ಪರಮಾತ್ಮನಿ ||೨೦||
ಅತಃ ಸಙ್ಕಲ್ಪಸಿದ್ಧೇಯಂ ಸಙ್ಕಲ್ಪೇನೈವ ನಶ್ಯತಿ |
ಯೇನೈವ ಜಾತಾ ತೇನೈವ ವಹ್ನಿಜ್ವಾಲೇವ ವಾಯುನಾ ||೨೧||
ಪೌರುಷೋದ್ಯೋಗಸಿದ್ಧೇನ ಭೋಗಾಶಾರೂಪತಾಂ ಗತಾ |
ಅಸಙ್ಕಲ್ಪನಮಾತ್ರೇಣ ಸಾಽವಿದ್ಯಾ ಪ್ರವಿಲೀಯತೇ ||೨೨||
ನಾಹಂ ಬ್ರಹ್ಮೇತಿ ಸಙ್ಕಲ್ಪಾತ್ ಸುದೃಢಾದ್ಬಧ್ಯತೇ ಮನಃ |
ಸರ್ವಂ ಬ್ರಹ್ಮೇತಿ ಸಙ್ಕಲ್ಪಾತ್ ಸುದೃಢಾನ್ಮುಚ್ಯತೇ ಮನಃ ||೨೩||
ಸಙ್ಕಲ್ಪಃ ಪರಮೋ ಬನ್ಧಸ್ತ್ವಸಙ್ಕಲ್ಪೋ ವಿಮುಕ್ತತಾ |
ಸಙ್ಕಲ್ಪಂ ಸಂವಿಜಿತ್ಯಾನ್ತಃ ಯಥೇಚ್ಛಸಿ ತಥಾ ಕುರು ||೨೪||
ದೃಢಾ ನ ಯಾಮ್ಬರೇತ್ಯಾಸ್ತಿ ನಳಿನೀ ಹೇಮಪಙ್ಕಜಾ |

ಸರ್ವಗತನಾಗಿಯೂ ಸರ್ವಶಕ್ತನಾಗಿಯೂ ಇದ್ದುಗೊಂಡು ಮನೋರೂಪವನ್ನು ಹೊಂದಿದ ಈ ಪರಮಾತ್ಮನ ದೆಸೆಯಿಂದ, ನೀರಿನ ದೆಸೆಯಿಂದ ಪ್ರವಾಹಗಳು ಹುಟ್ಟುವಂತೆ, ಪದಾರ್ಥಭೇದ ಕಲ್ಪನಾರೂಪವಾದ ಶಕ್ತಿಯುದಯಿಸುವುದು ॥೧೯॥

ಯಾವ ಸಂಸಾರಶಕ್ತಿಯು ಸುತರಾಂ ಇಲ್ಲವಾದುದೋ, ಅದು—ಅದ್ವಿತೀಯನಾಗಿ ಸರ್ವವ್ಯಾಪಿಯಾಗಿ ಶಾಂತನಾಗಿರುವ ಪರಮಾತ್ಮನಲ್ಲಿ—ಸಂಕಲ್ಪಮಾತ್ರದಿಂದ ಬೇರೂರಿರುವುದು ॥೨೦॥

ಆದುಕಾರಣ, ವಾಯುವಿನಿಂದಲೇ ಮೊದಲು ಹುಟ್ಟಿದ ಅಗ್ನಿಜ್ವಾಲೆಯು ಕೊನೆಗೆ ವಾಯು ಹೆಚ್ಚಿ ಯೇ ನಾಶಹೊಂದುವಂತೆ, ಈ ಸಂಸಾರಸ್ಥಿತಿಯು—ಮೊದಲು ಯಾವ ಸಂಕಲ್ಪದಿಂದ ಹುಟ್ಟಿತೋ—ಕೊನೆಗೆ ಅದರಿಂದಲೇ ನಾಶಹೊಂದತಕ್ಕುದಾಗಿರುವುದು. ಆದುಕಾರಣ, ಈ ಸಂಸಾರಸ್ಥಿತಿಯು ಅಸತ್ಯವಾದುದೆಂದು ಸಂಕಲ್ಪವನ್ನು ಮಾಡುತಿರಬೇಕು ॥೨೧॥

ಭೋಗೇಚ್ಛಾರೂಪವಾಗಿ ಆಕಾರಹೊಂದಿದ ಆ ಅವಿದ್ಯೆಯು, ಪುರುಷಪ್ರಯತ್ನಸಿದ್ಧವಾದ ಸಂಕಲ್ಪತ್ಯಾಗಮಾತ್ರದಿಂದಲೇ ಲಯಹೊಂದುವುದು ॥೨೨॥

ನಾನು ಬ್ರಹ್ಮನಲ್ಲವೆಂಬ ಸಂಕಲ್ಪವು ಚೆನ್ನಾಗಿ ದೃಢವಾದರೆ, ಮನಸ್ಸು ಬಂಧಕ್ಕೆ ಒಳಪಡುವುದು. ಸಮಸ್ತವೂ ಬ್ರಹ್ಮವೇಯೆಂಬ ಸಂಕಲ್ಪವು ದೃಢವಾದರೆ, ಮನಸ್ಸು ಮುಕ್ತವಾಗುವುದು ॥೨೩॥

ಅಂತು, ಅಯ್ಯಾ ರಾಮ! ಸಂಕಲ್ಪವೇ ಮುಖ್ಯವಾದ ಬಂಧವು; ಸಂಕಲ್ಪತ್ಯಾಗವೇ ಮೋಕ್ಷವು. ಆದುಕಾರಣ, ನೀನು ಸಂಕಲ್ಪವನ್ನು ಜಯಿಸಿ, ಕೊನೆಗೆ ಹೇಗೆ ಇಚ್ಛಿಸುವೆಯೋ-ಹಾಗೆ ಮಾಡು ॥೨೪॥

ಅಂತರಿಕ್ಷದಲ್ಲಿ ಸುತರಾಂ ಇಲ್ಲದಿರುವ ಒಂದು ಕಮಲಸರಸ್ಸನ್ನು, ಬಾಲಕನು ತನ್ನ ಸಂಕಲ್ಪದಿಂದ ಕಲ್ಪಿಸಿಕೊಳ್ಳುವನಲ್ಲವೆ! ಆಗ, ಆ ಸರೋವರದಲ್ಲಿ, ಸುವರ್ಣಕಮಲಗಳಿರುವಂತೆಯೂ, ಭ್ರಮರಗಳು ಆ ಕಮಲಗಳಲ್ಲಿ ಹಾರಾಡುತಿರುವಂತೆಯೂ, ಆ ಕಮಲಗಳ ಸುವಾಸನೆಯು ದಿಕ್ಕು

ಲೋಲವೈದೂರ್ಯಮಧುಪಾ ಸುಗನ್ಧಿತದಿಗನ್ತರಾ ॥೨೫॥
ಉದ್ದಣ್ಡೈಃ ಪ್ರಕಟಾಭೋಗೈಃ ಮೃಣಾಳಭುಜಮಣ್ಡಲೈಃ ।
ವಿಹಸನ್ತೀ ಪ್ರಕಾಶಸ್ಯ ಶಶಿನೋ ರಶ್ಮಿಮಣ್ಡಲಮ್ ॥೨೬॥
ವಿಕಲ್ಪಜಾಲಿಕೈವೇತ್ಥಂ ಅಸತ್ಯೈವಾಪಿ ಸತ್ಸಮಾ ।
ಮನಸ್ಸ್ವಾರ್ಥವಿಲಾಸಾರ್ಥಂ ಯಥಾ ಬಾಲೇನ ಕಲ್ಪ್ಯತೇ ॥೨೭॥
ತಥೈವೇಯಮವಿದ್ಯೇಹ ಭವಬನ್ಧನಬನ್ಧನೀ ।
ಚಪಲಾ ನ ಸುಖಾಯೈವ ಬಾಲೇನ ಕಲಿತಾ ವೃಥಾ ॥೨೮॥
ಕೃಶೋಽತಿದುಃಖೀ ಬದ್ಧೋಽಹಂ ಹಸ್ತಪಾದಾದಿಮಾನಹಮ್ ।
ಇತಿ ಭಾವಾನುರೂಪೇಣ ವ್ಯವಹಾರೇಣ ಬಧ್ಯತೇ ॥೨೯॥
ನಾಹಂ ದುಃಖೀ ನ ಮೇ ದೇಹೋ ಬನ್ಧಃ ಕಸ್ಯಾತ್ಮನಃ ಸ್ಥಿತಃ ।
ಇತಿ ಭಾವಾನುರೂಪೇಣ ವ್ಯವಹಾರೇಣ ಮುಚ್ಯತೇ ॥೩೦॥
ನಾಹಂ ಮಾಂಸಂ ನ ಚಾಸ್ಥೀನಿ ದೇಹಾದನ್ಯಃ ಪರೋ ಹ್ಯಹಮ್ ।
ಇತಿ ನಿಶ್ಚಯವಾನನ್ತಃ ಕ್ಷೀಣಾವಿದ್ಯ ಇಹೋಚ್ಯತೇ ॥೩೧॥
ಪ್ರೋತ್ತುಙ್ಗಸುರಶೈಲಾಗ್ರವೈಡೂರ್ಯಶಿಖರಪ್ರಭಾ ।
ಅಥವಾರ್ಕಾಂಶುದುರ್ಭೇದಾ ತಿಮಿರಶ್ರೀಃ ಸ್ಥಿತೋಪರಿ ॥೩೨॥

ಗಳಿಗೆಲ್ಲ ವ್ಯಾಪಿಸಿರುವಂತೆಯೂ, ಉದ್ದವಾದ ತಾವರೆದಂಟುಗಳೆಂಬ ತೋಳುಗಳಿಂದ—ಆ ಸರಸ್ಸು ಪ್ರಕಾಶಮಾನವಾದ ಚಂದ್ರಮಂಡಲವನ್ನು ಪರಿಹಸಿಸುವಂತೆಯೂ ಕಲ್ಪಿಸಿಕೊಳ್ಳುವನಲ್ಲವೆ! ಈ ವಿಕಲ್ಪಜಾಲಗಳೆಲ್ಲವೂ ಸುತರಾಂ ಅಸತ್ಯವೇ ಆಗಿದ್ದರೂ, ಬಾಲಕನು ತನ್ನ ಮನೋವಿನೋದಾರ್ಥವಾಗಿ ಇದೆಲ್ಲವನ್ನೂ ಹೇಗೆ ಕಲ್ಪಿಸಿಕೊಳ್ಳುವನೋ, ಹಾಗೆ ಸಂಸಾರಬಂಧವುಂಟುಮಾಡತಕ್ಕ ಅತಿ ಚಂಚಲವಾದ ಈ ಅವಿದ್ಯೆಯನ್ನು ಅಜ್ಞನು ಕಲ್ಪಿಸಿಕೊಂಡಿರುವನು ॥೨೫-೨೮॥

‘ನಾನು ಕೃಶನಾಗಿರುವೆನು; ನಾನು ದುಃಖಪಡುತಿರುವೆನು; ನಾನು ಬದ್ಧನಾಗಿರುವೆನು; ನನಗೆ ಕರಚರಣಾದ್ಯವಯವ ಸನ್ನಿವೇಶವಿರುವುದು.’ ಇತ್ಯಾದಿರೂಪದಿಂದ, ಪುರುಷನು ಪ್ರಥಮತಃ ಭಾವನೆಮಾಡಿಕೊಳ್ಳುವನು. ಬಳಿಕ, ಈ ಭಾವನೆಯು ದೃಢವಾಗಿ, ಅದರಂತೆ ವ್ಯವಹರಿಸುತ ಬಂಧವನ್ನು ಹೊಂದುವನು ॥೨೯॥

‘ನಾನು ಬದ್ಧನಲ್ಲ; ನನಗೆ ದೇಹವಿಲ್ಲ; ಆತ್ಮನಿಗೆ ಬಂಧವೆಲ್ಲಿರುವುದು!’ ಎಂದು ಭಾವನೆ ಮಾಡುತ ಬಂದರೆ, ತದನುಗುಣವಾದ ವ್ಯಾಪಾರವುಂಟಾಗಿ, ಕೊನೆಗೆ ಮುಕ್ತನಾಗುವನು ॥೩೦॥

‘ನಾನು ಮಾಂಸವೂ ಅಲ್ಲ; ಅಸ್ಥಿಗಳೂ ಅಲ್ಲ. ದೇಹಭಿನ್ನನಾದ ಪರಮವಸ್ತುವೇ ನಾನು’ ಎಂದು ಮನಸ್ಸಿನೊಳಗೆ ದೃಢವಾಗಿ ನಿಶ್ಚಯಮಾಡಿಕೊಂಡಿರುವ ಪುರುಷನು, ಅವಿದ್ಯಾಕ್ಷಯವಾಗಿರತಕ್ಕವನೆಂದು ಹೇಳಿಸಿಕೊಳ್ಳುವನು ॥೩೦॥

ಅಯ್ಯಾ! ರಾಮ! ಭೂಮಿಯಲ್ಲಿ ನಿಂತುಕೊಂಡಿರುವ ಮನುಷ್ಯನು, ಅಂತರಿಕ್ಷವನ್ನು ನೋಡಿ, ಪ್ರಬಲವಾದ ತನ್ನ ಸಂಕಲ್ಪದಿಂದ ಕಪ್ಪಗಿರುವುದೆಂದು ನಂಬಿ, ಇದು ಎತ್ತರವಾದ ಸುಮೇರುಪರ್ವತಾಗ್ರದಲ್ಲಿರುವ ನೀಲಪ್ರಭೆಯೆಂದೂ, ಅಥವಾ ಸೂರ್ಯಕಿರಣಗಳಿಂದ ಅಭೇದ್ಯ

ಕಲ್ಪ್ಯತೇ ಹಿ ಯಥಾ ವ್ಯೋಮ್ನಃ ಕಾಳಿಮೇತಿ ಸ್ವಭಾವತಃ |
ಪುಂಸಾ ಧರಣಿಸಂಸ್ಥೇನ ಸ್ವಸಙ್ಕಲ್ಪನಯೋದ್ಧಯಾ ||೩೩||
ಕಲ್ಪಿತೈವಮವಿದ್ಯೇಯಂ ಅನಾತ್ಮನ್ಯಾತ್ಮಭಾವನಾ |
ಪುರುಷೇಣಾಪ್ರಬುದ್ಧೇನ ನ ಪ್ರಬುದ್ಧೇನ ರಾಘವ ||೩೪||

ಶ್ರೀರಾಮ ಉವಾಚ.

ಮೇರುನೀಲಮಣಿಚ್ಛಾಯಾ ನೇಯಂ ನಾಪಿ ತಮಃಪ್ರಭಾ |
ತದೇತತ್ ಕಿಂ ಕೃತಂ ಬ್ರಹ್ಮನ್ ನೀಲತ್ವಂ ನಭಸೋ ವದ ||೩೫||

ಶ್ರೀವಸಿಷ್ಠ ಉವಾಚ.

ನ ನಾಮ ನೀಲತಾವ್ಯೋಮ್ನಃ ಶೂನ್ಯಸ್ಯ ಗುಣವತ್ ಸ್ಥಿತಾ |
ಅನ್ಯರತ್ನಪ್ರಭಾಽಭಾವಾತ್ ನ ವಾಪ್ಯೇಷಾ ಚ ಮೈರವೀ ||೩೬||
ತೇಜೋಮಯತ್ವಾದಣ್ಡಸ್ಯ ಸ್ಫುರತ್ವಾದಿವ ತೇಜಸಃ |
ಪ್ರಾಕಾಶ್ಯಾದಣ್ಡಪಾರಸ್ಯ ತಮಸೋ ನಾತ್ರ ಸಮ್ಭವಃ ||೩೭||

ವಾದ ಅಂಧಕಾರನಿಚಯವೆಂದೂ, ಅಂತರಿಕ್ಷದ ನೈಲ್ಯವೆಂದೂ, ಸ್ವಭಾವತಃ ಕಲ್ಪಿಸಿಕೊಳ್ಳುವನಲ್ಲವೆ! ಹೀಗೆಯೇ, ಆತ್ಮನಲ್ಲದ ಪದಾರ್ಥದಲ್ಲಿ ಆತ್ಮಭಾವನಾರೂಪವಾದ ಅವಿದ್ಯೆಯನ್ನು ಅಪ್ರಬುದ್ಧನಾದ ಪುರುಷನು ಕಲ್ಪಿಸಿಕೊಂಡುಬಿಡುವನು. ಪ್ರಬುದ್ಧನಾದವನೆಂದಿಗೂ ಈರೀತಿ ಕಲ್ಪಿಸಿಕೊಳ್ಳುವುದಿಲ್ಲ ||೩೧—೩೪||

ಶ್ರೀರಾಮನು ಪ್ರಶ್ನೆಮಾಡುವನು :—

ಸ್ವಾಮಿ! ಬ್ರಹ್ಮರ್ಷಿಶ್ರೇಷ್ಠರೆ! ಈಗ ತಾವು ದೃಷ್ಟಾಂತರೂಪವಾಗಿ ಅಪ್ಪಣೆಕೊಟ್ಟ ವಿಷಯದಲ್ಲಿಯೂ ನನಗೆ ಸ್ವಲ್ಪ ಸಂಶಯವುಂಟಾಗಿರುವುದು. ಅದನ್ನು ತಾವು ಬಗೆಹರಿಸಬೇಕು. ಆಕಾಶದಲ್ಲಿ ಕಾಣುವ ನೈಲ್ಯವಾವುದುಂಟೋ, ಅದು—ಮೇರುಪರ್ವತದಲ್ಲಿ ನೀಲರತ್ನಗಳಕಾಂತಿಯೂ ಅಲ್ಲ; ಅಂಧಕಾರದ ಪ್ರಭೆಯೂ ಅಲ್ಲ. ಹೀಗಾದಮೇಲೆ, ಅಂತರಿಕ್ಷದಲ್ಲಿ ಕಾಣುವ ಆ ನೈಲ್ಯವಾವುದು? ಅದು ಯಾವುದರಿಂದ ಮಾಡಲ್ಪಟ್ಟುದು? ಅಪ್ಪಣೆಯಾಗಬೇಕು ||೩೫||

ಶ್ರೀ ವಸಿಷ್ಠರು ಉತ್ತರಹೇಳುವರು :—

ಅಯ್ಯಾ ರಾಮ! ನೀನು ಹೇಳುವುದು ಯುಕ್ತವೇ ಅಹುದು. ಆಕಾಶವು ಶೂನ್ಯಪದಾರ್ಥವಾದುದರಿಂದ, ಅದರಲ್ಲಿ ನೈಲ್ಯವೆಂಬ ಗುಣವೂ ಇಲ್ಲ. ಅಲ್ಲಿ ಯಾವ ರತ್ನಪ್ರಭೆಯೂ ಬರುವುದಕ್ಕೆ ಅವಕಾಶವೇ ಇಲ್ಲದಿರುವುದರಿಂದ, ಇದು ಮೇರುಪರ್ವತದ ರತ್ನಪ್ರಭೆಯೂ ಅಲ್ಲ ||೩೬||

'ತದಣ್ಡಮಭವದ್ಧೈಮಂ' ಇತ್ಯಾದಿ ವಚನಾನುಸಾರವಾಗಿ, ಬ್ರಹ್ಮಾಂಡಗೋಳವು ತೇಜೋಮಯವಾಗಿರುವುದು; ತೇಜಸ್ಸು ಎಂದಿಗೂ ಪ್ರಕಾಶವಾಗಿರುವುದು; ಅದುಕಾರಣ, ಬ್ರಹ್ಮಾಣ್ಡಮಧ್ಯವರ್ತಿಯಾದ ಆಕಾಶವೂ ಪ್ರಕಾಶರೂಪವಾಗಿಯೇ ಇರುವುದರಿಂದ, ಇಲ್ಲಿ ತಮಸ್ಸಿಗೆ ಸಂಭವವೇ ಇಲ್ಲ ||೩೭||

ಕೇವಲಂ ಶೂನ್ಯತೈವೈಷಾ ಬಧ್ವೀ ಸುಭಗ ಲಕ್ಷ್ಯತೇ ।
ವಯಸ್ಯೇವಾನುರೂಪಾ ಯಾ ಅವಿದ್ಯಾಯಾಅಸನ್ಮಯೀ ॥೩೮॥
ಸ್ವದೃಷ್ಟಿಕ್ಷಯಸಮ್ಪ್ರಾಪ್ತೌ ಅಕ್ಷ್ಣೋರೇವೋದಿತಂ ತಮಃ ।
ವಸ್ತುಸ್ವಭಾವಾತ್ ತದ್ವ್ಯೋಮ್ನಃ ಕಾರ್ಷ್ಣ್ಯಮಿತ್ಯವಲೋಕ್ಯತೇ ॥೩೯॥
ಏತದ್ಬುದ್ಧ್ವಾ ಯಥಾ ವ್ಯೋಮ್ನಿ ದೃಶ್ಯಮಾನೋಽಪಿ ಕಾಳಿಮಾ ।
ನ ಕಾಳಿಮೇತಿ ಬುದ್ಧಿಃ ಸ್ಯಾತ್ ಅವಿದ್ಯಾತಿಮಿರಂ ತಥಾ ॥೪೦॥
ಅಸಙ್ಕಲ್ಪೋ ಹ್ಯವಿದ್ಯಾಯಾಃ ನಿಗ್ರಹಃ ಕಥಿತೋ ಬುಧೈಃ ।
ಯಥಾ ಗಗನಪದ್ಮಿನ್ಯಾಃ ಸ ಭಾತಿ ಸುಕರಃ ಸ್ವಯಮ್ ॥೪೧॥
ಭ್ರಮಸ್ಯ ಜಾಗತಸ್ಯಾಸ್ಯ ಜಾತಸ್ಯಾಕಾಶವರ್ಣವತ್ ।
ಅಪುನಸ್ಸ್ಮರಣಂ ಮನ್ಯೇ ಸಾಧೋ ವಿಸ್ಮರಣಂ ವರಮ್ ॥೪೨॥
ನಷ್ಟೋಽಹಮಿತಿ ಸಙ್ಕಲ್ಪಾತ್ ಯಥಾ ದುಃಖೇನ ನಶ್ಯತಿ ।
ಪ್ರಬುದ್ಧೋಽಸ್ಮೀತಿ ಸಙ್ಕಲ್ಪಾತ್ ಜನೋ ಹ್ಯೇತಿ ಯಥಾ ಸುಖಮ್ ॥೪೩॥

ಅಯ್ಯಾ ರಾಮ! 'ಹಾಗಾದರೆ ಅಂತರಿಕ್ಷದಲ್ಲಿ ಕಾಣುವ ನೈಲ್ಯವಾವುದು?' ಎನ್ನುವೆಯೋ,—ಕೇವಲ ಶೂನ್ಯತ್ವವೇ ವೃದ್ಧಿಹೊಂದಿ ನೀಲತ್ವರೂಪವಾಗಿ ಕಾಣಿಸಿಕೊಳ್ಳುವುದು. ಅತ್ಯಂತಾಸತ್ತಾಗಿರುವ ಇದು, ಅವಿದ್ಯೆಗೆ ಅನುರೂಪಳಾದ ಸಖಿಯಂತೆ ಇರುವುದು ॥೩೮॥

ಕಣ್ಣುಗಳಿಗೆ ದರ್ಶನಶಕ್ತಿಯೆಲ್ಲಿಯವರೆಗೆ ಪ್ರಸರಿಸುವುದೋ, ಅಲ್ಲಿಯವರೆಗೆ ಆಕಾಶದಲ್ಲಿ ಪ್ರಕಾಶವೇ ಕಾಣಿಸುತ್ತಿರುವುದು; ಪ್ರಸರಣಶಕ್ತಿ ಕುಂಠಿತವಾದಾಗ, ಕಣ್ಣುಗಳಿಗೇ ಕತ್ತಲೆ ಮುಚ್ಚಿಕೊಂಡಂತಾಗುವುದು. ಇದು ಆಕಾಶದ ಸ್ವಭಾವವಾಗಿರುವುದು. ಇದನ್ನೇ ನೈಲ್ಯವೆಂದು ತಿಳಿದುಕೊಳ್ಳುವರು ॥೩೯॥

ಈ ತತ್ವವನ್ನು ತಿಳಿದುಕೊಂಡುಬಿಟ್ಟರೆ, ಬಳಿಕ ಅಂತರಿಕ್ಷದಲ್ಲಿ ನೈಲ್ಯ ಕಾಣಿಸುತಿದ್ದರೂ—ಇದು ನೈಲ್ಯವಲ್ಲವೆಂಬ ಜ್ಞಾನವು ಹೇಗೆ ದೃಢವಾಗುವುದೋ, ಅವಿದ್ಯೆಯೆಂಬ ಅಂಧಕಾರದ ವಿಷಯದಲ್ಲಿಯೂ ಹೀಗೆಯೇ ತಿಳಿಯಬೇಕು ॥೪೦॥

'ಆಕಾಶದಲ್ಲಿ ಸರಸ್ಸು ಹೇಗಿಲ್ಲವೋ, ಹಾಗೆ ಅವಿದ್ಯೆಯೆಂಬುದೂ ಸುತರಾಂ ಇಲ್ಲವೇ ಇಲ್ಲ' ಎಂದು ತಿಳಿದು, ಅವಿದ್ಯೆಯನ್ನು ಹೃದಯದಲ್ಲಿ ಸಂಕಲ್ಪಿಸಿಕೊಳ್ಳದಿರುವಿಕೆಯೇ, ಅವಿದ್ಯೆಗೆ ನಿಗ್ರಹೋಪಾಯವೆಂದು ಪ್ರಾಜ್ಞರಿಂದ ಹೇಳಲ್ಪಟ್ಟಿರುವುದು. ಈ ಸಂಕಲ್ಪಪರಿತ್ಯಾಗವೆಂಬುದು, ಸರ್ವರಿಗೂ ಸುಕರವಾಗಿಯೇ ಇರುವುದೆಂದು ನಾನು ತಿಳಿದಿರುವೆನು ॥೪೧॥

ಅಯ್ಯಾ ಸಾಧುವೆ! ಇದನ್ನೆಲ್ಲ ಯೋಚಿಸಿಯೇ, ನಾನು ಹಿಂದೆ 'ಆಕಾಶದಲ್ಲಿ ಕಾಣುವ ನೀಲತ್ವದಂತೆ ಉದಯಿಸುವ ಈ ಪ್ರಪಂಚಭ್ರಮೆಯನ್ನು, ಮತ್ತೆ ಸ್ಮೃತಿವಿಷಯವಾಗದಂತೆ ಸುತರಾಂ ಮರೆತುಬಿಡುವುದೇ ಉತ್ತಮವು' ಎಂದು ಹೇಳಿರುವೆನು ॥೪೨॥

ನಾನು ನಷ್ಟನಾದೆನೆಂದು ಸಂಕಲ್ಪಿಸಿಕೊಂಡರೆ—ಮನುಷ್ಯನು ಹೇಗೆ ದುಃಖದಿಂದ ನಾಶಹೊಂದುವನೋ, ನಾನು ಪ್ರಬುದ್ಧನಾಗಿರುವೆನೆಂದು ಸಂಕಲ್ಪಿಸಿಕೊಂಡರೆ—ಹೇಗೆ ಸುಖವನ್ನು

ತಥಾ ಸಮೂಢಸಙ್ಕಲ್ಪಾತ್ ಮೂಢತಾಮೇತಿ ವೈ ಮನಃ |
ಪ್ರಬೋಧೋದಾರಸಙ್ಕಲ್ಪಾತ್ ಪ್ರಬೋಧಾಯಾನುಧಾವತಿ ||೪೪||
ಕ್ಷಣಾತ್ ಸಂಸ್ಮರಣಾದೇಷಾ ಹ್ಯವಿದ್ಯೋದೇತಿ ಶಾಶ್ವತೀ |
ಯಸ್ಮಾದ್ವಿಸ್ಮರಣಾದನ್ತಃ ಪರಿಣಶ್ಯತಿ ನಶ್ವರೀ ||೪೫||
ಭಾವನೀ ಸರ್ವಭಾವಾನಾಂ ಸರ್ವಭೂತವಿಮೋಹಿನೀ |
ಭಾರಿಣೀ ಸ್ವಾತ್ಮನೋ ನಾಶೇ ಸ್ವಾತ್ಮವೃದ್ಧಾ ವಿನಾಶಿನೀ ||೪೬||
ಮನೋ ಯದನುಸನ್ಧತ್ತೇ ತತ್ ಸರ್ವೇನ್ದ್ರಿಯವೃತ್ತಯಃ |
ಕ್ಷಣಾತ್ ಸಮ್ಪಾದಯನ್ತ್ಯೇತಾಃ ರಾಜಾಜ್ಞಾಮಿವ ಮನ್ತ್ರಿಣಃ ||೪೭||
ತಸ್ಮಾನ್ಮನೋನುಸನ್ಧಾನಂ ಭಾವೇಷು ನ ಕರೋತಿ ಯಃ |
ಅನ್ತಶ್ಚೇತನಯತ್ನೇನ ಸ ಶಾನ್ತಿಮಧಿಗಚ್ಛತಿ ||೪೮||
ಯದಾದಾವೇವ ನಾಸ್ತೀದಂ ತದದ್ಯಾಪಿ ನ ವಿದ್ಯತೇ |
ಯದಿದಂ ಭಾತಿ ತದ್ಬ್ರಹ್ಮ ಶಾನ್ತಮೇಕಮನಿನ್ದಿತಮ್ ||೪೯||
ಮನನೀಯಮತೋ ನಾನ್ಯತ್ ಕದಾ ಕಸ್ಯ ಕಥಂ ಕುತಃ |

ಪಡೆಯುವನೋ, ಹಾಗೆ ಮನಸ್ಸೂ-ಮೂಢನಾಗಿರುವುದೆಂದು ಸಂಕಲ್ಪಮಾಡಿಕೊಂಡರೆ—ಮೂಢವಾಗುವುದು. ಪ್ರಬುದ್ಧವಾಗಿರುವುದೆಂದು ಸಂಕಲ್ಪಮಾಡಿಕೊಂಡರೆ-ಪ್ರಬೋಧವನ್ನೇ ಆಶ್ರಯಿಸುವುದು ||೪೩-೪೪||

ನಾನು ಅಜ್ಞನೆಂದು ಸಂಕಲ್ಪಿಸಿಕೊಂಡರೆ, ಒಂದು ಕ್ಷಣದೊಳಗಾಗಿ ಶಾಶ್ವತವಾದ ಅವಿದ್ಯೆಯುದಯಿಸುವುದು ; ಆ ಸಂಕಲ್ಪವಾಸನೆಯನ್ನು ಸಮೂಲವಾಗಿ ಛೇದಿಸಿದರೆ, ಆಕ್ಷಣವೇ ಇದು ನಶ್ವರವಾಗಿ ನಿಶ್ಶೇಷವಾಗುವುದು ||೪೫||

ಈ ಅವಿದ್ಯೆಯು, ಸಮಸ್ತವಿಧವಾದ ಭಾವಗಳನ್ನೂ ಉಂಟುಮಾಡತಕ್ಕುದು ; ಸಕಲ ಭೂತಗಳನ್ನೂ ಮೋಹಪಡಿಸತಕ್ಕುದು ; ಸ್ವಾತ್ಮನಾಶವಾದಾಗ ವಿಶೇಷವಾಗಿ ಅಭಿವರ್ಧಿಸತಕ್ಕುದು ; ಆತ್ಮವೃದ್ಧಿಯಾದಾಗ ಇದು ನಾಶಹೊಂದುವುದು ||೪೬||

ಮನಸ್ಸು ಯಾವುದನ್ನು ಅನುಸಂಧಾನಮಾಡಿಕೊಳ್ಳುವುದೋ, ಅದನ್ನು ಈ ಸಮಸ್ತವಾದ ಇಂದ್ರಿಯವ್ಯಾಪಾರಗಳೂ—ರಾಜಾಜ್ಞೆಯನ್ನು ಮಂತ್ರಿಗಳು ನೆರವೇರಿಸುವಂತೆ—ಒಂದು ಕ್ಷಣದೊಳಗಾಗಿ ನೆರವೇರಿಸುವುವು ||೪೭||

ಆದುಕಾರಣ, ಯಾವನು ಬ್ರಹ್ಮಾತ್ಮಭಾವನೆಯಿಂದ, ಇತರವಾದ ಭಾವಗಳಲ್ಲಿ ಮನೋನುಸಂಧಾನಮಾಡುವುದಿಲ್ಲವೋ, ಅವನು ಶಾಂತಿಯನ್ನು ಪಡೆಯುವನು ||೪೮||

ಯಾವುದು ಮೊದಲೂ ಇಲ್ಲವೇ ಇಲ್ಲವೋ, ಅದು ಈಗಲೂ ಇಲ್ಲ; ಈಗ ಭಾಸಮಾನವಾಗುತಿರುವುದು ಯಾವುದುಂಟೋ, ಅದು—ಶಾಂತವೂ ಅದ್ವಿತೀಯವೂ ನಿರ್ಮಲವೂ ಆದ ಬ್ರಹ್ಮವೇಯೆ ||೪೯||

ಆದುಕಾರಣ, ಬ್ರಹ್ಮವನ್ನು ಬಿಟ್ಟು ಮತ್ತಾವುದನ್ನೂ ಮನನಮಾಡಬಾರದು. ಬ್ರಹ್ಮವನ್ನು ಬಿಟ್ಟರೆ, ನಿರ್ವಿಕಾರವಾಗಿಯೂ ಅನಾದ್ಯಂತವಾಗಿಯೂ ಇರುವ ಮತ್ತೊಂದು ಪದಾ

ನಿರ್ವಿಕಾರಮನಾದ್ಯನ್ತಂ ಆಸ್ಯತಾಮುಪಯನ್ತ್ರಣಮ್ ||೫೦||
ಪರಂ ಪೌರುಷಮಾಶ್ರಿತ್ಯ ಯತ್ನಾತ್ ಪರಮಯಾ ಧಿಯಾ |
ಭೋಗಾಶಾಭಾವನಾಂ ಚಿತ್ತಾತ್ ಸಮೂಲಾಮಲಮುದ್ಧರೇತ್ ||೫೧||
ಯದುದೇತಿ ಪರೋ ಮೋಹೋ ಜರಾಮರಣಕಾರಣಮ್ |
ಆಶಾಪಾಶಶತೋಲ್ಲಾಸಿವಾಸನಾ ತದ್ವಿಜೃಮ್ಭತೇ ||೫೨||
ಮಮ ಪುತ್ರಾಮಮ ಧನಂ ಅಯಂ ಸೋಽಹಮಿದಂ ಮಮ |
ಇತೀಯಮಿನ್ದ್ರಜಾಲೇನ ವಾಸನೈವ ವಿವಲ್ಗತಿ ||೫೩||
ಶೂನ್ಯಏವ ಶರೀರೇಸ್ಮಿನ್ ವಿಲೋಲೋ ಜಲವಾತವತ್ |
ಅನನ್ಯಯಾ ವಾಸನಯಾ ತ್ವಹಮ್ಭಾವಾಹಿರರ್ಪಿತಃ ||೫೪||
ಪರಮಾರ್ಥೇನ ತತ್ತ್ವಜ್ಞ ಮಮಾಹಮಿದಮಿತ್ಯಲಮ್ |
ಆತ್ಮತತ್ತ್ವಾದೃತೇ ಸತ್ಯಂ ನ ಕದಾಚನ ಕಿಞ್ಚನ ||೫೫||
ಖಾದ್ರಿದ್ಯೂರ್ವೀನದೀಶ್ರೇಣ್ಯೋ ದೃಷ್ಟಿಸೃಷ್ಟ್ಯಾ ಪುನಃಪುನಃ |
ಸೈವಾನ್ಯೇವ ವಿಚಿತ್ರೇಯಂ ಅವಿದ್ಯಾ ಪರಿವರ್ತತೇ ||೫೬||

ರ್ಥವು ಯಾವ ಕಾಲದಲ್ಲಿರುವುದು? ಅದು ಯಾತರದು? ಅದು ಹೇಗಿರುವುದು? ಯಾತರಿಂದ ಬಂದಿತು? ಹೀಗೆ ಬ್ರಹ್ಮವ್ಯತಿರಿಕ್ತವಾದ ಪದಾರ್ಥಾಂತರವಿರುವುದೇ ಅಸಂಭವವೆಂದು ತಿಳಿದು, ಪೂರ್ಣರೂಪನಾಗಿರಬೇಕು ||೫೦||

ಪ್ರಯತ್ನಪೂರ್ವಕವಾಗಿ ವಿಶೇಷವಾದ ಪುರುಷಕಾರವನ್ನವಲಂಬಿಸಿ, ಉತ್ತಮವಾದ ಜ್ಞಾನದಿಂದ, ಭೋಗೇಚ್ಛಾಭಾವನೆಯನ್ನು ಮೂಲದೊಡನೆ ಸಂಪೂರ್ಣವಾಗಿ ಕಿತ್ತುಬಿಡಬೇಕು ||೫೧||

ಜರಾಮರಣಾದಿಕಾರಣವಾದ ಮಹಾಮೋಹವುದಯಿಸುವುದೆಂಬುದಾವುದುಂಟೋ, ಅದು-ನೂರಾರು ಆಶಾಪಾಶಗಳಿಂದ ವಿರಾಜಿಸುತ್ತಿರುವ ಕರ್ಮವಾಸನೆಯು ||೫೨||

'ಇವನು ನನ್ನ ಮಗನು; ಇದು ನನ್ನ ಧನವು; ನಾನು ಇಂಥವನು; ಇದು ನನ್ನದು.' ಎಂಬುದಾಗಿ ಈಯಿಂದ್ರಜಾಲರೂಪದಿಂದ ವಾಸನೆಯೇ ವಿಲಾಸಪಡುತ್ತಿರುವುದು ||೫೩||

ನೀರಿನಲ್ಲಿ ವಾತವು ತರಂಗವನ್ನು ಕಲ್ಪಿಸುವಂತೆ, ಸುತರಾಂ ಶೂನ್ಯವಾದ ಈ ಶರೀರದಲ್ಲಿ ವಾಸನೆಯು ಅಹಂಭಾವವೆಂಬ ಸರ್ಪವನ್ನು ಕಲ್ಪಿಸುವುದು ||೫೪||

ಎಲೈ ವಿವೇಕಿಯಾದ ರಾಮನೆ! ಪರಮಾರ್ಥವಿಚಾರ ಮಾಡಿದ್ದರೆ, ಆತ್ಮಪದಾರ್ಥವೊಂದು ಹೊರತು, ನಾನು ನನ್ನದು ಇತ್ಯಾದಿರೂಪವಾದ ಯಾವುದೊಂದೂ ಸತ್ಯವಲ್ಲ ||೫೫||

ಆಕಾಶ ಪರ್ವತ ಸ್ವರ್ಗ ಭೂಮಿ ನದಿ-ಇವುಗಳು ಪರಂಪರೆಯಾಗಿ ಪುನಃಪುನಃ ಸೃಷ್ಟಿಯಾಗುತಿರುವುವಲ್ಲವೆ! ಇವುಗಳು ಯಾವಾಗ ದೃಷ್ಟಿವಿಷಯವಾಗುವುವೋ, ಆಗಲೇ ಸೃಷ್ಟಿಯಾಗುವಂತೆ ಭಾವನೆಯುಂಟಾಗುವುದು. ಒಂದಾವೃತ್ತಿ ನೋಡಿದ ಪದಾರ್ಥವೇ ಪುನಃ ಗೋಚರವಾದರೂ, ಅದೇ ಬೇರೆಯಾಗಿ ತೋರುವುದು. ಹೀಗೆ ಈ ಅವಿದ್ಯೆಯು ಅತಿ ವಿಚಿತ್ರವಾಗಿ ಸುತ್ತುತ್ತಿರುವುದು ||೫೬||

ಉದೇತ್ಯಜ್ಞಾನಮಾತ್ರೇಣ ನಶ್ಯತಿ ಜ್ಞಾನಮಾತ್ರತಃ ।
ಸನ್ಮಾತ್ರೇ ಪರಿವಿಚ್ಛೇದ್ಯಾ ರಜ್ಜ್ವಾಮಿವ ಭುಜಙ್ಗಧೀಃ ॥೫೭॥
ಖಾದ್ರ್ಯಬ್ಧ್ಯರ್ವೀನದೀ ಸೇಯಂ ಯಾಽವಿದ್ಯಾಽಜ್ಞಸ್ಯ ರಾಘವ ।
ನಾವಿದ್ಯಾ ಜ್ಞಸ್ಯ ತದ್ಬ್ರಹ್ಮ ಸ್ವಮಹಿಮ್ನಾ ವ್ಯವಸ್ಥಿತಮ್ ॥೫೮॥
ರಜ್ಜುಸರ್ಪವಿಕಲ್ಪೌ ದ್ವೌ ಅಜ್ಞೇನೈವೋಪಕಲ್ಪಿತೌ ।
ಜ್ಞೇನ ತ್ವೇಕೈವ ನಿರ್ಣೀತಾ ಬ್ರಹ್ಮದೃಷ್ಟಿರಕೃತ್ರಿಮಾ ॥೫೯॥
ಮಾ ಭವಾಜ್ಞೋ ಭವ ಪ್ರಾಜ್ಞೋ ಜಹಿ ಸಂಸಾರವಾಸನಾಮ್ ।
ಅನಾತ್ಮನ್ಯಾತ್ಮಭಾವೇನ ಕಿಮಜ್ಞ ಇವ ರೋದಿಷಿ ॥೬೦॥
ಕಸ್ತವಾಯಂ ಜಡೋ ಮೂಕೋ ದೇಹೋ ಭವತಿ ರಾಘವ ।
ಯದರ್ಥಂ ಸುಖದುಃಖಾಭ್ಯಾಂ ಅವಶಃ ಪರಿಭೂಯಸೇ ॥೬೧॥
ಯಥಾ ಹಿ ಕಾಷ್ಠಜತುನೋಃ ಯಥಾ ಬದರಕಾಣ್ಡಯೋಃ ।
ಶ್ಲಿಷ್ಟಯೋರಪಿ ನೈಕತ್ವಂ ದೇಹದೇಹವತೋಸ್ತಥಾ ॥೬೨॥

ರಜ್ಜುವಿನಲ್ಲಿ ಸರ್ಪಬುದ್ಧಿಯುದಯಿಸುದಂತೆ, ಕೇವಲ ಸತ್ತಾಮಾತ್ರಗೋಚರವಾದ ಆ ಪರಬ್ರಹ್ಮವಸ್ತುವಿನಲ್ಲಿ, ಅಜ್ಞಾನಮಾತ್ರದಿಂದಲೇ ಪ್ರಪಂಚಜ್ಞಾನವುದಯಿಸುವುದು; ಜ್ಞಾನವುಂಟಾದೊಡನೆಯೇ ಅದು ನಷ್ಟವಾಗುವುದು ॥೫೭॥

ಅಯ್ಯಾ! ರಾಘವ! ಅಜ್ಞನಾದವನ ಅವಿದ್ಯೆಯಾವುದಿರುವುದೋ, ಅದೇ—ಈ ಆಕಾಶ ಪರ್ವತ ಸಮುದ್ರ ನದೀಪ್ರಭೃತಿರೂಪವಾಗಿರುವುದು. ಪ್ರಾಜ್ಞನಿಗಾದರೋ, ಈ ಅವಿದ್ಯೆಯಿಲ್ಲ; ಅವನಿಗೆ, ಅವನ ಜ್ಞಾನಮಹಿಮೆಯಿಂದ, ಇದೆಲ್ಲವೂ ಬ್ರಹ್ಮವಾಗಿಯೇ ಇರುವುದು ॥೫೮॥

ಇದು ರಜ್ಜುವೆಂದೂ ಇದು ಸರ್ಪವೆಂದೂ ಈಯೆರಡು ವಿಕಲ್ಪಗಳು ಅಜ್ಞನಿಂದಲೇ ಕಲ್ಪಿತವಾಗಿರುವುವು ; ಪ್ರಾಜ್ಞನಿಂದಲಾದರೋ, ಅಕೃತ್ರಿಮವಾದ ಬ್ರಹ್ಮಜ್ಞಾನವೊಂದೇ ಇರುವುದೆಂದು ನಿಶ್ಚಯಿಸಲ್ಪಟ್ಟಿರುವುದು ॥೫೯॥

ಆದುಕಾರಣ, ವತ್ಸ! ರಾಮ! ನೀನು ಅಜ್ಞನಾಗಬೇಡ; ಪ್ರಾಜ್ಞನಾಗಿರು. ಈ ಸಂಸಾರವಾಸನೆಯನ್ನು ಬಿಟ್ಟುಬಿಡು. ಆತ್ಮನಲ್ಲದುದರಲ್ಲಿ ಆತ್ಮನೆಂಬ ಭಾವನೆಯನ್ನು ಮಾಡಿಕೊಂಡು, ಅಜ್ಞನಹಾಗೆ ಏತಕ್ಕಾಗಿ ದುಃಖಪಡುವೆ? ॥೬೦॥

ನೀನು ಯಾವುದಕ್ಕೋಸ್ಕರ ಸುಖದುಃಖಗಳಿಂದ ಪರಾಧೀನನಾಗಿ ಹಿಂಸಿಸಲ್ಪಡುತ್ತಿರುವೆಯೋ, ಅಂತಹ-ಜಡವಾಗಿಯೂ ಮೂಕವಾಗಿಯೂ ಇರುವ-ಈ ದೇಹವು ನಿನಗೆ ಏನಾಗಬೇಕು? ॥೬೧॥

ಒಂದು ಕಡ್ಡಿಯೂ ಅರಗೂ ಸೇರಿಕೊಂಡಿರುವುವಲ್ಲವೆ! ಹಾಗೆಯೇ, ಎಲಚಿಯ ಹಣ್ಣೂ ಬೀಜವೂ ಸೇರಿಕೊಂಡಿರುವುವಷ್ಟೆ! ಇವೆರಡೂ ಅಂಟಿಕೊಂಡಿರುವಂತೆಯೇ ಇದ್ದರೂ, ವಸ್ತುತಃ ಇವೆರಡಕ್ಕೂ ಹೇಗೆ ಐಕ್ಯವಿಲ್ಲವೋ, ಹಾಗೆಯೇ-ದೇಹವೂ ಆತ್ಮನೂ ಸೇರಿಕೊಂಡಿದ್ದರೂ-ಇವೆರಡಕ್ಕೂ ಐಕ್ಯವಿಲ್ಲ. (ದೇಹವನ್ನು ಆತ್ಮನೆಂದು ತಿಳಿಯಬಾರದೆಂದು ಭಾವವು) ॥೬೨॥

ಭಸ್ತ್ರಾದಾಹೇ ಯಥಾ ದಾಹೋ ನ ಭಸ್ತ್ರಾನ್ತರವರ್ತಿನಃ |
ಪವನಸ್ಯ ತಥಾ ದೇಹನಾಶೇನಾತ್ಮಾ ನ ನಶ್ಯತಿ ||೬೩||
ದುಃಖಿತೋಽಹಂ ಸುಖಾಢ್ಯೋಽಹಂ ಇತಿ ಭ್ರಾನ್ತಿಂ ರಘೂದ್ವಹ |
ಮೃಗತೃಷ್ಣೋಪಮಾಂ ಬುದ್ಧ್ವಾ ತ್ಯಜ ಸತ್ಯಂ ಸಮಾಶ್ರಯ ||೬೪||
ಅಹೋನು ಚಿತ್ರಂ ಯತ್ ಸತ್ಯಂ ಬ್ರಹ್ಮ ತದ್ವಿಸ್ಮೃತಂ ನೃಣಾಮ್ |
ಯದಸತ್ಯಮವಿದ್ಯಾಖ್ಯಂ ತನ್ನೂನಂ ಸ್ಮೃತಿಮಾಗತಮ್ ||೬೫||
ಪ್ರಸರಂ ತ್ವಮವಿದ್ಯಾಯಾಃ ಮಾ ಪ್ರಯಚ್ಛ ರಘೂದ್ವಹ |
ಅನಯೋಪಹಿತೇ ಚಿತ್ತೇ ದುಷ್ಪ್ರರೇಹ ಕದರ್ಥನಾ ||೬೬||
ಮಿಥ್ಯೈವಾನರ್ಥಕಾರಿಣ್ಯಾ ಮನೋಮನನಪೀನಯಾ |
ಅನಯಾ ದುಃಖದಾಯಿನ್ಯಾ ಮಹಾಮೋಹಫಲಾನ್ತಯಾ ||೬೭||
ಚನ್ದ್ರಬಿಮ್ಬೇ ಸುಧಾರ್ದ್ರೇಽಪಿ ಕೃತ್ವಾ ರೌರವಕಲ್ಪನಮ್ |
ನಾರಕಂ ದಾಹಸಂಶೋಷದುಃಖಂ ಸಮನುಭೂಯತೇ ||೬೮||
ಜಲಕಲ್ಲೋಲಕಲ್ಹಾರಪುಷ್ಪಸೀಕರವೀಚಿಷು |
ಸರಸ್ಸು ಮೃಗತೃಷ್ಣಾಢ್ಯಮರುತ್ವಂ ಪರಿದೃಶ್ಯತೇ ||೬೯||

ಒಂದು ಚೀಲವನ್ನು ಸುಟ್ಟುಬಿಟ್ಟಮಾತ್ರದಿಂದಲೇ—ಅದರೊಳಗಿರುವ ವಾಯುವಿಗೆ ಹೇಗೆ ನಾಶವಿಲ್ಲವೋ, ಹಾಗೆ ದೇಹಕ್ಕೆ ನಾಶವಾದಮಾತ್ರದಿಂದಲೇ—ಆತ್ಮನಿಗೆ ನಾಶವಾಗುವುದಿಲ್ಲ ||

ಆದುಕಾರಣ, ಅಯ್ಯಾ ರಘುಶ್ರೇಷ್ಠ! ನಾನು ದುಃಖಿತನಾಗಿರುವೆನೆಂದೂ ನಾನು ಸುಖಿತನಾಗಿರುವೆನೆಂದೂ ಭ್ರಾಂತಿಪಡುವುದು ಮೃಗತೃಷ್ಣಿಕೆಗೆ ಸಮಾನವೆಂದು ತಿಳಿದು, ಇದನ್ನು ಬಿಟ್ಟುಬಿಡು; ಸತ್ಯವಾದುದನ್ನು ಆಶ್ರಯಿಸು ||೬೪||

ಅಹಹ! ಇದೆಂತಹ ವಿಚಿತ್ರವು!! ಯಾವುದು ವಸ್ತುತಃ ಸತ್ಯವಾದುದೋ, ಅಂತಹ ಬ್ರಹ್ಮವಸ್ತುವು ಮನುಷ್ಯರಿಗೆ ಮರೆತೇಹೋಗಿರುವುದು; ಯಾವ ಅವಿದ್ಯೆಯೆಂಬುದು ಸ್ವತರಾಂ ಅಸತ್ಯವಾದುದೋ, ಅದು ನಿಶ್ಚಯವಾಗಿಬಿಟ್ಟು ಸರ್ವದಾ ಸ್ಮರಣೆಗೆ ಬರುತಿರುವುದು ||೬೫||

ಅಯ್ಯಾ! ರಾಮ! ನೀನು ಈ ಅವಿದ್ಯೆಯ ಪ್ರಸರಣಕ್ಕೆಂದಿಗೂ ಅವಕಾಶಕೊಡಬೇಡ. ಈ ಅವಿದ್ಯೆಯಿಂದ ಚಿತ್ತವು ಆಕ್ರಮಿಸಲ್ಪಟ್ಟಬಳಿಕ, ಇದರಿಂದುಂಟಾಗುವ ತೊಂದರೆಯನ್ನು ಕಳೆದುಕೊಳ್ಳುವುದೇ ಅಸಾಧ್ಯವಾಗುವುದು ||೬೬||

ಈ ಅವಿದ್ಯೆಯು ಸುಳ್ಳುಸುಳ್ಳಾಗಿಯೇ ಅನರ್ಥಗಳನ್ನುಂಟುಮಾಡುವುದು; ಮನಸ್ಸಿನಲ್ಲಿ ಮನನಮಾಡೋಣದರಿಂದ ಇದು ಅಭಿವೃದ್ಧಿಹೊಂದುವುದು; ನಾನಾವಿಧ ದುಃಖಗಳನ್ನು ಕೊಡುತ, ಕೊನೆಗೆ ಮಹಾಮೋಹವನ್ನು ಫಲಿಸುವುದು. ಇಂತಹ ಅವಿದ್ಯೆಯ ಮಹಿಮೆಯಿಂದ, ಪುರುಷನು, ಅಮೃತಸಿಕ್ತವಾದ ಚಂದ್ರಮಂಡಲದಲ್ಲಿಯೂ ರೌರವನರಕವನ್ನು ಕಲ್ಪಿಸಿಕೊಂಡು, ನರಕಸಂಬಂಧವಾದ ದಾಹಾದಿದುಃಖವನ್ನನುಭವಿಸುವನು. ಇದರ ಮಹಿಮೆಯಿಂದಲೇ, ಜಲತರಂಗ ಕಲ್ಹಾರಾದಿಪುಷ್ಪ ಜಲಸೀಕರಗಳಿಂದ ಪರಿಪೂರ್ಣವಾಗಿರುವ ಸರಸ್ಸುಗಳಲ್ಲಿಯೂ, ಪುರುಷನು ಮೃಗತೃಷ್ಣಿಕಾಪರಿಪೂರ್ಣವಾದ ಮರುಭೂಮಿತ್ವವನ್ನು ಕಾಣುವನು. ಈ ಅವಿದ್ಯೆಯ

ನಭೋನಗರನಿರ್ಮಾಣಪಾತೋತ್ಪಾತನಸಂಭ್ರಮಾಃ |
ಸ್ವಪ್ನಾದಿಷ್ವನುಭೂಯನ್ತೇ ವಿಚಿತ್ರಾಃ ಸುಖದುಃಖದಾಃ ||೨೦||
ಸಂಸಾರವಾಸನಾಶ್ಛೇತೋ ಯದಿ ನಾಮ ನ ಪೂರಯೇತ್ |
ತಜ್ಜಾಗ್ರತ್ಸ್ವಪ್ನಸಂರಮ್ಭಾಃ ಕಿಂ ನಯೇಯುರಿಹಾಪದಮ್ ||೨೧||
ದೃಶ್ಯತೇ ರೌರವಾವೀಚಿನರಕಾನರ್ಥಶಾಸನಾ |
ಮಿಥ್ಯಾಜ್ಞಾನೇ ಗತೇ ವೃದ್ಧಿಂ ಸ್ವಪ್ನೋಪವನಭೂಮಿಷು ||೨೨||
ಅನಯಾ ವೇಧಿತಂ ಚೇತೋ ಬಿಸತನ್ತಾವಪಿ ಕ್ಷಣಾತ್ |
ಪಶ್ಯತ್ಯಖಿಲಸಂಸಾರಸಾಗರಾನರ್ಥವಿಭ್ರಮಮ್ ||೨೩||
ಅನಯೋಪಹತೇ ಚಿತ್ತೇ ರಾಜ್ಯಪಿವ ಹಿ ಸಂಸ್ಥಿತಾಃ |
ತಾಸ್ತಾ ದೃಶೋ ಜನಾಯಾನ್ತಿ ಯಾನ ಯೋಗ್ಯಾಃ ಶ್ವಪಾಕಿನಃ ||೨೪||
ತಸ್ಮಾದ್ರಾಮ ಪರಿತ್ಯಜ್ಯ ವಾಸನಾಂ ಭವಬನ್ಧಿನೀಮ್ |
ಸರ್ವರಾಗಮಯೀಂ ತಿಷ್ಠ ನೀರಾಗಃ ಸ್ಫಟಿಕೋ ಯಥಾ ||೨೫||
ತಿಷ್ಠತಸ್ತವ ಕಾರ್ಯೇಷು ಮಾಸ್ತು ರಾಗೇಷು ರಞ್ಜನಾ |

ಮಹಿಮೆಯಿಂದಲೇ, ಸ್ವಪ್ನಾದಿಕಾಲಗಳಲ್ಲಿ, ನಾನಾವಿಧ ಸುಖದುಃಖಪ್ರದಗಳಾದ–ಅತಿ ವಿಚಿತ್ರಗಳಾದ–ಆಕಾಶನಗರ ನಿರ್ಮಾಣವನ್ನೂ ಪತನೋತ್ಪತನಗಳನ್ನೂ ಇನ್ನೂ ನಾನಾವಿಧ ಸಂಭ್ರಮಗಳನ್ನೂ ಪುರುಷನು ಅನುಭವಿಸುವನು ||೧೭–೨೦||

ಈ ಅವಿದ್ಯೆಯು ವಿಚಿತ್ರವಾದ ಸಂಸಾರವಾಸನೆಗಳನ್ನು ಮನಸ್ಸಿನಲ್ಲಿ ತುಂಬದಿದ್ದರೆ, ಜಾಗ್ರತ್ಕಾಲದಲ್ಲಿಯೂ ಸ್ವಪ್ನಕಾಲದಲ್ಲಿಯೂ ಅನುಭವಿಸುವ ಈ ಸಂಭ್ರಮಗಳು ಪುರುಷರಿಗೆ ಇಷ್ಟು ವಿಪತ್ತುಗಳನ್ನು ಕೊಡುತಿದ್ದುವೇ? ||೨೧||

ಸ್ವಪ್ನವೆಂಬ ಉಪವನಭೂಮಿಗಳಲ್ಲಿ, ಅಸತ್ಯಜ್ಞಾನವೆಂಬ ಅಂಕುರವು ಬೆಳೆಯಲಾಗಿ, ರೌರವ ಅವೀಚಿ ಮುಂತಾದ ನರಕಗಳ ಯಾತನೆಯೆಲ್ಲವೂ ಅನುಭವಕ್ಕೆ ಬರುವುದು ||೨೨||

ಈ ಅವಿದ್ಯೆಯಿಂದ ಆಹತವಾದ ಚಿತ್ತವು, ಒಂದು ಕ್ಷಣಕಾಲದೊಳಗಾಗಿ, ಬಿಸತಂತುವಿನಲ್ಲಿಯೂ ಕೂಡ, ಈ ಸಮಸ್ತ ಸಂಸಾರಸಾಗರವೆಂಬ ಅನರ್ಥವಿಲಾಸವನ್ನೆಲ್ಲ ನೋಡಿಬಿಡುವುದು ||

ಈ ಅವಿದ್ಯೆಯಿಂದ ಚಿತ್ತವು ಉಪಘಾತಪಡೆದಿರಲಾಗಿ, ದಿವ್ಯವಾದ ರಾಜ್ಯಪದವಿಯಲ್ಲಿಯೇ ಇರತಕ್ಕ ಜನರೂ ಕೂಡ, ಶುದ್ಧಶ್ವಪಚನಿಗೂ ಯೋಗ್ಯವಲ್ಲದ ಅಂತಹ ದುರವಸ್ಥೆಗಳನ್ನೆಲ್ಲ ಅನುಭವಿಸುವರು ||೨೪||

ಅದುಕಾರಣ, ಅಯ್ಯಾ ರಾಮ! ಸಂಸಾರಬಂಧವನ್ನುಂಟುಮಾಡುವ ಸರ್ವರಾಗಮಯವಾದ ಅವಿದ್ಯಾವಾಸನೆಯನ್ನು ನೀನು ಸುತರಾಂ ಪರಿತ್ಯಜಿಸಿ, ಸ್ಫಟಿಕಮಣಿಯಂತೆ ರಾಗಶೂನ್ಯನಾಗಿರು ||೨೫||

ಸ್ಫಟಿಕಮಣಿಯು ತನ್ನ ಹತ್ತಿರದಲ್ಲಿಟ್ಟ ನಾನಾವರ್ಣವಾದ ಪದಾರ್ಥಗಳ ಪ್ರತಿಬಿಂಬವನ್ನೆಲ್ಲ ಗ್ರಹಿಸಿದರೂ ಆ ಪದಾರ್ಥಗಳ ಬಣ್ಣವು ಸ್ಫಟಿಕಕ್ಕೆ ಹೇಗೆ ಅಂಟಿಕೊಳ್ಳುವುದಿಲ್ಲವೋ,

ಸ್ಫಟಿಕಸ್ಯೇವ ಚಿತ್ರಾಣಿ ಪ್ರತಿಬಿಮ್ಬಾನಿ ಗೃಹ್ಣತಃ ||೭೬||
ವಿದಿತಕೌತುಕಸಜ್ಜ್ಞಸಮಿದ್ಧಯಾ ಯದಿ ಕರೋಷಿ ಸದೈವ ಸುಶೀಲಯಾ |
ವರಧಿಯಾ ಗತಪ್ರಾಕೃತಿಕಕ್ರಿಯಃ ತದಸಿ ಕೇನ ಮಹಾನುಪಮೀಯಸೇ ||೭೭||

ಇತಿ ಉತ್ಪತ್ತಿಪ್ರಕರಣೇ ಯಥಾಕಥಿತದೋಷಪರಿಹಾರೋಪದೇಶೋ
ನಾಮ ಚತುರ್ದಶಾಧಿಕ ಶತತಮಃ ಸರ್ಗಃ.

ಹಾಗೆ ನೀನು ಲೋಕಾನುಗುಣವಾದ ನಾನಾವಿಧ ವ್ಯವಹಾರಗಳಲ್ಲಿರುತಿದ್ದರೂ–ಅವುಗಳ ಲೇಪವು ನಿನಗುಂಟಾಗದಂತೆ ಜಾಗರೂಕನಾಗಿರು ||೭೬||

ಅಯ್ಯಾ ರಾಮ! ತತ್ವಜ್ಞಾನಿಗಳ ಸಮವಾಯದಲ್ಲಿ ಸೇರಿ ನಾನಾವಿಧ ವಿಚಾರಗಳಿಂದ ಪ್ರದೀಪ್ತವಾಗಿ ಸರ್ವದಾ ಸತ್ಕಾರ್ಯಾಸಕ್ತವಾದ ಬುದ್ಧಿಯಿಂದ ನೀನು ಪ್ರಪಂಚವ್ಯವಹಾರವನ್ನು ನಡೆಯಿಸಿಕೊಂಡು ಬರುತ್ತಿದ್ದಪಕ್ಷದಲ್ಲಿ, ನಿನಗೆ ಅವಿದ್ಯಾಪ್ರಯುಕ್ತಗಳಾದ ಜನನಮರಣಾದಿಗಳೆಲ್ಲವೂ ತೊಲಗುವುದರಲ್ಲಿ ಸಂಶಯವಿಲ್ಲ. ಆಗ ನಿನಗೆ ಈ ಪ್ರಪಂಚದಲ್ಲಿ ಸಮಾನರಾದವರು ಯಾರುತಾನೆ ಇರುವರು? ||೭೭||

ಇದು ಉತ್ಪತ್ತಿಪ್ರಕರಣದಲ್ಲಿ ದೋಷಪರಿಹಾರೋಪದೇಶವೆಂಬ
ನೂರಹದಿನಾಲ್ಕನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚದಶೋತ್ತರಶತತಮಃ ಸರ್ಗಃ.

ಶ್ರೀವಾಲ್ಮೀಕಿರುವಾಚ.

ಏವಮುಕ್ತೋ ಭಗವತಾ ವಸಿಷ್ಠೇನ ಮಹಾತ್ಮನಾ ।
ರಾಮಃ ಕಮಲಪತ್ರಾಕ್ಷಃ ಉನ್ಮೀಲಿತಇವಾಬಭೌ ॥೧॥
ವಿಕಾಸಿತಾನ್ತಃಕರಣಃ ಶೋಭಾಮಲಮುಪಾಯಯೌ ।
ಆಶ್ವಸ್ತಸ್ತಮಸಿ ಕ್ಷೀಣೇ ಪದ್ಮೋಽರ್ಕಾಲೋಕನಾದಿವ ॥೨॥
ಬೋಧವಿಸ್ಮಯಸಞ್ಜಾತಸೌಮ್ಯಸ್ಮಿತಸಿತಾನನಃ ।
ದನ್ತರಶ್ಮಿಸುಧಾಧೌತಾಂ ಇಮಾಂ ವಾಚಮುವಾಚ ಹ ॥೩॥

ಶ್ರೀರಾಮಉವಾಚ.

ಅಹೋನು ಚಿತ್ರಂ ಪದ್ಮೋತ್ಥೈಃ ಬದ್ಧಾಸ್ತನ್ತುಭಿರದ್ರಯಃ।
ಅವಿದ್ಯಮಾನಾ ಯಾಽವಿದ್ಯಾ ತಯಾ ಸರ್ವೇ ವಶೀಕೃತಾಃ ॥೪॥

ಉತ್ಪತ್ತಿಪ್ರಕರಣದಲ್ಲಿ ನೂರಹದಿನೈದನೆಯ ಸರ್ಗವು.

ರಾಮಸ್ಯ ಬೋಧಾದಾಶ್ಚರ್ಯಂ ಮಾಯಾ ತನ್ನಾಶಸಂಸ್ಥಿತಿಃ ।
ಲವಣಾಪನ್ನಿದಾನಂ ಚ ಪೃಷ್ಟಮತ್ರ ಪ್ರಕೀರ್ತ್ಯತೇ ॥

ಶ್ರೀರಾಮನು ಪ್ರಬುದ್ಧನಾಗಿ ಆಶ್ಚರ್ಯಪಡುವಿಕೆಯೂ, ರಾಮನ ಪ್ರಶ್ನಾನಂತರ ವಸಿಷ್ಠರು ಹೇಳುವ-ಮಾಯಾಸ್ವರೂಪವೂ, ಮಾಯಾನಾಶಪ್ರಕ್ರಮವೂ, ಲವಣರಾಜನ ವಿಪತ್ತಿಗೆ ಕಾರಣವೂಕೂಡ, ಈ ಸರ್ಗದಲ್ಲಿ ಹೇಳಲ್ಪಡುವುವು.

ಇದುವರೆಗೆ ನಡೆದ ವೃತ್ತಾಂತವನ್ನೆಲ್ಲ ವಾಲ್ಮೀಕಿಮುನಿಯು ಭರದ್ವಾಜನೆಂಬ ಶಿಷ್ಯನಿಗೆ ಹೇಳುತಿದ್ದನಷ್ಟೆ! ಈಗ ಮತ್ತೆ ವಾಲ್ಮೀಕಿಮುನಿಯು ಭರದ್ವಾಜನನ್ನು ಕುರಿತು ಹೇಳುವನು :—

ಅಯ್ಯಾ! ಭರದ್ವಾಜ! ಕಮಲನೇತ್ರನಾದ ರಾಮನು, ಮಹಾತ್ಮನಾದ ವಸಿಷ್ಠಮುನಿಯಿಂದ ಹೀಗೆ ಹೇಳಲ್ಪಟ್ಟವನಾಗಿ, ತತ್ವಮಾರ್ಗದಲ್ಲಿ ಕಣ್ಣುಬಿಟ್ಟವನಂತೆ ಆದನು ॥೧॥

ಹೃದಯದಲ್ಲಿ ವಿಕಾಸಹೊಂದಿದವನಾಗಿ, ಸಮಾಧಾನವಿಶಿಷ್ಟನಾಗಿ, ಕತ್ತಲೆ ಕಳೆದಬಳಿಕ ಸೂರ್ಯೋದಯದಿಂದ ಕಮಲವು ವಿರಾಜಿಸುವಂತೆ, ವಿಶೇಷವಾಗಿ ಕಾಂತಿಯನ್ನು ಪಡೆದನು ॥೨॥

ಜ್ಞಾನದಿಂದಲೂ ಆಶ್ಚರ್ಯದಿಂದಲೂ ಹುಟ್ಟಿದ ಮೃದುವಾದ ಮಂದಹಾಸದಿಂದ ಮುಖವನ್ನು ಶುಭ್ರಮಾಡಿಕೊಂಡು, ದಂತಕಾಂತಿಯೆಂಬ ಅಮೃತದಿಂದ ಕ್ಷಾಳಿತವಾದಂತೆ ಶುದ್ಧವಾಗಿರುವ ಈ ಮಾತನ್ನು ಹೇಳಿದನು ॥೩॥

ಆಗ ಶ್ರೀರಾಮನು ಹೇಳಿದುದೇನೆಂದರೆ :—

ಅಹಹ! ಏನಾಶ್ಚರ್ಯವು!! ಕಮಲಪುಷ್ಪದಿಂದ ತೆಗೆದ ನೂಲುಗಳಿಂದ ದೊಡ್ಡ ಪರ್ವತಗಳು ಕಟ್ಟಲ್ಪಟ್ಟುವಲ್ಲ!!! ಯಾವ ಅವಿದ್ಯೆಯು ಸುತರಾಂ ಇಲ್ಲವೇಯಿಲ್ಲವೋ, ಅದರಿಂದ ಸರ್ವರೂ ವಶಗೊಳಿಸಲ್ಪಟ್ಟಿರುವರು ॥೪॥

ಇದಂ ತದ್ವಜ್ರತಾಂ ಯಾತಂ ತೃಣಮಾತ್ರಂ ಜಗತ್ತ್ರಯೇ |
ಅವಿದ್ಯಯಾಪಿ ಯನ್ನಾಮಾಽಸದೇವ ಸದಿವ ಸ್ಥಿತಮ್ ||೫||
ಅಸ್ಯಾಃ ಸಂಸಾರಮಾಯಾಯಾಃ ನದ್ಯಾಸ್ತ್ರಿಭುವನಾಜ್ಗ ಣೇ |
ರೂಪಂ ಮದವಬೋಧಾರ್ಥಂ ಕಥಯಾನುಗ್ರಹಾತ್ ಪುನಃ ||೬||
ಅನ್ಯೋ ಯತ್ ಸಂಶಯೋಽಯಂ ಮೇ ಮಹಾತ್ಮನ್ ಹೃದಿ ವರ್ತತೇ |
ಲವಣೋಽಸೌ ಮಹಾಭಾಗಃ ಕಿನ್ನಾಮಾಪದಮಾಪ್ತವಾನ್ ||೭||
ಸಂಶ್ಲಿಷ್ಟಯೋರಾಹತಯೋಃ ದ್ವಯೋರ್ವಾ ದೇಹದೇಹಿನೋಃ |
ಬ್ರಹ್ಮನ್ ಕ ಇವ ಸಂಸಾರೀ ಶುಭಾಶುಭಫಲೈಕಭಾಕ್ ||೮||
ಲವಣಸ್ಯ ತಥಾ ದತ್ವಾ ತಾಮಾಪದಮನುತ್ತಮಾಮ್ |
ಕಿಂ ಗತಶ್ಚ ಇಹ ಲೀಲಾರಮ್ಭಃ ಕಶ್ಚಾಸಾವೈನ್ದ್ರಜಾಲಿಕಃ ||೯||

ಶ್ರೀ ವಸಿಷ್ಠ ಉವಾಚ.

ಕಾಷ್ಠಕುಡ್ಯೋಪಮೋ ದೇಹೋ ನ ಕಿಞ್ಚನ ಇಹಾನಘ |
ಸ್ವಪ್ನಾಲೋಕ ಇವಾನೇನ ಚೇತಸಾ ಪರಿಕಲ್ಪ್ಯತೇ ||೧೦||

ಇಂತಹ ಅವಿದ್ಯೆಯ ಮಹಿಮೆಯಿಂದಲೂ ಕೂಡ, ವಸ್ತುತಃ ಅಸತ್ಯವೇ ಆದುದು ಸತ್ಯದಂತೆ ಸ್ಥಿರಪಟ್ಟಿರುವುದಾವುದುಂಟೋ, ಇದು—ಒಂದು ಸಣ್ಣ ಕಡ್ಡಿಯು ವಜ್ರಾಯುಧವಾದಂತೆಯೇ ಸರಿ ||೫||

ಸ್ವಾಮಿ! ಮೂರು ಲೋಕಗಳಲ್ಲಿಯೂ ನದಿಯಂತೆ ಪ್ರವಹಿಸುತ್ತಿರುವ ಈ ಸಂಸಾರರೂಪವಾದ ಮಾಯೆಯ ಸ್ವರೂಪವನ್ನು, ನನ್ನ ತಿಳಿವಳಿಕೆಗಾಗಿ ತಾವು ಪುನಃ ಅಪ್ಪಣೆ ಕೊಡಿಸಬೇಕು||

ಎಲೈ ಮಹಾತ್ಮರೆ! ನನಗೆ ಇನ್ನೂ ಒಂದು ಸಂಶಯವು ಮನಸ್ಸಿನಲ್ಲಿರುವುದು. ಅದೇನೆಂದರೆ,—ತಾವು ನನಗೆ ಈಗ ಹೇಳಿದ ಉಪಾಖ್ಯಾನಕ್ಕೆ ವಿಷಯನಾದ ಲವಣನೆಂಬವನು, ಮಹಾಪುಣ್ಯಾತ್ಮನಾಗಿ ಕಾಣುವನು. ಅವನು ಇಂತಹ ವಿಪತ್ತನ್ನು ಹೊಂದಲು ಕಾರಣವೇನು? ||೭||

ತಾವು ಹೇಳಿದಂತೆ ಅರಗೂ ಕಡ್ಡಿಯೂ ಇರುವಂತೆ ಸೇರಿಕೊಂಡೋ—ಅಥವಾ ಪರಸ್ಪರ ವಿಶ್ಲಿಷ್ಟರಾಗಿಯೋ ಇರುವ—ಈ ದೇಹಜೀವರುಗಳಲ್ಲಿ, ವಸ್ತುತಃ ಯಾರು ಸಂಸಾರಿಯು? ಶುಭಾಶುಭ ಫಲಗಳನ್ನು ಮುಖ್ಯವಾಗಿ ಅನುಭವಿಸತಕ್ಕವರು ಯಾರು? ||೮||

ಮತ್ತು, ಆ ಲವಣರಾಜನಿಗೆ ಅಂತಹ ದೊಡ್ಡ ಸಂಕಟವನ್ನು ಕೊಟ್ಟುಬಿಟ್ಟು, ಆ ಮಹಾಚಂಚಲಕೃತ್ಯನಾದ ಐಂದ್ರಜಾಲಿಕನು ಎಲ್ಲಿಗೆ ಹೊರಟುಹೋದನು? ಅವನು ಯಾರು? ಹೀಗೆ ನನಗುಂಟಾಗಿರುವ ಸಂಶಯಗಳನ್ನು ತಾವು ಪರಿಹರಿಸಬೇಕು ||೯||

ಇದನ್ನು ಕೇಳಿ, ಶ್ರೀ ವಸಿಷ್ಠರು ಉತ್ತರ ಹೇಳುವರು:—

ಅಜ್ಞಾನಶೂನ್ಯನಾದ ಎಲೈ ರಾಮನೆ! ದೇಹವೆಂಬುದು, ಕಟ್ಟಿಗೆಯಂತೆಯೂ ಗೋಡೆಯಂತೆಯೂ ಕೇವಲ ಜಡವಾದುದು; ಅದು, ವಸ್ತುತಃ ಯಾವ ಪದಾರ್ಥವೂ ಅಲ್ಲ. ಸ್ವಪ್ನದಲ್ಲಿ ನಾನಾಪದಾರ್ಥಗಳು ದೃಗ್ಗೋಚರವಾಗುವಂತೆ, ಈ ಚಿತ್ತದಿಂದ ನಾನಾವಿಧ ಕಲ್ಪನೆಗಳು ಮಾಡಲ್ಪಡುವುವು. ಹೀಗೆ ಅಚೇತನವೂ ಅಸತ್ತೂ ಆದ ದೇಹಕ್ಕೆ, ಕರ್ಮಫಲಭೋಕ್ತೃತ್ವವಿಲ್ಲವೇ ಇಲ್ಲ ||೧೦||

ಚೇತಸ್ತು ಜೀವತಾಂ ಯಾತಂ ಚಿಚ್ಛಕ್ತಿಪರಿಭೂಷಿತಮ್ ।
ವಿದ್ಯಾತ್ ಸಂಸಾರಸಂರಬ್ಧಂ ಕಪಿಪೋತಕಚಞ್ಚಲಮ್ ॥೧೧॥
ದೇಹೀಹ ಕರ್ಮಭಾಗ್ಯೋ ಹಿ ನಾನಾಕಾರಶರೀರಧೃಕ್ ।
ಅಹಙ್ಕಾರಮನೋಜೀವನಾಮಭಿಃ ಪರಿಕಲ್ಪ್ಯತೇ ॥೧೨॥
ತಸ್ಯೈವಾನ್ಯಪ್ರಬುದ್ಧಸ್ಯ ನ ಪ್ರಬುದ್ಧಸ್ಯ ರಾಘವ ।
ಸುಖದುಃಖಾನ್ಯನನ್ತಾನಿ ಶರೀರಸ್ಯ ನ ಕಾನಿಚಿತ್ ॥೧೩॥
ಅಪ್ರಬುದ್ಧಂ ಮನೋ ನಾನಾಸಂಜ್ಞಾಕಲ್ಪಿತಕಲ್ಪನಮ್ ।
ವೃತ್ತೀರನುಪತಚ್ಚಿತ್ರಾಃ ವಿಚಿತ್ರಾಕೃತಿತಾಂ ಗತಮ್ ॥೧೪॥
ಅಪ್ರಬುದ್ಧಂ ಮನೋ ಯಾವತ್ ನಿದ್ರಿತಂ ತಾವದೇವ ಹಿ ।
ಸಂಭ್ರಮಂ ಪಶ್ಯತಿ ಸ್ವಪ್ನೇ ನ ಪ್ರಬುದ್ಧಂ ಕಥಞ್ಚನ ॥೧೫॥
ಅಜ್ಞಾನನಿದ್ರಾಕ್ಷುಭಿತೋ ಜೀವೋ ಯಾವನ್ನ ಬೋಧಿತಃ ।
ತಾವತ್ ಪಶ್ಯತಿ ದುರ್ಭೇದಂ ಸಂಸಾರಾರಬ್ಧವಿಭ್ರಮಮ್ ॥೧೬॥
ಸಮ್ಪ್ರಬುದ್ಧಸ್ಯ ಮನಸಃ ತಮಃ ಸರ್ವಂ ವಿಲೀಯತೇ ।
ಕಮಲಸ್ಯ ಯಥಾ ಹಾರ್ದಂ ದಿನಾಲೋಕವಿಕಾಸಿನಃ ॥೧೭॥

ಚಿತ್ತವಾದರೋ, ಜೀವರೂಪವನ್ನು ಹೊಂದಿ, ಕಪಿಯ ಮರಿಯಂತೆ ಚಂಚಲವಾಗಿ, ಶುಭಾಶುಭ ಕರ್ಮಫಲಭೋಕ್ತೃತ್ವದಲ್ಲಿ ಅಭಿನಿವೇಶವುಳ್ಳದಾಗುವುದೆಂದು ತಿಳಿಯಬೇಕು. ‘ಈ ಚಿತ್ತವೂ ಜಡವಲ್ಲವೋ?’ ಎಂದರೆ,—ಇದು ಚಿಚ್ಛಕ್ತಿಯಿಂದ ವ್ಯಾಪ್ತವಾಗುವಕಾರಣ, ಇದಕ್ಕೆ ಜಡತ್ವವಿರುವುದಿಲ್ಲ ॥೧೧॥

ಆದುಕಾರಣ, ದೇಹಿಯೇ ಇಲ್ಲಿ ಕರ್ಮಫಲಭಾಗಿಯೆಂದು ತಿಳಿಯಬೇಕು. ಈ ದೇಹಿಯು, ನಾನಾವಿಧ ರೂಪಗಳನ್ನು ಧರಿಸಿ, ಅಹಂಕಾರ ಮನಸ್ಸು ಜೀವ-ಇತ್ಯಾದಿ ನಾಮಧೇಯಗಳಿಂದ ವ್ಯವಹರಿಸಲ್ಪಡುವನು ॥೧೨॥

ಅಯ್ಯಾ ರಾಮ! ಹೀಗಿರುವ ಈ ವ್ಯವಹಾರಗಳೆಲ್ಲವೂ ಅಪ್ರಬುದ್ಧನಿಗಿರುವುವೇಹೊರತು, ಪ್ರಬುದ್ಧನಾದವನಿಗಿಲ್ಲ. ಶರೀರಕ್ಕಾದರೋ, ಅಪರಿಮಿತವಾದ ಸುಖದುಃಖಗಳಲ್ಲಿ ಯಾವುದೂ ಇಲ್ಲ॥

ಅಪ್ರಬುದ್ಧವಾಗಿರುವ ಮನಸ್ಸು, ನಾನಾವಿಧ ಸಂಜ್ಞೆಗಳಿಂದ ಕಲ್ಪನೆಯನ್ನು ಮಾಡಿಕೊಂಡು ವಿಚಿತ್ರವಾದ ವೃತ್ತಿಗಳನ್ನಾಶ್ರಯಿಸುತ, ತಾನೂ ವಿಚಿತ್ರಗಳಾದ ಆಕಾರಗಳನ್ನು ಹೊಂದುವುದು॥

ಮನಸ್ಸು ಎಲ್ಲಿಯವರೆಗೆ ಪ್ರಬೋಧಹೊಂದದಿರುವುದೋ, ಅಲ್ಲಿಯವರೆಗೆ ಅದು ಮಲಗಿರುವುದೆಂದು ತಿಳಿಯಬೇಕು. ಪ್ರಬುದ್ಧವಾಗಿದ್ದಪಕ್ಷದಲ್ಲಿ, ಸ್ವಪ್ನಕಾಲಿಕವಾದ ಈ ಸಂಭ್ರಮಗಳನ್ನೆಂದಿಗೂ ನೋಡಲಾರದಲ್ಲವೆ! ॥೧೫॥

ಅಜ್ಞಾನವೆಂಬ ನಿದ್ರೆಗೆ ಪರವಶನಾಗಿ ಮಲಗಿರುವ ಜೀವನು, ಎಲ್ಲಿಯವರೆಗೆ ಎಚ್ಚರಗೊಳಿಸಲ್ಪಡುವುದಿಲ್ಲವೋ, ಅಲ್ಲಿಯವರೆಗೂ ದುರ್ಭೇದ್ಯವಾದ ಈ ಸಂಸಾರವೆಂಬ ಸ್ವಪ್ನವಿಭ್ರಮವನು ನೋಡುತ್ತಲೇ ಇರುವನು ॥೧೬॥

ಪ್ರಬುದ್ಧವಾದ ಮನಸ್ಸಿಗೆ, ಬಿಸಿಲಿನಿಂದ ಅರಳಿದ ಕಮಲದಂತೆ, ಹೃದಯನಿಷ್ಠವಾದ ತಮಸ್ಸೆಲ್ಲವೂ ವಿಲಯಹೊಂದುವುದು ॥೧೭॥

ಚಿತ್ತಾವಿದ್ಯಾಮನೋಜೀವವಾಸನೇತಿ ಕೃತಾತ್ಮಭಿಃ ।
ಕರ್ಮಾತ್ಮೇತಿ ಚ ಯಃ ಪ್ರೋಕ್ತಃ ಸ ದೇಹೀ ದುಃಖಕೋವಿದಃ ॥೧೮॥
ಜಡೋ ದೇಹೋ ನ ದುಃಖಾರ್ಹೋ ದುಃಖೀ ದೇಹ್ಯವಿಚಾರತಃ ।
ಅವಿಚಾರೋ ಘನಾಜ್ಞಾನಾತ್ ಅಜ್ಞಾನಂ ದುಃಖಕಾರಣಮ್ ॥೧೯॥
ಶುಭಾಶುಭಾನಾಂ ಧರ್ಮಾನಾಂ ಜೀವೋ ವಿಷಯತಾಂ ಗತಃ ।
ಅವಿವೇಕೈಕದೋಷೇಣ ಕೋಶೇನೇವ ಹಿ ಕೀಟಕಃ ॥೨೦॥
ಅವಿವೇಕಾಮಯೋನ್ನದ್ಧಂ ಮನೋ ವಿವಿಧವೃತ್ತಿಮತ್ ।
ನಾನಾಕಾರವಿಹಾರೇಣ ಪರಿಭ್ರಮತಿ ಚಕ್ರವತ್ ॥೨೧॥
ಉದೇತಿ ರೌತಿ ಹನ್ತ್ಯತ್ತಿ ಯಾತಿ ವಲ್ಗತಿ ನಿನ್ದತಿ ।
ಮನಏವ ಶರೀರೇಸ್ಮಿನ್ ನ ಶರೀರಂ ಕದಾಚನ ॥೨೨॥
ಯಥಾ ಗೃಹಪತಿರ್ಗೇಹೇ ವಿವಿಧಂ ಹಿ ವಿಚೇಷ್ಟತೇ ।
ನ ಗೃಹಂ ತು ಜಡಂ ರಾಮ ತಥಾ ದೇಹೇ ಹಿ ಜೀವಕಃ ॥೨೩॥
ಸರ್ವೇಷು ಸುಖದುಃಖೇಷು ಸರ್ವಾಸು ಕಲನಾಸು ಚ ।
ಮನಃ ಕರ್ತೃ ಮನೋ ಭೋಕ್ತೃ ಮಾನಸಂ ವಿದ್ಧಿ ಮಾನವಮ್ ॥೨೪॥

ಚಿತ್ತ ಅವಿದ್ಯಾ ಮನಸ್ಸು ಜೀವ ವಾಸನಾ ಎಂಬ ನಾಮಗಳಿಂದಲೂ, ಕರ್ಮ ಆತ್ಮ ಎಂಬ ನಾಮಗಳಿಂದಲೂ, ಯಾವನು ಪ್ರಾಜ್ಞರಿಂದ ವ್ಯವಹರಿಸಲ್ಪಡುವನೋ, ಅಂತಹ ದೇಹಿಯೇ ಸುಖ ದುಃಖಗಳಿಗೆ ಭೋಕ್ತೃವಾದವನು ॥೧೮॥

ಜಡವಾದ ದೇಹವೆಂದಿಗೂ ದುಃಖಾನುಭವಕ್ಕೆ ಅರ್ಹವಾದುದೇ ಅಲ್ಲ; ದೇಹಿಯೂ ಕೂಡವಿಚಾರಶೂನ್ಯತೆಯಿಂದ ದುಃಖಭಾಗಿಯಂತೆ ತೋರುವನು ; ಈ ವಿಚಾರಶೂನ್ಯತೆಯು, ನಿಬಿಡವಾದ ಅಜ್ಞಾನದಿಂದುಂಟಾಗುವುದು. ಅಂತು, ಅಜ್ಞಾನವೇ ದುಃಖಕ್ಕೆ ಹೇತುವಾದುದೆಂದು ತಿಳಿಯಬೇಕು॥

ರೇಶಿಮೆಯ ಹುಳುವು ತನ್ನ ಅವಿವೇಕದಿಂದ ತಾನೇ ಗೂಡನ್ನು ಮಾಡಿಕೊಂಡು ಒಳಗೆ ಸಿಕ್ಕಿಕೊಳ್ಳುವಂತೆ, ಜೀವನು ತನ್ನ ಅವಿವೇಕವೆಂಬ ಮುಖ್ಯದೋಷದಿಂದ ಶುಭಾಶುಭ ಧರ್ಮಗಳಿಗೆಲ್ಲ ವಿಷಯನಾಗಿ ಸಂಕಟಪಡುವನು ॥೨೦॥

ಅವಿವೇಕವೆಂಬ ರೋಗದಿಂದ ಪೀಡಿತವಾಗಿರುವ ಮನಸ್ಸು, ನಾನಾವಿಧ ವೃತ್ತಿಗಳುಳ್ಳದಾಗಿ, ನಾನಾವಿಧವಾದ ಆಕಾರಗಳನ್ನು ಸ್ವೀಕರಿಸಿ ವಿಹರಿಸುತ, ಚಕ್ರದಂತೆ ಸರ್ವದಾ ಸುತ್ತುತ್ತಿರುವುದು॥

ಈ ಶರೀರದೊಳಗೆ, ಮನಸ್ಸೇ-ಉದಯಿಸುವುದು ; ಕೂಗಿಕೊಳ್ಳುವುದು ; ಹೊಡೆಯುವುದು; ತಿನ್ನುವುದು ; ಹೋಗುವುದು ; ಕುಣಿಯುವುದು ; ನಿಂದಿಸುವುದು. ಅಂತು, ಸಮಸ್ತ ಕಾರ್ಯಗಳನ್ನೂ ಮನಸ್ಸೇ ಮಾಡುವುದಲ್ಲದೆ, ಶರೀರವೆಂದಿಗೂ ಮಾಡುವುದಿಲ್ಲ ॥೨೨॥

ಅಯ್ಯಾ ! ರಾಮ ! ಮನೆಯ ಯಜಮಾನನು ಮನೆಯೊಳಗೆಲ್ಲ ಸಂಚರಿಸುವನೇ ಹೊರತು, ಜಡವಾದ ಮನೆಯೆಂದಿಗೂ ಸಂಚರಿಸುವುದಿಲ್ಲವಷ್ಟೆ ! ಹಾಗೆಯೇ ದೇಹದೊಳಗೆ ಜೀವನೇ ಸಂಚರಿಸುವನಲ್ಲದೆ, ದೇಹವೆಂದಿಗೂ ಸಂಚಾರಾದಿಗಳನ್ನು ಮಾಡುವುದಿಲ್ಲ ॥೨೩॥

ಸಮಸ್ತವಾದ ಸುಖದುಃಖಗಳಲ್ಲಿಯೂ, ಸಮಸ್ತವಾದ ಕಲ್ಪನೆಗಳಲ್ಲಿಯೂ, ಮನಸ್ಸೇ ಕರ್ತೃವಾದುದು ; ಮನಸ್ಸೇ ಭೋಕ್ತೃವಾದುದು. ಆದುಕಾರಣ, ವತ್ಸ ! ರಾಮ ! ಮನಸ್ಸೇ ಪುರುಷನೆಂದು ನೀನು ತಿಳಿಯುವನಾಗು ॥೨೪॥

ಅತ್ರ ತೇ ಶೃಣು ವಕ್ಷ್ಯಾಮಿ ವೃತ್ತಾನ್ತಮಿಮಮುತ್ತಮಮ್ ।
ಲವಣೋಽಸೌ ಯಥಾ ಯಾತಃ ಚಣ್ಡಾಲತ್ವಂ ಮನೋಭ್ರಮಾತ್ ॥೧೫॥
ಮನಃ ಕರ್ಮಫಲಂ ಭುಙ್ಕ್ತೇ ಶುಭಂವಾಽಶುಭಮೇವ ವಾ ।
ಯಥೈತದ್ಬುಧ್ಯಸೇ ನೂನಂ ತಥಾಕರ್ಣಯ ರಾಘವ ॥೧೬॥
ಹರಿಶ್ಚನ್ದ್ರಕುಲೋತ್ಥೇನ ಲವಣೇನ ಪುರಾನಘ ।
ಏಕಾನ್ತೇನೋಪವಿಷ್ಟೇನ ಚಿನ್ತಿತಂ ಮನಸಾ ಚಿರಮ್ ॥೧೭॥
ಪಿತಾಮಹೋ ಮೇ ಸುಮಹಾನ್ ರಾಜಸೂಯಸ್ಯ ಯಾಜಕಃ ।
ಅಹಂ ತಸ್ಯ ಕುಲೇ ಜಾತಃ ತಂ ಯಜೇ ಮನಸಾ ಮಖಮ್ ॥೧೮॥
ಇತಿ ಸಞ್ಚಿನ್ತ್ಯ ಮನಸಾ ಕೃತ್ವಾ ಸಮ್ಭಾರಮಾದೃತಃ ।
ರಾಜಸೂಯಸ್ಯ ದೀಕ್ಷಾಯಾಂ ಪ್ರವಿವೇಶ ಮಹೀಪತಿಃ ॥೧೯॥
ಋತ್ವಿಜಶ್ಚಾಹ್ವಯಾಮಾಸ ಪೂಜಯಾಮಾಸ ಸನ್ಮುನೀನ್ ।
ದೇವಾನಾಮನ್ತ್ರಯಾಮಾಸ ಜ್ವಾಲಯಾಮಾಸ ಪಾವಕಮ್ ॥೨೦॥
ಯಥೇಚ್ಛಂ ಯಜಮಾನಸ್ಯ ಮನಸೋಪವನಾನ್ತರೇ ।
ಯಯೌ ಸಂವತ್ಸರಃ ಸಾಗ್ರೋ ದೇವರ್ಷಿದ್ವಿಜಪೂಜಯಾ ॥೨೧॥

ಇದೇ ವಿಷಯದಲ್ಲಿ, ನೀನು ಕೇಳಿದ ಈ ಉತ್ತಮವಾದ ವೃತ್ತಾಂತವನ್ನು ಹೇಳುವೆನು ಕೇಳು. ಆ ಲವಣರಾಜನು, ಮನೋಭ್ರಾಂತಿಯಿಂದ ಚಂಡಾಲಜನ್ಮವನ್ನು ಹೇಗೆ ಪಡೆದನೆಂಬುದನ್ನು ನೀನು ಈಗ ತಿಳಿದುಕೊಳ್ಳುವನಾಗು ॥೧೫॥

ಅಯ್ಯಾ! ರಾಘವ! ಮನಸ್ಸು ಶುಭಾಶುಭಕರ್ಮಫಲಗಳನ್ನು ಅನುಭವಿಸುವುದು. ನೀನು ಈ ವಿಷಯವನ್ನು ಚೆನ್ನಾಗಿ ನನ್ನ ಮುಖದಿಂದ ತಿಳಿದುಕೊಳ್ಳುವಂತೆ ಕೇಳುವನಾಗು ॥೧೬॥

ಅಯ್ಯಾ ಅಜ್ಞಾನರಹಿತನಾದವನೆ! ಪೂರ್ವದಲ್ಲಿ ಹರಿಶ್ಚಂದ್ರನ ವಂಶದಲ್ಲಿ ಹುಟ್ಟಿದ ಲವಣನೆಂಬ ರಾಜನು, ಏಕಾಂತದಲ್ಲಿ ಕುಳಿತುಕೊಂಡು 'ನನ್ನ ಪಿತಾಮಹನು ಕೇವಲ ಮಹಾತ್ಮನು; ಅವನು ರಾಜಸೂಯ ಯಜ್ಞವನ್ನು ಮಾಡಿದ್ದನು. ಅವನ ವಂಶದಲ್ಲಿಯೇ ಹುಟ್ಟಿದ ನಾನು, ಆ ದಿವ್ಯವಾದ ರಾಜಸೂಯ ಯಾಗವನ್ನು ಮನಸ್ಸಿನಲ್ಲಿಯೇ ಮಾಡಿಬಿಡುವೆನು.' ಹೀಗೆಂದು ಬಹಳ ಹೊತ್ತು ಯೋಚಿಸಿದನು ॥೧೭-೧೮॥

ಈರೀತಿಯಾಗಿ ಮನಸ್ಸಿನಲ್ಲಿ ಚೆನ್ನಾಗಿ ಯೋಚಿಸಿ, ಅತ್ಯಾದರದಿಂದ ಸಂಭಾರಗಳನ್ನೆಲ್ಲ ಸಿದ್ಧಪಡಿಸಿಕೊಂಡು, ಆ ಲವಣರಾಜನು ರಾಜಸೂಯದೀಕ್ಷೆಯನ್ನು ಪ್ರವೇಶಿಸಿದನು ॥೧೯॥

ಆಗ ಅವನು, ಮನಸ್ಸಿನಲ್ಲಿಯೇ-ಋತ್ವಿಕ್ಕುಗಳನ್ನು ಕರೆದನು; ಉತ್ತಮರಾದ ಮುನಿಗಳನ್ನು ಪೂಜಿಸಿದನು; ದೇವತೆಗಳನ್ನೂ ಆವಾಹನೆ ಮಾಡಿದನು; ಅಗ್ನಿಯನ್ನೂ ಜ್ವಾಲೆಪಡಿಸಿದನು ॥೨೦॥

ಈರೀತಿಯಾಗಿ ಮನಸ್ಸಿನಿಂದಲೇ ಉಪವನದೊಳಗೆ ತನ್ನ ಇಚ್ಛೆ ಬಂದಂತೆ ಯಜ್ಞಮಾಡುತಿರುವ ಆ ಲವಣರಾಜನಿಗೆ, ದೇವ ಋಷಿ ದ್ವಿಜರ ಪೂಜೆಯಲ್ಲಿಯೇ ಒಂದು ಸಂವತ್ಸರ ಸಮಗ್ರವಾಗಿ ಕಳೆದುಹೋಯಿತು ॥೨೧॥

ಭೂತೇಭ್ಯೋ ದ್ವಿಜಪೂರ್ವೇಭ್ಯೋ ದತ್ವಾ ಸರ್ವಸ್ವದಕ್ಷಿಣಾಮ್ ।
ವಿಬುಧ್ಯತ ದಿನಸ್ಯಾನ್ತೇ ಸ್ವಪಿವೋಪವನೇ ನೃಪಃ ॥೨೦॥
ಏವಂ ಸ ಲವಣೋ ರಾಜಾ ರಾಜಸೂಯಮವಾಪ್ತವಾನ್ ।
ಮನಸೈವ ಹಿ ತುಷ್ಟೇನ ಯುಕ್ತಸ್ತಸ್ಯ ಫಲೇನ ಚ ॥೨೨॥
ಅತಶ್ಚಿತ್ತಂ ನರಂ ವಿದ್ಧಿ ಭೋಕ್ತಾರಂ ಸುಖದುಃಖಯೋಃ ।
ತನ್ಮನಃ ಪಾವನೋಪಾಯೇ ಸತ್ಯೇ ಯೋಜಯ ರಾಘವ ॥೨೪॥
ಪೂರ್ಣೇ ದೇಶೇ ಸುಸಮ್ಪೂರ್ಣಃ ಪುಮಾನ್ ನಷ್ಟೇ ವಿನಶ್ಯತಿ ।
ದೇಹೋಹಮಿತಿ ಯೇಷಾಂ ತು ನಿಶ್ಚಯಸ್ತೈರಲಂ ಬುಧಾಃ ॥೨೫॥

ಉಚ್ಚೈರ್ವಿವೇಕವತಿ ಚೇತಸಿ ಸಮ್ಪ್ರಬುದ್ಧೇ
ದುಃಖಾನ್ಯಲಂ ವಿಗಳಿತಾನಿ ವಿವಿಕ್ತಬುದ್ಧೇಃ ।
ಭಾಸ್ವತ್ಕರಪ್ರಕಟಿತೇ ನನು ಪದ್ಮಷಣ್ಡೇ
ಸಙ್ಕೋಚಜಾಡ್ಯತಿಮಿರಾಣಿ ಚಿರಂ ಕ್ಷತಾನಿ ॥೨೬॥

ಇತಿ ಉತ್ಪತ್ತಿಪ್ರಕರಣೇ ಸುಖದುಃಖಭೋಕ್ತೃತ್ವೋಪದೇಶೋ
ನಾಮ ಪಞ್ಚದಶೋತ್ತರ ಶತತಮಃ ಸರ್ಗಃ.

ಹೀಗೆ ಆ ರಾಜನು ಮನಸ್ಸಿನಲ್ಲಿ ಯಜ್ಞಮಾಡಿ, ಬ್ರಾಹ್ಮಣರೇ ಮೊದಲಾದ ಸಮಸ್ತ ಭೂತಗಳಿಗೂ ತನ್ನ ಸರ್ವಸ್ವವನ್ನೂ ದಕ್ಷಿಣೆಯಾಗಿ ಕೊಟ್ಟುಬಿಟ್ಟು, ಸಂಧ್ಯಾಕಾಲದಹೊತ್ತಿಗೆ ತನ್ನ ಉಪವನದಲ್ಲಿಯೇ ಬಹಿರ್ಮುಖನಾದನು ॥೨೦॥

ಹೀಗೆ ಆ ಲವಣರಾಜನು, ಮನಸ್ಸಿನಲ್ಲಿಯೇ ರಾಜಸೂಯಕ್ರತುವನ್ನು ಮಾಡಿದನು. ಒಳಿಕ, ಮನಸ್ಸು ಸಂತುಷ್ಟವಾಗಲು, ಆ ಮಹಾಕ್ರತುವಿನ ಫಲದೊಡನೆಯೂ ಯುಕ್ತನಾದನು॥೨೨॥

ಅದುಕಾರಣ, ಅಯ್ಯಾ ರಾಘುವ! ಮನಸ್ಸೇ ಪುರುಷನೆಂದೂ, ಮನಸ್ಸೇ ಸುಖದುಃಖಗಳನ್ನನುಭವಿಸತಕ್ಕದೆಂದೂ ತಿಳಿ. ಇಂತಹ ಮನಸ್ಸನ್ನು, ಅದಕ್ಕೆ ಪರಿಶೋಧಕವಾದ ವಿಚಾರಾದ ರೂಪವಾದ ಉಪಾಯದಲ್ಲಿ ನೆಲೆಗೊಳ್ಳಿಸು ॥೨೪॥

ಎಲೈ ಸಭೆಯಲ್ಲಿರುವ ಮಹಾಪಂಡಿತೋತ್ತಮರೆ! ಈ ಮನೋರೂಪನಾದ ಪುರುಷನು, ದೇಶಕಾಲಾದಿಪರಿಚ್ಛೇದಶೂನ್ಯವಾದ ಪದಾರ್ಥದಲ್ಲಿರಿಸಲ್ಪಟ್ಟರೆ, ತಾನೂ ಪೂರ್ಣರೂಪನಾಗುವನು. ಅದುಬಿಟ್ಟು, ನಿತ್ಯನಶ್ವರವಾದ ದೇಹಾದಿಗಳಲ್ಲಿರಿಸಲ್ಪಟ್ಟರೆ, ತಾನೂ ನಶ್ವರನಾಗುವನು. ಹೀಗಿರುವುದರಿಂದ, ದೇಹವೇ ನಾನೆಂದು ಯಾರು ನಿಶ್ಚಯವುಳ್ಳವರಾಗಿರುವರೋ, ಅಂತಹರಿಂದ ಯಾವ ಪ್ರಯೋಜನವೂ ಇಲ್ಲವೆಂದು ತಿಳಿಯಿರಿ ॥೨೫॥

ಅಯ್ಯಾ! ರಾಮ! ಈಗ ಸಾರಾಂಶವನ್ನು ಕೇಳುವನಾಗು:—ಅತ್ಯುತ್ತಮ ವಿವೇಕವುಳ್ಳುದಾಗಿರುವ ಮನಸ್ಸು ಪ್ರಬುದ್ಧವಾದರೆ, ವಿವಿಕ್ತಮತಿಯಾದವನಿಗೆ, ಸಮಸ್ತ ದುಃಖಗಳೂ ನಿಶ್ಶೇಷವಾಗಿ ಗಳಿತವಾಗುವುವು. ಸೂರ್ಯಕಿರಣಗಳಿಂದ ಕಮಲಸಮೂಹವು ಅರಳಿಸಲ್ಪಟ್ಟಬಳಿಕ, ಅದರಲ್ಲಿದ್ದ ಸಂಕೋಚ ಶೈತ್ಯ ತಮಸ್ಸುಗಳೆಲ್ಲವೂ ತಮಗೆತಾವೇ ನಿಶ್ಶೇಷವಾಗುವುವಲ್ಲವೆ! ॥೨೬॥

ಇದು ಉತ್ಪತ್ತಿಪ್ರಕರಣದಲ್ಲಿ ಸುಖದುಃಖಭೋಕ್ತೃತ್ವೋಪದೇಶವೆಂಬ
ನೂರಹದಿನಯ್ದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಷೋಡಶೋತ್ತರಶತತಮಃ ಸರ್ಗಃ.

ಶ್ರೀರಾಮ ಉವಾಚ.

ರಾಜಸೂಯಫಲಂ ಪ್ರಾಪ್ತಂ ಲವಣೇನ ಕಿಲ ಪ್ರಭೋ ।
ಪ್ರಮಾಣಂ ಕಿಮಿವಾತ್ರ ಸ್ಯಾತ್ ಕಲ್ಪನಾಜಾಲಶಮ್ಬರೇ ॥೧॥

ಶ್ರೀ ವಸಿಷ್ಠ ಉವಾಚ.

ಯದಾ ಶಾಮ್ಬರಿಕಃ ಕಾಲೇ ಸಮ್ಪ್ರಾಪ್ತೋ ಲಾವಣೀಂ ಸಭಾಮ್ ।
ತದಾಹಮವಸಂ ತತ್ರ ತತ್ ಪ್ರತ್ಯಕ್ಷೇಣ ದೃಷ್ಟವಾನ್ ॥೨॥
ಅಹಂ ಸಭ್ಯೈಸ್ತತಸ್ತತ್ರ ಗತೇ ಶಾಮ್ಬರಿಕರ್ಮಣಿ ।
ಕಿಮೇತದಿತಿ ಯತ್ನೇನ ಪೃಷ್ಟಶ್ಚ ಲವಣೇನ ಚ ॥೩॥

ಉತ್ಪತ್ತಿಪ್ರಕರಣದಲ್ಲಿ ನೂರಹದಿನಾರನೆಯ ಸರ್ಗನು.

ತುರ್ಯಪ್ರಶ್ನಸಮಾಧಾನೇ ವರ್ಣಿತಾರ್ಥನಿದರ್ಶನಾತ್ ।
ಸೋಪೋದ್ಘಾತಾಸ್ತತೋ ಯೋಗಭೂಮಯೋತ್ರಾವತಾರಿತಾಃ ॥

ಹಿಂದಣ ಸರ್ಗದಲ್ಲಿ ಶ್ರೀರಾಮನು ಕೇಳಿದ ನಾಲ್ಕು ಪ್ರಶ್ನೆಗಳಲ್ಲಿ ಕೊನೆಯ ಪ್ರಶ್ನೆಗೆ ಶ್ರೀ ವಸಿಷ್ಠರು ಸಮಾಧಾನ ಹೇಳುವ ಸಮಯದಲ್ಲಿ, ತಾವು ಹೇಳಿದ ವಿಷಯಕ್ಕೆ ನಿದರ್ಶನ ಕೊಟ್ಟು, ಬಳಿಕ ಉಪೋದ್ಘಾತದೊಡನೆ ಯೋಗಭೂಮಿಕೆಗಳನ್ನು ಸ್ವಲ್ಪ ಪ್ರಸ್ತಾವಿಸುವರೆಂಬ ವಿಷಯವು, ಈ ಸರ್ಗದಲ್ಲಿ ವರ್ಣಿಸಲ್ಪಡುವುದು,

ಶ್ರೀರಾಮನು ಪ್ರಶ್ನೆಮಾಡುವನು :—

ಸರ್ವಜ್ಞರಾದ ಗುರುವರ್ಯರೆ! ಲವಣನೆಂಬ ದೊರೆಯು ಮನಸ್ಸಿನಲ್ಲಿಯೇ ರಾಜಸೂಯಯಜ್ಞಮಾಡಿ ಅದರ ಫಲವನ್ನನುಭವಿಸಿದನೆಂದಲ್ಲವೆ ತಮ್ಮಿಂದ ಹೇಳಲ್ಪಟ್ಟಿತು! ಕೇವಲ ಮಾಯಾಕಲ್ಪನಾರೂಪವಾದ ಈ ವಿಷಯದಲ್ಲಿ ಪ್ರಮಾಣವೇನು? ಪ್ರತ್ಯಕ್ಷಾದಿ ಪ್ರಮಾಣವೊಂದೂ ಅಲ್ಲಿ ಉಪಪನ್ನವಾಗುವುದಿಲ್ಲವಲ್ಲವೆ! ॥೧॥

ಶ್ರೀ ವಸಿಷ್ಠರು ಸಮಾಧಾನ ಹೇಳುವರು :—

ವತ್ಸ! ನೀನು ಮಾಡಿದ ಪ್ರಶ್ನೆಯು ಯುಕ್ತಿಯುಕ್ತವಾಗಿರುವುದು. ಪ್ರತ್ಯಕ್ಷಾದಿ ಲೌಕಿಕಪ್ರಮಾಣಗಳಿಂದ ಅದನ್ನು ನಿಶ್ಚಯಿಸುವುದು ಸಾಧ್ಯವಲ್ಲ; ಯೋಗಶಕ್ತಿಯೇ ಅದರಲ್ಲಿ ಪ್ರಮಾಣವು. ಯೋಗಬಲದಿಂದ ಸರ್ವವೂ ಪ್ರತ್ಯಕ್ಷವಾಗಿಯೇ ಕಾಣಿಸುವುದು. ನಾನು ನಿನಗೆ ಹೇಳಿದ ಕಥೆಯು ಪ್ರಮಾಣವಲ್ಲವೆಂದು ತಿಳಿಯಬೇಡ. ಆ ಐಂದ್ರಜಾಲಿಕನು ಲವಣರಾಜನ ಸಭೆಗೆ ಯಾವಾಗ ಬಂದಿದ್ದನೋ, ಆಗ ನಾನು ಅಲ್ಲಿಯೇ ಇದ್ದೆನು. ಅದುಕಾರಣ, ಅದೆಲ್ಲವನ್ನೂ ನಾನು ಪ್ರತ್ಯಕ್ಷವಾಗಿ ನೋಡಿರುವೆನು ॥೨॥

ಆಗ ಆ ಐಂದ್ರಜಾಲಿಕನು ಹೊರಟುಹೋದ ಬಳಿಕ, ಅಲ್ಲಿದ್ದ ಸಭಾಸ್ತರೂ ಲವಣರಾಜನೂ ಕೂಡ, ಇದೇನಾಶ್ಚರ್ಯವೆಂದು ನನ್ನನ್ನು ಪ್ರಯತ್ನಪೂರ್ವಕವಾಗಿ ಕೇಳಿದರು ॥೩॥

ಚಿನ್ತಯಿತ್ವಾ ಮಯಾ ದೃಷ್ಟ್ವಾ ತತ್ರ ತತ್ ಕಥಿತಂ ತತಃ ।
ಶೃಣು ತತ್ ತೇ ಪ್ರವಕ್ಷ್ಯಾಮಿ ರಾಮ ಶಾಮ್ಬರಿಕೇಹಿತಮ್ ॥೪॥
ರಾಜಸೂಯಸ್ಯ ಕರ್ತಾರೋ ಯೇ ಹಿ ತೇ ದ್ವಾದಶಾಬ್ದಿಕಮ್ ।
ಆಪದ್ದುಃಖಂ ಪ್ರಾಪ್ನುವನ್ತಿ ನಾನಾಕಾರವ್ಯಥಾಮಯಮ್ ॥೫॥
ಅತಃ ಶಕ್ರೇಣ ಗಗನಾತ್ ದುಃಖಾಯ ಲವಣಸ್ಯ ಸಃ ।
ಪ್ರಹಿತೋ ದೇವದೂತೋ ಹಿ ರಾಮ ಶಾಮ್ಬರಿಕಾಕೃತಿಃ ॥೬॥
ರಾಜಸೂಯಕ್ರಿಯಾಕರ್ತುಃ ತಸ್ಯ ದತ್ವಾ ಮಹಾಪದಮ್ ।
ಅಗಚ್ಛತ್ ಸ ನಭೋಮಾರ್ಗಂ ಸುರಸಿದ್ಧನಿಷೇವಿತಮ್ ॥೭॥

ಗದ್ಯ॥ ತಸ್ಮಾತ್ ಪ್ರತ್ಯಕ್ಷಮೇವೈತದ್ರಾಮ; ನಾತ್ರ ಸನ್ದೇಹೋಽಸ್ತಿ. ಮನೋ ಹಿ ವಿಲಕ್ಷಣಾನಾಂ ಕ್ರಿಯಾಣಾಂ ಕರ್ತೃ ಭೋಕ್ತೃ ಚ. ತದೇವ ನಿಘೃಷ್ಯ ಸಂಶೋಧ್ಯ ಚಿತ್ತರತ್ನಮಿಹ ಹಿಮಕಣಮಿವಾತಪೇನ ವಿಲೀನತಾಂ ವಿವೇಕೇನ ನೀತ್ವಾ ಪರಂ ಶ್ರೇಯಃ ಪ್ರಾಪ್ಸ್ಯಸಿ. ಚಿತ್ತಮೇವ ಸಕಲಭೂತಾಡಮ್ಬರಕಾರಿಣೀಮವಿದ್ಯಾಂ ವಿದ್ಧಿ. ಸಾ ವಿಚಿತ್ರಕೇನ್ದ್ರಜಾಲವಶಾದಿದಮುತ್ಪಾದಯತಿ. ಅವಿದ್ಯಾಚಿತ್ತಜೀವಬುದ್ಧಿಶಬ್ದಾನಾಂ

ಅನಂತರ, ನಾನು ಸಮಾಧಿದೃಷ್ಟಿಯಿಂದ ಅದೆಲ್ಲವನ್ನೂ ತಿಳಿದುಕೊಂಡು ಅವರಿಗೆ ಹೇಳಿದೆನು. ಅಯ್ಯಾ! ರಾಮ! ಆಗ ನಾನು ಅವರಿಗೆ ಹೇಳಿದ ಐಂದ್ರಜಾಲಿಕನ ವೃತ್ತಾಂತವನ್ನೆಲ್ಲ ಈಗ ನಿನಗೆ ಹೇಳುವೆನು, ಕೇಳು ॥೪॥

ಈ ಭೂಲೋಕದಲ್ಲಿ ಯಾರು ರಾಜಸೂಯಯಾಗವನ್ನು ಮಾಡುವರೋ, ಅವರು ಹನ್ನೆರಡುವರ್ಷಕಾಲ ನಾನಾವಿಧ ವ್ಯಥಾರೂಪವಾದ ವಿಪತ್ತನ್ನನುಭವಿಸುವರು ॥೫॥

ಅದುಕಾರಣ, ಅಯ್ಯಾ ರಾಮ! ಲವಣರಾಜನೂ ಆ ದುಃಖವನ್ನನುಭವಿಸಿಯೇ ತೀರಬೇಕಲ್ಲವೆ! ಇದನ್ನು ಅವನಿಗುಂಟುಮಾಡುವುದಕ್ಕಾಗಿಯೇ, ಮಹೇಂದ್ರನು, ಐಂದ್ರಜಾಲಿಕ ವೇಷಧಾರಿಯಾದ ಒಬ್ಬ ದೇವದೂತನನ್ನು ಅಂತರಿಕ್ಷದಿಂದ ಅಲ್ಲಿಗೆ ಕಳುಹಿಸಿದನು ॥೬॥

ಅವನು, ರಾಜಸೂಯಯಜ್ಞಮಾಡಿದ್ದ ಆ ಲವಣಭೂಪಾಲಕನಿಗೆ ಆರೀತಿಯಾಗಿ ದೊಡ್ಡ ಸಂಕಟವನ್ನು ಕೊಟ್ಟುಬಿಟ್ಟು, ಪುನಃ ಸುರಸಿದ್ಧಸೇವಿತವಾದ ಅಂತರಿಕ್ಷಮಾರ್ಗಕ್ಕೆ ಹೊರಟುಹೋದನು ॥೭॥

ಆದುದರಿಂದ, ಅಯ್ಯಾ ರಾಮ! ಇದೆಲ್ಲವೂ ನನಗೆ ಪ್ರತ್ಯಕ್ಷವಾದಂತೆಯೇ ಆಯ್ತು; ಇದರಲ್ಲಿ ಸಂಶಯವಿಲ್ಲ. ನಾನಾವಿಧವಾದ ಕರ್ಮಗಳಿಗೆ ಕರ್ತೃವಾಗಿಯೂ ಭೋಕ್ತೃವಾಗಿಯೂ ಇರುವುದು ಮನಸ್ಸೇಯೆ. ಆ ಚಿತ್ತವೆಂಬ ರತ್ನವನ್ನೇ, ನೀನು ಹಠಯೋಗದಿಂದ ಚೆನ್ನಾಗಿ ಘರ್ಷಿಸಿ, ರಾಜಯೋಗದಿಂದ ಪರಿಶೋಧಿಸಿ, ಬಿಸಿಲಿನಿಂದ ಮಂಜಿನ ಹನಿಯು ಅದೃಶ್ಯವಾಗುವಂತೆ—ಇದನ್ನು ನಿರ್ವಿಕಲ್ಪಸಮಾಧಿಯಿಂದ ಲಯಪಡಿಸಿ, ತತ್ವಸಾಕ್ಷಾತ್ಕರಣದಿಂದ ಮೋಕ್ಷವನ್ನು ಪಡೆಯುವೆ. ಈ ಚಿತ್ತವೇ, ಸಮಸ್ತಭೂತರೂಪವಾದ ಆಡಂಬರವನ್ನು ಮಾಡತಕ್ಕ ಅವಿದ್ಯೆಯೆಂದು ತಿಳಿ. ಆ ಅವಿದ್ಯೆಯು, ವಿಚಿತ್ರವಾದ ಇಂದ್ರಜಾಲಸದೃಶವಾಗಿರುವ ವಾಸನಾವಶದಿಂದ ಇದನ್ನೆಲ್ಲ ಸೃಜಿಸುವುದು. ವೃಕ್ಷಶಬ್ದಕ್ಕೂ ತರುಶಬ್ದಕ್ಕೂ ಅರ್ಥದಲ್ಲಿ ಭೇದವಿಲ್ಲದಿರುವಂತೆ, ಅವಿದ್ಯಾ ಚಿತ್ತ ಜೀವ ಬುದ್ಧಿ ಎಂಬ ಶಬ್ದಗಳಿಗೆ ಅರ್ಥದಲ್ಲಿ ಸ್ವಲ್ಪವೂ ಭೇದವಿಲ್ಲ, ಈ ವಿಷಯವನ್ನು ನೀನು

ಭೇದೋ ನಾಸ್ತಿ ವೃಕ್ಷತರುಶಬ್ದಯೋರಿವ. ಇತಿ ಜ್ಞಾತ್ವಾ ಚಿತ್ತಮೇವ ವಿಕಲ್ಪಸಂ ಕುರು. ಅಭ್ಯುದಿತೇ ಚಿತ್ತನೈರ್ಮಲ್ಯಾರ್ಕಬಿಮ್ಬೇ ಸಕಳಙ್ಕವಿಕಲ್ಪೋತ್ಥದೋಷತಿಮಿರಾಪಹರಣಮ್. ನ ತದಸ್ತಿ ರಾಘವ ಯನ್ನ ದೃಶ್ಯತೇ ಯನ್ನಾತ್ಮೀಕ್ರಿಯತೇ ಯನ್ನ ಪರಿತ್ಯಜ್ಯತೇ ಯನ್ನ ಮ್ರಿಯತೇ ಯನ್ನಾತ್ಮೀಯಂ ಯನ್ನ ಪರಕೀಯಂ ಸರ್ವಂ ಸರ್ವದಾ ಸರ್ವೋ ಭವತೀತಿ ಪರಮಾರ್ಥಃ ‖೮‖

ಪದ್ಯ‖ ಭಾವರಾಶಿಸ್ತಥಾ ಬೋಧಃ ಸರ್ವೋ ಯಾತ್ಯೇಕಪಿಣ್ಡತಾಮ್ |
ವಿಚಿತ್ರಮೃದ್ಭಾಣ್ಡಗಣೋ ಯಥಾಽಪಕ್ವೋ ಜಲೇ ಸ್ಥಿತಃ ‖೯‖

ಶ್ರೀರಾಮ ಉವಾಚ.

ಏವಂ ಮನಃಪರಿಕ್ಷಯೇ ಸಕಲಸುಖದುಃಖಾನಾಮನ್ತಃ ಪ್ರಾಪ್ಯತಇತಿ ಭವತಾ ಪ್ರೋಕ್ತಂ. ತತ್ ಕಥಂ ಮಹಾತ್ಮಂಶ್ಚಪಲವೃತ್ತಿರೂಪಸ್ಯಾಸ್ಯ ಮನಸೋಽಸತ್ತಾ ಭವತಿ ‖೧೦‖

ಶ್ರೀವಸಿಷ್ಠ ಉವಾಚ.

ರಘುಕುಲೇನ್ದೋ ಶೃಣು ಮನಃಪ್ರಶಮನೇ ಯುಕ್ತಿಂ; ಯಾಂ ಜ್ಞಾತ್ವಾ ಸ್ವಸ್ವಭಾವಾರದೂರೇ ಮನಸ್ಸನ್ನಿಲಯಮೇಷ್ಯಸಿ ‖೧೧‖

ಚೆನ್ನಾಗಿ ತಿಳಿದುಕೊಂಡು, ಚಿತ್ತವನ್ನೇ ನೀನು ಕಲ್ಪನಾಶೂನ್ಯವನ್ನಾಗಿ ಮಾಡಿಕೊ. ಚಿತ್ತನೈರ್ಮಲ್ಯವೆಂಬ ಸೂರ್ಯನು ಉದಯಿಸಿದರೆ, ವಿಕಲ್ಪಕಲ್ಪನಾಜನ್ಯವಾದ ದೋಷವೆಂಬ ಅಂಧಕಾರವು ಕಳಂಕದೊಡನೆ ನಿಶ್ಶೇಷವಾಗುವುದು. ಅಯ್ಯಾ ರಾಘವ! ಚಿತ್ತಶುದ್ಧಿಯೊಂದುಂಟಾಗಿಬಿಟ್ಟರೆ, ಅನಂತರ, ಅವನಿಗೆ—ಪ್ರತ್ಯಕ್ಷವಾಗದಿರುವುದೂ, ಆತ್ಮೀಯವಾಗಿ ಮಾಡಲ್ಪಡದಿರುವುದೂ, ಪರಿತ್ಯಕ್ತವಾದುದೂ, ಸಾಯತಕ್ಕುದೂ, ಸ್ವೀಯವಲ್ಲದುದೂ, ಪರಕೀಯವಲ್ಲದುದೂ, ಯಾವುದೂ ಇರುವುದಿಲ್ಲ. ಸರ್ವರೂ ಸರ್ವದಾ ಸರ್ವಪದಾರ್ಥವೂ ಆಗಿಬಿಡುವರು, ಇದೇ ಪರಮಾರ್ಥವೆಂದು ತಿಳಿ ‖೮‖

ನಾನಾರೂಪವಾದ ಮಣ್ಣಿನ ಮಡಕೆಗಳನ್ನು ಬೇಯಿಸದೆಯೇ ನೀರಿಗೆ ಹಾಕಿಬಿಟ್ಟರೆ—ಅದೆಲ್ಲವೂ ಹೇಗೆ ಒಂದೇರೂಪವನ್ನು ಹೊಂದುವುದೋ, ಹಾಗೆ—ಬ್ರಹ್ಮತ್ವೇನ ತಿಳಿಯಲ್ಪಟ್ಟ ಸಮಸ್ತಪದಾರ್ಥಸಮುದಾಯವೂ ಕೊನೆಗೆ ಬ್ರಹ್ಮರೂಪವಾಗಿಯೇ ಕಾಣುವುದು ‖೯‖

ಇದನ್ನು ಕೇಳಿ ಶ್ರೀರಾಮನು ಪುನಃ ಪ್ರಶ್ನೆಮಾಡುವನು :—

ಸ್ವಾಮಿ! ಹೀಗೆ ಹೇಳಿದುದರಿಂದ, ಮನಸ್ಸು ಕ್ಷಯಹೊಂದಿದರೆ ಸಕಲ ಸುಖದುಃಖಗಳಿಗೂ ಕೊನೆಯಾಗುವುದೆಂದು ತಮ್ಮ ಅಭಿಪ್ರಾಯವೆಂದು ಗೊತ್ತಾಯ್ತು. ಎಲೈ ಮಹಾತ್ಮರೆ! ಈಗ ಮನಸ್ಸಿನ ನಿರೋಧವಾವಶ್ಯಕವೆಂದು ಗೊತ್ತಾದುದರಿಂದ ಕೇಳುವೆನು,—ಕೇವಲ ಚಂಚಲವೃತ್ತಿರೂಪವಾದ ಈ ಮನಸ್ಸಿಗೆ ಅಭಾವವುಂಟಾಗುವ ಬಗೆ ಯಾವುದು? ‖೧೦‖

ಶ್ರೀ ವಸಿಷ್ಠರು ಉತ್ತರ ಹೇಳುವರು :—

ರಘುಕುಲಚಂದ್ರನೆ! ಮನಸ್ಸು ಶಮನಹೊಂದುವುದಕ್ಕೆ ಯುಕ್ತಿಯನ್ನು ಕೇಳುವನಾಗು. ಇದನ್ನು ತಿಳಿದರೆ, ಸಕಲೇಂದ್ರಿಯ ವೃತ್ತಿಗಳಿಗೂ ದೂರವಾದ ಪರಬ್ರಹ್ಮನಲ್ಲಿ ಮನಸ್ಸನ್ನು ನಿಲ್ಲಿಸಿ ನೀನು ಅಲ್ಲಿಯೇ ಲೀನನಾಗುವೆ ‖೧೧‖

ಇಹ ಹಿ ತಾವದ್ಬ್ರಹ್ಮಣಃ ಸರ್ವಭೂತಾನಾಂ ತ್ರಿವಿಧೋತ್ಪತ್ತಿರಿತಿ ತತ್ ಪೂರ್ವೋಕ್ತಮ್ ॥೧೨॥

ತತ್ರೇದಂಪ್ರಥಮಯಾ ಮನಃಕಲ್ಪನಯಾ ದೇಹೀತಿ ಸಾ ಬ್ರಹ್ಮರೂಪಿಣೀ ಸಙ್ಕಲ್ಪಮಯೀ ಭೂತ್ವಾ ಯದೇವ ಸಙ್ಕಲ್ಪಯತಿ ತದೇವ ಪಶ್ಯತಿ ತೇನೇದಂ ಭುವನಾಡಮ್ಬರಂ ಕಲ್ಪ್ಯತೇ ॥೧೩॥

ತತ್ರ ಜನನಮರಣಸುಖದುಃಖಮೋಹಾದಿಕಂ ಸಂಸರಣಂ ಕಲ್ಪಯನ್ತೀ ಕಲ್ಪಾನುರಚನಾ ಬಹು ನಾಮ ಮನ್ಥರಂ ಸ್ಥಿತ್ವಾ ಸ್ವಯಂ ವಿಲೀಯತೇ ಹಿಮಕಣಿಕೇವಾತಪಗತಾ ॥೧೪॥

ಕಾಲೇನೈತಃ ಸಙ್ಕಲ್ಪವಶಾತ್ ಪುನರನ್ಯತಯಾ ಜಾಯತೇ. ಸಾಪಿ ಪುನರ್ವಿಲೀಯತೇ ಪುನರಪ್ಯುದೇತಿ ಸೈವೇತಿ ಭೂಯೋಭೂಯೋನುಸಂಸರನ್ತೀ ಸ್ವಯಮುಪಶಾಮ್ಯತಿ ॥೧೫॥

'ಅನಾದಿಯಾದ ಸಂಸಾರದಲ್ಲಿ ಯಾವಾಗಲೂ ನಾಶವೇ ಇಲ್ಲದುದು ಈಗ ನಾಶಹೊಂದುವ ಬಗೆ ಹೇಗೆ?' ಎಂದು ನೀನು ಶಂಕಿಸಬಹುದಲ್ಲವೆ! ಆದಕ್ಕಾಗಿ ಈ ವಿಷಯವನ್ನು ಪುನಃ ನಿನಗೆ ತಿಳಿಯಪಡಿಸುವೆನು. ಪರಬ್ರಹ್ಮನ ದೆಸೆಯಿಂದ ಹುಟ್ಟುವ ಪದಾರ್ಥಗಳು, ಸಾತ್ವಿಕ ರಾಜಸ ತಾಮಸಗಳೆಂದು ಮೂರು ವಿಧವಾಗಿರುವುವೆಂಬುದಾಗಿ ನಾನು ಪೂರ್ವದಲ್ಲಿಯೇ ಹೇಳಿರುವೆನಲ್ಲವೆ! ॥೧೨॥

ಆದರಲ್ಲಿ, ಮನಸ್ಸಿನ ಕಲ್ಪನೆಯೇ ಎಲ್ಲಕ್ಕೂ ಆದ್ಯವಾಗಿರುವುದು; ಆ ಮನಃಕಲ್ಪನೆಯಿಂದ, ಆ ಚತುರ್ಮುಖ ಬ್ರಹ್ಮರೂಪವಾದ ಕಲ್ಪನೆಯು, ಸ್ವಯಂಸಂಕಲ್ಪಮಯವಾಗಿ, ಯಾವುದನ್ನು ದೇಹಿಯೆಂದು ಸಂಕಲ್ಪಿಸುವುದೋ, ಅದನ್ನು ಆಗಲೇ ಆರೀತಿಯಾಗಿಯೇ ನೋಡುವುದು. ಇದರಿಂದಲೇ, ಈ ಪ್ರಪಂಚರೂಪವಾದ ಆಡಂಬರವು ಕಲ್ಪಿತವಾಗಿರುವುದು ॥೧೩॥

ಆ ಪ್ರಪಂಚರೂಪಾಡಂಬರದಲ್ಲಿಯೂ, ಚತುರ್ಮುಖಶಕ್ತಿಯು, ಜನನ ಮರಣ ಸುಖ ದುಃಖ ಮೋಹಾದಿಗಳನ್ನು ಆಯಾ ಕಲ್ಪನೆಗಳಿಗೆ ಅನುಗುಣವಾಗಿ ಕಲ್ಪಿಸುತ, ನಾನಾವಿಧ ನಾಮಧೇಯಗಳಿಂದ ವ್ಯವಹರಿಸಲ್ಪಡುತ, ಹಿಮಕಣವು ತನಗೆ ಕಾರಣಭೂತವಾದ ಬಿಸಿಲಿನಲ್ಲಿ ಐಕ್ಯಹೊಂದುವಂತೆ, ತನಗೆ ಕಾರಣವಾದ ಶ್ರೀಮನ್ನಾರಾಯಣನೊಳಗೆ ಐಕ್ಯಹೊಂದಿಬಿಡುವುದು ॥೧೪॥

ಮತ್ತೆ ಸೃಷ್ಟಿಕಾಲದಲ್ಲಿ ಆ ಚತುರ್ಮುಖನು ನಾರಾಯಣನ ದೆಸೆಯಿಂದ ಉತ್ಪನ್ನನಾಗುವನು. ಆಗ, ಅವನ ಸಂಕಲ್ಪಾನುಗುಣವಾಗಿ ಮತ್ತೆ ನಾನಾವಿಧ ಭೂತಗ್ರಾಮಗಳು ಹುಟ್ಟುವುವು; ಮತ್ತೆ ಲಯಹೊಂದುವುವು; ಪುನಃ ಹುಟ್ಟುವುವು. ಹೀಗೆ ಮತ್ತೆಮತ್ತೆ ಜನನಮರಣಪ್ರವಾಹವನ್ನನುಭವಿಸುತ, ಕೊನೆಗೆ ಪ್ರಾರಬ್ಧಕ್ಷಯವಾದಾಗ ಉಪಶಾಂತವಾಗುವುವು ॥೧೫॥

ಇತ್ಥಮನನ್ತಾ ಬ್ರಹ್ಮಕೋಟಯೋಽಸ್ಮಿನ್ ಬ್ರಹ್ಮಾಣ್ಡೇನ್ಯೇಷು ಚ ಸಮತೀತಾ ಭವಿಷ್ಯನ್ತೀತಿ ಸನ್ತಿ ಚೇತರಾಅನನ್ತಾ ಯಾಸಾಂ ಸಙ್ಖ್ಯಾಪಿ ನ ವಿದ್ಯತೇ ||೧೬||

ಏವಮಸ್ಯಾಂ ತಾದೃಶಿ ವರ್ತಮಾನಾಯಾಮೀಶ್ವರಾದಾಗತ್ಯ ಜೀವೋ ಯಥಾ ಜೀವ್ಯತೇ ವಿಮುಚ್ಯತೇ ತಚ್ಛೃಣು ||೧೭||

ಬ್ರಹ್ಮಣೋ ಮನಶ್ಶಕ್ತಿರಭ್ಯುದಿತಾ ಪುರಃಸ್ಥಿತಾಕಾಶಶಕ್ತಿಮವಲಮ್ಬ್ಯ ತತ್ರಸ್ಥ ಪವನತಾನುಪಾತಿನೀ ಘನಸಙ್ಕಲ್ಪತ್ವಂ ಗಚ್ಛತಿ ||೧೮||

ತತಃ ಪುರಃಪ್ರಾಪ್ತಭೂತತನ್ಮಾತ್ರಸಞ್ಜ್ಞಕತಾಮೇತ್ಯಾನ್ತಃಕರಣತಾಂನೀತ್ವಾ ಸಾತ್ವಸೂಕ್ಷ್ಮಪ್ರಕೃತಿರ್ಭೂತ್ವಾ ಗಗನಪವನತೇಜೋರೂಪತಾಸಙ್ಕಲ್ಪಾತ್ ಪ್ರಾಲೇಯರೂಪತಾಮುಪೇತ್ಯ ಶಾಲ್ಯೋಷಧಿಂ ವಿಶನ್ತೀ ಪ್ರಾಣಿನಾಂ ಗರ್ಭತಾಂ ಚ ಗಚ್ಛತಿ. ಜಾಯತೇ ತಸ್ಮಾತ್ ; ತತಃ ಪುರುಷಃ ಸಮ್ಪದ್ಯತೇ ||೧೯||

ತೇನ ಪುರುಷೇಣ ಜಾತಮಾತ್ರೇಣೈವ ಬಾಲ್ಯಾತ್ಪ್ರಭೃತಿ ವಿದ್ಯಾಗ್ರಹಣಂ ಕರ್ತವ್ಯಂ ಗುರವೋನುಗನ್ತವ್ಯಾಃ ||೨೦||

ಹೀಗೆ ಈ ಬ್ರಹ್ಮಾಂಡದೊಳಗೆಯೇ ಅನಂತ ಬ್ರಹ್ಮಾಂಡಕೋಟಿಗಳಿರುವುವು. ಇತರ ಬ್ರಹ್ಮಾಂಡಗಳಲ್ಲಿಯೂ, ಈಗಲೂ ಎಷ್ಟೋ ಬ್ರಹ್ಮಾಂಡಗಳಿರುವುವು; ಹಿಂದೆಯೂ ಎಷ್ಟೋ ಇದ್ದುವು; ಮುಂದೆಯೂ ಹುಟ್ಟುವುವು. ಹೀಗೆಯೇ ಇನ್ನೂ ಎಷ್ಟೋ ಇರುವುವು. ಅವುಗಳನ್ನು ಎಣಿಸುವುದಕ್ಕೂ ಆಗುವುದಿಲ್ಲ ||೧೬||

ಹೀಗೆ ಈ ಸಮಷ್ಟಿಸೃಷ್ಟಿರೂಪನಾದ ಚತುರ್ಮುಖನು ನಾರಾಯಣನಲ್ಲಿ ಸೇರಿರುವಾಗ, ಜೀವನು ಈಶ್ವರನ ದೆಸೆಯಿಂದ ಅಭಿವ್ಯಕ್ತನಾಗಿ ಹೇಗೆ ಜೀವಿಸುವನೋ, ಹೇಗೆ ವಿಮುಕ್ತನಾಗುವನೋ,—ಅದನ್ನು ನೀನು ಕೇಳುವನಾಗು ||೧೭||

ಪ್ರಳಯದಲ್ಲಿ ಸಮಸ್ತ ಜೀವಗಳೂ ಲಯಹೊಂದಿರುವಾಗ, ಸಂಸ್ಕಾರಬಲದಿಂದ ಮನಶ್ಶಕ್ತಿಯೊಂದು ಮಾತ್ರ ಉಳಿದಿರುವುದು. ಆಗ, ಅವ್ಯಾಕೃತವಾದ ಬ್ರಹ್ಮನ ದೆಸೆಯಿಂದ ಶಬ್ದತನ್ಮಾತ್ರರೂಪವಾದ ಆಕಾಶಶಕ್ತಿಯು ಪ್ರಥಮತಃ ಉತ್ಪನ್ನವಾಗುವುದು. ಆಕಾಶಶಕ್ತಿಯನ್ನು ವಲಂಬಿಸಿಕೊಂಡು, ಮನಶ್ಶಕ್ತಿಯು, ಸ್ವಲ್ಪ ಚಲನೆಗೆ ಯೋಗ್ಯವಾಗುವುದರದ್ವಾರಾ ಸ್ಥಿರಸಂಕಲ್ಪವಾಗುವುದು ||೧೮||

ಬಳಿಕ, ಪೂರ್ವೋಕ್ತಕ್ರಮಾನುಸಾರವಾಗಿ, ಭೂತತನ್ಮಾತ್ರರೂಪವನ್ನು ಹೊಂದಿ, ಅಂತಃಕರಣರೂಪವಾಗಿ, ಆ ಮನಶ್ಶಕ್ತಿಯು, ಸ್ಥೂಲಭೂತರೂಪವನ್ನು ಹೊಂದಿ, ಪಂಚೀಕೃತವಾದ ಆಕಾಶ ವಾಯು ತೇಜಸ್ಸುಗಳ ರೂಪವನ್ನು ಸಂಕಲ್ಪಿಸಿಕೊಂಡು, ಆಮೇಲೆ—ಹಿಮಜಲಾದಿರೂಪವನ್ನು ಸೇರಿ, ಶಾಲಿಯನ್ನೂ ಔಷಧಿಗಳನ್ನೂ ಪ್ರವೇಶಿಸಿ, ಕ್ರಮವಾಗಿ ಪ್ರಾಣಿಗಳ ಗರ್ಭರೂಪವನ್ನು ಧರಿಸುವುದು. ಬಳಿಕ ಅಲ್ಲಿಂದ ಹುಟ್ಟುವುದು. ಒಂದು ಸಮಯದಲ್ಲಿ, ಕರ್ಮಜ್ಞಾನಾಧಿಕಾರಿಯಾದ ಪುರುಷನ ಜನ್ಮವನ್ನೂ ಹೊಂದುವುದು ||೧೯||

ಹೀಗೆ ಪುರುಷಜನ್ಮವನ್ನು ಪಡೆದವನು, ಬಾಲ್ಯದಿಂದಲೂ ವಿದ್ಯಾಗ್ರಹಣ ಮಾಡಬೇಕು; ಗುರುಗಳನ್ನೂ ಸೇವಿಸಬೇಕು ||೨೦||

ತತಃ ಕ್ರಮಾತ್ ಪುಂಸಸ್ತ್ವೇವ ಚಮತ್ಕೃತಿರ್ಜಾಯತೇ. ಸ್ವಚ್ಛದೃಶಾ ಚಿತ್ತವೃತ್ತೇಃ ಪುರುಷಸ್ಯ ಹೇಯೋಪಾದೇಯವಿಚಾರಉತ್ಪದ್ಯತೇ ||೨೧||

ತಾದೃಗ್ವಿವೇಕವತಿ ಸಜ್ಜ್ವಲಿತಾಭಿಮಾನೇ
ಪುಂಸಿ ಸ್ಥಿತೇ ವಿಮಲಸತ್ವಮಯಾಗ್ರ್ಯಜಾತೌ |
ಸಪ್ತಾತ್ಮಿಕಾವತರತಿ ಕ್ರಮಶಃ ಶಿವಾಯ
ಚೇತಃಪ್ರಕಾಶನಕರೀ ನನು ಯೋಗಭೂಮಿಃ ||೨೨||

ಇತಿ ಉತ್ಪತ್ತಿಪ್ರಕರಣೇ ಸಾಧಕಜನ್ಮಾವತಾರೋನಾಮ ಷೋಡಶಾಧಿಕ ಶತತಮಃ ಸರ್ಗಃ.

ಹಾಗೆ ಮಾಡುತಬಂದರೆ, ನಿನ್ನಂತೆ ಆ ಪುರುಷನಿಗೆ ವಿವೇಕ ವೈರಾಗ್ಯಾದಿ ಸಾಧನಸಂಪತ್ತಿಯುದಯಿಸುವುದು. ಬಳಿಕ, ಸ್ವಚ್ಛವಾದ ಜ್ಞಾನವೂ ಚಿತ್ತವೃತ್ತಿಯೂ ಉಳ ಪುರುಷನಿಗೆ, ಇದು ತ್ಯಾಜ್ಯ-ಇದು ಉಪಾದೇಯ-ಎಂಬ ವಿಚಾರವುತ್ಪನ್ನವಾಗುವುದು ||೨೧||

ಹೀಗೆ ಪುರುಷನು-ವಿವೇಕಶೀಲನಾಗಿ-ಅಭಿಮಾನ ತ್ಯಾಗಮಾಡಿ—ನಿರ್ಮಲಸತ್ವವಾದ ಉತ್ತಮ ಜನ್ಮವನ್ನು ಪಡೆದಿರಲಾಗಿ, ಮನಃಪ್ರಸಾದವುಂಟುಮಾಡುವ ಸಪ್ತಯೋಗಭೂಮಿಕೆಗಳೂ ಕ್ರಮವಾಗಿ ಇವನ ಶ್ರೇಯಸ್ಸಿಗೋಸ್ಕರ ಉಪಸ್ಥಿತವಾಗುವುವು ||೨೨||

ಇದು ಉತ್ಪತ್ತಿಪ್ರಕರಣದಲ್ಲಿ ಸಾಧಕಜನ್ಮಾವತಾರಕಥನವೆಂಬ ನೂರಹದಿನಾರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಸಪ್ತದಶಾಧಿಕಶತತಮಃ ಸರ್ಗಃ.

ಶ್ರೀರಾಮ ಉವಾಚ.

ಕೀದೃಶ್ಯೋ ಭಗವನ್ ಯೋಗಭೂಮಿಕಾಃ ಸಪ್ತ ಸಿದ್ಧಿದಾಃ |
ಸಮಾಸೇನೇತಿ ಮೇ ಬ್ರೂಹಿ ಸರ್ವತತ್ತ್ವವಿದಾಂ ವರ ||೧||

ಶ್ರೀ ವಸಿಷ್ಠ ಉವಾಚ.

ಅಜ್ಞಾನಭೂಃ ಸಪ್ತಪದಾ ಜ್ಞಭೂಃ ಸಪ್ತಪದೈವ ಹಿ |
ಪದಾನ್ತರಾಣ್ಯಸಙ್ಖ್ಯಾನಿ ಭವನ್ತ್ಯನ್ಯಾನ್ಯಥೈತಯೋಃ ||೨||
ಸ್ವಯತ್ನಸಾಧಕರಸಾತ್ ಮಹಾಸತ್ತಾಭರೋನ್ನತೇಃ |
ಏತೇ ಪ್ರತಿಪದಂ ಬದ್ಧಮೂಲೇ ಸಂಫಲತಃ ಫಲಮ್ ||೩||

ಉತ್ಪತ್ತಿಪ್ರಕರಣದಲ್ಲಿ ನೂರಹದಿನೇಳನೆಯ ಸರ್ಗವು.

ಜ್ಞಾನಭೂಮಿಪ್ರಭೇದಾನಾಂ ಉಪೋದ್ಘಾತೇನ ವರ್ಣ್ಯತೇ |
ಅಜ್ಞಾನಭೂಮಿಕಾ ಸಪ್ತವಿಧಾ ಯದ್ವಾ ಪ್ರಸಂಗತಃ ||

ಜ್ಞಾನಭೂಮಿಕಾಭೇದಗಳ ಉಪೋದ್ಘಾತರೂಪವಾಗಿ ಸಪ್ತವಿಧವಾದ ಅಜ್ಞಾನಭೂಮಿಕೆಗಳೂ, ಇನ್ನೂ ಪ್ರಾಸಂಗಿಕವಾದ ಇತರ ವಿಷಯವೂ ಇಲ್ಲಿ ವರ್ಣಿಸಲ್ಪಡುವುವು.

ಶ್ರೀರಾಮನು ಪ್ರಶ್ನೆಮಾಡುವನು :—

ಹೇ ಭಗವನ್ ! ತಾವು ಅಪ್ಪಣೆಕೊಟ್ಟ ಸಪ್ತವಿಧವಾದ ಯೋಗಭೂಮಿಕೆಗಳು ಯಾವುವು? ತತ್ವಜ್ಞರಲ್ಲೆಲ್ಲ ಶ್ರೇಷ್ಠರಾದವರೆ! ಈ ವಿಷಯವನ್ನು ಸಂಕ್ಷೇಪಿಸಿ ನನಗೆ ಅಪ್ಪಣೆಕೊಡಿಸಿರಿ ||೧||

ಶ್ರೀ ವಸಿಷ್ಠರು ಉತ್ತರ ಹೇಳುವರು :—

ಅಯ್ಯಾ! ರಾಮ! ಅಜ್ಞಾನಭೂಮಿಕೆಯು ಏಳುವಿಧವಾಗಿರುವುದು; ಜ್ಞಾನಭೂಮಿಕೆಯೂ ಏಳು ವಿಧವಾಗಿರುವುದು. ಆಮೇಲೆ, ಇವುಗಳಲ್ಲಿ ಒಳಭೇದಗಳು ಅಸಂಖ್ಯಾಕಗಳಾಗಿ ಏರ್ಪಡುವುವು ||೨||

ಸ್ವಾಭಾವಿಕಪ್ರವೃತ್ತಿರೂಪವಾದ ಪುರುಷಪ್ರಯತ್ನವೂ, ಭೋಗಾಶಾದಾರ್ಢ್ಯವೂ, ಅಜ್ಞಾನಭೂಮಿಕಾಪ್ರತಿಷ್ಠೆಗೆ ಮುಖ್ಯಕಾರಣಗಳು. ಶಾಸ್ತ್ರೀಯವಾಗಿ ಶ್ರವಣಮನನಾದಿಪ್ರಯತ್ನವೂ, ಮುಮುಕ್ಷಾದಾರ್ಢ್ಯವೂ, ಜ್ಞಾನಭೂಮಿಕಾಪ್ರತಿಷ್ಠೆಗೆ ಮುಖ್ಯಕಾರಣಗಳು. ಈ ಕಾರಣಗಳಿಂದ, ಇವೆರಡು ಭೂಮಿಕೆಗಳೂ ತಮ್ಮತಮ್ಮ ಸ್ಥಳದಲ್ಲಿ ರೂಢಮೂಲಗಳಾಗಿ, ತಮ್ಮ ತಮ್ಮ ಯೋಗ್ಯತೆಯನ್ನನುಸರಿಸಿ, ಅಜ್ಞಾನಭೂಮಿಕೆಯು ಸಂಸಾರರೂಪವಾದ ಆತ್ಯಂತಿಕ ದುಃಖವನ್ನೂ, ಜ್ಞಾನಭೂಮಿಕೆಯು ಮೋಕ್ಷರೂಪವಾದ ನಿರತಿಶಯಾನಂದವನ್ನೂ ಫಲಿಸುವುವು ||೩||

ತತ್ರ ಸಪ್ತಪ್ರಕಾರಾಂ ತ್ವಂ ಅಜ್ಞಾನಸ್ಯ ಭುವಂ ಶೃಣು ।
ತತಃ ಸಪ್ತಪ್ರಕಾರಾಂ ತ್ವಂ ಶ್ರೋಷ್ಯಸಿ ಜ್ಞಾನಭೂಮಿಕಾಮ್ ‖೪‖
ಸ್ವರೂಪಾವಸ್ಥಿತಿರ್ಮುಕ್ತಿಃ ತದ್ಭ್ರಂಶೋಽಹಂತ್ವವೇದನಮ್ ।
ಏತತ್ ಸಂಕ್ಷೇಪತಃ ಪ್ರೋಕ್ತಂ ತಜ್ಜ್ಞತ್ವಾಜ್ಞತ್ವಲಕ್ಷಣಮ್ ‖೫‖
ಶುದ್ಧಸನ್ಮಾತ್ರಸಂವಿತ್ತೇಃ ಸ್ವರೂಪಾನ್ನ ಚಲನ್ತಿ ಯೇ ।
ರಾಗದ್ವೇಷೋದಯಾಭಾವಾತ್ ತೇಷಾಂ ನಾಜ್ಞತ್ವಸಮ್ಭವಃ ‖೬‖
ಯತ್ ಸ್ವರೂಪಪರಿಭ್ರಂಶಾತ್ ಚೇತ್ಯಾರ್ಥೇ ಚಿತಿ ಮಜ್ಜನಮ್ ।
ಏತಸ್ಮಾದಪರೋ ಮೋಹೋ ನ ಭೂತೋ ನ ಭವಿಷ್ಯತಿ ‖೭‖
ಅರ್ಥಾದರ್ಥಾನ್ತರಂ ಚಿತ್ತೇ ಯಾತಿ ಮಧ್ಯೇ ಹಿ ಯಾ ಸ್ಥಿತಿಃ ।
ನಿರಸ್ತಮನನಾ ಯಾಸೌ ಸ್ವರೂಪಸ್ಥಿತಿರುಚ್ಯತೇ ‖೮‖
ಸಂಶಾನ್ತಸರ್ವಸಙ್ಕಲ್ಪಾ ಯಾ ಶಿಲಾನ್ತರಿವ ಸ್ಥಿತಿಃ ।
ಜಾಡ್ಯನಿದ್ರಾವಿನಿರ್ಮುಕ್ತಾ ಸಾ ಸ್ವರೂಪಸ್ಥಿತಿಃ ಸ್ಮೃತಾ ‖೯‖

ಇವೆರಡರ ಮಧ್ಯದಲ್ಲಿ, ನೀನು ಮೊದಲು ಸಪ್ತವಿಧವಾದ ಅಜ್ಞಾನಭೂಮಿಕೆಯನ್ನು ಕೇಳು. ಬಳಿಕ, ಸಪ್ತವಿಧವಾದ ಜ್ಞಾನಭೂಮಿಕೆಯನ್ನು ಕೇಳುವೆ ‖೪‖

ಸ್ವಸ್ವರೂಪ ಸ್ಥಿತಿಯಲ್ಲಿರುವುದೇ ಮುಕ್ತಿಯೆನ್ನಿಸುವುದು ; ಸ್ವಸ್ವರೂಪ ಸ್ಥಿತಿಯಿಂದ ತಪ್ಪುವುದೇ, ಅಹಂಕಾರವೆಂದೂ ಅಜ್ಞಾನವೆಂದೂ ಹೇಳಲ್ಪಡುವುದು. ಪ್ರಾಜ್ಞನಿಗೂ ಅಜ್ಞನಿಗೂ ಇದು ಸಂಕ್ಷೇಪವಾಗಿ ಲಕ್ಷಣವೆಂದು ಹೇಳಲ್ಪಟ್ಟಿರುವುದು ‖೫‖

ಯಾರು, ಶುದ್ಧ ಸನ್ಮಾತ್ರ ಜ್ಞಾನರೂಪವಾದ ಸ್ವಸ್ವರೂಪದಿಂದ ಚಲಿಸುವುದಿಲ್ಲವೋ, ಅವರಿಗೆ ರಾಗದ್ವೇಷೋದಯಕ್ಕವಕಾಶವಿಲ್ಲದಕಾರಣ, ಅಜ್ಞತ್ವಸಂಭವವೂ ಅವರಿಗಿಲ್ಲವೇ ಇಲ್ಲ. (ಇವರೇ ಜ್ಞಾನಿಗಳೆಂದು ಭಾವವು) ‖೬‖

ಸ್ವಸ್ವರೂಪವನ್ನು ಬಿಟ್ಟುಬಿಟ್ಟು, ಜಡವಾದ ಚೇತನೀಯಾಂಶಗಳಲ್ಲಿ ಮುಳುಗಿರುವುದಾವುದುಂಟೋ, ಇದಕ್ಕಿಂತ ಬೇರೆಯಾದ ಅಜ್ಞಾನವು ಹಿಂದೆಯೂ ಇರಲಿಲ್ಲ; ಮುಂದೆಯೂ ಇರುವುದಿಲ್ಲ ‖೭‖

ನಾನು ಹೇಳಿದ ಕೇವಲ ಸ್ವರೂಪಸ್ಥಿತಿಯೆಂಬುದೇ ಅಪ್ರಸಿದ್ಧವೆಂದು ಶಂಕಿಸಬಾರದು. ನಮ್ಮ ಮನಸ್ಸು; ಒಂದು ವಿಷಯವನ್ನು ಧ್ಯಾನಿಸುತ್ತಿದ್ದು, ತಟ್ಟನೆ ಆ ವಿಷಯವನ್ನು ಬಿಟು ಮತ್ತೊಂದು ವಿಷಯವನ್ನು ಪ್ರವೇಶಿಸುವುದು. ಆ ಸಮಯದಲ್ಲಿ, ಪ್ರಥಮವಿಷಯವನ್ನು ಬಿಟ್ಟಮೇಲೆ ದ್ವಿತೀಯ ವಿಷಯವನ್ನು ಸೇರುವುದಕ್ಕೆ ಮೊದಲು ಅತಿ ಸೂಕ್ಷ್ಮಕಾಲದಲ್ಲಿ ಮನಸ್ಸು ಯಾವ ವಿಷಯವನ್ನೂ ಅವಲಂಬಿಸದೆ ಇರುವುದು. ಆ ಸ್ಥಿತಿಯಲ್ಲಿ, ಮನಸ್ಸಿಗೆ ಯಾವ ಮನನವೂ ಇರುವುದಿಲ್ಲ. ಇದೇ ಸ್ವರೂಪಸ್ಥಿತಿಯೆಂದು ಹೇಳಲ್ಪಡುವುದು ‖೮‖

ಸಕಲ ಸಂಕಲ್ಪಗಳೂ ಶಾಂತವಾಗಿ, ಶಿಲಾಹೃದಯದಂತೆ ಕೇವಲವಾಗಿರುವ ಸ್ಥಿತಿಯಾವುದುಂಟೋ, ಇದೇ ಸ್ವರೂಪಸ್ಥಿತಿಯು. ಈ ಸ್ಥಿತಿಯು, ಮೂರ್ಛೆಯಲ್ಲಿಯೂ ಸುಷುಪ್ತಿಯಲ್ಲಿಯೂ ಇರುವುದು ; ಆದರೆ, ಮೂರ್ಛೆಯಲ್ಲಿ ಜಡತ್ವವೂ, ಸುಷುಪ್ತಿಯಲ್ಲಿ ನಿದ್ರೆಯೂ ಇರುವುವು. ಸ್ವರೂಪಸ್ಥಿತಿಯಲ್ಲಿಯಾದರೋ, ಜಡತ್ವವೂ ನಿದ್ರೆಯೂ ಇರುವುದಿಲ್ಲ ‖೯‖

ಅಹನ್ತಾಂಶೇ ಕ್ಷತೇ ಶಾನ್ತೇ ಭೇದೇ ನಿಸ್ಸ್ಪನ್ದತಾಂ ಗತೇ ।
ಅಜಡಾ ಯಾ ಪ್ರಕಚತಿ ತತ್ ಸ್ವರೂಪಮಿತಿ ಸ್ಥಿತಮ್ ॥೧೦॥
ತತ್ರಾರೋಪಿತಮಜ್ಞಾನಂ ತಸ್ಯ ಭೂಮೀರಿಮಾಃ ಶೃಣು ।
ಬೀಜಜಾಗ್ರತ್ ತಥಾ ಜಾಗ್ರತ್ ಮಹಾಜಾಗ್ರತ್ ತಥೈವ ಚ ।
ಜಾಗ್ರತ್ಸ್ವಪ್ನಸ್ತಥಾ ಸ್ವಪ್ನಃ ಸ್ವಪ್ನಜಾಗ್ರತ್ ಸುಷುಪ್ತಕಮ್ ॥೧೧॥
ಇತಿ ಸಪ್ತವಿಧೋ ಮೋಹಃ ಪುನರೇವ ಪರಸ್ಪರಮ್ ।
ಶ್ಲಿಷ್ಟೋ ಭವತ್ಯನೇಕಾಖ್ಯಃ ಶೃಣು ಲಕ್ಷಣಮಸ್ಯ ಚ ॥೧೨॥
ಪ್ರಥಮಂ ಚೇತನಂ ಯತ್ ಸ್ಯಾತ್ ಅನಾಖ್ಯಂ ನಿರ್ಮಲಂ ಚಿತಃ ।
ಭವಿಷ್ಯಚ್ಚಿತ್ತಜೀವಾದಿನಾಮಶಬ್ದಾರ್ಥಭಾಜನಮ್ ॥೧೩॥
ಸ್ಥಿತಂ ಜಾಗ್ರದ್ಬೀಜರೂಪಂ ಬೀಜಜಾಗ್ರತ್ ತದುಚ್ಯತೇ ।
ಏಷಾಽಜ್ಞಪ್ತೇರ್ನವಾವಸ್ಥಾ ತ್ವಂ ಜಾಗ್ರತ್ಸಂಸ್ಥಿತಿಂ ಶೃಣು ॥೧೪॥
ನವಪ್ರಸೂತಸ್ಯ ಪರಾತ್ ಅಯಂ ಚಾಹಮಿದಂ ಮಮ ।
ಇತಿ ಯಃ ಪ್ರತ್ಯಯಃ ಸ್ವಸ್ಥಃ ತಜ್ಜಾಗ್ರತ್ ಪ್ರಾಗಭಾವನಾತ್ ॥೧೫॥

ಅಂತರಿಂದ್ರಿಯದಲ್ಲಿ ಅಹಂಕಾರವು ಕ್ಷಯಹೊಂದಿ, ಬಹಿರಿಂದ್ರಿಯದಲ್ಲಿ ಭೇದಜ್ಞಾನವು ಶಾಂತವಾಗಿರುವಾಗ, ಅಂತರಿಂದ್ರಿಯ ಬಹಿರಿಂದ್ರಿಯಗಳೆರಡೂ ನಿಶ್ಚಲವಾಗಿರಲು, ಅಜಡವಾಗಿ ಚಿತ್ತು ಸ್ಫುರಿಸುವುದಾವುದುಂಟೋ, ಅದೇ ಸ್ವರೂಪವೆಂದು ಪ್ರಾಜ್ಞರ ಸಿದ್ಧಾಂತವು ॥೧೦॥

ಇಂತಹ ಪ್ರತ್ಯಕ್ಚೈತನ್ಯದಲ್ಲಿ, ಅಜ್ಞಾನವು ಆರೋಪಿತವಾಗಿರುವುದು. ಅದರ ಭೂಮಿಕೆಗಳನ್ನು ಹೇಳುವೆನು, ಕೇಳು. ಬೀಜಜಾಗ್ರತ್, ಜಾಗ್ರತ್, ಮಹಾಜಾಗ್ರತ್, ಜಾಗ್ರತ್ಸ್ವಪ್ನ, ಸ್ವಪ್ನ, ಸ್ವಪ್ನಜಾಗ್ರತ್, ಸುಷುಪ್ತ,—ಹೀಗೆಂದು ಸಪ್ತವಿಧವಾದ ಅಜ್ಞಾನವಿರುವುದು. ಇದು, ಮತ್ತೆ ಒಂದಕ್ಕೊಂದು ಸಂಯೋಗಹೊಂದಿ, ಕೊನೆಗೆ ಅನೇಕ ಭೇದವಾಗುವುದು. ಆ ಭೇದವನ್ನೆಲ್ಲ ಇಲ್ಲಿ ವಿಸ್ತರಿಸುವುದನಾವಶ್ಯಕವಾದುದರಿಂದ, ಈ ಸಪ್ತವಿಧಮೋಹದ ಲಕ್ಷಣವನ್ನು ಮಾತ್ರ ಈಗ ನೀನು ಕೇಳುವವನಾಗು ॥೧೧-೧೨॥

ಮಾಯಾಶಬಳವಾದ ಚಿತ್ತಿನದೆಸೆಯಿಂದ, ಪ್ರಥಮತಃ ಚಿದಾಭಾಸಯುಕ್ತವಾದ ಚೇತನವು ಅಭಿವ್ಯಕ್ತವಾಗುವುದಲ್ಲವೆ! ಇದೇಯೆ, ಉಪಾಧಿಬೇದಗಳಿಂದ ಮುಂದೆ ಚಿತ್ತ ಜೀವ ಮುಂತಾದ ಶಬ್ದಗಳಿಗೆ ವಿಷಯವಾಗುವುದು. ಇದು, ಜಾಗ್ರತ್ತಿಗೆ ಬೀಜರೂಪವಾಗಿರುವುದು. (ಇದರಿಂದಲೇ ಜಾಗ್ರದವಸ್ಥೆಯು ಸ್ಫುರಿಸುವುದು). ಇದಕ್ಕೇ ಬೀಜಜಾಗ್ರತ್ತೆಂದು ಹೆಸರು. ಇದೇ ಅಜ್ಞಾನಕ್ಕೆ ಪ್ರಥಮಾವಸ್ಥೆಯು. ಹೀಗೆ ಪ್ರಥಮಭೂಮಿಕೆಯಾದನಂತರ, ಈಗ ಜಾಗ್ರತ್ತೆಂಬ ದ್ವಿತೀಯಭೂಮಿಕೆಯ ಲಕ್ಷಣವನ್ನು ಕೇಳುವವನಾಗು ॥೧೩-೧೪॥

ಈ ಬೀಜಜಾಗ್ರತ್ತಿಗೆ ಅನಂತರದಲ್ಲಿ 'ನಾನು ಈ ಸ್ಥೂಲದೇಹರೂಪನು; ಈ ಭೋಗ್ಯಜಾತವೆಲ್ಲವೂ ನನ್ನದು' ಎಂದು ಸ್ಥಿರವಾಗಿ ಹುಟ್ಟುವ ಪ್ರತ್ಯಯವಾವುದುಂಟೋ, ಅದೇ ಜಾಗ್ರತ್ತೆಂಬ ಅಜ್ಞಾನದ್ವಿತೀಯಭೂಮಿಕೆಯು ॥೧೫॥

ಅಯಂ ಸೋಽಹಮಿದಂ ತನ್ಮೇ ಇತಿ ಜನ್ಮಾನ್ತರೋದಿತಃ |
ಪೀವರಃ ಪ್ರತ್ಯಯಃ ಪ್ರೋಕ್ತೋ ಮಹಾಜಾಗ್ರದಿತಿ ಸ್ಫುರತ್ ||೧೬||
ಅರೂಢಮಥವಾ ರೂಢಂ ಸರ್ವಥಾ ತನ್ಮಯಾತ್ಮಕಮ್ |
ಯಜ್ಜಾಗ್ರತೋ ಮನೋರಾಜ್ಯಂ ಜಾಗ್ರತ್ಸ್ವಪ್ನಃ ಸ ಉಚ್ಯತೇ ||೧೭||
ದ್ವಿಚನ್ದ್ರಶುಕ್ತಿಕಾರೂಪ್ಯಮೃಗತೃಷ್ಣಾದಿಭೇದತಃ |
ಅಭ್ಯಾಸಾತ್ ಪ್ರಾಪ್ಯ ಜಾಗ್ರತ್ತ್ವಂ ಸ್ವಪ್ನೋಽನೇಕವಿಧೋ ಭವೇತ್ ||೧೮||
ಅಲ್ಪಕಾಲಂ ಮಯಾ ದೃಷ್ಟಂ ಏವಂ ನೋ ಸತ್ಯಮಿತ್ಯಪಿ |
ನಿದ್ರಾಕಾಲಾನುಭೂತೇಽರ್ಥೇ ನಿದ್ರಾನ್ತೇ ಪ್ರತ್ಯಯೋ ಹಿ ಯಃ ||೧೯||
ಸ ಸ್ವಪ್ನಃ ಕಥಿತಸ್ತಸ್ಯ ಮಹಾಜಾಗ್ರತ್ಸ್ಥಿತೇರ್ಹೃದಿ |
ಚಿರಸನ್ದರ್ಶನಾಭಾವಾತ್ ಅಪ್ರಫುಲ್ಲಬೃಹದ್ವಪುಃ ||೨೦||
ಸ್ವಪ್ನೋ ಜಾಗ್ರತ್ತಯಾ ರೂಢೋ ಮಹಾಜಾಗ್ರತ್ಪದಂ ಗತಃ |
ಅಕ್ಷತೇ ವಾ ಕ್ಷತೇ ದೇಹೇ ಸ್ವಪ್ನಜಾಗ್ರನ್ಮತಂ ಹಿ ತತ್ ||೨೧||

ಈ ಪೂರ್ವೋಕ್ತವಾದ 'ನಾನು ಈ ಸ್ಥೂಲದೇಹರೂಪನು; ಈ ಭೋಗ್ಯಜಾತವೆಲ್ಲವೂ ನನ್ನದು' ಎಂಬ ಪ್ರತ್ಯಯವೇ, ಅನೇಕ ಜನ್ಮಗಳು ಕಳೆದು ಚೆನ್ನಾಗಿ ಬಲಿತರೆ, ಆಗ ಇದು ಮಹಾಜಾಗ್ರತ್ತೆಂದು ಹೇಳಲ್ಪಡುವುದು ॥೧೬॥

ಜಾಗ್ರತ್ತಿನಲ್ಲಿ ಅನುಭವಿಸುವ ಮನೋರಾಜ್ಯ(ಮನೋರಥಪರಂಪರೆ)ವೇ ಜಾಗ್ರತ್ಸ್ವಪ್ನವೆಂದು ಹೇಳಲ್ಪಡುವುದು. ಈ ಮನೋರಾಜ್ಯವು, ಚಿರತರಾಭ್ಯಾಸದಿಂದ ದೃಢವಾಗಿಯಾಗಲಿ—ಅಥವಾ ಅಭ್ಯಾಸನ್ಯೂನತೆಯಿಂದ ದೃಢವಲ್ಲದೆಯಾಗಲಿ ಇರಬಹುದು. ಆದರೆ, ಇದು ಹೇಗಿದ್ದರೂ ಕೇವಲ ತನ್ಮಯವಾಗಿರಬೇಕು ॥೧೭॥

ಚಂದ್ರದ್ವಯಾದಿ ಜ್ಞಾನಗಳೆಲ್ಲವೂ ಯಾವುದರಲ್ಲಿ ಸೇರಿರುವುವೆಂದರೆ,—ದ್ವಿಚಂದ್ರಜ್ಞಾನ, ಶುಕ್ತಿರಜತಜ್ಞಾನ, ಮೃಗತೃಷ್ಣಿಕಾಜ್ಞಾನ, ಇತ್ಯಾದಿಗಳೆಲ್ಲವೂ ಜಾಗ್ರತ್ಸ್ವಪ್ನದಲ್ಲಿಯೇ ಅಂತರ್ಗತಗಳೆಂದು ತಿಳಿಯಬೇಕು. ಈ ಸ್ವಪ್ನವು, ಅಭ್ಯಾಸಾತಿಶಯದಿಂದ ಜಾಗ್ರತ್ತಾಗಿಬಿಟ್ಟು, ಅನೇಕವಿಧವಾಗಿರುವುದು ॥೧೮॥

ನಿದ್ರೆಯ ಮಧ್ಯದಲ್ಲಿಯಾಗಲಿ—ಕೊನೆಯಲ್ಲಾಗಲಿ ಸ್ವಲ್ಪಹೊತ್ತು ಅನುಭವಿಸಿ, ಬಳಿಕ 'ಇದನ್ನು ನಾನು ಹೀಗೆ ಕಂಡೆನು; ಇದು ಸತ್ಯವಾದುದಲ್ಲ' ಎಂಬ ಪ್ರತ್ಯಯವಾವುದುದಯಿಸುವುದೋ, ಅದೇ ಸ್ವಪ್ನವೆನ್ನಿಸುವುದು. ಇದು ಅಜ್ಞನಾದವನಿಗೆ, ಮಹಾಜಾಗ್ರತ್ಕಾಲಿಕವಾದ ಸ್ಥೂಲಶರೀರದ ಹೃದಯದೇಶದಲ್ಲಿ ಸ್ಫುರಿಸುವುದು. ಈ ಸ್ವಪ್ನದಲ್ಲಿ, ಚಿರಕಾಲಿಕವಾದ ದರ್ಶನವಿಲ್ಲದಿರುವುದರಿಂದ, ಸ್ಥೂಲಶರೀರ ವಿಕಾಸವಾಗಲಾರದು ॥೧೯-೨೦॥

ಈ ಸ್ವಪ್ನವೇ, ಚಿರಕಾಲಭಾವನೆಯಿಂದ ಜಾಗ್ರತ್ತೆಂಬುದಾಗಿ ರೂಢವಾಗಿ, ಕೊನೆಗೆ ದೊಡ್ಡ ಜಾಗ್ರತ್ತಾಗಿ, ಸ್ವಪ್ನಜಾಗ್ರತ್ತೆನ್ನಿಸಿಕೊಳ್ಳುವುದು. ಇದು, ದೈವಯೋಗದಿಂದ ದೇಹನಾಶವಾದರೂ, ಅಥವಾ ಈ ದೇಹವೇ ಇದ್ದರೂ ಪುರುಷನನ್ನು ಅನುಸರಿಸುವುದು ॥೨೧॥

ಷಡವಸ್ಥಾ ಪರಿತ್ಯಾಗೇ ಜಡಾ ಜೀವಸ್ಯ ಯಾ ಸ್ಥಿತಿಃ |
ಭವಿಷ್ಯದ್ದುಃಖಬೋಧಾಢ್ಯಾ ಸೌಷುಪ್ತೀ ಸೋಚ್ಯತೇ ಗತಿಃ ||೨೨||
ಏತೇ ತಸ್ಯಾಮವಸ್ಥಾಯಾಂ ತೃಣಲೋಷ್ಟಶಿಲಾದಯಃ |
ಪದಾರ್ಥಾಃ ಸಂಸ್ಥಿತಾಃ ಸರ್ವೇ ಪರಮಾಣುಪ್ರಮಾಣಿನಃ ||೨೩||
ಸಪ್ತಾವಸ್ಥಾ ಇತಿ ಪ್ರೋಕ್ತಾಃ ಮಯಾಽಜ್ಞಾನಸ್ಯ ರಾಘವ |
ಏಕೈಕಾ ಶತಶಾಖಾತ್ರ ನಾನಾವಿಭವರೂಪಿಣೀ ||೨೪||
ಜಾಗ್ರತ್ಸ್ವಪ್ನಶ್ಚಿರಂ ರೂಢೋ ಜಾಗ್ರತಾಮೇವ ಗಚ್ಛತಿ |
ನಾನಾಪದಾರ್ಥಭೇದೇನ ಸವಿಕಾಸಂ ವಿಜೃಂಭತೇ ||೨೫||
ಅಸ್ಯಾಮುಪ್ಯದರೇ ಸನ್ತಿ ಮಹಾಜಾಗ್ರದ್ದಶಾದೃಶಃ |
ತಾಸಾಮುಪ್ಯನ್ತರೇ ಲೋಕೋ ಮೋಹಾನ್ಮೋಹಾನ್ತರಂ ವ್ರಜೇತ್ |
ಅನ್ತಃಪಾತಿಜಲಾವರ್ತಇವ ಧಾವತಿ ನೌರ್ಭ್ರಮಮ್ ||೨೬||
ಕಾಶ್ಚಿತ್ ಸಂಸ್ಮೃತಯೋ ದೀರ್ಘಂ ಸ್ವಪ್ನಜಾಗ್ರತ್ತಯಾ ಸ್ಥಿತಾಃ |
ಕಾಶ್ಚಿತ್ ಪುನಃ ಸ್ವಪ್ನಜಾಗ್ರತ್ ಜಾಗ್ರತ್ಸ್ವಪ್ನಾಸ್ತಥೇತರಾಃ ||೨೭||

ಈ ಪೂರ್ವೋಕ್ತವಾದ ಆರು ಭೂಮಿಕೆಗಳೂ ಬಿಟ್ಟುಹೋದಮೇಲೆ, ಮುಂದೆ ಮತ್ತೊಂದು ಅಜ್ಞಾನ ಬರತಕ್ಕುದಾಗಿರುವಾಗ, ಇವೆರಡಕ್ಕೂ ಮಧ್ಯದಲ್ಲಿ ಜೀವನಿಗೆ ಕೇವಲ ಜಡವಾದ ಯಾವ ಸ್ಥಿತಿಯಿರುವುದೋ, ಅದೇ ಸುಷುಪ್ತಿಯೆನ್ನಿಸುವುದು ||೨೨||

ಆ ಸುಷುಪ್ತಸ್ಥಿತಿಯಲ್ಲಿ, ತೃಣ ಲೋಷ್ಟ ಶಿಲೆ ಮುಂತಾದ ಈ ಪದಾರ್ಥಗಳೆಲ್ಲವೂ, ಸೂಕ್ಷ್ಮ ರೂಪವಾಗಿ ಕಾರಣದಲ್ಲಿ ವಿಲೀನವಾಗಿರುವುವು ||೨೩||

ಅಯ್ಯಾ ರಾಘವ! ಇದೋ ಈರೀತಿಯಾಗಿ ಅಜ್ಞಾನಭೂಮಿಕಾಸಪ್ತಕವನ್ನು ನಾನು ನಿನಗೆ ಹೇಳಿರುವೆನು. ಇವುಗಳಲ್ಲಿ, ಒಂದೊಂದು ಭೂಮಿಕೆಯೂ ನೂರಾರು ವಿಭಾಗವುಳ್ಳದಾಗಿರುವುದು. ಅದರಲ್ಲಿಯೂ ನಾನಾವಿಧ ವಿಭ್ರಮಗಳು ತೋರುವುವು ||೨೪||

ಇವುಗಳೊಳಗೆ, ಜಾಗ್ರತ್ಸ್ವಪ್ನವೆಂಬ ಭೂಮಿಕೆಯು, ಚಿರಕಾಲಭಾವನೆಯಿಂದ ನಿರೂಢವಾಗಿಬಿಟ್ಟು, ಜಾಗ್ರತ್ತಿನಲ್ಲಿಯೇ ಸೇರಿಹೋಗುವುದು. ಆಗಲೂ ಅದು ನಾನಾವಿಧ ಪದಾರ್ಥಭೇದದಿಂದ ವಿಕಾಸಹೊಂದಿ ವಿಜೃಂಭಿಸುವುದು ||೨೫||

ಹೀಗೆ ಜಾಗ್ರದ್ಭಾವವನ್ನು ಹೊಂದಿದ ಈ ಜಾಗ್ರತ್ಸ್ವಪ್ನನಾಮಕವಾದ ಭೂಮಿಕೆಯಲ್ಲಿಯೂ, ಮಹಾಜಾಗ್ರದವಸ್ಥೆಗಳು ಅಸಂಖ್ಯಾಕವಾಗಿ ಸ್ಫುರಿಸುವುವು. ಇವುಗಳೊಳಗೂಕೂಡ, ಜನರು ಒಂದು ಅಜ್ಞಾನದಿಂದ ಮತ್ತೊಂದು ಅಜ್ಞಾನವನ್ನು ಹೊಂದುತಲೇ ಇರುವರು. ನೀರಿನೊಳಗಿರುವ ಸುಳಿಯ ಮಧ್ಯದಲ್ಲಿ ಸಿಕ್ಕಿಕೊಂಡ ನಾವೆಯಂತೆ, ಸಂತತವಾಗಿ ಭ್ರಮೆಯನ್ನು ಹೊಂದುತಲೇ ಇರುವರು ||೨೬||

ಅಯ್ಯಾ ರಾಮ! ಈಪ್ರಕಾರವಿರುವ ಈ ಸಂಸಾರ (ಅಜ್ಞಾನ)ಗಳಲ್ಲಿ, ಕೆಲವು ಬಹುಕಾಲ ಸ್ವಪ್ನಜಾಗ್ರದ್ರೂಪವಾಗಿಯೂ, ಕೆಲವು ಸ್ವಲ್ಪಕಾಲ ಸ್ವಪ್ನಜಾಗ್ರತ್ತುಗಳಾಗಿಯೂ, ಕೆಲವು ಜಾಗ್ರತ್ಸ್ವಪ್ನಗಳಾಗಿಯೂ ಇರುವುವು ||೨೭||

ಅಜ್ಞಾನಭೂಮಿರಿತಿ ಸಪ್ತಪದಾ ಮಯೋಕ್ತಾ
ನಾನಾವಿಕಾರಜಗದನ್ತರಭೇದಹೀನಾ ।
ಅಸ್ಯಾಃ ಸಮುತ್ತರಸಿ ಚಾರುವಿಚಾರಣಾಭಿಃ
ದೃಷ್ಟೇ ಪ್ರಬೋಧವಿಮಲೇ ಸ್ವಯಮಾತ್ಮನೀತಿ ॥೨೮॥

ಇತಿ ಉತ್ಪತ್ತಿಪ್ರಕರಣೇ ಅಜ್ಞಾನಭೂಮಿಕಾವರ್ಣನಂ ನಾಮ
ಸಪ್ತದಶಾಧಿಕಶತತಮಃ ಸರ್ಗಃ.

ವತ್ಸ! ಈರೀತಿಯಾಗಿ ಸಪ್ತವಿಧವಾದ ಅಜ್ಞಾನಭೂಮಿಕೆಯನ್ನು ನಾನು ನಿನಗೆ ಹೇಳಿರುವೆನು. ಇದು, ನಾನಾವಿಕಾರವಾದ ಪ್ರಪಂಚಭೇದವುಳ್ಳದಾಗಿ ಅತಿ ನಿಂದ್ಯವಾಗಿರುವುದು. ನಾನು ಮುಂದೆ ಹೇಳುವ ಉತ್ತಮವಾದ ವಿಚಾರಗಳಿಂದ ಜ್ಞಾನರೂಪನಾಗಿ ನಿರ್ಮಲನಾಗಿರುವ ಆತ್ಮನ ಸಾಕ್ಷಾತ್ಕಾರವಾದಪಕ್ಷದಲ್ಲಿ, ನೀನು ಈ ಅಜ್ಞಾನಭೂಮಿಕೆಯಿಂದ ಪಾರಾಗುವೆ ॥೨೮॥

ಇದು ಉತ್ಪತ್ತಿಪ್ರಕರಣದಲ್ಲಿ ಅಜ್ಞಾನಭೂಮಿಕಾವರ್ಣನೆಯೆಂಬ
ನೂರಹದಿನೇಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟಾದಶೋತ್ತರಶತತಮಃ ಸರ್ಗಃ.

ಶ್ರೀವಸಿಷ್ಠ ಉವಾಚ

ಇಮಾಂ ಸಪ್ತಪದಾಂ ಜ್ಞಾನಭೂಮಿಮಾಕರ್ಣಯಾನಘ ।
ನಾನಯಾ ಜ್ಞಾತಯಾ ಭೂಯೋ ಮೋಹಪಙ್ಕೇ ನಿಮಜ್ಜಸಿ ॥೧॥
ವದನ್ತಿ ಬಹುಭೇದೇನ ವಾದಿನೋ ಯೋಗಭೂಮಿಕಾಃ ।
ಮಮ ತ್ವಭಿಮತಾನಾಂ ಇಮಾಏವ ಶುಭಪ್ರದಾಃ ॥೨॥
ಅವಬೋಧಂ ವಿದುರ್ಜ್ಞಾನಂ ತದಿದಂ ಸಪ್ತಭೂಮಿಕಮ್ ।
ಮುಕ್ತಿಸ್ತು ಜ್ಞೇಯಮಿತ್ಯುಕ್ತಂ ಭೂಮಿಕಾಸಪ್ತಕಾತ್ ಪರಮ್ ॥೩॥
ಸತ್ಯಾವಬೋಧೋ ಮೋಕ್ಷಶ್ಚೈವೇತಿ ಪರ್ಯಾಯನಾಮನೀ ।
ಸತ್ಯಾವಬೋಧೋ ಜೀವೋಽಯಂ ನೇಹ ಭೂಯಃ ಪ್ರರೋಹತಿ ॥೪॥

ಉತ್ಪತ್ತಿಪ್ರಕರಣದಲ್ಲಿ ನೂರ ಹದಿನೆಂಟನೆಯ ಸರ್ಗವು.

ಇಹ ಸಪ್ತಪದಾ ಜ್ಞಾನಭೂಮಿಕಾ ಲಕ್ಷಣೈಃ ಸ್ವಕೈಃ ।
ಆರೂಢಲಕ್ಷಣೈಶ್ಚೈವ ಮೋಕ್ಷಾನ್ತಾ ಸಾಧು ವರ್ಣ್ಯತೇ ॥

ಈ ಸರ್ಗದಲ್ಲಿ ಮೋಕ್ಷಪರ್ಯವಸಾಯಿಯಾದ ಸಪ್ತವಿಧಜ್ಞಾನಭೂಮಿಕೆಯು, ಅದರ ಲಕ್ಷಣದೊಡನೆಯೂ, ಆರೂಢರ ಲಕ್ಷಣದೊಡನೆಯೂ ಚೆನ್ನಾಗಿ ವಿವರಿಸಲ್ಪಡುವುದು.

ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳುವರು :—

ಮೋಹರಹಿತನಾದ ಎಲೈ ರಾಮನೆ! ಈಗ ನಾನು ನಿನಗೆ ಅಜ್ಞಾನಭೂಮಿಕೆಗಳನ್ನು ಹೇಳಿಯಾಯ್ತಲ್ಲವೆ! ಇನ್ನು ಸಪ್ತವಿಧವಾದ ಜ್ಞಾನಭೂಮಿಕೆಯನ್ನು ಹೇಳುವೆನು, ಕೇಳು. ಇದನ್ನು ಕೇಳಿ ತಿಳಿದುಕೊಂಡರೆ, ಪುನಃ ನೀನು ಅಜ್ಞಾನವೆಂಬ ಕೆಸರಿನಲ್ಲಿ ಮುಳುಗದಿರುವೆ ॥೧॥

ಯೋಗಶಾಸ್ತ್ರಜ್ಞರೂ, ಸಾಂಖ್ಯಶಾಸ್ತ್ರಜ್ಞರೂ, ಈ ಯೋಗಭೂಮಿಕೆಗಳನ್ನು ಇನ್ನೂ ನಾನಾವಿಧ ಭೇದವುಳ್ಳದನ್ನಾಗಿ ಹೇಳುವರು ; ನನಗಾದರೋ, ಮೋಕ್ಷಪ್ರದಗಳಾದ ಈಯೇಳು ಭೂಮಿಕೆಗಳೇ ಇಷ್ಟವಾಗಿರುವುವು ॥೨॥

ತತ್ವಬೋಧವೇ ಜ್ಞಾನವೆನ್ನಿಸುವುದು; ಇದರಲ್ಲಿಯೇ ಈಯೇಳುಭೂಮಿಕೆಗಳಿರುವುವು. ಮುಕ್ತಿಯೇ ಜ್ಞೇಯವೆನ್ನಿಸುವುದು; ಇದು ಈ ಸಪ್ತಭೂಮಿಕೆಗಳನ್ನತಿಕ್ರಮಿಸಿರುವುದು ॥೩॥

ಅಂತು, ಸತ್ಯಾವಬೋಧವೆಂಬುದೂ ಮೋಕ್ಷವೆಂಬುದೂ ಪರ್ಯಾಯಪದಗಳೆಂದು ಸಿದ್ಧವಾಯ್ತು. ಈ ಸತ್ಯಾವಬೋಧರೂಪನಾದ ಜೀವನು, ಪುನಃ ಈ ಲೋಕದಲ್ಲಿ ಜನನ ಮರಣ ದುಃಖಕ್ಕೆ ಗುರಿಯಾಗುವುದಿಲ್ಲ ॥೪॥

ಜ್ಞಾನಭೂಮಿಃ ಶುಭೇಚ್ಛಾಖ್ಯಾ ಪ್ರಥಮಾ ಸಮುದಾಹೃತಾ ।
ವಿಚಾರಣಾ ದ್ವಿತೀಯಾ ತು ತೃತೀಯಾ ತನುಮಾನಸಾ ॥೫॥
ಸತ್ತ್ವಾಪತ್ತಿಶ್ಚತುರ್ಥೀ ಸ್ಯಾತ್ ತತೋಽಸಂಸಕ್ತಿನಾಮಿಕಾ ।
ಪದಾರ್ಥಾಭಾವನಾ ಷಷ್ಠೀ ಸಪ್ತಮೀ ತುರ್ಯಗಾ ಸ್ಮೃತಾ ॥೬॥
ಆಸಾಮನ್ತೇ ಸ್ಥಿತಾ ಮುಕ್ತಿಃ ತಸ್ಯಾಂ ಭೂಯೋ ನ ಶೋಚ್ಯತೇ ।
ಏತಾಸಾಂ ಭೂಮಿಕಾನಾಂ ತ್ವಂ ಇದಂ ನಿರ್ವಚನಂ ಶೃಣು ॥೭॥
ಸ್ಥಿತಃ ಕಿಂ ಮೂಢಏವಾಸ್ಮಿ ಪ್ರೇಕ್ಷ್ಯೋಽಹಂ ಶಾಸ್ತ್ರಸಜ್ಜನೈಃ ।
ವೈರಾಗ್ಯಪೂರ್ವಮಿಚ್ಛೇತಿ ಶುಭೇಚ್ಛೇತ್ಯುಚ್ಯತೇ ಬುಧೈಃ ॥೮॥
ಶಾಸ್ತ್ರಸಜ್ಜನಸಮ್ಪರ್ಕವೈರಾಗ್ಯಾಭ್ಯಾಸಪೂರ್ವಕಮ್ ।
ಸದಾಚಾರಪ್ರವೃತ್ತಿರ್ಯಾ ಪ್ರೋಚ್ಯತೇ ಸಾ ವಿಚಾರಣಾ ॥೯॥
ವಿಚಾರಣಾಶುಭೇಚ್ಛಾಭ್ಯಾಂ ಇನ್ದ್ರಿಯಾರ್ಥೇಷ್ವಸಕ್ತತಾ ।
ಯಾತ್ರ ಸಾ ತನುತಾಭಾವಾತ್ ಪ್ರೋಚ್ಯತೇ ತನುಮಾನಸಾ ॥೧೦॥
ಭೂಮಿಕಾತ್ರಿತಯಾಭ್ಯಾಸಾತ್ ಚಿತ್ತೇಽರ್ಥೇ ವಿರತೇರ್ವಶಾತ್ ।
ಸತ್ತ್ವಾತ್ಮನಿ ಸ್ಥಿತಿಃ ಶುದ್ಧೇ ಸತ್ತ್ವಾಪತ್ತಿರುದಾಹೃತಾ ॥೧೧॥

ಇನ್ನು ಈ ಜ್ಞಾನಭೂಮಿಕೆಗಳ ನಾಮಗಳನ್ನು ತಿಳಿಯುವನಾಗು,— ಶುಭೇಚ್ಛೆಯೆಂಬುದೇ, ಪ್ರಥಮವಾದ ಜ್ಞಾನಭೂಮಿಕೆಯೆಂದು ಶಾಸ್ತ್ರಜ್ಞರಿಂದ ಹೇಳಲ್ಪಟ್ಟಿರುವುದು. ವಿಚಾರಣೆಯೆಂಬುದು ಎರಡನೆಯದು. ತನುಮಾನಸವೆಂಬುದು ಮೂರನೆಯದು. ಸತ್ವಾಪತ್ತಿಯೆಂಬುದು ನಾಲ್ಕನೆಯದು. ಅನಂತರ ಅಸಂಸಕ್ತಿಯೆಂಬುದು ಅಯ್ದನೆಯದು. ಪದಾರ್ಥಾಭಾವನೆಯೆಂಬುದು ಆರನೆಯದು. ತುರ್ಯಗಾ ಎಂಬುದು ಏಳನೆಯದು ॥೫—೬॥

ಈ ಏಳು ಭೂಮಿಕೆಗಳ ಕೊನೆಯಲ್ಲಿ ಮುಕ್ತಿಯಿರುವುದು. ಅದರಲ್ಲಿ ನೆಲೆಸಿದವನು ಮತ್ತೆ ದುಃಖಭಾಗಿಯಾಗುವುದಿಲ್ಲ. ಈಗ ನೀನು ಈ ಭೂಮಿಕೆಗಳ ಲಕ್ಷಣಗಳನ್ನು ಕೇಳುವವನಾಗು.

'ಅಯ್ಯೋ! ನಾನೇಕೆ ಹೀಗೆ ಮೂಢನಾಗಿಯೇ ಇರುವೆನು? ಮುಂದಾದರೂ, ಶಾಸ್ತ್ರಗಳ ದ್ವಾರದಿಂದಲೂ ಗುರುಗಳ ಮುಖದಿಂದಲೂ ಜ್ಞಾನವಂತನಾಗುವೆನು' ಎಂದು, ವೈರಾಗ್ಯಪೂರ್ವಕವಾಗಿ ಇಚ್ಛಿಸುವುದೇ, ಶುಭೇಚ್ಛೆಯೆಂಬ ಪ್ರಥಮಭೂಮಿಕೆಯೆಂಬುದಾಗಿ ಶಾಸ್ತ್ರಜ್ಞರಿಂದ ಹೇಳಲ್ಪಡುವುದು ॥೮॥

ಶಾಸ್ತ್ರಸತ್ಸಂಗತಿವೈರಾಗ್ಯಗಳ ಅಭ್ಯಾಸಪೂರ್ವಕವಾಗಿ ಗುರುಶುಶ್ರೂಷಾದಿ ಸದಾಚಾರಗಳಲ್ಲಿ ಪ್ರವೃತ್ತಿ ಯಾವುದುಂಟೋ, ಅದೇ ವಿಚಾರಣೆಯೆಂಬ ದ್ವಿತೀಯಭೂಮಿಕೆಯೆಂದು ಹೇಳಲ್ಪಡುವುದು ॥೯॥

ಈ ಪೂರ್ವೋಕ್ತವಾದ ವಿಚಾರಣಾಶುಭೇಚ್ಛೆಗಳಿಂದ ಮನಸ್ಸು ವಿಷಯಗಳಲ್ಲಿ ಪ್ರವೃತ್ತಿಯನ್ನು ಅತಿ ಸೂಕ್ಷ್ಮವಾಗಿ ಮಾಡುವುದಕ್ಕುಪಕ್ರಮಿಸುವುದರಿಂದ, ವಿಷಯಗಳಲ್ಲಿ ಅನಾಸಕ್ತಿಯೇ ತನುಮಾನಸೆಯೆನ್ನಲ್ಪಡುವುದು ॥೧೦॥

ಈ ಮೂರು ಭೂಮಿಕೆಗಳನ್ನೂ ಚೆನ್ನಾಗಿ ಅಭ್ಯಸಿಸುವುದರಿಂದ, ಚಿತ್ತದಲ್ಲಿ ಬಾಹ್ಯವಿಷಯ ವಿಶ್ರಾಂತಿಯುದಯಿಸಲಾಗಿ, ಶುದ್ಧವಾದ ಪರಮಾತ್ಮನಲ್ಲಿ ಚಿತ್ತವು ನೆಲೆಸುವಿಕೆಯೇ ಸತ್ವಾಪತ್ತಿಯೆನ್ನಿಸುವುದು ॥೧೧॥

ದಶಾಚತುಷ್ಟಯಾಭ್ಯಾಸಾತ್ ಅಸಂಸಙ್ಗಫಲೇನ ಚ |
ರೂಢಸತ್ತ್ವಚಮತ್ಕಾರಾ ಪ್ರೋಕ್ತಾಽಸಂಸಕ್ತಿನಾಮಿಕಾ ||೧೨||
ಭೂಮಿಕಾಪಞ್ಚಕಾಭ್ಯಾಸಾತ್ ಸ್ವಾತ್ಮಾರಾಮತಯಾ ದೃಢಮ್ |
ಆಭ್ಯನ್ತರಾಣಾಂ ಬಾಹ್ಯಾನಾಂ ಪದಾರ್ಥಾನಾಮಭಾವನಾತ್ ||೧೩||
ಪರಪ್ರಯುಕ್ತೇನ ಚಿರಂ ಪ್ರಯತ್ನೇನಾರ್ಥಭಾವನಾತ್ |
ಪದಾರ್ಥಾಭಾವನಾನಾಮ್ನೀ ಷಷ್ಠೀ ಸಞ್ಜಾಯತೇ ಗತಿಃ ||೧೪||
ಭೂಮಿಷಟ್ಕಚಿರಾಭ್ಯಾಸಾತ್ ಭೇದಸ್ಯಾನುಪಲಮ್ಭತಃ |
ಯತ್ ಸ್ವಭಾವೈಕನಿಷ್ಠತ್ವಂ ಸಾ ಜ್ಞೇಯಾ ತುರ್ಯಗಾ ಗತಿಃ ||೧೫||
ಏಷಾ ಹಿ ಜೀವನ್ಮುಕ್ತೇಷು ತುರ್ಯಾವಸ್ಥೇಹ ವಿದ್ಯತೇ |
ವಿದೇಹಮುಕ್ತವಿಷಯಃ ತುರ್ಯಾತೀತಮತಃ ಪರಮ್ ||೧೬||
ಯೇ ಹಿ ರಾಮ ಮಹಾಭಾಗಾಃ ಸಪ್ತಮೀಂ ಭೂಮಿಕಾಂ ಗತಾಃ |
ಆತ್ಮಾರಾಮಾ ಮಹಾತ್ಮಾನಃ ತೇ ಮಹತ್ ಪದಮಾಗತಾಃ ||೧೭||

ಆ ನಾಲ್ಕುಭೂಮಿಕೆಗಳ ಅಭ್ಯಾಸಾತಿಶಯದಿಂದ, ಮನಸ್ಸು ಬಾಹ್ಯವಿಷಯಗಳಲ್ಲಿಯೂ ಅಭ್ಯಂತರವಿಷಯಗಳಲ್ಲಿಯೂ ಸಂಗಹೀನವಾಗಲಾಗಿ, ಇದರ ಫಲದಿಂದ ಚಿತ್ತದಲ್ಲಿ ನಿತ್ಯಾಪರೋಕ್ಷಬ್ರಹ್ಮಸಾಕ್ಷಾತ್ಕಾರದಿಂದ ಆನಂದಾವಿರ್ಭಾವವಾಗುವಿಕೆಯೇ ಸತ್ವಾಪತ್ತಿಯೆಂದು ಹೇಳಲ್ಪಡುವುದು ||೧೨||

ಈ ಐದು ಭೂಮಿಕೆಗಳನ್ನೂ ಚೆನ್ನಾಗಿ ಅಭ್ಯಸಿಸುವುದರಿಂದ, ಆತ್ಮಾರಾಮಸ್ಥಿತಿಯುಂಟಾಗುವುದು; (ಆತ್ಮಾರಾಮಸ್ಥಿತಿಯೆಂದರೆ = ಸರ್ವದಾ ಆತ್ಮನಲ್ಲಿಯೇ ರಮಿಸುತಿರುವುದೆಂದು ಮುಖ್ಯ ತಾತ್ಪರ್ಯವು.) ಈ ಆತ್ಮಾರಾಮಸ್ಥಿತಿಯುಂಟಾದ ಬಳಿಕ, ಬಾಹ್ಯಾಭ್ಯಂತರವಿಷಯಗಳೊಂದೂ ಸ್ಫುರಿಸುವುದಿಲ್ಲ; ಆ ಸ್ಥಿತಿಯಲ್ಲಿ, ಇತರರು ಪ್ರಯತ್ನಪೂರ್ವಕವಾಗಿ ಪ್ರೇರಿಸಿದರೆ, ಬಾಲೋನ್ಮತ್ತರಂತೆ ಅವರ ಇಚ್ಛಾನುಸಾರವಾಗಿ ಪ್ರಾಪಂಚಿಕವ್ಯವಹಾರ ಪ್ರವೃತ್ತಿಯುಂಟಾಗುತಿರುವುದು. ಇದೇ, ಆರನೆಯದಾದ ಪದಾರ್ಥಾಭಾವನೆಯೆಂಬ ಜ್ಞಾನಭೂಮಿಕೆಯು ||೧೩-೧೪

ಈ ಆರು ಭೂಮಿಕೆಗಳನ್ನೂ ಚಿರಕಾಲ ಅಭ್ಯಸಿಸುವುದರಿಂದ, ಭೇದಜ್ಞಾನವೇ ಲೀನವಾಗುವುದು; ಆ ಬಳಿಕ, ಪುರುಷನು ಕೇವಲ ಸ್ವಭಾವಮಾತ್ರನಿಷ್ಠನಾಗಿರುವುದು ಯಾವುದುಂಟೋ, ಅದೇ ತುರ್ಯಗೆಯೆಂಬ ಏಳನೆಯ ಜ್ಞಾನಭೂಮಿಕೆಯೆಂದು ತಿಳಿಯಲ್ಪಡತಕ್ಕದು ||೧೫||

ಈ ತುರ್ಯಗೆಯೆಂಬ ಅವಸ್ಥೆಯು ಜೀವನ್ಮುಕ್ತರಲ್ಲಿರುವುದು. ಇಲ್ಲಿಂದ ಮುಂದಕ್ಕಿರುವುದು ತುರ್ಯಾತೀತವಾದ ಬ್ರಹ್ಮವೇಯೇ; ಇದು ವಿದೇಹಮುಕ್ತಿವಿಷಯವಾದುದು ||೧೬||

ಅಯ್ಯಾ ರಾಮ! ಯಾವ ಪುಣ್ಯಾತ್ಮರು ಪೂರ್ವೋಕ್ತವಾದ ಸಪ್ತಮ ಭೂಮಿಕೆಯನ್ನು ಹೊಂದಿರುವರೋ, ಅವರೇ ಆತ್ಮಾರಾಮರು; ಅವರೇ ಮಹಾತ್ಮರು; ಅವರೇ ಪರಮಪದವನ್ನು ಹೊಂದಿದವರು ||೧೭||

ಜೀವನ್ಮುಕ್ತಾ ನ ಸಜ್ಜನ್ತಿ ಸುಖದುಃಖರಸಸ್ಥಿತೌ ।
ಪ್ರಕೃತೇನಾರ್ಥಕಾರ್ಯಾಣಿ ಕಿಞ್ಚಿತ್ ಕುರ್ವನ್ತಿ ವಾ ನ ವಾ ॥೧೮॥
ಪಾರ್ಶ್ವಸ್ಥಬೋಧಿತಾಃ ಸನ್ತಃ ಸರ್ವಾಚಾರಕ್ರಮಾಗತಮ್ ।
ಆಚಾರಮಾಚರನ್ತ್ಯೇವ ಸುಪ್ರಬುದ್ಧವದಕ್ಷತಮ್ ॥೧೯॥
ಆತ್ಮಾರಾಮತಯಾ ತಾಂಸ್ತು ಸುಖಯನ್ತಿ ನ ಕಾಞ್ಚನ ।
ಜಗತ್ಕ್ರಿಯಾಃ ಸುಸಂಸುಪ್ತಾನ್ ರೂಪಾಲೋಕಾಃ ಸ್ತ್ರಿಯೋ ಯಥಾ ॥
ಭೂಮಿಕಾಸಪ್ತಕಂ ಚೈತತ್ ಧೀಮತಾಮೇವ ಗೋಚರಃ ।
ನ ಪಶುಸ್ಥಾವರಾದೀನಾಂ ನ ಚ ಮ್ಲೇಚ್ಛಾದಿಚೇತಸಾಮ್ ॥೨೧॥
ಪ್ರಾಪ್ತಾ ಜ್ಞಾನದಶಾಮೇತಾಂ ಪಶುಮ್ಲೇಚ್ಛಾದಯೋಽಪಿ ಯೇ ।
ಸದೇಹಾವಾಪ್ಯದೇಹಾವಾ ತೇ ಮುಕ್ತಾ ನಾತ್ರ ಸಂಶಯಃ ॥೨೨॥
ಜ್ಞಪ್ತಿರ್ಹಿ ಗ್ರನ್ಥಿವಿಚ್ಛೇದಃ ತಸ್ಮಿನ್ ಸತಿ ಹಿ ಮುಕ್ತತಾ ।
ಮೃಗತೃಷ್ಣಾಮ್ಬುಬುದ್ಧ್ಯಾದಿಶಾನ್ತಿಮಾತ್ರಾತ್ಮಕಸ್ತ್ವಸೌ ॥೨೩॥

ಹೀಗೆ ಸಪ್ತಮಭೂಮಿಕೆಯನ್ನು ಹೊಂದಿರುವ ಜೀವನ್ಮುಕ್ತರು, ಸುಖದುಃಖಭೋಗಗಳಲ್ಲಿ ಸ್ವಲ್ಪವೂ ಸೇರುವುದಿಲ್ಲ. ಆಯಾಕಾಲದಲ್ಲಿ ಪ್ರಾಪ್ತವಾದ ಕರ್ಮಗಳನ್ನು, ಸ್ವಲ್ಪವಾಗಿ ಮಾಡಿದರೆ ಮಾಡುವರು; ಅಥವಾ ಬಿಟ್ಟರೂ ಬಿಡುವರು ॥೧೮॥

ಆದರೆ, ಇವರು ಯಥೇಷ್ಟಾಚಾರಯುಕ್ತರಾಗಿರುವರೆಂದು ತಿಳಿಯಕೂಡದು. ಜೀವನ್ಮುಕ್ತಸ್ಥಿತಿಯಲ್ಲಿರುವಾಗ ಇವರಿಗೆ ಬಹಿರ್ವ್ಯಾಪಾರವೊಂದೂ ತೋರುವುದಿಲ್ಲ. ಅಂತಹ ಸಂದರ್ಭದಲ್ಲಿ, ಪಾರ್ಶ್ವದಲ್ಲಿರತಕ್ಕವರು ಪ್ರೇರಿಸಿದಾಗ, ಸಮಸ್ತ ಸದಾಚಾರವನ್ನೂ ಯಥಾವತ್ತಾಗಿ ಪ್ರಬುದ್ಧರಂತೆ ಆಚರಿಸುತಲೇ ಇರುವರು ॥೧೯॥

ಈ ಜೀವನ್ಮುಕ್ತರು ಸರ್ವದಾ ಆತ್ಮನಲ್ಲಿ ರಮಿಸುತ್ತಿರುವ ಕಾರಣ, ಗಾಢನಿದ್ರೆಯಲ್ಲಿರತಕ್ಕವರನ್ನು ಸೌಂದರ್ಯವತಿಯರಾದ ಸ್ತ್ರೀಯರು ಸುಖಪಡಿಸಲಾರದಿರುವಂತೆ, ಪ್ರಪಂಚವ್ಯವಹಾರಗಳಾವುವೂ ಅವರನ್ನು ಸುಖಪಡಿಸಲಾರವು ॥೨೦॥

ಈ ಪೂರ್ವೋಕ್ತವಾದ ಜ್ಞಾನಭೂಮಿಕಾಸಪ್ತಕವಾದರೋ, ಪ್ರಾಜ್ಞರಿಗೆ ಮಾತ್ರವೇ ಗೋಚರವಾದುದು. ಪಶುಪಾಷಾಣಾದಿಗಳಿಗೂ, ಮನುಷ್ಯರಲ್ಲಿಯೂ ಮ್ಲೇಚ್ಛಾದಿಗಳಂತೆ ದುರಾಚಾರಪರರಿಗೂ, ಸುತರಾಂ ಗೋಚರವಾಗತಕ್ಕುದಲ್ಲವೆಂದು ತಿಳಿಯಬೇಕು ॥೨೧॥

ಆದರೆ, ಪಶುಜನ್ಮದಲ್ಲಿಯೂ ಮ್ಲೇಚ್ಛಜನ್ಮದಲ್ಲಿಯೂ ಯಾರು ಜ್ಞಾನದಶೆಯನ್ನು ಹೊಂದಿರುವರೋ, ಅವರು ಜೀವನ್ಮುಕ್ತಿಯನ್ನೂ ವಿದೇಹಮುಕ್ತಿಯನ್ನೂ ಪಡೆಯುವುದರಲ್ಲಿ ಸಂಶಯವಿಲ್ಲ ॥೨೨॥

ಮುಕ್ತಿಯೆಂಬುದು ಅಷ್ಟೇನೂ ದುರ್ಲಭವಲ್ಲ ಅಜ್ಞಾನಗ್ರಂಥಿಯು ಬಿಚ್ಚಿಹೋಗುವುದೇ ಜ್ಞಾನವೆನ್ನಿಸುವುದು. ಈ ಗ್ರಂಥಿವಿಚ್ಛೇದವಾಗಿಬಿಟ್ಟರೆ ಮುಕ್ತಿಯಾದಂತೆಯೇ ಆಯ್ತು. ಈ ಗ್ರಂಥಿವಿಚ್ಛೇದವೆಂಬುದೂ ದುಷ್ಕರವಲ್ಲ. ಮೃಗತೃಷ್ಣಿಕೆಯಲ್ಲಿ ಉಂಟಾಗುವ ಜಲಬುದ್ಧಿ ಶಾಂತವಾಗುವಂತೆ ಭ್ರಮಜ್ಞಾನ ಶಾಂತವಾಗುವುದೇ ಗ್ರಂಥಿವಿಚ್ಛೇದವೆನ್ನಿಸುವುದು ॥೨೩॥

ಯೇ ತು ಮೋಹಾತ್ ಸಮುತ್ತೀರ್ಣಾಃ ನ ಪ್ರಾಪ್ತಾಃ ಪಾವನಂ ಪದಮ್ |
ಅಸ್ಥಿತಾಭೂಮಿಕಾಸ್ವಾಸು ಸ್ವಾತ್ಮಲಾಭಪರಾಯಣಾಃ ||೨೪||
ಸರ್ವಭೂಮಿಗತಾಃ ಕೇಚಿತ್ ಕೇಚಿದ್ದ್ವಿತ್ರ್ಯೇಕಭೂಮಿಕಾಃ |
ಭೂಮಿಷಟ್ಕಗತಾಃ ಕೇಚಿತ್ ಕೇಚಿತ್ ಸಪ್ತೈಕಭೂಮಿಕಾಃ ||೨೫||
ಭೂಮಿತ್ರಯಗತಾಃ ಕೇಚಿತ್ ಕೇಚಿದನ್ತ್ಯಾಂ ಭುವಂ ಗತಾಃ |
ಭೂಚತುಷ್ಟಯಗಾಃ ಕೇಚಿತ್ ಕೇಚಿದ್ಭೂಮಿದ್ವಯೇ ಸ್ಥಿತಾಃ ||೨೬||
ಭೂಮ್ಯಂಶಭಾಜನಾಃ ಕೇಚಿತ್ ಕೇಚಿತ್ ಸಾರ್ಧತ್ರಿಭೂಮಿಕಾಃ |
ಕೇಚಿತ್ ಸಾರ್ಧಚತುರ್ಭಾಗಾಃ ಸಾರ್ಧಷಡ್ಭೂಮಿಕಾಃ ಪರೇ ||೨೭||
ವಿವೇಕಿನೋ ನರಾಲೋಕೇ ಚರನ್ತ ಇತಿ ಭೂಮಿಷು |
ಗೃಹಾಯತನತಾಪಸ್ಯ ಭೃಶಾವೇಶೇಷು ಸಂಸ್ಥಿತಾಃ ||೨೮||
ತೇ ಹಿ ಧೀರಾಃ ಸುರಾಜಾನೋ ದಶಾಸ್ವಾಸು ಜಯನ್ತಿ ಯೇ |
ತೃಣಾಯುತೇತ್ರ ದಿಗ್ದನ್ತಿಘಟಾಭಟಪರಾಜಯಃ ||೨೯||

ಹೀಗೆ ಜ್ಞಾನಭೂಮಿಕೆಯನ್ನು ಅಭ್ಯಸಿಸುತಹೋದವರು ಸರ್ವರೂ ಮುಕ್ತರಾಗುವುದರಲ್ಲಿ ಸಂಶಯವಿಲ್ಲ. ಕದಾಚಿತ್ ಯಾರಾದರೂ ಅಜ್ಞಾನದಿಂದ ದಾಟಿಹೋಗಿ ಪ್ರಾರಬ್ಧಶೇಷದಿಂದ ಇನ್ನೂ ಪರಮಪದವನ್ನು ಹೊಂದದಿರುತ್ತಾರೆಯೋ, ಅಂಥವರು ಈ ಭೂಮಿಕೆಗಳಲ್ಲಿ ಆತ್ಮಜ್ಞಾನ ಪರಾಯಣರಾಗಿ ನೆಲೆಸಿರುವರು; ಪ್ರಾರಬ್ಧಕ್ಷಯಾನಂತರ ಮುಕ್ತರಾಗುವರು ||೨೪||

ಅವರಲ್ಲಿ ಕೆಲವರು ಒಂದೇ ಜನ್ಮದಲ್ಲಿ ಸಮಸ್ತ ಭೂಮಿಕೆಯನ್ನೂ ಹೊಂದುತಿರುವರು; ಕೆಲವರು ಮೂರು ನಾಲ್ಕು ಭೂಮಿಕೆಗಳಲ್ಲಿ ಮಾತ್ರವೇ ಇರುವರು; ಕೆಲವರು ಮೊದಲಿಂದ ಆರು ಭೂಮಿಕೆಗಳನ್ನು ಹೊಂದುವರು; ಕೆಲವರು ಸಪ್ತಮಭೂಮಿಕೆಯಲ್ಲಿ ಮಾತ್ರವೇ ಇರುವರು ||

ಕೆಲವರು ಭೂಮಿಕಾತ್ರಯವನ್ನು ಹೊಂದುವರು; ಕೆಲವರು ಕೊನೆಯ ಭೂಮಿಕೆಯನ್ನು ಹೊಂದುವರು; ಕೆಲವರು ನಾಲ್ಕು ಭೂಮಿಕೆಗಳನ್ನು ಹೊಂದುವರು; ಕೆಲವರು ಭೂಮಿಕಾದ್ವಯದಲ್ಲಿ ಮಾತ್ರವೇ ಇರುವರು. (ಮೇಲಿನ ಶ್ಲೋಕದ ಅರ್ಥವನ್ನೇ ಈ ಶ್ಲೋಕವೂ ವಿವರಿಸುವುದು) ||೨೬||

ಹೀಗೆಯೇ ಕೆಲವರು ಒಂದು ಭೂಮಿಕೆಯಲ್ಲಿ ಅರ್ಧಭಾಗವನ್ನು ಮಾತ್ರ ಹೊಂದುವರು. ಕೆಲವರು ಮೂರೂವರೆ ಭೂಮಿಕೆಯಲ್ಲಿರುವರು; ಕೆಲವರು ನಾಲ್ಕೂವರೆ ಭೂಮಿಕೆಯಲ್ಲಿರುವರು; ಕೆಲವರು ಆರೂವರೆ ಭೂಮಿಕೆಯಲ್ಲಿರುವರು ||೨೭||

ಪ್ರಪಂಚದಲ್ಲಿ, ವಿವೇಕಿಗಳಾದ ಮನುಷ್ಯರು, ಈ ಭೂಮಿಕೆಗಳಲ್ಲಿ ಸಂಚಾರಮಾಡುತ ಇಂದ್ರಿಯಗಳಿಂದಲೂ ಶರೀರದಿಂದಲೂ ಉಂಟಾಗುವ ಆಧ್ಯಾತ್ಮಿಕಾದಿ ತಾಪಗಳನ್ನು ಬಾಧೆಪಡಿಸುವುದರಲ್ಲಿ ಸುಸ್ಥಿರರಾಗಿರುವರು ||೨೮||

ಪ್ರಪಂಚದಲ್ಲಿ, ಇಂದ್ರಿಯಗಳನ್ನೂ ಮನಸ್ಸನ್ನೂ ಜಯಿಸುವುದೇ ಅತಿ ದುಷ್ಕರವಾದ ಕೆಲಸವು. ಈ ಭೂಮಿಕೆಗಳಲ್ಲಿದ್ದುಗೊಂಡು ಇಂತಹ ದುಷ್ಕರಕಾರ್ಯವನ್ನು ಯಾರು ಮಾಡಿರುವರೋ, ಅವರೇ ದೊಡ್ಡ ದೊರೆಗಳೆನ್ನಿಸಿಕೊಳ್ಳುವರು. ದಿಗ್ಗಜಸಮೂಹವನ್ನೂ ಅನೇಕ ಯೋಧರನ್ನೂ ಗೆಲ್ಲುವುದು, ಈ ಇಂದ್ರಿಯಜಯದ ಮುಂದೆ ಒಂದು ತೃಣಸಮಾನವಾಗಿ ಕಾಣುವುದು ||

ಏತಾಸು ಭೂಮಿಷು ಜಯನ್ತಿ ಹಿ ಯೇ ಮಹಾನ್ತೋ
ವನ್ದ್ಯಾಸ್ತ ಏವ ಹಿ ಜಿತೇನ್ದ್ರಿಯಶತ್ರವಸ್ತೇ ।
ಸಮ್ರಾಡ್ವಿರಾಡಪಿ ಚ ಯತ್ರ ತೃಣಾಯತೇ ವೈ
ತಸ್ಮಾತ್ ಪರಂ ಜಗತಿ ತೇ ಸಮವಾಪ್ನುವನ್ತಿ ॥೩೦॥

ಇತಿ ಉತ್ಪತ್ತಿಪ್ರಕರಣೇ ಜ್ಞಾನಭೂಮಿಕೋಪದೇಶೋ ನಾಮ
ಅಷ್ಟಾದಶೋತ್ತರ ಶತತಮಃ ಸರ್ಗಃ.

ಈ ಭೂಮಿಕೆಗಳಲ್ಲಿ ಯಾರು ಜಯಶೀಲರಾಗಿರುವರೋ, ಇಂದ್ರಿಯಗಳೆಂಬ ಶತ್ರುಗಳನ್ನು ಗೆದ್ದಿರುವ ಅಂತಹ ಮಹಾತ್ಮರು ಸಮಸ್ತರಿಗೂ ನಮಸ್ಕಾರಪಾತ್ರರಾದವರು. ಅಖಂಡಸಾಮ್ರಾಜ್ಯವೂ ಚತುರ್ಮುಖಬ್ರಹ್ಮಪದವಿಯೂ ಕೂಡ ಯಾವ ಸ್ಥಿತಿಯಲ್ಲಿ ತೃಣವಾಗಿ ಕಾಣುವುದೋ, ಅಂತಹ ವಿದೇಹಕೈವಲ್ಯವನ್ನು ಅವರು ಹೊಂದುವರು ॥೩೦॥

ಇದು ಉತ್ಪತ್ತಿಪ್ರಕರಣದಲ್ಲಿ ಜ್ಞಾನಭೂಮಿಕೋಪದೇಶವೆಂಬ
ನೂರಹದಿನೆಂಟನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕೋನವಿಂಶತ್ಯುತ್ತರಶತತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಊರ್ಮಿಕಾಸಂವಿದಾ ಹೇಮ ಯಥಾ ವಿಸ್ಮೃತ್ಯ ಹೇಮತಾಮ್ ।
ವಿರೌತಿ ನಾಹಂ ಹೇಮೇತಿ ತಥಾತ್ಮಾಹನ್ತಯಾನಯಾ ॥೧॥

ಶ್ರೀರಾಮಉವಾಚ.

ಊರ್ಮಿಕಾಸಂವಿದುದಯಃ ಕಥಂ ಹೇಮ್ನೋ ಯಥಾ ಮುನೇ ।
ಅಹನ್ತಾ ಚಾತ್ಮನಇತಿ ಯಥಾವದ್ಬ್ರೂಹಿ ಮೇ ಪ್ರಭೋ ॥೨॥

ಶ್ರೀವಸಿಷ್ಠ ಉವಾಚ.

ಸತಏವಾಗಮಾಪಾಯೌ ಪ್ರಷ್ಟವ್ಯೌ ನಾಸತಃ ಸತಾ ।
ಅಹಂತ್ವಮೂರ್ಮಿಕಾತ್ವಂ ಚ ಸತೀ ತು ನ ಕದಾಚನ ॥೩॥

ಉತ್ಪತ್ತಿಪ್ರಕರಣದಲ್ಲಿ ನೂರಹತ್ತೊಂಬತ್ತನೆಯ ಸರ್ಗವು.

ನಿರಸ್ಯ ಮಾಯಿಕಂ ರೂಪಂ ಸನ್ಮಾತ್ರೈಕತ್ವದರ್ಶನಮ್ ।
ಭೂಮಿಕಾಸು ಸ್ಥಿರೀಕರ್ತುಂ ಯುಕ್ತಿರತ್ರ ಪ್ರಪಞ್ಚ್ಯತೇ ॥

ಮಾಯಾಜನ್ಯವಾದ ರೂಪವನ್ನು ಪರಿಹರಿಸಿ ಜ್ಞಾನಭೂಮಿಕೆಗಳಲ್ಲಿ ಕೇವಲ ಸನ್ಮಾತ್ರ ಸ್ಫುರಣೆಯನ್ನು ದೃಢಪಡಿಸುವುದಕ್ಕೆ ಯುಕ್ತಿಯು ಈ ಸರ್ಗದಲ್ಲಿ ವಿಸ್ತರಿಸಲ್ಪಡುವುದು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳುವರು :—

ಅಯ್ಯಾ! ರಾಮ! ಸುವರ್ಣವು ತನ್ನಲ್ಲಿರುವ ಸುವರ್ಣತ್ವವನ್ನು ಮರೆತುಬಿಟ್ಟು ಅಂಗುಳೀಯಕ ಬುದ್ಧಿಯಿಂದ 'ನಾನು ಸುವರ್ಣವಲ್ಲ'ವೆಂದು ಅಳುವುದು ಹೇಗೋ, ಹಾಗೆ ಈ ಆತ್ಮನು ಅಹಂಕಾರಬುದ್ಧಿಯಿಂದ 'ನಾನು ಆತ್ಮನಲ್ಲ'ವೆಂದು ಅಳುವನು ॥೧॥

ಶ್ರೀರಾಮನು ಪ್ರಶ್ನೆಮಾಡುವನು :—

ಎಲೈ ಮಹರ್ಷಿವರ್ಯರೆ! ಸುವರ್ಣಕ್ಕೆ ಅಂಗುಳೀಯಕಬುದ್ಧಿಯುದಯಿಸುವುದು ಹೇಗೆ? ಮತ್ತು, ಆತ್ಮನಿಗೆ ಅಹಂಕಾರಬುದ್ಧಿಯುದಯಿಸುವುದೂ ಹೇಗೆ? ಇದನ್ನು ಯಥಾವತ್ತಾಗಿ ಅಪ್ಪಣೆಕೊಡಿಸಬೇಕು ॥೨॥

ವಸಿಷ್ಠರು ಉತ್ತರ ಹೇಳುವರು :—

ವತ್ಸ! ರಾಮ! ಪ್ರಪಂಚದಲ್ಲಿ, ಸ್ವತಃ ಸತ್ತಾದ ಪದಾರ್ಥವು, ಸತ್ತಾದ ಪದಾರ್ಥದ ಉತ್ಪತ್ತಿನಾಶಗಳನ್ನು ನೋಡಬಲ್ಲುದಲ್ಲದೆ, ಅಸತ್ತಾದುದರ ಉತ್ಪತ್ತಿಲಯಗಳನ್ನು ನೋಡುವುದಸಾಧ್ಯವಷ್ಟೆ! ಆದುದರಿಂದಲೇ, ಅಸತ್ಪದಾರ್ಥದ ಉತ್ಪತ್ತಿಲಯಗಳನ್ನು ಕುರಿತು ಪ್ರಶ್ನೆಮಾಡುವುದಕ್ಕೂ ಅವಕಾಶವೇ ಅನುಪಪನ್ನವಷ್ಟೆ! ಅಹಂಭಾವವೂ, ಊರ್ಮಿಕಾತ್ವವೂ, ಎಂದಿಗೂ

ಹೇಮ ಹೇಮ್ನ್ಯೂರ್ಮಿಕಾಂ ಚ ತ್ವಂ ಗೃಹಾಣೇತ್ಯುದಿತೋ ಯದಿ ।
ಯದ್ದಿಯತೇ ಸೋರ್ಮಿಕೇಣ ತತ್ ತದಸ್ತಿ ನ ಸಂಶಯಃ ॥೪॥

ಶ್ರೀರಾಮಉವಾಚ.

ಏವಂ ಚೇತ್ ತತ್ ಪ್ರಭೋ ಕಿಂ ಸ್ಯಾತ್ ಊರ್ಮಿಕಾತ್ವಂ ತು ಕೀದೃಶಮ್।
ಅನಯೈವಾರ್ಥಸಿದ್ಧ್ಯಾ ಜ್ಞಾಸ್ಯಾಮಿ ಬ್ರಹ್ಮಣೋ ವಪುಃ ॥೫॥

ಶ್ರೀವಸಿಷ್ಠಉವಾಚ.

ರೂಪಂ ರಾಘವ ನೀರೂಪಂ ಅಸತಶ್ಚೇನ್ನಿರೂಪ್ಯತೇ ।
ತದ್ವಂಧ್ಯಾತನಯಾಕಾರಗುಣಾಂಸ್ತ್ವಂ ಸಮುದಾಹರ ॥೬॥
ಊರ್ಮಿಕಾತ್ವಂ ಮುಧಾಭ್ರಾನ್ತಿಃ ಮಾಯೈಷಾಽಸತ್ಸ್ವರೂಪಿಣೀ ।
ರೂಪಂ ತದೇತದೇವಾಸ್ಯಾಃ ಪ್ರೇಕ್ಷಿತಾ ಯನ್ನ ದೃಶ್ಯತೇ ॥೭॥
ಮೃಗತೃಷ್ಣಾಮ್ಬುಸಿ ದ್ವೀನ್ದೌ ಅಹನ್ತಾರೂಪಕಾದಿಷು ।
ಏತಾವದೇವ ರೂಪಂ ಯತ್ ಪ್ರೇಕ್ಷ್ಯಮಾಣಂ ನ ಲಭ್ಯತೇ ॥೮॥
ಯಃ ಶುಕ್ತೌ ರಜತಾಕಾರಂ ಪ್ರೇಕ್ಷತೇ ರಜತಸ್ಯ ಸಃ ।
ನ ಸಮಾಪ್ನೋತ್ಯಣುಮಪಿ ಕಣಂ ಕ್ಷಣಮಪಿ ಕ್ವಚಿತ್ ॥೯॥

ಸತ್ಪದಾರ್ಥಗಳಲ್ಲವೇ ಅಲ್ಲ. ಹೀಗಿರುವಾಗ, ಇವುಗಳ ಉತ್ಪತ್ತಿ ಲಯಗಳನ್ನು ಕುರಿತು ಪ್ರಶ್ನೆಯೇತಕ್ಕೆ? ಪ್ರಪಂಚದಲ್ಲಿ, ಒಬ್ಬನು ಮತ್ತೊಬ್ಬನಿಗೆ ಕ್ರಯವಿಕ್ರಯಾದಿಗಳನ್ನು ಮಾಡುವಾಗಲೂ ಸುವರ್ಣವೇ ಇರುವುದಲ್ಲದೆ, ಅಂಗುಳೀಯಕವಿರುವುದೆಂದು ತಿಳಿಯಲಾಗದು ॥೩—೪॥

ಮತ್ತೆ ಶ್ರೀರಾಮನು ಪ್ರಶ್ನೆಮಾಡುವನು:—

ಸ್ವಾಮಿ! ತಾವು ಹೇಳಿದಂತೆಯಾದರೆ, ಪ್ರಪಂಚದಲ್ಲಿ ಊರ್ಮಿಕೆ (ಅಂಗುಳೀಯಕ) ಎಂಬುದಾಗಿ ಇರುವ ವ್ಯವಹಾರ ಹೇಗೆ ಉಂಟಾಯಿತು? ಅವೂರ್ಮಿಕಾತ್ವವೆಂತಹುದು? ಇದನ್ನು ತಾವು ವಿವರಿಸಿ ಹೇಳಿದರೆ, ಈ ವಿಷಯವಿವರಣೆಯಿಂದಲೇ ನಾನು ಬ್ರಹ್ಮನ ರೂಪವನ್ನೂ ತಿಳಿದುಕೊಳ್ಳುವೆನು ॥೫॥

ವಸಿಷ್ಠರು ಉತ್ತರಹೇಳುವರು:—

ಅಯ್ಯಾ ರಾಘವ! ನೀನು ಹೇಳುವ ಅಂಗುಳೀಯಕರೂಪವು, ಅವಿಚಾರದಿಂದ ತೋರುವುದೇ ಹೊರತು ಸತ್ಯವಾದುದಲ್ಲ. ಅಸತ್ತಾದುದಕ್ಕೆ ರೂಪವೆಲ್ಲಿರುವುದು? ರೂಪವಿಲ್ಲದಿರುವಿಕೆಯೇ ಅದಕ್ಕೆ ರೂಪವು. ಅದಕ್ಕೊಂದು ರೂಪವುಂಟೆಂದು ಸಾಧಿಸುವಪಕ್ಷದಲ್ಲಿ, ವಂಧ್ಯಾಪುತ್ರನಿಗೆ ಎಂತಹ ರೂಪವಿರುವುದು? ಅವನ ಗುಣಗಳು ಯಾವುವು? ನೀನು ಹೇಳು ॥೬॥

ಊರ್ಮಿಕಾತ್ವವೆಂಬುದು ಕೇವಲ ಭ್ರಾಂತಿಯು. ಇದೇ ಅಸದ್ರೂಪವಾದ ಮಾಯೆಯು. ನೋಡಲು ಹೋದರೆ ಕಣ್ಣಿಗೆ ಕಾಣುವುದಿಲ್ಲವೆಂಬುದು ಯಾವುದುಂಟೋ, ಅದೇ ಇದರ ರೂಪವು॥

ಮೃಗತೃಷ್ಣಿಕಾಜಲದಲ್ಲಿಯೂ, ಚಂದ್ರದ್ವಯಭ್ರಾಂತಿಯಲ್ಲಿಯೂ, ಅಹಂಕಾರದಲ್ಲಿಯೂ, ಶುಕ್ತಿರಜತಜ್ಞಾನದಲ್ಲಿಯೂ, ಇನ್ನೂ ಇದೇರೀತಿಯಾದ ಅನೇಕ ಸ್ಥಳಗಳಲ್ಲಿಯೂ, ನೋಡುವುದಕ್ಕೆ ಹೋದರೆ ಸಿಕ್ಕದಿರುವಿಕೆಯೆಂಬುದೇ ಅವುಗಳ ರೂಪವೆಂದು ತಿಳಿಯಬೇಕು ॥೮॥

ಯಾವ ಪುರುಷನು, ಶುಕ್ತಿಯಲ್ಲಿ ರಜತದ ರೂಪವನ್ನು ನೋಡುವನೋ, ಅವನು ಎಂದಿಗೂ ಎಲ್ಲಿಯೂ ರಜತದ ಒಂದು ಕಣವನ್ನೂ ಅದರಲ್ಲಿ ಹೊಂದಲಾರನಲ್ಲವೆ! ॥೯॥

ಅಪರ್ಯಾಲೋಕನೇನೈವ ಸದಿವಾಸದ್ವಿರಾಜತೇ ।
ಯಥಾ ಶುಕ್ತೌ ರಜತತಾ ಜಲಂ ಮರುಮರೀಚಿಷು ॥೧೦॥
ಯನ್ನಾಸ್ತಿ ತಸ್ಯ ನಾಸ್ತಿತ್ವಂ ಪ್ರೇಕ್ಷ್ಯಮಾಣಂ ಪ್ರಕಾಶತೇ ।
ಅಪ್ರೇಕ್ಷ್ಯಮಾಣಂ ಸ್ಫುರತಿ ಮೃಗತೃಷ್ಣಾಸ್ವಿವಾಂಬುಧೀಃ ॥೧೧॥
ಅಸದೇವ ಚ ಸತ್ಕಾರ್ಯಕರಂ ಭವತಿ ಚ ಸ್ಥಿರಮ್ ।
ಬಾಲಾನಾಂ ಮರಣಾಯೈವ ವೇತಾಳಭ್ರಾಂತಿಸಂಭ್ರಮಃ ॥೧೨॥
ಹೇಮತಾಂ ವರ್ಜಯಿತ್ವೈಕಾಂ ವಿದ್ಯತೇ ಹೇಮ್ನಿ ನೇತರತ್ ।
ಊರ್ಮಿಕಾಕಟಕಾದಿತ್ವಂ ತೈಲಾದಿ ಸಿಕತಾಸ್ವಿವ ॥೧೩॥
ನೇಹಾಸ್ತಿ ಸತ್ಯಂ ನೋ ಮಿಥ್ಯಾ ಯದ್ಯಥಾ ಪ್ರತಿಭಾವ್ಯತೇ ।
ತತ್ ತಥಾರ್ಥಕ್ರಿಯಾಕಾರಿ ಬಾಲಯಕ್ಷವಿಕಾರವತ್ ॥೧೪॥
ಸದ್ವಾ ಭವತ್ವಸದ್ವಾಪಿ ಸುರೂಢಂ ಹೃದಯೇ ಹಿ ಯತ್ ।
ತತ್ ತದರ್ಥಕ್ರಿಯಾಕಾರಿ ವಿಷಸ್ಯೇವಾಮೃತಕ್ರಿಯಾ ॥೧೫॥

ಚೆನ್ನಾಗಿ ವಿಚಾರಮಾಡದಿರುವುದರಿಂದಲೇ, ಅಸತ್ತು ಸತ್ತಿನಂತೆ ಭಾಸಿಸುವುದು. ಶುಕ್ತಿಯಲ್ಲಿ ಉಂಟಾಗುವ ರಜತಭ್ರಾಂತಿಯೂ, ಮರುಮರೀಚಿಕೆಯಲ್ಲುಂಟಾಗುವ ಜಲಭ್ರಾಂತಿಯೂ, ಇದಕ್ಕೆ ದೃಷ್ಟಾಂತಗಳು ॥೧೦॥

ಯಾವ ವಸ್ತುವು ಸ್ವಭಾವತಃ ಇಲ್ಲವೋ, ಅದರ ನಾಸ್ತಿತ್ವ (ಅಭಾವ) ವು—ವಿವೇಕದಿಂದ ವಿಚಾರಮಾಡಿದಾಗ ಗೊತ್ತಾಗುವುದು. ಚೆನ್ನಾಗಿ ವಿಚಾರಮಾಡದಿರುವಾಗಲೋ, ಮೃಗತೃಷ್ಣಿಕೆಯಲ್ಲಿ ಜಲಬುದ್ಧಿ ಹುಟ್ಟುವಂತೆ, ಭ್ರಮೆಯೇ ಹುಟ್ಟುವುದು ॥೧೧॥

'ಹೀಗೆ ಪದಾರ್ಥಗಳು ಅಸತ್ಯವಾಗಿಬಿಟ್ಟದ್ದರೆ, ಅವುಗಳು ಸತ್ಯಪದಾರ್ಥದಂತೆ ಕಾರ್ಯವನ್ನುಂಟುಮಾಡುವ ಬಗೆ ಹೇಗೆ?' ಎಂದರೆ,—ಅಸತ್ತಾದ ಪದಾರ್ಥವೇ ಸತ್ಪದಾರ್ಥದಂತೆ ಕಾರ್ಯವನ್ನುಂಟುಮಾಡುವುದು. ಬೇತಾಳವೆಂಬುದು ಸ್ವಭಾವತಃ ಅಸತ್ಯವೇ ಆಗಿದ್ದರೂ, ಬಾಲಕರು ತಮ್ಮ ಮನೋಭ್ರಾಂತಿಯಿಂದ ಬೇತಾಳವನ್ನು ಕಂಡಂತೆ ತಿಳಿದುಕೊಂಡು ಕೊನೆಗೆ ಅದರಿಂದಲೇ ಮರಣವನ್ನು ಹೊಂದುವರಲ್ಲವೆ! ॥೧೨॥

ಮಳಲಲ್ಲಿ ಎಣ್ಣೆ ಮುಂತಾದುದೊಂದೂ ಹೇಗಿಲ್ಲವೋ, ಹಾಗೆ—ಸುವರ್ಣದಲ್ಲಿ ಸುವರ್ಣತ್ವವನ್ನು ಬಿಟ್ಟು ಇತರವಾದ ಊರ್ಮಿಕಾಕಟಕಾದಿತ್ವವೊಂದೂ ಇಲ್ಲವೇ ಇಲ್ಲ ॥೧೩॥

ಸತ್ಯವಾದುದೇ ಅರ್ಥಕ್ರಿಯಾಕಾರಿಯೆಂದಾಗಲಿ—ಅಥವಾ ಅಸತ್ಯವಾದುದೇ ಅರ್ಥಕ್ರಿಯಾಕಾರಿಯೆಂದಾಗಲಿ—ಇಲ್ಲಿ ನಿಯಮವಿಲ್ಲ. ಯಾವುದು ಯಾವರೀತಿಯಾಗಿ ಭಾವನೆಮಾಡಲ್ಪಡುತ್ತದೆಯೋ, ಅದು ಆರೀತಿಯಾಗಿ ಅರ್ಥಕ್ರಿಯಾಕಾರಿಯಾಗುವುದು. ಬಾಲಕರು ಕಾಣುವ ಬೇತಾಳಾದಿಗಳೇ ಈ ವಿಷಯದಲ್ಲಿ ದೃಷ್ಟಾಂತವು ॥೧೪॥

ಸತ್ಯವಾದರೂ ಆಗಲಿ; ಅಥವಾ ಅಸತ್ಯವಾದರೂ ಆಗಲಿ. ಯಾವುದು ಹೃದಯದಲ್ಲಿ ಚೆನ್ನಾಗಿ ನೆಲೆಸಿಬಿಡುವುದೋ, ಅದು ಆರೀತಿಯಾಗಿ ಅರ್ಥಕ್ರಿಯೆಯನ್ನು ಮಾಡಿಯೇ ಬಿಡುವುದು. ವಿಷವನ್ನು ಅಮೃತವೆಂಬ ಭಾವನೆಯಿಂದ ಸೇವಿಸಿದರೆ, ಅದು ಅಮೃತದ ಕೆಲಸವನ್ನೇ ಮಾಡುವುದಲ್ಲವೆ! ಇದೇ ಇಲ್ಲಿ ದೃಷ್ಟಾಂತವು ॥೧೫॥

ಪರಮೈಷೇವ ಸಾಽವಿದ್ಯಾ ಮಾಯೈಷಾ ಸಂಸೃತಿರ್ಹ್ಯಸೌ ।
ಅಸತೋ ನಿಷ್ಪ್ರತಿಷ್ಠಸ್ಯ ಯದಹನ್ತ್ವಸ್ಯ ಭಾವನಮ್ ॥೧೬॥
ಹೇಮ್ನ್ಯಸ್ತಿ ನೋರ್ಮಿಕಾದಿತ್ವಂ ಅಹನ್ತಾಹ್ಯಸ್ತಿ ನಾತ್ಮನಿ ।
ಅಹನ್ತಾಽಭಾವವಸ್ತ್ವೇವ ಸ್ವಚ್ಛೇ ಶಾನ್ತೇ ಸಿತೇ ಪರೇ ॥೧೭॥
ನ ಸನಾತನತಾ ಕಾಚಿತ್ ನ ಚ ಕಾಚಿದ್ವಿರಿಞ್ಚಿತಾ ।
ನ ಚ ಬ್ರಹ್ಮಾಣ್ಡತಾ ಕಾಚಿತ್ ನ ಚ ಕಾಚಿತ್ಸುತಾದಿತಾ ॥೧೮॥
ನ ಲೋಕಾನ್ತರತಾ ಕಾಚಿತ್ ನ ಚ ಸ್ವರ್ಗಾದಿತಾ ಕ್ವಚಿತ್ ।
ನ ಮೇರುತಾ ನಾಸುರತಾ ನ ಮನಸ್ತ್ವಂ ನ ದೇಹತಾ ॥೧೯॥
ನ ಮಹಾಭೂತತಾ ಕಾಚಿತ್ ನ ಚ ಕಾರಣತಾ ಕ್ವಚಿತ್ ।
ನ ಚ ತ್ರಿಕಾಲಕಲನಾ ನ ಭಾವಾಭಾವವಸ್ತುತಾ ॥೨೦॥
ತ್ವತ್ತಾಹನ್ತಾತ್ಮತಾ ತತ್ತಾ ಸತ್ತಾಸತ್ತಾ ನ ಕಾಚನ ।
ನ ಕ್ವಚಿದ್ಭೇದಕಲನಾ ನ ಭಾವೋ ನ ಚ ರಞ್ಜನಾ ॥೨೧॥
ಸರ್ವಂ ಶಾನ್ತಂ ನಿರಾಲಮ್ಬಂ ಜಗತ್ತ್ವಂ ಶಾಶ್ವತಂ ಶಿವಮ್ ।
ಅನಾಮಯಮನಾಭಾಸಂ ಅನಾಮಕಮಕಾರಣಮ್ ॥೨೨॥

ಸುತರಾಂ ಅಸತ್ಯವಾಗಿ ನಿರಾಧಾರವಾಗಿರುವ ಅಹಂಕಾರವನ್ನು ಭಾವನೆಮಾಡುವುದು ಯಾವುದುಂಟೋ, ಇದೇ ಮುಖ್ಯವಾದ ಅವಿದ್ಯೆಯು; ಇದೇ ಮಾಯೆಯು; ಇದೇ ಸಂಸಾರವು॥

ಸುವರ್ಣದಲ್ಲಿ ಊರ್ಮಿಕಾದಿಭಾವಗಳು ಹೇಗಿಲ್ಲವೋ, ಹಾಗೆ ಆತ್ಮನಲ್ಲಿ ಅಹಂಕಾರಾದಿಗಳು ಇರುವುದಿಲ್ಲ. ನಿರ್ಮಲನಾಗಿ ಶಾಂತನಾಗಿ ಶುದ್ಧಸತ್ವಮಯನಾಗಿರುವ ಆ ಪರಬ್ರಹ್ಮನಲ್ಲಿ ಅಹಂಕಾರವೆಂಬುದು ಅಭಾವಪದಾರ್ಥವೇಯೆ ॥೧೭॥

ಚೆನ್ನಾಗಿ ವಿಚಾರಮಾಡುತಹೋದರೆ, ಆ ಪರಬ್ರಹ್ಮನಲ್ಲಿ ಸನಾತನತ್ವವೂ ಇಲ್ಲವೆಂದು ಗೊತ್ತಾಗುವುದು. 'ಸನಾತನ' ಎಂದರೆ ಸರ್ವದಾ ಇರುವುದೆಂದರ್ಥವಲ್ಲವೆ! 'ಸರ್ವದಾ' ಎಂದರೆ, ಕಾಲವಶವಾದುದೆಂದು ಗೊತ್ತಾಗುವುದು. ಕಾಲಕ್ಕೆ ಸುತರಾಂ ವಶವಲ್ಲದಿರುವ ಈ ಬ್ರಹ್ಮಪದಾರ್ಥವು ಕಾಲವಶವಾಗುವುದು ಸುತರಾಂ ಅನುಪಪನ್ನವು. ಆದುದರಿಂದ, ಸನಾತನತ್ವವೆಂಬ ಗುಣವೂ ಆ ವಸ್ತುವಿನಲ್ಲಿ ಹೇಳತಕ್ಕುದಲ್ಲ. ಹೀಗೆಯೇ, ವಿರಿಂಚಿತ್ವವೂ ಆ ವಸ್ತುವಿನಲ್ಲಿಲ್ಲ; ಬ್ರಹ್ಮಾಂಡತ್ವವೂ ಇಲ್ಲ; ಬ್ರಹ್ಮಪುತ್ರತ್ವಾದಿಗಳೂ ಇಲ್ಲ. ಲೋಕಾಂತರತ್ವವೂ ಇಲ್ಲ; ಸ್ವರ್ಗಾದಿಲೋಕತ್ವವೂ ಇಲ್ಲ; ಮಹಾಮೇರುತ್ವವೂ ಇಲ್ಲ; ಅಸುರತ್ವವೂ ಇಲ್ಲ; ಮನಸ್ಸೂ ದೇಹವೂ ಇಲ್ಲ. ಮಹಾಭೂತವೂ ಇಲ್ಲ; ಕಾರಣವೂ ಇಲ್ಲ; ಕಾಲತ್ರಯ ಕಲ್ಪನೆಯೂ ಇಲ್ಲ; ಭಾವಾಭಾವ ಪದಾರ್ಥಗಳೂ ಇಲ್ಲ. ಮತ್ತು, ನೀನು ನಾನು ಅವನು ಇತ್ಯಾದಿ ರೂಪವೊಂದೂ ಇಲ್ಲ. ಎಲ್ಲಿಯೂ ಯಾವವಿಧವಾದ ಭೇದಕಲ್ಪನೆಯೂ ಇಲ್ಲ. ವಿಷಯಗಳಲ್ಲಿ ರಾಗವೂ ಇಲ್ಲ; ಅದು ಯಾವರೀತಿಯಾಗಿಯೂ ಕೆಲಸಮಾಡುವುದೂ ಇಲ್ಲ॥೧೮—೨೧॥

ಈ ಸಮಸ್ತವಾದ ಜಗತ್ತಿನ ಪರಮಾರ್ಥರೂಪವಾವುದೆಂದರೆ,-ಶಾಂತವಾಗಿಯೂ, ನಿರಾಲಂಬವಾಗಿಯೂ, ಶಾಶ್ವತವಾಗಿಯೂ, ಅನಾಮಯವಾಗಿಯೂ, ಆಭಾಸರಹಿತವಾಗಿಯೂ, ನಾಮಶೂನ್ಯವಾಗಿಯೂ, ಕಾರಣಶೂನ್ಯವಾಗಿಯೂ ಇರುವ ಬ್ರಹ್ಮವಸ್ತುವೇ, ಈ ಜಗತ್ತೆಂಬುದು ಪರಮಾರ್ಥವು ॥೨೨॥

ನ ಸನ್ನಾಸನ್ನ ಮಧ್ಯಾನ್ತಂ ನ ಸರ್ವಂ ಸರ್ವಮೇವ ಚ ।
ಮನೋವಚೋಭಿರಗ್ರಾಹ್ಯಂ ಶೂನ್ಯಾಚ್ಛೂನ್ಯಂ ಸುಖಾತ್ ಸುಖಮ್ ॥೨೩॥

ಶ್ರೀರಾಮಉವಾಚ.

ಅವಬುದ್ಧಂ ಸಮಂ ಬ್ರಹ್ಮ ಸರ್ವಮೇವ ಮಯಾಧುನಾ ।
ತಥಾಪಿ ಭೂಯಃ ಕಥಯ ಸರ್ಗಃ ಕಿಮಿವ ಲೋಕ್ಯತೇ ॥೨೪॥

ಶ್ರೀವಸಿಷ್ಠಉವಾಚ.

ಪರೇ ಶಾನ್ತೇ ಪರಂ ನಾಮ ಸ್ಥಿತಮಿತ್ಥಮಿದನ್ತಯಾ ।
ನೇಹ ಸರ್ಗೋ ನ ಸರ್ಗಾಖ್ಯಾ ಕಾಚಿದಸ್ತಿ ಕದಾಚನ ॥೨೫॥
ಮಹಾರ್ಣವಾಮ್ಬುನೀವಾಮ್ಬು ಸಂಸ್ಥಿತಾ ಪರಮೇಶ್ವರೇ ।
ಜಲಂ ದ್ರವತ್ವಾತ್ ಸ್ಪನ್ದೀವ ನಿಸ್ಪನ್ದಂ ಪರಮಂ ಪದಮ್ ॥೨೬॥
ಭಾಃ ಸ್ವಾತ್ಮನೀವ ಕಚತಿ ನ ಕಚತ್ಯೇವ ತತ್ ಪದಮ್ ।
ಭಾಸಾಂ ತತ್ತ್ವಂ ಹಿ ಕಚನಂ ಪದಂ ತ್ವಕಚನಂ ವಿದುಃ ॥೨೭॥

ಪರಮಾರ್ಥವಿಚಾರಮಾಡುವಾಗ, ಬ್ರಹ್ಮರೂಪವಾದ ಈ ಜಗತ್ತಿಗೆ ಉತ್ಪತ್ತಿಯೂ ಇಲ್ಲ; ಲಯವೂ ಇಲ್ಲ; ಮಧ್ಯವೂ ಇಲ್ಲ; ಕೊನೆಯೂ ಇಲ್ಲ. ಇದು ಯಾವುದೂ ಅಲ್ಲ; ಎಲ್ಲವೂ ಇದೇಯೆ. ಮನಸ್ಸಿಗೂ ವಾಕ್ಕಿಗೂ ಇದು ಗೋಚರವಾಗುವುದಿಲ್ಲ. ಇದು ಶೂನ್ಯದಲ್ಲೆಲ್ಲ ಶೂನ್ಯವಾಗಿಯೂ, ಸುಖದಲ್ಲೆಲ್ಲ ಸುಖವಾಗಿಯೂ ಇರುವುದು ॥೨೩॥

ಶ್ರೀರಾಮನು ಪ್ರಶ್ನೆಮಾಡುವನು :—

ಹೇ ಭಗವನ್! ಈ ಸಮಸ್ತವೂ ಸರ್ವಸಮವಾದ ಬ್ರಹ್ಮವೇ ಎಂದು ಈಗ ನನಗೆ ಜ್ಞಾನ ವುಂಟಾಗಿಬಿಟ್ಟಿತು ಆದರೂ, ಮತ್ತೆ ಈ ಪ್ರಪಂಚದೃಷ್ಟಿಯು ಏನಾದರೂ ಅಂಕುರಿಸುವುದೆ? ಇದನ್ನು ತಾವು ಅನುಗ್ರಹಿಸಿ ಅಪ್ಪಣೆಕೊಡಿಸಬೇಕು ॥೨೪॥

ಶ್ರೀ ವಸಿಷ್ಠರು ಉತ್ತರ ಹೇಳುವರು :—

ಆ ಪರತತ್ವವು ಪರಮಶಾಂತವಾದ ಸ್ವಸ್ವಭಾವಸ್ಥಿತಿಯಲ್ಲಿಯೇ ಇರುವುದಲ್ಲದೆ, ಆ ಸ್ಥಿತಿಯನ್ನು ಬಿಟ್ಟು ಕದಲುವುದಿಲ್ಲ. ಸಮುದ್ರದೊಳಗೆ ಜಲವು ಪೃಥಗ್ರೂಪವಾಗಿರುವುದಿಲ್ಲ; ಸಮುದ್ರರೂಪವಾಗಿಯಾದರೋ, ಇದ್ದೇ ಇರುವುದು. ಆದರೆ, ಜಲವು ದ್ರವಪದಾರ್ಥವಾಗಿರುವುದರಿಂದ ಚಲನೆಯುಳ್ಳದಾಗಿರುವುದು ; ಆ ಪರಮಪದವಾದರೋ, ಸರ್ವದಾ ನಿಶ್ಚಲವಾಗಿರುವುದು. ನೀನು ಈ ಉದಾಹರಣೆಯನ್ನು ಚೆನ್ನಾಗಿ ವಿಚಾರಮಾಡು. ಅಂತು, ಪ್ರಪಂಚವೆಂಬ ಶಬ್ದವೂ ಅರ್ಥವೂ ಬ್ರಹ್ಮನಲ್ಲಿ ಈ ಪ್ರಪಂಚರೂಪದಿಂದ ಇರುವುದಿಲ್ಲ. ಆ ಬ್ರಹ್ಮರೂಪವಾಗಿಯಾದರೋ, ಇದ್ದೇ ಇರುವುವು. ಹೀಗಿರುವುದರಿಂದ, ನಿನಗೆ ಪ್ರಬೋಧಾನಂತರದಲ್ಲಿ ಮತ್ತೆ ಸಂಸಾರಬಂಧ ವುಂಟಾದೀತೆಂಬ ಭ್ರಾಂತಿ ಯುಕ್ತವಲ್ಲ ॥೨೫—೨೬॥

ಮತ್ತು, ಆ ಪರಮಪದವು ಸೂರ್ಯಾದಿತೇಜಸ್ಸಿನಂತಿರುವುದೆಂದು ಹಿಂದೆ ಹೇಳಲ್ಪಟ್ಟಿರುವು ದಷ್ಟೆ! ಅದರಲ್ಲಿಯೂ ಸ್ವಲ್ಪ ವಿಶೇಷವಿರುವುದು. ಸೂರ್ಯಾದಿ ತೇಜಸ್ಸು, ತನ್ನೊಳಗೆತಾನೇ ಉದ್ದೀಪಿತವಾಗುತಿರುವುದು; ಆ ಪರಮಪದವಾದರೋ,—ನಿರ್ಗುಣವಾಗಿರುವುದರಿಂದ—ಯಾವ ವಿಧವಾದ ಉದ್ದೀಪನವೂ ಇಲ್ಲದಿರುವುದು. ಸೂರ್ಯಾದಿ ತೇಜಸ್ಸುಗಳಿಗೆ ಹೀಗೆ ಪ್ರಕಾಶರೂಪ ವಾದ ಕ್ರಿಯೆಯೇ ಸ್ವಭಾವವು. ಆ ಪರಮಪದವಾದರೋ,—ಕೇವಲ ನಿಷ್ಕ್ರಿಯವಾದುದೆಂದು ಪ್ರಾಜ್ಞರಿಂದ ಹೇಳಲ್ಪಡುವುದು ॥೨೭॥

ಅಥ ಊರ್ಧ್ವಂ ವರ್ಜಯಿತ್ವಾ ಯಥಾಬ್ಧೇರುದರೇ ಪಯಃ ।
ಸ್ಫುರತ್ಯೇವಂ ಪರೇ ಚಿತ್ತ್ವಾತ್ ಇದಂ ನಾನೇವ ತತ್ಪರಮ್ ॥೨೮॥
ಈಷದ್ವಿದಃ ಸ್ವಯಂ ಚಿತ್ತ್ವಾತ್ ಚೇತ್ಯತಾಮಿವ ಗಚ್ಛತಿ ।
ಬುಧ್ಯತೇ ಸರ್ವ ಇತ್ಯೇವ ಸಮಾಸ್ಥಾಸ್ಯತಿ ಶಾಶ್ವತಮ್ ॥೨೯॥
ಸರ್ಗಸ್ತು ಪರಮಾರ್ಥಸ್ಯ ಸಂಜ್ಞೇತ್ಯೇವಂ ವಿನಿಶ್ಚಯಃ ।
ನಾನಾಸ್ತಿ ನಾಯಮತ್ಯನ್ತಂ ಅಮ್ಬರಸ್ಯ ಯಥಾಮ್ಬರಮ್ ॥೩೦॥
ಚಿತ್ತಾತ್ ಸರ್ಗಸಮಾಪತ್ತಿಃ ಅಚಿತ್ತಾತ್ ಸರ್ಗಸಙ್ಕ್ಷಯಃ ।
ಪರೇ ಪರಮಸಂಶಾನ್ತೇ ಹೇಮ್ನೀವ ಕಟಕಭ್ರಮಃ ॥೩೧॥
ಸನ್ನೇವ ಸರ್ಗೋಽಸತ್ಯತ್ವಂ ಏತಿ ಚಿತ್ತಶಮೋದಯೇ ।
ಅಸತ್ ಸತ್ತಾಮವಾಪ್ನೋತಿ ಸ್ವತಃ ಸಂವೇದನೋದಯೇ ॥೩೨॥
ಸಂವೇದನಮಹನ್ತಾವತ್ ಸರ್ಗಸಮ್ಭ್ರಮಸಮ್ಭ್ರಮಃ ।
ಅಸಂವೇದನಮಾಶಾನ್ತಂ ಪರಂ ವಿದ್ಧಿ ನ ತಜ್ಜಡಮ್ ॥೩೩॥

ಸಮುದ್ರದಲ್ಲಿ ಅಧೋಭಾಗ ಊರ್ಧ್ವಭಾಗಗಳೆಂಬ ವಿಚಾರವೇ ಇಲ್ಲದೆ ನೀರು ಹೇಗೆ ತುಂಬಿರುವುದೋ, ಹೀಗೆ ಆ ಪರಮಾತ್ಮನಲ್ಲಿ ಈ ಜಗತ್ತು ನಾನಾವಿಧವಾಗಿ ತೋರುತಿರುವುದು ॥೨೮॥

ನೀನು ಇನ್ನೂ ಚೆನ್ನಾಗಿ ಬುದ್ಧಿಪರಿಪಾಕವಿಲ್ಲದವನಾಗಿರುವಕಾರಣ, ಈ ಜಗತ್ತು ನಿನಗೆ ಚೇತನೀಯವಾಗಿರುವಂತೆ ತೋರುವುದು ; ಇದನ್ನೇ ನೀನು ಸೃಷ್ಟಿಯೆಂದು ತಿಳಿದುಕೊಂಡಿರುವೆ. ನಿನಗೆ ಜ್ಞಾನಪರಿಪಕ್ವವಾದ ಬಳಿಕ, ಇದು ಕೇವಲ ಶಾಶ್ವತಬ್ರಹ್ಮರೂಪವಾಗಿಯೇ ಕಾಣುವುದು ॥೨೯॥

ಈ ಸರ್ಗವೆಂಬುದು ಪರಮಾರ್ಥಕ್ಕೇ ಸಂಜ್ಞೆಯೆಂಬುದೇ ನಿಶ್ಚಿತವಾದುದು. ಆಕಾಶವನ್ನು ನೋಡಿ, ಇದಕ್ಕೆ ಮತ್ತೊಂದು ಆಕಾಶವಿರಬೇಕೆಂದು ಹೇಳಬಹುದೆ? ಹೀಗೆ ಹೇಳುತ ಬಂದರೆ, ಆಮೇಲೆ ಅದಕ್ಕೆ ಮತ್ತೊಂದಾಕಾಶವೂ, ಅಲ್ಲಿಂದ ಮುಂದಕ್ಕೆ ಮತ್ತೊಂದಾಕಾಶವೂ ಇರಬೇಕೆಂದು ಹೇಳಬೇಕಾಗುವುದು. ಹೀಗೆಯೇ ಹೋಗುತಬಂದರೆ, ಕೊನೆಗೆ ಅನವಸ್ಥಾಪ್ರಸಂಗವಾಗುವುದಲ್ಲವೆ! ಇದರಂತೆಯೇ, ಪರಮಾರ್ಥಕ್ಕೆ ಮತ್ತೊಂದು ಪರಮಾರ್ಥವಿರಬೇಕೆಂದು ತರ್ಕಿಸಲಾಗಲಾರದಾದಕಾರಣ, ಅಜ್ಞಾನದಶೆಯಲ್ಲಿ ಕಂಡುಬಂದ ಭೇದವು ಸುತರಾಂ ಇಲ್ಲವೆಂದು ತಿಳಿಯಬೇಕು ॥೩೦॥

ಅಂತು, ಸುವರ್ಣದಲ್ಲಿ ಕಟಕಭ್ರಮೆ ಹುಟ್ಟುವಂತೆ, ಪರಮಶಾಂತರೂಪವಾಗಿರುವ ಆ ಪರಬ್ರಹ್ಮಪದಾರ್ಥದಲ್ಲಿ, ಚಿತ್ತದಿಂದಲೇ ಸೃಷ್ಟಿಭ್ರಮೆಯುದಯಿಸುವುದು ; ಚಿತ್ತನಾಶವಾದರೆ, ಸೃಷ್ಟಿಗೂ ನಾಶವಾಗುವುದು ॥೩೧॥

ಚಿತ್ತಕ್ಕೆ ಶಾಂತಿಯುಂಟಾಗಿಬಿಟ್ಟರೆ, ಮೊದಲು ಸತ್ಯವಾಗಿಯೇ ಇದ್ದ ಸೃಷ್ಟಿಯು ಅಸತ್ಯವಾಗುವುದು ; ಚಿತ್ತವು ಉದಯಿಸಿಬಿಟ್ಟರೆ, ಅಸತ್ಯವಾಗಿರುವುದೇ ಸತ್ಯವಾಗುವುದು ॥೩೨॥

ಅಹಂಕಾರಯುಕ್ತವಾದ ಚಿತ್ತವೇ, ಸೃಷ್ಟಿಸಂಭ್ರಮರೂಪವಾದ ಭ್ರಾಂತಿಯು. ಆ ಪರಮವಸ್ತುವಾದರೋ, ಅಹಂಕಾರಶೂನ್ಯವಾಗಿ ಶಾಂತವಾಗಿ ಅಜಡವಾಗಿರುವುದೆಂದು ತಿಳಿ ॥೩೩॥

ನಾನೇವ ಸರ್ಗೋಽನಾನಾಯಂ ಜ್ಞಸ್ಯೈಕಾತ್ಮಶಿವಾತ್ಮಕಃ |
ಪುಂಸ್ತ್ವಕರ್ಮಕ್ರಿಯಾಸೇನಾ ಮೃಣ್ಮಯೀ ಶಿಲ್ಪಿನಾಂ ಯಥಾ ||೩೪||

ಇದಂ ಪೂರ್ಣಮನಾರಮ್ಭಂ ಅನನ್ತಮನಘೋದರಮ್ |
ಪೂರ್ಣಂ ಪೂರ್ಣಪರಾಪೂರ್ಯೈಃ ಪೂರ್ಣಮೇವಾವತಿಷ್ಠತೇ ||೩೫||

ಯದಯಂ ಲಕ್ಷ್ಯತೇ ಸರ್ಗಃ ತದ್ಬ್ರಹ್ಮ ಬ್ರಹ್ಮಣಿ ಸ್ಥಿತಮ್ |
ನಭೋ ನಭಸಿ ವಿಶ್ರಾನ್ತಂ ಶಾನ್ತಂ ಶಾನ್ತೇ ಶಿವೇ ಶಿವಮ್ ||೩೬||

ಮುಕುರಪ್ರತಿಬಿಮ್ಬಸ್ಥೇ ನಗರೇ ನವಯೋಜನೇ |
ಯಥಾ ದೂರಮದೂರಂ ಚ ತಥೇಶೇ ತದತತ್ಕ್ರಮಃ ||೩೭||

ಅಸದಭ್ಯುದಿತಂ ವಿಶ್ವಂ ಸದಪ್ಯಭ್ಯುದಿತಂ ಸದಾ |
ಪ್ರತಿಭಾಸಾತ್ ಸದಾಭಾಸಂ ಅವಸ್ತುತ್ವಾದಸನ್ಮಯಮ್ ||೩೮||

ಜ್ಞಾನಿಗಳಿಗೂ ಕೂಡ, ಬಹಿರ್ಮುಖಸ್ಥಿತಿಯುಂಟಾದಾಗ ಚಿತ್ತಾಭಾಸವುದಯಿಸಲಾಗಿ ಪ್ರಪಂಚಪ್ರತಿಭೆಯುಂಟಾಗುತಿರುವುದಲ್ಲವೆ! ಇದು ಹೇಗೆಂದರೆ,—ತತ್ವದೃಷ್ಟ್ಯಾ ಅವರಿಗೆ ಈ ನಾನಾ ಪ್ರತಿಭೆಯಿರುವುದೇ ಇಲ್ಲ. ಶಿಲ್ಪಿಯ ಚಾತುರ್ಯದಿಂದ, ಮಣ್ಣಿನಲ್ಲಿ ಮಾಡಿದ ಸೇನೆಯೂ ಕೂಡ ಯುದ್ಧಾದಿ ಪುರುಷಕಾರವನ್ನು ತೋರಿಸುತಿರುವಂತೆ ಹೇಗೆ ಕಾಣಿಸುವುದೋ, ಹಾಗೆ ಜ್ಞಾನಿಗಳಿಗೆ ಪ್ರಪಂಚವೂ ಕೇವಲ ಪ್ರಾತಿಭಾಸಿಕವಾಗಿ ಕಾಣಿಸುತ್ತಿರುವುದು ||೩೪||

ಪರಮಾರ್ಥದೃಷ್ಟಿಯಲ್ಲಾದರೋ, ಜ್ಞಾನಿಗಳಿಗೆ ಈ ಜಗತ್ತು ಪೂರ್ಣಬ್ರಹ್ಮರೂಪವಾಗಿಯೇ ತೋರುವುದು. ಹೇಗೆಂದರೆ,—ಕೇವಲ ಪೂರ್ಣರೂಪವಾದ ಈ ಜಗತ್ತು, ಆದಿಶೂನ್ಯವಾಗಿಯೂ ಅಂತಶೂನ್ಯವಾಗಿಯೂ ಮಧ್ಯಶೂನ್ಯವಾಗಿಯೂ ಇರುವುದು. ಏಕೆಂದರೆ,—ಪೂರ್ಣನಾಗಿರುವ ಪರಮಾತ್ಮನ ವ್ಯಾಪನೆಯಿಂದಲೇ ಪೂರ್ಣವಾಗಿರುವುದರಿಂದ, ಇದೂ ಸರ್ವದಾ ಪೂರ್ಣವಾಗಿಯೇ ಇರುವುದು. ('ಪೂರ್ಣಮದಃ ಪೂರ್ಣಮಿದಂ' ಇತ್ಯಾದಿ ಶ್ರುತಿಯು ಇದೇ ಅರ್ಥವನ್ನು ಹೇಳುವುದು) ||೩೫||

ಈರೀತಿಯಾಗಿ, ನಮಗೆ ಕಾಣುತಿರುವ ಈ ಸೃಷ್ಟಿಯಾವುದುಂಟೋ, ಅದು—ಶಾಂತವಾಗಿ ನಿರುಪದ್ರವವಾಗಿರುವ ಆಕಾಶದಲ್ಲಿ ಅಂತಹ ಆಕಾಶವೇ ಇರುವಂತೆ—ಬ್ರಹ್ಮನಲ್ಲಿಯೇ ಬ್ರಹ್ಮವಿರುವುದೆಂದು ತಿಳಿಯಬೇಕಲ್ಲದೆ, ಪದಾರ್ಥಾಂತರವೆಂದು ತಿಳಿಯಬಾರದು ||೩೬||

ಒಂದು ಕನ್ನಡಿಯೊಳಗೆ ಒಂಭತ್ತುಗಾವುದಗುದ್ದವಿರುವ ದೊಡ್ಡ ಪಟ್ಟಣವು ಪ್ರತಿಫಲಿಸಿದರೆ, ಅದರಲ್ಲಿ ದೂರಸಾಮೀಪ್ಯಗಳು ಹೇಗಿರುವುವೋ, ಹಾಗೆಯೇ ಈಶ್ವರನಲ್ಲಿಯೂ ದೂರಸಾಮೀಪ್ಯಕ್ರಮವಿರುವುದೆಂದು ತಿಳಿಯಬೇಕು ||೩೭||

ಅಂತು, ಈ ವಿಶ್ವವು, ಭೇದಪ್ರತಿಭಾಸವುಂಟಾದಾಗ ಸತ್ಯದಂತೆಯೂ—ಭೇದಜ್ಞಾನ ನಾಶವಾದಾಗ ಅಸತ್ತಾಗಿಯೂ ಕಾಣುವುದರಿಂದ, ತತ್ವದೃಷ್ಟ್ಯಾ ಸತ್ಪದಾರ್ಥವೇ ಹೀಗೆ ಉದಯಿಸಿರುವುದೆಂಬುದಾಗಿಯೂ, ತತ್ವದೃಷ್ಟಿಯಿಲ್ಲದಾಗ ಇದೇ ಬೇರೆಯಾದ ಅಸತ್ಪದಾರ್ಥವಾಗಿ ಕಾಣುವುದೆಂದೂ ತಿಳಿಯಬೇಕು ||೩೮||

ಆದರ್ಶನಗರಾಕಾರೇ ಮೃಗತೃಷ್ಣಾಮ್ಬುಭಾಸ್ವರೇ ।
ದ್ವಿಚನ್ದ್ರವಿಭ್ರಮಾಭಾಸೇ ಸರ್ಗೇಽಸ್ಮಿನ್ ಕೈವ ಸತ್ಯತಾ ॥೩೯॥
ಮಾಯಾಚೂರ್ಣಪರಿಕ್ಷೇಪಾತ್ ಯಥಾ ವ್ಯೋಮ್ನಿ ಪುರಭ್ರಮಃ ।
ತಥಾ ಸಂವಿದಿ ಸಂಸಾರಃ ಸಾರೋಽಸಾರಶ್ಚ ಭಾಸತೇ ॥೪೦॥

ಯಾವದ್ವಿಚಾರದಹನೇನ ಸಮೂಲದಾಹಂ
ದಗ್ಧಾ ನ ಜರ್ಜರಲತೇವ ಬಲಾದವಿದ್ಯಾ ।
ಶಾಖಾಪ್ರತಾನಗಹನಾನಿ ಬಹೂನಿ ತಾವತ್
ನಾನಾವಿಧಾನಿ ಸುಖದುಃಖವನಾನಿ ಸೂತೇ ॥೪೧॥

ಇತಿ ಉತ್ಪತ್ತಿಪ್ರಕರಣೇ ಹೇಮೋರ್ಮ್ಯುಪದೇಶೋ ನಾಮ ಏಕೋನ
ವಿಂಶತ್ಯುತ್ತರ ಶತತಮಃ ಸರ್ಗಃ.

ಹೀಗೆ, ಕನ್ನಡಿಯಲ್ಲಿ ಕಾಣುವ ಪಟ್ಟಣದಂತೆಯೂ, ಮೃಗತೃಷ್ಣಿಕೆಯಲ್ಲಿ ಕಾಣುವ ಜಲದಂತೆಯೂ, ಆಕಾಶದಲ್ಲಿ ಕಾಣುವ ಚಂದ್ರದ್ವಯ ಭ್ರಾಂತಿಯಂತೆಯೂ ಇರುವ ಈ ಸೃಷ್ಟಿಯಲ್ಲಿ, ಸತ್ಯತ್ವವೆಂಬುದಾವುದು? ॥೩೯॥

ಇಂದ್ರಜಾಲ ಮಾಡತಕ್ಕವನು ಅಭಿಮಂತ್ರಣೆಮಾಡಿದ ಒಂದುಬಗೆಯ ಔಷಧಚೂರ್ಣವನ್ನು ಅಂತರಿಕ್ಷದಲ್ಲಿ ಎರಚಿದರೆ, ನೋಡತಕ್ಕವರಿಗೆಲ್ಲ ಅಲ್ಲಿ ದೊಡ್ಡದೊಂದು ಪಟ್ಟಣವಿರುವಂತೆ ಭ್ರಮೆಯುಂಟಾಗುವುದು. ಆ ಭ್ರಮೆಯು, ಅಜ್ಞಾನದಶೆಯಲ್ಲಿ ಸತ್ಯವಾಗಿಯೂ ಜ್ಞಾನದಶೆಯಲ್ಲಿ ಅಸತ್ಯವಾಗಿಯೂ ಹೇಗೆ ಇರುವುದೋ, ಹಾಗೆ ಚಿತ್ತಿನಲ್ಲಿ ಸಂಸಾರವು ಸತ್ಯವಾಗಿಯೂ ಅಸತ್ಯವಾಗಿಯೂ ಇರುವುದು ॥೪೦॥

ಅಯ್ಯಾ! ರಾಮ! ಅದುಕಾರಣ, ಅವಿದ್ಯೆಯೆಂಬ ಈ ಮುದಿಬಳ್ಳಿಯನ್ನು, ವಿಚಾರವೆಂಬ ಅಗ್ನಿಯಿಂದ ಬೇರಿನೊಡನೆ ಸುಟ್ಟುಬಿಡಬೇಕು. ಇದು ಎಲ್ಲಿಯುವರೆಗೆ ಸುಡಲ್ಪಡುವುದಿಲ್ಲವೋ—ಅಲ್ಲಿಯುವರೆಗೂ, ಈ ಅವಿದ್ಯಾಲತೆಯು, ನಾನಾವಿಧವಾದ ಶಾಖೋಪಶಾಖೆಗಳಿಂದ ಗಹನವಾಗಿರುವ ಅನೇಕವಾದ ಸುಖದುಃಖಗಳೆಂಬ ಕಾಡುಗಳನ್ನು ಬೆಳೆಯಿಸುತಲೇ ಇರುವುದು. ಆದುದರಿಂದ, ನಾನು ಹಿಂದೆ ಹೇಳಿದ ಜ್ಞಾನಭೂಮಿಕೆಗಳಲ್ಲಿ ಕೊನೆಯಭೂಮಿಕೆಯನ್ನಾಶ್ರಯಿಸಿ ವಾಸನಾಸಹಿತವಾಗಿ ಅವಿದ್ಯಾನಾಶವುಂಟಾಗುವವರೆಗೂ ಭೂಮಿಕಾಭ್ಯಾಸವನ್ನು ಅವಿಚ್ಛಿನ್ನವಾಗಿ ಮಾಡುತಿರಬೇಕು ॥೪೧॥

ಇದು ಉತ್ಪತ್ತಿಪ್ರಕರಣದಲ್ಲಿ ಹೇಮೋರ್ಮಿಕೋಪದೇಶವೆಂಬ
ನೂರಹತ್ತೊಂಬತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ವಿಂಶತ್ಯುತ್ತರಶತತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ.

ಹೇಮೋರ್ವಿಕಾದಿವನ್ಮಿಥ್ಯಾ ಕಥಿತಾಯಾಃ ಕ್ಷಯೋನ್ಮುಖಮ್ ।
ತ್ವಂ ಮಹತ್ತ್ವಮವಿದ್ಯಾಯಾಃ ಶೃಣು ರಾಘವ ಕೀದೃಶಮ್ ॥೧॥
ಲವಣೋಸೌ ಮಹೀಪಾಲಃ ತಥಾ ದೃಷ್ಟ್ವಾ ತದಾ ಭ್ರಮಮ್ ।
ದ್ವಿತೀಯೇ ದಿವಸೇ ಗನ್ತುಂ ಪ್ರವೃತ್ತಸ್ತಾಂ ಮಹಾಟವೀಮ್ ॥೨॥
ಯತ್ರ ದೃಷ್ಟಂ ಮಯಾ ದುಃಖಂ ಅರಣ್ಯಾನೀಂ ಸ್ಮರಾಮಿ ತಾಮ್ ।
ಚಿತ್ತಾದರ್ಶಗತಾಂ ವಿನ್ಧ್ಯಾತ್ ಕದಾಚಿಲ್ಲಭ್ಯತೇ ಹಿ ಸಾ ॥೩॥
ಇತಿ ನಿಶ್ಚಿತ್ಯ ಸಚಿವೈಃ ಪ್ರಯಯೌ ದಕ್ಷಿಣಾಪಥಮ್ ।
ಪುನರ್ದಿಗ್ವಿಜಯಾಯೇವ ಪ್ರಾಪ್ಯ ವಿನ್ಧ್ಯಮಹೀಧರಮ್ ॥೪॥

ಉತ್ಪತ್ತಿಪ್ರಕರಣದಲ್ಲಿ ನೂರಿಪ್ಪತ್ತನೆಯ ಸರ್ಗವು.

ಲವಣೇನ ಪುನರ್ಗತ್ವಾ ಪ್ರಾಗ್ದೃಷ್ಟಂ ವಿನ್ಧ್ಯಪತ್ತನಮ್ ।
ಚಣ್ಡಾಲೀಶ್ವಶ್ರುಸಂವಾದಃ ಕೃತೋತ್ರ ಪ್ರತಿಪಾದ್ಯತೇ ॥

ಲವಣಭೂಪಾಲಕನು ಪೂರ್ವದಲ್ಲಿ ವಿಂಧ್ಯಪರ್ವತದ ಹತ್ತಿರ ನೋಡಿದ ಬೇಡರೂರಿಗೆ ಹೋಗಿ ಅಲ್ಲಿ ತಮ್ಮ ಅತ್ತೆಯಾಗಿದ್ದ ಚಂಡಾಲಸ್ತ್ರೀಯೊಡನೆ ಮಾಡಿದ ಸಂವಾದವು ಈ ಸರ್ಗದಲ್ಲಿ ಹೇಳಲ್ಪಡುವುದು.

ಪುನಃ ಶ್ರೀವಸಿಷ್ಠರು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಸುವರ್ಣಾಂಗುಳೀಯಕಜ್ಞಾನದಂತೆ ಮಿಥ್ಯಾಭೂತವಾದುದೆಂದು ನಾನು ಹೇಳಿದ ಈ ಅವಿದ್ಯೆಯು ಆಶ್ಚರ್ಯವು ವಿಚಾರಮಾತ್ರದಿಂದಲೇ ಕ್ಷಯೋನ್ಮುಖವಾಗುವುದು. ಇದು ಹೇಗಿರುವುದೆಂಬುದನ್ನು ನೀನು ಈಗ ಕೇಳುವನಾಗು ॥೧॥

ನಾನು ಹಿಂದೆ ನಿದರ್ಶನಾರ್ಥವಾಗಿ ಹೇಳಿದ ಲವಣಭೂಪಾಲನ ಕಥೆಯನ್ನು ಕೇಳಿದರೆ ಈ ವಿಷಯವು ಸ್ಪಷ್ಟವಾಗುವಕಾರಣ, ಅದನ್ನೇ ಮುಂದಕ್ಕೆ ಹೇಳುವೆನು. ಆ ಲವಣಮಹೀಪಾಲನು, ಆಗ ಆರೀತಿಯಾಗಲು ಆಯಿಂದ್ರಜಾಲದವನು ಬಂದಾಗ ಮಹತ್ತಾದ ಭ್ರಮೆಯನ್ನನುಭವಿಸಿ, ಆ ಮಾರನೆಯ ದಿವಸ ಆ ದೊಡ್ಡಕಾಡಿಗೆ ಹೋಗಬೇಕೆಂದು ಉದ್ಯುಕ್ತನಾದನು ॥೨॥

'ನಾನು ಯಾವ ಅರಣ್ಯದಲ್ಲಿ ಮಹಾದುಃಖವನ್ನನುಭವಿಸಿದನೋ, ಅದು ಈಗ ನನ್ನ ಚಿತ್ತದರ್ಪಣದಲ್ಲಿ ನಿಂತುಕೊಂಡು ಪುನಃಪುನಃ ಸ್ಮೃತಿಗೆ ಬರುತಿರುವುದು. ವಿಂಧ್ಯಪರ್ವತದ ಹತ್ತಿರಕ್ಕೆ ಹೋದರೆ, ಅದು ಒಂದುವೇಳೆ ಸಿಕ್ಕಿದರೂ ಸಿಕ್ಕಬಹುದು' ಎಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಪುನಃ ದಿಗ್ವಿಜಯಕ್ಕೋಸ್ಕರ ಹೊರಟವನಂತೆ, ಮಂತ್ರಿಗಳೊಡನೆ ದಕ್ಷಿಣದೇಶವನ್ನು ಕುರಿತು ಹೊರಟನು. ಅಲ್ಲಿ ಆ ವಿಂಧ್ಯಪರ್ವತವನ್ನು ಸೇರಿ, ಅಂತರಿಕ್ಷಮಾರ್ಗದಲ್ಲಿ ಸೂರ್ಯನು

ಪೂರ್ವದಕ್ಷಿಣಪಾಶ್ಚಾತ್ಯಮಹಾರ್ಣವತಟಸ್ಥಲೀಮ್ |
ಬಭ್ರಾಮ ಕೌತುಕಾತ್ ಸರ್ವಾಂ ವ್ಯೋಮವೀಥೀಮಿವೋಷ್ಣಗುಃ ॥೫॥
ಅಥೈಕಸ್ಮಿನ್ ಪ್ರದೇಶೇ ತಾಂ ಚಿನ್ತಾಮಿವ ಪುರೋಗತಾಮ್ |
ದದರ್ಶೋಗ್ರಾಮರಣ್ಯಾನೀಂ ಪರಲೋಕಮಹೀಮಿವ ॥೬॥
ಸ ತತ್ರ ವಿಹರಂಸ್ತಾಂಸ್ತಾನ್ ವೃತ್ತಾನ್ತಾನ್ ಸಕಲಾನಥ |
ದೃಷ್ಟವಾನ್ ಪೃಷ್ಟವಾಂಶ್ಚೈವ ಜ್ಞಾತವಾಂಶ್ಚ ವಿಸಿಸ್ಮಿಯೇ ॥೭॥
ತಾನ್ ಪರಿಜ್ಞಾತವಾಂಶ್ಚಾಸೀತ್ ವ್ಯಾಧಾನ್ ಪುಲ್ಕಸಜಾನ್ ಪುನಃ |
ವಿಸ್ಮಯಾಕುಲಯಾ ಬುದ್ಧ್ಯಾ ಭೂಯೋ ಬಭ್ರಾಮ ಸಮ್ಭ್ರಮೀ ॥೮॥
ಅಥ ಪ್ರಾಪ್ಯ ಮಹಾಟವ್ಯಾಂ ಪರ್ಯನ್ತೇ ಧೂಮಧೂಸರೇ |
ತಮೇವ ಗ್ರಾಮಕಂ ಯಸ್ಮಿನ್ ಸೋಽಭವತ್ ಪುಷ್ಟಪುಲ್ಕಸಃ ॥೯॥
ತತ್ರಾಪಶ್ಯಜ್ಜನಾಂಸ್ತಾಂಸ್ತಾನ್ ತಾಃ ಸ್ತ್ರಿಯಸ್ತಾಃ ಕುಟೀರಕಾಃ |
ನಾನಾಕಾರಾನ್ ಜನಾಧಾರಾನ್ ತಾಂಸ್ತಾಂಶ್ಚ ವಸುಧಾತಟಾನ್ ॥೧೦॥
ತಾಂಶ್ಚ ಕಾಣ್ಡಪರಿಭ್ರಷ್ಟಾನ್ ತಾನ್ ವೃಕ್ಷಾಂಸ್ತಾಂಸ್ತ್ವನುವ್ರಜಾನ್ |
ತಾಂಸ್ತಥೈವ ಸಮುದ್ದೇಶಾನ್ ತಾನ್ ವ್ಯಾಧಾನೇಕಕಾನ್ ಸುತಾನ್ ॥೧೧॥

ಸಂಚರಿಸುವಂತೆ, ಪೂರ್ವ ದಕ್ಷಿಣ ಪಶ್ಚಿಮ ಸಮುದ್ರತೀರಗಳಲ್ಲೆಲ್ಲ ಕೇವಲ ಕುತೂಹಲದಿಂದ ಸಂಚರಿಸಿದನು ॥೩—೫॥

ಅನಂತರ, ಒಂದುಕಡೆಯಲ್ಲಿ, ತನ್ನ ಚಿಂತೆಯೇ ಮುಂದುಗಡೆ ಬಂದು ನಿಂತಿರುವುದೋ ಎಂಬಂತೆ, ಪರಲೋಕದಹಾಗೆ ಭಯಂಕರವಾಗಿರುವ ಆ ಅರಣ್ಯಭೂಮಿಯನ್ನು ನೋಡಿದನು ॥

ಅವನು ಅಲ್ಲಿ ವಿಹರಿಸುತ, ಆಯಾ ವೃತ್ತಾಂತಗಳನ್ನೆಲ್ಲ ಕಣ್ಣಾರ ನೋಡುತಲೂ, ಇತರರನ್ನು ಕೇಳುತಲೂ, ಕ್ರಮವಾಗಿ ತಿಳಿದುಕೊಳ್ಳುತಲೂ ಆಶ್ಚರ್ಯಪಟ್ಟನು ॥೭॥

ಆ ಚಂಡಾಲವಂಶದಲ್ಲಿ ಹುಟ್ಟಿದ್ದ ವ್ಯಾಧರನ್ನೆಲ್ಲ ಪುನಃ ಕ್ರಮವಾಗಿ ಗುರುತುಹಿಡಿದನು. ವಿಸ್ಮಯಾವಿಷ್ಟವಾದ ಬುದ್ಧಿಯಿಂದ, ಮತ್ತೆ ಸಂಭ್ರಮಯುಕ್ತನಾಗಿ ಸುತ್ತಿದನು ॥೮॥

ಅನಂತರ, ಆ ಮಹಾರಣ್ಯದ ಕೊನೆಯಲ್ಲಿ, ತಾನು ಮೊದಲು ಚಂಡಾಲನಾಗಿದ್ದ ಗ್ರಾಮವನ್ನು ಹೊಂದಿ, ಅಲ್ಲಿ ಪೂರ್ವದಲ್ಲಿದ್ದಂತೆಯೇ—ಆಯಾಜನಗಳನ್ನೂ, ಅದೇ ಸ್ತ್ರೀಯರನ್ನೂ, ಅದೇ ಲತಾಗೃಹಗಳನ್ನೂ, ಜನಗಳಿಗೆ ಆಶ್ರಯಭೂತವಾಗಿದ್ದ ನಾನಾರೂಪವಾದ ಅದೇ ಭೂಪ್ರದೇಶಗಳನ್ನೂ ನೋಡುತಿದ್ದನು ॥೯—೧೦॥

ಮತ್ತು, ಪೂರ್ವದಲ್ಲಿ ಆಕಸ್ಮಿಕವಾಗಿ ಪ್ರಳಯವಾದಾಗ ಬಿದ್ದುಹೋದ ಆ ವೃಕ್ಷಗಳನ್ನೂ, ಆಗ ಇದ್ದ ಅನುಚರರನ್ನೂ, ಆಗಿನಂತೆಯೇ ಈಗಲೂ ಕಾಣಿಸುತ್ತಿರುವ ಪ್ರದೇಶಗಳನ್ನೂ, ಆಗಿನ ವ್ಯಾಧರನ್ನೂ, ಆಗಿನಂತೆಯೇ ಸಹಾಯಶೂನ್ಯರಾಗಿದ್ದ ಮಕ್ಕಳನ್ನೂ ಆ ಲವಣರಾಜನು ನೋಡಿದನು ॥೧೧॥

ಅನ್ಯಾಸು ವೃದ್ಧಾಸು ಸಬಾಷ್ಪನೇತ್ರಾ ಸ್ವಾರ್ತಾರ್ತಿಯುಕ್ತಾಸು ಚ ವರ್ಣಯನ್ತೀ ।
ಅಕಾಲಕಾನ್ತಾರವಿಶೀರ್ಣಬನ್ಧುದುಃಖಾನ್ಯಸಙ್ಖ್ಯಾನಿ ಸಖೀಷು ವೃದ್ಧಾ ॥೧೨॥
ವೃದ್ಧಾ ಪ್ರವೃದ್ಧೋಜ್ಜ್ವಲನೇತ್ರಬಾಷ್ಪಾ ಕಷ್ಟಂ ಬತಾಶುಷ್ಕಕುಚಾ ಕೃಶಾಙ್ಗೀ ।
ಅವಗ್ರಹೋಗ್ರಾಶನಿದಗ್ಧದೇಶೇ ತತ್ರಾರ್ತನಾದಾ ಪರಿರೋದಿತೀದಮ್ ॥೧೩॥
ಹಾ ಪುತ್ರಿ ಪುತ್ರಾವೃತಸರ್ವಗಾತ್ರೇ ದಿನತ್ರಯಾಭೋಜನಜರ್ಜರಾಙ್ಗಿ ।
ಕೃತ್ವಾ ಸಿನಾ ವರ್ಮಣಿ ಜೀರ್ಣದೇಹಾಃ ಕಥಂ ತ್ವಮುಕ್ತಾ ಭವತಾಸವಸ್ತೇ ॥೧೪॥
ತಾಲೀವಲಾಲಮ್ಬನಮಮ್ಬುದಾದ್ರೌ ದನ್ತಾನ್ತರಸ್ಥಾರುಣಸತ್ಫಲಸ್ಯ ।
ಸ್ಮರಾಮಿ ಗುಞ್ಜಾಫಲದಾಮ ಭರ್ತುಃ ಪುರಸ್ಥಮುದ್ರಾಮುರಹಾಸಿನಸ್ತೇ ॥೧೫॥
ಕದಮ್ಬಜಮ್ಬೀರಲವಙ್ಗಗುಞ್ಜಾಕುಞ್ಜಾನ್ತರನ್ತಸ್ತು ಚರತ್ತರಕ್ಷೋಃ ।
ಪಶ್ಯಾಮಿ ಪುತ್ರಸ್ಯ ಕದಾನು ಭೂಯೋ ಭುಜಙ್ಕರಾಣ್ಯುಡ್ಯತಿವಲ್ಗಿತಾನಿ ॥೧೬॥

ಆಗ ಅಲ್ಲಿ ಆ ಲವಣರಾಜನು, ತನಗೆ ಅತ್ತೆಯಾಗಿದ್ದ ವೃದ್ಧಚಂಡಾಲಿಯನ್ನೂ ನೋಡಿದನು. ಆ ಸಮಯದಲ್ಲಿ ಅವಳು ತನ್ನಂತೆಯೇ ಮುದುಕಿಯರಾಗಿಯೂ ದುಃಖಿತರಾಗಿಯೂ ಇದ್ದ ತನ್ನ ಸಖಿಯರಲ್ಲಿ, ಆ ಆಕಸ್ಮಿಕಪ್ರಳಯದಿಂದ ತನಗುಂಟಾದ ಅಸಂಖ್ಯಾಕವಾದ ಬಂಧುವ್ಯಸನವನ್ನು ಹೇಳಿಕೊಳ್ಳುತಿದ್ದಳು ॥೧೨॥

ಕಣ್ಣುಗಳಲ್ಲಿ ಅತ್ಯಧಿಕವಾಗಿ ನೀರುಸುರಿಯುಸುತ್ತಿರುವ ಕೃಶಳಾಗಿದ್ದ ಆ ವೃದ್ಧಚಂಡಾಲಿಯು, ಅನಾವೃಷ್ಟಿಯೆಂಬ ಸಿಡಿಲಿನಿಂದ ಸುಟ್ಟುಹೋಗಿರುವ ಆ ಪ್ರದೇಶದೊಳಗೆ, ಆರ್ತಧ್ವನಿಯಿಂದ ಹೀಗೆ ವಿಲಾಪಮಾಡುತಿದ್ದಳು ॥೧೩॥

ಅಯ್ಯೋ! ಮಗಳೆ! ನಿನ್ನ ಸುತ್ತಲೂ ನಿನ್ನ ಮಕ್ಕಳು ತುಂಬಿಕೊಳ್ಳುತಿದ್ದರಲ್ಲ! ನೀನು ಮೂರುದಿವಸ ಉಪವಾಸ ಮಾಡಿ ನಿನ್ನ ದೇಹವೆಲ್ಲ ಜರ್ಜರವಾಗಿ ಹೋಯಿತಲ್ಲ! ಅಯ್ಯೋ! ಕತ್ತಿಯು ಒರೆಯೊಳಗೆ ಪ್ರವೇಶಿಸುವಂತೆ, ಆ ರಾಜನು ನಿಮ್ಮೊಳಗೆಲ್ಲ ಪ್ರವೇಶಮಾಡಿ, ಕೊನೆಗೆ ನಿಮ್ಮೆಲ್ಲರನ್ನೂ ಎಲ್ಲಿ ಬಿಟ್ಟುಹೋದನು? ನಮ್ಮ ಪ್ರಾಣಗಳೆಲ್ಲ ಹೋದುವು? ॥೧೪॥

ಅಯ್ಯೋ! ನಿನ್ನ ಪತಿಯಾದ ಆ ರಾಜಪುತ್ರನು, ನಿನ್ನನ್ನು ವಿವಾಹಮಾಡಿಕೊಂಡಬಳಿಕ, ಕುಟುಂಬರಕ್ಷಣಾರ್ಥವಾಗಿ, ಮೇಘಮಂಡಲದಂತಿದ್ದ ಪರ್ವತದ ಮೇಲಕ್ಕೆ ಹೋಗಿ, ಅಲ್ಲಿ ದೊಡ್ಡ ತಾಳೆಯಮರವನ್ನು ಹತ್ತಿ, ಕೆಂಪಗಿರುವ ಅದರ ಹಣ್ಣನ್ನು ಕಿತ್ತುಕೊಂಡು, ಅದನ್ನು ಬಾಯಲ್ಲಿ ಕಚ್ಚಿಕೊಂಡು ಮರದಿಂದ ಇಳಿಯುತ, ಸಾಕ್ಷಾತ್ ಹನುಮಂತನಂತೆ ಕಾಣಿಸಿಕೊಳ್ಳುತ, ಎದೆಯಲ್ಲಿ ಗುಲಗಂಜಿಯ ಸರವನ್ನು ಧರಿಸಿಕೊಂಡು, ಮಧ್ಯದಲ್ಲಿ ಒಂದು ಮರದಿಂದ ಮತ್ತೊಂದು ಮರಕ್ಕೆ ಹಾರಿ ಸಾಹಸಪಡುತಿದ್ದುದು ಇನ್ನೂ ನನಗೆ ನೆನಪಾಗುತ್ತಿರುವುದಲ್ಲ! ಹಾ! ಪುತ್ರಿ! ॥೧೫॥

ಅಯ್ಯೋ! ಸಖಿಯರಾ! ನನ್ನ ಅಳಿಯನು ನನಗೆ ಮಗನಿಗಿಂತಲೂ ಹೆಚ್ಚಾಗಿದ್ದನು. ಅವನು, ಕದಂಬ ಜಂಬೀರ ಲವಂಗ ಮುಂತಾದ ವೃಕ್ಷಗಳ ಪೊದರುಗಳೊಳಗೆ ಹುಲಿಯಂತೆ ಹಾರಾಡುತಿದ್ದನು. ಅದನ್ನು ನಾನು ಇನ್ನಾವಾಗ ನೋಡಲಿ!! ॥೧೬॥

ನ ತಾನಿ ಕಾಮಸ್ಯ ವಿಲಾಸಿನೀಹ ಮುಖೇಽಪಿ ಶೋಭಾಲಸಿತಾನಿ ಸನ್ತಿ ।
ತಮಾಲನೀಲೇ ಚಿಬುಕೈಕದೇಶೇ ಸುತಸ್ಯ ಚಾನ್ಯಾಸ್ಯ ಗತಾಮಿಷಸ್ಯ ॥೧೭॥
ಸುತಾಪನೀತಾ ಸಹ ತೇನ ಭರ್ತ್ರಾಯಮೇನ ಯಸ್ಯಾಯಮುನಾಸಮಾನಾ ।
ತಮಾಲವಲ್ಲೀ ಸಹಪುಷ್ಪಗುಚ್ಛಾ ಸಮೀರಣೇನೇವ ವನೇ ವರೇಣ ॥೧೮॥
ಹಾಪುತ್ರಿ ಗುಞ್ಜಾಫಲದಾಮಹಾರೇ ಸಮುನ್ನತಾಭೋಗಪಯೋಧರಾಙ್ಗಿ ।
ವಾತೋಲ್ಲಸತ್ಕಜ್ಜಲಲೋಲವರ್ಣೇ ಪರ್ಣಾಮ್ಬರೇ ಬಾದರಜಮ್ಬುದನ್ತೇ ॥೧೯॥
ಹಾ ರಾಜಪುತ್ರೇನ್ದುಸಮಾನಕಾನ್ತ ಸನ್ತ್ಯಜ್ಯ ಶುದ್ಧಾನ್ತವಿಲಾಸಿನೀಸ್ತಾಃ ।
ರತಿಂ ಪ್ರಯಾತೋಽಸಿ ಮಮಾತ್ಮಜಾಯಾಂ ನ ಸಾಪಿ ತೇ ಸುಸ್ಥಿರತಾಮುಪೇತಾ ॥
ಸಂಸಾರನದ್ಯಾಃ ಸುತರಙ್ಗಭಙ್ಗ್ಯೈಃ ಕ್ರಿಯಾವಿಲಾಸೈರ್ವಿಹಿತೋಪಹಾಸ್ಯೈಃ ।
ಕಿಂನಾಮ ತುಚ್ಛಂ ನ ಕೃತಂ ನೃಪೇಶೋ ಯದ್ಯೋಜಿತಃ ಪುಲ್ಕಸಕನ್ಯಕಾಯಾಮ್
ಸಾ ತ್ರಸ್ತಸಾರಙ್ಗಸಮಾನನೇತ್ರಾ ಸ ದೃಪ್ತಶಾರ್ದೂಲಸಮಾನವೀರ್ಯಃ ।

ಅಯ್ಯೋ! ನನ್ನ ಪುತ್ರಪ್ರಾಯನಾದ ಅಳಿಯನು ತನ್ನ ಕಾಂತೆಯ ಮುಖದಲ್ಲಿದ್ದ ಮಾಂಸವನ್ನು ತಾನು ತನ್ನ ಮುಖದಿಂದ ಕಿತ್ತುಕೊಳ್ಳುವಾಗ, ಅವನ ತಮಾಲನೀಲವಾದ ಚಿಬುಕ (ಗಡ್ಡ) ಪ್ರದೇಶವು ಕುಣಿಯುತಿರುವುದನ್ನು ನೆನೆಸಿಕೊಂಡರೆ, ಮನ್ಮಥನ ಮುಖದಲ್ಲಿಯೂ ಅಷ್ಟು ಮಧುರವಾದ ವಿಲಾಸವಿಲ್ಲವೆಂದು ತೋರುವುದಲ್ಲ ॥೧೭॥

ಅರಣ್ಯದಲ್ಲಿರುವ ತಮಾಲಲತೆಯು ಕುಸುಮಸ್ತಬಕದೊಡನೆ ಪ್ರಬಲವಾಯುವಿನಿಂದ ಅಪಹರಿಸಲ್ಪಡುವಂತೆ, ಅಂತಹ ಪ್ರಿಯಪತಿಯೊಡನೆ ನನ್ನ ಪುತ್ರಿಯೂ ಯಮನಿಂದ ಅಪಹರಿಸಲ್ಪಟ್ಟಳಲ್ಲ! ॥೧೮॥

ಅಯ್ಯೋ! ಪುತ್ರಿ! ಗುಲಗಂಜಿಯಲ್ಲಿ ಹಾರವನ್ನು ಮಾಡಿ ಹಾಕಿಕೊಂಡು, ವಾಯುಸಂಪರ್ಕದಿಂದ ವಿಶೇಷವಾಗಿ ಶೋಭಿಸುವ ಕಾಡಿಗೆಯಂತಹ ಕೃಷ್ಣವರ್ಣಳಾಗಿ, ಎಲೆಗಳನ್ನು ಮೈತುಂಬ ಬಟ್ಟೆಯಂತೆ ಆಚ್ಛಾದಿಸಿಕೊಂಡು, ಎಲಚಿಹಣ್ಣಿನಂತೆಯೂ ನೇರಳೆಹಣ್ಣಿನಂತೆಯೂ ಹೊಳೆಯುವ ಹಲ್ಲುಗಳನ್ನು ಬಿಡುತ, ನನ್ನ ಮನಸ್ಸಿಗೆ ನೀನು ಎಷ್ಟೋ ಸಂತೋಷವುಂಟುಮಾಡುತಿದ್ದೆಯಲ್ಲ! ಈಗ ಎಲ್ಲಿ ಹೋಗಿಬಿಟ್ಟೆ? ॥೧೯॥

ಅಯ್ಯೋ! ರಾಜಪುತ್ರ! ಚಂದ್ರನಿಗೆ ಸಮಾನನಾಗಿ ನೀನು ಸರ್ವರಿಗೂ ಮನೋಹರನಾಗಿದ್ದೆಯಲ್ಲ! ಅಂತಃಪುರದಲ್ಲಿದ್ದ ಲೋಕೋತ್ತರ ಸುಂದರಿಯರನ್ನೆಲ್ಲ ಬಿಟ್ಟುಬಿಟ್ಟು ನನ್ನ ಮಗಳಲ್ಲಿ ಅನುರಕ್ತನಾದೆಯಲ್ಲ! ಅವಳೂ ನಿನಗೆ ಸ್ಥಿರಳಾಗಿ ನಿಲ್ಲಲಿಲ್ಲವೆ! ॥೨೦॥

ಸಂಸಾರವೆಂಬ ನದಿಯ ಕ್ರಿಯಾವಿಲಾಸಗಳೆಂಬ ತರಂಗಗಳು ಸರ್ವರನ್ನೂ ಪರಿಹರಿಸುತ್ತಿರುವುವು. ಇವು ಯಾವುದನ್ನು ತಾನೆ ತುಚ್ಛವನ್ನಾಗಿ ಮಾಡುವುದಿಲ್ಲ? ಆ ಮಹಾತ್ಮನಾದ ರಾಜಪುತ್ರನನ್ನೂ ಚಂಡಾಲಕನ್ಯಕೆಯಲ್ಲಿ ಅನುರಕ್ತನನ್ನಾಗಿ ಮಾಡಿದುವಲ್ಲ! ಆಹ!! ॥೨೧॥

ಅಯ್ಯೋ! ನಾನೆಷ್ಟು ಹೇಳಲಿ! ಭಯಚಕಿತವಾಗಿರುವ ಕುರಂಗಕ್ಕೆ ಸಮಾನನೇತ್ರಳಾದ ನನ್ನ ಪ್ರಿಯಪುತ್ರಿಯೂ, ಗರ್ವಿತವಾಗಿರುವ ಶಾರ್ದೂಲಕ್ಕೆ ಸಮಾನವೀರ್ಯನಾದ ಆ ರಾಜ

ಉಭೌ ಗತಾವೇಕಪದೇನ ನಾಶಂ ಆಶಾ ಸಹಾರ್ಥೇನ ಯಥಾ ಮಹೇಹಾ ॥೨೦॥
ಮೃತೇಶ್ವರಾಶ್ವಸ್ತನಿಜಾತ್ಮಜಾಸ್ಮಿ ದುರ್ದೇಶಯಾತಾಸ್ಮಿ ಚ ದುರ್ಗತಾಸ್ಮಿ ।
ದುರ್ಜಾತಿ ಜಾತಾಸ್ಮಿ ಮಹಾಪದೇಸ್ಮಿ ಸಾಕ್ಷಾದ್ಭಯಂ ಭೋಸ್ಮಿ ಮಹಾಪದಸ್ಮಿ ॥
ನೀಚಾವಮಾನಪ್ರಭವಸ್ಯ ಮನ್ಯೋಃ ಕ್ಷುಧಾ ಪ್ರಪನ್ನಸ್ಯ ಕಳತ್ರಕಸ್ಯ ।
ಶೋಕಸ್ಯ ವೃತ್ತಾವನಿವಾರ್ಯವೃತ್ತೇಃ ನಾರ್ಯಸ್ಮ್ಯನೇಕಾಯತನಂ ವಿನಾಥಾ ॥
ದೈವೋಪತಪ್ತಸ್ಯ ವಿಬಾಂಧವಸ್ಯ ಮೂಢಸ್ಯ ರೂಢಸ್ಯ ಮಹಾಧಿಭೂಮೌ ।
ಯತ್ಪ್ರಾಣನಂ ಯನ್ಮರಣಂ ಮಹಾಪತ್ ಯಸ್ಯಾತ್ಮನಿರ್ಜೀವಿತಮುತ್ತಮಂ ತತ್ ॥
ಜನೈರ್ವಿಹೀನಸ್ಯ ಕುದೇಶವೃತ್ತೇಃ ದುಃಖಾನ್ಯನಂತಾನಿ ಸಮುಲ್ಲಸಂತಿ ।
ಸಹಸ್ರಶಾಖಾರಸಸಂಕುಲಾನಿ ತೃಣಾನಿ ವರ್ಷಾಸ್ವಿವ ಪರ್ವತಸ್ಯ ॥೨೪॥
ಏವಂ ಲಪಂತೀಂ ಸ್ವಕಳತ್ರವೃದ್ಧಾಂ ದಾಸೀಭಿರಾಶ್ವಸ್ಯ ನೃಪಃ ಸ್ತ್ರಿಯಂ ತಾಮ್ ।
ಪಪ್ರಚ್ಛ ಕಿಂ ವೃತ್ತಮಿಹೈವ ಕಾ ಚ ಕಾ ತೇ ಸುತಾ ಕಶ್ಚ ಸುತಸ್ತವೇತಿ ॥೨೫॥

ಪುತ್ರನೂ, ಇವರಿಬ್ಬರೂ—ಆಶೆಯೊಡನೆ ವಿಷಯವೂ ಹೋಗುವಂತೆ—ಒಂದೇತಡವೆಗೆ ನಾಶ ಹೊಂದಿಬಿಟ್ಟರಲ್ಲ! ॥೨೦॥

ಅಯ್ಯೋ! ಈಗ ನಾನೇನು ಮಾಡಲಿ? ಒಂದೇಕಾಲದಲ್ಲಿ ನನಗೆ ಪತಿಯೂ ಪುತ್ರಿಯೂ ಹೋಗಿಬಿಟ್ಟರು! ನಾನು ದುರ್ದೇಶಕ್ಕೆ ಬಂದುಬಿಟ್ಟೆನು! ಮಹಾದುರವಸ್ಥೆಗೆ ಸಿಕ್ಕಿರುವೆನು! ನಾನು ಕೆಟ್ಟ ಜನ್ಮದಲ್ಲಿ ಹುಟ್ಟಿದವಳು! ದೊಡ್ಡ ವಿಷಮದಶೆಯಲ್ಲಿ ಬಿದ್ದಿರುವೆನು! ಅಯ್ಯೋ! ಸಖಿಯರಾ! ನಾನೇ ಸಾಕ್ಷಾದ್ಭಯಸ್ವರೂಪಳಾಗಿರುವೆನು! ಮಹಾವಿಪತ್ತೂ ನಾನೇ ಆಗಿರುವೆನು! ॥೨೧॥

ಅಹಹ! ನಾನು ಅನಾಥಳಾಗಿಬಿಟ್ಟೆನಲ್ಲ! ನೀಚರಿಂದ ಅವಮಾನಪಡಿಸಿಕೊಂಡು ದುಃಖ ಪಡುವುದೊಂದುಕಡೆ!—ಹಸಿವಿನಿಂದ ಬಳಲುತ್ತಿರುವ ನನ್ನ ಮನೆಯ ಜನಗಳಿಗೆ ಆಹಾರವನ್ನು ಸಂಪಾದಿಸಿಕೊಡುವ ವಿಷಯದಲ್ಲಿ ಅನಿವಾರ್ಯವಾದ ಶೋಕವೊಂದು ಕಡೆ! ಇವಕ್ಕೆಲ್ಲ ತೌರುಮನೆಯಾಗಿ ಬ್ರಹ್ಮನು ನನ್ನನ್ನು ಸೃಷ್ಟಿಮಾಡಿರುವನಲ್ಲ! ॥೨೨॥

ಅಯ್ಯೋ! ಇಂತಹ ಸಂಕಟವಾರಿಗೂ ಬರಬಾರದು! ದೈವದಿಂದ ಉಪಹತರಾಗಿ—ಬಂಧುಬಳಗಗಳನ್ನು ಕಳೆದುಕೊಂಡು—ದೊಡ್ಡವ್ಯಸನವೆಂಬ ಭೂಮಿಯಲ್ಲಿಯೇ ಜನ್ಮವೆತ್ತಿ—ಯಾವುದೂ ತೋರದೆ ದುಃಖಪಡುತಿರುವ ಮನುಜರು ಬದುಕುತಲೂ ಸಾಯುತಲೂ ಮಧ್ಯಮಧ್ಯದಲ್ಲಿ ವಿಪತ್ತಿಗೊಳಗಾಗುತಲೂ ಜೀವಿಸಿರುವುದು ಯಾವುದುಂಟೋ, ಅದಕ್ಕಿಂತಲೂ ನಿರ್ಜೀವವಾದ ವೃಕ್ಷಪಾಷಾಣಾದಿಗಳ ಅವಸ್ಥೆಯೇ ಉತ್ಕೃಷ್ಟವೆಂದು ತೋರುವುದು ॥೨೩॥

ಸ್ವಜನವಿಹೀನನಾಗಿ ದುಷ್ಪ್ರದೇಶವನ್ನು ಸೇರಿದ ಮನುಷ್ಯನಿಗೆ, ವರ್ಷಾಕಾಲದಲ್ಲಿ ಪರ್ವತದ ತೃಣಗಳು ಸಾವಿರಾರು ಕವಲುಗಳಿಂದ ಭರಿತವಾಗಿ ಅಂಕುರಿಸುವಂತೆ, ಅನಂತವಾದ ದುಃಖಗಳು ಶಾಖೋಪಶಾಖಾಪರಿಪೂರ್ಣಗಳಾಗಿ ಉದಯಿಸುವುವು ॥೨೪॥

ಅಯ್ಯಾ! ರಾಮ! ಈ ಪೂರ್ವೋಕ್ತರೀತಿಯಾಗಿ ತನ್ನ ಸಖಿಯರ ಮುಂದೆ ವಿಲಾಪಮಾಡುತಿರುವ ಆ ವೃದ್ಧಚಂಡಾಲಿಯನ್ನು, ಲವಣರಾಜನು ತನ್ನ ದಾಸಿಯರದ್ವಾರಾ ಸಮಾಧಾನಪಡಿಸಿ 'ಈಗ ಇಲ್ಲಿ ಏನಾಯ್ತು? ನೀನು ಯಾರು? ನಿನ್ನ ಮಗಳು ಯಾರು? ನಿನ್ನ ಮಗನಾರು?' ಎಂದು ಪ್ರಶ್ನೆಮಾಡಿದನು ॥೨೫॥

ಉವಾಚ ಸಾ ಬಾಷ್ಪವಿಲೋಚನಾಥ ಗ್ರಾಮಸ್ತ್ವಯಂ ಪುಲ್ಕಸಘೋಷನಾಮಾ ।
ಇಹಾಭವತ್ ಪುಲ್ಕಸಕಃ ಪತಿರ್ಮೇ ಬಭೂವ ತಸ್ಯೇನ್ದುಸಮಾ ಸುತೈಕಾ ॥೧೮॥
ಸಾ ದೈವಯೋಗಾತ್ ಪತಿಮಿನ್ದುತುಲ್ಯಂ ಇಹಾಗತಂ ದೈವವಶೇನ ಭೂಪಮ್ ।
ಅಯಂ ವಿಶೀರ್ಣಂ ಮಧುಕುಮ್ಭಮಾಪ ವನೇ ವರಾಕೀ ಕರಭೀ ಯಥೈಕಾ ॥೧೯॥
ಸಾ ತೇನ ಸಾರ್ಧಂ ಸುಚಿರಂ ಸುಖಾನಿ ಭುಕ್ತ್ವಾ ಪ್ರಸೂತಾ ತನಯಾಃ ಸುತಾಂಶ್ಚ ।
ವೃದ್ಧಿಂ ಗತಾ ಕಾನನಕೋಟರೇಸ್ಮಿನ್ ತುಮ್ಬೀಲತಾ ಪಾದಪಸಂಶ್ರಿತೇವ ॥೨೦॥

ಇತಿ ಉತ್ಪತ್ತಿಪ್ರಕರಣೇ ಚಣ್ಡಾಲೀಶೋಚನಂ ನಾಮ
ವಿಂಶತ್ಯುತ್ತರಶತತಮಃ ಸರ್ಗಃ.

ಈರೀತಿಯಾಗಿ ರಾಜನು ಪ್ರಶ್ನೆಮಾಡಿದ ಬಳಿಕ, ಅವಳು ಕಣ್ಣೀರು ತುಂಬಿಕೊಂಡು ಹೀಗೆ ಹೇಳಿದಳು :—ಅಯ್ಯಾ! ರಾಜ! ಈ ಗ್ರಾಮಕ್ಕೆ ಪುಲ್ಕಸಘೋಷ (ಚಂಡಾಲರು ವಾಸಮಾಡುವಹಳ್ಳಿ) ವೆಂದು ಹೆಸರು. ನನ್ನ ಪತಿಯು ಈ ಗ್ರಾಮಕ್ಕೆ ಅಧಿಪತಿಯಾಗಿದ್ದನು. ಅವನಿಗೆ ಚಂದ್ರನಂತೆ ಆಹ್ಲಾದಜನನಿಯಾದ ಮಗಳೊಬ್ಬಳಿದ್ದಳು ॥೧೮॥

ಅವಳು, ತನ್ನ ಪ್ರಾಕ್ತನ ಪುಣ್ಯಕರ್ಮಸಂಚಯದಿಂದ, ಅರಣ್ಯದಲ್ಲಿ ಆಕಸ್ಮಿಕವಾಗಿ ಬಾಯಿ ತೆರೆದುಹೋದ ಮಧುಕುಂಭ (ಜೇನುತುಪ್ಪದ ಗಡಿಗೆ) ವನ್ನು ಒಂದು ಹೆಣ್ಣುಕತ್ತೆಯು ಹೊಂದಿದಂತೆ, ದೈವವಶಾತ್ ಇಲ್ಲಿಗೆ ಬಂದ ಚಂದ್ರಸಮಾನನಾದ ಒಬ್ಬ ದೊರೆಯನ್ನು ಪತಿಯನ್ನಾಗಿ ಸೇರಿದಳು ॥೧೯॥

ಅಂತಹ ನನ್ನ ಮಗಳು, ಇಲ್ಲಿ ಅವನೊಡನೆ ಬಹುಕಾಲ ಸುಖವನ್ನನುಭವಿಸಿ, ಅನೇಕವಾಗಿ ಹೆಣ್ಣುಮಕ್ಕಳನ್ನೂ ಗಂಡುಮಕ್ಕಳನ್ನೂ ಪ್ರಸವಿಸಿ, ದೊಡ್ಡ ಮರಕ್ಕೆ ಹಬ್ಬಿದ ಸೋರೆಯಬಳ್ಳಿಯಂತೆ, ಈ ಅರಣ್ಯದಲ್ಲಿ ಯಥೇಚ್ಛವಾಗಿ ಅಭಿವೃದ್ಧಿಹೊಂದಿದ್ದಳು ॥೨೦॥

ಇದು ಉತ್ಪತ್ತಿಪ್ರಕರಣದಲ್ಲಿ ಚಂಡಾಲೀಶೋಚನವೆಂಬ
ನೂರಿಪ್ಪತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕವಿಂಶತ್ಯುತ್ತರಶತತಮಃ ಸರ್ಗಃ.

ಚಣ್ಡಾಲ್ಯುವಾಚ.

ಕೇನ ಚಿತ್ತ್ವಥಕಾಲೇನ ಗ್ರಾಮಕೇಸ್ಮಿನ್ ಜನೇಶ್ವರ ।
ಅವೃಷ್ಟಿದುಃಖಮಭವತ್ ಭೀಷಣಂ ಭಗ್ನಮಾನವಮ್ ॥೧॥
ಮಹತಾನೇನ ದುಃಖೇನ ಸರ್ವೇತೇ ಗ್ರಾಮಕಾಜ್ಜನಾಃ ।
ವಿನಿರ್ಗತ್ಯ ಗತಾದೂರಂ ಸರ್ವೇ ಪಞ್ಚತ್ವಮಾಗತಾಃ ॥೨॥
ತೇನೇಮಾದುಃಖಭಾಗಿನ್ಯಃ ಶೂನ್ಯಾವಯಮಿಹ ಪ್ರಭೋ ।
ಸೌಮ್ಯ ಶೋಚಾಮ ಸದ್ಬಾಷ್ಪಂ ಅಚಾನ್ತೇಕ್ಷಣಧಾರಯಾ ॥೩॥
ಇತ್ಯಾಕರ್ಣ್ಯಾಜ್ಗನಾವಕ್ತ್ರಾತ್ ರಾಜಾ ವಿಸ್ಮಯಮಾಗತಃ ।
ಮನ್ತ್ರಿಣಾಂ ಮುಖಮಾಲೋಕ್ಯ ಚಿತ್ರಾರ್ಪಿತಇವಾಭವತ್ ॥೪॥

ಉತ್ಪತ್ತಿಪ್ರಕರಣದಲ್ಲಿ ನೂರಿಪ್ಪತ್ತೊಂದನೆಯ ಸರ್ಗವು.

ತಚ್ಛ್ರುತ್ವಾ ವಿಸ್ಮಿತಸ್ಯಾತ್ರ ಲವಣಸ್ಯ ಗೃಹಾಗಮೇ ।
ವಿನಿರ್ಣಯೋ ವಸಿಷ್ಠೋಕ್ತ್ಯಾ ರಾಮಸ್ಯಾಪ್ಯತ್ರ ಕೀರ್ತ್ಯತೇ ॥

ಹಿಂದಿನ ಸರ್ಗದಲ್ಲಿ ಚಂಡಾಲಿ ಹೇಳಿದ ಮಾತನ್ನು ಕೇಳಿ ಮನೆಗೆ ಬಂದ ಲವಣರಾಜನೂ ಶ್ರೀರಾಮನೂ ಕೂಡ ಶ್ರೀವಸಿಷ್ಠಮುನಿಯ ಉಪದೇಶದಿಂದ ಎಲ್ಲವನ್ನೂ ನಿರ್ಣಯಮಾಡಿಕೊಂಡರೆಂಬ ವಿಷಯವು, ಇಲ್ಲಿ ವಿವರಿಸಲ್ಪಡುವುದು.

ಚಂಡಾಲಸ್ತ್ರೀಯು ಲವಣರಾಜನನ್ನು ಕುರಿತು ಮುಂದಕ್ಕೆ ಹೇಳುವಳು :—

ಅಯ್ಯಾ! ರಾಜ! ಅನಂತರ ಕೆಲವುಕಾಲ ಕಳೆದಮೇಲೆ, ಈ ಗ್ರಾಮದಲ್ಲಿ, ಅತಿಭಯಂಕರವಾಗಿ ಮನುಷ್ಯರನ್ನೆಲ್ಲ ಮುರಿದುಹಾಕುವಂತಹ ಅನಾವೃಷ್ಟಿದುಃಖವಾವಿರ್ಭವಿಸಿತು ॥೧॥

ಅತ್ಯಧಿಕವಾದ ಈ ದುಃಖದಿಂದ, ಈ ಗ್ರಾಮದಲ್ಲಿದ್ದವರೆಲ್ಲರೂ ಗ್ರಾಮವನ್ನು ಬಿಟ್ಟು ದೂರವಾಗಿ ಹೊರಟುಹೋದರು; ಎಲ್ಲರೂ ಮೃತರಾಗಿಯೂ ಬಿಟ್ಟರು ॥೨॥

ಆದುಕಾರಣ, ಎಲೈ ಸೌಮ್ಯನಾದ ಪ್ರಭುವೆ! ಈಗ ಇಲ್ಲಿರುವ ನಾವೆಲ್ಲರೂ ಗಂಡನನ್ನು ಕಳೆದುಕೊಂಡು ದುಃಖಭಾಜನರಾಗಿ, ಹೀಗೆ ಕಣ್ಣೀರುಸುರಿಯಿಸಿಕೊಂಡು ಅಳುತ್ತಿರುವೆವು. ಎಂದು ಆ ವೃದ್ಧಚಂಡಾಲಸ್ತ್ರೀಯು ಹೇಳಿದಳು ॥೩॥

ಅಯ್ಯಾ! ರಾಮ! ಹೀಗೆಂದು ಆ ಸ್ತ್ರೀಯ ಮುಖದಿಂದ ಕೇಳಿ, ವಿಸ್ಮಿತಹೃದಯನಾದ ಆ ಲವಣರಾಜನು, ಮಂತ್ರಿಗಳ ಮುಖವನ್ನು ನೋಡುತ, ಚಿತ್ರದಲ್ಲಿ ಬರೆಯಲ್ಪಟ್ಟವನಂತೆ ಸ್ತಬ್ಧನಾಗಿದ್ದನು ॥೪॥

ಭೂಯೋ ವಿಚಾರಯಾಮಾಸ ತದಾಶ್ಚರ್ಯಮನುತ್ತಮಮ್ |
ಭೂಯೋಭೂಯೋಥ ಪಪ್ರಚ್ಛ ಬಭೂವಾಶ್ಚರ್ಯವಾನಿತಿ ||೫||
ತೇಷಾಂ ಸಮುಚಿತೈರ್ದಾನಸನ್ಮಾನೈರ್ದುಃಖಸಂಕ್ಷಯಮ್ |
ಕೃತ್ವಾ ಕರುಣಯಾವಿಷ್ಟೋ ದೃಷ್ಟಲೋಕಪರಾವರಃ ||೬||
ಸ್ಥಿತ್ವಾ ತತ್ರ ಚಿರಂ ಕಾಲಂ ವಿಮೃಶ್ಯ ನಿಯತೇರ್ಗತೀಃ |
ಆಜಗಾಮ ಗೃಹಂ ಪೌರೈಃ ವನ್ದಿತಃ ಪ್ರವಿವೇಶ ಹ ||೭||
ಪ್ರಾತಸ್ತತ್ರ ಸಭಾಸ್ಥಾನೇ ಮಾಮಪೃಚ್ಛದಸೌ ನೃಪಃ |
ಕಥಮೇವಂ ಮುನೇ ಸ್ವಪ್ನಃ ಪ್ರತ್ಯಕ್ಷಮಿತಿ ವಿಸ್ಮಿತಃ ||೮||
ಯಥಾವಸ್ತು ತಯಾ ತಸ್ಯ ತತಉಕ್ತಃ ಸ ತಾದೃಶಃ |
ಸಂಶಯೋ ಹೃದಯಾನ್ನುನ್ನೋ ವಾತೇನೇವಾಮ್ಬುದೋ ದಿವಃ ||೯||
ಇತ್ಯೇವಂ ರಾಘವಾವಿದ್ಯಾ ಮಹತೀ ಭ್ರಮದಾಯಿನೀ |
ಅಸತ್ ಸತ್ತಾಂ ನಯತ್ಯಾಶು ಸಚ್ಚಾಸತ್ತಾಂ ನಯತ್ಯಲಮ್ ||೧೦||

ಶ್ರೀರಾಮಉವಾಚ.

ಕಥಮೇವಂ ವದ ಬ್ರಹ್ಮನ್ ಸ್ವಪ್ನಃ ಸತ್ಯತ್ವಮಾಗತಃ |
ಸಂಶಯೋ ಭಗವನ್ ಸೋಯಂ ನ ಮೇ ಗಳತಿ ಚೇತಸಿ ||೧೧||

ಅತ್ಯಧಿಕವಾದ ಆ ಆಶ್ಚರ್ಯವನ್ನು ಮತ್ತೆಮತ್ತೆ ವಿಚಾರಮಾಡಿದನು; ಬಳಿಕ ಆತ್ಯಾಶ್ಚರ್ಯಯುಕ್ತನಾಗಿ ಮತ್ತೆಮತ್ತೆ ಅವರನ್ನು ಪ್ರಶ್ನೆಮಾಡಿದನು ||೫||

ಆ ಚಂಡಾಲರ ಊರಿನಲ್ಲಿದ್ದವರಿಗೆಲ್ಲ ಯಥೋಚಿತವಾಗಿ ದಾನಮಾನಗಳಿಂದ ದುಃಖವನ್ನು ಹೋಗಲಾಡಿಸಿ, ಕೇವಲ ಕೃಪಾವಿಷ್ಟನಾಗಿ, ಅಲ್ಲಿಯೇ ಬಹಳಹೊತ್ತು ಇದ್ದು, ಪ್ರಪಂಚದ ಪೂರ್ವೋತ್ತರವನ್ನು ಚೆನ್ನಾಗಿ ಬಲ್ಲವನಾದುದರಿಂದ ದೈವವಿಲಾಸವನ್ನು ಪರ್ಯಾಲೋಚಿಸುತ, ಮತ್ತೆ ಊರಿಗೆ ಬಂದು ಪಟ್ಟಣಿಗರಿಂದ ಸ್ತುತಿಸಲ್ಪಡುತ ಅರಮನೆಯನ್ನು ಪ್ರವೇಶಿಸಿದನು ||೬-೭

ಪ್ರಾತಃಕಾಲ ಅರಮನೆಯ ಸಭಾಮಂಟಪದಲ್ಲಿ ಆತ್ಯಾಶ್ಚರ್ಯಸಮನ್ವಿತನಾದ ಆ ರಾಜನು 'ಮಹರ್ಷಿಗಳೆ! ಇದೇನು? ಈ ಸ್ವಪ್ನವು ಪ್ರತ್ಯಕ್ಷವಾಗಿ ಬಿಟ್ಟಿತಲ್ಲ! ಇದು ಹೇಗೆ?' ಎಂದು ನನ್ನನ್ನು (ವಸಿಷ್ಠರನ್ನು) ಪ್ರಶ್ನೆಮಾಡಿದನು ||೮||

ಅನಂತರ, ನಾನು ಅವನ ಆ ಪ್ರಶ್ನೆಗೆ ಯಥಾವತ್ತಾಗಿ ಸಮಾಧಾನಹೇಳಿ, ವಾಯುವು ಅಂತರಿಕ್ಷ ಪ್ರದೇಶದಿಂದ ಮೇಘವನ್ನು ಓಡಿಸಿಬಿಡುವಂತೆ, ಆ ಲವಣರಾಜನ ಹೃದಯದ ದೆಸೆಯಿಂದ ಸಂಶಯವನ್ನು ಪರಿಹರಿಸಿಬಿಟ್ಟೆನು ||೯||

ಅಯ್ಯಾ! ರಾಮ! ಹೀಗೆ ಮಹತ್ತಾದ ಈ ಅವಿದ್ಯೆಯು, ಅತಿಶಯವಾಗಿ ಭ್ರಮೆಯುಂಟು ಮಾಡುತ, ಅಸತ್ತನ್ನು ಸತ್ತಾಗಿಯೂ—ಸತ್ತನ್ನು ಅಸತ್ತಾಗಿಯೂ ಒಂದು ನಿಮಿಷದೊಳಗಾಗಿ ಮಾಡಿಬಿಡುವುದು ||೧೦||

ಶ್ರೀರಾಮನು ಪ್ರಶ್ನೆಮಾಡುವನು:—

ಎಲೈ ಬ್ರಾಹ್ಮಣೋತ್ತಮರೆ! ಈ ರೀತಿಯಾಗಿ ಸ್ವಪ್ನವು ಸತ್ಯವಾದ ಬಗೆಯಾವುದು? ದಯವಿಟ್ಟು ಅಪ್ಪಣೆಯಾಗಬೇಕು. ಎಲೈ ಪೂಜ್ಯರೆ! ಈ ಸಂಶಯವು ನನ್ನ ಮನಸ್ಸಿನಿಂದ ಇನ್ನೂ ತೊಲಗದಿರುವುದು ||೧೧||

ಶ್ರೀ ವಸಿಷ್ಠ ಉವಾಚ.

ಸರ್ವಮೇತದವಿದ್ಯಾಯಾಂ ಸಮ್ಭವತ್ಯೇವ ರಾಘವ ।
ಘಟೇಷು ಪಟತಾ ದೃಷ್ಟಾ ಸ್ವಪ್ನಸಮ್ಭ್ರಮಿತಾದಿಷು ॥೧೨॥
ದೂರಂ ನಿಕಟವದ್ಭಾತಿ ಮುಕುರೇನ್ತರಿವಾಚಲಃ ।
ಚಿರಂ ಶೀಘ್ರತ್ವಮಾಯಾತಿ ಪುನಃ ಶ್ರೇಷ್ಠೇವ ಯಾಮಿನೀ ॥೧೩॥
ಅಸಮ್ಭವಚ್ಚ ಭವತಿ ಸ್ವಪ್ನೇ ಸ್ವಮರಣಂ ಯಥಾ ।
ಅಸಚ್ಚ ಸದಿವಾಭಾತಿ ಸ್ವಪ್ನೇಷ್ವಿವ ನಭೋಗತಿಃ ॥೧೪॥
ಸುಸ್ಥಿತಂ ಸುಷ್ಠು ಚಲತಿ ಭ್ರಮೇ ಭೂಪರಿವರ್ತನಮ್ ।
ಅಚಲಂ ಚಲತಾಮೇತಿ ಮದವಿಕ್ಷುಬ್ಧಚಿತ್ತವತ್ ॥೧೫॥
ವಾಸನಾವಲಿತಂ ಚೇತೋ ಯದ್ಯಥಾ ಭಾವಯತ್ಯಲಮ್ ।
ತತ್ ತಥಾನುಭವತ್ಯಾಶು ನ ಸದಸ್ತಿ ನ ವಾಪ್ಯಸತ್ ॥೧೬॥

ಶ್ರೀವಸಿಷ್ಠರು ಉತ್ತರಹೇಳುವರು:—

ಅಯ್ಯಾ ರಾಘವ! ನಾನು ಹೇಳಿದುದು ಅಸಂಭವವೆಂದು ತಿಳಿಯಬೇಡ. ಅವಿದ್ಯೆಯಲ್ಲಿ ಇದೆಲ್ಲವೂ ಸಂಭವವೇ ಆಗಿರುವುದು. ಸ್ವಪ್ನ ಚಿತ್ತಭ್ರಮಾದಿಕಾಲಗಳಲ್ಲಿ, ಘಟವನ್ನು ನೋಡಿ ಪಟವೆಂದೂ ಪಟವನ್ನು ನೋಡಿ ಘಟವೆಂದೂ ತಿಳಿದುಕೊಳ್ಳುವುದಿಲ್ಲವೆ! ॥೧೨॥

ಅವಿದ್ಯಾಶಕ್ತಿಯಿಂದ, ದೂರವಾದ ಪದಾರ್ಥವೂ ಹತ್ತಿರವಿರುವಂತೆಯೇ ತೋರುವುದು. ಬೆಟ್ಟದ ಎದುರಿಗೆ ಕನ್ನಡಿಯನ್ನಿಟ್ಟರೆ, ಆ ಬೆಟ್ಟವು ಎಷ್ಟುದೂರದಲ್ಲಿದ್ದರೂ ಕನ್ನಡಿಯೊಳಗೆ ಹತ್ತಿರದಲ್ಲಿಯೇ ಕಾಣುವದಲ್ಲವೆ! ಅತಿ ದೀರ್ಘವಾದ ಕಾಲವು ಶೀಘ್ರವಾಗಿಬಿಡುವುದು. ಒಂದು ರಾತ್ರಿಯಲ್ಲಿ ಚೆನ್ನಾಗಿ ನಿದ್ರಾಸುಖವನ್ನನುಭವಿಸಿದವನು, ಆ ರಾತ್ರಿಯು ಕಳೆದು ಹೋಯ್ತೆಂದು ತಿಳಿದುಕೊಳ್ಳುವನಲ್ಲವೆ! ॥೧೩॥

ಈ ಅವಿದ್ಯಾಶಕ್ತಿಯಿಂದ, ಪ್ರಪಂಚದಲ್ಲಿ ಅಸಂಭವವಾದುದೂ ಸಂಭವವಾದಂತೆ ತೋರುವುದು. ಸಪ್ನದಲ್ಲಿ ತನ್ನ ಮರಣವನ್ನು ತಾನೇ ನೋಡುವುದೇ ಇದಕ್ಕೆ ದೃಷ್ಟಾಂತವು. ಅಸತ್ಯವೂ ಸತ್ಯದಂತೆ ಕಾಣುವುದು. ಆಕಾಶದಲ್ಲಿ ಸಂಚರಿಸಿದಂತೆ ಸ್ವಪ್ನದಲ್ಲಿ ನೋಡುವುದೇ ಇದಕ್ಕೆ ನಿದರ್ಶನವು ॥೧೪॥

ಚೆನ್ನಾಗಿ ಸ್ಥಿರವಾಗಿರತಕ್ಕುದೂ ಈ ಅವಿದ್ಯೆಯಿಂದ ಸಂಪೂರ್ಣವಾಗಿ ಚಲಿಸಿಬಿಡುವುದು; ಮನುಷ್ಯನು ಗರಗರನೆ ಸುತ್ತಿದಾಗ ಅವನ ಸುತ್ತಲೂ ಇರುವ ಭೂಮಿಯು ಸುತ್ತಿದಂತೆ ಕಾಣುವುದೇ ಇದಕ್ಕೆ ನಿದರ್ಶನವು. ಸುತರಾಂ ಅಚಲವಾಗಿರತಕ್ಕುದೂ ಚಂಚಲವಾಗಿ ಕಾಣುವುದು; ಮದ್ಯದ ಮದವೇರಿದವನ ಮನಸ್ಸಿಗೆ ಪದಾರ್ಥಗಳೆಲ್ಲವೂ ಚಲಿಸುತಿರುವಂತೆಯೇ ಕಾಣುವುದಲ್ಲವೆ? ॥೧೫॥

ಮುಖ್ಯವೇನೆಂದರೆ,—ವಾಸನಾಕ್ರಾಂತವಾದ ಚಿತ್ತವು, ಯಾವುದನ್ನ ಹೇಗೆ ಚೆನ್ನಾಗಿ ಭಾವನೆ ಮಾಡುತ್ತದೆಯೋ, ಅದನ್ನು ಅರೀತಿಯಾಗಿಯೇ ತಟ್ಟನೆ ಅನುಭವಗೋಚರಮಾಡಿಕೊಳ್ಳುವುದು. ಇಷ್ಟೇಹೊರತು, ಪ್ರಾಪಂಚಿಕವಾಗಿ ಸತ್ತು ಅಸತ್ತು ಯಾವುದೊಂದೂ ಇಲ್ಲ ॥೧೬॥

ಯದೈವಾಭ್ಯುದಿತಾಽವಿದ್ಯಾ ತ್ವಹನ್ತ್ವಾದಿಮಯೀ ಮುಧಾ |
ತದೈವಾನಾದಿಮಧ್ಯಾನ್ತಾ ಭ್ರಮಸ್ಯಾನನ್ತತೋದಿತಾ ||೧೭||
ಪ್ರತಿಭಾಸವಶಾದೇವ ಸರ್ವೋ ವಿಪರಿವರ್ತತೇ |
ಕ್ಷಣಃ ಕಲ್ಪತ್ವಮಾಯಾತಿ ಕಲ್ಪಶ್ಚ ಭವತಿ ಕ್ಷಣಃ ||೧೮||
ವಿಪರ್ಯಸ್ತಮತಿರ್ಜನ್ತುಃ ಪಶ್ಯತ್ಯಾತ್ಮಾನಮೇಡಕಮ್ |
ಬಿಭರ್ತಿ ಸಿಂಹತಾಮೇಡೋ ವಾಸನಾವಶತಃ ಸ್ವಯಮ್ ||೧೯||
ವಿಷಮಭ್ರಮದಾಽವಿದ್ಯಾ ಮೋಹಾಹನ್ತಾದಯಃ ಸಮಾಃ |
ಸರ್ವೇ ಚಿತ್ತವಿಪರ್ಯಾಸಫಲಸಮ್ಪತ್ತಿಹೇತುತಃ ||೨೦||
ಕಾಕತಾಲೀಯವಚ್ಚೇತೋ ವಾಸನಾವಶತಃ ಸ್ವತಃ |
ಸಂವದನ್ತಿ ಮಹಾರಮ್ಭಾಃ ವ್ಯವಹಾರಾಃ ಪರಸ್ಪರಮ್ ||೨೧||
ವೃತ್ತಂ ಪ್ರಾಕ್ ಪಕ್ಕಣೇ ರಾಜ್ಞಃ ಕಸ್ಯಚಿಲ್ಲವಣಸ್ಯ ಯತ್ |
ಪ್ರತಿಭಾತಂ ತದೇತಸ್ಯ ಸದ್ವಾಽಸದ್ವಾ ಮನೋಗತಮ್ ||೨೨||
ವಿಸ್ಮರತ್ಯಪಿ ವಿಸ್ತೀರ್ಣಾಂ ಕೃತಾಂ ಚೇತಃ ಕ್ರಿಯಾಂ ಯಥಾ |
ತಥಾ ಕೃತಾಮಪ್ಯಕೃತಾಮಿತಿ ಸ್ಮರತಿ ನಿಶ್ಚಿತಮ್ ||೨೩||

ಅಹಂಕಾರ ಮುಂತಾದ ಈ ವ್ಯರ್ಥವಾದ ಅವಿದ್ಯೆಯಾವಾಗ ಉದಯಿಸಿತೋ, ಆಗಲೇ ಆದಿಮಧ್ಯಾಂತಶೂನ್ಯವಾದ ಅಸಂಖ್ಯಾಕವಾದ ಭ್ರಮೆಗಳು ಉದಯಿಸಿದುವೆಂದು ತಿಳಿಯಬೇಕು॥

ಹೀಗೆ ಅವರವರ ಪ್ರತಿಭಾಸಶಕ್ತಿಯಿಂದಲೇ ಸಮಸ್ತವೂ ಸುತ್ತುತ್ತಿರುವುದು. ಹೇಗೆಂದರೆ,—ಕ್ಷಣಕಾಲವೇ ಒಂದು ಸಮಯವಿಶೇಷದಲ್ಲಿ ಕಲ್ಪವಾಗುವುದು. ಕಲ್ಪವೂ ಒಂದು ಸಮಯದಲ್ಲಿ ಕ್ಷಣವಾಗುವುದು ॥೧೮॥

ಬುದ್ಧಿವ್ಯತ್ಯಾಸಹೊಂದಿದ ಪ್ರಾಣಿಯು, ತಾನೇ ತನ್ನನ್ನು ಮೇಷವನ್ನಾಗಿ ತಿಳಿದುಕೊಳ್ಳುವನು. ಮೇಷ(ಟಗರು)ವೂ ಕೂಡ, ವಾಸನಾವಶದಿಂದ ಸಿಂಹವಾಗಿಬಿಡುವುದು ॥೧೯॥

ಅವಿದ್ಯೆಯೆಂಬುದು ಪುರುಷನಿಗೆ ಈರೀತಿಯಾಗಿ ಅತಿ ವಿಷಮವಾದ ಭ್ರಮವನ್ನುಂಟುಮಾಡತಕ್ಕುದೆಂದು ಸ್ಪಷ್ಟವಾಗಿರುವುದು. ಈ ಅವಿದ್ಯೆ ಮೋಹ ಅಹಂಕಾರ ಮುಂತಾದುವುಗಳೆಲ್ಲವೂ, ಚಿತ್ತವಿಪರ್ಯಾಸಫಲರೂಪಗಳೇ ಆಗಿರುವುದರಿಂದ, ಇವೆಲ್ಲವೂ ಸಮಾನಗಳೇಯೆಂದು ತಿಳಿಯಬೇಕು ॥೨೦॥

ಹೀಗೆ ಚಿತ್ತವಾಸನೆಯಿಂದಲೇ, ದೊಡ್ಡದೊಡ್ಡ ಪ್ರಪಂಚವ್ಯವಹಾರಗಳು ಒಂದಕ್ಕೊಂದು ಹೋಲುವಂತೆ ಕಾಣುವುವು ॥೨೧॥

ನಾನು ಹೇಳಿದ ಲವಣೋಪಾಖ್ಯಾನದಲ್ಲಿಯೂ ಹೀಗೆಯೇ ಇರುವುದು. ಎಲ್ಲಿಯೋ ಒಂದು ಬೇಡರ ಊರಿನಲ್ಲಿ ನಡೆದ ಚಂಡಾಲೀವಿವಾಹಾದಿಗಳು, ಆ ಲವಣರಾಜನ ಹೃದಯದಲ್ಲಿ ವಾಸನಾರೂಪವಾಗಿದ್ದುವು. ಅವು ಸತ್ಯವಾಗಲಿ—ಅಥವಾ ಅಸತ್ಯವಾಗಲಿ—ಆಗ ಅವನಿಗೆ ಪ್ರತಿಭಾಸವಶದಿಂದ ಅನುಭವಗೋಚರವಾದುವು ॥೨೨॥

ನಮ್ಮ ಮನಸ್ಸು, ಹಿಂದೆ ಮಾಡಿದ ಒಂದು ದೊಡ್ಡ ಕೆಲಸವನ್ನೂ ಮರೆತುಬಿಡುವುದಲ್ಲವೆ! ಇದರಂತೆಯೇ, ತಾನು ಮಾಡದಿರುವುದನ್ನೂ ಮಾಡಿರುವೆನೆಂದು ನಿಶ್ಚಯಮಾಡಿಕೊಳುವುದು ॥೨೩

ತಥಾ ನ ಭುಕ್ತವಾನಸ್ಮಿ ಭುಕ್ತವಾನಿತಿ ಚೇತಸಿ ।
ಸ್ವಪ್ನೇ ದೇಶಾನ್ತರಗಮೋ ಪ್ರಾಕೃತೋಽಪ್ಯವಬುಧ್ಯತೇ ॥೨೪॥
ವಿನ್ಧ್ಯಪುಲ್ಕಸಸುಗ್ರಾಮೇ ವ್ಯವಹಾರೋಽಯಮೀದೃಶಃ ।
ಪ್ರತಿಭಾಸಾಗತಸ್ತಸ್ಯ ಸ್ವಪ್ನೇ ಪೂರ್ವಕಥಾ ಯಥಾ ॥೨೫॥
ಅಥವಾ ಲವಣೇನಾಶು ದೃಷ್ಟೋ ಯಃ ಸ್ವಪ್ನವಿಭ್ರಮಃ ।
ಸ ಏವ ಸಂವಿದಂ ಪ್ರಾಪ್ತೋ ವಿನ್ಧ್ಯಪುಲ್ಕಸಚೇತಸಿ ॥೨೬॥
ಲಾವಣೀ ಪ್ರತಿಭಾ ರೂಢಾ ವಿನ್ಧ್ಯಪುಲ್ಕಸಚೇತಸಿ ।
ವಿನ್ಧ್ಯಪುಲ್ಕಸಸಂವಿದ್ವಾ ರೂಢಾ ಪಾರ್ಥಿವಚೇತಸಿ ॥೨೭॥
ಯಥಾ ಬಹೂನಾಂ ಸದೃಶಂ ವಚನಂ ನಾಮ ಮಾನಸಮ್ ।
ತಥಾ ಸ್ವಪ್ನೇಽಪಿ ಭವತಿ ಕಾಲೋ ದೇಶಃ ಕ್ರಿಯಾಪಿ ಚ ॥೨೮॥
ವ್ಯವಹಾರಗತೇಸ್ತಸ್ಯಾಃ ಸತ್ತಾಸ್ತಿ ಪ್ರತಿಭಾಸತಃ ।
ಸತ್ತಾ ಸರ್ವಪದಾರ್ಥಾನಾಂ ನಾನ್ಯಾ ಸಂವೇದನಾದೃತೇ ॥೨೯॥

ಇದಕ್ಕೊಂದುದಾಹರಣೆಯನ್ನು ಹೇಳುವೆನು,—ಒಬ್ಬ ಪುರುಷನು, ತಾನು ಊಟಮಾಡದಿದ್ದರೂ, ಸ್ವಪ್ನದಲ್ಲಿ, ಮತ್ತೊಂದುಕಡೆಗೆ ಹೋಗಿ ಊಟಮಾಡಿದೆನೆಂದು ತನ್ನ ಮನಸ್ಸಿನಲ್ಲಿ ನಿಶ್ಚಯಮಾಡಿಕೊಳ್ಳುವನಲ್ಲವೆ! ಇದು ಸಾಮಾನ್ಯರಾದವರಿಗೂ ಗೊತ್ತೇಯಿರುವುದು ॥೨೪॥

ವಿಂಧ್ಯಪರ್ವತದ ಹತ್ತಿರವಿದ್ದ ಆ ಗ್ರಾಮದಲ್ಲಿಯೂ, ಇದೇರೀತಿಯಾದ ಒಂದು ಸಂದರ್ಭವು ಹಿಂದೆ ಯಾವಾಗಲೋ ನಡೆದಿದ್ದು, ಅದು ಆ ಲವಣನ ಚಿತ್ತದಲ್ಲಿ ವಾಸನಾರೂಪವಾಗಿ ನೆಲೆಸಿದ್ದು, ಸ್ವಪ್ನದಲ್ಲಿ ಹಿಂದಿನ ಕಥೆಯು ಸ್ಮೃತಿಗೆ ಬರುವಂತೆ, ಆಗ ಅವನ ಸ್ಮೃತಿಪಥಕ್ಕೆ ಬಂದಿತು॥

ಅಥವಾ, ಲವಣರಾಜನಿಂದ ಬಲುಬೇಗನೆ ನೋಡಲ್ಪಟ್ಟ ಸ್ವಪ್ನಸಂಭ್ರಮವಾವುದುಂಟೋ, ಅದೆಯೇ ವಿಂಧ್ಯಪರ್ವತದ ಗ್ರಾಮದಲ್ಲಿದ್ದ ಚಂಡಾಲನ ಚಿತ್ತದಲ್ಲಿ ಪ್ರತಿಬಿಂಬಿಸಿತೆಂದು ಬೇಕಾದರೂ ತಿಳಿಯಬಹುದು ॥೨೬॥

ಅಂತು, ಲವಣನೆಂಬ ಪ್ರತಿಭೆಯು ವಿಂಧ್ಯಗ್ರಾಮದ ಚಂಡಾಲನ ಬುದ್ಧಿಯಲ್ಲಿ ಆರೂಢವಾಯ್ತೆಂದಾದರೂ, ಅಥವಾ ವಿಂಧ್ಯಗ್ರಾಮದ ಚಂಡಾಲನೆಂಬ ಪ್ರತಿಭೆಯು ಲವಣರಾಜನ ಬುದ್ಧಿಯಲ್ಲಿ ಆರೂಢವಾಯ್ತೆಂದಾದರೂ ನಿಶ್ಚಯಿಸಬೇಕು ॥೨೭॥

ಹೀಗೆ ಪ್ರತಿಭೆಯೂ ಪ್ರತಿಭಾವಿಷಯವೂ ಹೋಲಿಕೆಹೊಂದುವ ವಿಷಯದಲ್ಲಿ ದೃಷ್ಟಾಂತವನ್ನು ಕೇಳುವನಾಗು,—ಪ್ರಪಂಚದಲ್ಲಿ, ಅನೇಕಪುರುಷರ ವಚನವು ಪರಸ್ಪರ ಸದೃಶವಾಗಿರುವುದಲ್ಲವೆ! (ಎಂದರೆ–ಒಬ್ಬ ಹೇಳಿದಂತೆಯೇ ಮತ್ತೊಬ್ಬನೂ ಹೇಳುವನಲ್ಲವೆ!) ಮತ್ತು, ಒಬ್ಬನ ಮನಸ್ಸಿನಂತೆಯೇ ಮತ್ತೊಬ್ಬನ ಮನಸ್ಸೂ ಇರುವುದಲ್ಲವೆ! ಹಾಗೆಯೇ ಸ್ವಪ್ನದಲ್ಲಿಯೂ ಕಾಲದೇಶವ್ಯವಹಾರಗಳು ಪರಸ್ಪರವಾಗಿ ಹೋಲಿಕೆಯನ್ನು ಹೊಂದುವುವಲ್ಲವೆ! ಹೀಗೆಯೇ, ಲವಣನ ಪ್ರತಿಭೆಗೂ ಚಂಡಾಲನ ಪ್ರತಿಭೆಗೂ ಸಾದೃಶ್ಯವುಂಟಾಗಿರುವುದೆಂದು ತಿಳಿ ॥೨೮॥

'ಹಾಗಾದರೆ, ಈ ವ್ಯವಹಾರಗತಿಯೆಲ್ಲವೂ ಸುತರಾಂ ಅಸತ್ಯವೇಯೋ?' ಎಂದು ಕೇಳಿದರೆ,—ಈ ವ್ಯವಹಾರಗತಿಗೆಲ್ಲ ಪ್ರಾತಿಭಾಸಿಕಸತ್ತೆಯಿರುವುದು. ವ್ಯಾವಹಾರಿಕವಾದ ಸಕಲ ಪದಾರ್ಥಗಳಿಗೂ, ಅಧಿಷ್ಠಾನಚೈತನ್ಯಸತ್ತೆಯಿಂದಲೇ ಸತ್ತೆಯಿರುವುದಲ್ಲದೆ, ಸ್ವತಂತ್ರವಾಗಿ ಸತ್ತೆಯಿಲ್ಲವೆಂದು ತಿಳಿಯಬೇಕು ॥೨೯॥

ಸಂವೇದನೇತಡಾ ಭಾತಿ ವೀಚಿರ್ವಾ ಜಲಸಜ್ಗತಿಃ ।
ಭೂತಭವ್ಯಭವಿಷ್ಯಸ್ಥಾ ತರುಬೀಜೇ ತರುರ್ಯಥಾ ॥೩೦॥
ತಸ್ಯಾಃ ಸತ್ತ್ವಮಸತ್ತ್ವಂ ಚ ನ ಸನ್ನಾಸದಿತಿ ಸ್ಥಿತಮ್ ।
ಸತ್ ಸದೇವ ಹಿ ಸಂವಿತ್ತೇಃ ಅಸಂವಿತ್ತೇರಸನ್ಮಯಮ್ ॥೩೧॥
ನಾವಿದ್ಯಾ ವಿದ್ಯತೇ ಕಿಞ್ಚಿತ್ ತೈಲಾದಿ ಸಿಕತಾಸ್ವಿವ ।
ಹೇಮ್ನಃ ಕಿಂ ಕಟಕಾದ್ಯನ್ಯತ್ ಪದಂ ಸ್ಯಾದ್ಧೇಮತಾಂ ವಿನಾ ॥೩೨॥
ಅವಿದ್ಯಯಾತ್ಮತತ್ತ್ವಸ್ಯ ಸಂಬನ್ಧೋ ನೋಪಪದ್ಯತೇ ।
ಸಂಬನ್ಧಃ ಸದೃಶಾನಾಂ ಚ ಯಃ ಸ್ಫುಟಃ ಸ್ವಾನುಭೂತಿತಃ ॥೩೩॥
ಜತುಕಾಷ್ಠಾದಿಸಂಬನ್ಧೋ ಯಃ ಸಮಾಸಮಯೋಗತಃ ।
ನಾನ್ಯೋನ್ಯಾನುಭವಾಯಾಸೌ ತದೇಕಸ್ಪನ್ದಮಾತ್ರಕಮ್ ॥೩೪॥
ಪರಮಾರ್ಥಮಯಂ ಸರ್ವಂ ಯಥಾ ತೇನೋಪಲಾದಯಃ ।

ಹೀಗೆ, ಜಲಸಮುದಾಯವು ವೀಚಿರೂಪವಾಗಿ ಕಾಣುವಂತೆಯೂ, ಬೀಜದಲ್ಲಿರುವ ಮರವು ಪೃಥಕ್ಕಾಗಿ ಕಾಣುವಂತೆಯೂ, ಅಧಿಷ್ಠಾನಚೈತನ್ಯಸತ್ತೆಯೇ, ಭೂತಭವಿಷ್ಯದ್ವರ್ತಮಾನಕಾಲಿಕವಾದ ಪ್ರಪಂಚವ್ಯವಹಾರರೂಪವಾಗಿ ಪೃಥಕ್ಕಾಗಿರುವಂತೆ ತೋರುವುದು ॥೩೦॥

ಅಧಿಷ್ಠಾನಚೈತನ್ಯಸತ್ತೆಗಿಂತ ಭಿನ್ನವಾದ ಸತ್ತೆಗೆ, ಸ್ವತಃ ಸದ್ಭಾವವೂ ಇಲ್ಲ; ಅಸದ್ಭಾವವೂ ಇಲ್ಲ. ಮತ್ತೇನೆಂದರೆ,—ಸತ್ಯಪದಾರ್ಥವೇ, ಸತ್ತೆಂದು ತಿಳಿದುಕೊಳ್ಳತಕ್ಕವರಿಗೆ ಸತ್ತಾಗಿಯೂ, ಅಸತ್ತೆಂದು ತಿಳಿದುಕೊಳ್ಳತಕ್ಕವರಿಗೆ ಅಸತ್ತಾಗಿಯೂ ಇರುವುದು ॥೩೧॥

ಮಳಲಿನಲ್ಲಿ ಎಣ್ಣೆ ಮುಂತಾದುದಾವುದೂ ಹೇಗೆ ಇಲ್ಲವೋ, ಹಾಗೆ ಅವಿದ್ಯೆಯೆಂಬುದೂ ಸುತರಾಂ ಇಲ್ಲವೇ ಇಲ್ಲ. ಸುವರ್ಣದಲ್ಲಿ ಸುವರ್ಣತ್ವವನ್ನು ಬಿಟ್ಟು ಕಟಕತ್ವ ಮುಂತಾದ ಇತರ ಗುಣವೆಂದಿಗಾದರೂ ಸತ್ಯವಾಗುವುದೆ? ॥೩೨॥

'ಅವಿದ್ಯೆಯು ವಾಸ್ತವ್ಯವಾದ ಬ್ರಹ್ಮಪದಾರ್ಥದ ಸಂಬಂಧವುಳ್ಳುದಾಗಿರುವುದರಿಂದ, ಇದೂ ವಾಸ್ತವ್ಯವೇ ಏಕಾಗಲಾರದು?' ಎಂದು ಕೇಳಿದರೆ,—ಆತ್ಮಪದಾರ್ಥಕ್ಕೆ ಅವಿದ್ಯೆಯೊಡನೆ ಸಂಬಂಧವೇ ಉಪಪನ್ನವಾಗುವುದಿಲ್ಲ. ಪ್ರಪಂಚದಲ್ಲಿ, ಸಂಬಂಧವೆಂಬುದು ಪರಸ್ಪರ ಸಮಾನವಾದ ಪದಾರ್ಥಗಳಿಗೇ ಉಂಟಾಗುವುದೆಂದು ಸರ್ವಾನುಭವಸಿದ್ಧವಾಗಿರುವುದು ॥೩೩॥

ಈ ವಿಷಯದಲ್ಲಿ ಒಂದುವಿಧವಾಗಿ ಶಂಕೆಮಾಡಬಹುದು:—ದ್ರವಪದಾರ್ಥವಾದ ಅರಗಿಗೂ, ಅದ್ರವಪದಾರ್ಥವಾದ ಕಡ್ಡಿಗೂ ಪರಸ್ಪರಸಂಬಂಧವುಂಟಾಗುವುದಲ್ಲವೆ! ಇದನ್ನು ನೋಡಿದರೆ, ಪರಸ್ಪರಸದೃಶಪದಾರ್ಥಗಳಿಗೇ ಸಂಬಂಧವಾಗಬೇಕೆಂಬ ನಿಯಮವು ನ್ಯಾಯ್ಯವಲ್ಲವೆಂದು ಹೇಳಬೇಕಾಗುವುದಲ್ಲವೆ! ಆದರೆ, ಈ ನಿದರ್ಶನದಿಂದ ಅಸದೃಶಪದಾರ್ಥಗಳಿಗೆ ಸಂಬಂಧವಾಗಬಹುದೆಂದು ಸಾಧಿಸುವುದಕ್ಕಾಗಲಾರದು. ಏಕೆಂದರೆ,—ಇವೆರಡೂ ಕೇವಲವಾಗಿ ಅವಿದ್ಯಾವಿಲಾಸರೂಪಗಳಾದಕಾರಣ, ಎರಡಕ್ಕೂ ಪರಸ್ಪರ ಸಾದೃಶ್ಯವಿಲ್ಲವೆಂದು ಹೇಳುವುದೇ ಸರಿಯಾಗುವುದಿಲ್ಲ ॥೩೪॥

ಅದು ಬಿಟ್ಟು-ಸಮಸ್ತವೂ ಕೇವಲ ಚಿನ್ಮಯವೆಂದೇ ಒಪ್ಪಿಕೊಳ್ಳುವಪಕ್ಷದಲ್ಲಿ, ಅಗ ತರು

ಚಿತಾ ಸಮಭಿಚೇತ್ಯನ್ತೇ ಸಂಬನ್ಧವಶತಃ ಸಮಾಃ ॥೩೫॥
ಯದಾ ಚಿನ್ಮಾತ್ರಸನ್ಮಾತ್ರಮಯಾಃ ಸರ್ವೇ ಜಗದ್ಗತಾಃ ।
ಭಾವಾಸ್ತದಾ ವಿಭಾನ್ತ್ಯೇತೇ ಮಿಥಃ ಸ್ವಾನುಭವಸ್ಥಿತೇಃ ॥೩೬॥
ನ ಸಮ್ಭವತಿ ಸಂಬನ್ಧೋ ವಿಷಮಾಣಾಂ ನಿರನ್ತರಃ ।
ನ ಪರಸ್ಪರಸಂಬನ್ಧಾತ್ ವಿನಾನುಭವನಂ ಮಿಥಃ ॥೩೭॥
ಸದೃಶೇ ಸದೃಶಂ ವಸ್ತು ಕ್ಷಣಾದ್ಗತ್ವೈಕತಾಮಲಮ್ ।
ರೂಪಮಾಸ್ಫುರಯತ್ಯೇಕಂ ಏಕತ್ವಾದೇವ ನಾನ್ಯಥಾ ॥೩೮॥
ಚಿಚ್ಚೇತ್ಯಮಿಳಿತಾ ದೃಶ್ಯರೂಪಯೋದೇತಿ ಚೇತನಃ ।
ನ ಚ ಚಿಜ್ಜಡಯೋರೈಕ್ಯಂ ವೈಲಕ್ಷಣ್ಯಾತ್ ಕ್ವಚಿದ್ಭವೇತ್ ॥೩೯॥
ಚಿಜ್ಜಡೌ ಚಿತ್ರವಿಕತ್ರ ನ ತೌ ಸಂಮಿಳತಃ ಕ್ವಚಿತ್ ।
ಚಿನ್ಮಯತ್ವಾಚ್ಚಿದಾಲಮ್ಭಃ ಚಿದಾಲಮ್ಭೇ ನ ವೇದನಮ್ ॥೪೦॥
ದಾರುಪಾಷಾಣಭೇದಾನಾಂ ನ ತು ಹ್ಯೇತೇ ಚಿದಾತ್ಮಕಾಃ ।

ಪಾಷಾಣಾದಿಗಳೆಲ್ಲವೂ ಸಮಾನವಾದುವುಗಳಾದಕಾರಣ, ಅವಕ್ಕೆ ಪರಸ್ಪರಸಂಬಂಧವುಪಪನ್ನವಾಗುವುದರಿಂದ, ಇವೆಲ್ಲವೂ ಚಿತ್ತಿನಿಂದ ಪ್ರಕಾಶಪಡಿಸಲ್ಪಡುವುವೆಂಬುದು ಸ್ಪಷ್ಟವಾಗುವುದು ॥

ಈ ಪ್ರಾಪಂಚಿಕಪದಾರ್ಥಗಳೆಲ್ಲವೂ ಯಾವಾಗ ಕೇವಲ ಸಚ್ಚಿನ್ಮಯಗಳೆಂದು ಸ್ಪಷ್ಟವಾಯ್ತೋ, ಆಗ ಇವು ಸ್ವಯಂಪ್ರಕಾಶಶಕ್ತಿಯಿಂದಲೇ ಪ್ರಕಾಶಿಸುವುವೆಂದು ದೃಢವಾಗುವುದು. ದೀಪವು ಪ್ರಕಾಶಿಸಬೇಕಾದರೆ, ಮತ್ತೊಂದು ದೀಪವು ಬೇಕಾಗಿಲ್ಲವಷ್ಟೆ! ॥೩೬॥

ಅಂತು, ಪರಸ್ಪರಸಾದೃಶ್ಯವಿಲ್ಲದ ಪದಾರ್ಥಗಳಿಗೆ ನಿರಂತರವಾದ ಸಂಬಂಧವೆಂದಿಗೂ ಆಗಲಾರದು; ಪರಸ್ಪರಸಂಬಂಧವಿದ್ದಹೊರತು, ಒಂದಕ್ಕೊಂದು ಅನುಭವಗೋಚರವಾಗುವುದೂ ಇಲ್ಲ ॥೩೭॥

ಹೇಗೆ ಸದೃಶವಾಗಿರುವ ವಸ್ತುವು ಸದೃಶವಾಗಿರುವ ವಸ್ತುವಿನಲ್ಲಿಯೇ ಚೆನ್ನಾಗಿ ಐಕ್ಯವನ್ನು ಹೊಂದಿ, ತನ್ಮೂಲಕವಾಗಿಯೇ ಒಂದು ರೂಪವನ್ನು ಪ್ರಕಾಶಪಡಿಸುವುದಲ್ಲದೆ, ಮತ್ತೆ ಬೇರೆಯಿಲ್ಲ ॥೩೮॥

ಚೈತನ್ಯವೇ-ಚಿತ್ತು ಚೇತ್ಯ ಚಿತಿಗಳೆಂಬ ತ್ರಿಪುಟೀರೂಪವಾಗಿ ಉದಯಿಸುವಂತೆ ಮೂಢರಿಗೆ ಅನುಭವವುಂಟಾಗುವುದಲ್ಲವೆ! ಇದು ಹೇಗೂ ಉಪಪಾದಿಸಲು ಶಕ್ಯವಲ್ಲ. ಚಿತ್ತಿಗೂ ಜಡಕ್ಕೂ ಅಭೇದಸಂಬಂಧವುಪಪನ್ನವಲ್ಲ. ಏಕೆಂದರೆ,—ಇವೆರಡಕ್ಕೂ ಪರಸ್ಪರ ವೈಲಕ್ಷಣ್ಯವಿರುವುದು ॥೩೯॥

ಚಿಜ್ಜಡಗಳಿಗೆ ಪರಸ್ಪರ ಭೇದಸಂಬಂಧವನ್ನೊಪ್ಪಿಕೊಂಡರೂ, ಪೂರ್ವೋಕ್ತವಾದ ಅನುಭವವು ಉಪಪಾದಿಸಲು ಸಾಧ್ಯವಲ್ಲ. ಪೂರ್ವೋಕ್ತವಾದ ತ್ರಿಪುಟೀರೂಪವಾದ ಚಿತ್ರದೊಳಗೆ, ಆ ಚಿಜ್ಜಡಗಳೆರಡೂ ಎಂದಿಗೂ ಒಟ್ಟಾಗಿ ಸೇರಲಾರವು. ವಸ್ತುತಃ ಎರಡೂ ಚಿನ್ಮಯಗಳೇ ಎಂದಿಟ್ಟುಕೊಂಡರೂ, ವೇದನಾಂಶವುಪಪನ್ನವಾಗುವುದಿಲ್ಲ ॥೪೦॥

‘ಜಡತ್ವರೂಪಗುಣದಲ್ಲಿ ಪರಸ್ಪರ ಸಾಮ್ಯವಿದ್ದರೂ-ದಾರುಪಾಷಾಣಮೃತ್ತುಗಳು ಒಂದು ಮನೆಯೊಳಗೆ ಬೇರೆಬೇರೆಯಾಗಿ ಹೇಗೆ ಸೇರಿಕೊಂಡಿರುವುವೋ, ಜಲಮಯತ್ವರೂಪಗುಣದಲ್ಲಿ

ಪದಾರ್ಥೋ ಹಿ ಪದಾರ್ಥೇನ ಪರಿಣಾಮ್ಯನುಭೂಯತೇ |
ಜಿಹ್ವಯೈವ ರಸಾಸ್ವಾದಃ ಸಜಾತೀಯಾಮಲೋದಯಃ ||೪೧||
ಐಕ್ಯಂ ಚ ವಿದ್ಧಿ ಸಂಬನ್ಧಂ ನಾಸ್ತ್ಯಸಾವಸಮಾನಯೋಃ |
ಜಡಚೇತನಯೋಸ್ತೇನ ನೋಪಲಾದಿ ಜಡಂ ಮತಮ್ ||೪೨||
ಚಿದೇವೋಪಲಕುಡ್ಯಾದಿ ರೂಪಿಣೀತಿ ಮಿತಾ ಚಿತಾ |
ಏಕೀಭಾವಂ ಗತಾ ದ್ರಷ್ಟೃದೃಶ್ಯಾದಿ ಕುರುತೇ ಭ್ರಮಮ್ ||೪೩||
ಕಾಷ್ಠೋಪಲಾದ್ಯಶೇಷಂ ಹಿ ಪರಮಾರ್ಥಮಯಂ ತತಃ |
ತದಾತ್ಮನಾ ತತ್ಸಂಬನ್ಧಂ ದೃಶ್ಯತ್ವೇನೋಪಲಭ್ಯತೇ ||೪೪||
ಸರ್ವಂ ಸರ್ವಪ್ರಕಾರಾಢ್ಯಂ ಅನನ್ತಮಿವ ಯತ್ ತತಃ |
ವಿಶ್ವಂ ಸನ್ಮಾತ್ರಮೇವೈತತ್ ವಿದ್ಧಿ ತತ್ತ್ವವಿದಾಂ ವರ ||೪೫||
ಅಸತ್ತಾತ್ಯಾಗನಿಷ್ಠೇನ ವಿಶ್ವಂ ಲಕ್ಷಶತಭ್ರಮೈಃ |
ಪೂರಿತಂ ಚಿಚ್ಚಮತ್ಕಾರೋ ನ ಚ ಕಿಞ್ಚಿನ ಪೂರಿತಮ್ ||೪೬||

ಪರಸ್ಪರ ಸಾಮ್ಯವಿದ್ದರೂ—ಜಿಹ್ವೆಗೂ ರಸಕ್ಕೂ ಹೇಗೆ ಸಂಯೋಗವುಂಟಾಗುವುದೋ, ಹಾಗೆ ಚಿತ್ತ್ವರೂಪಗುಣದಿಂದ ಸಾಮ್ಯವಿದ್ದರೂ—ದೃಕ್ಕು ದೃಶ್ಯದೊಡನೆ ಯೋಗವುಳ್ಳದಾಗಬಹುದಲ್ಲವೆ!' ಎಂದು ನೀನು ಶಂಕಿಸುವೆಯೋ?—ಹಾಗಾದರೆ ಕೇಳು :---ದಾರುಪಾಷಾಣಾದಿಜಡಪದಾರ್ಥಗಳು ಗೃಹಾದಿರೂಪವಾಗಿ ಪರಿಣಾಮಹೊಂದುವುವೆಂದು ಅನುಭವಗೋಚರವಾಗುವುವೇ ಹೊರತು, ಚಿತ್ಪದಾರ್ಥವಾರೀತಿಯಾಗುವುದಿಲ್ಲ. ಹಾಗೆಯೇ, ಜಿಹ್ವೆಯಿಂದುಂಟಾಗುವ ರಸಾಸ್ವಾದವೂ ಸಜಾತೀಯುವಾದ ಜಿಹ್ವಾರಸಗಳ ಸಂಯೋಗದಿಂದಲೇ ಉಂಟಾಗುವುದಲ್ಲವೆ! ॥೪೧॥

ಅಯ್ಯಾ! ರಾಘವ! ಇನ್ನೂ ಕೇಳುವನಾಗು. ಪರಸ್ಪರವಾಗಿ ಏಕೀಭಾವಕ್ಕೇ ಇಲ್ಲಿ ಸಂಬಂಧವೆಂದು ವ್ಯವಹಾರವೆಂಬುದಾಗಿ ತಿಳಿ. ಇಂತಹ ಸಂಬಂಧವು, ಪರಸ್ಪರ ಸಾದೃಶ್ಯವಿಲ್ಲದ ಚಿಜ್ಜಡಗಳಿಗೆಂದಿಗೂ ಇರುವುದಿಲ್ಲ. ಹೀಗಿರುವುದರಿಂದ, ಪಾಷಾಣಾದಿ ಪದಾರ್ಥಗಳು ಜಡವೆಂದು ಒಪ್ಪುವುದಕ್ಕಾಗಲಾರದು ॥೪೨॥

ಮತ್ತೇನೆಂದರೆ,—ಚೈತನ್ಯವೇ, ಕುಡ್ಯಪಾಷಾಣಾದಿ ರೂಪವಾಗಿರುವುದೆಂದು ನಿಶ್ಚಯಿಸಲ್ಪಡುವುದು. ಅದೆಯೇ, ಚಿತ್ತಿನಲ್ಲಿ ಐಕ್ಯಹೊಂದಿ, ದೃಷ್ಟೃದೃಶ್ಯ ಮುಂತಾದ ಭ್ರಮೆಯನ್ನುಂಟುಮಾಡುವುದು ॥೪೩॥

ಅದುಕಾರಣ, ಕಾಷ್ಠಪಾಷಾಣ ಮುಂತಾದ ಸಮಸ್ತವೂ ಕೇವಲ ಪರಮಾರ್ಥಮಯುವಾದುದೇಯೆ. ಅದರ ಸಂಬಂಧವೇ, ಈ ದಾರುಪಾಷಾಣಾದಿರೂಪವಾದ ದೃಶ್ಯರೂಪವಾಗಿ ಅನುಭವಗೋಚರವಾಗುವುದು ॥೪೪॥

ತತ್ವಜ್ಞವರ್ಯನಾದ ಎಲೈ ರಾಮನೆ! ಸರ್ವವಿಧವಾದ ಸರ್ವಪದಾರ್ಥವೂ ಅನಂತರೂಪವಾಗಿಯೇ ಇರುವುದರಿಂದ, ಈ ಸಮಸ್ತವಿಶ್ವವನ್ನೂ ಕೇವಲ ಸತ್ಪದಾರ್ಥವೆಂದೇ ನೀನು ತಿಳಿಯುವನಾಗು ॥೪೫॥

ಹೀಗೆ, ಮಿಥ್ಯಾತ್ವವನ್ನು ಪರಿಹರಿಸಿರುವ (ಪರಮಾರ್ಥಸತ್ಯವಾದ) ಚಿತ್ಪದಾರ್ಥದಿಂದಲೇ, ನಾನಾವಿಧಭ್ರಮರೂಪವಾಗಿ ಈ ವಿಶ್ವವು ಪರಿಪೂರಿತವಾಗಿರುವುದು. ಆದರೂ, ಈ ದೃಶ್ಯವೇ ಅಸತ್ಯವಾಗಿರುವಕಾರಣ, ಚಿತ್ತಿನಿಂದ ಯಾವುದೊಂದೂ ಪರಿಪೂರಿತವಾದಂತೆಯೇ ಅಲ್ಲ ॥ ೪೬॥

ಸಙ್ಕಲ್ಪನಾಗರಾಸ್ತ್ವಾಣಾಂ ಮಿಥಃ ಸ್ಪನ್ದನ್ತಿ ನೋ ಯಥಾ ।
ನ ದೇಶಕಾಲರೋಧಾಯ ತಥಾ ಸರ್ಗೇಽಪ್ಯಿತಿ ಸ್ಥಿತಿಃ ॥೪೭॥
ಭೇದಬೋಧೇ ಹಿ ಸರ್ಗಸ್ತ್ವಮಹನ್ತ್ವಾದಿಭ್ರಮೋದಯಃ ।
ಹೇಮಸಂವಿತ್ಪರಿತ್ಯಾಗೇ ಕಟಕಾದಿಭ್ರಮೋ ಯಥಾ ॥೪೮॥
ಕಟಕಾದಿಭ್ರಮೋ ಹೇಮ್ನಿ ದೇಶಾದ್ದೇಶಂ ಭವಾದ್ಭವಮ್ ।
ದೃಗ್ದರ್ಶನಪರಿತ್ಯಾಗೇ ನಾವಿದ್ಯಾಸ್ತಿ ಪೃಥಕ್ ಸದಾ ॥೪೯॥
ಕಟಕಾದಿಮಹಾಭೇದಂ ಏಕಂ ಹೇಮಯಥಾಽಮಲಮ್ ॥೫೦॥
ಬೋಧೈಕತ್ವಾದಯಂ ಸರ್ಗಃ ತದೇವಾಸನ್ನಯತ್ಯಲಮ್ ।
ಸೇನಾ ಮೃತ್ಸಂವಿದಾ ಚೇತ್ರಾ ಮೃನ್ಮಾತ್ರಮಿವ ಮೃಣ್ಮಯೀ ॥೫೧॥
ಜಲಮೇಕಂ ತರಙ್ಗಾದಿ ದಾರ್ವೇಕಂ ಸಾಲಭಞ್ಜಿಕಾ ।
ಮೃನ್ಮಾತ್ರಮೇಕಂ ಕುಮ್ಭಾದಿ ಬ್ರಹ್ಮೈಕಂ ತ್ರಿಜಗದ್ಭ್ರಮಃ ॥೫೨॥

ಸಂಕಲ್ಪದಲ್ಲಿ ಕಲ್ಪಿತವಾದ ನಗರದೊಳಗಿರುವ ಜನರು ಸಂಚಲಿಸುವುದಿಲ್ಲವಲ್ಲವೆ! ಈ ನಿಶ್ಚಲತೆಯು, ಪರಸ್ಪರ ಉಂಟಾಗುವುದಷ್ಟೆ! (ಒಂದು ಊರಿನಲ್ಲಿರುವವರು ಮತ್ತೊಬ್ಬರ ಸಂಕಲ್ಪದಲ್ಲಿಯೂ, ಈ ಊರಿನವರು ಅವರ ಸಂಕಲ್ಪದಲ್ಲಿಯೂ ಕಾಣಿಸಿಕೊಳ್ಳುವರೆಂದು ಭಾವವು.) ಈ ಸಂಕಲ್ಪಕಲ್ಪನೆಯು ಯಾವ ದೇಶಕಾಲನಿರೋಧವನ್ನೂ ಉಂಟುಮಾಡಲಾರದಲ್ಲವೆ! ಹೀಗೆಯೇ ಸೃಷ್ಟಿಯ ಸ್ಥಿತಿಯೂ ಇರುವುದೆಂದು ತಿಳಿಯಬೇಕು ॥೪೭॥

ಸುವರ್ಣಜ್ಞಾನವನ್ನು ಬಿಟ್ಟಕಾಲದಲ್ಲಿ ಕಟಕಾದಿಭ್ರಮೆಯು ಹೇಗೆ ಹುಟ್ಟುವುದೋ, ಹಾಗೆ-ಆತ್ಮಜ್ಞಾನವನ್ನು ಬಿಟ್ಟು ಭೇದಜ್ಞಾನವನ್ನು ಹೊಂದಿದಾಗ—ನಾನು ನೀನು ಮುಂತಾದ ಭ್ರಮೆಯುಂಟಾಗಿ ಸೃಷ್ಟಿಯೂ ಉಂಟಾಗುವುದು ॥೪೮॥

ಸುವರ್ಣದಲ್ಲುಂಟಾಗುವ ಕಟಕಾದಿಜ್ಞಾನವೆಲ್ಲವೂ ಕೇವಲ ಭ್ರಮರೂಪವಾದುದೇಯೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗತಕ್ಕುದೂ, ಒಂದು ಅವಸ್ಥೆಯಿಂದ ಮತ್ತೊಂದವಸ್ಥೆಯನ್ನು ಪಡೆಯುತಕ್ಕುದೂ, ಈ ಸುವರ್ಣವೇಯೆ. ಈರೀತಿಯಾಗಿ, ದೃಕ್ಕು ದರ್ಶನಗಳೆಂಬ ಭೇದಜ್ಞಾನವನ್ನು ಬಿಟ್ಟುಬಿಟ್ಟರೆ, ಯಾವಾಗಲೂ ಪ್ರತ್ಯೇಕವಾದ ಅವಿದ್ಯೆಯೆಂಬುದಿರುವುದೇ ಇಲ್ಲ ॥೪೯॥

ನಿರ್ಮಲವಾದ ಸುವರ್ಣವೊಂದೇ ಕಟಕ ಮುಂತಾದ ಅನೇಕಭೇದವುಳ್ಳುದಾಗಿ ಹೇಗೆ ಕಾಣುವುದೋ, ಹಾಗೆ—ಕೇವಲ ಬೋಧಮಾತ್ರ ಸ್ವರೂಪವಾಗಿರುವುದರಿಂದ—ಬ್ರಹ್ಮವೂ ಈ ನಾನಾಪ್ರಪಂಚರೂಪವಾಗಿ ಕಾಣುವುದು. ಮೃಣ್ಮಯವಾದ ಸೇನೆಯು, ಪ್ರಥಮತಃ ನಾನಾರೂಪವಾಗಿ ಕಾಣುತಿರುವುದು; ಬಳಿಕ, ಮೃತ್ತೆಂದು ತಿಳಿದುಕೊಂಡಾಗ, ಕೊನೆಗೆ ಮೃತ್ತೊಂದೇ ಕಾಣುವುದಲ್ಲವೆ! ॥೫೦—೫೧॥

ಜಲವೊಂದೇ—ತರಂಗ ವೀಚಿ ಫೇನ ಮುಂತಾದ ರೂಪವಾಗಿ ಹೇಗೆ ಕಾಣಿಸುವುದೋ, ಒಂದೇ ಮರವು—ನಾನಾವಿಧ ಸಾಲಭಂಜಿಕಾ(ಬೊಂಬೆ)ರೂಪವಾಗಿ ಹೇಗೆ ಕಾಣಿಸುವುದೋ, ಒಂದೇ ಮೃತ್ತು ಘಟ ಕುಂಭ ಮೊದಲಾದ ಅನೇಕ ರೂಪವುಳ್ಳುದಾಗಿ ಹೇಗೆ ಕಾಣಿಸುವುದೋ, ಹಾಗೆ ಪರಬ್ರಹ್ಮವೊಂದೇ ಈ ಲೋಕತ್ರಯರೂಪವಾಗಿ ಕಾಣಿಸುವುದು ॥೫೨॥

ಸಂಬನ್ಧೋ ದೃಶ್ಯದೃಷ್ಟೀನಾಂ ಮಧ್ಯೇ ದ್ರಷ್ಟುರ್ಹಿ ಯದ್ವಪುಃ ।
ದ್ರಷ್ಟೃದರ್ಶನದೃಶ್ಯಾದಿವರ್ಜಿತಂ ತದಿದಂ ಪರಮ್ ॥೫೩॥
ದೇಶಾದ್ದೇಶಂ ಗತೇ ಚಿತ್ತೇ ಮಧ್ಯೇ ಯಚ್ಚೇತಸೋ ವಪುಃ ।
ಅಜಾಡ್ಯಸಂವಿನ್ಮನನಂ ತನ್ಮಯೋ ಭವ ಸರ್ವದಾ ॥೫೪॥
ಅಜಾಗ್ರತ್ಸ್ವಪ್ನನಿದ್ರಸ್ಯ ಯತ್ ತೇ ರೂಪಂ ಸನಾತನಮ್ ।
ಅಚೇತನಂ ಚಾಜಡಂ ಚ ತನ್ಮಯೋ ಭವ ಸರ್ವದಾ ॥೫೫॥
ಜಡತಾಂ ವರ್ಜಯಿತ್ವೈಕಾಂ ಶಿಲಾಯಾ ಹೃದಯಂ ಹಿ ತತ್ ।
ಅಕ್ಷುಬ್ಧೋವಾಥವಾ ಕ್ಷುಬ್ಧಃ ತನ್ಮಯೋ ಭವ ಸರ್ವದಾ ॥೫೬॥
ಕಸ್ಯಚಿತ್ ಕಿಞ್ಚನಾಪೀಹ ನೋದೇತಿ ನ ವಿಲೀಯತೇ ।
ಅಕ್ಷುಬ್ಧೋವಾಥವಾ ಕ್ಷುಬ್ಧಃ ಸ್ವಸ್ಥಸ್ತಿಷ್ಠ ಯಥಾಸುಖಮ್ ॥೫೭॥
ನಾಭಿವಾಞ್ಛತಿ ನೋ ದ್ವೇಷ್ಟಿ ದೇಹೇ ಕಿಞ್ಚಿತ್ ಕ್ವಚಿತ್ ಪುಮಾನ್ ।
ಸ್ವಸ್ಥಸ್ತಿಷ್ಠ ನಿರಾಶಙ್ಕಂ ದೇಹವೃತ್ತಿಷು ಮಾಪತ ॥೫೮॥

ಕುಂಭಾದಿಗಳಲ್ಲಿ ಅನುಗತವಾಗಿ ಬಂದಿರುವ ಮೃತ್ತಿನಂತೆ, ದೃಶ್ಯದರ್ಶನಗಳಲ್ಲಿ ಅನುಗತವಾಗಿರುವ ದ್ರಷ್ಟೃರೂಪವೇ, ದೃಶ್ಯದರ್ಶನ ಮುಂತಾದ ಭೇದಶೂನ್ಯವಾಗಿರುವುದಾವುದುಂಟೋ ಅದೇ ಪರಬ್ರಹ್ಮಸ್ವರೂಪವು ॥೫೩॥

ಇದು ಹೀಗೆ ತ್ರಿಪುಟೀಶೂನ್ಯವಾಗಿರುವುದು ಯಾವಾಗ ಗೋಚರವಾಗುವುದೆಂದರೆ,— ಮನಸ್ಸು ಒಂದು ವಿಷಯವನ್ನು ಬಿಟ್ಟು ಮತ್ತೊಂದು ವಿಷಯವನ್ನು ಸೇರುವಾಗ, ಅವೆರಡಕ್ಕೂ ಮಧ್ಯಕಾಲದಲ್ಲಿ ಚಿತ್ತವು ಜಡತ್ವ ಮುಂತಾದುದೊಂದೂ ಇಲ್ಲದೆ ಕೇವಲ ನಿರ್ವಿಷಯವಾಗಿ ತ್ರಿಪುಟೀಶೂನ್ಯವಾಗಿರುವುದಲ್ಲವೆ! ಅಯ್ಯಾ ರಾಘವ! ನೀನು ಆ ಸ್ಥಿತಿಯನ್ನು ನಿರಂತರವಾಗಿರುವಂತೆ ಆಶ್ರಯಿಸುವನಾಗು ॥೫೪॥

ಜಾಗ್ರತ್ತು ಸ್ವಪ್ನ ನಿದ್ರೆಗಳೊಂದೂ ಇಲ್ಲದಿರುವ ಕಾಲದಲ್ಲಿ ಚೇತನವೂ ಜಡವೂ ಅಲ್ಲದ ಯಾವ ಸನಾತನ ರೂಪವು ನಿನಗಿರುವುದೋ, ಸಂತತವಾಗಿ ಅಂತಹ ರೂಪವುಳ್ಳವನಾಗಿರು ॥೫೫॥

ಜಾಡ್ಯಹೀನವಾದ ಶಿಲಾಹೃದಯವು ಹೇಗೆ ಘನವಾಗಿರುವುದೋ, ಹಾಗೆ ನೀನು—ಸಮಾಧಿಯಲ್ಲಿರುವಾಗಲೂ ಬಹಿರ್ಮುಖನಾಗಿರುವಾಗಲೂ ಚಿದೇಕರಸನಾಗಿ ಸ್ತಬ್ಧನಾಗಿರು ॥೫೬॥

'ಬಹಿರ್ಮುಖಸ್ಥಿತಿಯಲ್ಲಿರುವಾಗ ಚಿದೇಕರಸತ್ವವು ಹೇಗೆ ಸಿದ್ಧಿಸುವುದು?' ಎಂದರೆ,— ವ್ಯವಹಾರದಶೆಯಲ್ಲಿಯೂ ಪರಮಾರ್ಥವನ್ನೇ ಅನುಸರಿಸುತಿದ್ದರೆ, ಆ ಚಿದೇಕರಸತ್ವವು ಸಿದ್ಧಿಸುವುದರಲ್ಲಿ ಸಂಶಯವಿಲ್ಲ. ಈ ಪ್ರಪಂಚದಲ್ಲಿ, ಯಾವನಿಗೂ ಯಾವುದೂ ಉದಯಿಸುವುದೂ ಇಲ್ಲ; ಲಯಹೊಂದುವುದೂ ಇಲ್ಲ. ಅದುಕಾರಣ, ನೀನು—ಸಮಾಧಿನಿಷ್ಠನಾಗಿದ್ದರೂ ಬಹಿರ್ಮುಖನಾಗಿದ್ದರೂ ಯಥಾಸುಖವಾಗಿ ಸ್ವಸ್ಥನಾಗಿರು ॥೫೭॥

ಆತ್ಮನು, ಎಲ್ಲಿಯೂ ಯಾವಾಗಲೂ ದೇಹವಿಷಯವಾಗಿ ಯಾವುದನ್ನೂ ಅಪೇಕ್ಷಿಸುವುದೂ ಇಲ್ಲ; ದ್ವೇಷಿಸುವುದೂ ಇಲ್ಲ. ಅದುದರಿಂದ, ನೀನು ನಿಶ್ಶಂಕನಾಗಿ ಸ್ವಸ್ಥನಾಗಿರು. ದೇಹವೃತ್ತಿಗಳಲ್ಲಿ ಬೀಳಬೇಡ ॥೫೮॥

ಭವಿಷ್ಯದ್ಗ್ರಾಮಕಗ್ರಾಮ್ಯಕಾರ್ಯವ್ಯವಸಿತೋ ಯಥಾ |
ಚಿತ್ತವೃತ್ತಿಷು ಮಾತಿಷ್ಠ ತಥಾ ಸತ್ಯಾತ್ಮತಾಂ ಗತಃ ||೫೯||
ಯಥಾ ದೇಶಾನ್ತರನರೋ ಯಥಾ ಕಾಷ್ಠಂ ಯಥೋಪಲಃ |
ತಥೈವ ಪಶ್ಯ ಚಿತ್ತಂ ತ್ವಂ ಅಚೇತ್ತ್ಯೈವ ಯದಾತ್ಮನಾ ||೬೦||
ಯಥಾ ದೃಷದಿ ನಾಸ್ತ್ಯಮ್ಬು ಯಥಾಮ್ಬುಸ್ಯನಲಸ್ತಥಾ |
ಸ್ವಾತ್ಮನ್ಯೇವಾಸ್ತಿ ನೋ ಚಿತ್ತಂ ಪರಮಾತ್ಮನಿ ತತ್ ಕುತಃ ||೬೧||
ಪ್ರೇಕ್ಷ್ಯಮಾಣಂ ನ ಯತ್ ಕಿಞ್ಚಿತ್ ತೇನ ಯತ್ ಕ್ರಿಯತೇ ಕ್ವಚಿತ್ |
ಕೃತಂ ಭವತಿ ತನ್ನೇತಿ ಮತ್ವಾ ಚಿತ್ತಾತಿಗೋ ಭವೇತ್ ||೬೨||
ಅತ್ಯನ್ತಾನಾತ್ಮಭೂತಸ್ಯ ಯಶ್ಚಿತ್ತಸ್ಯಾನುವರ್ತತೇ |
ಪರ್ಯನ್ತವಾಸಿನಃ ಕಸ್ಮಾತ್ ನ ಮ್ಲೇಚ್ಛಸ್ಯಾನುವರ್ತತೇ ||೬೩||
ನಿರನ್ತರಮನಾದೃತ್ಯ ತ್ವಮಾರಾಚ್ಚಿತ್ತಪುಲ್ಕಸಮ್ |
ಸ್ವಸ್ಥಮಾಸ್ವ ನಿರಾಶಙ್ಕಂ ಪಙ್ಕೇನೇವ ಕೃತೋ ಜಡಃ ||೬೪||
ಚಿತ್ತಂ ನಾಸ್ತ್ಯೇವ ಮೇ ಭೂತಂ ಮೃತಮೇವಾದ್ಯವೇತಿ ವಾ |
ಭವ ನಿಶ್ಚಯವಾನ್ ಭೂತ್ವಾ ಶಿಲಾಪುರುಷನಿಶ್ಚಲಃ ||೬೫||

ವರ್ತಮಾನಕಾಲದಲ್ಲಿ ಉತ್ಪನ್ನವಾಗದೆ ಮುಂದೆ ಹುಟ್ಟತಕ್ಕುದಾಗಿರುವ ಗ್ರಾಮದಕಾರ್ಯಗಳಲ್ಲಿ ಚಿತ್ತವು ಹೇಗೆ ನಿರಾತಂಕವಾಗಿರುವುದೋ, ಹಾಗೆಯೇ ವರ್ತಮಾನಕಾರ್ಯಗಳಲ್ಲಿಯೂ ನಿರಾತಂಕನಾಗಿರು. ನೀನು ಸತ್ಯಸ್ವರೂಪನಾಗಿದ್ದುಗೊಂಡು ಚಿತ್ತವೃತ್ತಿಗಳನ್ನಾಶ್ರಯಿಸದಿರಬೇಕು||೫೯

ದೂರದೇಶದಲ್ಲಿರುವ ಪುರುಷನು ಇದ್ದರೂ ಇಲ್ಲದಂತೆಯೇ ಹೇಗೆ ತಿಳಿಯಲ್ಪಡುವನೋ, ಕಾಷ್ಠವೂ ಶಿಲೆಯೂ—ಅಚೇತನವಾದುದರಿಂದ—ಸಮೀಪದಲ್ಲಿಯೇ ಇರತಕ್ಕುವಾದರೂ ಹೇಗೆ ಅಸತ್ತುಗಳೆಂದು ಭಾವಿಸಲ್ಪಡುವುವೋ, ಹಾಗೆ ಚಿತ್ತವೂ ಅಸತ್ತೆಂದು ತಿಳಿಯುವನಾಗು ||೬೦||

ಶಿಲೆಯೊಳಗೆ ಜಲವು ಹೇಗಿಲ್ಲವೋ, ಜಲದೊಳಗೆ ಅಗ್ನಿ ಹೇಗಿಲ್ಲವೋ, ಹಾಗೆ ಜೀವಾತ್ಮನೊಳಗೇ ಚಿತ್ತವೆಂಬ ಪದಾರ್ಥವು ಸತ್ಯವಾಗಿಲ್ಲ; ಇನ್ನು ಪರಮಾತ್ಮನೊಳಗೆ ಅದೆಲ್ಲಿಂದ ಬಂದಿತು? ||೬೧||

ಯಾವ ಚಿತ್ತವೆಂಬ ಪದಾರ್ಥವು ವಿಚಾರಮಾಡುವಾಗ ಏನೂ ಇಲ್ಲದಂತಾಗುವುದೋ, ಅಂತಹ ಚಿತ್ತದಿಂದ ಮಾಡಲ್ಪಡುವ ಕಾರ್ಯವೊಂದೂ ಮಾಡಲ್ಪಟ್ಟಂತೆಯೇ ಅಲ್ಲವೆಂದು ತಿಳಿದು, ಪುರುಷನು ಚಿತ್ತವನ್ನು ಅತಿಕ್ರಮಿಸಿದವನಾಗಬೇಕು ||೬೨||

ಅತ್ಯಂತ ಅಸತ್ತಾಗಿರುವ ಚಿತ್ತವನ್ನು ಯಾವನು ಅನುವರ್ತಿಸುವನೋ, ಅವನು ದುಷ್ಟದೇಶವಾಸಿಯಾದ ಮ್ಲೇಚ್ಛನನ್ನು ಹೇಗೆತಾನೆ ಅನುಸರಿಸಿದಂತಾಗುವುದಿಲ್ಲ? ||೬೩||

ಅದುಕಾರಣ, ಅಯ್ಯಾ! ರಾಮ! ನೀನು, ಈ ಚಿತ್ತವೆಂಬ ಚಂಡಾಲನನ್ನು ದೂರವಾಗಿ ಓಡಿಸಿಬಿಟ್ಟು, ಮಣ್ಣಿನಲ್ಲಿ ಮಾಡಿರುವ ಬೊಂಬೆಯಂತೆ, ನಿಶ್ಶಂಕನಾಗಿ ಸುಖವಾಗಿರು ||೬೪||

ಮತ್ತು, ನೀನು ಶಿಲೆಯಲ್ಲಿ ಮಾಡಿದ ಪುರುಷನಂತೆ ನಿಶ್ಚಲನಾಗಿದ್ದುಗೊಂಡು ‘ನನಗೆ ಸತ್ಯವಾಗಿ ಉತ್ಪನ್ನವಾದ ಚಿತ್ತವಿಲ್ಲವೇ ಇಲ್ಲ’ವೆಂಬುದಾಗಿಯಾಗಲಿ, ಅಥವಾ ‘ಚಿತ್ತವುದಯಿಸಿ ಮೃತವಾಗಿಬಿಟ್ಟಿತು’ ಎಂಬುದಾಗಿಯಾಗಲಿ, ಒಳಗೆ ದೃಢವಾದ ನಿಶ್ಚಯವುಳ್ಳವನಾಗಿರು ||೬೫||

ಪ್ರೇಕ್ಷ್ಯಯಾಪ್ಯಸ್ತಿ ನೋ ಚಿತ್ತಂ ತದ್ವಿಹೀನೋಽಸಿ ತತ್ತ್ವತಃ ।
ಸ ಕಿಮರ್ಥಮನರ್ಥೇನ ತದ್ವ್ಯರ್ಥೇನ ಕದರ್ಥ್ಯಸೇ ॥೬೬॥
ಅಸತಾ ಚಿತ್ತಯಕ್ಷೇಣ ಯೇ ಮುಧಾ ಸ್ವವಶೇ ಕೃತಾಃ ।
ತೇಷಾಂ ಪೇಲವಬುದ್ಧೀನಾಂ ಚನ್ದ್ರಾದಶನಿರುತ್ಥಿತಃ ॥೬೭॥
ಚಿತ್ತಂ ದೂರೇ ಪರಿತ್ಯಜ್ಯ ಯೋಽಸಿ ಸೋಽಸಿ ಸ್ಥಿರೋ ಭವ ।
ಭವ ಭಾವನಯಾ ಮುಕ್ತೋ ಯುಕ್ತ್ಯಾ ಪರಮಯಾನ್ವಿತಃ ॥೬೮॥
ಅಸತೋ ಯೇಽನುವರ್ತನ್ತೇ ಚೇತಸೋಽಸತ್ಯರೂಪಿಣಃ ।
ವ್ಯೋಮಮಾರಣಕರ್ಮೈಕನೀತಕಾಲಾನ್ ಧಿಗಸ್ತು ತಾನ್ ॥೬೯॥
ವ್ಯಪಗಳಿತಮನಾ ಮಹಾನುಭಾವೋ ಭವ ಭವಪಾರಗತೋ ಭವಾಮಲಾತ್ಮಾ ।
ಸುಚಿರಮಪಿ ವಿಚಾರಿತಂ ನ ಲಬ್ಧಂ ಮಲಮಮಲಾತ್ಮನಿ ಮಾನಸಾತ್ಮ ಕಿಞ್ಚಿತ್॥

ಇತಿ ಉತ್ಪತ್ತಿಪ್ರಕರಣೇ ಚಿತ್ತಾಭಾವಪ್ರತಿಪಾದನಂ ನಾಮ
ಏಕವಿಂಶತ್ಯುತ್ತರ ಶತತಮಃ ಸರ್ಗಃ.

ತತ್ವವಿಚಾರಮಾಡಿ ನೋಡುವಾಗ, ಚಿತ್ತವೆಂಬ ಪದಾರ್ಥವು ಸುತರಾಂ ಇರುವುದೇ ಇಲ್ಲ; ಆದುಕಾರಣ, ನೀನು ಸತ್ಯವಾಗಿ ಚಿತ್ತಶೂನ್ಯನೇ ಆಗಿರುವೆ. ಹೀಗಿರುವಾಗ, ಅನರ್ಥಹೇತುವಾದ ಈ ಚಿತ್ತಭ್ರಾಂತಿಯಿಂದ ನೀನು ಏತಕ್ಕೆ ವ್ಯರ್ಥವಾಗಿ ಸಂಕಟಪಡುತ್ತಿರುವೆ? ॥೬೬॥

ಅತ್ಯಂತವಾಗಿ ಅಸತ್ತಾದ ಈ ಚಿತ್ತವೆಂಬ ಪಿಶಾಚಿಯಿಂದ ಯಾರು ವಶಪಡಿಸಿಕೊಳ್ಳಲ್ಪಡುವರೋ, ಅಂತಹ ಮಂದಬುದ್ಧಿಗಳಿಗೆ—ಚಂದ್ರನದೆಸೆಯಿಂದ ಸಿಡಿಲು ಉದಯಿಸಿದಂತೆ ತೋರುವುದು॥

ಅಯ್ಯಾ! ರಾಮ! ಆ ಪರತತ್ವವಾವುದುಂಟೋ, ನೀನು ಅದೇ ಆಗಿರುವೆ. ಆದುಕಾರಣ, ಚಿತ್ತವೆಂಬ ಜ್ಞಾನವನ್ನು ದೂರವಾಗಿ, ಪರಿತ್ಯಜಿಸಿ, ಸಂಸಾರಭಾವನೆಯಿಂದ ಮುಕ್ತನಾಗಿ, ಸರ್ವೋತ್ತಮವಾದ ಮನನದಿಂದ ಯುಕ್ತನಾಗಿ, ಸ್ಥಿರನಾಗಿರು ॥೬೮॥

ಅಸತ್ಯವಾಗಿಯೂ ದುಷ್ಟವಾಗಿಯೂ ಇರುವ ಚಿತ್ತವನ್ನು ಯಾರು ಅನುಸರಿಸಿಕೊಂಡು ಕಷ್ಟಪಡುವರೋ, ಅವರು—ಆಕಾಶವನ್ನು ಸಾಯಿಸಬೇಕೆಂದು ತಮ್ಮ ಕಾಲವನ್ನೆಲ್ಲ ಕಳೆಯುವಂಥವರು. ಅವರಿಗೆ ಧಿಕ್ಕಾರವಿರಲಿ ॥೬೯॥

ವತ್ಸ! ರಾಮ! ಇದುವರೆಗೆ ಹೇಳಿದ ವಿಷಯುವನ್ನೆಲ್ಲ ಈಗ ಸಂಕ್ಷೇಪಿಸಿ ಹೇಳುವೆನು, ಕೇಳು:—ಮಹಾನುಭಾವನಾದ ನೀನು, ಚಿತ್ತಲಯಹೊಂದಿದವನಾಗಿಯೂ, ಸಂಸಾರಪಾರವನ್ನು ಸೇರಿದವನಾಗಿಯೂ, ನಿರ್ಮಲಾತ್ಮನಾಗಿಯೂ ಇರು. ನಾನು ಬಹುಕಾಲದಿಂದ ವಿಚಾರಮಾಡಿನೋಡಿದರೂ, ನಿರ್ಮಲನಾದ ಪರಮಾತ್ಮನೊಳಗೆ ಚಿತ್ತರೂಪಮಲವು ಸ್ವಲ್ಪವಾದರೂ ಇರುವುದನ್ನು ಸುತರಾಂ ಅರಿಯೆನು ॥೭೦॥

ಇದು ಉತ್ಪತ್ತಿಪ್ರಕರಣದಲ್ಲಿ ಚಿತ್ತಾಭಾವಪ್ರತಿಪಾದನವೆಂಬ
ನೂರಿಪ್ಪತ್ತೊಂದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವಾವಿಂಶತ್ಯುತ್ತರಶತತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಗ॥ ಪ್ರಥಮಂ ಜಾತಮಾತ್ರೇಣ ಪುಂಸಾ ಕಿಞ್ಚಿದ್ವಿಕಸಿತಬುದ್ಧಿನೈವ ಸತ್ಸಙ್ಗಮಪರೇಣ ಭವಿತವ್ಯಮ್ ॥೧॥

ಅನವರತಪ್ರವಾಹಪತಿತೋಯಮವಿದ್ಯಾನದೀನಿವಹಃ ಶಾಸ್ತ್ರಸಜ್ಜನಸಮ್ಪರ್ಕಾದೃತೇ ನ ತರಿತುಂ ಶಕ್ಯತೇ ॥೨॥

ತೇನ ವಿವೇಕತಃ ಪುರುಷಸ್ಯ ಹೇಯೋಪಾದೇಯವಿಚಾರಉಪಜಾಯತೇ॥೩॥

ತದಾಸೌ ಶುಭೇಚ್ಛಾಭಿಧಾಂ ವಿವೇಕಭುವಮಾಪತಿತೋ ಭವತಿ ॥೪॥

ತತೋ ವಿವೇಕವಶತೋ ವಿಚಾರಣಾಯಾಮ್ ॥೫॥

ಉತ್ಪತ್ತಿಪ್ರಕರಣದಲ್ಲಿ ನೂರಿಪ್ಪತ್ತೆರಡನೆಯ ಸರ್ಗವು.

ಇಹಾದೌ ವರ್ಣ್ಯತೇ ಪುಂಸೋ ಜ್ಞಾನಭೂಮ್ಯುದಯಕ್ರಮಃ ।
ರಾಮಸ್ಯ ಶೋಕಮೋಹಾದಿನಿರಾಸೈರ್ಬೋಧನಂ ತತಃ ॥

ಈ ಸರ್ಗದಲ್ಲಿ, ಪ್ರಥಮತಃ ಪುರುಷನಿಗೆ ಜ್ಞಾನಭೂಮಿಕೆಗಳುದಯಿಸುವ ಕ್ರಮವೂ, ಬಳಿಕ ಶ್ರೀರಾಮನಿಗೆ ಶೋಕಮೋಹಾದಿ ನಿರಸನಪುರಸ್ಸರವಾಗಿ ಮಾಡಿದ ಜ್ಞಾನೋಪದೇಶವೂ ವರ್ಣಿಸಲ್ಪಡುವುವು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳುವರು:—

ವತ್ಸ! ರಾಮ! ಹಿಂದೆ ನಾನು ನಿನಗೆ ಹೇಳಿರುವ ಜ್ಞಾನಭೂಮಿಕೆಗಳು ಪ್ರಾಪ್ತವಾಗುವ ಮಾರ್ಗವನ್ನು ಈಗ ಕ್ರಮವಾಗಿ ಹೇಳುವೆನು, ಕೇಳು. ಪ್ರಥಮತಃ ಪುರುಷನು ಹುಟ್ಟಿ ಸ್ವಲ್ಪ ಬುದ್ಧಿವಿಕಾಸವುಂಟಾದೊಡನೆಯೇ, ಸರ್ವದಾ ಸತ್ಸಂಗತತ್ಪರನಾಗಿರಬೇಕು ॥೧॥

ಅವಿಚ್ಛಿನ್ನವಾಗಿ ಪ್ರವಹಿಸುತ್ತಿರುವ ಈ ಅವಿದ್ಯಾನದೀಪ್ರವಾಹವು, ಶಾಸ್ತ್ರಸಜ್ಜನಸಮಾಗಮಹೊರತು ದಾಟಲ್ಪಡಲು ಸಾಧ್ಯವಾಗುವುದಿಲ್ಲ ॥೨॥

ಈ ಶಾಸ್ತ್ರಸಜ್ಜನಸಮಾಗಮದಿಂದ ಪುರುಷನಿಗೆ ವಿವೇಕವುಂಟಾಗಿ, ಬಳಿಕ ಹೇಯೋಪಾದೇಯವಿಚಾರವುಂಟಾಗುವುದು ॥೩॥

ಆಗ ಇವನು, ಶುಭೇಚ್ಛೆಯೆಂಬ ಪ್ರಥಮಭೂಮಿಕೆಯನ್ನು ಹೊಂದಿದವನಾಗುವನು ॥೪॥

ಅನಂತರ, ಈ ಪ್ರಥಮಭೂಮಿಕೆಯ ಅಭ್ಯಾಸಾತಿಶಯದಿಂದ, ವಿಚಾರಣೆಯೆಂಬ ದ್ವಿತೀಯ ಭೂಮಿಕೆಯನ್ನು ಹೊಂದುವನು ॥೫॥

ಸಮ್ಯಕ್ ಜ್ಞಾನೇನಾಸಮ್ಯಗ್ವಾಸನಾಂ ತ್ಯಜತಃ ಸಂಸಾರಾಭಾವನಾತೋ ಮನಸ್ತನುತಾಮೇತಿ ॥೬॥

ತೇನ ತನುಮಾನಸೀಂ ನಾಮ ವಿವೇಕಭೂಮಿಮವತೀರ್ಣೋ ಭವತಿ ॥೭॥

ಯದೈವ ಯೋಗಿನಃ ಸಮ್ಯಕ್ ಜ್ಞಾನೋದಯಸ್ತದೈವ ಸತ್ತ್ವಾಪತ್ತಿಃ ॥೮॥

ತದ್ವಶಾದ್ವಾಸನಾ ತನುತಾಂ ಗತಾ ಯದಾ, ತದೈವಾಸಾವಸಂಸಕ್ತ ಇತ್ಯುಚ್ಯತೇ, ಕರ್ಮಫಲೇನ ನ ಬಧ್ಯತ ಇತಿ ॥೯॥

ಅಥ ತಾನವವಶಾದಸತ್ಯೇ ಭಾವನಾತಾನವಮಭ್ಯಸ್ಯತಿ ॥೧೦॥

ಯಾವನ್ನ ಕುರ್ವನ್ನಪಿ ವ್ಯವಹರನ್ನಪ್ಯಸತ್ಯೇಷು ಸಂಸಾರವಸ್ತುಷು ಸ್ಥಿತೋಽಪಿ ಸ್ವಾತ್ಮನ್ಯವಕ್ಷೀಣಮನಸ್ತ್ವಾದಭ್ಯಾಸವಶಾದ್ಬಾಹ್ಯಂ ವಸ್ತು ಕುರ್ವನ್ನಪಿ ನ ಪಶ್ಯತಿ ನಾಲಮ್ಬನೇನ ಸೇವತೇ ನಾಭಿಧ್ಯಾಯತಿ ತನುವಾಸನತ್ವಾಚ್ಚ ಕೇವಲಂ ಮೂಢಃ ಸುಪ್ತಪ್ರಬುದ್ಧ ಇವ ಕರ್ತವ್ಯಂ ಕರೋತಿ ॥೧೧॥

ಹೀಗೆ ದ್ವಿತೀಯವಾದ ಜ್ಞಾನಭೂಮಿಕೆಯಲ್ಲಿ ಚೆನ್ನಾಗಿ ಅಭ್ಯಾಸಾತಿಶಯವುಂಟಾದಬಳಿಕ ಉತ್ತಮವಾದ ಜ್ಞಾನವು ಜನಿಸುವುದು; ಇದರಿಂದ, ದುಷ್ಟವಾದ ವಾಸನೆಯನ್ನು ಬಿಟ್ಟುಬಿಡುವನು. ಬಳಿಕ ಸಂಸಾರಭಾವನೆಯು ಕಡಮೆಯಾಗುವುದು. ಅನಂತರ ಮನಸ್ಸು ಕೃಶವಾಗುತ ಬರುವುದು ॥೬॥

ಇದರಿಂದ, ತನುಮಾನಸವೆಂಬ ಜ್ಞಾನಭೂಮಿಕೆಯನ್ನು ಪಡೆದವನಾಗುವನು ॥೭॥

ಯೋಗಿಯಾದವನಿಗೆ, ಯಾವಾಗ ಹೀಗೆ ಚೆನ್ನಾಗಿ ಜ್ಞಾನೋದಯವಾಗುವುದೋ, ಆಗಲೇ ಸತ್ವಾಪತ್ತಿಯೆಂಬ ನಾಲ್ಕನೆಯ ಜ್ಞಾನಭೂಮಿಕೆಯುಪಸ್ಥಿತವಾಗುವುದು ॥೮॥

ಈ ಸತ್ವಾಪತ್ತಿಯು ಅಭ್ಯಾಸವಶದಿಂದ ಯಾವಾಗ ವಾಸನೆಯು ಕ್ಷೀಣವಾಗುವುದೋ, ಆಗಲೇ— ಇವನಿಗೆ ಕರ್ಮಫಲಗಳ ಬಂಧವು ತಪ್ಪುವುದರಿಂದ—ಅಸಂಸಕ್ತಿಯೆಂಬ ಅಯ್ದನೆಯ ಜ್ಞಾನಭೂಮಿಕೆಯು ಪ್ರಾಪ್ತವಾಗುವುದು ॥೯॥

ಅನಂತರ, ವಾಸನಾಕ್ಷಯವಾಗಿರುವುದಾದಕಾರಣ, ಸರ್ವದಾ ಅಂತರ್ಮುಖನಾಗಿದ್ದುಗೊಂಡು, ಬಹಿಸ್ಥಿತವಾಗಿರುವ ಪದಾರ್ಥಗಳಲ್ಲಿ ಭಾವನಾಕ್ಷಯವನ್ನು ಅಭ್ಯಸಿಸುತ, ಆರನೆಯದಾದ ಜ್ಞಾನಭೂಮಿಕೆಯನ್ನಾಶ್ರಯಿಸುವನು ॥೧೦॥

ಈ ಬಾಹ್ಯಭಾವನಾಕ್ಷಯವನ್ನೆಲ್ಲಿಯವರೆಗೆ ಅಭ್ಯಸಿಸಬೇಕೆಂದರೆ,—ಸಮಾಧಿಸ್ಥಿತನಾಗಿದ್ದರೂ, ಬಹಿರ್ಮುಖನಾಗಿದ್ದರೂ, ಅಸತ್ಯವಾದ ಸಂಸಾರವ್ಯಾಪಾರದಲ್ಲಿರುತಿದ್ದರೂ, ಪುರುಷನು—ಆತ್ಮನಲ್ಲಿ ಲೀನವಾದ ಮನಸ್ಸುಳ್ಳವನಾಗಿರುವುದರಿಂದಲೂ ಅಭ್ಯಾಸಾತಿಶಯದಿಂದಲೂ—ಬಹಿರ್ವ್ಯಾಪಾರಗಳನ್ನು ನಡೆಯಿಸುತಿದ್ದರೂ ಅದೊಂದನ್ನೂ ಅರಿಯದಿರಬೇಕು; ತದೇಕಾಯತ್ತಚಿತ್ತನಾಗಿ ಸೇವಿಸಬಾರದು; ಅವುಗಳನ್ನು ಸ್ಮರಿಸಲೂಬಾರದು. ಮಲಗಿದ್ದು ಎದ್ದ ಮೂಢನಂತೆ, ವಾಸನಾಹೀನನಾಗಿ ಆಯಾಕಾರ್ಯಗಳನ್ನು ಮಾಡುತಿರಬೇಕು. ಇಂತಹ ಸ್ಥಿತಿಯುಂಟಾಗುವವರೆಗೂ, ಬಾಹ್ಯಭಾವನಾಕ್ಷಯವನ್ನಭ್ಯಸಿಸುತಿರಬೇಕು ॥೧೧॥

ತನುಭಾವಿತಮನಸ್ಕಸ್ತೇನ ಯೋಗಭೂಮಿಕಾಂ ಭಾವನಾಮಧಿರೂಢಃ॥೧೦॥

ಇತ್ಯನ್ತರ್ಲೀನಚಿತ್ತಃ ಕತಿಚಿತ್ಸಂವತ್ಸರಾನಭ್ಯಸ್ಯ ಸರ್ವಥೈವ ಕುರ್ವನ್ನಪಿಬಾಹ್ಯಪದಾರ್ಥಾನ್ ಭಾವನಾಂ ತ್ಯಜತಿ ತುರ್ಯಾತ್ಮಾ ಭವತಿ ತತೋ ಜೀವನ್ಮುಕ್ತ ಇತ್ಯುಚ್ಯತೇ॥

ಪ॥ ನಾಭಿನನ್ದತಿ ಸಂಪ್ರಾಪ್ತಂ ನಾಪ್ರಾಪ್ತಮಭಿಶೋಚತಿ ।
ಕೇವಲಂ ವಿಗತಾಶಙ್ಕಂ ಸಂಪ್ರಾಪ್ತಮನುವರ್ತತೇ ॥೧೪॥
ತ್ವಯಾಪಿ ರಾಘವ ಜ್ಞಾತಂ ಜ್ಞಾತವ್ಯಮಖಿಲಾನ್ತರಮ್ ।
ನನು ತೇ ಸರ್ವಕಾರ್ಯೇಭ್ಯೋ ವಾಸನಾ ತನುತಾಂ ಗತಾ ॥೧೫॥
ಶರೀರಾತೀತವೃತ್ತಿಸ್ತ್ವಂ ಶರೀರಸ್ಥೋಽಥವಾ ಭವ ।
ಮಾಗಾಃ ಶೋಕಂ ಚ ಹರ್ಷಂ ತ್ವಂ ತ್ವಮಾತ್ಮಾ ವಿಗತಾಮಯಃ ॥೧೬॥
ತ್ವಯ್ಯಾತ್ಮನಿ ಸಿತೇ ಸ್ವಚ್ಛೇ ಸರ್ವಗೇ ಸರ್ವದೋದಿತೇ ।
ಕುತೋ ದುಃಖಸುಖೇ ರಾಮ ಕುತೋ ಮರಣಜನ್ಮನೀ ॥೧೭॥

ಈ ಅಭ್ಯಾಸಬಲದಿಂದ, ಸೂಕ್ಷ್ಮತಮವಾದ ಬ್ರಹ್ಮನಲ್ಲಿ ಏಕೀಭಾವಹೊಂದಿದ ಚಿತ್ತವುಳ್ಳವನಾಗಿ, ಪದಾರ್ಥಭಾವನೆಯೆಂಬ ಆರನೆಯ ಯೋಗಭೂಮಿಕೆಯನ್ನಾಶ್ರಯಿಸಿದವನಾಗುವನು॥

ಹೀಗೆ ಬ್ರಹ್ಮನೊಳಗೆ ಲೀನವಾದ ಚಿತ್ತವುಳ್ಳವನಾಗಿ, ಕೆಲವು ವರ್ಷಕಾಲ ಬಿಡದೆ ಅಭ್ಯಾಸಮಾಡಿದರೆ, ಬಳಿಕ ಬಹಿರ್ವ್ಯಾಪಾರಗಳನ್ನು ನಡೆಯಿಸಿದರೂ, ಅದರ ಭಾವನೆಯೇ ಇವನಿಗೆ ತಪ್ಪಿಹೋಗುವುದು ; ಪುರುಷನು ತಾನೇ ತುರ್ಯಾತ್ಮನಾಗುವನು; ಬಳಿಕ ಜೀವನ್ಮುಕ್ತನೆಂದು ಹೇಳಲ್ಪಡುವನು. ಹೀಗೆ ಏಳನೆಯ ಜ್ಞಾನಭೂಮಿಕೆಯು ಪ್ರಾಪ್ತವಾಗುವುದು ॥೧೩॥

ಯದ್ಯಪಿ, ಹಿಂದಣಭೂಮಿಕೆಗಳಲ್ಲಿಯೂ ಆತ್ಮಸಾಕ್ಷಾತ್ಕಾರಪಡೆದವರು ಜೀವನ್ಮುಕ್ತರೇ ಅಹುದು. ಆದರೆ, ಇತರ ಭೂಮಿಕೆಗಳಲ್ಲಿರತಕ್ಕವರಿಗೂ ಸಪ್ತಮಭೂಮಿಕೆಯಲ್ಲಿರತಕ್ಕವರಿಗೂ ಸ್ವಲ್ಪ ವ್ಯತ್ಯಾಸವುಂಟು. ಇತರ ಭೂಮಿಕೆಗಳಲ್ಲಿರತಕ್ಕವರಿಗೆ ಮಧ್ಯೇಮಧ್ಯೇ ಬಾಹ್ಯವ್ಯಾಪಾರವುಪಲಬ್ಧವಾಗುವುದು. ಸಪ್ತಮಭೂಮಿಕೆಯಲ್ಲಿರುವವನಾದರೋ,--ಸುತರಾಂ ಬಹಿರ್ವ್ಯಾಪಾರಶೂನ್ಯನಾಗುವಕಾರಣ, ಪ್ರಬಲವಾದ ಪ್ರಾರಬ್ಧಕರ್ಮವಶದಿಂದ ಇಷ್ಟಪ್ರಾಪ್ತಿಯಾದಾಗ ಸಂತೋಷಪಡುವುದೂ ಇಲ್ಲ! ಪ್ರಾಪ್ತವಾಗದಿರುವ ಇಷ್ಟವಿಷಯವನ್ನು ಕುರಿತು ಶೋಕಿಸುವುದೂ ಇಲ್ಲ. ಯೋಗಪರಿಪಾಕರೂಪವಾದ ಪುಣ್ಯದಿಂದ ಪ್ರಾರಬ್ಧವನ್ನು ತಿರಸ್ಕರಿಸಿ, ಪ್ರಾರಬ್ಧಕ್ಷಯವಾಗುವವರೆಗೆ ಜೀವಗ್ರಹಣವನ್ನು ಮಾತ್ರ ಮಾಡಿಕೊಂಡು, ಆಯಾಕಾಲದಲ್ಲಿ ಪ್ರಾಪ್ತವಾದುದನ್ನು ನಿರಾತಂಕನಾಗಿ ಅನುವರ್ತಿಸಿಕೊಂಡಿರುವನು ॥೧೪॥

ಅಯ್ಯಾ! ರಾಘವ! ತಿಳಿಯಬೇಕಾದ ಸಕಲ ರಹಸ್ಯಗಳನ್ನೂ ನೀನೂ ತಿಳಿದೇ ಇರುವೆ. ನಿನಗೆ ಸಕಲ ವಿಷಯಗಳಲ್ಲಿಯೂ ವಾಸನೆಯು ಕೃಶವಾಗಿರುವುದಲ್ಲವೆ! ॥೧೫॥

ನೀನು ಸರ್ವದಾ ಸಮಾಧಿನಿಷ್ಠನಾಗಿಬೇಕಾದರೂ ಇರು ; ಅಥವಾ ಲೋಕವ್ಯಾಪಾರತತ್ಪರನಾಗಿಬೇಕಾದರೂ ಇರು. ಆದರೆ, ಹರ್ಷಶೋಕಗಳಿಗೆ ಮಾತ್ರ ವಶನಾಗಬೇಡ, ಏಕೆಂದರೆ,-ನೀನು ಕೇವಲ ನಿರ್ಗುಣನಾದ ಆತ್ಮನಾಗಿರುವೆ ॥೧೬॥

ಅಯ್ಯಾ! ರಾಮ! ಸ್ವಯಂಪ್ರಕಾಶವೂ ನಿರ್ಮಲವೂ ಸರ್ವವ್ಯಾಪಿಯೂ ಸರ್ವದಾ ಉದಿತವೂ ಆದ ಆತ್ಮಪದಾರ್ಥವೇ ನೀನು. ಇಂತಹ ನಿನ್ನಲ್ಲಿ, ಸುಖದುಃಖಗಳೆಲ್ಲಿ ಬಂದುವು? ಜನನಮರಣಗಳುತಾನೆ ಎಲ್ಲಿ ಬಂದುವು? ॥೧೭॥

ಅಬನ್ಧುರಪಿ ಕಸ್ಮಾತ್ ತ್ವಂ ಬನ್ಧುದುಃಖಾನಿ ಶೋಚಸಿ |
ಅದ್ವಿತೀಯೋ ಸ್ಥಿತೇ ಹ್ಯಸ್ಮಿನ್ ಬಾನ್ಧವಾಃ ಕಇವಾತ್ಮನಿ ||೧೮||
ದೃಶ್ಯತೇ ಕೇವಲೇ ದೇಹೇ ಪರಮಾಣುಚಯಃ ಪರಮ್ |
ದೇಶಕಾಲಾನ್ಯತಾಪತ್ತೇಃ ನಾತ್ಮೋದೇತಿ ನ ಲೀಯತೇ ||೧೯||
ಅವಿನಾಶೋಪಿ ಕಸ್ಮಾತ್ ತ್ವಂ ವಿನಶ್ಯಾಮೀತಿ ಶೋಚಸಿ |
ಅಮೃತ್ಯುವಸತೌ ಸ್ವಚ್ಛೇ ವಿನಾಶಃ ಕಇವಾತ್ಮನಿ ||೨೦||
ಘಟೇ ಕಪಾಲತಾಂ ಯಾತೇ ಘಟಾಕಾಶೋ ನ ನಶ್ಯತಿ |
ಯಥಾ ತಥಾ ಶರೀರೇಸ್ಮಿನ್ ನಷ್ಟೇಪಿ ನ ವಿನಶ್ಯತಿ ||೨೧||
ಮೃಗತೃಷ್ಣಾತರಙ್ಗಿಣ್ಯಾಂ ಕ್ಷೀಣಾಯಾಮಾತಪೋ ಯಥಾ |
ನ ನಶ್ಯತಿ ತಥಾ ದೇಹೇ ನಷ್ಟೇ ನಾತ್ಮಾ ವಿನಶ್ಯತಿ ||೨೨||
ವಾಞ್ಛೈವೋದೇತಿ ತೇ ಕಸ್ಮಾತ್ ಭ್ರಾನ್ತಿರನ್ತರ್ನಿರರ್ಥಿಕಾ |
ಅದ್ವಿತೀಯೋ ದ್ವಿತೀಯಂ ಕಿಂ ಯದ್ವಸ್ತ್ವಾತ್ಮಾಭಿವಾಞ್ಛತು ||೨೩||

ಸುತರಾಂ ಬಂಧುಶೂನ್ಯನಾಗಿದ್ದರೂ ನೀನು ಏಕೆ ಬಂಧುಗಳ ದುಃಖವನ್ನು ಕುರಿತು ಶೋಕ ಪಡುವೆ? ಆತ್ಮಪದಾರ್ಥವೊಂದು ಹೊರತು ಮತ್ತೊಂದು ಪದಾರ್ಥವೇ ಇಲ್ಲದಿರುವಾಗ, ಬಂಧುಗಳೆಂಬವರಾರು? ||೧೮||

ಈಗ ಶೋಕಾರ್ಹರಾರೆಂದು ವಿಚಾರಮಾಡೋಣ; ಬಂಧುಗಳ ದೇಹವು ಶೋಕಾರ್ಹವೆ? ಅಥವಾ ಆತ್ಮನೆ? ದೇಹವು ಭಸ್ಮೀಭೂತವಾದ ಬಳಿಕ, ಕೇವಲ ಪರಮಾಣುಸಮೂಹವೇ ಕಾಣಿಸುವುದು. ಈ ಪರಮಾಣುವು ಅಚೇತನವಾದುದರಿಂದ, ಅದನ್ನು ಕುರಿತು ಶೋಕಿಸುವುದೇಕೆ? ದೇಶಕಾಲಗಳು ಬೇರೆಯಾದಮಾತ್ರದಿಂದಲೇ, ಆತ್ಮನು ಉದಯಿಸುವುದೂ ಇಲ್ಲ;—ಲಯಹೊಂದುವುದೂ ಇಲ್ಲ. ಹೀಗೆ ಉದಯಾಸ್ತಮಯಗಳೇ ಇಲ್ಲದಿರುವ ಆತ್ಮನನ್ನು ಕುರಿತು ಶೋಕಿಸುವುದಕ್ಕೆ ಕಾರಣವಿಲ್ಲ ||೧೯||

ಹೀಗೆ ನಾಶವಿಹೀನನಾಗಿದ್ದರೂ ನೀನೇಕೆ ನಾಶಹೊಂದುವೆನೆಂದು ಅಳುತಿರುವೆ? ಮೃತ್ಯುವಿಗೆ ಆಶ್ರಯನಲ್ಲದೆಯೂ ನಿರ್ಮಲನಾಗಿಯೂ ಇರುವ ಆತ್ಮನಲ್ಲಿ ನಾಶವೆಂಬುದಾವುದು? ||೨೦||

ಮಡಕೆಯು ಎರಡುಹೋಳಾದ ಮಾತ್ರದಿಂದಲೇ—ಅದರೊಳಗಿದ್ದ ಆಕಾಶವು ಹೇಗೆ ನಾಶಹೊಂದುವುದಿಲ್ಲವೋ, ಹಾಗೆ ಈ ಶರೀರವು ನಷ್ಟವಾದರೂ ಆತ್ಮನು ನಷ್ಟನಾಗುವುದಿಲ್ಲ ||೨೧||

ಮೃಗತೃಷ್ಣಿಕೆಯಲ್ಲಿ ಬಿಸಿಲನ್ನು ನೋಡಿ ನದಿಯೆಂದು ತಿಳಿದುಕೊಂಡಿದ್ದು—ಬಳಿಕ ನದಿಯಲ್ಲವೆಂದು ತಿಳಿದುಕೊಂಡಾಗ—ಮೊದಲು ತಿಳಿದುಕೊಂಡಿದ್ದ ನದಿಯು ಹೋಗಿಬಿಟ್ಟರೂ ಬಿಸಿಲು ಹೇಗೆ ಹೋಗುವುದಿಲ್ಲವೋ, ಹಾಗೆ ದೇಹವು ನಷ್ಟವಾದರೂ ಆತ್ಮನು ನಷ್ಟನಾಗುವುದಿಲ್ಲ ||೨೨||

ಎಲ್ಲಕ್ಕಿಂತಲೂ ಮೊದಲು ನಿನಗೆ ಇಚ್ಛೆಯೆಂಬುದು ಹೇಗೆ ಹುಟ್ಟುವುದು? ನಿನ್ನ ಮನಸ್ಸಿನೊಳಗೆ ಹುಟ್ಟುವ ಈ ಭ್ರಾಂತಿಯೆಲ್ಲವೂ ಕೇವಲ ವ್ಯರ್ಥವಾದುದೆಂದು ತಿಳಿ. ಆತ್ಮನನ್ನು ಬಿಟ್ಟು ಎರಡನೆಯ ಪದಾರ್ಥವೇ ಇಲ್ಲದಿರುವಾಗ, ಆತ್ಮನು ಅಪೇಕ್ಷಿಸಬೇಕಾದ ಎರಡನೆಯ ವಸ್ತುವಾವುದು? ||೨೩||

ಶ್ರಾವ್ಯಂ ಸ್ಪೃಶ್ಯಂ ತಥಾ ದೃಶ್ಯಂ ರಸ್ಯಂ ಘ್ರೇಯಂ ಚ ರಾಘವ।
ನ ಕಿಞ್ಚಿದಸ್ತಿ ಜಗತಿ ವ್ಯತಿರಿಕ್ತಂ ಯದಾತ್ಮನಃ ॥೨೪॥

ಸರ್ವಶಕ್ತಾವಿಮಾಸ್ತಸ್ಮಿನ್ ಆತ್ಮನ್ಯೇವಾಖಿಲಾಃ ಸ್ಥಿತಾಃ ।
ಶಕ್ತಯೋ ವಿತತೇ ವ್ಯಕ್ತೇ ಆಕಾಶ ಇವ ಶೂನ್ಯತಾ ॥೨೫॥

ಚಿತ್ತಾದ್ರಾಘವ ರೂಢೇಯಂ ತ್ರಿಲೋಕೀಲಲನೋದಿತಾ ।
ತ್ರಿವಿಧೇನ ಕ್ರಮೇಣೇಹ ಜನ್ಮನಾ ಜನಿತಭ್ರಮಾ ॥೨೬॥

ಮನಃಪ್ರಶಮನೇ ಸಿದ್ಧೇ ವಾಸನಾಕ್ಷಯನಾಮನಿ ।
ಕರ್ಮಕ್ಷಯಾಭಿಧಾನೈವ ಮಾಯೇಯಂ ಪ್ರವಿನಶ್ಯತಿ ॥೨೭॥

ಸಂಸಾರೋಗ್ರಾರಘಟ್ಟೇಽಸ್ಮಿನ್ ಆರೂಢಾ ಯನ್ತ್ರವಾಹಿನೀ ।
ರಜ್ಜುಸ್ತ್ವಂ ವಾಸನಾಮೇತಾಂ ಛಿನ್ಧಿ ರಾಘವ ಯತ್ನತಃ ॥೨೮॥

ಅಪರಿಜ್ಞಾಯಮಾನೈಷಾ ಮಹಾಮೋಹಪ್ರದಾಯಿನೀ ।
ಪರಿಜ್ಞಾತಾ ತ್ವನನ್ತಾಖ್ಯಾ ಸುಖದಾ ಬ್ರಹ್ಮದಾಯಿನೀ ॥೨೯॥

ಅಯ್ಯಾ ರಾಘವ! ಆತ್ಮನಿಗಿಂತ ಭಿನ್ನವಾಗಿ, ಕೇಳಲ್ಪಡಬೇಕಾದುದೂ, ಸ್ಪರ್ಶಿಸಲ್ಪಡಬೇಕಾದುದೂ, ನೋಡಲ್ಪಡತಕ್ಕುದೂ, ಆಸ್ವಾದಿಸಲ್ಪಡತಕ್ಕುದೂ, ಆಘ್ರಾಣಿಸಲ್ಪಡತಕ್ಕುದೂ ಯಾವ ವಸ್ತುವೂ ಇಲ್ಲ ॥೨೪॥

ಆಕಾಶದಲ್ಲಿ ಶೂನ್ಯತ್ವವಿರುವಂತೆ, ಸರ್ವಶಕ್ತಿಯುಕ್ತನಾಗಿ ಸರ್ವವ್ಯಾಪಿಯಾಗಿ ಸ್ವಯಂ ಪ್ರಕಾಶನಾಗಿರುವ ಆತ್ಮನಲ್ಲಿಯೇ ಈ ಸಮಸ್ತ ಶಕ್ತಿಗಳೂ ನೆಲೆಸಿರುವುವು ॥೨೫॥

ಅಯ್ಯಾ ರಾಘವ! ಅತ್ಯಂತವಾಗಿ ಅಸತ್ತಾದ ಈ ಜಗತ್ತು ಅಂಕುರಿಸುವುದಕ್ಕೆ ಕಾರಣವೇನೆಂದರೆ,—ಈ ತ್ರಿಲೋಕಿಯೆಂಬ ಲಲನೆಯು ಸಾತ್ವಿಕಾದಿಭೇದತ್ರಯವುಳ್ಳವಳಾಗಿ ಚಿತ್ತದಿಂದ ಜನಿಸುವಳೆಂದೂ, ತನ್ನ ಉತ್ಪತ್ತಿಯಿಂದಲೇ ಕೇವಲ ಭ್ರಮದಾಯಕಳಾಗಿರುವಳೆಂದೂ ನಾನು ಪೂರ್ವದಲ್ಲಿಯೇ ಹೇಳಿರುವೆನಲ್ಲವೆ! ॥೨೬॥

ಹೀಗೆ ವಾಸನಾಕ್ಷಯವೆಂಬುದೇ ಮನಶ್ಶಾಂತಿಯು; ಇಂತಹ ಮನಶ್ಶಾಂತಿ ಸಿದ್ಧಿಸಲಾಗಿ, ಕರ್ಮಶಕ್ತಿಗಳಿಗೆಲ್ಲ ಆವಾಸಸ್ಥಾನಭೂತವೆನ್ನಿಸಿಕೊಂಡಿರುವ ಈ ಮಾಯೆಯು ತನಗೆತಾನೇ ನಾಶಹೊಂದಿಬಿಡುವುದು ॥೨೭॥

ಅಯ್ಯಾ! ರಾಘವ! ಈ ಸಂಸಾರವೆಂಬುದೇ ಒಂದು ಉಗ್ರವಾದ ಬೀಸುವ ಕಲ್ಲಿನ ಗೂಟವೆಂದು ತಿಳಿ. ಅದರೊಳಗೆ ವಾಸನೆಯೆಂಬ ಹಗ್ಗವು ಸುತ್ತಿಕೊಂಡು, ಲೋಕವ್ಯಾಪಾರವೆಂಬ ಯಂತ್ರವನ್ನು (ಬೀಸುವ ಕಲ್ಲನ್ನು) ತಿರುಗಿಸುತ್ತಿರುವುದು. ಇಂತಹ ವಾಸನಾರಜ್ಜುವನ್ನು, ನೀನು ಪ್ರಯತ್ನದಿಂದ ಕತ್ತರಿಸುವನಾಗು ॥೨೮॥

ಈ ವಾಸನೆಯು, ಸ್ವರೂಪತಃ ತಿಳಿಯಲ್ಪಡದಿರುವಾಗ ಮಹಾಮೋಹಪ್ರದವಾಗುವುದು. ತಿಳಿಯಲ್ಪಟ್ಟವೇಲಾದರೋ, ಮಹಾಸುಖಹೇತುವಾಗಿ ಬ್ರಹ್ಮಸಾರೂಪ್ಯವನ್ನುಂಟುಮಾಡುವುದು॥

ಆಗತಾ ಬ್ರಹ್ಮಣೋ ಭುಕ್ತ್ವಾ ಸಂಸಾರಮಿಹ ಲೀಲಯಾ ।
ಪುನರ್ಬ್ರಹ್ಮೈವ ಸಂಸ್ಮೃತ್ಯ ಬ್ರಹ್ಮಣ್ಯೇವ ವಿಲೀಯತೇ ॥೨೦॥
ಶಿವಾದ್ರಾಘವ ನೀರೂಪಾತ್ ಅಪ್ರಮೇಯಾನ್ನಿರಾಮಯಾತ್ ।
ಸರ್ವಾಣ್ಯೇತಾನಿ ಜಾತಾನಿ ಪ್ರಕಾಶಾಇವ ತೇಜಸಃ ॥೨೧॥
ರೇಖಾಬೃನ್ದಂ ಯಥಾ ಪರ್ಣೇ ವೀಚೀಜಾಲಂ ಯಥಾ ಜಲೇ ।
ಕಟಕಾದಿ ಯಥಾ ಹೇಮ್ನಿ ತಥೋಷ್ಣಾದಿ ಯಥಾನಲೇ ॥೨೨॥
ತದೇತದ್ಭಾವನಾರೂಪೇ ತಥೇದಂ ಭುವನತ್ರಯಮ್ ।
ತಸ್ಮಿನ್ನೇವ ಸ್ಥಿತಂ ಜಾತಂ ತಸ್ಮಾದೇವ ತದೇವ ಚ ॥೨೩॥
ಸಏವ ಸರ್ವಭೂತಾನಾಂ ಆತ್ಮಾ ಬ್ರಹ್ಮೇತಿ ಕಥ್ಯತೇ ।
ತಸ್ಮಿನ್ ಜ್ಞಾತೇ ಜಗಜ್ಜ್ಞಾತಂ ಸ ಜ್ಞಾತಾ ಭುವನತ್ರಯೇ ॥೨೪॥
ಶಾಸ್ತ್ರಸಂವ್ಯವಹಾರಾರ್ಥಂ ತಸ್ಯಾಸ್ಯ ವಿತತಾಕೃತೇಃ ।
ಚಿದ್ಬ್ರಹ್ಮಾತ್ಮೇತಿ ನಾಮಾನಿ ಕಲ್ಪಿತಾನಿ ಕೃತಾತ್ಮಭಿಃ ॥೨೫॥
ವಿಷಯೇನ್ದ್ರಿಯಸಂಯೋಗೇ ಹರ್ಷಾಮರ್ಷವಿವರ್ಜಿತಾ ।

ಈ ವಾಸನೆಯು, ಬ್ರಹ್ಮನದೆಸೆಯಿಂದಲೇ ಉದಯಿಸಿದುದು ; ಇಲ್ಲಿ ಸಂಸಾರವನ್ನು ಅನುಭವಿಸಿ, ಆತ್ಮವಿಲಾಸರೂಪವಾದ ಬ್ರಹ್ಮವಿದ್ಯೆಯಿಂದ ಬ್ರಹ್ಮನನ್ನು ಸ್ಮರಿಸಿಕೊಂಡು, ಪುನಃ ಬ್ರಹ್ಮನಲ್ಲಿಯೇ ಲಯಹೊಂದುವುದು ॥೨೦॥

ಅಯ್ಯಾ! ರಾಘವ! ನಿರಾಕಾರವಾಗಿಯೂ ಸರ್ವಪ್ರಮಾಣಗಳಿಗೂ ಅಗೋಚರವಾಗಿಯೂ ನಿರಾಬಾಧವಾಗಿಯೂ ಇರುವ ಆ ಪರಮಮಂಗಳವಸ್ತುವಿನದೆಸೆಯಿಂದ, ತೇಜಸ್ಸಿನದೆಸೆಯಿಂದ ಪ್ರಕಾಶಗಳು ಹುಟ್ಟುವಂತೆ, ಸಮಸ್ತಭೂತಗಳೂ ಹುಟ್ಟಿರುವುವು ॥೨೧॥

ಒಂದೆಲೆಯನ್ನು ಕೈಯಲ್ಲಿ ಹಿಡಿದುಕೊಂಡು ನೋಡಿದರೆ, ಅದರೊಳಗೆ ಅನೇಕವಾಗಿ ಗೆರೆಗಳು ಕಾಣಿಸುವುವಲ್ಲವೆ! ಈ ಗೆರೆಗಳು, ಆ ಎಲೆಯಲ್ಲಿಯೇ ಇರುವುವಲ್ಲವೆ! ಆದರಿಂದಲೇ ಹುಟ್ಟತಕ್ಕುವಲ್ಲವೆ! ಮತ್ತು, ಎಲೆಯೂ ಗೆರೆಗಳೂ ಬೇರೆಬೇರೆಯಾಗಿರದೆ, ಈ ಗೆರೆಗಳೆಂಬುದೂ ಎಲೆಯೇ ಆಗಿರುವುದಷ್ಟೆ! ಹೀಗೆ ಈ ಲೋಕತ್ರಯವೂ, ಭಾವನಾರೂಪನಾದ ಬ್ರಹ್ಮನೊಳಗೇ ಇರುವುದು; ಅವನಿಂದಲೇ ಹುಟ್ಟುವುದು; ಅವನೇ ಆಗಿರುವುದು. ಮತ್ತು, ಜಲದಲ್ಲಿ ತರಂಗಸಮೂಹವಿರುವಂತೆಯೂ, ಸುವರ್ಣದಲ್ಲಿ ಕಟಕಾದಿಗಳಿರುವಂತೆಯೂ, ಅಗ್ನಿಯಲ್ಲಿ ಉಷ್ಣತ್ವಾದಿಗಳಿರುವಂತೆಯೂ, ಈ ಲೋಕತ್ರಯವೂ ಬ್ರಹ್ಮನಲ್ಲಿರುವುದೆಂದೂ, ಅವನಿಂದಲೇ ಜನಿಸಿತೆಂದೂ, ಅವನೇ ಆಗಿರುವುದೆಂದೂ ತಿಳಿಯಬೇಕು ॥೨೨-೨೩॥

ಆ ಬ್ರಹ್ಮನೇ, ಸರ್ವಭೂತಗಳಿಗೂ ಆತ್ಮನೆಂದು ಹೇಳಲ್ಪಡುವನು. ಅವನೊಬ್ಬನು ತಿಳಿಯಲ್ಪಟ್ಟರೆ, ಜಗತ್ತೆಲ್ಲವೂ ತಿಳಿಯಲ್ಪಟ್ಟಂತೆಯೇ ಆಗುವುದು. ಅವನುಹೊರತು, ಈ ಪ್ರಪಂಚದಲ್ಲಿ ತಿಳಿದುಕೊಳ್ಳತಕ್ಕವರೂ ಯಾರೂ ಇಲ್ಲ ॥೨೪॥

ಶಾಸ್ತ್ರವ್ಯವಹಾರಸಿದ್ಧ್ಯರ್ಥವಾಗಿ, ಅಖಂಡಾಕಾರನಾದ ಅವನಿಗೇ- ಚಿತ್ ಬ್ರಹ್ಮ ಆತ್ಮ ಮುಂತಾದ ನಾಮಗಳನ್ನು ಪ್ರಾಜ್ಞರು ಕಲ್ಪಿಸಿರುವರು ॥೨೫॥

ವಿಷಯಗಳಿಗೂ ಇಂದ್ರಿಯಗಳಿಗೂ ಸಂಯೋಗವಾದಾಗ (ಇಂದ್ರಿಯಗಳು ವಿಷಯಗಳನ್ನು ಅನುಭವಿಸುವಾಗ) ಹರ್ಷಶೋಕಗಳಿಗೆ ಒಳಗಾಗದಿರುವ ಶುದ್ಧವಾದ ಅನುಭವವಾವು

ಸೈಷಾ ಶುದ್ಧಾನುಭೂತಿರ್ಹಿ ಸೋಽಯಮಾತ್ಮಾ ಚಿದವ್ಯಯಃ ‖೩೬‖
ಆಕಾಶಾತಿತರಾಚ್ಛಾಚ್ಛೇ ಇದಂ ತಸ್ಮಿಂಶ್ಚಿದಾತ್ಮನಿ ।
ಸ್ವಾಭೋಗಮಿವ ಹಿ ಜಗತ್ ಪೃಥಗ್ವತ್ ಪ್ರತಿಬಿಂಬತಿ ‖೩೭‖
ಬುದ್ಧಿಸ್ತದ್ವ್ಯತಿರೇಕೇಣ ಲೋಭಮೋಹಾದಯೋ ಹಿ ತಾಃ ।
ಭ್ರಾನ್ತ್ಯಸದ್ವ್ಯತಿರೇಕೇಣ ತೇ ಚ ತಸ್ಮಿಂಸ್ತದೇವ ತೇ ‖೩೮‖
ಅದೇಹಸ್ಯೈವ ತೇ ರಾಮ ನಿರ್ವಿಕಲ್ಪಚಿದಾಕೃತೇಃ ।
ಲಜ್ಜಾಭಯವಿಷಾದೇಭ್ಯಃ ಕುತೋ ಮೋಹಃ ಸಮುತ್ಥಿತಃ ‖೩೯‖
ಅದೇಹೋ ದೇಹಜೈರೇಭಿಃ ಲಜ್ಜಾದಿಭಿರಸನ್ಮಯೈಃ ।
ಕಿಂ ಮೂರ್ಖ ಇವ ದುರ್ಬುದ್ಧಿಃ ವಿಕಲ್ಪೈರಭಿಭೂಯಸೇ ‖೪೦‖
ಅಖಣ್ಡಚಿತಿರೂಪಸ್ಯ ದೇಹೇ ಖಣ್ಡನಮಾಗತೇ ।
ಅಸಮ್ಯಗ್ದರ್ಶಿನೋಽಪ್ಯಸ್ತಿ ನ ನಾಶಃ ಕಿಮು ಸನ್ಮತೇಃ ‖೪೧‖
ಆಪತೇದರ್ಕಮಾರ್ಗೇಽಪಿ ನ ನಿರುದ್ಧಗಮಾಗಮಮ್ ।
ಚಿತ್ತಂ ನಾಮ ಸ ವಿಜ್ಞೇಯಃ ಪುರುಷೋ ನ ಶರೀರಕಮ್ ‖೪೨‖

ದುಂಟೋ, ಅದೇ-ಚಿದ್ರೂಪವಾದ ಅವ್ಯಯವಾದ ಆತ್ಮಪದಾರ್ಥವೆಂದು ತಿಳಿಯಬೇಕು. ಮೂಢಾನುಭವಗೋಚರವಾದ ಸಂಸಾರಸ್ವಭಾವವೆಂದಿಗೂ ಆತ್ಮಪದಾರ್ಥವಲ್ಲ ॥೩೬॥

ಆಕಾಶಕ್ಕಿಂತಲೂ ಅತಿ ನಿರ್ಮಲನಾಗಿರುವ ಆ ಚಿದಾತ್ಮನೊಳಗೆಯೇ, ಈ ಜಗತ್ತು ಪೃಥಗ್ಭೂತವಾದುದರಂತೆ ಪ್ರತಿಫಲಿಸುವುದು ॥೩೭॥

ಇದಕ್ಕೆ ವಿರುದ್ಧವಾಗಿ ಉಂಟಾಗುವ ಜ್ಞಾನವೇ ಲೋಭಮೋಹಾದಿಗಳು; ಇವುಗಳು ಅಸತ್ಯವಾದ ಭೇದಜ್ಞಾನದಿಂಡ ಆತ್ಮನಲ್ಲಿ ವಿಲಾಸಪಡುತಿರುವುವು. ವಸ್ತುತಃ ಇವುಗಳೂ ಆತ್ಮಪದಾರ್ಥವೇಯೆ ॥೩೮॥

ಹೀಗಿರುವುದರಿಂದ, ಅಯ್ಯಾರಾಮ! ದೇಹನೇ ಇಲ್ಲದವನಾಗಿಯೂ ನಿರ್ವಿಕಲ್ಪಚಿದಾಕಾರನಾಗಿಯೂ ಇರುವ ನಿನಗೆ, ಲಜ್ಜಾ ಭಯ ವಿಷಾದಗಳಡೆಸೆಯಿಂದ ಈ ಮೋಹವೇಕೆ ಉದ್ಭವಿಸಿತು? ॥೩೯॥

ದೇಹಶೂನ್ಯನಾಗಿರುವ ನೀನು, ದುರ್ಬುದ್ಧಿಯಾದ ಮೂರ್ಖನಂತೆ, ದೇಹದಲ್ಲಿ ಹುಟ್ಟಬೇಕಾಗಿರುವ ಸುತರಾಂ ಅಸತ್ಯಗಳಾದ ಈ ಲಜ್ಜಾದಿ ವಿಕಲ್ಪಗಳಿಂದ ಏತಕ್ಕಾಗಿ ತಿರಸ್ಕರಿಸಲ್ಪಡುವೆ? ॥

ದೇಹವು ಖಂಡಿಸಲ್ಪಟ್ಟಮಾತ್ರದಿಂದಲೇ--ಅಖಂಡಚಿದಾಕಾರನಾದ ಬ್ರಹ್ಮನಿಗೆ ನಾಶವಾಗುವುದಿಲ್ಲವೆಂಬುದು, ಚೆನ್ನಾಗಿ ವಿಚಾರಮಾಡದಿರುವವರಿಗೂ ಗೊತ್ತಾಗುವುದು; ಇನ್ನು ಚೆನ್ನಾಗಿ ಬುದ್ಧಿಯುಳ್ಳವನಿಗೆ ಹೇಳುವುದೇನಿದೆ? ॥೪೧॥

ಯಾವ ಚಿತ್ತವು-ಸೂರ್ಯಮಾರ್ಗದಲ್ಲಿಯೂ ಅಪ್ರತಿಹತವಾದ ಸಂಚಾರವುಳ್ಳುದಾಗಿ ಸರ್ವತ್ರ ಚರಿಸುತಿರುವುದೋ, ಅದಕ್ಕೇ ಪುರುಷನೆಂದು ವ್ಯವಹಾರವಲ್ಲದೆ, ದೇಹಕ್ಕೆ ಪುರುಷನೆಂಬ ವ್ಯವಹಾರವೇ ಸಲ್ಲುವುದಿಲ್ಲ ॥೪೨॥

ಶರೀರೇ ಸತ್ಯಸತಿ ವಾ ಪುಮಾನೇವ ಜಗತ್ತ್ರಯೇ ।
ಜ್ಞೋಽಪ್ಯಜ್ಞೋಽಪಿ ಸ್ಥಿತೋ ರಾಮ ನಷ್ಟೇ ದೇಹೇ ನ ನಶ್ಯತಿ ॥೪೩॥
ಯಾನೀಮಾನಿ ವಿಚಿತ್ರಾಣಿ ದುಃಖಾನಿ ಪರಿಪಶ್ಯಸಿ ।
ತಾನಿ ದೇಹಸ್ಯ ಸರ್ವಾಣಿ ನಾಗ್ರಾಹ್ಯಸ್ಯ ಚಿದಾತ್ಮನಃ ॥೪೪॥
ಮನೋಮಾರ್ಗಾದತೀತತ್ವಾತ್ ಯಾಸೌ ಶೂನ್ಯಮಿವ ಸ್ಥಿತಾ ।
ಚಿತ್ ಕಥಂ ನಾಮ ದುಃಖೈರ್ವಾ ಸುಖೈರ್ವಾ ಪರಿಗೃಹ್ಯತೇ ॥೪೫॥
ಸ್ವಾಸ್ಪದಾತ್ಮಾನಮೇವಾಸೌ ವಿನಷ್ಟಾದ್ದೇಹಪಞ್ಜರಾತ್ ।
ಅಭ್ಯಸ್ತಂ ವಾಸನಾಂ ಯಾತಃ ಷಟ್ಪದಃ ಖಮಿವಾಮ್ಬುಜಾತ್ ॥೪೬॥
ಅಸಚ್ಛೇದಾತ್ಮತತ್ತ್ವಂ ತತ್ ಅಸ್ಮಿಂಸ್ತೇ ದೇಹಪಞ್ಜರೇ ।
ನಷ್ಟೇ ಕಿಂ ನಾಮ ನಷ್ಟಂ ಸ್ಯಾತ್ ರಾಮ ಕೇನಾನುಶೋಚಸಿ ॥೪೭॥

ಅಯ್ಯಾ! ರಾಮ! ಶರೀರವಿದ್ದರೂ-ಅಥವಾ ಇಲ್ಲದಿದ್ದರೂ, ಪುರುಷನೇ ಪ್ರಾಜ್ಞನಾಗಿಯೂ ಅಜ್ಞನಾಗಿಯೂ ಈ ಲೋಕತ್ರಯದಲ್ಲಿ ವ್ಯಾಪಿಸಿರುವನು. ದೇಹವು ನಷ್ಟವಾದಮಾತ್ರದಿಂದಲೇ, ಇವನು ನಷ್ಟನಾಗುವುದಿಲ್ಲ ॥೪೩॥

ನೀನು ಈಗ ಯಾವ ಈ ಜನನಮರಣಾದಿದುಃಖಗಳನ್ನು ನೋಡುತ್ತಿರುವೆಯೋ, ಅವುಗಳೆಲ್ಲವೂ ದೇಹಕ್ಕಿರುವುವೇಹೊರತು, ಸರ್ವೇಂದ್ರಿಯಗಳಿಗೂ ಅಗೋಚರನಾದ ಚಿದ್ರೂಪನಾದ ಬ್ರಹ್ಮನಿಗಿರುವುದಿಲ್ಲ ॥೪೪॥

ಯಾವ ಈ ಚಿತ್ತು, ಮನಸ್ಸಿಗೆ ಅಗೋಚರವಾಗಿ ಶೂನ್ಯದಂತೆ ಕಾಣುತ್ತಿರುವುದೋ, ಇಂತಹ ಚಿತ್ತು ಸುಖದಿಂದಲೂ ದುಃಖದಿಂದಲೂ ಪರಿತಾಪಪಡುವುದೆಂದರೆ ಹೇಗೆ? ॥೪೫॥

ದೇಹನಾಶಾನಂತರದಲ್ಲಿ ಜೀವನು ಎಲ್ಲಿಗೆ ಹೋಗುವನೆಂದರೆ,—ಕಮಲದಮೇಲೆ ಕುಳಿತಿದ್ದ ಭ್ರಮರವು ಕಮಲವನ್ನು ಬಿಟ್ಟುಬಿಟ್ಟು ಅಂತರಿಕ್ಷಕ್ಕೆ ಹಾರಿಹೋಗುವಂತೆ, ದೇಹಪಂಜರವು ನಷ್ಟವಾದಬಳಿಕ ಈ ಜೀವನು ತನಗೆ ಆಶ್ರಯವಾಗಿದ್ದ ಆತ್ಮಪದಾರ್ಥವನ್ನೇ ಸೇರುವನು. ಆಗಲೇ ಮುಕ್ತಿಯನ್ನೇಕೆ ಪಡೆಯುವುದಿಲ್ಲವೆಂದರೆ, —ಚಿರತರವಾಗಿ ಅಭ್ಯಸ್ತವಾದ ವಾಸನೆಯ ಬಲದಿಂದ ಇನ್ನೂ ಮುಕ್ತಿಹೊಂದುವ ಸ್ಥಿತಿಗೆ ಬರುವುದಿಲ್ಲ ॥೪೬॥

ಅಯ್ಯಾ ರಾಮ! ನೀನು ಈಗ ಇನ್ನೊಂದುವಿಧವಾಗಿ ಶಂಕೆಮಾಡಬಹುದು:—ಜೀವನು ಪ್ರತಿಬಿಂಬವಾಗಿದ್ದಮೇಲೆ, ಪ್ರತಿಬಿಂಬವು ತನಗೆ ಕಾರಣಭೂತವಾದುದನ್ನು ಬಿಟ್ಟು ಪ್ರತ್ಯೇಕವಾಗಿ ಇರಲಾರದಾದಕಾರಣ, ಈ ಜೀವನು ಅಸತ್ಪದಾರ್ಥವಾಗಬೇಕು; ಮತ್ತು, ಉಪಾಧಿನಾಶವಾದಾಗ ಇವನಿಗೂ ನಾಶವಾಗಬೇಕು. ಎಂದಲ್ಲವೆ ನೀನು ಶಂಕಿಸಬಹುದು! ಇರಲಿ, ನಿನ್ನ ಆಕ್ಷೇಪಣೆಯನ್ನು ಒಪ್ಪಿಕೊಳ್ಳೋಣ. ಆದರೂ, ನೀನು ಜೀವನೇ ಅಲ್ಲದಿರುವಾಗ(ಆ ಆತ್ಮಪದಾರ್ಥವು ಜೀವನಲ್ಲದಿರುವಾಗ), ಈ ದೇಹಪಂಜರವು ನಷ್ಟವಾದಮಾತ್ರದಿಂದಲೇ ನಿನಗೇನು ನಷ್ಟವಾಯಿತು? ನೀನೇತಕ್ಕಾಗಿ ದುಃಖಪಡುವೆ? ॥೪೭॥

ಸತ್ಯಂ ಭಾವಯ ತೇನ ತ್ವಂ ಮಾ ಮೋಹಮನುಭಾವಯ ।
ನಿರಿಚ್ಛಸ್ಯಾತ್ಮನೋ ನೇಚ್ಛಾ ಕಾಚಿದಪ್ಯನಘಾಕೃತೇಃ ॥೪೮॥
ಸಾಕ್ಷಿಭೂತೇ ಸಮೇ ಸ್ವಚ್ಛೇ ನಿರ್ವಿಕಲ್ಪೇ ಚಿದಾತ್ಮನಿ ।
ನಿರಿಚ್ಛಂ ಪ್ರತಿಬಿಮ್ಬನ್ತಿ ಜಗನ್ತಿ ಮುಕುರೇ ಯಥಾ ॥೪೯॥
ಸಾಕ್ಷಿಭೂತೇ ಸಮೇ ಸ್ವಚ್ಛೇ ನಿರ್ವಿಕಲ್ಪೇ ಚಿದಾತ್ಮನಿ ।
ಸ್ವಯಂ ಜಗನ್ತಿ ದೃಶ್ಯನ್ತೇ ಸನ್ಮಣಾವಿವ ರಶ್ಮಯಃ ॥೫೦॥
ಅನಿಚ್ಛಮಪಿ ಸಂಬನ್ಧೋ ಯಥಾ ದರ್ಪಣಬಿಮ್ಬಯೋಃ ।
ತಥೈವೇಹಾತ್ಮಜಗತೋಃ ಭೇದಾಭೇದೌ ವ್ಯವಸ್ಥಿತೌ ॥೫೧॥
ಸೂರ್ಯಸನ್ನಿಧಿಮಾತ್ರೇಣ ಯಥೋದೇತಿ ಜಗತ್ಕ್ರಿಯಾ ।
ಚಿತ್ಸತ್ತಾಮಾತ್ರಕೇಣೇದಂ ಜಗನ್ನಿಷ್ಪದ್ಯತೇ ತಥಾ ॥೫೨॥
ಪಿಣ್ಡಗ್ರಹೋ ನಿವೃತ್ತೋಽಸ್ಯಾಃ ಏವಂ ರಾಮ ಜಗತ್ಸ್ಥಿತೇಃ ।
ಆಕಾಶಮೇಷಾ ಸಮ್ಪನ್ನಾ ಭವತಾಮಪಿ ಚೇತಸಿ ॥೫೩॥

ಅದುಕಾರಣ, ನೀನು ಈ ಜೀವನನ್ನು ಸತ್ಯವಾದ ಪರಮಾತ್ಮವಸ್ತುವೆಂಬುದಾಗಿ ಭಾವಿಸು. ಭ್ರಾಂತಿಯಿಂದ ಅಸತ್ಯವಾದ ದೇಹಾದಿಗಳನ್ನು ಆತ್ಮನೆಂದು ಭಾವಿಸಬೇಡ. ಇಚ್ಛಾಶೂನ್ಯನಾಗಿಯೂ ನಿರ್ಮಲಸ್ವರೂಪನಾಗಿಯೂ ಇರುವ ಆತ್ಮನಿಗೆ, ಯಾವುದೊಂದು ಕಾಮನೆಯೂ ಇಲ್ಲ॥೪೮

'ಹಾಗಾದರೆ, ಅವನ ಇಚ್ಛೆಯಿಲ್ಲದೆ ಸೃಷ್ಟ್ಯಾದಿಗಳು ಹೇಗೆ ಸಿದ್ಧಿಸುವುವು ?' ಎಂದರೆ,— ದರ್ಪಣದಲ್ಲಿ ಪ್ರತಿಬಿಂಬಿಸಬೇಕಾದರೆ ದರ್ಪಣದ ಇಚ್ಛೆಯು ಆವಶ್ಯಕವಲ್ಲವಷ್ಟೆ! ಹಾಗೆಯೇ, ಸರ್ವಸಾಕ್ಷಿಯಾಗಿಯೂ ಸರ್ವಸಮನಾಗಿಯೂ ನಿರ್ಮಲನಾಗಿಯೂ ನಿರ್ವಿಕಲ್ಪನಾಗಿಯೂ ಇರುವ ಚಿದಾತ್ಮನಲ್ಲಿ, ಇವನ ಇಚ್ಛೆಯಿಲ್ಲದೆಯೇ ಈ ಜಗತ್ತುಗಳು ಪ್ರತಿಬಿಂಬಿಸುವುವು ॥೪೯॥

ಮತ್ತು, ಉತ್ತಮವಾದ ರತ್ನದಲ್ಲಿ ಕಿರಣಗಳಿರುವಂತೆ, ಸರ್ವಸಾಕ್ಷಿಯಾಗಿ ಸರ್ವಸಮನಾಗಿ ನಿರ್ಮಲನಾಗಿರುವ ಚಿದಾತ್ಮನಲ್ಲಿ ಜಗತ್ತುಗಳು ತಾನಾಗಿ ಕಾಣಿಸಿಕೊಳ್ಳುವುವು ॥೫೦॥

ದರ್ಪಣಕ್ಕೂ ಪ್ರತಿಬಿಂಬಕ್ಕೂ ಹೇಗೆ ಇಚ್ಛೆಯಿಲ್ಲದೆಯೇ ಸಂಬಂಧವುಂಟಾಗುವುದೋ, ಹಾಗೆಯೇ ಆತ್ಮನಿಗೂ ಜಗತ್ತಿಗೂ ಇಚ್ಛೆಯಿಲ್ಲದೆಯೇ ಸಂಬಂಧವುಂಟಾಗುವುದು. (ಪ್ರತಿಫಲನವುಂಟಾಗುವುದು) ॥೫೧॥

ಸೂರ್ಯನ ಸಾನ್ನಿಧ್ಯಮಾತ್ರದಿಂದಲೇ-ಸಮಸ್ತವಾದ ಪ್ರಪಂಚವ್ಯಾಪಾರವೂ ಹೇಗೆ ನಡೆಯುವುದೋ, ಹಾಗೆ ಚಿತ್ತಿನ ಸದ್ಭಾವಮಾತ್ರದಿಂದಲೇ ಈ ಪ್ರಪಂಚವುತ್ಪನ್ನವಾಗುವುದು ॥

ಅಯ್ಯಾ! ರಾಮ! ನೀನು ಮೊದಲು (ಉತ್ಪತ್ತಿಪ್ರಕರಣದ ಆದಿಯಲ್ಲಿ) ಈ ಪ್ರಪಂಚಭ್ರಾಂತಿಯುತ್ಪನ್ನವಾಗುವ ಬಗೆಯಾವುದೆಂದು ಪ್ರಶ್ನೆಮಾಡಿದೆಯಲ್ಲವೆ! ಇದೋ ಈರೀತಿಯಾಗಿ ಈ ಜಗತ್ತಿನ ಉತ್ಪತ್ತಿಕ್ರಮವು ನಿಷ್ಪನ್ನವಾಗಿರುವುದು. ಅಯ್ಯಾ! ಸಭಾಸದರಾ! ಕೇವಲ ಆಕಾಶರೂಪವಾಗಿರುವ ಈ ಪ್ರಪಂಚಭ್ರಾಂತಿಯು, ನಿಮ್ಮಗಳ ಮನಸ್ಸಿನಲ್ಲಿಯೂ ಹೇಗೆ ಉತ್ಪನ್ನವಾಗಿದ್ದಿತು ॥೫೩॥

ಸತ್ತಾಮಾತ್ರೇಣ ದೀಪಸ್ಯ ಯಥಾಲೋಕಃ ಸ್ವಭಾವತಃ ।
ಚಿತ್ತತ್ತ್ವಸ್ಯ ಸ್ವಭಾವಾತ್ ತು ತಥೇಯಂ ಜಾಗತೀ ಸ್ಥಿತಿಃ ॥೫೪॥

ಪೂರ್ವಂ ಮನಃ ಸಮುದಿತಂ ಪರಮಾತ್ಮತತ್ತ್ವಾತ್
ತೇನಾತತಂ ಜಗದಿದಂ ಸ್ವವಿಕಲ್ಪಜಾಲೈಃ ।
ಶೂನ್ಯೇನ ಶೂನ್ಯಮಪಿ ತೇನ ಯಥಾಮ್ಬರೇಣ
ನೀಲತ್ವಮುಲ್ಲಸಿತಚಾರುತರಾಭಿಧಾನಮ್ ॥೫೫॥

ಸಙ್ಕಲ್ಪಸಙ್ಕ್ಷಯವಶಾದ್ಗಳಿತೇ ತು ಚಿತ್ತೇ
ಸಂಸಾರಮೋಹಮಿಹಿಕಾಗಳಿತಾಭವನ್ತಿ ।
ಸ್ವಚ್ಛಂ ವಿಭಾತಿ ಶರದೀವ ಖಮಾಗತಾಯಾಂ
ಚಿನ್ಮಾತ್ರಮೇಕಮಜಮಾದ್ಯಮನನ್ತಮನ್ತಃ ॥೫೬॥

ಕರ್ಮಾತ್ಮಕಂ ಪ್ರಥಮಮೇವ ಮನೋಽಭ್ಯುದೇತಿ
ಸಙ್ಕಲ್ಪತಃ ಕಮಲಜಪ್ರಕೃತೀಸ್ತದೇತ್ಯ ।
ನಾನಾಭಿದಂ ಜಗದಿದಂ ಹಿ ಮುಧಾ ತನೋತಿ
ವೇತಾಳದೇಹಕಲನಾಮಿವ ಮುಗ್ಧಬಾಲಃ ॥೫೭॥

ದೀಪವು ಸಮೀಪದಲ್ಲಿದ್ದಮಾತ್ರದಿಂದಲೇ, ಅದರ ಸ್ವಭಾವಸಿದ್ಧವಾಗಿ ಪ್ರಕಾಶವು ಹೇಗೆ ಪ್ರಸರಿಸುವುದೋ, ಹಾಗೆ ಚಿತ್ಪದಾರ್ಥದ ಸಾನ್ನಿಧ್ಯದಿಂದಲೇ ಈ ಜಗತ್ತು ಉದಯಿಸುವುದೆಂಬುದೇ ಸ್ವಭಾವಸಿದ್ಧಿಯಾಗಿರುವುದು ॥೫೪॥

ಅಯ್ಯಾ ರಾಮ ! ಇದುವರೆಗೂ ಈ ಉತ್ಪತ್ತಿಪ್ರಕರಣದಲ್ಲಿ ಹೇಳಿದ ವಿಷಯವನ್ನೆಲ್ಲ ಈಗ ಸಂಕ್ಷೇಪಿಸಿ ಹೇಳಿಬಿಟ್ಟು, ಇನ್ನು ಈ ಪ್ರಕರಣವನ್ನು ಪಸಂಹರಿಸುವೆನು. ಪ್ರಥಮತಃ ಪರಮಾತ್ಮಪದಾರ್ಥದದೆಸೆಯಿಂದ ಮನಸ್ಸು ಉದಯಿಸುವುದು; ಸುತರಾಂ ಶೂನ್ಯವಾದ ಆ ಮನಸ್ಸು, ಆಕಾಶದಲ್ಲಿ ನೈಲ್ಯವಿರುವುದೆಂಬ ವ್ಯವಹಾರವುಂಟಾಗುವಂತೆ, ತನ್ನ ವಿಕಲ್ಪಜಾಲಗಳಿಂದ, ವಸ್ತುತಃ ಶೂನ್ಯವಾಗಿರುವ ಈ ಜಗತ್ತೆಂಬ ಮಾಯಾಜಾಲವನ್ನು ಹರಡಿಕೊಂಡಿರುವುದು ॥೫೫॥

ಹೀಗಿರುವಾಗ, ಸಂಕಲ್ಪಕ್ಷಯವುಂಟಾಗಿ—ಅದರ ಮಹಿಮೆಯಿಂದ ಚಿತ್ತವು ಲಯಹೊಂದಿದರೆ, ಶರತ್ಕಾಲಬಂದಾಗ ಹಿಮಕಣಗಳು ಗಳಿತವಾಗುವಂತೆ, ಸಂಸಾರಮೋಹವು ಗಳಿತವಾಗುವುದು; ಮತ್ತು ಆಗ ಆಕಾಶವು ನಿರ್ಮಲವಾಗಿ ಪ್ರಕಾಶಿಸುವಂತೆ, ಕೇವಲ ಚಿದ್ರೂಪವಾಗಿಯೂ ಜನನ ಮರಣವರ್ಜಿತವಾಗಿಯೂ ಇರುವ ಬ್ರಹ್ಮಪದಾರ್ಥವು ನಿರ್ಮಲವಾಗಿ ಪ್ರಕಾಶಿಸುವುದು ॥೫೬॥

ಹೀಗೆ ವ್ಯಷ್ಟಿಸೃಷ್ಟಿಯಲ್ಲಿರುವಂತೆಯೇ ಸಮಷ್ಟಿಸೃಷ್ಟಿಯಲ್ಲಿಯೂ ಆವಿರ್ಭಾವತಿರೋಭಾವಗಳು ಚಿತ್ತಾಧೀನಗಳೇ ಆಗಿರುವುವು. ಹೇಗೆಂದರೆ,—ಪ್ರಥಮದಲ್ಲಿಯೇ ಕರ್ಮಾತ್ಮಕವಾದ ಮನಸ್ಸು ಉದಯಿಸುವುದು. ಅದು ಸಂಕಲ್ಪವಶದಿಂದ ಚತುರ್ಮುಖಾದಿ ಶರೀರಗಳನ್ನು ಹೊಂದಿ, ಮುಗ್ಧನಾದ ಬಾಲಕನು ಬೇತಾಳದೇಹಗಳನ್ನು ಕಲ್ಪಿಸಿಕೊಳ್ಳುವಂತೆ, ಮಿಥ್ಯಾಭೂತವಾದ ಈ ನಾನಾವಿಧ ಜಗತ್ತುಗಳನ್ನು ಕಲ್ಪಿಸುತ್ತಿರುವುದು ॥೫೭॥

ಅಸನ್ಮಯಂ ಸದಿವ ಪುರೋ ವಿಲಕ್ಷ್ಯತೇ
ಪುನರ್ಭವತ್ಯಥ ಪರಿಲೀಯತೇ ಪುನಃ ।
ಸ್ವಯಂ ಮನಶ್ಚಿತಿ ಚಿತಸಂಸ್ಫುರದ್ವಪುಃ
ಮಹಾರ್ಣವೇ ಜಲವಲಯಾವಳೀ ಯಥಾ ॥೪೮॥

ಇತ್ಯಾರ್ಷೇ ಶ್ರೀವಾಸಿಷ್ಠರಾಮಾಯಣೇ ಶ್ರೀ ವಾಲ್ಮೀಕೀಯೇ ದೇವದೂತೋಕ್ತೇ ದ್ವಾತ್ರಿಂಶತ್ಸಾಹಸ್ರ್ಯಾಂ ಸಂಹಿತಾಯಾಂ ಮೋಕ್ಷೋಪಾಯೇ ಉತ್ಪತ್ತಿ ಪ್ರಕರಣೇ ಸ್ವರೂಪನಿರೂಪಣಂ ನಾಮ ದ್ವಾವಿಂಶತ್ಯುತ್ತರ ಶತತಮಃ ಸರ್ಗಃ.

ಹೀಗಿರುವುದರಿಂದ, ಅಜ್ಞಾನಪರಿಣಾಮಭೂತವೆಂಬ ಮನಸ್ಸು, ಮಹಾ ಸಮುದ್ರದಲ್ಲಿ ಜಲ ಸಮುದಾಯವಿರುವಂತೆ, ಸ್ವಾಧಿಷ್ಠಾನಭೂತವಾದ ಚಿತ್ತಿನಲ್ಲಿ ಉಪಚಯಹೊಂದಿ ಪ್ರಕಾಶಮಾನವಾಗುತ್ತ, ಸತ್ಯದಂತೆ ಕಾಣಿಸಿಕೊಳ್ಳುತ್ತಿರುವುದು ; ಇದೇ, ಉತ್ಪತ್ತಿಯನ್ನೂ ಲಯವನ್ನೂ ಹೊಂದುತಿರುವುದು. ಸಚ್ಚಿದಾನಂದ ಮೂರ್ತಿಯಾದ ಆತ್ಮನಿಗೆ ಉತ್ಪತ್ತಿಯಗಳು ಸುತರಾಂ ಅಸಂಭವವೆಂದು ನೀನು ಸ್ಪಷ್ಟವಾಗಿ ತಿಳಿಯುವನಾಗು. ಹೀಗೆಂದು ಶ್ರೀ ವಸಿಷ್ಠಮುನಿಗಳು ಶ್ರೀ ರಾಮಚಂದ್ರನನ್ನು ಕುರಿತು ಉಪದೇಶಿಸಿದರು ॥ ೪೮ ॥

ಇದು ಶ್ರೀವಾಲ್ಮೀಕಿಮಹರ್ಷಿವಿರಚಿತವಾದ ದೇವದೂತನಿಂದುಕ್ತವಾದ ದ್ವಾತ್ರಿಂಶತ್ಸಹಸ್ರ ಸಂಹಿತಾತ್ಮಕವಾದ ಮೋಕ್ಷೋಪಾಯಭೂತವಾದ ಶ್ರೀವಾಸಿಷ್ಠರಾಮಾಯಣದ ಉತ್ಪತ್ತಿಪ್ರಕರಣದಲ್ಲಿ ಸ್ವರೂಪನಿರೂಪಣವೆಂಬ ನೂರಿಪ್ಪತ್ತನೆಯ ಸರ್ಗವು.

ಇಂತು ಶ್ರೀಮತ್ಸಮಸ್ತ ಮಹೀಮಂಡಲ ಮಂಡನಾಯಮಾನ ಶ್ರೀಮನ್ಮಹೀಶೂರ ಜನಪದಾಧೀಶ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಯವರ ಮಹಾ ಸನ್ನಿಧಾನದಿಂದ ಪರಿಪೋಷಿತನಾಗಿ ತದಾಸ್ಥಾನಪಂಡಿತನಾದ

ಗುಂಡಶಾಸ್ತ್ರಿಯಿಂದ ರಚಿಸಲ್ಪಟ್ಟ

ಶ್ರೀಕೃಷ್ಣರಾಜ ವಿಜ್ಞಾನವೈಭವವೆಂಬ ಶ್ರೀ ಜ್ಞಾನವಾಸಿಷ್ಠ ಟೀಕೆಯಲ್ಲಿ

ಉತ್ಪತ್ತಿಪ್ರಕರಣವೆಂಬ ತೃತಿಯಪ್ರಕರಣಂ

ಸಂಪೂರ್ಣಂ.

ಓಮ್

ತತ್ ಸತ್.

ಶ್ರೀ ತತ್ವಸಂಗ್ರಹರಾಮಾಯಣ

ಶ್ರೀರಾಮನ [illegible] ಅದರ [illegible]ತ್ತಾಂತಗಳನ್ನು ತಿಳಿಯಬೇಕೆಂಬವರಿಗೆ ಈ ಗ್ರಂಥ [illegible] ಸಹಾಯವನ್ನೂ [illegible] ಇದು [illegible] ವರೆಗೆ ಯಾವ ದೇಶ[illegible]ವಾಗಿಲ್ಲ. ಸುಮಾರು [illegible]ರಡು ಸ[illegible] ಗ್ರಂಥ ಸಂಖ್ಯೆಯುಳ್ಳ [illegible] ಗ್ರಂಥವು ಈ ವಾಸಿಷ್ಠರಾಮಾಯಣದಂತೆ ಲಲಿತವಾದ ಕನ್ನಡ ಟೀಕೆಯೊಡನೆ ಮುದ್ರಿಸಲ್ಪಡುತ್ತಿರುವುದು. ಇದು ಮೂರು ಸಂಪುಟಗಳಾಗಿ ಬೈಂಡು ಮಾಡಿಸಲ್ಪಡುವುದಾಗಿ ನಿಷ್ಕರ್ಷಿಸಲ್ಪಟ್ಟಿರುವುದು. ಪ್ರಥಮ ಸಂಪುಟವು ಪ್ರಾಯಶಃ ಇನ್ನು [illegible] ನಾಲ್ಕು ತಿಂಗಳೊಳಗೆ ಸಿದ್ಧವಾಗಬಹುದು.

ಸರ್ವರಿಗೂ ಸುಲಭವಾಗುವಂತೆ, ಇದರ ಕ್ರಯವು, ಪ್ರಥಮ ಸಂಪುಟವು [illegible] ಕೈಸೇರುವವರೆಗೂ [illegible] ರೂಪಾಯಿ ಮಾತ್ರವೇ ನಿಷ್ಕರ್ಷಿಸಲ್ಪಟ್ಟಿರುವುದು. ವಾಸಿಷ್ಠ ರಾಮಾಯಣಕ್ಕೆ ಚಂದಾದಾರರಾದವರಿಗೂ ಮುಂದೆ ಆಗುವವರಿಗೂ ೩ ರೂಪಾಯಿಗಳು ಮಾತ್ರವೇ [illegible]

ಕಿ[illegible] ಬೈಂಡು [illegible]ರೂಪಾಯಿಯನ್ನು ಹೆಚ್ಚಾಗಿ ಕೊಡಬೇಕು.

[illegible] ಬೈಂಡು ಮಾಡಿಸಬೇಕೆನ್ನುವವರು [illegible]ತ್ತಾರು ಬೈಂಡಿಗೆ ೧ ರೂಪಾಯಿಯನ್ನು ಹೆಚ್ಚು [illegible]

[illegible]ವನ್ನು [illegible] ಕಳುಹಿಸಿದರೆ, ಪ್ರಥಮಸಂಪುಟವು ಸಿದ್ಧವಾದೊಡನೆಯೇ [illegible]

ಆಸ್ತಿಕರೆಲ್ಲರೂ [illegible] ಪ್ರಾರ್ಥನೆ.

ಮ್ಯಾನೇಜರ್,
ಶ್ರೀ ಕೃಷ್ಣರಾಜ ವಿಜ್ಞಾನವೈಭವ,
ಮೈಸೂರು.